ಬಳ್ಳಾರಿ ಜಿಲ್ಲೆಯ ಚಿತ್ರಕಲೆ

ಪಿಹೆಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸುವ ಮಹಾಪ್ರಬಂಧ



ಸಂಶೋಧಕರು

ಕೃಷ್ಣವೇಣಿ

ಮಾರ್ಗದರ್ಶಕರು

ಡಾ. ಎಸ್. ಸಿ. ಪಾಟೀಲ

ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ದೃಶ್ಯಕಲಾ ವಿಭಾಗ

ಲಲಿತಕಲಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೧೨

402

ಬಳ್ಳಾರಿ ಜಿಲ್ಲೆಯ ಚಿತ್ರಕಲೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಕೃಷ್ಣವೇಣಿ

ಮಾರ್ಗದರ್ಶಕರು

ಡಾ. ಎಸ್. ಸಿ. ಪಾಟೀಲ

ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ದೃಶ್ಯಕಲಾ ವಿಭಾಗ

ಲಲಿತಕಲಾ ನಿಕಾಯ

ದೃಶ್ಯಕಲಾ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೧೨

ಪ್ರಮಾಣ ಪತ್ರ

ಬಳ್ಳಾರಿ ಜಿಲ್ಲೆಯ ಚಿತ್ರಕಲೆ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಹೆಚ್.ಡಿ ಪದವಿಗಾಗಿ ದೃಶ್ಯಕಲಾ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ **ಡಾ. ಎಸ್.** ಸಿ. **ಪಾಟೀಲ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ದೃಶ್ಯಕಲಾ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಇನ್ನಿತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

(ಕೃಷ್ಣವೇಣಿ)
ಸಂಶೋಧನ ವಿದ್ಯಾರ್ಥಿ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಸ್ಥಳ : ಹಂಪಿ, ವಿದ್ಯಾರಣ್ಯ
ದಿನಾಂಕ : ೨೪.೧೨.೨೦೧೨

ದೃಢೀಕರಣ ಪತ್ರ

ಕೃಷ್ಣವೇಣಿ ಇವರು ನನ್ನ ಮಾರ್ಗದರ್ಶನದಲ್ಲಿ **ಬಳ್ಳಾರಿ ಜಿಲ್ಲೆಯ ಚಿತ್ರಕಲೆ** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಹೆಚ್.ಡಿ ಪದವಿಗಾಗಿ ಸಿದ್ಧಪಡಿಸಿದ್ದು, ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ದೃಶ್ಯಕಲಾ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ.

ಸದರಿ ಮಹಾಪ್ರಬಂಧವು ಮೂಲ ಸಂಶೋಧನ ಕೃತಿಯಾಗಿದ್ದು, ಇದರ ಯಾವುದೇ ಭಾಗ ಮತ್ತು ವಿಷಯವನ್ನು ಯಾವುದೇ ಉದ್ದೇಶಕ್ಕೆ ಬಳಸಿಕೊಂಡಿಲ್ಲ ಮತ್ತು ಈ ಮೊದಲು ಎಲ್ಲಿಯೂ ಪ್ರಕಟಗೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ ಮತ್ತು ದೃಶ್ಯಕಲಾ ವಿಭಾಗದ ಮೂಲಕ ಈ ಮಹಾಪ್ರಬಂಧವನ್ನು ಸಲ್ಲಿಸಲಾಗುತ್ತಿದೆ.

(ಡಾ. ಎಸ್. ಸಿ. ಪಾಟೀಲ)
ಮಾರ್ಗದರ್ಶಕರು
ಡೀನ್, ಲಲಿತಕಲಾ ನಿಕಾಯ
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ; ಹಂಪಿ
ವಿದ್ಯಾರಣ್ಯ

ಸ್ಥಳ : ಹಂಪಿ, ವಿದ್ಯಾರಣ್ಯ
ದಿನಾಂಕ : ೨೪.೧೨.೨೦೧೨

ಬಳ್ಳಾರಿ ಜಿಲ್ಲೆಯ ಚಿತ್ರಕಲೆ

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

"ಮನುಷ್ಯ ಚಿನ್ನದ ಅದಿರಾದರೆ, ಕಲೆ ಆ ಅದಿರಿನಲ್ಲಿನ ಶುದ್ಧ ಚಿನ್ನದಂತೆ". ಈ ಚಿನ್ನದ ಹೊಳಪಿನ ಕಿರಣಗಳೇ ಕಲೆಗಳ ಅಭಿವ್ಯಕ್ತಿಯ ಹಲವು ಮಾಧ್ಯಮಗಳು. ಕಲೆ ಮಾನವನ ಸೃಜನಾತ್ಮಕ ಅಭಿವ್ಯಕ್ತಿ. ಇದರ ಮೂಲ ಬೀಜ ಮನುಷ್ಯನ ಸ್ವಭಾವದಲ್ಲಿದ್ದರೂ, ಅದು ಯಾವುದಾದರೊಂದು ಭಾವನೆಯ ತೀವ್ರತೆಯಿದ್ದಾಗ ಮಾತ್ರ ಅಭಿವ್ಯಕ್ತಿಯಾಗುತ್ತದೆ. ಇಂತಹ ಅಂತರಂಗದ ಭಾವನೆಗಳನ್ನು ಕಲಾತ್ಮಕವಾಗಿ ಅಭಿವ್ಯಕ್ತಿಸುವ ಕ್ರಿಯೆಗಳೇ ಕಲೆಗಳಾಗಿವೆ. ಕಲೆಯಲ್ಲಿ ಜೀವನ, ಜೀವನದಲ್ಲಿ ಕಲೆ–ಹೀಗೆ ಪರಸ್ಪರ ಕೊಡು, ಕೊಳ್ಳುವಿಕೆ ಯಾವತ್ತಿಗೂ ಮನುಷ್ಯನಲ್ಲಿ ಇರುವ ಸಹಜ ಕ್ರಿಯೆಗಳು.

ಸಾಮಾನ್ಯವಾಗಿ ಸಮಾಜದಲ್ಲಿ ಕಲೆಗಳನ್ನು ಲಲಿತಕಲೆ ಮತ್ತು ವಾಣಿಜ್ಯಕಲೆಗಳೆಂದು ವಿಂಗಡಿಸಲಾಗುತ್ತದೆ. ಲಲಿತಕಲೆಗಳ ಪರಮಗುರಿ ಸಂತೋಷ, ಆನಂದವನ್ನು ನೀಡುವಂತಹದ್ದಾಗಿದೆ. ಈ ಲಲಿತಕಲೆಗಳಲ್ಲಿ ಮತ್ತೆ ಹಲವು ಪ್ರಕಾರಗಳನ್ನು ಕಾಣುತ್ತೇವೆ. ಒಂದು ದೃಷ್ಟಿಯ ಮೂಲಕ ನೋಡುವ ಕಲೆಗಳನ್ನು ದೃಶ್ಯಕಲೆಗಳೆಂದು ಕರೆಯಲಾಗುತ್ತದೆ. ಉದಾ: ಶಿಲ್ಪ, ಚಿತ್ರ, ವಾಸ್ತುಶಿಲ್ಪ, ಛಾಯಾಚಿತ್ರ ಮುಂತಾದವು. ಇನ್ನೊಂದು, ಕಿವಿಯ ಮೂಲಕ ಕೇಳಿ ಸಂತೋಷಪಡುವಂತಹ ಕಲೆಗಳನ್ನು ಶ್ರಾವ್ಯಕಲೆಗಳೆಂದು ಕರೆಯಲಾಗುತ್ತದೆ. ಉದಾ; ಸಂಗೀತ, ನೃತ್ಯ ಹೀಗೆ ಹಲವಾರು ವಿಧಗಳಿವೆ. ಇನ್ನೂ ಕೆಲವರು ಈ ಕಲೆಗಳನ್ನು ಪ್ರದರ್ಶನಾತ್ಮಕ ಕಲೆಗಳೆಂದು ಕರೆಯುವುದುಂಟು. ಉದಾ: ನಾಟಕ, ನೃತ್ಯ, ಯಕ್ಷಗಾನ, ಬಯಲಾಟ, ದೊಡ್ಡಾಟ ಇತ್ಯಾದಿ. ದೃಶ್ಯಕಲೆಗಳಲ್ಲಿ ಪ್ರಧಾನವಾದ

ಮತ್ತು ಅನನ್ಯವಾದ ಕಲಾಪ್ರಕಾರ ಚಿತ್ರಕಲೆ. ಈ ಕಲೆಯು ಯಾವುದೇ ಸಮಾಜದ ಮಾನವನೊಂದಿಗೆ ಹೊಂದಿರುವ ಬಾಂಧವ್ಯ, ಅದರ ಹರವು ತುಂಬ ವೈವಿಧ್ಯಮಯವಾದುದು. ಯಾವುದೇ ಪ್ರದೇಶದಲ್ಲಿ ಅರಳಿರುವ ಈ ಕಲೆಗಳು ಆಯಾ ಪ್ರದೇಶದ, ಪ್ರಾದೇಶಿಕ ವೈಶಿಷ್ಟ್ಯವನ್ನು ಹೊಂದಿರುತ್ತವೆ. ಪ್ರಸ್ತುತ ಬಳ್ಳಾರಿ ಜಿಲ್ಲೆಯ ಚಿತ್ರಕಲೆಯನ್ನು ಈ ನೆಲೆಯಲ್ಲಿ ಅಧ್ಯಯನ ಮಾಡುವ ಉದ್ದೇಶ ಹೊಂದಲಾಗಿದೆ.

ಅಧ್ಯಯನದ ಉದ್ದೇಶ

ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಪರಿಸರ ವಿಭಿನ್ನವಾಗಿ ಬೆಳವಣಿಗೆಯನ್ನು ಹೊಂದಿದ್ದು, ಇಲ್ಲಿಯ ನಿಸರ್ಗದ ಪ್ರಭಾವ ಈ ಜಿಲ್ಲೆಯ ಪರಿಸರದ ಮೇಲೆ ಆಗಿರುವುದನ್ನು ಕಾಣುತ್ತೇವೆ. ಮತ್ತು ನೈಸರ್ಗಿಕವಾಗಿ ಸೃಷ್ಟಿಯಾದ ಕಲ್ಲುಬೆಟ್ಟಗಳು, ಅವುಗಳ ಮಧ್ಯದಲ್ಲಿ ನಿರ್ಮಾಣವಾದ ಕೋಟೆ ಕೊತ್ತಲುಗಳು, ಅರಮನೆಗಳು, ದೇವಾಲಯಗಳ ವಾಸ್ತುಶಿಲ್ಪಗಳು ಜಗತ್ತಿನ ಜನರನ್ನು ಆಕರ್ಷಿಸುವ ರೀತಿಯಲ್ಲಿ ಇಲ್ಲಿಯ ನೈಸರ್ಗಿಕ ಪರಿಸರದ ಹಿನ್ನೆಲೆಯಲ್ಲಿ ಸೃಷ್ಟಿಯಾಗಿವೆ. ಈ ಜಿಲ್ಲೆಯ ರಾಜಕೀಯ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಮುಂತಾದ ಸಾಂಸ್ಕೃತಿಕ ಪರಿಸರದಲ್ಲಿ ಬೆಳೆದು ಬಂದ ಲಲಿತಕಲೆಗಳನ್ನು, ವಿಶೇಷವಾಗಿ ಚಿತ್ರಕಲೆಯ ಹಿನ್ನೆಲೆಯಲ್ಲಿ ಅಧ್ಯಯನಕ್ಕೊಳಪಡಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶಗಳಲ್ಲೊಂದಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಚಿತ್ರಕಲೆಯು ಪರಂಪರೆ, ಪ್ರಾಗೈತಿಹಾಸಿಕ ಕಾಲದಿಂದಲೇ ಅರಂಭವಾಗುತ್ತದೆ. ಪ್ರಾಚೀನ ಕಾಲದ ಈ ಮಾನವನ ಚಿತ್ರಗಳು ಕಲ್ಲಿನ ಗುಹೆಗಳಲ್ಲಿ ಹೇರಳವಾಗಿ ಕಂಡುಬರುತ್ತವೆ. ಇಲ್ಲಿ ಕುಟ್ಟಿದ, ಗೀಚಿದ ರೇಖಾಚಿತ್ರಗಳು, ವರ್ಣಚಿತ್ರಗಳು ಪ್ರಾಚೀನ ಕಾಲದ ಮಾನವನ ದೈನಂದಿನ ಬದುಕಿನ ಚಿತ್ರಣವನ್ನು ನೀಡುತ್ತವೆ. ಈ ಚಿತ್ರಗಳು ಆದಿ ಮಾನವನ ಅಂದಂದಿನ ಬದುಕಿನ ದಿನಚರಿಗಳಾಗಿವೆ. ತನ್ನ ಬದುಕಿನ ಆಗುಹೋಗುಗಳನ್ನು, ದೈನಂದಿನ ಚಟುವಟಿಕೆಗಳನ್ನು ಈ ಚಿತ್ರಗಳ ಮೂಲಕ ಅಭಿವ್ಯಕ್ತಿಪಡಿಸಲು ಪ್ರಯತ್ನಿಸಿದ್ದಾನೆ. ಈ ಪರಂಪರೆಯ ಚಿತ್ರಕಲೆಯನ್ನು ದೃಶ್ಯಕಲೆಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

ಬಳ್ಳಾರಿ ಜಿಲ್ಲೆಯ ಚಿತ್ರಕಲೆ ಶಿಷ್ಟಪದ ಮತ್ತು ಜನಪದ ಸಂಪ್ರದಾಯ ಈ ಎರಡು ವಿಭಿನ್ನ ನೆಲೆಗಳಲ್ಲಿ ಬೆಳವಣಿಗೆಯಾಗಿದ್ದು, ವಿಶೇಷವಾಗಿ ಜನಪದ ಸಂಪ್ರದಾಯದ ಹಿನ್ನೆಲೆಯಲ್ಲಿ ಈ ಜಿಲ್ಲೆಯಲ್ಲಿ ಬೆಳೆದು ಬಂದ ಚಿತ್ರಕಲೆಯನ್ನು ಜನಪದ ಚಿತ್ರಕಲೆಯೆಂದು ಗುರುತಿಸಿ ಈ ಕಲೆಗಳ ಹುಟ್ಟು, ಬೆಳವಣಿಗೆ, ವಿವಿಧ ಪ್ರಕಾರಗಳು, ಚಿತ್ರಗಳ ವಸ್ತುವಿಷಯ, ರಚನಾ ವಿಧಿವಿಧಾನ ಮುಂತಾದ ಜಾನಪದೀಯ ಅಂಶಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದು ಒಂದು ಪ್ರಮುಖ ಉದ್ದೇಶವಾಗಿದೆ. ಈ ಜಿಲ್ಲೆಯಲ್ಲಿ ಜನಪದ ಚಿತ್ರಕಲೆಯಂತೆ ಶಿಷ್ಟಪದ ಚಿತ್ರಕಲೆಯು ಗಮನಾರ್ಹವಾಗಿ ರಾಜಾಶ್ರಯದ ಮೂಲಕ ದೇವಾಲಯ, ಮಠ, ಮಂದಿರ, ಅರಮನೆ ಮುಂತಾದವುಗಳ ಭಿತ್ತಿಯಲ್ಲಿ ರಚನೆಯಾಗಿದ್ದು, ಭಿತ್ತಿಚಿತ್ರಕಲೆಯೆಂದು ಕರೆಯಿಸಿಕೊಂಡಿದೆ.

ಈ ಭಿತ್ತಿಚಿತ್ರಕಲಾ ಸಂಪ್ರದಾಯವೊಂದು ಕರ್ನಾಟಕೇತರ ಪ್ರದೇಶಗಳಾದ ಆಂಧ್ರ, ತಮಿಳುನಾಡು, ಕೇರಳ ಮುಂತಾದ ಕಡೆಗೆ ಈ ಜಿಲ್ಲೆಯ ಭಿತ್ತಿಚಿತ್ರಕಲೆ ಬೆಳೆದು ಬಂದಿದೆ. ಈ ವಿಶಿಷ್ಟ ಪ್ರಕಾರದ ಭಿತ್ತಿಚಿತ್ರಕಲೆಯ ಸಿದ್ಧತೆಯ ವಿಧಾನ, ಅದರ ರಚನೆಯ ಪರಿಕರಗಳು, ರಚನೆ, ವಸ್ತುವಿಷಯ ಮುಂತಾದ ಅಂಶಗಳನ್ನು ಮತ್ತು ಭಿತ್ತಿಚಿತ್ರಕಲೆಯ ವಿವಿಧ ನೆಲೆಗಳನ್ನು ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಹೇರಳವಾಗಿ ದೊರೆತಿರುವ ಹಸ್ತಪ್ರತಿಗಳಲ್ಲಿ ವೈವಿಧ್ಯಮಯವಾದ ಚಿತ್ರಗಳಿರುವ ಹಸ್ತಪ್ರತಿಗಳಿದ್ದು, ಈ ಹಸ್ತಪ್ರತಿಗಳ ಚಿತ್ರಕಲೆಯನ್ನು ಪ್ರಮುಖವಾಗಿ ಅಧ್ಯಯನ ಮಾಡುವ ಉದ್ದೇಶವು ಇಲ್ಲಿದೆ.

ಈ ಜಿಲ್ಲೆಯಲ್ಲಿ ಚಿತ್ರಕಲಾ ಸಾಹಿತ್ಯವು ಹೇರಳವಾಗಿ ರಚನೆಯಾಗಿದೆ. ಅವುಗಳನ್ನು ವ್ಯವಸ್ಥಿತವಾಗಿ ವಿಂಗಡಿಸಿಕೊಂಡು ಅಧ್ಯಯನಕ್ಕೊಳಪಡಿಸುವ ಉದ್ದೇಶವನ್ನು ಈ ಅಧ್ಯಯನ ಹೊಂದಿದೆ. ಮತ್ತು ವಿವಿಧ ಮಾಧ್ಯಮಗಳಲ್ಲೂ ಅಭಿವ್ಯಕ್ತಿಯಾದ ಚಿತ್ರಕಲೆಯನ್ನು ಸಂಕೀರ್ಣ ಮಾಧ್ಯಮದ ಚಿತ್ರಕಲೆಯೆಂದು ಗುರುತಿಸಿ ಅಧ್ಯಯನ ಮಾಡುವ ಉದ್ದೇಶವನ್ನು ಇಟ್ಟುಕೊಂಡಿದೆ. ಉದಾಹರಣೆಗೆ, ವಸ್ತುಸಂಗ್ರಹಾಲಯಗಳಲ್ಲಿರುವ ವೈವಿಧ್ಯಮಯ ಚಿತ್ರಕಲಾಕೃತಿಗಳು, ಕಲಾಗ್ಯಾಲರಿಗಳಲ್ಲಿರುವ ಕಲಾಕೃತಿಗಳು ಹೀಗೆ ಮುಂತಾದ ಕಡೆಗಳಲ್ಲಿರುವ ಚಿತ್ರಕಲೆಯನ್ನು ಸಹ ವ್ಯವಸ್ಥಿತವಾಗಿ ಅಧ್ಯಯನ ಮಾಡುವ ಉದ್ದೇಶ ಹೊಂದಲಾಗಿದೆ.

ಈ ಜಿಲ್ಲೆಯ ಚಿತ್ರಕಲೆಯ ಮೇಲಾದ ಪ್ರಭಾವ, ಪ್ರೇರಣೆಗಳನ್ನು ಗುರುತಿಸುವ ಮತ್ತು ಮುಂದಿನ ಜನಾಂಗಕ್ಕೆ ಈ ಚಿತ್ರಕಲೆಯನ್ನು, ಅದರ ವಿವಿಧ ಆಯಾಮಗಳನ್ನು ದಾಖಲಿಸುವ ಮಹತ್ವದ ಉದ್ದೇಶವನ್ನು ಹೊಂದಲಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಸಮಕಾಲೀನ ಸಂದರ್ಭದಲ್ಲಿ ಬೆಳೆದು ಬಂದ ಚಿತ್ರಕಲೆ ಮತ್ತು ಕಲಾವಿದರನ್ನು, ಕಲಾಶಿಕ್ಷಣವನ್ನು ಮತ್ತು ಈ ಜಿಲ್ಲೆ ಚಿತ್ರಕಲೆಗೆ ನೀಡಿದ ಪ್ರಮುಖ ಕೊಡುಗೆಗಳನ್ನು ಸಹ ಒಂದು ಕಡೆಗೆ ಕಟ್ಟಿಕೊಡುವ ಉದ್ದೇಶದ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನ ರೂಪುಗೊಂಡಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಸಂಶೋಧನ ಅಧ್ಯಯನವನ್ನು ಅಧ್ಯಯನದ ಅನುಕೂಲತೆಗಾಗಿ ಹತ್ತು ಅಧ್ಯಾಯಗಳಾಗಿ ಈ ಕೆಳಗಿನಂತೆ ವಿಂಗಡಿಸಿಕೊಂಡು ಅಧ್ಯಯನವನ್ನು ನಡೆಸಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆಯ ಕುರಿತು ಅಧ್ಯಯನ ಮಾಡುವುದೊಂದಿಗೆ ಅಧ್ಯಯನಕ್ಕೆ ಒಂದು ಸ್ಪಷ್ಟ ಭೂಮಿಕೆಯನ್ನು ಇಲ್ಲಿ ಸಿದ್ಧಪಡಿಸಿಕೊಳ್ಳಲಾಗಿದೆ. ಮತ್ತು ಅಧ್ಯಯನದ ಉದ್ದೇಶಗಳನ್ನು ಮತ್ತು ಅದರ ವ್ಯಾಪ್ತಿಗಳನ್ನು ಸ್ಪಷ್ಟಪಡಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಈ ಜಿಲ್ಲೆಯ ಸಾಂಸ್ಕೃತಿಕ ಪರಿಸರ ಮತ್ತು ಲಲಿತಕಲೆಗಳ ನೆಲೆ–ಹಿನ್ನೆಲೆಯನ್ನು ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಭೌಗೋಳಿಕ, ನೈಸರ್ಗಿಕ ಹಿನ್ನೆಲೆಯಲ್ಲಿ ಸ್ಥೂಲವಾಗಿ ವಿವೇಚಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಪ್ರಾಗೈತಿಹಾಸಿಕ ಚಿತ್ರಕಲೆಗೆ ಸಂಬಂಧಿಸಿದಂತೆ ಹಳೇ ಶಿಲಾಯುಗ, ಸೂಕ್ಷ್ಮ ಶಿಲಾಯುಗ ಮತ್ತು ನವಶಿಲಾಯುಗದ ಹಲವು ಪ್ರಾಗೈತಿಹಾಸಿಕ ಚಿತ್ರಗಳ ನೆಲೆಗಳನ್ನು ಉದಾ: ಮೆಟ್ರಿ, ಮಿಂಚೇರಿ, ಸಂಜರಾಯನ ಕೋಟೆ, ಬಳ್ಳಾರಿ ಗುಡ್ಡ, ಕಾರಿಗನೂರು, ಎತ್ತಿನಬೂದಿಹಾಳ್ ಮತ್ತು ಈಗಾಗಲೇ ಸಂಶೋಧಿತಗೊಂಡ ನೆಲಗಳಾದ ಕಪ್ಪಗಲ್ಲು, ಸಂಗನಕಲ್ಲು, ಬೆಳಗಲ್ಲು ಮುಂತಾದ ನೆಲೆಗಳಲ್ಲಿ ಕೊರೆದ/ಕುಟ್ಟಿದ ಚಿತ್ರಗಳು ಮತ್ತು ವರ್ಣಚಿತ್ರಗಳು ಬಯಲು ಬಂಡೆ ಗವಿಗಳಲ್ಲಿ ಕಂಡುಬಂದಿದ್ದು, ಈ ಪ್ರಾಗೈತಿಹಾಸಿಕ ಕಲೆಯ ಚಿತ್ರಗಳ ರೇಖೆ, ವರ್ಣ, ಸಂಯೋಜನೆ, ವಸ್ತುವಿಷಯ ಮುಂತಾದ ವಿಷಯಗಳನ್ನು ದೃಶ್ಯಕಲೆಯ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಬಳ್ಳಾರಿ ಜಿಲ್ಲೆಯ ಜನಪದ ಸಂಪ್ರದಾಯದ ಚಿತ್ರಕಲೆಯನ್ನು ವಿಶೇಷವಾಗಿ ಅಧ್ಯಯನಕ್ಕೊಳಪಡಿಸಲಾಗಿದ್ದು, ಉದಾ: ರಂಗೋಲಿ, ಹಚ್ಚೆ, ಮದರಂಗಿ, ತೊಗಲುಗೊಂಬೆ, ಕಸೂತಿ, ಕೌದಿ, ದೊಡ್ಡಾಟ, ಮುಖವರ್ಣಿಕೆ, ಹುಲಿವೇಷ, ಜಾತ್ರೆಯಲ್ಲಿ ರಥಗಳ ಮೇಲಿನ ಚಿತ್ರಕಲೆ ಮುಂತಾದ ಜನಪದಚಿತ್ರ ಕಲೆಗಳ ಹುಟ್ಟು, ಬೆಳವಣಿಗೆ, ಚಿತ್ರರಚನಾ ವಿಧಿವಿಧಾನ, ವಸ್ತುವಿಷಯ, ನಂಬಿಗೆ, ಆಚರಣೆ, ಐತಿಹ್ಯ ಇತ್ಯಾದಿಗಳನ್ನು ಜಾನಪದೀಯ ಅಂಶಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಈ ಜಿಲ್ಲೆಯಲ್ಲಿ ಕಂಡುಬರುವ ಭಿತ್ತಿಚಿತ್ರಗಳ ನೆಲೆಗಳಾದ ಹಂಪಿ, ಆನೆಗೊಂದಿ, ಕನಕಗಿರಿ ಮುಂತಾದ ಸ್ಥಳಗಳನ್ನು ಗುರುತಿಸಿ ಈ ಸಂಪ್ರದಾಯದ ಚಿತ್ರಕಲೆಯನ್ನು ಕುರಿತು ವಿಶೇಷವಾಗಿ ವಸ್ತುವಿಷಯ, ಶೈಲಿ ಮುಂತಾದ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ.

ಆರನೆಯ ಅಧ್ಯಾಯದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಸಂಗ್ರಹಗೊಂಡ ಹಸ್ತಪ್ರತಿಗಳನ್ನು ಅದರಲ್ಲಿಯೂ ರೇಖಾ ಮತ್ತು ವರ್ಣಚಿತ್ರಗಳಿರುವ ಹಸ್ತಪ್ರತಿಗಳನ್ನು ವಿಶೇಷವಾಗಿ ಚಿತ್ರಕಲೆಯ ದೃಷ್ಟಿಯಿಂದ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಬಳ್ಳಾರಿ ಜಿಲ್ಲೆಯ ಚಿತ್ರಕಲಾ ಸಾಹಿತ್ಯವನ್ನು ಇಲ್ಲಿ ವಿಶೇಷವಾಗಿ ಅಧ್ಯಯನ ಮಾಡಲಾಗಿದೆ. ಇಲ್ಲಿ ಪ್ರಕಟಿತ ಚಿತ್ರಕಲಾ ಸಾಹಿತ್ಯ ಮತ್ತು ಅಪ್ರಕಟಿತ ಚಿತ್ರಕಲಾ ಸಾಹಿತ್ಯ ಎಂದು ವಿಂಗಡಿಸಿಕೊಂಡು ವಿವೇಚಿಸಲಾಗಿದೆ. ಅಲ್ಲದೇ ಮತ್ತೆ ಅವುಗಳಲ್ಲಿ ಉಪವಿಂಗಡಣೆಗಳನ್ನು ಮಾಡಿಕೊಂಡು ಒಟ್ಟಾರೆ ಚಿತ್ರಕಲಾ ಸಾಹಿತ್ಯವನ್ನು ಸಮೀಕ್ಷಿಸಿ ಅಧ್ಯಯನ ನಡೆಸಲಾಗಿದೆ.

[illegible]

ಎಂಟನೆಯ ಅಧ್ಯಾಯದಲ್ಲಿ ಬೇರೆ ಬೇರೆ ಮಾಧ್ಯಮದಲ್ಲಿ ಕಂಡುಬರುವ ಚಿತ್ರಕಲಾ ಕೃತಿಗಳನ್ನು ಇಲ್ಲಿ ಸಂಕೀರ್ಣ ಚಿತ್ರಕಲೆ ಎಂದು ಗುರುತಿಸಿ ಗಾಜು, ಫೈಬರ್, ಸಿಮೆಂಟ್ ಮೊದಲಾದ ಮಾಧ್ಯಮಗಳ ಮೇಲಿನ ಚಿತ್ರಕಲೆಯನ್ನು ಮತ್ತು ವಸ್ತುಸಂಗ್ರಹಾಲಯ, ಕಲಾಗ್ಯಾಲರಿಗಳಲ್ಲಿ ಮುಂತಾದ ಕಡೆಗೆ ಸಂಗ್ರಹಗೊಂಡ ಚಿತ್ರಕಲಾಕೃತಿಗಳನ್ನು ದೃಶ್ಯಾತ್ಮಕ ನೆಲೆಯಲ್ಲಿ ಅಧ್ಯಯನಕ್ಕೊಳಪಡಿಸಲಾಗಿದೆ.

ಒಂಭತ್ತನೆಯ ಅಧ್ಯಾಯದಲ್ಲಿ ಬಳ್ಳಾರಿ ಜಿಲ್ಲೆಯ ಸಮಕಾಲೀನ ಕಲೆ, ಕಲಾಶಿಕ್ಷಣ, ಕಲಾವಿದರು ಮತ್ತು ಈ ಜಿಲ್ಲೆಯ ಪ್ರಮುಖ ಚಿತ್ರಕಲೆಯ ವೈಶಿಷ್ಟ್ಯಗಳನ್ನು ಕುರಿತು ಚರ್ಚಿಸಲಾಗಿದೆ.

ಹತ್ತನೆಯ ಅಧ್ಯಾಯವು ಸಮಾರೋಪವಾಗಿದ್ದು, ಈ ಮೇಲಿನ ಒಂಭತ್ತು ಅಧ್ಯಾಯಗಳಲ್ಲಿ ವಿಶ್ಲೇಷಿಸಲ್ಪಟ್ಟ ಒಟ್ಟು ಫಲಿತಗಳನ್ನು ಈ ಅಧ್ಯಾಯದಲ್ಲಿ ಸಮೀಕ್ಷಿಸಲಾಗಿದೆ.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನವು ಬಳ್ಳಾರಿ ಜಿಲ್ಲೆಗೆ ಮಾತ್ರ ಸೀಮಿತಗೊಂಡಿದ್ದರೂ ಕರ್ನಾಟಕದ ಇತರ ಪ್ರದೇಶಗಳನ್ನು ಮತ್ತು ಕರ್ನಾಟಕೇತರ ಪ್ರದೇಶದ ಚಿತ್ರಕಲೆಯನ್ನು ಅಧ್ಯಯನಕ್ಕೆ ಪೂರಕವಾಗಿ ಕೆಲವು ಸಲ ತೌಲನಿಕವಾಗಿ ವಿವೇಚಿಸಲು ಬಳಸಿಕೊಂಡು ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಚಿತ್ರಕಲಾ ಕ್ಷೇತ್ರದಲ್ಲಿ ಇಲ್ಲಿಯವರೆಗೆ ನಡೆದ ಸಂಶೋಧನಾ ಅಧ್ಯಯನಗಳು

ಕರ್ನಾಟಕದ ಸಂದರ್ಭದಲ್ಲಿ ಚಿತ್ರಕಲಾ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನಾ ಅಧ್ಯಯನಗಳು ನಡೆದಿಲ್ಲವೆಂದೇ ಹೇಳಬಹುದಾಗಿದೆ. ಏಕೆಂದರೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆಗಳ ಕುರಿತಾದ ಅಧ್ಯಯನಕ್ಕೆ ಅವಕಾಶ ದೊರಕಿದ್ದು ತೀರ ಇತ್ತೀಚೆಗಷ್ಟೆ. ೧೯೮೦ರ ದಶಕದಲ್ಲಿ ಈ ಅಧ್ಯಯನಗಳು ತೀವ್ರಗೊಂಡು ಈಗಷ್ಟೇ ತನ್ನ ಶೈಶವಾವಸ್ಥೆಯನ್ನು ಕಳೆದು ಯೌವ್ವನಕ್ಕೆ ಕಾಲಿಡುತ್ತಿವೆ. ಆದರೂ ಭಾರತದ ಮಟ್ಟಿಗೆ ಕರ್ನಾಟಕವು ದೃಶ್ಯಕಲೆಯಲ್ಲಿ ಹೆಚ್ಚಿನ ಸಂಶೋಧನೆ ನಡೆಸಿರುವುದು ವಿಶೇಷವೆಂದೇ ಹೇಳಬಹುದು. ೧೯೮೦ರ ದಶಕದಿಂದ ಕರ್ನಾಟಕದಲ್ಲಿ ನಡೆದ ದೃಶ್ಯಕಲಾ ಅಧ್ಯಯನಗಳ ಸ್ಥೂಲವಾದ ವಿವರವನ್ನು ಈ ಕೆಳಗೆ ಸಮೀಕ್ಷಿಸಿ ಕೊಡಲಾಗಿದೆ.

ಪಿಎಚ್.ಡಿ. ಮಹಾಪ್ರಬಂಧಗಳು

೧೯೮೦ರ ದಶಕದಿಂದ ಕರ್ನಾಟಕದ ದೃಶ್ಯಕಲಾ ಕ್ಷೇತ್ರದಲ್ಲಿ ಮೊದಲಬಾರಿಗೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆ ಕುರಿತು ಸಂಶೋಧನಾತ್ಮಕ ಅಧ್ಯಯನ ಪ್ರಾರಂಭಗೊಂಡಿರುವುದು ಕಂಡುಬರುತ್ತದೆ. ಡಾ. ಎಸ್.ಸಿ.ಪಾಟೀಲರು ೧೯೮೩ರಲ್ಲಿ ಕರ್ನಾಟಕ ವಿ.ವಿ.ಯ ಸ್ನಾತಕೋತ್ತರ ಶಿಕ್ಷಣ ವಿಭಾಗಕ್ಕೆ ಮಂಡಿಸಿದ **ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ: ಒಂದು ಅಧ್ಯಯನ**[೧] ಎಂಬ ಸಂಶೋಧನ ಕಿರುಪ್ರಬಂಧವು ಈ ಕ್ಷೇತ್ರದ ಪ್ರಥಮ ಅಧ್ಯಯನದ ಕಾರ್ಯವೆಂದು ದಾಖಲಾಗಿದೆ. ೧೯೮೭ರಲ್ಲಿ ಡಾ. ಬಿ.ಕೆ.ಹಿರೇಮಠರು **"ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ**[೨]

೦೧. ಡಾ. ಎಸ್.ಸಿ.ಪಾಟೀಲ : ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ, ಕರ್ನಾಟಕ ವಿ.ವಿ., ೧೯೮೩.

೦೨. ಡಾ. ಬಿ.ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು, ಪಿಹೆಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ., ೧೯೮೭.

ಎಂಬ ಪಿಹೆಚ್.ಡಿ. ಮಹಾಪ್ರಬಂಧದಲ್ಲಿ ಹಸ್ತಪ್ರತಿ ಚಿತ್ರಕಲೆ ಕುರಿತಾಗಿ ಎರಡು ಅಧ್ಯಾಯಗಳನ್ನು ಮೀಸಲಾಗಿಟ್ಟು ಅಧ್ಯಯನ ಮಾಡಿದ್ದಾರೆ. ಇದರ ನಂತರ ೧೯೯೧ರಲ್ಲಿ ಕರ್ನಾಟಕದಲ್ಲಿ ಜನಪದ ಚಿತ್ರಕಲೆಯನ್ನೇ ಸಂಶೋಧನೆಯ ಮುಖ್ಯ ವಿಷಯವನ್ನಾಗಿಟ್ಟುಕೊಂಡು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಪಿಹೆಚ್.ಡಿ. ಮಹಾಪ್ರಬಂಧ **ಕರ್ನಾಟಕ ಜನಪದ ಚಿತ್ರಕಲೆ**[೩] ಈ ಮಹಾಪ್ರಬಂಧವನ್ನು ಡಾ. ಎಸ್. ಸಿ. ಪಾಟೀಲರು ಸಿದ್ಧಪಡಿಸಿದ್ದು ದೃಶ್ಯಕಲಾ ಕ್ಷೇತ್ರದ ಮೊದಲ ಅಧ್ಯಯನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ನಂತರದ ದಿನಗಳಲ್ಲಿ ೧೯೯೫ರಲ್ಲಿ ಡಾ. ಅ. ಲ. ನರಸಿಂಹನ್ ಅವರು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಪಿಎಚ್.ಡಿ. ಮಹಾಪ್ರಬಂಧ **ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು**[೪], ೧೯೯೭ರಲ್ಲಿ ಡಾ. ಸಂಪದಾ ಭಟ್ ಅವರ **ಹಿಂದೂಸ್ಥಾನಿ ಸಂಗೀತ ಹಾಗೂ ರಾಗಮಾಲಾ ಚಿತ್ರಗಳು**[೫], ಕನ್ನಡ ವಿಶ್ವವಿದ್ಯಾಲಯಕ್ಕೆ, ೧೯೯೭ರಲ್ಲಿ ಡಾ. ಪುಷ್ಪಾ ದ್ರಾವಿಡ ಇವರು ಮಂಡಿಸಿದ **ಅನಿವಾಸಿ ಭಾರತೀಯ ಕಲಾವಿದ ದಿ.ನಿಕೋಲಸ್ ರೋರಿಕ್ ಜೀವನ ಮತ್ತು ಕಲಾಕೃತಿಗಳು**[೬], ೨೦೦೧ರಲ್ಲಿ ಡಾ. ಯಾದಪ್ಪ ಪರದೇಶಿಯವರ **ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ : ಒಂದು ಅಧ್ಯಯನ**[೭], ೨೦೦೨ರಲ್ಲಿ ಡಾ. ಶಿವಾನಂದ ಬಂಟನೂರು ಇವರ **ಕರ್ನಾಟಕ ಜನಪದ ಶಿಲ್ಪಕಲೆ : ಒಂದು ಅಧ್ಯಯನ**[೮], ಡಾ. ಗಿರೀಶ ಅವರ **ಬುಡಕಟ್ಟು ಚಿತ್ರಕಲೆ**[೯], ೨೦೦೨ರಲ್ಲಿ ಡಾ. ಲಕ್ಷ್ಮೀದೇವಿ ಗವಾಯಿಯವರ **ಕಲಾವಿದ ಎಂ.ಎ.ಚೆಟ್ಟಿಯವರ ಜೀವನ– ಕಲಾಕೃತಿಗಳು : ಒಂದು ಅಧ್ಯಯನ**[೧೦], ಡಾ. ಶಂಕ್ರಪ್ಪ ಕೋಲ್ಕಾರ್ ಅವರ **ಕೊಪ್ಪಳ–ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ**[೧೧], ಡಾ. ಸೌಮ್ಯಾ ಅವರ **ಯಂತ್ರಾ ದಿ ವಿಜುವಲ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫರೆನ್ಸ್ ಟು ಕಾಂಟೆಂಪರರಿ ತಾಂತ್ರಿಕ ಆರ್ಟಿಸ್ಟ್**[೧೨], ಡಾ. ಪ್ರಮಿಳಾ ಲೋಚನ ಅವರ **ಮೈಂಡ್ ಮ್ಯೂಜಿಕ್ ಅಂಡ್ ಕಲರ್ ಎಕ್ಸಪೋಜಿಸ್ ಅಂಡ್ ಡೆವೆಲಪ್‌ಮೆಂಟ್ ಆಫ್ ರಾಗಮಾಲಾ ಆಂಡ್ ಕಾಂಟೆಂಪರರಿ ಪೇಂಟಿಂಗ್**[೧೩], ೨೦೦೩ರಲ್ಲಿ ಡಾ. ವೀಣಾ ಶೇಖರ ಮಂಡಿಸಿದ **ಎ ಸ್ಟಡಿ ಆಫ್**

---

೦೩. ಡಾ. ಎಸ್.ಸಿ. ಪಾಟೀಲ : ಕರ್ನಾಟಕ ಜನಪದ ಚಿತ್ರಕಲೆ , ಪಿಹೆಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ., ೧೯೯೧.

೦೪. ಡಾ. ಅ.ಲ.ನರಸಿಂಹನ್ : ಕರ್ನಾಟಕ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು, ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ.೧೯೯೮.

೦೫. ಡಾ. ಸಂಪದಾ ಭಟ್ : ಹಿಂದೂಸ್ಥಾನಿ ಸಂಗೀತ ಮತ್ತು ರಾಗಮಾಲಾ ಚಿತ್ರಗಳು, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ.೧೯೯೮.

೦೬. ಡಾ. ಪುಷ್ಪಾ ದ್ರಾವಿಡ : ಅನಿವಾಸಿ ಭಾರತೀಯ ಕಲಾವಿದ ದಿ ನಿಕೋಲಸ್ ರೋರಿಕ್ ಜೀವನ ಮತ್ತು ಕಲಾಕೃತಿಗಳು, ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ., ೧೯೯೭.

೦೭. ಡಾ. ಯಾದಪ್ಪ ಪರದೇಶಿ :ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ : ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ.೨೦೦೧.

೦೮. ಡಾ. ಶಿವಾನಂದ ಬಂಟನೂರು :ಕರ್ನಾಟಕ ಜನಪದ ಶಿಲ್ಪಕಲೆ : ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ೨೦೦೨.

೦೯. ಡಾ. ಗಿರೀಶ : ಬುಡಕಟ್ಟು ಚಿತ್ರಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೨.

೧೦. ಡಾ. ಲಕ್ಷ್ಮಿದೇವಿ ಗವಾಯಿ :ಕಲಾವಿದ ಎಂ.ಎ.ಚೆಟ್ಟಿಯವರ ಜೀವನ– ಕಲಾಕೃತಿಗಳು : ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೨.

೧೧. ಡಾ. ಶರಣಪ್ಪ ಕೋಲ್ಕಾರ : ಕೊಪ್ಪಳ–ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೨.

೧೨. ಡಾ. ಸೌಮ್ಯಾ : ಯಂತ್ರಾ ದಿ ವಿಜುವಲ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫರೆನ್ಸ್ ಟು ಕಾಂಟೆಂಪರರಿ ತಾಂತ್ರಿಕ ಆರ್ಟಿಸ್ಟ್, ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ., ೨೦೦೨.

೧೩. ಡಾ. ಪ್ರಮಿಳಾ ಲೋಚನ : ಮೈಂಡ್ ಮ್ಯೂಜಿಕ್ ಅಂಡ್ ಕಲರ್ ಎಕ್ಸಪೋಜಿಸ್ ಅಂಡ್ ಡೆವೆಲಪ್‌ಮೆಂಟ್ ಆಫ್ ರಾಗಮಾಲಾ ಆಂಡ್ ಕಾಂಟೆಂಪರರಿ ಪೇಂಟಿಂಗ್, ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ., ೨೦೦೨.

ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ (೧೭೮೦ -೧೮೨೦)[೧೪], ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ ಅವರ **ಕಲಾವಿದ ಆರ್.ಎಮ್.ಹಡಪದ : ಒಂದು ಅಧ್ಯಯನ**[೧೫], ಡಾ. ಎಸ್.ಸಿ.ಪಾಟೀಲರು ಕರ್ನಾಟಕ ವಿ.ವಿ.ಗೆ ಮಂಡಿಸಿದ **ಎ ಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ ಎಜ್ಯುಕೇಶನ್ ಎಟ್ ಸ್ಕೂಲ್ ಲೇವಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೇಷಲ್ ರೆಫರನ್ಸ್ ಟು ಡ್ರಾಯಿಂಗ್ ಆಂಡ್ ಪೇಂಟಿಂಗ್**[೧೬], ೨೦೦೪ರಲ್ಲಿ ಡಾ. ವಿ.ಎಮ್.ಬಾಗಾಯತ್ ಅವರ **ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ : ಒಂದು ಅಧ್ಯಯನ** (೧೪೦೦-೧೮೦೦)[೧೭], ಡಾ. ಶಿವಕುಮಾರ. ಜಿ. ಓ. ಅವರ **ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು**[೧೮], ಡಾ. ಪಿ. ಗೌರೀಶ ಅವರ **ಮೈಸೂರು ಜಿಲ್ಲೆಯ ಜನಪದ ಚಿತ್ರಕಲೆ**[೧೯], ೨೦೦೫ರಲ್ಲಿ ಡಾ. ಶಶಿಕಲಾ ಹೂಗಾರ ಅವರ **ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ**[೨೦], ಡಾ. ಶಿವಪ್ರಕಾಶ ತುಕ್ಕಣ್ಣವರ ಅವರ **ಕರ್ನಾಟಕ ರಥ ಶಿಲ್ಪಕಲೆ**[೨೧], ಡಾ. ಎಚ್.ಎನ್.ಚಿತ್ರಗಾರ ಅವರ **ಕರ್ನಾಟಕ ಹಸ್ತಪ್ರತಿ ಚಿತ್ರಕಲೆ**[೨೨], ಡಾ. ಎಸ್.ವಿ.ವೆಂಕಟೇಶಯ್ಯ ಅವರ **ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು : ಒಂದು ಅಧ್ಯಯನ**[೨೩], ೨೦೦೬ರಲ್ಲಿ ಡಾ. ವಿಶ್ವೇಶ್ವರಿ ತಿವಾರಿ ಅವರ **ರಂಗೋಲಿ ಕಲೆ**[೨೪], ೨೦೦೭ರಲ್ಲಿ ಡಾ. ಮಲ್ಲಿಕಾರ್ಜುನ ಬಾಗೋಡಿ ಅವರ **ಸುರಪುರ ಶೈಲಿಯ ಚಿತ್ರಕಲೆ ಒಂದು ಅಧ್ಯಯನ**[೨೫], ಡಾ. ಗೀತಾಂಜಲಿ ಬಿ.ಆರ್. ಅವರ **ಐತಿಹಾಸಿಕ ದೀಪಸ್ತಂಭಗಳು**[೨೬], ಡಾ. ರಾಠೋಡ್ ಅವರ **ಅನ್ವಯಿಕ ಕಲೆ – ಹಿಂದಿನಿಂದ ಇಂದಿನವರೆಗೆ**[೨೭], ೨೦೦೮ರಲ್ಲಿ ಡಾ.

---

೧೪. ಡಾ. ವೀಣಾ ಶೇಖರ ಮಂಡಿಸಿದ ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ (೧೭೮೦-೧೮೨೦), ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ., ೨೦೦೩.

೧೫. ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ : ಕಲಾವಿದ ಆರ್.ಎಮ್.ಹಡಪದ : ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೩.

೧೬. ಡಾ. ಎಸ್.ಸಿ.ಪಾಟೀಲ : ಎ ಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ ಎಜ್ಯುಕೇಶನ್ ಎಟ್ ಸ್ಕೂಲ್ ಲೆವಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೇಷಲ್ ರೆಫರನ್ಸ್ ಟು ಡ್ರಾಯಿಂಗ್ ಆಂಡ್ ಪೇಂಟಿಂಗ್, ಪಿಹೆಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ., ೨೦೦೨.

೧೭. ಡಾ. ವಿ.ಎಮ್.ಬಾಗಾಯತ್ :ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ : ಒಂದು ಅಧ್ಯಯನ (೧೪೦೦-೧೮೦೦), ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೪.

೧೮. ಡಾ. ಶಿವಕುಮಾರ ಜಿ.ಓ. : ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು, ಪಿಹೆಚ್.ಡಿ. ಮಹಾಪ್ರಬಂಧ, ಗುಲ್ಬರ್ಗಾ ವಿ.ವಿ., ೨೦೦೪

೧೯. ಡಾ. ಪಿ. ಗೌರೀಶ : ಮೈಸೂರು ಜಿಲ್ಲೆಯ ಜನಪದ ಚಿತ್ರಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಮೈಸೂರು ವಿ.ವಿ., ೨೦೦೪.

೨೦. ಡಾ. ಶಶಿಕಲಾ ಹೂಗಾರ : ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೪.

೨೧. ಡಾ. ಶಿವಪ್ರಕಾಶ ತುಕ್ಕಣ್ಣವರ :ಕರ್ನಾಟಕ ರಥ ಶಿಲ್ಪಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೪.

೨೨. ಡಾ. ಎಚ್.ಎನ್.ಚಿತ್ರಗಾರ :ಕರ್ನಾಟಕ ಹಸ್ತಪ್ರತಿ ಚಿತ್ರಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೫.

೨೩. ಡಾ. ಎಸ್.ವಿ.ವೆಂಕಟೇಶಯ್ಯ :ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು : ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೫.

೨೪. ಡಾ. ವಿಶ್ವೇಶ್ವರಿ ತಿವಾರಿ : ರಂಗೋಲಿ ಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಗುಲ್ಬರ್ಗಾ ವಿ.ವಿ., ೨೦೦೬.

೨೫. ಡಾ. ಮಲ್ಲಿಕಾರ್ಜುನ ಬಾಗೋಡಿ : ಸುರಪುರ ಶೈಲಿಯ ಚಿತ್ರಕಲೆ : ಒಂದು ಅಧ್ಯಯನ,ಪಿಹೆಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿ.ವಿ., ೨೦೦೭.

೨೬. ಡಾ. ಗೀತಾಂಜಲಿ ಬಿ.ಆರ್. : ಐತಿಹಾಸಿಕ ದೀಪಸ್ತಂಭಗಳು, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೭.

೨೭. ಡಾ. ರಾಠೋಡ್ : ಅನ್ವಯಿಕ ಕಲೆ – ಹಿಂದಿನಿಂದ ಇಂದಿನವರೆಗೆ, ಪಿಹೆಚ್.ಡಿ. ಮಹಾಪ್ರಬಂಧ, ಮೈಸೂರು ವಿ.ವಿ., ೨೦೦೭.

ಮೋಹನ್‌ರಾವ್ ಬಿ. ಪಂಚಾಳ ಅವರ **ಚಿತ್ರ ಕಲಾವಿದ ಡಾ. ಎಸ್.ಎಮ್.ಪಂಡಿತ್**[೨೮], ಡಾ. ವಿಶ್ವನಾಥ ಎ.ಎಸ್. ಅವರ **ಕರಾವಳಿ ಕರ್ನಾಟಕದ ಯಕ್ಷಗಾನ ಮುಖವರ್ಣಿಕೆ ಹಾಗೂ ವೇಷಭೂಷಣಗಳು**[೨೯], ಡಾ. ರವೀಂದ್ರ ಎಸ್. ಕಮ್ಮಾರ ಅವರ **ಕಲಾವಿದ ವ್ಹಿ.ಬಿ. ಹಿರೇಗೌಡರ್– ಬದುಕು ಮತ್ತು ಕಲಾಕೃತಿಗಳು**[೩೦], ಡಾ. ಪ್ರೇಮಾನಂದ ಟಿ. ಲಕ್ಕಣ್ಣನವರ ಅವರ **ಕರ್ನಾಟಕದ ದೃಶ್ಯಕಲಾ ಸಾಹಿತ್ಯ– ಒಂದು ವೈಚಾರಿಕ ಅಧ್ಯಯನ**[೩೧], ಡಾ. ಜಿ. ಲಕ್ಷ್ಮೀಪತಿ ಅವರ **ದಕ್ಷಿಣ ಕರ್ನಾಟಕದ ಜನಪದ ಶಿಲ್ಪಕಲೆ**[೩೨], ಡಾ. ಮಂಟಗಿ ಅವರ **ಧನಂಜಯ ಶಿಲ್ಪಿಯವರ ಜೀವನ ಮತ್ತು ಕಲೆ – ಒಂದು ಅಧ್ಯಯನ**[೩೩], ಡಾ. ರೆಹಮಾನ್ ಪಟೇಲ್ ಅವರ **ಕರ್ನಾಟಕದ ಬಿದರಿ ಕಲೆ– ಒಂದು ಅಧ್ಯಯನ– ವಿಶೇಷವಾಗಿ ಬೀದರ್ ಜಿಲ್ಲೆಯನ್ನು ಅನುಲಕ್ಷಿಸಿ**[೩೪], ೨೦೧೦ರಲ್ಲಿ ಡಾ. ಸುನಿತಾ ಪಾಟೀಲ್ ಅವರ **ವಿಜಯ ಸಿಂಧೂರ ಅವರ ಕಲಾಕೃತಿಗಳ ಒಳನೋಟಗಳು**[೩೫], ಡಾ. ನಿಂಗಪ್ಪ ಎಂ. ಅಂಗಡಿಯವರ **ಗಾಜಿನ ಮೇಲಿನ ಚಿತ್ರಗಳು : ಒಂದು ಅಧ್ಯಯನ**[೩೬], ಡಾ. ಕಿಶೋರ್ ಎನ್. ದಾಟನಾಳ್ ಅವರ **ಕಲಾವಿದ ಶಂಕರ ಪಾಟೀಲರ ಜೀವನ ಮತ್ತು ಕಲಾಕೃತಿಗಳು : ಒಂದು ಅಧ್ಯಯನ**[೩೭], ಕಾಮಾಕ್ಷಿ ಸಿ. ಸೊಪ್ಪಣ ಅವರ **ಕರ್ನಾಟಕದ ಬಟ್ಟೆ ಮಾಧ್ಯಮದ ಚಿತ್ರಕಲೆ**[೩೮], ೨೦೧೧ರಲ್ಲಿ ಡಾ. ಶಂಕ್ರಪ್ಪ ಎಂ. ಕುಂದಗೋಳ ಅವರ **ಕರ್ನಾಟಕದ ಗಂಜೀಫಾ ಚಿತ್ರಕಲೆ**[೩೯] ಇವು ದೃಶ್ಯಕಲೆಗಳ ಕುರಿತು ಬಂದ ಪಿಹೆಚ್.ಡಿ. ಮಹಾಪ್ರಬಂಧಗಳಾಗಿವೆ. ಅನೇಕ ಜನ ವಿದ್ಯಾರ್ಥಿಗಳು ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಈಗ ಸಂಶೋಧನೆ ಮಾಡುತ್ತಿದ್ದಾರೆ.

ಡಿ.ಲಿಟ್ ಮಹಾಪ್ರಬಂಧಗಳು

೨೦೦೧ರಲ್ಲಿ ಡಾ. ದೇವದಾಸ್ ಕಳಸದ ಅವರ **ಕನ್ನಡ ವೃತ್ತಿ ರಂಗಭೂಮಿ ಹಾಗೂ ರಂಗವಿನ್ಯಾಸ**[೪೦], ೨೦೦೫ ರಲ್ಲಿ ಡಾ. ಆನಂದ ಪೂಜಾರ ಅವರ **ಕರಾವಳಿ ಕರ್ನಾಟಕದ ಕಾವಿ**

---

೨೮. ಡಾ. ಮೋಹನರಾವ್ ಬಿ. ಪಂಚಾಳ : ಕಲಾವಿದ ಎಸ್.ಎಮ್.ಪಂಡಿತ – ಬದುಕು ಮತ್ತು ಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿ.ವಿ., ೨೦೦೮.

೨೯. ಡಾ. ವಿಶ್ವನಾಥ ಎ.ಎಸ್. : ಕರಾವಳಿ ಕರ್ನಾಟಕದ ಯಕ್ಷಗಾನ ಮುಖವರ್ಣಿಕೆ ಹಾಗೂ ವೇಷಭೂಷಣಗಳು, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೮.

೩೦. ಡಾ. ರವೀಂದ್ರ ಎಸ್. ಕಮ್ಮಾರ : ಕಲಾವಿದ ವ್ಹಿ.ಬಿ. ಹಿರೇಗೌಡರ್– ಬದುಕು ಮತ್ತು ಕಲಾಕೃತಿಗಳು, ೨೦೦೮

೩೧. ಡಾ. ಪ್ರೇಮಾನಂದ ಟಿ. ಲಕ್ಕಣ್ಣನವರ್ : ಕರ್ನಾಟಕದ ದೃಶ್ಯಕಲಾ ಸಾಹಿತ್ಯ– ಒಂದು ವೈಚಾರಿಕ ಅಧ್ಯಯನ.೨೦೦೮

೩೨. ಡಾ. ಜಿ. ಲಕ್ಷ್ಮೀಪತಿ : ದಕ್ಷಿಣ ಕರ್ನಾಟಕದ ಜನಪದ ಶಿಲ್ಪಕಲೆ ,ಪಿಹೆಚ್.ಡಿ ಮಹಾಪ್ರಬಂಧ ಕನ್ನಡ ವಿವಿ. ೨೦೦೮

೩೩. ಡಾ. ಸೂರ್ಯಕಾಂತ ಕ. ಮಂಟಗಿ : ಕಲಾವಿದ ಧನಂಜಯ ಶಿಲ್ಪಿಯವರ ಜೀವನ ಮತ್ತು ಕಲೆ – ಒಂದು ಅಧ್ಯಯನ, ಗುಲಬರ್ಗಾ ವಿ.ವಿ. ಗುಲಬರ್ಗಾ, ೨೦೦೯

೩೪. ಡಾ. ರೆಹಮಾನ್ ಪಟೇಲ್ : ಕರ್ನಾಟಕದ ಬಿದರಿ ಕಲೆ– ಒಂದು ಅಧ್ಯಯನ– ವಿಶೇಷವಾಗಿ ಬೀದರ್ ಜಿಲ್ಲೆಯನ್ನು ಅನುಲಕ್ಷಿಸಿ, ಗುಲಬರ್ಗಾ ವಿ.ವಿ. ಗುಲಬರ್ಗಾ, ೨೦೦೯

೩೫. ಡಾ. ಸುನಿತಾ ಪಾಟೀಲ್: ವಿಜಯ ಸಿಂಧೂರ ಅವರ ಕಲಾಕೃತಿಗಳ ಒಳನೋಟಗಳು, ಕನ್ನಡ ವಿ.ವಿ. ಹಂಪಿ. ೨೦೧೦

೩೬. ಡಾ. ನಿಂಗಪ್ಪ ಎಂ. ಅಂಗಡಿ : ಗಾಜಿನ ಮೇಲಿನ ಚಿತ್ರಗಳು : ಒಂದು ಅಧ್ಯಯನ, ಕನ್ನಡ ವಿ.ವಿ. ಹಂಪಿ, ೨೦೧೦

೩೭. ಡಾ. ಕಿಶೋರ್ ಎನ್. ದಾಟನಾಳ್ : ಕಲಾವಿದ ಶಂಕರ ಪಾಟೀಲರ ಜೀವನ ಮತ್ತು ಕಲಾಕೃತಿಗಳು : ಒಂದು ಅಧ್ಯಯನ, ಕನ್ನಡ ವಿ.ವಿ. ಹಂಪಿ, ೨೦೧೦

೩೮. ಡಾ. ಕಾಮಾಕ್ಷಿ ಸಿ. ಸೊಪ್ಪಣ : ಕರ್ನಾಟಕದ ಬಟ್ಟೆ ಮಾಧ್ಯಮದ ಚಿತ್ರಕಲೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೧೦

೩೯. ಡಾ. ಶಂಕ್ರಪ್ಪ ಎಂ. ಕುಂದಗೋಳ : ಕರ್ನಾಟಕದ ಗಂಜೀಫಾ ಚಿತ್ರಕಲೆ, ಕನ್ನಡ ವಿ.ವಿ. ಹಂಪಿ, ೨೦೧೧

೪೦. ಡಾ. ದೇವದಾಸ್ ಕಳಸದ : ಕನ್ನಡ ವೃತ್ತಿ ರಂಗಭೂಮಿ ಹಾಗೂ ರಂಗವಿನ್ಯಾಸ, ಕನ್ನಡ ವಿ.ವಿ. ಹಂಪಿ ೨೦೦೧

ಚಿತ್ರಕಲೆ[೪೧], ೨೦೦೫ ರಲ್ಲಿ ಡಾ. ಡಿ. ಎ. ಉಪಾಧ್ಯ ಅವರ **ದೃಶ್ಯಕಲೆಗಳ ತೌಲನಿಕ ಅಧ್ಯಯನ**[೪೨], ೨೦೦೯ರಲ್ಲಿ ಡಾ. ಎಂ. ಎಸ್. ಮೂರ್ತಿ ಅವರ **ಮಕ್ಕಳ ಮನಸ್ಸಿನ ಚಿತ್ರಗಳು**[೪೩] ಮುಂತಾದ ಡಿ.ಲಿಟ್ ಮಹಾಪ್ರಬಂಧಗಳಾಗಿವೆ.

ಎಂ.ಫಿಲ್. ಪ್ರಬಂಧಗಳು

೨೦೦೨ ರಲ್ಲಿ ಮಲ್ಲಿಕಾರ್ಜುನ ಬಾಗೋಡಿಯವರು ಎಂ.ಫಿಲ್. ಪದವಿಗಾಗಿ ಮಂಡಿಸಿದ **ಚಿತ್ರಕಲಾವಿದ ಜೆ.ಎಸ್.ಖಂಡೇರಾವ – ಒಂದು ಅಧ್ಯಯನ**[೪೪], ಮತ್ತು ೨೦೦೩ ರಲ್ಲಿ ಎ.ಎಸ್.ವಿಶ್ವನಾಥ ಅವರ **ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣಗಳು**[೪೫], ೨೦೦೫ರಲ್ಲಿ ಶಂಕರಪ್ಪ ಎಂ. ಕುಂದಗೋಳ ಅವರ **ಕಲಾವಿದ ಡಿ.ವಿ.ಹಾಲಭಾವಿಯವರ ಬದುಕು ಮತ್ತು ಕಲಾಕೃತಿಗಳು**[೪೬], ಸಿ. ಡಿ. ಜಟ್ಟೆಣ್ಣವರ ಅವರ **ಕಲಾವಿದ ಡಾ. ಎಂ.ವಿ.ಮಿಣಜಗಿಯವರ ಜೀವನ ಮತ್ತು ಕಲಾಕೃತಿಗಳು**[೪೭], ೨೦೦೬ರಲ್ಲಿ ಸುಚಿತ್ರಾ ಜಿ. ಲಿಂಗದಳ್ಳಿ ಅವರ **ವಿಜಯನಗರದ ಭಿತ್ತಿಚಿತ್ರಕಲೆ : ಒಂದು ಅಧ್ಯಯನ**[೪೮], ರವಿ ವಸರಾಮ ನಾಯಕ ಇವರ **ಕಿನ್ನಾಳ ಕಲೆ : ಒಂದು ಅಧ್ಯಯನ**[೪೯], ೨೦೦೭ ರಲ್ಲಿ ಬಿ.ಎಮ್.ಪಾಟೀಲ ಅವರ **ನಿಪ್ಪಾಣಿವಾಡೆಯ ಭಿತ್ತಿಚಿತ್ರಗಳು**[೫೦], ಶೈಲಾ ಬರಡೋಲ ಅವರ **ಸಂತ ಕಲಾವಿದ ಶುಭರಾಯರ ಜೀವನ ಮತ್ತು ಕಲಾಕೃತಿಗಳು**[೫೧], ಉಮೇಶ ಎಸ್. ಅವರ **ಕರ್ನಾಟಕದ ಜೈನ ಚಿತ್ರಕಲೆ**[೫೨], ಶಶಿಕಾಂತ ಬಸರಿಕಟ್ಟಿ ಅವರ **ಕಲಘಟಗಿ ಕಲೆ**[೫೩], ೨೦೦೮ರಲ್ಲಿ ಕೃಷ್ಣವೇಣಿಯವರ **ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ**[೫೪], ಯೋಗೀಶ್. ಹೆಚ್. ಅವರ **ಚಿತ್ರದುರ್ಗ ಜಿಲ್ಲೆಯ ಚಿತ್ರಗಳು**[೫೫], ಮಹಾಕೋಟೇಶ್ವರಗೌಡ ಪಾಟೀಲ್ ಅವರ

---

೪೧. ಡಾ. ಆನಂದ ಪೂಜಾರ : ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ, ಡಿ.ಲಿಟ್ ಮಹಾಪ್ರಬಂಧ,ಕನ್ನಡ ವಿ.ವಿ. ೨೦೦೫.

೪೨. ಡಾ. ಡಿ.ಎ. ಉಪಾಧ್ಯ : ದೃಶ್ಯಕಲೆಗಳ ತೌಲನಿಕ ಅಧ್ಯಯನ, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೫.

೪೩. ಡಾ. ಎಂ. ಎಸ್. ಮೂರ್ತಿ : ಮಕ್ಕಳ ಮನಸ್ಸಿನ ಚಿತ್ರಗಳು, ಡಿ.ಲಿಟ್. ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೯

೪೪. ಮಲ್ಲಿಕಾರ್ಜುನ ಬಾಗೋಡಿ : ಚಿತ್ರಕಲಾವಿದ ಜೆ.ಎಸ್.ಖಂಡೇರಾವ – ಒಂದು ಅಧ್ಯಯನ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೨

೪೫. ವಿಶ್ವನಾಥ ಎ.ಎಸ್. : ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣಗಳು ಎಂಪಿಲ್ ಕಿರು ಪ್ರಬಂಧ, ಕನ್ನಡ ವಿ.ವಿ., ೨೦೦೩.

೪೬. ಶಂಕರಪ್ಪ ಎಂ. ಕುಂದಗೋಳ : ಕಲಾವಿದ ಡಿ.ವಿ.ಹಾಲಭಾವಿಯವರ ಬದುಕು ಮತ್ತು ಕಲಾಕೃತಿಗಳು, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ.ಹಂಪಿ ೨೦೦೫.

೪೭. ಸಿ.ಡಿ.ಜಟ್ಟೆಣ್ಣವರ : ಕಲಾವಿದ ಡಾ. ಎಂ.ವಿ.ಮಿಣಜಗಿಯವರ ಜೀವನ ಮತ್ತು ಕಲಾಕೃತಿಗಳು, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೫

೪೮. ಸುಚಿತ್ರಾ ಜಿ. ಲಿಂಗದಳ್ಳಿ : ವಿಜಯನಗರದ ಭಿತ್ತಿಚಿತ್ರಕಲೆ ಒಂದು ಅಧ್ಯಯನ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೬.

೪೯. ರವಿ ವಸರಾಮ ನಾಯಕ : ಕಿನ್ನಾಳ ಕಲೆ : ಒಂದು ಅಧ್ಯಯನ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೬

೫೦. ಬಿ.ಎಮ್.ಪಾಟೀಲ : ನಿಪ್ಪಾಣಿ ವಾಡೆಯ ಭಿತ್ತಿಚಿತ್ರಗಳು, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೭.

೫೧. ಶೈಲಾ ಬರಡೋಲ : ಸಂತ ಕಲಾವಿದ ಶುಭರಾಯರ ಜೀವನ ಮತ್ತು ಕಲಾಕೃತಿಗಳು, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ ೨೦೦೭.

೫೨. ಉಮೇಶ ಎಸ್. : ಕರ್ನಾಟಕ ಜೈನ ಚಿತ್ರಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೭.

೫೩. ಶಶಿಕಾಂತ ಬಸರಿಕಟ್ಟಿ : ಕಲಘಟಗಿ ಕಲೆ, ಎಂಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೭

೫೪. ಕೃಷ್ಣವೇಣಿ : ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೮

೫೫. ಯೋಗೀಶ್ ಹೆಚ್ : ಚಿತ್ರದುರ್ಗ ಜಿಲ್ಲೆಯ ಚಿತ್ರಗಳು, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೮

ಬೆಳಗಾವಿ ಜಿಲ್ಲೆಯ ಚಿತ್ರಕಲೆ[೫೬], ಸುರೇಶ .ಎಸ್. ಬಡಿಗೇರ್ ಅವರ ಕನ್ನಡ ವಿಶ್ವವಿದ್ಯಾಲಯದ **ಹಸ್ತಪ್ರತಿಗಳ ಚಿತ್ರಕಲೆ**[೫೭], ಸಂತೋಷ್‌ಕುಮಾರ್ ಕುಲಕರ್ಣಿ ಅವರ **ದಾವಣಗೆರೆ ಜಿಲ್ಲೆಯ ಚಿತ್ರಕಲೆ**[೫೮], ಜಯರಾಜ ಚಿಕ್ಕ ಪಾಟೀಲ್ ಅವರ **ಕರ್ನಾಟಕದ ಜಾಹಿರಾತುಗಳಲ್ಲಿ ಸಾಂಸ್ಕೃತಿಕ ನೆಲೆಗಳು**[೫೯], ಮಹೇಶ ಉಮತಾರ್ ಅವರ **ಬಿ. ಪಿ. ಬಾಯಿರಿ: ಕಲೆ ಮತ್ತು ಕಲಾಸಾಹಿತ್ಯ**[೬೦], ಗಿರಿಜಾ ಬಿರಾದಾರ್ ಅವರ **ಬಿಜಾಪುರ್ ಜಿಲ್ಲೆಯ ಚಿತ್ರಕಲೆ**[೬೧], ಬಸಯ್ಯ ಗವಿಮಠ ಅವರ **ಬಾಗಲಕೋಟೆ ಜಿಲ್ಲೆಯ ಚಿತ್ರಕಲೆ**[೬೨], ಕೃಷ್ಣೇಗೌಡ ಹೆಚ್.ಎನ್. ಅವರ **ಕರ್ನಾಟಕದಲ್ಲಿ ಟಿಬೇಟಿಯನ್ನರ ಚಿತ್ರಕಲೆ**[೬೩], ಮಹಾಂತೇಶ್ ಎಂ. ಪಲದಿನ್ನಿ ಅವರ **ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು**[೬೪], ೨೦೦೯ರಲ್ಲಿ ಕಾಂತರಾಜು ಅವರ **ತುಮಕೂರು ಜಿಲ್ಲೆಯ ಚಿತ್ರಕಲೆ,**[೬೫] ರಂಗಸ್ವಾಮಿ ಅವರ **ಕಲಾವಿದ ರುಮಾಲೆ ಚೆನ್ನಬಸವಯ್ಯನವರ ಜೀವನ ಮತ್ತು ಕಲಾಕೃತಿಗಳು,**[೬೬] ಶ್ಯಾಮ್ ಜಮಾದಾರ ಅವರ **ಕಲಾವಿದ ಸಿ. ಎನ್. ಪಾಟೀಲರ ಜೀವನ ಮತ್ತು ಕಲಾಕೃತಿಗಳು,**[೬೭] ೨೦೧೦ರಲ್ಲಿ ದಿನೇಶ ಬಿ. ಅವರ **ಚನ್ನಪಟ್ಟಣದ ಚಿತ್ತಾರ ಗೊಂಬೆ ಚಿತ್ರಕಲೆ,**[೬೮] ಭಾನುಮತಿ ಕೆ. ಎಲ್. ಅವರ **ಕಲಾವಿದ ವಾಚೇದ್ ಮಠ ಅವರ ಜೀವನ ಮತ್ತು ಕಲಾಕೃತಿಗಳು,**[೬೯] ವಾದಿರಾಜ್ ಡಿ. ಅವರ **ಕಲಾವಿದ ಎಲ್. ಶಿವಲಿಂಗಪ್ಪನವರ ಜೀವನ ಮತ್ತು ಕಲಾಕೃತಿಗಳು,**[೭೦] ರೇವಣಪ್ಪ ಚಿಂತಾಮಣಿ ಅವರ **ಕರ್ನಾಟಕ ಚಿತ್ರಕಲೆಯಲ್ಲಿ ದಶಾವತಾರದ ಕಲ್ಪನೆ : ಒಂದು ಅಧ್ಯಯನ.**[೭೧]

---

೫೬. ಮಹಾಕೋಟೇಶ್ವರಗೌಡ ಪಾಟೀಲ್ : ಬೆಳಗಾವಿ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೮

೫೭. ಸುರೇಶ ಬಡಿಗೇರ್ : ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಗಳ ಚಿತ್ರಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೮

೫೮. ಸಂತೋಷ್‌ಕುಮಾರ್ ಕುಲಕರ್ಣಿ : ದಾವಣಗೆರೆ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೮.

೫೯. ಜಯರಾಜ ಚಿಕ್ಕ ಪಾಟೀಲ್ : ಕರ್ನಾಟಕದ ಜಾಹಿರಾತುಗಳಲ್ಲಿ ಸಾಂಸ್ಕೃತಿಕ ನೆಲೆಗಳು, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೮

೬೦. ಮಹೇಶ ಉಮತಾರ್ : ಬಿ. ಪಿ ಬಾಯಿರಿ ಕಲೆ ಮತ್ತು ಕಲಾಸಾಹಿತ್ಯ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೮

೬೧. ಗಿರಿಜಾ ಬಿರಾದಾರ್ : ಬಿಜಾಪುರ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೮

೬೨. ಬಸಯ್ಯ ಗವಿಮಠ : ಬಾಗಲಕೋಟೆ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೮

೬೩. ಕೃಷ್ಣೇಗೌಡ ಹೆಚ್.ಎನ್. : ಕರ್ನಾಟಕದಲ್ಲಿ ಟಿಬೇಟಿಯನ್ನರ ಚಿತ್ರಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೮

೬೪. ಮಹಾಂತೇಶ್ ಎಂ. ಫಲದಿನ್ನಿ : ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೮.

೬೫. ಕಾಂತರಾಜು : ತುಮಕೂರು ಜಿಲ್ಲೆಯ ಚಿತ್ರಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೯.

೬೬. ರಂಗಸ್ವಾಮಿ : ಕಲಾವಿದ ರುಮಾಲೆ ಚೆನ್ನಬಸವಯ್ಯನವರ ಜೀವನ ಮತ್ತು ಕಲಾಕೃತಿಗಳು, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೯.

೬೭. ಶ್ಯಾಮ್ ಜಮಾದಾರ : ಕಲಾವಿದ ಸಿ. ಎನ್. ಪಾಟೀಲರ ಜೀವನ ಮತ್ತು ಕಲಾಕೃತಿಗಳು, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೯.

೬೮. ದಿನೇಶ ಬಿ. : ಚನ್ನಪಟ್ಟಣದ ಚಿತ್ತಾರ ಗೊಂಬೆ ಚಿತ್ರಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೧೦.

೬೯. ಭಾನುಮತಿ ಕೆ. ಎಲ್. : ಕಲಾವಿದ ವಾಚೇದ್ ಮಠ ಅವರ ಜೀವನ ಮತ್ತು ಕಲಾಕೃತಿಗಳು, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೧೦.

೭೦. ವಾದಿರಾಜ್ ಡಿ. : ಕಲಾವಿದ ಎಲ್. ಶಿವಲಿಂಗಪ್ಪನವರ ಜೀವನ ಮತ್ತು ಕಲಾಕೃತಿಗಳು, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೧೦.

೭೧. ರೇವಣಪ್ಪ ಚಿಂತಾಮಣಿ : ಕರ್ನಾಟಕ ಚಿತ್ರಕಲೆಯಲ್ಲಿ ದಶಾವತಾರದ ಕಲ್ಪನೆ ಒಂದು ಅಧ್ಯಯನ ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೧೦.

೨೦೧೨ರಲ್ಲಿ ಮಲ್ಲಿಕಾರ್ಜುನ ಕೆ.ಜಿ. ಅವರ **ಕೆ.ಕೆ. ಹೆಬ್ಬಾರರ ಕಲೆ ಮತ್ತು ಬದುಕು,**[೨೨] ರಾಜೀವ್. ಎಂ.ವೈ ಅವರ **ಕೆ. ವೆಂಕಟಪ್ಪನವರ ಜೀವನ ಮತ್ತು ಕಲಾಕೃತಿಗಳು,**[೨೩] ರಾಘವೇಂದ್ರ ಅವರ **ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ,**[೨೪] ವೈಶಾಲಿ ಕೆ. ಕಾಂಬಳೆ ಅವರ **ಬೀದರ ಜಿಲ್ಲೆಯ ಚಿತ್ರಕಲೆ,**[೨೫] ಶಶಿಕಲಾ ಜಿ.ವಿ. ಅವರ **ಕರ್ನಾಟಕದ ವ್ಯಂಗ್ಯ ಚಿತ್ರಕಲೆ,**[೨೬] ಎನ್.ಜಿ. ಅಂಬರೀಶ್ ಅವರ **ಕರ್ನಾಟಕದ ಆಧುನಿಕ ಭಿತ್ತಿಚಿತ್ರ / ಶಿಲ್ಪಕಲೆ,**[೨೭] ಸುರೇಂದ್ರನಾಥ ಡಿ.ಆರ್. ಅವರ **ಕರಾವಳಿ ಕರ್ನಾಕಟದ ಕ್ರೈಸ್ತಚಿತ್ರಕಲೆ,**[೨೮] ಶ್ವೇತಾ ಡಿ.ಎಸ್. ಅವರ **ರಾಜ ರವಿವರ್ಮನ ಕಲಾಕೃತಿಗಳಲ್ಲಿನ ಸ್ತ್ರೀ ಚಿತ್ರಣ,**[೨೯] ಮಹಾದೇವಪ್ಪ ಸಣತಂಗಿಯವರ **ಕರ್ನಾಟಕದ ದೃಶ್ಯಕಲೆಯಲ್ಲಿ ಗಣೇಶ ಚಿತ್ರಣ**[೩೦]. ಈ ಪ್ರಬಂಧಗಳು ಕರ್ನಾಟಕ ದೃಶ್ಯಕಲೆಯ ಕುರಿತಾಗಿ ಬಂದ ಸಂಶೋಧನಾ ಅಧ್ಯಯನಗಳಾಗಿವೆ. ಹೀಗೆ ಗುಲ್ಬರ್ಗಾ ವಿ.ವಿ, ಬೆಂಗಳೂರು ವಿ.ವಿ, ಕರ್ನಾಟಕ ವಿ.ವಿ. ಮತ್ತು ಕನ್ನಡ ವಿ.ವಿ.ಗಳಲ್ಲಿ ಪಿಹೆಚ್.ಡಿ. ಪದವಿಗಾಗಿ ಅನೇಕ ಸಂಶೋಧನಾ ಪ್ರಬಂಧಗಳು ರಚನೆಯಾಗಿದ್ದು, ಈ ನಿಟ್ಟಿನಲ್ಲಿ ೧೦ಕ್ಕೂ ಹೆಚ್ಚು ಸಂಶೋಧಕರು ಈಗ ಅಧ್ಯಯನ ನಿರತರಾಗಿದ್ದಾರೆ. ಇದಲ್ಲದೇ ವಿಶ್ವವಿದ್ಯಾಲಯಗಳ ಬಿ.ಎಫ್.ಎ. ಪದವಿ ಹಾಗೂ ಸ್ನಾತಕೋತ್ತರ ಹಂತದಲ್ಲಿ ಸುಮಾರು ೧೫೦೦ಕ್ಕೂ ಹೆಚ್ಚಿನ ಲಘುಶೋಧ ಪ್ರಬಂಧಗಳು ರಚನೆಗೊಂಡಿವೆ. ಪದವಿ ತರಗತಿಗಳಿಗೆ ಅಧ್ಯಯನದ ಭಾಗವಾಗಿ ಕಿರು ಸಂಶೋಧನಾ ಪ್ರಬಂಧಗಳು ರಚನೆಯಾಗಿದ್ದು, ಈ ಸಂಶೋಧನಾ ಪ್ರಕಾರವು ದೃಶ್ಯಕಲಾ ಕ್ಷೇತ್ರದಲ್ಲಿ ಅನಿವಾರ್ಯ ಅಧ್ಯಯನವಾಗಿ ಬೆಳೆಯುತ್ತಿದೆ. ಹೀಗೆ ಈ ಕ್ಷೇತ್ರದಲ್ಲಿ ಸಂಶೋಧನೆಗಳು ತೀವ್ರವಾಗಿ ಮುನ್ನಡೆಯುತ್ತಲಿದ್ದು, ಭವಿಷ್ಯತ್ತಿನಲ್ಲಿ ಕಲಾಕ್ಷೇತ್ರವು ಸಂಶೋಧನಾತ್ಮಕವಾಗಿಯೂ ಬಲಗೊಳ್ಳುವ ಆಶಯವನ್ನು ನಿರೀಕ್ಷಿಸಲಾಗಿದೆ.

ಪ್ರಸ್ತುತ ಬಳ್ಳಾರಿ ಜಿಲ್ಲೆಯ ಚಿತ್ರಕಲೆಯ ಕುರಿತು ನಡೆದ ಅಧ್ಯಯನದ ಸಮೀಕ್ಷೆ

೧೯೬೮ರಲ್ಲಿ ಡಾ. ಹೆಚ್. ತಿಪ್ಪೇರುದ್ರಸ್ವಾಮಿ ಅವರು ಬರೆದ **"ಕರ್ನಾಟಕ ಸಾಂಸ್ಕೃತಿಕ ಸಮೀಕ್ಷೆ"**[೩೧] ಎಂಬ ಕೃತಿಯಲ್ಲಿ ಬಳ್ಳಾರಿ ಜಿಲ್ಲೆಯ ವಿಜಯನಗರ ಚಿತ್ರಕಲೆಯ ಕುರಿತು ವಿಶೇಷವಾಗಿ ಚರ್ಚಿಸಿದ್ದಾರೆ. ೧೯೭೩ರಲ್ಲಿ ಬಿ.ವಿ.ಕೆ. ಶಾಸ್ತ್ರಿಯವರು **"ಕರ್ನಾಟಕ ಭಿತ್ತಿಚಿತ್ರಗಳು"**[೩೨] ಎಂಬ ಕೃತಿ ಪ್ರಕಟಿಸಿದ್ದು, ಅವರಲ್ಲಿ ಬಾದಾಮಿ, ಹಂಪಿ, ಮೈಸೂರು, ಹರದನಹಳ್ಳಿ, ಶ್ರವಣಬೆಳಗೊಳ,

---

೨೨. ಮಲ್ಲಿಕಾರ್ಜುನ ಕೆ.ಜಿ. : ಕೆ.ಕೆ. ಹೆಬ್ಬಾರರ ಕಲೆ ಮತ್ತು ಬದುಕು, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೨೩. ರಾಜೀವ ಎಂ.ವೈ. : ಕೆ. ವೆಂಕಟಪ್ಪನವರ ಜೀವನ ಮತ್ತು ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೨೪. ರಾಘವೇಂದ್ರ : ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೨೫. ವೈಶಾಲಿ ಕೆ. ಕಾಂಬಳೆ : ಬೀದರ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೨೬. ಶಶಿಕಲಾ ಜಿ.ವಿ. : ಕರ್ನಾಟಕದ ವ್ಯಂಗ್ಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೨೭. ಎನ್. ಜಿ. ಅಂಬರೀಶ್ : ಕರ್ನಾಟಕದ ಆಧುನಿಕ ಭಿತ್ತಿಚಿತ್ರ/ಶಿಲ್ಪಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೨೮. ಸುರೇಂದ್ರನಾಥ ಡಿ. ಆರ್. : ಕರಾವಳಿ ಕರ್ನಾಟಕದ ಕ್ರೈಸ್ತಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೨೯. ಶ್ವೇತಾ ಡಿ. ಎಸ್. : ರಾಜ ರವಿವರ್ಮನ ಕಲಾಕೃತಿಗಳಲ್ಲಿನ ಸ್ತ್ರೀ ಚಿತ್ರಣ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೩೦. ಮಹಾದೇವಪ್ಪ ಸಣತಂಗಿ : ಕರ್ನಾಟಕದ ದೃಶ್ಯಕಲೆಯಲ್ಲಿ ಗಣೇಶ ಚಿತ್ರಣ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೩೧. ಡಾ. ಹೆಚ್. ತಿಪ್ಪೇರುದ್ರಸ್ವಾಮಿ : ಕರ್ನಾಟಕ ಸಾಂಸ್ಕೃತಿಕ ಸಮೀಕ್ಷೆ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು. ೧೯೬೮

೩೨. ಬಿ.ವಿ.ಕೆ. ಶಾಸ್ತ್ರಿ : ಕರ್ನಾಟಕ ಭಿತ್ತಿಚಿತ್ರಗಳು, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೭೩

ಮುಡುಕುತೊರೆ ಮುಂತಾದ ಸ್ಥಳಗಳ ಭಿತ್ತಿಚಿತ್ರಗಳ ಬಗ್ಗೆ ಸಂಕ್ಷಿಪ್ತ ವಿವರಣೆ ಇದೆ. ಪ್ರೊ. ಎಂ. ಎಚ್ ಕೃಷ್ಣಯ್ಯನವರು ತಮ್ಮ ಕೃತಿಯಾದ "ಶೃಂಗಾರ ಲಹರಿ"ಯಲ್ಲಿ ವಿಜಯನಗರ ಭಿತ್ತಿಚಿತ್ರಗಳ ಶೈಲಿ ಮತ್ತು ವಸ್ತುವಿಷಯ ಕುರಿತು ಮಾಹಿತಿ ನೀಡಿದ್ದಾರೆ.

೧೯೭೮ರಲ್ಲಿ ಡಾ. ಶಿವರಾಮ ಕಾರಂತರು ತಮ್ಮ **"ಕರ್ನಾಟಕದಲ್ಲಿ ಚಿತ್ರಕಲೆ"**[೮೩] ಎಂಬ ಕೃತಿಯಲ್ಲಿ ವಿಜಯನಗರ ಚಿತ್ರಕಲೆಯ ಕುರಿತು ವಿವೇಚಿಸಿದ್ದಾರೆ. ೧೯೮೫ರಲ್ಲಿ ಸಿ. ಶಿವರಾಮಮೂರ್ತಿ ಅವರು ರಚಿಸಿದ **"ವಿಜಯನಗರ ಪೇಂಟಿಂಗ್ಸ್"**[೮೪] ಎಂಬ ಶೀರ್ಷಿಕೆಯ ಕೃತಿಯಲ್ಲಿ ಹಂಪಿಯ ವಿರೂಪಾಕ್ಷ ದೇವಾಲಯದ ಒಳಮಾಳಿಗೆಯ ಭಿತ್ತಿಚಿತ್ರಗಳು ಮತ್ತು ಲೇಪಾಕ್ಷಿಯ ಭಿತ್ತಿಚಿತ್ರಗಳ ಕುರಿತಂತೆ ಮಾಹಿತಿ ಇದೆ. ೧೯೮೨ರಲ್ಲಿ ಆರ್. ಎನ್. ಸಾಲೆತೊರೆ ಅವರು ತಮ್ಮ **"ವಿಜಯನಗರ ಆರ್ಟ್"**[೮೫] ಎಂಬ ಕೃತಿಯಲ್ಲಿ ಈ ಪ್ರದೇಶದ ವಾಸ್ತು, ಶಿಲ್ಪ, ಚಿತ್ರ ಶೈಲಿಗಳ ಕುರಿತು ಚರ್ಚಿಸಿದ್ದಾರೆ.

೧೯೮೮ರಲ್ಲಿ ಡಾ. ಎಸ್. ರಾಜಶೇಖರ ಅವರು **"ಕರ್ನಾಟಕದ ವಾಸ್ತು ಶಿಲ್ಪ ಮತ್ತು ಚಿತ್ರಕಲೆ"**[೮೬] ಎಂಬ ಕೃತಿಯಲ್ಲಿ ಬಾದಾಮಿಯ ವೈಷ್ಣವ ಗುಹಾಲಯದ ಭಿತಿತಚಿತ್ರಗಳು ಮತ್ತು ಹಂಪಿಯ ವಿರೂಪಾಕ್ಷ ದೇವಾಲಯದ ಭಿತ್ತಿಚಿತ್ರಗಳ ಬಗ್ಗೆ ಮಾಹಿತಿ ನೀಡಿದ್ದಾರೆ. ಅಲ್ಲದೇ ವಿರೂಪಾಕ್ಷ ದೇವಾಲಯದ ಚಿತ್ರಗಳ ರಚನೆಯ ಕಾಲದ ವಿಚಾರವಾಗಿ ತಮ್ಮದೇ ಆದ ಚರ್ಚೆಯನ್ನು ಮಾಡಿದ್ದಾರೆ. ೧೯೯೨ರಲ್ಲಿ ಡಾ. ಬಿ.ಕೆ. ಹಿರೇಮಠರರು ಬರೆದಂತಹ **"ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ"**[೮೭] ಎಂಬ ಕೃತಿಯಲ್ಲಿ ಬಳ್ಳಾರಿ ಪ್ರದೇಶದ ಹಸ್ತಪ್ರತಿಗಳಲ್ಲಿನ ಚಿತ್ರಗಳನ್ನು ಕುರಿತು ಪ್ರಾಸಂಗಿಕವಾಗಿ ಚರ್ಚಿಸಿದ್ದಾರೆ.

೧೯೯೩ರಲ್ಲಿ ಪ್ರಕಟಗೊಂಡ **"ಕರ್ನಾಟಕದ ಜನಪದ ಚಿತ್ರಕಲೆ"**[೮೮] ಸಂಶೋಧನಾ ಗ್ರಂಥದಲ್ಲಿ ಡಾ. ಎಸ್. ಸಿ. ಪಾಟೀಲರವರು ಬಳ್ಳಾರಿಯ ಪ್ರಾಗೈತಿಹಾಸಿಕ ಚಿತ್ರಕಲೆ, ಹಂಪಿ ಭಿತ್ತಿಚಿತ್ರಕಲೆಯನ್ನು ಕುರಿತಂತೆ ಜನಪದದ ನೆಲೆಯಲ್ಲಿ ಚರ್ಚಿಸಿದ್ದಾರೆ. ಇದೇ ಅವಧಿಯಲ್ಲಿ ನಿರಂಜನ ಅವರ ಪ್ರಧಾನ ಸಂಪಾದನೆಯಲ್ಲಿ ಹೊರಬಂದ **"ಜ್ಞಾನಗಂಗೋತ್ರಿ (ಕಿರಿಯರ ವಿಶ್ವಕೋಶ, ಸಂಪುಟ – ೫), ಕಲೆ, ಸಾಹಿತ್ಯ"**[೮೯] ಎಂಬ ಗ್ರಂಥದಲ್ಲಿ ಬಳ್ಳಾರಿ ಜಿಲ್ಲೆಯ ಭಿತ್ತಿಚಿತ್ರ ಚಿತ್ರಕಲೆ ಮುಂತಾದ ಕಲೆ, ಕಲಾವಿದರ ಕುರಿತು ವಿವರಗಳಿವೆ. ೧೯೯೪ರಲ್ಲಿ ಅ. ಸುಂದರ ಅವರು **"ಕರ್ನಾಟಕದ ಪ್ರಾಗಿತಿಹಾಸ ಕಾಲದ ಕಲೆ"**[೯೦] ಎಂಬ ಕೃತಿಯಲ್ಲಿ ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆಯ ಕೆಲವು

---

೮೩. ಡಾ. ಶಿವರಾಮ ಕಾರಂತ : ಕರ್ನಾಟಕದಲ್ಲಿ ಚಿತ್ರಕಲೆ, ಪ್ರಸಾರಾಂಗ, ಮೈಸೂರು ವಿ.ವಿ. ಮೈಸೂರು. ೧೯೭೮

೮೪. ಸಿ. ಶಿವರಾಮಮೂರ್ತಿ : ವಿಜಯನಗರ ಪೇಂಟಿಂಗ್ಸ್, ನ್ಯಾಶನಲ್ ಬುಕ್ ಟ್ರಸ್ಟ್ ಇಂಡಿಯಾ, ನವದೆಹಲಿ. ೧೯೮೫

೮೫. ಆರ್. ಎನ್. ಸಾಲೆತೊರೆ : ವಿಜಯನಗರ ಆರ್ಟ್, ಮುಂಬೈ ವಿಶ್ವವಿದ್ಯಾಲಯ, ಮುಂಬೈ. ೧೯೮೨

೮೬. ಡಾ. ಎಸ್. ರಾಜಶೇಖರ : ಕರ್ನಾಟಕ ವಾಸ್ತು ಶಿಲ್ಪ ಮತ್ತು ಚಿತ್ರಕಲೆ, ಸುಜಾತಾ ಪಬ್ಲಿಕೇಷನ್, ಧಾರವಾಡ ೧೯೮೮

೮೭. ಡಾ. ಬಿ. ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು : ಒಂದು ಅಧ್ಯಯನ, ವೀರಶೈವ ಅಧ್ಯಯನ ವೇದಿಕೆ, ಬಿಜಾಪುರ ೧೯೯೨

೮೮. ಡಾ. ಎಸ್. ಸಿ. ಪಾಟೀಲ : ಕರ್ನಾಟಕ ಜನಪದ ಚಿತ್ರಕಲೆ, ವೀರಶೈವ ಅಧ್ಯಯನ ಸಂಸ್ಥೆ, ಗದಗ. ೧೯೯೩

೮೯. ನಿರಂಜನ (ಪ್ರ.ಸಂ.) : ಜ್ಞಾನಗಂಗೋತ್ರಿ, ಕಿರಯರ ವಿಶ್ವಕೋಶ, ಸಂ–೫, ಕಲೆ ಸಾಹಿತ್ಯ, ಮೈ.ವಿ.ವಿ. ಮೈಸೂರು. ೧೯೯೩

೯೦. ಅ. ಸುಂದರ : ಕರ್ನಾಟಕದ ಪ್ರಾಗಿತಿಹಾಸ ಕಾಲದ ಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೪

ನೆಲೆಗಳನ್ನು ಶೋಧಿಸಿ ಚಿತ್ರಗಳ ಕುರಿತು ಚರ್ಚಿಸಿದ್ದಾರೆ. ಇದೇ ಅವಧಿಯಲ್ಲಿ ಡಾ. ಎಸ್. ಸಿ. ಪಾಟೀಲ ಅವರು **"ವಿ.ಟಿ. ಕಾಳೆ"**[೯೧] ಎನ್ನುವ ಶೀರ್ಷಿಕೆಯ ಪುಸಕ್ತ ಬರೆದಿದ್ದಾರೆ. ಇಲ್ಲಿ ವಿ.ಟಿ. ಕಾಳೆಯವರ ಜೀವನ ಮತ್ತು ಕಲಾಕೃತಿಗಳನ್ನು ಸ್ಥೂಲವಾಗಿ ಚರ್ಚಿಸಲಾಗಿದೆ. ಇದೇ ಅವಧಿಯಲ್ಲಿ ಪ್ರೊ. ಎಸ್. ಎಸ್. ಶೇಷಗಿರಿ ರಾವ್ ಅವರ ಪ್ರಧಾನ ಸಂಪಾದನೆಯಲ್ಲಿ ಹೊರಬಂದ **"ಕಿರಿಯರ ಕರ್ನಾಟಕ"**[೯೨] ಎಂಬ ಗ್ರಂಥದಲ್ಲಿ ಬಳ್ಳಾರಿ ಜಿಲ್ಲೆಯ ಹಂಪಿ, ಆನೆಗುಂದಿ ಮುಂತಾದ ವಿಜಯನಗರ ವಾಸ್ತು, ಶಿಲ್ಪ, ಚಿತ್ರಕಲೆಗಳ ಕುರಿತು ವಿವರಗಳಿವೆ.

೧೯೯೮ರಲ್ಲಿ ಡಾ. ಅ.ಲ. ನರಸಿಂಹನ್ ಅವರು **"ಕರ್ನಾಟಕ ಭಿತ್ತಿಚಿತ್ರ ಪರಂಪರೆ"**[೯೩]ಯಲ್ಲಿ ವಿಜಯನಗರ ಚಿತ್ರಕಲೆಯ ವಿಷಯ, ವಸ್ತು, ಶೈಲಿ ಕುರಿತು ಪ್ರಸ್ತಾಪಿಸಿದ್ದಾರಲ್ಲದೇ ಭಿತ್ತಿಸಿದ್ಧತಾ ವಿಧಿ-ವಿಧಾನ ಕುರಿತು ಉಲ್ಲೇಖಿಸಿದ್ದಾರೆ. ೨೦೦೦ರಲ್ಲಿ ಡಾ. ಕರೀಗೌಡ ಬೀಚನಹಳ್ಳಿ ಅವರ ಸಂಪಾದನೆಯಿಂದ ಹೊರಬಂದ **"ಕರಕುಶಲ ಕಲೆಗಳು"**[೯೪] ಎಂಬ ವಿಶ್ವಕೋಶದಲ್ಲಿ ಬಳ್ಳಾರಿ ಜಿಲ್ಲೆಯ ಕರಕುಶಲ ಕಲೆಗಳನ್ನು ಕುರಿತು ಅನೇಕ ವಿದ್ವಾಂಸರು ಲೇಖನಗಳನ್ನು ಬರೆದಿದ್ದು, ಅವು ಇಲ್ಲಿ ಸಂಗ್ರಹಗೊಂಡಿವೆ. ಇದೇ ಅವಧಿಯಲ್ಲಿ ಕೆ.ವಿ. ಕಾಳೆ ಅವರು ಬರೆದ **"ಕರ್ನಾಟಕ ಚಿತ್ರಕಲೆಯಲ್ಲಿ ಬಣ್ಣದ ಬಳಕೆ"**[೯೫] ಎಂಬ ಕೃತಿಯಲ್ಲಿ ತೊಗಲುಗೊಂಬೆ ಚಿತ್ರಕಲೆಯ ವರ್ಣ ಸಿದ್ಧತೆಯ ಕುರಿತು ಬಳ್ಳಾರಿ ಜಿಲ್ಲೆಯ ಕಲಾವಿದರ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. ೨೦೦೧ರಲ್ಲಿ ಡಾ. ಯಾದಪ್ಪ ಪರದೇಶಿಯವರು ತಮ್ಮ ಪಿಹೆಚ್.ಡಿ ಮಹಾಪ್ರಬಂಧವಾದ **"ಉತ್ತರ ಕರ್ನಾಟಕದ ಭಿತ್ತಿಚಿತ್ರಗಳು"**[೯೬] ಎಂಬ ಪ್ರಬಂಧದಲ್ಲಿ ಹಂಪಿಯ ವಿರೂಪಾಕ್ಷ ದೇವಾಲಯದ ರಂಗಮಂಟಪದ ಮತ್ತು ನಾಗಮಂಟಪದ ಭಿತ್ತಿಚಿತ್ರಗಳ ಕುರಿತು ಸ್ಥೂಲವಾಗಿ ಚರ್ಚಿಸಿದ್ದಾರೆ.

೨೦೦೨ರಲ್ಲಿ ಶಂಕ್ರಪ್ಪ ಕೋಲ್ಕಾರ್ ಅವರ **"ಕೊಪ್ಪಳ-ಹಂಪಿ ಜಾನಪದ ಪ್ರಾಗೈತಿಹಾಸಿಕ ಕಾಲದ ಕಲೆ"**[೯೭] ಕೃತಿಯಲ್ಲಿ ಈ ಪ್ರದೇಶದ ಪ್ರಾಗೈತಿಹಾಸಿಕ ರೇಖಾ ಮತ್ತು ವರ್ಣಚಿತ್ರಗಳ ಕುರಿತು ವಿಶೇಷವಾಗಿ ಅಧ್ಯಯನ ಮಾಡಿದ್ದಾರೆ. ೨೦೦೩ರಲ್ಲಿ ಡಾ. ಎಸ್.ಸಿ. ಪಾಟೀಲ ಮತ್ತು ಸತ್ಯಾನಂದ ಪಾತ್ರೋಟ ಇವರ ಸಂಪಾದನೆಯಲ್ಲಿ ಹೊರಬಂದ **"ನಿಜದ ನೆಲೆ"**[೯೮] ಎಂಬ ಗ್ರಂಥದಲ್ಲಿ ಈ ಪ್ರದೇಶದ ಚಿತ್ರಕಲೆಯ ಕುರಿತು ಹಲವಾರು ಲೇಖನಗಳು ಸಂಗ್ರಹಗೊಂಡಿವೆ. ಇದೇ ಅವಧಿಯಲ್ಲಿ ನಾಗವರ್ಮ ಜಿ. ಎಸ್. ಅವರ **"ಬಳ್ಳಾರಿ ಜಿಲ್ಲೆಯ ತೊಗಲುಗೊಂಬೆ ಆಟದ**

---

೯೧. ಡಾ. ಎಸ್. ಸಿ. ಪಾಟೀಲ : ವಿ.ಟಿ. ಕಾಳೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೪

೯೨. ಪ್ರೊ. ಎಲ್. ಎಸ್. ಶೇಷಗಿರಿರಾವ್ : ಕಿರಿಯರ ಕರ್ನಾಟಕ, ಮೈಸೂರು ವಿಶ್ವವಿದ್ಯಾಲಯ, ಮೈಸೂರು. ೧೯೯೪

೯೩. ಡಾ. ಅ. ಲ. ನರಸಿಂಹನ್ : ಕರ್ನಾಟಕ ಭಿತ್ತಿಚಿತ್ರ ಪರಂಪರೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೮

೯೪. ಡಾ. ಕರೀಗೌಡ ಬೀಚನಹಳ್ಳಿ : ಕರಕುಶಲ ಕಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೦

೯೫. ಕೆ.ವಿ. ಕಾಳೆ : ಕರ್ನಾಟಕ ಚಿತ್ರಕಲೆಯಲ್ಲಿ ಬಣ್ಣದ ಬಳಕೆ, ಪ್ರಸಾರಾಂಗ, ಕ.ವಿ.ವಿ. ಹಂಪಿ. ೨೦೦೦

೯೬. ಡಾ. ಯಾದಪ್ಪ ಬಿ. ಪರದೇಶಿ : ಉತ್ತರ ಕರ್ನಾಟಕ ಭಿತ್ತಿಚಿತ್ರಗಳು, ಅ.ಪ್ರ. ಪಿಹೆಚ್.ಡಿ. ಮ.ಪ್ರ. ಕ.ವಿ.ವಿ. ಹಂಪಿ. ೨೦೦೧

೯೭. ಶಂಕ್ರಪ್ಪ ಕೋಲ್ಕಾರ್ : ಕೊಪ್ಪಳ-ಹಂಪಿ ಜಾನಪದ ಪ್ರಾಗೈತಿಹಾಸಿಕ ಕಾಲದ ಕಲೆ, ಪ್ರಸಾರಾಂಗ, ಕ.ವಿ.ವಿ. ಹಂಪಿ. ೨೦೦೨

೯೮. ಡಾ. ಎಸ್. ಸಿ. ಪಾಟೀಲ, ಸತ್ಯಾನಂದ ಪಾತ್ರೋಟ : ನಿಜದ ನೆಲೆ, ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟ ೨೦೦೩

[illegible]

ಸಾಂಸ್ಕೃತಿಕ ಅಧ್ಯಯನ"[೯೯] ಎಂಬ ಕೃತಿಯಲ್ಲಿ ಬಳ್ಳಾರಿ ಜಿಲ್ಲೆಯ ತೊಗಲುಗೊಂಬೆ ಕಲೆಯ ಕುರಿತು ಅಧ್ಯಯನ ಮಾಡಲಾಗಿದೆ.

೨೦೦೫ರಲ್ಲಿ ಡಾ. ಶಶಿಕಲಾ ಹೂಗಾರ್ ಅವರು **"ಕರ್ನಾಟಕದ ತೊಗಲುಗೊಂಬೆ ಚಿತ್ರಕಲೆ"**[೧೦೦] ವಿಷಯದ ಕುರಿತು ಸಂಶೋಧನಾ ಅಧ್ಯಯನ ಕೈಗೊಂಡಿದ್ದು, ಈ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲೆಯ ತೊಗಲುಗೊಂಬೆ ಚಿತ್ರಕಲೆ ಮತ್ತು ಚಿತ್ರಕಲಾವಿದರನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಇದೇ ಅವಧಿಯಲ್ಲಿ ಡಾ. ಹೆಚ್. ಎನ್. ಚಿತ್ರಗಾರ ಅವರು **"ಕರ್ನಾಟಕ ಹಸ್ತಪ್ರತಿ ಚಿತ್ರಕಲೆ – ಒಂದು ಅಧ್ಯಯನ"**[೧೦೧] ಎಂಬ ಮಹಾಪ್ರಬಂಧದಲ್ಲಿ ಬಳ್ಳಾರಿ ಜಿಲ್ಲೆಯ ಹಸ್ತಪ್ರತಿ ಚಿತ್ರಕಲೆಯನ್ನು ಕುರಿತು ಸ್ಥೂಲವಾಗಿ ಅಧ್ಯಯನ ಮಾಡಿದ್ದಾರೆ. ಹಾಗೆಯೇ ಡಾ. ಕೆ. ರವೀಂದ್ರನಾಥ ಅವರ ಸಂಪಾದನೆಯ **"ಬಳ್ಳಾರಿ ಜಿಲ್ಲಾ ದರ್ಶನ"**[೧೦೨] ಎಂಬ ಕೃತಿಯಲ್ಲಿ ಈ ಪ್ರದೇಶದ ಕಲೆ, ಕಲಾವಿದರ ಕುರಿತು ಲೇಖನಗಳು ಸಂಗ್ರಹಗೊಂಡಿವೆ.

೨೦೦೬ರಲ್ಲಿ **"ಬಳ್ಳಾರಿ ಜಿಲ್ಲೆಯ ಚಿತ್ರಕಲೆ"**[೧೦೩] ಈ ಕಿರುಪುಸ್ತಕವನ್ನು ಡಾ. ಎಚ್. ಈ. ಬಸವರಾಜಪ್ಪ ಅವರು ಬರೆದಿದ್ದು, ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಪ್ರಕಟಿಸಿದ್ದಾರೆ. ಈ ಬಳ್ಳಾರಿ ಜಿಲ್ಲೆಯ ಚಿತ್ರಕಲೆ ಕುರಿತು ಪರಿಚಯಾತ್ಮಕ ಕೃತಿ ಇದಾಗಿದೆ. ಇದೇ ಅವಧಿಯಲ್ಲಿ **"ವಿಜಯನಗರ ಭಿತ್ತಿಚಿತ್ರಕಲೆ"**[೧೦೪] ಎಂಬ ವಿಷಯ ಕುರಿತು ಎಂ.ಫಿಲ್ ಪದವಿಗಾಗಿ ಸುಚಿತ್ರಾ ಜಿ. ಲಿಂಗದಳ್ಳಿ ಅವರು ಕನ್ನಡ ವಿಶ್ವವಿದ್ಯಾಲಯಕ್ಕೆ ಪ್ರಬಂಧವನ್ನು ಸಲ್ಲಿಸಿದ್ದಾರೆ. ಇಲ್ಲಿ ಹಂಪಿ ವಿರೂಪಾಕ್ಷ ದೇವಾಲಯ, ಆನೆಗುಂದಿ ಮತ್ತು ಕನಕಗಿರಿ ಭಿತ್ತಿಚಿತ್ರಗಳನ್ನು ಗಮನಿಸಿ ಅಧ್ಯಯನ ಮಾಡಿದ್ದಾರೆ. ಹಾಗೆಯೇ ಡಾ. ದೇವರಕೊಂಡಾರೆಡ್ಡಿ ಅವರ ಸಂಪಾದನೆಯಲ್ಲಿ ಹೊರಬಂದ **"ಹಂಪಿ ಸಂಪುಟ ಕಲೆ, ಕ್ರೀಡೆ ಮತ್ತು ಕೌಶಲ"**[೧೦೫] ಎಂಬ ಕೃತಿಯಲ್ಲಿ ಈ ಪ್ರದೇಶದ ಕಲೆಗಳನ್ನು ಕುರಿತು ವಿಶೇಷವಾಗಿ ವಿದ್ವಾಂಸರು ಬರೆದ ಲೇಖನಗಳು ಸಂಗ್ರಹಗೊಂಡಿವೆ.

೨೦೦೭ರಲ್ಲಿ ಎಲ್. ಶಿವಲಿಂಗಪ್ಪನವರು **"ಮ.ಈ. ಗುರು"**[೧೦೬] ಎಂಬ ಶೀರ್ಷಿಕೆಯಲ್ಲಿ ಕಲಾವಿದ ಎಂ. ಈ. ಗುರುರವರ ಜೀವನ ಮತ್ತು ಕಲಾಕೃತಿಯ ಸ್ಥೂಲ ಪರಿಚಯವನ್ನು ಮಾಡಿಕೊಡುವ ಕೃತಿಯೊಂದನ್ನು ರಚಿಸಿದ್ದಾರೆ. ಇದೇ ಅವಧಿಯಲ್ಲಿ ಪ್ರೊ. ವೈ. ಹನುಮಂತರೆಡ್ಡಿ

---

೯೯. ನಾಗವರ್ಮ ಜಿ. ಎಸ್. : ಬಳ್ಳಾರಿ ಜಿಲ್ಲೆಯ ತೊಗಲುಗೊಂಬೆ ಆಟದ ಸಾಂಸ್ಕೃತಿಕ ಅಧ್ಯಯನ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ. ೨೦೦೩

೧೦೦. ಡಾ. ಶಶಿಕಲಾ ಹೂಗಾರ್ : ಕರ್ನಾಟಕದ ತೊಗಲುಗೊಂಬೆ ಚಿತ್ರಕಲೆ, ಅ.ಪ್ರ.ಪಿಹೆಚ್.ಡಿ.ಮ.ಪ್ರ. ಕ.ವಿ.ವಿ. ಹಂಪಿ. ೨೦೦೫

೧೦೧. ಡಾ. ಹೆಚ್. ಎನ್. ಚಿತ್ರಗಾರ : ಕರ್ನಾಟಕ ಹಸ್ತಪ್ರತಿ ಚಿತ್ರಕಲೆ – ಒಂದು ಅಧ್ಯಯನ, ಅ.ಪ್ರ, ಪಿಹೆಚ್.ಡಿ. ಮ.ಪ್ರ, ಕ.ವಿ.ವಿ. ಹಂಪಿ ೨೦೦೫

೧೦೨. ಡಾ. ಕೆ. ರವೀಂದ್ರನಾಥ : ಬಳ್ಳಾರಿ ಜಿಲ್ಲಾ ದರ್ಶನ, ಪ್ರಸಾರಾಂಗ, ಗುಲ್ಬರ್ಗಾ ವಿ.ವಿ. ಗುಲ್ಬರ್ಗಾ. ೨೦೦೫

೧೦೩. ಡಾ. ಎಚ್. ಈ. ಬಸವರಾಜಪ್ಪ : ಬಳ್ಳಾರಿ ಜಿಲ್ಲೆಯ ಚಿತ್ರಕಲೆ, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ. ೨೦೦೬

೧೦೪. ಸುಚಿತ್ರಾ ಜಿ. ಲಿಂಗದಳ್ಳಿ : ವಿಜಯನಗರ ಭಿತ್ತಿಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ., ಹಂಪಿ ೨೦೦೬

೧೦೫. ಡಾ. ದೇವರಕೊಂಡಾರೆಡ್ಡಿ : ಹಂಪಿ ಸಂಪುಟ, ಕಲೆ, ಕ್ರೀಡೆ ಮತ್ತು ಕೌಶಲ, ಪ್ರಸಾರಾಂಗ, ಕ.ವಿ.ವಿ. ಹಂಪಿ ೨೦೦೬

೧೦೬. ಎಲ್. ಶಿವಲಿಂಗಪ್ಪ : ಮ. ಈ. ಗುರು, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೭

ಅವರು ಬರೆದ **"ಬಳ್ಳಾರಿ : ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ"**[೧೦೭] ಎಂಬ ಕೃತಿಯಲ್ಲಿ ಬಳ್ಳಾರಿ ಜಿಲ್ಲೆಯ ಐತಿಹಾಸಿಕ ಹಿನ್ನೆಲೆ ಮತ್ತು ಕಲೆಗಳನ್ನು ಕುರಿತು ಸ್ಥೂಲವಾಗಿ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

೨೦೦೮ರಲ್ಲಿ **"ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಗಳ ಚಿತ್ರಕಲೆ"**[೧೦೮] ಎಂಬ ಶೀರ್ಷಿಕೆಯ ಕುರಿತು ಎಂ.ಫಿಲ್ ಪ್ರಬಂಧವನ್ನು ಸುರೇಶ್ ಬಡಿಗೇರ್ ಅವರು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಇಲ್ಲಿ ಹಸ್ತಪ್ರತಿಯ ರೇಖೆ, ಬಣ್ಣ, ವಸ್ತುವಿಷಯನ್ನು ಕುರಿತು ಚರ್ಚಿಸಲಾಗಿದೆ. ಇದೇ ಅವಧಿಯಲ್ಲಿ ಕೃಷ್ಣವೇಣಿ ಅವರು ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಮಂಡಿಸಿದ **"ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ"**[೧೦೯] ಎಂಬ ಪ್ರಬಂಧದಲ್ಲಿ ಈ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರದ ನೆಲೆಗಳನ್ನು ಕುರಿತು ಅಧ್ಯಯನವನ್ನು ನಡೆಸಿದ್ದಾರೆ.

೨೦೧೦ರಲ್ಲಿ **"ಕರ್ನಾಟಕದ ಗಾಜಿನ ಮೇಲಿನ ಚಿತ್ರಕಲೆ"**[೧೧೦] ಎಂಬ ವಿಷಯವಾಗಿ ನಿಂಗಪ್ಪ ಎಂ. ಅಂಗಡಿಯವರು ಪಿಎಚ್.ಡಿ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಇಲ್ಲಿ ಹೊಸಪೇಟೆಯ ಸುತ್ತಮುತ್ತಲಿನ ಕೆಲವು ಗಾಜಿನ ಚಿತ್ರಗಳನ್ನು ಇವರು ಅಧ್ಯಯನದಲ್ಲಿ ಚರ್ಚಿಸಿದ್ದಾರೆ. ಇದೇ ಅವಧಿಯಲ್ಲಿ ಡಾ. ಎಲ್. ಶ್ರೀನಿವಾಸರವರು ಹೊರತಂದ **"ಹಂಪಿ ಪರಿಸರದ ಆದಿಮಾನವ ನೆಲೆಗಳು"**[೧೧೧] ಎಂಬ ಕೃತಿಯಲ್ಲಿ ಈ ಪರಿಸರದ ಪ್ರಾಗೈತಿಹಾಸಿಕ ಕಾಲದ ರೇಖಾ, ವರ್ಣಚಿತ್ರಗಳು ಹಾಗೂ ಕುಟ್ಟಿದ ಮತ್ತು ಕೊರೆದ ರೇಖಾಚಿತ್ರಗಳ ವಸ್ತುವಿಷಯಗಳ ಕುರಿತು ಸ್ಥೂಲವಾಗಿ ಚರ್ಚಿಸಲಾಗಿದೆ. ೨೦೧೨ರಲ್ಲಿ ಎನ್. ಮರಿಶಾಮಾಚಾರ್ ಅವರು **"ಕರ್ನಾಟಕದ ಚಿತ್ರಕಲಾ ಪರಂಪರೆ"**[೧೧೨] ಕೃತಿಯಲ್ಲಿ ಬಳ್ಳಾರಿ ಜಿಲ್ಲೆಯ ಚಿತ್ರಕಲೆಯುನ್ನು ಪರಿಚಯಿಸಿದ್ದಾರೆ.

ಮೇಲಿನವುಗಳಲ್ಲದೇ ಕರ್ನಾಟಕ ಇತಿಹಾಸ ಅಕಾಡೆಮಿಯು ಹೊರತಂದ **"ಇತಿಹಾಸ ದರ್ಶನ ಸಂಪುಟಗಳು"**[೧೧೩] ಮತ್ತು **ವಿಜಯನಗರ ಅಧ್ಯಯನ ಸಂಪುಟ**ಗಳಲ್ಲಿ ಬಳ್ಳಾರಿ ಜಿಲ್ಲೆಯ ಕುರಿತು ಅನೇಕ ವಿದ್ವಾಂಸರು ಬರೆದಂತಹ ವೈವಿಧ್ಯಮಯವಾದ ಕಲೆ, ಸಾಂಸ್ಕೃತಿಕ, ಸಂಶೋಧನಾತ್ಮಕವಾದ ಲೇಖನಗಳ ಸಂಗ್ರಹವಿದೆ. ಹೀಗೆ ದೇಶೀಯ ಹಾಗೂ ವಿದೇಶಿಯ ಅನೇಕ ವಿದ್ವಾಂಸರು ಬಳ್ಳಾರಿ ಜಿಲ್ಲೆಯ ಕುರಿತು ವಿವಿಧ ನೆಲೆಯಲ್ಲಿ ಅಧ್ಯಯನ ಮಾಡಿದ್ದಾರೆ.

---

೧೦೭. ಪ್ರೊ. ವೈ. ಹನುಮಂತರೆಡ್ಡಿ : ಬಳ್ಳಾರಿ: ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಇತಿಹಾಸ ಸಂಶೋಧನ ಮಂಡಳಿ, ಧಾರವಾಡ. ೨೦೦೭

೧೦೮. ಸುರೇಶ್ ಬಡಿಗೇರ : ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಗಳ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ. ೨೦೦೮

೧೦೯. ಕೃಷ್ಣವೇಣಿ : ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ, ಎಂ.ಫಿಲ್. ಪ್ರಬಂಧ, ಕ.ವಿ.ವಿ. ಹಂಪಿ. ೨೦೦೮

೧೧೦. ಡಾ. ಎನ್. ಎಂ. ಅಂಗಡಿ : ಕರ್ನಾಟಕದ ಗಾಜಿನ ಮೇಲಿನ ಚಿತ್ರಕಲೆ, ಅ.ಪ್ರ. ಪಿಹೆಚ್.ಡಿ. ಮ.ಪ್ರ., ಕ.ವಿ.ವಿ.ಹಂಪಿ. ೨೦೧೦

೧೧೧. ಡಾ. ಎಲ್. ಶ್ರೀನಿವಾಸ : ಹಂಪಿ ಪರಿಸರದ ಆದಿಮಾನವ ನೆಲೆಗಳು, ಪ್ರಸಾರಾಂಗ, ಕ.ವಿ.ವಿ. ಹಂಪಿ. ೨೦೧೦

೧೧೨. ಎನ್. ಮರಿಶಾಮಾಚಾರ್ : ಕರ್ನಾಟಕದ ಚಿತ್ರಕಲಾ ಪರಂಪರೆ, ಸಿ.ಎಂ.ಎನ್. ಪ್ರಕಾಶನ, ಬೆಂಗಳೂರು. ೨೦೧೨

೧೧೩. ಇತಿಹಾಸ ದರ್ಶನ ಸಂಪುಟಗಳು, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

ಆದರೆ ಬಳ್ಳಾರಿ ಜಿಲ್ಲೆಯ ಚಿತ್ರಕಲೆಯ ಕುರಿತು ಇಲ್ಲಿಯವರೆಗೆ ಸಮಗ್ರವಾಗಿ ಯಾವುದೇ ಅಧ್ಯಯನಗಳು ನಡೆಯದೇ ಇರುವುದನ್ನು ಗಮನಿಸಿ ಪ್ರಸ್ತುತ ಬಳ್ಳಾರಿ ಜಿಲ್ಲೆಯ ಚಿತ್ರಕಲೆಯನ್ನು ಕುರಿತು ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಅಧ್ಯಯನದ ವಿಧಾನ

ಬಳ್ಳಾರಿ ಜಿಲ್ಲೆಯ ಚಿತ್ರಕಲೆ ಎಂಬ ಈ ಮಹಾಪ್ರಬಂಧದ ರಚನೆಯಲ್ಲಿ ಎರಡು ರೀತಿಯ ಆಕರ ಸಾಮಗ್ರಿಗಳಿಂದ ವಿಷಯ ಸಂಗ್ರಹ ಮಾಡಿಕೊಂಡು ಅಳವಡಿಸುವ ವಿಧಾನವನ್ನು ಅನುಸರಿಸಲಾಗಿದೆ. ಅವು ಈ ಕೆಳಕಂಡಂತಿವೆ.

೧. ಮೂಲ ಆಕರ ಸಾಮಗ್ರಿ

೨. ಆನುಷಂಗಿಕ ಆಕರ ಸಾಮಗ್ರಿ

೧. ಮೂಲ ಆಕರ ಸಾಮಗ್ರಿ

ಮೂಲ ಆಕರ ಸಾಮಗ್ರಿಯಾಗಿ ಬಳ್ಳಾರಿಜಿಲ್ಲೆಯ ಚಿತ್ರಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ. ಕ್ಷೇತ್ರಕಾರ್ಯದಲ್ಲಿ ಅವಲೋಕನ ಅತಿ ಮುಖ್ಯವಾದ ಅಂಶವಾಗಿದ್ದು, ಮೂಲ ಚಿತ್ರಗಳು ಇರುವ ಕಡೆಗೆ ಅನೇಕ ಬಾರಿ ಭೇಟಿ ಕೊಟ್ಟು, ಚಿತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿ ಛಾಯಾಚಿತ್ರಗಳನ್ನು ಮಾಡಿಕೊಂಡು, ಅದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಅದೇ ಸ್ಥಳದಲ್ಲಿ ಬರೆದುಕೊಳ್ಳಲಾಯಿತು. ಅಲ್ಲದೇ ಚಿತ್ರಗಳ ಸುತ್ತಮುತ್ತ ಇದ್ದ ಸ್ಥಳೀಯ ಹಿರಿಯರನ್ನು ಕೇಳಿ ಮಾಹಿತಿ ಪಡೆದುಕೊಳ್ಳಲಾಗಿದೆ. ಇದು ಅಲ್ಲದೇ ಗುಡ್ಡಗಾಡುಗಳಲ್ಲಿ ಅಲೆದಾಡುವ ಧನ-ಕುರಿ ಕಾಯುವ ಮಕ್ಕಳಿಂದಲೂ ಮಾರ್ಗ ಮತ್ತು ಚಿತ್ರ ಇರುವಿಕೆಯ ಮಾಹಿತಿ ಪಡೆದುಕೊಂಡು ಸಂದರ್ಭಕ್ಕೆ ಅನುಗುಣವಾಗಿ ಈ ಕ್ಷೇತ್ರಕಾರ್ಯದಲ್ಲಿ ಹಲವಾರು ವಿದ್ವಾಂಸರ ಜೊತೆಗೆ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸಿ ಮಾಹಿತಿಯನ್ನು ಸಂಗ್ರಹಿಸಲಾಗುವುದು. ಹೀಗೆ ಕ್ಷೇತ್ರಕಾರ್ಯದಿಂದ ದೊರೆತ ವಿವರಗಳನ್ನು ಅಭ್ಯಾಸಕ್ಕೆ, ಬರವಣಿಗೆಗೆ ಅನುಕೂಲವಾಗುವಂತೆ ಪಟ್ಟಿಕೆಗಳಲ್ಲಿ ಸಂಗ್ರಹ ಮಾಡಿಕೊಂಡು ಪ್ರಸ್ತುತ ಪ್ರಬಂಧವನ್ನು ರಚಿಸಲಾಗಿದೆ.

*** ಸಂದರ್ಶನ**

ಬಳ್ಳಾರಿ ಜಿಲ್ಲೆಯ ಚಿತ್ರಕಲೆಯನ್ನು ಅಧ್ಯಯನ ಕೈಕೊಂಡಾಗ ವಿಷಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸುವ ಸಂದರ್ಭದಲ್ಲಿ ಇತಿಹಾಸ ತಜ್ಞರನ್ನು, ಕಲಾವಿದರನ್ನು ಉದಾ: ಟಿ. ವಿರೂಪಾಕ್ಷಪ್ಪ, ಹಣ್ಣುಕಾಯಿ ಶಿವರುದ್ರಯ್ಯಸ್ವಾಮಿ, ಜಂಬುಕೇಶ್ವರ, ಎಲ್. ಶಿವಲಿಂಗಪ್ಪ, ಎಂ.ಇ. ಗುರುರವರ ಮೂಲ ಸ್ಥಳವಾದ ಮುದ್ದಾಪುರ, ವಿ.ಟಿ. ಕಾಳೆ, ಹಸೆ ಚಿತ್ರಕಲಾವಿದ ಶಿಲ್ಪಾ, ಕಂಪ್ಲಿ ಮುಂತಾದ ಕಲಾವಿದರನ್ನು ಮತ್ತು ಅವರು ನೀಡಿದ ಮಾಹಿತಿಗಳನ್ನು ಸಂದರ್ಶಿಸಿ ಧ್ವನಿ ಮುದ್ರಿಸಿಕೊಂಡು ನಂತರ ಮರು ಪರಿಶೀಲನೆ ನಡೆಸಿ ಸೂಕ್ತ ಮಾಹಿತಿಗಳನ್ನು ಸಂಗ್ರಹಿಸಿಕೊಳ್ಳಲಾಯಿತು. ಹಾಗೆಯೇ ಜನಪದ ಚಿತ್ರಕಲೆ, ಹಸ್ತಪ್ರತಿ ಚಿತ್ರಕಲೆ, ಕಸೂತಿ, ಕೌದಿ,

ತೊಗಲುಗೊಂಬೆ ಮುಂತಾದ ಕಲೆಗಳ ಕುರಿತು ಆಯಾ ಪ್ರದೇಶದ ಕಲಾವಿದರನ್ನು ಸಂದರ್ಶಿಸಿ ಅಧ್ಯಯನ ಮಾಡಲಾಗಿದೆ.

*** ಛಾಯಾಚಿತ್ರ**

ಈ ಬಳ್ಳಾರಿ ಜಿಲ್ಲೆಯ ಚಿತ್ರಕಲೆಗೆ ಸಂಬಂಧಿಸಿದಂತೆ ಭಿತ್ತಿಚಿತ್ರಗಳು, ಜನಪದ ಚಿತ್ರಕಲೆಯಲ್ಲಿ ರಂಗೋಲಿ, ಮೆಹಂದಿ, ಕಸೂತಿ, ತೊಗಲುಗೊಂಬೆ, ದೊಡ್ಡಾಟದ ಪರಿಕರಗಳು ಮುಂತಾದ ಚಿತ್ರಗಳ ಛಾಯಾಚಿತ್ರಣ ಮತ್ತು ಪ್ರಾಗೈತಿಹಾಸಿಕ ಚಿತ್ರಗಳಿಗೆ ಸಂಬಂಧಿಸಿದಂತೆ ಕುಟ್ಟು/ಗೀರು, ವರ್ಣಚಿತ್ರಗಳನ್ನು ಕುರಿತ ನೆಲೆಗಳ ಚಿತ್ರ, ಪರಿಸರವನ್ನು ಛಾಯಾಚಿತ್ರಣ ಮಾಡಿಕೊಳ್ಳಲಾಯಿತು. ಹಲವು ಸಂಕೀರ್ಣ ಚಿತ್ರಗಳನ್ನು, ಕಲಾವಿದರನ್ನು ಇವರ ಕಲಾಕೃತಿಗಳನ್ನು ಸಹ ಛಾಯಾಚಿತ್ರಣ ಮಾಡಲಾಗಿದೆ. ಮತ್ತು ಕಲಾಸಂಸ್ಥೆಗಳು, ಕಲಾಚಟುವಟಿಕೆ ಮುಂತಾದ ವಿಷಯವನ್ನು ವೀಡಿಯೋ ಮಾಡಿಕೊಂಡು ಸಂಶೋಧನೆಯ ವಿಷಯದ ಅಗತ್ಯಕ್ಕೆ ತಕ್ಕಂತೆ ಪ್ರಸ್ತುತ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ. ಈ ಅಧ್ಯಯನದಲ್ಲಿ ಛಾಯಾಚಿತ್ರಣವು ಸ್ಪಷ್ಟವಾಗಿ ಕಾಣುವಂತೆ ಸಂಗ್ರಹಿಸುವುದು ಬಹುಮುಖ್ಯ ಪಾತ್ರವಾಗಿದೆ ಎಂದು ತಿಳಿದು ಸೂಕ್ಷ್ಮವಾಗಿ ಸಂಗ್ರಹಿಸಲಾಗಿದೆ.

೨. ಆನುಷಂಗಿಕ ಆಕರ ಸಾಮಗ್ರಿ

ವಿಶ್ವಕೋಶ, ಪ್ರಕಟಿತ ಸಂಶೋಧನಾತ್ಮಕ ಪುಸ್ತಕಗಳು, ಅಪ್ರಕಟಿತ ಮಹಾಪ್ರಬಂಧಗಳು, ಅಭಿನಂದನ ಗ್ರಂಥಗಳು, ದಿನಪತ್ರಿಕೆ, ಗೆಝುಟಿಯರ್‌ಗಳು, ವಸ್ತುಸಂಗ್ರಹಾಲಯ ಇತ್ಯಾದಿ ಸಾಮಗ್ರಿಗಳಿಂದ ಬಳ್ಳಾರಿ ಜಿಲ್ಲೆಯ ಚಿತ್ರಕಲೆಗೆ ಸಂಬಂಧಿಸಿದಂತೆ ಮಾಹಿತಿಗಳನ್ನು ಸಂಶೋಧನ ವಿಷಯಕ್ಕೆ ತಕ್ಕಂತೆ ಸಂಗ್ರಹಿಸಿಡುವುದು ಹಾಗೂ ಅಂತರ್ಜಾಲದ ಹುಡುಕಾಟದಿಂದ ಹಲವು ವಿಷಯಗಳನ್ನು ಸಂಗ್ರಹಿಸಿ ಮಾಹಿತಿಗಳನ್ನು ಸಂಶೋಧನೆಗೆ ತಕ್ಕುದಾದ ವಿಷಯವನ್ನು ಆನುಷಂಗಿಕ ಆಕರ ಸಾಮಗ್ರಿಗಳನ್ನು ಮೂಲ ಸಂಶೋಧನೆಗೆ ಬಳಸಿಕೊಳ್ಳಲಾಗಿದೆ.

ಅಧ್ಯಾಯ – ಎರಡು

ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಪರಿಸರ ಮತ್ತು ಲಲಿತಕಲೆಗಳು

ಜೀವಿಯು ಈ ವಿಶ್ವದಲ್ಲಿ ಸೃಷ್ಟಿಯಾಗಿ ಅದು ಸಂಪೂರ್ಣವಾಗಿ ಬೆಳವಣಿಗೆ ಹೊಂದಿ ಒಂದು ಹಂತ ತಲುಪಿದಾಗ ಮಾನವನ ನಾಗರಿಕತೆ ಪ್ರಾರಂಭವಾಯಿತು. ನಾಗರಿಕತೆ ಕ್ರಮೇಣವಾಗಿ ಪ್ರಗತಿ ಹೊಂದಿ ಒಂದು ಹಳ್ಳಿಯು ಸೃಷ್ಟಿಯಾಗಬೇಕಾದರೆ ಸಾವಿರಾರು ವರ್ಷಗಳು ಬೇಕಾದವು. ಮನುಷ್ಯನ ಚಿಂತನೆ ಪ್ರಗತಿ ಹೊಂದಿದಂತೆಲ್ಲಾ ಮನುಷ್ಯನ ಬುದ್ಧಿ ಪ್ರಜ್ವಲವಾಗಿ ಆ ಮುಖಾಂತರ ಹೊಸ ಹೊಸ ಆವಿಷ್ಕಾರಗಳನ್ನು ಮಾಡತೊಡಗಿದ. ನಂತರದ ದಿನಗಳಲ್ಲಿ ಆವಿಷ್ಕಾರಗಳು ಹೆಚ್ಚಾದಂತೆ ಮಾನವತೆಗೆ ಅನುಕೂಲತೆಗಳು ಉಂಟಾಗಿ ಅತಿಯಾದ ಪ್ರಗತಿಗೆ ದಾರಿಯಾದ ಜಾಗತೀಕರಣ ಹಾಗೂ ಉದಾರೀಕರಣ, ವೈಜ್ಞಾನಿಕ ಬೆಳವಣಿಗೆ, ಖಾಸಗೀಕರಣ ಉಂಟಾಗಿ ಪ್ರತಿಯೊಂದು ಕ್ಷೇತ್ರದಲ್ಲೂ ಆಸಕ್ತಿ ಉಲ್ಬಣಗೊಂಡು ಮಾನವ ತನ್ನದೇ ಆದ ಧೀಮಂತ ವಿಶ್ವಕಲ್ಪನೆಗೆ ತಕ್ಕಂತಹ ಜೀವನದ ಹಲವು ಮಗ್ಗಲುಗಳಿಗೆ ನವೀನ ಶೋಧನಾ ಹಾದಿಯನ್ನು ತನ್ನಲ್ಲೇ ತಾನು ಕಂಡುಕೊಂಡು ಪ್ರಗತಿಯ ಪಥವನ್ನು ಉತ್ತುಂಗಕ್ಕೇರಿಸಿದ್ದಾನೆ.[೧]

ಈ ಪ್ರಗತಿಯ ಪಥವು ಸಂಶೋಧನೆಯ ಪರಿಸರವನ್ನು ಅವಲಂಬಿಸಿರುತ್ತದೆ. ದೇಶ–ವಿದೇಶ ನಗರ ಪ್ರದೇಶ ಹೀಗೆ ಹಲವು ಹಂತಗಳಿಂದ ಪ್ರಗತಿಯ ಹಾದಿಯನ್ನು ಹಿಡಿದಿದ್ದಾರೆ. ಈ ಪ್ರಗತಿಯ ಹಂತದಲ್ಲಿರುವ ಬಳ್ಳಾರಿ ಜಿಲ್ಲೆಯು ಒಂದು. ಈ ಜಿಲ್ಲೆಯ ಇತಿಹಾಸ ಕುತೂಹಲಭರಿತವಾದದ್ದು, ಪರಂಪರೆ ಮತ್ತು ಸ್ಥಿತ್ಯಂತರಗಳ ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯನ್ನು

೦೧ ಡಾ. ಹೆಚ್. ಈ ಬಸವರಾಜಪ್ಪ : ಬಳ್ಳಾರಿ ಜಿಲ್ಲೆಯ ಚಿತ್ರಕಲೆ, ಪುಟ–೩

ಸಮೀಕ್ಷಿಸುವುದು ತುಂಬಾ ಸಂಕೀರ್ಣವಾದದ್ದು, ಏಕೆಂದರೆ ಪ್ರಾಸಕೃತಿಕವಾಗಿ, ಕಲಾತ್ಮಕವಾಗಿ, ತಾಂತ್ರಿಕವಾಗಿ, ಸಾಹಿತ್ಯಕವಾಗಿ, ಬಹುಭಾಷಿಕವಾಗಿ, ಶೈಕ್ಷಣಿಕವಾಗಿ ಮತ್ತು ಅಭಿವೃದ್ಧಿಯ ಆಧುನಿಕ ನೆಲೆ ಈ ಎಲ್ಲಾ ಬಳ್ಳಾರಿ ಜಿಲ್ಲೆಯ ಪಾರಂಪರಿಕ ಸ್ಥಿತ್ಯಂತರದ ಸ್ವರೂಪವಾಗಿದೆ. ಈ ಜಿಲ್ಲೆಯ ಇತಿಹಾಸ ಹಳೆಯ ಶಿಲಾಯುಗದ ಜನರಿಂದ ಪ್ರಾರಂಭವಾಗುತ್ತದೆ. ಕರ್ನಾಟಕದ ಮಧ್ಯಮ ಸ್ಥಾನದಲ್ಲಿರುವ (ದಕ್ಷಿಣೋತ್ತರವಾಗಿ ನೋಡಿದರೆ) ಬಳ್ಳಾರಿ ಜಿಲ್ಲೆಯು ಈಶಾನ್ಯ ಮತ್ತು ನೈರುತ್ಯ ದಿಕ್ಕಿನಲ್ಲಿ ಉದ್ದಕ್ಕೆ ಹಬ್ಬಿದೆ. ಜಿಲ್ಲೆಯು ಪೂರ್ವ ಪಶ್ಚಿಮವಾಗಿ ೧೬೧ ಕಿ.ಮೀ ಉದ್ದವನ್ನು, ದಕ್ಷಿಣೋತ್ತರವಾಗಿ ೮೩.೭೮ ಕಿ.ಮೀ. ಅಗಲವನ್ನು, ನೈಋತ್ಯಕ್ಕೆ ೧೮೦ ಕಿ.ಮೀ. ಉದ್ದವನ್ನು ಹೊಂದಿದೆ. ಕ್ರಿ.ಶ.೧೯೯೮ ಕ್ಕಿಂತ ಮೊದಲು ಈ ಜಿಲ್ಲೆ ಎಂಟು ತಾಲ್ಲೂಕುಗಳನ್ನು ಒಳಗೊಂಡಿತ್ತು. ಅವುಗಳೆಂದರೆ ಬಳ್ಳಾರಿ, ಸಂಡೂರು, ಕೂಡ್ಲಿಗಿ, ಹರಪನಹಳ್ಳಿ, ಹಡಗಲಿ, ಹಗರಿಬೊಮ್ಮನಹಳ್ಳಿ, ಹೊಸಪೇಟೆ ಮತ್ತು ಸಿರುಗುಪ್ಪ. ಕ್ರಿ.ಶ.೧೯೯೮ ರಿಂದೀಚೆಗೆ ಹೊಸದಾಗಿ ರಚಿತವಾದ ದಾವಣಗೆರೆ ಜಿಲ್ಲೆಗೆ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕನ್ನು ಸೇರಿಸಲಾಗಿದೆ.[೨]

ದಾವಣಗೆರೆ ಜಿಲ್ಲೆಯನ್ನು ರಚಿಸುವಾಗ ಈ ಜಿಲ್ಲೆಗೆ ಹಡಗಲಿ ಹರಪನಹಳ್ಳಿ ತಾಲ್ಲೂಕುಗಳನ್ನು ಸೇರಿಸಬೇಕೆಂದು ಕರ್ನಾಟಕ ಸರಕಾರದ ಶ್ರೀ ಎ.ಡಿ. ಗೋರ್ವಲ ಮತ್ತು ಶ್ರೀ ಪಿ.ಸಿ.ಮಹಾಲನೋಬಿಸ್ ಮುಂತಾದ ತಜ್ಞರನ್ನು ಒಳಗೊಂಡ ಸಮಿತಿ ಸೂಚಿಸಿತ್ತು. ಈ ಸೂಚನೆಗೆ ಹಡಗಲಿ ಮತ್ತು ಹರಪನಹಳ್ಳಿ ತಾಲ್ಲೂಕುಗಳಿಂದ ಭಾರೀ ವಿರೋಧ ವ್ಯಕ್ತವಾಯಿತು. ಈ ವಿರೋಧದ ಮಧ್ಯೆಯು ಶ್ರೀ ಹುಂಡೇಕಾರ್ ಮತ್ತು ಗದ್ದಿಗೌಡರ್ ಸಮಿತಿಗಳು ಹರಪನಹಳ್ಳಿ ತಾಲ್ಲೂಕನ್ನು ದಾವಣಗೆರೆ ಜಿಲ್ಲೆಗೆ ಸೇರ್ಪಡೆಗೊಳಿಸಿದವು.[೩] ಈ ಹರಪನಹಳ್ಳಿ ತಾಲ್ಲೂಕು ದಾವಣಗೆರೆ ಜಿಲ್ಲೆಗೆ ಆಡಳಿತಾತ್ಮಕವಾಗಿ ಸೇರಿದರೂ, ಐತಿಹಾಸಿಕ ಭೌಗೋಳಿಕ, ಸಾಂಸ್ಕೃತಿಕ ಬೇರುಗಳು ಇಲ್ಲಿವೆ.

ಈ ಒಂದು ಪ್ರದೇಶವನ್ನು ಕುರಿತು ಭೂ–ವಿಜ್ಞಾನಿ ಬ್ರುಸ್‌ಫೂಟರು "ಇತಿಹಾಸಪೂರ್ವ ಕುರುಹುಗಳು ಈ ಜಿಲ್ಲೆಯಲ್ಲಿ ಅತ್ಯಂತ ಶ್ರೀಮಂತವಾಗಿದೆ" ಎಂದಿದ್ದಾರೆ.[೪] ಈ ಮಾತಿಗೆ ನಿದರ್ಶನ ಎಂಬುವಂತೆ ಇಲ್ಲಿನ ಬೆಟ್ಟ–ಗುಡ್ಡ, ನದಿ–ಕೊಳ್ಳ, ಅದರಿನ ನಿಕ್ಷೇಪ ಮುಂತಾದ ಭೌಗೋಳಿಕ ಪರಿಸರ ವಿಜಯನಗರ ಸಾಮ್ರಾಜ್ಯದ ಶ್ರೀಮಂತ ಆಡಳಿತದ ನೆನಪು ಮರುಕಳಿಸುವಂತ ಹಂಪೆಯ ಅವಶೇಷಗಳು ವಿಶ್ವಪರಂಪರೆಯಲ್ಲಿ ಮೆರೆದಿವೆ.

ಈ ವಿಜಯನಗರದ ಚರಿತ್ರೆ ಮತ್ತು ವಿಜಯನಗರ ಪೂರ್ವದ ಚರಿತ್ರೆಯಿಂದ ಈ ಪರಂಪರೆಯನ್ನು ಕಲ್ಪಿಸಬಹುದಾಗಿದೆ. 'ಕಂಪ್ಲಿ'ಯ ಸಂಸ್ಥಾನದ ಚರಿತ್ರೆಯು ಬಳ್ಳಾರಿಯ ಚಹರೆಯನ್ನು ಪಾಳೆಗಾರಿಕೆ ನೆಲೆಯಿಂದ ಆರಂಭಿಸುತ್ತದೆ. ಇದರ ವಿಸ್ತೃತ ಸಾಮ್ರಾಜ್ಯ ಶಾಹಿ ನೆಲೆ ವಿಜಯನಗರದಿಂದ ಅನಾವರಣಗೊಳ್ಳುತ್ತದೆ. ಕಂಪಲಿರಾಯ ಮತ್ತು ಕುಮಾರರಾಮನ ಸಾಂಸ್ಕೃತಿಕ ಭಿತ್ತಿಯ

೦೨. ಡಾ. ಎಂ. ಕೊಟ್ರೇಶ್ : ಬಳ್ಳಾರಿ ಜಿಲ್ಲೆಯ ಕೋಟೆಗಳು, ಪುಟ–೧

೦೩. ತಿಪ್ಪೇಸ್ವಾಮಿ ಹೆಚ್ : ದಾವಣಗೆರೆ ಜಿಲ್ಲೆಯ ದೇವಾಲಯಗಳು, (ಅ.ಪ್ರ.ಪಿ.ಹೆಚ್.ಡಿ. ಮ.ಪ್ರ), ಪುಟ–೧೦

೦೪. ಸೂರ್ಯನಾಥ. ಯು. ಕಾಮತ್ (ಸಂ.) : ೧೯೮೪ರ ಕರ್ನಾಟಕ ರಾಜ್ಯ ಗೆಝೆಟಿಯರ್, ಪುಟ– ೪೮೬

[illegible]

ಚರಿತ್ರೆಯಿಂದಾಚೆ ಐತಿಹ್ಯ-ಪುರಾಣ-ಸಾಹಿತ್ಯ ವಲಯಗಳಿಗೂ ಚಾಚಿಕೊಂಡಿದೆ. ವಿಜಯನಗರದ ಕಥನವು ಚರಿತ್ರೆಯಲ್ಲಿ ಮಾತ್ರವಲ್ಲದೆ ಆಧುನಿಕ ಭಾರತದ ಸ್ವಾತಂತ್ರ್ಯ ಸಂದರ್ಭದ ರಾಷ್ಟ್ರೀಯ ಹೋರಾಟಕ್ಕೂ ಭೂಮಿಕೆಯನ್ನು ಒದಗಿಸಿದೆ.[೫] ಆನಂತರ ವಿವಿಧ ರಾಜಮನೆತನದವರು ಬಳ್ಳಾರಿ ಜಿಲ್ಲೆಯನ್ನು ಆಳಿದ್ದು, ಅವರು ವಿವಿಧ ಕಾಲದಲ್ಲಿ ಬರೆಯಿಸಿದ ಅನೇಕ ಶಾಸನಗಳಲ್ಲಿ (೬೩೫ ಶಾಸನಗಳು) ಪ್ರಕಟವಾಗಿದೆ. ಈ ಅರಸರು ನಿರ್ಮಿಸಿದ ದೇವಾಲಯಗಳು, ಬಸದಿಗಳು ಈ ಜಿಲ್ಲೆಯ ಗತವೈಭವವನ್ನು ಸಾರುವ ಮೂಲಸಾಕ್ಷಿಗಳಾಗಿ ನಿಂತಿವೆ. ಉದಾತ್ತ ಜನರನ್ನು, ವೀರರನ್ನು ಒಳಗೊಂಡಿದ್ದರಿಂದ ಈ ನೆಲವನ್ನು ಗಂಡುಮೆಟ್ಟಿನ ನಾಡೆಂದು ಕರೆಯಲಾಗಿದೆ. ಹಂಪೆಯ ಲಕ್ಷ್ಮೀಧರಾಮಾತ್ಯನ ಶಾಸನ ಬಳ್ಳಾರಿ ಜಿಲ್ಲೆಯ ಜನತೆಯ ಸಂಸ್ಕೃತಿಗೆ ಹಿಡಿದ ಕನ್ನಡಿಯಾಗಿದೆ. ಶಾಸನದಲ್ಲಿ

ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿಸು
ಜ್ಜೆಲಿಯೊಳ್ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗಿಂಬುಕೆಯ್ ನಂಬಿದ
ರ್ಗ್ಗಿರಿವಟ್ಟಾಗಿರು ಶಿಷ್ಟರಂ ಪೊರೆ ಎನ್ನುತ್ತಿಂತೆಲ್ಲಮಂ ಪಿಂತೆ ತಾ
ನೆರೆದಳ್ ಪಾಲೆರೆವಂದು ತೊಟ್ಟು ಕಿವಿಯೊಳ್ ಲಕ್ಷೀಧರಾಮಾತ್ಯನಾ ಎಂದು ಹೇಳಲಾಗಿದೆ.

ಲಕ್ಷ್ಮೀಧರಾಮಾತ್ಯನು ಮಗುವಾಗಿರುವಾಗ ಆತನ ತಾಯಿ ಕೆರೆಯನ್ನು ಕಟ್ಟಿಸು, ಬಾವಿಯನ್ನು ತೋಡಿಸು, ದೇವಾಲಯಗಳನ್ನು ನಿರ್ಮಿಸು, ಬಂಧನದಲ್ಲಿ ಸಿಕ್ಕ ಅನಾಥರನ್ನು ಬಿಡಿಸು, ಸ್ನೇಹಿತರಿಗೆ ಅಭಯಹಸ್ತ ನೀಡು, ನಂಬಿದವರಿಗೆ ಆಶ್ರಯ ಕೊಡು, ಸಜ್ಜನರನ್ನು ಸತ್ಪುರುಷರನ್ನು ರಕ್ಷಿಸು- ಎಂದು ಮುಂತಾಗಿ ಕಿವಿಯಲ್ಲಿ ಹೇಳುತ್ತಾ ಹಾಲುಣಿಸುತ್ತಿದ್ದಳಂತೆ. ಇಂಥ ಉದಾತ್ತ ಆದರ್ಶಗಳನ್ನು ಹೊಂದಿದ ಸಂಸ್ಕೃತಿ ಬಳ್ಳಾರಿ ಜಿಲ್ಲೆಯದು. ಹೀಗಾಗಿ ಜಿಲ್ಲೆಯಾದ್ಯಂತ ಅಸಂಖ್ಯ ಕೆರೆ, ಭಾವಿ, ದೇವಾಲಯಗಳನ್ನು ಇಂದಿಗೂ ಕಾಣಬಹುದು ಅಗ್ರಹಾರ, ಧರ್ಮಶಾಲೆ, ಧರ್ಮಛತ್ರ, ಅರವಟ್ಟಿಗೆ, ಕಾಲುವೆ, ಧರ್ಮದ ಏತಗಳಂಥ ಸಾರ್ವಜನಿಕರಿಗೆ ಉಪಯೋಗವಾಗುವ ಕೆಲಸಗಳನ್ನು ಇಲ್ಲಿಯ ಪೂರ್ವಿಕರು ಮಾಡಿದುದನ್ನು ಶಾಸನಗಳು ನಿರೂಪಿಸುತ್ತವೆ. ಮುಮ್ಮಡಿಯವರು ಇದಕ್ಕಿಂತ ವಿಜಯನಗರ ಅರಸರು ಕಾರಣವಾಗಿ ಈ ಜಿಲ್ಲೆಯ ಭೌತಿಕ, ಅಭೌತಿಕ ಸಂಸ್ಕೃತಿಗೆ ವಿಶೇಷಕೀರ್ತಿ ಪ್ರಾಪ್ತವಾಗಿದೆ.[೬] ಇಂತಹ ಒಂದು ಭವ್ಯತೆಯನ್ನು ತನ್ನ ಮಡಿಲಲ್ಲಿ ಇರಿಸಿಕೊಂಡ 'ಬಳ್ಳಾರಿ' ಎಂಬ ಪದನಿಷ್ಪತ್ತಿ ಅಷ್ಟೇ ಕುತೂಹಲಭರಿತವಾಗಿದೆ.

ಬಳ್ಳಾರಿ – ಸ್ಥಳನಾಮ ವಿವೇಚನೆ

'ಬಳ್ಳಾರಿ' ಎಂಬ ಹೆಸರು ಈ ನಗರಕ್ಕೆ ಹೇಗೆ ಬಂತೆಂಬುದಕ್ಕೆ ಕೆಲವು ದಂತಕಥೆಗಳು ಪ್ರಚಲಿತದಲ್ಲಿವೆ. ಬಳ್ಳಾರಿಗೆ ಸಮೀಪದಲ್ಲಿರುವ ಕೋಳೂರಿನಲ್ಲಿ ಬಳ್ಳೇಶ ಮಲ್ಲಯ್ಯನೆಂಬ ಶಿವಭಕ್ತನಿದ್ದ,

೦೫. ಡಾ. ಹೆಚ್. ಈ. ಬಸವಾಜಪ್ಪ : ಬಳ್ಳಾರಿ ಜಿಲ್ಲೆಯ ಚಿತ್ರಕಲೆ, ಪುಟ-೪
೦೬. ಜಿ.ಎಂ ನಾಗಯ್ಯ : ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ, ಪುಟ-೨

ಈತ ಶಿವಲಿಂಗಪೂಜೆಯಾದ ನಂತರವೇ ಪ್ರಸಾದ ಸೇವಿಸುತ್ತಿದ್ದ ಒಮ್ಮೆ ಬಳ್ಳಾರಿಗೆ ಬಂದ ಮಲ್ಲಯ್ಯ ಪೂಜೆಗೆ ಶಿವಲಿಂಗವನ್ನು ಕಾಣದೆ ಬೋರಲಾಗಿಟ್ಟ ತನ್ನ ಬಳ್ಳವನ್ನೇ ಲಿಂಗವೆಂದು ಭಾವಿಸಿ ಭಕ್ತಿಯಿಂದ ಪೂಜೆ ಮಾಡುತ್ತಾನೆ. ಇವನ ಭಕ್ತಿಗೆ ಮೆಚ್ಚಿ ಶಿವ ಪ್ರತ್ಯಕ್ಷನಾಗುತ್ತಾನೆ. ಹೀಗೆ ಶಿವನು ಬಳ್ಳದಲ್ಲಿ ಪ್ರತ್ಯಕ್ಷನಾದುದರಿಂದ ಆತನನ್ನು ಬಳ್ಳೇಶನೆಂದು ಕರೆಯಲಾಗುತ್ತದೆ. ಈ ಬಳ್ಳೇಶನಿಂದಾಗಿ ಬಳ್ಳಾರಿ ಎಂಬ ಹೆಸರು ಬಂದಿದೆ ಎಂಬ ಕಥೆ ಇದೆ. ಹೀಗೆ ಇನ್ನು ಬೇರೆ ಬೇರೆ ಹೆಸರುಗಳಿಂದ ಬಳ್ಳಾರಿ ಎಂಬ ಹೆಸರು ಬಂದಿದೆ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

ಹಿಂದಿನ ಕಲೆಗಳು, ಇಂದಿನ ಕಲಾಬೆಳವಣಿಗೆಗೆ ಇಲ್ಲಿನ ಪರಿಸರ ಸೇತುವೆಯಾಗಿರುತ್ತದೆ. ಇಂತಹ ಸೇತುವೆಗೆ ಕಾರಣವಾದಂತಹ ಹಲವು ಸಾಮ್ರಾಜ್ಯಗಳು ಕಲೆಗಳಿಗೆ ಕೊಟ್ಟ ಪ್ರೋತ್ಸಾಹ ಇತಿಹಾಸಪುಟದಲ್ಲಿ ಕಾಣಸಿಗುತ್ತವೆ. ಈ ಜಿಲ್ಲೆಯನ್ನು ನಂದರು, ಗುಪ್ತರು, ಮೌರ್ಯರು, ಶಾತವಾಹನರು, ಕದಂಬರು, ರಾಷ್ಟ್ರಕೂಟರು, ಬಾದಾಮಿಯ ಚಾಲುಕ್ಯರು ಆಳಿರುವುದು ಕೆಲವಾರು ಶಿಲಾಶಾಸನಗಳಿಂದ ಸ್ಪಷ್ಟವಾಗುತ್ತದೆ.[೭] ಈ ಎಲ್ಲಾ ಸಾಮ್ರಾಜ್ಯಗಳು ತಮ್ಮದೇಯಾದ ಶಿಷ್ಟತೆಯ ನೆಲೆಯೊಳಗೆ ರಾಜಮಹಾರಾಜರ, ಮನೋಧರ್ಮ, ಗುಣಕ್ಕನುಗುಣವಾಗಿ ತಮ್ಮದೇಯಾದ ಕೊಡುಗೆಯನ್ನು ಕೊಟ್ಟಿದ್ದಾರೆ.

ಕಲೆಯ ಬೆಳವಣಿಗೆಯ ಪೂರಕವಾಗಿ ಇತಿಹಾಸ, ಸಾಮಾಜಿಕ, ಧಾರ್ಮಿಕ ಕೊಡುಗೆ

ಆರಂಭದ ಘಟ್ಟ

ಲಿಖಿತ ದಾಖಲೆಗಳ ಆಧಾರದಿಂದ ಪ್ರಾರಂಭವಾಗುವ ಆರಂಭದ ಘಟ್ಟ ಇದಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ದೊರೆತ ಪ್ರಾಚೀನ ಲಿಖಿತ ದಾಖಲೆಗಳೆಂದರೆ ಅಶೋಕನ ಶಾಸನಗಳು, ಅಂದರೆ ಮೌರ್ಯರ ಆಳ್ವಿಕೆಯಿಂದ ಇದರ ಇತಿಹಾಸ ಪ್ರಾರಂಭವಾಗುತ್ತದೆ. ಆದರೆ ಕೋಳೂರಿನ ಕ್ರಿ.ಶ. ೧೧೪೭ ಡಿಸೆಂಬರ್ ೨೫ರ ಶಾಸನ ಈ ಜಿಲ್ಲೆಯನ್ನು ಆಳಿದ ಚಕ್ರವರ್ತಿಗಳ ವಂಶದ ಯಾದಿಯನ್ನು ಹೀಗೆ ಕೊಡುತ್ತದೆ. ನಂದರು, ಗುಪ್ತರು, ಮೌರ್ಯರು, ರಾಷ್ಟ್ರಕೂಟರು, ಚಾಲುಕ್ಯರು ಚಕ್ರವರ್ತಿಗಳಾಗಿ ಆಳಿದರೆಂದು ತಿಳಿಸುತ್ತದೆ.[೮]

ನಂದರು

ಭಾರತೀಯ ಇತಿಹಾಸದ ಆರಂಭ ಘಟ್ಟದಲ್ಲಿ ನಂದರದು ಪ್ರಮುಖ ಸ್ಥಾನ. ಚಾಣಕ್ಯನಿಂದಾಗಿ ಈ ನಂದರು ಪ್ರಭುತ್ವ ಕಳೆದುಕೊಳ್ಳುತ್ತಾರೆ. ಉತ್ತರ ಭಾರತದಲ್ಲಿ ಚಕ್ರವರ್ತಿಗಳಾಗಿದ್ದ ನಂದವಂಶದವರ ಒಡೆತನಕ್ಕೆ ಬಳ್ಳಾರಿ ಜಿಲ್ಲೆ ಒಳಪಟ್ಟಿತ್ತೆಂದು ೧೨ನೆಯ ಶತಮಾನದ ಶಾಸನಗಳು ನಿರೂಪಿಸುತ್ತವೆ

---

೦೭. ಕೆ. ಆನಂತರಾಮರಾವ್ (ಪ್ರ.ಸಂ.) : ಸುವರ್ಣ ಕರ್ನಾಟಕ ದರ್ಶನ, ಪುಟ – ೩೩

೦೮. ಜೆ.ಎಂ.ನಾಗಯ್ಯ : ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ, ಪುಟ – ೨೪

ಅಲ್ಲದೆ ಕ್ರಿ.ಶ. ೧೫೦೦ ರಲ್ಲಿ ರಚಿಸಲ್ಪಟ್ಟಿರುವ ಸಿಂಗಿರಾಜ ಪುರಾಣದಲ್ಲಿ[೯] ಪಟ್ಟದಕಲ್ಲಿನ ಇತಿಹಾಸವನ್ನು ತಿಳಿಸುತ್ತ ಇಲ್ಲಿ ಪಟ್ಟ ಹೊಂದಿದ ರಾಜವಂಶಗಳ ಯಾದಿಯನ್ನು ಹೀಗೆ ಕೊಡಲಾಗಿದೆ. ನಂದರು, ಗುಪ್ತರು, ಮೌರ್ಯರು, ಕದಂಬರು, ಚಾಲುಕ್ಯರು ಪಟ್ಟಹೊಂದಿದ ಪಟ್ಟದಕಲ್ಲು ಎಂದು ಹೇಳುವುದರಿಂದ ಉತ್ತರ ಭಾರತದ ಚಕ್ರವರ್ತಿಗಳಾದ, ನಂದರು, ಮೌರ್ಯರು ಮತ್ತು ಗುಪ್ತರ ಆಳ್ವಿಕೆಗೆ ಉತ್ತರ ಕರ್ನಾಟಕದ ಭಾಗ ಒಳಗೊಂಡಿದ್ದು ಬಳ್ಳಾರಿ ಜಿಲ್ಲೆ ಇದಕ್ಕೆ ಹೊರತಾಗಿಲ್ಲವೆಂದು ಹೇಳಬಹುದು. ನಂದರ ಆಳ್ವಿಕೆಯನ್ನು ನಿರೂಪಿಸುವ ಶಾಸನಗಳು ಇಲ್ಲಿ ಲಭ್ಯವಾಗಿಲ್ಲ. ಆದರೆ ಪರಂಪರಾಗತವಾಗಿ ಬಂದ ನಂಬಿಕೆಯನ್ನು ಆಧರಿಸಿ ನಂದರ ಆಳ್ವಿಕೆಗೆ ಈ ಜಿಲ್ಲೆ ಒಳಪಟ್ಟಿತ್ತೆಂದು[೧೦] ಹೇಳುತ್ತಾರೆ. ಈ ನಂದರ ಕಲಾ ಕೊಡುಗೆ ಸ್ಪಷ್ಟವಾಗಿ ಲಭ್ಯವಾಗಿಲ್ಲ ಮತ್ತು ನಂದರ ಆಳ್ವಿಕೆಯ ಬಗೆಗೆ ವಿಭಿನ್ನ ಅಭಿಪ್ರಾಯಗಳಿವೆ. ಪುರಾವೆ ಸಮೇತ ಈ ಬಳ್ಳಾರಿ ಜಿಲ್ಲೆಯನ್ನು ಪ್ರಥಮವಾಗಿ ಆಳಿದ ಸಾಮ್ರಾಜ್ಯ 'ಮೌರ್ಯರು' ಎಂದು ಹಲವು ವಿದ್ವಾಂಸರ ಹೇಳಿಕೆಯಾಗಿದೆ.

ಮೌರ್ಯರು

ಕ್ರಿ.ಪೂ. ೩ನೆಯ ಶತಮಾನದಲ್ಲಿ ಉತ್ತರ ಭಾರತದಲ್ಲಿ ಅಧಿಕಾರ ಹೊಂದಿದ್ದ ಮೌರ್ಯರು ದಕ್ಷಿಣಭಾರತದ ಕೆಲವು ಪ್ರದೇಶಗಳ ಮೇಲೆ ತಮ್ಮ ಆಧಿಪತ್ಯವನ್ನು ಸ್ಥಾಪಿಸಿದರು ಎನ್ನಲಾಗುತ್ತದೆ. ಈ ಜಿಲ್ಲೆಯಲ್ಲಿ ಅವರು ಆಳ್ವಿಕೆ ಮಾಡಿದರೆಂಬುದು ಅವರ ಶಾಸನಗಳಿಂದ ತಿಳಿಯುತ್ತದೆ.[೧೧] ಬ್ರಹ್ಮಗಿರಿ ಮತ್ತು ಚಂದ್ರವಳ್ಳಿಯ ಉತ್ಖನನದಲ್ಲಿ ಕೆಲವು ಕಟ್ಟಡ ಅವಶೇಷಗಳು[೧೨] ದೊರಕಿವೆ ಎನ್ನಲಾಗಿದೆ. ಮತ್ತು ಇವರ ಕಲೆ ಬಗೆಗೆ ಗ್ರೀಕ್ ರಾಯಭಾರಿ ಮೆಗಾಸ್ಥನೀಸನು ತುಂಬಾ ಹೊಗಳಿದ್ದಾನೆ. ಇವರ ಕಾಲದಲ್ಲಿ ಕಟ್ಟಡಗಳನ್ನು ಗ್ರೀಕ್ ಮತ್ತು ಪರ್ಷಿಯನ್ ಮಾದರಿಯಲ್ಲಿ ಕಟ್ಟಲಾಗಿ, ಪಾಟಲೀಪುತ್ರದಲ್ಲಿದ್ದ ಮರದಿಂದ ರಚಿಸಲ್ಪಟ್ಟಿದೆ. ಅರಮನೆಯು ಪರ್ಷಿಯನ್ ಮಾದರಿಯಲ್ಲಿದೆ[೧೩] ಎನ್ನಲಾಗಿದೆ. ಈ ಸಾಮ್ರಾಜ್ಯದಲ್ಲಿ ಆಶೋಕನು ಪ್ರಬುದ್ಧ ರಾಜನಾಗಿದ್ದನು, ೩೭ ವರ್ಷಗಳವರೆಗೆ ರಾಜ್ಯಭಾರ ಮಾಡಿದನು ಎನ್ನಲಾಗುತ್ತದೆ.

ಮೌರ್ಯರ ಶೈಲಿ ಗ್ರೀಕ್‌ರ ಶೈಲಿಯಲ್ಲಿ ನಿರ್ಮಾಣವಾಗಿದ್ದವು ಎಂದಾಗ ಈ ಮೌರ್ಯರ ಶೈಲಿ ತುಂಬಾ ಕಲಾತ್ಮಕತೆಯಿಂದ ಕೂಡಿರಬೇಕು. ಏಕೆಂದರೆ ಗ್ರೀಕರ ಶೈಲಿಯು ಒಂದು ವಿಶೇಷತೆಯಿಂದ ಕೂಡಿದ ಕಲೆಯಾಗಿತ್ತು. ಅದರಲ್ಲಿಯೂ ಗ್ರೀಕ್ ವಾಸ್ತುಕಲೆಗೆ ವಿಶೇಷಸ್ಥಾನವನ್ನು ಕೊಟ್ಟಿದೆ. ಗ್ರೀಕ್ ಕ್ರಿ.ಪೂ. ೩೦೦೦ ದಿಂದಲೂ ಕಲೆಯ ಬೆಳವಣಿಗೆಯೂ ಹಂತ-ಹಂತವಾಗಿ ಬೆಳವಣಿಗೆಯನ್ನು ಪರಿಶೋಧಿಸಲಾಗಿದೆ. ಕ್ರಿ.ಪೂ. ೫ನೇ ಶತಮಾನದ ಮಧ್ಯಭಾಗದಲ್ಲಿ ಸೃಜನಾತ್ಮಕ

---

೦೯. ಸಿಂಗಿರಾಜ : ಬಸವರಾಜ ಚಾರಿತ್ರ (ಸಿಂಗಿರಾಜ ಪುರಾಣ) ಮೈಸೂರು, ಪುಟ – ೪೩

೧೦. ಜೆ.ಎಂ. ನಾಗಯ್ಯ : ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ, ಪುಟ – ೨೫

೧೧. ದೇವರಕೊಂಡಾರೆಡ್ಡಿ (ಸಂ.) : ೧೯೯೮ರ ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ) ೧, ಪುಟ – ೧೨೪-೧೨೬

೧೨. ಡಾ. ಎಂ.ಕೊಟ್ರೇಶ್ : ಬಳ್ಳಾರಿ ಜಿಲ್ಲೆಯ ಕೋಟೆಗಳು, ಪುಟ – ೨

೧೩. ಡಾ. ಎನ್. ಆರ್. ಅಪರಂಜಿ : ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ, ಪುಟ – ೫೮

ಕಲಾಕೃತಿಗಳು ರಚನೆಯಾದವು ಫಾಯಿಯನ್ ಅಟಿಕ್‌ಕಲೆಗಳು ಈ ಕಾಲದ ಹೆಚ್ಚು ಪ್ರತಿಭಾಪೂರ್ಣ ಕಲೆಗಳು (Phidian Art) ಫಿಡಿಯನ್ ಕಲೆ ಅತ್ಯಂತ ಪ್ರಭಾವಶೈಲಿಯಾಗಿ ಬೆಳೆದಿತ್ತು. ಕ್ರಮೇಣ ಅಟಿಕ್ ಕಲೆಯಲ್ಲಿ ಅಯೋನಿಯನ್ ಹಾಗೂ ಪಿಲೋಪೊನೋಸ್ ಶೈಲಿಗಳ ಪ್ರಭಾವವು ಸಮ್ಮಿಶ್ರಗೊಂಡಿದ್ದು ಕಂಡು ಬರುವುದು. ಡೊರಿಕ್ ಚರ್ಚ್, ಪಾರ್ಥೇನಿಯಂ ಚರ್ಚ್, ಓಲಂಪಿಯಾ ನಗರದ ಜೆಸಸ್ ಚರ್ಚ್ ಇತ್ಯಾದಿ ಕಟ್ಟಡಗಳ ವಾಸ್ತುಶಿಲ್ಪವು ಫಿಡಿಯನ್ ಕಲೆಯಲ್ಲಿ ಗ್ರೀಕರ ವಾಸ್ತುಕಲಾ ಕೊಡುಗೆಯಾಗಿದೆ.

ವಾಸ್ತುವಿನ ಹಿಂಬದಿ, ಮುಂಬದಿಗಳು ಹೊರ ನೋಟಕ್ಕೆ ಸೋಗಸನ್ನು ಕೊಡುವ ಈ ಭಾಗವನ್ನು ತ್ರಿಭುಜ ಮುಂಭಿತ್ತಿ (Pediment) ಎಂದು ಕರೆಯುತ್ತಾರೆ. ಈ ತ್ರಿಕೋನಾಕಾರಕ್ಕೆ ಒಪ್ಪುವಂತೆ ಭಿತ್ತಿಶಿಲ್ಪಗಳನ್ನು ನಿರ್ಮಿಸುತ್ತಿದ್ದರು. ಇದು ಅಲ್ಲದೇ ಹಲವು ಮಾದರಿಯ ಪಾತ್ರೆಗಳು, ಭಿತ್ತಿಚಿತ್ರಗಳು, ಮೂರ್ತಿಶಿಲ್ಪ ಹಾಗೂ ಸೂಕ್ಷ್ಮರೇಖೆಗಳ ಕೆತ್ತನೆಯ ಮತ್ತು ಜಾಮಿತಿಕ ಕಾಲ (Geometric Period) ೯ನೇ ಶತಮಾನದ ಪೂರ್ವದಲ್ಲಿ ಹಲವಾರು ರೂಪದ ಕಲಾತ್ಮಕ ಪಾತ್ರೆಗಳು ರಚನೆಯಾದವು. ಪಾತ್ರೆಯಲ್ಲಿ ಜಾಮಿತಿಕ ನಕ್ಷೆಗಳು, ಸೆರಾಮಿಕ್ ಶೈಲಿಯ ಮಾನವನ ಮತ್ತು ಪ್ರಾಣಿಯ ಹಾಗೂ ಜಾಮಿತಿಕ ನಕ್ಷೆಗಳನ್ನು ಅಳವಡಿಸಿ ನಿರೂಪಿಸಿದ ಕೃತಿಗಳಿವೆ. ಕಂಚಿನಿಂದ ರಚಿತವಾದ ಸೈನಿಕರ ವಿಗ್ರಹ, ಬೇಟೆಯ ವಿಗ್ರಹ, ಕಬ್ಬಿಣ ಲೋಹದಿಂದ ರಚಿಸಿದ ಪಕ್ಷಿಯ ವಿಗ್ರಹ ಈ ಜಾಮಿತಿಕ ಕಾಲದ ಪ್ರಮುಖ ವಿಗ್ರಹಗಳಾಗಿವೆ.

ಗ್ರೀಕ್ ಎಂದರೆ ಕಲೆ ಎನ್ನುವಷ್ಟರ ಮಟ್ಟಿಗೆ ಪ್ರವೀಣರಾಗಿದ್ದರು. ಈ ಗ್ರೀಕರು ವಾಸ್ತುಶಿಲ್ಪ, ಮೂರ್ತಿಶಿಲ್ಪ ಮಾತ್ರವಾಗಿರದೇ ವರ್ಣ ಚಿತ್ರಗಳಲ್ಲಿಯೂ ಪ್ರವೀಣ ಹೊಂದಿದ್ದರು. ಕುದುರೆ ಸವಾರಿ, ಸಿಂಹದೊಡನೆ ಕಾದಾಡುವ ಮನುಷ್ಯರ ಚಿತ್ರ ಹಾಗೂ ಕ್ರಿ.ಪೂ. ೪೯೦ ರಲ್ಲಿ ರಚಿಸಿದ ಲೆಪಿತ್ ಮತ್ತು ಸಿರಾಶ್ವಾ ಚಿತ್ರ ಇವು ಗ್ರೀಕರ ಪ್ರಮುಖವಾದ ವರ್ಣಕಲಾಕೃತಿಗಳಾಗಿವೆ. ಚಿತ್ರಗಳಲ್ಲಿ ಮೀಸೆರೂಪದ ಕಣ್ಣುಗಳ ರಚನೆಯು ವೈಶಿಷ್ಟ್ಯವಾಗಿದೆ. ಚಿತ್ರಗಳ ಬಾಹ್ಯರೂಪ ಕೆಂಪು ಮತ್ತು ಕಪ್ಪು ಬಣ್ಣಗಳ ಲೇಪನದಿಂದ ರಚಿಸಲ್ಪಟ್ಟಿದೆ. ವಿಶ್ವವಿಖ್ಯಾತಿ ಪಡೆದ ಸಾರಾನಾಥ ಸ್ತಂಭದಲ್ಲಿ ಸಿಂಹ ಶರೀರದ ಕೆತ್ತನೆಯ ವಿನ್ಯಾಸದಲ್ಲಿ ಗ್ರೀಕ್ ಮತ್ತು ಪರ್ಶಿಯನ್ ಪ್ರಭಾವವನ್ನು ಕಾಣಬಹುದು. ಇಂತಹ ಗ್ರೀಕ್ ಶೈಲಿಯಲ್ಲಿ ಮೌರ್‍ಯರ ವಾಸ್ತು ಶೈಲಿ ಇತ್ತು ಎಂದಾಗ ಮೌರ್ಯರ ವಾಸ್ತುಶೈಲಿಯಲ್ಲಿ ಗ್ರೀಕರ ಕಲಾತ್ಮಕತೆ ಇತ್ತು ಎನ್ನಬಹುದು.

ಮೌರ್ಯರ ಕಾಲದಲ್ಲಿ ಕಳಿಂಗ, ಸಾಂಚಿ, ಮಾರ್ಗದ ಹಾಗೂ ಶಿಲ್ಪ ಕಲಾಕೃತಿಗಳು ರಚಿಸಲ್ಪಟ್ಟಿವೆ. ಜಗತ್ಪ್ರಸಿದ್ಧ ಕಲಾವಿಮರ್ಶಕರಾದ ಮೆಗಾಸ್ಥನೀಸ್ ರೋಲ್ಯಾಂಡ್, ಬೆಂಜಿಮಿಯಾ ಇವರ ಅಭಿಪ್ರಾಯದಂತೆ, ಅಲ್ಲಲ್ಲಿ ಮೌರ್ಯರ ಕಲಾಕೃತಿಗಳಿಗೆ ವಿಶೇಷವಾಗಿ ಮೌರ್ಯರ ಕಾಲದಲ್ಲಿ ಚಂದ್ರಗುಪ್ತ, ಬಿಂದುಸಾರ ಹಾಗೂ ಆಶೋಕ ಈ ಸಾಮ್ರಾಟರ ಕಾಲದಲ್ಲಿ ಲಲಿತಕಲೆಗಳು ಪ್ರಜ್ವಲಿತವಾಗಿ ಬೆಳೆದಿವೆ. ಕ್ರಿ.ಪೂ. ೨೫೦ರಲ್ಲಿ ಸಾರಾನಾಥವು ಮೌರ್ಯ ಸಾಮ್ರಾಟರ

ರಾಜಧಾನಿಯಾಗಿತ್ತು. ನಾಲ್ಕು ಸಿಂಹದ ಮುಖಗಳಿಂದ ಕೆತ್ತಲ್ಪಟ್ಟ ಕಲಾತ್ಮಕ ಸ್ತಂಭವು ಇದಾಗಿದೆ. ಇದು ಒಂದು ಕಲಾಕೃತಿಯಾಗಿದೆ. ಇದು ಸುಮಾರು ೭ ಅಡಿ ಎತ್ತರವಿದೆ. ಚುನಾರ ಎಂಬ ಉಸುಕು, ಕಲ್ಲು ಮಾಧ್ಯಮದಲ್ಲಿ ಕೆತ್ತಲಾಗಿದೆ. ಇಂದಿಗೂ ಇದು ನಮ್ಮ ದೇಶದ ರಾಜಮುದ್ರೆಯಾಗಿದೆ. ಈ ಕಲಾಕೃತಿಯಲ್ಲಿ ಸಿಂಹದ ನೀಳವಾದ ಕಣ್ಣು, ನೈಜಕೂದಲೂ, ನಯವಾದ ಉಗುರು ಜೀವಂತಿಕೆ ತುಂಬಿದೆ. ಇದರ ಕಲೆಯು ಧಾರ್ಮಿಕ ಹಿನ್ನೆಲೆ ಹೊಂದಿದಂಥದ್ದಾಗಿದೆ. ಆದ್ದರಿಂದ ಬಳ್ಳಾರಿ ಜಿಲ್ಲೆ ಇವರ ವಾಸ್ತು, ಮೂರ್ತಿಶಿಲ್ಪ ಕಲಾಕೊಡುಗೆಯಾಗಿದೆ ಎನ್ನಬಹುದು. ಕ್ರಮೇಣ ಇಂತಹ ಕಲೆ ನಾಶ ಹೊಂದಿರಬೇಕು.

ಶಾತವಾಹನ

ಮೌರ್ಯ ಸಾಮ್ರಾಜ್ಯ ಪತನವಾದ ನಂತರ ಭಾರತದಲ್ಲಿ ಎರಡು ಸಾಮ್ರಾಜ್ಯಗಳು ಪ್ರಮುಖವಾಗಿ ಕಾಣಿಸಿದವು. ಫೀಡೀಸ್ ಮತ್ತು ಶಾತವಾಹನರು ಕ್ರಿ. ಪೂ. ೨೨೦ರಿಂದ ಸುಮಾರು ಕ್ರಿ.ಶ. ೨೩೦ರವರೆಗೆ ಅಂದರೆ ಸುಮಾರು ೪೫೦ ವರ್ಷಗಳ ದೀರ್ಘಕಾಲ ರಾಜ್ಯವಾಳಿದ್ದರೂ, ಕೊನೆಯ ಶಾತವಾಹನ ಅರಸರ ಆಳ್ವಿಕೆಯ ಬಗ್ಗೆ ಬಳ್ಳಾರಿ ಜಿಲ್ಲೆಯ 'ಪುಲುಮಾಯಿ' ಶಾಸನದಿಂದ ಗೊತ್ತಾಗುವುದು.[೧೪] ಪುಲುಮಾಯಿ ಎಂಬಾತನು ಶಾತವಾಹನರ ಪ್ರಮುಖ ಅರಸನಾಗಿದ್ದನು. ಚಿನ್ನ, ಬೆಳ್ಳಿಯಿಂದ ತಯಾರಿಸಿದ ನಾಣ್ಯಗಳ ಚಲಾವಣೆಯನ್ನು ನೋಡಿದಾಗ ಕುಶಲ ಕಲೆಗಾರರಿಗೆ ಶಾತವಾಹನರು ಸಾಕಷ್ಟು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದರು. ಕುಶಲ ಕಲೆಗಾರಿಕೆ ಅದರಲ್ಲೂ ಬಂಗಾರ, ಬೆಳ್ಳಿ ಕುಶಲಗಾರಿಕೆಯ ವಿನ್ಯಾಸವು ಚಿತ್ರಕಲೆಯ ಅಂಗವೇ ಆಗಿದೆ. ಈ ಒಂದು ಅಂಗವು ಬಿದರಿಕಲೆ ಮತ್ತು ಹುದುಗು ಕಲೆಗಳು ಬಂಗಾರ ಬೆಳ್ಳಿ ಆಭರಣದ ನಾಣ್ಯದ ಕುಸುರಿ ಕೆಲಸದಿಂದಲೇ ಪ್ರಭಾವಿತವಾಗಿರುವಂತಹದ್ದಾಗಿದೆ. ಇದಲ್ಲದೇ ಶಾತವಾಹನರ ಸಾಮ್ರಾಜ್ಯವು ಕಲೆ ಮತ್ತು ಭಾರತೀಯ ಸಂಸ್ಕೃತಿಯ ಬೀಡಾಗಿತ್ತು. ನೂರಾರು ದೇವಾಲಯಗಳು ಹಾಗೂ ಕೆಲವು ಗುಹಾಂತರ ದೇವಾಲಯಗಳು ಶಾತವಾಹನರ ಪ್ರೋತ್ಸಾಹದಿಂದ ನಿರ್ಮಿತವಾದವು.

ಕದಂಬರು

ಬಳ್ಳಾರಿ ಜಿಲ್ಲೆಯಲ್ಲಿ ಕದಂಬ ವಂಶದವರ ಆಳ್ವಿಕೆ ಬಹಳ ಹಿಂದಿನಿಂದಲೇ ಪ್ರಾರಂಭವಾಯಿತು ಎನ್ನಲಾಗುತ್ತದೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕೋಗಳಿ ೫೦೦ ವಿಭಾಗವನ್ನು ಕದಂಬ ವಂಶದ ಮಹಾಮಂಡಲೇಶ್ವರರು ಆಳುತ್ತಿದ್ದರು ಎನ್ನಲಾಗುತ್ತದೆ. ಕದಂಬರು ಕರ್ನಾಟಕದ ಪ್ರಥಮ ಕನ್ನಡಿಗ ಚಕ್ರವರ್ತಿಗಳೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರೆ ಹಾನುಗಲ್ಲಿನ ಕದಂಬರು, ಗೋವೆಯ ಕದಂಬರು, ಬಯಲುವಾಡಿನ ಕದಂಬರು, ಕರಡಿಕಲ್ಲಿನ ಕದಂಬರು, ಚಂದ್ರವಾರದ

೧೪. ಕುಂಬಾಸ : ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ, ಪು – ೧

ಕದಂಬರು, ಹಗರಿಬೊಮ್ಮನಹಳ್ಳಿಯ ಕೋಗಳಿ ನಾಡಿನ ಕದಂಬರು ಎಂದು ಗುರ್ತಿಸಿದ್ದಾರೆ. ಈ ಕೋಗಳಿ ನಾಡಿನ ಕದಂಬರು ೨೦೦ ವರ್ಷಗಳಿಗೂ ಮೇಲ್ಪಟ್ಟು ಆಳಿ ಈ ಜಿಲ್ಲೆಯ ಸಂಸ್ಕೃತಿಗೆ ತಮ್ಮದೇ ಆದ ಕಲಾ ಕಾಣಿಕೆ ನೀಡಿದ್ದಾರೆ ಎನ್ನಲಾಗುತ್ತದೆ. ಇವರು ಕೂಡ ಶಿಲ್ಪಕಲೆ ಮತ್ತು ವಾಸ್ತುಶಿಲ್ಪದಲ್ಲಿ ಪ್ರವೀಣ ಹೊಂದಿದ್ದರು. ಇವರ ಒಂದು ಕಲೆಯ ಪ್ರಭಾವವು ಬಳ್ಳಾರಿ ಜಿಲ್ಲೆಯನ್ನು ಕಂಡಿದೆ ಎನ್ನಬಹುದು.

ಗುಪ್ತರು

ಗುಪ್ತರು ಉತ್ತರ ಭಾರತದಲ್ಲಿ ಚಕ್ರವರ್ತಿಗಳಾಗಿದ್ದು, ಗುಪ್ತರ ಆಳ್ವಿಕೆಗೆ ಕೆಲವು ವರ್ಷಗಳ ಕಾಲವಾದರೂ ಈ ಬಳ್ಳಾರಿ ಜಿಲ್ಲೆ ಒಳಪಟ್ಟಿತು. ಕೋಲೂರಿನ ಶಾಸನದಲ್ಲಿ ಬಳ್ಳಾರಿ ಪ್ರದೇಶವನ್ನು ಗುಪ್ತರು ಆಳಿದರೆಂದು ಹೇಳಿರುವುದನ್ನು ಹಿಂದೆಯೇ ನೋಡಬಹುದು. ಸಮುದ್ರಗುಪ್ತನು ಕ್ರಿ.ಶ. ೩೪೦ರಲ್ಲಿ ದಕ್ಷಿಣ ಭಾರತಕ್ಕೆ ದಂಡಯಾತ್ರೆ ಕೈಗೊಂಡು ಕಂಚಿಯ ಎಷ್ಣಗೋಪನನ್ನು ಸೋಲಿಸಿದ ವಿವರ ಅಲಹಾಬಾದ ಸ್ತಂಭಶಾಸನದಲ್ಲಿದೆ. ದಕ್ಷಿಣ ಭಾರತವನ್ನು ಸೋಲಿಸಿದ ಸಮುದ್ರಗುಪ್ತನಿಗೆ ಎಲ್ಲರೂ ಅಧೀನರಾಗಿ ಇರಬೇಕಾಯಿತು. ಇದಕ್ಕೆ ಬಳ್ಳಾರಿ ಪ್ರದೇಶವೇನು ಹೊರತಾಗಿರಲಿಲ್ಲ. ಈ ಸಂದರ್ಭದಲ್ಲಿ ಸಮುದ್ರಗುಪ್ತನು ತನ್ನ ವಂಶಸ್ಥರನ್ನು ಈ ಭಾಗಕ್ಕೆ ಒಡೆಯರನ್ನಾಗಲೇ ನೇಮಿಸಿರಬೇಕು. ಹೀಗೆ ನೇಮಿಸಲ್ಪಟ್ಟ ಗುಪ್ತವಂಶಕ್ಕೆ ಸಂಬಂಧಪಟ್ಟ ಶಾಖೆಯೊಂದು ಬಳ್ಳಾರಿ ಜಿಲ್ಲೆಯ ಗಡಿಭಾಗದಲ್ಲಿ ಆಳುತ್ತಿದ್ದುದಾಗಿ ಶಾಸನಗಳು ಹೇಳುತ್ತವೆ.[೧೫] ಒಟ್ಟಾರೆ ಗುಪ್ತರ ನೇರ ಆಳ್ವಿಕೆಯನ್ನು ಕೆಲವು ವರ್ಷಗಳ ಮಟ್ಟಿಗಾದರೂ ಬಳ್ಳಾರಿ ಜಿಲ್ಲೆಯು ಕಂಡಿತ್ತೆಂಬುದು ಮೇಲಿನ ಅಂಶದಿಂದ ತಿಳಿಯುತ್ತದೆ. ಇವರ ಕಾಲವನ್ನು 'ಸುವರ್ಣಯುಗ'ವೆಂದು ಕರೆಯುತ್ತಾರೆ. ಇವರ ಕಲೆಗಳಲ್ಲಿ ಚಿತ್ರಕಲಾ ಕೊಡುಗೆ ಅಪಾರವಾದದ್ದು.

ಗುಪ್ತ ಅರಸರು ಪುರಾತನ ಹಿಂದೂ ಶೈಲಿಯ ಕಲೆ ಮತ್ತು ವಾಸ್ತುಶಿಲ್ಪವನ್ನು ಪುನರುಜ್ಜೀವನಗೊಳಿಸಿದರು. ಅವರು ದೇವಸ್ಥಾನಗಳನ್ನು ಕಟ್ಟಿಸಿದರು. ಗುಹೆಗಳನ್ನು ಕೊರೆಯಿಸಿದರು ಮತ್ತು ದೇವರ ಮೂರ್ತಿಗಳನ್ನು ಕೆತ್ತಿಸಿದ್ದರು. ಅಷ್ಟೇ ಅಲ್ಲದೆ ಬುದ್ಧನಿಗೆ ಸಂಬಂಧಿಸಿದ ಜೀವನ ಚರಿತ್ರೆಯ 'ಜಾತಕ ಕಥೆ' ಗಳನ್ನು ಚಿತ್ರಿಸಲಾಯಿತು. ಇಂತಹ ಭವ್ಯಪರಂಪರೆ ಹೊಂದಿದ ಗುಪ್ತರು ಕ್ರಿ.ಶ. ೧ನೇ ಶತಮಾನದಿಂದ ೮ನೇ ಶತಮಾನದವರೆಗೆ ಆಳಿದ್ದು ಮತ್ತು ಬುದ್ಧನ ಸಂದೇಶವನ್ನು ಯಾತ್ರಾರ್ಥಿಗಳಿಗೆ ಆರುಹುವ ಸಲುವಾಗಿ ಭಿಕ್ಷುಗಳು, ಕಲಾವಿದರನ್ನು ನೇಮಿಸಿಕೊಂಡರು. ಈ ಕಲಾವಿದರು ಗೋಡೆಗಳಲ್ಲಿ ಬುದ್ಧನ ಜೀವನಕ್ಕೆ ಸಂಬಂಧಿಸಿದಂತೆ ಚಿತ್ರಿಸಿದ್ದು ವಿಶ್ವವಿಖ್ಯಾತಿ ಹೊಂದಿದ ಇವರ ಅಜಂತ ಭಿತ್ತಿಚಿತ್ರಗಳು ಗಾಂಧಾರ, ಪಾರಸಿಕ, ಚೀನ, ಸಂಪರ್ಕದ ಸಂಕೀರ್ಣತೆಯನ್ನು ಸೂಚಿಸುತ್ತದೆ. ಇಲ್ಲಿರುವ ೩೦ ಗುಹೆಗಳಲ್ಲಿ ೨ ೯ ೧೦ ೧೫ ೧೬ ೧೯ ೨೬ ಮತ್ತು ೨೯ ಬುದ್ಧ ಚರಿತೆ, ಭಿಕ್ಷುಗಳ ಜೀವನ ಕುರಿತು ಚರಿತ್ರಾತ್ಮಕ ಘಟನೆಗಳು,

೧೫. ಜೆ.ಎಂ. ನಾಗಯ್ಯ : ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ, ಪುಟ – ೨೮

[illegible]

ಪ್ರಕೃತಿ ಸೌಂದರ್ಯವನ್ನು ಸಾರುವ ಮೃಗ, ಪಕ್ಷಿ, ವೃಕ್ಷ ಮುಂತಾದವು ವರ್ಣಚಿತ್ರಗಳ ವಸ್ತು ವಿಷಯವಾಗಿವೆ. ಈ ಗುಪ್ತರ ಮತ್ತೊಂದು ಪ್ರಮುಖ ಶೈಲಿಯೆಂದರೆ ಮಥುರಾ ಶೈಲಿ, ೩ನೆಯ ಶತಮಾನದಿಂದ ೪ನೆಯ ಶತಮಾನದ ವರೆಗೆ ಮಥುರಾದಲ್ಲಿ ಮರುಳುಗಲ್ಲಿನ ಮಾಧ್ಯಮದಿಂದ ರಚಿತವಾದ ಅನೇಕ ಸುಂದರವಾದ ಬುದ್ಧನ ವಿಗ್ರಹಗಳು ಕಂಡುಬರುವವು.

ಶಿಲ್ಪದಲ್ಲಿ ಆಕೃತಿಗಳ ಕೆತ್ತನೆಯಲ್ಲಿ ವಾಸ್ತವಿಕ ನೀರಿಗೆಗಳನ್ನು ತೋರಿಸದೇ ನೀರಿಗೆಗಳ ರೇಖೆಗಳು ಲಾವಣ್ಯಯುಕ್ತವಾಗಿ ಮೈತುಂಬಾ ಕೆತ್ತಲ್ಪಟ್ಟಿವೆ. ತಲೆಯಲ್ಲಿ ನೈಜರೂಪದ ಕೇಶರಾಶಿ ಹಾಗೂ ವಿವಿಧ ಸ್ವರೂಪಗಳ ಕುಳಿತ, ನಿಂತ ಆಕೃತಿಗಳ ಬುದ್ಧನ ವಿಗ್ರಹಗಳಲ್ಲಿ ಕಂಡು ಬರುತ್ತವೆ. ಮುಖದಲ್ಲಿ ಪ್ರಶಾಂತತೆ, ತಲೆಯಲ್ಲಿ ಗುಂಗರು ಕೂದಲು, ಗಂಭೀರತೆ, ಎಡಗೈಯಲ್ಲಿ ಶೃಂಗರಿಸಲ್ಪಟ್ಟ ಬಟ್ಟೆಯ ಅಂಚುಗಳು, ತಲೆಯ ಹಿಂಭಾಗದ ಪ್ರಭಾವಳಿ, ಇವು ಬುದ್ಧನ ಶಿಲ್ಪಕ್ಕೆ ಒಂದು ಹೊಸ ಸೌಂದರ್ಯವನ್ನು ರೂಪಿಸಿವೆ. ಇಂತಹ ಒಂದು ಕಲಾಶೈಲಿ ಇರುವಂತಹ ಸಾಮ್ರಾಜ್ಯವಾದ ಬಳ್ಳಾರಿ ಕಲೆ ತಳಹದಿಗೆ ಸೇರ್ಪಡೆಯಾಗುತ್ತದೆ. ಬುದ್ಧನಿಗೆ ಸಂಬಂಧಿಸಿದಂತೆ ಹಲವು ವಿಗ್ರಹಗಳನ್ನು ಬಳ್ಳಾರಿ ಸುತ್ತಮುತ್ತಲೂ ಕಾಣುತ್ತೇವೆ. ಆದರೆ ಯಾವ ಕಾಲಮಾನದ್ದೆಂದು ನಿರ್ಧರಿಸುವುದು ಕಷ್ಟಸಾಧ್ಯವಾಗಿದೆ. ಗುಪ್ತರ ಇಂತಹ ಕಲಾ ನೈಪುಣ್ಯ ಹೊಂದಿದ ಕಲೆಗಾರಿಕೆ ಲಕ್ಷಣ ವಿಗ್ರಹಗಳು ಕಾಣಸಿಗುತ್ತವೆ.

ರಾಷ್ಟ್ರಕೂಟರು

ರಾಷ್ಟ್ರಕೂಟರ ಆಳ್ವಿಕೆಗೆ ಬಳ್ಳಾರಿ ಜಿಲ್ಲೆಯೂ ಒಳಪಟ್ಟಿತ್ತು. ಈ ವಂಶದ ಚಕ್ರವರ್ತಿಗಳು ಬಳ್ಳಾರಿ ಜಿಲ್ಲೆಯಲ್ಲಿ ದೇವಾಲಯಗಳಿಗೆ ದತ್ತಿ ದಾನವನ್ನು ಕೊಟ್ಟಿದ್ದಾರೆ. ಇಲ್ಲಿ ದೊರೆತ ಹಲವಾರು ಶಾಸನಗಳು ಈ ವಿಷಯವನ್ನು ನಿರೂಪಿಸುತ್ತವೆ. ರಾಷ್ಟ್ರಕೂಟ ಅರಸರು ಅನೇಕ ದೇವಾಲಯಗಳನ್ನು, ಗುಹಾಲಯಗಳನ್ನು ನಿರ್ಮಿಸಿದ್ದಾರೆ. ಒಂದನೆಯ ಕೃಷ್ಣನು ಕಟ್ಟಿಸಿದ ಎಲ್ಲೋರದ ಕೈಲಾಸನಾಥ ಮಂದಿರ ಏಕಶಿಲೆಯ ಅದ್ಭುತ ರಚನೆ. ೧೦೦ ಅಡಿ ಎತ್ತರದ ಬೃಹತ್ ಕಲ್ಲಿನ ಬಂಡೆಯನ್ನು ಕೊರೆದು ದೇವಾಲಯವನ್ನು ಕಟ್ಟಲಾಗಿದೆ. ಈಗ ಇದು ಮಹಾರಾಷ್ಟ್ರದಲ್ಲಿದೆ. ಅಲ್ಲಿಯೇ ಪ್ರಸಿದ್ಧ ದಶಾವತಾರ ಗುಹಾಲಯವಿದೆ. ಮುಂಬೈ ಬಳಿಯ ಎಲಿಫೆಂಟಾದ ಗುಹೆಗಳಲ್ಲಿಯ ಶಿಲ್ಪಕಲೆಯು ರಾಷ್ಟ್ರಕೂಟರ ಕಾಲದ ಶಿಲ್ಪಕಲೆಗೆ ಮುಕುಟಪ್ರಾಯವಾಗಿದೆ. ಅರ್ಧನಾರೀಶ್ವರ, ಮಹೇಶ (ತ್ರಿಮೂರ್ತಿ) ವಿಗ್ರಹಗಳನ್ನು ಸೊಗಸಾಗಿ ಕೆತ್ತಲಾಗಿದೆ. ರಾಯಚೂರು ಜಿಲ್ಲೆಯ ಶಿರವಾಳದಲ್ಲಿ ಇವರ ಹಲವು ದೇವಾಲಯಗಳಿವೆ. ಪಟ್ಟದಕಲ್ಲಿನಲ್ಲಿ ಸುಂದರ ಜಿನಾಲಯವಿದೆ.

ಇವರ ಕಲೆ ವಿಶ್ವವಿಖ್ಯಾತಿ ಪಡೆದಿದೆ. ಇಂತಹ ಒಂದು ಕಲೆಯನ್ನು ಬಳ್ಳಾರಿ ಜಿಲ್ಲೆಯ ಹಲವು ಪ್ರದೇಶಗಳು ಕಂಡಿವೆ. ರಾಷ್ಟ್ರಕೂಟರ ಸಾಮ್ರಾಜ್ಯಕ್ಕೆ ಸೇರಿದ ಇಮ್ಮಡಿಕೃಷ್ಣನು ಸಂಡೂರಿನ ಸಮೀಪವಿರುವ ಕುಮಾರಸ್ವಾಮಿ ದೇವರಿಗೆ ದತ್ತಿಬಿಟ್ಟುದನ್ನು ಸಂಡೂರಿನ ಶಾಸನ ತಿಳಿಸುತ್ತದೆ.

[illegible]

[illegible]

[illegible]

ಮತ್ತು ಪಾರ್ವತಿದೇವಾಲಯವು ಅತ್ಯಂತ ಪ್ರಾಚೀನವಾದುದು. ಇದನ್ನು ಪೂರ್ವದ ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಿಸಿದ್ದೆಂಬ ಅಭಿಪ್ರಾಯವಿದೆ. ಇದು ವಿಮಾನಶೈಲಿಯಲ್ಲಿದೆ. ಇದು ಸುಮಾರು ಆರನೆಯ ಶತಮಾನದ ಮಧ್ಯ ಅವಧಿ ಎನ್ನಲಾಗುತ್ತದೆ. ಮತ್ತು ಕುಡುತಿನಿ ಶಾಸನ ಮೂರನೆಯ ಕೃಷ್ಣನು ದೇಕಮ್ಮ ದೇವಾಲಯಕ್ಕೆ ಇದ್ದ ದತ್ತಿಯನ್ನು ನವೀಕರಿಸಿದುದನ್ನು ತಿಳಿಸುತ್ತದೆ. ಮಹಾಸಾಮಂತನಾದ ಸಿಂಧ ವಂಶದ ಅರಿಬಲ್ಲದಾಗ್ರನು ಕುರುಗೋಡು ೩೦೦ ಮಹಾಜನರು ಇದ್ದು ದೇಕಮ್ಮನ ದೇಗುಲಕ್ಕೆ ಕುರುಗೋಡಿನ ಹೊಲದಲ್ಲಿ ೬೨ ಮತ್ತರು ಭೂಮಿಯನ್ನು ಬಿಟ್ಟಿರುತ್ತಾರೆ.[೧೬] ಹೀಗೆ ರಾಷ್ಟ್ರಕೂಟ ವಂಶದ ಚಕ್ರವರ್ತಿಗಳು ಬಳ್ಳಾರಿ ಜಿಲ್ಲೆಯ ದೇವಾಲಯ, ಮಠ, ಬಸದಿಗಳಿಗೆ ದತ್ತಿದಾನವನ್ನು ಇತ್ತಿದ್ದಾರೆ ಎನ್ನಲಾಗುತ್ತದೆ.

ಕಲ್ಯಾಣ ಚಾಲುಕ್ಯರು

ಕಲ್ಯಾಣದ ಚಾಲುಕ್ಯರ ಆಳ್ವಿಕೆಯ ಕಾಲವು ಭಾರತ ಚರಿತ್ರೆಯಲ್ಲಿ ಘನವಾದ ಸ್ಥಾನ ಪಡೆದಿದೆ. ಶಿಕ್ಷಣ, ಸಾಹಿತ್ಯ, ಕಲೆಗಳಿಗೆ ಇವರು ವಿಶೇಷ ಪ್ರೋತ್ಸಾಹ ನೀಡಿದರು ಮತ್ತು ಈ ಬಳ್ಳಾರಿ ಜಿಲ್ಲೆಯ ಇವರ ಸಂಬಂಧವನ್ನು ಕುರಿತು ನೋಡಿದಾಗ ಇವರ ಆಳ್ವಿಕೆಯ ಉಲ್ಲೇಖ, ಪುರಾವೆಗಳು ಸಾಕಷ್ಟು ಸಿಗುತ್ತವೆ. ಇಮ್ಮಡಿ ತೈಲಪನ ಶಾಸನಗಳು ಬಳ್ಳಾರಿ ಜಿಲ್ಲೆಯಲ್ಲಿ ಲಭ್ಯವಾಗಿವೆ. ಹಗರಿಬೊಮ್ಮನಹಳ್ಳಿ ಕೋಗಳಿ ೫೦೦ ನ್ನು ಮಹಾಸಾಮಂತ ಆಯ್ತುವರ್ಮನು ಆಳುತ್ತಿದ್ದುದಾಗಿ ಬಾಗಳಿಯ ಶಾಸನದಲ್ಲಿ ಉಲ್ಲೇಖವಿದೆ. ವಿಕ್ರಮಾದಿತ್ಯನ ಒಂದು ಶಾಸನ ಬಳ್ಳಾರಿ ಜಿಲ್ಲೆಯಲ್ಲಿ ದೊರೆತಿದೆ. ಅದು ಹೊಸಪೇಟೆ ತಾಲೂಕಿನ ಗೋನಹಾಳ ಶಾಸನವಾಗಿದೆ. ಜಗದೇಕಮಲ್ಲ ಜಯಸಿಂಹನು ಕತ್ತೆಬೆನ್ನೂರು ಆಳ್ವಿಕೆ, ಬಳ್ಳಾರಿ ತಾಲೂಕಿನ ಒರುವಾಯಿ ಶಾಸನದಿಂದ ಜಯಸಿಂಹನ ರಾಣಿ ದೇವಲದೇವಿ ಬಳ್ಳಾರಿ ಜಿಲ್ಲೆಯವಳೆಂದು ಗೊತ್ತಾಗುತ್ತದೆ.[೧೭]

ಕಲ್ಯಾಣದ ಚಾಲುಕ್ಯರ ಕಲೆಯ ಕ್ಷೇತ್ರದಲ್ಲಿ ನೀಡಿದ ಕೊಡುಗೆ ಅಪಾರ. ಇಟಗಿಯ (ಯಲಬುರ್ಗಿ ತಾ||) ಖ್ಯಾತ ಮಹಾದೇವ ದೇವಾಲಯ, ಲಕ್ಕುಂಡಿಯ ಕಾಶಿವಿಶ್ವೇಶ್ವರ ಮಂದಿರ ಹಾಗೂ ಬ್ರಹ್ಮಜಿನಾಲಯ (ಅತ್ತಿಮಬ್ಬೆಯ ರಚನೆ), ಗದಗಿನ ತ್ರಿಕೂಟೇಶ್ವರ, ಡಂಬಳದ ದೊಡ್ಡ ಬಸಪ್ಪ ದೇವಾಲಯ, ಕುರುವತ್ತಿಯ ಮಲ್ಲಿಕಾರ್ಜುನ ಮಂದಿರ, ಬಾಗಳಿ ಹಾಗೂ ಬಳ್ಳಿಗಾವೆಯ ಮಂದಿರಗಳು ಇವರ ಕಾಲದ ವಾಸ್ತುಗಳು. ಬಳಪದ ಕಲ್ಲನ್ನು ಬಳಸಿ ದುಂಡಾದ ಕಂಬಗಳನ್ನೂ ಕಲಾ, ಕುಸುರಿನ ಸುಂದರ ಮೂರ್ತಿಗಳನ್ನು ಇವರು ರಚಿಸಿದ್ದರು. ಇವರ ಹಲವಾರು ದೇವಾಲಯಗಳಲ್ಲಿ ನೃತ್ಯ, ಸಂಗೀತ, ಆಭರಣ, ಕೃಷಿ ಮುಂತಾದ ವಿಷಯಗಳ ವಿವರ 'ಮಾನಸೋಲ್ಲಾಸ' ಗ್ರಂಥದಲ್ಲಿದೆ.

ಇಂತಹ ಕಲೆಯ ಹಿನ್ನೆಲೆ ಹೊಂದಿದ ಸಾಮ್ರಾಜ್ಯವು ಬಳ್ಳಾರಿ ಜಿಲ್ಲೆಗೂ ಕೊಡುಗೆ ನೀಡಿದ್ದು

೧೬. ಜೆ. ಎಂ. ನಾಗಯ್ಯ : ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ, ಪುಟ – ೩೪
೧೭. ಜೆ. ಎಂ. ನಾಗಯ್ಯ : ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ, ಪುಟ – ೩೭

ಅಪಾರವಾಗಿದೆ. ಈ ವಂಶದ ಚಕ್ರವರ್ತಿಗಳು ಮತ್ತು ಅವರ ರಾಣಿಯರು ಈ ಜಿಲ್ಲೆಯಲ್ಲಿ ದೇವಾಲಯಗಳನ್ನು ನಿರ್ಮಿಸಿದ್ದಾರೆ. (ಕ್ರಿ.ಶ. ೧೦೩೮ ಜೂನ್ ೨೫) ಚಾಲುಕ್ಯರ ಅರಸ ಜಗದೇಕಮಲ್ಲ ದೇವನ ಕಾಲದಲ್ಲಿ ಉದಯಾದಿತ್ಯ ದೇವನು ಕೆಲವು ನಾಡುಗಳನ್ನು ಆಳುತ್ತಿದ್ದನು. ಮಾಸಿವಾಡಿ–೧೪೦ಕ್ಕೆ ಈ ಊರು ಸೇರಿದ್ದಿತು. ಗ್ರಾಮದ ಮಹಾಜನರು ಮತ್ತು ಊರ ಒಡೆಯನು ಕೂಡ ಬಂದು ೫೦ ರ ಮಟ್ಟಿ ಗದ್ದೆ ತೋಟ ಮುಂತಾದವುಗಳನ್ನು ಕಲೆ, ದೇವರ ಸೇವೆಗೆ ದತ್ತಿ ಕೊಟ್ಟರು. ಇನ್ನೊಂದು ಶಾಸನದಲ್ಲಿ ಕ್ರಿ.ಶ. ೧೧೧೦ ಡಿಸೆಂಬರ್ ೨೬ ಆದಿವಾರ ತ್ರಿಭುವನ ಮಲ್ಲದೇವನ ದಂಡಾಧಿಪತಿ ಮುದ್ದರಸ ಅಥವಾ ಮುದ್ದರಾಜನು ಹೂವಿನ ಸೋಗೆಯ ಹತ್ತಿರದ ನಾಗಸಮುದ್ರ ಕೆರೆಗೆ ಅದರ ದುರಸ್ತಿಗಾಗಿ, ದತ್ತಿಯನ್ನು ಬಿಟ್ಟದ್ದು ಕಂಡುಬರುತ್ತದೆ.

ಇದೇ ತಾಲೂಕಿ(ಹೂವಿನ ಹಡಗಲಿ)ಗೆ ಸೇರಿದ ಹೊಳಲಿನ ಒಂದು ಶಾಸನದ ಪ್ರಕಾರ ಕಲ್ಯಾಣ ಚಾಲುಕ್ಯರ ಕಾಲದಲ್ಲಿಯ ಒಬ್ಬ ಪ್ರಸಿದ್ಧ ಶಿಲ್ಪಿ ಸೋಗಿಯ ಪದ್ಮೋಜಿ ದೊರಕುವನು. ಭಾರತದ ನಾಲ್ಕು ಶಿಲ್ಪ ಶೈಲಿಗಳಾದ ೧. ನಗರ, ೨. ಕಾಳಿಂಗ, ೩. ದ್ರಾವಿಡ, ೪. ವೇಸರಗಳಲ್ಲಿ ಪರಿಣಿತನಾಗಿದ್ದನು. ಅವನಿಗೆ ಆಗಿನ ಕಾಲದ ರಾಜರು ಕೊಟ್ಟ ಬಿರುದುಗಳು ಹೀಗಿವೆ. ೧. ಕಲಿಯುಗ – ವಿಶ್ವಕರ್ಮ, ೨. ಚತುಷ್ಪತಿ – ಕಲಾವಿದ, ೩. ಚತುಷ್ಪತಿ ಪ್ರಸಾದ, ೪. ವಿಶಾರದ[೧೮] ಬಿರುಗುಗಳಿದ್ದ ಶಿಲ್ಪಿಯು ಈ ಒಂದು ಜಿಲ್ಲೆಯಲ್ಲಿ ಹಿಂದೆ ಇರುವುದು ನೋಡಿದರೆ ಇಂದಿನ ಕಲೆಯ ಗಟ್ಟಿತನಕ್ಕೆ ಹಿಂದಿನ ಪದ್ಮೋಜಿ ಕೂಡ ಸೇರ್ಪಡೆಯಾಗುತ್ತಾನೆ ಮತ್ತು ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿಯಲ್ಲಿ ಚಾಲುಕ್ಯ ಕಾಲದ ಕೆಲವು ದೇವಾಲಯಗಳು ಇರುವುವು.

೧. ಕಲ್ಲೇಶ್ವರ ದೇವಾಲಯ, ೨. ಕೇಶವಸ್ವಾಮಿ ದೇವಾಲಯ, ೩. ಶಶಿಧರ ದೇವಾಲಯಗಳು ಕಂಡು ಬರುತ್ತವೆ. ಶಶಿಧರನ ಗುಡಿಯಲ್ಲಿ ಈಶ್ವರ, ಸೂರ್ಯನಾರಾಯಣ ಮತ್ತು ಬಾಲಕೃಷ್ಣ ಮೂರ್ತಿಗಳು ಇರುವುವು. ಇವು ಸುಂದರ ಮೂರ್ತಿಗಳೊಂದಿಗೆ ಪ್ರತಿಷ್ಠಿತ ಕಲೆಗಾರಿಕೆಯನ್ನು ಬಿಂಬಿಸುತ್ತವೆ. ಕಲ್ಲೇಶ್ವರ ಮತ್ತು ಕೇಶವ ದೇಗುಲಗಳು ಸುಂದರವಾಗಿರುವವು. ಯೋಗಾನರಸಿಂಹಸ್ವಾಮಿ ಮೂರ್ತಿಯು ಕಪ್ಪುಶಿಲೆಯಿಂದ ನಿರ್ಮಿಸಲ್ಪಟ್ಟಿದೆ ಎಂದು ಹೇಳಲಾಗುತ್ತದೆ.

ಕೇಶವಸ್ವಾಮಿ ಗುಡಿ ಶಾಸನದ ಪ್ರಕಾರ ಕ್ರಿ.ಶ. ೧೯೯೦ರಲ್ಲಿ ಚಾಲುಕ್ಯರ ವಿಕ್ರಮಾದಿತ್ಯನ ಕಾಲದಲ್ಲಿ ರೆಬ್ಬಲಾದೇವಿಯು ಈ ಗುಡಿಯನ್ನು ನಿರ್ಮಿಸಿದಳು. ಇವಳು ಬ್ರಾಹ್ಮಣ ಸೇನಾಪತಿ ರವಿದೇವನ ಪತ್ನಿಯಾಗಿದ್ದಳು. ಇವಳು ಈ ಕೋಟೆಯನ್ನು ಆಳಿದಳು. ಕ್ರಿ.ಶ. ೧೮೬೬ರಲ್ಲಿ ಈ ಕೋಟೆ ಹಾಳಾಗಿದೆ ಎನ್ನಲಾಗುತ್ತದೆ. ಪುರಾತನ ಕಾಲದಿಂದಲೂ ಈ ಸ್ಥಳದಲ್ಲಿ ಬಾವಿಗಳು. ಮೂರು ಕೆರೆಗಳು ಇರುವವು. ಇದು ತಂಪಾದ ಪ್ರದೇಶವಾಗಿದೆ. ಇದು ಸಹ ಕಲಾಪ್ರತಿಭೆಗೆ ಕೈಗನ್ನಡಿಯಂತಿದೆ. ಹೂವಿನಹಡಗಲಿಯ ಹಿರೇಕುರುವತ್ತಿ ಶ್ರೀ ಮಲ್ಲಿಕಾರ್ಜುನ ದೇವರ ಗುಡಿಯನ್ನು ನಾರಾಯಣನೆಂದು ಬಿರುದು ಪಡೆದ ಚಾಲುಕ್ಯರ ಅಹವಮಲ್ಲದೇವನು ಕಟ್ಟಿಸಿದನು. ಇವನು

೧೮. ಕುಂಬಾಸ : ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ, ಪುಟ – ೧೪೩

ತನ್ನ ಕವಿಗೆ ಆಶ್ರಯದಾತನಾಗಿದ್ದನು. ಇವನು ಸಾಹಿತ್ಯ, ವಾಸ್ತು, ಶಿಲ್ಪಕಲೆಯಲ್ಲಿ ಆಸಕ್ತಿ ಹೊಂದಿದ್ದನು. ಶ್ರೀ ಮಲ್ಲಿಕಾರ್ಜುನ ದೇವರ ಗುಡಿಯ ತಳದಲ್ಲಿ ಸುತ್ತಲೂ ಸಿಂಹಪ್ರತಿಮೆಗಳನ್ನು ಚಿತ್ರಿಸಿರುವರು. ಮೇಲಿನ ಭಿತ್ತಿಚಿತ್ರಗಳು ಬಹು ಸುಂದರವಾಗಿರುವವು. ಪೂರ್ವದಿಕ್ಕಿನ ಪ್ರಥಮ ದ್ವಾರ ಕಂಬಗಳ ಮೇಲೆ ಮದನಿಕೆಯರ ವಿಗ್ರಹಗಳಿರುವವು. ಗರ್ಭಗೃಹದಲ್ಲಿ ಈಶ್ವರಲಿಂಗವು ಪೀಠದಲ್ಲಿ ಸ್ಥಾಪಿತವಾಗಿದೆ. ಉತ್ತರ ದಕ್ಷಿಣ ದ್ವಾರಗಳಿರುವವು. ಸುಖನಾಸಿಯಿರುವುದು, ಬಾಗಿಲ ಮೇಲೆ ಎರಡೂ ಆನೆಗಳ ಮಧ್ಯೆ ಗಜಲಕ್ಷ್ಮಿ ಕಂಗೊಳಿಸಿದರೆ, ಪಾರ್ಶ್ವದಲ್ಲಿ ಮಕರ ತೋರಣಗಳು ಶೋಭಿಸುವವು, ನವರಂಗ ಮಂಟಪ ಚಾಲುಕ್ಯರ ಇತರ ದೇವಾಲಯಗಳಲ್ಲಿ ಕಂಡು ಬರುವಂತೆ ಇರುವುದು. ಈ ಗುಡಿಯ ಶೈಲಿ ಮಾದರಿ ವೇಶರವೆಂದು ಶ್ರೀ ಅ.ಸುಂದರವರ ಅಭಿಪ್ರಾಯವಾಗಿದೆ. ಹೀಗೆ ಜಿಲ್ಲೆಯ ಮುಂತಾದ ಕಡೆಗಳಲ್ಲಿ ಇವರ ಕೊಡುಗೆ ಅಪಾರವಾಗಿದೆ.

ವಿಜಯನಗರ

ಬಳ್ಳಾರಿ ಜಿಲ್ಲೆಯನ್ನು ಆಳಿದ ರಾಜ್ಯಗಳಲ್ಲಿ ಕಲ್ಯಾಣ ಚಾಲುಕ್ಯರವರೆಗೆ ಪ್ರಾಚೀನ ಇತಿಹಾಸವಾದರೆ, ಮಧ್ಯಕಾಲೀನ ಇತಿಹಾಸ ವಿಜಯನಗರ ಸಾಮ್ರಾಜ್ಯ ಎನಿಸಿಕೊಳ್ಳುತ್ತದೆ. ಹೊಯ್ಸಳರ ಅಂತ್ಯ ಹಾಗೂ ವಿಜಯನಗರದ ಆರಂಭ ಕಾಲದ ಬಗ್ಗೆ, ಪರಸ್ಪರ ರಾಜಕೀಯ ಸಹ-ಸಂಬಂಧಗಳ ಬಗ್ಗೆ ಹಲವಾರು ಚರ್ಚೆಗಳು ನಡೆದಿವೆ. ಹೊಯ್ಸಳರ ಅಂತಿಮ ಅರಸನಾದ ೩ನೇ ಬಲ್ಲಾಳನು ೧೩೩೮ ರ ವೇಳೆಗೆ ವಿರೂಪಾಕ್ಷ ಪಟ್ಟಣ, ವಿರೂಪಾಕ್ಷಪುರ ಅಥವಾ ಹೊಸ ಪಟ್ಟಣವೆಂಬ ನಗರವನ್ನು ನಿರ್ಮಿಸಿ ಆಳ್ವಿಕೆ ಮಾಡತೊಡಗಿದನೆಂದು ಅನೇಕ ಶಾಸನಗಳು ಉಲ್ಲೇಖಿಸುತ್ತವೆ ಹಾಗೂ ಹರಿಹರ ಬುಕ್ಕರು ಈತನ ಸಾಮಂತರಾಗಿದ್ದರೆಂದೂ ತಿಳಿಸುತ್ತವೆ.

ಈ ಹೊಸಪಟ್ಟಣವೆಂಬುದು ಕೋಲಾರ ಜಿಲ್ಲೆಯ ಗೌರಿಬಿದನೂರು ಬಳಿಯ ಹೊಸೂರು, ಮಾಗಡಿ ತಾಲೂಕಿನ ವಿರೂಪಾಕ್ಷಪುರ, ಕಡೂರು ತಾಲೂಕಿನ ಸಖರಾಯ ಪಟ್ಟಣದ ಬಳಿಯ ಹೊಸೂರು ಎಂದು ಹಲವಾರು ಸ್ಥಳಗಳನ್ನು ವಿದ್ವಾಂಸರು ಗುರುತಿಸಿದ್ದಾರೆ. ಆದರೆ ಬಹಳಷ್ಟು ಸಂಶೋಧಕರು ಹೊಸಪಟ್ಟಣವು ಇಂದಿನ ಹಂಪೆ (ವಿಜಯನಗರ) ಪ್ರದೇಶವೆಂದೇ ಅಭಿಪ್ರಾಯ ಪಡುತ್ತಾರೆ. ಅಂತೆಯೇ ಹರಿಹರ ಬುಕ್ಕರು ಆಂಧ್ರದ ಕಾಕತೀಯ ರಾಜರಲ್ಲಿ ಇದ್ದರೆಂದೂ ದೆಹಲಿ ಸುಲ್ತಾನರು ರಾಜ್ಯ ವಶಪಡಿಸಿಕೊಂಡ ನಂತರ ಹಕ್ಕ ಬುಕ್ಕ ಹಾಗೂ ಅವರ ಸಹೋದರರನ್ನು ಸೆರೆ ಹಿಡಿದು ಕೊಂಡೊಯ್ದು ನಂತರ ಬಿಡುಗಡೆ ಮಾಡಿದ್ದು, ಹಕ್ಕ ಬುಕ್ಕರು ಶೃಂಗೇರಿಯ ವಿದ್ಯಾರಣ್ಯರ ಬೆಂಬಲದಿಂದ ಇಂದಿನ ಹಂಪೆ ಪ್ರದೇಶದಿಂದ ಆಳತೊಡಗಿದರೆಂಬ ವಾದಗಳಿದ್ದರೂ ಈಚೆಗೆ ಸಾಮ್ರಾಜ್ಯ ಸ್ಥಾಪಕರು ಕನ್ನಡ ಮೂಲದವರೆಂದೂ, ಹೊಯ್ಸಳರೊಂದಿಗೆ ಸಹ-ಸಂಬಂಧ ಹೊಂದಿದ್ದರೆಂದೂ ತೀರ್ಮಾನಕ್ಕೆ ಬರಲಾಗಿದೆ.[೧೯] ವಿಜಯನಗರವನ್ನು ಒಟ್ಟಾರೆಯಾಗಿ ಹದಿನಾರು

೧೯. ಡಾ. ಅ.ಲ. ನರಸಿಂಹನ್ (ಸಂ.) : ವಿಜಯನಗರ ಶಿಲ್ಪಕಲೆ, ಪುಟ – ೧೧

ರಾಜರು ಆಳಿದ್ದು ಇವರ ಆಳ್ವಿಕೆಯಲ್ಲಿ ಸುಮಾರು ಐದುನೂರು ದೇವಾಲಯಗಳು ನಿರ್ಮಿತ ಇಲ್ಲವೆ ಜೀರ್ಣೋದ್ಧಾರಗೊಂಡಿವೆ. ಇವುಗಳಲ್ಲಿ ಸುಮಾರು ಇನ್ನೂರು ದೇವಾಲಯಗಳಿಗೆ ಖಚಿತವಾದ ಕಾಲ ದೊರೆಯುತ್ತದೆ. ಉಳಿದವು ಕನಿಷ್ಠ ಶತಮಾನಗಳನ್ನು ಗುರುತಿಸಬಹುದಾದಂತಿವೆ. ಎಂದರೆ ೧೪ನೇ ಶತಮಾನದಲ್ಲಿ, ೧೫ನೇ ಶತಮಾನದಲ್ಲಿ ೧೦೩, ೧೬ನೇ ಶತಮಾನದಲ್ಲಿ ೧೨೪ ಹಾಗೂ ಸ್ಪಷ್ಟವಾಗಿ ಇಸವಿ ತಿಳಿಯದ ಇನ್ನಿತರ ದೇವಾಲಯಗಳ ಪಟ್ಟಿ ದೊರೆಯುತ್ತದೆ.[೨೦] ಇದಲ್ಲದೆ ಸಂಗಮ ಕಾಲದ ದೇವಾಲಯಗಳ ಖಚಿತವಾಗಿ ಇಸವಿಯೊಂದಿಗೆ ದೊರೆಯುವ ೬೮ ದೇವಾಲಯಗಳ ಪಟ್ಟಿಯೂ ಲಭ್ಯವಿದೆ.[೨೧]

ವಿಜಯನಗರ ಸಾಮ್ರಾಜ್ಯವನ್ನು ಸಂಗಮ, ಸಾಳುವ, ತುಳುವ ಹಾಗೂ ಅರವೀಡು ವಂಶಗಳು ಒಂದರ ನಂತರ ಒಂದರಂತೆ ಆಳಿವೆ. ಕ್ರಿ.ಶ. ೧೩೩೬ ರಿಂದ ೧೫೬೦ ರವರೆಗೆ ಸುಮಾರು ೨೪೦ ವರ್ಷಗಳು ಆಳಿದ್ದು ದಕ್ಷಿಣ ಭಾರತದಾದ್ಯಂತ ಸಾಮ್ರಾಜ್ಯ ವಿಸ್ತರಣೆಗೊಂಡಿತ್ತು ಹಾಗೂ ಎಲ್ಲಾ ರಾಜಮನೆತನಗಳ ಅರಸರು ಧರ್ಮ, ಸಾಹಿತ್ಯ ಸೇರಿದಂತೆ ವಾಸ್ತುಶಿಲ್ಪ, ಶಿಲ್ಪಕಲೆ, ಚಿತ್ರಕಲೆಗಳೊಂದಿಗೆ ಇನ್ನಿತರ ಲಲಿತಕಲೆಗಳಿಗೂ ಪ್ರೋತ್ಸಾಹ ನೀಡಿದ್ದಾರೆ.[೨೨]

ವಿಜಯನಗರದ ಅರಸರ ಆಳ್ವಿಕೆಯನ್ನು ಕರ್ನಾಟಕ ಸಂಸ್ಕೃತಿಯ ಉಚ್ಛ್ರಾಯಕಾಲ ಎನ್ನುವರು. ಕಲೆ, ಸಾಹಿತ್ಯಗಳು ಪುನರುಜ್ಜೀವನಗೊಂಡ ಕಾಲವಿದಾಗಿತ್ತು. ವಿಜಯನಗರದ ಅರಸರು ಎಲ್ಲ ರೀತಿಯ ಕಲೆಗಳಿಗೂ ಅಮಿತ ಪ್ರೋತ್ಸಾಹ ನೀಡಿದ್ದರು. ಈ ಕಾಲದಲ್ಲಿ ಕಲೆಗೆ ಹೊಸ ತಿರುವು ದೊರೆತಿದ್ದು, ಹೊಸ ಉತ್ಸಾಹ ರಾಜ ಮತ್ತು ಜನಸಾಮಾನ್ಯರಲ್ಲೂ ಇತ್ತು ಎನ್ನುವುದಕ್ಕೆ ಇಂದು ಉಳಿದ ಕಲೆಯಿಂದ ಮತ್ತು ಇತಿಹಾಸಕಾರರ ಉಲ್ಲೇಖಗಳಿಂದ ತಿಳಿಯಬಹುದು.

ಯಾವುದೇ ಸಾಮ್ರಾಜ್ಯದಲ್ಲಿ ಕಲೆಯೂ ಉನ್ನತವಾಗಿದ್ದರೆ ಆ ಸಾಮ್ರಾಜ್ಯವು ಎಲ್ಲಾ ಆಯಾಮದಿಂದಲೂ ಶ್ರೀಮಂತವಾಗಿರುತ್ತದೆ ಎನ್ನಬಹುದು. ಏಕೆಂದರೆ ಮನುಷ್ಯನಲ್ಲಿ ಕಲೆ ಪ್ರತಿಭೆಗೆ ಅವಕಾಶ ಆಗುವುದು ಅವನು ಆರ್ಥಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಸಂತೃಪ್ತಿ ಇದ್ದಾಗ. ಈ ಮಾತಿಗೆ ಪ್ರತೀಕವೆಂಬುವಂತೆ ಪೋರ್ಚುಗೀಸ್ ಪ್ರವಾಸಿ ಬರ್ಬೋಸನು ಈ ರೀತಿ ಉಲ್ಲೇಖಿಸುತ್ತಾನೆ. ಪ್ರತಿಯೊಬ್ಬ ಮನುಷ್ಯನು ತಾನು ಕ್ರೈಸ್ತನಾಗಿರಲಿ, ಯಹೂದಿಯಾಗಿರಲಿ, ಮುಸ್ಲಿಮನಾಗಿರಲಿ ಅಥವಾ ಹಿಂದೂವಾಗಿರಲಿ ವಿಜಯನಗರದಲ್ಲಿ ಯಾವ ಕಿರುಕುಳವಿಲ್ಲದೇ ಧರ್ಮಕ್ಕನುಗುಣವಾಗಿ ಜೀವಿಸಬಹುದು ಮತ್ತು ಇವರು ಕಟ್ಟಿಸಿದ ದೇವಾಲಯಗಳೂ, ಕಟ್ಟಡಗಳೂ ಮತ್ತು ಮೂರ್ತಿಗಳನ್ನು ಉಲ್ಲೇಖಿಸಿ ಖ್ಯಾತ ಕಲಾ ಇತಿಹಾಸಕಾರರಾಗಿರುವ ಪರ್ಸಿಬ್ರೌನರು

೨೦. ಎಸ್.ಎಸ್. ಶಿವರುದ್ರಸ್ವಾಮಿ : ವಿಜಯನಗರದ ದೇವಾಲಯಗಳು, ಪುಟ – ೨೩೪ & ೨೫೮

೨೧. ಅಪರ್ಣಾ ಕೂಡಲ : ಸಂಗಮರ ಅವಧಿಯ ದೇವಾಲಯಗಳು – ಒಂದು ಅಧ್ಯಯನ, (ಅ.ಪ್ರ. ಡಿ.ಲಿಟ್ ಮ.ಪ್ರ) ಪುಟ –

೨೨. ಡಾ. ಅ.ಲ. ನರಸಿಂಹನ್ (ಸಂ.) : ವಿಜಯನಗರ ಶಿಲ್ಪಕಲೆ, ಪುಟ – ೧೨

ವಿಜಯನಗರ ವಾಸ್ತುಶಿಲ್ಪ ಶೈಲಿಯನ್ನು 'ದ್ರಾವಿಡ ಶೈಲಿಯ ಶ್ರೇಷ್ಠ ವಿಕಸಿತ ಸ್ವರೂಪ' ಎಂದು ವರ್ಣಿಸಿದ್ದಾರೆ. ನಿಕೊಲೋ ಕಾಂಟಿ, ಅಬ್ದುಲ್ ರಜಾಕ್, ಧೂರ್ತೆ, ಬಾರ್ಬೋಸ್, ಪೇಯಿಸ್ ಮುಂತಾದ ವಿದೇಶಿಯಾತ್ರಿಕರು ವಿಜಯನಗರದ ಅರಸರ ಆಡಳಿತ ಕ್ರಮ ಮತ್ತು ವೈಭವವನ್ನು ಕಣ್ಣಾರೆ ಕಂಡು, ಆನಂದಿಸಿ ಹೊಗಳಿದ್ದಾರೆ. ಬಿರುಸಾದ ಬೆಣಚುಕಲ್ಲನ್ನು (ಗ್ರಾನೈಟ್) ಉಪಯೋಗಿಸಿ ಮಂಟಪ, ಹಜಾರ ರಾಮಸ್ವಾಮಿ ದೇವಾಲಯ, ವಿಠ್ಠಲಸ್ವಾಮಿ ದೇವಾಲಯ, ಕೃಷ್ಣಸ್ವಾಮಿ ದೇವಾಲಯ, ಗಾರೆಯಿಂದ ರಚಿಸಿದ ಕಮಲಮಹಲ್, ಹಂಪೆಯ ಕಲ್ಲಿನ ರಥ, ನರಸಿಂಹ ಮತ್ತು ಗಣಪತಿ ವಿಗ್ರಹಗಳು ವಿಜಯನಗರ ಕಾಲದ ಏಕಶಿಲಾ ಶಿಲ್ಪಕಲೆಯನ್ನು ಎತ್ತಿತೋರಿಸುತ್ತವೆ.

ವಿಜಯನಗರ ಅರಸರ ಕಾಲದಲ್ಲಿ ದೇವಾಲಯಗಳ ನಿರ್ಮಾಣ ಅವಿರತವಾಗಿ ಸಾಗಿತ್ತು. ಅಷ್ಟೇ ಬಿರುಸಿನಿಂದ, ಇದ್ದ ದೇವಾಲಯಗಳ ವಿಸ್ತರಣೆಯೂ ಆಯಿತು. ಇದಕ್ಕೆ ಕಾರಣ ಈ ಕಾಲದಲ್ಲಿ ದೇವಾಲಯಗಳಲ್ಲಿ ನಡೆಯಬೇಕಾಗಿದ್ದ ಅನೇಕ ಧರ್ಮಾಚರಣೆಗಳ ಆಧಿಕ್ಯ. ದೇವಾಲಯದಲ್ಲಿದ್ದ ವಿವಿಧ ಭಾಗಗಳು ಈ ಧರ್ಮಾಚರಣೆಯ ಎಲ್ಲಾ ವಿಧಿಗಳನ್ನು ನೆರವೇರಿಸಲು ಸಾಲದಾದುದರಿಂದ ಇವುಗಳ ವಿಸ್ತರಣೆ ಅತ್ಯವಶವಾಯಿತು[೨೩] ಎನ್ನಲಾಗುತ್ತದೆ. ಈ ಧರ್ಮದ ಹಿನ್ನೆಲೆಯಾಗಿ ಹಲವು ಕಲಾತ್ಮಕವಾದ ವಾಸ್ತುಶಿಲ್ಪಕಲೆಯಾಗಿ ಕೆಲವು ದೇವಾಲಯಗಳ ನಿರ್ಮಾಣ ಮಾಡಲಾಯಿತು.

ಈ ಕಾಲದ ದೇವಾಲಯಗಳನ್ನು (ವಿಸ್ತರಿಸಲ್ಪಟ್ಟ ದೇವಾಲಯಗಳನ್ನು ಒಳಗೊಂಡಂತೆ) ರಾಜಧಾನಿ ವಿಜಯನಗರ ಈಗಿನ ಹಂಪೆ, ನಾಗೇನಹಳ್ಳಿ, ಮಲಪನಗುಡಿ, ಕಡ್ಡಿರಾಮಪುರ, ಅನಂತಶಯನ ಗುಡಿ, ಕಮಲಾಪುರ ಮತ್ತು ಹೊಸಪೇಟೆ, ಕುರುಗೋಡು, ಕಪ್ಪಗಲ್ಲು, ಶ್ರೀರಂಗಪಟ್ಟಣ, ಬೇಲೂರು, ಆನೆಗೊಂದಿ, ಶ್ರವಣಬೆಳಗೊಳ, ನಂಜನಗೂಡು ಮುಂತಾದ ಕರ್ನಾಟಕದ ಸ್ಥಳಗಳಲ್ಲಿ ಕಾಣಬಹುದು. ಆಂಧ್ರ ಪ್ರದೇಶ ಮತ್ತು ತಮಿಳುನಾಡುಗಳಲ್ಲಿಯೂ ವಿಜಯನಗರ ಕಾಲದ ನೂರಾರು ದೇವಾಲಯಗಳಿವೆ.

ಈ ದೇವಾಲಯಗಳನ್ನು ಗೋರಂಟ್ಲ, ಲೇಪಾಕ್ಷಿ, ಗಂಡಿಕೋಟೆ, ಪೆನುಗೊಂಡ, ಕಾಳಹಸ್ತಿ, ಸೋಮಪಲ್ಲೆ, ಶ್ರೀಶೈಲ, ನಂದ್ಯಾಲ ಮಹಾನಂದಿ, ಪುಷ್ಪಗಿರಿ, ತ್ರಿಪುರಾಂತಕಂ, ಮಂಗಾಪುರಂ, ಮಾರ್ಕಾಪುರಂ, ಅಹೋಬಲ, ನಾಗಲಾಪುರ, ನಾರಾಯಣವನಂ, ಕಾಂಚಿಪುರಂ, ತಿರುವಣ್ಣಾಮಲೈ, ಶ್ರೀರಂಗಂ, ತಿರುವೆಳ್ಳೆರೈ, ತಿರುವಳಂಜುಲಿ, ಪಟ್ಟೀಶ್ವರಂ, ಚಿದಂಬರಂ, ತಿರುಪರಕುಂಡ್ರಂ, ತಂಜಾವೂರು, ಮಧುರೈ, ತಿರುವಾಯೂರು, ಕುಂಭಕೋಣಂ, ತಿರುಮಲೈ, ವೆಲ್ಲೂರು, ತಿರುವಿಳಿಮಲೈ, ತಿರುಪದೈಯೈಥು ಮತ್ತು ಆದಿಯಮಾನ್‌ಕೊಟ್ಟೆಗಳಲ್ಲಿ ಕಾಣಬಹುದು. ಇವುಗಳಲ್ಲಿ ತಿರುಪತಿ, ಕಾಳಹಸ್ತಿ, ಶ್ರೀರಂಗಪಟ್ಟಣ, ಶ್ರೀರಂಗಂ, ಚಿದಂಬರಂ, ಶ್ರೀಶೈಲ, ತಿರುವಣ್ಣಾಮಲೈ ಮುಂತಾದ ಸ್ಥಳಗಳಲ್ಲಿರುವ ದೇವಾಲಯಗಳು ವಿಜಯನಗರಕ್ಕಿಂತ ಮುಂಚೆ ಅಸ್ತಿತ್ವದಲ್ಲಿದ್ದು,

೨೩. ಪ್ರೊ. ಸಂ. ಶಿ. ಭೂಸನೂರ ಮಠ (ಸಂ.) : ವಿಜಯ ಕಲ್ಯಾಣ, ಪುಟ – ೧೮೨

[illegible]

ಈ ಕಾಲದಲ್ಲಿ ವಿಸ್ತೀರ್ಣಗೊಂಡು ಹೆಚ್ಚು ಪ್ರಸಿದ್ಧಿಯಾದವು[೭೪] ಎನ್ನಲಾಗುತ್ತದೆ. ಇವರು ವಾಸ್ತುಶಿಲ್ಪದಲ್ಲಿ ಪ್ರವೀಣರಾದಂತೆಯೇ ಸಂಗೀತ, ನೃತ್ಯ, ಸಾಹಿತ್ಯ, ಕುರಿತು ಶಾಸನಗಳ ಉಲ್ಲೇಖವು ನಮಗೆ ದೊರೆಯುತ್ತದೆ ಮತ್ತು ಚಿತ್ರಕಲೆ ವಿಶೇಷರೀತಿಯಲ್ಲಿ ಬೆಳವಣಿಗೆ ಕಂಡಿತು ಎನ್ನಬಹುದು. ಸ್ವತಃ ಕೃಷ್ಣದೇವರಾಯರೇ ಕವಿಗಳಾಗಿದ್ದದ್ದು ತಿಳಿದು ಬರುತ್ತದೆ. ಶ್ರೀ ಕೃಷ್ಣದೇವರಾಯನು ವಿಜಯನಗರದಲ್ಲಿ ಸಾರ್ವಭೌಮನಾಗಿ ಆಳಿದ ಕಾಲವನ್ನು ತೆಲುಗುಸಾಹಿತ್ಯದ ಸುವರ್ಣ ಯುಗವೆಂದು ಕೊಂಡಾಡುವುದು ವಾಡಿಕೆ. ಆ ದೊರೆ ತೆಲುಗು ಕವಿಗಳಿಗೆ ವಿಶೇಷವಾದ ಪ್ರೋತ್ಸಾಹ ನೀಡಿ ಅವರಿಂದ ಕಾವ್ಯರಚನೆ ಮಾಡಿಸಿದನು. ಇವನ ಆಸ್ಥಾನದಲ್ಲಿ 'ಅಷ್ಟದಿಗ್ಗಜರು' ಎಂಬ ಕವಿಗಳಿದ್ದರು ಎಂದು ವಿದ್ವಾಂಸರಿಗೆ ಮತ್ತು ಕವಿಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟಿರುವುದಾಗಿ ಇತಿಹಾಸ ಹೇಳುತ್ತದೆ ಮತ್ತು ಕೃಷ್ಣದೇವರಾಯನೇ ರಚಿಸಿದ ಕೃತಿ 'ಆಮುಕ್ತ ಮಾಲ್ಯದಾ' ಎಂಬ ಕೃತಿಯು ತೆಲುಗುಭಾಷೆಯಲ್ಲಿ ರಚನೆಯಾಗಿದೆ.

ವಿಜಯನಗರ ಪತನದ ನಂತರ ಈ ಜಿಲ್ಲೆಯು ಪಾಳೇಗಾರಿಕೆಗೆ ಒಳಪಟ್ಟಿತು. ಈ ವಿಜಯನಗರದ ನಂತರ ಚಿತ್ರಕಲೆಯು ಹೊಸ ಶೈಲಿ ಹುಟ್ಟಿತು. ಅದುವೆ 'ದಖನಿ ಶೈಲಿ' ಈ ಶೈಲಿಯು ಹಿಂದೂ–ಮುಸ್ಲಿಂ ಮಿಶ್ರಿತ ಚಿತ್ರಕಲಾ ಶೈಲಿಯಾಗಿತ್ತು. ವಿಜಯನಗರ ಪತನಾನಂತರ ಕ್ರಿ.ಶ. ೧೩೪೭ ರಲ್ಲಿ ಬಹುಮನಿ ರಾಜ್ಯವು ಸ್ಥಾಪನೆಯಾಯಿತು. ಈ ಫಲವಾಗಿ 'ದಖನಿ ಶೈಲಿ' ಹುಟ್ಟಿತು. ಇವರ ಆಡಳಿತದಲ್ಲಿ ಚಿತ್ರಶಿಲ್ಪ ಮತ್ತು ವಾಸ್ತುಕಲೆಗಳ ಸ್ವರೂಪ ಬದಲಾಗಿ ಚಿಕ್ಕಗಾತ್ರದ ಚಿತ್ರಗಳು ಪ್ರಾರಂಭವಾದವು. ನಂತರ ಬ್ರಿಟೀಷರ ಆಳ್ವಿಕೆಯಲ್ಲಿ ತಮ್ಮದೇ ಆದ ಕಲಾಪದ್ಧತಿಯನ್ನು ತಂದರು.

ಇವರ ಪ್ರಕಾರ ಭಾರತೀಯ ಚಿತ್ರಕಲೆಯ ಪದ್ಧತಿ ಸರಿ ಇಲ್ಲವೆಂದು ತಮ್ಮ ಪದ್ಧತಿಯ ನೈಜ ಸ್ವರೂಪದ ಚಿತ್ರಕಲಾ ಪ್ರಕಾರವನ್ನು ಪ್ರಾರಂಭಿಸಿದರು. ಇವರ ನಂತರ ಆಧುನಿಕ ಚಿತ್ರಕಲೆಯು ಬೆಳಕಿಗೆ ಬಂದಿತು. ಈ ಆಧುನಿಕ ಕಲೆಯೇ ಇಂದು ಆಯಾ ಕಾಲದ ಸಮಕಾಲೀನ ಕಲೆಯ ರಾಜಕೀಯ, ಧಾರ್ಮಿಕ, ಸಾಮಾಜಿಕ ಪ್ರತಿಬಿಂಬಿತವಾಗಿದೆ. ಧರ್ಮ ಮತ್ತು ರಾಜಕಾರಣ ಇವೆರಡು ಅವಿನಾಭಾವ ಸಂಬಂಧವುಳ್ಳವು. ಯಾವುದೇ ವರ್ಗ, ಜಾತಿ, ಭಾಷೆಯ ಜನಾಂಗದ ಆಳ್ವಿಕೆ ಬಂದರೂ ಆಡಳಿತ ನಡೆಸುವವರು ಯಾವ ಮೂಲದಿಂದ ಬಂದಿರುತ್ತಾರೋ ಅದನ್ನೇ ಮುಂದುವರೆಸುವ ಯತ್ನ ಮಾಡುತ್ತಾರೆ. ತತ್ಫಲವಾಗಿ ದೇವಾಲಯ, ಸ್ಮಾರಕಗಳು ಮತ್ತು ಆತ ನಂಬಿದ ಸಂಸ್ಕೃತಿಯು ಚೇತನಗೊಳ್ಳುತ್ತದೆ. ರಾಜರಲ್ಲಿ ಸೈನ್ಯಬಲ, ಆಡಳಿತ ನಡೆಸುವ ಕಾರ್ಯ ದಕ್ಷತೆ, ಕಲೆ, ಸಂಸ್ಕೃತಿಯನ್ನು ಸಮೃದ್ಧಿಗೊಳಿಸುವ ಇಚ್ಛಾಶಕ್ತಿ ಎಲ್ಲಿಯವರೆಗೆ ಇರುತ್ತದೊ ಅಲ್ಲಿಯವರೆಗೆ ಅವರವರ ವ್ಯಾಪ್ತಿಯೊಳಗೆ ಬರುವ ಪ್ರಾಂತಗಳ ಪ್ರದೇಶಗಳ ಉತ್ಕೃಷ್ಟ ಸಂಪ್ರದಾಯವನ್ನು ಉಳಿಸುತ್ತವೆ, ಬೆಳೆಸುತ್ತವೆ ಕಲೆಯೂ ಬೆಳೆಯುತ್ತದೆ. ಬಳ್ಳಾರಿ ಜಿಲ್ಲೆಯ

೭೪. ಪ್ರೊ. ಸಂ. ಶಿ. ಭೂಸನೂರ ಮಠ (ಸಂ.) : ವಿಜಯ ಕಲ್ಯಾಣ, ಪುಟ – ೧೮೭

ಕಲೆಯ ಸ್ಥಿತ್ಯಂತರ ಸ್ವರೂಪದ ನೆಲೆಯಲ್ಲಿ ಈ ಜಿಲ್ಲೆಯ ಸಂಸ್ಕೃತಿಯು ಬಹು ಶ್ರೀಮಂತ ಕಲೆಯ ಇತಿಹಾಸ ಹೊಂದಿದೆ.

ಲಲಿತಕಲೆಗಳು

ಕಲಾ ಎಂದರೆ ಗತಿ, ಜ್ಞಾನ, ಅಂಶಗಳೆಂದು ಅರ್ಥವಾಗುತ್ತದೆಂದು ನಿಘಂಟುಕಾರರು ಹೇಳುತ್ತಾರೆ. ಮನುಷ್ಯನಲ್ಲಿ ಉಂಟಾಗುವ ವಿವಿಧ ಭಾವಗಳಿಗೆ, ಅವನ ಪ್ರತಿಭೆ ಕಲ್ಪನೆಗಳಿಂದ ಲಭಿಸುವ ಭಾಗ್ಯ ರೂಪವಾಗಿ ಹೊರಪ್ರಕಟಿಸುವುದು ಕಲೆ. ವಿದ್ಯೆ ಎಂಬುದು ಅಭ್ಯಾಸ ಪ್ರಧಾನವಾದರೆ ಕಲೆಯೆಂಬುದು ಪ್ರತಿಭಾಪ್ರಧಾನದತ್ತವಾದುದು. ಕಲೆಗಳ ಪರಸ್ಪರ ಸಂಬಂಧ ಕುರಿತಂತೆ ಭಾರತೀಯ ಕಾವ್ಯ ಮೀಮಾಂಸಕಾರರ ದೃಷ್ಟಿ ಬೇರೆ ತೆರನಾದುದು. ಎಲ್ಲಾ ಕಲೆಗಳ ತಿರುಳೂ ರಸವೇ ಆಗಿದೆ ಲಲಿತಕಲೆಗಳ ಪ್ರಾಣ ಒಂದೇ ಆದರೂ, ಅವುಗಳ ಶರೀರಗಳು ಮಾತ್ರ ಬೇರೆ ಬೇರೆ. ಕಾವ್ಯವೂ ವಾಚ್ಯರ್ಥ ಸಹಿತವಾದ ಮಾತಿನ ರೂಪದಲ್ಲಿರುತ್ತದೆ ಎನ್ನುತ್ತಾರೆ.

ಈ ಬೇರೆ ಬೇರೆ ಕಲೆಗಳ ಹುಟ್ಟು, ಅಸ್ತಿತ್ವಕ್ಕೆ ನಮ್ಮ ಗ್ರಹಣೇಂದ್ರಿಯಗಳ ಮೂಲಕ ನಮಗಾಗುವ ಸೆನ್ಸೇಷನ್, ವೇದನಾನುಭವವೂ ಭಿನ್ನವಾದದ್ದೆ. ಮುಖ್ಯವಾದದ್ದು ಎನ್ನುತ್ತಾರೆ.[೨೫] ಭಾರತೀಯ ನೃತ್ಯದಲ್ಲಿ ಚಿತ್ರಕಲೆಯ ರೇಖಾವಿನ್ಯಾಸ ಮತ್ತು ವರ್ಣವೈಭವ, ಶಿಲ್ಪಕಲೆ ರೂಪ ಲಾವಣ್ಯ, ನಟನೆ ಜೀವನಾನುಕರಣ, ಕವಿಯ ಭಾವನಾ ವಿಲಾಸ, ಸಂಗೀತದ ರಾಗ-ಲಯಗಳೆಲ್ಲವೂ ಸಮಸಮವಾಗಿ ಬೆರೆತು ಇದು ಅವಿನಾಶಿಯಾದ ಪರಿಪೂರ್ಣ ಕಲೆಯಾಗಿ ವಿಜೃಂಭಿಸುತ್ತದೆ ಎಂದು ಎಂ.ಎಸ್.ನಟರಾಜನ್ ಅವರ ಅಭಿಪ್ರಾಯ. ಪಡುವಂತೆ ರಸ ಭಾವಭರಿತವಾದ ನಿರೂಪಣೆಯೇ ಮುಖ್ಯವಾಗಿರುವ ಭಾರತೀಯ ಚಿತ್ರಕಲೆಯಲ್ಲಿ ನೃತ್ಯಗಾರರ ಚಿತ್ರಗಳನ್ನು ಆರಂಭದಿಂದಲೇ ಕಾಣುತ್ತೇವಲ್ಲವೆ?

ಮನುಷ್ಯಾಕೃತಿಗಳು ನಿಂತ, ಕುಳಿತ ಭಾವ ಭಂಗಿಗಳೇ; ಇರಿಸಿಕೊಂಡಿರುವ ಹಸ್ತ, ಪಾದ, ಮುಖಗಳ ವಿನ್ಯಾಸಗಳೇ ನೃತ್ಯದ ಒಂದು ಅಂಶದಂತೆ ಕಂಡು ಬರುತ್ತವೆ. ಕರ್ನಾಟಕವೂ ಸೇರಿದಂತೆ ಭಾರತದ ಆದಿಮ ಚಿತ್ರಕಲೆಯಲ್ಲಿ ಸಮೂಹ ನೃತ್ಯ ಮಾಡುತ್ತಿರುವ ಹಲವಾರು ದೃಶ್ಯಗಳು ಕಂಡು ಬರುತ್ತಿದ್ದು ಮುಂದಿನ ಚಾಳುಕ್ಯ, ಹೊಯ್ಸಳರರಿಂದ ಹಿಡಿದು ಮೈಸೂರು ಅರಸರ ವರೆಗೂ ಶಿಲ್ಪಗಳಲ್ಲಿ ನೃತ್ಯದ ದೃಶ್ಯಗಳನ್ನು ನೋಡಬಹುದು[೨೬] ಮತ್ತು ಯಕ್ಷಗಾನದಲ್ಲಿ ಹಾಕಿಕೊಳ್ಳುವ ವೇಷಭೂಷಣ, ಮುಖವರ್ಣಿಕೆಗಳು ಚಿತ್ರಕಲೆಯ ಒಂದು ಅಂಗವಾಗಿವೆ.

ಅದೇ ರೀತಿಯಲ್ಲಿ ಸಂಗೀತವು ಹಿಂದಿನಿಂದಲೂ ಅವಿನಾಭಾವ ಸಂಬಂಧವಿರುವಂಥದ್ದಾಗಿದೆ. ಸಂಗೀತ ಕುರಿತು ಹಲವು ರಾಗಮಾಲಾ ಚಿತ್ರಗಳಾಗಿ ಕಲಾಕೃತಿಗಳು ಹೊರಹೊಮ್ಮಿದ್ದೇ ಕೃಷ್ಣನಿಗೆ ಸಂಬಂಧಿಸಿದ ಚಿತ್ರಗಳಾಗಿವೆ. ಇತ್ತೀಚಿನ ದಿನಗಳಲ್ಲಿ 'ರಾಗಗಳ' ಏರಿಳಿತಕ್ಕೆ ಚಿತ್ರದ ರೇಖಾಲಲಿತ್ಯ

೨೫. ಎಂ.ಎಸ್.ಕೃಷ್ಣಯ್ಯ : ವಿವಿಧ ಕಲೆಗಳ ನಡುವಿನ ಸಂಬಂಧ, ಪುಟ – ೨೩೭

೨೬. ಡಾ. ಅ.ಲ.ನರಸಿಂಹನ್ : ಕರ್ನಾಟಕ ಭಿತ್ತಿಚಿತ್ರ ಪರಂಪರೆ, ಪುಟ – ೮೫

ಏರಿಳಿತದ ಪ್ರಯೋಗವಾಗುತ್ತಿದೆ. ಖ್ಯಾತ ಚಿತ್ರಕಲಾವಿದರಾದ ಬಿ.ಕೆ.ಎಸ್.ವರ್ಮಾ ಎನ್ನುವ ಚಿತ್ರಕಲಾವಿದರು ಹಲವು ಪ್ರಯೋಗಗಳನ್ನು ಮಾಡಿದ್ದಾರೆ. ಅದೇ ರೀತಿಯಲ್ಲಿ ರಾಗಮಾಲೆಗೆ ಸಂಬಂಧಿಸಿದಂತೆ ವಿ.ಟಿ.ಕಾಳೆಯವರು ಚಿತ್ರಕಲಾಪ್ರಯೋಗ ಮಾಡಿದ್ದಾರೆ. ವಾಸ್ತುಕಲೆ ಮತ್ತು ಚಿತ್ರಕಲೆಯ ಸಂಬಂಧವು ಪ್ರಾಚೀನವಾಗಿದೆ ಎನ್ನಬಹುದು. ವಾಸ್ತುವಿಗೆ ಚಿತ್ರ-ಶಿಲ್ಪಗಳೇ ಭೂಷಣ, ವಾಸ್ತುಕಲೆಯಲ್ಲಿ ಬಣ್ಣವು ಕೂಡ ಅಷ್ಟೇ ಮುಖ್ಯವಾದದ್ದು. ವೈಜ್ಞಾನಿಕವಾಗಿಯು ಬಣ್ಣದ ಲೇಪನವನ್ನು ನಾವು ಕಾಣಬಹುದು. ಉದಾಹರಣೆಗೆ 'ಮಸೀದಿ' ಗಳಿಗೆ ಹೆಚ್ಚಾಗಿ 'ಹಸಿರು' ಬಣ್ಣವನ್ನು ಲೇಪನ ಮಾಡುತ್ತಾರೆ. ಈ ಹಸಿರು ಬಣ್ಣ ತಂಪುವರ್ಣವಾಗಿದ್ದು ಕಣ್ಣೀಗೆ ತಂಪನ್ನು ನೀಡುತ್ತದೆ ಎನ್ನುವ ಉದ್ದೇಶವಾಗಿದೆ. ಅದೇ ರೀತಿಯಲ್ಲಿ ಬಿಳಿಬಣ್ಣ ಶಾಂತ ಸ್ವಭಾವದ್ದು, ಆದ್ದರಿಂದ ಹಿಂದೂಗಳ ಮನೆಗಳಿಗೆ ಸುಣ್ಣ ಲೇಪನ ಮಾಡಲಾಗುತ್ತಿತ್ತು. ಮತ್ತು ಶಾಂತ ಮನಸ್ಸಿನ ಶುಭ್ರತೆಯ ಸಂಕೇತವಾಗಿ, ಮತ್ತು ಸೂರ್ಯನ ಶಾಖವನ್ನು ವಿಕರ್ಷಿಸುವಂಥ ಸಾಮರ್ಥ್ಯವುಳ್ಳ ಗುಣಧರ್ಮವನ್ನು ಹೊಂದಿರುವುದರಿಂದ ಮನೆಗಳಿಗೆ ಲೇಪಿಸಲಾಗುತ್ತಿತ್ತು.

ಈಗ ಸೌಂದರ್ಯ ಹಿನ್ನೆಲೆಯಿಂದ ಬೇರೆ ಬೇರೆ ಬಣ್ಣಗಳನ್ನು ಮನೆಗಳಿಗೆ ಲೇಪಿಸಲಾಗುತ್ತದೆ. ವಾಸ್ತುಗಳಲ್ಲಿ ಭಿತ್ತಿಚಿತ್ರಗಳನ್ನು ಹಿಂದಿನಿಂದಲೂ ಕಾಣುತ್ತೇವೆ. ಪ್ರಾಗೈತಿಹಾಸಿಕ ಕಾಲದ ಮಾನವ ತನ್ನ ವಾಸಸ್ಥಳದ ಸುತ್ತಲೂ ತನ್ನ ಚಿತ್ರಗಳನ್ನು ಮೂಡಿಸುತ್ತಿದ್ದ. ಜನಪದೀಯವಾಗಿಯೂ ಅಂಗಳಕ್ಕೆ ರಂಗೋಲಿ, ತೊಲೆ, ಕಂಬ, ಬಾಗಿಲು ಮುಂತಾದ ಭಿತ್ತಿಯೂ, ಹೂ-ಬಳ್ಳಿ, ರೇಖೆ, ವಿವಿಧ ನಕ್ಷಾವಿನ್ಯಾಸ ಮಾಡುವುದು ಚಿತ್ರಕಲೆಯಲ್ಲಿ ವಾಸ್ತುಶಿಲ್ಪಗಳು ಇರುವ ಬಗೆಗಳನ್ನು ಕುರಿತು ಸಮಕಾಲೀನ ಕಾವ್ಯ ಇತ್ಯಾದಿ ಬರಹಗಳೊಂದಿಗೆ ಅಧ್ಯಯನ ಮಾಡಿರುವ ಸೆನಕೆ ಭಂಡಾರ ನಾಯಿಕೆ ಅವರು, ಅಜಂತೆಯ ಚಿತ್ರಗಳಲ್ಲಿ ಕಂಡು ಬರುವ ಹಲವಾರು ವಾಸ್ತುಶಿಲ್ಪಗಳ ಮಾಡುಗಳ ನಮೂನೆಗಳನ್ನು ಪಟ್ಟಿ ಮಾಡಿದ್ದಾರೆ. ಅದರಂತೆ ಮಾಳಿಗೆಗಳಲ್ಲಿ ಸಮತಲವಾಗಿರುವುದು, ಚೌಕಾಕಾರದಲ್ಲಿ ಹಾಗೂ ಹಲವು ಹಂತಗಳಲ್ಲಿ ಇರುವುದು, ಅವುಗಳಿಗೆ ಕಂಬಗಳ ಆಶ್ರಯ ನೀಡಿ, ಅಡ್ಡ ತೊಲೆಗಳಿಂದ ಕೂಡಿಸಿರುವುದು ಇತ್ಯಾದಿ ವಿವರಗಳನ್ನು ಚಿತ್ರಸಹಿತ ವಿವರಿಸಿದ್ದಾರೆ ಮತ್ತು ಅನಂತರದ ದಖ್ಖನಿ ಚಿತ್ರಗಳಲ್ಲಿ ಅರಮನೆಯ ಒಳಾಂಗಣದ ದೃಶ್ಯವನ್ನು ಆರಂಭಕಾಲದಿಂದಲೇ ಗುರುತಿಸಬಹುದು.

ಪ್ರಾಯಶಃ ಚಿತ್ರಕಲೆ ಪರ್ಷಿಯಾದಿಂದ ಬಂದಂತೆ ಅಲ್ಲಿಯ ವಾಸ್ತು ಶಿಲ್ಪವೂ ಬಂದಿದ್ದು ಚಿತ್ರಗಳಲ್ಲಿಯೂ ಮೂಡಿಸುವ ರೀತಿಯಲ್ಲಿಯೇ ಇಲ್ಲಿಯೂ ಬಳಕೆಗೆ ತಂದಿರಬಹುದು. ಪರ್ಷಿಯಾದಲ್ಲಿ ಕ್ರಿ.ಶ.೧೪೮೮ರಲ್ಲಿ ರಚಿತವಾದ ಚಿತ್ರವೊಂದಲ್ಲಿ ಇಡೀ ಕಟ್ಟಡವನ್ನು ಅರ್ಧಕ್ಕೆ ಕತ್ತರಿಸಿದಂತೆ Roofಗಳ ನಮೂನೆಗಳನ್ನು ಪಟ್ಟಿ ಮಾಡಿದ್ದಾರೆ. ಅದರಂತೆ ಮಾಳಿಗೆಗಳಲ್ಲಿ ಸಮತಲವಾಗಿರುವುದು. ಚೌಕಾಕಾರದಲ್ಲಿ ಹಾಗೂ ಹಲವು ಹಂತಗಳಲ್ಲಿ ಇರುವುದು, ಅವುಗಳಿಗೆ ಕಂಬಗಳ ಆಶ್ರಯ ನೀಡಿ, ಅಡ್ಡ ತೊಲೆಗಳಿಂದ ಕೂಡಿಸಿರುವುದು ಇತ್ಯಾದಿ ವಿವರಗಳನ್ನು ಚಿತ್ರ

ಸಹಿತ ವಿವರಿಸಿದ್ದಾರೆ ಮತ್ತು ಅನಂತರದ ದಖ್ಖನಿಚಿತ್ರಗಳಲ್ಲಿ ಅರಮನೆಯ ಒಳಾಂಗಣದ ದೃಶ್ಯವನ್ನು ಆರಂಭಕಾಲದಿಂದಲೇ ಗುರುತಿಸಬಹುದು.

ಪರ್ಷಿಯಾದಲ್ಲಿ ಕ್ರಿ.ಶ. ೧೪೮೮ರಲ್ಲಿ ರಚಿತವಾದ ಚಿತ್ರವೊಂದರಲ್ಲಿ ಇಡೀ ಕಟ್ಟಡವನ್ನು ಅರ್ಧಕ್ಕೆ ಕತ್ತರಿಸಿದಂತೆ (Cross Section) ತೋರಿಸಿದ್ದು ಮಾಳಿಗೆಯ ಮೇಲೆ ನೃತ್ಯಗಾರ್ತಿಯೊಬ್ಬಳು ನೃತ್ಯ ಮಾಡುತ್ತಿರುವಂತೆ ಚಿತ್ರಿಸಿದ್ದು ಮುಂದಿನ ವಿಜಯನಗರ ಕಾಲದಲ್ಲಿ ಚಿತ್ರಿತ ವಿಷಯ ಪೌರಾಣಿಕವಾದುದರಿಂದ ಅರಮನೆ, ಬಂಗಲೆಗಳ ಚಿತ್ರಗಳ ಜಾಗದಲ್ಲಿ ದೇವಾಲಯ, ಮಂಟಪಗಳು ಬಂದಿರುವುದನ್ನು ಕಾಣಬಹುದು. ಹಂಪೆಯಲ್ಲಿ ಗೋಪುರವುಳ್ಳ ದೇವಾಲಯಗಳಂತಹ ರಚನೆಯಲ್ಲಿ ಮಧ್ಯೆ ಬಾಗಿಲು ಇರುವ ಜಾಗದಲ್ಲಿ ಒಂದು ಅಥವಾ ಎರಡು ದೇವತಾಮೂರ್ತಿಗಳು ಇರುವಂತೆ ಇಲ್ಲವೆ ಕಟ್ಟಡವನ್ನು ಕಂಬಗಳಿಂದ ಎರಡು ಅಥವಾ ಮೂರು ಅಂಕಣಗಳಾಗುವಂತೆ ರೂಪಿಸಿದೆ.[೨೭]

ಆಧುನಿಕವಾಗಿ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಗಾಜಿನ ಚಿತ್ರಕಲೆಯಿಂದ ಮನೆಗಳ ಅಲಂಕಾರಗಳನ್ನು ಕಾಣಬಹುದು. ವಾಸ್ತು ಕೂಡ ವಸ್ತುವಾಗಿ ಕಲಾಕೃತಿಯಲ್ಲಿ ಕಾಣಬಹುದು. ಪ್ರಕೃತಿಯ ಚಿತ್ರಗಳಲ್ಲಿ ನಿಸರ್ಗದ ಜೊತೆಯಲ್ಲಿ ಮನೆ, ಗುಡಿಸಲು, ಸ್ಮಾರಕಗಳು ಕಾಣಬಹುದು. ಹಾಗೆಯೆ ಚಿತ್ರ ಮತ್ತು ಶಿಲ್ಪ ಇವುಗಳಿಗೆ ವ್ಯತ್ಯಾಸ ಒಂದೇ, ಚಿತ್ರವು ಎರಡು ಆಯಾಮದ ಕಲೆಯಾದರೆ, ಶಿಲ್ಪಕಲೆಯು ಮೂರು ಆಯಾಮದ ಕಲೆಯಾಗಿದೆ. ಶಿಲ್ಪದಲ್ಲಿಯೂ ಕಲ್ಲಿನ ಮೇಲೆ ಚಿತ್ರಕಾರ ಬರೆದ ಹೊರ ರೇಖೆಯನ್ನಷ್ಟೇ ಶಿಲ್ಪಿ ಕೆತ್ತಬಹುದು.

ಇದಲ್ಲದೆ ಶಿಲ್ಪಿಯೇ ಕೆಲವು ಮಟ್ಟಿಗೆ ಚಿತ್ರಕಾರನೂ ಆಗಿರುವುದುಂಟು. ಮಣ್ಣೆ (ಬೆಂಗಳೂರು ಜಿಲ್ಲೆ) (ಕ್ರಿ.ಶ. ೭೯೭) ಹಾಗೂ ದೇವರಹಳ್ಳಿ (ಮಂಡ್ಯ ಜಿಲ್ಲೆ) ಯ (ಕ್ರಿ.ಶ.೭೭೬) ತಾಮ್ರ ಶಾಸನಗಳನ್ನು ವಿಶ್ವಕರ್ಮಾಚಾರ್ಯನೆಂಬಾತ ಮಾಡಿದ್ದು ತನ್ನನ್ನು ಸರ್ವಕಲಾಧಾರಭೂತ ಚಿತ್ರ ಕಲಾಭಿಜ್ಞೇನ ಎಂದು ಕರೆದುಕೊಂಡಿದ್ದಾನೆ. ವಿಜಯನಗರ ಕಾಲದ ಕೆಲವು ಶಾಸನಗಳ ಮೇಲೆ ಈ ರೀತಿಯ ರೇಖಾಚಿತ್ರಗಳನ್ನು ಗುರುತಿಸಲಾಗಿದೆ. ಆಂಜನೇಯ, ಗಣಪತಿ[೨೮] ಮತ್ತು ಕೋಟಿಲಿಂಗದ ಹತ್ತಿರ ನರ್ತಕಿಯ ಚಿತ್ರ, ಮಂಗ ಮತ್ತು ಮಂಗ ಆಡಿಸುವವನ ರೇಖಾಚಿತ್ರಗಳು ಕಂಡುಬರುತ್ತವೆ. ಶಿಲ್ಪದಲ್ಲಿಯೂ ಚಿತ್ರಕಲೆಯಂತೆಯೇ ಬಣ್ಣ ಮತ್ತು ಕುಂಚದಂತೆ ಉಳಿಯನ್ನು ಉಪಯೋಗಿಸುತ್ತಾರೆ. ಮತ್ತು ನಾಟಕ(ದೊಡ್ಡಾಟ)ದಲ್ಲಿ ಮುಖವರ್ಣಿಕೆ, ವೇಷಭೂಷಣವು ಚಿತ್ರಕಲೆಯ ಒಂದು ಅಂಗವಾಗಿದೆ. ಮತ್ತು ಸಾಹಿತ್ಯವನ್ನು ವಿವರಿಸುವಾಗ ಚಿತ್ರದ ಕಲ್ಪನೆ, ಚಿತ್ರವನ್ನು ವಿವರಿಸುವಾಗ ಸಾಹಿತ್ಯದ ಕಲ್ಪನೆಯು ಬರುತ್ತದೆ.

ಒಂದು ಚಿತ್ರಕಲೆಯನ್ನು ನೂರು ವಾಕ್ಯಗಳಿಗೆ ಸಮಾನ ಎನ್ನಲಾಗುತ್ತದೆ. ಹಾಗೂ ಎರಡು ಮೂರು ಕಲೆಗಳ ಅಭಿವ್ಯಕ್ತಿಯನ್ನು ಒಂದೇ ಕಡೆ ಕಾಣಬಹುದು. ಚಿತ್ರ-ಶಿಲ್ಪ ವಾಸ್ತುಗಳಲ್ಲಿ

೨೭. ಡಾ. ಅ.ಲ. ನರಸಿಂಹನ್ : ಕರ್ನಾಟಕದ ಭಿತ್ತಿಚಿತ್ರ ಪರಂಪರೆ, ಪುಟ - ೧೦೮
೨೮. ಡಾ. ಅ.ಲ. ನರಸಿಂಹನ್ : ಕರ್ನಾಟಕದ ಭಿತ್ತಿಚಿತ್ರ ಪರಂಪರೆ, ಪುಟ - ೧೦೨

ಉಬ್ಬುಶಿಲ್ಪವನ್ನು ಕಂಭ, ತೊಲೆ ಮತ್ತು ಗೋಡೆಗಳಲ್ಲಿ ಕಲಾತ್ಮಕವಾಗಿ ಕೆತ್ತಿ, ಆ ಕೆತ್ತನೆಗೆ ಬಣ್ಣಲೇಪನವನ್ನು ಸಹ ಸಂಪೂರ್ಣವಾಗಿ ಬಳಸಿಕೊಳ್ಳುವ ಮಾಧ್ಯಮವಾಗಿದೆ. ಈ ಚಲನಚಿತ್ರವನ್ನು ತಯಾರಿಸುವಾಗ ಅದರಲ್ಲಿ ನಾಟ್ಯ, ಶ್ರವ್ಯ, ದೃಶ್ಯ, ನಟನೆ, ಸಾಹಿತ್ಯ ಎಲ್ಲವನ್ನು ಬಳಸಿಕೊಂಡು ಲಲಿತಕಲೆಗಳೆಲ್ಲಾ ಲಾಲಿತ್ಯಪೂರ್ಣ ಬಳಕೆ ಈ ಚಲನಚಿತ್ರ ಮಾಧ್ಯಮ ಹೊಂದಿದ ಎಷ್ಟೋ ಕಲೆಗಳು ಕಲಾವಿದರಿಂದ ರಚಿತವಾಗಿ ಬೆಳಕಿಗೆ ಬಾರದೆ ಹಾಳಾಗುತ್ತಿವೆ. ಹಾಗೆಯೇ ಎಷ್ಟೋ ಕಲಾವಿದರು ಎಲೆಮರೆಯ ಕಾಯಿಯಂತೆ ಬದುಕಿ ಮರೆಯಾಗಿರಬಹುದು ಮತ್ತು ಬಾಳುತ್ತಿರಬಹುದು. ಇನ್ನೂ ಕೆಲವರಿಗೆ ಅವಕಾಶಗಳೂ ಸಿಕ್ಕಿ ಬೆಳಕಿಗೆ ಬಂದಿರಬಹುದು. ಸಾರ್ಥಕತೆ ಕಂಡುಕೊಂಡಿರಬಹುದು. ಇಂತಹ ಎಲ್ಲಾ ಕಲಾವಿದರು ಮತ್ತು ಇವರ ಕಲಾಸಾಧನೆಯನ್ನು ಈ ಜಿಲ್ಲೆಯ ಕೊಡುಗೆಯಾಗಿಸಿದ್ದಾರೆ. ಅಂತಹ ಲಲಿತಕಲೆ ಮತ್ತು ಕಲಾವಿದರನ್ನು ಈ ಕೆಳಗಿನಂತೆ ಸ್ಮರಿಸಿಕೊಳ್ಳಲಾಗಿದೆ.

ಶಿಲ್ಪಶಾಸ್ತ್ರ

ಐಹೊಳೆ ಮತ್ತು ಪಟ್ಟದಕಲ್ಲುಗಳಲ್ಲಿ ಶಿಲ್ಪಶಾಸ್ತ್ರದ ಗ್ರಂಥ ಮತ್ತು ಪ್ರಯೋಗಶಾಲೆ ಇದ್ದಂತೆ, ಬಳ್ಳಾರಿ ಜಿಲ್ಲೆಯ ಹಿರೇಕುರುವತ್ತಿಯಲ್ಲಿಯೂ ಪ್ರಯೋಗ ಶಾಲೆಗಳೂ ಪ್ರಾಚೀನ ಕಾಲದಲ್ಲಿ ಇದ್ದಿರಬೇಕು ಮತ್ತು ಹಡಗಲಿ ತಾಲೂಕು ಪ್ರದೇಶಗಳಲ್ಲಿ ಬಹು ಸಂಖ್ಯೆಯಲ್ಲಿ ಶ್ರೇಷ್ಠ ಶ್ರೇಣೀಯ ಶಿಲ್ಪಿಗಳೂ ಕಂಡು ಬರುವರು. ಹಡಗಲಿ ತಾಲೂಕು ಸೋಗಿ ಗ್ರಾಮದ ಶಿಲ್ಪಿಗಳಲ್ಲಿ ಒಬ್ಬರು. ಭಾರತದ ಶಿಲ್ಪಶೈಲಿಗಳಾದ ೧. ನಾಗರ, ಕಾಳಿಂಗ, ದ್ರಾವಿಡ, ವೇಶರಗಳಲ್ಲಿ ಪರಿಣಿತನಾಗಿದ್ದನು. ಈತನಿಗೆ ಆಗಿನ ಕಾಲದ ರಾಜರು ಕೊಟ್ಟ ಬಿರುದುಗಳು ಹೀಗಿರುವವು.

೧. ಕಲಿಯುಗದ ವಿಶ್ವಕರ್ಮ, ೨. ಚತುಷ್ಷಷ್ಠಿ – ಕಲಾವಿದ, ೩. ಚತುಷ್ಷಷ್ಠಿ – ಪ್ರಸಾದ, ೪. ವಿಶಾರದ. ಇವನ ಹೆಸರು ಪದ್ಮೋಜಿ. ವಿಶ್ವಕರ್ಮಕುಲಕ್ಕೆ ಸೇರಿದ ಬಡಗಿತನ, ಕಮ್ಮಾರಿಕೆ ವೃತ್ತಿಯ ಕುಟುಂಬದಲ್ಲಿ ಜನಿಸಿದವನು. ಇವನು ಜನಿಸಿದ್ದು ಹೂವಿನ ಹಡಗಲಿ ತಾಲೂಕು ಸೋಗಿ ಗ್ರಾಮದಲ್ಲಿ. ಇವನಲ್ಲದೆ ಅನೇಕ ಶಿಲ್ಪಿಗಳು ಈ ಜಿಲ್ಲೆಯಲ್ಲಿ ಪ್ರಾಚೀನ ಕಾಲದಲ್ಲಿ ಕಾಣಿಸಿಕೊಳ್ಳುವರು. ಅವರಲ್ಲಿ ಪ್ರಮುಖ ಮತ್ತು ಕೆಲವೇ ಶಿಲ್ಪಿಗಳ ಹೆಸರುಗಳು ಈ ಕೆಳಗಿನಂತಿವೆ; ಪ್ರಮುಖ ಶಿಲ್ಪಿಗಳು ೧. ಗುಲುಗೋಜ, ೨. ಚಾವುಂಡೋಜ,[೨೯] ೩. ಚಟ್ಟೋಜ ಛನ್ನೋಜನ ಮಗ ಹಂಪ ಚನ್ನೋಜ, ೪. ನಾಕೋಜ, ೫. ಸಿವಪಾದ ಶೇಖರಂ, ೬. ಮಂಡಳಿಕ ಬಿಜ್ಜರಸನ ಪೆರ್ಗಡೆ ಕಾಳಿದಾಸಯ್ಯ, ೭. ಪದ್ಮೋಜಿ, ೮. ಮಾರಸಿಂಘೋಜ, ೯. ಮಾನಿಕಾಚಾರಿ ರಾಚೋಜ, ೧೦. ಹಿರಿಯ ಚಾವುಂಡೋಜ ಮುಂತಾದವರು ಶಿಲ್ಪಕಲಾವಿದರೆಂದು ಇತಿಹಾಸಕಾರರ ಅಭಿಪ್ರಾಯವಾಗಿದೆ. ಇವರು ಎಂತಹ ಪ್ರತಿಭಾನ್ವಿತರು ಎನ್ನುವುದಕ್ಕೆ ಅಳಿದುಳಿದ ಸ್ಮಾರಕಗಳೇ ಸಾಕ್ಷಿಯಾಗಿವೆ. ವಿರೂಪಾಕ್ಷ ದೇವಾಲಯದ ಕಿರಿಯ ಗೋಪುರ, ಕೃಷ್ಣದೇವಾಲಯ ಮತ್ತು

---

೨೯. ಕುಂಬಾಸ : ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ, ಪುಟ – ೬೪

ಮಾಲ್ಯವಂತ, ರಘುನಾಥ ದೇವಾಲಯ ಶಿಲ್ಪಗಳಿಗೆ ಬಣ್ಣವನ್ನು ಲೇಪಿಸಲಾಗುತ್ತಿತ್ತು. ಹೀಗಾಗಿ ಶಿಲ್ಪಗಳು ಬಿಡಿ ರಚನೆಗಳಂತೆ ಸ್ಫುಟವಾಗಿ ಎದ್ದುಕಾಣುವ ಉದ್ದೇಶವಾಗಿತ್ತು.[೩೦] ಇಂದು ಶಿಲ್ಪಕಲಾವಿದರು ಹಲವು ಮಾಧ್ಯಮಗಳಾದ ಸಿಮೆಂಟ್, ಪ್ಲಾಸ್ಟರ್ ಆಫ್ ಪ್ಯಾರೀಸ್‌ನಿಂದ ವಿವಿಧ ಮೊಲ್ಡ್‌ಗಳನ್ನು ಸಹ ತಯಾರಿಸಿ ಶಿಲ್ಪಕಲಾಕೃತಿಯನ್ನು ತಯಾರಿಸುತ್ತಾರೆ. ಕಂಪ್ಲಿಯಲ್ಲಿ ಭೂಸರ ಕೃಷ್ಣಪ್ಪ ಸಂಪ್ರದಾಯದ ಮತ್ತು ಆಧುನಿಕ ಯಂತ್ರೋಪಕರಣಗಳನ್ನು ಉಪಯೋಗಿಸಿಕೊಂಡು ಸುಂದರವಾದ ಗಣಪತಿಯ ಕಲಾಕೃತಿಗಳನ್ನು ರಚಿಸುತ್ತಾರೆ. ಹೂವಿನ ಹಡಗಲಿಯ ಹಂಸಾನಂದಾಚಾರ್ಯ, ಹೊಸಪೇಟೆಯ ಎಂ.ಪಿ. ಪ್ರಕಾಶ ನಗರದ ಸುರೇಶ್ ಶಿಲ್ಪಿ ಇವರ ಶಿಲ್ಪ ಕಲಾಕೃತಿಗಳನ್ನು ಸಂಪ್ರದಾಯವಾಗಿಯೂ ಆಧುನಿಕ ಪದ್ಧತಿಯ ರಚನೆ ಕಾಣಬಹುದು.

ವಾಸ್ತುಕಲೆ

ವಾಸ್ತುಕಲೆಗೆ ಹಿಂದಿನಿಂದಲೂ ವಿಶಿಷ್ಟಸ್ಥಾನ ಕೊಡಲಾಗಿದೆ. ಈ ಜಿಲ್ಲೆಗೆ ಹಲವು ರಾಜಮನೆತನಗಳು ತಮ್ಮದೇಯಾದ ವಾಸ್ತುಶೈಲಿ ಕಲಾ ಕೊಡುಗೆ ಕೊಟ್ಟಿದ್ದು, ಇದರಲ್ಲಿ ವಿಜಯನಗರ ಕಾಲದ ಕಲೆಗೆ ಒಂದು ವಿಶಿಷ್ಟಸ್ಥಾನವಿದೆ. ಈ ಕಾಲದಲ್ಲಿನ ಅಗಾಧವಾದ ಕಲಾಚಟುವಟಿಕೆಗಳನ್ನು ವಿಜಯನಗರ ಕಲೆಯ ವಿವಿಧ ಹಂತಗಳಲ್ಲಿ ಪ್ರಸ್ತುತ ಪಡಿಸಿದೆ. ವಿಜಯನಗರ ಸಾಮ್ರಾಜ್ಯದ ವ್ಯಾಪ್ತಿಯಿರುವಷ್ಟು ಉದ್ದಗಲಕ್ಕೂ ಕಲಾಚಟುವಟಿಕೆಗಳು ನಡೆದೇ ಇದ್ದವು. ವಿಜಯನಗರವನ್ನು ಆಳಿದ ವಿಭಿನ್ನ ರಾಜಮನೆತನಗಳು ದೇವಾಲಯಗಳ, ಅರಮನೆಗಳ, ಕೋಟೆಕೊತ್ತಲಗಳ ಮತ್ತು ಕೆರೆ ಬಾವಿಗಳ ನಿರ್ಮಾಣಕ್ಕೆ ಪೋಷಕವಾಗಿದ್ದುದು ದಾಖಲೆಗಳಿಂದ ತಿಳಿದುಬರುತ್ತದೆ.

ಆ ಕಾಲದ ಕಲಾವಿದರು ಕಟ್ಟಡಗಳ ನಿರ್ಮಾಣದ ತೀವ್ರತೆ ಮತ್ತು ಇರುವ ಕಾಲಾವಕಾಶದಲ್ಲಿ ಇವುಗಳನ್ನು ಸಂಪೂರ್ಣಗೊಳಿಸುವುದಕ್ಕಾಗಿ ಹೊಸ ಹೊಸ ಮಾಧ್ಯಮಗಳನ್ನು ರೂಢಿಸಿಕೊಳ್ಳಬೇಕಾಯಿತು. ಇದಕ್ಕಾಗಿ ಶಿಖರ, ಗೋಪುರಗಳ ನಿರ್ಮಾಣಗಳಲ್ಲಿ ಹೊಸ ಮಾಧ್ಯಮವನ್ನು ಪ್ರಯೋಗಿಸಲಾಯಿತು. ವಿಜಯನಗರ ದೇವಾಲಯಗಳ ಮುಖ್ಯ ಆಕರ್ಷಣೆಗಳಾದ ಮಹಾದ್ವಾರದ ಮೇಲಿನ ಆಕಾಶದೆತ್ತರಕ್ಕೆ ಚಾಚಿಕೊಂಡಿರುವ ಗೋಪುರ, ದೇವಸ್ಥಾನದ ಕಲ್ಯಾಣಮಂಟಪಗಳು ಮತ್ತು ಮುಖಮಂಟಪಗಳು, ಮೇಲಿನ ಪ್ರಸ್ತಾರಗಳ ಸಾಲು ಹೀಗೆ ದೇವಾಲಯದ ಅಲಂಕರಣಕ್ಕೆ ಕಲಾವಿದ ಅಂದು ಪ್ರಚಲಿತದಲ್ಲಿದ್ದ ಹೊಸ ಮಾಧ್ಯಮವನ್ನು ತನ್ನದಾಗಿಸಿಕೊಂಡಿರಬೇಕು. ನಂತರ ಕಾಷ್ಠ ಹೆಚ್ಚಾಗಿ ಉಪಯೋಗಿಸಿಕೊಂಡದ್ದನ್ನು ವಾಸ್ತುಕಲೆಯಲ್ಲಿ ಕಾಣುತ್ತೇವೆ. ಹಲವು ಅಂಕಣದ ಕಂಬ, ಬಾಗಿಲುಗಳಿಂದ ಕೂಡಿದ ಮನೆಗಳು ಕಲಾತ್ಮಕವಾದ ಕಾಷ್ಠದಲ್ಲಿ ಅರಳಿದ ಕಲೆಯಿಂದ ಕೂಡಿದ್ದಾಗಿದ್ದವು. ಇಂದು ಹಲವು ಯಂತ್ರೋಪಕರಣಗಳನ್ನು ಉಪಯೋಗಿಸಿಕೊಂಡು ಹಲವಾರು ಆಧುನಿಕ ರೀತಿಯಲ್ಲಿ ಸಣ್ಣ ದೊಡ್ಡ ಕಟ್ಟಡಗಳ ನಿರ್ಮಾಣವಾಗುತ್ತವೆ. ಕಟ್ಟಡ ತಾಂತ್ರಿಕ ಕಲೆಗಳು ಯಾಂತ್ರಿಕತೆಯ ಅಳವಡಿಕೆಯೊಂದಿಗೆ

---

೩೦. ಸಿ. ಮಹಾದೇವ : ಹಂಪಿ ಸಂಪುಟ, ಪುಟ – ೧೨೮

ನಿರ್ಮಾಣವಾಗುತ್ತಿವೆ. ವಿವಿಧ ಬಣ್ಣಗಳ ಲೇಪನ, ವೈವಿಧ್ಯಮಯವಾದ ಟೈಲುಗಳು, ವಿವಿಧ ವಿನ್ಯಾಸದ ಬಣ್ಣ ಬಣ್ಣದ ಗಾಜುಗಳ ಅಳವಡಿಕೆ ಹೀಗೆ ಸಮಕಾಲೀನತೆಯೊಂದಿಗೆ ಹೆಜ್ಜೆ ಹಾಕುತ್ತಿದೆ ಈ ಕಲೆ.

ಸಂಗೀತ

ನೃತ್ಯ, ಸಂಗೀತ ಮತ್ತು ನಾಟಕಸ್ಥಾನವನ್ನು ಚಲನಚಿತ್ರವು ಬಹುತೇಕ ಆಕ್ರಮಣ ಮಾಡಿಕೊಂಡಿದ್ದರಿಂದ ನಾಟಕ, ಸಾಂಪ್ರದಾಯಿಕ ಸಂಗೀತ ಬಹುಮಟ್ಟಿಗೆ ಮರೆಯಾಗಿದೆ ಎನ್ನಬಹುದು. ಈ ಹಿಂದೆ ದೊಡ್ಡ ಸಂಖ್ಯೆಯ ಉತ್ಕೃಷ್ಟ ಸಂಗೀತಗಾರರು ಮತ್ತು ನಾಟಕಕಾರರು ಕಣ್ಣೆದುರಿಗೆ ಬಂದು ನಿಲ್ಲುತ್ತಾರೆ. ಇವರೆಲ್ಲಾ ಅಪಾರ ಕಾಣಿಕೆ ನೀಡಿ ಕಣ್ಮರೆಯಾಗಿದ್ದಾರೆ. ಇಂತಹವರ ಧ್ವನಿ ಕೇಳಿದ, ಹೆಜ್ಜೆ ಮೂಡಿಸಿಕೊಂಡ ರಂಗಮಂದಿರಗಳನ್ನು ಅಲ್ಲೊಂದು ಇಲ್ಲೊಂದು ಕಾಣಬಹುದು. ಸಂಗೀತದ ಕಲಾವಿದರಾದ ಎಂ. ಶೇಷಗಿರಿ ಆಚಾರ್, ಪಂಪಾಪತಿಸ್ವಾಮಿ ಒಡೆಯರ್, ವನಮಾಲಾ ಕುಲಕರ್ಣಿ ಈಶ್ವರ ಮೋದಗೇರಿ[೩೧] ಮುಂತಾದ ಕಲಾವಿದರು ಈ ಜಿಲ್ಲೆಯಲ್ಲಿ ತಮ್ಮ ನಾದ ಸಂಗೀತದ ಸುಧೆಯನ್ನು ಕೇಳಿಸಿದ್ದಾರೆ. ಇಂದು ಹಲವು ವಿಶ್ವವಿದ್ಯಾಲಯಗಳು ಶಿಷ್ಟಪದ್ಧತಿಯಲ್ಲಿ ಪದವಿಗಳನ್ನು ನೀಡಿ ಉನ್ನತ ಸ್ಥಾನಮಾನವನ್ನು ಸಂಗೀತ, ನಾಟಕ, ನಾಟ್ಯ ಮುಂತಾದ ಕಲೆಗೆ ನೀಡುತ್ತಿವೆ ಎನ್ನಬಹುದು. ಅಂತಹ ವಿಶ್ವವಿದ್ಯಾಲಯದ ಪಟ್ಟಿಯಲ್ಲಿ ಕನ್ನಡ ವಿಶ್ವವಿದ್ಯಾಲಯವು ಇದೆ ಎನ್ನುವುದು ಬಳ್ಳಾರಿಯ ಜಿಲ್ಲೆಗೆ ಹೆಮ್ಮೆಯ ವಿಷಯವಾಗಿದೆ.

ಬಯಲಾಟ ಮತ್ತು ನಾಟಕಗಳು

ನಾಟಕಗಳು ದೊಡ್ಡಾಟದಿಂದಲೇ ಪ್ರೇರಣೆಗೊಂಡಿದ್ದು, ಬೇರೆ ಬೇರೆ ಕಥೆಗಳು ನಾಟಕ ರೂಪದಲ್ಲಿ ಪ್ರಸ್ತುತಗೊಂಡವು. ಈ ನಾಟಕಕ್ಕೆ ತಕ್ಕಂತೆ ವೇಷ ವೇಷಕ್ಕೆ ತಕ್ಕಂತೆ ಭಾಷೆ ರೂಪಗೊಂಡು ನಾಟಕಗಳಾದವು. ದೊಡ್ಡಾಟ ಬಳ್ಳಾರಿ ಜಿಲ್ಲೆಯ ಮತ್ತೊಂದು ಹೆಮ್ಮೆಯ ಕಲೆಯಾಗಿದೆ. ಈ ಜಿಲ್ಲೆಯಲ್ಲಿ ಗಿರಿಜಾಕಲ್ಯಾಣ, ದೇವಿಕಥೆ, ಪಾರ್ಥವಿಜಯ, ಪಾಂಡುವಿಜಯ, ದುಶ್ಯಾಸನ ಕಾಳಗ, ವೀರಾಭಿಮನ್ಯು ಕಾಳಗ, ಸುಂದೋಪ ಸುಂದರ, ಕನಕಾಗಿರಿ ಕಲ್ಯಾಣ, ದಕ್ಷಬ್ರಹ್ಮನ ಕಥೆ, ರಕ್ತರಾತ್ರಿ, ಕುಮಾರರಾಮ, ಜಗಜ್ಯೋತಿ ಬಸವೇಶ್ವರ ಮುಂತಾದವು ಕಂಪ್ಲಿಯಲ್ಲಿ ಆಡಿದ ಬಯಲಾಟದ ವಸ್ತು ವಿಷಯವಾಗಿದ್ದು, ಸೋಗಿ, ರಾಮಸಾಗರ, ಕುರುಗೋಡು, ಕುಡುತಿನಿ ಇಂಥ ಊರುಗಳು ಈ ಬಯಲಾಟದ ತವರುಮನೆಗಳು. ಅದರಲ್ಲಿ ಕುಡುತಿನಿ ಮತ್ತು ಕುಡುತಿನಿ ಭೀಮೇಶನ ಅಂಕಿತದೊಂದಿಗೆ ಕೊನೆಗೊಳ್ಳುವ ಆಟದ ಹಾಡುಗಳು ದೊಡ್ಡಾಟಕ್ಕೆ ಕುಡುತಿನಿ ಗ್ರಾಮ ನೀಡಿದ ಅದ್ಭುತ ಕೊಡುಗೆಗಳಾಗಿವೆ. ಕಮಲಾಪುರ ಹತ್ತಿರ ವೆಂಕಟಾಪುರ ಕ್ಯಾಂಪ್, ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ನಂದಿಪುರಗಳಲ್ಲಿ ಇವರ ಕುಟುಂಬಗಳನ್ನು ಕಾಣಬಹುದು.

---

೩೧. ಡಾ. ದಯಾನಂದ ಕಿನ್ನಾಳ : ಬಳ್ಳಾರಿ ಜಿಲ್ಲಾ ದರ್ಶನ, ಪುಟ – ೧೮೦

ಹಡಗಲಿ ತಾಲ್ಲೂಕಿನಲ್ಲೂ ಇವರು ಕಂಡುಬರುತ್ತಾರೆ.[೩೨] ಕಂಪ್ಲಿ ಬಯಲಾಟ ನಾಟಕದ ದೊಡ್ಡ ಕಲಾಬಳಗವೇ ಇದ್ದಿತು ಎನ್ನಬಹುದು. ಇಂದು ನಾಟಕವನ್ನು ಆಡದ ಕಾರಣ ಈ ಒಂದು ಗುಂಪು ಚದುರಿದ್ದು ಇದರಲ್ಲಿನ ಕೆಲವರು ನಾಟಕದ ಹಲವು ಪ್ರಸಂಗಗಳನ್ನು ಈಗಲೂ ಮರೆತಿಲ್ಲ.

ಪ್ರಮುಖಪಾತ್ರ, ವಾದಿರಾಜಾಚಾರ್ ಜೀರ್ ವಿರೂಪಾಕ್ಷಪ್ಪ, ಇಡ್ಲಿ ರಾಚಯ್ಯ, ಯಲ್ಲಪ್ಪ, ಬಿಂಗಿ ವಿರುಪಣ್ಣ, ಕಂಪ್ಲಿಯ ವೀರೇಶಯ್ಯ ಸ್ವಾಮಿ ಇವರಿಗೆ ೫೦ನೇ ಸುವರ್ಣ ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ಉತ್ತಮ ವೀರಭದ್ರ ನಾಟ್ಯ ಪ್ರಶಸ್ತಿ ಸಿಕ್ಕಿದೆ ಮತ್ತು ಹಾಲು ಮಾರುವ ಈರಣ್ಣ, ರಾಶೆಪ್ಪ, ಜೀರ್ ರವಿ[೩೩] ಮುಂತಾದವರು ಬಯಲಾಟದ ಮತ್ತು ನಾಟಕದ ಕಲಾವಿದರು. ಇಂದಿಗೂ ಕಂಪ್ಲಿ ನಟರಾಜ ಕಲಾಮಂದಿರವು ಹಲವು ನಾಟಕ ಪ್ರಸಂಗಗಳನ್ನು ಕಂಡಿದೆ. ಇಂದಿಗೂ ಬೇರೆ ಬೇರೆ ಕಡೆಗಳಿಂದ ಬಂದಂತಹ 'ನೀನಾಸಂ' ತಂಡದಂತಹ ಹಲವು ನಾಟಕಗಳು ಆಗೊಂದು ಈಗೊಂದು ನಡೆಯುತ್ತಿರುತ್ತವೆ. ಇದಕ್ಕೆ ಬಳ್ಳಾರಿಯ ಜೋಳದ ರಾಶಿ ದೊಡ್ಡನಗೌಡರ ರಂಗಮಂದಿರ ಮತ್ತು ರಾಘವಕಲಾ ಮಂದಿರಗಳು ಇಂದಿಗೂ ಸಾಕ್ಷಿಯಾಗಿವೆ.

ನಾಟ್ಯ

ವೇದಯುಗದಲ್ಲಿ ನೃತ್ಯವು ಒಂದು ವಿಶಿಷ್ಟ ಕಲಾಪ್ರಕಾರವಾಗಿ ಪ್ರಾಯಶಃ ರೂಪುಗೊಂಡಿರಲಿಲ್ಲವೆಂದೂ ಅದೊಂದು ಸಾಮಾಜಿಕ ಅಥವಾ ಸಾಮೂಹಿಕ ಚಟುವಟಿಕೆ ಮಾತ್ರವಾಗಿತ್ತೆಂದು ಹೇಳಲಾಗುತ್ತದೆ. ನೃತ್ಯವನ್ನು ಕುರಿತು ಅತಿ ಪ್ರಾಚೀನ ಗ್ರಂಥಗಳು ಲಭ್ಯವಾಗಿಲ್ಲ. ಕ್ರಿ.ಪೂ. ೪ನೇ ಶತಮಾನಕ್ಕಿಂತ ಮುಂಚಿನವನಾದ ವೈಯ್ಯಾಕರಣಿ ಪಾಣಿನಿಯು 'ನೃತ್' ಧಾತುವಿನ ಬಗೆಗೆ ಸೂತ್ರ ವ್ಯಾಖ್ಯಾನ ಮಾಡುತ್ತಾನೆ. ನಾಟ್ಯದ ಬಗೆಗೆ ಹಿಂದೆ ಚರ್ಚಿಸಿದಂತೆ ನೃತ್ಯದ ಹಲವು ಉಲ್ಲೇಖಗಳು ಮತ್ತು ಶಾಸನಗಳು ನಮಗೆ ದೊರೆಯುತ್ತವೆ. ಈ ನಾಟ್ಯದ ಕುರಿತು ಇಂದು ಕೆಲವು ನಾಟ್ಯಶಾಲೆಗಳನ್ನು ಈ ಜಿಲ್ಲೆ ಕಂಡಿದೆ ಎನ್ನಬಹುದು. ಆದರೆ ಈ ನಾಟ್ಯವನ್ನು ಹೇಳಿಕೊಡುವ ಗುರು ಒಬ್ಬರು ನಟರಾಜಕಲಾಮಂದಿರ, ಕಂಪ್ಲಿ ಮತ್ತು ನಾಟ್ಯವನ್ನು ಕುರಿತು ಕೆಲವು ಮನೆಗಳಲ್ಲಿ ಅಭ್ಯಾಸ ಕಾಣಬಹುದು.

ಈ ಜಿಲ್ಲೆಯ ಸಾಹಿತ್ಯ ಕೂಡ ಉಚ್ಛ್ರಾಯಸ್ಥಿತಿಯಲ್ಲಿತ್ತು ಎನ್ನುವುದಕ್ಕೆ ಹಲವು ದಾಖಲೆಗಳು ನಮಗೆ ದೊರೆಯುತ್ತವೆ. ಕ್ರಿ.ಶ. ೧೨-೧೩ನೇಯ ಶತಮಾನಗಳಿಂದಲೇ ಈ ತಾಲ್ಲೂಕು ಸಾಹಿತ್ಯದಲ್ಲಿ ಹೆಸರು ಮಾಡಿದೆ. ಹರಿಹರ, ರಾಘವಾಂಕ, ಬುಕ್ಕರಾಯನ ಸೊಸೆ ಗಂಗಾಂಬಿಕೆ, ಲಕ್ಕಣ್ಣ ದಂಡೇಶ, ಚಾಮರಸ, ವಿರೂಪಾಕ್ಷ ಪಂಡಿತ ಮುಂತಾದ ಪ್ರಖ್ಯಾತ ಕನ್ನಡ ಕವಿಗಳು ಈ ಪ್ರದೇಶದವರಾಗಿದ್ದಾರೆ.

---

೩೨. ಡಾ. ವೀರೇಶ್ ಬಡಿಗೇರ್ : ಬಳ್ಳಾರಿ ಜಿಲ್ಲಾ ದರ್ಶನ, ಪುಟ – ೧೫೩

೩೩. ಡಾ. ಎಸ್. ಸಿ. ಪಾಟೀಲ : ಕಂಪ್ಲಿ, ಪುಟ – ೭೦

ಆಧ್ಯಾತ್ಮಿಕ ರಂಗದಲ್ಲಿ 'ದಾಸಕೂಟ' ವೆಂದು ಖ್ಯಾತಿ ಪಡೆದ ನರಹರಿತೀರ್ಥರು, ಪುರಂದರದಾಸರು ಮತ್ತು ಕನಕದಾಸರು ವಿಜಯನಗರದ ಅರಸರ ಕಾಲದಲ್ಲಿದ್ದರು. ಇವರು ರಚಿಸಿದ ಕೀರ್ತನೆಗಳು ಬಹಳ ಜನಪ್ರಿಯವಾಗಿವೆ. ಜಿಲ್ಲೆಯ ಹಿರಿಯ ಕವಿಗಳಾದ ಜೋಳದ ರಾಶಿ ದೊಡ್ಡನ ಗೌಡರು ಆಧ್ಯಾತ್ಮ ಮತ್ತು ವಚನ ಸಾಹಿತ್ಯದ ಪ್ರಭಾವವನ್ನು ಅವರ ಕವಿತೆಗಳುದ್ದಕ್ಕೂ ಬಹು ಸಮರ್ಥವಾಗಿ ವ್ಯಕ್ತಪಡಿಸಿದ್ದಾರೆ. ಹಿ.ಮೆ. ನಾಗಯ್ಯನವರು ಸ್ವಾತಂತ್ರ್ಯ ಸಮರದ ಕಥೆಯನ್ನೇ ರಗಳೆಯ ಬಂಧಕ್ಕೆ ಆಳವಡಿಸಿ, ಐದು ಅಧ್ಯಾಯಗಳಲ್ಲಿ ವಿಷಯವನ್ನು ವಿಸ್ತರಿಸಿದ್ದಾರೆ.


ಕೆ. ವಿರೂಪಾಕ್ಷಗೌಡರು, ಹೊ. ಮ. ಪಂಡಿತಾರಾಧ್ಯರು, ಎಸ್. ಎಸ್. ಹಿರೇಮಠ, ಕುಂ. ವೀ., ಹಿ. ಮ. ಗುರುಬಸವರಾಜ, ವಿಶ್ವನಾಥ ದೇಸಾಯಿ, ಅಂಬಿಕಾ ಜಾಲಗಾರ, ಆರ್.ಬಿ.ದಿವಾಕರ್, ಮಲ್ಲೇಶ ಬಾರ್ಕರ್, ಡಾ ಅಂಬಣ್ಣ, ಪರಶುರಾಮ ಕಲಾಲ್, ಪೀರಭಾಷಾ, ಪದ್ಮವಿಠಲ, ಸುಶೀಲಾ ಶಿರೂರು, ಶಾಂತಕುಮಾರಿ, ಸುಧಾ ಚಿದಾನಂದಗೌಡ, ಡಿ.ಜಿ.ಎಂ. ಸುಲೋಚನಾ, ಹೆಚ್.ಎಸ್. ಮಹಾದೇವಿ, ಎಂ.ಡಿ. ವೆಂಕಮ್ಮ ಮುಂತಾದವರು ಬಂಡಾಯದಲಿತ ಪ್ರಜ್ಞೆಯೊಂದಿಗೆ ವಿಭಿನ್ನವಾದ ಕವಿತೆಗಳನ್ನು ರಚಿಸಿದ್ದಾರೆ. ಮತ್ತು ಸಮಕಾಲೀನ ಕಾವ್ಯಪರಿಸರಕ್ಕೆ ವೈಚಾರಿಕ ಪ್ರಕ್ರಿಯೆಯನ್ನು ಅತ್ಯಂತ ಸಮರ್ಥವಾಗಿ ಸುಕನ್ಯಾರವರು ಪ್ರತಿಪಾದಿಸುತ್ತಾರೆ. ಹೆಣ್ಣಿನ ಸಹಜ ಪ್ರೀತಿಯ ಹಂಬಲವನ್ನು ವ್ಯಕ್ತಪಡಿಸುವಲ್ಲಿ ಇವರ ಕವಿತೆಗಳು ಧ್ವನಿಪೂರ್ಣವಾಗಿವೆ.[೩೪] ಇಂತಹ ಕಲಾಪ್ರತಿಭೆ ಒಂದೆಡೆ ಸಂಗ್ರಹವಾದುದಲ್ಲ. ಒಂದೇ ತರಹದಲ್ಲಿ ಪ್ರತಿಭೆ ಬೆಳಕಿಗೆ ಬರುವ ಹಾಗೆ ಇರಬೇಕು. ಜನರು ಅದನ್ನು ಅನುಭವಿಸುವಂತಿರಬೇಕು. ಇಂತಹದನ್ನು ನಿಜವಾದ ಪ್ರತಿಭೆ ಎನ್ನುತ್ತೇವೆ. ಪ್ರತಿಭೆ ಪ್ರಯೋಜನಕಾರಿಯಾಗಿ, ಆನಂದದಾಯಕವಾಗಿ ಮಾನವನಿಗೆ ದೊರೆಯುತ್ತಾ ಬಂದಿದೆ. ಪ್ರತಿಭೆಯು ಶಕ್ತಿಯೂ ಹೌದು, ಕ್ರಿಯೆಯೂ ಹೌದು. ಇದನ್ನು ಅನುಕೂಲವಾಗಿ ಬಳಸಿಕೊಳ್ಳಲು ವ್ಯಕ್ತಿಯೊಬ್ಬನಿಗೆ ಸಾಧ್ಯವಾಗುವುದಿಲ್ಲ. ಮತ್ತೊಬ್ಬರಿಗೆ ಅದು ಆನಂದ ಕೊಡುವಂಥದ್ದಾಗಿರುತ್ತದೆ. ಪ್ರತಿಭೆಯು ಬೇರೆ ಬೇರೆ ರೂಪದಲ್ಲಿ ಹುಟ್ಟಿ ಒಂದು ಸಂಸ್ಕೃತಿಯ ಗೂಡಲ್ಲಿ ಬಾಳಿ ಬದಲಾಗುತ್ತಾ ಬೆಳಗುತ್ತಿರುತ್ತದೆ.

ಜನಪದ ಕಲೆಗಳು ಒಂದು ನಾಡಿನ, ಜನಾಂಗದ, ವರ್ಗದ ಬದುಕಿನ ಬೆಳವಣಿಗೆಯನ್ನು, ಅವರ ಪರಂಪರೆ ಹಾಗೂ ಸಂಪ್ರದಾಯಗಳನ್ನು ತಿಳಿಯಬೇಕಾದರೆ ಅವರ ಪರಿಸರದಲ್ಲಿ ಜೀವ ಪಡೆದಿರುವ ಕಲೆಗಳನ್ನು ಅರಿಯಬೇಕಾಗುತ್ತದೆ. ಇಂತಹ ಕಲೆಗಳನ್ನು ಅರಿತಾಗ ಸಂಸ್ಕೃತಿಯ ಶ್ರೀಮಂತಿಕೆ, ಅದರ ಬೆಲೆ ನಮಗೆ ತಿಳಿಯುತ್ತದೆ. ಮಾನವನ ಪ್ರತಿ ಹಂತದಲ್ಲಿ ಜನಪದದ ಸಾಂಸ್ಕೃತಿಕ ಲೋಕದ ಕಲೆ ಪ್ರೇರಣೆಯ ವಸ್ತುವಾಗಿರುತ್ತದೆ. ಶಿಷ್ಟ ಸಂಪ್ರದಾಯದಂತೆ ಕಟ್ಟು ಬದ್ಧತೆ ಇಲ್ಲದೆಯೇ ಸ್ವಚ್ಛಂದವಾದ ಕಾರ್ಯದಲ್ಲಿ ನಿರತರಾದಾಗ ಸಂದರ್ಭಕ್ಕನುಗುಣವಾಗಿ ಸಂತೋಷ ಕ್ಷಣಗಳಲ್ಲಿ ತಮ್ಮ ಇಚ್ಛಾ ಪ್ರಕಾರವಾಗಿ ಕುಣಿಯುವುದರ ಮೂಲಕ, ಕೇಕೆ ಹಾಕುವುದರ

೩೪. ಡಾ. ವೆಂಕಟಗಿರಿ ದಳವಾಯಿ : ಕಾವ್ಯ ವೈಶಿಷ್ಟ್ಯಗಳು, ಬಳ್ಳಾರಿ ಜಿಲ್ಲಾ ದರ್ಶನ, ಪುಟ – ೧೪೪



ಹಂಪೆಯ ವಿರೂಪಾಕ್ಷೇಶ್ವರ ದೇವಸ್ಥಾನದ ನೋಟ



ಬಳ್ಳಾರಿ ಜಿಲ್ಲೆಯ ಗುಡ್ಡದ ಮೇಲಿನ ಕೋಟೆ



ತುಂಗಬದ್ರಾ ಜಲಾಶಯ ಹೊಸಪೇಟೆ



ಗಂಗಾಧರೇಶ್ವರ ದೇವಸ್ಥಾನ ಕೆಂಚನಗುಡ್ಡ



ಹಂಪೆಯ ಪುಷ್ಕರಣಿ



ಹಂಪೆಯ ಕಮಲ ಮಹಲ



ಹಂಪೆಯ ಕಲ್ಲಿನ ರಥ



ಹಂಪೆಯ ಗಜ ಶಾಲೆ



ಕಡಲೆ ಕಾಳು ಗಣೇಶ



ಸಾಸಿವೆ ಕಾಳು ಗಣೇಶ



ಕುಮಾರಸ್ವಾಮಿ ದೇವಾಲಯ ಸಂಡೂರು

ಮೂಲಕ, ಹಾಡುವುದರ ಮೂಲಕ, ಚಿತ್ರಿಸುವುದರ ಮೂಲಕ ಅವರ ಭಾವಪ್ರತಿಭೆಯನ್ನು ಅಭಿವ್ಯಕ್ತಿಪಡಿಸುತ್ತಾರೆ. ವಿಜ್ಞಾನ ದಯಪಾಲಿಸಿರುವ ಮನೋರಂಜನೆಗಳಾವುವೂ ಇರದ ಕಾಲದಲ್ಲಿ ದುಡಿಮೆಯ ಏಕತಾನವನ್ನು ಕಳೆದು ಶ್ರಮವನ್ನು ಪರಿಹರಿಸಿದ ಕಲೆಗಳು ಹಿಂದಿನಿಂದಲೂ ಮನೋರಂಜನೆ ಒದಗಿಸಿಕೊಡುವುದರ ಜೊತೆಗೆ ನೀತಿ, ನಿಯಮ, ಸಮೃದ್ಧ ಸಂಸ್ಕೃತಿಯ ಬೆಳವಣಿಗೆಯ ಸ್ವರೂಪವನ್ನು ಈ ಜನಪದ ಕಲೆಯಲ್ಲಿ ಕಾಣಬಹುದು. ಹೀಗೆ ಸಾಮಾಜಿಕವಾಗಿ ಪರಸ್ಪರಲ್ಲಿ, ಸ್ನೇಹ, ವಿಶ್ವಾಸ, ಸೌಹಾರ್ದಗಳನ್ನು ಹೆಚ್ಚಿಸುವ ಅನೇಕ ಕಲೆಗಳನ್ನು ಬಳ್ಳಾರಿ ಜಿಲ್ಲೆಯ ಉದ್ದಗಲಕ್ಕೂ ಕಾಣಬಹುದು.

ಒಟ್ಟಾರೆ ಬಳ್ಳಾರಿಯ ಐತಿಹಾಸಿಕ, ರಾಜಕೀಯ ಹಿನ್ನೆಲೆ ಮತ್ತು ಸಾಂಸ್ಕೃತಿಕ ಪರಿಸರ ತುಂಬಾ ವಿಶಿಷ್ಟವಾಗಿದ್ದು, ವಿಜಯನಗರ ಸಾಮ್ರಾಜ್ಯದ ಸಂದರ್ಭದಲ್ಲಿ ಅದು ವಿಶ್ವದ ಗಮನ ಸೆಳೆದದ್ದು, ಅನೇಕ ಐತಿಹಾಸಿಕ ದಾಖಲೆಗಳಿಂದ ತಿಳಿದುಬರುತ್ತದೆ. ಭಾರತದಲ್ಲಿ ವಿಜಯನಗರ ಸಾಮ್ರಾಜ್ಯದಂತಹ ಇನ್ನೊಂದು ಸಾಮ್ರಾಜ್ಯವಿಲ್ಲವೆಂಬ ವಿದೇಶಿ ಬರಹಗಾರರ ಮಾತು ಗಮನಾರ್ಹವಾದುದಾಗಿದೆ. ಇಂತಹ ದೊಡ್ಡ ಪರಂಪರೆಯನ್ನು ಹೊಂದಿದ ಈ ಜಿಲ್ಲೆಯ ಸಾಂಸ್ಕೃತಿಕ ಪರಿಸರ ಮತ್ತು ಲಲಿತಕಲೆಗಳು ಸಮೃದ್ಧವಾಗಿ ಬೆಳೆದುಬಂದಿದ್ದು, ಅವುಗಳ ಸ್ಥೂಲ ನೋಟವನ್ನು ಇಲ್ಲಿ ಕೊಡುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ - ಮೂರು

ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ

ಮಾನವ ಪ್ರಾರಂಭದಿಂದಲೂ ತನ್ನ ಸುತ್ತಮುತ್ತಲಿನ ಪರಿಸರವನ್ನು ವಿವಿಧ ಕಲೆಗಳಲ್ಲಿ ವಿಭಿನ್ನ ಪ್ರಕಾರದಲ್ಲಿ ಅಭಿವ್ಯಕ್ತ ಪಡಿಸಿದ್ದಾನೆ. ವಿವಿಧ ಕಲೆಗಳಲ್ಲಿ ಚಿತ್ರಕಲೆಯು ಒಂದು. ಈ ಚಿತ್ರಕಲೆಯಲ್ಲಿ ಪ್ರಾಗೈತಿಹಾಸಿಕ ಚಿತ್ರಕಲಾ ಪ್ರಕಾರವಾಗಿ ಇಂದು ಹೇಳಿಕೊಳ್ಳಲ್ಪಡುತ್ತದೆ. ಇಂದಿನ ಚಿತ್ರಕಲೆಗೆ ಅಂದಿನ ಚಿತ್ರಕಲೆಯು ಬುಡದಂತೆ ಪರೋಕ್ಷ ಕೆಲಸ ಮಾಡುತ್ತಿರುತ್ತದೆ. ಇವತ್ತಿನ ಚಿತ್ರಗಳನ್ನು ಅಧ್ಯಯನಕ್ಕೆ ಒಳಪಡಿಸಬೇಕಾದರೆ, ಹಿಂದಿನ ಕಲೆಗಳ ಕಡೆ ತಿರುಗಿ ನೋಡುತ್ತಾನೆ.

ಒಂದೊಂದು ವಿಧದ ಕಲೆಗಳ ಸಂಸ್ಕೃತಿಯ ಶ್ರೀಮಂತಿಕೆಯನ್ನು ಆಯಾ ಪ್ರದೇಶಗಳು ಹೊಂದಿರುತ್ತವೆ. ಅಂತಹ ಕಲೆಯಾದ ಪ್ರಾಗೈತಿಹಾಸಿಕ ಚಿತ್ರಕಲೆಯು ಕರ್ನಾಟಕದ ಎಲ್ಲಾ ಕಡೆಗಳಲ್ಲಿ ಕಂಡುಬರುವುದಿಲ್ಲ. ಕೊಪ್ಪಳ, ಚಿತ್ರದುರ್ಗ, ರಾಯಚೂರು, ಬಳ್ಳಾರಿ ಜಿಲ್ಲೆಗಳಲ್ಲಿ ಕಂಡುಬರುತ್ತದೆ. ಶ್ರೀಮಂತ ಜಿಲ್ಲೆಯಾದ ಬಳ್ಳಾರಿ ಜಿಲ್ಲೆಯು ಪ್ರಾಗೈತಿಹಾಸಿಕ ಚಿತ್ರವನ್ನು ಹೊಂದಿದೆ. ಚಿತ್ರಕಲಾವಿದರಾದ ನಮಗೆ ಇಂತಹ ಕಲೆ ಕುರಿತು ಚಿತ್ರಕಲೆ ನೆಲೆಯಲ್ಲಿ ಅಧ್ಯಯನ ಅವಶ್ಯಕವಾಗಿದೆ. ಈ ಪ್ರಾಗೈತಿಹಾಸಿಕದ ಕಲೆಯ ಪ್ರಾಚೀನ, ಪ್ರಾರಂಭ ಕೂಡ ಅಷ್ಟೇ ಕುತೂಹಲಭರಿತವಾದುದ್ದಾಗಿದೆ.

ಭೂಮಿಯ ಮೇಲೆ ಜೀವಸೃಷ್ಟಿ ಸುಮಾರು ೭೦ ಕೋಟಿ ವರ್ಷಗಳ ಹಿಂದೆ ಆಯಿತು ಎನ್ನಲಾಗುತ್ತದೆ. ಏಕಕೋಶ ಜೀವಿ (ಅಮೀಬಾ) ಕಾಣಿಸಿಕೊಂಡದ್ದು ೫೦ ಕೋಟಿ ವರ್ಷಗಳ ಹಿಂದೆ ಇವುಗಳ ವಂಶೋತ್ಪತ್ತಿ ಸಾಗಿತು. ಮೀನು, ನೆಲ – ಜಲಗಳಲ್ಲಿ ಸಂಚರಿಸುವ ಕಪ್ಪೆ, ಹಲ್ಲಿ, ಉಡ, ನಂತರ ಸರೀಸೃಪಗಳು, ಹಾಲುಣಿಸುವ ಸಸ್ತನಿಗಳು ಉದಿಸಿದವು. ಮಾನವನ ವಿಕಾಸಕ್ಕೆ

ಕಾರಣವಾದ ಕೆಲವು ಸಣ್ಣ ಪ್ರಾಣಿಗಳು ಸುಮಾರು ೩೦ ಲಕ್ಷ ವರ್ಷಗಳ ಹಿಂದೆ ಕಾಣಿಸಿದವು. ಅವೇ ವಿಕಾಸವಾಗಿ ಅನೇಕ ರೀತಿಯ ಕಪಿಗಳು, ಬಾಲವಿಲ್ಲದ ವಾನರಗಳಾದ ಚಿಂಪಾಂಜಿ, ಗಿಬ್ಬನ್ ಕಾಣಿಸಿಕೊಂಡವು. ಅಲ್ಲಿಂದ ಮುಂದೆ ಮಾನವರ ವಿಕಾಸ ಮೊದಲಾದವು ಎನ್ನಲಾಗುತ್ತದೆ.

ಪ್ರಾಗಿತಿಹಾಸವನ್ನು ಶಿಲಾಯುಗ, ಲೋಹಯುಗ ಎಂದು ವಿಂಗಡಿಸಿದೆ. ನಮ್ಮ ಇತಿಹಾಸವನ್ನು ೧. ಲಿಖಿತ ದಾಖಲೆಗಳ ಆಧಾರಿಸಿ ಗತ ಪ್ರಾಗಿತಿಹಾಸ, ೨. ಲಿಖಿತ ದಾಖಲೆಗಳ ಆಧಾರ ಸಿಗುವ ಇತಿಹಾಸ ಕಾಲವೆಂದು ಎರಡು ಭಾಗವಾಗಿ ಮಾಡಿದೆ ಮತ್ತು ಮೂರು ಗುಂಪುಗಳಾಗಿ ಶಿಲಾಯುಗವನ್ನು ವಿಭಜಿಸಬಹುದು. ೧. ಹಳೇ ಶಿಲಾಯುಗ (ಪ್ಯಾಲಿಯೋ ಲಿಥಿಕ್ ಏಜ್), ೨. ಸೂಕ್ಷ್ಮ ಶಿಲಾಯುಗ (ಮೈಕ್ರೋ ಲಿಥಿಕ್ ಏಜ್) ಮತ್ತು ೩. ನವಶಿಲಾಯುಗ (ನಿಯೋಲಿಥಿಕ್ ಏಜ್). ಇದೇ ರೀತಿ ಲೋಹಯುಗವನ್ನು ೧. ತಾಮ್ರಯುಗ (ಚೌಲ್ಕೋಲಿಥಿಕ್ ಏಜ್) ಮತ್ತು ಕಬ್ಬಿಣದ ಯುಗ (ಐರನ್ ಏಜ್) ಎಂದು ವಿಂಗಡಿಸುವರು. ಲಿಖಿತ ದಾಖಲೆಗಳ ಆಧಾರದಂತೆ ಬರವಣಿಗೆಯ ಮೊಟ್ಟ ಮೊದಲ ಉಪಯೋಗವಾದದ್ದು ಸುಮಾರು ೫–೬ ಸಾವಿರ ವರ್ಷಗಳ ಹಿಂದೆ ಎಂದು ಹೇಳುತ್ತಾರೆ.

ಹಳೇಶಿಲಾಯುಗ

ಗ್ರೀಕ್ ಭಾಷೆಯಲ್ಲಿ ಪ್ಯಾಲಿಯೋಲಿಥಿಕ್ ಏಜ್ ಎಂದು ಕರೆಯುತ್ತಾರೆ. ಪ್ಯಾಲಿಯೋ ಎಂದರೆ ಹಳೆಯ ಎಂದು, ಲಿಥಿಕ್ ಎಂದರೆ ಶಿಲೆ ಎಂದು ಅರ್ಥವಾಗಿದೆ. ಈ ಹಳೆಶಿಲಾಯುಗ ಮೂರು ಭಾಗಗಳಾಗಿ ೧. ಆದಿ ಹಳೇಶಿಲಾಯುಗ – ೨ ಲಕ್ಷ ಅಥವಾ ಅದಕ್ಕೂ ಮುಂಚೆ, ೨. ಮಧ್ಯಹಳೇ ಶಿಲಾಯುಗ ಕ್ರಿ.ಪೂ ೭೦,೦೦೦–೩,೦೦೦, ೩. ಅಂತ್ಯ ಹಳೇಶಿಲಾಯುಗ ಕ್ರಿ.ಪೂ. ೪೦೦೦–೧೦೦೦೦.[೧] ಹಳೇ ಶಿಲಾಯುಗಕ್ಕೆ ಕಾರಣರಾದವರು ಆಗಿನ ಮಾನವರ ಕಾಯಕ್ಕಿಂತ ವಿಭಿನ್ನರಾದ ಕಪಿ ಮಾನವರು. ಇವರು ಸಾಮಾನ್ಯವಾಗಿ ಗುಹೆ, ಕಲ್ಲಾಸರೆಗಳಲ್ಲಿ ಹಾಗೂ ಮರದ ಪೊಟರೆಗಳಲ್ಲಿ ವಾಸಮಾಡಿಕೊಂಡಿದ್ದರು. ಆಹಾರಕ್ಕಾಗಿ ನಿಸರ್ಗದಲ್ಲಿ ಸಿಗುವ ಚೂಪು ಅಥವಾ ಮೊನೆಯುಳ್ಳ ಕಲ್ಲುಗಳಿಂದ ಬೇಟೆಯಾಡುತ್ತಿದ್ದರು. ಅಲ್ಲದೇ ಕಾಡಿನಲ್ಲಿ ಸಿಗುವ ಗಡ್ಡೆ ಗೆಣಸು, ಹಣ್ಣುಗಳನ್ನು ಬಳಸುತ್ತಿದ್ದರು. ಇವರನ್ನು ಆಹಾರದ ಸಂಗ್ರಾಹಕರು ಎನ್ನಲಾಗುತ್ತದೆ.

ಈ ಜೀವನ ಸುಮಾರು ನಾಲ್ಕು ಲಕ್ಷ ವರ್ಷಗಳ ಕಾಲ ಸಾಗಿತ್ತು. ಆದರೆ ಶಿಲಾಯುಧಗಳನ್ನು ತಯಾರಿಸುವ ವಿಧಾನದಲ್ಲಿ ಅಲ್ಪಸ್ವಲ್ಪ ಪರಿಣತಿ ನಿಧಾನವಾಗಿ ಬೆಳೆಯಿತು. ಈ ಮಾನವ ಕುಲಗಳು ಪ್ರಪಂಚದ ಬೇರೆ ಬೇರೆ ಪ್ರದೇಶಗಳಲ್ಲಿ ಹರಡಿದವು. ಈ ವಿಕಾಸದಲ್ಲಿ ಬೆಂಕಿಯನ್ನು ಉಪಯೋಗಿಸಿದ್ದು ಮತ್ತು ಬಿಲ್ಲುಬಾಣಗಳನ್ನು ಕಂಡುಹಿಡಿದಿದ್ದು ವಿಶೇಷವಾಗಿದೆ.

ಈ ವಿಕಸನದ ಕೊನೆಯ ಹಂತದಲ್ಲಿ ಸುಮಾರು ೪೦,೦೦೦ ವರ್ಷಗಳಷ್ಟು ಹಿಂದೆ ಭೂಮಿಯ ಮೇಲೆ ಈ ಜಾತಿಯ ಮಾನವರು ಕಾಣಿಸಿಕೊಂಡರು. ಇವರನ್ನು ಬೌದ್ಧಿಕ ಮಾನವ

---

೦೧. ಡಾ. ಎಲ್. ಶ್ರೀನಿವಾಸ : ಹಂಪಿ ಪರಿಸರ – ಆದಿಮಾನವನ ನೆಲೆಗಳು, ಪುಟ – ೧೬

(ಹೋಮೋಸೆಫಿಯನ್ಸ್) ಎಂದು ಕರೆಯುತ್ತಾರೆ. ಶೀಲಾಯುಧ ತಯಾರಿಕೆಯಲ್ಲಿ ಹೊಸ ತಂತ್ರಜ್ಞಾನ, ವರ್ಣಚಿತ್ರಗಳ ರಚನೆ, ಮೂರ್ತಿಗಳನ್ನು ರೂಪಿಸುವುದು ಈಗ ಮೊದಲಾಯಿತು. ಕಲ್ಲು, ಜೇಡಿಮಣ್ಣು, ಮರದಿಂದ ಮೂರ್ತಿಗಳನ್ನು ರಚಿಸಲು ಆರಂಭಿಸಿದರು. ಧಾರ್ಮಿಕ ನಂಬಿಕೆಗಳು, ನೃತ್ಯ, ಸಂಗೀತವು ಕಾಣಿಸಿಕೊಂಡವು. ಆದರೆ ಆತ ಆಹಾರ ಸಂಗ್ರಾಹಕ, ಅಲೆಮಾರಿ, ಒಂದೆಡೆ ಆಹಾರ ಸಿಗದಾದಾಗ ಬೇರೆಡೆ ವಲಸೆ ಹೋಗಬೇಕಾಗುತ್ತಿತ್ತು ಎನ್ನಲಾಗುತ್ತದೆ. ಸಿಂಧೂ ಉಪನದಿಗಳಾದ ಸೋಹನ್ ಮತ್ತು ಬೀಯಾಸ್ ನದಿಕಣಿವೆಗಳು ಉತ್ತರ ಪ್ರದೇಶದ ಮಿರ್ಜಾಪುರ, ಮಧ್ಯಪ್ರದೇಶದ ನರ್ಮದಾ, ಕಳಿವೆಯ ಆದಂಗರ್, ಮದ್ರಾಸ್‌ನ ಅತ್ತಿರಂಪಕ್ಕಂ ಮುಂತಾದವು.

ಕರ್ನಾಟಕದಲ್ಲಿ ಹುಣಸಗಿ, ಕಿಬ್ಬನಹಳ್ಳಿ, ಅನಗವಾಡಿ, ನಿಟ್ಟೂರು, ಹಂಪಿ ಪರಿಸರದ ಬಾದನಹಟ್ಟಿ ಗುಡ್ಡ, ಬಳ್ಳಾರಿ, ಬೆಳಗಲ್ಲು(ಬಳ್ಳಾರಿ ತಾ), ದರೋಜಿ, ಕಮಲಾಪುರ, ಗಾದಿಗನೂರು (ಹೊಸಪೇಟೆ ತಾ), ಕುರೆಕುಪ್ಪ, ಜೋಗ, ಮಲ್ಲಾಪುರ (ಸಂಡೂರು ತಾ.), ಕುರುವತ್ತಿ (ಹಡಗಲಿ) ಮೊದಲಾದ ಸ್ಥಳಗಳಲ್ಲಿ ಈ ಕಾಲಘಟ್ಟದಲ್ಲಿ ಮಾನವನು ಬಳಸಿ ಬಿಟ್ಟುಹೋದ ಶಿಲಾ ಉಪಕರಣ ಮತ್ತು ಇತರೆ ಅವಶೇಷಗಳು ಕಂಡುಬಂದಿವೆ. ಕಮಲಾಪುರದಲ್ಲಿ ಡಾಲರೈಟ್ ಶಿಲೆಯಲ್ಲಿ ತಯಾರಿಸಿದ ಹೆರೆಗತ್ತಿ, ಮಚ್ಚುಗತ್ತಿಗಳನ್ನು ಶೋಧಿಸಲಾಗಿದೆ. ತುಂಗಭದ್ರಾ ನದಿದಡದ ನಿಟ್ಟೂರು ಇನ್ನೊಂದು ಪ್ರಮುಖ ನೆಲೆಯಾಗಿದ್ದು, ಆಕಳು, ಎತ್ತುಗಳ, ಆನೆಗಳ ಪಡಿಯಚ್ಚುಗಳು ಇಲ್ಲಿ ದೊರೆತಿವೆ.[೨] ಆದ್ದರಿಂದ ಇವು ಹಳೆಶಿಲಾಯುಗದ ನೆಲೆಗಳಲ್ಲಿ ಸೇರಿವೆ ಎನ್ನಲಾಗುತ್ತದೆ.

ಸೂಕ್ಷ್ಮಶಿಲಾಯುಗ (ಕ್ರಿಪೂ. ೭೦೦೦-೩೦೦೦)

ಸುಮಾರು ೧೦-೧೨ ಸಾವಿರ ವರ್ಷಗಳ ಹಿಂದೆ ಇಡೀ ವಿಶ್ವದ ಹವಾಮಾನದಲ್ಲಿ ಒಂದು ವಿಶಿಷ್ಟ ಬದಲಾವಣೆಯಾಯಿತು. ಆ ಹಿಂದಿದ್ದ ಬಹಳ ಚಳಿಯ ಹಿಮಯುಗ (Glacial Age) ಕಳೆದು, ಈಗ ಇರುವ ಬೆಚ್ಚಗಿನ ಹವಾಮಾನ ಪಸರಿಸಲು ಆರಂಭವಾಯಿತು. ಈ ವಾತಾವರಣಕ್ಕನುಗುಣವಾಗಿ ಮಾನವನ ಜೀವನವಿಧಾನ ಬದಲಾಯಿತು. ಸಣ್ಣ ಸಣ್ಣ ಪ್ರಾಣಿಗಳನ್ನು ಬೇಟೆಯಾಡುವುದು, ಮೀನು ಹಿಡಿಯುವುದು, ಅವನ ಆಹಾರ ಸಂಗ್ರಹಣದ ವಿಧಾನವಾಯಿತು. ಇದಕ್ಕೆ ಸಣ್ಣ ಸಣ್ಣ ಕಲ್ಲಿನ ಆಯುಧಗಳನ್ನು ಬಳಸಬೇಕಾಯಿತು. ಇದರಿಂದಾಗಿ ಈ ಅವಧಿ ಸೂಕ್ಷ್ಮಶಿಲಾಯುಗ (Microlithic Age)ವೆನಿಸಿದೆ. ಕೆಲವು ಪ್ರದೇಶಗಳಲ್ಲಿ ನೈಸರ್ಗಿಕವಾಗಿ ಬೆಳೆಯುವ ಧಾನ್ಯಗಳನ್ನು ಬಳಸಲು ಆರಂಭವಾಯಿತು. ಉತ್ತರ ಪ್ರದೇಶ, ಮಧ್ಯಪ್ರದೇಶಗಳಲ್ಲಿ ಇಂಥ ಅನೇಕ ನೆಲೆಗಳು ದೊರೆತಿವೆ. ಗುಜರಾತಿನ ಲಿಂಗನಾಜ್, ತಮಿಳುನಾಡಿನ ಅನೇಕ ಸ್ಥಳಗಳಲ್ಲಿ ಮರಳು ದಿಬ್ಬಗಳಲ್ಲಿ ಸೂಕ್ಷ್ಮಶಿಲಾಯುಗದ ನೆಲೆಗಳು ಕಾಣಿಸಿವೆ. ಬೆಂಗಳೂರು ಬಳಿಯ ಜಾಲಹಳ್ಳಿ, ಬಳ್ಳಾರಿ ಜಿಲ್ಲೆಯ ಸಂಗನಕಲ್ಲು ಇವೆಲ್ಲ ಕರ್ನಾಟಕದಲ್ಲಿನ ಈ ಘಟ್ಟದ ತಾಣಗಳು ಮತ್ತು ಹಂಪಿ, ಕುಡುತಿನಿ, ಕಾರಿಗನೂರು, ಗಾದಿಗನೂರು, ತಿಮ್ಮಲಾಪುರ, ಡಣಾಪುರ, ಭುವನಹಳ್ಳಿ,

೦೨. ಡಾ. ಎಲ್. ಶ್ರೀನಿವಾಸ : ಹಂಪಿ ಪರಿಸರ – ಆದಿಮಾನವನ ನೆಲೆಗಳು, ಪುಟ – ೧೯

ಅಯ್ಯನಹಳ್ಳಿ, ಕುರೆಕುಪ್ಪ, ಕೋದಾಳು, ತೋರಣಗಲ್ಲು, ಮಲ್ಲಾಪುರ, ಮಾದರಹಳ್ಳಿ, ಯಶವಂತಪುರ, ರಾಜಸ್ವರ, ರಾಂಪುರ (ಸಂಡೂರು ತಾ.)[೩] ಮುಂತಾದ ಸ್ಥಳಗಳು ಈ ಹಂತದ ನೆಲೆಗಳಾಗಿವೆ.

ನವಶಿಲಾಯುಗ (ಕ್ರಿ.ಪೂ. ೨೦೦-೧೫೦೦)

ಸೂಕ್ಷ್ಮಶಿಲಾಯುಗದ ಹಲವು ವಿನೂತನ ಶೈಲಿಗಳನ್ನು ರೂಢಿಸಿಕೊಂಡು ನವಶಿಲಾಯುಗದ ಘಟ್ಟವನ್ನು ಮಾನವ ಪ್ರವೇಶಿಸಿದ, ಆಗ ಕಲ್ಲಿನ ಆಯುಧಗಳಿಗೆ ನಿರ್ದಿಷ್ಟರೂಪ ಬಂತು, ಕಲ್ಲಿನ ಉಪಕರಣಗಳನ್ನು ಉಜ್ಜಿ (ತೀಡಿ) ಅಥವಾ ಮಸೆದು ನಯಗೊಳಿಸಿದ, ಹರಿತವಾದ ಬಾಯಿಯುಳ್ಳ ಕೊಡಲಿ, ಬಾಚಿ ಹೆರೆವ ಸಾಧನಗಳನ್ನು ಸಿದ್ಧಪಡಿಸಿದ್ದು, ಇದರಿಂದ ಗಿಡಮರಗಳನ್ನು ಕತ್ತರಿಸಲು ಸುಲಭವಾಯಿತು. ಹೀಗೆ ಕೃಷಿಕಾರ್ಯ ಆರಂಭಿಸಿದ, ಪ್ರಾಣಿಗಳನ್ನು ಸಾಕಲು ಪ್ರಾರಂಭಿಸಿದ ಎನ್ನಲಾಗುತ್ತದೆ. ಈ ಸಂಸ್ಕೃತಿಗೆ ಸಂಬಂಧಿಸಿದಂತೆ ನೆಲೆಗಳು ಬಲೂಚಿಸ್ತಾನ, ಕಾಶ್ಮೀರ, ಆಸ್ಸಾಂನಲ್ಲಿ ಕಂಡುಬಂದಿವೆ.

ಬಲೂಚಿಸ್ತಾನದ ನೆಲೆಗಳು ಕ್ರಿ.ಪೂ. ೪,೫೦೦ರಷ್ಟು ಹಳೆಯವು. ದಕ್ಷಿಣ ಭಾರತದಲ್ಲಿ ನವಶಿಲಾಯುಗದ ಸಂಸ್ಕೃತಿಯ ಕಾಲ ಸುಮಾರು ಕ್ರಿ.ಪೂ. ೨೦೦೦ ದಿಂದ ೧೦೦೦ದವರೆಗೆ.[೯] ಹಂಪಿ ಪರಿಸರದ ರಕ್ಕಬೇವಿನಹಳ್ಳಿ, ಕುಡುತಿನಿ, ಕಪ್ಪಗಲ್ಲು, ಬೆಳಗಲ್ಲು, ಸಂಗನಕಲ್ಲು, ಹಳಕುಂದಿ, ಹಳೆನೆಲ್ಲುಡಿ (ಬಳ್ಳಾರಿ ತಾ.), ಇಂಗಳಗಿ, ಕಾಕುಬಾಳ, ಗಾದಿಗನೂರು, ತಿಮ್ಮಲಾಪುರ, ಡಣಾಪುರ, ಬೆಳಗೋಡು ಹಾಳ, ಬುಕ್ಕಸಾಗರ, ವೆಂಕಟಾಪುರ, ಕೊಂಚಗೇರಿ, ಕೋಟೆಗಲ್ಲು ದುರ್ಗ, ತೆಕ್ಕಲಕೋಟೆ, ನಿಟ್ಟೂರು, ಸನವಾಸಪುರ, ಹಚ್ಚೊಳ್ಳಿ, (ಸಿರುಗುಪ್ಪ ತಾ.), ತೋರಣಗಲ್ಲು, ದರೋಜಿ, ರಾಜಪುರ, ಲಿಂಗದಹಳ್ಳಿ (ಸಂಡೂರು ತಾ), ಬೆಳಗಟ್ಟ, ರಾಮದುರ್ಗ, ಜರಿಮಲೆ (ಕೂಡ್ಲಿಗಿ ತಾ), ಅಲ್ಲಿಪುರ, ಮಾಗಳ ಮೈಲಾರ, ರಾಜವಾಳ (ಹೂವಿನಹಡಗಲಿ)[೪] ಮುಂತಾದ ಕಡೆಗಳಲ್ಲಿ ನೂತನ ಶಿಲಾಯುಗದ ನೆಲೆಗಳನ್ನು ಕಾಣಬಹುದು.

ಲೋಹಯುಗ

ನವಶಿಲಾಯುಗದ ಮುಂದುವರಿದ ಕಾಲ ಲೋಹಯುಗ, ತಾಮ್ರಯುಗದಿಂದ ಕಂಚಿನಯುಗಕ್ಕೆ ಪ್ರವೇಶಿಸಿದ ಮಾನವ ಹೆಚ್ಚು ಗಡುಸಾದ, ಚೂಪಾದ ಆಯುಧ ಸೃಷ್ಟಿಸಿದ. ತಾಮ್ರ ಮತ್ತು ತವರಗಳ ಮಿಶ್ರಲೋಹ ಕಂಚು ಹರಪ್ಪ ಸಂಸ್ಕೃತಿಯ ಲೋಹಯುಗಕ್ಕೆ ಸೇರಿದ್ದು ಎನ್ನಲಾಗುತ್ತದೆ. ಬಾರ್ಲಿ, ಗೋಧಿ, ಜೋಳಗಳನ್ನು ಈ ಕಾಲದಲ್ಲಿ ಬೆಳೆಯಲು ಆರಂಭಿಸಿದರು. ಮಹಾರಾಷ್ಟ್ರದ ಜಾರ್ವೆ, ಕರ್ನಾಟಕದ ಬ್ರಹ್ಮಗಿರಿ (ಚಿತ್ರದುರ್ಗ ಜಿಲ್ಲೆ), ಹಳ್ಳೂರು (ಹಾವೇರಿ ಜಿಲ್ಲೆ), ಬನಹಳ್ಳಿ (ಕೋಲಾರ ಜಿಲ್ಲೆ), ತೇರದಾಳ (ಬಾಗಲಕೋಟೆ ಜಿಲ್ಲೆ) ಇವೆಲ್ಲ ಈ ಸಂಸ್ಕೃತಿಯ ನೆಲೆಗಳು. ಲೋಹದಿಂದ ಮುಖ್ಯ ಬದಲಾವಣೆಗಳಾದವು. ನಗರ ಜೀವನ ಬೆಳೆದು ದೂರ

---

೧೩. ಡಾ. ಎಲ್. ಶ್ರೀನಿವಾಸ : ಹಂಪಿ ಪರಿಸರ – ಆದಿಮಾನವನ ನೆಲೆಗಳು, ಪುಟ – ೨೩

೧೪. ಅದೇ., ಪುಟ – ೨೬

ಪ್ರದೇಶಗಳ ಜೊತೆ ವ್ಯಾಪಾರ ಹೆಚ್ಚಿತು. ವಾಸ್ತುಶಿಲ್ಪ, ಚಿತ್ರಕಲೆ ಮತ್ತು ಶಿಲ್ಪಕಲೆ ಇವೆಲ್ಲ ಬೆಳೆದವು. ಕಬ್ಬಿಣಯುಗದಲ್ಲಿ ಉದ್ದವಾದ ಖಡ್ಗ, ಈಟಿ, ಚೂಪಾದ ಬಾಣ ಸೃಷ್ಟಿಯಾದವು. ಕಬ್ಬಿಣಯುಗದ ಪ್ರಾಗೈತಿಹಾಸದ ಕೊನೆಯ ಆದರೆ ಸ್ಥಿತ್ಯಂತರದ ಹಂತ, ಆಗಲೇ ಹಲವಡೆ ಇತಿಹಾಸ ಕಾಲ ಆರಂಭದ ಹಂತ ಎನ್ನಲಾಗುತ್ತದೆ. ಈ ಕಾಲಘಟ್ಟದಲ್ಲಿನ ಚಿತ್ರಕಲೆಯನ್ನು ಇತಿಹಾಸಪೂರ್ವ ಚಿತ್ರಕಲೆ ಎನ್ನಲಾಗುತ್ತದೆ.

ವಿಶ್ವ

೧೮೩೭ರಲ್ಲಿ ಸರ್ ಜಾರ್ಜ್‌ಗ್ರೇ ಅವರಿಂದ ಸಿಡ್ನಿ (ಆಸ್ಟ್ರೇಲಿಯಾ) ವರ್ಣಚಿತ್ರ ಗವಿಗಳ ಶೋಧನೆ ಪ್ರಪ್ರಥಮವಾದದ್ದು, ಆದರೂ ಬಹುಶಃ ೧೮೭೯ರಲ್ಲಿ ಆಲ್ತಮೀರ (ಸ್ಪೇನ್)ದಲ್ಲಿಯ ವರ್ಣಚಿತ್ರಿತ ಗವಿಗಳ ಶೋಧನೆ ಹಾಗೂ ಬಂಡೆ – ಗವಿಚಿತ್ರಗಳ ಶೋಧನೆ ಇತಿಹಾಸದಲ್ಲಿಯೇ ವಿಶೇಷವಾದುದು[5] ಎನ್ನಲಾಗುತ್ತದೆ. ಡಾರ್ಡೋನ್ ಪ್ರದೇಶದ 'ಲೆಸ್‌ಐಜೆ'ನ ಬಳಿ ಇರುವ ಲಾವತಾತೇ ಗುಹೆಯಲ್ಲಿನ ಕೊರೆಚಿತ್ರಗಳನ್ನು ಮತ್ತು ವರ್ಣಚಿತ್ರಗಳನ್ನು ರೈವ್ಹರ್ ಎಂಬಾತ ೧೮೯೫ರಲ್ಲಿ ಕಂಡುಹಿಡಿದನು. ಎಲ್ ಕ್ಯಾಪ್ಟನ್, ಡಿ. ಪೆರೋನಿ ಮತ್ತು ಎಚ್ ಬ್ರಯೆಲ್ ಅವರು ೧೯೦೧ರಲ್ಲಿ ಲೆಸ್‌ಕಾಂಬ್ರೆಲ್ಲಾ ಮತ್ತು ಫಾಂಟ್–ಡಿ–ಗಾಮಾ' ಗುಹೆಗಳನ್ನು ಶೋಧಿಸಿ ಅಲ್ಲಿನ ಚಿತ್ರಗಳನ್ನು ಬೆಳಕಿಗೆ ತಂದರು. ಲೆಸ್‌ಕಾಂಬ್ರೆಲ್ಲಾ ಮತ್ತು ಫಾಂಟ್–ಡಿ–ಗಾಮಾ ಗುಹೆಗಳ ಶೋಧನೆಯಲ್ಲಿ ಪಾಲ್ಗೊಂಡಿದ್ದ ಡಿ. ಪೆರೋನಿ ಅವರು ಎರಡು ವರ್ಷಗಳ ತರುವಾಯ ೧೯೦೩ರಲ್ಲಿ ಡಾರ್ಡೋನ್ ಪ್ರದೇಶದ 'ಬೆರ್ನಿಫಾಲ್' ಮತ್ತು 'ತೇಯ್‌ಜಾಟ್' ಗುಹೆಗಳ ಕೊರೆಚಿತ್ರಗಳನ್ನು ಕಂಡುಹಿಡಿದನು. ಎಲ್‌ಕ್ಯಾಸ್ಟಿಲೋ ಕೋವಾಲನಸ್, ಲಾಹಾಜಾ ಮತ್ತು ನಯಾಕ್ಸ್ ಗುಹೆಗಳ ಚಿತ್ರಗಳು ೧೯೦೬ರಲ್ಲಿ ಹೊರ ಜಗತ್ತಿಗೆ ತಿಳಿದುಬಂದವು.[6]

ಹೀಗೆ ಮುಂದೆ ಚಿತ್ರಗಳ ಬಗೆಗೆ ಆಸಕ್ತಿ ಹೆಚ್ಚಾದಂತೆ ಜಗತ್ತಿನ ವಿವಿಧೆಡೆಗಳಲ್ಲಿ ಇಟಲಿ, ಆಫ್ರಿಕಾ, ಸಹಾರಾ, ಲಿಬಿಯಾ ಮುಂತಾದ ಕಡೆಗಳಲ್ಲಿ ಈ ತರಹದ ಸಂಶೋಧನೆಗಳು ವೇಗವಾಗಿ ಸಾಗಿದವು. ಈ ಪ್ರಪಂಚದ ಯಾವ ನೆಲೆಯನ್ನೂ ಅಧ್ಯಯನಕ್ಕೆ ಒಳಪಡಿಸಿದಾಗ ಒಂದೇ ತೆರನಾದ ಚಿತ್ರಗಳು ಕಂಡುಬಂದರೂ ಆಯಾ ಪ್ರದೇಶದಲ್ಲಿ ಆಯಾ ಪ್ರಾಣಿಗಳು ಚಿತ್ರಗಳಲ್ಲಿ ಕಂಡುಬರುತ್ತವೆ. ಸ್ಪೇನ್‌ದಲ್ಲಿ ಗೂಳಿ ಚಿತ್ರ ಹೆಚ್ಚಾಗಿ ಕಂಡುಬಂದರೆ, ಭಾರತದಲ್ಲಿ ಎತ್ತುಗಳ ಚಿತ್ರಗಳು ಹೆಚ್ಚಾಗಿ ಕಂಡುಬರುತ್ತವೆ. ಫ್ರಾನ್ಸ್‌ನಲ್ಲಿ ರೇನ್‌ಡೀರ್, ಮ್ಯಾಮತ್ ಚಿತ್ರಗಳು ಕಂಡುಬರುತ್ತವೆ. ಆಯಾ ಪ್ರಾಣಿ ಚಿತ್ರಗಳು ಆಯಾ ಪರಿಸರದ ಮೇಲೆ ಅವಲಂಬಿತವಾಗಿರುತ್ತವೆ.

ಭಾರತ

ಆಲ್ತಮಿರ ಗವಿಯ ಶೋಧಕ್ಕಿಂತ ಹನ್ನೆರಡು ವರ್ಷ ಮೊದಲೇ (೧೮೬೭–೬೮) ಭಾರತದಲ್ಲಿ

೦೫. ಅ. ಸುಂದರ : ಕರ್ನಾಟಕ ಪ್ರಾಗೈತಿಹಾಸಿಕ ಕಾಲದ ಕಲೆ, ಪುಟ – ೫

೦೬. ಡಾ. ಯಾದಪ್ಪ ಪರದೇಶಿ : ಉತ್ತರಕರ್ನಾಟಕ ಭಿತ್ತಿಚಿತ್ರಕಲೆ – ಒಂದು ಅಧ್ಯಯನ (ಅ.ಪ್ರ.ಪಿಹೆಚ್.ಡಿ. ಮ.ಪ್ರ.) ಪುಟ – ೧೬೪

ಆರ್ಕ್ಚಿಬಾಲ್ಡ್ ಕಾರ್ಲೈಲ್ ಉತ್ತರ ಪ್ರದೇಶದ ಮಿರ್ಜಾಪುರಜಿಲ್ಲೆಯ ಶೋಹಕಿ ಘಾಟ್‌ನ ಕಲ್ಲಾಸರೆಯಲ್ಲಿ ಚಿತ್ರಗಳನ್ನು ಕಂಡರು. ಆ ಬಗೆಗೆ ಅವರ ಲೇಖನ ಕೆಲ ವರ್ಷಗಳ ನಂತರ ಪ್ರಕಟವಾಯಿತಾದರೂ ಅವರ ಶೋಧನೆ ಮತ್ತು ಅದೇ ಅವಧಿಯಾದ್ದರಿಂದ ಭಾರತದ ಗವಿವರ್ಣ ಮತ್ತು ಬಂಡೆಚಿತ್ರಗಳನ್ನು ಮೊದಲು ಬೆಳಕಿಗೆ ತಂದ ಕೀರ್ತಿ ಆರ್ಕ್ಚಿಬಾಲ್ಡ್ ಕಾರ್ಲೈಲ್ ಮತ್ತು ಹೂಬರ್ಟ್‌ನಾಕ್ಸ್[೭]ರವರಿಗೆ ಸಲ್ಲುತ್ತದೆ. ಹೂಬರ್ಟ್‌ನಾಕ್ಸ್ ಬಳ್ಳಾರಿಯ ಸಮೀಪದಲ್ಲಿರುವ ಕಪ್ಪಗಲ್ಲು ಗ್ರಾಮದಲ್ಲಿಯ ಗುಡ್ಡಗಳಲ್ಲಿ ದೊಡ್ಡ ದೊಡ್ಡ ಗುಂಡುಕಲ್ಲುಗಳ ಮೇಲೆ ಕುಟ್ಟಿ/ಗೀರಿ ಬಿಡಿಸಿದ ಚಿತ್ರಗಳನ್ನು ಸುಮಾರು ೧೮೮೦ರ ಸಮಯದಲ್ಲಿ ನೋಡಿ, ಅವುಗಳ ಛಾಯಾಚಿತ್ರವನ್ನು ತೆಗೆದು ರಾಬರ್ಟ್ ಬ್ರೂಸ್‌ಫುಟ್ ಅವರಿಗೆ ಕಳುಹಿಸಿಕೊಟ್ಟನು. ಫುಟ್ ಅವರು ೧೯೧೬ರಲ್ಲಿ 'ದಿ ಫುಟ್ ಕಲೆಕ್ಷನ್ ಆಫ್ ಇಂಡಿಯನ್ ಪ್ರೀ ಹಿಸ್ಟಾರಿಕ್ ಅಂಡ್ ಪ್ರೋಟೋ ಹಿಸ್ಟಾರಿಕ್ ಆಂಟಿಕ್ವಿಟೀಸ್' ಪುಸ್ತಕದಲ್ಲಿ ಇವುಗಳ ವರ್ಣನೆಯನ್ನು ಪ್ರಕಟಿಸಿದರು[೮] ಎಂದು ತಿಳಿಯುತ್ತದೆ. ಕಾಕ್‌ಬರ್ನ್ ಮಿರ್ಜಾಪುರ ಜಿಲ್ಲೆಯಲ್ಲಿನ ವಿಜಯಘರ್ ಕೋಟೆಯ ಸಮೀಪದ 'ಘೋರ್ ಮಾಂಗರ್' ಶಿಲಾಶ್ರಯದಲ್ಲಿನ ಚಿತ್ರಗಳನ್ನು ಪತ್ತೆ ಮಾಡಿದರು.[೯]

ಇವುಗಳಲ್ಲದೆಯೇ ರಾಯಘರ್, ಪಚಮಾರಿ, ಹೊಷಂಗಾಬಾದ್, ರೈಸಿನ್, ಸಾಗರ್, ಕಲ್ನೆ ಮತ್ತು ನರಸಿಂಹಪುರ, ಗ್ವಾಲಿಯರ್, ಚಂಬಲ್ ಕಣಿವೆ, ಬಸ್ತರ್, ಬಿಂಬೇಟ್ಕಾ ಪ್ರದೇಶದ ರಾಬರ್ಟ್ಸ್‌ಗಂಜ್, ಇಮೊಹ್ಪನ್, ಈ ಬೈನ್‌ನೌಕ್, ಬಂದಾ ಅಲಹಾಬಾದ್, ವಾರಣಾಸಿ, ಆಂಧ್ರಪ್ರದೇಶ, ಕೇರಳ, ತಮಿಳುನಾಡು, ಬಿಹಾರ್, ಒರಿಸ್ಸಾ ಮತ್ತು ಕರ್ನಾಟಕ[೧೦] ಭಾರತದ ಮುಂತಾದ ಭಾಗಗಳಲ್ಲಿ ಚಿತ್ರಗಳು ಕಂಡುಬಂದವು. ಕರ್ನಾಟಕವು ಸಹ ಇಂತಹ ಶೋಧನೆಯಲ್ಲಿ ಹೊರತಾಗಿಲ್ಲ. ಇತಿಹಾಸ ಪೂರ್ವ ಚಿತ್ರಕಲೆಯ ಕುರಿತು ಬಳ್ಳಾರಿ ಜಿಲ್ಲೆಯಿಂದಲೇ ಕರ್ನಾಟಕದ ಶೋಧ ಪ್ರಾರಂಭವಾಯಿತು ಎನ್ನಬಹುದು.

ಕರ್ನಾಟಕ

ಹಿಂದೆ ಪರಿಚಯಿಸಿದ ಲಿಯೋನಾರ್ಡ್‌ಮನ್ ಅವರ ಶೋಧನೆಯು ಬಳ್ಳಾರಿ ಜಿಲ್ಲೆಯ ಕಪ್ಪಗಲ್‌ನಲ್ಲಿ ೧೯೪೦ರ ದಶಕದಲ್ಲೇ ಮಸ್ಕಿ, ಕಲ್ಲೂರು (ರಾಯಚೂರು ಜಿಲ್ಲೆ), ಬಲಚಕ್ರ (ಯಾದಗಿರಿ ತಾಲ್ಲೂಕು) ಮತ್ತು ಆತನೂರ್ ಎಂಬಲ್ಲಿ ನಡೆದು, ಹಿಂದಿನ ಹೈದ್ರಾಬಾದ್ ಸಂಸ್ಥಾನದ ಪುರಾತತ್ವ ಸರ್ವೇಕ್ಷಣ ಮತ್ತು ಭೂ-ವಿಜ್ಞಾನ ಇಲಾಖೆಗಳು ಕ್ರಮವಾಗಿ ಕುಟ್ಟಿದ ಮತ್ತು ಗವಿ ವರ್ಣಚಿತ್ರಗಳನ್ನು ಶೋಧಿಸಿ ತಮ್ಮ ಶಾಲೆಗಳ ವಾರ್ಷಿಕ ವರದಿಗಳಲ್ಲಿ ಪ್ರಕಟಿಸಿವೆ.[೧೧] ರಾಜ್ಯದ ವಿವಿಧ ಜಿಲ್ಲೆಗಳಾದ ರಾಯಚೂರು, ಕೊಪ್ಪಳ, ಚಿತ್ರದುರ್ಗ, ಬಿಜಾಪುರ, ಬಾಗಲಕೋಟೆ,

೦೭. ಡಾ. ಶರಣಬಸಪ್ಪ ಕೋಲ್ಕಾರ : ಶಿಲಾಯುಗದ ಗವಿಚಿತ್ರಗಳು, ಪುಟ – ೧೫

೦೮. ಅ. ಸುಂದರ : ಕರ್ನಾಟಕ ಪ್ರಾಗೈತಿಹಾಸಿಕ ಕಾಲದ ಕಲೆ, ಪುಟ – ೮

೦೯. ಡಾ. ಯಾದಪ್ಪ ಪರದೇಶಿ : ಉತ್ತರಕರ್ನಾಟಕ ಭಿತ್ತಿಚಿತ್ರಕಲೆ – ಒಂದು ಅಧ್ಯಯನ (ಅ.ಪ್ರ.ಪಿಹೆಚ್.ಡಿ. ಮ.ಪ್ರ.) ಪುಟ – ೧೬೬

೧೦. ಡಾ. ಶರಣಬಸಪ್ಪ ಕೋಲ್ಕಾರ : ಶಿಲಾಯುಗದ ಗವಿಚಿತ್ರಗಳು, ಪುಟ – ೨೫

೧೧. ಅ. ಸುಂದರ : ಕರ್ನಾಟಕ ಪ್ರಾಗೈತಿಹಾಸಿಕ ಕಾಲದ ಕಲೆ, ಪುಟ – ೧೧

ಗದಗ, ಬೆಳಗಾವಿ, ಗುಲಬರ್ಗಾ, ಹಾವೇರಿ, ಶಿವಮೊಗ್ಗ, ಬೆಂಗಳೂರು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಮಂಡ್ಯ[೧೨] ಮತ್ತು ಬಳ್ಳಾರಿ ಮುಂತಾದ ಕಡೆಗಳಲ್ಲಿ ಈ ಚಿತ್ರಗಳ ಕುರಿತು ಶೋಧನೆಗಳು ನಡೆದವು.

ಬಳ್ಳಾರಿ

ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟೆ (ಶಿರಗುಪ್ಪ ತಾ.), ಸಂಗನಕಲ್ಲು, ಬೆಳಗಲ್ಲು ಮತ್ತು ಕುರುಗೋಡು (ಬಳ್ಳಾರಿ ತಾ.), ಅಪ್ಪಯ್ಯನಹಳ್ಳಿಗಳಲ್ಲಿ ಡಾ. ಎಂ. ಎಸ್. ನಾಗರಾಜರಾವ್, ಕು.ಮ. ಷಡಕ್ಷರಯ್ಯ[೧೩] ಇಂತಹ ಚಿತ್ರಗಳನ್ನು ಶೋಧಿಸಿದ್ದಾರೆ. ಈ ಚಿತ್ರಗಳು ಆಕಸ್ಮಿಕವಾಗಿಯೂ ಇನ್ನೂ ಶೋಧನೆಯಾಗುತ್ತಲೇ ಇವೆ. ೧೯೮೮-೮೯ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯ, ಆವರಣದ ಸ್ವಚ್ಛತಾ ಕಾರ್ಯ ಕೈಗೊಂಡಾಗ ಅದೇ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗದ ಮುಖ್ಯಸ್ಥರಾದ ಡಾ. ಎಸ್. ಸಿ. ಪಾಟೀಲ ಅವರು ಬಂಡೆಯ ಮೇಲೆ ಆಕಸ್ಮಿಕವಾಗಿ ಕೆಲವು ಕುಟ್ಟು ಚಿತ್ರಗಳನ್ನು ಕಂಡರು. ಅದೇ ಜಾಡು ಹಿಡಿದು ನೂರಾರು ಗಜಗಳ ಅಂತರದಲ್ಲಿ ಸುತ್ತಾಡಿದಾಗ ಇನ್ನೂ ಒಂದೆರಡು ಕುಟ್ಟು ಚಿತ್ರಗಳು ಕಂಡುಬಂದವು. ಜಾನಪದ ವಿಭಾಗದ ಹಿಂದೆ ಮೀನುಗಳ ಗೀರುಚಿತ್ರಗಳೂ, ಗಿರಿಸೀಮೆಯಲ್ಲಿ ಈಗಾಗಲೇ ಕೊರೆದ ಚಿತ್ರಗಳನ್ನು, ವಿಶ್ವವಿದ್ಯಾಲಯದ ಬದಿಯ ಏಕಶಿಲೆಯಲ್ಲೂ ಶ್ರೀಲಕ್ಷಣ ತೆಲಗಾವಿ ಚಿತ್ರಗಳನ್ನು ಕಂಡುಹಿಡಿಯಲಾಗಿದೆ. ಇವುಗಳಲ್ಲದೆಯೇ ಬಳ್ಳಾರಿ ಗುಡ್ಡದಲ್ಲಿಯೂ ಮಿಂಚೇರಿ, ಸಂರಾಯನಕೋಟೆ, ಕಾರಿಗನೂರು, ಗಾದಿಗನೂರು, ಮೆಟ್ರಿ, ಪಾಪಿನಾಯಕನಹಳ್ಳಿ, ಎತ್ತಿನಬೂದಿಹಾಳ್ ಮುಂತಾದ ಕಡೆಗಳಲ್ಲಿಯೂ ಈ ತರಹದ ಚಿತ್ರಗಳನ್ನು ಕಾಣಬಹುದಾಗಿದೆ.

ಸ್ವರೂಪ

ಈ ಚಿತ್ರಗಳು ಶಿಲಾಗುಹೆಗಳಲ್ಲಿ, ಶಿಲಾಶ್ರಯಗಳಲ್ಲಿ ಬಯಲು ಬಂಡೆ ಮತ್ತು ಗುಂಡುಗಳ ಮೇಲೆ ರಚನೆಯಾಗಿರುತ್ತವೆ. ಈ ಚಿತ್ರಗಳು ರೇಖಾಚಿತ್ರ, ವರ್ಣಚಿತ್ರ, ಕುಟ್ಟು ಮತ್ತು ಗೀರು ಸ್ವರೂಪದ್ದಾಗಿರುತ್ತವೆ. ಈ ತರಹದ ಚಿತ್ರಗಳು ಪ್ರಾಗೈತಿಹಾಸಿಕದ ಮಾನವನ ವಾಸದ ನೆಲೆ ಮತ್ತು ಸ್ವಲ್ಪ ದೂರದ ಹಿಂಭಾಗದಲ್ಲಿ ಅಥವಾ ಮೇಲ್ಭಾಗದಲ್ಲಿ, ಅವನಿಗೆ ಯಾವಾಗಲೂ ಕುಳಿತುಕೊಳ್ಳುವ, ನಿಂತುಕೊಳ್ಳುವ ಪ್ರಿಯವಾದ ಜಾಗದಲ್ಲಿ ರಚನೆಯಾಗಿರುತ್ತವೆ. ಈ ಚಿತ್ರಗಳು ನೋಡುಗರಿಗೆ ಚಿಕ್ಕಮಕ್ಕಳ ಗೀಚಿಕೊರೆದ ಚಿತ್ರಗಳಂತೆ ಕಂಗೊಳಿಸುತ್ತವೆ. ಈಗಿನ ಚಿತ್ರಗಳಂತೆ ಮನುಷ್ಯನ ಆಕಾರದಲ್ಲಿ ಕಣ್ಣು, ಮೂಗು, ಬಾಯಿ, ಕೈಕಾಲುಗಳು ಸ್ಪಷ್ಟತೆಯಿಂದ ಕೂಡಿರುವುದಿಲ್ಲ. ನೆರಳಿನಂತೆ ಚಪ್ಪಟೆಯಾಕಾರದಿಂದ ಈ ಚಿತ್ರಗಳು ಕಂಗೊಳಿಸುತ್ತವೆ. ಕೆಲವು ಚಿತ್ರಗಳು ಇರುವ

೧೨. ಡಾ. ಶರಣಬಸಪ್ಪ ಕೋಲ್ಕಾರ : ಶಿಲಾಯುಗದ ಗವಿಚಿತ್ರಗಳು, ಪುಟ – ೩೫

೧೩. ಅ. ಸುಂದರ : ಕರ್ನಾಟಕ ಪ್ರಾಗೈತಿಹಾಸಿಕ ಕಾಲದ ಕಲೆ, ಪುಟ – ೧೧

ಕಡೆಯಲ್ಲಿ ಸ್ಥಳಾವಕಾಶವು ಹೆಚ್ಚಿನ ಪ್ರಮಾಣದಲ್ಲಿ ಇರುತ್ತದೆ. ಸ್ಥಳ ಆಯತಾಕಾರದಲ್ಲಿ ಇದ್ದರೂ ಸಹ ಅಲ್ಲೊಂದು ಇಲ್ಲೊಂದು ಚಿತ್ರಗಳನ್ನು ಚಿತ್ರಿಸಲಾಗಿದೆ. ವರ್ಣಚಿತ್ರವಿರುವ ಸ್ಥಳಗಳು ಹೆಚ್ಚಾಗಿ ದುರ್ಗಮ ಪ್ರದೇಶವಾಗಿರುತ್ತವೆ.

ಕುರುಗೋಡಿನ ೪ನೇ ಗವಿಯನ್ನು ಪ್ರವೇಶಿಸಲು ಎರಡು ಮೀಟರ್ ಎತ್ತರದ ಕಡಿದಾದ ಇಕ್ಕಟ್ಟಾದ ಬಂಡೆಯಲ್ಲಿ ತೆವಳಿಕೊಂಡು ಸಾಗಬೇಕು. ಇಂತಹ ದುರ್ಗಮವಾದ ಗುಹೆಗಳ ಒಳಗೋಡೆ ಮತ್ತು ಮೇಲ್ಛಾವಣಿಗಳಲ್ಲಿ, ಶಿಲಾಶ್ರಯದ ಚಾಚುಭಾಗದ ಒಳಮೈಯಲ್ಲಿ, ಬಯಲು ಬಂಡೆಗಳ ಮೇಲೆ ಸಹಿತ ಪ್ರಾಗೈತಿಹಾಸಿಕ[೧೪] ಚಿತ್ರಗಳು ರಚನೆಯಾಗಿದ್ದು ಕಂಡುಬರುತ್ತವೆ ಮತ್ತು ಬಳ್ಳಾರಿ ಕೋಟೆಗಳಲ್ಲಿ ದುರ್ಗಮವಾದ, ಕೈಗೆ ನಿಲುಕಲಾದಷ್ಟು ಎತ್ತರದಲ್ಲಿ ಚಿತ್ರಗಳು ರಚನೆಗೊಂಡಿವೆ. ಮೊದಲ ಶಿಲಾಶ್ರಯದಲ್ಲಿ ಚಿತ್ರದ ಕೆಲಭಾಗವು ತುಂಬಾ ಇಳಿಜಾರು ಪ್ರದೇಶವಾಗಿದೆ. ಈ ಚಿತ್ರಗಳನ್ನು ಇಳಿಜಾರು ಪ್ರದೇಶಕ್ಕೆ ಅರ್ಧಸಾಗಿ ಫೋಟೋ ಜೂಂ ಮಾಡಿ ತೆಗೆಯಲಾಯಿತು. ತುಂಬಾ ಪ್ರಯಾಸವಾಗಿ ಚಿತ್ರಗಳನ್ನು ಸೆರೆಹಿಡಿಯಲಾಯಿತು. ಕಪ್ಪಗಲ್ಲು, ಮಿಂಚೇರಿ, ಕಾರಿಗನೂರು, ಬಯಲು ಬಂಡೆಯ ಚಿತ್ರಗಳನ್ನು ಕೂಡ ಇಕ್ಕಟ್ಟಾದ ಜಾಗದಲ್ಲಿ ಚಿತ್ರಿಸಲಾಗಿದೆ. ಮತ್ತು ಕೆಲ ಚಿತ್ರಗಳಿಗೆ ಹಿಂದಣ (Background) ಕಲ್ಲನ್ನು ಸಮವಾಗಿ ಉಜ್ಜಿ ಚಿತ್ರಗಳನ್ನು ರಚಿಸಲಾಗಿದೆ. ಹಂಪಿಯ ವಿರೂಪಾಕ್ಷ ದೇವಾಲಯದ ಹಿಂಭಾಗದಲ್ಲಿ ಒಂದಕ್ಕೊಂದು ಅಂಟಿಕೊಂಡ ಬೃಹತ್ ಬಂಡೆಗಳ ಒಳಮೈಯಲ್ಲಿ ವರ್ಣಚಿತ್ರಗಳಿವೆ. ಹಾಗೆಯೇ ಹಂಪಿಯ ವಿಠ್ಠಲ ದೇವಾಲಯದ ಸಮೀಪವಿರುವ ಮುಸಳಯ್ಯನ ಗುಡ್ಡಪ್ರದೇಶದಲ್ಲಿ ಒಂದರ ಮೇಲೊಂದು ಕುಳಿತ ದೊಡ್ಡ ಬಂಡೆಯ ಮೇಲೆ ೩೦ ಅಡಿಗಳಷ್ಟು ಮೇಲಿನ ಭಾಗದಲ್ಲಿ ಚಿತ್ರಗಳು ರಚಿಸಲ್ಪಟ್ಟಿವೆ. ವಿಶ್ವವಿದ್ಯಾಲಯದ ಹತ್ತಿರದ 'ಏಕಶಿಲೆ'ಗೆ ನಿಲುಕಲಾರದ ಪ್ರದೇಶದಲ್ಲಿ ಚಿತ್ರಿಸಲಾಗಿದೆ. ಮಾನವನ ಮೈಮೇಲೆ ವಿಚಿತ್ರ ರೇಖೆಗಳನ್ನು ರೇಖಿಸುವುದರ ಮೂಲಕ ಅಲಂಕರಿಸಿದ ಮಾನವನ ಚಿತ್ರಗಳು ಹಂಪಿ ಮತ್ತು ಪಕ್ಕದ ಗಂಗಾವತಿ ತಾಲ್ಲೂಕಿನ ಕೆಲವು ನೆಲೆಗಳಲ್ಲಿ ದೊರೆತಿವೆ. ಈ ತರಹದ ಚಿತ್ರಗಳಿಂದ ನೆನಪಿಗೆ ಬರುವುದು ಬುಡಕಟ್ಟು ಜನರ ಮುಖದ ಮೇಲಿನ ಬಿಳಿಯ ರೇಖೆಗಳಂತೆ ಕಂಡುಬರುತ್ತವೆ.

ಉದ್ದೇಶ

ಇವರೆಲ್ಲ ಕಲಾಪ್ರತಿಭಾವಂತರು ಎಂದು ಈ ಚಿತ್ರಗಳಿಂದ ತಿಳಿಯುತ್ತಾದರೂ ಈ ಚಿತ್ರಗಳಲ್ಲಿ ಪ್ರಕೃತಿಯ ಪರಿಪೂರ್ಣ ಬಳಕೆಯ ಪ್ರಯೋಗ ನಡೆದಿಲ್ಲ ಎನ್ನಬಹುದು. ಕೇವಲ ಪ್ರಾಣಿಗಳೇ ಏಕೆ, ನಿಸರ್ಗದ ಹೂವು, ಬಳ್ಳಿ, ಗಿಡ–ಮರಗಳು, ಬೇರೆ ಬೇರೆ ಪ್ರಾಣಿಗಳು, ಪಕ್ಷಿಗಳು, ಅವುಗಳ ವಿವಿಧ ಭಂಗಿಗಳು, ನದಿ, ಬೆಟ್ಟ ತಮ್ಮ ಜನನೆಲೆ ಇವುಗಳು ಒಂದೊಂದು ಕಾಲದಲ್ಲಿ ಒಬ್ಬೊಬ್ಬರ ವಸ್ತುವಾಗಿರಬಹುದಿತ್ತು. ಇದರಿಂದ ಚಿತ್ರಗಳು ವರ್ಣಿಸಲಾರದಷ್ಟು ವೈವಿಧ್ಯಮಯವಾಗಿರುತ್ತಿದ್ದವು. ಮತ್ತು ಈ ಕಲೆಯ ವಿಧಾನ, ತಂತ್ರ, ವರ್ಣಸಂಯೋಜನೆಗಳಲ್ಲೂ ವಿವಿಧ ಪ್ರಕಾರಗಳ

---

೧೪. ಡಾ. ಯಾದಪ್ಪ ಪರದೇಶಿ : ಉತ್ತರಕರ್ನಾಟಕ ಭಿತ್ತಿಚಿತ್ರಕಲೆ – ಒಂದು ಅಧ್ಯಯನ (ಅ.ಪ್ರ.ಪಿಹೆಚ್.ಡಿ. ಮ.ಪ್ರ.) ಪುಟ – ೧೬೧

ಪ್ರಗತಿಯಿರುತ್ತಿತ್ತು. ಆದರೆ ಈ ಚಿತ್ರಗಳಲ್ಲಿ ಹೆಚ್ಚಾಗಿ ಪ್ರಾಣಿಗಳು, ಅವುಗಳಲ್ಲೂ ಕೆಲವೇ ಪ್ರಾಣಿಗಳಿವೆ. ಮನುಷ್ಯನ ಚಿತ್ರಗಳಲ್ಲಿ ಸಮೂಹ ನೃತ್ಯ, ಮೈಮೇಲೆ ಚಿತ್ರ ಬರೆದುಕೊಂಡ ನಗ್ನವ್ಯಕ್ತಿ, ಆಯುಧ, ಪ್ರಾಣಿಗಳು ಹೀಗೆ ಕೆಲವೇ ತರಹದ್ದು ಇವೆ. ಮತ್ತು ಇವುಗಳ ಬಾಹ್ಯರೇಖೆ ಅಥವಾ ಛಾಯಾಚಿತ್ರಗಳು ಮಾತ್ರ ಇವೆ.

ವಸ್ತುವಿನ ಸಹಜ ಲಕ್ಷಣಗಳನ್ನು ಬಿಡಿಸಲು ಸಾಧ್ಯವಾಗದೆ ಹೀಗೆ ಮಾಡಿದುದಲ್ಲ, ಉದ್ದೇಶ-ಪೂರ್ವಕವಾಗಿಯೇ ಚಿತ್ರಗಳನ್ನು ಈ ಕ್ರಮದಲ್ಲಿಯೇ ಬಿಡಿಸಲಾಗಿದೆ.[೧೫] ಏಕೆಂದರೆ ಚಿತ್ರಗಳ ರೇಖಾಲಾಲಿತ್ಯದಲ್ಲಿ ಸಂಪೂರ್ಣ ಕಲಾತ್ಮಕತೆ, ಲೇಪನ ರೇಖೆಗಳು ಪ್ರತಿಭಾಪೂರ್ಣವಾಗಿವೆ. ಯಾವ ಚಿತ್ರ ಅವನ ಮನದಲ್ಲಿ ಮೂಡಿದೆಯೋ ಆ ಚಿತ್ರವನ್ನು ಬಿಡಿಸುವಲ್ಲಿ ಸಫಲನಾಗಿದ್ದಾನೆ. ಇವನಿಗೆ ಸೌಂದರ್ಯ ಅಥವಾ ಕಲಾಪ್ರತಿಭಾನ್ವಿತ ಭಾವೋದ್ರೇಕ, ಚಿತ್ರದ ಹಿನ್ನೆಲೆ ಇರದೇ ಮಾಂತ್ರಿಕದ ದೃಷ್ಟಿಯಿಂದ ಮತ್ತು ಧಾರ್ಮಿಕ ವಿಧಿವಿಧಾನಗಳು ಕೂಡ ಕಾರಣವಾಗಿರಬಹುದು. ಏಕೆಂದರೆ ಪ್ರಾಗೈತಿಹಾಸಿಕ ಮಾನವರು ತಮ್ಮ ತಮ್ಮ ಸಮಾಜದ ನಂಬಿಕೆಗಳಂತೆ ಮಾಂತ್ರಿಕ ಕಟ್ಟಳೆಗಳನ್ನು ನಡೆಸುವ ಕಾಲದಲ್ಲಿ ಅವುಗಳ ಅಂಗವಾಗಿ ರೂಪಿಸಿದ ಚಿತ್ರಗಳೆಂದು ತಜ್ಞರು ತರ್ಕಿಸಿದ್ದಾರೆ. ಮತ್ತು ಈಗಲೂ ಆದಿವಾಸಿಗಳಲ್ಲಿ, ಧಾರ್ಮಿಕ ಆಚರಣೆಗಳಲ್ಲಿ ವಿವಿಧ ವೇಷಗಳನ್ನು ಧರಿಸುವುದುಂಟು. ಮುಖಕ್ಕೆ ಹಲವು ರೇಖೆಗಳನ್ನು ಬಿಳಿಬಣ್ಣದಿಂದ ಅಲಂಕರಿಸಿರುತ್ತಾರೆ. ಮತ್ತು ತಲೆಗೆ ಗರಿಗಳಿಂದ ಅಲಂಕರಿಸಿರುತ್ತಾರೆ. ಇಂತಹ ಆಚರಣೆಗೆ ಸನಿಹವಾದುದು ಈ ಪ್ರಾಗೈತಿಹಾಸಿಕದ ಚಿತ್ರಗಳಾಗಿವೆ.

ಪ್ರಾಗೈತಿಹಾಸಿಕ ಚಿತ್ರಕಲಾವಿದನು ಬಳಸಿದ ಪರಿಕರಗಳು

ತಂತ್ರಗಾರಿಕೆ

ನೂಲಿನಂತೆ ಸೀರೆ, ಪರಿಕರಗಳಂತೆ ಕಲಾಕೃತಿ ಎನ್ನಬಹುದು. ಕಲಾಕೃತಿಗೆ ಶ್ರೀಮಂತಿಕೆ ಬರುವುದು ಕಲಾವಿದನು ಬಳಸಿದ ಪರಿಕರಗಳೆಂದು ಹೇಳಬಹುದು. ನಮ್ಮ ಸಂಪ್ರದಾಯಕ ಮೈಸೂರು ಚಿತ್ರಕಲೆಗೆ ಚಿನ್ನ ಬೆಳ್ಳಿಯನ್ನು ಉಪಯೋಗಿಸಿ, ತುಂಬಾ ಆಕರ್ಷಣೆಯಿಂದ ಮೆರಗು ಬರುವಂತೆ ಕಲಾಕೃತಿಯಲ್ಲಿ ಉಪಯೋಗಿಸುತ್ತಾರೆ. ಆದರೆ ಈ ಪ್ರಾಗೈತಿಹಾಸಿಕ ಚಿತ್ರಕಲಾವಿದನು ಪರಿಕರಗಳ ವ್ಯವಸ್ಥೆ ಬಡವಾಗಿತ್ತು ಎನ್ನಬಹುದು. ಏಕೆಂದರೆ ತನ್ನ ಸುತ್ತಮುತ್ತ ಸುಲಭವಾಗಿ ಸಿಗುವಂತಹ ಪರಿಕರಗಳನ್ನು ಈ ಮಾನವ ಉಪಯೋಗಿಸುತ್ತಿದ್ದ ಎನ್ನಬಹುದು. ಇವನ ಬುದ್ಧಿ ವಿಕಾಸವಾದಂತೆ ಎರಡು ಮೂರು ರೀತಿಯ ಕೆಂಪು, ನಂತರ ಹಳದಿ, ಹಸಿರು, ಬಿಳಿ ವರ್ಣ ಕಲಾಕೃತಿಗಳಿಗೆ ಬಳಸಿದ್ದು ಕಂಡುಬರುತ್ತದೆ. ಈ ಹಳದಿ ಹಸಿರು ಬಣ್ಣಗಳನ್ನು ಬಳ್ಳಾರಿ ಗುಡ್ಡದ ಚಿತ್ರಗಳಲ್ಲಿ ಉಪಯೋಗಿಸಿದ್ದಾನೆ. ಇವನು ಬಳಸಿದ ಪರಿಕರಗಳನ್ನು ಇವನ ಕಲಾಕೃತಿಗಳಿಂದ ಸ್ವಲ್ಪ ಮಟ್ಟಿಗೆ ಊಹಿಸಬಹುದು.

---

೧೫. ಅ. ಸುಂದರ : ಕರ್ನಾಟಕ ಪ್ರಾಗೈತಿಹಾಸಿಕ ಕಾಲದ ಕಲೆ, ಪುಟ – ೧೮

೧. ಭಿತ್ತಿ
೨. ಚೂಪಾದ ಸಾಧನ
೩. ಬಣ್ಣ
೪. ಅಂಟು ಮಾಧ್ಯಮ
೫. ಬಣ್ಣ ಮಿಶ್ರಣಗೊಳಿಸುವ ಬಟ್ಟಲು
೬. ಕುಂಚ ಮತ್ತು ಬಣ್ಣಲೇಪನ ವಿಧಾನ

೧. ಭಿತ್ತಿ

ಪ್ರಾಗೈತಿಹಾಸಿಕ ಚಿತ್ರಗಳು ಬಂಡೆಯ ಮೇಲೆ, ಬಂಡೆಯಾಸರೆಯಲ್ಲಿ ರಚನೆಯಾಗಿದ್ದು, ಬಂಡೆಯ ಮೇಲೆ ಯಾವುದೇ ರೀತಿಯ ಹಿನ್ನೆಲೆಯಾಗಿ ಲೇಪನವನ್ನು ಮಾಡಿರುವುದಿಲ್ಲ. ನೇರವಾಗಿ ಚಿತ್ರರಚನೆ ಮಾಡಿದ್ದಾನೆ. ಕೆಲವೆಡೆ ಬಳ್ಳಾರಿ ಗುಡ್ಡ ಮತ್ತು ಸಂಗನಕಲ್ಲುಗಳಲ್ಲಿ ಕೆಲವೇ ಚಿತ್ರಬಂಡೆಗಳನ್ನು ನಯಗೊಳಿಸಿ ಸಮತಟ್ಟು ಮಾಡಿಕೊಂಡಿದ್ದಾನೆ. ಈ ಭಿತ್ತಿಗಳಿಗೆ ಚಿತ್ರ ಮಾತ್ರ ಆಕಾರದಲ್ಲಿ ಸಂಯೋಜನೆಗೊಳಿಸಿದ್ದಾನೆ. ಬಳ್ಳಾರಿ ಗುಡ್ಡದ ಶಿಲಾಶ್ರಯದಲ್ಲಿ ಹಲ್ಲಿ ಆಕಾರದ ಚಿತ್ರವೊಂದಕ್ಕೆ ಚಿತ್ರರಚನೆಯ ಪೂರ್ವದಲ್ಲಿ ಬಂಡೆಯನ್ನು ಸ್ವಲ್ಪ ಮಟ್ಟಿಗೆ ನಯಗೊಳಿಸಿ ಸಮತಟ್ಟು ಮಾಡಿಕೊಂಡು ನಂತರ ಚಿತ್ರ ರಚಿಸಿದ್ದಾನೆ.

ಸಂಗನಕಲ್ಲು ನೆಲೆಯಲ್ಲಿ ಎತ್ತಿನ ಮೇಲಿನ ಸವಾರಿ ಮಾಡುತ್ತಿರುವ ಗೀರು ಚಿತ್ರವಿದೆ. ಇದರ ಹಿಂದಣ ಬಂಡೆಯನ್ನು ನಯಗೊಳಿಸಿದ್ದಾನೆ. ಚಿತ್ರರಚನೆಯ ಭಿತ್ತಿಯಾಗಿ ಬಳಸಿಕೊಂಡ ಬಂಡೆಯ ಮೈಗಳು ವಿವಿಧ ವಿನ್ಯಾಸದಲ್ಲಿರುವುದು ಕಂಡುಬರುತ್ತದೆ. ಹಂಪಿಯ ಭರಮದೇವರ ಗುಂಡು ಹತ್ತಿರದ ಚಿತ್ರಗಳನ್ನು ಅರ್ಧ ಚಂದ್ರಾಕೃತಿಯ ಟೊಳ್ಳುಭಾಗದ ಬಂಡೆಯ ಒಳಗೆ ಚಿತ್ರಿಸಿದ್ದಾರೆ.[೧೬] ಇವರು ಹಾಸು ಬಂಡೆಗಳಿಗಿಂತ ನಿಲುಬಂಡೆಗೆ ಹೆಚ್ಚು ಚಿತ್ರವನ್ನು ಬರೆದಿದ್ದಾರೆ. ಇವರು ಬಯಲು ಬಂಡೆಗಳಲ್ಲಿ ಗೀರು/ಕುಟ್ಟು ಚಿತ್ರಗಳನ್ನು ಚಿತ್ರಿಸಿದ್ದರೆ, ಶಿಲಾಶ್ರಯ ಮತ್ತು ಗವಿಗಳಲ್ಲಿ ವರ್ಣಚಿತ್ರಗಳನ್ನು ಕಾಣಬಹುದು. ಈ ವರ್ಣಚಿತ್ರಗಳನ್ನು ಬಯಲು ಬಂಡೆಗೆ ಮಾಡಿದರೆ ಮಳೆ, ಬಿಸಿಲಿಗೆ ಹಾಳಾಗಬಹುದೆಂದು ತುಂಬಾ ಸುರಕ್ಷಿತ ಸ್ಥಳದಲ್ಲಿ ಚಿತ್ರಿಸಲಾಗುತ್ತಿತ್ತು. ಇದು ಅವನ ಭಿತ್ತಿತಂತ್ರವಾಗಿದೆ. ಭಿತ್ತಿಗೆ ಚಿತ್ರ ರಚಿಸಲು ಚೂಪಾದ ಸಾಧನ ಮತ್ತು ಕುಂಚಗಳಿಂದ ಚಿತ್ರರಚನೆ ಮಾಡುವುದು ಮುಂದಿನ ಕ್ರಮವಾಗಿದೆ.

೨. ಚೂಪಾದ ಸಾಧನ

ಈಗಿನ ಪೆನ್ಸಿಲ್‌ನಂತೆ ಈ ಪ್ರಾಗೈತಿಹಾಸಿಕದ ಮಾನವನು ಚೂಪಾದ ಸಾಧನ ಬಳಸಿರಬಹುದೆಂದು ಅಭಿಪ್ರಾಯಪಡಲಾಗಿದೆ. ಇದಕ್ಕಾಗಿ ಅವರು ಹರಿತ ಮೊನೆಯುಳ್ಳ ಕಲ್ಲಿನ ಚಕ್ಕೆಯನ್ನು ಪ್ರಾಣಿಗಳ ಮೂಳೆಯ ಟೊಳ್ಳು ಭಾಗದಲ್ಲಿ ಸಿಕ್ಕಿಸಿ, ಭದ್ರಪಡಿಸಿ ಹಿಡಿಯಲು ಅನುಕೂಲವಾಗುವಂತಹ ಸಾಧನ ತಯಾರಿಸಿಕೊಂಡಿರಬಹುದು, ಇಲ್ಲವೇ ಚೂಪು ತುದಿಯಿರುವ, ಹಿಂದೆ ಮೊಂಡವಾಗಿದ್ದು ಹಿಡಿಯಲು ಅನುಕೂಲವಾಗಿರುವ ಉದ್ದನೆಯ ಕಲ್ಲುತುಂಡಿನಿಂದ

---

೧೬. ಡಾ. ಯಾದಪ್ಪ ಪರದೇಶಿ : ಉತ್ತರಕರ್ನಾಟಕ ಭಿತ್ತಿಚಿತ್ರಕಲೆ – ಒಂದು ಅಧ್ಯಯನ (ಅ.ಪ್ರ.ಪಿಹೆಚ್.ಡಿ. ಮ.ಪ್ರ.) ಪುಟ – ೧೭೦

ಕುಟ್ಟಿ, ಕೊರೆದು ಚಿತ್ರಗಳನ್ನು ರಚಿಸಿರಬಹುದು[೧೭] ಎನ್ನಲಾಗುತ್ತದೆ. ಕಬ್ಬಿಣಯುಗಕ್ಕೆ ಬಂದಾಗ ಚೂಪಾದ ಶಿಲೆಯ ಬದಲಾಗಿ ಲೋಹದ ಉಳಿಯನ್ನು ಬಳಸಿದಂತೆ ತೋರುತ್ತದೆ. ಮೊದಲು ಬೇಕಾದ ಆಕಾರವನ್ನು ಬಂಡೆಯ ಮೇಲೆ ತೆಳುವಾದ ರೇಖೆಯಿಂದ ಮೂಡಿಸಿ ನಂತರ ಆ ರೇಖೆಗುಂಟ ಇಂತಹ ಚೂಪಾದ ಸಾಧನಗಳಿಂದ ಏಕ ಪ್ರಕಾರವಾಗಿ ಕುಟ್ಟುತ್ತ ಇಲ್ಲವೇ ಆಳವಾಗಿ ಕೊರೆದು ಚಿತ್ರಗಳನ್ನು ರಚಿಸಿರುವ[೧೮] ಅಭಿಪ್ರಾಯವಿದೆ. ಗೀರು ಚಿತ್ರಗಳನ್ನು ಒಂದೇ ಬಾರಿಗೆ ರೇಖಿಸದೇ ಅದರ ಮೇಲೆ ಹಲವು ಬಾರಿ ಗೀರಿ ಆಳವಾಗಿ ಮತ್ತು ಸ್ಪಷ್ಟವಾಗಿ ಚಿತ್ರವನ್ನು ರೇಖಿಸಲಾಗಿದೆ. ಏಕೆಂದರೆ ಗೀರು ಮತ್ತು ಕುಟ್ಟು ಚಿತ್ರಗಳು ಹೆಚ್ಚು ಗಟ್ಟಿಯಾದ 'ಕರಿಕಲ್ಲು'ಗಳಲ್ಲಿ ಕಂಡುಬರುತ್ತವೆ. ಇದರ ಮೇಲೆ ಗೀರುಕೊರೆದು ಚಿತ್ರಿಸುವುದು ಸುಲಭದ ಕೆಲಸವಲ್ಲ, ಆದ್ದರಿಂದ ಈ ಮಾನವನು ತುಂಬಾ ಶಕ್ತಿಶಾಲಿಯಾಗಿರಬೇಕು ಅನಿಸುತ್ತದೆ. ಕುರುಗೋಡು, ಮಿಂಚೇರಿ, ರಾಜಪುರ, ಎತ್ತಿನಬೂದಿಹಾಳ್, ಹಲಕುಂದಿ ಮುಂತಾದ ಕಡೆಗಳಲ್ಲಿ ಇಂಥ ಚಿತ್ರಗಳು ಕಂಡುಬರುತ್ತವೆ.

೩. ಬಣ್ಣ

ಈ ಪ್ರಾಗೈತಿಹಾಸಿಕ ಕಾಲದ ಮಾನವನು ಬಂಡೆಗಳ ಮೇಲೆ ಗೀರು/ಕುಟ್ಟು ಚಿತ್ರ ನಿರ್ಮಾಣ ಮಾಡಿದಂತೆಯೇ ಚಿತ್ರಗಳನ್ನು ಬಣ್ಣಗಳಿಂದ ಸಹ ರಚಿಸಿದ್ದಾನೆ. ಸುಲಭವಾಗಿ ದೊರೆಯುವ ನೈಸರ್ಗಿಕ ಕೆಂಪು ಮಣ್ಣನ್ನೇ ಬಣ್ಣವಾಗಿ ಉಪಯೋಗಿಸಿದ್ದಾರೆ. ಕೆಂಪು ಮಣ್ಣಿನಲ್ಲಿ ಅಥವಾ ಕಾವಿ ಪುಡಿಯಲ್ಲಿ ಪ್ರಾಣಿಗಳ ರಕ್ತವನ್ನೋ, ನೆಣವನ್ನೋ (ಕೊಬ್ಬು) ಬೆರೆಸಿ ಬಣ್ಣವನ್ನು, ಕಬ್ಬಿಣದ ಅದಿರುಗಳು, ಇಂಗಾಲ ಮಿಶ್ರಿತ ಧಾತುಗಳು ಮತ್ತು ಗುಡ್ಡ ಬೆಟ್ಟಗಳಲ್ಲಿ ದೊರೆಯುವ ಬಿಳಿ ವಿಭೂತಿಯಂತಿರುವ ಬಿಳಿ ಮಣ್ಣು (ಈ ತರಹದ ಬಿಳಿ ವಿಭೂತಿಯು ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ಕುಮಾರಸ್ವಾಮಿ ಬೆಟ್ಟದಲ್ಲಿ ವಿಭೂತಿಗುಡ್ಡದಲ್ಲಿ ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತದೆ. ಇದು ಸಂಡೂರು ವಿಭೂತಿಯೆಂದೇ ಪ್ರಖ್ಯಾತಿಯನ್ನು ಪಡೆದಿದೆ.) ಅಥವಾ 'ಕಟಗ' ಎಂದು ಕರೆಯುವ ಕಂದುಛಾಯೆಯ ಬಿಳಿಬಣ್ಣದ ಮಣ್ಣು ಮುಂತಾದವನ್ನು ಬಳಸಲಾಗಿದೆ.[೧೯] ಕೆಂಪುಬಣ್ಣಗಳಲ್ಲಿಯೇ ತಿಳಿಕೆಂಪು, ಕೆಂಪು, ಕಂದುಕೆಂಪುಬಣ್ಣಗಳಲ್ಲಿ ವ್ಯತ್ಯಾಸ ಕಾಣಬಹುದು. ಬಳ್ಳಾರಿ ಗುಡ್ಡದಲ್ಲಿ ಕಂದುಕೆಂಪು ಬಣ್ಣದ ಚಿತ್ರಗಳು ಕಂಡುಬರುತ್ತವೆ.

ಇಂತಹ ಬಣ್ಣ ಲೇಪಿತ ಚಿತ್ರಗಳನ್ನು ಈ ಜಿಲ್ಲೆ ಒಂದೇ ಅಲ್ಲದೇ ರಾಜ್ಯದ ವಿವಿಧ ಕಡೆಗಳಲ್ಲಿ ವಿದ್ವಾಂಸರು ಪತ್ತೆ ಹಚ್ಚಿದ್ದಾರೆ. ಈ ಖನಿಜ ಮೂಲ ವರ್ಣಗಳಲ್ಲೇ ಅತಿ ಹೆಚ್ಚು ಬಳಕೆಯಾದ ವರ್ಣವೆಂದರೆ "ರೆಡ್‌ಹೆಮಟೈಟ್". ಈ ರೆಡ್ ಹೆಮಟೈಟ್‌ನಿಂದ ಪಡೆಯಲಾದ

---

೧೭. ಅ. ಸುಂದರ : ಕರ್ನಾಟಕ ಪ್ರಾಗೈತಿಹಾಸಿಕ ಕಾಲದ ಕಲೆ, ಪುಟ – ೧

೧೮. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ – ೪೫

೧೯. ಕೆ. ವಿ. ಕಾಳೆ : ಕರ್ನಾಟಕದ ಚಿತ್ರಕಲೆಯಲ್ಲಿ ಬಣ್ಣದ ಬಳಕೆ, ಪುಟ – ೨೧

ಕೆಂಪು ವರ್ಣವನ್ನೇ ಕೆಂಪು, ಕಂದುಕೆಂಪಾಗಿ ವಿವಿಧ ರೀತಿಯ ಛಾಯೆಗಳ ಬದಲಾವಣೆಯೊಂದಿಗೆ ಉಪಯೋಗಿಸಲಾಗಿದೆ. ಅಲ್ಲದೇ ರೆಡ್ ಹೆಮಟೈಟ್‌ನಿಂದ ಕೆಂಪುವರ್ಣ ತಯಾರಿಸಿ ಉಪಯೋಗಿಸುವುದನ್ನು ಪ್ರಾರಂಭದ ಅಚೋಲಿಯನ್(Achoulian) ಕಾಲದಲ್ಲಿ ವಾಸವಾಗಿದ್ದ ಆಫ್ರಿಕಾ, ಯುರೋಪ್ ಮತ್ತು ಭಾರತದ ನಿವಾಸಿಗಳು ಅದಾಗಲೇ ತಿಳಿದಿದ್ದರು. ಹಾಗೆ ಯುರೋಪದ ಪ್ರಾಚೀನ ಮೌಸ್ಟೇರಿಯನ್ ಮಾನವರು ರೆಡ್ ಹೆಮಟೈಟ್‌ನಿಂದ ಕೆಂಪು ವರ್ಣ ತಯಾರಿಸುವ ವಿಧಾನ ಬಲ್ಲವರಾಗಿದ್ದರಲ್ಲದೇ ಚಿತ್ರಗಳ ರಚನೆಯಲ್ಲಿ ಇದನ್ನು ಬಳಸಿರುವುದು[೨೦] ಕಂಡುಬರುತ್ತದೆ.

ಕರ್ನಾಟಕದಲ್ಲಿನ ಸುರಪುರ ತಾಲ್ಲೂಕಿನ ಹುಣಸಗಿಯಲ್ಲಿ ನಡೆಸಿದ ಉತ್ಖನನದಲ್ಲಿ ಹಳೇ ಶಿಲಾಯುಗ ಕಾಲದ ನಿವೇಶನಗಳಲ್ಲಿ ಹೊಂದಿಸಿಟ್ಟ ಕೆಮ್ಮಣ್ಣಿನ ಗಟ್ಟಿಗಳು ದೊರೆತಿವೆ. ಇವುಗಳನ್ನು ಅವರು ವರ್ಣತಯಾರಿಕೆಗಾಗಿ ಬಳಸುತ್ತಿದ್ದರೆಂದು[೨೧] ವಿದ್ವಾಂಸರ ಅಭಿಪ್ರಾಯ. ಬಳ್ಳಾರಿ ಗುಡ್ಡದ ಚಿತ್ರಗಳಲ್ಲಿ ಹಳದಿ ಮತ್ತು ಹಸಿರು ಬಣ್ಣಗಳು ಕಂಡುಬರುತ್ತವೆ. ಈ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಗಳಲ್ಲಿಯೇ ವಿಶೇಷವಾದ ಸ್ಪಷ್ಟರೂಪದ ಮತ್ತು ಕೆಂಪು, ಬಿಳಿಬಣ್ಣಗಳೊಂದಿಗೆ ಹಳದಿ ಮತ್ತು ಹಸಿರು ಬಣ್ಣಗಳ ಲೇಪನ ಸಹ ಇಲ್ಲಿ ಕಾಣಬಹುದು.

೪. ಅಂಟು ಮಾಧ್ಯಮ

ಚಿತ್ರರಚನೆಯಲ್ಲಿ ಚಿತ್ರಗಳು ಬಹುದಿನ ಬಾಳಿಕೆ ಬರಲು ಮತ್ತು ಚಿತ್ರಗಳಿಗೆ ಬಣ್ಣವು ಭದ್ರವಾಗಿ ಅಂಟಿಕೊಳ್ಳಲು ಬಣ್ಣಗಳಲ್ಲಿ ಅಂಟುಗಳನ್ನು ಉಪಯೋಗಿಸುವ ಹಾಗೆ ಪ್ರಾಗೈತಿಹಾಸಿಕ ಮಾನವನು ಕೂಡ ಬಣ್ಣಗಳಲ್ಲಿ ಅಂಟನ್ನು ಉಪಯೋಗಿಸುತ್ತಿದ್ದ ಎನ್ನಲಾಗುತ್ತದೆ. ಈ ನಿಟ್ಟಿನಲ್ಲಿ ಆಸ್ಟ್ರೇಲಿಯಾದ ಪ್ರಾಚೀನ ಬಂಡೆಚಿತ್ರಗಳಲ್ಲಿ ತತ್ತಿಯೊಳಗಿನ ಹಳದಿ ಲೋಳೆಯನ್ನು ವರ್ಣಬಂಧಕವಾಗಿ ಉಪಯೋಗಿಸಿದ್ದಾರೆ.

ಯುರೋಪಿನ ಹಿಮಯುಗದ ಬಂಡೆಚಿತ್ರಗಳ ರಚನೆಗಾಗಿ ಪ್ರಾಣಿಗಳ ರಕ್ತ, ತತ್ತಿಯ ಬಿಳಿಯ ಲೋಳೆಗಳನ್ನು ವರ್ಣಬಂಧಕವಾಗಿ ಬಳಸಿದ್ದಾರೆ[೨೨] ಎಂಬುದಾಗಿ ಅಭಿಪ್ರಾಯಗಳಿವೆ. ಅಲ್ಲದೇ ಜೇನುಮೇಣ, ಸಸ್ಯಮೂಲದ ಅಂಟುಗಳನ್ನು ಸಹಿತ ಪ್ರಾಗೈತಿಹಾಸಿಕ ಕಾಲದ ಜನರು ಬಣ್ಣ ಬೆರಕೆ ಮಾಡಲು ಅಂಟುಮಾಧ್ಯಮವಾಗಿ ಉಪಯೋಗಿಸಿರುವುದನ್ನು[೨೩] ವಿದ್ವಾಂಸರ ಅಭಿಪ್ರಾಯವಾಗಿದೆ. ದಕ್ಷಿಣ ಆಫ್ರಿಕಾದ ಪ್ರಾಚೀನ ಬಂಡೆಚಿತ್ರಗಳ ರಚನೆಗಾಗಿ ವರ್ಣ ತಯಾರಿಕೆಯಲ್ಲಿ ಎಲುಬಿನೊಳಗಿನ ಜಿಗುಟು ಪದಾರ್ಥ(Marrow), ಕೊಬ್ಬು (Fat) ಮತ್ತು ಪ್ರಾಣಿಗಳ ಮೂತ್ರ, ಇವುಗಳನ್ನು ಬಳಸಿರುವ ಸಾಧ್ಯತೆ ಇದೆ ಎನ್ನುವ ಜೊತೆಗೆ ಪ್ರಾಣಿಗಳ ರಕ್ತವನ್ನು ವರ್ಣಮಾಧ್ಯಮವಾಗಿ

---

೨೦. Yashoda Mathpati : Pre-Historic Rock Paintings of Bhimbetka, P.No. 9

೨೧. ಡಾ. ಅ. ಸುಂದರ (ಸಂ.) : ಕರ್ನಾಟಕ ಚರಿತೆ – ಸಂ.೧, ಪುಟ –೧೩೭

೨೨. ಡಾ. ಯಾದಪ್ಪ ಪರದೇಶಿ : ಉತ್ತರಕರ್ನಾಟಕ ಭಿತ್ತಿಚಿತ್ರಕಲೆ – ಒಂದು ಅಧ್ಯಯನ (ಅ.ಪ್ರ.ಪಿಹೆಚ್.ಡಿ. ಮ.ಪ್ರ.) ಪುಟ – ೧೭೪

೨೩. Yashodha Mathpati : Pre-Historic Rock Paintings of Bhimbetka, P.No. 11

[illegible]

[illegible]

[illegible]

ಬಳಸಿರಲಾರರು ಎನ್ನುವ ವಿಚಾರವೂ[೨೪] ಇದೆ. ಈ ನಿಟ್ಟಿನಲ್ಲಿ ಬಳ್ಳಾರಿ ಗುಡ್ಡದ ಕಲ್ಲಾಸರೆಯಲ್ಲಿ ಬಿಳಿ ಮತ್ತು ಹಳದಿ ಬಣ್ಣದ ಚಿತ್ರಗಳಿಗೆ ಜಿಗುಟು ಪದಾರ್ಥ, ಕೊಬ್ಬು ಬೆರೆಸಿ, ಬಣ್ಣಲೇಪನ ಮಾಡಿದ್ದು ಎನ್ನುವುದಕ್ಕೆ ಚಿತ್ರಗಳ ಸುತ್ತಲೂ ಎಣ್ಣೆರೂಪದಲ್ಲಿ ದ್ರವ ಬಿಡುಗಡೆಗೊಂಡಿರುವುದು ಕಂಗೊಳಿಸುತ್ತದೆ.

೫. ಬಣ್ಣಮಿಶ್ರಣಗೊಳಿಸುವ ಬಟ್ಟಲು

ಬಣ್ಣ ಸಂಗ್ರಹಣೆಗಾಗಿ ಸಂಗ್ರಹ ಸಾಧನದ ಅವಶ್ಯಕತೆ ಇದೆ. ಈ ಪ್ರಾಗೈತಿಹಾಸಿಕ ಮಾನವನು ಪ್ರಾರಂಭದಲ್ಲಿ ಬಂಡೆಯ ತೆಗ್ಗು ಪ್ರದೇಶದಲ್ಲಿ ವರ್ಣಚಿತ್ರಗಳನ್ನು ಬೆರಕೆ ಮಾಡಿಕೊಂಡಿರುವುದಾಗಿ[೨೫] ವಿದ್ವಾಂಸರ ಅಭಿಪ್ರಾಯವಿದೆ. ಇಂತಹ ಕುಣಿಗಳು ವರ್ಣಚಿತ್ರಗಳ ನೆಲೆಗಳಾದ ಸಂಗನಕಲ್ಲು ಮತ್ತು ಎತ್ತಿನಬೂದಿಹಾಳ್ ಮತ್ತು ಬಳ್ಳಾರಿಯ ಗುಡ್ಡಗಳಲ್ಲಿ ಕಂಡುಬರುತ್ತವೆ. ಚಂಬಲ್ ಕಣಿವೆಯ ಪ್ರದೇಶದಲ್ಲಿನ ಉತ್ಖನನದಲ್ಲಿ ಹೆಮಟೈಟ್ ವರ್ಣದ ತುಂಡುಗಳು, ವರ್ಣ ಕಲೆಸುವ ಕಲ್ಲಿನ ಪ್ಯಾಲೆಟ್ (Colour pallette)ಗಳನ್ನು ಪತ್ತೆ ಮಾಡಿದರು[೨೬] ಎನ್ನಲಾಗುತ್ತದೆ. ಇವುಗಳಲ್ಲದೆಯೇ ನೈಸರ್ಗಿಕವಾಗಿ ಸಿಗುವ ತೆಂಗಿನ ಚಿಪ್ಪು ಅಥವಾ ಅಡಿಕೆ ತಟ್ಟೆ, ಹಾಗೆ ಯಾವುದಾದರೂ ದಪ್ಪವಾದ ಎಲೆ, ಚರ್ಮಗಳನ್ನು ಬಟ್ಟಲಿನ ಆಕಾರ ಮಾಡಿ ಉಪಯೋಗಿಸಿರಬೇಕು. ಚರ್ಮದ ಚೂರು ಒಣಗಿದ ನಂತರ ಅದರ ಆಕಾರವು ಸುರಳಿಗೊಂಡು ಗಟ್ಟಿಯಾಗುತ್ತದೆ.

೬. ಕುಂಚ ಮತ್ತು ಬಣ್ಣ ಲೇಪನ ವಿಧಾನ

ಬಣ್ಣವನ್ನು ತಯಾರಿಸಿಕೊಂಡು ಕುಂಚದಿಂದ ಲೇಪನ ಪ್ರಮುಖ ಘಟ್ಟವಾಗಿದೆ. ಗಿಡದ ಟೊಂಗೆಯನ್ನು ಜಜ್ಜಿ ಕುಂಚವನ್ನು ರೂಪಿಸಿಕೊಂಡು ಚಿತ್ರರಚನೆ ಮಾಡಿರಬಹುದೆಂದು[೨೭] ಅ. ಸುಂದರ ಅವರ ಅಭಿಪ್ರಾಯವಾಗಿದೆ. ಇದರ ಜೊತೆಗೆ ಪ್ರಾಣಿಗಳ ಕೂದಲುಗಳನ್ನು ಒಟ್ಟುಗೂಡಿಸಿ ಕಟ್ಟಿ ಮಾಡಿದ ಕುಂಚಗಳನ್ನು ಚಿತ್ರರಚನೆಗೆ ಬಳಸಿರಬಹುದೆಂದು ಊಹಿಸುತ್ತಾರೆ. ಹೀಗೆ ಹಲವು ಅಭಿಪ್ರಾಯಗಳು ಇದ್ದು ಆಯಾ ಸಂದರ್ಭಕ್ಕನುಸಾರವಾಗಿ ತಕ್ಷಣಕ್ಕೆ ಲಭ್ಯವಾದ ವಸ್ತುಗಳಿಂದ ಕುಂಚಗಳನ್ನು ರೂಪಿಸಿಕೊಂಡಿರಬಹುದು. ಇವೆಲ್ಲವುಗಳ ಜೊತೆಗೆ ಕೈಯಿಂದಲೂ ವರ್ಣಲೇಪನ ಮಾಡಿದ ಗುರುತುಗಳು ಕಂಡುಬರುವುದಾಗಿ[೨೮] ಅಭಿಪ್ರಾಯಗಳಿವೆ. ಹೆಚ್ಚಾಗಿ ಪ್ರಾಣಿಯ ಮಧ್ಯವೇ ಇದ್ದುದರಿಂದ ಪ್ರಾಣಿಯ ಕೂದಲಿನಿಂದ ರಚಿಸಿಕೊಂಡ ಕುಂಚಗಳನ್ನು ಹೆಚ್ಚಿನ ಮಟ್ಟದಲ್ಲಿ ಉಪಯೋಗಿಸಿಕೊಂಡಿರಬೇಕು. ಕೆಲವು ರೇಖಾಪ್ರಧಾನವಾದ ಚಿತ್ರಗಳಿಗೆ ಕುಂಚದಿಂದ ಹೊರಮೈ

---

೨೪. Yashodha Mathpati : Pre-Historic Rock Paintings of Bhimbetka, P.No. 12

೨೫. S K. Panday : Indian Rock Art, P.No. 35

೨೬. V S. Wakankari : Rock Painting of the Chambal Region, P.No. 12

೨೭. ಅ. ಸುಂದರ : ಕರ್ನಾಟಕ ಪ್ರಾಗೈತಿಹಾಸಿಕ ಕಾಲದ ಕಲೆ, ಪುಟ – ೧

೨೮. ಡಾ. ಯಾದಪ್ಪ ಪರದೇಶಿ : ಉತ್ತರಕರ್ನಾಟಕ ಭಿತ್ತಿಚಿತ್ರಕಲೆ – ಒಂದು ಅಧ್ಯಯನ (ಅ.ಪ್ರ.ಪಿಹೆಚ್.ಡಿ. ಮ.ಪ್ರ.) ಪುಟ – ೧೭೫

ಮಾತ್ರ ಹಾಕಿದ್ದಾರೆ. ಕೆಲವು ಚಿತ್ರಗಳಿಗೆ ಹೊರಮೈ(Out line) ಹಾಕಿ ಒಳಜಾಗವನ್ನು ಪುನಃ ಬಣ್ಣದಿಂದ ಲೇಪನಮಾಡಿ ಪೂರ್ಣಗೊಳಿಸಿದ್ದಾರೆ. ಕೆಲವು ಬಾರಿ ಕೈಯಿಂದ ಮಾಡಿದ ಲೇಪನ ಕೂಡ ಕಂಡುಬರುತ್ತದೆ.

ಹಂಪೆನೆಲೆಯೊಂದರ ಕೆಂಪುವರ್ಣದ ಮಿಥುನಚಿತ್ರಗಳಿಗೆ ತೆಳುವಾದ ವರ್ಣವು ಒಂದೇ ತೆರನಾಗಿ ಹೊರಮೈಗೆ ರೇಖೆಗಳ ಮೂಲಕ ಲೇಪನ ಮಾಡಲಾಗಿದೆ. ಮತ್ತು ಬಳ್ಳಾರಿ ಗುಡ್ಡದ ನವಿಲಿನ ಚಿತ್ರ ಒಂದಕ್ಕೆ ಹಳದಿ, ಹಸಿರು, ಬಿಳಿಬಣ್ಣಗಳಿಂದ ನವಿಲಿನ ಗರಿಯನ್ನು ಚಿತ್ರಿಸಲು ಹಲವು ತೇಪೆ(patch)ಗಳನ್ನು ಹಾಕಿದ್ದಾರೆ. ಹಂಪಿ, ಬಳ್ಳಾರಿ ಗುಡ್ಡದ ವರ್ಣಗಳ ಲೇಪನದಲ್ಲಿ ಯಾವುದಾದರೂ ಮುದ್ರೆಯನ್ನು ಉಪಯೋಗಿಸಿದಂತೆ ಮೈ ಬಳಕೆ ಕಂಡುಬರುತ್ತದೆ. ಇಂಥ ಚಿತ್ರಗಳನ್ನು ಮರದ ದಪ್ಪ ಎಲೆಯಲ್ಲಿಯೋ, ಚರ್ಮದಲ್ಲಿಯೋ, ಕತ್ತರಿಸಿಕೊಂಡು ಅದನ್ನು ಬಂಡೆಯ ಮೇಲಿಟ್ಟು ಕತ್ತರಿಸಿದ ಭಾಗದಲ್ಲಿ ಬಣ್ಣವನ್ನು ತುಂಬುತ್ತಿದ್ದಿರಬೇಕೆಂದು ಡಾ. ಅ. ಸುಂದರವರು ಅಭಿಪ್ರಾಯ ಪಟ್ಟಿದ್ದಾರೆ.

ಪ್ರಾಗೈತಿಹಾಸಿಕ ಚಿತ್ರಕಲಾ ಪ್ರಕಾರಗಳು

ಪ್ರಾಗೈತಿಹಾಸಿಕ ಚಿತ್ರಗಳನ್ನು ಅಧ್ಯಯನದ ಅನುಕೂಲತೆಗಾಗಿ ಎರಡು ಪ್ರಕಾರದಲ್ಲಿ ವಿಂಗಡಿಸಲಾಗಿದೆ. ೧. ಗವಿ ವರ್ಣಚಿತ್ರಗಳು ೨. ಬಯಲು ಬಂಡೆಯ ಚಿತ್ರಗಳು

೧. ಗವಿ ವರ್ಣಚಿತ್ರಗಳು : ಈ ಗವಿಗಳಲ್ಲಿ ಹೆಚ್ಚಾಗಿ ವರ್ಣಚಿತ್ರಗಳು ಕಂಡುಬರುತ್ತವೆ. ಈ ವರ್ಣಚಿತ್ರಗಳಲ್ಲಿ ಎರಡು ವಿಧಗಳು. ೧. ರೇಖಾ ವರ್ಣಚಿತ್ರಗಳು ೨. ನೆರಳು ವರ್ಣಚಿತ್ರಗಳು.

೧. ರೇಖಾವರ್ಣಚಿತ್ರಗಳು

ವರ್ಣಸಹಿತ ರೇಖಾಪ್ರಧಾನವಾದ ಚಿತ್ರಗಳು ಕಂಡುಬಂದಿವೆ. ವರ್ಣದಿಂದ ಎಳೆದ ರೇಖೆಗಳೇ ಇಲ್ಲಿ ಚಿತ್ರದ ಸ್ವರೂಪವನ್ನು ತೋರಿಸುತ್ತಿದ್ದು ಚಿತ್ರದ ಅಗಲ, ಉದ್ದ, ದಪ್ಪಳತೆಯನ್ನು ಬಿಂಬಿಸುವ ಚಪ್ಪಟೆವರ್ಣದ ಲೇಪನವಿರುವುದಿಲ್ಲ[೨೯] ವರ್ಣದಿಂದ ರಚಿಸಿದ ರೇಖಾಚಿತ್ರಗಳು ಬಳ್ಳಾರಿಜಿಲ್ಲೆಯ ನೆಲೆಗಳಾದ ಹಂಪಿ, ಬಳ್ಳಾರಿ ಗುಡ್ಡ, ಸಂಗನಕಲ್ಲು, ಕುರುಗೋಡುಗಳಲ್ಲಿ ಕಂಡುಬರುತ್ತವೆ. ಆದರೂ ಈ ಚಿತ್ರಗಳಲ್ಲಿ ರೇಖೆ ಮಾತ್ರ ಪ್ರಧಾನವಾಗಿರುತ್ತದೆ. ಇವುಗಳಲ್ಲಿಯೂ ಕಡ್ಡಿಯಾಕಾರದ ರೇಖಾಚಿತ್ರಗಳು, ಒಳಸ್ಥಳಾವಕಾಶವಿರುವ ಹೊರಮೈ ಚಿತ್ರಗಳೆಂದು ವಿಂಗಡಿಸಬಹುದು.

ಕಡ್ಡಿಯಾಕಾರದ ರೇಖಾಚಿತ್ರಗಳು ಬಳ್ಳಾರಿ ಗುಡ್ಡದ ಚಿತ್ರದಲ್ಲಿ ಬಿಳಿವರ್ಣದಿಂದ ನಾಯಿ ಮತ್ತು ಮನುಷ್ಯಾಕೃತಿಯನ್ನು ಕಡ್ಡಿಯಾಕಾರದಲ್ಲಿ ರೇಖಿಸಲಾಗಿದೆ. ದಪ್ಪವಾಗಿ ಒಂಟಿರೇಖೆಯಿಂದ ಪೂರ್ಣಪ್ರಮಾಣದ ಆಕಾರವನ್ನು ರಚಿಸಿದ್ದಾರೆ. ಒಳ ಸ್ಥಳಾವಕಾಶವಿರುವ ಹೊರಮೈ ಚಿತ್ರಗಳೆಂದು

೨೯. ಡಾ. ಯಾದಪ್ಪ ಪರದೇಶಿ : ಉತ್ತರಕರ್ನಾಟಕ ಭಿತ್ತಿಚಿತ್ರಕಲೆ – ಒಂದು ಅಧ್ಯಯನ (ಅ.ಪ್ರ.ಪಿಹೆಚ್.ಡಿ. ಮ.ಪ್ರ.) ಪುಟ – ೧೭೬

ಕರೆಸಿಕೊಳ್ಳುವ ಚಿತ್ರಗಳ ಹೊರಮೈ(Out line) ಚಿತ್ರವಿದ್ದು, ಒಳಗಡೆ ಸ್ಥಳವು ಖಾಲಿಯಾಗಿರುತ್ತದೆ. ಇಂತಹ ಚಿತ್ರಗಳು ಹೆಚ್ಚಾಗಿ ಹಂಪಿ ಮತ್ತು ಸಂಗನಕಲ್ಲು ಪ್ರದೇಶಗಳಲ್ಲಿ ಕಂಡುಬರುತ್ತವೆ.

೨. ನೆರಳು ವರ್ಣಚಿತ್ರಗಳು

ವರ್ಣದಿಂದ ರಚಿಸಿದ ರೇಖಾ ಪ್ರಧಾನ ಚಿತ್ರಗಳಂತೆಯೇ ವರ್ಣದಿಂದ ರಚಿಸಿದ ನೆರಳು ಚಿತ್ರಗಳೂ ಕಂಡುಬರುತ್ತವೆ. ಇಂತಹ ಚಿತ್ರಗಳಲ್ಲಿ ರೇಖೆಯಿಂದ ಮೊದಲು ಚಿತ್ರರಚನೆ ಮಾಡಿ, ನಂತರ ಚಿತ್ರದ ಒಳಭಾಗಕ್ಕೆ ಚಪ್ಪಟೆಯಾಗಿ ವರ್ಣ ಲೇಪಿಸಲಾಗಿರುತ್ತದೆ. ಈ ಚಿತ್ರಗಳು ಪ್ರಾಣಿ ಪಕ್ಷಿಗಳ ನೆರಳಿನಂತೆ ಚಪ್ಪಟೆಯಾಗಿರುವ ಸ್ವರೂಪದಲ್ಲಿರುವುದರಿಂದ ಇವುಗಳನ್ನು ವರ್ಣದಿಂದ ರಚಿಸಿದ ನೆರಳುಚಿತ್ರಗಳೆಂದು ಪರಿಗಣಿಸುವುದು.[೩೦] ಹೊರಮೈಯನ್ನು ವರ್ಣದಿಂದ ರೇಖಿಸಿ ನಂತರ ಒಳಮೈ ಖಾಲಿ ಸ್ಥಳಾವಕಾಶವನ್ನು ತುಂಬಲಾಗುತ್ತದೆ. ಹಂಪಿ, ಸಂಗನಕಲ್ಲು, ಕಪ್ಪಗಲ್‌ಗಳಲ್ಲಿ ಈ ತರಹದ ಚಿತ್ರಗಳು ಕಂಡುಬರುತ್ತವೆ.

ವರ್ಣರಹಿತ ಚಿತ್ರಗಳು

ವರ್ಣರಹಿತ ಚಿತ್ರಗಳಿಗೆ ಯಾವುದೇ ವರ್ಣವನ್ನು ಲೇಪಿಸದೇ ರಚನೆ ಮಾಡಿದ ಚಿತ್ರಗಳಾಗಿವೆ. ಯಾವುದೋ ಚೂಪಾದ ಸಾಧನದಿಂದ ಬಂಡೆಗಳ ಮೇಲೆ ಕುಟ್ಟಿಕೊರೆದು ಚಿತ್ರಗಳನ್ನು ರಚಿಸಲಾಗಿದೆ. ಈಗಿನ ಕರಡು (Key Sketch) ರೇಖಾಚಿತ್ರಗಳಂತೆ ಹಲವು ಅದೇ ಮಾದರಿಯ ರೇಖಾಚಿತ್ರಗಳನ್ನು ಒಂದೇ ಬಂಡೆಗೆ ಕಾಣಬಹುದು. ಒಂದೇ ಆಳಕ್ಕೆ ಕೊರೆದು, ಕುಟ್ಟಿ ಚಿತ್ರಿಸಲಾಗಿರುತ್ತದೆ. ಕರಡು ರೇಖಾಕೃತಿಯ ಮಧ್ಯದಲ್ಲಿಯೇ ಹಲವು ಸ್ಪಷ್ಟ, ನೈಜವಾದಂತಹ ಚಿತ್ರಗಳು ಕೂಡ ಕಾಣಬಹುದು. ಆದರೆ ಕರಡು ರೇಖಾಚಿತ್ರಗಳಿಗೆ ಬಣ್ಣ ಲೇಪಿಸಿರುವಂತೆ ಈ ಚಿತ್ರಗಳಿಗೆ ಯಾವುದೇ ಬಣ್ಣ ಲೇಪನವಿರುವುದಿಲ್ಲ ಈ ತರಹದ ಚಿತ್ರಗಳನ್ನು ಮಿಂಚೇರಿ, ಸಂಜರಾಯನಕೋಟೆ, ಬೆಳಗಲ್ಲು, ಹಳಕುಂದಿ, ಕಪ್ಪಗಲ್ಲು ಮುಂತಾದವುಗಳಲ್ಲಿ ಕಾಣಬಹುದಾಗಿದೆ.

ಕುಟ್ಟಿದ ಚಿತ್ರಗಳು

ಬಂಡೆಯ ಮೇಲೆ ಚೂಪಾದ ಸಾಧನದಿಂದ ಕುಟ್ಟಿ ರಚಿಸಿರುವುದರಿಂದ ಈ ಪ್ರಕಾರದ ಚಿತ್ರಗಳನ್ನು ಕುಟ್ಟು ಚಿತ್ರಗಳೆಂದು ಕರೆಯಲಾಗುತ್ತದೆ. ಈ ಕುಟ್ಟು ಚಿತ್ರಗಳಲ್ಲಿ ಮೊದಲಿಗೆ ಬಂಡೆಯ ಮೇಲೆ ಚೂಪಾದ ಸಾಧನದಿಂದ ರೇಖಾಕೃತಿಯನ್ನು ಚಿತ್ರಿಸಿಕೊಂಡು ತದನಂತರದಲ್ಲಿ ಈ ರೇಖೆ ಗುಂಟ ಚೂಪಾದ ಸಾಧನದಿಂದ ಏಕಪ್ರಕಾರವಾಗಿ ಕುಟ್ಟುತ್ತಾ ಚಿತ್ರಗಳನ್ನು ರಚಿಸುತ್ತಾರೆ. ಇದು ತುಂಬಾ ಏಕಾಗ್ರತೆಯಿಂದ ನಿಧಾನವಾಗಿ ಚಿತ್ರಿಸುವ ಕಲಾಪ್ರಕಾರವಾಗಿದೆ. ಇಂದಿನ ಆಧುನಿಕ ಯುಗದ 'ಸ್ಯೂರಟ್'ನ 'ಬಿಂದು ಯೋಜನ' (Pointalism) ಚಿತ್ರದಂತೆ ದೂರದಿಂದ ಬಿಂದುಗಳು ಕಂಡುಬರುವುದಿಲ್ಲ. 'ಬಿಂದು ಯೋಜನೆ' ಕಲಾಕೃತಿಗಳಲ್ಲಿ ಬಣ್ಣದಿಂದ ರಚಿಸಿದರೆ, ಇಲ್ಲಿ ಬಂಡೆ

೩೦. ಡಾ. ಯಾದಪ್ಪ ಪರದೇಶಿ : ಉತ್ತರಕರ್ನಾಟಕ ಭಿತ್ತಿಚಿತ್ರಕಲೆ – ಒಂದು ಅಧ್ಯಯನ (ಅ.ಪ್ರ.ಪಿಹೆಚ್.ಡಿ. ಮ.ಪ್ರ.) ಪುಟ – ೧೭೭

[illegible]

ಮೇಲೆ ಮೂಡುವ ಕುಟ್ಟು ಬಿಂದುಚಿತ್ರಗಳೆನ್ನಬಹುದು. ಇಂತಹ ಚಿತ್ರಗಳನ್ನು ಮಿಂಚೇರಿ, ಸಂಜರಾಯನಕೋಟೆ, ಕಮಲಾಪುರದ 'ಏಕಶಿಲೆ' ಹತ್ತಿರ ಕಾಣಬಹುದು.

ಕೊರೆದ ಚಿತ್ರಗಳು

ಇಲ್ಲಿಯೂ ಕೂಡ ಮೊದಲು ಕೊರೆದ ಕರಡು(Key Sketch)ನಂತೆ ರಚಿಸಿಕೊಂಡು ನಂತರ ಆ ಕರಡು ಚಿತ್ರ ಗುಂಡಾಗಿ ಆಳಕ್ಕೆ ಕೊರೆಯುವುದಕ್ಕೆ ಕೊರೆದ ಚಿತ್ರಗಳು ಎಂದು ಕರೆಯುತ್ತಾರೆ. ಬಯಲಲ್ಲಿ ಇದ್ದರೂ ಇವುಗಳ ಸ್ಪಷ್ಟರೇಖೆಗಳು ಮಾತ್ರ ಹಾಗೇ ಉಳಿದುಕೊಂಡು ಬಂದಿವೆ. ಇಂತಹ ಚಿತ್ರಗಳನ್ನು ಎತ್ತಿನಬೂದಿಹಾಳ್, ಕಪ್ಪಗಲ್, ಕಾರಿಗನೂರು, ಗಾದಿಗನೂರು, ಮಿಂಚೇರಿಗಳಲ್ಲಿ ಕಾಣಬಹುದಾಗಿದೆ.

ಪ್ರಾಗೈತಿಹಾಸಿಕ ಚಿತ್ರಕಲೆಯ ನೆಲೆಗಳು

ಬಳ್ಳಾರಿ ಜಿಲ್ಲೆಯಲ್ಲಿ ಪ್ರಾಗೈತಿಹಾಸಿಕ ಚಿತ್ರಕಲೆಯ ನೆಲೆಗಳಾದ ತೆಕ್ಕಲಕೋಟೆ, ಎತ್ತಿನಬೂದಿಹಾಳ್, ಮೇಟ್ರಿ, ಬೆಳಗಲ್ಲು, ಹಳಕುಂದಿ, ನಂದಿಬಂದಡಿ (ಹೊಸಪೇಟೆ ತಾ), ಮಿಂಚೇರಿ, ಸಂಜರಾಯನಕೋಟೆ (ಬಳ್ಳಾರಿ ತಾ), ಅಪ್ಪಯ್ಯನಹಳ್ಳೀ (ಕೊಟ್ಟೂರು ತಾ), ರಾಜಪುರ, ಬೈರನಾಯಕನಹಳ್ಳಿ (ಸಂಡೂರು ತಾ), ಸಂಗನಕಲ್ಲು (ಬಳ್ಳಾರಿ ತಾ), ಕಾರಿಗನೂರು, ಗಾದಿಗನೂರು ಮುಂತಾದವುಗಳಲ್ಲಿ ಹಳೇಶಿಲಾಯುಗದಿಂದ ಇತಿಹಾಸ ಪ್ರಾರಂಭಿಕ ಹಂತದವರೆಗೂ ಪ್ರಾಗೈತಿಹಾಸಿಕ ಚಿತ್ರಗಳನ್ನು ಕಾಣಬಹುದು. ತೆಕ್ಕಲಕೋಟೆ ಬಹಳ ಪ್ರಾಮುಖ್ಯವಾದ ನವಶಿಲಾಯುಗದ ನೆಲೆಯಾಗಿದ್ದು, ಅಲ್ಲಿ ಉತ್ಖನನವನ್ನು ನಡೆಸಲಾಗಿದ್ದು, ಇಲ್ಲಿ ನವಶಿಲಾಯುಗದ ಅವಶೇಷಗಳು ಹೇರಳವಾಗಿ ದೊರಕಿವೆ.[೩೧] ಇವುಗಳಲ್ಲದೆಯೇ ಇತಿಹಾಸ ಪೂರ್ವದ ಚಿತ್ರಗಳು ದೊರಕಿವೆ. ಕಮಲಾಪುರದ ವಿದ್ಯಾರಣ್ಯದ ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗದ ಆವರಣದಲ್ಲಿರುವ ಬಂಡೆಗಳಲ್ಲಿ ಹಾಗೂ ಪಕ್ಕದ ಒಂಟಿಗುಂಡು ಮತ್ತು ನಂದಿಬಂದಡಿ, ಅಪ್ಪಯ್ಯನ ಹಳ್ಳಿ, ರಾಜಪುರ, ಬೈರನಾಯಕನಹಳ್ಳಿಯ ಚಿತ್ರಗಳು, ತಾಮ್ರಯುಗ ಮತ್ತು ಶಿಲಾಯುಗ ಕಾಲದವು[೩೨] ಎನ್ನಲಾಗುತ್ತದೆ. ಶಿಲಾಯುಗ ಹಂತದಲ್ಲಿಯ ನೂತನ ಶಿಲಾಯುಗ ಸಂಸ್ಕೃತಿಯ ಬೃಹತ್ ಶಿಲಾ ಸಂಸ್ಕೃತಿಯ ವಾಸ್ತವ್ಯದ ನೆಲೆಯಲ್ಲಿ ಕುರುಗೋಡು, ಬೆಳಗಲ್ಲು[೩೩] ಸೇರಿವೆ. ಸಂಗನಕಲ್ಲಿನ ಚಿತ್ರಗಳನ್ನು ಸೂಕ್ಷ್ಮಶಿಲಾಯುಗ, ನವಶಿಲಾಯುಗಕ್ಕೆ ಸೇರಿವೆಯೆನ್ನಲಾಗುತ್ತದೆ. ಹಂಪಿ ಪರಿಸರದ ಬನದಹಟ್ಟಿ ಗುಡ್ಡ, ಬಳ್ಳಾರಿ, ಬೆಳಗಲ್ಲು (ಬಳ್ಳಾರಿ ತಾ), ಕಾರಿಗನೂರು, ಗಾದಿಗನೂರು, ಹಂಪಿ, ರಾಜಪುರ ನೆಲೆಗಳು ಸೂಕ್ಷ್ಮ ಶಿಲಾಯುಗ ಸಂಸ್ಕೃತಿಗೆ[೩೪] ಸೇರಿದವು.

---

೩೧. M S. Nagarajarao & Melhottara : Stone age hill dweller of Tekkalkote, P.No. 173

೩೨. ಡಾ. ಶರಣಪ್ಪ ಕೋಲ್ಕಾರ್ : ಶಿಲಾಯುಗದ ಗವಿಚಿತ್ರಗಳು, ಪುಟ – ೩೪

೩೩. ಅ. ಸುಂದರ : ಕರ್ನಾಟಕದ ಪ್ರಾಗೈತಿಹಾಸಿಕ ಕಾಲದ ಕಲೆ, ಪುಟ –

೩೪. ಡಾ. ಎಲ್. ಶ್ರೀನಿವಾಸ : ಹಂಪಿ ಪರಿಸರದ ಆದಿಮಾನವನ ನೆಲೆಗಳು, ಪುಟ – ೨೩

ಹಳಕುಂದಿ, ಶಿಲಾ–ತಾಮ್ರಯುಗ ಬೃಹತ್ ಶಿಲಾಯುಗ, ವೆಂಕಟಾಪುರ ನೂತನ ಶಿಲಾ ತಾಮ್ರಯುಗ, ಗುಡಿ ಓಬಳಾಪುರ (ಹೊಸಪೇಟೆ ತಾ), ಶಿಲಾ ತಾಮ್ರಯುಗ ಇತಿಹಾಸ ಆರಂಭಯುಗ, ದಾನಪುರ(ಹೊಸಪೇಟೆ ತಾ), ಸೂಕ್ಷ್ಮ ಶಿಲಾಯುಗ, ಹಂಪಿ – ಶಿಲಾ–ತಾಮ್ರಯುಗ, ಬೃಹತ್ ಶಿಲಾಯುಗ, ಇತಿಹಾಸ ಆರಂಭಯುಗ, ಕಪ್ಪಗಲ್ ಬೃಹತ್ ಶಿಲಾಯುಗ ಇತಿಹಾಸ ಆರಂಭಯುಗ[೩೫] ಎಂದು ಹೇಳಲಾಗುತ್ತದೆ. ಹಳೇ ಶಿಲಾಯುಗ ಕಾಲಕ್ಕೆ ಆನೆ, ಕಾಡೆಮ್ಮೆ, ಹುಲಿ, ಚಿರತೆಗಳಂತಹ ಪ್ರಾಣಿಗಳನ್ನು ಬೇಟೆಯ ದೃಶ್ಯದಲ್ಲಿ ರಚಿಸಿದ್ದಾರೆ. ಸೂಕ್ಷ್ಮಶಿಲಾಯುಗ ಕಾಲಕ್ಕೆ ಕಾಡುಹಂದಿ, ಜಿಂಕೆಗಳಂತಹ ಪ್ರಾಣಿಗಳು ರಚಿತನಾಗೊವೆ. ನಂತರ ನೂತನ ಶಿಲಾಯುಗ ಕಬ್ಬಿಣಯುಗಗಳಲ್ಲಿ ಹೆಚ್ಚಾಗಿ ಶಾಕಾಹಾರಿ ಪ್ರಾಣಿಗಳ ರಚನೆ ಕಂಡುಬರುತ್ತದೆ[೩೬] ಎಂದು ಕೆಲವು ಉತ್ಖನನದ ವಸ್ತುಗಳಿಂದ, ವೈಜ್ಞಾನಿಕವಾದ ಕೆಲವು ರಾಸಾಯನಿಕ ಪರೀಕ್ಷೆಗಳಿಂದ ತಿಳಿಯಬಹುದು. ಒಂದೇ ನೆಲೆಯ ಮೇಲೆ ಎರಡು, ಮೂರು ಯುಗಗಳ ಪ್ರಭಾವವು ಕಂಡುಬರುತ್ತದೆ.

ಬಳ್ಳಾರಿ ಗುಡ್ಡ

ವಿಶ್ವದ ನಾಲ್ಕು ಅತ್ಯಂತ ಪುರಾತನ ಏಕಶಿಲಾ ಬೆಟ್ಟಗಳಲ್ಲಿ ಬಳ್ಳಾರಿ ನಗರದ ಮಧ್ಯದಲ್ಲಿರುವ 'ಏಕಶಿಲಾ ಬೆಟ್ಟ' ಒಂದಾಗಿದ್ದು, ಇದಕ್ಕೆ ತನ್ನದೇಯಾದ ಐತಿಹಾಸಿಕ ಪರಂಪರೆ ಇದೆ. ಇದರ ಸುತ್ತಳತೆ ಸುಮಾರು ಎರಡೂವರೆ ಕಿ.ಮೀ ಇದ್ದು, ಸಮುದ್ರ ಮಟ್ಟದಿಂದ ೧೪೬ ಮೀಟರ್‌ಗಳಷ್ಟು ಎತ್ತರವಿದೆ. ಇದು ಕೋಟ್ಯಂತರ ವರ್ಷಗಳಷ್ಟು ಹಳೆಯದಾಗಿದ್ದು, ಶಿಲಾಯುಗದ ಕಾಲದ ಜನರು ಬಳಸುತ್ತಿದ್ದ ಶಿಲಾಯುಗದ ಪಳೆಯುಳಿಕೆಗಳು ಕಂಡುಬಂದಿವೆ[೩೭] ಎಂದು ಈಗಾಗಲೇ ಸಂಶೋಧನೆಯಿಂದ ತಿಳಿದು ಬಂದಿದೆ. ಈ ನೆಲೆಯಲ್ಲಿ ಕೆಂಪು, ಬಿಳಿ ಮತ್ತು ಹಳದಿ ವರ್ಣಚಿತ್ರಗಳು ಕಂಡುಬಂದಿವೆ. ಉತ್ತರ ಮತ್ತು ಪೂರ್ವ ದಿಕ್ಕುಗಳ ಕಲ್ಲುಸರೆಯಲ್ಲಿ ಚಿತ್ರಗಳು ಕಂಡುಬರುತ್ತವೆ.

ಚಿತ್ರ – ೧

ಕೋಟೆಯ ಉತ್ತರದಿಕ್ಕಿನ ಬಲಭಾಗದ ಶಿಲಾಶ್ರಯದಲ್ಲಿ ಬಿಳಿವರ್ಣದ ಎತ್ತುಗಳು ಮನುಷ್ಯಾಕೃತಿ, ಜಿಂಕೆ, ಎಮ್ಮೆ, ಗೂಳಿ ಮತ್ತು ಹೊಂಡ ಚಿತ್ರಗಳು ಕಂಡುಬಂದಿದ್ದು, ಈ ಹೊಂಡಗಳು ಈಗಲೂ ಕೋಟೆಯಲ್ಲಿ ಮಳೆಬಂದರೆ ನೀರಿನಿಂದ ತುಂಬುತ್ತವೆ. ಈ ಹೊಂಡಗಳು ಚಿತ್ರಗಳಲ್ಲಿ ಅನುಕರಣೆರೂಪದಲ್ಲಿ ಕಾಣುತ್ತವೆ. ಒಟ್ಟಾರೆ ಇಡೀ ಗುಡ್ಡದ ಭೂ–ದೃಶ್ಯವನ್ನು ಚಿತ್ರಿಸಲು ಪ್ರಯತ್ನಿಸಿದ್ದಾರೆ. ಪ್ರಾಣಿ, ಪಕ್ಷಿ, ಮನುಷ್ಯಾಕೃತಿಗಳು, ಪರಿಸರದ ದೃಶ್ಯಾವಳಿಗಳಿಂದ ಮಾನವನ ಜೀವನ ಚರಿತ್ರೆಯನ್ನು ತಿಳಿದುಕೊಳ್ಳಬಹುದು. ಬಿಳಿ ಮತ್ತು ಕೆಂಪು ವರ್ಣಮಿಶ್ರಿತ ಚಿತ್ರಗಳನ್ನು ಸಂಯೋಜನೆಗೊಳಿಸಲಾಗಿದೆ.

---


೩೫. ಡಾ. ಎಚ್. ಈ. ಬಸವರಾಜಪ್ಪ : ಬಳ್ಳಾರಿ ಜಿಲ್ಲೆಯ ಚಿತ್ರಕಲೆ, ಪುಟ – ೧೫

೩೬. S K. Panday : Indian Rock Art, P.No. 201

೩೭. ನಿರ್ದೇಶಕರು : ಪುರಾತತ್ವ ಇಲಾಖೆ, ಬಳ್ಳಾರಿ ಕೋಟೆ ಪರಿಚಯ ಲೇಖನ.



ಬಳ್ಳಾರಿ ಗುಡ್ಡದ ಶಿಲಾಶ್ರಯದಲ್ಲಿರುವ ಚಿತ್ರಗಳು



ನೆಲೆ–೧

ಬಳ್ಳಾರಿ ಗುಡ್ಡದ ಪ್ರಾಗೈತಿಹಾಸಿಕ ಚಿತ್ರಗಳು



ನೆಲೆ–೨

ಸಂಗನಕಲ್ಲು ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳು



ನೆಲೆ–೨.೧



ನೆಲೆ–೨.೨

ಚಿತ್ರ – ೨

ಈ ನೆಲೆಯಲ್ಲಿ ಬಿಳಿವರ್ಣ ಚಿತ್ರಗಳು, ಹಳದಿ ವರ್ಣಚಿತ್ರಗಳು, ಬಿಳಿ–ಹಳದಿ ಮಿಶ್ರಿತ ಚಿತ್ರಗಳು ಕಂಡುಬರುತ್ತವೆ. ಕೋಟೆಯ ಪೂರ್ವದಲ್ಲಿ ಈ ವರ್ಣಚಿತ್ರಗಳು ಕಂಡುಬರುತ್ತವೆ. ಇಲ್ಲಿ ನವಿಲು, ನಾಯಿ, ಮಹಿಳೆಯರ ಮತ್ತು ಪುರುಷರ ಚಿತ್ರಗಳು ಕಂಡುಬರುತ್ತವೆ. ಇವು ವರ್ಣರೇಖಾ ಚಿತ್ರಗಳಾಗಿವೆ. ಇಲ್ಲಿ ಮಹಿಳೆಯರ ಚಿತ್ರವು ವಿಶಿಷ್ಟವಾಗಿದೆ. ಒಂದು ಮಹಿಳೆಯ ಚಿತ್ರವು ಹಳದಿ ರೇಖಾಚಿತ್ರದಿಂದ ಕೂಡಿದ್ದು, ಹಿಂದುಗಡೆ ಕೇಶವಿನ್ಯಾಸ, ಎರಡು ಕೈಗಳನ್ನು ಮೇಲಕ್ಕೆ ಎತ್ತಿ ಯಾವುದೋ ಬಂಧನಕ್ಕೆ ಒಳಗಾಗಿರುವಂತೆ ಗೋಚರಿಸುತ್ತದೆ. ಮತ್ತೊಂದು ಇದೇ ನೆಲೆಯ ಮಹಿಳೆಯ ಚಿತ್ರವು ಬಿಳಿವರ್ಣದಿಂದ ಕೂಡಿದೆ. ಇದು ನೆರಳು ಚಿತ್ರದಂತೆ ಕಂಡುಬರುತ್ತದೆ. ನರ್ತನೆಯಲ್ಲಿ ತೊಡಗಿರುವಂತೆ ಕಂಡುಬರುವ ಈ ಚಿತ್ರವು ರೇಖೆಯ ಲಾಲಿತ್ಯದಲ್ಲಿ ಮಹಿಳೆಯ ಸಂಪೂರ್ಣ ಲಕ್ಷಣವನ್ನು ಈ ಚಿತ್ರವು ಬಿಂಬಿಸುತ್ತದೆ.

ಈ ಚಿತ್ರದಲ್ಲಿ ಸೊಂಟದ ಭಾಗ ತೆಳುವಾಗಿ, ಭುಜದ ಭಾಗ ಮತ್ತು ಸೊಂಟದ ಕೆಳಭಾಗ ಅಗಲವಾಗಿ ಚಿತ್ರಿಸಿದ್ದಾನೆ. ಪಕ್ಕದಲ್ಲಿಯೇ ಪುರುಷನ ಚಿತ್ರವು ಕಂಡುಬರುತ್ತಿದ್ದು, ಅವನು ಯಾವುದೋ ಒಂದು ಚಟುವಟಿಕೆಯಲ್ಲಿ ತೊಡಗಿದಂತೆ ಕಂಡುಬರುತ್ತದೆ. ಇವು ಬಿಳಿವರ್ಣದಿಂದ ಕೂಡಿದ್ದಾಗಿವೆ. ಇಲ್ಲಿ ನವಿಲಿನ ಚಿತ್ರವು ಎರಡು ವರ್ಣದಿಂದ (ಬಿಳಿ ಮತ್ತು ಹಳದಿ) ಸಂಯೋಜಿತ ಚಿತ್ರಣವಾಗಿದೆ. ಈ ವರ್ಣ ಸಂಯೋಜನೆಯು ದ್ವಿತೀಯ ಮತ್ತು ತೃತೀಯ ವರ್ಗಗಳ ಪ್ರಾಯೋಗಿಕ ಪ್ರಾರಂಭಿಕ ಎಂತಲೇ ಹೇಳಬಹುದು. ಮತ್ತೊಂದು ನವಿಲಿಗೆ ಹಳದಿ ಮತ್ತು ನೀಲಿಯ ಲೇಪನ ಪ್ರಯೋಗವಾಗಿ ಈ ಎರಡು ಪ್ರಥಮ ವರ್ಗದ ಬಣ್ಣದ ಸಂಯೋಗದಿಂದ ದ್ವಿತೀಯ ವರ್ಗದ ಬಣ್ಣವಾದ 'ಹಸಿರು' ಬಂದಿರುವುದು ಈ ನೆಲೆಯ ಮತ್ತೊಂದು ವಿಶೇಷವಾಗಿದೆ. ಆಗಿನ ಕಾಲದಲ್ಲಿಯೇ ಸುಂದರವಾದ ಸಂಯೋಜನಯುಕ್ತ ವರ್ಣಪ್ರಯೋಗವನ್ನು ಈ ಪ್ರಾಗೈತಿಹಾಸಿಕ ಮಾನವ ಮಾಡಿದ್ದಾನೆ ಎಂದು ತಿಳಿದುಬರುತ್ತದೆ.

ಚಿತ್ರದ ನೆಲೆ – ೩

ಈ ನೆಲೆಯ ಚಿತ್ರವು ಪೂರ್ವಾಭಿಮುಖವಾಗಿದೆ. ಇಲ್ಲಿ ಕಲ್ಲಾಸರೆಯ ಕೆಳಭಾಗದಲ್ಲಿ ಚಿತ್ರವಿದೆ. ಈ ಚಿತ್ರವು ಸುಮಾರು ಒಂದರಿಂದ ಒಂದೂವರೆ ಮೀಟರ್ ಉದ್ದವಾಗಿದೆ. ಇದು ಕೆಂಪುವರ್ಣದ ರೇಖಾಚಿತ್ರವಾಗಿದೆ. ಇದರ ಮೈಯನ್ನು ಅದೇ ಬಣ್ಣದಿಂದ ಹಲವು ರೇಖೆಗಳಿಂದ ವಿನ್ಯಾಸಗೊಳಿಸಲಾಗಿದೆ. ಇದರ ಕೆಳಗೆ ಬಂಡೆಯ ಬದಿಯಲ್ಲಿ ಮನುಷ್ಯಾಕೃತಿಯಿದೆ. ಇದು ತಲೆಕೆಳಗಾಗಿದೆ. ಇದರ ಪಾದದಲ್ಲಿಯೇ ಬಿಲ್ಲು ಹಿಡಿದ ಮಾನವಾಕೃತಿಯಿದೆ. ಈ ರೇಖಾಚಿತ್ರಗಳು ಪ್ರಾಯೋಗಿಕ ರೇಖಾಚಿತ್ರಗಳಂತೆ ಕಂಡುಬರುತ್ತವೆ. ಮನುಷ್ಯಾಕಾರವನ್ನು ಅದೇ ಒಂದು ಯಥಾದರ್ಶನದಂತೆ (perspective) ಹೇಗಾದರೂ ಸಂಯೋಜನೆಗೊಳಿಸಬಲ್ಲ ಕಲಾವಿದ ಪ್ರಾಗೈತಿಹಾಸಿಕ ಮಾನವ ಆಗಿದ್ದ ಎನ್ನಬಹುದು.

ಸಂಗನಕಲ್ಲು ಮತ್ತು ಕಪ್ಪಗಲ್ಲು

ಬಳ್ಳಾರಿ ತಾಲೂಕಿನ ಈ ನೆಲೆಯ ಸಂಗನಕಲ್ಲು, ಕಪ್ಪಗಲ್ಲು ಈ ಹೆಸರೇ ಸೂಚಿಸುವಂತೆ ಕಲ್ಲಿನಿಂದ ಕೂಡಿದ ಪ್ರದೇಶವಾಗಿದೆ. ಕರ್ನಾಟಕದಲ್ಲಿಯೇ ಒಂದು ಸಾವಿರ ಎಕರೆಯಷ್ಟು ಆದಿಮನ ವಾಸ್ತವ್ಯದ ನೆಲೆಯಾಗಿತ್ತು ಎಂದು ಈಗಾಗಲೇ ವಿದ್ವಾಂಸರು ನಡೆಸಿದ ಸಂಶೋಧನೆಯ ಹಲವು ಪ್ರಯೋಗದಿಂದ ತಿಳಿದುಬಂದಿದೆ. ಇಲ್ಲಿ ಸಣ್ಣ ರಸಮ್ಮ ಬೆಟ್ಟ, ಸದಾಶಿವ ಬೆಟ್ಟ, ಚೌಡಮ್ಮಬೆಟ್ಟ ಹಾಗೂ ಹಿರೇಬೆಟ್ಟ ಎಂಬ ನಾಲ್ಕು ಬೆಟ್ಟಗಳಿದ್ದು, ಒಂದೊಂದು ಬೆಟ್ಟವು ವಿಶೇಷತೆಯಿಂದ ಕೂಡಿದೆ. ಇಲ್ಲಿ ಲಭ್ಯವಾಗಿರುವ ಕಲ್ಲುಗಳು ಉತ್ತಮ ಮಟ್ಟದ್ದಾಗಿದ್ದು, ಕಲ್ಲಿನ ಆಯುಧಗಳಿಗೆ ಬಹಳ ಯೋಗ್ಯ ರೀತಿಯಲ್ಲಿವೆ. ಮತ್ತು ಕಲ್ಲುಗಳಿಂದ ಹಲವಾರು ಸ್ಮಾರಕ ನಿರ್ಮಾಣ ಮಾಡುತ್ತಿದ್ದು, ಈ ಕಲ್ಲುಗಳಿಂದ ವಿಜಯ ವಿಠ್ಠಲ ದೇವಾಲಯದ ಸಂಗೀತದ ಕಂಬಗಳ ನಿರ್ಮಾಣವಾಗಿರುವುದು ಎನ್ನಲಾಗುತ್ತದೆ. ಈ ಕಲ್ಲನ್ನು ಪ್ರಾಯೋಗಿಕವಾಗಿ ಪರೀಕ್ಷೆ ಮಾಡಿದಾಗ ಅದೇ ನಾದಕೇಳಿ ಬರುತ್ತದೆ. ಈ ಪ್ರಾಗೈತಿಹಾಸಿಕ ಮಾನವನ ವಾಸ್ತವ್ಯದ ನೆಲೆ ಎನ್ನುವುದಕ್ಕೆ ಹಲವು ಅವಶೇಷಗಳು ಈಗಲೂ ಈ ನೆಲೆಯಲ್ಲಿ ಕಂಡುಬರುತ್ತವೆ. ಈ ಅವಶೇಷಗಳಾದ ಮೂಳೆ, ಕಲ್ಲಿನ ಆಯುಧ, ಮಡಿಕೆಗಳನ್ನು ವಿದ್ವಾಂಸರ ಅಧ್ಯಯನಕ್ಕಾಗಿ ಕೀಳದೆ ಅಲ್ಲಿಯೇ ಬಿಡಲಾಗಿದೆ.

ಈ ನೆಲೆಯಲ್ಲಿ ಕೆಂಪು ವರ್ಣಚಿತ್ರಗಳು, ಗೀರು/ಕುಟ್ಟಿದ ಚಿತ್ರಗಳು ಕಂಡುಬರುತ್ತವೆ. ಕೆಂಪು ವರ್ಣ ಚಿತ್ರಗಳು ಗೀರು/ಕುಟ್ಟಿದ ಚಿತ್ರಗಳಂತೆ ಹರಡಿರದೇ ಗುಂಪು ಗುಂಪಾಗಿ, ಒಂದು ಗುಂಪಿನಿಂದ ಮತ್ತೊಂದು ಗುಂಪಿಗೆ ಅಂತರ(distance)ದಲ್ಲಿ ಕಂಡುಬರುತ್ತವೆ. ಸಂಗನಕಲ್ಲು ನೆಲೆಯಲ್ಲಿ ಈ ಕೆಂಪು ವರ್ಣಚಿತ್ರಗಳು ಅಂತದಲ್ಲಿ ಮತ್ತು ಬೆಟ್ಟಗಳ ತುದಿಯ ಶಿಲಾಶ್ರಯದಲ್ಲಿ ಕಂಡುಬರುತ್ತವೆ. ಎತ್ತು, ಗೂಳಿ, ಮೀನು, ಮನುಷ್ಯಾಕೃತಿಗಳು, ನವಿಲು, ಹಸ್ತ, ಆನೆ ಮತ್ತು ಸವಾರಿ ಚಿತ್ರಗಳು ಕಂಡುಬರುತ್ತವೆ. ಇಲ್ಲಿ ವಿಶೇಷ ಚಿತ್ರಗಳನ್ನು ಮಾತ್ರ ಚರ್ಚಿಸಲಾಗಿದೆ. ಈ ಎಲ್ಲಾ ಚಿತ್ರಗಳ ಸಂಯೋಜನೆಯನ್ನು ಗುಂಡಿನ ಆಕಾರಕ್ಕೆ ಅನುಗುಣವಾಗಿ ಚಿತ್ರಿಸಲಾಗಿದೆ. ರೇಖೆಗಳಲ್ಲಿ ಸ್ಪಷ್ಟತೆ ಕಾಣಬಹುದು. ಕುಣಿತದ ಚಿತ್ರವನ್ನು ಉದ್ದನೆಯ ಬಂಡೆಗೆ ತಕ್ಕಂತೆ ಸಂಯೋಜನೆಗೊಳಿಸಲಾಗಿದೆ. ವರ್ಣರೇಖೆಗಳಿಗಿಂತ ಚಿತ್ರಗಳ ಸಂಯೋಜನೆಯ ಸ್ಥಳಾವಕಾಶದ ಪೂರ್ಣ ಪ್ರಮಾಣದ ಬಳಕೆ ಮತ್ತು ಸಮತೋಲನ ಆಗುವಂತೆ ಚಿತ್ರ ರಚಿಸಲಾಗಿದೆ. ಈ ನಯಗೊಳಿಸಿಕೊಳ್ಳುವ ಹಿಂದಿನ ತಂತ್ರವು ರೇಖೆಯನ್ನು ಸರಳವಾಗಿ ಎಳೆಯಲು (ಗೀರಲು) ಅನುಕೂಲದ ದೃಷ್ಟಿಕೋನವಾಗಿತ್ತು ಎಂದು ತಿಳಿದುಬರುತ್ತದೆ.

ಇಲ್ಲಿ ವಿಶೇಷವಾಗಿ ಎತ್ತಿನ ಕೋಡುಗಳ ರೇಖೆಯ ವೇಗವೇ ವಿಶೇಷವಾಗಿದೆ. ಈ ನೆಲೆ ಗೀರುಚಿತ್ರಗಳ ರೇಖೆಗಳ ತುಂಡು (break) ಆಗಿದೆ. ಕೋಡುಗಳನ್ನು ಮತ್ತು ಬಾಲಗಳನ್ನು ಬಿಟ್ಟರೆ, ಒಂದೇ ರೇಖೆ ಎಳೆತದಲ್ಲಿ ದೇಹ(ಮುಖ, ಬೆನ್ನು, ಹೊಟ್ಟೆ, ಕಾಲು)ವನ್ನು ರಚನೆ ಮಾಡಿದ್ದು, ಈ ರೇಖೆಗಳಿಂದ ತಿಳಿಯುವುದು. ಈ ನೆಲೆಯ ಮಾನವ ರೇಖಾಚಿತ್ರದಲ್ಲಿ

ಸಂಗನಕಲ್ಲು ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳು



ನೆಲೆ–೧




ನೆಲೆ–೨



ನೆಲೆ–೩


ಸಂಗನಕಲ್ಲು ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳು



ನೆಲೆ-೪



ನೆಲೆ-೫



ನೆಲೆ-೬

ತುಂಬಾ ಪ್ರವೀಣನಾಗಿದ್ದ ಕಲಾವಿದ ಎನ್ನಬಹುದು. ಇಲ್ಲಿ ಮುಖ್ಯವಾಗಿ ಎರಡು ರೇಖೆಗಳನ್ನು ಬಳಸಿಕೊಂಡಿದ್ದು, ಈ ರೇಖೆಗಳನ್ನು ಆಯತಾಕಾರದಲ್ಲಿ (ಕೆಳಗಿನ ಭಾಗಬಿಟ್ಟು) ಕೊರೆಯಲಾಗಿದ್ದು, ಮೇಲಿನ ರೇಖೆಗೆ ಬೆನ್ನು ಮತ್ತು ಮುಂಗಾಲು ಹಿಂಗಾಲುಗಳಿಗೆ ಸೇರಿಸಲಾಗಿದ್ದು, ಕೆಳಗಿನ ರೇಖೆಗೆ ಮುಂಗಾಲಿನ ಮತ್ತೊಂದು ಕಾಲು ಕೆಳಗಿನ ಹೊಟ್ಟೆಯ ಭಾಗ, ಹಿಂದಿನ ಕಾಲಿಗೆ ರೇಖೆ ಎಳೆದು ಸರಳತೆಯಲ್ಲಿ ಸಂಯೋಜನೆಯ ತಾಂತ್ರಿಕತೆ ಇಲ್ಲಿ ಕಾಣಬಹುದು.

ಮನುಷ್ಯನೊಂದಿಗೆ ನಾಯಿಯ ಚಿತ್ರ ಇರುವುದು ಮತ್ತೊಂದು ವಿಶೇಷವಾಗಿದೆ. ಇದರಿಂದ ಆಗಿನಿಂದಲೂ ನಾಯಿಯು ಮಾನವನ ಒಡನಾಡಿಯಾಗಿತ್ತು ಎಂದು ತಿಳಿದುಬರುತ್ತದೆ. ಈ ಚಿತ್ರದ ಹತ್ತಿರವೇ ಕೊಕ್ಕರೆಯ ಬಾಯಿಯಲ್ಲಿ ಮೀನು ಹಿಡಿದಂತೆ ನೈಜ ಸ್ವರೂಪದ ರೇಖಾಚಿತ್ರ ಕಂಡುಬರುತ್ತದೆ. ಯಾವ ನೆಲೆಯಲ್ಲಿಯೂ ಕಾಣದ ವರ್ಣಸಹಿತ ಮೀನಿನ ರೇಖಾಚಿತ್ರಗಳು ಇಲ್ಲಿ ಕಂಡುಬರುತ್ತವೆ. ಈ ಮೀನುಗಳನ್ನು ನೀರು ಇರುವ ಸಂಕೇತವಾಗಿ ಈ ಚಿತ್ರದಲ್ಲಿ ಬಳಸಿರಬಹುದು ಎನ್ನಲಾಗುತ್ತದೆ. ಮತ್ತು ಕೈ ಕೈಹಿಡಿದು ಕುಣಿಯುವಂತಹ ಚಿತ್ರಗಳನ್ನು ಸಾಲು ಸಾಲಾಗಿ ಚಿತ್ರ ರಚಿಸಲಾಗಿದೆ.

ಈ ಚಿತ್ರಗಳು ನಿಲುಕದ ಪ್ರದೇಶವಾಗಿದ್ದು, ದೂರದಿಂದ ರಂಗೋಲಿಯಂತೆ ಕಂಗೊಳಿಸುತ್ತವೆ. ಮತ್ತು ಕೈಗಳ ಜೋಡಣೆಯಲ್ಲಿ 'V' ಆಕಾರದಲ್ಲಿ ಗುರುತಿಸಲಾಗಿದೆ. ಆನೆಯ ಚಿತ್ರಗಳು ಸುರಂಗಮಾರ್ಗದ ಸಂಕೇತವಾಗಿ ಕಂಡುಬರುತ್ತವೆ. ಸ್ಮಾರಕಗಳ ದ್ವಾರಗಳ ಮುಂದೆ ಆನೆಯ ಚಿತ್ರವಿದ್ದಂತೆ ಈ ನೆಲೆಯಲ್ಲಿ ಆನೆಯ ಚಿತ್ರಗಳು ಕಂಡುಬರುತ್ತವೆ. ಈ ಚಿತ್ರಗಳು ಬೇರೆ ನೆಲೆಗಿಂತ ವಿಶೇಷ ಚಿತ್ರಗಳಾಗಿವೆ. ಈ ಚಿತ್ರಗಳಲ್ಲದೇ ಗೂಳಿ, ನವಿಲು, ಎತ್ತುಗಳು ಮುಂತಾದ ಚಿತ್ರಗಳು ಸಾಮಾನ್ಯವಾಗಿ ಇತರೆ ನೆಲೆಯಂತೆ ಕಂಡುಬರುತ್ತವೆ.

ರಾಜಪುರ

ಸಂಡೂರು ತಾಲೂಕಿನಲ್ಲಿ ಬರುವ ಉಬ್ಬಲಗಂಡಿ ರಾಜಪುರ ಎಂದೇ ಕರೆಸಿಕೊಳ್ಳುವ ಈ ಪ್ರದೇಶದಲ್ಲಿ ನೂತನ ಶಿಲಾಯುಗದ ಸಂಸ್ಕೃತಿಯ ನೆಲೆ ಬೆಳಕಿಗೆ ಬಂದಿದೆ. ಇಲ್ಲಿಯೂ ಸಹಿತ ಉಜ್ಜಿ ನಯಗೊಳಿಸಿದ ಕೊಡಲಿಯ ಬಂಡೆ ಚಿತ್ರಗಳು ಸಂಶೋಧನೆಯಿಂದ ಬೆಳಕಿಗೆ ಬಂದಿವೆ. ಈ ನೆಲೆಯಲ್ಲಿ ವಿಶೇಷ ಚಿತ್ರಗಳಾದ ಮಾನವಾಕೃತಿಗಳ ಚಿತ್ರಣವಿದೆ. ಒಂದು ಗಂಡು ಮತ್ತೊಂದು ಹೆಣ್ಣಿನ ಚಿತ್ರಗಳು ಕಂಡುಬರುತ್ತವೆ. ದಪ್ಪದೇಹಾಕೃತಿಯ ಪುರುಷಚಿತ್ರವಿರುವುದು ಇಲ್ಲಿಯೂ ವಿಶೇಷವಾಗಿದೆ. ಸಾಮಾನ್ಯವಾಗಿ ಆದಿ ಮಾನವ ದೈಹಿಕವಾಗಿ ಎತ್ತರವಾಗಿದ್ದು ಸದೃಢ ಕಟ್ಟುಮಸ್ತಿನ ದೇಹ ಸಹಜವಾಗಿದೆ.

ಈ ಚಿತ್ರದ ಹಿಂದಿನ ಭಿತ್ತಿಯನ್ನು ಸ್ವಲ್ಪ ಮಟ್ಟಿಗೆ ನಯಗೊಳಿಸಿ ನಂತರ ಉಜ್ಜಿ ಚಿತ್ರ ಮಾಡಿರುವುದನ್ನು ಛಾಯಾಚಿತ್ರದಲ್ಲಿ ಗಮನಿಸಬಹುದಾಗಿದೆ. ಇಲ್ಲಿ ಕಲ್ಲಿನ ಮಧ್ಯಭಾಗದಲ್ಲಿ

ರಾಜಾಪುರದ ಪ್ರಾಗೈತಿಹಾಸಿಕ ಚಿತ್ರಗಳು



ನೆಲೆ-೧. ರಾಜಾಪುರ



ನೆಲೆ-೨. ರಾಜಾಪುರ

ಚಿತ್ರರಚನೆ ಮಾಡಿ ಚಿತ್ರವನ್ನು ಕೊನೆಯಲ್ಲಿ ಮಾಡಿದರೆ ಹಾಳಾಗದೆಂದು ಅವನಿಗೆ ಅನಿಸಿರಬೇಕು. ಆದ್ದರಿಂದ ಚಿತ್ರವನ್ನು ಬಂಡೆಯ ಮಧ್ಯಭಾಗದಲ್ಲಿ ರಚನೆ ಮಾಡಿದ್ದಾರೆ. ಸುಂದರವಾದ ಸಂಯೋಜನೆಯಾಗಿದೆ. ಇವುಗಳಲ್ಲದೆಯೇ ಹಲವು ಕೆಂಪು ವರ್ಣದ ಕುದುರೆ, ಗೂಳಿ, ಕೊಡ ಹೊತ್ತಿರುವ ಮಹಿಳೆ ಚಿತ್ರಗಳನ್ನು ನೈಜವಾಗಿ ಕಲಾವಿದನು ಚಿತ್ರಿಸಿದ್ದಾನೆ.

ಮಿಂಚೇರಿ


ಬಳ್ಳಾರಿಯಿಂದ ಸುಮಾರು ೧೫ ಕಿ.ಮೀ ದೂರದಲ್ಲಿರುವ ಮಿಂಚೇರಿಯ ಕರೆಕಲ್ಲುಗುಡ್ಡ ಎಂದು ಕರೆಸಿಕೊಳ್ಳುವ ಈ ನೆಲೆಯಲ್ಲಿ ಕುಟ್ಟಿದ/ಕೊರೆದ ರೇಖಾಚಿತ್ರಗಳು ಕಂಡುಬರುತ್ತವೆ. ಈ ನೆಲೆಯನ್ನು ಕುರಿತು ಇದುವರೆಗೆ ಯಾವುದೇ ಅಧ್ಯಯನಗಳು ನಡೆದದ್ದು ಕಂಡುಬರುವುದಿಲ್ಲ. ಈ ನೆಲೆಯಲ್ಲಿ ವಿಶೇಷವಾದ ರೇಖಾಚಿತ್ರಗಳು ಕಂಡುಬರುತ್ತವೆ.

ಈ ನೆಲೆಯಲ್ಲಿ ನಿಲುದೊಡ್ಡ ಬಂಡೆಯನ್ನು ಚಿತ್ರಕ್ಕಾಗಿ ಆಯ್ದುಕೊಳ್ಳಲಾಗಿದೆ. ಈ ಬಂಡೆಗೆ ಮೂರು ಚಿತ್ರಗಳನ್ನು ಸಂಯೋಜನೆ (compose) ಮಾಡಲಾಗಿದೆ. ಈ ಬಂಡೆಯ ಚಿತ್ರದ ವಿಶೇಷವೇನೆಂದರೆ ಎತ್ತಿನ ಚಿತ್ರದ ಕೆಳಗೆ ಮಾನವನ ಚಿತ್ರ ಮತ್ತು ಮಾನವನ ಚಿತ್ರದ ಕೆಳಗೆ ಸಾರಂಗದಂಥ ಚಿತ್ರ ಕಂಡುಬರುತ್ತದೆ. ಮಧ್ಯದ ಮನುಷ್ಯನ ಒಂದು ಕೈಯನ್ನು ಮೇಲಕ್ಕೆ, ಮತ್ತೊಂದು ಕೈಯನ್ನು ಕೆಳಕ್ಕೆ ತೋರಿಸಲಾಗಿದೆ. ಎರಡು ಪ್ರಾಣಿಗಳ ಬೇಟೆಯ ಗುರಿ ಇರುವಂತೆ ಚಿತ್ರಿಸಲಾಗಿದೆ. ಒಂದಕ್ಕೊಂದು ಸಂಬಂಧ ಸೂಚಕವಾಗಿ ಒಟ್ಟಾರೆಯಾಗಿ ಒಂದು ಚಿತ್ರಕಲಾಕೃತಿಯಂತೆ ಈ ಬಂಡೆ ಕಂಡುಬರುತ್ತವೆ.

ಮತ್ತೊಂದು ಕಲ್ಲಾಸರೆಯಲ್ಲಿ ಆಕಳು ಮತ್ತು ಕರುವಿನ ಚಿತ್ರವಿದೆ. ಈ ತರಹದ ಚಿತ್ರಗಳು ಎಲ್ಲಿಯೂ ಕಾಣಬರುವುದಿಲ್ಲ. ಕೆಲವು ರೇಖೆಗಳಲ್ಲಿ ಚಿತ್ರ ಪರಿಪೂರ್ಣಗೊಳಿಸಿದ್ದಾರೆ. ಮತ್ತೊಂದು ವಿಚಿತ್ರವಾದ ಪ್ರಾಣಿ ಈ ನೆಲೆಯಲ್ಲಿ ಕಂಡುಬರುತ್ತದೆ. ಅದು ಸುಮಾರು ಆರು ಅಡಿಗಳಷ್ಟು ಉದ್ದವಾಗಿದೆ. ಯಾವ ಪ್ರಾಣಿಯಿರಬಹುದು ಎಂದು ಯೋಚಿಸಿದಾಗ ಇದು 'ಕತ್ತೆಗರಕ' ಪ್ರಾಣಿ ಎಂದು ತಿಳಿದುಬಂದಿತು. ಈ ನೆಲೆಯ ಊರಿನ ನಿವಾಸಿಗಳು ಕೂಡ ಈ ಚಿತ್ರದ ಬಗ್ಗೆ ಹಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಇವನ್ನು ನಾವು ಚಿಕ್ಕವರಿಂದಲೇ ನೋಡುತ್ತಿದ್ದೀವಿ, ತುಂಬಾ ಹಳೆಯದು ಎಂದು ಹೇಳುತ್ತಾರೆ. ತುಂಬಾ ಸ್ಪಷ್ಟವಾದ ಈ ತರಹದ ಚಿತ್ರಗಳನ್ನು ಇನ್ನೂ ಯಾವ ನೆಲೆಯಲ್ಲಿಯೂ ಕಾಣುವುದಿಲ್ಲ. ಆದರೂ ಕಲಾವಿದನು ಎರಡು ರೇಖೆಯಲ್ಲಿ ಈ ಚಿತ್ರವನ್ನು ಸಂಪೂರ್ಣಗೊಳಿಸಿದ್ದಾನೆ.

ಮತ್ತೊಂದು ಈ ನೆಲೆಯಲ್ಲಿ ಕಂಡುಬಂದಿದ್ದು, ಕಾದಾಡುವ ದೃಶ್ಯವಾಗಿದೆ. ಕುದುರೆ ಲಕ್ಷಣವುಳ್ಳ ಎರಡು ಪ್ರಾಣಿಗಳ ಮೇಲೆ ಇಬ್ಬರು ಸವಾರರು ಇದ್ದು, ಇವರ ಕೈಯಲ್ಲಿ ಉದ್ದನೆಯ ಯಾವುದೋ ಆಯುಧ ಹಿಡಿದುಕೊಂಡಿದ್ದು, ಕಾದಾಟದಲ್ಲಿ ತೊಡಗಿದ್ದಾರೆ ಎಂದು ತಿಳಿದುಬರುತ್ತದೆ.

ಮಿಂಚೇರಿ ಪ್ರಾಗೈತಿಹಾಸಿಕ ಚಿತ್ರಗಳು



ನೆಲೆ–೧



ನೆಲೆ–೨

ಇಂತಹ ಚಿತ್ರಗಳು ಸರ್ವಸಾಮಾನ್ಯವಾಗಿ ಎಲ್ಲಾ ನೆಲೆಯಲ್ಲಿ ಕಂಡುಬಂದರೂ ಈ ನೆಲೆಯಲ್ಲಿ ಸ್ಪಷ್ಟರೂಪದಲ್ಲಿ ಕಂಡುಬರುತ್ತವೆ. ಇವುಗಳಲ್ಲದೇ ನವಿಲು, ಎತ್ತು, ಗೂಳಿ ಮುಂತಾದ ಚಿತ್ರಗಳು ಕಂಡುಬರುತ್ತವೆ.

ಸಂಚರಾಯನ ಕೋಟೆ

ಈ ಬಳ್ಳಾರಿಯಿಂದ ೨೧ ಕಿ.ಮೀ. ದೂರದಲ್ಲಿರುವ ಈ ಪ್ರದೇಶದಲ್ಲಿ ಹಲವು ಕುಟ್ಟಿದ/ಕೊರೆದ ಚಿತ್ರಗಳು ಕಂಡುಬರುತ್ತವೆ. ಅ. ಸುಂದರರವರು ಈ ಪ್ರದೇಶದಲ್ಲಿ ಚಿತ್ರಗಳು ಇರುವುದಾಗಿ ಶಂಕೆ ವ್ಯಕ್ತಪಡಿಸಿದ್ದಾರೆ. ಈ ಕ್ಷೇತ್ರಕ್ಕೆ ಭೇಟಿ ನೀಡಿದಾಗ ಹಲವು ಕುಟ್ಟು/ಗೀರು ಚಿತ್ರಗಳು ಕಂಡುಬಂದವು. ಇಲ್ಲಿಯೂ ಹಲವು ರೇಖಾಚಿತ್ರಗಳಿದ್ದು, ಕುದುರೆ, ಒಂಟೆ, ಎತ್ತು, ಗೂಳಿ, ಮನುಷ್ಯ, ನಾಯಿ, ಹುಲಿ ಚಿತ್ರಗಳು ಕಂಡುಬರುತ್ತವೆ. ಆದಿಮನು ಈ ಚಿತ್ರಗಳನ್ನು ಆಳಕ್ಕೆ ಕುಟ್ಟಿ/ಕೊರೆದು ಚಿತ್ರಿಸಿದ್ದಾನೆ.

ಈ ಚಿತ್ರಗಳು ದೂರದಿಂದಲೇ ಗೋಚರಿಸುತ್ತವೆ. ಅಷ್ಟು ಆಳಕ್ಕೆ ಕುಟ್ಟಿ/ಕೊರೆಯಲಾಗಿದೆ ಎನ್ನುವುದು ಇದರ ಅರ್ಥ. ಬೇರೆ (ಬಳ್ಳಾರಿ) ಎಲ್ಲಾ ನೆಲೆಗಿಂತಲೂ ಬೇರೆಯ ಆದ ಚಿತ್ರಗಳಾಗಿ ಇಲ್ಲಿ ಕಂಡುಬರುತ್ತವೆ. ರೇಖೆಗಳಲ್ಲಿ ತುಂಬಾ ವಿನ್ಯಾಸಾತ್ಮಕವಾಗಿ ಚಿತ್ರಗಳನ್ನು ರಚಿಸಿದ್ದಾರೆ. ರೇಖಾಚಿತ್ರಗಳಲ್ಲಿ ಕೊರೆದು ರಚಿಸುವ ಚಿತ್ರಕ್ಕಿಂತಲೂ ಕುಟ್ಟಿ ಚಿತ್ರವನ್ನು ರಚಿಸುವುದು ಕಲಾವಿದನ ವ್ಯವಧಾನವೇ ಸರಿ. ಮತ್ತು ಗೀರುಚಿತ್ರಗಳನ್ನು ಈ ನೆಲೆಯಲ್ಲಿ ಹೆಚ್ಚು ಆಳಕ್ಕೆ ಚಿತ್ರಿಸಲಾಗಿದೆ. ಇಂತಹ ಗಟ್ಟಿಯಾದ ಕಲ್ಲಿಗೆ ಕೊರೆದು/ಕುಟ್ಟಿ ಚಿತ್ರಿಸುವುದು ಸುಲಭದ ಕೆಲಸವಲ್ಲ, ಇಲ್ಲಿಯೂ ಕೆಲವು ಚಿತ್ರಗಳನ್ನು ಆಯ್ದು ಚರ್ಚಿಸಲಾಗಿದೆ.

ಈ ನೆಲೆಯ ಹುಲಿಯ ಚಿತ್ರವೊಂದಕ್ಕೆ ಕಣ್ಣು, ಮೂಗು, ಕಿವಿ, ಬಾಲ, ಬಾಯಿ ಮತ್ತು ಮೈ ಮೇಲಿನ ಪಟ್ಟಿಗಳೊಂದಿಗೆ ಸ್ಪಷ್ಟರೂಪ ನೀಡಲು ಕಲಾವಿದ ಹೆಣಗಾಡಿದ್ದಾನೆ. ಮತ್ತು ಯಶಸ್ವಿ ಕೂಡ ಆಗಿದ್ದಾನೆ ಎನಿಸುತ್ತದೆ. ಈ ಚಿತ್ರವು ಸುಮಾರು ೧ ಮೀಟರ್ ಉದ್ದದ ಚಿತ್ರವಾಗಿದೆ. ಕುದುರೆಯಂತಹ ಚಿತ್ರಗಳು ಮತ್ತು ಕುತ್ತಿಗೆ ಉದ್ದವಿರುವ ಸಾರಂಗದಂತಹ ಚಿತ್ರಗಳು ಕೂಡ ಇಲ್ಲಿ ಕಂಡುಬರುತ್ತವೆ.

ಕುದುರೆಯ ಮೇಲೆ ಸವಾರಿ ಮಾಡುವ ಕುಟ್ಟು ಚಿತ್ರ ರಚಿಸಲಾಗಿದೆ. ಈ ಕುದುರೆಗೆ ನಾಳವನ್ನು ಹಿಡಿದ ಸವಾರನು ಮತ್ತು ಕುದುರೆಯ ತಲೆ ಭಾಗವನ್ನು ಕೂದಲಿನ ಸಂಕೇತವಾಗಿ ವಿನ್ಯಾಸಾತ್ಮಕವಾಗಿ ಕುಟ್ಟುವುದರ ಮೂಲಕ ತೋರಿಸಲಾಗಿದೆ. ಮತ್ತೊಂದು ಕಲ್ಲಾಸರೆಯಲ್ಲಿ ಇಬ್ಬರ ಮಾನವರ ಚಿತ್ರಗಳನ್ನು ಚಿತ್ರಿಸಲಾಗಿದೆ. ಈಟಿಯ ತರಹದ ಸಾಧನವನ್ನು ಹಿಡಿದುಕೊಂಡಿದ್ದಾರೆ. ಒಂದೊಂದು ಸಾಧನಕ್ಕೆ ಚಿತ್ರಗಳಿದ್ದು, ಒಂದು ಸಾಧನಕ್ಕೆ ನವಿಲು, ಮತ್ತೊಂದು ಮಾನವನ ಕೈಯ ಸಾಧನಕ್ಕೆ ಬೆಕ್ಕು ಆಕಾರದ ಚಿತ್ರ ಕಂಡುಬರುತ್ತವೆ.

ಸಂಚರಾಯನ ಕೋಟೆಯ ಪ್ರಾಗೈತಿಹಾಸಿಕ ಚಿತ್ರಗಳು



ನೆಲೆ–೧



ನೆಲೆ–೨

ಈ ಮಾನವರ ಕೈ-ಕಾಲು, ಕಣ್ಣು, ಬಾಯಿ, ತಲೆ, ಪಾದ, ಒಟ್ಟಾರೆ ಮನುಷ್ಯನ ಚಿತ್ರದ ಅನುಕರಣೆ ಸ್ಪಷ್ಟವಾಗಿ ಇದ್ದು, ಇದು ಬಾಹ್ಯ ಹೊರೆ ರೇಖೆಯಿಂದ ಕೂಡಿದ ಚಿತ್ರವಿನ್ಯಾಸವಾಗಿದೆ. ಮುಖವು ವಾನರ(ಮಂಗ)ನಂತೆ ಕಂಡುಬರುತ್ತದೆ. ಇವರಿಗೆ ಬೇಟೆ ಸಿಕ್ಕ ಸಂಭ್ರಮದಲ್ಲಿ ಕೈ ಕೈ ಹಿಡಿದು ಕುಣಿಯುತ್ತಿರುವಂತೆ ತೋರುತ್ತದೆ. ಇತರ ನೆಲೆಯ ಮಾನವನ ಚಿತ್ರಕ್ಕಿಂತಲೂ ಭಿನ್ನವಾದ ಕುಣಿತದ ಚಿತ್ರ ಎನ್ನುವುದಕ್ಕೆ ಮಾನವನ ಲಕ್ಷಣಕ್ಕೆ ತುಂಬಾ ಹತ್ತಿರವಾದದ್ದು, ರೇಖೆಯಲ್ಲಿ ತುಂಬಾ ಸುಧಾರಿತ ರೇಖಾಚಿತ್ರವಾಗಿದೆ. ಮತ್ತೊಂದು ಕಲ್ಲಾಸರೆಯಲ್ಲಿ ನಾಯಿಯ ಚಿತ್ರವು ಸ್ಪಷ್ಟರೂಪದ್ದಾಗಿದೆ. ರೇಖೆಗಳಿಂದ ಕಲಾವಿದ ಸ್ಪಷ್ಟ ಭಾವಮುದ್ರೆಯನ್ನು ಈ ಚಿತ್ರದಲ್ಲಿ ಬಿಂಬಿಸಿದ್ದಾನೆ ಎನ್ನಬಹುದು. ಈ ನಾಯಿಯ ಕೊರಳಿಗೆ ಬೆಲ್ಟ್ ತರಹದ ವಸ್ತುವನ್ನು ರಚನೆಯಲ್ಲಿ ತೋರಿಸಿದ್ದಾನೆ. ಚಿತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇಂತಹ ವಿನ್ಯಾಸದಿಂದ ಕಲಾಪ್ರಜ್ಞೆಯ ಇತಿಹಾಸ ಪ್ರಾರಂಭಿಕ ಹಂತದ ಚಿತ್ರಗಳು ಎಂದು ಅನಿಸುತ್ತದೆ. ಹೀಗೆ ಇಲ್ಲಿನ ಚಿತ್ರಗಳು ಸ್ಪಷ್ಟರೂಪ ಧರಿಸುತ್ತಾ ಸಾಗಿದ ಕಲಾಕೃತಿಗಳು ಈ ನೆಲೆಯಲ್ಲಿ ಕಂಡುಬರುತ್ತವೆ.

ಕಾರಿಗನೂರು ಮತ್ತು ಗಾದಿಗನೂರು

ಕಾರಿಗನೂರು ಮತ್ತು ಗಾದಿಗನೂರು (ಹೊಸಪೇಟೆ ತಾ.) ಈ ನೆಲೆಯಲ್ಲಿಯೂ ಹಲವು ಚಿತ್ರಗಳು ಕಂಡುಬಂದಿದ್ದು, ಕಾರಿಗನೂರು ಮತ್ತು ಗಾದಿಗನೂರು ನೆಲೆಗಳು ಸೂಕ್ಷ್ಮ ಶಿಲಾಯುಗಕ್ಕೆ ಸೇರಿದವು ಎಂದು ಈಗಾಗಲೇ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಈ ನೆಲೆಯಲ್ಲಿಯೂ ಹಲವು ರೇಖಾಚಿತ್ರಗಳು ಕಂಡುಬರುತ್ತವೆ. ಮನುಷ್ಯಾಕೃತಿಗಳು, ಎತ್ತಿನ ಆಕೃತಿಗಳು, ಹುಲಿಯ ಚಿತ್ರಗಳು, ಎತ್ತು, ಗೂಳಿಯ ಚಿತ್ರಗಳು ಈ ನೆಲೆಯಲ್ಲಿ ಕಂಡುಬರುತ್ತವೆ.

ಈ ನೆಲೆಯಲ್ಲಿನ ಚಿತ್ರಗಳು ರೇಖಾಪ್ರಧಾನವಾದ ಕುಟ್ಟು ಮತ್ತು ಕೊರೆದ ಚಿತ್ರಗಳಾಗಿವೆ. ಇಲ್ಲಿಯೂ ಹಲವು ವಿಶೇಷವಾದ ಚಿತ್ರಗಳು ಕಂಡುಬರುತ್ತವೆ. ಅಂಸುಬಂಡೆಗೆ ೭ ಅಡಿಯ ಮನುಷ್ಯಾಕೃತಿಯ ದೊಡ್ಡ ಪ್ರಮಾಣದ ಗೀರುಚಿತ್ರವಾಗಿದೆ. ಮಾನವನನ್ನು ಮಲಗಿಸಿ ಅವನ ಸುತ್ತಲು ಹೊರ ರೇಖೆಯನ್ನು ಹಾಕಿರುವಂತೆ ಕಂಡುಬರುತ್ತದೆ. ಇಂತಹ ದೊಡ್ಡಗಾತ್ರದ ಮನುಷ್ಯಾಕೃತಿಯು ಯಾವ ನೆಲೆಯಲ್ಲಿಯೂ ಕಂಡುಬರುವುದಿಲ್ಲ ಮತ್ತು ಎತ್ತಿನ ಗಾಂಭೀರ್ಯದ ಸೌಂದರ್ಯವನ್ನು ನೈಜ ಸ್ವರೂಪದಲ್ಲಿ ಸೆರೆಹಿಡಿದಿದ್ದಾನೆ. ಈ ನೆಲೆಯಲ್ಲಿ ಎತ್ತಿನ ಚಿತ್ರ, ಗೂಳಿ ಚಿತ್ರಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ.

ಎತ್ತಿನಬೂದಿಹಾಳ್

ಎತ್ತಿನಬೂದಿಹಾಳ್ (ಬಳ್ಳಾರಿ ತಾ) ಈ ನೆಲೆಯಲ್ಲಿ ೬೦ ರೇಖಾಪ್ರಧಾನ ಗೀರು ಚಿತ್ರಗಳು ಕಂಡುಬರುತ್ತವೆ. ಅವುಗಳಲ್ಲಿ ಜಿಂಕೆಯ ಚಿತ್ರ, ಸಾರಂಗದ ಮರಿ, ಎತ್ತಿನ ಚಿತ್ರಗಳು, ಮನುಷ್ಯನ ಚಿತ್ರ ಕಂಡುಬರುವ ಚಿತ್ರಗಳಾಗಿವೆ. ಇಲ್ಲಿ ಜಿಂಕೆಯ ಚಿತ್ರವು ತುಂಬಾ ವಿಶೇಷವಾಗಿದೆ. ಜಿಂಕೆಯ

ಕಾರಿಗನೂರ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳು



ನೆಲೆ–೧



ನೆಲೆ–೨




ನೆಲೆ–೩

ಕಾರಿಗನೂರ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳು



ನೆಲೆ-೪



ನೆಲೆ-೫



ನೆಲೆ-೬

ಕಾರಿಗನೂರ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳು



ನೆಲೆ–೭



ನೆಲೆ–೮

ಕಾರಿಗನೂರ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳು



ನೆಲೆ-೯



ನೆಲೆ-೧೦


ಎತ್ತಿನ ಬೂದಿಹಾಳ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳು



ನೆಲೆ–೧



ನೆಲೆ–೨



ನೆಲೆ–೩

ಎತ್ತಿನ ಬೂದಿಹಾಳ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳು



ನೆಲೆ–೪



ನೆಲೆ–೫

ಮೈಮೇಲೆ ಬೊಟ್ಟುಗಳನ್ನು ಸಹ ಕಾಣಬಹುದು. ಈ ಒಂದು ಚಿತ್ರವು ಕಲ್ಲಾಸರೆಯಲ್ಲಿ ಇರುವುದರಿಂದ ಬಿಳಿಬಣ್ಣದ ಬೊಟ್ಟುಗಳು ಮಾಸದ ಹಾಗೆಯೇ ಉಳಿದುಕೊಂಡು ಬಂದಿವೆ. ಈ ಚಿತ್ರದ ಹಿಂದಣ ಬಂಡೆಯು ನಯವಾಗಿ ಇರುವುದರಿಂದ ಈ ಚಿತ್ರಕ್ಕೆ ತಕ್ಕಂತೆ ಆಯ್ದು ನೈಜ ಸ್ವರೂಪದಲ್ಲಿ ಚಿತ್ರಿಸುವ ಪ್ರಯತ್ನದಲ್ಲಿ ಯಶಸ್ಸು ಸಾಧಿಸಿದ್ದಾರೆ.

ಮೆಟ್ರಿ

ಕಂಪ್ಲಿ ಬಳ್ಳಾರಿ ಮಾರ್ಗವಾಗಿ ಕಂಪ್ಲಿಯಿಂದ ಸುಮಾರು ೧೦ ಕಿ.ಮೀ. ದೂರದಲ್ಲಿ ಬರುವ ರಸ್ತೆಯ ಬಲಭಾಗದ ಗುಡ್ಡ ಒಂದರಲ್ಲಿ ಗೀರಿದ ೨೦ ರೇಖಾ ಚಿತ್ರಗಳು ಕಂಡುಬರುತ್ತವೆ. ಗೂಳಿ, ಎತ್ತು, ಮನುಷ್ಯರ ಮತ್ತು ಮನುಷ್ಯಪಾದದ ಚಿತ್ರಗಳು ಇಲ್ಲಿ ಕಂಡುಬರುತ್ತವೆ.

ಹಂಪೆ

ಈ ನೆಲೆಯಲ್ಲಿ ಕೆಂಪು ವರ್ಣದ ಮತ್ತು ಕಂದು ಕೆಂಪು ವರ್ಣದ ಚಿತ್ರಗಳು ಕಂಡುಬರುತ್ತವೆ. ಮಾನವ, ಎತ್ತು, ಗೂಳಿ ಮತ್ತು ಆಯತಾಕಾರದ ಚಿತ್ರಗಳು ಕಂಡುಬರುತ್ತವೆ. ವಿರೂಪಾಕ್ಷ ದೇವರ ಗುಡಿಯ ಹಿಂದುಗಡೆ ಮಾನವರ ಮತ್ತು ಗೂಳಿಚಿತ್ರಗಳನ್ನು ಸಂಯೋಜನೆಗೊಳಿಸಲಾಗಿದೆ. ದೂರದಿಂದ ರಕ್ತದ ಕಳೆಯಂತೆ ಕಂಡುಬರುತ್ತವೆ. ಮತ್ತು ವಿಠ್ಠಲ ಸ್ವಾಮಿ ದೇವಾಲಯದ ಬಳಿ ಮೊಸಳಯ್ಯನ ಗುಡ್ಡದ ಆಕಾರಗಳು ಕಂಡುಬರುತ್ತವೆ. ಸುಗ್ರೀವ ಗುಹೆಯ ಬಳಿಯಿರುವ ಚಿತ್ರ ಒಂದರಲ್ಲಿ ಮನುಷ್ಯನೊಬ್ಬ ಎರಡು ಕೈಗಳನ್ನು ಮೇಲಕ್ಕೆತ್ತಿ ಮಾಂತ್ರಿಕ ಕ್ರಿಯೆಯಲ್ಲಿ ತೊಡಗಿದಂತಿದೆ. ಆತನ ಮುಖದಲ್ಲಿ ರೇಖಾವಿನ್ಯಾಸದಿಂದ ಸಂಯೋಜನೆಯನ್ನು ಮಾಡಿದೆ.

ಮೊಸಳಯ್ಯನ ಗುಡ್ಡದ ಮತ್ತೊಂದು ಕಲ್ಲಾಸರೆಯಲ್ಲಿ ಹುಲಿ ಮೈ ಮೇಲಿನ ರೇಖಾವಿನ್ಯಾಸದಂತೆ ಚಿಹ್ನೆಗಳು ಕಂಡುಬರುತ್ತವೆ. ಮತ್ತು ಮಾನವರು ತಮ್ಮ ಎರಡು ಕೈಗಳನ್ನು ಮೇಲೆಕ್ಕೆತ್ತಿದ್ದಾರೆ. ಇದರಿಂದ ಯಾವುದೋ ಒಂದು ಚಟುವಟಿಕೆಯಲ್ಲಿ ತೊಡಗಿದ್ದಾರೆ ಎಂದು ತಿಳಿಯುತ್ತದೆ. ಎಡಭಾಗದಲ್ಲಿ ಕೆಲವು ರೇಖಾಚಿತ್ರಗಳು ಮಾಸಿ ಅಸ್ಪಷ್ಟವಾಗಿವೆ. ಇವು ನಸುಕೆಂಪು ವರ್ಣರೇಖಾಚಿತ್ರಗಳಾಗಿವೆ. ಬೃಂದಾವನ ರಸ್ತೆಯಲ್ಲಿ ಎತ್ತು, ಗೂಳಿ, ಮನುಷ್ಯಾಕೃತಿಗಳು ಕಂಡುಬರುತ್ತವೆ. ಮಾನವರು ಕೈ ಕೈ ಹಿಡಿದುಕೊಂಡು ಕುಣಿತದಲ್ಲಿ ತೊಡಗಿದಂತೆ ಕಾಣುತ್ತಾರೆ. ಈ ಚಿತ್ರದ ಕೆಳಭಾಗದಲ್ಲಿ ಸೇತುವೆ ಮೇಲೆ ಮನುಷ್ಯಾಕೃತಿಗಳು ಕಂಡುಬರುತ್ತವೆ.

ಇವು ನಸುಕೆಂಪು ವರ್ಣ ಚಿತ್ರಗಳಾಗಿವೆ. ಒಟ್ಟಾರೆ ಇವು ಸ್ಮರಣ(memory)ಚಿತ್ರಗಳಾಗಿ ಕಾಣುತ್ತವೆ. ಗೂಳಿಯ ಚಿತ್ರ ತುಂಬಾ ಬಲಿಷ್ಠವಾಗಿದ್ದು, ಸುಂದರವಾದ ಚಿತ್ರ ಇದಾಗಿದೆ. ಹೇಮಕೂಟದ ದೇವಾಲಯಗಳ ಗುಂಪಿನಿಂದ ಪಶ್ಚಿಮಕ್ಕೆ ಆವರಣದ ಹೊರಗೆ ಈ ಚಿತ್ರದ ನೆಲೆ ಇದೆ. ಇಲ್ಲಿ ಎರಡು ಕಡೆ ಮೀನುಗಳ ಬಾಹ್ಯರೇಖಾ ಚಿತ್ರಗಳಿವೆ. ಮೊದಲ ಮೀನು ದೊಡ್ಡದಿದ್ದು, ಉದ್ದವಾಗಿದೆ. ದೇಹ ಮೂರುಭಾಗದಲ್ಲಿದೆ. ಬಾಲದ ತುದಿ v ಆಕಾರದಲ್ಲಿದೆ.

ಮೇಟ್ರಿ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳು



ನೆಲೆ-೧




ನೆಲೆ-೨

ಮೇಟ್ರಿ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳು



ನೆಲೆ–೧. ಮೆಟ್ರಿ



ನೆಲೆ–೨. ಮೆಟ್ರಿ

ಮೇಟ್ರಿ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳು



ನೆಲೆ-೧



ನೆಲೆ-೨



ನೆಲೆ-೩

ಮೇಟ್ರ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳು



ನೆಲೆ–೩. ಮೆಟ್ರಿ



ನೆಲೆ–೪. ಮೆಟ್ರಿ

ಹಂಪಿಯ ಪ್ರಾಗೈತಿಹಾಸಿಕ ಚಿತ್ರಗಳು



ನೆಲೆ–೧. ಹಂಪಿ



ನೆಲೆ–೨. ಹಂಪಿ



ನೆಲೆ–೩. ಹಂಪಿ

ದೇಹದಲ್ಲಿ ರೋಮನ್ x ಅಕ್ಷರದಂತೆ ಅಲಂಕರಣವಿದೆ. ಇದೊಂದು ವಿಶೇಷ ಜಾತಿಯ ಮೀನು ಆಗಿದೆ. ಸಮೀಪದಲ್ಲಿ ಮತ್ತೊಂದು ಮೀನಿನ ಚಿತ್ರವಿದೆ. ತುಂಗಭದ್ರಾ ನದಿಯ ತೀರದಲ್ಲಿ ಚಕ್ರ ತೀರ್ಥದ ಹತ್ತಿರ ಈ ಕಲ್ಲಾಸರೆ ಇದೆ. ಇಲ್ಲಿ ದೊಡ್ಡ ಪಕ್ಷಿ ಮತ್ತು ಮನುಷ್ಯ ಚಿತ್ರಗಳಿವೆ. ಮನುಷ್ಯನು ಕೈಯಲ್ಲಿ ಆಯುಧವನ್ನು ಹಿಡಿದಿದ್ದಾನೆ. ಪಕ್ಷಿ ಮತ್ತು ಮನುಷ್ಯನ ದೇಹದ ಮೇಲೆ ರೇಖೆಗಳ ಅಲಂಕರಣಗಳಿವೆ. ಇಲ್ಲಿಯೇ ಹಿಡಿಕೆಯುಳ್ಳ ಖಡ್ಗದ ಚಿತ್ರವಿದೆ.[೩೮] ಇವುಗಳಲ್ಲದೆಯೇ ಬಾಲಕೃಷ್ಣ ದೇವಾಲಯದ ಎದುರುಗಡೆ ಹೊಸಪೇಟೆ ಕಂಪ್ಲಿ ರಸ್ತೆಯಲ್ಲಿ ಅನಂತಶಯನ ಗುಡಿಯಿಂದ ಉತ್ತರಕ್ಕೆ ಸುಮಾರು ೧ ಕಿ.ಮೀ. ದೂರದಲ್ಲಿ 'ಧರಮರಗುಡ್ಡ' ವಿದ್ದು, ಗುಡ್ಡದಲ್ಲಿಯ ದೇವಾಲಯದ ಹಿಂಭಾಗದಲ್ಲಿ ಈ ಚಿತ್ರಿತ ಕಲ್ಲಾಸರೆ ಇದೆ. ಅದರ ಉತ್ತರ ಮುಖದಲ್ಲಿ ಕೆಂಪು ಬಣ್ಣದ ಚಿತ್ರಗಳಿವೆ. ಇಲ್ಲಿ ಹಿಂದಿನ ಮತ್ತು ನಂತರ ಕಾಲದ ಚಿತ್ರಗಳಿವೆ ಎಂದು ಮತ್ತು ಬುಕ್ಕಸಾಗರದ ಕರಿಸಿದ್ಧೇಶ್ವರ ಮಠದ ಬಲಬದಿಯ (ಪೂರ್ವಭಾಗ) ಬೆಟ್ಟದಲ್ಲಿ ಒಂದು ಸ್ವತಂತ್ರಗುಂಡು ಇದ್ದು, ಇದರ ಉತ್ತರ ಬದಿಯ ಕಲ್ಲಾಸರೆಯಲ್ಲಿ ಕೆಂಪು ವರ್ಣದಿಂದ ಚಿತ್ರಿಸಿದ ಗೂಳಿಯ ಚಿತ್ರವಿದೆ. ಮುಂಡಷ್ಟದ ಪುಷ್ಟವಾಗಿದ್ದು, ಕೋಡುಗಳು ಬಲಿಷ್ಠವಾಗಿದೆ ಎನ್ನಲಾಗುತ್ತದೆ.[೩೯]

ಕುರುಗೋಡು (ಬಳ್ಳಾರಿ ತಾ.)

ಇಲ್ಲಿ ಬಯಲು ಬಂಡೆಯಲ್ಲಿ ವರ್ಣಚಿತ್ರಗಳು ಕಂಡುಬರುತ್ತವೆ. ಈ ಚಿತ್ರಗಳು ಕಲ್ಲಿನ ಗಣಿಗಾರಿಕೆಯಿಂದ ಹಾಳಾಗಿವೆ. ಅಲ್ಪಸ್ವಲ್ಪ ಚಿತ್ರ ಉಳಿದುಕೊಂಡು ಬಂದಿವೆ. ಅವುಗಳಲ್ಲಿ ಎತ್ತಿನ ರೇಖಾಚಿತ್ರ, ಗಬ್ಬಾದ ಜಿಂಕೆಚಿತ್ರ, ಕೊಕ್ಕರೆಯಂತಹ ಪಕ್ಷಿಯ ಚಿತ್ರಗಳನ್ನು ಈ ನೆಲೆಯಲ್ಲಿ ಕಾಣಬಹುದು. ವೆಂಕಟಾಪುರ ಕಮಲಾಪುರದಿಂದ ಸುಮಾರು ಎರಡು ಕಿ.ಮೀ. ದೂರದಲ್ಲಿ ಮನುಷ್ಯಾಕಾರದ ಚಿತ್ರ, ಬಿಳಿವರ್ಣದ ಮಂಡಲದಂತಹ ಚಿತ್ರಗಳು, ಕೆಲವು ಚಿಹ್ನೆಯ ಚಿತ್ರಗಳು ಈ ನೆಲೆಯಲ್ಲಿ ಕಂಡುಬರುತ್ತವೆ.

ವಸ್ತುವಿಷಯ

ಈ ಮಾನವನು ತನ್ನ ಸಾಂಸ್ಕೃತಿಕ ರೀತಿ ನಿಯಮವನ್ನು ಪ್ರತಿಯೊಂದನ್ನು ಚಿತ್ರ ಮುಖಾಂತರ ಅಭಿವ್ಯಕ್ತಗೊಳಿಸಿದ್ದಾನೆ. ಈ ಚಿತ್ರಗಳಿಗೆ ಯಾವುದೇ ಮುಚ್ಚುಮರೆಯಿಲ್ಲದೇ ಮನೋವೈಶಾಲ್ಯಕ್ಕೆ ಮುಕ್ತ ವಾತಾವರಣ ತನ್ನ ನೆಲೆಯಲ್ಲಿ ಇತ್ತು ಎನ್ನಬಹುದು. ಈ ಪರಿಸರದ ಮನೋಭಾವದ ಚಿತ್ರಗಳನ್ನಿಲ್ಲಿ ಕಾಣಬಹುದು. ಎಲ್ಲಾ ನೆಲೆಗಳ ಚಿತ್ರಗಳು ಒಂದೇ ಎಂಬಂತೆ ಕಂಡರೂ ಸೂಕ್ಷ್ಮವಾಗಿ ಗಮನಿಸಿದಾಗ ಅಂತರಾಳದ ಭಾವನೆಯೊಂದಿಗೆ ವ್ಯತ್ಯಾಸಗಳು ಕಂಡುಬರುತ್ತವೆ. ಮಾನವನಲ್ಲಿ ಸೌಂದರ್ಯಪ್ರಜ್ಞೆ ಅಥವಾ ರಸದೃಷ್ಟಿ ಖಾಯಂ ಸ್ವರೂಪದ್ದಾದರೂ ಈ ಸ್ವರೂಪದರ್ಶನವನ್ನೀಯುವ

---


೩೮. ಡಾ. ಶರಣಪ್ಪ ಕೋಲ್ಕಾರ್ : ಶಿಲಾಯುಗದ ಗವಿಚಿತ್ರಗಳು, ಪುಟ – ೧೪೨

೩೯. ಡಾ. ಶರಣಪ್ಪ ಕೋಲ್ಕಾರ್ : ಶಿಲಾಯುಗದ ಗವಿಚಿತ್ರಗಳು, ಪುಟ – ೧೪೩

ಕುರುಗೋಡು ಮತ್ತು ವೆಂಕಟಾಪುರದ ಚಿತ್ರಗಳು



ನೆಲೆ-೧. ಕುರುಗೋಡು



ನೆಲೆ-೧. ವೆಂಕಟಾಪುರ

ಕಲಾಭಿವ್ಯಕ್ತಿ ವ್ಯಕ್ತಿಯ ಜೀವನದಂತೆ ಕಾಲಕಾಲಕ್ಕೆ ಬದಲಾಗುತ್ತಲೇ ಇರುವಂತಹದ್ದು, ಈ ಪೂರ್ವ ಇತಿಹಾಸದ ಮಾನವನಲ್ಲಿಯೂ ಸೌಂದರ್ಯಪ್ರಜ್ಞೆಯು ಅವನ ಬಳಸುವ ವಸ್ತು, ಇರುವ ಪರಿಸರ, ಕ್ಷಣಿಕದ ಉದ್ದೇಶಿತ ಕಲಾಪ್ರಕಾರಗಳಿಂದ ಹೊರಹೊಮ್ಮುತ್ತದೆ. ಈ ಸೌಂದರ್ಯಪ್ರಜ್ಞೆಯು ಈ ಆದಿಮಾನವನ ಕಲೆಯಲ್ಲಿ ಪರಿಸರ, ಅನುಭವ, ಆಗುವ ಕಾರ್ಯ, ಆಗಿದ್ದ ಕಾರ್ಯ ಭಾಷಾಮಾಧ್ಯಮವಾಗಿ ಚಿತ್ರಕಲೆಯ ಮೂಲಕ ಸೌಂದರ್ಯ ಪ್ರಜ್ಞೆ ಹಿನ್ನೆಲೆಯಾಗಿ ಕಾಣುವುದು ವಸ್ತುವಿಷಯವಾಗಿದೆ.

ಈ ಹಿನ್ನೆಲೆಯಲ್ಲಿ ಸೌಂದರ್ಯದ ಪ್ರಜ್ಞೆಯ ಮಣ್ಣಿನ ಗೊಂಬೆಗಳಲ್ಲಿ, ಕಲ್ಲಿನ ಆಯುಧಗಳಲ್ಲಿ ಮಡಿಕೆ-ಕುಡಿಕೆಗಳಲ್ಲಿ ಕಲ್ಲಾಸರೆ, ಗವಿವರ್ಣ ಚಿತ್ರಗಳಲ್ಲಿ, ಸುಚಿತ್ರವಾಗಿವೆ. ವಿಶೇಷವಾಗಿ ಸಂಗನಕಲ್ಲಿನಲ್ಲಿಯೂ ದೊರೆತಿವೆ. ತುಂಗಭದ್ರ ಮೇಲ್ದಂಡೆ ಪ್ರದೇಶದಲ್ಲಿ ಕಂದು ಮತ್ತು ಹೆಚ್ಚು ಕಪ್ಪು ಪಾತ್ರೆಗಳು ದೊರೆತಿವೆ. ಇವುಗಳ ಮೇಲ್ವರ್ಣವು ತೀರ ತೆಳ್ಳಗಿದ್ದು, ಪಾತ್ರೆಯು ಒರಟಾಗಿ ಕಾಣಿಸುತ್ತದೆ. ಹಂತ ಹಂತವಾಗಿ ಕೈಯಿಂದ ಮಾಡಿದ ದಪ್ಪನೆಯ ದೊಡ್ಡ ದೊಡ್ಡ ಗುಡಾಣಗಳು ಮಧ್ಯಮ ಆಕಾರದ ಉಬ್ಬಿದ ಹೊಟ್ಟೆಯ ಮತ್ತು ಹೊರಚಾಚಿದ ಉದ್ದನೆಯ ಹಿಡಿಕೆಯುಳ್ಳ ಗಡಿಗೆಗಳು, ಅಗಲ ಬಾಯಿಯುಳ್ಳ ಬಟ್ಟಲುಗಳು, ಭುಜದ ಭಾಗದಲ್ಲಿ ಕೊಳವೆಯುಳ್ಳ ಪಾತ್ರೆಗಳು, ಅರ್ಧಗೋಲಾಕೃತಿಯ ಬಟ್ಟಲು, ತಟ್ಟೆ, ನಾನಾ ವಿವಿಧ ಮುಚ್ಚಳ ಇವೆ.[೪೦] ತೆಕ್ಕಲ ಕೋಟೆಯಲ್ಲಿ ಆಹಾರಧಾನ್ಯ, ನೀರು ಮೊದಲಾದ ಪಾನೀಯಗಳನ್ನು ಶೇಖರಿಸಿಡಲಾಗುತ್ತಿತ್ತು. ಇಂತಹ ಮಡಿಕೆಗಳ ತಯಾರಿಕಾ ಕ್ರಮ ಅತ್ಯಂತ ಕಲಾತ್ಮಕವಾಗಿದ್ದು, ತುಂಗಭದ್ರಾ ಮೇಲ್ದಂಡೆ ಪ್ರದೇಶದಲ್ಲಿ ದೊರತಿರುವ ಬಟ್ಟಲು, ತಟ್ಟೆ, ಮಡಿಕೆಗಳ ಅಂಚಿನಲ್ಲಿ ಕೆಮ್ಮಣ್ಣಿನ ಬಣ್ಣವನ್ನು ಹಚ್ಚಿರುತ್ತಾರೆ.[೪೧] ಒಟ್ಟಿನಲ್ಲಿ ಉಪಯೋಗಿತ ಆಧಾರಿತ ವಸ್ತುಗಳಲ್ಲಿಯ ಕಲೆ ಕಂಡರೆ, ಚಿತ್ರಕಲೆಯ ಪ್ರಜ್ಞೆ ಗುಹೆ/ಬಂಡೆಗಳಲ್ಲಿ ಸಹಜವಾಗಿಯೇ ಕಲೆಗಾಗಿ ಕಲೆ ಅಂದಿನ ಕಾಲದಲ್ಲಿ ಪರೋಕ್ಷವಾಗಿ ಚಿತ್ರಕಲೆ ಉದ್ದೇಶಿತ ಅಥವಾ ಭಾವಮುದ್ರೆಯ ಹಿನ್ನೆಲೆ ಚಿತ್ರಕಲೆಗಾಗಿ ಕೆಲಸ ಮಾಡಿದೆ ಎನ್ನಬಹುದು.

ಬೇಟೆಯ ಚಿತ್ರಗಳು

ಪ್ರಾಗೈತಿಹಾಸಿಕ ಮಾನವನ ಮುಖ್ಯವಾದ ಕಸಬು ಬೇಟೆಯಾಗಿರುವುದರಿಂದ ಸಹಜವಾಗಿ ಬೇಟೆಯ ಚಿತ್ರಗಳೇ ಅಧಿಕವಾಗಿ ರಚನೆಯಾಗಿವೆ. ಈ ಚಿತ್ರಗಳಿಗೆ ಪುಷ್ಟಿಕೊಡುವಂತೆ ಹಲವು ಸಂಗತಿಯ ಪುರಾವೆಗಳು ಇಂದಿಗೂ ಕಾಣಸಿಗುತ್ತವೆ. ಚಿತ್ರಗಳಲ್ಲದೆ, ಆಯುಧಗಳು ಮತ್ತು ಬೇಟೆಯ ವೃತ್ತಿಯಾಗಿ ಗುರುತಿಸಿಕೊಂಡ ಶಿಖಾರಿ, ಬೇಡ, ಅಕ್ಕಿಪಿಕ್ಕಿ, ಅಂಬಿಗ, ಕುರುಬ ಮುಂತಾದ ಪಂಗಡಗಳನ್ನು ಇಂದಿಗೂ ವೃತ್ತಿಯ ಮೂಲದಿಂದ ಈ ಜನಾಂಗ ಗುರುತಿಸಿಕೊಂಡಿದ್ದಾರೆ.

---

೪೦. ಡಾ. ಎಚ್. ಈ. ಬಸವರಾಜಪ್ಪ : ಬಳ್ಳಾರಿ ಜಿಲ್ಲೆಯ ಚಿತ್ರಕಲೆ, ಪುಟ – ೨

೪೧. ಡಾ. ಎಚ್. ಈ. ಬಸವರಾಜಪ್ಪ : ಬಳ್ಳಾರಿ ಜಿಲ್ಲೆಯ ಚಿತ್ರಕಲೆ, ಪುಟ – ೨

ಇದಲ್ಲದೇ ವಿಜಯನಗರ ಕಾಲದಲ್ಲಿ ನವರಾತ್ರಿಯ ಹಬ್ಬದಲ್ಲಿ ೨೫ ಕೋಣ, ೪೫೦ ಕುರಿಗಳನ್ನು ಬಲಿ ಕೊಡುತ್ತಿದ್ದರು ಎಂದು ತಿಳಿದುಬರುತ್ತದೆ. ಮತ್ತು ಹಜಾರರಾಮ ದೇವಾಲಯದ ಬಾಗಿಲಪಕ್ಕದಲ್ಲಿ ಹಂದಿ, ಚಿಗರೆ ಬೇಟೆಶಿಲ್ಪಗಳಿವೆ. ವಿಜಯನಗರ ಕಾಲಕ್ಕೆ ಸೇರಿದ ಗುಡೆಕೋಟೆಯ ಆಂಜನೇಯ ದೇವಾಲಯದ ಬೇಟೆಶಿಲ್ಪವು ಸಹಾ ಸೊಗಸಾಗಿದ್ದು, ಮರಿಯಮ್ಮನಹಳ್ಳಿ ಆಂಜನೇಯ ದೇವಾಲಯದಲ್ಲಿ ಹುಲಿ ಬೇಟೆಯ ವೀರಗಲ್ಲಿದೆ. ಈ ರೀತಿ ಅನೇಕ ಶಾಸನ, ವೀರಗಲ್ಲು, ಮಹಾಸತಿ ಕಲ್ಲು, ಉಬ್ಬುಶಿಲ್ಪ ದೇವಾಲಯ ಮತ್ತು ಕಂಬಗಳಲ್ಲಿ ಬೇಟೆಯ ದೃಶ್ಯಗಳು ಕಂಡುಬರುತ್ತವೆ. ಬೇಟೆ ಮಾನವನ ಆರಂಭಿಕ ಜೀವನದ ಮತ್ತು ಆಹಾರ ಹುಡುಕಾಟದ ಪ್ರಥಮ ಹಂತ. ಈ ಬೇಟೆಗೆ ಅನೇಕ ಕಾರಣಗಳಿವೆ. ಆಹಾರ ಸಂಪಾದನೆ, ಸ್ವಯಂ ರಕ್ಷಣೆ, ಮನೋರಂಜನೆ, ಪ್ರಕೃತಿ ಸಮತೋಲನ ಮುಂತಾದವು. ಬೇಟೆಯಾಡಿದ ಪ್ರಾಣಿಗಳನ್ನು ಹೊತ್ತುಕೊಂಡು ಬರುವುದು, ಬೇಟೆಗೆ ಹೊರಡುವುದಕ್ಕಿಂತ ಮೊದಲು ಆ ಪ್ರಾಣಿಯು ಬೇಗನೆ ಸಿಗಲಿ ಎಂದು ಬೇಟೆಯನ್ನು ಬಯಸಿ ಬರೆದ ಚಿತ್ರಗಳು ಬೇಟೆಸಂಬಂಧಿ ಚಿತ್ರಗಳಲ್ಲಿ ಕಂಡುಬರುತ್ತವೆ.[೪೨]

ಈ ಚಿತ್ರಗಳು ನೈಜ ಸ್ವರೂಪದಲ್ಲಿ ಕಂಡುಬರುತ್ತವೆ. ಅದಕ್ಕೆ ಬಾಣ, ಈಟಿ ಹೀಗೆ ಆಯುಧಗಳಿಂದ ಚುಚ್ಚಲ್ಪಟ್ಟಂತಹ ಅದರ ಸುತ್ತಲೂ ಮುಖವಾಡ ಧರಿಸಿದ ಮಾಂತ್ರಿಕರು ಇರುವಂತೆ ಚಿತ್ರಗಳು ಸಹ ಕಂಡುಬರುತ್ತವೆ. ಮಾಂತ್ರಿಕರಿರುವ ಇಂತಹ ಚಿತ್ರಗಳು ಯಶಸ್ಸಿನ ಬೇಟೆಯನ್ನು ಬಯಸುವ ಚಿತ್ರಗಳಿರಬೇಕೆಂದು[೪೩] ವಿದ್ವಾಂಸರ ಅಭಿಪ್ರಾಯವಿದೆ. ಹಂಪೆಯ ವಿರೂಪಾಕ್ಷ ದೇವಾಲಯದ ಹಿಂದಿನ ಬೃಹತ್ ಬಂಡೆ ಮತ್ತು ಕಪ್ಪಗಲ್, ಕಾರಿಗನೂರು, ಮಿಂಚೇರಿ, ಸಂಜರಾಯನ ಕೋಟೆ, ಬೃಹತ್ ನಿಲುಬಂಡೆಗೆ ಗೂಳಿ, ಜಿಂಕೆ, ಬೇಟೆಯಾಡುತ್ತಿರುವ ಬೇಟೆಯಾಡಿದ ಪ್ರಾಣಿಗಳನ್ನು ಕೋಲಿಗೆ ಹಾಕಿಕೊಂಡಿರುವ ಚಿತ್ರಗಳನ್ನು ಕಾಣಬಹುದು.

ಈ ಬೇಟೆಯ ಪ್ರಾಗೈತಿಹಾಸಿಕದ ದೃಶ್ಯ ಚಿತ್ರಗಳಲ್ಲಿಯೂ ಆಯಾಕಾಲದ ಚಿತ್ರ-ಶಿಲ್ಪದಲ್ಲಿಯೂ ಬಿಂಬಿತವಾಗಿದೆ. ಇಂದಿಗೂ ಕಮಲಾಪುರ, ಹೊಸಪೇಟೆ ಮುಂತಾದ ಕಡೆಗಳಲ್ಲಿ ಯುಗಾದಿ ಹಬ್ಬದ ಮಾರನೆಯ ದಿನ 'ಬೇಟೆಗೆ ಹೋಗುವುದು' ಎಂದು ಪಂಗಡದ ಜನಾಂಗದವರು ಕಾಡಿಗೆ ಹೋಗುತ್ತಾರೆ. ಅಲ್ಲಿ ಸಿಕ್ಕ ಮೊಲ, ನವಿಲು, ಮತ್ತು ಕಾಡುಹಂದಿ ಮುಂತಾದ ಪ್ರಾಣಿ-ಪಕ್ಷಿಗಳನ್ನು ಬೇಟೆಯಾಡುತ್ತಾರೆ. ಇವುಗಳನ್ನು ಕಟ್ಟಿಗೆಗೆ ನೇತುಹಾಕುವುದು, ಬಂಡಿ, ರಿಕ್ಷಾ ಮುಂತಾದ ವಾಹನಗಳಲ್ಲಿ ಹಾಕಿಕೊಂಡು, ತಪ್ಪಡಿಯ ಸಮೇತ ಮೆರವಣಿಗೆ ಮಾಡುತ್ತಾ ಕಾಡಿನಿಂದ ಊರಿಗೆ ಬರುತ್ತಾರೆ. ತಂದ ಬೇಟೆಯ ಪ್ರಾಣಿಗಳನ್ನು ಎಲ್ಲರು ಹಂಚಿಕೊಂಡು ತಿನ್ನುವ ವಾಡಿಕೆಯಿದ್ದುದನ್ನು ೧೯೯೨-೯೩ರಲ್ಲಿ ಈ ದೃಶ್ಯದ ಮೂಲಕ ಕಂಡಿದ್ದೇವೆ. ಆದರೆ ಈ ಒಂದು ಆಚರಣೆ ಇಂದು ನಿಷೇಧವಾಗಿದೆ. ಆದರೆ ಅಕ್ಕಿಪಿಕ್ಕಿ ಮತ್ತು ಅಂಬಿಗರ ಜನಾಂಗದಲ್ಲಿ

೪೨. ಡಾ. ಯಾದಪ್ಪ ಪರದೇಶಿ : ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ – ಒಂದು ಅಧ್ಯಯನ (ಅ.ಪ್ರ.ಪಿಹೆಚ್.ಡಿ.ಮ.ಪ್ರ), ಪುಟ – ೧೮೧

೪೩. ಪಿ. ಆರ್. ತಿಪ್ಪೇಸ್ವಾಮಿ (ಸಂ.) : ಚಿತ್ರಕಲಾ ಪ್ರಪಂಚ, ಪುಟ – ೧೮

ಬೇಟೆಯಲ್ಲಿ ಪಾರಿವಾಳ, ಮೊಲ, ಮೀನು ವಡಿಯಂತಹ ಪ್ರಾಣಿ–ಪಕ್ಷಿಗಳನ್ನು ಬೇಟೆಯಾಡುವುದು ಇಂದಿಗೂ ಪ್ರಸ್ತುತದಲ್ಲಿದೆ.

ಕುಣಿತದ ಚಿತ್ರಗಳು

ಕುಣಿತ ಚಿತ್ರಗಳಲ್ಲಿ ಕೈ, ಕೈ ಹಿಡಿದುಕೊಂಡು ಕುಣಿಯುತ್ತಿರುವ ಚಿತ್ರಗಳೇ ವಿಶೇಷವಾದ ಚಿತ್ರಗಳಾಗಿವೆ. ಮನೋರಂಜನೀಯವಾದ ಮನೋಭಾವಯುಕ್ತ ಚಿತ್ರಗಳು ಈ ಕಲೆಯಲ್ಲಿ ಕಂಡುಬರುತ್ತವೆ. ಯಾವುದೋ ಧಾರ್ಮಿಕ ಆಚರಣೆಯನ್ನು ಆಚರಿಸುವಾಗ ಕುಣಿಯುತ್ತಿರಬೇಕು. ಇಲ್ಲವೇ ಬೇಟೆಸಿಕ್ಕ ಸಂಭ್ರಮದಲ್ಲಿ ಕುಣಿಯುತ್ತಿರಬೇಕು ಅನಿಸುತ್ತದೆ. ಈ ತರಹದ ಆಚರಣೆಗಳು ಬುಡಕಟ್ಟು ನಿವಾಸಿಗಳಲ್ಲಿ ಈಗಲೂ ಉಳಿದುಕೊಂಡು ಬಂದಿವೆ. ಈಗಾಗಲೇ ಪರಿಚಯಿಸಿದಂತೆ ಕಮಲಾಪುರದಲ್ಲಿ ಬೇಟೆ ಸಿಕ್ಕ ಸಂಭ್ರಮದಲ್ಲಿ ಕೇಕೆ ಹಾಕುತ್ತಾ, ಕುಣಿಯುತ್ತಾ ಸಾಗುತ್ತಾರೆ.

ಧಾರ್ಮಿಕ ಹಿನ್ನೆಲೆಯಲ್ಲಿ ಕಂಪ್ಲಿಯಲ್ಲಿಯೂ ಬುಡಕಟ್ಟು ನಿವಾಸಿಗಳಲ್ಲಿ 'ಅಕ್ಕಿಪಿಕ್ಕಿ' ಜನಾಂಗದಲ್ಲಿ ವರ್ಷಕ್ಕೆ ಒಂದು ಸಲ ಹಬ್ಬದ ಆಚರಣೆಯಲ್ಲಿ ಕೋಣವನ್ನು ಕಡಿದು (ಸಾಯಿಸಿ) ಅದರ ರಕ್ತವನ್ನು ಕುಡಿಯುವುದು, ಸಂಭ್ರಮದಿಂದ ಕುಣಿಯುವುದು ಆಚರಣೆಯಲ್ಲಿ ಕಂಡುಬರುತ್ತಿತ್ತು. ಗೌಪ್ಯವಾಗಿ ಕೋಣಗಳ ಬಲಿ ಇತ್ತು. ಇದರ ಹಿನ್ನೆಲೆಯಾಗಿ ಆದಿಮಾನವನು ಸಹ ಧಾರ್ಮಿಕವಾಗಿಯೂ ಮತ್ತು ಬೇಟೆಯು ಸಿಕ್ಕ ಸಂಭ್ರಮದಲ್ಲಿ ಕುಣಿಯುವ ಚಿತ್ರಗಳನ್ನು ವೆಂಕಟಾಪುರ, ಸಂಗನಕಲ್ಲು, ಸಂಜರಾಯನಕೋಟೆ, ಹಂಪಿ, ಕಾರಿಗನೂರು, ಎತ್ತಿನಬೂದಿಹಾಳ್ ಮುಂತಾದ ಕಡೆಗಳಲ್ಲಿ ಕಾಣಬಹುದು.

ತಾಂತ್ರಿಕ ಚಿತ್ರಗಳು

ಇಂತಹ ವರ್ಣಚಿತ್ರಗಳಲ್ಲಿ ತಾಂತ್ರಿಕಚಿತ್ರಗಳು ಬಳ್ಳಾರಿ ಜಿಲ್ಲೆಯ ಹಲವು ನೆಲೆಗಳಲ್ಲಿ ಕಂಡುಬರುತ್ತವೆ. ಈಗಲೂ ಮೋಡಿ, ಮಾಟ, ಮಂತ್ರ ಎನಿಸಿಕೊಂಡ ಮಾಂತ್ರಿಕತೆ ಅಂದಿನಿಂದಲೂ ಇಂದಿನವರೆಗೆ ಉಳಿಸಿಕೊಂಡು ಬಂದಿದ್ದಾರೆ. ಇನ್ನೂ ಕೆಲವು ಸಂದರ್ಭದಲ್ಲಿ ಮಂಡಲ ಪೂಜೆ ಇತ್ತು ಎಂದು ಇಂದಿಗೂ ಕೇಳಿಬರುತ್ತದೆ. ವೆಂಕಟಾಪುರ ಕಲ್ಲಾಸರೆಯಲ್ಲಿ ಕೈಗಳನ್ನು ಮೇಲಕ್ಕೆತ್ತಿರುವ ಕಡ್ಡಿಯಂತಹ ಮನುಷ್ಯನ ಚಿತ್ರಗಳು ಮತ್ತು ಹುಲಿಯ ಚಿತ್ರ ಬಂಧಿತವಾಗಿದೆ. ಇದು ಅಲ್ಲದೇ ಕೆಲವು ವಿಶಿಷ್ಟ ಚಿಹ್ನೆಗಳಿವೆ.[೪೪] ತಾಂತ್ರಿಕದ ಚಿತ್ರಗಳು ಎನಿಸಿಕೊಳ್ಳುವುದಕ್ಕೆ ಮುಖ್ಯ ಕಾರಣವೆಂದರೆ, ಒಬ್ಬ ಮನುಷ್ಯ, ಪ್ರಾಣಿ, ಸ್ವಸ್ತಿಕ ಚಿಹ್ನೆ ಕಂಡುಬರುತ್ತದೆ. ಈ ಮಾಂತ್ರಿಕ ಶಕ್ತಿಯ ಪದಗುಚ್ಛಗಳನ್ನು ಆ ಆಕೃತಿಯ ಎದುರು ಹೇಳುತ್ತಾ ವಿಚಿತ್ರ ಬಗೆಯ ಭಾವೋನ್ಮಾದಗಳಲ್ಲಿ ತನ್ನ ರಕ್ಷೆಯ ಆಚೆ ಇನ್ನೊಂದು ಜಗತ್ತಿದೆ. ಆದರೆ ಜೊತೆ ಆಕೃತಿಯ ಎದುರು ಸಂವಾದ ನಡೆಸುತ್ತಿದ್ದೇನೆಂದು ಆ ಕಾಲದ ಜನ ನಂಬುತ್ತಿದ್ದರು. ತನ್ನ ಲೋಕದಲ್ಲಿ ಇಲ್ಲದ ಇನ್ನೊಂದು ಶಕ್ತಿಯನ್ನು ಮಣ್ಣಿನ,

---

೪೪. ಅ. ಸುಂದರ : ಕರ್ನಾಟಕದ ಪ್ರಾಗೈತಿಹಾಸಿಕ ಕಾಲದ ಕಲೆ, ಪುಟ – ೪೬

ಲೋಹದ, ಮರದ ಇಲ್ಲವೇ ಯಾವುದೇ ಬಗೆಯ ಕಲ್ಲಿನಲ್ಲಿ ಮಾಡಿದ ಆಕೃತಿ ಅಂಥ ಶಕ್ತಿಯನ್ನು ಇಲ್ಲಿಗೆ ತರುವುದಕ್ಕೆ ಸಹಕಾರಿಯಾದ ಮಧ್ಯವರ್ತಿ ಎಂದು ಈ ಕಾಲದ ಸಮೂಹ ನಂಬಿಕೊಂಡಿತ್ತು[೪೫] ಎಂದು ಅಭಿಪ್ರಾಯಗಳಿವೆ.

ಕಾದಾಟದ ಚಿತ್ರಗಳು

ಪ್ರಾಗೈತಿಹಾಸಿಕ ಮಾನವನ ಹಲವು ಯುದ್ಧದ ಅಥವಾ ಕಾಳಗ(ಜಗಳ)ದಂತಹ ಚಿತ್ರಗಳು ಜಿಲ್ಲೆಯ ಕಪ್ಪಗಲ್, ಕಾರಿಗನೂರು, ಗಾದಿಗನೂರು, ಮೆಟ್ರಿ, ಎತ್ತಿನಬೂದಿಹಾಳ, ಮಿಂಚೇರಿ, ಸಂಜರಾಯನಕೋಟೆ ಮುಂತಾದ ನೆಲೆಗಳಲ್ಲಿ ಎರಡು ಗೂಳಿ, ಎತ್ತು ಒಂಟೆಯಾಕಾರ ಪ್ರಾಣಿಗಳು, ಮುಖಾಮುಖಿಯಾಗಿ ನಿಂತ ಪ್ರಾಣಿಗಳ ಮೇಲೆ ಒಬ್ಬೊಬ್ಬ ಸವಾರನೂ ಕುಳಿತು, ಆಯುಧಗಳನ್ನು ಹಿಡಿದುಕೊಂಡಿದ್ದಾರೆ. ಇಂತಹ ಚಿತ್ರಗಳಿಂದ ತಿಳಿಯುವುದು – ಅವರಲ್ಲಿಯೂ ಗುಂಪುಗಾರಿಕೆ ಇರಬೇಕು, ಇವರ ಮಧ್ಯೆ ಆಗಾಗ ಘರ್ಷಣೆ ಆಗುತ್ತಿರಬೇಕು. ಏಕೆಂದರೆ ಕ್ರಿ.ಪೂ.ದಿಂದ ಇಂದಿನವರೆಗೂ ಯುದ್ಧಗಳ ದೃಶ್ಯ ಕಂಡರೆ ಈ ಜನಾಂಗದಲ್ಲಿಯೂ ಯುದ್ಧಗಳು ಸಹಜವಾಗಿದ್ದವು ಎನ್ನುವುದು ಈ ಚಿತ್ರಗಳಲ್ಲಿ ಬಿಂಬಿತವಾಗಿದೆ. ಮತ್ತು ಸಂಶೋಧನೆಯ ಪ್ರಕಾರ ಮಂಗ (ಕೋತಿ)ಗಳಲ್ಲಿಯೂ ಗುಂಪುಗಾರಿಕೆ ಇರುವುದು ಸಾಬೀತಾಗಿದೆ. ಆದ್ದರಿಂದ ಈ ಮಾನವ ಮೂಲ ನಿವಾಸಿಯಾದ್ದರಿಂದ ಇವರಲ್ಲಿಯೂ ಯುದ್ಧಗಳು ಇದ್ದವು ಎನ್ನಬಹುದು.

ವಾಷಿಂಗ್ಟನ್ (ಪಿ.ಟಿ.ಡಿ) ಜಮಾನಾದಲ್ಲಿ ಅಸಮಾನತೆ ಪದ್ಧತಿ ಜಾತಿಯಲ್ಲಿ ಇರುವುದು ಇತ್ತೀಚಿನ ವಿದ್ಯಮಾನವೇನೂ ಅಲ್ಲ. ಏಳು ಸಾವಿರ ವರ್ಷಗಳ ಹಿಂದೆ ನವಶಿಲಾಯುಗದಲ್ಲೂ ಈ ವ್ಯವಸ್ಥೆ ಇತ್ತು ಎಂದು ಅಧ್ಯಯನವೊಂದರಿಂದ ಗೊತ್ತಾಗಿದೆ. ಬ್ರಿಸ್ಟಲ್ ವಿಶ್ವವಿದ್ಯಾಲಯದ ಸಂಶೋಧಕರ ತಂಡವೊಂದು ಯುರೋಪ್‌ನ ಮಧ್ಯಭಾಗದಲ್ಲಿ ಸುಮಾರು ೩೦೦ ಅಸ್ಥಿಪಂಜರಗಳನ್ನು ಹೊರತೆಗೆದು ನಡೆಸಿದ ಅಧ್ಯಯನದಿಂದ ನವಶಿಲಾಯುಗದಲ್ಲೂ ಸಮಾಜದಲ್ಲಿ ಅಸಮಾನತೆ ಮತ್ತು ಪಂಗಡಗಳ ಮಧ್ಯೆ ವರ್ಗೀಕರಣ ಮುಂತಾದವು ಅಸ್ತಿತ್ವದಲ್ಲಿ ಇದ್ದವು ಎಂಬುದು ಗೊತ್ತಾಗುತ್ತದೆ. ನಿಧನರಾದ ಸಂದರ್ಭದಲ್ಲಿ ಕೃಷಿ ಸಲಕರಣೆಗೊಂದಿಗೆ ಹೂಳಲಾಗುತ್ತಿತ್ತು ಎಂದು ಫ್ರೊಫೆಸರ್ ಅಲೆಕ್ಸ್ ಬೆಂಟ್ಲಿ ಹೇಳಿದ್ದಾರೆ.[೪೬] ಈ ಪ್ರಕಾರವಾಗಿ ಯುದ್ಧದ ಚಿತ್ರಗಳೇ ಎಂಬುದು ಸ್ಪಷ್ಟ ಸಂಯೋಜನೆಯಲ್ಲಿಯೂ ಸ್ಪಷ್ಟ ಸ್ವರೂಪದ ದೃಶ್ಯಾವಳಿಯ ಸ್ಮರಣೆಯ ಚಿತ್ರಗಳಾಗಿವೆ.

ತನ್ನಿಂದಾಗದ ಎಷ್ಟೋ ಕೆಲಸಗಳನ್ನು ವಾಸ್ತವದಲ್ಲಿ ಪ್ರಯತ್ನಿಸಿ ಸೋತು ಮಾಂತ್ರಿಕದ ಮೊರೆಹೋಗಿ ಅಮೂರ್ತವಾದ ಯಾವುದೋ ಶಕ್ತಿಯ ಮೂಲಕ ತನ್ನ ಬೇಡಿಕೆಯನ್ನು ಈಡೇರಿಸುವಂಥ ತಂತ್ರವಾಗಿತ್ತು. ಮಾಂತ್ರಿಕ ವಿಧಿಕ್ರಿಯೆಗಳಲ್ಲೂ ಮಣ್ಣು, ಲೋಹ, ಮರ, ಕಲ್ಲುಗಳಲ್ಲಿ ಮೂಡಿದ ಗೊಂಬೆಗಳು ತನಗೆ ಗೊತ್ತಿರದ ಶಕ್ತಿಯ ಸಂಕೇತವಾಗಿ ಆಕೃತಿಗೊಳ್ಳುತ್ತಿದ್ದವು.

೪೫. ಡಾ. ಮೊಗಳ್ಳಿ ಗಣೇಶ : ಗಿರಿಜನ ಸಂಸ್ಕೃತಿ, ಪುಟ – ೧೪೮

೪೬. ಪ್ರಜಾವಾಣಿ : ದಿನಪತ್ರಿಕೆ, ೩೦ ಮೇ ೨೦೧೨

[illegible]

ಇವತ್ತಿನ ಎಷ್ಟೋ ಗ್ರಾಮದೇವತೆಗಳ ಅಸ್ಪಷ್ಟ ವಿಗ್ರಹಗಳಾಗಲಿ, ಭೀಕರವಾದ ಆಕೃತಿಗಳ ಕೆತ್ತನೆಗಳಾಗಲಿ, ರಂಗೋಲಿ ರೇಖಾಚಿತ್ರಗಳಾಗಲಿ ಇಂಥ ಆದಿಮ ಮನಸ್ಸಿನ ಕಲೆಯ ಪ್ರತಿಬಿಂಬವಾಗಿರುತ್ತವೆ.[೪೭] ದಕ್ಷಿಣದ ತಿಲೆಮಲ ಬೆಟ್ಟಗಳಲ್ಲಿ ಜೀವಿಸುತ್ತಿರುವ ಪೊಲ್ಯೆಯನ್ ಜನಾಂಗ ಮತ್ತು ಪರಾಂಬಿಕ್ಕಳಮ್‌ನಲ್ಲಿ ಜೀವಿಸುವ ಕಾಡರ್ ಜನಾಂಗಗಳಲ್ಲಿ ಬೇಟೆ ಜೀವಂತವಾಗಿದೆ.

ವರ್ಣರಹಿತ ಚಿತ್ರಗಳಿಗಿಂತ ಬಯಲುಬಂಡೆಯ ಚಿತ್ರಗಳು ಹೆಚ್ಚಿನ ಮಟ್ಟದಲ್ಲಿ ಕಂಡುಬರುತ್ತವೆ. ಈ ಬಯಲುಬಂಡೆಯ ರೇಖಾಚಿತ್ರಕಲೆಯ ಒಂದು ಸ್ವಯಂ ಪೂರ್ಣ ಕಲೆಯಾಗಿದೆ. ಈ ರೇಖೆಗಳೇ ಅಂತಿಮ ವರ್ಣಗಳಲ್ಲಿ ರೇಖೆ, ಬಣ್ಣಗಳಿಂದ ಕೂಡಿದ ಕಲೆಯಾಗಿವೆ. ಈ ಚಿತ್ರಗಳು ಆರಂಭಿಕ ಹಂತದ್ದಾಗಿರುವುದರಿಂದ ಆದಿಮನಿಗೆ ಏಕಾಗ್ರತೆ, ಸ್ಮರಣೆಗೆ ಕಲಾಪ್ರಜ್ಞೆಯ ಕೆಲಸಕೊಟ್ಟಿದೆ. ಈ ಪ್ರಾಗೈತಿಹಾಸಿಕ ಚಿತ್ರಶೈಲಿಯು ತನ್ನದೇಯಾದ ಶೈಲಿಯಾಗಿದೆ. ಈ ಶೈಲಿಯು ಮತ್ತಾವ ಶೈಲಿಗೂ ಸಮಾನವಾಗಿರದೇ ತನ್ನದೇಯಾದ ಕಲಾಶೈಲಿಯಾಗಿದೆ. ಈ ಶೈಲಿಯು ಹೆಚ್ಚು ಅಲಂಕಾರಿಕ ಶೈಲಿಯಾಗಿರದೇ ನೇರ, ಪ್ರಧಾನ, ಕ್ಷಣದಲ್ಲಿಯೇ ಮೂಡಿದ ಮನಸ್ಸಿನ ಭಾವ ಮುದ್ರೆಗಳಾಗಿವೆ.

ಒಟ್ಟಾರೆ ಬಳ್ಳಾರಿ ಜಿಲ್ಲೆ ಪ್ರಾಚೀನ ಪ್ರಾಗೈತಿಹಾಸಿಕ ಕಾಲದ ಪ್ರಮುಖ ನೆಲೆಯಾಗಿದ್ದುದು ದೊರೆತಿರುವ ಅನೇಕ ದಾಖಲೆಗಳು ನಮಗೆ ಪುರಾವೆಗಳಾಗಿವೆ. ವಿಶೇಷವಾಗಿ ಈ ಜಿಲ್ಲೆಯಲ್ಲಿ ಇತಿಹಾಸ ಪೂರ್ವ ಯುಗದ ಬೇರೆ ಬೇರೆ ಹಂತಗಳಲ್ಲಿ ಜನವಸತಿ ನೆಲೆಯಾಗಿ ನಿಂತಿದ್ದುದು ಮತ್ತು ಅವರು ತಮ್ಮ ದೈನಂದಿನ ಬದುಕಿನ ಭಾಗವಾಗಿ ಚಿತ್ರರಚನೆ ಮಾಡಿರುವುದು ಕಂಡುಬರುತ್ತದೆ. ಆ ಚಿತ್ರಗಳ ಮೂಲಕ ಅಂದಿನ ಜನರ ಸಾಂಸ್ಕೃತಿಕ ಬದುಕಿನ ಹಲವಾರು ವಿವರಗಳನ್ನು ಸೂಕ್ಷ್ಮವಾಗಿ ಗುರುತಿಸಬಹುದಾಗಿದೆ. ಜಗತ್ತಿನ ಬೇರೆ ಬೇರೆ ಪ್ರದೇಶಗಳಲ್ಲಿ ದೊರೆತಿರುವಂತೆ ಈ ಜಿಲ್ಲೆಯಲ್ಲಿಯೂ ಕೂಡ ಪ್ರಾಗೈತಿಹಾಸಿಕ ಮಾನವನ ರೇಖಾಚಿತ್ರಗಳು, ವರ್ಣಚಿತ್ರಗಳು ದೊರೆತಿದ್ದು ಅವುಗಳ ವಸ್ತು ವಿವರ, ಬೇಟೆಯ ಸಂಸ್ಕೃತಿಯದೇ ಆಗಿದೆ. ಹಾಡು, ನೃತ್ಯ, ಸಾಮೂಹಿಕ ಜೀವನದ ಹಲವಾರು ಅಂಶಗಳು ಆ ಕಾಲದ ಪ್ರಾಣಿ ವೈವಿಧ್ಯತೆಗಳು ಈ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆಯಲ್ಲಿ ಗುರುತಿಸಬಹುದಾಗಿದೆ.

---

೪೭. ಡಾ. ಮೊಗಳ್ಳಿ ಗಣೇಶ : ಗಿರಿಜನ ಸಂಸ್ಕೃತಿ, ಪುಟ – ೧೪೯

ಅಧ್ಯಾಯ : ನಾಲ್ಕು

ಬಳ್ಳಾರಿ ಜಿಲ್ಲೆಯ ಜನಪದ ಚಿತ್ರಕಲೆ

ಮಾನವ ನಿತ್ಯಜೀವನದಲ್ಲಿ ಅನುಭವಿಸುವ ಸುಖ, ಸಂತೃಪ್ತಿ, ಆನಂದಗಳೇ ಕಲೆಗೆ ಮೂಲ. ಶಾಂತಿ ಸಮೃದ್ಧಿಗಳು ಕಲೆಗಳನ್ನು ಬೆಳೆಸಿಕೊಂಡು ಬರುವ ಮುಖ್ಯ ಅಂಶಗಳು. ತನಗುಂಟಾದ ಹಲವು ಭಾವಗಳನ್ನು ಮಾನವ ಹಲವು ಬಗೆಯ ಮಾಧ್ಯಮಗಳ ಮೂಲಕ ವ್ಯಕ್ತಪಡಿಸುತ್ತಾನೆ. ಸುಗ್ಗಿಯ ಕಾಲದಲ್ಲಿ ಸಂತೋಷದಿಂದ ಗುಂಪು ಗುಂಪಾಗಿ ಕುಣಿಯುವುದು, ಹಾಡುವುದು, ಅನಾದಿಕಾಲದಿಂದ ನಡೆದು ಬಂದ ಪದ್ಧತಿಗಳಾದ ಬಿತ್ತುವಾಗ, ಬೀಸುವಾಗ ಕಟ್ಟುವಾಗ ಲೀಲಾಜಾಲವಾಗಿ ಹಾಡಿಕೊಳ್ಳುವುದು ಇದೇ ರೀತಿಯದು. ಅತ್ಯಂತ ಪ್ರಾಚೀನ ಕಾಲದ ಮಾನವನೂ ಹೀಗೆ ಒಂದು ಬೇಟೆ ಸಿಕ್ಕಾಗ ಅಥವಾ ಗೆಲುವು ಸಾಧಿಸಿದಾಗಲೋ ತನ್ನ ಸಂತೋಷಕ್ಕಾಗಿ ಕುಣಿದು ಕುಪ್ಪಳಿಸಿ ಕೇಕೆ ಹಾಕುತ್ತಿದ್ದಿರಬೇಕು. ಅದರ ಮಧುರ ಭಾವಗಳನ್ನು, ನೆನಪುಗಳನ್ನು ಚಿತ್ರಿಸಿ, ಮುಂದೆ ಜನಪದಕಲೆಗೆ ದಾರಿ ಮಾಡಿಕೊಟ್ಟವು. ಜನಸಾಮಾನ್ಯರಲ್ಲಿ ಜನಪದ ಕಲೆಗಳು ತಮ್ಮದೇಯಾದ ರೀತಿಯಲ್ಲಿ ಉಳಿದು ಬಂದಿವೆ. ಆದರೆ ಜನ ಸುಸಂಸ್ಕೃತರಾಗುತ್ತ ಬಂದ ಹಾಗೆ ಕಲೆಗಳನ್ನು ವೈವಿಧ್ಯಮಯವಾಗಿ ಬೆಳೆಸಿಕೊಂಡು ಕಲೆಗಳು ಹಲವು ಪ್ರಕಾರಗಳಲ್ಲಿ ಕವಲೊಡೆದು ಮುಖ್ಯವಾಗಿ ವಸ್ತುರೂಪದ ಕಲೆ, ವರ್ಣರೂಪದ ಕಲೆ, ಪ್ರದರ್ಶನರೂಪದ ಕಲೆ, ನೃತ್ಯರೂಪದ ಕಲೆ, ಅಭಿನಯರೂಪದ ಕಲೆ, ಗಾನರೂಪದ ಕಲೆಗಳಾಗಿ ಬೇರ್ಪಟ್ಟು ತಮ್ಮದೇಯಾದ ನೆಲೆಯಲ್ಲಿ ಬೆಳೆದು ನಿಂತಿವೆ.

[illegible]

[illegible]

[illegible]

ಬಳ್ಳಾರಿ ಜಿಲ್ಲೆಯ ಜನಪದ ಚಿತ್ರಕಲೆ

- **ನೆಲಗೋಡೆಯ ಮೇಲಿನ ಚಿತ್ರಕಲೆ**
  - ೧. ರಂಗೋಲಿ
  - ೨. ಹಬ್ಬ, ಹುಣ್ಣಿವೆಗಳಲ್ಲಿ ಬರೆಯುವ ಚಿತ್ರಗಳು
  - ೩. ಮದುವೆ ಚಿತ್ರಗಳು
- **ಬಟ್ಟೆಯ ಮೇಲಿನ ಚಿತ್ರಕಲೆ**
  - **ಹೆಣಿಗೆ ಚಿತ್ರಕಲೆ**
    - ೧. ಕಸೂತಿ
    - ೨. ಲಂಬಾಣಿ
  - **ಹೊಲಿಗೆಯ ಚಿತ್ರಕಲೆ**
    - ೧. ಕೌದಿ
    - ೨. ಕಲಂಕಾರಿ
    - ೩. ಬಾಂಧಿನಿ
    - ೪. ಬಾಟಿಕ್
- **ಚರ್ಮದ ಮೇಲಿನ ಚಿತ್ರಕಲೆ**
  - ೧. ಹಚ್ಚೆ
  - ೨. ಮೆಹಂದಿ
  - ೩. ತೊಗಲುಗೊಂಬೆ ಚಿತ್ರಕಲೆ
  - ೪. ಹುಲಿವೇಷ
- **ಸಂಕೀರ್ಣ ಜನಪದ ಚಿತ್ರಕಲೆ**
  - ೧. ರಥಗಳ ಮೇಲಿನ ಚಿತ್ರಕಲೆ
  - ೨. ಗಿಳಿಶಕುನ ಚಿತ್ರಕಲೆ
  - ೩. ನೀಲಿ ಹೊತ್ತಿಗೆ ಚಿತ್ರಕಲೆ



ಇವುಗಳಲ್ಲಿ ವರ್ಣರೂಪದ ಕಲೆಯಾದ ಚಿತ್ರಕಲೆಯ ಹಲವು ಉಪಕವಲುಗಳ ಪ್ರಕಾರಗಳಲ್ಲಿ ಈ ಜನಪದ ಚಿತ್ರಕಲೆಯು ಒಂದು ವಿಶಿಷ್ಟ ಕಲಾಪ್ರಕಾರವಾಗಿದೆ. ಭಾರತೀಯ ಕಲಾಪರಂಪರೆಯಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಕಂಡುಕೊಂಡಿದೆ. ಈ ಜನಪದ ಅವಸ್ಥೆಯ ಕಲೆಗಳಲ್ಲಿ ರಂಗೋಲಿ, ಹಚ್ಚೆ, ಮೆಹಂದಿ, ಕಸೂತಿ, ದೊಡ್ಡಾಟದ ಮುಖವರ್ಣಿಕೆ, ವೇಷಭೂಷಣ, ಹುಲಿವೇಷ, ರಥಗಳ ಮೇಲಿನ ಚಿತ್ರಕಲೆ ಹೀಗೆ ನಾನಾ ಬಗೆಯ ಜನಪದ ಚಿತ್ರಕಲೆ ನೋಡಬಹುದಾಗಿದೆ. ಈ ಕಲೆಯಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ಸ್ವಲ್ಪಮಟ್ಟಿಗೆ ವ್ಯತ್ಯಾಸ ಕಂಡರೂ ಜನಪದೀಯ ನೆಲೆಯನ್ನು ಗಟ್ಟಿಗೊಳಿಸಿಕೊಂಡಿವೆ. ಇಂತಹ ಕಲೆಗಳನ್ನು ಬಳ್ಳಾರಿ ಜಿಲ್ಲೆಯು ಉಳಿಸಿಕೊಂಡು ಬಂದಿದೆಯಾದರೂ ಆಧುನೀಕರಣ, ನಗರೀಕರಣ ಎನ್ನುವ ನೆಪಗಳಲ್ಲಿ ಅಳಿಸಿಹೋಗುತ್ತಿದೆ. ಈ ಕಲೆ ಉಳಿದ ಬಗ್ಗೆ ಕ್ಷೇತ್ರ ಕಾರ್ಯದಿಂದ ಮಾಹಿತಿ ಸಂಗ್ರಹಿಸಲಾಗಿದೆ. ಅವು ಈ ಅಧ್ಯಾಯದಲ್ಲಿ ಚರ್ಚಿತಗೊಂಡಿವೆ.

I ನೆಲಗೊಡೆಯ ಮೇಲಿನ ಚಿತ್ರಕಲೆ

ಜನಪದರು ಸೌಂದರ್ಯ, ಧಾರ್ಮಿಕದಂತಹ ವಿವಿಧ ಉದ್ದೇಶಗಳಿಗೆ ರಚಿಸುವ ಚಿತ್ರಗಳಿಗೆ ನೆಲಗೋಡೆಗಳೇ ರಟ್ಟರಿವೆಗಳಾಗಿವೆ. ಅಂತಹ ಚಿತ್ರಗಳಾದ ರಂಗೋಲಿ, ಹಸೆ ಚಿತ್ರಗಳು ಮುಂತಾದ ಕಲೆಗೆ ನೆಲಗೋಡೆಗಳೇ ತಾಣವಾಗಿವೆ.

೧.೦. ರಂಗೋಲಿ ಚಿತ್ರಕಲೆ

ಜನಪದ ನೆಲೆಯಲ್ಲಿ ಬದುಕಿನೊಂದಿಗಿನ ಕಲೆಯಾದ ಇದು ಸೌಂದರ್ಯದ ಪ್ರತೀಕವಾಗಿದೆ. ಇದು ಅಲ್ಲದೇ ಮಂಗಳಕರವು, ತಾಂತ್ರಿಕದ ಹಿನ್ನೆಲೆಯಲ್ಲಿ ಕೂಡ ಜನಪದರ ನಂಬಿಗೆಗೆ ಪಾತ್ರವಾಗಿದೆ. ರಂಗೋಲಿ ಎಂಬುದು ರಂಗವಲ್ಲಿ ಎಂಬ ಪದದ ತದ್ಭವ. ರಂಗವಲ್ಲಿ ಈ ಪದವೇ ಸೂಚಿಸಿರುವಂತೆ 'ರಂಗ'ವೆಂದರೆ ಬಣ್ಣ, 'ವಲ್ಲಿ' ಎಂದರೆ ಬಳ್ಳಿ,[೧] ಚೆಲ್ಲುವಿಕೆ, ತೆರೆ, ರಂಗತ ಎಂದರೂ ತೆರೆ ಅಥವಾ ತರಂಗ ಮಾಡುತ್ತಿರುವ ಬಗೆ. ಚೆಲ್ಲುವಿಕೆಗಾಗಿ ರಂಗ ಅಥವಾ ಸಭಾಮಂಟಪದಲ್ಲಿ ತೆರೆಗಳೇಳುವ ಬಗೆಯಂತೆ ಬಣ್ಣದ ಹುಡಿ ಸರಿಸಿಕೊಂಡು ಚಿತ್ರವನ್ನು ಮೂಡಿಸುವ ಕಲೆಗೆ ರಂಗವಲ್ಲಿ[೨] ಎನ್ನಲಾಗುತ್ತದೆ.

೧.೧. ಪ್ರಾಚೀನತೆ

ಮಾನವ ಬದುಕಿನಲ್ಲಿ ಚಿತ್ರಕಲೆಯ ಪ್ರವೇಶದೊಂದಿಗೆ ರಂಗೋಲಿ ಪ್ರವೇಶ ಪಡೆದಿವೆ. ಸಂತೋಷಕುಮಾರ ಗುಲ್ವಾಡಿಯವರು ರಂಗೋಲಿಯ ಪ್ರಾಚೀನತೆಯನ್ನು ಸುಮಾರು ೫೦೦೦ ವರ್ಷಗಳಷ್ಟು ಹಿಂದೆ ಎಳೆದು, ಪರಿಚಯಾತ್ಮಕ ಲೇಖನ ಬರೆದಿದ್ದಾರೆ. ಆದರೆ ಅದಕ್ಕಾಗಿ ಆಧಾರಸೂಚಿಗಳನ್ನು ಅವರು ಕೊಟ್ಟಿಲ್ಲ. ಆದಿ ಮಾನವನು ಗವಿ, ಕಲ್ಲುಬಂಡೆಗಳ ಮೇಲೆ

೦೧. ಶಾಂತಾದೇವಿ ವಾಳವಾಡ : ಸೊಬಗಿನ ಮನೆ, ಪುಟ – ೪೩

೦೨. ವಾಸುದೇವರಾವ್ ಕಾಣೆಮಾರ್ : ಕಲಾವಿಶೇಷಗಳು, ಪುಟ – ೩೨

[illegible]

ನೆಲ ಗೊಡೆಯ ಮೇಲಿನ ಚಿತ್ರಕಲೆ



ರಂಗೋಲಿ ಪರಿಕರಗಳು



ರಂಗೋಲಿ ಹಾಕುವ ವಿದಾನ

I. ೧. ರಂಗೋಲಿ ಚಿತ್ರಕಲೆ

- ೧. ಪ್ರಾಚೀನತೆ
- ೨. ರಂಗೋಲಿಯ ಸಾಮಗ್ರಿಗಳು
  - ೨.೧. ಅಕ್ಕಿ
  - ೨.೨. ಅರಿಷಿಣ ಮತ್ತು ಕುಂಕುಮ
  - ೨.೩. ಬಣ್ಣಗಳು
  - ೨.೪. ರವೆ
  - ೨.೫. ಇಟ್ಟಿಗೆ ಪುಡಿ
  - ೨.೬. ವಿವಿಧ ಮಣ್ಣುಗಳು
  - ೨.೭. ಹೂ ಮತ್ತು ಧಾನ್ಯ
- ೩. ರಂಗೋಲಿ ಹಾಕುವ ವಿಧಾನ
  - ೩.೧ ಪ್ರಾಚೀನ ರೀತಿ
  - ೩.೨. ಆಧುನಿಕ ರೀತಿ
- ೪. ನಂಬಿಕೆಗಳು
- ೫. ರಂಗೋಲಿಯ ಚಿಹ್ನೆ
  - ೫.೧. ಸ್ವಸ್ತಿಕ್ ಚಿಹ್ನೆ
  - ೫.೨. ಚಕ್ರ ಚಿಹ್ನೆ
  - ೫.೩. ಪದ್ಮ ಕಮಲ
  - ೫.೪. ವೃಕ್ಷ
- ೬. ರಂಗೋಲಿ ಮೂಡಿಸುವ ರೀತಿ
- ೭. ರಂಗೋಲಿಯ ಪ್ರಕಾರಗಳು
  - ೭.೧. ನಿತ್ಯದ ರಂ.
  - ೭.೨. ಹಬ್ಬದ ರಂ.
  - ೭.೩. ದೇವರ ಮುಂದೆ ಹಾಕುವ ರಂ.
  - ೭.೪. ಆರತಿ ತಟ್ಟೆಯ ರಂ.
  - ೭.೫. ಜಾತ್ರೆಯ ರಂ.
  - ೭.೬. ಮದುವೆಯ ರಂ.
  - ೭.೭. ಸುಗ್ಗಿಯ ರಂ.

ಚಿತ್ರಿಸಿದ್ದನ್ನು ನೋಡಿದರೆ, ರಂಗೋಲಿಯು ಇತಿಹಾಸಪೂರ್ವದ ಕಾಲಕ್ಕೆ ಹೋಗುತ್ತದೆ. ಜನಪದರ ಬಹುಪಾಲು ಕಲೆಗಳಿಗೆ ಲಿಖಿತ ಆಧಾರ ಗುರುತಿಸುವುದು ಕಷ್ಟಸಾಧ್ಯವಾಗಿದೆ[೦೩] ಎನ್ನಲಾಗುತ್ತದೆ. ಆದರೂ ಸಾಂದರ್ಭಿಕ ಸಾಹಿತ್ಯದಲ್ಲಿ ಈ ರಂಗೋಲಿ ಕಲೆಯನ್ನು ಕಾಣಬಹುದಾಗಿದೆ.

ರಾಮಾಯಣದ ಪಂಚವಟಿಯಲ್ಲಿ ಸೀತಾಪಹರಣ ಮಾಡಲು ಛದ್ಮ ವೇಷದಲ್ಲಿ ಬಂದಾಗ ರಾವಣನು ಕುಟೀರದೆದುರಿಗಿದ್ದ ಲಕ್ಷ್ಮಣರೇಖೆಯ ಮಾಂತ್ರಿಕ ರಕ್ಷಣಾಸಾಮರ್ಥ್ಯವನ್ನು ಎದುರಿಸಲಾಗದೆ ಹೋದನೆಂಬ ಕಥಾ ಪ್ರಸಂಗ ಬರುತ್ತದೆ. ಈ ಲಕ್ಷ್ಮಣ ರೇಖೆಯು ಮಂಕೆರಚಬಲ್ಲ ರಂಗೋಲಿಯ ಲಕ್ಷ್ಮಣ ರೇಖೆಯಾಗಿರಬಹುದು. ಭಾಗವತದಲ್ಲಿ ಗೋಪಿಯರು ಕೃಷ್ಣನನ್ನು ಮಥುರೆಗೆ ಮಲ್ಲಯುದ್ಧಕ್ಕಾಗಿ ಹೊರಟು ಬೀಳ್ಕೊಳ್ಳುವಾಗ ನವಿಲಿನ ಚಿತ್ರಗಳನ್ನು ರಂಗವಲ್ಲಿಯಲ್ಲಿ ನೆಲದ ಮೇಲೆ ಬಿಡಿಸಿದ್ದರಂತೆ. ಈ ನವಿಲುಗಳಿಗೆ 'ಸಾಧೀತಾ' ಎಂದು ಕರೆದು ಆ ಮೂಲಕ ತಾವು ಕೃಷ್ಣನ ಸಾಥಿಗಳೇ ಎಂಬುದನ್ನು ಗೋಪಿಯರು ತಿಳಿಸಿದ್ದರೆಂದು ಗುಜರಾಥಿಗಳು ರಂಗವಲ್ಲಿ ಕಲೆಯನ್ನೇ 'ಸಾಥಿತಾ' ಎಂದು ಇಂದಿಗೂ ಕರೆಯುತ್ತಾರೆ[೦೪] (ರಂಗವಲ್ಲಿಯನ್ನು 'ಕಲ್ಪನಾ' ಎಂದು ಬಂಗಾಳದಲ್ಲಿ, 'ಶ್ರೀಪಾನ್' ಎಂದು ಬಿಹಾರಿನಲ್ಲಿ, 'ಓಜುಗಂಟಿ'ಯೆಂದು ಓರಿಸ್ಸಾದಲ್ಲಿ, 'ವಹತ್' ಎಂದು ಉತ್ತರ ಪ್ರದೇಶದಲ್ಲಿ, 'ಸಂಜಾ' ಎಂದು ಮಾಲವ ಮಧ್ಯಪ್ರದೇಶದಲ್ಲಿ, 'ಕೋಲಮ್' ಎಂದು ತಮಿಳುನಾಡಿನಲ್ಲಿ, 'ಅಣಿಯರ್' ಎಂದು ಕೇರಳದಲ್ಲಿ ಕರೆಯುವುದುಂಟು).

ಬಾಣ (ಕ್ರಿ.ಶ. ೬೦೬–೬೪೮) ತನ್ನ ಕಾದಂಬರಿಯಲ್ಲಿ ಸೂತಿಕಾಗೃಹದ ಮುಂದೆ ರಂಗೋಲಿ ಹಾಕಿರುವುದನ್ನು ವಿವರಿಸಿದ್ದಾನೆ. ವುತ್ತು ವಾತ್ಸಾಯನನ ೬೪ ಕಲೆಗಳಲ್ಲಿ ತಂಡುಲಬಲಿಕುಸುಮವಿಕಾರವು ೬ನೆಯ ಕಲೆಯಾಗಿದ್ದು, ಯಶೋಧರ ಪಂಡಿತನು ಇದರ ಅರ್ಥವನ್ನು ಸರಸ್ವತಿ, ಕಾಮದೇವ ದೇವಾಲಯಗಳಲ್ಲಿ ಅಕ್ಕಿಯಿಂದ ರಚಿಸುತ್ತಿದ್ದ ಸುಂದರವಾದ ಕಲಾಕೃತಿಗಳು ಎನ್ನುತ್ತಾನೆ. ಅನಿಲ ಬರನ್‌ಗಂಗೂಲಿಯವರು 'ತಂಡುಲಬಲಿಕುಸುಮವಿಕಾರ'ವನ್ನು ಮೂರು ರೀತಿಯಲ್ಲಿ ವಿಭಾಗಿಸಿ ಅರ್ಥ ಮಾಡುತ್ತಾರೆ. ಅ. ತಂಡುಲವಿಕಾರ, ಆ. ಬಲಿವಿಕಾರ, ಕ. ಕುಸುಮವಿಕಾರ. ತಂಡುಲವಿಕಾರವೆಂದರೆ ಅಕ್ಕಿಯಿಂದ ರಚಿಸಿದ ರಂಗೋಲಿ, ಬಲಿವಿಕಾರವೆಂದರೆ ದೇವತಾ ನೈವೇದ್ಯವನ್ನು ಅಣಿಗೊಳಿಸುವ ವಿಧಾನ, ಕುಸುಮವಿಕಾರವು ಹೂಗಳಿಂದ ರಂಗೋಲಿ ಚಿತ್ರಿಸುವ ಕಲೆ ಎಂದಿದ್ದಾರೆ. ಮ.ಶ್ರೀಧರ ಮೂರ್ತಿಯವರು 'ವಿಕಾರ' ಎಂದರೆ ಮೂಲ ರೂಪವನ್ನು ಬದಲಿಸಿ ಬೇರೆ ರೂಪ ಕೊಡುವುದು ಎಂದು ನಿಘಂಟುಕಾರರು ತಿಳಿಸುತ್ತಾರೆ[೦೫] ಎಂದಿದ್ದಾರೆ. ಮತ್ತು ಕಾಮಶಾಸ್ತ್ರದ ತೆಲುಗು ವ್ಯಾಖ್ಯಾನಕಾರರಾದ ಮೇಡಿಚರ್ಲ ಆಂಜನೇಯ ಶಾಸ್ತ್ರಿಯವರು ರಂಗೋಲಿ ಇದು ಚಿತ್ರಕಲೆಯಷ್ಟೇ ಪ್ರಾಚೀನವಾದುದೆಂದು ಅಭಿಪ್ರಾಯಪಡುತ್ತಾರೆ.

---

೦೩. ಡಾ. ಎಸ್. ಸಿ. ಪಾಟೀಲ : ಕರ್ನಾಟಕ ಜನಪದ ಚಿತ್ರಕಲೆ, ಪುಟ – ೨೨೧

೦೪. ವಾಸುದೇವರಾವ್ ಕಾಣೆಮಾರ್ : ಕಲಾವಿಶೇಷಗಳು, ಪುಟ – ೩೩

೦೫. ಡಾ. ಎಸ್. ಸಿ. ಪಾಟೀಲ : ಕರ್ನಾಟಕ ಜನಪದ ಚಿತ್ರಕಲೆ, ಪುಟ – ೨೨೨

[illegible]

"ಮಂತ್ರಶಾಸ್ತ್ರ, ತಂತ್ರಶಾಸ್ತ್ರ ಮತ್ತು ಆಗಮಗಳಲ್ಲಿ ಉಕ್ತವಾಗಿರುವ ಅನೇಕ ಕಾಮ್ಯಕರ್ಮಗಳಲ್ಲಿ ದೇವತಾ ವಿಗ್ರಹ ಅಥವಾ ಕಲಶವನ್ನು ಸ್ಥಾಪಿಸುವೆಡೆಯಲ್ಲಿ ಬಣ್ಣ ಬಣ್ಣದ ಧಾನ್ಯಗಳಿಂದ ಅಥವಾ ಬಣ್ಣ ಹಚ್ಚಿದ ಅಕ್ಕಿಯಿಂದ ಕಲಾತ್ಮಕವಾದ ವಿವಿಧ ಮಂಡಲಗಳನ್ನು ಚಿತ್ರಿಸಿರುವುದುಂಟು. ಬಣ್ಣದ ಹೂಗಳ ರಸದಿಂದ ಅಕ್ಕಿಗೆ ಬಣ್ಣ ಕೊಟ್ಟು, ಅದರಿಂದ ದೇವತಾಸ್ವರೂಪಗಳನ್ನು ರಚಿಸಿ ಪೂಜಿಸುವ ವಾಡಿಕೆಯೂ ಉಂಟು. ರಂಗವಲ್ಲಿ ಕಲೆಗೆ ಇದೇ ಮೂಲ"[೬] ಎಂದಿದ್ದಾರೆ. ಈ ರಂಗೋಲಿ ಕಲೆಯು ಒಂದು ನಿಖರತೆಗೆ ಸಿಗದಿದ್ದರೂ ಚಿತ್ರಕಲೆಯಷ್ಟೇ ಪ್ರಾಚೀನವಾದುದು ಎಂದು ಹೇಳುವುದಕ್ಕೆ ಅಂದಿನ ಕುಟ್ಟು/ಗೀರು ಚಿತ್ರಗಳೇ ಸಾಕ್ಷಿಯಾಗಿವೆ.

ಈ ಸುಂದರ ಕಲಾಸಾಮ್ರಾಜ್ಯವನ್ನು ವೀಕ್ಷಿಸಲು ಯಾವುದೇ ಆರ್ಟ್‌ಗ್ಯಾಲರಿಗೋ, ಪ್ರದರ್ಶನಕ್ಕೋ ಹೋಗಬೇಕಿಲ್ಲ. ಕಾಸೂ ಕೊಡಬೇಕಿಲ್ಲ. ಹಳ್ಳಿ ಇರಲಿ, ನಗರವಿರಲಿ ಬೆಳಗು ಮೂಡಿದ ನಂತರ ಪ್ರತಿಮನೆಯ ಎದುರೂ ಒಂದೊಂದು ತೆರನಾದ ಕಲೆಯ ಬಲೆಯ ಸುಂದರ ಕಾವ್ಯ ನಗುತ್ತಿರುತ್ತದೆ. ಹಳ್ಳಿಗಳಲ್ಲಿ ಸೆಗಣಿಯನ್ನು ಸಾರಿಸಿ ಈ ಹಸಿರಿನ ನಡುವೆ ವರ್ಣದ ಹಂದರದಲ್ಲಿ ಹೆಣೆದ ಈ ಕಾವ್ಯ ಕನ್ನಿಕೆಗೆ ಮರುಳಾಗದವರ್ಯಾರು? ಇಂತಹ ರಂಗೋಲಿಯು ದಿನವೂ ಹುಟ್ಟಿ ಅಂದೇ ಅಳಿದು, ನಾಳೆಗೆ ಮತ್ತೊಂದು ತೆರನಾಗಿ, ನಾಡಿದ್ದಿಗೆ ಇನ್ನೊಂದು ರೀತಿಯಾಗಿ ಅವತರಿಸುವ ಈ ಕಲೆ ಮನೆ ಮುಂದಿದ್ದರೆ ಆ ಮನೆಗೆ ಗೌರವ. ಇದು ಮೂಡಿ ಅಳಿಯುವ ಪ್ರಕ್ರಿಯೆಯಲ್ಲಿ ನಿತ್ಯ ವಿನೂತನತೆ, ನಿರಂತರತೆ, ಹೊಸತನಕ್ಕೆ ತೆರೆದುಕೊಳ್ಳುವ ಸಂದೇಶವಾಗಿದೆ. ಇಂತಹ ಕಲೆಯನ್ನು ಕಾವ್ಯ, ಕವನ, ಕಥೆಗಳಲ್ಲಿ ಕೂಡ ಜನಪದರು ಹಿಡಿಯುವ ಪ್ರಯತ್ನ ಮಾಡಿದ್ದಾರೆ.

ಭೂಮಿಯೇ ಹಸೆಯಾಗಿ
ಆಕಾಶವೇ ಚಪ್ಪರವಾಗಿ
ಮುತ್ತಿನ ರಂಗೋಲಿಯನ್ನಿಟ್ಟು
ಹವಳದ ಚಿತ್ತಾರ ಮೂಡಿ
ಪಚ್ಚೆ ತೋರಣ ಕಟ್ಟುವ[೭] – ಎಂದು ಜನಪದರು ಕವನದಲ್ಲಿ ಹೇಳಿದ್ದು ರಂಗೋಲಿಯ ಮೆರುಗಿನ ವೈಶಾಲ್ಯ ಜಗದಗಲ ಹರಡಿ ನಿಂತಿದೆ.

೧.೨. ರಂಗೋಲಿಯ ಸಾಮಗ್ರಿಗಳು

ಮುಖ್ಯವಾಗಿ ಬೆಣಚು ಕಲ್ಲನ್ನು ಪುಡಿ ಮಾಡಿ ರಂಗೋಲಿಯನ್ನು ಬಿಡಿಸುವ ಕಲೆ ಸರ್ವೇಸಾಮಾನ್ಯವಾದರೂ ಕೆಲವು ಸಂದರ್ಭದಲ್ಲಿ ಬೇರೆ ಬೇರೆ ವಸ್ತುಗಳನ್ನು ಉಪಯೋಗಿಸುತ್ತಾರೆ. ೧. ಅಕ್ಕಿ, ೨. ಅರಿಷಿಣ ಮತ್ತು ಕುಂಕುಮ, ೩. ಬಣ್ಣಗಳು, ೪. ರವೆ,೫. ಇಟ್ಟಿಗೆ ಪುಡಿ, ೬. ವಿವಿಧ ಮಣ್ಣುಗಳು, ೭. ಹೂ ಮತ್ತು ಧಾನ್ಯಗಳು.

೦೬. ಮ. ಶ್ರೀಧರಮೂರ್ತಿ : ೬೪ ಕಲೆಗಳು, ಪುಟ – ೧೧-೧೨

೦೭. ವಿಜಯ ಕರ್ನಾಟಕ : ದಿನಪತ್ರಿಕೆ, ದಿನಾಂಕ ೧೨ನೇ ಅಗಸ್ಟ್ ೨೦೧೦

ಇಲ್ಲಿ ಮೂರು ರೀತಿಯಲ್ಲಿ ವಸ್ತುಗಳನ್ನು ಉಪಯೋಗಿಸುತ್ತಾರೆ. ನಿತ್ಯದ ರಂಗೋಲಿಯಲ್ಲಿ ಬಿಳಿ ಬೆಣಚುಕಲ್ಲಿನ ಪುಡಿಯನ್ನು ಉಪಯೋಗಿಸಿದರೆ, ಹಬ್ಬ, ಮದುವೆ ಕಾರ್ಯಕ್ರಮದ ಸಂದರ್ಭದಲ್ಲಿ ಅರಿಷಿಣ ಮತ್ತು ಕುಂಕುಮ, ಬಣ್ಣಗಳು, ರವೆ, ಅಕ್ಕಿ, ಇಟ್ಟಿಗೆ ಪುಡಿ, ಜೇಡಿ ಮಣ್ಣನ್ನು ಉಪಯೋಗಿಸಿದರೆ, ಹೂ ಮತ್ತು ಧಾನ್ಯಗಳನ್ನು ವಿಶೇಷಕಾರ್ಯ, ಸ್ಪರ್ಧೆಗಳಲ್ಲಿ ಉಪಯೋಗಿಸುತ್ತಾರೆ.

ಅಕ್ಕಿ

ಮದುವೆಯ ಸಂದರ್ಭದಲ್ಲಿ ಮಂಡಲ ಚಿತ್ರವನ್ನು ಬರೆಯುವ ಸಂದರ್ಭದಲ್ಲಿ ಈ ಅಕ್ಕಿಯನ್ನು ಉಪಯೋಗಿಸುತ್ತಾರೆ. ಕರಿಯ ಕಂಬಳಿಯ ಮೇಲೆ ಬಿಳಿಯಾದ ಅಕ್ಕಿಯಿಂದ ಆಯತ ಬರೆದು ಒಳಗಡೆ ಎರಡು ರೇಖೆಗಳಿಂದ ನಾಲ್ಕು ತ್ರಿಭುಜವನ್ನು ರಚಿಸಿ ಎಡ ಮತ್ತು ಬಲ ಸೂರ್ಯ, ಚಂದ್ರನ ಸಂಕೇತಗಳನ್ನು ಚಿತ್ರಿಸಲಾಗುತ್ತದೆ. ಇವರ ಬಂಧನಕ್ಕೆ ಸೂರ್ಯ ಚಂದ್ರನು ಸಾಕ್ಷಿಯಾಗಿರುವರೆಂದು ನಂಬಿಕೆಯಾಗಿದೆ.

ಕುಂಕುಮ ಮತ್ತು ಅರಿಷಿಣ

ಹಬ್ಬ ಮತ್ತು ಅಮಾವಾಸ್ಯೆ ಮತ್ತು ಹುಣ್ಣಿಮೆಯ ದಿನದಲ್ಲಿ ಕುಂಕುಮ ಮತ್ತು ಅರಿಷಿಣವನ್ನು ರಂಗೋಲಿಗೆ ಉಪಯೋಗಿಸುತ್ತಾರೆ. ಕುಂಕುಮವನ್ನು ಗೌರಿಯೆಂದು, ಅರಿಷಿಣವನ್ನು ಲಕ್ಷ್ಮಿಯೆಂದು ಭಾವಿಸಿ, ಹೆಣ್ಣುಮಕ್ಕಳು ಸೌಭಾಗ್ಯ ಮತ್ತು ಸಿರಿಸಂಪತ್ತಿನ ಸಂಕೇತವಾಗಿ, ಅಮಂಗಳ ನಿವಾರಣೆಗಾಗಿ ಇವುಗಳನ್ನು ಬಳಸುತ್ತಾರೆ.[೧೮]

ಬಣ್ಣಗಳು ಮತ್ತು ರವೆ

ರಂಗೋಲಿಯ ಅಂದವನ್ನು ಮತ್ತಷ್ಟು ಹೆಚ್ಚಿಸುವ ಸಲುವಾಗಿ ವಿವಿಧ ಬಣ್ಣಗಳನ್ನು ಉಪಯೋಗಿಸುತ್ತಾರೆ. ಬೆಣಚು ಕಲ್ಲಿನ ಪುಡಿ ಅಥವಾ ರವೆಯಲ್ಲಿ ಬೆರೆಸಿ ಈ ಬಣ್ಣವನ್ನು ಉಪಯೋಗಿಸುತ್ತಾರೆ. ಇಂತಹ ರಂಗೋಲಿಯಿಂದ ವಿಶೇಷವಾಗಿ 'ಸಂಕ್ರಮಣ' ಹಬ್ಬದ ದಿನದಂದು ಎಲ್ಲರೂ ರಂಗುರಂಗಾಗಿ ರಂಗೋಲಿಯನ್ನು ಹಾಕುತ್ತಾರೆ.

ಇಟ್ಟಿಗೆ ಪುಡಿ ಮತ್ತು ವಿವಿಧ ಮಣ್ಣುಗಳು

ಇಟ್ಟಿಗೆ ಪುಡಿ ಮತ್ತು ವಿವಿಧ ಮಣ್ಣುಗಳನ್ನು ರಂಗೋಲಿಯ ಬರಿ ಜಾಗ (space) ತುಂಬಲು ಉಪಯೋಗ ಮಾಡಲಾಗುತ್ತದೆ. ಜೊತೆಯಲ್ಲಿ ಕೆಂಪುಮಣ್ಣನ್ನು ಸಾರಣೆ ಮಾಡಿ ಮೇಲೆ ರಂಗೋಲಿಯನ್ನು ಸಹ ಹಾಕಲಾಗುತ್ತದೆ. ಇಲ್ಲವೇ ಸುಣ್ಣದ ಪುಡಿಯನ್ನು ನೀರಲ್ಲಿ ಹಾಕಿ ಮಂದವಾಗಿ ಕಲಕಿ ಅದನ್ನು ರಂಗೋಲಿಯಂತೆ ಉಪಯೋಗಿಸುತ್ತಾರೆ.

---

೧೮. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ - ೨೩೦

ಹೂ ಮತ್ತು ಧಾನ್ಯಗಳು

ಬಣ್ಣ ಬಣ್ಣದ ಹೂ ಮತ್ತು ಧಾನ್ಯಗಳಿಂದ ರಚಿಸುವ ರಂಗೋಲಿಗಳು ತುಂಬ ವಿಶೇಷವಾದ ರಂಗೋಲಿಗಳಾಗಿವೆ. ರಂಗೋಲಿಯ ಹೆಚ್ಚಿನ ಕಲಾತ್ಮಕತೆ ಮತ್ತು ವ್ಯವಧಾನ, ಆಸಕ್ತಿ, ಹೂ ಮತ್ತು ಧಾನ್ಯಗಳನ್ನು ಉಪಯೋಗದಲ್ಲಿ ತೋರಿಸಿಕೊಳ್ಳುವ ರಂಗೋಲಿಯಾಗಿದೆ. ವಿವಿಧ ಸ್ಪರ್ಧೆಗಳಲ್ಲಿ, ಉತ್ಸವ ಮತ್ತು ಸಮ್ಮೇಳನಗಳಲ್ಲಿಯೂ ಹೂ ಮತ್ತು ಧಾನ್ಯಗಳನ್ನು ಮಾಧ್ಯಮವಾಗಿಸಿ ರಂಗೋಲಿಯನ್ನು ಹಾಕಲಾಗುತ್ತದೆ.

೧.೩. ರಂಗೋಲಿ ಹಾಕುವ ವಿಧಾನಗಳು

ರಂಗೋಲಿ ಹಾಕುವ ವಿಧಾನಗಳು ಎರಡು ರೀತಿಯಲ್ಲಿವೆ.

೧. ಪ್ರಾಚೀನ ರೀತಿ. ೨. ಆಧುನಿಕ ರೀತಿ

ಪ್ರಾಚೀನ ರೀತಿ

ಪ್ರಾಚೀನ ರೀತಿಯಲ್ಲಿ ಮೂರು ವಿಧಗಳಾಗಿವೆ. ಚುಕ್ಕೆಯ ರಂಗೋಲಿ, ಚುಕ್ಕೆರಹಿತ ರಂಗೋಲಿ, ಗಂಟಿನ ರಂಗೋಲಿ

ಚುಕ್ಕೆಯ ರಂಗೋಲಿ

ರಂಗೋಲಿ ಪುಡಿಯಿಂದ ತಮಗೆ ಇಷ್ಟವಾದ ರೀತಿಯಲ್ಲಿ ಚುಕ್ಕೆಗಳನ್ನು ಇಡುತ್ತಾರೆ. ಆ ಚುಕ್ಕೆಯಿಂದ ಚುಕ್ಕೆಗೆ ರೇಖೆಗಳನ್ನು ಎಳೆಯುತ್ತಾ ಅಪೇಕ್ಷಿತ ಚಿತ್ರಾಕೃತಿಗಳನ್ನು ನಿರ್ಮಿಸುತ್ತಾರೆ. ಈ ವಿಧಾನಕ್ಕೆ ಚುಕ್ಕೆ ರಂಗೋಲಿ ಎನ್ನುತ್ತಾರೆ.

ಚುಕ್ಕೆ ರಹಿತ ರಂಗೋಲಿ

ಚುಕ್ಕೆಗಳನ್ನು ಇಡಲಾರದೆ, ನೇರವಾಗಿ ರಂಗೋಲಿಯ ಪುಡಿಗಳಿಂದಲೇ ರಂಗೋಲಿಯನ್ನು ಹಾಕುವ ವಿಧಾನವಿದಾಗಿದೆ. ಇದನ್ನು "ಸರಗೈ ರಂಗೋಲಿ"ಯೆಂದು ಕರೆಯುತ್ತಾರೆ.[೯] ಈ ತರಹದ ರಂಗೋಲಿಯಲ್ಲಿ ಸುರಳಿ, ಬಳ್ಳಿ, ಹೂ, ಎಲೆಗಳು ಇತ್ಯಾದಿ ಆಕೃತಿಗಳನ್ನು ರಚಿಸಲಾಗುತ್ತದೆ. ಚುಕ್ಕೆಯ ರಂಗೋಲಿಯಲ್ಲಿ ರಂಗೋಲಿ ಪ್ರಾರಂಭಿಕ ಹಂತ ಮತ್ತು ಸುಲಭವಾಗಿ ಚುಕ್ಕೆಯನ್ನು ಕೂಡಿಸುತ್ತಾ ಒಂದು ಆಕಾರಕ್ಕೆ ತರುತ್ತಾರೆ. ಆದರೆ ಚುಕ್ಕೆರಹಿತ ರಂಗೋಲಿಯನ್ನು ನುರಿತ ವ್ಯಕ್ತಿಗಳು ಹಾಕುವುದು ಕಂಡುಬರುತ್ತದೆ.

ಗಂಟಿನ ರಂಗೋಲಿ

ಈ ಗಂಟಿನ ರಂಗೋಲಿಯೆಂದರೆ ಚುಕ್ಕೆಗಳ ಮಧ್ಯದ ಗೆರೆಗಳನ್ನು ಹಾಕುತ್ತಾ ಆಕೃತಿಯನ್ನು ರಚಿಸುವುದು. ಈ ಗಂಟಿನ ರಂಗೋಲಿಯು ಗೆರೆಯಿಂದ ಪ್ರಾರಂಭವಾಗಿ ಎಲ್ಲಾ ಚುಕ್ಕಿಗಳ

೦೯. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ – ೨೩೪

ಮಧ್ಯೆ ಹಾಯ್ದು ಮತ್ತೆ ಪ್ರಾರಂಭದ ಗೆರೆಗೆ ಬಂದು ಸೇರುತ್ತದೆ. ಎಲ್ಲಿ ಪ್ರಾರಂಭವಾಗಿದೆ, ಎಲ್ಲಿ ಅಂತ್ಯವಾಗಿದೆ ಎಂದು ಕಂಡುಕೊಳ್ಳುವುದು ಕಷ್ಟಸಾಧ್ಯವಾಗಿದೆ. ಚುಕ್ಕೆ ರಂಗೋಲಿ, ಚುಕ್ಕೆ ರಹಿತ ರಂಗೋಲಿಗಳಿಗಿಂತ ಇದು ಸ್ವಲ್ಪ ಕಷ್ಟದ ವಿಧಾನವಾಗಿದೆ. ಈ ಗಂಟಿನ ರಂಗೋಲಿಯನ್ನು ದೊಡ್ಡ ಪ್ರಮಾಣದಲ್ಲಿ ಹಾಕಬೇಕಾದರೆ ಚುಕ್ಕೆಗಳು ಬೇಕೇ ಬೇಕು. ಇಲ್ಲವಾದರೆ ಆಯ ತಪ್ಪುತ್ತದೆ. ಜಾಮಿತಿಯ ಆಕಾರದಲ್ಲಿಯೇ ಹೆಚ್ಚು ಕಂಡುಬರುವಂತಹ ರಂಗೋಲಿಯಿದಾಗಿದೆ. ಇದಕ್ಕೆ ಸಂದು ಚುಕ್ಕೆಯ ರಂಗೋಲಿ ಅಂತಲೂ ಹೇಳಬಹುದು.

೧.೪. ರಂಗೋಲಿಯ ಚಿಹ್ನೆಗಳು

ಭಾರತೀಯ ಚಿತ್ರಕಲೆಯಲ್ಲಿ ಒಂದು ನಿಯಮವಿದೆ. ಪ್ರಕೃತಿಯಲ್ಲಿ ಕಂಡುಬರುವ ಎಲೆ, ಬಳ್ಳಿ, ಮರ, ಹೂ, ಕಾಯಿ, ಶಂಖ, ಚಕ್ರ, ಮಡಿಕೆ, ಕುಡಿಕೆ, ಪ್ರಾಣಿ, ಪಕ್ಷಿ, ಬೆಟ್ಟ, ಗುಡ್ಡ, ನಕ್ಷತ್ರ, ಸೂರ್ಯ, ಚಂದ್ರ ಹೀಗೆ ಮುಂತಾದ ಚಿಹ್ನೆಗಳು, ಪುರಾಣಗಳಲ್ಲಿ ಹೇಳುವ ಅಮೂರ್ತ ಚಿಹ್ನೆಗಳನ್ನು ಮೂರ್ತ ಕಲ್ಪನೆಯಲ್ಲಿ ದೇವತೆ, ರಾಕ್ಷಸ, ಅಸ್ತ್ರ-ಆಯುಧಗಳನ್ನು ಸಂದೃಶ್ಯಗೊಳಿಸುವುದು ಮತ್ತೊಂದು ರೀತಿಯಾಗಿದೆ. ಸಂಕೇತದ ಚಿಹ್ನೆಗಳಾದ ಇವು ಎಲ್ಲಾ ಪ್ರಕೃತಿಯ ಚಿಹ್ನೆಗಳೇ. ಶಿಷ್ಟತೆಯಲ್ಲಿ ಸ್ವಸ್ತಿಕ ಚಿಹ್ನೆ, ಶ್ರೀವತ್ಸ ಚಿಹ್ನೆ, ತ್ರಿರತ್ನ ಚಿಹ್ನೆ, ಚಕ್ರ ಚಿಹ್ನೆ, ಪಂಚಾಂಗಲಾಂಕ, ಕಳಸ, ಕಮಲ, ವೃಕ್ಷ, ಗೋಪುರ ಮುಂತಾದವು ಚಿಹ್ನೆಗಳೆಂದು ಗುರುತಿಸಿಕೊಂಡವು. ಈ ಹಲವಾರು ಚಿಹ್ನೆಗಳು ಚಿತ್ರಕಲಾ ಸಂಯೋಜನೆಗೆ ವಸ್ತುಗಳಾದವು. ಚಿತ್ರಕಲಾವಿದನು ಚಿಹ್ನೆಗಳನ್ನು ತನ್ನ ಕೌಶಲ್ಯದಿಂದ ದುಡಿಸಿಕೊಂಡು ತನ್ನ ಪ್ರತಿಭೆಯನ್ನು ಮೆರೆಯುತ್ತಾನೆ. ಈ ಚಿಹ್ನೆಗಳು ರಂಗೋಲಿ ಕಲಾಪ್ರಕಾರಕ್ಕೆ ಬಂದರೆ, ಇಲ್ಲಿ ತನ್ನದೇಯಾದ ಅರ್ಥಗೊಳ್ಳುತ್ತವೆ, ಆಚರಣೆಯಾಗುತ್ತವೆ. ಅಂತಹ ಕೆಲವು ಚಿಹ್ನೆಗಳನ್ನು ಈ ಕೆಳಗಿನಂತೆ ವಿವರಿಸಬಹುದು.

ಸ್ವಸ್ತಿಕ

ಸ್ವಸ್ತಿಕದಲ್ಲಿ ಎರಡು ವಿಧ. ಒಂದು ಗಂಡು ಮತ್ತೊಂದು ಹೆಣ್ಣು. ಬಲಕ್ಕೆ ತಿರುಗಿದರೆ ಗಂಡು, ಎಡಕ್ಕೆ ತಿರುಗಿದರೆ ಹೆಣ್ಣು. ಆದಿಮಾನವನ ಕಾಲದಲ್ಲಿಯೇ ಈ ಸಂಕೇತ ರಚನೆಯಾಗಿರುವುದು. ಸಂಗನಕಲ್ಲು ಮತ್ತು ಎತ್ತಿನಬೂದಿಹಾಳ್ ಪ್ರಾಗೈತಿಹಾಸಿಕದ ಚಿತ್ರಕಲೆಯ ನೆಲೆಯಲ್ಲಿ ಇದನ್ನು ಕಾಣಬಹುದು. ಅಂದಿನಿಂದ ಇಂದಿನವರೆಗೂ ರಚನೆಗೊಳ್ಳುತ್ತಾ ಬಂದಂತಹ ಚಿಹ್ನೆಯಾಗಿದೆ. ಈ ಚಿಹ್ನೆಯು ಸೂರ್ಯನ ಕಿರಣದಂತೆ ಕಂಡರೂ ಈ ಚಿಹ್ನೆ ಜಾಮಿತಿಯ ಆಯತದ ಮೂರುಭಾಗದ ಲಕ್ಷಣವನ್ನು ತಳೆದಿದೆ. ಈ ಸ್ವಸ್ತಿಕ ಚಿಹ್ನೆಯು ಆಚರಣೆಯಲ್ಲಿ ಮಂಗಳಕರವಾದದ್ದು, ಜೀವನದಲ್ಲಿ ಸುಖ ಶಾಂತಿ ನೀಡುವ ಸೂರ್ಯನ ಪ್ರತಿರೂಪ ಎಂದು ರಚನೆಯ ಹಿನ್ನೆಲೆಯ ಅರ್ಥವನ್ನು ಒಳಗೊಂಡಿದೆ. ಮತ್ತು ಚಿಹ್ನೆಯನ್ನು ಸೃಷ್ಟಿಯ ಆರು ರೂಪಗಳನ್ನು ಅ.ಆ.ಇ.ಈ.ಉ. ಹಾಗೂ ಊ ಈ ಮುಖ್ಯ ಆರು ಸ್ವರಗಳಿಗೆ ಸೂರ್ಯನ

ಕಿರಣಗಳೇ ಸ್ವಸ್ತಿಕ ಚಿಹ್ನೆಯ ರೇಖಾಭುಜಗಳು ಎಂದು ಮತ್ತು ನಾಲ್ಕು ದಿಕ್ಕುಗಳನ್ನೇ ವಿದ್ಯುತ್ ಕೇಂದ್ರವೆಂದು ಸ್ವಸ್ತಿಕ ಮಂಡಲವೆಂದು ಕರೆಯಲಾಯಿತು.[೧೦] ಮತ್ತು ಚತುರ್ಮುಖ ಬ್ರಹ್ಮನ ಸ್ವರೂಪದ ಚಿಹ್ನೆ ಎಂತಲೂ ಹೇಳುತ್ತಾರೆ.

ಚಕ್ರ

ಭಾರತದಲ್ಲಷ್ಟೇ ಅಲ್ಲ, ಇಡೀ ವಿಶ್ವದಲ್ಲಿಯೇ ಚಕ್ರಕ್ಕೆ ಸೂರ್ಯನ ಸಂಕೇತವೆಂಬ ನಂಬಿಕೆ ಇದೆ. ಕೋನಾರ್ಕ್ ಸೂರ್ಯ ದೇವಾಲಯದ ಸುತ್ತಲೂ ಬೃಹತ್ತಾದ ಚಕ್ರಗಳ ಶಿಲ್ಪಗಳಿವೆ. ಚಕ್ರವನ್ನು ಸೂರ್ಯನ ಗತಿ ಹಾಗೂ ಕಾಲದ ಪ್ರತೀಕವಾಗಿ ಸಂಕೇತಿಸಲಾಗಿದೆ. ಮತ್ತು ಭೂಮಿಯು ಕೂಡ ವೃತ್ತಾಕಾರದಲ್ಲಿದೆ. ಭೂಮಿಯು ತಿರುಗಿ ಮೂಲಸ್ಥಾನಕ್ಕೆ ಬರುವಂತೆ ಮನುಷ್ಯ ಜನನವೂ ಕೂಡ ಪುನರಪಿ ಜನನಂ ಪುನರಪಿ ಮರಣಂ ಎಂದು ಸಂಕೇತ ಕೊಡಲಾಗಿದೆ. ವೃತ್ತರೇಖೆಯು ಸೂರ್ಯನ ವೃತ್ತದ ಸಂಕೇತವಾಗಿ, ಒಳಗಿನ ಕಡ್ಡಿ ರೇಖೆಗಳ ಗತಿಯ ಸಂಕೇತವಾಗಿ ಒಟ್ಟಾರೆ ಚಕ್ರ ಚಿಹ್ನೆಯಾಗಿದೆ. ಈ ಚಕ್ರದ ರಚನೆಯು ತುಂಬಾ ಸೂಕ್ಷ್ಮವಾದದ್ದು, ರಚನೆಯಲ್ಲಿ ಸ್ವಲ್ಪ ವಕ್ರವಾದರೂ ಚಕ್ರರೂಪಕ್ಕೆ ಭಂಗ ಬರುತ್ತದೆ. ಆದ್ದರಿಂದ ಮೊದಲಿಗೆ ವೃತ್ತ ರಚನೆಯಲ್ಲಿ ಕಲಾವಿದನು ಹಲವಾರು ಕರಡು ಪ್ರತಿಗಳಿಂದ ಪರಿಣತಿ ಹೊಂದಿ ನಂತರ ಮುಖ್ಯ ಚಕ್ರ ರಚನೆಯನ್ನು ಮಾಡುವುದರಿಂದ ಒಂದು ಸಮರ್ಪಕವಾದ ಚಕ್ರದ ರೂಪವಾಗುತ್ತದೆ. ನಂತರ ಒಳಗಿನ ಕಡ್ಡಿಯ ರೇಖೆಗಳನ್ನು ಅಥವಾ ಪುಷ್ಪವನ್ನು ಸರಳವಾಗಿ ರಚಿಸಬಹುದು.

ಪದ್ಮ । ಕಮಲ

ಪದ್ಮ । ಕಮಲವು ಭಾರತದ ಸಾಹಿತ್ಯ, ದರ್ಶನ ಹಾಗೂ ಕಲೆಯ ಸಮ್ಮಿಶ್ರಣವೆಂದು ಹೇಳಲಾಗಿದೆ. ಪದ್ಮದಲ್ಲಿ 'ಸತ್ಯಂ, ಶಿವಂ, ಸುಂದರಂ'ಗಳ ರೂಪವಿದೆ. ಈ ಪದ್ಮವು ವಿಷ್ಣುವಿನ ನಾಭಿಯಿಂದಲೇ ಮೊದಲು ಉತ್ಪನ್ನವಾಯಿತು. ಬ್ರಹ್ಮತತ್ವದ ಉಗಮಸ್ಥಾನವಾಗಿದೆ. ಪದ್ಮದ ಅಷ್ಟದಳಗಳು ಅಷ್ಟ ದಿಕ್ಕುಗಳ ಪ್ರತೀಕವಾಗಿದೆ. ಈ ಪದ್ಮವು ಸರ್ವವ್ಯಾಪಿಯಾಗಿದೆ.[೧೧] ಕೆಸರಲ್ಲಿ ಹುಟ್ಟಿದರೂ, ಕೆಸರಿಗೆ ತಾಕಿಕೊಳ್ಳದೇ ನಿರ್ಲಿಪ್ತವಾಗಿದೆ. ಈ ಒಂದು ಕಮಲವನ್ನು ಮನುಷ್ಯ ಜೀವನಕ್ಕೂ ಹೋಲಿಕೆ ಕೊಡುವುದರ ಮೂಲಕ ಜೀವನದ ಸಾರ್ಥಕತೆಗೆ ಮಾರ್ಗಸೂಚಕವಾಗಿ ಅನುಭವಿಗಳು ಉದಾಹರಿಸುತ್ತಾರೆ. ಅಷ್ಟೇ ಅಲ್ಲ, ನೋಡುಗನಿಗೆ ಮನಮೋಹಕವಾಗಿ ಗೋಚರಿಸುತ್ತದೆ. ಹಾಗಾಗಿ ಧಾರ್ಮಿಕವಾಗಿ ಶ್ರೀ ಲಕ್ಷ್ಮಿಯ ಆಸನವಿದಾಗಿದೆ ಎನ್ನುವ ಕಲ್ಪನೆ. ಇಂತಹ ಒಂದು ಕಮಲವನ್ನು ರಂಗೋಲಿ ಹಾಕುವುದರಿಂದ ಆ ಕಮಲದ ಮೇಲೆ ಲಕ್ಷ್ಮಿ ಬಂದು ಆಸೀನಳಾಗುವಳೆಂದು ನಂಬಿಕೆ. ಈ ಮೊಗ್ಗಿನ ಕಮಲ, ಅರಳಿದ ಕಮಲ, ಎಲೆ ಸಹಿತ ಕಮಲ,

---

೧೦. ಡಾ. ವಿಶ್ವೇಶ್ವರಿ ತಿವಾರಿ : ರಂಗೋಲಿ ಚಿತ್ರಕಲೆ ಒಂದು ಅಧ್ಯಯನ (ಅ.ಪ್ರ.ಪಿಹೆಚ್.ಡಿ.ಮ.ಪ್ರ), ಪುಟ - ೨೨೦

೧೧. ಅದೇ., ಪುಟ - ೨೫೦

ಲಕ್ಷ್ಮೀ ರಹಿತ ಕಮಲ, ದಳ ಎಂಬ ಕಮಲ ಹೀಗೆ ಕಮಲಗಳನ್ನು ಕುರಿತಂತೆ ಹಲವಾರು ಕಮಲಗಳ ಸಂಯೋಜನೆಯಿಂದ ದೊಡ್ಡ ದೊಡ್ಡ ಗಾತ್ರದ ರಂಗೋಲಿಗಳನ್ನು ಹಾಕುವರು ಮತ್ತು ಬಣ್ಣವನ್ನು ತುಂಬುವರು.

ವೃಕ್ಷ

ಬೋಧಿ ವೃಕ್ಷ, ಕಲ್ಪವೃಕ್ಷ, ಶ್ರೀವೃಕ್ಷ ಹಾಗೂ ಜ್ಞಾನವೃಕ್ಷ ಅಥವಾ ಅಶ್ವತ್ಥವೃಕ್ಷ ರೂಪದಲ್ಲಿ ರಂಗೋಲಿ ಹಾಕುವುದನ್ನು ಕಾಣಬಹುದು. ಈ ವೃಕ್ಷಗಳನ್ನು ಕುರಿತು ಪ್ರಾಚೀನ ಭಾರತದಲ್ಲಿ ಸರ್ವಶ್ರೇಷ್ಠ ವೃಕ್ಷಗಳ ಮಹತ್ವ ಹಾಗೂ ದೇವಸಮಾನವೆಂದು[೧೨] ಮರಗಳನ್ನು ಸುತ್ತುವುದು, ಪೂಜಿಸುವುದು, ತುಳಸಿವೃಕ್ಷದಿಂದ ಮನೆಮುಂದೆ 'ತುಳಸಿ ಕಟ್ಟೆ'ಯನ್ನು ಕಟ್ಟುತ್ತಾರೆ. ಈ ವೃಕ್ಷದಲ್ಲಿ ದೇವಿಯು ನೆಲೆಸುತ್ತಾಳೆ ಎನ್ನುವ ಭಾವನೆಯಿಂದ ತುಳಸಿ ಹಬ್ಬದಂದು ವೃಕ್ಷದ ಕಟ್ಟೆಗೆ ದೇವಿಯ ಚಿತ್ರಗಳನ್ನು ಸಹ ಬಿಡಿಸುತ್ತಾರೆ. ಹಾಗಾಗಿ ವೃಕ್ಷಗಳನ್ನು ಕುರಿತು ಚುಕ್ಕೆ ಅಥವಾ ಚುಕ್ಕೆ ರಹಿತವಾಗಿಯೂ ರಂಗೋಲಿಯುನ್ನು ರಚಿಸುತ್ತಾರೆ. ಈ ವೃಕ್ಷವನ್ನು ಎಲೆ, ಬಳ್ಳಿ, ಹೂಗಳಿಂದ ಸಂಯೋಜನೆಗೊಳಿಸುತ್ತಾರೆ. ಅಥವಾ ಚುಕ್ಕೆಯಿಂದ ವೃಕ್ಷದ ಬುಡದ ಮೇಲಿನ ಎಲೆ ಮತ್ತು ಹೂಗಳ ಸಂಕೇತವಾಗಿ ನಾಲ್ಕು ದಳ, ಐದು ದಳದ ಹೂವನ್ನು ಚುಕ್ಕೆ ಸೇರಿಸುವದರಿಂದಲೂ ಸಂಯೋಜಿಸುತ್ತಾರೆ.

ಇಂತಹ ವೃಕ್ಷಗಳು ಚುಕ್ಕೆರಹಿತ ರಂಗೋಲಿಗಿಂತ ನಿಯಮಿತ ರೇಖೆಯನ್ನು ಚುಕ್ಕೆಯಿಂದ ಚುಕ್ಕೆಗೆ ಸೇರಿಸುವುದರಿಂದ ಆಕಾರವನ್ನು ಪಡೆಯುತ್ತಾ ಪರಿಪೂರ್ಣ ಹಂತವನ್ನು ತಲುಪುತ್ತದೆ. ಚುಕ್ಕೆ ರಹಿತ ರಂಗೋಲಿಯಲ್ಲಿ ನೇರ ರೇಖೆಗೆ ಅವಕಾಶವಿದ್ದು, ನೇರ ಸ್ಮರಣೆಗೆ ಕೆಲಸವಾಗಿರುತ್ತದೆ. ಸ್ವಲ್ಪ ಮಟ್ಟಿಗೆ ನೈಜ ಸ್ವರೂಪದ್ದಾಗಿರುತ್ತದೆ. ಮತ್ತು ವೇಗದಿಂದ ಕೂಡಿದ ರಂಗೋಲಿಯಾಗಿರುತ್ತದೆ. ಇದೇ ರೀತಿಯಲ್ಲಿ ವಿನ್ಯಾಸಾತ್ಮಕವಾದ ಮೀನುಗಳು, ಮಥನ ರೇಖೆಗಳು, ಆಮೆ, ಕಳಸ ಮುಂತಾದ ಚಿಹ್ನೆಗಳನ್ನು ಮೂರು, ನಾಲ್ಕಕ್ಕಿಂತ ಹೆಚ್ಚಾಗಿ ಚಿಹ್ನೆಗಳನ್ನು ಚೌಕ, ತ್ರಿಕೋನ, ಷಟ್ಕೋನ ಮುಂತಾದ ಆಯಾಮದಲ್ಲಿ ಹಾಕಿ ಮಧ್ಯೆ ಬಳ್ಳಿ, ರೇಖೆ ಅಥವಾ ಮತ್ತೊಂದು ಚಿಹ್ನೆಗಳೊಂದಿಗೆ ಸಮತೋಲನದಲ್ಲಿ ಸಂಯೋಜಿಸುತ್ತ ರಂಗೋಲಿಯನ್ನು ಪೂರ್ಣಗೊಳಿಸುತ್ತಾರೆ.

ಜಾಮಿತಿ ಆಕೃತಿಗಳು

ಜಾಮಿತಿ ಆಕೃತಿಗಳಲ್ಲಿ ತ್ರಿಕೋನ, ಷಟ್ಕೋನ, ಪಂಚಕೋನ ಮುಂತಾದ ಚಿಹ್ನೆಗಳನ್ನು ಉಪಯೋಗಿಸಿಕೊಂಡು ರಂಗೋಲಿ ಸಂಯೋಜನೆಗೊಳಿಸಲಾಗುತ್ತದೆ. ಈ ತ್ರಿಕೋನದ ಮತ್ತೊಂದು ವಿಶೇಷವೆಂದರೆ ಎದುರಲ್ಲಿ ಎರಡು ಬಗೆ ಶಿಖರದಂತೆ ತ್ರಿಕೋನವು ಮೇಲ್ಮುಖ ಮಾಡಿದರೆ ಗಂಡು, ಅದು ಕೆಳಮುಖವಾದರೆ ಹೆಣ್ಣು ಎಂಬ ಅರ್ಥದಲ್ಲಿಯೂ ಈ ಚಿಹ್ನೆಯನ್ನು

---

೧೨. ಡಾ. ವಿಶ್ವೇಶ್ವರಿ ತಿವಾರಿ : ರಂಗೋಲಿ ಚಿತ್ರಕಲೆ : ಒಂದು ಅಧ್ಯಯನ (ಅ.ಪ್ರ.ಪಿಹೆಚ್.ಡಿ.ಮ.ಪ್ರ), ಪುಟ – ೨೫೬

[illegible]

[illegible]

[illegible]

[illegible]

[illegible]

ಉಪಯೋಗಿಸುತ್ತಾರೆ. ಈ ಎರಡರ ಸಂಯೋಜನೆಯಿಂದ ರಂಗೋಲಿಯನ್ನು ರಚಿಸುತ್ತಾರೆ. ಇದಕ್ಕೆ ಗಂಡು–ಹೆಣ್ಣು ಸಮಾಗಮದ ಸೂಚಕದ ಸಂಕೇತವೆಂತಲೂ ಹೇಳಲಾಗುತ್ತದೆ. ಹೀಗೆ ಹಲವಾರು ಆಕಾರಗಳ ಸಂಯೋಜನೆಯಲ್ಲಿ ಸಹ ಈ ರಂಗೋಲಿಯನ್ನು ಕಾಣಬಹುದು.

೧.೫. ರಂಗೋಲಿ ಮೂಡಿಸುವ ರೀತಿ

ಈ ರಂಗೋಲಿಯ ಕಲೆಯಲ್ಲಿ ಅಳತೆ ಪಟ್ಟಿ ಇಲ್ಲ, ಕೈವಾರವಿಲ್ಲ, ಕರಗಳೇ ಅದ್ಭುತ ಸೃಷ್ಟಿಯ ಕುಂಚಗಳು. ಮುಷ್ಟಿಯಲ್ಲಿ ಬಂಧಿಸಿಟ್ಟ ಪುಡಿಯನ್ನು ಹೆಬ್ಬೆರಳು ಹಾಗೂ ತೋರುಬೆರಳು ಅಥವಾ ಮಧ್ಯದ ಬೆರಳಿನಿಂದ ನಿಧಾನವಾಗಿ ಬಿಡುತ್ತಾ ಮೂಡಿಸುವ ರೀತಿಯಾಗಿದೆ.

ಆಧುನಿಕ ರೀತಿ

ಈಗ ಕೆಲವರು ರಾಸಾಯನಿಕ ವರ್ಣ ಮತ್ತು ಕೃತ್ರಿಮ ಕಟ್ಟಿಗೆಯ ಕೊಳವೆಗಳಿಂದಲೂ ರಂಗೋಲಿ ಹಾಕುತ್ತಾರೆ. ಇನ್ನು ಕೆಲವರು ತೈಲ ವರ್ಣದಿಂದ ಮನೆಯ ಮುಂದೆ ರಂಗೋಲಿಯಲ್ಲಿ ಕೆಲವು ವಿನ್ಯಾಸಗಳನ್ನು ಬರೆಯುತ್ತಾರೆ. ದಿನನಿತ್ಯ ಅದರ ಮೇಲೆ ನೀರು ಹಾಕಿ ತೊಳೆಯುವುದರಿಂದ ತೈಲವರ್ಣದ ರಂಗೋಲಿ ಸ್ವಚ್ಛವಾಗಿ ಸ್ಪಷ್ಟವಾಗಿ ಕಾಣುತ್ತದೆ.[೧೩] ಮತ್ತು ರೇಡಿಯಂ ಮತ್ತು ಪ್ಲಾಸ್ಟಿಕ್ ಚಿತ್ರವಿನ್ಯಾಸಗಳು ಸಿದ್ಧವಾಗಿ ದೊರೆಯುತ್ತವೆ. ಇವುಗಳು ಅಂಟಿನಿಂದ ಕೂಡಿದ್ದು, ಇದನ್ನು ಬೇಕಾದ ಸ್ಥಳಕ್ಕೆ ಅಂಟಿಸಿದರೆ ಸಾಕು, ರಂಗೋಲಿ ಚಿತ್ರ ಸಿದ್ಧವಾಗುತ್ತದೆ. ಮತ್ತೊಂದು ಪದ್ಧತಿಯು ಸಿಮೆಂಟ್ ಮತ್ತು ಹುರಿ ಮಂಜುಗಳಿಂದಲೂ ಶಾಶ್ವತ ರಂಗೋಲಿ ಹಾಕಬಹುದು. ಮನೆಗೆ ಸಿಮೆಂಟ್ ಲೇಪನ ಮಾಡುವಾಗ ಹಸಿ ಇರುವಾಗಲೇ ಹುರಿಮಂಜುದ್ರವವನ್ನು ಕಾಗದದ ಮೇಲೆ ಲೇಪಿಸಿ ಎರಡು ಗಂಟೆಯ ನಂತರ ತೆಗೆದರೆ ಚಿತ್ರವು ಅಚ್ಚಾಗಿರುತ್ತದೆ. ಇದಕ್ಕೆ ಸ್ವಲ್ಪ ಸ್ವಲ್ಪ ನೀರು ಹಾಕುವುದರಿಂದ ಮತ್ತಷ್ಟು ಗಟ್ಟಿಯಾಗುತ್ತದೆ. ಇದನ್ನು ತೊಳೆದಷ್ಟು ಹೊಳೆಯುತ್ತದೆ.

೧.೬. ನಂಬಿಕೆಗಳು

ಈ ರಂಗೋಲಿಯನ್ನು ಕುರಿತು ಹಳ್ಳಿಯಿಂದ ನಗರದವರೆಗೂ ಹಲವಾರು ನಂಬಿಕೆಗಳನ್ನು ಇಟ್ಟುಕೊಂಡಿದ್ದಾರೆ. ಹೆಚ್ಚಾಗಿ ಶುಭಕಾರ್ಯಕ್ಕೆ ಈ ರಂಗೋಲಿಯನ್ನು ಹಾಕುತ್ತಾರೆ. ಇದು ಅಲ್ಲದೆ ಬೇರೆ ಬೇರೆ ನಂಬಿಕೆಗಳು ಈ ಕೆಳಗಿನಂತಿವೆ. ಈ ರಂಗೋಲಿಯನ್ನು ನಡೆದಾಡುವಂಥ ಸ್ಥಳದಲ್ಲಿ ಹಾಕಬಾರದು. ಈ ರಂಗೋಲಿಯನ್ನು ತುಳಿದರೆ ಪಾಪ ಸುತ್ತಿಕೊಳ್ಳುತ್ತದೆ. ದಿನನಿತ್ಯ ಮನೆಯ ಶುಭದ ಮತ್ತು ಆ ಮನೆಯಲ್ಲಿ ಹೆಣ್ಣುಮಕ್ಕಳು ಇರುವ ಸಂಕೇತವಾಗಿಯೂ ರಂಗೋಲಿಯನ್ನು ಹಾಕುತ್ತಾರೆ. ತಿಥಿಯ ದಿನ ಮನೆಯಲ್ಲಿ ರಂಗೋಲಿಯನ್ನು ಬಿಡಬಾರದು,[೧೪] ಇದ್ದಿಲಿನಿಂದ ರಂಗೋಲಿ ಹಾಕಬಾರದು. ಮನೆಯಲ್ಲಿ ಅಶುಭಕಾರ್ಯ ನಡೆದಾಗ ರಂಗೋಲಿ

---

೧೩. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ – ೨೩೫

೧೪. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ – ೨೨೮

ಹಾಕಬಾರದು, ಮನೆಯಲ್ಲಿ ಪಿತೃಪಕ್ಷದ ಹಿರಿಯರ ಹಬ್ಬದ ದಿನ ರಂಗೋಲಿ ಹಾಕುವುದಿಲ್ಲ, ಅಂದು ಹಿರಿಯರನ್ನು ಆಹ್ವಾನಿಸುತ್ತಾರೆ.[೧೫]

ರಂಗೋಲಿ ಹಾಕಿದರೆ ಹಿರಿಯರ ಆತ್ಮ ರಂಗೋಲಿ ದಾಟಿ ಬರಬಾರದು, ನೀರಿನಿಂದ ರಂಗೋಲಿ ಹಾಕಿದರೆ ಕಷ್ಟ ಬರುತ್ತದೆ, ಸುಣ್ಣದಿಂದ ರಂಗೋಲಿ ಹಾಕಿದರೆ ಸಾಲ ಹೆಚ್ಚಾಗುತ್ತದೆ. ಕಪ್ಪು ಮಸಿ/ ಬೂದಿಯಿಂದ ರಂಗೋಲಿ ಹಾಕಿದರೆ ದೆವ್ವ-ಪ್ರೇತಗಳನ್ನು ಬರಮಾಡಿಕೊಂಡಂತೆ. ಇದರಿಂದ ದೆವ್ವಗಳು ಮನೆಯಲ್ಲಿಯೇ ವಾಸ ಮಾಡುತ್ತವೆ. ಭೂತ ಬಿಡಿಸುವಾಗ ಮಂಡಲದ ರಂಗೋಲಿ ಹಾಕಲೇಬೇಕು, ಇಲ್ಲದಿದ್ದರೆ ಭೂತ ಬಿಡಿಸುವವನನ್ನು ಭೂತಗಳು ಸಾಯಿಸುತ್ತವೆ. ನಾಗರ ಪಂಚಮಿಯಲ್ಲಿ ಮೊದಲ ದಿನ ನಾಗ ಒಳಗೆ ಬರುವಂತೆಯೂ ಮರುದಿನ ಹೊರಗೆ ಹೋಗುವಂತೆಯೂ ಚಿತ್ರ ರಂಗೋಲಿಯನ್ನು ಚಿತ್ರಿಸಬೇಕು.[೧೬] ಲಕ್ಷ್ಮೀದೇವಿ ಮುಂಜಾವಿನಲ್ಲೇ ಮನೆಗೆ ಆಗಮಿಸುತ್ತಾಳೆ. ಸ್ವಾಗತಕ್ಕೆ ಮುಂಬಾಗಿಲ ಮೆಟ್ಟಿಲು, ಅಂಗಲ ಸಾರಿಸಿ ಅಥವಾ ತೊಳೆದು ರಂಗೋಲಿ ಇಡದಿದ್ದರೆ ಅವಳು ಮುಂದಿನ ಮನೆಗೆ ಹೋಗುತ್ತಾಳೆ. ಅಡಿಗೆಯ ಒಲೆಗೆ ರಂಗೋಲಿ ಹಾಕಿ ಅಡಿಗೆ ಪ್ರಾರಂಭಿಸುವುದರಿಂದ ಅಡಿಗೆ ಕೆಡುವುದಿಲ್ಲ. ತಿಂದವರಿಗೆ ಸಂತೃಪ್ತಿಯನ್ನು ನೀಡುತ್ತದೆ. ಹೀಗೆ ಒಂದಲ್ಲ ಒಂದು ನಂಬಿಕೆಯಿಂದ ಈ ರಂಗೋಲಿ ಕಲೆಯು ಮುಂದುವರಿದುಕೊಂಡು ಬಂದಿದೆ.

೧.೭. ರಂಗೋಲಿಯ ಪ್ರಕಾರಗಳು

ಈ ರಂಗೋಲಿ ಕಲೆ ಬಳ್ಳಾರಿ ಜಿಲ್ಲೆಯ ಹಳ್ಳಿಗಿಂತಲೂ ನಗರಗಳಲ್ಲಿಯೇ ಹೆಚ್ಚಾಗಿ ಕಾಣಬರುತ್ತದೆ. ಇತ್ತೀಚಿನ ದಿನಗಳಲ್ಲಿ 'ವಾಸ್ತುಕಲೆ'ಯ ಕಡೆಗೆ ಆಸಕ್ತಿ ಹೆಚ್ಚಾಗುತ್ತಿದೆ. ಜೊತೆ ಜೊತೆಯಲ್ಲಿ ರಂಗೋಲಿಕಲೆಯು ಕೂಡ ಬೆಳೆಯುತ್ತಿದೆ. ದೇವರ ಕೋಣೆ, ಅಡುಗೆಯ ಕೋಣೆ, ತುಳಸಿಕಟ್ಟೆ ಮುಂತಾದವನ್ನು ಯಾವ ದಿಕ್ಕಿನಲ್ಲಿ ಯಾವುದನ್ನು ಕಟ್ಟಬೇಕು, ಕಟ್ಟಿದ ನಂತರ ಮುಂದಿನ ಕ್ರಮವಾಗಿ ತುಳಸಿಯ ಮುಂದೆ, ಮನೆಯ ಮುಂದೆ, ದೇವರ ಹತ್ತಿರ ಎಂತಹ ರಂಗೋಲಿ ಹಾಕಬೇಕು, ಈ ರಂಗೋಲಿ ಮಹತ್ವ ಕುರಿತು ಜ್ಯೋತಿಷಿ, ವಾಸ್ತುಶಾಸ್ತ್ರಜ್ಞರು ಕೇಳುಗರಿಗೆ ಹೇಳುತ್ತಾರೆ. ಆದುದರಿಂದ ನಗರಗಳಲ್ಲಿ ಈ ರಂಗೋಲಿಯ ಕಲೆಯ ಬಗ್ಗೆ ಹೆಚ್ಚು ಆಸಕ್ತಿ ತೋರಿಸುತ್ತಿರುವುದು ಕಂಡುಬರುತ್ತದೆ.

ಮುಖ್ಯವಾಗಿ ಗಮನಿಸುವ ಅಂಶವೆಂದರೆ, ಸಿದ್ಧ ರಂಗೋಲಿಯ 'ಸ್ಟಿಕ್ಕರ್'ಗಳನ್ನು ಬಾಗಿಲು, ದೇವರ ಮುಂದೆ, ಮನೆಯ ಹಾಲ್‌ಗಳಲ್ಲಿ ಅಂಟಿಸುತ್ತಾರೆ. ಮತ್ತು ಕೆಲವು ಸಮಯ ಸಂದರ್ಭದಲ್ಲಿ ಕೆಲವು ರಂಗೋಲಿಗಳನ್ನು ಹಾಕುತ್ತಾರೆ. ಅವು ಈ ಕೆಳಗಿನಂತಿವೆ: ನಿತ್ಯದ ರಂಗೋಲಿ, ಹಬ್ಬದ ರಂಗೋಲಿ, ದೇವರ ಮುಂದೆ ಹಾಕುವ ರಂಗೋಲಿ, ಆರತಿ ತಟ್ಟೆಯ ರಂಗೋಲಿ, ಜಾತ್ರೆಯ

---

೧೫. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ – ೨೨೮

೧೬. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ – ೨೨೮

[illegible]

ರಂಗೋಲಿ, ಮದುವೆಯ ರಂಗೋಲಿ ಮುಂತಾದ ರಂಗೋಲಿಗಳು ಈಗಲೂ ಉಳಿದುಕೊಂಡು ಬಂದಂತಹ ರಂಗೋಲಿಯಾಗಿವೆ.

ನಿತ್ಯದ ರಂಗೋಲಿ

ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಹಾಕುವುದಾಗಿದ್ದು. ಚಿಕ್ಕ ಪ್ರಮಾಣದ ರಂಗೋಲಿಯಾಗಿರುತ್ತವೆ. ಹೂ, ಬಳ್ಳಿ, ಎಲೆ, ಸುರಳಿ, ತ್ರಿಕೋನ, ದೀಪ, ಮೊಗ್ಗು, ಗೊಂಬೆ ಮುಂತಾದವು ಪ್ರತಿದಿನದ ರಂಗೋಲಿಯಾಗಿವೆ.

ಹಬ್ಬದ ರಂಗೋಲಿ

ಆಯಾ ಹಬ್ಬಕ್ಕೆ ತಕ್ಕಂತೆ ಹಬ್ಬದ ಹೆಸರಿಗೆ ಅನುಸಾರವಾಗಿ ರಂಗೋಲಿಯನ್ನು ಹಾಕಲಾಗುತ್ತದೆ. ದೀಪಾವಳಿಯ ಹಬ್ಬದಂದು ದೀಪದ ರಂಗೋಲಿಯನ್ನು ಹಾಕುತ್ತಾರೆ. ರಥಸಪ್ತಮಿಯಂದು ರಥದ ರಂಗೋಲಿ ರಚಿಸುತ್ತಾರೆ. ನಾಗರಪಂಚಮಿಯಲ್ಲಿ ನಾಗರಹಾವಿನ ರಂಗೋಲಿಯನ್ನು ಹಾಕುತ್ತಾರೆ. ಹೀಗೆ ಮುಂತಾದ ಹಬ್ಬಗಳ ರಂಗೋಲಿಯನ್ನು ಕಾಣಬಹುದಾಗಿದೆ.

ದೇವರ ಮುಂದೆ ಹಾಕುವ ರಂಗೋಲಿ

ಗರುಡ, ತುಳಸಿ, ಸೂರ್ಯ, ಚಂದ್ರ, ಪದ್ಮ, ದಂಡ, ಕಲಶ, ಗೋಪಾಳ, ಆನೆ, ಶಂಖ ಚಕ್ರ, ಕೂರ್ಮ, ನಕ್ಷತ್ರ, ದ್ವಾರಪಾಲಕ, ತ್ರಿಶೂಲ, ಬಿಲ್ವಪತ್ರಿ,[೧೭] ಓಂ, ಸ್ವಸ್ತಿಕ್, ಗರುಡ, ಸರ್ಪ, ಕೂರ್ಮಾವತಾರ ಮುಂತಾದ ರಂಗೋಲಿಯನ್ನು ದೇವರ ಮುಂದೆ ಹಾಕಲಾಗುತ್ತದೆ.

ಆರತಿ ತಟ್ಟೆಯ ರಂಗೋಲಿ

ಗೌರಿ ಹುಣ್ಣಿಮೆಯ ದಿನದಂದು ಆರತಿತಟ್ಟೆಗೆ ರಂಗೋಲಿಯನ್ನು ಹಾಕಿ ಹಲವು ವಿನ್ಯಾಸದ ಸಕ್ಕರೆಯ ಗೊಂಬೆಗಳನ್ನು ಇಟ್ಟು ಗೌರಿಯನ್ನು ಬೆಳಗುತ್ತಾರೆ. ದಕ್ಷಿಣ ಕರ್ನಾಟಕದಲ್ಲಿ ಆರತಿತಟ್ಟೆಯ ವಿನ್ಯಾಸವು ಬಹುಮುಖವಾಗಿ ಬೆಳೆದು ಕೆಲವು ಮಹಿಳೆಯರ ಕಲಾಪ್ರತಿಭೆಯ ಪ್ರತೀಕವಾಗಿ, ಸ್ಪರ್ಧಾತ್ಮಕವಾಗಿ ವಿನ್ಯಾಸಗೊಳ್ಳುತ್ತವೆ. ಉದಾಹರಣೆಗೆ, ಶಿರಸಿಯ ಜಯಾ ಎನ್ನುವ ಮಹಿಳೆ ಹೊಲಿಗೆಯಲ್ಲಿ ಆಸಕ್ತಿ ಹೊಂದಿದ್ದು, ಕ್ರಮೇಣ ಕಲಾಕೃತಿ ರಚನೆಯಲ್ಲಿ ಆಸಕ್ತಿ ಬೆಳೆಸಿಕೊಂಡರು. ಶಿರಸಿಯ ವಿದ್ಯಾಗಿರಿಯಲ್ಲಿ ವಾಸವಾಗಿರುವ ಇವರು ಗೃಹಿಣಿಯಾಗಿ ಮನೆಕೆಲಸದೊಂದಿಗೆ ಹತ್ತಿ, ಮಣಿ, ಹಿಂಡ್ಲೆ, ಸೌತೆ, ಬೂದಕುಂಬಳ, ಬೀಜ ಮತ್ತು ಬೆಂಕಿಕಡ್ಡಿ, ಬಳೆಗಳನ್ನು ಬಳಸಿ ಆರತಿ ತಟ್ಟೆಯನ್ನು ಸಿಂಗರಿಸುತ್ತಾರೆ.

ಜಾತ್ರೆಯ ರಂಗೋಲಿ

ಜಾತ್ರೆಯಲ್ಲಿಯೂ ಹಲವು ವಿನ್ಯಾಸದ ರಥದ ಚಿತ್ರ, ಹೂ, ಪಲ್ಲಕ್ಕಿ ಮುಂತಾದವನ್ನು ರಂಗೋಲಿಯ ಪುಡಿಗಳಿಂದ ವಿನ್ಯಾಸ ಮಾಡಲಾಗಿರುತ್ತದೆ.

---

೧೭. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ – ೨೪೧

ಮದುವೆಯ ರಂಗೋಲಿ

ಮದುವೆಯ ಮನೆಗಳಲ್ಲಿ ಕರಿಯ ಕಂಬಳಿಯ ಮೇಲೆ ಅಕ್ಕಿಯಿಂದ ಸೂರ್ಯ, ಚಂದ್ರರನ್ನು ಒಂದು ಚೌಕದಲ್ಲಿ ಹಾಕುವುದು, ಹುರಿಮಂಜು, ಸುಣ್ಣದಿಂದ ಹಸ್ತದ ಚಿತ್ರಗಳನ್ನು ಒತ್ತುತ್ತಾ ಅಂಗೈ ಛಾಯೆ ಗೋಡೆಗಳ ಮೇಲೆ ತರುತ್ತಾರೆ. ಈ ಸಂದರ್ಭದಲ್ಲಿ ಬರೆಯುವ ರಂಗೋಲಿಯ ಮತ್ತೊಂದು ಮುಖಕ್ಕೆ 'ಹಸೆ' ಬರೆಯುವುದು ಎಂತಲೂ ಹೇಳುತ್ತಾರೆ.

ಸುಗ್ಗಿಯ ರಂಗೋಲಿ

ಈ ರಂಗೋಲಿಯನ್ನು ರಾಶಿ ಮಾಡುವಾಗ ಧಾನ್ಯದ ರಾಶಿಯ ಮೇಲೆ ಹಾಕಲಾಗುತ್ತದೆ. ದೃಷ್ಟಿ ಬೀಳಬಾರದೆಂದು ಚಿಕ್ಕ ಮಕ್ಕಳ ಗಲ್ಲದ ಮೇಲೆ, ಕಣ್ಣಿನ ಕೆಳಗೆ ಕಾಡಿಗೆ ಹಚ್ಚುವುದಿಲ್ಲವೇ ಹಾಗೆಯೇ ಮುತ್ತಿನಂತಹ ಜೋಳದ ರಾಶಿಗೆ ದೃಷ್ಟಿ ಬೀಳಬಾರದೆಂದು, ಕಣಾಸರೆ ಆಗಬಾರದೆಂದು ಕರ್ದುಂಟು ಹಾಕುವ ಪದ್ಧತಿ ಎಂದು ನಂಬಿಕೆ. ಈ ನಂಬಿಕೆ ಏನೇ ಇರಲಿ, ಚಿತ್ರದ ಪದ್ಧತಿ ಹಾಕುವ ರೇಖೆ ತುಂಬ ಸಾಹಸಮಯ. ಜಾರುವಂತಹ ಧಾನ್ಯಗಳ ಮೇಲೆ ಎಲ್ಲಿಯೂ ಕೈ ತಾಕದಂತೆ ನಿರೀಕ್ಷಿತ ಚಿತ್ರವನ್ನು ಹಾಕುವುದು ಕಷ್ಟಸಾಧ್ಯ. ಇದಕ್ಕೆ ದೃಷ್ಟಿ ಬೀಳಬಾರದು ಎಂದು ಕರಿಯ ಪುಡಿಯಿಂದ ರಂಗೋಲಿ ಹಾಕುವ ನಂಬಿಕೆಯಿದ್ದು, ಎಷ್ಟು ಸತ್ಯವೋ ಗೊತ್ತಿಲ್ಲ. ಆದರೆ ಹಿಂದಣ ಧಾನ್ಯಗಳ ಬಣ್ಣಕ್ಕೆ ಸರಿಹೊಂದುವಂತಹ ಕಪ್ಪನ್ನು ಆಯ್ದುಕೊಂಡಿದ್ದು ಗಮನಿಸಬಹುದು. ಬಿಳಿಬಣ್ಣದ ರಂಗೋಲಿ ಧಾನ್ಯಗಳು ಒಂದೇ ಆಗಿ ಸ್ಪಷ್ಟ ರೂಪ ಕಾಣುವುದಿಲ್ಲ ಎನ್ನುವ ಉದ್ದೇಶವೂ ಆಗಿರಬಹುದು. ಇಲ್ಲಿ ಎತ್ತು, ಚಂದ್ರ, ನೇಗಿಲು ಎಲ್ಲವನ್ನೂ ನೈಜವಾಗಿ ಚಿತ್ರಿಸುವ ಯತ್ನ ಮಾಡಲಾಗುತ್ತದೆ. ಇವುಗಳಲ್ಲದೆಯೇ ನಿರ್ದಿಷ್ಟವಾದ ರಂಗೋಲಿ, ತಿಂಗಳ ರಂಗೋಲಿ, ಚಾತುರ್ಮಾಸದ ರಂಗೋಲಿ, ದೀಕ್ಷಾ ಸಂದರ್ಭದ ರಂಗೋಲಿ, ಶೇಡಿಯ ರಂಗೋಲಿ, ನೀರಿನ ರಂಗೋಲಿ, ನವಗ್ರಹ ಶಾಂತಿಯ ರಂಗೋಲಿ, ವ್ಯಾಧಿ ನಿವಾರಣೆಯ ರಂಗೋಲಿ, ಗೃಹಶಾಂತಿಯ ರಂಗೋಲಿ, ಭೂತ ಬಿಡಿಸುವ ರಂಗೋಲಿ, ಚಾಡಿಯ ರಂಗೋಲಿ, ಮೋಡಿಯಾಟದ ರಂಗೋಲಿ, ಸ್ಮಶಾನದ ರಂಗೋಲಿ[೧೮] ಮುಂತಾದ ರಂಗೋಲಿ ಇರುವುದಾಗಿ ವಿದ್ವಾಂಸರು ಸ್ಪಷ್ಟೀಕರಿಸಿದ್ದಾರೆ.

ಹೀಗೆ ಎಷ್ಟೋ ಆಚರಣೆಗಳಲ್ಲಿ ರಂಗೋಲಿಯನ್ನು ಕೈ ಬಿಡಲಾಗಿದೆ. ಮತ್ತು ಹೀಗಿರುವ ರಂಗೋಲಿಕಲೆ ಮುಂದಿನ ದಿನಗಳಲ್ಲಿ ಕಾಣೆಯಾಗಬಹುದು. ಇಂತಹ ಕಲೆಗಳು ನಮ್ಮ ನಾಡಿನ ಸಂಸ್ಕೃತಿಯ ಪ್ರತೀಕವಾಗಿವೆ. ಆದುದರಿಂದ ಈ ಕಲೆಯನ್ನು ಉಳಿಸಲು ಪ್ರಯತ್ನಿಸಬೇಕಾಗಿದೆ. ಈ ಪ್ರಯತ್ನದ ಅಂಶಗಳನ್ನು ಪಟ್ಟಿ ಮಾಡಲಾಗಿದೆ.

೧. ರಂಗೋಲಿ ಸಂಗ್ರಹವಾಗಬೇಕು.

೨. ಶಾಲಾ-ಕಾಲೇಜುಗಳು ವರ್ಷಕ್ಕೊಮ್ಮೆ ವಿದ್ಯಾರ್ಥಿಗಳ ಪತ್ರಿಕೆ ಪ್ರಕಟಿಸುತ್ತವೆ. ಅಲ್ಲಿ ರಂಗೋಲಿಗೂ ಪುಟ ಮೀಸಲಿಟ್ಟರೆ, ವಿದ್ಯಾರ್ಥಿಗಳಲ್ಲಿ ಆಸಕ್ತಿ ಹೆಚ್ಚುತ್ತದೆ.

---

೧೮. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ – ೨೪೮

[illegible]

ನೆಲ ಗೊಡೆಯ ಮೇಲಿನ ಚಿತ್ರಕಲೆ



ಸುಗ್ಗಿಯ ರಂಗೋಲಿ



ದೇವರ ಮುಂದೆ ಹಾಕುವ ರಂಗೋಲಿ



ದೀಪದ ರಂಗೋಲಿ

೩. ಶಾಲಾ–ಕಾಲೇಜುಗಳಲ್ಲಿ ನಡೆಯುವ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ರಂಗೋಲಿ ಸ್ಪರ್ಧೆ ಏರ್ಪಡಿಸಬೇಕು.

೪. ಹೆಂಗಳೆಯರು ಸೇರುವ ಜಾಗದಲ್ಲೂ ಸ್ಪರ್ಧೆ ನಡೆಸಬಹುದು. ಉದಾ : ಕಾರ್ಪೊರೇಷನ್ ಹೊಲಿಗೆ ತರಬೇತಿ ಕೇಂದ್ರಗಳು, ಭಜನಾ ಮಂದಿರ, ಮಹಿಳಾ ಮಂಡಳಿ ಇತ್ಯಾದಿ.

೫. ಮಹಿಳೆಯರು ಸೇರುವ ಕಡೆ ರಂಗೋಲಿ ಶಿಬಿರಗಳನ್ನು ನುರಿತ ಕಲಾವಿದರಿಂದ ನಡೆಸಬಹುದು.

೬. ಮಕ್ಕಳ ಬೇಸಿಗೆ ಶಿಬಿರಗಳಲ್ಲಿ ರಂಗವಲ್ಲಿಯನ್ನು ಒಂದು ಭಾಗವಾಗಿ ಪರಿಗಣಿಸಿ ತರಬೇತಿ ಕೊಡಿಸಿ, ಶಿಬಿರಾಂತ್ಯದಲ್ಲಿ ಸ್ಪರ್ಧೆ ನಡೆಸಬಹುದು.

೭. ಶಾಲಾ–ಕಾಲೇಜುಗಳಲ್ಲಿ ಕುಶಲ ರಂಗೋಲಿ ಕಲಾವಿದರಿಂದ ೩–೪ ದಿನ ತರಬೇತಿ ಕೊಡಿಸಿ, ನಂತರ ಸ್ಪರ್ಧೆ ಏರ್ಪಡಿಸಿದರೆ ಉತ್ತಮ.

ಹೀಗೆ ಹಲವು ಯೋಜನೆಗಳಿಂದ ರಂಗೋಲಿ ಕಲೆಯನ್ನು ಉಳಿಸಿ ಕಾಯ್ದುಕೊಳ್ಳಬಹುದು.

೨.೦. ಹಬ್ಬ ಹುಣ್ಣಿಮೆಯಲ್ಲಿ ಬರೆಯುವ ಚಿತ್ರಗಳು

ಕಾರಹುಣ್ಣಿಮೆಯ ದಿನದಂದು ಎತ್ತಿನ ಕರಿ ಹರಿಯಲಾಗುತ್ತದೆ. ಅಂದಿನ ದಿನದಂದು ಕರಿಯಲ್ಲಿ ಭಾಗವಹಿಸುವ ಎತ್ತುಗಳ ಮೈ ಮೇಲೆ ವೃತ್ತ ಚಂದ್ರಾಕೃತಿಯನ್ನು ಹಾಕುವುದು. ಮತ್ತು ಎತ್ತಿನ ಕೋಡುಗಳಿಗೆ ಹೂಬಳ್ಳಿಯನ್ನು ಕೋಡಿನ ವಿನ್ಯಾಸಕ್ಕೆ ಅನುಗುಣವಾಗಿ ಕೆಳಗಿನ ಭಾಗದಿಂದ ಕೋಡಿನ ತುದಿಯ ಭಾಗದವರೆಗೆ ದೊಡ್ಡದಿಂದ ಸಣ್ಣಗಾತ್ರಕ್ಕೆ ವಿನ್ಯಾಸಗೊಳಿಸಲಾಗುತ್ತದೆ. ಇಲ್ಲಿ ಹೆಚ್ಚಾಗಿ ಮೂಲವರ್ಣಗಳಾದ ಹಳದಿ, ಕೆಂಪು ಮತ್ತು ನೀಲಿ ಬಣ್ಣಗಳು ಹೆಚ್ಚಿನ ಪ್ರಮಾಣದಲ್ಲಿ ಲೇಪನಗೊಳ್ಳುತ್ತದೆ.

೩.೦. ಮದುವೆಯ ಚಿತ್ರಗಳು

ಮದುವೆಯ ಸಂದರ್ಭದಲ್ಲಿ ಮದುಮಗಳನ್ನು ಮಾಡುವ ಮತ್ತು ತಾಳಿ ಕಟ್ಟುವಾಗ ಅಕ್ಕಿಯಿಂದ ಹೂ ಮತ್ತು ಸೂರ್ಯ, ಚಂದ್ರನನ್ನು, ಜಾಮಿತಿಯ ಚೌಕಾಕೃತಿಯಲ್ಲಿ ಎರಡು ಭಾಗ ಮಾಡಿಕೊಂಡು ಸಂಯೋಜನೆಗೊಳಿಸುತ್ತಾರೆ. ಮತ್ತೊಂದು ರೀತಿ ಚಿತ್ರವಾದ 'ಚಟ್ಟು' ಬಡಿಯುವುದು ಎನ್ನುವ ಹೆಸರಲ್ಲಿ ಮದುವೆಯ ಮುಂದಿನ ಹಿಂದಿನ ದಿನದಂದು ಹುರಿಮಂಜು ಮತ್ತು ಸುಣ್ಣದಿಂದ ಮಂದವಾಗಿ ಕಲಕಿ ಅದರಲ್ಲಿ ಕೈಯನ್ನು ಅದ್ದಿ ಗೋಡೆಗೆ ಒತ್ತುವುದರಿಂದ ಅಂಗೈಯ ಚಿತ್ರ ಮುದ್ರಿಸುವ ಮೂಲಕ ಹುರಿಮಂಜು ನಂತರ ಸುಣ್ಣದ ಮುದ್ರೆಗಳನ್ನು ಒಂದರ ನಂತರ ಮತ್ತೊಂದು ಮೂಡಿಸುತ್ತಾ ಸಾಗುವುದು. ಈ ಮೂಡಿಸುವುದರಿಂದ ಇದು ಮದುವೆಯ ಚಿಹ್ನೆಯಾಗಿ ಮತ್ತು ಗೋಡೆಯ ವಿನ್ಯಾಸವಾಗುತ್ತದೆ. ಇದು ಹಸೆಯ ಪ್ರಕಾರವಾಗಿದೆ. ಆದರೆ ಹಸೆ ಇನ್ನಿತರ ವಿನ್ಯಾಸಗಳು ಈ ಬಳ್ಳಾರಿ ಜಿಲ್ಲೆಯಲ್ಲಿ ಕಂಡುಬರುವುದಿಲ್ಲ. ಕಂಡುಬಂದರೂ

ಮದುವೆ ಚಿತ್ರಗಳು



ಕಂಬಳಿಯ ಮೇಲಿನ ಅಕ್ಕಿಯ ಚಿತ್ರ



ಮದುವೆ ಮನೆಯ ಹಸ್ತ ವಿನ್ಯಾಸದ ಚಿತ್ರ

ಮದುವೆ ಚಿತ್ರಗಳು



ಮದುವೆ ಚಿತ್ರಗಳು



ಮದುವೆಯ ಸಂದರ್ಭದಲ್ಲಿ ಅಲ್ಲ, ಅಭ್ಯಾಸವಾಗಿ, ಹವ್ಯಾಸವಾಗಿ ಕಲಾವಿದರು ಕನ್ನಡ ವಿಶ್ವವಿದ್ಯಾಲಯದ ಭುವನವಿಜಯದಲ್ಲಿ ಬಂದಗದ್ದೆ ರಾಧಾಕೃಷ್ಣರು ರಂಗೋಲಿ ವಿನ್ಯಾಸಗೊಳಿಸಿದ್ದಾರೆ. ಕಂಪ್ಲಿಯ ಶಿಲ್ಪಾರವರು ಹಲವಾರು ಕಾಗದ ಮಾಧ್ಯಮದಲ್ಲಿ ಚಿತ್ರಿಸಿದ್ದಾರೆ.

II ಬಟ್ಟೆಯ ಮೇಲಿನ ಚಿತ್ರಕಲೆ

ಈ ಒಂದು ಕಲೆಯಲ್ಲಿ ಬಟ್ಟೆಯ ಮಾಧ್ಯಮವಾಗಿ ಉಪಯೋಗಿಸಿಕೊಂಡು ಇದರ ಮೇಲೆ ಬಣ್ಣ ಬಣ್ಣದ ಆಕಾರಗಳನ್ನು ವಿವಿಧ ದಾರಗಳಿಂದ ರಚಿಸುವುದು. ಅಂತಹವುಗಳಲ್ಲಿ ಮೇಟಿ ಬಟ್ಟೆ, ಬಟ್ಟೆ ಮೇಲಿನ ಕಸೂತಿಯು ಈ ಬಟ್ಟೆಯ ಮೇಲಿನ ಚಿತ್ರಕಲೆಗೆ ಸೇರಿವೆ.

೧.೦ ಹೆಣಿಗೆಯ ಚಿತ್ರಕಲೆ

೧. ಕಸೂತಿ

ಕೈಗಳು ಯಾವುದೇ ಒಂದು ಕಚ್ಚಾ ಸಾಮಗ್ರಿಗಳಾದ ಕಲ್ಲು, ಹರಳು, ದಾರ, ಕ್ರೋಶ, ವೈಯರ್ ಯಾವುದೇ ವಸ್ತುವಿನ ಮೂಲಕ ಹೆಣಿಗೆಯ ಮೂಲಕ ವಿನ್ಯಾಸಗೊಳಿಸುವ ಉದ್ದೇಶದ ಹಿನ್ನೆಲೆಯಲ್ಲಿ ಆಕರ್ಷಕವೂ ಉಪಯುಕ್ತವೂ ಆಗುವಂತೆ ಒಂದು ವಸ್ತುವಾಗಿ ರೂಪಿಸುವ ಕುಶಲತೆಯನ್ನೇ ಕಸೂತಿ ಎನ್ನಬಹುದು. ಇವುಗಳಲ್ಲಿ ಎರಡು ವಿಧಗಳನ್ನಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ.

೧.೧. ಬಟ್ಟೆ ಸಹಿತ ಕಸೂತಿ ಚಿತ್ರಕಲೆ

ಬಟ್ಟೆಯ ಮೇಲೆ ಸೂಜಿ, ವಿವಿಧ ಬಣ್ಣದ ದಾರ, ಕೆಲವು ಮಿಂಚಿನ ವಸ್ತುಗಳು, ಇತ್ಯಾದಿ ವಸ್ತುಗಳಿಂದ ವಿನ್ಯಾಸಗೊಳಿಸುವ ಉದ್ದೇಶದ ಹಿನ್ನೆಲೆಯಲ್ಲಿ ತಯಾರಿಸುವಂತಹ ಕಲೆಯಾಗಿದೆ.

ಸಂಡೂರು ಕರಕುಶಲ ಕೇಂದ್ರ

ಅತ್ಯಲ್ಪ ಸಲಕರಣೆಗಳನ್ನು ಉಪಯೋಗಿಸಿ, ಅತ್ಯಧಿಕ ಪ್ರಮಾಣದ ತಾಳ್ಮೆಯಿಂದ ದುಡಿದು ಸಾಧಿಸಬೇಕಾದ ಈ ಕಲೆಯು ಸೌಂದರ್ಯಾನುಸಂಧಾನದ ಒಂದು ಪ್ರಕಾರವಾಗಿರುವುದರಿಂದ ಇದರ ಕಲಾತ್ಮಕ ಮೌಲ್ಯವು ದೊಡ್ಡದು. ಈ ಕಸೂತಿ ಕಲೆಯು ಅತಿ ಸೂಕ್ಷ್ಮ, ಆಕರ್ಷಕ ಹಾಗೂ ಕಠಿಣವೂ ಹೌದು. ಸೂಜಿ–ದಾರ ಹಿಡಿದು ಬಟ್ಟೆಗಳ ಮೇಲೆ ನಮ್ಮ ದೇಶದ ಸಾಂಸ್ಕೃತಿಕ ಪರಂಪರೆಯ ಚಿತ್ತಾರಗಳನ್ನು ಮೂಡಿಸುವಲ್ಲಿ ನಮ್ಮ ಮಹಿಳೆಯರು ಪ್ರಖ್ಯಾತರು. ಈ ಕಸೂತಿ ಕಲೆ ಬಹುದೀರ್ಘವಾದ ಇತಿಹಾಸವನ್ನು ಹೊಂದಿದೆ. ಮೆಹೆಂಜೊದಾರೋದಲ್ಲಿ ದೊರೆತ ಕಂಚಿನ ಸೂಜಿಗಳನ್ನು ಬಹುಶಃ ಕಸೂತಿಗಾಗಿಯೇ ಉಪಯೋಗಿಸುತ್ತಿರಬೇಕು ಎಂದು ವಿದ್ವಾಂಸರಾದ ಡಾ. ಎಸ್. ಸಿ. ಪಾಟೀಲರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಮತ್ತು ಸಿಂಧೂ ನದಿ ಹಾಗೂ ತತ್ಕಾಲೀನ ನಾಗರಿಕತೆಗಳ ಶೋಧನೆಯಲ್ಲಿ ದೊರೆತಿರುವ ಅನೇಕ ಉಡುಪುಗಳಲ್ಲಿ ಉತ್ಕೃಷ್ಟವಾದ

ಕಸೂತಿಯ ನಮೂನೆಗಳಿವೆ[೧೯] ಎನ್ನಲಾಗುತ್ತದೆ. ಭಾರತದ ಕಸೂತಿಯಲ್ಲಿ ಚಿನ್ನದ ಎಳೆ ಹಾಗೂ ರತ್ನಗಳನ್ನು ಉಪಯೋಗಿಸುತ್ತಿದ್ದುದನ್ನು ಮೆಗಾಸ್ಥನೀಸ್ (ಕ್ರಿ.ಪೂ. ३२೦) ಹೇಳುತ್ತಾನೆ. ಮತ್ತು ಬಾಣಭಟ್ಟನ ಹರ್ಷಚರಿತ್ರೆಯಲ್ಲಿ ರಾಜಾ ಹರ್ಷನ ಬಟ್ಟೆಗಳನ್ನು ವಿವರಿಸುವಾಗ ನೇತ್ರವಸ್ತ್ರದ್ದೊಂದು ಉಲ್ಲೇಖ ಬಂದಿದೆ. ಹಾಗೆಂದರೆ ಚಿನ್ನದ ಜರಿಯ ಕೆಲಸ ಮಾಡಿದ ನವಿರಾದ ಬಟ್ಟೆ. ಹಿಂದೆ ಕಸೂತಿ ಹಾಕುವ 'ಪೇಳಸ್ಕರಿ' ಎಂದು ಕರೆಯಲ್ಪಡುವ ಕಸಬುದಾರ ಹೆಂಗಸರು ಇದಕ್ಕಾಗಿ ಇರುತ್ತಿದ್ದರಂತೆ ಎಂದು ಹೇಳಲಾಗುತ್ತದೆ. ಮನುಷ್ಯ ಬಟ್ಟೆ ತೊಟ್ಟುಕೊಳ್ಳಲು ಪ್ರಾರಂಭಿಸಿದಾಗಿನಿಂದ ಕಸೂತಿ ಕಲೆಯ ಪ್ರಜ್ಞೆ ಜಾಗೃತವಾಯಿತು ಎನ್ನಬಹುದು. ಏಕೆಂದರೆ ಆಭರಣ ಮತ್ತು ವಾಸ್ತುಶಿಲ್ಪಗಳಲ್ಲಿ ಕುಸರಿಕಲೆಯನ್ನು ನೋಡಿದರೆ ವಾಸಮಾಡುವಂಥ ಸ್ಥಳವನ್ನು ಸೌಂದರ್ಯಗೊಳಿಸುವ ಮಾನವ ಪ್ರಥಮತಃ ತನ್ನನ್ನು ಸೌಂದರ್ಯಯುತವಾಗಿ ಕಾಣಿಸಿಕೊಳ್ಳುವಲ್ಲಿ ತೊಡಗಿದ ಎನ್ನುವುದರಲ್ಲಿ ಸಂದೇಹವಿಲ್ಲ.

ಕಸೂತಿಯಲ್ಲಿ ಹಲವು ಪ್ರಕಾರಗಳಿದ್ದು, ಉಡುವ ವಸ್ತ್ರಗಳಿಂದ ಹಿಡಿದು ಕಿಟಕಿ, ಬಾಗಿಲುಗಳ ಪರದೆಗಳು, ದಿಂಬುಗಳ ಕವರುಗಳು, ಸೋಫಾ ಮತ್ತು ಮೇಜುಗಳ ಮೇಲಿನ ಕವರ್‌ಗಳು, ಇಷ್ಟೇ ಅಲ್ಲದೇ ಗೃಹಕೃತ್ಯದ ಬಳಕೆಯ ಶಾಲು, ಕರವಸ್ತ್ರ, ಶರ್ಟ್, ಹೊದ್ದುಕೊಳ್ಳುವ ಬಟ್ಟೆ, ತೊಡುವ ಪೋಷಾಕುಗಳು ಹೀಗೆ ಎಲ್ಲಾ ಅರಿವೆ ಶೃಂಗಾರ ಅಥವಾ ಅಲಂಕಾರವೇ ಕಸೂತಿ ಕೈಗಾರಿಕೆಯ ಉದ್ದೇಶವಾಗಿದೆ. ಆದರೆ ವೇಗವಾಗಿ ಸಾಗುತ್ತಿರುವ ಜೀವನಶೈಲಿಯೊಂದಿಗೆ ಕಸೂತಿಗೆ ಬೇಕಾಗುವ ತಾಳ್ಮೆ, ಸಮಾಧಾನ, ವ್ಯವಧಾನಗಳು ಈ ಕಾಲಕ್ಕೆ ಸರಿಹೊಂದುತ್ತಿಲ್ಲ. ಆದ್ದರಿಂದ ಇದಕ್ಕೆ ಸರಿ ಹೊಂದುವಂತೆ ಯಂತ್ರಗಳನ್ನು ಮಾನವ ತಯಾರಿಸಿದನು. ಈ ಯಂತ್ರಗಳಿಂದ ಸಾಧಿಸಹೊರಟಿದ್ದಾನೆ.

ಈ ಯಂತ್ರದಿಂದ ಸಾಧ್ಯವಿಲ್ಲದ ಕೆಲವು ಕಸೂತಿ ಕೆಲಸಗಳನ್ನು ಮಾತ್ರ ಮಹಿಳೆಯರು ಮಾಡುತ್ತಾರೆ. ಈ ಕಸೂತಿ ತೆಗೆದುಕೊಂಡಂತಹ ಕಾಲಾವಧಿಯನ್ನು ಹಣದಿಂದ ಭರಿಸುತ್ತಾರೆ. ಅಂದರೆ ಯಂತ್ರವು ಮೂರು ತಾಸಿನಲ್ಲಿ ಕಸೂತಿ ತಯಾರಿಸಿ ೧೦೦೦ ರೂ.ಗೆ ಮಾರಾಟವಾದರೆ ಮಹಿಳೆ ಕೈಯಿಂದ ಎರಡು ದಿನದಿಂದ ಮೂರು ದಿನಗಳವರೆಗೆ ಕಾಲಾವಧಿಯನ್ನು ತೆಗೆದುಕೊಂಡು ತಯಾರಿಸುವ ಕಸೂತಿಯಿಂದ ಕೂಡಿದ ವಸ್ತುವಿಗೆ ಸುಮಾರು ३೦೦೦ದಿಂದ ೪-೫ ಸಾವಿರದವರೆಗೂ ಅದರ ದರವಿರುತ್ತದೆ. ಇಂತಹ ಕಲೆಗೆ ಹೆಸರುವಾಸಿಯಾದ ಕಸೂತಿ ಕೇಂದ್ರ ಸಂಡೂರಿನಲ್ಲಿದೆ. ಈ ಸಂಡೂರು ಕರಕುಶಲ ಕೇಂದ್ರವು ನಾಲ್ಕು, ಐದು ಮಹಿಳೆಯರಿಂದ ಪ್ರಾರಂಭವಾಗಿ ಇಂದು ಜನಪ್ರಿಯ ಕರಕುಶಲ ಕೇಂದ್ರವಾಗಿದೆ. ಶ್ರೀಮತಿ ಮಹಾಲಕ್ಷ್ಮಿಯವರು ೧೯೮೮-೮೫ರಲ್ಲಿ 'ಕನ್ನಡಿ ಮತ್ತು ಕಸೂತಿ ಘಟಕ, ಸಂಡೂರು ಕುಶಲಕಲಾಕೇಂದ್ರ' ವೆಂದು ಸ್ಥಾಪಿಸಿದರು. ನಂತರ ಈ ಕೇಂದ್ರವನ್ನು ಇಲ್ಲಿಯ ರಾಜಮನೆತನದವರಾದ ಶ್ರೀ ಎಂ.ವೈ.

೧೯. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ – ೧೪३

ಘೋರ್ಪಡೆ ಅವರು ಈ ಕೇಂದ್ರವನ್ನು ಗ್ರಾಮೀಣ ಮಹಿಳೆಯರಿಗೆ ಉದ್ಯೋಗ ಅವಕಾಶ ಕಲ್ಪಿಸಿಕೊಡುವುದಕ್ಕಾಗಿ (ಸ್ಮಯೋರ್) ಸಂಡೂರು ಮ್ಯಾಂಗನೀಸ್ ಮತ್ತು ಅಯರನ್ ಓರ್ಸ್ ಲಿಮಿಟೆಡ್ ಕಂಪನಿಯಿಂದ ೧೯೮೮ರಲ್ಲಿ ಒಂದು ಸಂಘವೆಂದು ನೋಂದಾಯಿಸಿದರು. ಎಂ.ವೈ. ಘೋರ್ಪಡೆಯವರನ್ನು ಈ ಕೇಂದ್ರದ ಮುಖ್ಯ ಬಿಂದು ಎಂದು ಪರಿಗಣಿಸಲಾಗಿದೆ.

ಘೋರ್ಪಡೆಯವರ ನಾಯಕತ್ವದಲ್ಲಿ ಸ್ಮಯೋರ್ ಕಂಪನಿಯವರು ಈ ಕೇಂದ್ರವನ್ನು ಪ್ರಾಯೋಜಿಸಿ ಉತ್ತೇಜನ ನೀಡಿದ್ದಾರೆ. ಕರಕುಶಲತೆಯ ತರಬೇತಿ, ಅಭಿವೃದ್ಧಿಗೆ ಪ್ರೋತ್ಸಾಹಿಸಿ ಕಲಾವಿದರ ಅವಶ್ಯಕತೆಗಳನ್ನು ಹಾಗೂ ಸಮಾಜದ ಹಿಂದುಳಿದ ವರ್ಗದವರಿಗೆ ಆರ್ಥಿಕವಾಗಿ ನೆರವಾಗುವುದರೊಂದಿಗೆ ಈ ಒಂದು ಕಸೂತಿಕಲೆಯನ್ನು ಉಳಿಸಿ ಪೋಷಿಸುವುದು ಈ ಕೇಂದ್ರದ ಮುಖ್ಯ ಉದ್ದೇಶವಾಗಿದೆ. ಮತ್ತು ಈ ಕೇಂದ್ರವು ಒಂದು ಹೆಜ್ಜೆ ಮುಂದೆ ಹೋಗಿ ತರಬೇತಿದಾರರನ್ನು ಈ ಕೇಂದ್ರವು ನೇಮಕ ಮಾಡಿಕೊಂಡು ಇವರ ಮೂಲಕ ಪರಂಪರಾಗತ ಕುಶಲಕರ್ಮಿಗಳಿಗೆ ಸರ್ಕಾರದ ನಾಬಾರ್ಡ್ ಯೋಜನೆಗಳ ಮೂಲಕ ತರಬೇತಿ ನೀಡಲಾಗುತ್ತಿದ್ದು, ಕೆಲವು ವಿಭಾಗಗಳಾಗಿ ವಿಂಗಡಿಸಲಾಗಿದೆ.

ಲಂಬಾಣಿ ಕನ್ನಡಿ ಮತ್ತು ಕಸೂತಿ ಕಲಾ ಕೇಂದ್ರ, ಅರಳೆ ಖಾದಿ, ಕರ್ನಾಟಕ ಕಸೂತಿಕಲೆ ಮುಂತಾದ ಮುಖ್ಯವಾದ ಘಟಕಗಳನ್ನು ಮಾಡಿಕೊಂಡು ಕಾರ್ಯನಿರ್ವಹಿಸುತ್ತಿದೆ. ಕಸೂತಿಗಳಿಂದ ಕೂಡಿದ ವಸ್ತುಗಳಿಗೆ ಮಾರುಕಟ್ಟೆಗಳಲ್ಲಿ ಅಪಾರ ಬೇಡಿಕೆ ಇದೆ. ಈ ತರಹದ ಉಡುಪುಗಳನ್ನು ವಿದೇಶಿ ಪ್ರವಾಸಿಗರಿಗೆ ಬಹು ಅಚ್ಚುಮೆಚ್ಚು. ಲಂಬಾಣಿ ಮಹಿಳೆಯರು ತಮ್ಮ ಪರಂಪರಾಗತ ಉಡುಪುಗಳು ತಯಾರಿಸಲು ಕನ್ನಡಿ, ಬಣ್ಣ ಬಣ್ಣದ ಬಟ್ಟೆ, ದಾರ ಮುಂತಾದ ವಸ್ತುಗಳಿಂದ ಸುಂದರವಾದ ಮೋಹಕವಾದ ಉಡುಪುಗಳನ್ನು ಕಲಾತ್ಮಕವಾಗಿ ಸಿದ್ಧಗೊಳಿಸುತ್ತಾರೆ. ೧೯೮೪-೮೫ರಲ್ಲಿ ಕೇವಲ ೧೧ ಜನ ಲಂಬಾಣಿ ಹೆಣ್ಣುಮಕ್ಕಳಿಂದ ಪ್ರಾರಂಭಿಸಿದ ಈ ಕೇಂದ್ರವು ನಂತರ ೭ ಉಪಕೇಂದ್ರವನ್ನು ಹೊಂದಿ ಸುಮಾರು ೪೦೦-೫೦೦ ಮಹಿಳೆಯರಿಗೆ ಅನ್ನದಾತವಾದ ಬೃಹತ್ ಕೇಂದ್ರವಾಗಿದೆ.

ಸಂಡೂರು ತಾಲೂಕಿನ ಉಪಕೇಂದ್ರಗಳಾದ ಹೊಸಪೇಟೆ ತಾಲೂಕಿನ ಮರಿಯಮ್ಮನಹಳ್ಳಿ, ಕಡ್ಡಿರಾಮಪುರ, ಗುಂಡಾ, ಬಳ್ಳಾರಿ ತಾಲೂಕಿನ ಬೆಳಗಲ್ಲು, ಹಗರಿಬೊಮ್ಮನಹಳ್ಳಿ ತಾಲೂಕಿನ ಕೊಗಳಿ, ಆನೇಕಲ್, ಕೂಡ್ಲಿಗಿ ತಾಲೂಕಿನ ಬಂಡೆ ಬಸಾಪುರ ತಾಂಡಗಳಲ್ಲಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಪ್ರತಿ ತಾಂಡದಲ್ಲಿ ಒಬ್ಬರಂತೆ, ಬಟ್ಟೆಯ ಮೇಲೆ ವಿನ್ಯಾಸ ರೂಪಿಸಿಕೊಡಲು ಮತ್ತು ಎಲ್ಲ ವ್ಯವಸ್ಥೆಯನ್ನು ನೋಡಿಕೊಳ್ಳಲು ವ್ಯವಸ್ಥಾಪಕ(ಡಿಸೈನರ್ಸ್)ರನ್ನು ನೇಮಿಸಿದ್ದಾರೆ. ಬಸಂತಿ, ಸರೋಜಾ ನಾಯ್ಕ, ಶಾಂತಾಬಾಯಿ, ವಿದ್ಯಾ ಭೋಸ್ಲೆ ಮುಂತಾದವರು ಈ ತಾಂಡಗಳ ವ್ಯವಸ್ಥಾಪಕರು. ಈ ವಸ್ತುಗಳಲ್ಲಿ ಲಂಬಾಣಿ ಧರಿಸುವ ಲಂಗಗಳು, ಕೈಚೀಲಗಳು, ಮೊಬೈಲ್ ಕವರ್‌ಗಳು, ಟೇಬಲ್ ಮೇಲೆ ಹಾಕುವ ಬಟ್ಟೆವಿನ್ಯಾಸಗಳು ಮುಂತಾದವು ಇಲ್ಲಿ ಸಿದ್ಧಗೊಳ್ಳುತ್ತವೆ.

[illegible]

ಕಸೂತಿಯ ಪರಿಕರಗಳು


ದಾರ, ಬಟ್ಟೆ, ಸೂಜಿ, ಕನ್ನಡಿ ಮುಂತಾದ ವಸ್ತುಗಳನ್ನು ಉಪಯೋಗಿಸಿ ಉಡುಪು, ವಸ್ತುಗಳನ್ನು ತಯಾರಿಸಲಾಗುತ್ತದೆ. ಕಸೂತಿಗಾಗಿ ಹೆಚ್ಚಿಗೆ ಕೆಂಪು, ಕುಂಕುಮ, ಕಿತ್ತಳೆ, ನೆರಳೆ, ಹಸಿರು, ನೀಲಿ ಮೊದಲಾದ ಬಣ್ಣದ ದಾರಗಳಿಂದ ಬಟ್ಟೆಗೆ ಚುಕ್ಕೆಗಳು, ಚಿಕ್ಕ ಹೂಗಳು, ಅಲ್ಲಲ್ಲಿ ಸಮದೂರವಾಗಿ ಹರಡುವ 'ಬುಟ್ಟಾಕಸೂತಿ'ಯೂ ಕನ್ನಡಿಯ ಸುತ್ತಲೂ ಬಲೆಯಾಕಾರದ ಹೊಲಿಗೆಯನ್ನು ಹಾಕುತ್ತಾರೆ. ಇಲ್ಲಿ ಮುಖ್ಯವಾಗಿ ಮೂಲ ಬಣ್ಣದ ದಾರಗಳನ್ನು ಉಪಯೋಗಿಸುತ್ತಾರೆ. ಉಡುಪು ಮತ್ತು ಕೈಚೀಲ ಮುಂತಾದವುಗಳಿಗೆ ಆಕೃತಿಯೂ ಪುನರುಕ್ತವಾಗದಿದ್ದರೆ ನೋಡುವಾಗ ಯಾವುದೇ ಎರಡು ಆಕೃತಿಗಳಲ್ಲಿ ಹೆಚ್ಚು ಕಡಿಮೆ ಸಮಪ್ರಮಾಣವಿದ್ದರೆ ಕಸೂತಿಯು ಆಕರ್ಷಕ. ಇಲ್ಲಿ ನಾಲ್ಕು ವಿಧಾನಗಳುಂಟು.


ಚೈನಾ ಕಸೂತಿ, ಗಂಟಿನ ಕಸೂತಿ, ಬಲೆಯ ಕಸೂತಿ, ಕಡ್ಡಿಯ ಕಸೂತಿ. ಈ ವಿಧಾನಗಳನ್ನು ಕಸೂತಿಯಲ್ಲಿ ಉಪಯೋಗಿಸುತ್ತಾರೆ. ಈ ಎಲ್ಲಾ ಕಸೂತಿ ಕೆಲಸವನ್ನು ಚುರುಕು ಬೆರಳುಗಳಿಂದ ವರ್ಣರಂಜಿತ ಸುಂದರ ಆಕೃತಿಗಳನ್ನು ಕಸೂತಿ ಹಾಕುತ್ತಾರೆ. ಬಟ್ಟೆಯ ಬಣ್ಣ ಗಾಢವಿದ್ದರೆ ಅದಕ್ಕೆ ತಿಳಿ(light) ಬಣ್ಣದ ದಾರವನ್ನು ಉಪಯೋಗಿಸುತ್ತಾರೆ. ಪ್ರಾರಂಭದಲ್ಲಿ ಕೆಲವು ರೇಖಾಕೃತಿಗಳು ಮತ್ತು ನೈಸರ್ಗಿಕ (ಹೂ, ಬಳ್ಳಿ, ಎಲೆ) ಆಕಾರಗಳ ಸಮ್ಮಿಶ್ರವಾಗಿಯೂ ಕೃತಿಗಳನ್ನು ಸುಲಭವಾಗಿ ಪಡೆಯಬಹುದು. ಈ ಕಲೆಗೆ ಮುಖ್ಯವಾಗಿ ಕನ್ನಡಿಯೇ ಭೂಷಣವಾಗಿದೆ. ಕನ್ನಡಿಗಳಲ್ಲಿ ಹಲವು ಆಕಾರಗಳಲ್ಲಿ ಚೌಕ, ವೃತ್ತ, ವಜ್ರಾಕೃತಿ, ಪತಂಗಾಕೃತಿ ಕನ್ನಡಿಗಳು ಕಸೂತಿಕಲೆಗೆ ಶೋಭೆಯನ್ನು ತರುತ್ತವೆ. ಕೆಲವು ಬೇಡಿಕೆ ಸಂದರ್ಭಕ್ಕನುಗುಣವಾಗಿ ಬೇರೆ ಬೇರೆ ಬಟ್ಟೆಗಳನ್ನು ಸಹ ಉಪಯೋಗಿಸುತ್ತಾರೆ.


ಈ ದೇಶಿ ಕಸೂತಿಕಲೆಗೆ ಪ್ರಸ್ತುತದಲ್ಲಿ ತುಂಬಾ ಬೇಡಿಕೆ ಇದೆ. ಈ ಕಲೆಗೆ ಬ್ರಿಟಿಷರ ಆಡಳಿತ ಮೋಡಮುಸುಕಿನಲ್ಲಿ ಮರೆಯಾಗಿತ್ತು. ಆ ಕಾಲದಲ್ಲಿ ಭಾರತೀಯರು ತಯಾರಿಸಿದ ಉಡುಪುಗಳಿಗೆ ಪ್ರಪಂಚದ ಎಲ್ಲಾ ಮಾರುಕಟ್ಟೆಗಳಲ್ಲೂ ಅಪಾರ ಬೇಡಿಕೆ ಇದ್ದಿತು. ಉಡುಪು ತಯಾರಿಕೆಯನ್ನು ವೃತ್ತಿಯಾಗಿ ಹಿಡಿದಿದ್ದವರು ಅತ್ಯಂತ ಸುಖದಿಂದ ಜೀವಿಸುತ್ತಿದ್ದ ಕಾಲ ಅದು. ಆದರೆ ನಮ್ಮ ಈ ಪ್ರಾಚೀನ ಕಲೆಗಳು ಬ್ರಿಟಿಷರ ಆಳ್ವಿಕೆಯಲ್ಲಿ ಕ್ರಮೇಣ ನಾಮಾವಶೇಷವಾದವು. ಬ್ರಿಟಿಷರು ತಮ್ಮ ದೇಶದ ಗಿರಣಿಬಟ್ಟೆಗಳನ್ನು ಭಾರತಕ್ಕೆ ತಂದು, ಅಗ್ಗವಾಗಿ ಮಾರಾಟ ಮಾಡಿ ದೇಶೀಯ ವಸ್ತುಗಳಿಗೆ ಮಾರುಕಟ್ಟೆ ಇಲ್ಲದ ಹಾಗೆ ಮಾಡಿದರು. ಅವರ ಈ ಕುಟೀಲ ನೀತಿಯ ಫಲವಾಗಿ ಒಂದು ಮಹಾ ಕಲೆಯೇ ಕಣ್ಮರೆಯಾಗುವಂತಾಯಿತು. ಭಾರತ ಸ್ವಾತಂತ್ರ್ಯಗಳಿಸಿದ ನಂತರ ಪುನಃ ಈ ಪ್ರಾಚೀನ ಕಲೆ ಸ್ವಲ್ಪ ಸ್ವಲ್ಪವಾಗಿ ತಲೆ ಎತ್ತಿಕೊಳ್ಳಲು ಅವಕಾಶವಾಯಿತು. ಈ ದಿಸೆಯಲ್ಲಿ ಸರ್ಕಾರದ ಪ್ರೋತ್ಸಾಹವೂ ಗಣನೀಯ. ಬಾಂದಣಿ ಕಲೆ ಮತ್ತು ಮಣಿ ಮುತ್ತು, ಮಿಂಚುಗಳಿಂದ ಕೂಡಿದ ಕಲೆಗೆ ಅಪಾರವಾದ ಬೇಡಿಕೆ ಇದೆ. ಕಲಾವಿದರು


ಬಟ್ಟೆಯ ಮೇಲಿನ ಚಿತ್ರಕಲೆ


ಹೆಣಿಗೆಯ ಚಿತ್ರಕಲೆ














ಕಸೂತಿ ಹಾಕುವ ಪರಿಕರಗಳು

ಕಸೂತಿ ಹಾಕುವ ಶ್ರಮ ವ್ಯವಧಾನದಿಂದ ವಿನಿಯೋಗಿಸಿದರೆ ಸಾಕು, ಕಸೂತಿ ಸಿದ್ಧ. ಈ ಕಲೆ ಎಂದಿಗೂ ಇದ್ದೇ ಇದೆ. ಆಧುನಿಕರಿಂದ ಸಂಪ್ರದಾಯ, ಸಂಪ್ರದಾಯದಿಂದ ಆಧುನಿಕಕ್ಕೆ ಮರಳುವುದು ಮಾನವನ ಜೀವನದ ಸಹಜ ನಿಯಮ.

ಮೇಟಿ ಬಟ್ಟೆಯ ಕಸೂತಿ

ಈ ಕಸೂತಿಗಾಗಿ ಹಲವು ಖಾನೆಗಳಿರುವ ಬಟ್ಟೆಯೇ ಮೇಟಿ ಬಟ್ಟೆಯಾಗಿದೆ. ಈ ಬಟ್ಟೆಯಲ್ಲಿ ಹಲವು ಮನೆಗಳನ್ನು ಆಯ್ದು ದಾರದಿಂದ ಸೂಜಿಯನ್ನು ಪೋಣಿಸುತ್ತಾ ಸಾಗುವುದರಿಂದ ಇಲ್ಲಿ ಹೂ, ಬಳ್ಳಿ, ಎಲೆ, ಮರ, ಪ್ರಾಣಿ, ಪಕ್ಷಿಗಳ ಆಕಾರವನ್ನು ರಚಿಸುತ್ತಾರೆ. ಇಡೀ ಮೇಟಿ ಬಟ್ಟೆಯಲ್ಲಿ ರಂಗುರಂಗಾಗಿ ಸಂಯೋಜನೆಗೊಳಿಸುತ್ತಾ ಸುಂದರ ವಸ್ತ್ರವನ್ನು ರಚಿಸುತ್ತಾರೆ.

೧.೨. ಬಟ್ಟೆ ರಹಿತ ಹೆಣಿಗೆ

ಈ ಹೆಣಿಗೆಯಲ್ಲಿ ಯಾವುದೇ ತರಹ ಬಟ್ಟೆಗಳು ಇರುವುದಿಲ್ಲ. ಇಲ್ಲಿ ಮಣಿಗಳು, ಕ್ರೋಶ ವೈಯರ್(ಪ್ಲಾಸ್ಟಿಕ್ ದಾರ), ಉಲನ್ ತರಹದ್ದಿದ್ದು ಬಾಗಿಲತೋರಣಗಳಲ್ಲಿ ಕಾಣಬಹುದು.

ಮಣಿಗಳ ವಿನ್ಯಾಸಗಳು

ಮಣಿಯಿಂದ ಕೂಡಿದ ಬಾಗಲ ತೋರಣ, ಟೇಬಲ್, ಹೊದಿಕೆಗಳು ಕಂಪ್ಲಿ, ರಾಮಸಾಗರ, ಬಳ್ಳಾರಿ, ಹೊಸಪೇಟೆ ಮುಂತಾದ ಭಾಗಗಳಲ್ಲಿ ಈ ತರಹದ ವಿನ್ಯಾಸಗಳು ಕಂಡು ಬರುತ್ತವೆ.

ಮಣಿಯ ಬಾಗಿಲು ತೋರಣ


ಕಂಪ್ಲಿಯ ಲಕ್ಷ್ಮೀದೇವಿ ಎನ್ನುವವರು ಸತತ ಮೂರು ತಿಂಗಳ ಕಾಲ ಮಣಿಯ ತೋರಣವನ್ನು ತಯಾರಿಸುತ್ತಾರೆ. ಈ ತೋರಣವನ್ನು ತಯಾರಿಸಲು ಬಣ್ಣದ ಮಣಿಗಳು, ದಾರದಂತಹ ತೆಳು ವೈಯರ್, ಸೂಜಿ, ಅಲಂಕಾರಿಕ ಎಲೆಯ ಮಿಂಚು, ರಿಂಗು, ಗಂಟೆಗಳು, ಈ ಎಲ್ಲಾ ವಸ್ತುಗಳನ್ನು ಉಪಯೋಗಿಸಿಕೊಂಡರೂ ವೈಯರ್(ದಾರ) ಸಂಯೋಜನೆಯಲ್ಲಿ ಮುಖ್ಯ ಪಾತ್ರ ವಹಿಸಿದೆ.

ರಚನಾ ವಿಧಾನ

ಮೊದಲು ದಾರ ಅಳತೆಗೆ ಕತ್ತರಿಸಿಕೊಂಡು ಇದರಲ್ಲಿ ಬೇಕಾದ ಬಣ್ಣದ ಮಣಿಯನ್ನು ಪೋಣಿಸುತ್ತಾ ಮತ್ತು ಆಕಾರಕ್ಕಾಗಿ ಪೋಣಿಸಿದ ಮಣಿಯ ಹಿಂಬದಿಯ ಮೂಲಕ ವೈಯರನ್ನು ಸೇರಿಸಿ ಎಳೆಯುವುದರಿಂದ ಹೂವು, ವೃತ್ತ, ಚೌಕ ಆಕಾರ ರಚಿಸುತ್ತಾರೆ. ಆದರೆ ಇಲ್ಲಿ ಹೂವಿನ ಆಕಾರತೆಗೆ ರಚಿಸಿಕೊಂಡು, ಆ ಬಿಡಿ ಬಿಡಿ ಹೂಗಳನ್ನು ಜೋಡಿಸುತ್ತಾ ಬಣ್ಣ ಬಣ್ಣದ ಮಣಿಯ ಆಕಾರದ ಹೂವಿನ ತೋರಣವನ್ನು ಲಂಬ ಮತ್ತು ಅಡ್ಡವಾಗಿ ರಚಿಸುತ್ತಾ ಸಂಯೋಜನೆಯ ಸುಂದರ ತೋರಣವನ್ನು ನಿರ್ಮಿಸಲಾಗಿದೆ. ಈ ತೋರಣದ ರಚನೆಯಲ್ಲಿ ತುಂಬಾ ವ್ಯವಧಾನಬೇಕು. ಸ್ವಲ್ಪ ತಪ್ಪಿದರೂ ಇಡೀ ಸಂಯೋಜನೆಯಲ್ಲಿ ದೋಷ ಕಂಡುಬರುತ್ತದೆ. ಇಷ್ಟು ಶ್ರಮಪಟ್ಟು

ಲಂಬಾಣಿ ಕಸೂತಿ ವಿನ್ಯಾಸದ ಪರಿಕರಗಳು





ಕಸೂತಿ ವಿನ್ಯಾಸದ ಸೀರೆ

ಎತ್ತಿನ ಮೇಲಿನ ಕಸೂತಿ ವಿನ್ಯಾಸದ ಜೂಲಗಳು





ಕೌಲೆತ್ತಿನ ಜೂಲಗಳು

ಹೆಣಿಗೆಯ ಕಸೂತಿ ಚಿತ್ರಕಲೆ




ಕಸೂತಿ ಕಲೆ

ಬಟ್ಟೆ ರಹಿತ ಹೆಣಿಗೆಯ ಕಸೂತಿ ವಿನ್ಯಾಸಗಳು



ಮನೆಯ ಬಾಗಿಲ ತೋರಣ





ಕ್ರೋಶಾ ವೈರಿನ ಕೈಚೀಲ

ರಚನೆ ಮಾಡಿದ ತೋರಣವನ್ನು ಹಬ್ಬ, ಹುಣ್ಣಿಮೆಗಳಿಗೆ ಮಾತ್ರ ಉಪಯೋಗಿಸಿ ಮತ್ತೆ ಅದನ್ನು ಭದ್ರವಾಗಿ ಎತ್ತಿಡಲಾಗುವುದು. ಈ ತೋರಣ ಸುಮಾರು ೩೦-೩೫ ವರ್ಷಗಳಿಂದ ರಕ್ಷಣೆಯನ್ನು ಪಡೆದಿದೆ.

೧.೩. ಕ್ರೋಶ ವೈಯರಿನ (ದಾರದ) ವಿನ್ಯಾಸಗಳು

ಕ್ರೋಶ ವೈರಿನ ಹಲವಾರು ಕೈಚೀಲಗಳು ಇಂದು ಶೋಕಿಯಾಗಿವೆ. ಇವುಗಳು ಹಲವಾರು ಚಿಹ್ನೆಗಳಿಂದ ಅಲಂಕಾರಿಕವಾಗಿ ವರ್ಣರಂಜಿತವಾಗಿದ್ದು ಹಲವು ಮಹಿಳೆಯರು ಈ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ. ಹೊಸಪೇಟೆ, ಕೂಡ್ಲಿಗಿ, ಸಿರಗುಪ್ಪ ಈ ಸ್ಥಳಗಳಲ್ಲಿ ಹೆಚ್ಚಿನ ಮಟ್ಟದಲ್ಲಿ ಈ ಕಲೆ, ಕಲಾವಿದರು ಕಂಡುಬರುತ್ತದೆ. ಈ ತರಹದ ಕೈಚೀಲಗಳನ್ನು ತಯಾರಿಸಿ ಮಾರಾಟಕ್ಕಾಗಿಯೂ ಇಡುತ್ತಾರೆ. ಕ್ರೋಶ ವೈಯರ್, ಕ್ರೋಶದ ಸೂಚಿಗಳು ಮತ್ತು ಕರಡು ಚಿತ್ರಗಳು ಇಷ್ಟು ಈ ಕಲೆಯ ಪರಿಕರಗಳಾಗಿವೆ. ಇಲ್ಲಿಯೂ ರಂಗೋಲಿಯ ಚಿಹ್ನೆಗಳಂತಹ ಗುಲಾಬಿ, ಚಕ್ರ, ಶಂಖ, ಜಾಮಿತಿಯಾಕಾರಗಳ ಚಿಹ್ನೆಗಳನ್ನು ವಿವಿಧ ಬಣ್ಣದ ವೈಯರಿನ(ದಾರದ) ಮೂಲಕ ತಯಾರಿಸುತ್ತಾರೆ.

೨. ಲಂಬಾಣಿ ಕಲೆ

ಬಳ್ಳಾರಿಯ ಎಲ್ಲ ಕಡೆಗಳಲ್ಲಿಯೂ ನೆಲೆಸಿರುವ ಲಂಬಾಣಿ ಜನಾಂಗವು ಸಂಡೂರು, ಹಂಪಿ, ಕೂಡ್ಲಿಗಿ ಕಡೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಿಗುತ್ತಾರೆ. ಈ ಜನಾಂಗವು ಉತ್ತರ ಭಾರತದ ಗೋರಖಪುರದಿಂದ ಹರಿದ್ವಾರದವರೆಗಿನ ಪರ್ವತಶಿಖರವೇ ಬಂಜಾರಾಗಳ ಮೂಲ ಸ್ಥಾನವಾಗಿದೆ ಎಂದು ವಿದ್ವಾಂಸರ ಅಭಿಪ್ರಾಯ. ಈ ಜನಾಂಗದ ಉಡುಪು ವಿಶೇಷವಾದುದ್ದಾಗಿದೆ. ಇವರ ಉಡುಪುಗಳು ಕಸೂತಿ ಕಲೆಯಿಂದ ನಿರ್ಮಿತವಾದುದ್ದಾಗಿವೆ. ಈ ವಿನ್ಯಾಸವು ಮೂಲ ಕರ್ನಾಟಕದ ಕಲೆ ಅಲ್ಲದಿದ್ದರೂ ಈ ಜನಾಂಗದೊಂದಿಗೆ ಕರ್ನಾಟಕವನ್ನು ಪ್ರವೇಶಿಸಿತು. ಅದರಲ್ಲೂ ಬಳ್ಳಾರಿ ಜಿಲ್ಲೆಯ ಸಂಡೂರು ಕರಕುಶಲ ಕೇಂದ್ರವು ಇತರ ಕರಕುಶಲ ವಸ್ತುಗಳೊಂದಿಗೆ ಈ ಉಡುಪಿನ ಸಹ ತಯಾರಿಕಾ ಕೇಂದ್ರವಾಗಿ ಬೆಳೆದು ದೇಶ-ವಿದೇಶಗಳ ಖ್ಯಾತಿಯನ್ನು ಗಳಿಸಿದೆ. ಲಂಬಾಣಿಯ ಉಡುಪುಗಳೇ ಲಂಬಾಣಿ ಜನಾಂಗದ ಗುರುತಿನ ಕುರುಹಾಗಿದೆ.

೨.೧. ಲಂಬಾಣಿ ಜನಾಂಗದ ಉಡುಪಿನ ವೈಶಿಷ್ಟ್ಯ : ಇವರ ಉಡುಪಿನಲ್ಲಿ ಲಂಗ, ಕುಪ್ಪಸ, ಮೇಲ್ಮುಸುಕು ಮುಖ್ಯವಾದವುಗಳಾಗಿವೆ.

೧. ಫೇಟಿಯಾ (ಲಂಗ)

ಫೇಟಿಯಾ ಎಂದು ಈ ಜನಾಂಗದಿಂದ ಕರೆಯಲ್ಪಡುವ ವಸ್ತುವು ಲಂಗವಾಗಿದೆ. ಈ ಲಂಗದಲ್ಲಿಯೇ ಹಲವಾರು ವಿನ್ಯಾಸದ ಚಿತ್ರಗಳನ್ನು ಹಾಕುತ್ತಾರೆ. ಕೆಲವು ಭಾಗಗಳು ವಿನ್ಯಾಸವಾಗಿ

ಜೋಡಿಸಲ್ಪಟ್ಟ ಲಂಗವಾಗಿದೆ. ಈ ಭಾಗಗಳಾದ ಲೇಪೊ(ಸೊಂಟದ ಪಟ್ಟಿ), ಕಾಳೋಫೇರೋ(ಕರಿಬಟ್ಟೆ), ರಾತಡೊಫೇರೊ (ಕೆಂಪುಪಟ್ಟಿ), ಪೀತಾಂಬರ ಜರಿಸಿ, ಲಾವಣಿ (ಉದ್ದಪಟ್ಟಿ)ಗಳಾಗಿವೆ.

೨. ಲೇಪೊ (ಸೊಂಟದ ಪಟ್ಟಿ)

ಲಂಬಾಣಿಯ ಉಡುಪಿನಲ್ಲಿಯೇ ವಿಶೇಷವಾದ ಲಂಗದ ಪ್ರಮುಖ ಭಾಗವಾಗಿದೆ. ಪಟ್ಟಿಯಲ್ಲಿ ವಿವಿಧ ಗಾಜಿನ ಕನ್ನಡಿಯನ್ನು ಹಚ್ಚುವುದರಿಂದ ಈ ಪಟ್ಟಿಯನ್ನು ಉಪಪಟ್ಟಿಗಳನ್ನು ವಿವಿಧ ಬಣ್ಣದ ದಾರಗಳಿಂದ ವಿನ್ಯಾಸಗೊಳಿಸಿ ಮುಖ್ಯಪಟ್ಟಿಯನ್ನು ತಯಾರಿಸುತ್ತಾರೆ. ಹಾಗೆಯೇ ಕರಿಪಟ್ಟಿ, ಕೆಂಪುಪಟ್ಟಿ ಸಿಲ್ಕಾನ ಹಳದಿ ಪಟ್ಟಿಗಳಿಂದ ವಿನ್ಯಾಸಗೊಳಿಸುತ್ತಾರೆ. ಇದನ್ನು ಉದ್ದಪಟ್ಟಿಯಾಗಿ ತಯಾರಿಸಿಕೊಳ್ಳುತ್ತಾರೆ.

೩. ಕಾಂಚಳಿ (ಕುಪ್ಪಸ)

ಇದು ಲಂಬಾಣಿ ಜನಾಂಗದ ಮೇಲುಡುಗೆಯಾಗಿದೆ. ಈ ಉಡುಗೆಯು ಸಹ ಕಲಾತ್ಮಕತೆಯಿಂದ ಕೂಡಿರುತ್ತದೆ. ಇಲ್ಲಿಯೂ ಸಹ ಕುಪ್ಪಸವು ಅನೇಕ ಭಾಗಗಳಿಂದ ಜೋಡಿಸಲ್ಪಟ್ಟ ಕಸೂತಿ ಕಲೆಯಿಂದ ಕೂಡಿರುತ್ತದೆ. ಎದೆಯ ಭಾಗ, ಭುಜದ ಭಾಗ, ತೋಳಿನ ಭಾಗಗಳಿಂದ ಕೂಡಿದ್ದಾಗಿದ್ದು, ಕನ್ನಡಿ, ನಾಣ್ಯಗಳು, ಕವಡೆ, ಹಲವು ಮಣಿಗಳ ಸರಗಳಿಂದ ಕೂಡಿ ವಿನ್ಯಾಸಾತ್ಮಕವಾಗಿ ಕುಪ್ಪಸವನ್ನು ತಯಾರಿಸಿ, ಹಿಂಭಾಗದಲ್ಲಿ ಜರಿ (ಮಿಂಚಿನಿಂದ) ಕೂಡಿದ ಕಸಿ ಮಾತ್ರ ಕಟ್ಟಿಕೊಳ್ಳಲು ಜೋಡಿಸಿರುತ್ತಾರೆ.

೪. ಭಾಂಟಿಯಾ (ಮೇಲ್ಮುಸುಕು)


ಈ ಜನಾಂಗದ ಉಡುಪುಗಳಲ್ಲೇ ಮುಖ್ಯವಾದುದ್ದು ಮೇಲ್ಮುಸುಕಾಗಿದೆ. ಇದರಿಂದಲೇ ಉಡುಪಿಗೆ, ಉಡುಪುಗಾರರಿಗೆ ಮೆರುಗು ಬರುತ್ತದೆ. ಮತ್ತು ಸಂಪೂರ್ಣ ಲಂಬಾಣಿ ಉಡುಗೆ ಎನಿಸಿಕೊಳ್ಳುತ್ತದೆ. ಇದು ಸುಮಾರು ಮೂರು ಮೀಟರ್‌ನಿಂದ ನಾಲ್ಕು ಮೀಟರ್‌ವರೆಗೆ ಇರುವ ಉಡುಗೆಯಾಗಿದೆ. ಇದು ಸಹ ಕನ್ನಡಿ, ವಿವಿಧ ದಾರಗಳು, ನಾಣ್ಯಗಳು, ಚುಮಾಕೆ, ಉಲನ್‌ನ ಕುಚ್ಚು, ಗುಂಡಿ ಮುಂತಾದವುಗಳಿಂದ ವಿನ್ಯಾಸಗೊಳಿಸಿದ ಮುಸುಕಾಗಿದೆ. ಈ ಉಡುಪಿನ ಮೂಲ ಬಟ್ಟೆಗೆ, ದಾರವನ್ನು, ವಸ್ತುಗಳನ್ನು ಜೋಡಿಸುವುದೇ ರಚನೆಯ ಮುಖ್ಯ ಪದ್ಧತಿಯಾಗಿದೆ.

೨.೦ ಹೊಲಿಗೆಯ ಚಿತ್ರಕಲೆ

೨.೧. ಕೌದಿಯ ಮೇಲಿನ ಚಿತ್ರಕಲೆ

ಕೌದಿ ಚಿತ್ರಕಲೆಯು ದಾರದ ಹೊಲಿಗೆಯ ಸಾಧನದ ಚಿತ್ರವಿನ್ಯಾಸದ ಹಿನ್ನೆಲೆ ಹೊಂದಿದೆ. ಈ ಕೌದಿಯ ಹೊಲಿಗೆಯು ಹಿಂದಿನಿಂದ ಬಂದ ಜನಪದೀಯ ಪದ್ಧತಿಯಾಗಿದೆ. ಮಾನವ

ಲಂಬಾಣಿ ಕರಕುಶಲ ಕಲೆ



ಲಂಬಾಣಿ ಕಸೂತಿ ಕಲೆ

ಬಟ್ಟೆಯನ್ನು ತೊಟ್ಟುಕೊಳ್ಳಲು ಪ್ರಾರಂಭಿಸಿದಾಗಿನಿಂದ ಈ ಪದ್ಧತಿಯು ಜಾರಿಗೆ ಬಂದಿರಬಹುದು. ಏಕೆಂದರೆ ತೊಟ್ಟಬಟ್ಟೆಯೊಂದರಿಂದಲೇ ತನ್ನ ಇಡೀ ದೇಹವನ್ನೇ ಗಾಳಿ–ಮಳೆಯಿಂದ ರಕ್ಷಿಸಿಕೊಳ್ಳಲು ಸಾಧ್ಯವಿಲ್ಲದಾಗ ಅವನಿಗೆ ಪರ್ಯಾಯವಾಗಿ ತಾವು ಕೊಡುವಂತೆ ಬಟ್ಟೆಗಳನ್ನು ಅಳತೆಗೆ ತಕ್ಕಂತೆ ಜೋಡಿಸಿ ಹೊಲಿಯುವುದೇ ಕೌದಿ ಎಂದು ಹೇಳಬಹುದು. ಆ ನಂತರದಲ್ಲಿ ಅವನಿಗೆ ಆ ಕೌದಿಯನ್ನು ಮತ್ತಿಷ್ಟು ಅಂದಗೊಳಿಸುವ ವಾಡಿಕೆ ಬಂದಿದೆ. ಅದೇ ಕೌದಿ ಚಿತ್ರಕಲೆ ಎಂದೆನಿಸಿಕೊಂಡಿತು ಎನ್ನಬಹುದು. ಕ್ರಿ.ಶ. ಸುಮಾರು ೨ನೆಯ ಶತಮಾನದ ಆಯುರ್ವೇದಶಾಸ್ತ್ರ ಕೃತಿಯಾದ 'ಚರಕ ಸಂಹಿತಾ'ದಲ್ಲಿ ಕೌದಿಯನ್ನು 'ಕಂಥಾ' ಎಂದು ಕರೆಯಲಾಗಿದ್ದು, ಇದು ಕೌದಿಯನ್ನು ಉಲ್ಲೇಖಿಸುವ ಪ್ರಾಚೀನ ದಾಖಲೆಯಾಗಿದೆ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.[೨೦]

ಬಳ್ಳಾರಿ ಜಿಲ್ಲೆಯಲ್ಲಿ ಹಲವು ಹಳ್ಳಿಗಳಲ್ಲಿ ಕೌದಿ ಹೊಲಿಯುವ ಕಲೆ ಇದೆ. ಹೊಸಪೇಟೆ, ಕೂಡ್ಲಿಗಿ, ಸಂಡೂರು, ಬಳ್ಳಾರಿ, ಸಿರುಗುಪ್ಪ, ಹಡಗಲಿ, ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ ತಾಲೂಕಿನ ಹಳ್ಳಿಗಳಲ್ಲಿ ಹೆಚ್ಚಿನ ಮಟ್ಟದಲ್ಲಿ ಕೌದಿಯ ಚಿತ್ರಕಲೆ ಕಂಡುಬರುತ್ತದೆ. ಈ ಕೌದಿಯನ್ನು ಹೊಲಿಯುವ ಜನರು ಒಂದು ಕೌದಿಯನ್ನು ಎರಡು ತಿಂಗಳಿಂದ ಮೂರು ತಿಂಗಳುವರೆಗೆ ಹೊಲಿಯುತ್ತಾರೆ. ವಿನ್ಯಾಸಕ್ಕನುಗುಣವಾಗಿ ಹೊಲಿಯುವವರು ಸಮಯವನ್ನು ಬಯಸುತ್ತಾರೆ. ಸಾಧಾರಣ ಕೌದಿಗೆ ಒಂದು ಮೊಳಕ್ಕೆ ರೂ. ೫೦ರಿಂದ ೭೦ರವರೆಗೆ ಇವರು ಸಂಭಾವನೆಯನ್ನು ತೆಗೆದುಕೊಳ್ಳುತ್ತಾರೆ. ಮತ್ತು ಹೆಚ್ಚಿನ ವಿನ್ಯಾಸಕ್ಕೆ ಹೆಚ್ಚಿನ ಸಂಭಾವನೆಯನ್ನು ಬಯಸುತ್ತಾರೆ.

ಕೌದಿಯನ್ನು ಹೊಲಿಯುವುದಕ್ಕೆ ಬೇಕಾಗುವ ಸಾಮಗ್ರಿಗಳು

ಸೂಜಿ, ದಾರ, ಹಳೆ–ಬಟ್ಟೆಗಳು ಮತ್ತು ಕತ್ತರಿಗಳು, ಹೀಗೆ ಸಾಮಗ್ರಿಗಳನ್ನು ಹೊಂದಿಸಿಕೊಂಡು ಕೌದಿ ಹೊಲಿಯಲು ಸಿದ್ಧರಾಗುತ್ತಾರೆ. ಅರಳೆಯಿಂದ ತಮಗೆ ಬೇಕಾದ ರೀತಿಯಲ್ಲಿ ಬಿಳಿಯ ದಾರವನ್ನು ತಯಾರಿಸಿಕೊಳ್ಳುತ್ತಾರೆ. ಈ ಸಂಪ್ರದಾಯವು ಈಗಲೂ ಕೆಲವು ಹಳ್ಳಿಗಳಲ್ಲಿದೆ. ಅಂಗಡಿಗಳಲ್ಲಿ ಸಿಗುವ ದಾರಕ್ಕೆ ಹೆಚ್ಚಿನ ಬೆಲೆ ಇರುವದೆಂದು ಇವರ ಅಭಿಪ್ರಾಯ. ವಿನ್ಯಾಸಕ್ಕಾಗಿ ಬೇಕಿದ್ದರೆ, ಬಣ್ಣದ ದಾರವನ್ನು ಅಂಗಡಿಯಿಂದ ತೆಗೆದುಕೊಂಡು ಬರುವುದಾಗಿ ಕಂಪ್ಲಿಯ ಕೌದಿ ಹೊಲಿಯುವ ಮಹಿಳೆಯೊಬ್ಬರು ತಿಳಿಸಿದರು.

ಕೌದಿ ಹೊಲಿಯುವ ವಿನ್ಯಾಸಗಳು

ಇವರು ಕೌದಿಯನ್ನು ಅಪೇಕ್ಷೆಯಿಂದ ಹೊಲಿಸಿಕೊಳ್ಳುವವರ ಅನುಗುಣವಾಗಿ, ಸಣ್ಣ–ದೊಡ್ಡದು ಎಂದು ವರ್ಗೀಕರಿಸಿಕೊಂಡು ಹೊಲಿಯಲು ಸಿದ್ಧರಾಗುತ್ತಾರೆ. ಬಟ್ಟೆಯ ಚಿತ್ರಕ್ಕೆ ಅನುಗುಣವಾಗಿ ಕತ್ತರಿಯಿಂದ ಕತ್ತರಿಸಿಕೊಂಡು ಎರಡು–ಮೂರು ದೊಡ್ಡ (ಸೀರೆ) ಬಟ್ಟೆಯನ್ನು

---

೨೦. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ –

ಮೊದಲಿಗೆ ಹೊಲಿದುಕೊಂಡು, ಬಣ್ಣದ ಚಿತ್ರವಿರುವ ಬಟ್ಟೆಯನ್ನು ತಮಗೆ ಇಷ್ಟಕ್ಕನುಗುಣವಾಗಿ ವಿನ್ಯಾಸಕ್ಕನುಗುಣವಾಗಿ ಜೋಡಿಸಿಕೊಂಡು ಹೊಲಿಯುತ್ತಾ ಹೋಗುತ್ತಾರೆ. ಇದು ಒಂದು ವಿನ್ಯಾಸವಾದರೆ, ಮತ್ತೊಂದೆಂದರೆ ವಿನ್ಯಾಸದಿಂದ ಸಣ್ಣಸಣ್ಣ ಹೂ, ಬಿಲ್ಲು, ಚಕ್ರ ಮುಂತಾದ ವಿನ್ಯಾಸಗಳನ್ನು ಹೊಲಿಯುತ್ತಾರೆ. ಇನ್ನು ಹಲವು ಚಿತ್ರ ಬರೆಯುವುದಾಗಿ, ಇವುಗಳಿಗೆಲ್ಲಾ ತುಂಬಾ ಸಮಯ ಬೇಕಾಗುವುದಾಗಿ ತಿಳಿಸಿದರು.

ಕೌದಿಯಲ್ಲಿ ನೇರವಾಗಿ ಬಣ್ಣದ ಬಳಕೆಯಿಲ್ಲ. ಇದರ ಬದಲಾಗಿ ಬಣ್ಣದ ಬಟ್ಟೆಗಳನ್ನು ಬಳಸುತ್ತಾರೆ. ಬಾಟಿಕ್‌ನಲ್ಲಿ ಬಣ್ಣದ ಅರಿವೆಗಳಿದ್ದರೂ ಅವುಗಳ ಮೇಲೆ ತಮಗಿಷ್ಟವಾದ ಬಣ್ಣಗಳನ್ನು ಲೇಪಿಸಿ ಅದು ಸುಂದರವಾಗಿ ಕಾಣುವಂತೆ ಮಾಡಿ, ಕೌದಿಯಲ್ಲಿ ಬಟ್ಟೆಯ ಮೇಲೆ ಬಣ್ಣದ ಬಟ್ಟೆಯ ತುಕಡಿ ಹಚ್ಚಿದರೆ, ಬಾಟಿಕ್‌ನಲ್ಲಿ ಬಟ್ಟೆಯ ಮೇಲೆ ಬಣ್ಣ ಹಚ್ಚುತ್ತಾರೆ. ಹೀಗೆ ಬಾಟಿಕ್‌ನಲ್ಲಿ ಕೌದಿಗಿಂತ ಭಿನ್ನವಾದ ತಂತ್ರ, ಪದ್ಧತಿಯಿರುವುದನ್ನು ಗಮನಿಸಬಹುದು. ಚಿತ್ರ ರಚನೆಯಲ್ಲಿ ಕೌದಿಯ ರೂಪವನ್ನು ಬಾಟಿಕ್ ಕಲೆಯಲ್ಲಿ ತೋರಿಸಬಹುದು. ಕೌದಿ ಕಲೆ ಮತ್ತು ಬಾಟಿಕ್ ಕಲೆಗಳಲ್ಲಿ ಸಾಮ್ಯಗಳಿರುತ್ತವೆ. ಇವು ಎರಡೂ ಬಟ್ಟೆಗಳ ಮೇಲೆ ಮೂಡಿ ಬಂದ ಕಲೆಗಳೇ ಆಗಿರುತ್ತವೆ ಎಂದ ವಿದ್ವಾಂಸರ ಅಭಿಪ್ರಾಯ ನಿಜವಿದೆ.

ಕೋಲಾಜ್ ಪದ್ಧತಿಯ ಕೌದಿ

ಚಿತ್ರ –೧

ಕೋಲಾಜ್ ಪದ್ಧತಿಯ ಕೌದಿಯು ಕೋಲಾಜ್ ಚಿತ್ರ ತಯಾರಿಕಾ ಪದ್ಧತಿಯನ್ನೇ ಹೋಲುತ್ತದೆ. ಇಲ್ಲಿಯೂ ಹಲವಾರು ಅಕಾರಗಳಾದ ಚೌಕ, ಲಂಬ, ಶಂಖ, ಚಕ್ರ, ಚಿಹ್ನೆಯಂತಹ ತುಂಡುಬಟ್ಟೆಯನ್ನು ಕ್ಯಾನ್‌ವಾಸ್‌ನಂತಹ ಮುಖ್ಯ ಬಟ್ಟೆಗೆ ಹೊಲಿಯುವುದರಿಂದ ವಿನ್ಯಾಸಗೊಳಿಸಲಾಗುತ್ತದೆ. ಅಂತಹ ಒಂದು ಕೌದಿಯನ್ನು ಉದಾಹರಣೆಯಾಗಿ ಚಿತ್ರದಲ್ಲಿ ತೋರಿಸಲಾಗಿದ್ದು, ಮುಖ್ಯ ಒಂದು ಬಟ್ಟೆಗೆ ಕೆಂಪು, ಗುಲಾಬಿ, ಬಿಳಿ, ಹಳದಿ, ಹಸಿರು, ನೀಲಿ ತುಂಡು ಬಟ್ಟೆಗಳನ್ನು ಚೌಕಾಕಾರದಲ್ಲಿ ಜೋಡಿಸುತ್ತಾ ಹೊಲಿಯಲಾಗಿದೆ. ಮತ್ತು ಈ ಕೌದಿಯಲ್ಲಿ ಈ ಎಲ್ಲಾ ಬಣ್ಣದ ತುಕಡಿಗಳನ್ನು ಸಮತೋಲನವಾಗಿ ಸಂಯೋಜನೆಗೊಳಿಸಲಾಗಿದೆ.

ಚಿತ್ರ –೨

ಈ ಕೌದಿಯ ವಿನ್ಯಾಸದಲ್ಲಿ ಜಾಮಿತಿ ಆಕಾರದ ಬಟ್ಟೆಯ ಮೂಲ ಆಕಾರವನ್ನು ಹಾಗೆಯೇ ಉಳಿಸಿಕೊಂಡು ಕೌದಿಯ ವಿನ್ಯಾಸಕ್ಕೆ ಅಳವಡಿಸಿಕೊಂಡು ಮತ್ತು ಚೌಕಾಕಾರ ಮತ್ತು ಚೌಕಾಕಾರದಲ್ಲಿ, ಉಪಚೌಕಾಕಾರದಲ್ಲಿ ಜೋಡಿಸಿಕೊಂಡು ಹೊಲಿಯಲಾಗಿದೆ. ಇದು ಕೌದಿ ಕಲೆಯ ಮತ್ತೊಂದು ವಿನ್ಯಾಸವಾಗಿದೆ. ಹೀಗೆ ಹಲವಾರು ಪದ್ಧತಿಯಲ್ಲಿ ಕೌದಿಯನ್ನು ತಯಾರಿಸುತ್ತಾರೆ. ದಾರದಿಂದಲೂ ಕೌದಿಯ ಮೇಲೆ ಚೈನ್ ಹೊಲಿಗೆ, ಕಡ್ಡಿ ಹೊಲಿಗೆ, ಗಂಡು ಹೊಲಿಗೆ, ಗೋಧಿ ಹೊಲಿಗೆ

ಹೊಲಿಗೆಯ ಚಿತ್ರಕಲೆ



ಕೌದಿ ಚಿತ್ರಕಲೆ-೧



ಕೌದಿ ಚಿತ್ರಕಲ-೨

ಹಾಕುವುದರಿಂದಲೂ ಕಸೂತಿ ಮಿಶ್ರಿತವಾದ ಕೌದಿಯನ್ನು ಸಹ ರಚಿಸುತ್ತಾರೆ. ಇಂದು ಬಡವರಿಂದ ಶ್ರೀಮಂತರ ಮನೆಯಲ್ಲಿಯೂ ಈ ಕೌದಿಗಳು ಕಂಡುಬರುತ್ತದೆ.

ಕೌದಿಯು ಉಪಯೋಗಕನಿಗೆ ಸುಖಕರವಾಗಿ ಇಂದು ಇದರ ಪ್ರಯೋಜನದ ಮಹತ್ವವನ್ನು ಜನರು ತಿಳಿದಿರುವುದು ಅವರ ಮಾತಲ್ಲಿ ಕೇಳಿಬರುತ್ತದೆ. ಔದ್ಯೋಗಿಕವಾಗಿ ಇಂದಿನ ದಿನಗಳಲ್ಲಿ ಹಳ್ಳಿಯೊಂದೇ ಅಲ್ಲದೇ ನಗರ ಪ್ರದೇಶದಲ್ಲಿಯೂ ಕೌದಿಯ ಮಹತ್ವವನ್ನು ಅರಿತಿದ್ದಾರೆ. ತುಂಬಾ ಮೆತ್ತನೆ ತಂಪಾಗಿರುವ ಹತ್ತಿಬಟ್ಟೆಯಿಂದ ಈ ತರಹದ ಕೌದಿಯ ನಿರ್ಮಾಣ ಸಾಧ್ಯವಾಗುತ್ತದೆ. ಮಹಿಳೆಯೊಬ್ಬಳೇ ಈ ಕೌದಿ ಹೊಲಿಯುವ ವೃತ್ತಿಯಲ್ಲಿ ತೊಡಗದೇ ಪುರುಷರು ಸಹ ಕೌದಿ ಹೊಲಿಯುವುದನ್ನು ಮುಖ್ಯ ಕಸುಬನ್ನಾಗಿಸಿಕೊಂಡಿದ್ದಾರೆ.

ಉತ್ತರ ಕರ್ನಾಟಕದ ಬಳ್ಳಾರಿ, ಕೊಪ್ಪಳ, ಇಳಕಲ್, ಹೊಸಪೇಟೆ ಮುಂತಾದ ಪ್ರದೇಶಗಳಲ್ಲಿ ಆಂಧ್ರ ಮೂಲದ ಸಂಚಾರಿ ಕೌದಿ ಹೊಲಿಗೆಗಾರರು ಕಂಡುಬರುತ್ತಾರೆ. ತಮ್ಮ ದ್ವಿಚಕ್ರವಾಹನದ ಮೇಲೆ ನಿಂಗಪ್ಪ, ಮರಿಯಪ್ಪ ಎಂಬುವರು ಬಟ್ಟೆಯನ್ನು ಸಂಗ್ರಹಿಸಿ ತೆಗೆದುಕೊಂಡು ಹೋಗಿ ಒಂದು ದಿನದಲ್ಲಿ ಒಂದು ಕೌದಿಗೆ ನೂರು ರೂಪಾಯಿಯಂತೆ ಯಂತ್ರದ ಸಹಾಯದಿಂದ ಕೌದಿ ಹೊಲಿಯುತ್ತಾರೆ. ಬಟ್ಟೆಯ ಮೇಲೆ ಚಿತ್ರಕ್ಕೆ ಅನುಗುಣವಾಗಿ ಜೋಡಿಸುವುದು ಒಂದಾದರೆ, ದಾರದಿಂದ ವಿನ್ಯಾಸಗೊಳಿಸುವುದು ಮತ್ತೊಂದು ಮಾದರಿಯ ವಿನ್ಯಾಸವಾಗಿ ಕಂಡುಬರುತ್ತದೆ.

೨.೨. ಕಲಂಕಾರಿ ಚಿತ್ರಕಲೆ

ಕಲಂಕಾರಿ ಚಿತ್ರಕಲೆಯು ಭಾರತದ ಪುರಾತನ ಕಲೆಗಳಲ್ಲಿ ಒಂದು. ಈ ಕಲೆಯ ಬೆಳವಣಿಗೆ ಸುಮಾರು ೩೦೦೦ ವರ್ಷಗಳ ಹಿಂದೆ ಕಾಳಹಸ್ತಿಯಿಂದ ಪ್ರಾರಂಭವಾಗಿದೆ ಎಂದು ಖಚಿತಪಡಿಸುವ ಸಾಕ್ಷಾಧಾರಗಳು ಪ್ರಾಚ್ಯವಸ್ತು ಸಂಶೋಧನಾ ಇಲಾಖೆಯವರಿಗೆ ದೊರಕಿವೆ. ಕಲಂಕಾರಿಯು ಸಾಂಪ್ರದಾಯಿಕ ಚಿತ್ರಕಲೆಗಳಲ್ಲಿ ಒಂದು. 'ಕಲಂ' ಎನ್ನುವ ಪದ ಪರ್ಷಿಯನ್ ಭಾಷೆಯಿಂದ ಬಂದದ್ದು, 'ಕಲಂ' ಎಂದರೆ ಪರ್ಷಿಯನ್ ಭಾಷೆಯಲ್ಲಿ ಲೇಖನಿ ಎಂದು ಅರ್ಥ. 'ಕಾರಿ' ಎಂದರೆ ಲೇಖನಿಯಿಂದ ಬರೆದಿದ್ದು ಎಂದು ಅರ್ಥ ಬರುತ್ತದೆ.[೨೧] ೧೭ನೆಯ ಶತಮಾನದಲ್ಲಿ ಮಛಲಿಪಟ್ಟಣವು ಈ ಕಲೆಯ ಮುಖ್ಯ ಕೇಂದ್ರವಾಗಿತ್ತು. ಬ್ರಿಟಿಷರು ಮತ್ತು ಡಚ್ಚರು ಮಛಲಿಪಟ್ಟಣದಲ್ಲಿ ಕಲಂಕಾರಿ ಬಟ್ಟೆಗಳನ್ನು ತಯಾರಿಸುವ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಿ ಅವನ್ನು ಮಾರಾಟ ಮಾಡುತ್ತಿದ್ದರು. ಗೋಲ್ಕೊಂಡಾದ ಸುಲ್ತಾನನು ಕೂಡ ಇದರ ಮಾರಾಟ ಮಾಡಿಸುವಲ್ಲಿ ಆಸಕ್ತಿ ತೋರಿಸಿದ್ದನು. ಈ ಕಲೆಯು ಇರಾನ್, ಯುರೋಪ್ ಮತ್ತು ಭಾರತದಲ್ಲಿ ಹೆಸರುವಾಸಿಯಾಗಿತ್ತು. ಈ ಕಲಂಕಾರಿ ಶೈಲಿಯಲ್ಲಿ ಮುಸ್ಲಿಂ ಮತ್ತು ಆಂಧ್ರ ಶೈಲಿಗಳೆಂದು ಎರಡು ಬಗೆಯುಂಟು. ದೇವಸ್ಥಾನಗಳಲ್ಲಿ ಉಪಯೋಗಿಸಲು ಆಂಧ್ರ ಶೈಲಿಯಲ್ಲಿ ಚಿತ್ರಗಳನ್ನು

---

೨೧. ಕಾಮಾಕ್ಷಿ ಸಿ. ಸೊಪ್ಪಣ : ಕರ್ನಾಟಕದ ಬಟ್ಟೆ ಮಾಧ್ಯಮದ ಚಿತ್ರಕಲೆ, (ಅ.ಪ್ರ.ಪಿಎಚ್.ಡಿ.ಮ.ಪ್ರ), ಪುಟ – ೧೨೪

ಚಿತ್ರಿಸುತ್ತಿದ್ದರು. ಮುಸ್ಲಿಂ ಶೈಲಿಯ ಚಿತ್ರಗಳನ್ನು ದಖ್ಖನಿನ ಬಿಜಾಪುರ, ಗುಲಬರ್ಗಾ ಮತ್ತು ಗೋಲ್ಕೊಂಡಾ ಸುಲ್ತಾನರು, ಇರಾನ್‌ದೇಶದ ಜನರು ಮತ್ತು ಭಾರತದಲ್ಲಿರುವ ಮುಸ್ಲಿಂ ಅರಸರ ಅರಮನೆಗಳಲ್ಲಿ ಈ ಕಲೆಯನ್ನು ಬಳಸುತ್ತಿದ್ದುದು ಕಂಡುಬರುತ್ತದೆ.[೨೨] ಶ್ರೀಕಾಳಹಸ್ತಿಯಲ್ಲಿ ಹಿಂದೂರಾಜರು ಆಳುತ್ತಿದ್ದರಿಂದ ಹಿಂದೂ ಸಂಪ್ರದಾಯ ಮುಂದುವರಿಯಿತು. ಅಷ್ಟೇ ಅಲ್ಲ, ಕಾಳಹಸ್ತಿಯವರೆಗೆ ವಿಜಯನಗರ ಶೈಲಿ ಚಿತ್ರಕಲೆಯು ಹರಡಿದ್ದು ಕಂಡುಬಂದಿದ್ದು, ಅದೇ ರೀತಿಯಲ್ಲಿ ಆಂಧ್ರದಿಂದ ಪಕ್ಕದ ಬಳ್ಳಾರಿಯಲ್ಲಿಯೂ ಈ ಕಲೆಯು ಬಂದಿತು ಎನ್ನಬಹುದು. ಆದ್ದರಿಂದ ಈ ಪ್ರದೇಶದಲ್ಲಿಯೂ ಇದರ ಪ್ರಭಾವ ಬೀರಿತು. ಈ ಕಲೆಯ ಕುರಿತು ಕಲಾವಿದರು ಬಳ್ಳಾರಿಯ ಕೌಲ್‌ಪೇಟೆಯ ಬೊಸಮ್ಮ, ರಾಜಮ್ಮ, ಮೋನಪ್ಪ ಎಂಬುವವರು ಬಟ್ಟೆಯ ಮೇಲೆ ಕಲಂಕಾರಿ ಚಿತ್ರವನ್ನು ಚಿತ್ರಿಸುತ್ತಿದ್ದು, ಈ ವೃತ್ತಿಯನ್ನು ಯಾರೂ ಮುಂದುವರಿಸದ ಕಾರಣ ಈ ಕಲೆಯು ಬಳ್ಳಾರಿ ಜಿಲ್ಲೆಯಲ್ಲಿ ನಶಿಸಿದೆ ಎನ್ನಬಹುದು.

೨.೩. ಬಾಂಧಿನಿ ಕಲೆ

ಬಹು ಹಿಂದಿನಿಂದಲೂ ಉಡುಪನ್ನು ಶೃಂಗರಿಸಲು ನಾನಾ ಬಗೆಯ ಬಣ್ಣ, ವಿನ್ಯಾಸ, ಪಡಿಯಚ್ಚುಗಳನ್ನು ಉಪಯೋಗಿಸುವುದು ವಾಡಿಕೆಯಲ್ಲಿತ್ತು. ಮಧ್ಯಪ್ರದೇಶ, ರಾಜಸ್ಥಾನ, ಮಹಾರಾಷ್ಟ್ರ ಹಾಗೂ ಗುಜರಾತಿನ ಜನರು ಸರಳ ರೀತಿಯಲ್ಲಿ ತಮ್ಮ ಉಡುಪುಗಳನ್ನು ದಾರದಿಂದ ಬಂಧಿಸಿ ಬಣ್ಣ ಕಟ್ಟುತ್ತಿದ್ದರು. ಈ ಕಲೆಯೇ 'ಬಂಧಿನಿ' ಕಲೆ. ಈ ವಿಶಿಷ್ಟ ಕಲೆಯನ್ನು ಕರ್ನಾಟಕದಲ್ಲಿ ಬಾಂಧಿನಿ ಹಾಗೂ 'ಬಂಧಿನಿ', ರಾಜಸ್ಥಾನದಲ್ಲಿ 'ಚೂಂಡ್ರಿ', ತಮಿಳಿನಲ್ಲಿ 'ಚುಂಗ್ಡಿ' ಎಂತಲೂ ಕರೆಯುತ್ತಾರೆ.[೨೩] ಬಾಂಧಿನಿ ಕಲೆಯು ತುಂಬಾ ಸರಳವಾದುದು, ಹೆಚ್ಚು ಪರಿಶ್ರಮವಿಲ್ಲದೇ ಬಣ್ಣ ಕಟ್ಟುವ ಕಲೆಯನ್ನು ಕರಗತ ಮಾಡಿಕೊಂಡು, ಬೇಕಾದ ವಿನ್ಯಾಸವನ್ನು ಬಗೆ ಬಗೆಯ ಬಣ್ಣಗಳಿಂದ ಚಿತ್ರಿಸಲಾಗುತ್ತದೆ. ಸೌರಾಷ್ಟ್ರದ ಜಾಮನಗರ, ರಾಜಸ್ಥಾನದ ಕೋಟಾ, ಜಯಪುರ ಮತ್ತು ತಮಿಳುನಾಡಿನ ಮಧುರೈ ಮೊದಲಾದ ಕೆಲವೇ ಪ್ರದೇಶಗಳಲ್ಲಿ ಈ ಬಾಂಧಿನಿ ಕಲಾಶೈಲಿಯ ಸೀರೆಗಳು ಮತ್ತು ಉಡುಪುಗಳು ತಯಾರಾಗುತ್ತವೆ.

ಇಂತಹ ಬಾಂಧಿನಿ ಕಲೆ ಕರಗತ ಮಾಡಿಕೊಂಡ ಆಂಧ್ರಮೂಲದ ಕಲಾವಿದರಾದ ಬಳ್ಳಾರಿ ಜನಾರ್ದನ ಮತ್ತು ಲಕ್ಷ್ಮೀನಾರಾಯಣ ಎನ್ನುವವರು ಬಟ್ಟೆಗೆ ಬಂಧಿನಿ ಕಲೆಯನ್ನು ಮಾಡುತ್ತಿದ್ದರು. ಇವರು ೧೯೮೦–೨೦೦೦ರವರೆಗೆ ಬಳ್ಳಾರಿಯ ಪಟೇಲ್ ನಗರದಲ್ಲಿ ವಾಸವಾಗಿದ್ದರು. ಕಾರಣಾಂತರಗಳಿಂದ ಪ್ರಸ್ತುತ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. ಬಾಂಧಿನಿ ಬಟ್ಟೆಯನ್ನು ಗಂಟುಗಂಟಾಗಿ ಕಟ್ಟಿ ಅದನ್ನು ಬಣ್ಣದಲ್ಲಿ ಅದ್ದಿ ತೆಗೆದರೆ ವಿನ್ಯಾಸಾತ್ಮಕ ಬಂಧಿನಿ ಕಲೆ ಸಿದ್ಧ. ಇಂತಹ ಕಲೆಯು ಹೆಚ್ಚಾಗಿ ಈ ಜಿಲ್ಲೆಯಲ್ಲಿ ಬೇರೆ ಎಲ್ಲೂ ಕಂಡುಬರುವುದಿಲ್ಲ.

---

೨೨. ಕಾಮಾಕ್ಷಿ ಸಿ. ಸೊಪ್ಪಣ : ಕರ್ನಾಟಕದ ಬಟ್ಟೆ ಮಾಧ್ಯಮದ ಚಿತ್ರಕಲೆ, (ಅ.ಪ್ರ.ಪಿಎಚ್.ಡಿ.ಮ.ಪ್ರ.), ಪುಟ – ೧೨೪

೨೩. ಅದೇ., ಪುಟ – ೧೪೦

[illegible]

ಬಟ್ಟೆಯ ಮೇಲಿನ ಭಾಂದನಿ ಚಿತ್ರಕಲೆ



ಭಾಂದನಿ ಚಿತ್ರಕಲೆ



ಬಟ್ಟೆಯ ಮೇಲಿನ ಕಲಂಕಾರಿ ಚಿತ್ರಕಲೆ

III. ಚರ್ಮದ ಮೇಲಿನ ಚಿತ್ರಕಲೆ

ಜನಪದ ಚಿತ್ರಕಲಾ ಪರಂಪರೆಯ ಹರವು ವಿಸ್ತಾರವಾದದ್ದಾಗಿದ್ದು, ಕಟ್ಟಿಗೆ, ಕಲ್ಲು, ಗೋಡೆ, ಕಬ್ಬಿಣ ಕಾಗದದಂತಹ ವಸ್ತುಗಳ ಮೇಲೆ ಸ್ಥಾನ ಪಡೆದಂತೆ ಚರ್ಮದ ಮೇಲೆಯೂ ತನ್ನ ಅಸ್ತಿತ್ವವನ್ನು ಸಾಧಿಸಿದೆ. ಅಂತಹ ಕಲೆಗಳಲ್ಲಿ ಹಚ್ಚೆ, ಮೆಹಂದಿ, ತೊಗಲುಗೊಂಬೆ, ಹುಲಿವೇಷಗಳು ಚಿತ್ರಕಲೆಗಳಾಗಿವೆ.

೩.೧. ಹಚ್ಚೆ

ಬಹಳ ಹಿಂದಿನಿಂದಲೂ ಅತ್ಯಂತ ವ್ಯಾಪಕವೂ ಹಾಗೂ ಜನಪ್ರಿಯವೂ ಆಗಿ ಬೆಳೆದು ಬಂದ ಹಚ್ಚೆ ಸಂಪ್ರದಾಯ ಇಂದಿಗೂ ನಮ್ಮ ಮಧ್ಯೆ ಜೀವಂತವಾಗಿದೆ. ಆದರೆ ಇರುವ ನಂಬಿಕೆಗಳು, ಹಚ್ಚೆ ಹಾಕುವ ಪದ್ಧತಿ ಮಾತ್ರ ಬೇರೆಯಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಈ ಹಚ್ಚೆ ಕಲೆಗೆ ಒಂದು ವಿಶಿಷ್ಟವಾದ ಸ್ಥಾನ ಕೊಡಲಾಗಿದೆ. ಈ ಭಾಗದಲ್ಲಿ ಕೆಲವರು ಈ ಕಲೆಯನ್ನು ತಮ್ಮ ಕಸುಬಾಗಿಸಿಕೊಂಡಿದ್ದಾರೆ. ಈ ಕಲೆಯು ಆಧುನಿಕತೆಗೆ ಮಾರ್ಪಾಟುಗೊಂಡಿದೆ. ಸಂಪ್ರದಾಯದ ಕಲಾವಿದರು ಇದ್ದರೂ ಈ ಕಲೆಯನ್ನು ಕೈ ಬಿಟ್ಟಿದ್ದು. ಈ ಸಾಂಪ್ರದಾಯಿಕ ಕಲೆಯ ಬಗ್ಗೆ ಅಪಾರವಾದ ಪ್ರೀತಿಯನ್ನು ಇಟ್ಟುಕೊಂಡಿದ್ದಾರೆ. ಈ ಕಲೆಯು ಪೂರ್ವಿಕರಿಂದ ಬಂದಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಇವರು ಪೂರ್ವಿಕರಿಂದ ಬಂದಿದ್ದು ಎಂದ ಕೂಡಲೇ ಇದರ ಪ್ರಾಚೀನತೆ ಆಸಕ್ತಿದಾಯಕವಾಯಿತು.

ಹಚ್ಚೆ ಸಂಪ್ರದಾಯದ ಪ್ರಾಚೀನತೆ

ಕ್ರಿ.ಪೂ. ೪೫೦ರಲ್ಲಿ ಹಚ್ಚೆ ಹಾಕಿಸಿಕೊಂಡ ವಿವರ ಬರುತ್ತದೆ.[೨೪] ಇನ್ನೊಂದು ಅಭಿಪ್ರಾಯದಂತೆ ಕ್ರಿ.ಪೂ. ೨೦೦೦ಕ್ಕೆ ಸೇರಿದ ಈಜಿಪ್ತಿನ 'ಮಮ್ಮಿ'(ರಕ್ಷಿತ ಶವ)ಯೊಂದರ ಮೇಲೆ ಹಚ್ಚೆ ಇದ್ದುದು ಕಂಡುಬಂದಿದೆ.[೨೫] ಕರ್ನಾಟಕದಲ್ಲಿ ಹಚ್ಚೆ ಯಾವಾಗ ಬಂದಿತೆಂಬುದನ್ನು ಹೇಳುವುದು ಕಷ್ಟ. ಸುಮಾರು ಕ್ರಿ.ಶ. ೧೨೫೦ ಶತಮಾನದ ಮಲ್ಲಿಕಾರ್ಜುನ ಸೂಕ್ತಿ ಸುಧಾರ್ಣವದಲ್ಲಿ "ಅಣಚಿತನವಂ ಕೈಕೊಲ್ ನಿನ್ನೊೀತಿ ಭಾಗ್ಯದ ಭದ್ರಲಕ್ಷಣದ ಪದದೋಳ್ ಸಂದೀ ಸೌಭಾಗ್ಯದಿಂ ಸ್ವಜನಗಳಿಂ ತಣಿಸಿ"[೨೬] ಎಂಬ ವಾಕ್ಯದಲ್ಲಿ ಪ್ರಯೋಗಗೊಂಡಿರುವ 'ಅಣಚಿ' ಎನ್ನುವ ಪದ ಸ್ತ್ರೀಯ ಸೌಭಾಗ್ಯದ ಲಕ್ಷಣವನ್ನು ತಿಳಿಸುತ್ತದೆ. ಅಲ್ಲದೆ ಚೆನ್ನಬಸವಣ್ಣನವರ ವಚನಗಳಲ್ಲಿ ಹರಭಕ್ತರು ಹಸಿರು ಹಚ್ಚೆಗಳನ್ನು ಹಾಕಿಸಿಕೊಳ್ಳುವುದು ತಪ್ಪು ಎಂಬ ಮಾತು ಬರುತ್ತದೆ. ಹಚ್ಚೆ ಹಾಕಿಸಿಕೊಂಡ ಹರಭಕ್ತೆಯ ಕೈಯಿಂದ ಕೊಂಬ ಪ್ರಸಾದದಲ್ಲಿ ಅದು ನರಮಾಂಸ, ಹೆಂಡ ಹಾಗೂ ನಾಯಿಯ ರಕ್ತಕ್ಕೆ ಸಮಾನ ಎಂದು ಕಟುವಾಗಿ ಟೀಕಿಸುತ್ತಾರೆ. ಈ ಉದಾಹರಣೆಗಳಿಂದ ಸುಮಾರು ೧೨ನೇ

---

೨೪. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ – ೭೩

೨೫. ನಿರಂಜನ (ಸಂ.) : ಜ್ಞಾನಗಂಗೋತ್ರಿ (ಕಿರಿಯರ ವಿಶ್ವಕೋಶ), ಸಂ– ೬, ಪುಟ – ೬೫೪

೨೬. ಎನ್. ಅನಂತರಂಗಾಚಾರ್ಯ (ಸಂ.) : ಮಲ್ಲಿಕಾರ್ಜುನ ಸೂಕ್ತಿಸುಧಾರ್ಣವ, ಪುಟ – ೬

ಶತಮಾನದಷ್ಟು ಹಿಂದೆಯೇ ಕರ್ನಾಟಕದಲ್ಲಿ ಹಚ್ಚೆ ಪ್ರಚಾರದಲ್ಲಿತ್ತು ಎಂಬುದು ತಿಳಿಯುತ್ತದೆ.[೨೭] ವಿದೇಶಿ ಪ್ರವಾಸಿಗರಾದ ನಿಕೊಲೊ ಕೊಂಟಿ ಹಾಗೂ ತಾವರನ್ನೊ ಅವರ ಪ್ರವಾಸಿಬರಹಗಳಲ್ಲಿ ಕರ್ನಾಟಕದ ಹಚ್ಚೆಯ ಪ್ರಸ್ತಾಪ ಬರುತ್ತದೆ.

ಕ್ರಿ.ಶ. ೧೬೪೧–೧೬೬೭ರಲ್ಲಿ ಭೆಟ್ಟಿ ನೀಡಿದ ತಾವರನ್ನೊ, ಹೆಂಗಸರು ಸೊಂಟದ ಮೇಲ್ಭಾಗವನ್ನು ಬಗೆ ಬಗೆಯ ಹೂಗಳಂತೆ ಹಚ್ಚೆ ಹೊಯ್ಯಿಸಿ ಅಲಂಕಾರ ಮಾಡಿಕೊಂಡಿರುತ್ತಾರೆ. ಆ ಹೂವಿನ ಹಚ್ಚೆಗೆ ಯಾವುದೋ ಚೇರಿನ ಸರದಿಂದ ವಿಧ ವಿಧವಾದ ಬಣ್ಣ ಹಾಕುತ್ತಾರೆ. ಆಗ ಅವರ ಚರ್ಮವು ಹೂವನ್ನು ನೇಯ್ದ ಬಟ್ಟೆಯಂತೆ ಕಾಣುತ್ತದೆ ಎಂದಿದ್ದಾರೆ. ಕ್ರಿ.ಶ. ೧೪೪೪ರಲ್ಲಿ ಭಾರತಕ್ಕೆ ಬಂದು ವಿಜಯನಗರಕ್ಕೆ ಭೇಟ್ಟಿ ನೀಡಿದ ನಿಕೊಲೊ ಕೊಂಟಿ 'ಇಲ್ಲಿ ಹೆಂಗಸರು ಗಂಡಸರೆಂಬ ಭೇದವಿಲ್ಲದೆ ಹಚ್ಚೆ ಹಾಕಿಸಿಕೊಳ್ಳುತ್ತಾರೆ' ಎಂದು ಬರೆದಿದ್ದಾನೆ.[೨೮] ಹಲವು ಮಹನೀಯರ ಹಚ್ಚೆ ಕುರಿತು ಸಾಂದರ್ಭಿಕ ಅನಿಸಿಕೆಗಳೇ ಈ ಕಲೆಯ ಪ್ರಾಚೀನತೆಗೆ ಪುಷ್ಟಿದಾಯಕವಾಗಿವೆ.

ನಂಬಿಕೆಗಳು

ಹಲವು ಜನರು ತಮ್ಮದೇಯಾದ ನಂಬಿಕೆಯಲ್ಲಿ ಹಚ್ಚೆಯನ್ನು ಹಾಕಿಸಿಕೊಳ್ಳುತ್ತಾರೆ. ನಂಬಿಕೆ ಹಲವು. ಅವುಗಳಲ್ಲಿ ಸತ್ತರೆ ಈ ಹಚ್ಚೆಯು ನಮ್ಮ ಹಿಂದೆ ಬರುತ್ತದೆ. ಮತ್ತೇನೂ ಬರುವುದಿಲ್ಲ ಎನ್ನುವುದು ಹಲವು ಜನರ ಮುಖ್ಯವಾದ ಅಂಶವಾಗಿದೆ. ಎರಡನೆಯದಾಗಿ ಪ್ರೀತಿಯ ಸಂಕೇತವಾಗಿ ಹಾಕಿಸಿಕೊಳ್ಳುವ ವ್ಯಕ್ತಿ ಸ್ವತಃ ಹಾಕಿಸಿಕೊಳ್ಳದೇ ತಮ್ಮ ಸ್ನೇಹಿತರು, ಅಣ್ಣ, ತಮ್ಮ, ತಂಗಿ ಇವರ ನೆನಪಿಗಾಗಿ ಹಾಕಿಸುವರು. ಇತ್ತೀಚಿನ ದಿನಗಳಲ್ಲಿ ಸೌಂದರ್ಯ ಪ್ರತೀಕವಾಗಿ ಆಧುನಿಕ ಪದ್ಧತಿಯಲ್ಲಿ ಹಚ್ಚೆಯನ್ನು ಹಾಕಿಸಿಕೊಳ್ಳುತ್ತಾರೆ.

ಈ ಹಚ್ಚೆಯು ಕಲ್ಪನೆಯಾದರೂ ಹೇಗೆ ಜನರಲ್ಲಿ ಬಂದಿತು ಎನ್ನುವುದಕ್ಕೆ ಹರ್ಬರ್ಟ್ ಸ್ಪೆನ್ಸರ್ ಎನ್ನುವ ವಿದ್ವಾಂಸ, ಆದಿಮಾನವರು ಭೂತ–ಪ್ರೇತಗಳಿಗೆ ಮತ್ತು ಸತ್ತ ನಾಯಕನಿಗೆ ರಕ್ತತರ್ಪಣ ಮಾಡಲೋಸುಗ ಈ ಸಂಪ್ರದಾಯವನ್ನು ಬೆಳೆಸಿಕೊಂಡು ಬಂದಿರಬಹುದೆಂದು ಊಹಿಸುತ್ತಾರೆ. ದೇಹವನ್ನು ರೂಪುಗೊಳಿಸುವ ಕ್ರಿಯೆ ಅನೇಕ ಆದಿವಾಸಿ ಜನಾಂಗಗಳಲ್ಲಿ ಧಾರ್ಮಿಕ ವಿಧಿಯಾಗಿ ಉಳಿದುಕೊಂಡು ಬಂದಿರುವುದನ್ನು ಇಂದಿಗೂ ನಾವು ಕಾಣಬಹುದು. ತಿರುವಾಂಕೂರಿನ ಕಾಡಿನಲ್ಲಿ ವಾಸವಾಗಿರುವ 'ಕಾಡಾರ್' ಎನ್ನುವ ಜನಾಂಗ ಕೆಳದವಡೆಯ ಮತ್ತು ಮೇಲಿನ ದವಡೆಯ ಕೋರೆ ಹಲ್ಲುಗಳನ್ನು ಚೂಪುಗೊಳಿಸುವುದು, ಆಸ್ಟ್ರೇಲಿಯಾದ 'ಬಂತೂಸ್' ಮತ್ತು 'ಕಾಂಗೋ' ನಿವಾಸಿಗಳು ತಮ್ಮ ಹಲ್ಲುಗಳನ್ನು ಕಿತ್ತುಕೊಳ್ಳುವುದು ಇಂದಿಗೂ ನಡೆಯುತ್ತಿದೆ. ಬೆಂಗಳೂರು ಜಿಲ್ಲೆಯಲ್ಲಿ ವಾಸವಾಗಿರುವ ಮರಸು ಒಕ್ಕಲು ಎನ್ನುವ ಜನಾಂಗ

೨೭. ಪ್ರೊ. ಕಾಳೇಗೌಡ ನಾಗವಾರ, ಎನ್. ಹುಚ್ಚಪ್ಪ ಮಾಸ್ತರ್ : ಗಿರಿಜನ ಸಂಸ್ಕೃತಿ, ಪುಟ – ೧೦೪

೨೮. ಎಚ್. ಎಲ್. ನಾಗೇಗೌಡ : ಪ್ರವಾಸಿ ಕಂಡ ಇಂಡಿಯಾ, ಸಂ–೨, ಪುಟ – ೩೨೧

ದೇವರಿಗಾಗಿ ತಮ್ಮ ಬೆರಳುಗಳನ್ನು ಕತ್ತರಿಸಿಕೊಂಡು ಅರ್ಪಿಸುತ್ತಾರೆ. 'ಮಲಯ' ಎನ್ನುವ ಜನಾಂಗ ತಮ್ಮ ಹಲ್ಲುಗಳನ್ನು ಕಪ್ಪು ಮಾಡಿಕೊಂಡು ಕುರೂಪಗೊಳಿಸಿಕೊಳ್ಳುತ್ತಾರೆ. ಕರ್ನಾಟಕದಲ್ಲಿ ಈಗಲೂ ಅನೇಕ ಜನ ತಮ್ಮ ಹಲ್ಲುಗಳನ್ನು ಶಾಶ್ವತವಾಗಿ ಕಪ್ಪುಗೊಳಿಸಿಕೊಳ್ಳುತ್ತಾರೆ. ಅವರಿಗೆ ಇದು ಸೌಂದರ್ಯವನ್ನು ಹೆಚ್ಚಿಸುತ್ತದೆ ಎನ್ನುವ ಭಾವನೆ ಇದೆ.

ಹಚ್ಚೆ ಸಂಪ್ರದಾಯ ಹಾಗೂ ದೇಹದ ಭಾಗಗಳನ್ನು ವಿಕೃತಗೊಳಿಸಿಕೊಳ್ಳುವ ಸಂಪ್ರದಾಯ ಧರ್ಮ, ರಕ್ಷಣೆ, ಸೌಂದರ್ಯ ಮುಂತಾದ ನಂಬಿಕೆಗಳ ಹಿನ್ನೆಲೆಯಲ್ಲಿ ಬೆಳೆದು ಬಂದಿದೆ ಎಂಬುದು ತಿಳಿಯುತ್ತದೆ.[೨೯] ಇದಲ್ಲದೇ ಮಾನವನ ದೇಹದ ನರಗಳು ಹಸಿರಾಗಿರುವಂಥವು, ೭೨೦೦೦ ನರಗಳು ಮಾನವನ ದೇಹದಲ್ಲಿ ಇವೆ. ಈ ನರಗಳ ಕಾರ್ಯವು ಮಹತ್ವದ್ದಾಗಿದೆ. ಅದು ವಿಶೇಷವಾಗಿ ಕೈಗಳ ನರ-ನಾಡಿಗಳ ಮೇಲೆ ಹಚ್ಚೆ ಹಾಕುವುದರಿಂದ ಗರ್ಭಕೋಶದ ಸಮಸ್ಯೆ ದೂರವಾಗುವುದಕ್ಕೆ ಕೂಡ ಈ ಹಚ್ಚೆ ಹಾಕುತ್ತಿರಬಹುದು. ಈ ಹಚ್ಚೆ ಮೊದಲಿಗೆ ಕೈಯ ಎಲ್ಲಾ ಭಾಗಕ್ಕೆ ಹಾಕಲಾಗಿ ನಂತರ ಹಣೆ, ಗಲ್ಲ, ದೇಹದ ಮುಂತಾದ ಭಾಗದಲ್ಲಿ ಹಾಕಲಾಯಿತು. ಈಗಲೂ ಆಸ್ಪತ್ರೆಗೆ ರೋಗಿಯು ಹೋದಾಗ ಕೈಯಲ್ಲಿಯ ನಾಡಿ ಪರೀಕ್ಷೆ ಮಾಡಿದರೆ ಸಾಕು, ಆ ರೋಗಿಯ ಆರೋಗ್ಯದ ಸ್ಥಿತಿ ತಿಳಿಯುತ್ತದೆ. ಮತ್ತು ಈಗ ವೈದ್ಯಕೀಯ ತೆರಪಿಯಲ್ಲಿ 'ಆಕ್ಯುಪ್ರೆಷರ್' ಎನ್ನುವ ಮತ್ತೊಂದು ಬಗೆಯ ಚಿಕಿತ್ಸಾ ವಿಧಾನವಾಗಿದೆ. ಈ ಚಿಕಿತ್ಸೆಯಲ್ಲಿ ರೋಗಸಂಬಂಧಿತ ನರ-ನಾಡಿ ಒತ್ತುವುದರಿಂದ ಈ ಕಾಯಿಲೆ ವಾಸಿ ಮಾಡಲಾಗುತ್ತದೆ.

ಈ ಹಚ್ಚೆಯು ಸಹ ಚರ್ಮದ ಒಂದು ಎರಡು ಪದರುಗಳವರೆಗೆ ಹೋಗುವಂಥದ್ದಾಗಿದೆ. ಸೂಜಿಯ ಮೂಲಕ ಆಕ್ಯುಪ್ರೆಷರ್' ಆಗಿ ಆರೋಗ್ಯ ಸುಧಾರಿಸುವ ದೃಷ್ಟಿ ಕೂಡ ಉಳ್ಳದ್ದಾಗಿರಬಹುದು. ಮತ್ತು ಮಹಿಳೆಗೆ ಬಳೆಯು ಕೂಡ ಹಸಿರಾಗಿರುವ ನಿಯಮವನ್ನು ಮಾಡಲಾಯಿತು. ಈ ಬಣ್ಣದಿಂದ ಕಣ್ಣಿಗೆ ತಂಪುಕೊಡುವ ಸಂಬಂಧವು ಆಗಿರಬಹುದು.

ಹಚ್ಚೆಯ ವಿಧಗಳು

ಅಧ್ಯಯನ ದೃಷ್ಟಿಯಿಂದ ಇಲ್ಲಿ ಎರಡು ರೀತಿಯಲ್ಲಿ ಭಾಗ ಮಾಡಲಾಗಿದ್ದು, ಜನಪದರ ಸಾಂಪ್ರದಾಯಿಕ ಹಚ್ಚೆಕಲೆ ಮತ್ತು ಆಧುನಿಕ ಹಚ್ಚೆಕಲೆ.

ಸಾಂಪ್ರದಾಯಿಕ ಹಚ್ಚೆ ಕಲೆ

ಈ ಪದ್ಧತಿಯಲ್ಲಿ ಒಬ್ಬರಿಂದ ಮತ್ತೊಬ್ಬರಿಗೆ ಈ ಕಲೆಯು ವರ್ಗವಾಗಿ ವೃತ್ತಿ ಮುಂದುವರಿಸಿಕೊಂಡು ಹೋಗುವುದಾಗಿತ್ತು. ಈ ಪದ್ಧತಿಯಲ್ಲಿ ಸಾಂಪ್ರದಾಯಿಕ ಪರಿಕರಗಳು ವರ್ಗಗೊಳ್ಳುತ್ತಿದ್ದವು. ಬಣ್ಣ, ಸೂಜಿಗಳು, ಚಿತ್ರ ಬರೆಯುವ ಕಡ್ಡಿ, ಹಚ್ಚೆಯ ಚಿತ್ರಗಳಿರುವ ಪುಸ್ತಕ ಈ ಪರಿಕರಗಳೊಂದಿಗೆ 'ಹಚ್ಚೆ' ಎಂದು ಕೂಗುತ್ತಾ ಅಲೆಯುವುದು, ಬೇಡಿಕೆಯಿರುವವರಿಗೆ ಹಚ್ಚೆ ಹಾಕುವುದು, ಇದು ಸಾಂಪ್ರದಾಯಿಕವಾದ ಪದ್ಧತಿಯಾಗಿದೆ.

---

೨೯. ಪ್ರೊ. ಕಾಳೇಗೌಡ ನಾಗವಾರ, ಎನ್. ಹುಚ್ಚಪ್ಪ ಮಾಸ್ತರ್ : ಗಿರಿಜನ ಸಂಸ್ಕೃತಿ, ಪುಟ – ೧೦೩

ಬಣ್ಣ

ಬಳ್ಳಾರಿ ಭಾಗದಲ್ಲಿ ಹಚ್ಚೆ ಮಸಿಗೆ "ಹಚ್ಚೆಯ ಕಪ್ಪು ತಯಾರಿಸುವುದು" ಎನ್ನುತ್ತಾರೆ. ಹಚ್ಚೆಯ ಕಪ್ಪು(ಬಣ್ಣ)ವನ್ನು ಸಿದ್ಧಗೊಳಿಸುವ ರೀತಿ ಹೀಗಿದೆ: ಹೊಸ ಗಡಿಗೆಯನ್ನು ತಂದು, ಗಡಿಗೆಯ ಮೇಲಿನ ಕಂಠ ಒಡೆದು ಗಡಿಗೆಯನ್ನು ಕಂಠರಹಿತ ಮಾಡುವರು. ನಂತರ ಹಚ್ಚೆ ಸೊಪ್ಪು, ಒಣ ಅಂಚರಿಕೆ ಸೊಪ್ಪು, ಅರಿಷಿಣಗಳನ್ನು ಸಮನಾಗಿ ಕೂಡಿಸಿ, ಕುಟ್ಟಿ, ನೀರು ಬೆರೆಸಿ ರಸ ಮಾಡುತ್ತಾರೆ. ಈ ರಸವನ್ನು ಆ ಹೊಸ ಗಡಿಗೆಯ ಒಳಬದಿಗೆ ಲೇಪಿಸುತ್ತಾರೆ. ಇದಾದ ಮೇಲೆ ಅರ್ಧಕಿಲೋ ಒಳ್ಳೆ ಎಣ್ಣೆ, ಔಡಲ ಎಣ್ಣೆಯನ್ನು ಪಣತಿಯಲ್ಲಿ ಹಾಕಿ ಒಂಭತ್ತು ಬತ್ತಿಗಳು ಪಣತಿಯಲ್ಲಿ ಉರಿಯುವಂತೆ ಮಾಡಿ, ಅದನ್ನು ಆ ಹೊಸ ಗಡಿಗೆಯಲ್ಲಿ ಇಡುತ್ತಾರೆ. ಆ ಗಡಿಗೆಯ ಮೇಲೆ ಡಬ್ಬಿಯೊಂದನ್ನು ಮುಚ್ಚುತ್ತಾರೆ. ಸಮಾನಾಂತರದಲ್ಲಿರುವ ಬೆರಳಳತೆಯ ಬತ್ತಿಗಳು ರಾತ್ರಿಯಿಡೀ ಉರಿಯುತ್ತವೆ. ಬೆಳಿಗ್ಗೆ ಮುಚ್ಚಳ ತೆಗೆದಾಗ ದೀಪದ ಕಪ್ಪು, ಹಚ್ಚೆಯ ಸೊಪ್ಪಿನ ಒಣ ಅಂಬರಕಿ ಸೊಪ್ಪಿನ ಅರಿಷಿಣ ಮಿಶ್ರಣದ ರಸದೊಂದಿಗೆ ಸರಿ ಬೆರಕೆಯಾಗಿರುತ್ತದೆ. ಈ ಕಪ್ಪನ್ನು ಸಣ್ಣ ಕುಡಿಕೆಯಲ್ಲಿ ಸಂಗ್ರಹಿಸುತ್ತಾರೆ.[೩೦] ಈ ಕಪ್ಪನ್ನು ಉಪಯೋಗಿಸಿ ಹಚ್ಚೆಯನ್ನು ಹಾಕುತ್ತಾರೆ.

ಈ ಜಿಲ್ಲೆಯಲ್ಲಿ ಈ ಪದ್ಧತಿಯಲ್ಲಿ ಬಣ್ಣವನ್ನು ತಯಾರಿಸಿದರೆ, ಕರ್ನಾಟಕದ ಬೇರೆ ಬೇರೆ ಕಡೆಗಳಲ್ಲಿ ಹಲವು ಪದ್ಧತಿಯಲ್ಲಿ ಹಚ್ಚೆಯ ಬಣ್ಣವನ್ನು ತಯಾರಿಸುತ್ತಾರೆ. ಇದ್ದಿಲಿನ ನುಣುಪಾದ ಪುಡಿಗೆ ಹಚ್ಚೆ ಸೊಪ್ಪಿನ ರಸವನ್ನು ಬೆರೆಸಿದರೆ ಬಣ್ಣ ಬರುತ್ತದೆ. ಹಾಗಲ ರಸ ಅಥವಾ ಚಪ್ಪರದವರೆ ರಸವನ್ನು ಮಣ್ಣಿನ ಮಡಿಕೆಯಲ್ಲಿ ಹಾಕಿ ಸ್ವಲ್ಪ ಬೆಚ್ಚಗೆ ಮಾಡಿದರೆ ಲೋಳೆಯಾಕಾರದ ರಸ ಬರುತ್ತದೆ. ಇದನ್ನು ಹಚ್ಚೆಗೆ ಉಪಯೋಗಿಸುತ್ತಾರೆ. ಮತ್ತು ತುಂಬೇ ಸೊಪ್ಪಿನ ರಸಕ್ಕೆ ಮೊಲೆಹಾಲು ಮತ್ತು ಕೊಬ್ಬರಿ ಎಣ್ಣೆ ಬೆರೆಸಿ ಬಣ್ಣ ತಯಾರಿಸಬಹುದು. ಹೀಗೆ ನಾನಾ ವಿಧದಲ್ಲಿ ಕಪ್ಪನ್ನು ತಯಾರಿಸುತ್ತಾರೆ.[೩೧] ಈ ಒಂದೇ ಬಣ್ಣವನ್ನು ಎಲ್ಲಾ ಪ್ರಕಾರದ ಚಿತ್ರಗಳಿಗೂ ಉಪಯೋಗಿಸುತ್ತಾರೆ.

ಸೂಜಿ ಕಡ್ಡಿ ಹಾಗೂ ಹಚ್ಚೆಯ ಪುಸ್ತಕ

ಹಚ್ಚೆಯ ಸೂಜಿಯು ಕುಂಚದ ಕಾರ್ಯ ನಿರ್ವಹಿಸುತ್ತದೆ. ಆದರೆ ಇದರ ಪದ್ಧತಿ ಕುಟುಕುವುದರ ಮೂಲಕ ಹಚ್ಚೆಯ ಕಪ್ಪು ಚರ್ಮಪದರಿಗೆ ತಾಕುವಂತೆ ಮಾಡುವುದರ ಮೂಲಕ ಚಿತ್ರ ಒಯ್ಯುತ್ತಾರೆ. ಚಿತ್ರದ ಕಡ್ಡಿಯು ವರ್ತಿಕ (ಪೆನ್ಸಿಲ್) ಕೆಲಸ ನಿರ್ವಹಿಸುತ್ತಾ ಹಚ್ಚೆ ಹಾಕುವ ಮೊದಲು ಕರಡು (Key Sketch) ಹಾಕಲಾಗುತ್ತದೆ. ಆದರೆ ಈ ಕಡ್ಡಿಯಿಂದ ಕಪ್ಪಲ್ಲಿ ಅದ್ದಿ ಅದರಿಂದ ಚಿತ್ರವನ್ನು ಬಿಡಿಸಿಕೊಳ್ಳಲಾಗುತ್ತದೆ. ಮತ್ತು ಹಚ್ಚೆ ಚಿತ್ರವಿರುವ ಪುಸ್ತಕವು ಹಚ್ಚೆ ಹಾಕುವವರಿಗೆ, ಹಾಕಿಸಿಕೊಳ್ಳುವವರಿಗೆ ಚಿತ್ರದ ಮಾರ್ಗದರ್ಶಕದಂತೆ ಕಾರ್ಯ ನಿರ್ವಹಿಸುತ್ತದೆ.

೩೦. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ – ೯೦

೩೧. ಪ್ರೊ. ಕಾಳೇಗೌಡ ನಾಗವಾರ, ಎನ್. ಹುಚ್ಚಪ್ಪ ಮಾಸ್ತರ್ : ಗಿರಿಜನ ಸಂಸ್ಕೃತಿ, ಪುಟ – ೧೦೮

ಈ ಚಿತ್ರಗಳಿಗೆ ಒಳ ಅರ್ಥವು ಇರುವುದಾಗಿ ಹಚ್ಚೆ ಚಿತ್ರ ಹೊಯ್ಯುವವರು ಹೇಳುತ್ತಾರೆ. ಉದಾ: ಏಣಿಯ ಚಿತ್ರ ಹಾಕುವುದರಿಂದ ಮನೆತನದಲ್ಲಿ ಹೆಚ್ಚಳಿಕೆ(ಶ್ರೀಮಂತ) ಆಗುವುದು, ಚಂದ್ರನ ಚಿತ್ರ ಹಾಕಿಸಿಕೊಳ್ಳುವುದರಿಂದ ಮನಸ್ಸು ಯಾವಾಗಲೂ ತಂಪಾಗಿರುತ್ತದೆ. ಹೀಗೆ ನಾನಾ ನಂಬಿಕೆಗಾಗಿ, ಚಿತ್ರಕ್ಕಾಗಿ ಪುಸ್ತಕವನ್ನು ಉಪಯೋಗಿಸುತ್ತಾರೆ.

ಹಚ್ಚೆ ಹಾಕುವ ಪದ್ಧತಿ

ಹಚ್ಚೆ ಹಾಕುವಾಗ ಹಚ್ಚೆ ಹಾಕಿಸಿಕೊಳ್ಳುವವರಿಗೆ ನೋವು ಕಾಣದೇ ಇವರ ಗಮನ ಮತ್ತೊಂದು ಕಡೆ ಸೆಳೆಯಲು ಹಾಡುಗಳನ್ನು ಹಾಡುತ್ತಾರೆ.

ಹಂಚಿ ಬಟ್ಟಿನ ಗರತಿ ಹಾದ್ಹೋಗ ನನ್ನ ಓಣ್ಯಾಗ
ಚೊಚ್ಚಲ ಬಸರು ನನ ಮಗಳು।
ಚೊಚ್ಚಲ ಬಸರು ನನ ಮಗಳ ಕೈಯಾಗ
ಹಂಪಿಯ ತೇರು ಬರಿ ಬಾರೆ॥ ಇಂತಹ ಹಲವು ಬಗೆಯ ಹಾಡುಗಳನ್ನು ಹಾಡುತ್ತಾ,

ಹಚ್ಚೆ ಚಿತ್ರಗಳಾದ ಸೂರ್ಯ, ಚಂದ್ರ, ಚೇಳು, ಹಾವು, ಸೀತೆಮುಡಿ, ಚಕ್ರ, ಗುಂಡು, ಹೂ, ನಾಮ, ಎಲೆ, ಬಳ್ಳಿ, ಕಮಲ, ತೇರು, ರಾಮನ ತೊಟ್ಟಿಲು, ನಂದಿ, ಸೀತೆಯ ಬಲೆ, ಅಕ್ಷರದಲ್ಲಿ ಹೆಸರುಗಳು ಮುಂತಾದ ಚಿತ್ರಗಳನ್ನು ಕಡ್ಡಿಯಿಂದ ಗುರುತಿಸಿಕೊಳ್ಳುತ್ತಾರೆ. ನಂತರ ಹಚ್ಚೆ ಹಾಕುವ ಸೂಜಿಯಿಂದ ಚಿತ್ರದ ಅನುಸಾರವಾಗಿ ಕುಟುಕುತ್ತಾ ಚಿತ್ರ ಪೂರ್ಣಗೊಳಿಸುತ್ತಾರೆ. ಈ ಹಚ್ಚೆಯ ಕಲಾವಿದರು ಸಣ್ಣ ಚಿತ್ರದಿಂದ ಹಿಡಿದು ದೊಡ್ಡ ಚಿತ್ರದವರೆಗೂ ಹಚ್ಚೆ ಹಾಕುತ್ತಾರೆ. ಇವರಿಗೆ ಒಂದು ಬಾರಿ ಚಿತ್ರ ತೋರಿಸಿಕೊಟ್ಟರೆ ಹಾಗೆಯೇ ಹಾಕುತ್ತಾರೆ. ಅಷ್ಟು ಬೇಗನೆ ಕಲೆಯನ್ನು ಆಸಕ್ತಿಯಿಂದ ಕಲಿಯುತ್ತಾರೆ. ಮತ್ತು ಅನಕ್ಷರಸ್ಥರು ಕೂಡ ಆಗಿರುತ್ತಾರೆ. ಹೀಗಿದ್ದರೂ ಕೂಡ ಅಕ್ಷರಗಳಲ್ಲಿ ಹೆಸರುಗಳನ್ನು ಹೀಗೆ ಎಂದು ತೋರಿಸಿಕೊಟ್ಟರೂ ಆ ಹೆಸರುಗಳನ್ನು ಹಾಗೆಯೇ ಹಾಕುತ್ತಾರೆ. ಆದ್ದರಿಂದ ಇವರ ಸಮರ್ಥ ಕಲಾವಂತಿಕೆ ಮೆಚ್ಚುವಂಥದ್ದಾಗಿದೆ. ಚಿತ್ರಗಳಿಗೆ ತಕ್ಕಂತೆ ಸಂಭಾವನೆಯನ್ನು ಕೂಡ ತೆಗೆದುಕೊಳ್ಳುತ್ತಾರೆ.

ಸಾಂಪ್ರದಾಯಿಕ ಹಚ್ಚೆಯ ವಿನ್ಯಾಸ

ಸಾಂಪ್ರದಾಯಿಕವಾಗಿ ಕಂಡುಬರುವ ಹಚ್ಚೆ ಚಿತ್ರವಿನ್ಯಾಸಗಳು ಸೂರ್ಯ, ಚಂದ್ರ, ಚೇಳು, ಹಾವು, ಶಿವನ ಮುಡಿ, ಬಳ್ಳಿ, ಎಲೆ, ಕಮಲ, ತೇರು, ಶಿವನ ಕಣ್ಣು, ಸೀತೆಮುಡಿ, ನಂದಿ, ರಾಮನ ತೊಟ್ಟಿಲು, ಅಕ್ಷರ ಹೆಸರುಗಳು ಮುಂತಾದ ಚಿತ್ರರಚನೆಯನ್ನು ವಿನ್ಯಾಸಮಯವಾಗಿ ಜನಪದೀಯ ಲಕ್ಷಣದೊಂದಿಗೆ ವಿನ್ಯಾಸಗಳಾಗಿ ಮೂಡಿಸುತ್ತಾರೆ. ಈ ಎಲ್ಲಾ ವಿನ್ಯಾಸಗಳು ನೈಜ ಸ್ವರೂಪದಲ್ಲಿ ಇಲ್ಲದಿದ್ದರೂ ಮೂಲ ಚಿತ್ರದ ಪರಿಕಲ್ಪನೆಯನ್ನು ಕಲಾವಿದರು ಹೊಂದಿದ್ದು, ಚಿತ್ರಲಕ್ಷಣದಲ್ಲಿ ಕಂಡುಬರುತ್ತದೆ. ಉದಾಹರಣೆಯಾಗಿ ಒಂದು ಚಿತ್ರ ವಿನ್ಯಾಸವನ್ನು ಈ ಕೆಳಗಿನಂತೆ ಚರ್ಚೆಗೆ ಒಳಪಡಿಸಲಾಗಿದೆ.

ಚರ್ಮದ ಮೇಲಿನ ಹಚ್ಚೆ ಚಿತ್ರಕಲೆ



ಹಚ್ಚೆ ಹಾಕುವ ವಿದಾನ



ಹಚ್ಚೆ ಚಿತ್ರಕಲೆ

ತೇರು ವಿನ್ಯಾಸದ ಹಚ್ಚೆ ಚಿತ್ರ

ತೇರಿನಂಥ ವಿನ್ಯಾಸವನ್ನು ಹಚ್ಚೆಕಲೆಯಲ್ಲಿ ದೊಡ್ಡ ಮತ್ತು ಚಿಕ್ಕ ಗಾತ್ರದಲ್ಲಿ ಕೈಗೆ ವಿನ್ಯಾಸಗೊಳಿಸುತ್ತಾರೆ. ಈ ತೇರಿನ ವಿನ್ಯಾಸವು ತ್ರಿಕೋನ ಆಕಾರಕ್ಕೆ ಎಡ ಬಲದಲ್ಲಿ ಬಳ್ಳಿಯನ್ನು ಹಾಕಲಾಗುತ್ತದೆ. ತ್ರಿಕೋನದ ತುದಿಯಲ್ಲಿ ತ್ರಿಶೂಲ ಆಕಾರವನ್ನು ಹಾಕುತ್ತಾರೆ. ಮತ್ತು ಆಕಾರದ ಒಳ ಮತ್ತು ಹೊರಭಾಗದಲ್ಲಿ ರೇಖಿಸುವುದರ ಮೂಲಕ ವಿನ್ಯಾಸಗೊಳಿಸುತ್ತಾರೆ.

ಆಧುನಿಕ ಹಚ್ಚೆಕಲೆ

ಬದಲಾವಣೆ ಜಗದ ನಿಯಮ. ಈ ನಿಯಮ ಹಚ್ಚೆ ಪದ್ಧತಿಯಲ್ಲಿಯೂ ಆವರಿಸಿಕೊಂಡಿದೆ. ಈ ಆಧುನಿಕ ಪದ್ಧತಿಯು ಜನಪದ ಸಾಂಪ್ರದಾಯಿಕ ಪದ್ಧತಿಗಿಂತ ಭಿನ್ನವಾಗಿದೆ. ಮತ್ತು ಅತಿಶೀಘ್ರವಾಗಿ ಹಚ್ಚೆಯನ್ನು ಹಾಕಿ ಮುಗಿಸುತ್ತಾರೆ. ಈ ಜನಾಂಗದವರೇ ಹಾಕಬೇಕೆಂದು ನಿಯಮವಿಲ್ಲ. ಉತ್ಸವ, ಜಾತ್ರೆಗಳ ಸಂದರ್ಭದಲ್ಲಿ ಮುಖ್ಯವಾಗಿ ಆಧುನಿಕವಾಗಿ ಹಚ್ಚೆ ಹಾಕುವವರು ಕಾಣಿಸಿಕೊಳ್ಳುತ್ತಾರೆ. ಹಳ್ಳಿಯಲ್ಲಿ ನಡೆಯುವ ಜಾತ್ರೆಯಲ್ಲಿ ಹೆಚ್ಚಿನ ಜನ ತಮ್ಮ ಮನೆದೇವರು ಅಥವಾ ತಂದೆ ತಾಯಿ ಹೆಸರಿನ ಹಚ್ಚೆಯನ್ನು ಕೈ ಮೇಲೆ ಹಾಕಿಸಿಕೊಳ್ಳುತ್ತಿದ್ದು, ಇನ್ನುಳಿದಂತೆ ವಿವಾಹಿತ ಮಹಿಳೆ ಗಂಡನ ಹೆಸರು ಹಾಕಿಸಿಕೊಂಡರೆ, ಗಂಡ ಹೆಂಡತಿಯ ಹೆಸರು ಹಾಕಿಸಿಕೊಳ್ಳುವ ಪರಿಪಾಠವಿತ್ತು. ಆದರೆ ಹಚ್ಚೆ ಬಗೆಗಿನ ಪರಿಕಲ್ಪನೆ ಸಂಪೂರ್ಣ ಭಿನ್ನ.

ಯುವಜನತೆಯ ಬದಲಾದ ಮನಸ್ಥಿತಿ ಒಂದು ಕಾರಣವಾದರೆ, ಎಲ್ಲವನ್ನೂ ವಾಣಿಜ್ಯೀಕರಣಗೊಳಿಸುವ ಹುನ್ನಾರವೂ ಇದರ ಹಿಂದೆ ಅಡಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಆಧುನಿಕ ಹಚ್ಚೆಯಲ್ಲಿ ತಾತ್ಕಾಲಿಕ ಮತ್ತು ಶಾಶ್ವತವಾಗಿ ಉಳಿಯಬಲ್ಲಂತಹ ಎರಡು ಪ್ರಕಾರಗಳಿವೆ. ಕೇವಲ ಒಂದು ವಾರ ಮಾತ್ರ ಉಳಿಯುವ ತಾತ್ಕಾಲಿಕ ಹಚ್ಚೆ ಇತ್ತೀಚಿನ ದಿನಗಳಲ್ಲಿ ಬಹಳ ಜನಪ್ರಿಯತೆ ಗಳಿಸಿದೆ. ಮತ್ತು ಯುವ ಫ್ಯಾಷನ್‌ಪ್ರಿಯರಿಗೆ ಬಣ್ಣ ಬಣ್ಣದ ಹಚ್ಚೆ ಪ್ರಿಯವಾಗುತ್ತಿದೆ.

ಹಚ್ಚೆ ಪರಿಕರ

ಹಿಂದೆ ಹಲವು ವಿಧಾನದಿಂದ ಬಣ್ಣವನ್ನು ತಯಾರಿಸಲಾಗುತ್ತಿತ್ತು; ಇಂದು ಬಣ್ಣ ಸಿದ್ಧವಾಗಿ ಅಂಗಡಿಯಲ್ಲಿ ಸಿಗುತ್ತದೆ. ಬಳ್ಳಾರಿಯ ದುರ್ಗಮ್ಮನ ಗುಡಿ, ಕಂಪ್ಲಿ ಬಸವೇಶ್ವರ ಜಾತ್ರೆ, ಹಂಪಿ ಉತ್ಸವ, ಕೊಟ್ಟೂರೇಶ್ವರ ಜಾತ್ರೆ, ಸೋಮೇಶ್ವರ ಜಾತ್ರೆ ಹೀಗೆ ಹಲವು ಜಾತ್ರೆಗಳಲ್ಲಿ ಈ ಹಚ್ಚೆ ಹಾಕುವವರು ಸಿಗುತ್ತಾರೆ. ಇವರು ಕಪ್ಪು ಬಣ್ಣವನ್ನು ಮಾತ್ರ ಉಪಯೋಗಿಸುತ್ತಾರೆ. ಇದು ಅಲ್ಲದೇ ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಬಣ್ಣ ಬಣ್ಣದ ಹಚ್ಚೆಗಳು ಕಾಣಬರುತ್ತವೆ. ಅದಲ್ಲದೆ ಬೆಂಗಳೂರಿನ ಪ್ರಮುಖ ಮಾಲ್‌ನಲ್ಲಿ 'ಟ್ಯಾಟೂ' ಸ್ಟೋರ್‌ಗಳು ಕಂಡುಬರುತ್ತವೆ.

[illegible]

ಹಚ್ಚೆ ಹಾಕುವ ಸಾಧನ

ಹಚ್ಚೆ ಹಾಕಲು ಹಿಂದೆ ಸೂಜಿಯನ್ನು ಬಳಸುತ್ತಿದ್ದರು. ಆದರ ಈಗ ಹಚ್ಚೆ ಹಾಕಲು ಎಲೆಕ್ಟ್ರಿಕಲ್ ಸಾಧನವನ್ನು ಬಳಸುತ್ತಾರೆ. ಮೊದಲಿಗೆ ಕೊಬ್ಬರಿಎಣ್ಣೆಯನ್ನು ಆ ಜಾಗದಲ್ಲಿ ಹಚ್ಚುತ್ತಾರೆ, ನಂತರ ಸಾಧನದಿಂದ ಹಚ್ಚೆಯನ್ನು ಹಾಕುತ್ತಾರೆ. ಇಲ್ಲಿ ಹಚ್ಚೆ ಚಿತ್ರಗಳು ಜನಪದ ಸಂಪ್ರದಾಯಕ್ಕಿಂತ ಭಿನ್ನವಾಗಿರುತ್ತವೆ.

ಹಚ್ಚೆಯ ಚಿತ್ರಗಳು

ಹಿಂದಿನ ಚಿತ್ರಗಳಿಗಿಂತ ಇಂದಿನ ಚಿತ್ರಗಳು ಸ್ವಲ್ಪ ಭಿನ್ನವಾಗಿವೆ. ಮತ್ತು ಅವು ಗರುಡ, ಮೀನು, ಹೂ ಮುಂತಾದ ಚಿತ್ರಗಳಾಗಿವೆ. ೧೦೦೦ಕ್ಕೂ ಹೆಚ್ಚು ವಿವಿಧ ವಿನ್ಯಾಸದ ಹಚ್ಚೆ ಹಾಕಲಾಗುತ್ತದೆ. ಶಾಶ್ವತವಾಗಿ ಉಳಿಯುವ ಹಚ್ಚೆಗೆ ೨೫ರಿಂದ ೩೦ ರೂಪಾಯಿಗಳನ್ನು ಒಂದು ಚಿತ್ರಕ್ಕೆ ತೆಗೆದುಕೊಳ್ಳುತ್ತಾರೆ. ಹಚ್ಚೆಯಲ್ಲಿ ಬದಲಾವಣೆಯಾಗಿರುವಂತೆ ಹಚ್ಚೆ ಹಾಕಿಸಿಕೊಳ್ಳುವವರ ಆಸಕ್ತಿಯು ಬದಲಾಗಿದೆ. ಹಚ್ಚೆ ಇಂದು ಹಣೆ, ಗಲ್ಲ, ಕೈಗಳಿಗೆ ಸೀಮಿತವಾಗಿರದೇ ತೋಳು, ಬೆನ್ನು ಮತ್ತು ಕತ್ತಿನ ಹಿಂಭಾಗ, ಎದೆ ಮತ್ತು ಕಾಲುಗಳಿಗೆ ಕೂಡ ಹಚ್ಚೆಯನ್ನು ಹಾಕಿಸಿಕೊಳ್ಳುತ್ತಾರೆ. ಹಿಂದಿನಂತೆ ಹಾಡುಗಾರಿಕೆ, ಯಾವುದೇ ನಂಬಿಕೆಯು ಇಲ್ಲಿ ಉಳಿದಿಲ್ಲ, ಬದಲಾಗಿ ಸೌಂದರ್ಯ ಒಂದೇ ಇದರ ಹಿನ್ನೆಲೆಯಾಗಿದೆ.

ಇಂದು ಯುವ ಜನತೆಯಲ್ಲಿರುವ ಹಚ್ಚೆ ಬಗೆಗಿನ ಉತ್ಸಾಹ ಅದನ್ನು ಹಾಕಿಸಿಕೊಳ್ಳುವ ಸಂದರ್ಭದಲ್ಲಾಗುವ ನೋವನ್ನು ಮರೆಮಾಚುತ್ತದೆ. ಇಷ್ಟದೇವರು, ಆಯಾ ಧರ್ಮದ ಚಿಹ್ನೆಯ ಹಚ್ಚೆ ಹಾಕಿಸಿಕೊಳ್ಳುವವರು ಕೆಲವರಾದರೆ, ಮತ್ತೆ ಕೆಲವರು ತನ್ನ ಪ್ರಿಯಕರ/ಪ್ರಿಯತಮೆಯ ಹೆಸರುಗಳ ಹಚ್ಚೆ ಹಾಕಿಸಿಕೊಂಡು ಪ್ರೀತಿ ಮೆರೆಯುತ್ತಾರೆ. ಇನ್ನು ವಿಚಿತ್ರ, ವಿಶಿಷ್ಟ ಹಚ್ಚೆಗಳನ್ನು ಹಾಕಿಸಿಕೊಳ್ಳುತ್ತಾರೆ. ಇದು ಸೌಂದರ್ಯ ಮತ್ತು ಧರ್ಮ, ಪ್ರೀತಿ–ಪ್ರೇಮದ ಸಂಕೇತವಾಗಿದೆ. ಇದು ಅಲ್ಲದೇ ದೇಶ–ವಿದೇಶಗಳಲ್ಲಿ ಗಿನ್ನಿಸ್ ದಾಖಲೆಗೂ ಹಚ್ಚೆಯನ್ನು ಹಾಕಿಸಿಕೊಳ್ಳುತ್ತಾರೆ. ವಿದೇಶದಲ್ಲಿ ವಿವಿಧ ಮಾದರಿಯಲ್ಲಿ ಪ್ರಯೋಗಗಳನ್ನು ಮಾಡಲಾಗುತ್ತದೆ.

ಅಮೇರಿಕದ ಮಹಿಳೆಯೊಬ್ಬಳು ದೇಹದ ೯೦ರಷ್ಟರ ಭಾಗವನ್ನು ವ್ಯಾಪಿಸುವಂತೆ ಹಚ್ಚೆ ಚುಚ್ಚಿಸಿಕೊಂಡಿದ್ದಳು. ಬ್ಯೂಟಿ ಪಾರ್ಲರ್‌ಗಳು ಇದ್ದ ಹಾಗೆ ಅಲ್ಲಲ್ಲಿ ಟ್ಯಾಟೂ ಪಾರ್ಲರ್‌ಗಳು ದೇಶದ ದೊಡ್ಡ ದೊಡ್ಡ ನಗರದ ಬೀದಿ, ಬೀದಿಯಲ್ಲಿ ತಲೆ ಎತ್ತಿವೆ. ಅಂತೂ ಹೆಣ್ಣು ಗಂಡು, ಹಿರಿಯ ಕಿರಿಯರೆಂಬ ಭೇದವಿಲ್ಲದೆ ಎಲ್ಲರೂ ಚಿತ್ರಾಂಬರರಾಗುತ್ತಿದ್ದಾರೆ. ಈ ಶೈಲಿಯ ಮೂಲ ಜನಪದವಾದರೂ ಈ ಕಲೆಯು ದಿನದಿಂದ ದಿನಕ್ಕೆ, ಜನಾಂಗದಿಂದ ಜನಾಂಗಕ್ಕೆ ಹೊಸ ಹೊಸ ಚಿತ್ರಗಳಲ್ಲಿ ವಿವಿಧ ಸಾಧನಗಳ ಮೂಲಕ ಈ ಹಲವು ಪ್ರಯೋಗಗಳ ಮೂಲಕ ಹೊಸ ವೇಷವನ್ನು ಧರಿಸುತ್ತಿದೆ.

[illegible]

೩.೨. ಮದರಂಗಿ ಕಲೆ

ಚರ್ಮದ ಮೇಲೆ ಕೆಲವು ದಿನಗಳವರೆಗೆ ರಾರಾಜಿಸುವ ಕಲೆಯೇ ಈ ಮದರಂಗಿ ಕಲೆಯಾಗಿದೆ. ಈ ಕಲೆಯನ್ನು ಅಶಾಶ್ವತ ಕಲೆಯೆಂದೂ ಕರೆಯುತ್ತಾರೆ. ಈ ಮದರಂಗಿ ಬಗೆಗೆ ತಿಳಿಯಲಾರದ ವ್ಯಕ್ತಿಯೇ ಇಲ್ಲ ಎನ್ನಬಹುದು. ಈ ಮದರಂಗಿಯು ಇಂದಿನದಲ್ಲ, ಇದು ಪ್ರಾಚೀನ ಇತಿಹಾಸ ಹೊಂದಿದೆ.

ಮದರಂಗಿಯ ಪ್ರಾಚೀನ ಉಲ್ಲೇಖ

ಕ್ರಿ.ಪೂ. ೩ನೆಯ ಶತಮಾನದ 'ಸುಶ್ರುತಸಂಹಿತಾ' ಗ್ರಂಥದಲ್ಲಿ ಕಂಡುಬರುವ ಹರೀತಕೀಚೂರ್ಣಂ ಅರಿಷ್ಟಪತ್ರಂ ಚೂತತ್ವಚಿರದಾಡಿಂಪುಷಪವೃಂತಕಂ, ಪತ್ರಂ ಚ ದದ್ಯಾತ್ ಮದಯಂತಿ ಕಾಯಾಲೇಪೋ ಅಂಗರಾಗೋ ನರದೇವ ಯೋಗ್ಯಾ ಹಿ' ಈ ಶ್ಲೋಕದಲ್ಲಿ ಅರಳಿಕಾಯಿ ಚೂರ್ಣ, ರಿಟ್ಟ ತಪ್ಪಲ(ಅರಿಷ್ಟಪತ್ರ), ಮಾವಿನ ತೊಗಟೆ, ದಾಳಿಂಬ ಹೂವಿನ ಕೆಳಭಾಗ(calyx), ಮದರಂಗಿಯ ತೊಪ್ಪಲುಗಳನ್ನು ಶರೀರಕ್ಕೆ ಹಚ್ಚಿಕೊಳ್ಳುವ ವಿಷಯ ನಿರೂಪಿತವಾಗಿದೆ. ಮತ್ತು ಶೂದ್ರಕ ಕವಿಯ ಮೃಚ್ಛಕಟಿಕ, ಭಟ್ಟನಾರಾಯಣನ ವೇಣಿ ಸಂಹಾರ, ಕೃತಿಗಳಲ್ಲಿ 'ವಿಶೇಷಕ' ಎಂಬ ಪದ ಬಳಕೆಯಿದೆ. ಈ ಪದಕ್ಕೆ ಅವಯವಗಳ ಮೇಲೆ ವರ್ಣಚಿತ್ರಗಳ ಲೇಪನ ಎಂಬ ಅರ್ಥವಿದೆ. ಕನ್ನಡ ಕಾವ್ಯಗಳಲ್ಲಿ ಮದುವೆಯಂತಹ ಸಂದರ್ಭಗಳಲ್ಲಿ ವಧುವಿಗೆ ಅಲಂಕಾರ ಮಾಡಿದ ವರ್ಣನೆಯಲ್ಲಿ ಮದರಂಗಿಯನ್ನು ಹೋಲುವ ವಿವರ ಬರುತ್ತದೆ. ಪಂಪನ ಆದಿಪುರಾಣದಲ್ಲಿ ರಾಜಕುಮಾರಿ ಶ್ರೀಮತಿಯನ್ನು ಅಲಂಕರಿಸಿದ ವಿವರ ಬರುತ್ತದೆ. ಈ ಉಲ್ಲೇಖದ ಜೊತೆಗೆ ಕಥೆಗಳು ಕೂಡ ಬರುತ್ತವೆ.

ಮದರಂಗಿ ಹಾಕುವಾಗ ಅನುಸರಿಸುವ ಕ್ರಮಗಳು

೧. ಮದರಂಗಿ ತಯಾರಿಸಿಕೊಳ್ಳುವುದು

೨. ಮದರಂಗಿ ಹಾಕುವ ವಿಧಗಳು

೧. ಮದರಂಗಿ ತಯಾರಿಸಿಕೊಳ್ಳುವುದು : ಮದರಂಗಿಯನ್ನು ತಯಾರಿಸಿಕೊಳ್ಳುವಲ್ಲಿ ಎರಡು ವಿಧಗಳನ್ನು ಅನುಸರಿಸುತ್ತಾರೆ.

ಸಾಮಗ್ರಿಗಳಿಂದ ಮದರಂಗಿ ಬಣ್ಣವನ್ನು ತಯಾರಿಸಿಕೊಳ್ಳುವುದು

ಮೆಹಂದಿ ಪುಡಿ, ಮಿಶ್ರಣಾತ್ರೆ, ಕಡ್ಡಿ ಅಥವಾ ಪೆನ್ ಅಥವಾ ಪ್ಲಾಸ್ಟಿಕ್‌ಪೇಪರ್, ಬಟ್ಟೆ, ಮದರಂಗಿ ಗಿಡದ ಎಲೆಯನ್ನು ಒಣಗಿಸಿ ಪುಡಿ ಮಾಡಲಾಗುತ್ತದೆ. ಮಿಶ್ರಣಕ್ಕೆ ಅನುಗುಣವಾಗಿ ಮಿಶ್ರದ ಪಾತ್ರೆಯನ್ನು ಆಯ್ದುಕೊಂಡು ಮದರಂಗಿಯ ಪುಡಿ, ಲಿಂಬೆರಸ, ಕಾಚು, ಮೊಸರು ಮುಂತಾದವುಗಳನ್ನು ಕೂಡಿಸಿಕೊಂಡು ತಾಸಿನವರೆಗೆ ಕಲಕಿ ನೆನೆಯಲು ಬಿಡುತ್ತಾರೆ. ನಂತರ

ಈ ದ್ರಾವಕ ಕೈಗೆ ಹಾಕಿಕೊಳ್ಳಲು ಸಿದ್ಧವಾಗುತ್ತದೆ. ಈ ದ್ರಾವಕವನ್ನು ಕಡ್ಡಿಯಿಂದ ಅಥವಾ ಪೆನ್ನಿನಂತಹ ಆಕಾರವಿರುವ ಸಾಮಗ್ರಿಯಲ್ಲಿ ತುಂಬಿಸುವುದು ಅಥವಾ ಪ್ಲಾಸ್ಟಿಕ್ ಪೇಪರ್ ಸುರಳಿಯನ್ನು ಮಾಡಿಕೊಂಡು ಮೆಹಂದಿ ತುಂಬುವುದು ಹೀಗೆ ತಯಾರಿಸಿಕೊಳ್ಳುತ್ತಾರೆ.

ಸಿದ್ಧವಿರುವ ತ್ರಿಕೋನವನ್ನು ಅಥವಾ ಮೆಹಂದಿ ಕೋನ್ ತಯಾರಿಸಿಕೊಳ್ಳುವುದು

ಮೆಹಂದಿ ಪುಡಿಯ ಜೊತೆಯಲ್ಲಿ ಮತ್ತಷ್ಟು ಕೆಂಪಾಗುವ ರಾಸಾಯನಿಕವನ್ನು ಬೆರೆಸಿ ಕೋನ್ ಮಾಡಲಾಗುತ್ತದೆ. ಈ ಕೋನನ್ನು ಅಂಗಡಿಗಳಲ್ಲಿ ೭ರಿಂದ ೨೦ ರೂಪಾಯಿಗಳವರೆಗೆ ಮಾರಾಟಕ್ಕಿಟ್ಟಿರುತ್ತಾರೆ. ಈ ಕೋನದ ಜೊತೆಯಲ್ಲಿ ಬಟ್ಟೆಯನ್ನು ಸಹ ಇಟ್ಟುಕೊಂಡಿರುತ್ತಾರೆ. ಮದರಂಗಿಯನ್ನು ಹಾಕುವಾಗ ತಪ್ಪಾದ ರೇಖೆಯನ್ನು ಅಳಿಸಲು ಮದರಂಗಿ ಹಾಕುವವರು ಬಟ್ಟೆಯನ್ನು ತಮ್ಮೊಂದಿಗೆ ಇಟ್ಟುಕೊಳ್ಳುತ್ತಾರೆ.

೨. ಮದರಂಗಿ ಹಾಕುವ ವಿಧಗಳು

ತಾವೇ ಹಚ್ಚಿಕೊಳ್ಳುವುದು

ಸಾಕಷ್ಟು ತಾಳ್ಮೆ, ಶ್ರದ್ಧೆ, ನಯ ನಾಜೂಕುಗಳಂಥ ವ್ಯಕ್ತಿತ್ವವನ್ನು ರೂಢಿಸಿಕೊಂಡವರು ಮಾತ್ರ ಸ್ವಯಂ ಚಿತ್ರ ಬಿಡಿಸಿಕೊಳ್ಳುವುದು ಸುಲಭವಾಗುತ್ತದೆ.[೩೨] ತಮ್ಮ ಭಾವನೆಗಳಿಗೆ ರೂಪ ಕೊಟ್ಟಂತೆ ರೇಖಾವಿನ್ಯಾಸಗಳನ್ನು ಕಲಾತ್ಮಕವಾಗಿ ಬಿಡಿಸಿಕೊಳ್ಳುವವರು. ಮದರಂಗಿಯಿಂದ ಹೆಚ್ಚು ಸಂತೋಷಪಡುತ್ತಾರೆ. ತಮ್ಮ ಕಲಾಪ್ರೌಢಿಮೆಯೊಡನೆ ತಮ್ಮ ಪರಿಶ್ರಮವೂ ಸೇರಿಕೊಂಡು ಮದರಂಗಿಯ ಬಣ್ಣ ಇನ್ನಷ್ಟು ಮೃದುತ್ವ ನೀಡುತ್ತದೆ. ಸ್ವಯಂ ಚಿತ್ರವಿನ್ಯಾಸ ಮಾಡಿಕೊಳ್ಳಬೇಕೆನ್ನುವರು ತಮ್ಮ ಹಿರಿಯರ ಪರಿಸರದಿಂದ ಕಲಿತುಕೊಂಡಿರುತ್ತಾರೆ.[೩೩]

೨.೨. ಅನ್ಯರು ಹಚ್ಚುವುದು

ಹಬ್ಬ, ಹುಣ್ಣಿಮೆ, ಉತ್ಸವ, ಮದುವೆಯ ವಧು ಸಿಂಗಾರದಂತಹ ಸಂದರ್ಭಗಳಲ್ಲಿ ಮದರಂಗಿ ಚಿತ್ರ ಬಿಡಿಸುವ ನುರಿತ ಸ್ತ್ರೀ-ಪುರುಷರು ಚಿತ್ರವಿನ್ಯಾಸ ಮಾಡುತ್ತಾರೆ. ಹಾಗೆ ನುರಿತವರು ತಮ್ಮವರೇ ಆಗಿರಬಹುದು. ಇಲ್ಲವೇ ಅನ್ಯರೂ ಆಗಿರಬಹುದು. ಯಾರೇ ಬಿಡಿಸಿರಲಿ, ಹಚ್ಚಿಸಿಕೊಳ್ಳುವವರಲ್ಲಿಲ ಚಿತ್ರಗಳ ಚೆಲುವಿನ ಹಂಬಲವಂತೂ ಸ್ವಾಭಾವಿಕವಾಗಿರುತ್ತದೆ.[೩೪]

ಮದರಂಗಿ ಹಚ್ಚಿಕೊಳ್ಳುವ ಶರೀರದ ವಿವಿಧ ಭಾಗಗಳು ಮತ್ತು ಮದರಂಗಿ ಚಿತ್ರ ವಿನ್ಯಾಸಗಳ ವರ್ಗೀಕರಣ

ಮುಖ್ಯವಾಗಿ ಅಂಗೈ, ಪಾದಗಳಿಗೆ ಚಿತ್ರವಿನ್ಯಾಸ ಮಾಡಲಾಗುವುದು. ಇತ್ತೀಚಿನ ದಿನಗಳಲ್ಲಿ

---

೩೨. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ - ೧೧೭

೩೩. ಅದೇ., ಪುಟ - ೧೧೭

೩೪. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ - ೧೧೭

ಮೊಣಗೈಯಿಂದ ಅಂಗೈ ತುದಿಬೆರಳವರೆಗೆ ಮದರಂಗಿ ಹಾಕುತ್ತಾರೆ. ಮತ್ತು ಚಿತ್ರವಿನ್ಯಾಸಕ್ಕೆ ಬಂದರೆ ಮದುವೆ, ಹಬ್ಬ, ಉತ್ಸವ, ಜಾತ್ರೆಗಳಿಗೆ ಅನುಗುಣವಾಗಿ ಮದರಂಗಿ ಚಿತ್ರವಿನ್ಯಾಸಗಳು ವರ್ಗಗೊಳ್ಳುತ್ತವೆ. ಧಾರ್ಮಿಕ ಮದರಂಗಿಯಲ್ಲಿ ಚಿತ್ರ ವಿನ್ಯಾಸ, ಮದುವೆ ಸಂದರ್ಭ ವಧುವರರ ಕೈಕಾಲುಗಳ ಮೇಲೆ ಸಾಮಾನ್ಯವಾಗಿ ಗಂಡು ಸ್ವಸ್ತಿಕ, ಹೆಣ್ಣು ಸ್ವಸ್ತಿಕದ ಚಿತ್ರ, ತ್ರಿಕೋನದ ಪ್ರಕೃತಿ ಹಾಗೂ ಪುರುಷ ಸಂಕೇತದ ಚಿತ್ರ, ಸೂರ್ಯ, ಚಂದ್ರ, ಶಂಖ, ಚಕ್ರ, ದೇವರ ಪಾದ, ನಕ್ಷತ್ರ, ತ್ರಿಶೂಲ, ಪಕ್ಷಿ, ಕಳಸ, ಕುಂಭ ಮುಂತಾಗಿ ಚಿತ್ರ ತೆಗೆದಿರುತ್ತಾರೆ. ಆಯಾಯ ಧರ್ಮೀಯರ ಮನೋಗತಕ್ಕೆ ಸಂಬಂಧಿಸಿದ ಸಾಂಕೇತಿಕ ಚಿತ್ರವಿನ್ಯಾಸಗಳು ಮತ್ತು ಹೂ ಬಳ್ಳಿಗಳ ವಿನ್ಯಾಸಗಳು ಅಲಂಕೃತವಾಗುತ್ತವೆ. ಇಲ್ಲಿ ಪುರುಷರಿಗಿಂತ ಸ್ತ್ರೀಯರದೇ ಹೆಚ್ಚು ಪಾಲು. ಹಬ್ಬ, ಉತ್ಸವ, ಜಾತ್ರೆಪ್ರಸಂಗದ ವಿನ್ಯಾಸ ವಿವಿಧ ಧರ್ಮೀಯರು ತಮ್ಮ ತಮ್ಮ ಆಚರಣೆಯ ಸಮಾರಂಭಗಳಲ್ಲಿ ತಮ್ಮಲ್ಲಿ ರೂಢಿಸಿಕೊಂಡು ಚಿತ್ರವಿನ್ಯಾಸಗಳನ್ನು ಬಿಡಿಸಿಕೊಂಡು ಸಂತೋಷ ಪಡುತ್ತಾರೆ.

ಮುಸ್ಲೀಮರು ರಂಜಾನ್, ಬಕ್ರೀದ್ ಹಬ್ಬಗಳಲ್ಲಿ ಹಚ್ಚಿಕೊಂಡರೆ, ಹಿಂದೂಗಳು ಹಬ್ಬ, ಹುಣ್ಣಿಮೆ, ಜಾತ್ರೆ ಜನನದಂತಹ ಸಂದರ್ಭಗಳಲ್ಲಿ ಮದರಂಗಿ ಚಿತ್ರ ಬಿಡಿಸಿಕೊಂಡು ಸಂತೋಷಪಡುತ್ತಾರೆ. ಈ ಸಂದರ್ಭಗಳಲ್ಲಿ ವಿವಿಧ ಪಲ್ಲಕ್ಕಿ, ತೇರು, ಹಾವು, ಚೇಳು, ದೇವರ ಸಂಕೇತದ ಚಿತ್ರಗಳನ್ನು, ಅಲಂಕಾರಿಕ ನಕ್ಷೆಗಳ ಚಿತ್ರಗಳನ್ನು ಚಿತ್ರಿಸಿಕೊಳ್ಳುತ್ತಾರೆ. ಇವು ಧಾರ್ಮಿಕ ಚಿತ್ರಗಳಾದರೆ, ಧಾರ್ಮಿಕೇತರ ಮದರಂಗಿಯ ಚಿತ್ರವಿನ್ಯಾಸ ಹೂ, ಬಳ್ಳಿಗಳಿಗೆ ಸಂಬಂಧಿಸಿದ ಚಿತ್ರಗಳು ಹೆಚ್ಚಿನ ರೀತಿಯಲ್ಲಿ ಕಂಡುಬರುತ್ತವೆ. ಅ

ವು ಭೂಮಿತಿ ಆಕೃತಿಯಲ್ಲಿ ತ್ರಿಕೋಣ, ಸಪ್ತಕೋನ, ತ್ರಿಜ್ಯ-ತ್ರಿಜ್ಯದಲ್ಲಿ ಒಳಬಳ್ಳಿ ಹೂ, ವಲ್ಲರಿ ಅಥವಾ ಬಳ್ಳಿ, ಮದರಂಗಿ ಕಲೆಯಲ್ಲಿ ನಕ್ಷಾ ಪ್ರಧಾನ, ಸುಳುವು, ಹೂಬಳ್ಳಿ, ಎಲೆ, ಹಣ್ಣು, ಕಾಯಿಗಳ ನೂರಾರು ನಮೂನೆಯ ತಿರುವು ಮುಂದಿನ ಕಲಾತ್ಮಕ ಬಳ್ಳಿಗಳ ಚಿತ್ರವಿನ್ಯಾಸಗಳು ದಟ್ಟವಾಗಿ ಹೆಣೆದುಕೊಂಡಿರುತ್ತವೆ. ಈ ಹಿನ್ನೆಲೆಯಲ್ಲಿ ಸುಂದರವಾದ ನಕ್ಷೆಗಳಿಂದ ಕೂಡಿದ ಕಲೆಯನ್ನೇ ಮದರಂಗಿ ಕಲೆ ಎನ್ನಲಾಗುತ್ತದೆ. ಈ ಮೇಲಿನಂತಹ ಮದರಂಗಿಯ ವಿನ್ಯಾಸವನ್ನು ಹಳ್ಳಿಯ ಕೆಲವು ಭಾಗಗಳಲ್ಲಿ ಕಾಣಬಹುದು.

ನಗರ-ಪಟ್ಟಣಗಳಲ್ಲಿ ಚಿತ್ರವಿನ್ಯಾಸವು ಬದಲಾಗಿದೆ. ಮದರಂಗಿಯ ಚಿತ್ರಗಳಿಗಾಗಿಯೇ ಚಿತ್ರಗಳಿರುವ ಹಲವು ಪುಸ್ತಕಗಳು ಮಾರುಕಟ್ಟೆಯಲ್ಲಿ ಕಾಣಸಿಗುತ್ತವೆ. ಈ ಪುಸ್ತಕದಲ್ಲಿ ಮೇಲಿನಂತೆ ನಿಯಮಬದ್ಧ ಚಿತ್ರಗಳು ಹೆಚ್ಚಾಗಿ ಕಂಡುಬರುವುದಿಲ್ಲ. ಬದಲಾಗಿ ಹೂ-ಬಳ್ಳಿ, ಸುರುಳಿಗಳ ತಿರುವು-ಮುರುವುಗಳೇ ಹೆಚ್ಚಾಗಿ ಕಂಡುಬರುತ್ತವೆ. ಇಂತಹ ಚಿತ್ರಗಳಲ್ಲಿ ಹಬ್ಬ, ಉತ್ಸವ, ಧರ್ಮ, ಧರ್ಮೇತರ ಎನ್ನುವ ಭೇದವಿಲ್ಲದೇ ಎಲ್ಲಾ ದಿನಗಳಲ್ಲಿ ಒಂದೇ ತೆರನಾದ ಸೌಂದರ್ಯದ ನೆಲೆಯಲ್ಲಿ ಮಾತ್ರ ಇರುವಂತಹವಾಗಿವೆ.


ಚರ್ಮದ ಮೇಲಿನ ಹಚ್ಚೆ ಚಿತ್ರಕಲೆ





ಹಚ್ಚೆ ಚಿತ್ರಕಲೆ

ಚರ್ಮದ ಮೇಲಿನ ಹಚ್ಚೆ ಚಿತ್ರಕಲೆ










ಹಚ್ಚೆ ಚಿತ್ರಕಲೆ

ಚರ್ಮದ ಮೇಲಿನ ಹಚ್ಚೆ ಚಿತ್ರಕಲೆ







ಹಚ್ಚೆ ಚಿತ್ರಕಲೆ

ಮದರಂಗಿ ಚಿತ್ರವಿನ್ಯಾಸದ ತಂತ್ರ

ಮದರಂಗಿಯ ಚಿತ್ರವಿನ್ಯಾಸಗಳು ಕಂದು ಬಣ್ಣದಲ್ಲಿರುತ್ತವೆ. ಮದರಂಗಿಯ ಬಣ್ಣದಲ್ಲಿ ಮಿಶ್ರಣಗೊಂಡ ಅಂಶಗಳು ಚರ್ಮದಲ್ಲಿ ಚೆನ್ನಾಗಿ ಹಿಡಿದುಕೊಳ್ಳುವುದರಿಂದ ಹಲವು ದಿನಗಳವರೆಗೆ ಚಿತ್ರಗಳು ಉಳಿದುಕೊಳ್ಳುತ್ತವೆ. ಇಲ್ಲಿ ಮಾನವಾಕೃತಿಗಳಿಗೆ ಪ್ರಾಮುಖ್ಯವಿರುವುದಿಲ್ಲ. ಆದರೆ ಭೂಮಿತಿ, ಬಳ್ಳಿ, ಆಕೃತಿ ಪ್ರಧಾನವಾದ ಸುಳುವುಗಳೊಂದಿಗೆ ಸ್ವಸ್ತಿಕ, ಶ್ರೀ, ಶುಭ, ಲಾಭ, ಓಂ, ಸೂರ್ಯ ಇತ್ಯಾದಿ ಸಂಕೇತಗಳನ್ನು ಹೆಚ್ಚು ಚಿತ್ರಿಸಿರುತ್ತಾರೆ. ವಿವಿಧ ಆಭರಣಗಳ ಮಾದರಿಯ ಚಿತ್ರವಿನ್ಯಾಸಗಳೂ ಮದರಂಗಿ ಕಲೆಯಲ್ಲಿ ಕಾಣಸಿಗುತ್ತವೆ.[೩೫]

ಇವು ವಸ್ತುವಿಷಯ ಚಿತ್ರವಿನ್ಯಾಸದ ತಂತ್ರವಾದರೆ ಮದರಂಗಿ ಚಿತ್ರವಿನ್ಯಾಸಗೊಂಡ ಅಚ್ಚುಪಡಿ ಸಿಗುತ್ತವೆ. ಈ ಅಚ್ಚುಪಡಿಯಿಂದ ಕಂದು ಬಣ್ಣದಲ್ಲಿ ಅದ್ದಿ, ನಂತರ ಅಂಗೈ, ಕಾಲು, ಬೇಕಾದ ಸ್ಥಳಕ್ಕೆ ಒತ್ತಿದರೆ, ಸುಂದರವಾದ ಹೂ–ಬಳ್ಳಿ ಮತ್ತು ನಕ್ಷೆಗಳನ್ನು ಮೂಡಿಸುತ್ತಾರೆ. ನಂತರ ಅರ್ಧಗಂಟೆಯವರೆಗೆ ಬಿಟ್ಟರೆ, ಚರ್ಮಕ್ಕೆ ಗಟ್ಟಿಯಾಗಿ ಕೂರುತ್ತದೆ. ಇಂತಹ ಅಚ್ಚುಪಡಿಗಳು ವಿಶೇಷವಾಗಿ ಜಾತ್ರೆಯಲಿ ಸಿಗುತ್ತಿದ್ದು, ಇಂತಹ ಮದರಂಗಿಚಿತ್ರವನ್ನು ೫–೬ ರೂಪಾಯಿಗಳಿಗೆ ಒಂದು ಚಿತ್ರಕ್ಕೆ ಹಾಕುವವರು ತೆಗೆದುಕೊಳ್ಳುತ್ತಾರೆ. ಮತ್ತು ಸಿದ್ಧವಿದ್ದ 'ಟ್ಯಾಕ್ಟೋ' ಸ್ಟಿಕ್ಕರ್‌ಗಳನ್ನು ಉಪಯೋಗಿಸುವುದು, ಇಂತಹವು ಮದರಂಗಿಯ ಚಿತ್ರಗಳ ಆಧುನಿಕ ವಿನ್ಯಾಸಗೊಳಿಸುವ ಹೊಸ ತಂತ್ರವೆನ್ನಬಹುದು.

ಮದರಂಗಿಯ ಇತರ ಪ್ರಯೋಜನಗಳು

ಈ ಮದರಂಗಿಯನ್ನು ಸೌಂದರ್ಯದ ಸಾಧನಕ್ಕೆ ಮಾತ್ರ ಅಲ್ಲದೇ ವೈದ್ಯಕೀಯ ಚಿಕಿತ್ಸೆಗಾಗಿಯೂ ಬಳಸುತ್ತಾರೆ. ಒಲವಿನ ಪ್ರತೀಕವಾದ ಮದರಂಗಿ ಉಷ್ಣ ಪ್ರಕೃತಿಯವರಿಗೆ ತಂಪು ನೀಡುತ್ತದೆ. ತಂಪಿಗಾಗಿ, ಕೂದಲು ಸಮೃದ್ಧವಾಗಿ ಬೆಳೆಯಲು ಶೇ. ೯೦ರಷ್ಟು ಮಹಿಳೆಯರು ಈ ಮದರಂಗಿಯ ಉಪಯೋಗ ಪಡೆದಿದ್ದಾರೆ. ಇತ್ತೀಚೆಗೆ ಪುರುಷರ ಒಲವು ಕೂಡ ಅಷ್ಟೇ ಹೆಚ್ಚಿದೆ ಎನ್ನಬಹುದು. ಇದು ಚರ್ಮರೋಗಗಳ ನಿವಾರಣೆ ಮಾಡುವುದಲ್ಲದೇ ಶರೀರದ ಸ್ವಾಸ್ಥ್ಯವನ್ನು ಕಾಪಾಡುತ್ತದೆ. ಚರ್ಮರೋಗಗಳು ವಿಶೇಷವಾಗಿ ಅಂಗೈ, ಅಂಗಾಲಿನಿಂದ ಹರಡುತ್ತವೆಂದು ಹೇಳಲಾಗುತ್ತದೆ. ಹೀಗಾಗಿ ಅಂಗೈ ಮತ್ತು ಅಂಗಾಲಿಗೆ ಮದರಂಗಿ ಹಚ್ಚಿಕೊಳ್ಳುವುದರಿಂದ ಬಿಳುಪು(ತೊನ್ನು), ಕುಷ್ಠರೋಗಗಳು ದೂರವಾಗುವುದೆಂದು ಹೇಳುತ್ತಾರೆ. ಸಂತಾನವಿಲ್ಲದ ಸ್ತ್ರೀಯರಿಗೆ ಸಂತಾನಭಾಗ್ಯ ಲಭಿಸುತ್ತದೆಯೆಂಬ ವಿಶ್ವಾಸ ಜನಪದರಲ್ಲಿದೆ.

ಮದರಂಗಿಯ ಸ್ಥಿತಿಗತಿ

ಈ ಮದರಂಗಿಯು ವಾಣಿಜ್ಯ ನೆಲೆಯಲ್ಲಿ ವ್ಯಾಪಕವಾಗಿ ಇಂದು ಬೆಳೆದಿದೆ. ಈ

೩೫. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ – ೧೨೨

ಚರ್ಮದ ಮೇಲಿನ ಮೆಹಂದಿ ಚಿತ್ರಕಲೆ









ಮೆಹಂದಿ ಕಲೆ

ಚರ್ಮದ ಮೇಲಿನ ಮೆಹಂದಿ ಚಿತ್ರಕಲೆ





ಮೆಹಂದಿ ಕಲೆ

ಮದರಂಗಿಯ ಉಪಯುಕ್ತತೆ, ಬಳಕೆ ಹೆಚ್ಚಾಗಿರುವುದರಿಂದ ಇದರ ಮಹತ್ವವನ್ನು ಅರಿತ ವ್ಯಾಪಾರಿಗರು, ಬ್ಯೂಟಿಪಾರ್ಲರ್‌ಗಳು ಮದರಂಗಿಯಿಂದ ಬಹಳ ಉಪಯುಕ್ತ ಪಡೆದಿದ್ದಾರೆ. ಲಾಭ ಸಹ ಪಡೆದಿದ್ದಾರೆ. ಬ್ಯೂಟಿಪಾರ್ಲರ್‌ಗಳಲ್ಲಿ ಕೈ ಮತ್ತು ಕಾಲುಗಳಿಗೆ ಹಾಕುವ ಮದರಂಗಿಗೆ ೩೦೦ರಿಂದ ೪೦೦ರೂಗಳ ವರೆಗೆ ಹಣ ಪಡೆಯುತ್ತಾರೆ ಮತ್ತು ಮದರಂಗಿಗೆ ಗುಜರಾತ್, ರಾಜಸ್ಥಾನ, ಮುಂಬೈ ಮುಂತಾದ ರಾಜ್ಯಗಳಲ್ಲಿ ಬೇಡಿಕೆಯು ಬಹು ಹೆಚ್ಚು. ಹಲವು ರಾಜ್ಯದ ಹಳ್ಳಿಗಳಲ್ಲಿ ಮದರಂಗಿ ವಹಿವಾಟವು ಪ್ರಮುಖವಾದ ಕಸುಬಾಗಿದೆ.

ಉದಾಹರಣೆಗೆ ಮುಂಬೈ ಮಾರುಕಟ್ಟೆಯಲ್ಲಿ ಸುದ್ದಿ-ಮಾಡುತ್ತಿರುವ ಮದರಂಗಿಯು ಕಾಸರಗೋಡಿನಿಂದ ಹದಿನೈದು ಕಿ.ಮೀ. ದೂರದಲ್ಲಿರುವ 'ಉಪ್ಪಳ' ಎಂಬ ಪುಟ್ಟ ಊರಿನ ಮುಂದೆ ಬಿದ್ದರೆ ಸಾಕು, ಮದರಂಗಿಗೆ ಎಲ್ಲಿಲ್ಲದ ಬೇಡಿಕೆ. ಬಾಲಿವುಡ್‌ನ ನಟಿಮಣಿಗಳು 'ಉಪ್ಪಳ ಮೆಹಂದಿ'ಗಾಗಿ ಮುಂಬೈಯ ಭೇಂಡಿ ಬಜಾರ್‌ಗೆ ಮುಗಿ ಬೀಳುತ್ತಿದ್ದಾರೆ. ಐಶ್ವರ್ಯಾ, ಕಾಜೋಲ್, ಕರೀಷ್ಮಾ, ಸೋನಾಲಿ ಸುಸನ್ ಇನ್ನೂ ಅನೇಕ ಹುಡಿಗಿಯರಿಗೆ ಉಪ್ಪಳ ಮದರಂಗಿ ಹಾಕದಿದ್ದರೆ ಸಮಾಧಾನವೇ ಇಲ್ಲ ಎನ್ನಬಹುದು. ಅದರಲ್ಲೂ ಮುಂಬೈಯ ಮಾರ್ವಾಡಿಗಳು, ಗುಜರಾತಿ ವ್ಯಾಪಾರಿಗಳು ಈ ಮದರಂಗಿಗಾಗಿ ಹುಡುಕಿಕೊಂಡು ಬರುತ್ತಾರೆ. ಹೇಳಿದ ಬೆಲೆಗೆ ಚೌಕಾಸಿ ಮಾಡದೇ ಖರೀದಿಸಿ ಮುಂಬೈಗೆ ಸಾಗಿಸುತ್ತಾರೆ. ಈ ಉಪ್ಪಳವೆಂಬ ಊರು ಮದರಂಗಿ ತಯಾರಿಕೆಗೆ ತುಂಬಾ ಹೆಸರು ಮಾಡಿದೆ. ಇನ್ನೂರರಿಂದ ಮೂನ್ನೂರು ಕುಟುಂಬಗಳು ಮದರಂಗಿ ತಯಾರಿಕೆಯಲ್ಲಿ ಯಾವಾಗಲೂ ಕಾರ್ಯನಿರತವಾಗಿವೆ. ಇದೇ ಅವರಿಗೆ ವೃತ್ತಿ ಪ್ರವೃತ್ತಿಯಾಗಿದೆ. ಈ ಮದರಂಗಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆಯಿದೆ. ಅಂಗೈಗೆ ಹಾಕಿದರೆ ಸಾಕು ಕ್ಷಣಾರ್ಧದಲ್ಲಿ ಕೆಂಪಾನುಕೆಂಪನೆಯ ರಂಗೇರುವುದೇ ಇದರ ವೈಶಿಷ್ಟ್ಯವಾಗಿದೆ.

೩.೩. ತೊಗಲುಗೊಂಬೆ ಚಿತ್ರಕಲೆ

ಗೊಂಬೆಯಾಟವು ಒಂದು ಪರಂಪರಾಗತ ಕಲಾಪ್ರಕಾರ. ದೇವದಾನವರ ಕಥಾನಕವನ್ನು ಮಾನವರು ಅಭಿನಯ ಮಾಡುವುದು ಅಥವಾ ಪ್ರದರ್ಶನಕೊಡುವುದು ಒಂದು ಅಪಚಾರ ಎನ್ನುವ ಪಾಪಪ್ರಜ್ಞೆಯಿಂದಾಗಿ ಆಚರಣೆ, ಪ್ರದರ್ಶನಗಳು ಆರಂಭವಾದವು ಎಂಬುದು ಒಂದು ನಂಬಿಕೆ, ಮತ್ತೊಂದೆಡೆ ಮಾಡಿದ ಪಾಪವನ್ನು ತೊಳೆದುಕೊಳ್ಳಲು ಗೊಂಬೆಗಳನ್ನು ನಿರ್ಮಾಣ ಮಾಡಿಸಿಕೊಡುತ್ತಿದ್ದ ಪರಂಪರೆ ಹಿಂದೂಸಂಪ್ರದಾಯದಲ್ಲಿತ್ತು. ಹೀಗೆ ಕೊಟ್ಟಂತಹ ಅಥವಾ ಬಳುವಳಿಯಾಗಿ ಬಂದ ಗೊಂಬೆಗಳನ್ನು ತಟಸ್ಥವಾಗಿ ಇಟ್ಟುಕೊಳ್ಳುವಂತಿಲ್ಲ. ಹೀಗಾಗಿ ಗೊಂಬೆಗಳ ಮೂಲಕ ಗೊಂಬೆಯಾಟ ನಡೆಸುವ ಪರಿಪಾಠ ನಡೆಯುತ್ತಾ ಬಂದು ಕ್ರಮೇಣ ವೃತ್ತಿಧರ್ಮವಾಗಿ ಸ್ವೀಕರಿಸಿದ ಕೆಲವೇ ಜನವರ್ಗದವರನ್ನು ಸಮಾಜ ಪ್ರತ್ಯೇಕವಾಗಿ ಗುರುತಿಸಿ ಗೊಂಬೆಯಾಟದ ಕಲಾವಿದರೆಂದು ಗೌರವಿಸಿತು. ಗೊಂಬೆಯಾಟದ ಪ್ರಕಾರದಲ್ಲಿ ದ್ರಾವಿಡ ಸಿದ್ಧಾಂತದ ನಿಲುವುಗಳು

ಹೆಚ್ಚು. ಪ್ರದರ್ಶನ ಕಲೆಗಳಲ್ಲಿ ಯಾವುದೇ ಪ್ರಕಾರವನ್ನು ಅವಲೋಕಿಸಿದಾಗ್ಯೂ ದ್ರಾವಿಡ ಸಿದ್ಧಾಂತದ ಅರ್ಥಗಳನ್ನು ಆಚರಣಾತ್ಮಕ ನೆಲೆಯಲ್ಲಿ ಹೆಚ್ಚಾಗಿ ಕಾಣಬಹುದು.[೩೬] ಹೀಗೆ ತೊಗಲುಗೊಂಬೆಯ ಆರಂಭಕ್ಕೆ ಯಾವ ಕಾಲಮಾನ ಎಂದು ಖಚಿತವಾದ ದಾಖಲೆಗಳಿಲ್ಲ. ಕೆಲವು ಆಧಾರಗಳಿಂದ ಮಾನವ ಸಂಸ್ಕೃತಿಯ ಚರಿತ್ರೆ ಬಹಳಷ್ಟು ಹಿಂದಕ್ಕೆ ಹೋಗುತ್ತದೆ. ಮೊಳೆಯಿಂದ ಮಾಡಿದ ಕಿರುಗೊಂಬೆಗಳು ಮತ್ತು ಸಣ್ಣ ಚರ್ಮದ ಚಿತ್ರಗಳು ದೊರೆತಿದ್ದು, ಭಾರತದಲ್ಲಿ ಇತಿಹಾಸಪೂರ್ವದಿಂದಲೂ ಗೊಂಬೆಗಳ ಪರಿಕಲ್ಪನೆ ಇತ್ತೆಂಬುದನ್ನು ತೋರಿಸುತ್ತವೆ.[೩೭]

ಅಷ್ಟೇ ಅಲ್ಲ, ಇಂದು ಪ್ರಪಂಚದ ಬೇರೆ ಬೇರೆ ಭಾಗದಲ್ಲಿ ಪುರಾತನ ನಾಗರಿಕತೆಯಲ್ಲಿ ವ್ಯಾಪಕವಾಗಿ ಹರಡಿತ್ತೆಂಬುದಕ್ಕೂ ನಿದರ್ಶನಗಳಿವೆ.[೩೮] ಆದರೆ ಈಜಿಪ್ತಿನ ಪ್ರಾಚೀನ ಪಿರಮಿಡ್‌ಗಳಲ್ಲಾಗಲೀ, ಚೀನಾ ಅಥವಾ ಭಾರತದ ಪ್ರಾಚೀನ ಮತಾಚರಣೆಗಳಲ್ಲಾಗಲೀ, ಹರಪ್ಪ-ಮೆಹಂಜೋದಾರೋಗಳಲ್ಲಿನ ಗೊಂಬೆಗಳಷ್ಟು ಹಳೆಯದಾದ ಕರ್ನಾಟಕದಲ್ಲಿ ದೊರೆತ ಗೊಂಬೆಗಳಾಗಲೀ ಅವೆಲ್ಲಾ ಬಹುಮಟ್ಟಿಗೆ ಮಾಂತ್ರಿಕ ಮತಾಚರಣೆಗಳಲ್ಲಿ ಬಳಸುತ್ತಿದ್ದ ಗೊಂಬೆಗಳೆಂಬುದು ಗಮನಾರ್ಹವಾಗಿದೆ.[೩೯] ಇಂತಹ ಗೊಂಬೆಗಳು ಉದಾಹರಣೆಗಳಾಗಿ ಸಂಗನಕಲ್ಲು, ಹಂಪಿ, ಕಾರಿಗನೂರು ಮುಂತಾದ ನೆಲೆಗಳಲ್ಲಿ ಕಂಡುಬರುತ್ತವೆ.

ತೊಗಲುಗೊಂಬೆಯಾಟದ ಕುರಿತು ನಂಬಿಕೆಗಳು

ಈ ಕಲಾಪ್ರಕಾರವು ಮುಖ್ಯವಾಗಿ ಆರಂಭದಲ್ಲಿ ಭಕ್ತಿಪ್ರಚಾರಕ್ಕೆ ಪೂರಕವಾಗಿ ಅಭಿವ್ಯಕ್ತಗೊಂಡು, ಕ್ರಮೇಣ ಹೊಸ ಚಿಂತನೆಗಳನ್ನು ಸಾದರಪಡಿಸಲು ಈ ಮಾಧ್ಯಮವನ್ನು ಬಳಸಿಕೊಳ್ಳಲಾಯಿತು. ದಕ್ಷಿಣ ಭಾರತದಲ್ಲಿ ಮುಖ್ಯವಾಗಿ ತೊಗಲುಗೊಂಬೆಯಾಟಗಾರರು ಗ್ರಾಮ ಪ್ರವೇಶಿಸಿದರೆ ಸಾಕ್ಷಾತ್ ದೇವರ ಪ್ರತಿನಿಧಿಗಳೆಂದು ಗ್ರಾಮದ ಸದಸ್ಯರು ಭಾವಿಸುತ್ತಾ ಬಂದಿರುವರು. ಇಂದಿಗೂ ಜನ ನಂಬಿದ್ದಾರೆ.[೪೦] ಉದಾಹರಣೆಗೆ ಅಲೆಮಾರಿಜನ ವರ್ಗದವರೆಂದು ಒಂದು ಕಾಲದಲ್ಲಿ ಗುರುತಿಸಲ್ಪಟ್ಟ ತೊಗಲುಗೊಂಬೆಯಾಟ ಪರಂಪರೆಯ ಕೀಳ್ಳೆಕ್ಯಾತ ಜನವರ್ಗದವರು ಊರೊಳಗೆ ಪ್ರದರ್ಶನ ನೀಡಲು ಅಡಿಯಿಟ್ಟರೆ ಅವರು ಒಲೆ ಹಚ್ಚಬಾರದು, ಪ್ರದರ್ಶನದ ತರುವಾಯ ಅವರ ಸಾಂಸ್ಕೃತಿಕ ಬದುಕಿನಂತೆ ನಡೆಯಬಹುದು.

ಊರಲ್ಲಿ ಸರಿಯಾಗಿ ಮಳೆ-ಬೆಳೆ ಬಾರದೇ ಹೋದರೆ, ಕಾಯಿಲೆ ಮುಂತಾದ ಸಂದರ್ಭಗಳಲ್ಲಿ ಗೊಂಬೆಯಾಟದವರನ್ನು ಕರೆಯಿಸಿ ಪೂಜೆ ಪ್ರಾರ್ಥನೆ ಮೂಲಕ ಆಚರಣಾತ್ಮಕವಾಗಿ ಪ್ರದರ್ಶನ ಕೊಡುವಂತಹ ವ್ಯವಸ್ಥೆಯನ್ನು ಗ್ರಾಮಸ್ಥರು ನೋಡಿಕೊಳ್ಳುವರು. ಜನರ ನಂಬಿಕೆಯ ಆಧಾರದಿಂದ

---

೩೬. ಎಸ್. ಎ. ಕೃಷ್ಣಯ್ಯ : ಕರ್ನಾಟಕ ಕಲಾ ದರ್ಶನ, ಪುಟ - ೬೩

೩೭. ಅದೇ., ಪುಟ - ೧

೩೮. ಡಾ. ಎಚ್. ಕೆ. ರಂಗನಾಥ : ಕರ್ನಾಟಕ ರಂಗಭೂಮಿ, ಪುಟ - ೭೯

೩೯. ಡಾ. ಶಶಿಕಲಾ ಹೂಗಾರ್ : ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ, ಪುಟ - ೩೧

೪೦. ಎಸ್. ಎ. ಕೃಷ್ಣಯ್ಯ : ಕರ್ನಾಟಕ ಕಲಾ ದರ್ಶನ, ಪುಟ - ೬೪

ಗೊಂಬೆಯಾಟದಂತಹ ಪ್ರದರ್ಶನಗಳನ್ನು ಇಂದಿಗೂ ಹೊಸಪೇಟೆ, ಬಳ್ಳಾರಿ ನಗರ ಮತ್ತು ಹಲವು ಹಳ್ಳಿಗಳಲ್ಲಿ ಕಾಣಬಹುದಾಗಿದೆ. ಈ ತೊಗಲುಗೊಬೆಯಾಟವನ್ನು ಪ್ರಮುಖ ಉತ್ಸವ, ಸಮ್ಮೇಳನದಂತಹ ಸಂದರ್ಭದಲ್ಲಿ ಇಂದು ಆಡಿಸುವುದನ್ನು ಕಾಣಬಹುದು. ಈ ಕಲಾಪ್ರಕಾರವನ್ನು ಉಳಿಸುವ, ಬೆಳೆಸುವ ಯತ್ನವನ್ನು ವಿಶ್ವವಿದ್ಯಾಲಯದ ಮಟ್ಟದಲ್ಲಿಯೂ ಕಾಣುತ್ತೇವೆ. ಇಂತಹ ತೊಗಲುಗೊಂಬೆಯಾಟ ಆಡಿಸುವ ಕಲಾವಿದರನ್ನು ಈ ಬಳ್ಳಾರಿಜಿಲ್ಲೆಯಲ್ಲಿ ಇಂದಿಗೂ ಕಾಣಬಹುದಾಗಿದೆ. ನೂರು ಎರಡು ನೂರು ವರ್ಷಗಳ ಇತಿಹಾಸವಿರುವ ತೊಗಲುಗೊಂಬೆಗಳನ್ನು ಈ ಕಲಾವಿದರಲ್ಲಿ ಕಾಣುತ್ತೇವೆ. ಅಂಥವರಲ್ಲಿ ಎಡ್ರಮನಹಳ್ಳಿ ದೊಡ್ಡಭರಮಪ್ಪ ಮತ್ತು ಬೆಳಗಲಿ ವೀರಣ್ಣನವರು ಈ ಜಿಲ್ಲೆಯಲ್ಲಿ ಕಂಡುಬರುವ ತೊಗಲುಗೊಂಬೆ ಕಲಾವಿದರಾಗಿದ್ದಾರೆ.

ಎಡ್ರಮನಹಳ್ಳಿ ದೊಡ್ಡಭರಮಪ್ಪ

ಎಡ್ರಮನಹಳ್ಳಿ ದೊಡ್ಡಭರಮಪ್ಪವರು ಕಿಳ್ಳೆಕ್ಯಾತರು. ತೊಗಲುಗೊಂಬೆ ಆಟ ಆಡಿಸುವವರು ಎಂದು ಗುರುತಿಸಿಕೊಂಡಿದ್ದಾರೆ. ಇವರು ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ಬಿಲಗೋಡು ಗ್ರಾಮದ ಅತ್ಯಂತ ಜನಪ್ರಿಯ ಕಲಾವಿದರಾಗಿದ್ದಾರೆ. ಇವರು ಸಂಪೂರ್ಣ ರಾಮಾಯಣ ಕಥಾನಕವನ್ನು ನಿರರ್ಗಳವಾಗಿ ೧೪ ದಿನಗಳಿಂದ ೨೧ ದಿನಗಳವರೆಗೆ ನಡೆಸಬಲ್ಲರು. ಇವರು ಮೂಲತಃ ಗದಗ ಜಿಲ್ಲೆಯ ಮುಂಡರಗಿಯಲ್ಲಿ ದೇವೇಂದ್ರಪ್ಪ ಮತ್ತು ಕೆಂಚವ್ವ ಎಂಬ ದಂಪತಿಗಳ ಉದರದಲ್ಲಿ ಜನಿಸಿರುತ್ತಾರೆ. ಈ ದಂಪತಿಗಳಿಗೆ ಇಬ್ಬರು ಮಕ್ಕಳು, ದೊಡ್ಡಭರಮಪ್ಪನವರೇ ದೊಡ್ಡಮಗ. ಚಿಕ್ಕಂದಿನಿಂದಲೇ ಗೊಂಬೆಯಾಟವನ್ನು ಆಡಿಸುವ ಮಹದಾಸೆ, ಆದರೆ ತಂದೆ ತಾಯಿಯನ್ನು ಚಿಕ್ಕವರಾಗಿರುವಾಗಲೇ ಕಳೆದುಕೊಂಡಿದ್ದರಿಂದ ಇವರ ಹೆಣ್ಣಜ್ಜಿ 'ಇದು ನಮ್ಮ ತಲೆತಲಾಂತರದಿಂದ ನಡೆಸಿಕೊಂಡು ಬಂದ ಕಾಯಕ, ಇದೇ ಕಾಯಕ ಮುಂದುವರೆಸಿಕೊಂಡು ಹೋಗಿ ಜೀವನ ನಡೆಸುವುದು ನಮ್ಮ ನಿಯಮ'ವೆಂದು ಕಾವ್ಯವನ್ನು ಬಾಯಿಪಾಠ ಮಾಡಿಸುತ್ತಿದ್ದಳು. ಹೀಗೆ ಕಾಯಕವನ್ನು ಕಲಿತ ಭರಮಪ್ಪನವರ ನೆನಪಿನ ಶಕ್ತಿ ಅಗಾಧವಾದದ್ದು, ಭರಮಪ್ಪ ಮತ್ತು ಈತನ ಕುಟುಂಬದ ಸದಸ್ಯರು ಉತ್ತರ ಕರ್ನಾಟಕದ ಪ್ರತಿನಿಧಿಗಳಾಗಿ ಜರ್ಮನಿ ದೇಶದಲ್ಲಿ ೧೯೮೬ರಲ್ಲಿ ಯಶಸ್ವಿ ಪ್ರದರ್ಶನಗಳನ್ನು ನೀಡಿದ ಕೀರ್ತಿಗೆ ಪಾತ್ರರಾಗಿರುವರು.

ಬೆಳಗಲಿ ವೀರಣ್ಣ

ತೊಗಲುಗೊಂಬೆಯಾಟದಲ್ಲಿ ಹೊಸ ಬದಲಾವಣೆಯನ್ನು ಮೊದಲ ಬಾರಿಗೆ ತಂದ ಅಪೂರ್ವ ಕಲಾವಿದ, ನಾಟಕಕಾರ, ನಿರ್ದೇಶಕ ಬೆಳಗಲಿ ವೀರಣ್ಣ. ಬಳ್ಳಾರಿನಗರದಲ್ಲಿನ ಕೌಲ್ ಬಜಾರ್ ನಿವಾಸಿಯಾಗಿರುವ ಇವರು ಕಂಪನಿ ನಾಟಕ ಕಲಾವಿದರಾಗಿದ್ದರು. ಕಮಲಾದೇವಿ ಚಟ್ಟೋಪಾಧ್ಯಾಯ ಇವರ ಮಾರ್ಗದರ್ಶನದಿಂದಾಗಿ ತಮ್ಮ ಪರಂಪರೆಯ ಕುಲಕಸುಬಾದ ತೊಗಲುಗೊಂಬೆಯಾಟವನ್ನು ವಿನೂತನವಾಗಿ ಪ್ರದರ್ಶನ ನೀಡುವಲ್ಲಿ ಪ್ರಯೋಗಗಳನ್ನು ಮಾಡಿದ

ಕೀರ್ತಿ ಬೆಳಗಲಿ ವೀರಣ್ಣನವರದಾಗಿದೆ. ಹೊಸ ಕಥೆಗಳನ್ನು ಶೈಕ್ಷಣಿಕ ರೀತಿಯಲ್ಲಿ ಮೊಟ್ಟ ಮೊದಲ ಬಾರಿಗೆ ಪರಿಚಯಿಸುವಲ್ಲಿ ಯಶಸ್ಸನ್ನು ಗಳಿಸಿದ ಕಲಾವಿದರಿವರು.

ಸುಮಾರು ೧೯೮೮ರ ದಶಕದಲ್ಲಿ 'ಸ್ವಾತಂತ್ರ್ಯ ಸಂಗ್ರಾಮ' ಎನ್ನುವ ಕಥಾನಕವನ್ನು ಇವರು ಮೊದಲಬಾರಿಗೆ ತೊಗಲುಗೊಂಬೆಯಾಟದ ಮೂಲಕ ಪ್ರದರ್ಶನ ನೀಡಿ ಮೆಚ್ಚುಗೆ ಗಳಿಸಿದರು. ಆ ಬಳಿಕ ಸ್ಥಳೀಯ ಸಂಘಟಕರ ನೆರವಿನಿಂದ ಹೊಸ ಪ್ರಯೋಗಗಳನ್ನು ಮಾಡುತ್ತಲೇ ಬಂದರು. ಇವರ ಪ್ರಯೋಗಗಳಲ್ಲಿ ಅತೀ ಮೆಚ್ಚುಗೆ ಪಡೆದ ಕಥೆಗಳೆಂದರೆ 'ರಾಣಿ ಕಿತ್ತೂರು ಚೆನ್ನಮ್ಮ', 'ಝಾನ್ಸಿ ರಾಣಿ ಲಕ್ಷ್ಮೀಬಾಯಿ', 'ಸಿಪಾಯಿ ದಂಗೆ', 'ಬಸವೇಶ್ವರ', 'ಛತ್ರಪತಿ ಶಿವಾಜಿ', 'ಸಂತ ಶಿಶುನಾಳ ಶರೀಫ'[೪೧] ಮುಂತಾದವುಗಳ ಆಟವನ್ನು ಆಡಿಸುವುದರಲ್ಲಿ ತುಂಬಾ ಹೆಸರುಮಾಡಿದ ಕಲಾವಿದರಾಗಿ ದೇಶ-ವಿದೇಶಗಳಲ್ಲಿಯೂ ಹೆಸರುಮಾಡಿದ್ದಾರೆ.

ಈ ವಸ್ತುವಿಷಯಕ್ಕೆ ಸಂಬಂಧಿಸಿದಂತೆ ಸಂಡೂರಿನ ಚಿತ್ರಕಲಾವಿದರಾದ ಡಾ. ವಿ. ಟಿ. ಕಾಳೆಯವರು ತೊಗಲುಗೊಂಬೆಗಳನ್ನು ರಚಿಸಿಕೊಟ್ಟಿದ್ದಾರೆ. ದೊಡ್ಡಭರಮಪ್ಪರ ಹತ್ತಿರವಿರುವ ತೊಗಲುಗೊಂಬೆಗಳು ಪ್ರಾಚೀನದ್ದಾಗಿವೆ. ಬೆಳಗಲಿ ವೀರಣ್ಣನವರ ಹತ್ತಿರವಿರುವ ತೊಗಲುಗೊಂಬೆಗಳು ಹೊಸದಾಗಿವೆ. ಹಾಗಾಗಿ ಎರಡು ಪ್ರಕಾರದಲ್ಲಿ ತೊಗಲುಗೊಂಬೆಗಳ ರಚನಾ ವಿಧಿ-ವಿಧಾನ ಕೂಡ ಬೇರೆಯಾಗಿದೆ. ಪ್ರಾಚೀನ ತೊಗಲುಗೊಂಬೆ ಚಿತ್ರಗಳನ್ನು, ಪರಿಕರಗಳನ್ನು ಕಲಾವಿದರೇ ತಯಾರಿಸಿಕೊಂಡು ಚಿತ್ರರಚನೆ ಮಾಡುತ್ತಿದ್ದರು. ಆದರೆ ಇಂದಿನ ಕಂಪ್ಯೂಟರ್‌ಯುಗದಲ್ಲಿ ಯಾವ ಗೊಂಬೆಯಾಟಕಾರನೂ ದೇಶೀ ಬಣ್ಣ ಬಳಸುವಷ್ಟು ಆಸಕ್ತಿ ತೆಗೆದುಕೊಂಡಂತಿಲ್ಲ. ಸಿದ್ಧವಿರುವ ಬಣ್ಣವನ್ನೇ ಖರೀದಿಸಿ ಚಿತ್ರಗಳಿಗೆ ಲೇಪನ ಮಾಡುವ ಪದ್ಧತಿ ಸರಳ ಪದ್ಧತಿಯಾಗಿದ್ದರಿಂದ ಈ ಪದ್ಧತಿಯಲ್ಲಿಯೇ ಚಿತ್ರಗಳು ರಚನೆಯಾಗುತ್ತವೆ.

ಚಿತ್ರರಚನಾ ಪರಿಕರಗಳು

ಪ್ರಾಚೀನ ತೊಗಲುಗೊಂಬೆ ಚಿತ್ರಗಳನ್ನು ಚರ್ಮ ಹದಗೊಳಿಸುವುದರಿಂದ ಹಿಡಿದು ರೇಖೆ, ಬಣ್ಣ, ಅಂತಿಮ ರೇಖೆಯವರೆಗೂ ಹಲವಾರು ಹಂತದಲ್ಲಿ ತಯಾರಿಸಲಾಗುತ್ತಿತ್ತು.

ಚರ್ಮದ ಹದಗಾರಿಕೆ

ತೊಗಲುಗೊಂಬೆ ಚಿತ್ರಕಲೆಯ ರಚನಾ ವಿಧಿ-ವಿಧಾನಗಳಲ್ಲಿಯೇ ಚರ್ಮದ ಸಂಸ್ಕರಿಸುವ ಹಂತ ಮುಖ್ಯವಾಗಿದ್ದಾಗಿದೆ. ಪ್ರಾಂತೀಯವಾಗಿ ವಿಭಿನ್ನವಾದ ರೀತಿಯಲ್ಲಿ ಚರ್ಮವನ್ನು ಹದಗೊಳಿಸುತ್ತಾರೆ. ಇತ್ತೀಚೆಗೆ ತೊಗಲುಗೊಂಬೆಯಾಟಗಾರರು ಗೊಂಬೆಗಳ ತಯಾರಿಕೆಯನ್ನು ಸ್ವತಃ ಮಾಡಲಾರದೇ ಪರಾವಲಂಬಿಗಳಾಗಿದ್ದೇ ಹೆಚ್ಚು ಎರಡು ಮೂರು ಪ್ರಕಾರಗಳಲ್ಲಿ ಚರ್ಮವನ್ನು ಹದಗೊಳಿಸುತ್ತಾರೆ. ಬಳ್ಳಾರಿಯಲ್ಲಿ ಚರ್ಮವನ್ನು ಹದಗೊಳಿಸುವ ರೀತಿತಯೆಂದರೆ ಚರ್ಮವನ್ನು

೪೧. ಎಸ್. ಎ. ಕೃಷ್ಣಯ್ಯ : ಕರ್ನಾಟಕ ಕಲಾ ದರ್ಶನ, ಪುಟ – ೭೧

[illegible]

ನೀರಿನಲ್ಲಿ ಅದ್ದಿ ತೋಯಿಸಿ ನೀರನ್ನು ಹಿಂಡುವರು. ನೀರನ್ನು ಚರ್ಮದಿಂದ ತೆಗೆಯುವಾಗ ತುಂಬಾ ಎಚ್ಚರಿಕೆಯಿಂದ ವಹಿಸುತ್ತಾರೆ. ಚರ್ಮವು ಸುಕ್ಕಾಗದಂತೆ ನೆರಳಲ್ಲಿ ಚಾಪೆಯ ಮೇಲೆ ಬಿಳಿ ಬಟ್ಟೆಯ ಮೇಲೆ ಚರ್ಮವನ್ನು ಹರಡಿ ಅದರ ಮೇಲೆ ಮತ್ತೊಂದು ಬಿಳಿ ಮೆತ್ತನೆ ಬಟ್ಟೆ ಹಾಸಿ ಎಳೆದು ಅಗಲಿಸಿದರೆ ಅದು ಬಟ್ಟೆಗೆ ಅಂಟಿಕೊಳ್ಳುವುದು. ಅದರ ಮೇಲೆ ಭಾರವಾದ ವಸ್ತು ಇಟ್ಟು ಮರುದಿನ ಬೆಳಿಗ್ಗೆ ಅದನ್ನು ತೆಗೆದು, ಸುತ್ತಲೂ ಅಂಚು ಕತ್ತರಿಸಿ ಚಕ್ಕೆಯಲ್ಲಿ ಇತರ ಗೊಂಬೆಗಳ ನಡುವೆ ಸುಕ್ಕು ಬರದ ಹಾಗೆ ಇಡುತ್ತಾರೆ'.[೪೨] ಇದು ಪ್ರಾಚೀನ ಹಂತವಾಗಿದೆ. ಇದು ತುಂಬಾ ಬಾಳಿಕೆ ಬರುವಂಥದಿದ್ದು ವರ್ಷಾನು ವರ್ಷಗಳವರೆಗೆ ಸಾಗಿಬರುತ್ತವೆ.

ಇಂತಹ ತೊಗಲುಗೊಂಬೆ ಚಿತ್ರಗಳಿಗೆ ಉದಾಹರಣೆಯಾಗಿ ಎಡ್ರಮನಹಳ್ಳಿ ದೊಡ್ಡಭರಮಪ್ಪನವರಲ್ಲಿ ಇರುವಂತಹ ತೊಗಲುಗೊಂಬೆಗಳಿಗೆ ಹಲವಾರು ತಲೆಗಳು ಹೋಗ್ಯಾವ ಎನ್ನುವ ಇವರ ಮಾತಿನ ಅರ್ಥ, ತಲೆತಲಾಂತರದಿಂದ ಬಂದ ತೊಗಲುಗೊಂಬೆ ಚಿತ್ರಗಳಾಗಿವೆ ಎನ್ನುತ್ತಾರೆ. ತೊಗಲುಗೊಂಬೆಗಳಿಗೆ ಯಾವ ಮಾಧ್ಯಮದಲ್ಲಿ ಬಣ್ಣ ತಯಾರಿಸಿಕೊಂಡು ಉಪಯೋಗಿಸಿದರೆ ಬಹುದಿನ ಬರುವುದು ಎಂಬ ವೈಜ್ಞಾನಿಕ ಅಂಶವನ್ನು ಅರಿತು ಅಂತಹ ವರ್ಣದಿಂದಲೇ ಲೇಪನ ಮಾಡುತ್ತಿದ್ದರು. ಅಂತಹ ವರ್ಣಗಳನ್ನು ಕುರಿತು ಇಲ್ಲಿ ನೋಡಬಹುದು.

ವರ್ಣ ತಯಾರಿಕೆ

ಕೆಂಪುವರ್ಣ : ಈ ಬಣ್ಣವನ್ನು 'ನಾಗವರ್ಣ ಕಳಿ' ಹಣ್ಣುಗಳ ರಸದಿಂದ ತಯಾರಿಸುತ್ತಿದ್ದರು. ಗೊಬ್ಬಿ ಮೇಣದೊಂದಿಗೆ ಈ ರಸವನ್ನು ಒಂದುವಾರ ಕಾಲ ನೆನೆಹಾಕಿ ಬಣ್ಣ ತಯಾರಿಸಿಕೊಳ್ಳುತ್ತಿದ್ದರು.

ಕಪ್ಪುಬಣ್ಣ : ಕಪ್ಪುಬಣ್ಣವನ್ನು ತೆಂಗಿನ ಚಿಪ್ಪು ಸುಟ್ಟು ದೊರಕುವ ಇದ್ದಿಲಿನ ಪುಡಿಗೆ ಗೊಬ್ಬಿ ಮೇಣ ಸೇರಿಸಿ, ಸಂಸ್ಕರಣ ಮಾದರಿಯಲ್ಲಿ ಕೊಳೆಸಿ, ಒಂದು ವಾರಕಾಲ ಇಬ್ಬನಿಯಲ್ಲಿರಿಸಿ ಬಣ್ಣ ತಯಾರಿಸಿಕೊಳ್ಳುತ್ತಿದ್ದರು.

ನೀಲಿಬಣ್ಣ : ನೀಲವರ್ಣವನ್ನು ತುಂಬೆ ಸೊಪ್ಪಿನ ರಸದಿಂದ ತಯಾರಿಸುತ್ತಿದ್ದರು. ಕೇರಳದ ತೊಗಲುಗೊಂಬೆಯಾಟಕಾರರು ಆಯುರ್ವೇಧ ಔಷಧವನ್ನು ತೊಂಬೆಸೊಪ್ಪಿನ ರಸದಿಂದ ತಯಾರಿಸುತ್ತಿದ್ದರು.

ಹಳದಿಬಣ್ಣ : ಹಳದಿ ಬಣ್ಣವನ್ನು ಉರ್ಜಿಕಾಯಿ ಅಥವಾ ಹೂವರಸಿಕಾಯಿ (ಬೆಂಗಾಲಿ ಕಾಯಿ) ಹಣ್ಣುಗಳ ರಸವನ್ನು ಬೇವಿನ ಮರದ ಅಂಟಿನೊಂದಿಗೆ ಸೇರಿಸಿ ಸಂಸ್ಕರಿಸಿದ ತರುವಾಯ[೪೩] ಹಳದಿ ಬಣ್ಣವನ್ನು ತೊಗಲುಗೊಂಬೆಗಳಿಗೆ ಲೇಪನ ಮಾಡುವ ವಿಧಾನವಾಗಿ ಬಳಸುತ್ತಿದ್ದಾರೆ. ಇದು ಪ್ರಾಚೀನ ವಿಧಾನವಾದರೆ ಇಲ್ಲಿಯೂ ಕುಂಚ ತಯಾರಿಕೆಯಲ್ಲಿ ಆದಿಮಾನವನಂತೆ

---

೪೨. ಟಿ. ಗೋವಿಂದರಾಜು : ಗೊಂಬೆರಾಮರ ಸಂಸ್ಕೃತಿ, ಪುಟ – ೭೪

೪೩. ಎಸ್. ಎ. ಕೃಷ್ಣಯ್ಯ : ಕರ್ನಾಟಕ ಕಲಾ ದರ್ಶನ, ಪುಟ – ೭೫

ಪ್ರಾಣಿಯ ಕೂದಲುಗಳಿಂದ ಮತ್ತು ಕಟ್ಟಿಗೆ, ಬಟ್ಟೆಸುತ್ತುವುದರಿಂದ ಕುಂಚಗಳನ್ನು ಸಾಂಪ್ರದಾಯಕ ಪದ್ಧತಿಯಲ್ಲಿ ಸಿದ್ಧಪಡಿಸಿಕೊಂಡು ಈ ಕುಂಚದಿಂದಲೇ ವರ್ಣಲೇಪನ ಮಾಡಲಾಗುತ್ತಿತ್ತು. ಈಗ ಆಧುನಿಕ ಕುಂಚಗಳನ್ನು ಉಪಯೋಗಿಸುತ್ತಾರೆ.

ತೊಗಲುಗೊಂಬೆ ಚಿತ್ರಗಳ ರಚನಾವಿಧಾನ

ಚಿರ : ಮುಂಭಾಗದಲ್ಲಿ ಅಗಲಿನಂತೆ ಹರಿತವಾದ ಚೂಪಾದ ಸಾಧನವಿದ್ದು, ಇದರಿಂದ ಸಾಲುಸಾಲಾಗಿ ಚಿತ್ರಗಳಲ್ಲಿ ಬರುವ ಸರಣಿ ರಂಧ್ರಗಳನ್ನು ಒತ್ತಿ ಓರೆಯಾಗಿ ಬರುವ ಎಲ್ಲಾ ಚಿತ್ರದ ಆಭರಣಗಳನ್ನು ಮಾಡಲು ಉಪಯೋಗಿಸಿದ್ದಾರೆ.

ಮನಾಳ : ಈ ವಸ್ತುವನ್ನು ಕಬ್ಬಿಣದಿಂದ ಮಾಡಲಾಗಿ ಮಣಿಸರದಂತೆ ಚಿಕ್ಕ ಮತ್ತು ದೊಡ್ಡ ರಂಧ್ರಗಳನ್ನು ಮಾಡಲು ಉಪಯೋಗಿಸುವ ವಸ್ತುವಾಗಿದೆ. ಡಾಬನಸ್‌ಕಾಡಿ ಇದು ಕಬ್ಬಿಣದ 'ದಬ್ಬಣ'ವನ್ನು ಹೋಲುವ ಸಾಧನವಾಗಿದೆ. ಇದನ್ನು ಚರ್ಮಕ್ಕೆ ಚಿತ್ರವನ್ನು ರೇಖಿಸಲು ಉಪಯೋಗಿಸುತ್ತಾರೆ. ಮತ್ತು ಸೋಡಿತ[೪೪] ಇದು ಚಿತ್ರದ ಸೂಕ್ಷ್ಮರೇಖೆಯನ್ನು ಹಾಕಲು ಉಪಯೋಗಿಸುವಂಥ ಪರಿಕರವಾಗಿದೆ. ಇದರಲ್ಲಿ 'ತೆರಪು' ಎನ್ನುವ ಪಾರಿಭಾಷಿಕ ಪದವನ್ನು ಈ ಒಂದು ಕಲಾಪ್ರಕಾರಗಳಲ್ಲಿ ಉಪಯೋಗಿಕವಾಗಿ ತೊಗಲುಗೊಂಬೆ ಚಿತ್ರಗಳಲ್ಲಿ ಉಳಿಸುವ ತೆರಪು ಎಂದರೆ ಇರುವ ಮೂರ್ನಾಲ್ಕು ಬಣ್ಣಗಳನ್ನು ಚಿತ್ರದ ಎಲ್ಲಾ ಭಾಗಗಳಿಗೂ ಲೇಪಿಸುವ ಬದಲು ಕೆಲವು ಸ್ಥಳಗಳಲ್ಲಿ ಖಾಲಿ ಬಿಡುವುದಷ್ಟೇ ಅಲ್ಲ, ಆ ಭಾಗಗಳ ತೊಗಲನ್ನು ಪೂರ್ಣವಾಗಿ ಕತ್ತರಿಸಿ ತೆಗೆದ ಮೂಲಕ ಅಲ್ಲಿ ತೆರಪನ್ನುಂಟು ಮಾಡಲಾಗುತ್ತದೆ.

ಇದರಿಂದ ಒಟ್ಟು ಚಿತ್ತಾರದಲ್ಲಿ ಉಂಟಾಗುವ ಪರಿಣಾಮ ಅದ್ಭುತವಾದದ್ದು, ಈ ತೆರಪಿನಿಂದಾಗಿ ಗೊಂಬೆಯ ಇತರ ಭಾಗಗಳು ಪ್ರತ್ಯೇಕಗೊಳ್ಳುತ್ತವೆ.[೪೫] ಮೊದಲಿಗೆ ಚರ್ಮದ ಮೇಲೆ ಗೊಂಬೆಯ ವಿನ್ಯಾಸವನ್ನು ಮೊಳೆಯಿಂದ ರಚಿಸುವ ಹಂತದಲ್ಲಿ ಯಾವ ಗೊಂಬೆಗಳು ಬೇಕೋ ಆ ಆಕಾರಕ್ಕೆ ಮೊಳೆಯಿಂದ ಒತ್ತಿ ರೇಖೆಯುನ್ನು ಮೂಡಿಸಿಕೊಂಡು ಆ ರೇಖಾವಿನ್ಯಾಸಕ್ಕನುಗುಣವಾದ ಚರ್ಮವನ್ನು ಕತ್ತರಿಸಿಕೊಳ್ಳಲಾಗುತ್ತದೆ. ಕತ್ತರಿಸಿಕೊಂಡ ಚರ್ಮದ ವಿನ್ಯಾಸಗಳಿಗೆ ವರ್ಣವನ್ನು ನಿಯಮಾನುಸಾರವಾಗಿ ಲೇಪನ ಮಾಡಲಾಗುತ್ತದೆ. ಮತ್ತು ಅಂತಿಮವಾಗಿ ಹೊರರೇಖೆಯನ್ನು ಹಾಕುವ ಮೂಲಕ ಪೂರ್ಣಗೊಳಿಸಲಾಗುತ್ತದೆ.

ವಸ್ತುವಿಷಯ

ಹೀಗೆ ತಯಾರಿಸಿಕೊಂಡ ಗೊಂಬೆಗಳಲ್ಲಿ ಮುಖ್ಯವಾಗಿ ಪೌರಾಣಿಕ ಹಿನ್ನೆಲೆಯಿಂದ ಕೂಡಿದ ಚಿತ್ರಗಳು. ದೊಡ್ಡ ಭರಮಪ್ಪನವರಲ್ಲಿ ಸಂಗ್ರಹಗೊಂಡವುಗಳಲ್ಲಿ ಗಣಪತಿ, ಶಾರದಾ ಮಾತೆ,

---

೪೪. ಡಾ. ಶಶಿಕಲಾ ಹೂಗಾರ್ : ಕರ್ನಾಟಕದ ತೊಗಲು ಗೊಂಬೆ ಚಿತ್ರಕಲೆ, ಪುಟ – ೪೮–೪೯

೪೫. ಟಿ. ಗೋವಿಂದರಾಜು : ಚಿತ್ತಾರಗೊಂಬೆ ಕಲೆ, ಪುಟ – ೨೬

[illegible]

ಚರ್ಮದ ಮೇಲಿನ ಚಿತ್ರಕಲೆ
ತೊಗಲು ಗೊಂಬೆ ಚಿತ್ರಕಲೆ



ನಾಗಕುಮಾರಿ



ಗಣೇಶ



ಆಂಜನೇಯ

ಚರ್ಮದ ಮೇಲಿನ ಚಿತ್ರಕಲೆ



ಇಬ್ಬರು ಮಹಿಳೆಯರು



ಅಂಬಾರಿ ಮೇಲಿನ ಸವಾರಿ



ಹುಲಿ ವೇಷದ ಚಿತ್ರವಿನ್ಯಾಸ

ಹಗಲು ವೇಷಗಾರರ ಮುಖವರ್ಣಿಕೆಯ ಚಿತ್ರ ವಿನ್ಯಾಸ





ಕಾಡು ಸಿದ್ದರ ಮುಖವರ್ಣಿಕೆ



ಹಗಲು ವೇಷಗಾರ

ಬಳ್ಳಾರಿ ಜಿಲ್ಲೆಯ ಸಂಕೀರ್ಣ ಜನಪದ ಚಿತ್ರಕಲೆ



ಹಂಡಿ ಜೋಗಿ ವೃತ್ತಿಯಲ್ಲಿಯ ಚಿತ್ರಕಲಾ ವಿನ್ಯಾಸ

ಕಿಳ್ಳೆಕ್ಯಾತ, ದಶರಥ, ಸುಮಿತ್ರಾದೇವಿ, ಕೌಶಲ್ಯೆ, ಮಂಥರಾ, ಚಂದ್ರಲೇಖಾ, ರಾಮ, ಲಕ್ಷ್ಮಣ, ಭರತ, ಸೀತೆ, ಮಂಡೋದರಿ, ಹತ್ತುತಲೆಯ ರಾವಣ, ವಾಲಿ, ಸುಗ್ರೀವ, ಒಂಟಿಕೂಡಿದ ಮುನೀಶ್ವರ, ಆಂಜನೇಯ, ಶೃಂಗಾರಮುನಿ, ಮಾಯದ ಜಿಂಕೆ, ಗರುಡ, ಮೊಸರು ಕಡೆಯುವಿಕೆಯ ದೃಶ್ಯದ ಗೊಂಬೆ, ಸೀತಾ ಸ್ವಯಂವರ ಚಿತ್ರದ ಗೊಂಬೆ ಮುಂತಾದ ವಿಷಯಗಳ ತೊಗಲುಗೊಂಬೆಗಳು ಕಂಡುಬರುತ್ತವೆ. ಈ ತೊಗಲುಗೊಂಬೆಗಳನ್ನು ಪ್ರಾಣಿಗಳ ಚರ್ಮವನ್ನು ಪಾರದರ್ಶಕಗೊಳಿಸಿ, ಆ ತೆಳ್ಳನೆಯ ಚರ್ಮದ ಮೇಲೆ ಚಿತ್ರರಚನೆಯಲ್ಲಿ ರೇಖೆ ಮತ್ತು ವರ್ಣ ಮತ್ತು ರಂಧ್ರಗಳಿಂದ ವೈವಿಧ್ಯಮಯವಾಗಿ ವರ್ತುಳ, ಸುಳುಹು, ಎಲೆ, ಬಳ್ಳಿಯಂಥ ನಕ್ಷೆಗಳು, ವೇಷಭೂಷಣ, ಆಭರಣ, ಭುಜಕಿರೀಟಗಳ ವಿನ್ಯಾಸಗಳು ರಚನೆಗೊಂಡಿರುತ್ತವೆ.[೪೬]

ತೊಗಲುಗೊಂಬೆ ಚಿತ್ರಗಳು ಪಾರ್ಶ್ವಮುಖದ ಚಿತ್ರಗಾರಿಕೆಯಲ್ಲಿ ಒಂದು ಬದಿ ಮಾತ್ರ ಕಾಣಲಾಗಿ ಮತ್ತೊಂದು ಬದಿಗಾಗಿ ತೋರ್ಪಡಿಕೆಗಾಗಿ ಮತ್ತೊಂದು ಕಣ್ಣು ಸಹ ರಚನೆಯ ಒಂದು ತಂತ್ರವಾಗಿದೆ. ಈ ಒಂದು ತಂತ್ರಗಾರಿಕೆ ಕೀಲುಗೊಂಬೆಗಳಲ್ಲಿ ಕಾಣಬರುವುದಿಲ್ಲ. ಇಲ್ಲಿ ತ್ರಿ ಆಯಾಮದ ಗೊಂಬೆಗಳಾಗಿದ್ದರಿಂದ ಯಕ್ಷಗಾನದ ಲಕ್ಷಣಗಳನ್ನು ಸಂಪೂರ್ಣವಾಗಿ ಪಡೆದುಕೊಂಡಿವೆ. ಇಲ್ಲಿ ಶಿಲ್ಪಿಗೆ ಕೆಲಸ ಕೊಟ್ಟರೆ ತೊಗಲುಗೊಂಬೆ ರಚನೆಯಲ್ಲಿ ಚಿತ್ರಕಲಾವಿದನಿಗೆ ಕೆಲಸ ಕೊಟ್ಟಿದೆ.

ಈ ತೊಗಲುಗೊಂಬೆಯಾಟ ರಂಗಸಜ್ಜಿಕೆಯೊಂದಿಗೆ ಪರದೆಯ ಹಿಂದೆ ಪ್ರದರ್ಶನಗೊಳ್ಳುವ ಕಲಾಪ್ರಕಾರವಾದ ಈ ಕಲೆಯು ಗೊಂಬೆಗಳು ಅಭಿನಯಿಸಿ ತೋರಿಸುವ ಮುಖ್ಯವಾಗಿ ರಾಮಾಯಣ ಮತ್ತು ಮಹಾಭಾರತದ ವಿಷಯಾನುಸಾರವಾಗಿ ಸುಸಜ್ಜಿತವಾಗಿ ಬಯಲುಪ್ರದೇಶವನ್ನು ಹುಡುಕಿ ಕತ್ತಲಾಗುತ್ತಿದ್ದಂತೆಯೇ ರಂಗಪಟ್ಟಿಕೆಯನ್ನು ನಿರ್ಮಿಸುತ್ತಾರೆ. ರಾತ್ರಿ ೧೨ಕ್ಕೆ ಪ್ರದರ್ಶನಗೊಳಿಸುತ್ತಾರೆ. ಇಂದು ಮೂರು, ನಾಲ್ಕು ದಿನಗಳು ಮಾತ್ರ ಪ್ರದರ್ಶನಗೊಳಿಸಲಾಗುತ್ತದೆ. ಈ ಒಂದು ಕಲೆಯ ಉದ್ದೇಶವು ಸಮಾಜಕ್ಕೆ ಮನೋರಂಜನೆಯಾಗಿದ್ದರೂ ರಾಮಾಯಣ, ಮಹಾಭಾರತದಂತಹ ಸಾರಾಂಶದ ಒಳ ಅರ್ಥವನ್ನು ಧಾರ್ಮಿಕದ ನಿಲುವಿನಲ್ಲಿ ಪ್ರಾಸಂಗಿಕ ವಸ್ತುಸಾರವನ್ನು ಓದದಿದ್ದರೂ, ನೋಡಿ ಅರಿತುಕೊಳ್ಳಲು ಗೊಂಬೆಗಳಲ್ಲಿ ಆಟವು ಮಧ್ಯವರ್ತಿಯಾಗಿದೆ. ಇದೇ ಪ್ರಕಾರದ ಗೊಂಬೆ ಆಟಗಳು ಸ್ವಾತಂತ್ರ್ಯದ ಸಂದರ್ಭದಲ್ಲಿ ಸ್ವತಂತ್ರ್ಯದ ಕುರಿತು ಪ್ರದರ್ಶನ ಮೂಲಕ ಜನವರ್ಗಗಳಿಗೆ ಮನವರಿಕೆ ಮಾಡಿಕೊಡಲು ಅಷ್ಟೇ ಸಹಾಯವಾಗಿದ್ದಿತು. ಈ ತೊಗಲುಗೊಂಬೆಯಾಟವು 'ಸಿನಿಮಾ'ದಂತಹ ಪ್ರದರ್ಶನದ ಕಲೆಗಾರಿಕೆಗೆ, ಯೋಚನೆಗೆ ಕೆಲಸ ಕೊಟ್ಟಿತು.

೩.೪. ಹುಲಿವೇಷ

ಒಟ್ಟು ಹತ್ತುದಿನಗಳ ಕಾಲ ನಡೆಯುವ ಮೊಹರಂ ಹಬ್ಬದ ಮೂಲ ಕರ್ಬಲಾದ ಘಟನೆಗಳ ಸಾಂಕೇತಿಕ ರೂಪವಾಗಿದ್ದರೂ ಹಲವೆಡೆ ಮೂಲದಿಂದ ಭಿನ್ನವಾಗಿ ವಿಶಿಷ್ಟ

೪೬. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ – ೧೮೬

ಆಚರಣೆಗಳನ್ನು ಅಳವಡಿಸಿಕೊಂಡಿದೆ. ಶೋಕಾಚರಣೆ ಮೂಲ ಉದ್ದೇಶವಾದರೂ ಮೊಹರಂನ ಹಿನ್ನೆಲೆ ತಿಳಿದಿರದ ಜನರಲ್ಲಿ ಭಯಭಕ್ತಿಯ ಜೊತೆಗೆ ಸಾಮಾನ್ಯವಾಗಿ ಹಬ್ಬಗಳಲ್ಲಿನ ಸಂಭ್ರಮ ಮನೆ ಮಾಡಿಕೊಂಡಿರುತ್ತದೆ. ಹಬ್ಬ ಕುರಿತಂತೆ ತಿಳಿವಳಿಕೆಯ ಅಭಾವ ಎಲ್ಲೆಡೆಯೂ ಇದೆಯೆಂದಲ್ಲ, ಮುಖ್ಯವಾಗಿ ದೇವರ ಪಂಜಾಗಳನ್ನು ಹೊರುವವರು ಮತ್ತದರ ಹಿಂದಿನ ತಕ್ಕಮಟ್ಟಿನ ವಿವರಗಳು, ಈ ದಿನದಲ್ಲಿ ಕರ್ಬಲಾದ ಬಲಿದಾನದ ಅಂತಿಮ ಕ್ಷಣಗಳಲ್ಲಿ ದೇವರು ಹೊಳೆಗೆ ಹೋಗುವ ಸಂಪ್ರದಾಯವಿದೆ. ಇದು ಕರ್ಬಲಾದಲ್ಲಿ ಕಾಲವಾದ ಶರಣರ ಪುಣ್ಯತಿಥಿಯಾಗಿದ್ದು,[೪೭] ಈ ಹಬ್ಬದಲ್ಲಿ ವಿಶೇಷವಾಗಿ ಚಿತ್ರಕಲೆಗೂ ಸ್ಥಾನ ಕಲ್ಪಿಸಿಕೊಡುವಂಥ ಸಂದರ್ಭ ಹುಲಿವೇಷಗಾರರ ಅಭಿರುಚಿ, ದೇವರಲ್ಲಿ ಬೇಡಿಕೆಗಳನ್ನು ಇಟ್ಟು, ಅದು ಈಡೇರಿದ ನಂತರವೂ ಮತ್ತು ಈ ಸಂದರ್ಭದಲ್ಲಿ ಕೆಲವು ಜನರು ಮನೊರಂಜನೆ ನೀಡುವ ಸಲುವಾಗಿಯೂ ಈ ಹುಲಿವೇಷ ಧರಿಸುತ್ತಾರೆ. ಇದರಲ್ಲಿ ಎರಡು ಪ್ರಕಾರಗಳು ೧. ಬಣ್ಣದ ಹುಲಿವೇಷ, ೨. ಗಂಧದ ಹುಲಿವೇಷ.

೧. ಬಣ್ಣದ ಹುಲಿವೇಷ

ತೈಲವರ್ಣದಿಂದ ಬಣ್ಣದ ಹುಲಿವೇಷವನ್ನು ಬರೆಯುತ್ತಾರೆ. ಇಂತಹ ಚಿತ್ರಗಳನ್ನು ಬರೆಯುವ ಕಲಾವಿದರು ಕಂಪ್ಲಿಯ ಜೀಕ್ ಹನುಮಂತಪ್ಪ, ಬೂಸರೆ ಕೃಷ್ಣಪ್ಪ, ಬಳ್ಳಾರಿಯ ಶ್ರೀನಿವಾಸ, ಹೂವಿನಹಡಗಲಿಯ ನೀಲಪ್ಪ, ಹೊಸಪೇಟೆಯ ಎ. ನೀಲಪ್ಪ ಮುಂತಾದ ಕಲಾವಿದರು ಸುಮಾರು ಹುಲಿವೇಷವನ್ನು ದೇಹಕ್ಕೆ ಚಿತ್ರಿಸಿದ್ದಾರೆ. ಹುಲಿವೇಷದ ಪರಿಕರಗಳಾದ ಬಣ್ಣ, ಬ್ರಷ್ ಮತ್ತು ಹುಲಿಚಿತ್ರದ ಮಾದರಿ ಚಿತ್ರ ಮುಂತಾದವುಗಳನ್ನು ಇಲ್ಲಿ ಉಪಯೋಗಿಸಲಾಗುತ್ತದೆ. ಹುಲಿವೇಷ ಬರೆಸಿಕೊಳ್ಳುವ ಮನುಷ್ಯ ಚಡ್ಡಿ ಮಾತ್ರ ಧರಿಸಿರುತ್ತಾನೆ. ಇವನ ದೇಹಕ್ಕೆ ಮೊದಲಿಗೆ ಹುಲಿಯ ಅನುಕರಣೆಯುಕ್ತವಾದ ಹುಲಿಯ ಎಲ್ಲಾ ಲಕ್ಷಣವನ್ನು ರೇಖೆಯಲ್ಲಿ ಬಾಲ, ಕೋರೆಯನ್ನು ರೇಖಿಸಿಕೊಂಡು ಉಳಿದ ಭಾಗಕ್ಕೆಲ್ಲಾ ಹಳದಿಬಣ್ಣವನ್ನು ತುಂಬಲಾಗುತ್ತದೆ. ನಂತರ ಉಳಿದ ಭಾಗವಾದ ಹುಲಿಯ ಮೈಮೇಲಿನ ಪಟ್ಟಿಗಳನ್ನು ಕೆಂಪುಪಟ್ಟಿಯನ್ನು ಹಾಕಿಕೊಂಡು, ಇದರ ಬಾಲವನ್ನು ತೊಡೆಯಿಂದ ಮೀನಖಂಡಗಳವರೆಗೆ ಚಿತ್ರಿಸಲಾಗುತ್ತದೆ. ಕೋರೆಯನ್ನು ಬಿಳಿಯ ಬಣ್ಣದಲ್ಲಿ ಮೀಸೆಯನ್ನು ನಂಬರ್ ೫ ಕುಂಚವನ್ನು ಉಪಯೋಗಿಸಿ ಕರಿಯ ಬಣ್ಣವನ್ನು ಕೆನ್ನೆಗೆ ಎಳೆಯುತ್ತಾರೆ. ಈ ಎಲ್ಲಾ ಪದ್ಧತಿಯ ನಂತರ ಕೊನೆಯದಾಗಿ ಹುಲಿಯು ಮತ್ತಷ್ಟು ವರ್ಣರಂಜಿತವಾಗಿ ಕಂಗೊಳಿಸಲು ಪಟ್ಟಿಗಳಿಗೆ ಹೊರರೇಖೆ(outline) ಹಾಕಲಾಗುತ್ತದೆ. ಕಲಾವಿದನ ಪ್ರತಿಭೆಗೆ ಅನುಗುಣವಾಗಿ ಅನುಕರಣೆ, ವ್ಯವಧಾನ ರಚನೆಯಲ್ಲಿ ಒಡಮೂಡುತ್ತವೆ. ಮೇಲಿನ ವಿವರಣೆ ಒಂದು ಸಾಮಾನ್ಯವಾದ ಹುಲಿವೇಷರಚನೆ ಎನ್ನಬಹುದು. ಇನ್ನೂ ವಿಶೇಷವಾದ ರಚನೆಗಳನ್ನು ಸಹ ಕಾಣಬಹುದು. ಹುಲಿಯ ಮೂಲ ಬಣ್ಣವಾದ ಕೆಂಪು ಮತ್ತು ಹಳದಿಜೊತೆಯಲ್ಲಿ ಹಸಿರುಬಣ್ಣವನ್ನು ಸಹ ಸೇರಿಸಿ, ಹೂ, ಬಳ್ಳಿ, ವೃತ್ತ ಸಹ ಚಿತ್ರಿತಗೊಳ್ಳುತ್ತವೆ.

೪೭. ಬೋರಲಿಂಗಯ್ಯ (ಸಂ.) : ಕರ್ನಾಟಕ ಜನಪದ ಕಲೆಗಳ ಕೋಶ, ಪುಟ – ೨೩೯

[illegible]

[illegible]

[illegible]

೨. ಗಂಧದ ಹುಲಿವೇಷ

ಈ ಹುಲಿವೇಷದಲ್ಲಿ ಗಂಧವನ್ನು ತೇಯ್ದು ಆ ಗಂಧದಿಂಧ ಮೈಗೆಲ್ಲಾ ಹುಲಿಪಟ್ಟಿ ಹಾಕಲಾಗುತ್ತದೆ. ಈ ಹುಲಿಗೆ 'ಗಂಧದ ಹುಲಿ' ಎನ್ನುತ್ತಾರೆ. ಈ ಜಿಲ್ಲೆ ಒಂದೇ ಅಲ್ಲದೇ ಉತ್ತರ ಕರ್ನಾಟಕದ ಭಾಗಗಳಲ್ಲಿಯೇ ಈ ಮಾದರಿಯ ಹೆಚ್ಚು ಹುಲಿವೇಷಧಾರಿಗಳು ಮೊಹರಂನಲ್ಲಿ ಕಾಣಸಿಗುತ್ತಾರೆ. ಧಾರವಾಡದ ನವಲಗುಂದ ತಾಲೂಕಿನ ಸೊಟಕನಾಳ ಗ್ರಾಮದ ಮೊಹರಂ ಆಚರಣೆಯಲ್ಲಿ ತುಂಬಾ ಕಲಾತ್ಮಕವಾದ ಹುಲಿಗಳನ್ನು ಚಿತ್ರಿಸುತ್ತಾರೆ. ಮುಖಕ್ಕೆ ಹುಲಿಮುಖ ಬರೆದು ಹೆಟ್ಟೆಗೆ ಎರಡು ಕಾಲುಗಳಿಗೆ ಹುಲಿಯ ಕಾಲುಗಳ ಸಂಕೇತವಾಗಿ ತೊಡೆ ಮತ್ತು ಕಾಲು, ಪಾದಗಳನ್ನು ಬಳ್ಳಿಯಾಕಾರದಲ್ಲಿ ಚಿತ್ರಿಸಲಾಗುತ್ತದೆ. ಹೂ, ಬಳ್ಳಿ, ವೃತ್ತ, ಕೊರಳಹಾರವಾಗಿ ವೃತ್ತದಿಂದ ಸಂಯೋಜಿತಗೊಳಿಸಲಾಗುತ್ತದೆ. ಒಟ್ಟಾರೆ ಈ ಭಾಗದಲ್ಲಿ ಬಣ್ಣ, ರೇಖಾಸಂಯೋಜನೆಯು ಜನಪದ ಲಕ್ಷಣದಲ್ಲಿಯೇ ಕಲಾತ್ಮಕವಾಗಿದ್ದು ಹುಲಿಗಳನ್ನು ಮೊಹರಂ ಕುಣಿತಕ್ಕೆ ತಯಾರಿಸಲಾಗುತ್ತದೆ. ಹುಲಿವೇಷದ ಕುಣಿತಕ್ಕೆ ಮೆರಗು ಬರುವುದು ತಮಟೆ ವಾದನದಿಂದ. ತಮಟೆಯ (ಡಂಕಣಕ, ಡಂಕಣಕ) ಲಯಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತ ಕುಣಿತ ಆರಂಭವಾದಂತೆ ನೋಡುಗರಲ್ಲಿ ಕುಣಿಯುವ ಉಮೇದು ಬೆಳೆಯುತ್ತದೆ. ಎರಡು ಹುಲಿಗಳ ಕದನ ಆಕರ್ಷಣೀಯ. ವೇಷಾಧಾರಿಯ ಕುಣಿತದ ಗತ್ತು, ಗಾಂಭೀರ್ಯ, ಹಾವಭಾವಗಳು ಜನರನ್ನು ಮೋಡಿಮಾಡುತ್ತವೆ.

ಈ ಕಲಾಪ್ರಕಾರವನ್ನು ಉಳಿಸಿಕೊಳ್ಳಲು ಕುಣಿತದ ಆಟದಲ್ಲಿ ಪಣಕ್ಕಾಗಿಯೂ ಅಥವಾ ಕಲಾರಸಿಕರು ಹುಲಿಯನ್ನು ಬರೆಸುವ ವಾಡಿಕೆಯ ಮುಖಾಂತರ ಈ ಒಂದು ಕಲೆಯು ಉಳಿದುಕೊಂಡು ಬಂದಿದೆ. ಈ ಕಲೆಯನ್ನು ಉಳಿಸಿ ಬೆಳೆಸಲು ಕೆಲವು ಪ್ರಜ್ಞಾವಂತರು ಯೋಜನೆಗಳನ್ನು ಸಹ ಹಾಕಿಕೊಳ್ಳುತ್ತಾರೆ. ಅಂತಹ ಒಂದು ಉದಾಹರಣೆಯಾಗಿ ಮಾರಿಕಾಂಬಾ ಗೆಳೆಯರ ಬಳಗ ೩೦ ವರ್ಷಗಳಿಂದ ತೀರ್ಥಹಳ್ಳಿಯಲ್ಲಿ ಕ್ರಿಯಾಶೀಲವಾಗಿದ್ದು, ಬಳಗದ ಸದಸ್ಯರು ಹುಲಿವೇಷದ ಪೋಷಣೆಗೆ ಮುಂದಾಗಿ ಹುಲಿವೇಷದ ಬಣ್ಣ ಹಾಕುವ ಕಲಾವಿದರಿಗೆ ಹಣದ ಕೊರತೆ ಇದ್ದುದನ್ನು ಗಮನಿಸಿ ಸ್ಪರ್ಧೆ ಹಮ್ಮಿಕೊಳ್ಳಲಾಗಿತ್ತು. ಹೀಗಾಗಿ ಪ್ರತಿ ಹುಲಿವೇಷಧಾರಿಗೆ ೭೫೦ರೂ. ಬಣ್ಣದ ಖರ್ಚಿಗೆ ನೀಡಲಾಯಿತು.[೪೮] ಕಳೆದ ನಾಲ್ಕು ವರ್ಷಗಳಿಂದ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗುತ್ತಿದೆ. ವಿಜೇತರಿಗೆ ಅನುಕ್ರಮವಾಗಿ ೩೦೦೦, ೨೦೦೦ ಹಾಗೂ ೧೦೦೦ರೂ.ಗಳ ಪ್ರೋತ್ಸಾಹ ಧನ ನೀಡಲಾಗುತ್ತಿದೆ. ಹುಲಿವೇಷ ಈ ಭಾಗ(ದಕ್ಷಿಣ ಕರ್ನಾಟಕ)ದಲ್ಲಿ ಸ್ವಲ್ಪ ಮಟ್ಟಿಗೆ ಶಿಷ್ಟತೆಯ ಸ್ವರೂಪಕ್ಕೆ ಬದಲಾದಂತೆ ಲಕ್ಷಣಗಳು ಈ ಕಲೆಯಲ್ಲಿ ಕಂಡುಬರುತ್ತವೆ. ಹುಲಿಯ ಮೈಮೇಲಿನ ಪಟ್ಟಿಗಳು, ಹುಲಿಯ ಕಿವಿಗಳಿಂದ ಕೂಡಿದ ಟೋಪಿ, ಹುಲಿಯ ಹೊಟ್ಟೆಯ ಭಾಗದಲ್ಲಿ ಕೆಂಪುಮಿಶ್ರಿತ ಗುಲಾಬಿ ಬಣ್ಣದ ಲೇಪನ, ಈ ಎಲ್ಲಾ ಲಕ್ಷಣಗಳು ಹುಲಿಯ ಸಂಪೂರ್ಣ ನೈಜದ, ಸ್ವರೂಪ ಅನುಕರಣೆಯಾಗುತ್ತವೆ.

---

೪೮. ಎಂ. ಜಿ. ಗಾಯತ್ರಿ ಶೇಷಗಿರಿ : ಪ್ರಜಾವಾಣಿ ದಿನಪತ್ರಿಕೆ, ೧೪ನೇ ನವೆಂಬರ್ ೨೦೧೧

IV ಸಂಕೀರ್ಣ ಜನಪದ ಚಿತ್ರಕಲೆ

೪.೧. ರಥದ ಮೇಲಿನ ಚಿತ್ರಕಲೆ

ಯಾವುದೇ ಒಂದು ಕಲೆಗೆ ತನ್ನದೇಯಾದ ಐತಿಹಾಸಿಕ ಹಿನ್ನೆಲೆ ಇದ್ದೇ ಇರುತ್ತದೆ. ಜನಪದರಿಂದ ಪರಂಪರಾಗತವಾಗಿ ಆರಾಧನಾ ಕಲೆಯ ಹಿನ್ನೆಲೆಯಲ್ಲಿ ಬೆಳೆದು ಬಂದ ರಥದ ಚಿತ್ರಕಲೆಯು ಸಹ ಈ ಹೇಳಿಕೆಯಿಂದ ಹೊರತಾಗಿಲ್ಲ. ಸನಾತನ ಹಿಂದೂ ದೇವಾಲಯಗಳು ಹಲವಾರು ಕಲೆಗಳಿಗೆ ಆಶ್ರಯತಾಣವಾಗಿರುವಂತೆ ದೇವಾಲಯದ ಪ್ರತೀಕವಾಗಿರುವ ರಥಗಳು ಸಹ ವಿಭಿನ್ನ ಕಲೆಗಳನ್ನು ಪೋಷಿಸುತ್ತಾ ಬಂದಿವೆ. ಇವುಗಳಲ್ಲಿ ಚಿತ್ರಕಲೆಯೂ ಒಂದು. ಬಳ್ಳಾರಿಯ ಅಸಂಖ್ಯಾತ ರಥಗಳಲ್ಲಿ ವಿವಿಧ ರೀತಿಯ ರೇಖಾವರ್ಣವಿನ್ಯಾಸವನ್ನು ಕಾಣಬಹುದು.

ಪ್ರಾದೇಶಿಕವಾಗಿ ಬೇರೆ ಬೇರೆ ಮಾಧ್ಯಮಗಳಲ್ಲಿ ಕಂಡುಬರುವ ಕಲೆಗಳು ಚಿತ್ರಕಲೆ ಮತ್ತು ವರ್ಣ, ರೇಖೆ ಮುಂತಾದ ವಿನ್ಯಾಸಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಕೆಲವು ಪ್ರಮುಖ ವೈಶಿಷ್ಟ್ಯಪೂರ್ಣವಾದ ಲಕ್ಷಣಗಳನ್ನು ಗಮನಿಸಬಹುದು. ದೇವಾಲಯದ ಮಾದರಿಯಲ್ಲಿಯೇ ಗೋಪುರ, ಕಳಶ ಮುಂತಾದವು ರಚಿತವಾದ ರಥಗಳು ದೇವಾಲಯದ ಆರಾಧ್ಯ ದೈವವನ್ನು ಸಾರ್ವತ್ರಿಕವಾಗಿ, ಸರ್ವಜನಾಂಗಕ್ಕಾಗಿ ಎಲ್ಲಾ ಜಾತಿಗಾಗಿ ಬಹಿರಂಗವಾಗಿ ದರ್ಶನ ಪಡೆಯುವ ಭಾಗ್ಯವನ್ನು ಕಲ್ಪಿಸುವ ದೃಷ್ಟಿಕೋನವನ್ನು ಕೂಡ ಇಟ್ಟುಕೊಂಡು ದೇವಾಲಯದ ದೇವರನ್ನು ನಾಲ್ಕು ಗೋಡೆಗಳ ಮಧ್ಯದಿಂದ ಈಚೆಗೆ ತಂದು ಸಾರ್ವಜನಿಕ ಸಮ್ಮುಖದಲ್ಲಿ ರಥವನ್ನು ಎಳೆಯುತ್ತಾ ಎಲ್ಲರು ದರ್ಶನವನ್ನು ಪಡೆದು ತನು-ಮನದಿಂದ ಧನ್ಯರಾಗಲಿ ಎಂಬ ಉದ್ದೇಶವಾಗಿದೆ.


ರಥಶಿಲ್ಪಗಳಲ್ಲಿನ ಚಿತ್ರಕಲೆ ಇನ್ನೂ ವೈಶಿಷ್ಟ್ಯಪೂರ್ಣವಾದ ಧಾರ್ಮಿಕ ಪರಂಪರೆಯನ್ನು ಸಾರ್ವಜನಿಕರಿಗೆ ತಿಳಿಯಪಡಿಸುವಲ್ಲಿ ತನ್ನದೇಯಾದ ವಿಶಿಷ್ಟವಾದ ರೂಪವನ್ನು ಪಡೆದುಕೊಂಡಿದೆ. ರಥಶಿಲ್ಪದಲ್ಲಿಯ ಚಿತ್ರಗಳು ಪ್ರಾದೇಶಿಕ ಹಿನ್ನೆಲೆಯಿಂದ ಕೂಡಿದ್ದು, ಮಠ, ಮಂದಿರ, ದೇವಾಲಯಗಳ ಸಿದ್ಧಪುರುಷರ, ಪವಾಡ ಪುರುಷರ ಆರಾಧನಾಕೇಂದ್ರಗಳಾಗಿರಬಹುದು. ಇಂತಹ ಅನೇಕ ಧಾರ್ಮಿಕ ಕೇಂದ್ರಗಳ ಧಾರ್ಮಿಕ ಹಿನ್ನೆಲೆಯನ್ನು ಪ್ರತಿಬಿಂಬಿಸುವ ಮುಂಚೂಣಿಯಲ್ಲಿ ರಥಗಳ ಚಿತ್ರಕಲೆಯು ಪ್ರಧಾನ ಪಾತ್ರ ವಹಿಸುತ್ತದೆ.

ಉದಾಹರಣೆಯಾಗಿ ಹನುಮಂತ ದೇವರು ಆಂಜನೇಯನೆಂದು ಕರೆಸಿಕೊಳ್ಳುವ ವಾಡಿಕೆಯಿದೆ. ಆಂಜನೇಯ ಪ್ರತಿ ಹಳ್ಳಿ ಹಳ್ಳಿಗಳಲ್ಲಿ ಎಲ್ಲಾ ಜಾತಿ ವರ್ಗಗಳಿಗೂ ಶನಿಪೀಡಾನಿವಾರಕ ಮತ್ತು ಭಕ್ತೋದ್ಧಾರಕ ಎಂದು ಕರೆಸಿಕೊಳ್ಳುವ ನಂಬಿಕೆ ಜನಪದರಲ್ಲಿದೆ. ಇಂತಹ ರಥೋತ್ಸವಗಳಲ್ಲಿ ಕಮಲಾಪುರದ ಆಂಜನೇಯ ರಥೋತ್ಸವ ತುಂಬಾ ವಿಜೃಂಭಣೆಯಿಂದ ನಡೆಯುತ್ತದೆ. ಮತ್ತು ರಥದಲ್ಲಿ ಚಿತ್ರಪಟಗಳು ಪ್ರಾಚೀನ ಕಾಲದಿಂದಲೂ ಧಾರ್ಮಿಕ ಪ್ರಭಾವದಿಂದಲೇ ಬೆಳೆದು ಬಂದದ್ದನ್ನು ಕಾಣಬಹುದು.

ಬಳ್ಳಾರಿ ಜಿಲ್ಲೆಯ ಸಂಕೀರ್ಣ ಜನಪದ ಚಿತ್ರಕಲೆ



ರಥದ ಮೇಲಿನ ಚಿತ್ರಕಲೆ



ರಥದ ಮೇಲಿರು ದ್ವಾರಪಾಲಕನ ವರ್ಣವಿನ್ಯಾಸ



ರಥದ ಮೇಲಿನ ಚಿತ್ರಪಟಗಳು



ರಥದ ಮೇಲಿನ ಚಿತ್ರಪಟಗಳು

ಅಂತೆಯೇ ಶಕ್ತಿಯ ಚಿತ್ರಕಥಾವಳಿಗಳನ್ನು ಕುರಿತು ಶಾಕ್ತ ಪಂಥವನ್ನು ಮತ್ತು ಅದರ ಉದ್ದೇಶವನ್ನು ಸಾರ್ವತ್ರಿಕ ಭಕ್ತ ಜನರ ಮನಸ್ಸಿಗೆ ತನ್ನ ಪ್ರತಿಬಿಂಬವನ್ನು ತೆರೆದಿಡುವಂತಿದೆ. ಮತ್ತು ರಾಮಾಯಣ ಮಹಾಭಾರತದ ಹಲವು ಸನ್ನಿವೇಶಗಳನ್ನು ಓದಿ ತಿಳಿದುಕೊಳ್ಳದಿದ್ದರೂ ನೋಡಿ ತಿಳಿದುಕೊಳ್ಳಲಿ ಎನ್ನುವುದು ಕೂಡು ಆಗಿರುವಂಥದ್ದಾಗಿದೆ. ರಾಮಾಯಣ ಮಹಾಭಾರತದಂತಹ ಚಿತ್ರಕಥಾಗಳು ಉಬ್ಬುಶಿಲ್ಪಗಳಲ್ಲಿ ಹಂಪೆಯ ಹಲವು ದೇವಾಲಯಗಳಲ್ಲಿ ಕಂಡುಬರುತ್ತವೆ.

ಈ ಜಿಲ್ಲೆಯ ಹೊಸಪೇಟೆ ತಾಲೂಕಿನ ಕಂಪ್ಲಿ ನಗರದಲ್ಲಿ ಇಂದಿಗೂ ಇರುವ ಬಸವಣ್ಣನ ದೊಡ್ಡ ತೇರು ಮತ್ತು ನೀಲಮ್ಮನ (ಚಿಕ್ಕ) ತೇರುಗಳಲ್ಲಿ ಕಿರುರೂಪದ ಅನೇಕ ಚಿತ್ರಗಳನ್ನು, ಮೂರ್ತಿಗಳನ್ನು ಕಾಣಬಹುದು. ಬಸವಣ್ಣನ ತೇರಿನಲ್ಲಿ ಮಾರ್ಕಂಡೇಯ ಚರಿತ್ರೆಯ ಯಮ, ಶಿವ, ಮಾರ್ಕಂಡೆಯರ ಕಿರು ಮೂರ್ತಿಗಳಿದ್ದರೆ, ಅವುಗಳ ಹಿನ್ನೆಲೆಯಲ್ಲಿ ಅನೇಕ ಪುರಾತನ ಶಿವಶರಣರ ಚಿತ್ರಗಳಿವೆ. ತೇರಿನೊಳಗಣ ಚರ ಮೂರ್ತಿ ಕಾಣುವುದಕ್ಕಾಗಿ ತೇರಿಗೆ ಹನ್ನೆರಡು ಬಾಗಿಲುಗಳು, ನಾಲ್ಕು ಹುಸಿ ಅಂಕಣಗಳನ್ನು ಮಾಡಲಾಗಿದೆ. ಅವುಗಳ ಮಧ್ಯೆ, ಲಿಂಗ, ಬಸವಣ್ಣಗಳೊಂದಿಗೆ ಅನೇಕ ಶಿವಶರಣರ ಚಿತ್ರಗಳೂ ಇವೆ. ಈ ಮುದ್ದಾದ ಮೂರ್ತಿಗಳನ್ನು ಮಾಡಿದ ಕಲಾವಿದರು ಎದುರಾಯಪ್ಪ. ವರ್ಣರೂಪದ ಕಿರುಚಿತ್ರಗಳನ್ನು ಮಾಡಿದವರು ಫಕೀರಪ್ಪ ಎಂದು ರಾಮಕ್ಕ ಎಂಬ ಮಹಿಳೆ ಫಕೀರಪ್ಪನ ಹೆಂಡತಿಯಾಗಿದ್ದು, ವರ್ಣಗಾರಿಕೆಯ ಸಹಾಯಕ ಕೆಲಸಗಳನ್ನು ಮಾಡುತ್ತಿದ್ದ ಮಹಿಳೆಯಾಗಿದ್ದಳು.[೪೯]

ನೀಲಮ್ಮನ ಚಿಕ್ಕ ತೇರಿನಲ್ಲಿ ರಾವಣ, ನಂದೀಶ, ಭೃಂಗಿ, ದ್ವಾರಪಾಲಕರ ಮೂರ್ತಿಗಳಿರುವಂತೆ ೪೨ ಪಟದ ಕಿರುರೂಪದ ಚಿತ್ರಗಳಿವೆ. ಶರಭಾವತಾರ ಕಥಾವಸ್ತುವಾಗಿದ್ದು, ಕಲಾವಿದರು ಮೂರ್ತಿ ಮತ್ತು ವರ್ಣಚಿತ್ರಕಲೆಯಲ್ಲಿ ಬಲ್ಲಿದರಾಗಿರುವ ಕಾರಣ ಎರಡೂ ಮಾಧ್ಯಮಗಳನ್ನು ಇಲ್ಲಿ ಬಳಸಲಾಗಿದೆ. ರಾಮಣ್ಣ ತಂದೆ ಮಲ್ಲಪ್ಪ ಚಿತ್ರಗಾರ ಇವುಗಳನ್ನು ರಚಿಸಿದ ಕಲಾವಿದರು. ಇವರು ರಚಿಸಿದ್ದ ಅನೇಕ ಕಿರುಚಿತ್ರಗಳಿವೆ. ಹಿಂದೆ ಇವರೇ ಬರೆದಿದ್ದ ಅನೇಕ ಫಲಕದ ವರ್ಣಚಿತ್ರಗಳನ್ನು[೫೦] ಕಾಣಬಹುದಾಗಿದೆ. ಈ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಕೊಟ್ಟೂರಿನಲ್ಲಿರುವ ಗುರುಬಸವರಾಜ ಸ್ವಾಮಿ ಎಂಬ ಪವಾಡಪುರುಷನ ರಥೋತ್ಸವದಲ್ಲಿನ ಚಿತ್ರಕಲೆಯ ಪಂಚಗಣಾಧೀಶರನ್ನು ಕುರಿತು ಕಥೆಗಳನ್ನು ಪ್ರತಿಬಿಂಬಿಸುವಂತಹ ಚಿತ್ರಗಳಾಗಿವೆ. ಬಳ್ಳಾರಿ ತಾಲ್ಲೂಕು ಅಲ್ಲೀಪುರದ ಮಹಾದೇವ ತಾತನವರ ರಥದಲ್ಲಿ ತಾತನವರ ಪವಾಡಗಳನ್ನು ಮತ್ತು ಗುರುಪರಂಪರೆಯನ್ನು ಕುರಿತು ಚಿತ್ರಪಟಗಳ ಮೂಲಕ ತನ್ನ ಪ್ರತಿರೂಪವನ್ನು ತೆರೆದಿಟ್ಟಿರುವಂತೆ ಕಂಡುಬರುತ್ತದೆ.

ಹೊಸಪೇಟೆ ತಾಲೂಕಿನ ಅನಂತಶಯನ ಸಪ್ತಾಂಜನೇಯ ರಥದಲ್ಲಿ ವಿಷ್ಣುವಿನ

---

೪೯. ಡಾ. ಎಚ್. ಎನ್. ಚಿತ್ರಗಾರ್ : ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ (ಅ.ಪ್ರ.ಪಿಹೆಚ್.ಡಿ.ಮ.ಪ್ರ) ಪುಟ – ೧೯೨

೫೦. ಡಾ. ಎಚ್. ಎನ್. ಚಿತ್ರಗಾರ್ : ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ (ಅ.ಪ್ರ.ಪಿಹೆಚ್.ಡಿ.ಮ.ಪ್ರ) ಪುಟ – ೧೯೨

[illegible]

ದಶಾವತಾರಗಳನ್ನು ಕುರಿತು ನಿರ್ಮಿತವಾಗಿರುವ ಚಿತ್ರಕೃತಿಗಳು ವಿಶೇಷ ಲಕ್ಷಣಗಳನ್ನು ಹೊಂದಿವೆ. ಮತ್ತು ವಿರೂಪಾಕ್ಷ ಪಂಪಾಪತಿ, ಪಂಪಾದೇವಿ ಹಾಗೂ ವಿದ್ಯಾರಣ್ಯ ಗುರುಗಳ ರಥದಲ್ಲಿನ ಚಿತ್ರಕಲೆ ವಿಜಯನಗರ ಸಾಮ್ರಾಜ್ಯದ ದ್ಯೋತಕವೇ ಆಗಿದೆ.[೫೧] ಇಲ್ಲಿ ಆನೆಯ ಶಿಲ್ಪ ಮತ್ತು ವರ್ಣವಿನ್ಯಾಸವು ವಿಶೇಷವಾಗಿದೆ. ಈ ಆನೆಗಳ ಶಿಲ್ಪಗಳು ಜಿಲ್ಲೆಯ ಯಾವ ರಥದಲ್ಲಿಯೂ ಕಂಡುಬರುವುದಿಲ್ಲ. ಸಿಂಹಗಳು ಮತ್ತು ದ್ವಾರಪಾಲಕರು ಸಾಮಾನ್ಯವಾಗಿ ಎಲ್ಲಾ ರಥಗಳಲ್ಲಿ ಕಂಡುಬರುತ್ತವೆ.

ಅಲ್ಲದೇ ಮಂಟಪ ತೋರಣ, ಶಿವ, ಬಸವ, ಕುದುರೆ ಮುಖ್ಯವಾಗಿ ಕಂಡುಬರುವ ಶಿಲ್ಪ ಮತ್ತು ಪಟಚಿತ್ರಗಳಾಗಿವೆ. ಜಿಲ್ಲೆಯ ಕೂಡ್ಲಿಗಿ ತಾಲ್ಲೂಕು ಸೂಲದರಹಳ್ಳಿ ಆಂಜನೇಯ ಸ್ವಾಮಿ ರಥದಲ್ಲಿ ಕಂಡುಬರುವ ಚಿತ್ರಪಟಗಳು ಧಾರ್ಮಿಕ ಪರಂಪರೆಯನ್ನು ಹೊಂದಿದು, ಗಣೇಶ, ಲಕ್ಷ್ಮೀ, ಮಹೇಶ್ವರ, ಕೃಷ್ಣ, ಸರಸ್ವತಿ, ಆಂಜನೇಯ, ಶಿವ, ಬಸವ ಮುಂತಾದ ಅನೇಕ ಚಿತ್ರಪಟಗಳ ರೇಖೆಗಳು ನಯವಾದ ವರ್ಣಲೇಪನ ಹೊಂದಿವೆ. ಈ ರಥಕ್ಕೆ ಬಟ್ಟೆಯ ವಿನ್ಯಾಸವು ಕೂಡ ಮತ್ತಷ್ಟು ಮೆರುಗನ್ನು ತರುತ್ತದೆ. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಮೂಲ ವರ್ಣಗಳಲ್ಲಿಯೇ ಎಲ್ಲವನ್ನು ವ್ಯವಸ್ಥಿತವಾಗಿ ಹೊಂದಾಣಿಕೆ ಮಾಡಲಾಗಿದೆ.

ಕಂಪ್ಲಿಯ ಸೋಮೇಶ್ವರ ರಥದಲ್ಲಿ ಚಿತ್ರಪಟಗಳು ಕಂಡುಬಂದಿದ್ದು, ಬಸವೇಶ್ವರ ರಥದ ಚಿತ್ರಪಟವನ್ನೇ ಸೋಮೇಶ್ವರರಥಕ್ಕೆ ಅಲಂಕರಿಸಲಾಗುತ್ತದೆ. ಹೊಸಪೇಟೆ ತಾಲೂಕಿನ ಮರಿಯಮ್ಮನಹಳ್ಳಿಯಿಂದ ಐದಾರು ಕಿಲೋಮೀಟರಿನ ಅಂತರದಲ್ಲಿರುವ ಗೊಲ್ಲರಹಳ್ಳಿ ಕಾಳಮ್ಮನ ದೇವಸ್ಥಾನದ ರಥ ಶಿಲ್ಪದಲ್ಲಿನ ಚಿತ್ರಕಲೆ ಧಾರ್ಮಿಕ ಹಿನ್ನೆಲೆಯಿಂದ ಕೂಡಿದ್ದು, ಸುರಳಿ ಚಿತ್ರಪಟಗಳು ಮತ್ತು ದೇವ-ದೇವಿಯರ ಚಿತ್ರಪಟಗಳು, ಗಣೇಶ, ಅಂಜನೇಯ ಲಕ್ಷ್ಮೀ, ಸರಸ್ವತಿ, ಶಿವ, ಕೃಷ್ಣ, ಮಹಿಷಾಸುರ, ಕಾಳಿಕಾ ದೇವಿ, ಮಹಿಷಾಮರ್ದಿನಿ ಹೀಗೆ ಅನೇಕ ಚಿತ್ರಪಟಗಳು ಕಂಡುಬರುತ್ತವೆ. ಇವುಗಳಲ್ಲದೇ ಕುರುಗೋಡಿನ ದೊಡ್ಡ ಬಸವೇಶ್ವರರಥ, ಮರಿಯಮ್ಮನಹಳ್ಳಿಯ ಲಕ್ಷ್ಮೀನಾರಾಯಣರಥ ಮತ್ತು ರಾಮಾಂಜನೇಯ ರಥ, ಹೂವಿನಹಡಗಲಿಯ ಇಟಗಿಯ ಆಂಜನೇಯರಥ, ಸೋಗಿ ವೀರಭದ್ರೇಶ್ವರ ರಥ, ಹೊಳಗುಂದಿ-ಸಿದ್ದೇಶ್ವರ, ಕುಲಹಳ್ಳಿಯ ಗೋಣಿ ಬಸವೇಶ್ವರ ರಥೋತ್ಸವ, ಹಗರಿಬೊಮ್ಮನಹಳ್ಳಿಯ ಅಂಬಳಿ-ಕಲ್ಲೇಶ್ವರ ರಥ, ಕೂಡ್ಲಿಗಿಯ ಉಜ್ಜೈನಿ ಮರಳುಸಿದ್ದೇಶ್ವರ, ವೆಂಕಟೇಶ್ವರ ಮುಂತಾದ ರಥಗಳಲ್ಲಿ ಚಿತ್ರಪಟಗಳು ಕಂಡುಬರುತ್ತವೆ.

ಪರಿಕರ ಮತ್ತು ಚಿತ್ರರಚನಾ ವಿಧಾನ ಮತ್ತು ವಿಷಯ

ಕಟ್ಟಿಗೆ, ಕಲ್ಲು, ಲೋಹಗಳಿಂದ ಮತ್ತು ಸಂಕೀರ್ಣ ಮಾಧ್ಯಮಗಳಿಂದ ನಿರ್ಮಿತವಾದ ರಥಶಿಲ್ಪಗಳು ಕಂಡುಬರುತ್ತವೆ. ರಥಚಿತ್ರಕಲೆಯು ತೈಲವರ್ಣಗಳಿಂದ ಕೂಡಿದ್ದು, ಮಳೆ, ಗಾಳಿ, ಬಿಸಿಲುಗಳಿಗೆ ಅಚ್ಚಳಿಯದೆ ವರ್ಣವನ್ನು ಪ್ರಖರಿಸುವಂಥದು. ಹಲಗೆ ಅಥವಾ ದಪ್ಪವಾದ

---

೫೧. ಜಿ. ಬಿ. ವೀರಾಚಾರ್ : ರಥಶಿಲ್ಪದಲ್ಲಿ ಚಿತ್ರಕಲೆ ಮತ್ತು ವರ್ಣವಿನ್ಯಾಸ. ಪುಟ -

ಕಟ್ಟಿಗೆಯನ್ನು ಆಯ್ದುಕೊಳ್ಳಲಾಗುತ್ತದೆ. ಇದನ್ನು ನಯಗೊಳಿಸಿಕೊಳ್ಳುತ್ತಾರೆ. ತದನಂತರದಲ್ಲಿ ಈ ಚಿತ್ರಕಲೆಯ ಸಂಯೋಜನಾಪದ್ಧತಿಯು ರೇಖಾಪ್ರಧಾನವಾಗಿರುವುದರಿಂದ ಮೊದಲಿಗೆ ಬಾಹ್ಯರೇಖೆಗಳನ್ನು ಕುಂಚದಿಂದ ಹಾಕುತ್ತಾರೆ.

ನಂತರ ಆ ಬಾಹ್ಯರೇಖೆಯನ್ನು ಹೊರತುಪಡಿಸಿ ಚಿತ್ರದ ಹಿಂದಣ(background)ವನ್ನು ಒಂದು ಅಥವಾ ಎರಡು ಬಣ್ಣಗಳಿಂದ ಲೇಪನ ಮಾಡಿಕೊಳ್ಳುತ್ತಾರೆ. ನಂತರ ದೇವಿಯರ ಚಿತ್ರವಿದ್ದರೆ ಮೊದಲಿಗೆ ದೇವಿಯ ಬಟ್ಟೆಗಳಿಗೆ ಬಣ್ಣವನ್ನು ಲೇಪನ ಮಾಡುತ್ತಾರೆ. ನಂತರ ಕೈ, ಕಾಲು, ಮುಖಕ್ಕೆ ಬಣ್ಣವನ್ನು ಲೇಪನ ಮಾಡುತ್ತಾರೆ. ದೇವನ ಚಿತ್ರವಿದ್ದರೆ ಮೊದಲಿಗೆ ದೇಹಕ್ಕೆ ಬಣ್ಣ ಲೇಪನ ಮಾಡಲಾಗುತ್ತದೆ. ನಂತರದಲ್ಲಿ ಆಭರಣಗಳನ್ನು ಮಾಡಲಾಗುತ್ತದೆ. ಈ ಪದ್ಧತಿಯು ನಯವಾದ ಚಿತ್ರಕಲಾ ಪದ್ಧತಿಯಾಗಿದೆ. ಈ ತರಹದ ಚಿತ್ರಪದ್ಧತಿಯನ್ನು ವಾಣಿಜ್ಯ ಕಲೆ(commercial art)ಯಲ್ಲಿ ಹೆಚ್ಚಾಗಿ ಕಾಣುತ್ತೇವೆ.

ರಥದ ಚಿತ್ರಪಟಗಳ ವರ್ಣವಿನ್ಯಾಸಗಳನ್ನು ಐದು ವರ್ಷಗಳಿಗೊಮ್ಮೆ ಪುನರ್ ಲೇಪನವನ್ನು ಮಾಡಲಾಗುವುದು. ರಥದ ಶಿಲ್ಪವು ಕೂಡ ಇದರಿಂದ ಹೊರತಿಲ್ಲ. ಇವುಗಳಲ್ಲದೇ ರಥದ (ವಿದ್ಯಾರಣ್ಯ ರಥ, ಹಂಪಿ) ಗಾಲಿಗಳಿಗೆ, ರಥ ಶಿಲ್ಪಕ್ಕೆ ನೇರವಾಗಿ ಪಟ್ಟಿಕೆಗಳಿಗೂ ವರ್ಣಲೇಪನ ಮಾಡಲಾಗುತ್ತದೆ. ಬಣ್ಣಗಳಲ್ಲಿ ಮುಖ್ಯವಾಗಿ ಮೂಲ ಬಣ್ಣವನ್ನೇ ಲೇಪನ ಮಾಡಲಾಗಿರುತ್ತದೆ. ಮತ್ತು ಪವಾಡಪುರುಷರ ರಥಚಿತ್ರಗಳನ್ನು ಬಿಟ್ಟು ಎಲ್ಲಾ ರಥದಲ್ಲಿ ಸಾಮಾನ್ಯವಾಗಿ ಕಂಡುಬರುವ ಚಿತ್ರಗಳು ಶಿವ–ಪಾರ್ವತಿ, ಗಣಪತಿ, ಲಕ್ಷ್ಮೀ, ಶಿವ–ಬಸವ, ಆಂಜನೇಯ, ಸರಸ್ವತಿ, ದುರ್ಗಾ, ಕಾಳಿಕಾ, ಋಷಿ, ರಾಮ, ಲಕ್ಷ್ಮಣ, ಸೀತಾ ಮುಂತಾದವು. ಕಂಪ್ಲಿಯಲ್ಲಿ ವಿಶೇಷವಾದ ಸ್ತ್ರೀ–ಪುರುಷರ ಕಿರುರೂಪದ ಚಿತ್ರಪಟಗಳು ಕಂಡುಬರುತ್ತವೆ.

ರಥದಲ್ಲಿನ ಚಿತ್ರಗಳು ಮುಖ್ಯವಾಗಿ ಧಾರ್ಮಿಕ ಹಿನ್ನೆಲೆಯಿಂದ ಕೂಡಿದ್ದು ನೈಜ ಚಿತ್ರಗಳಂತೆ ಪ್ರಾಧಾನ್ಯ ಪಡೆದುಕೊಂಡಿವೆ. ಕೆಲವೊಂದು ಪ್ರಾದೇಶಿಕ ಹಿನ್ನೆಲೆಯಲ್ಲಿ ಮತ ಮಾನ್ಯಗಳ ಸಾಧುಸಂತರ ಶರಣರ ರಥೋತ್ಸವಗಳಲ್ಲಿ ಕಂಡುಬರುವ ಚಿತ್ರಪಟಗಳಲ್ಲಿ ಆಯಾ ಧಾರ್ಮಿಕ ನಂಬಿಕೆಯ ಮೇಲೆ, ಪವಾಡಗಳ ಮತ್ತು ಸಂದರ್ಭೋಚಿತವಾದ ಚಿತ್ರಗಳು ನಿರ್ಮಿತವಾಗಿರುವುದು ಕಂಡುಬರುತ್ತದೆ.

ಈ ಚಿತ್ರಪಟದ ಕಲೆಯು ಬಳ್ಳಾರಿ ಕರ್ನಾಟಕಕ್ಕೆ ಸೀಮಿತವಾಗಿರದೇ ಓರಿಸ್ಸಾದ ಪುರಿ ಕ್ಷೇತ್ರದಲ್ಲಿ ಪಟಚಿತ್ರ ಕಲಾವಿದರೆಂಬುವರು ದೇವ ದೇವತೆಗಳ ಚಿತ್ರಗಳನ್ನು ಬಟ್ಟೆಯ ಮೇಲೆ ಇಳಿಸಿರುತ್ತಾರೆ. ಪಟ್ಟ ಎಂದರೆ ಸಂಸ್ಕೃತ ಭಾಷೆಯಲ್ಲಿ ಬಟ್ಟೆ ಎಂದರ್ಥ. ಪಟಚಿತ್ರದ ವಿಶೇಷ ಏನೆಂದರೆ ಚಿತ್ರಗಳು ರಚನೆಯಾದ ಮೇಲೆ ಅವುಗಳನ್ನು ನುಣುಪು ಕಲ್ಲುಗಳಿಂದ ತೀಡಿ ಪಾಲಿಷ್ ಮಾಡುವುದಿರುತ್ತದೆ. ಇಷ್ಟು ಆಧುನಿಕ ರೂಪವನ್ನು ಕೂಡ ತಳೆದಿದೆ. ಇದಲ್ಲದೇ ಪುರಿ ಜಗನ್ನಾಥನ ರಥೋತ್ಸವವು ತುಂಬಾ ವಿಜೃಂಭಣೆಯಿಂದ ನಡೆಯುತ್ತದೆ.

ಹೀಗೆ ದೇಶದ ವಿವಿಧೆಡೆಗಳಲ್ಲಿ ಇದರದೇ ಆದ ಒಂದು ವಿಶಿಷ್ಟ ರೀತಿಯಲ್ಲಿ ಖ್ಯಾತಿ ಪಡೆದಿದೆ. ಮೂರ್ತಿಶಿಲ್ಪಗಳಿಗೆ ವರ್ಣವಿನ್ಯಾಸ ರಥಚಿತ್ರಕಲೆಯ ಮತ್ತೊಂದು ಬಗೆಯಾಗಿದೆ. ಅಂತಹ ಚಿತ್ರಗಳಲ್ಲಿ ದ್ವಾರಪಾಲಕರು, ಸಿಂಹ, ಆನೆ, ಕುದುರೆ ಮುಂತಾದವು.

ದ್ವಾರಪಾಲಕ

ದ್ವಾರಪಾಲಕನ ಚಿತ್ರವು ಹೆಚ್ಚಿನ ರಥಗಳಲ್ಲಿ ಕಂಡುಬರುವ ಮೂರ್ತಿ ಶಿಲ್ಪವಾಗಿದೆ. ಕೈಯಲ್ಲಿ ಗದೆಯನ್ನು ಹಿಡಿದ ಭಂಗಿಯದ್ದು, ಹಂಪೆಯ ಚಿತ್ರವಾಗಿದೆ. ಮೂಲವರ್ಣಗಳಾದ ಹಳದಿ ಮತ್ತು ಕೆಂಪು ಹೆಚ್ಚಿನ ಮಟ್ಟದಲ್ಲಿ ಲೇಪನವಾಗಿದೆ. ಇದು ತೈಲವರ್ಣ ಮಾಧ್ಯಮದಲ್ಲಿದೆ. ಈ ಎಲ್ಲಾ ರಥದ ಶಿಲ್ಪಗಳಲ್ಲಿ ಚಿತ್ರಕಲೆ ಮತ್ತು ವರ್ಣವಿನ್ಯಾಸವನ್ನು ಮಾಡಲು ನೈಜ ಚಿತ್ರಗಳೇ ಪ್ರಾಧಾನ್ಯ ಪಡೆದುಕೊಂಡಿವೆ. ಕೆಲವೊಂದು ಪ್ರಾದೇಶಿಕ ಹಿನ್ನೆಲೆಯಲ್ಲಿ ಮಠಮಾನ್ಯಗಳ, ಸಾಧುಗಳ ಪುಣ್ಯ ಪುರುಷರ ಹಾಗೂ ಶೈವ, ವೈಷ್ಣವ ಧರ್ಮಕ್ಕೆ ಸಂಬಂಧಪಟ್ಟಂತೆ ರಥದಲ್ಲಿನ ಚಿತ್ರಗಳು ನಿರ್ಮಾಣವಾಗಿರುವುದು ಗಮನಾರ್ಹ ಅಂಶವಾಗಿದೆ.

೪.೨. ಪಟಚಿತ್ರಕಲೆ

ಪುರಾಣ ಪುಣ್ಯಕತೆಗಳನ್ನು ಜನರಿರುವಲ್ಲಿಗೆ ಹೋಗಿ ಸಚಿತ್ರವಾಗಿ ನಿರೂಪಿಸುವುದು ರೂಢಿಗೆ ಬಂತು. ಇವುಗಳಲ್ಲಿ ಎರಡು ವಿಧ : ಒಂದು ಹಲಗೆಗಳ ಕಥಾನುಕ್ರಮದಲ್ಲಿ ಚಿತ್ರಗಳನ್ನು ರಚಿಸಿರುವಂಥವು, ಇವಕ್ಕೆ ಪಟಕತೆ ಅಥವಾ ಚಿತ್ರಕತೆ ಎನ್ನುವರು. ಗುಹಾಂತರ್ಗತ ಚಿತ್ರಗಳ ನಂತರದ ಮುಂದಿನ ಹೆಜ್ಜೆಗಳಲ್ಲಿ ಪ್ರಮುಖವಾದವು[೫೨ಸ] ದೇವಾಲಯಗಳ ಮುಚ್ಚಿಗೆ ಹಾಗೂ ಗೋಡೆಗಳ ಮೇಲೆ ಅಂಕಿತವಾಗಿರುವ ಚಿಕಣಿ ಚಿತ್ರಗಳು ಮತ್ತು ಭಿತ್ತಿಚಿತ್ರಗಳು. ಅವುಗಳಲ್ಲಿ ಪೌರಾಣಿಕ ಪ್ರಸಂಗಗಳನ್ನು, ಹಲವು ರಾಜರ ಕಥೆಗಳನ್ನು ಘಟನಾಕ್ರಮದಲ್ಲಿ ರೂಪಿಸಿರುವುದನ್ನು ನಾವು ಕಾಣಬಹುದು. ಹೀಗಾಗಿ ಬುದ್ಧನ ಯುಗದಿಂದಲೇ ಈ ಪದ್ಧತಿ ಇದ್ದುದನ್ನು ಕಾಣಬಹುದು. ಜೈನಪುರಾಣಗಳಿಂದ "ಕುವಲಯಮಾಲಾ"ದಲ್ಲಿ ಸಂಚಾರೀ ಜೈನ ಗುರುವೊಬ್ಬ ಸಂಸಾರ ಚಕ್ರದ ಸುರುಳಿಯ ನೆರವಿನಿಂದ ಪ್ರವಚನ ಮಾಡುತ್ತಿದ್ದ ಸಂಗತಿ ಇದೆ. ಇನ್ನೊಂದು ಜೈನ ಪುರಾಣವಾದ 'ಭಗವತೀ ಸೂತ್ರ'ದಲ್ಲಿ ಚಿತ್ರಕಥಾ ನಿರೂಪಕ ಭಿಕ್ಷುಕನ ಉಲ್ಲೇಖವಿದೆ. ಬೌದ್ಧ ಸಾಹಿತ್ಯದಲ್ಲಿ ಪಟಚಿತ್ರಗಳನ್ನು ಹೆಸರಿಸಲಾಗಿದೆ. ಸಂಸ್ಕೃತ ಪುರಾಣಗಳಲ್ಲಿ ಪಾಪ–ಪುಣ್ಯಗಳ ಫಲಶೃತಿಗಳನ್ನು ತಿಳಿಸುವ ಯಮಪಟವೆಂಬುದು ಇದ್ದಿತೆಂದಿದೆ.[೫೩]

ಹಳೆಗನ್ನಡದ ವಡ್ಡಾರಾಧನೆಯಲ್ಲಿ ಪಟಕತೆಯ ಹೆಸರು ಬರುತ್ತದೆ. ಈ ಕಲೆ ಇನ್ನಿಲ್ಲವಾಗಿ ಎಷ್ಟು ಶತಮಾನಗಳು ಸಂದಿವೆಯೋ? ಈ ಜಾನಪದ ಚಿತ್ರಕಥಾ ವಿಧಾನವನ್ನು ಬಳಸಿಕೊಂಡೇ ಧವಳಾ, ಮಹಾಧವಳಗಳೆಂಬ ಹೆಸರಿನ ಮೂರು ತಾಳೆ ಓಲೆಸಂಪುಟಗಳು ಸೃಷ್ಟಿಗೊಂಡಿರಬಹುದು.

---

೫೨. ಮುದೇನೂರು ಸಂಗಣ್ಣ : ಸುವರ್ಣ ಜನಪದ, ಪುಟ – ೨೦೬

೫೩. ಅದೇ.. ಪುಟ – ೨೦೬

ಅವು ಇಂದಿಗೂ ಮೂಡಬಿದರೆಯಲ್ಲಿ ಕಾಣಸಿಗುತ್ತವೆ. ಈ ಚಿತ್ರಪಟಕತೆಗಳಿಂದ ಬಳ್ಳಾರಿ ಜಿಲ್ಲೆಯೂ ಹೊರತಾಗಿಲ್ಲ. ಅಂತಹ ಪಟಚಿತ್ರಗಳಿಗೆ ಸಂಬಂಧಿಸಿದಂತೆ ಪ್ರೊ. ಕೆ. ರವೀಂದ್ರನಾಥ ಅವರು ಎರಡು ಪಟಚಿತ್ರಗಳನ್ನು ಸಂಗ್ರಹಿಸಿದ್ದಾರೆ. ಅವುಗಳು ಪ್ರಸ್ತುತ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಹಸ್ತಪ್ರತಿ ವಿಭಾಗದಲ್ಲಿ ಸಂಗ್ರಹಗೊಂಡಿವೆ.

ಇಂತಹ ಚಿತ್ರಪಟಗಳು ಬಳ್ಳಾರಿಯಲ್ಲಿ ಕಂಡುಬಂದಿದ್ದ ಹಿರಿಯ ತಲೆಮಾರಿನವರಾದ ಕಂಪ್ಲಿಯ ಗಂಗಮ್ಮ (೭೫ ವರ್ಷದವರು), ಅಂಬಮ್ಮ (೮೦ ವರ್ಷದವರು), ಮಾರೆಪ್ಪ, ಕೂಡ್ಲಿಗಿಯ ಗೋಣಿಬಸಪ್ಪನವರು, ಈ ಚಿತ್ರಪಟಗಳು ರಾಮಾಯಣ ಮತ್ತು ಮಹಾಭಾರತದ ಚಿತ್ರಕಲೆಗೆ ಸಂಬಂಧಿಸಿದ ಚಿತ್ರಗಳಾಗಿರುವುದಾಗಿ, ಅವು ಜನಪದ ನೆಲೆ–ಹಿನ್ನೆಲೆಯನ್ನು ಹೊಂದಿದ್ದವು ಎಂದು ಹೇಳುತ್ತಾರೆ. ಹೀಗೆ ಚಿತ್ರಪಟ ಕತೆಗಾರರು ವೃತ್ತಿಯಾಗಿಸಿಕೊಂಡು ಸಾಂದರ್ಭಿಕವಾಗಿ ರಚಿತವಾದ ಚಿತ್ರಕಲೆಯಾಗಿವೆ. ರಾಮ, ಸೀತೆ, ಲಕ್ಷ್ಮಣ, ಹನುಮಂತ, ಕೃಷ್ಣ, ಅರ್ಜುನ ಮುಂತಾದವರ ಚಿತ್ರಗಳನ್ನು ಸಾಂಕೇತಿಕವಾಗಿ ಜನಪದ ಲಕ್ಷಣದಿಂದ ಕೂಡಿದ ಚಿತ್ರಗಳು ಚಿತ್ರಪಟಗಳಲ್ಲಿ ಕಂಡು ಬರುವುದಾಗಿ ಹಿಂದಿನವರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಪಟಚಿತ್ರಕಥೆಯ ಕಲಾವಿದರು ನಿರಕ್ಷರಿಗಳು, ಬಾಯಿಯಿಂದ ಬಾಯಿಗೆ ಅನುವಂಶಿಕವಾಗಿ ಬಳುವಳಿಯಾಗಿ ಬಂದ ಕಥನಕಲೆಯೇ ಇವರಿಗಾಧಾರ. ಗ್ರಾಮ್ಯಶೈಲಿಯ ನಾಟಕೀಯ ಸಂಭಾಷಣೆ ಹಾಡುಗಾರಿಕೆ ನಿರೂಪಣೆಯ ಸಹಯೋಗದಲ್ಲಿ ಕಥಾ ಪಾತ್ರಚಿತ್ರಗಳು ಸಜೀವಗೊಂಡು ದೃಶ್ಯಾಭಿನಯದ ಅನುಭವ ನೀಡುತ್ತವೆ. ಅವಕಾಶ ಕಲ್ಪಿಸಿಕೊಂಡು ಸಮಕಾಲೀನ ಘಟನೆಗಳನ್ನು ಹೊಂದಿಸಿ ನೋಡುಗರನ್ನು ರಂಜಿಸುವುದುಂಟು. ವಾಗಾಡಂಬರವಿಲ್ಲದ ದಟ್ಟ ಅಭಿವ್ಯಕ್ತಿಯ ತಮ್ಮದೇ ಆದ ಪ್ರಾದೇಶಿಕ ನೀತಿ, ಬೋಧನೆ, ಮನೊರಂಜನೆ ನೀಡುವ ಈ ಆರಾಧನಾ ಕಲೆ ಇಂದು ಪಟಕತೆ ನಮ್ಮ ನಾಡಿನಲ್ಲಿ ಕಣ್ಮರೆಯಾದರೂ ನಮ್ಮ ದೇಶದ ಹಲವು ಭಾಗಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಇನ್ನೂ ಉಸಿರಾಡುತ್ತಿರುವುದನ್ನು ಮಹಾರಾಷ್ಟ್ರ ಮತ್ತು ಬಳ್ಳಾರಿ ಜಿಲ್ಲೆಯ ಪಕ್ಕದ ಆಂಧ್ರಪ್ರದೇಶದಲ್ಲಿ ಕಂಡುಬರುವುದಾಗಿ, ಈ ಪಟಕತೆಯ ಮುಂದಿನ ಹೆಜ್ಜೆ ಎನ್ನುವಂತೆ ತೊಗಲುಗೊಂಬೆ ಆಟ ಕಾಣುತ್ತದೆ ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ.

೪.೩. ಯಕ್ಷಗಾನ, ದೊಡ್ಡಾಟಗಳಲ್ಲಿಯ ಚಿತ್ರಕಲೆ

ಹಲವು ಆಟಗಳಲ್ಲಿ ಮುಖ್ಯವಾಗಿ ಧಾರ್ಮಿಕ ಹಿನ್ನೆಲೆ ಹೊಂದಿದ ಕಲೆಯಾದ ಯಕ್ಷಗಾನವು ಬಳ್ಳಾರಿ ಜಿಲ್ಲೆಯಲ್ಲಿ ದೊಡ್ಡಾಟ, ಬಯಲಾಟ ಎಂದು ಗುರ್ತಿಸಿಕೊಂಡಿದೆ. ಈ ಕಲೆಯು ಇಂದು ಅಪರೂಪದ ಕಲೆಯಾಗಿದೆ. ಈ ಕಲೆಯು ಉತ್ಸವ, ಸಮ್ಮೇಳನದಂತಹ ವಿಶೇಷ ದಿನಗಳಲ್ಲಿ ಮಾತ್ರ ಪ್ರದರ್ಶಿತವಾಗುತ್ತದೆ. ಹಂಪಿ ಉತ್ಸವದಲ್ಲಿ ಸ್ಥಳೀಯ ಮತ್ತು ರಾಜ್ಯದ ಬೇರೆ ಬೇರೆ ಸ್ಥಳಗಳಿಂದಲೂ ಕಲಾವಿದರೂ ಯಕ್ಷಗಾನ, ದೊಡ್ಡಾಟಗಳನ್ನು ಪ್ರದರ್ಶಿಸುತ್ತಾರೆ. ಯಕ್ಷಗಾನ,

ಬಯಲಾಟ, ಜನಪದ ಕಲೆಗಳಲ್ಲಿ ತುಂಬಾ ಶ್ರೀಮಂತವಾದ ಕಲೆ, ನೃತ್ಯ, ಅಭಿನಯ, ಸಂಭಾಷಣೆ, ಸಂಗೀತ, ಚಿತ್ರಕಲೆ ಇವುಗಳಿಂದ ಒಟ್ಟುಗೂಡಿದ ಒಂದು ಸಮ್ಮಿಶ್ರ ಕಲೆಯಾಗಿದೆ. ಈ ಕಲೆಯಲ್ಲಿ ಭೂಷಣ ಮತ್ತು ಮುಖವರ್ಣಿಕೆಯನ್ನು ಚಿತ್ರಕಲೆಯ ಅಂಗವೆಂದು ಗುರುತಿಸಿಕೊಂಡಿದೆ. ಯಕ್ಷಗಾನ ಬಯಲಾಟ ಕಲೆಯ ದೃಷ್ಟಿಯಿಂದ ಶ್ರೀಮಂತ ಕಲೆ. ಅದರ ಎಲ್ಲಾ ಅಂಗಗಳೂ ಆಕರ್ಷಕ, ಇಲ್ಲಿಯ ಪಾತ್ರಗಳ ಮುಖವರ್ಣಿಕೆಯಲ್ಲಿ ಚಿತ್ರಕಲೆಯ ಸೊಗಸನ್ನು ಕಂಡರೆ, ಅವುಗಳು ಧರಿಸುವ ವೇಷಭೂಷಣಗಳಲ್ಲಿ ವರ್ಣರಂಜಿತ ಶಿಲ್ಪಕಲೆಯ ಚಮತ್ಕಾರವನ್ನು ಕಾಣುತ್ತೇವೆ. ವೇಷಭೂಷಣವನ್ನು ತಯಾರಿಸುವ ಕಲಾವಿದರು ತುಂಬಾ ವಿರಳ.

ಈ ವೇಷಭೂಷಣ ತಯಾರಿಸುವ ಮತ್ತು ಮುಖಕ್ಕೆ ವರ್ಣವನ್ನು ಲೇಪಿಸುವ ಕಲಾವಿದರೊಬ್ಬರು ಬಳ್ಳಾರಿ ನಗರದಲ್ಲಿ ದೊರೆಯುತ್ತಾರೆ. ಬಳ್ಳಾರಿ ಹಣ್ಣುಗಾಯಿ ಶಿವರುದ್ರಯ್ಯಸ್ವಾಮಿ ಎಂದೇ ಕರೆಸಿಕೊಳ್ಳುವ ಇವರು ಸರಳ ಸಜ್ಜನಿಕೆಯ ಅಪರೂಪದ ಕಲಾವಿದರಾಗಿದ್ದಾರೆ. ಶಿವರುದ್ರಯ್ಯಸ್ವಾಮಿಯವರ ತಂದೆ ರುದ್ರಯ್ಯಸ್ವಾಮಿ ಮೂಲತಃ ಹೊರರಾಜ್ಯದ ಆಂಧ್ರಪ್ರದೇಶದ ಆದೋನಿಯವರು. ಕಾರಣಾಂತರದಿಂದ ಇವರ ತಂದೆ ೫೦–೬೦ ದಶಕದ ಹಿಂದೆ ಬಳ್ಳಾರಿಯ (ತಾ) ಎತ್ತಿನಬೂದಿಹಾಳ್ ಗ್ರಾಮದಲ್ಲಿ ಶ್ರೀ ಗುರುಕಟ್ಟೆಬಸವೇಶ್ವರ ಸ್ವಾಮಿಯ ದೇವಸ್ಥಾನದ ಮುಂದೆ ಹಣ್ಣುಕಾಯಿ ಮಾರಾಟ ಮಾಡಲಾಗಿ ಹಣ್ಣುಕಾಯಿ ಶಿವರುದ್ರಯ್ಯಸ್ವಾಮಿ ಎಂದು ಹೆಸರು ಬಂದಿತು. ನಂತರ ಕೆಲವಾರು ವರ್ಷಗಳಲ್ಲಿಯೇ ಇವರು ಬಳ್ಳಾರಿ ನಗರದ ಬ್ರೂಸಪೇಟೆಗೆ ಬಂದು ನೆಲೆಸುತ್ತಾರೆ. ಎಸ್. ಎಸ್. ಎಲ್.ಸಿವರೆಗೆ ವ್ಯಾಸಂಗ ಮಾಡಿರುವ ಸ್ವಾಮಿಯವರು ಜೀವನ ನಿರ್ವಹಣೆಗೆ ಈ ವೃತ್ತಿಯನ್ನು ಆಯ್ದುಕೊಂಡರು. ಶಿವರುದ್ರಯ್ಯಸ್ವಾಮಿಯವರ ಎರಡನೆಯ ಮಗನಾಗಿ ಇವರು ೧೯೩೩ರ ಅಗಸ್ಟ್ ೧೧ರಂದು ಜನಿಸಿದರು. ಇವರು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ತುಂಬಾ ಆಸಕ್ತಿಯಿಂದ ಪಾಲ್ಗೊಳ್ಳುತ್ತಿದ್ದರು. ಈ ಆಸಕ್ತಿ ಮತ್ತು ತಮ್ಮ ಕುಟುಂಬದಲ್ಲಿನ ಪಾರಂಪರಿಕ ಕಲಾಬದುಕು ಇವರು ಕಲಾವಿದರಾಗಿ ಬೆಳೆಯಲು ಪ್ರೇರಣೆ ಎನ್ನಬಹುದು. ಈ ಕಲೆಯು ತಮ್ಮ ತಾತ, ತಂದೆಯವರಿಗೆ ಈ ವೇಷಭೂಷಣ ತಯಾರಿಕೆ ಒಂದೇಯಾಗಿರದೇ ಸ್ವತಃ ತಾವೇ ಪಾತ್ರಧಾರಿಗಳು ಕೂಡ ಆಗಿದ್ದರು ಎಂದು ಸ್ವಾಮಿಯವರು ವಿವರಿಸುತ್ತಾರೆ. ಇದಕ್ಕೆ ಸಾಕ್ಷಿ ಎಂಬುವಂತೆ ೧೫೦ ವರ್ಷಗಳ ಇತಿಹಾಸವಿರುವ ಬಯಲಾಟದ ಪರಿಕರಗಳು ಇವರಲ್ಲಿ ಸಂಗ್ರಹಗೊಂಡಿವೆ.

ಇವರ ತಂದೆ ತಾತನವರೆಗೆ ಈ ಕಲೆಯು ಪ್ರವೃತ್ತಿಮಾತ್ರವಾಗಿತ್ತು, ವೃತ್ತಿಯಾಗಿರಲಿಲ್ಲ ಎನ್ನುವುದು ಕೂಡ ಸ್ಪಷ್ಟಪಡಿಸುತ್ತಾರೆ. ಶಿವರುದ್ರಯ್ಯಸ್ವಾಮಿಯವರು ಮೊದಲೇ ದೊಡ್ಡಾಟಗಳಲ್ಲಿ ಪಾತ್ರಗಳನ್ನು ನಿರ್ವಹಿಸಿದ್ದರಿಂದ ವೇಷಭೂಷಣ ತಯಾರಿಕೆಗೆ ಅನುಕೂಲವಾಯಿತು. ೪೦ ವರ್ಷಗಳಿಗೂ ಅಧಿಕ ದೊಡ್ಡಾಟದ ವೇಷಭೂಷಣಗಳ ತಯಾರಿಕೆಯ ಅನುಭವ ಅವರಿಗೆ ಹೆಸರು, ಸ್ಥಾನ ಕಲ್ಪಿಸಿದೆ. ಇವರು ತಯಾರಿಸುವ ವೇಷಭೂಷಣ ಈ ಕೆಳಗಿನಂತಿವೆ.

ವೇಷಭೂಷಣ

ಆಯಾ ಪಾತ್ರಗಳಿಗೆ ಸರಿಯೆನಿಸಿದ ಉಡುಗೆ ತೊಡುಗೆಗಳನ್ನು ಅವರದ್ದೇ ಆದ ರೀತಿಯಲ್ಲಿ ಸೃಷ್ಟಿಸಿದ್ದಾರೆ. ಅವುಗಳು ಆಕರ್ಷಣೀಯವಾಗಿ ತೋರುವುದಷ್ಟೇ ಅಲ್ಲದೇ ಪಾತ್ರಗಳ ವ್ಯಕ್ತಿತ್ವವನ್ನು, ಸ್ವಭಾವವನ್ನು ಎತ್ತಿತೋರುತ್ತವೆ. ಕೇವಲ ವೇಷಭೂಷಣದ ಆಧಾರದಿಂದಲೇ ಇದು ಇಂಥದೇ ಪಾತ್ರ ಎಂದು ಗುರುತಿಸಲು ಸಾಧ್ಯವಾಗುವಂತೆ ಅವುಗಳನ್ನು ರೂಪುಗೊಳಿಸಲಾಗಿದೆ. ಅವುಗಳೆಂದರೆ ಕೃಷ್ಣನ ವಸ್ತ್ರಾಭರಣ, ತೋಳುಬಂಧಿ, ಕಿರೀಟ, ಮುಖವಾಡಗಳು, ಈಶ್ವರ, ರಾಮಲಕ್ಷ್ಮಣ, ಆಂಜನೇಯನ ವಸ್ತ್ರಾಭರಣ ಮುಂತಾದವುಗಳಲ್ಲದೇ ಸನ್ನಿವೇಶಕ್ಕೆ ಅನುಗುಣವಾಗಿ ಲಕ್ಷ್ಮಿಯ ಪಾತ್ರಕ್ಕೆ ಕಮಲ, ಸರಸ್ವತಿ ಪಾತ್ರಕ್ಕೆ ನವಿಲು, ವರಾಹನ ಪಾತ್ರಕ್ಕೆ ಹಂದಿಯ ಚಿತ್ರಕಲಾಕೃತಿಗಳನ್ನು ಕೂಡ ನಿರ್ಮಾಣ ಮಾಡಿದ್ದಾರೆ.

ತಯಾರಿಕಾ ವಿಧಿ-ವಿಧಾನಗಳು

ಮಣಿ, ಮುತ್ತು, ಬಣ್ಣದ ಬಟ್ಟೆ, ಬಣ್ಣದ ಕಾಗದ, ಸೂಜಿ, ದಾರ, ರಟ್ಟು, ಉಲನ್, ಗಾಜಿನ ಹರಳುಗಳು, ಮಿಂಚುಗಳು, ಬಣ್ಣ, ಬ್ರಷ್ ಮುಂತಾದವು ವೇಷಭೂಷಣಗಳ ತಯಾರಿಕೆಗೆ ಬೇಕಾಗುವ ವಸ್ತುಗಳಾಗಿವೆ. ಕೃಷ್ಣನ ವಸ್ತ್ರಾಭರಣವು ತುಂಬಾ ವಿಶೇಷದಿಂದ ಕೂಡಿದ ವೇಷಭೂಷಣವಾಗಿದೆ. ಕೃಷ್ಣನ ವಸ್ತ್ರಾಭರಣಗಳನ್ನು ಬಣ್ಣವಿಲ್ಲದೇ ಮಣಿ-ಮುತ್ತು, ಮಿಂಚುಗಳಿಂದ ತಯಾರಿಸಲಾಗಿದೆ. ಎದೆ ಬಂಧಿ (ಮೈ ವಸ್ತ್ರ)ಗೆ ಎದೆಯ ಆಕಾರಕ್ಕೆ ರಟ್ಟನ್ನು ಕತ್ತರಿಸಿಕೊಂಡು ಅದಕ್ಕೆ ಅಂಟನ್ನು ಉಪಯೋಗಿಸಿ ವೃತ್ತಾಕಾರದಲ್ಲಿ ಹೂವನ್ನು ಮಣಿ-ಮುತ್ತುಗಳನ್ನು ಅಂಟಿಸಲಾಗಿ ಮತ್ತು ಉಳಿದ ಭಾಗಕ್ಕೆ ವೃತ್ತಾಕಾರವಾಗಿ ಬಿಳಿ, ಹಸಿರು, ಕೆಂಪು ಬಣ್ಣದ ಗಾಜಿನ ಚೂರನ್ನು ಅಂಟಿಸಲಾಗಿದೆ. ಮುತ್ತು, ದಾರ ಮತ್ತು ಸೂಜಿಯನ್ನು ಉಪಯೋಗಿಸಿ ದಾರದಲ್ಲಿ ಮಣಿಯನ್ನು ಪೋಣಿಸಿ ಚಕ್ರಗಳ ಕೆಳಭಾಗದಲ್ಲಿ ಮತ್ತು ತೋಳುಗಳಲ್ಲಿ ಜೋಡಿಸಲಾಗಿದೆ.

ಈ ಒಂದು ವಸ್ತ್ರದ ನಿರ್ಮಾಣದಲ್ಲಿ ೧೫ ದಿನದಿಂದ ೨೫ ದಿನಗಳವರೆಗೆ ಕಾಲಾವಕಾಶವನ್ನು ತೆಗೆದುಕೊಂಡು ತಯಾರಿಸಲಾಗುವುದು. ಈ ಕುಸರಿಕೆಲಸವು ವೇಷಕ್ಕೆ ತಕ್ಕಂತೆ ಕಾಲವನ್ನು ತೆಗೆದುಕೊಳ್ಳುತ್ತದೆ. ಅದೇ ಚಕ್ರ ಮತ್ತು ತೋಳುಬಂಧಿಗಳು ೩ ರಿಂದ ೫ ದಿನಗಳ ಕಾಲವನ್ನು ತೆಗೆದುಕೊಳ್ಳುವುದು ಎನ್ನಲಾಗುತ್ತದೆ. ಈ ಒಂದು ಕವಚವು ತುಂಬಾ ಸೊಗಸಾಗಿದೆ. ಇದೇ ರೀತಿಯಲ್ಲಿ ಕಿರೀಟ, ಇಲ್ಲಿಯೂ ರಟ್ಟನ್ನು ತಲೆಗೆ ಸರಿ ಹೊಂದುವಂತೆ ಕತ್ತರಿಸಿ, ಕಿರೀಟದ ಆಕಾರಕ್ಕೆ ಜೋಡಿಸಲಾಗುತ್ತದೆ. ನಂತರ ಇದಕ್ಕೆ ಅಂಟನ್ನು ಉಪಯೋಗಿಸಿ ಬಂಗಾರ(ಹಳದಿ)ದ ಬಣ್ಣದ ಮಿಂಚಿನಿಂದ ಕೂಡಿದ ಬ್ಯಾಗಡಿಯನ್ನು ಸುತ್ತಲಾಗುತ್ತದೆ.

ನಂತರ ಕಿರೀಟದ ವಿನ್ಯಾಸಕ್ಕೆ ತಕ್ಕಂತೆ ಮಣಿ, ಮುತ್ತು, ಮಿಂಚುಗಳನ್ನು ಅಂಟಿಸಿ ವಿನ್ಯಾಸಗೊಳಿಸಲಾಗುತ್ತದೆ. ಬ್ರಹ್ಮ, ಆಂಜನೇಯ, ನಂದಿ, ರಾಕ್ಷಸ, ಹುಲಿ, ಉಗ್ರನರಸಿಂಹ

ಮುಂತಾದ ಮುಖವಾಡಗಳನ್ನು ಕಟ್ಟಿಗೆಯಲ್ಲಿ ಮಾಡಲಾಗಿ ಇದಕ್ಕೆ ಸರಿಹೊಂದುವಂತಹ ಬಣ್ಣಗಳನ್ನು ಉಪಯೋಗಿಸಿ ಕಣ್ಣು, ಮೂಗು, ನಾಲಿಗೆ, ಉಬ್ಬು ಮೀಸೆ, ಕೋರೆ ಹಲ್ಲು, ತುಟಿ, ಕಿರೀಟಗಳನ್ನು ಚಿತ್ರಿಸಲಾಗಿ ಪರಿಪೂರ್ಣವಾದ ಮುಖವಾಡಗಳಾಗಿವೆ. ಧರ್ಮರಾಯನ ವಸ್ತ್ರ, ಸೊಂಟದ ಪಟ್ಟಿ, ಈಶ್ವರನ ವಸ್ತ್ರ, ಆಂಜನೇಯನ ವಸ್ತ್ರ ಮುಂತಾದ ಎಲ್ಲಾ ವೇಷಭೂಷಣಗಳೂ ಇದೇ ಪದ್ಧತಿಯಲ್ಲಿ ರಚನೆಗೊಂಡಿವೆ. ಮತ್ತು ಹಲವು ಕಲಾಕೃತಿಗಳಾದ ಮಾಯಾಜಿಂಕೆ, ನವಿಲು, ಹಂದಿ, ಕಮಲ, ಈಶ್ವರಲಿಂಗ, ಐದು ಹೆಡೆಗಳ ಸರ್ಪ, ಜೋಡಿ ಆನೆಗಳು ಮುಂತಾದ ವರ್ಣಕಲಾಕೃತಿಗಳನ್ನು ಕೂಡ ರಚಿಸಲಾಗಿದೆ.

ಈ ಕಲಾಕೃತಿಗಳು ರಟ್ಟಿನ (plywood) ಸಂದರ್ಭಕ್ಕೆ ಹೊಂದಾಣಿಕೆಯಾಗುವಂತೆ ಪ್ರಾಣಿಯ ಆಕಾರವನ್ನು ಉಳಿಸಿಕೊಂಡು ತೈಲವರ್ಣದಿಂದ ನೈಜಸ್ವರೂಪದಲ್ಲಿ ರಚನೆಗೊಂಡಿವೆ. ಸಾಮಾನ್ಯ ಮನುಷ್ಯರಿಗಿಂತ ಅತೀವವಾಗಿ ಹುಬ್ಬುಗಳು, ಭುಜ, ಕರ್ಣ, ಮೀಸೆ, ವಿಶಾಲವಾದ ದೇಹ ಪಾತ್ರಧಾರಿಗಳು ಅಲಂಕೃತಗೊಳಿಸುವುದರೊಂದಿಗೆ ಪಾತ್ರದ ಸನ್ನಿವೇಶವೇ ರಂಗಸಜ್ಜಿಕೆಯಲ್ಲಿ ನೈಜ ಸ್ವರೂಪದಿಂದ ಪ್ರೇಕ್ಷಕರಿಗೆ ಭ್ರಮೆಗೊಳಿಸುವಷ್ಟು ಪಾತ್ರಧಾರಿಯನ್ನು ಅಲಂಕರಿಸುವುದು ಇವರಿಗೆ ಬಹು ಅಚ್ಚುಮೆಚ್ಚು.

ಮುಖವರ್ಣಿಕೆ

ಮುಖವರ್ಣಿಕೆ ಎಂದರೆ ಮುಖವನ್ನು ಬಣ್ಣದಿಂದ ಅಲಂಕರಿಸುವುದೆಂದು ಹೇಳಬಹುದು. ಈ ಮುಖವರ್ಣಿಕೆಗೆ ಮುಖಕ್ಕೆ ಹಾಕುವ ಮೂಲ ಲೇಪನವನ್ನು, ಅದರ ಮೇಲೆ ಬರೆಯುವ ವಿವಿಧ ವಿನ್ಯಾಸಗಳು ಎಂದು ಯಕ್ಷಗಾನ ಪದಕೋಶದಲ್ಲಿ ಅರ್ಥೈಸಲಾಗಿದೆ. ಪ್ರಾಚೀನ ಕಾಲದಿಂದಲೂ ಮುಖಕ್ಕೆ ಬಣ್ಣ ಹಚ್ಚಿಕೊಳ್ಳುತ್ತಿದ್ದ ಅಭ್ಯಾಸವನ್ನು ಕಾಣುತ್ತೇವೆ. ಈ ಮುಖವರ್ಣಿಕೆಗೆ ಬಳಸುವ ವರ್ಣಗಳನ್ನು ಹಣ್ಣುಕಾಯಿ ಶಿವರುದ್ರಯ್ಯಸ್ವಾಮಿಯಂತಹವರು ತುಂಬಾ ನುರಿತ ಕಲಾವಿದರೂ ಈ ವರ್ಣಗಳಿಂದ ಚರ್ಮಕ್ಕೆ ಯಾವುದೇ ದುಷ್ಪರಿಣಾಮ ಉಂಟಾಗಬಾರದು, ಹೆಚ್ಚುಕಾಲ ಕೆಡದಂತೆ ಉಳಿಯಬೇಕು. ತುಟಿಯ ಬಣ್ಣ ಮತ್ತು ಉಬ್ಬಿನ ಬಣ್ಣಕ್ಕೆ ಮಿಶ್ರವಾಗದಂತೆ ಕಾಪಾಡಿಕೊಂಡು ಮುಖದ ಮೇಲೆ ಉಂಟಾಗುವ ಭಾವನೆಯನ್ನು ವ್ಯಕ್ತಪಡಿಸುವಾಗ ಮಾಂಸಖಂಡಗಳ ಚಲನೆಗೆ ತೊಂದರೆಯಾಗಬಾರದೆಂದು ಮತ್ತು ಆಕರ್ಷಕವಾಗಿರಬೇಕು ಎಂಬ ಈ ಎಲ್ಲಾ ದೃಷ್ಟಿಕೋನದಿಂದಲೂ ವರ್ಣವನ್ನು ಉಪಯೋಗಿಸಲಾಗುತ್ತದೆ.

ಈ ಒಂದು ವರ್ಣದಲ್ಲಿ ತಂಪು ಇರುವ ಪದಾರ್ಥದಿಂದ ನಿರ್ಮಾಣವಾದ ಬಣ್ಣ ಇಲ್ಲಿ ಲೇಪನಗೊಳ್ಳುವುದು ಎಂದು ಶಿವರುದ್ರಯ್ಯನವರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಈ ವರ್ಣಗಳಲ್ಲಿ ಮುಖ್ಯವಾಗಿ ಗಂಧ, ಈಭತ್ತಿಯಂತಹ ವಸ್ತುಗಳನ್ನು ಉಪಯೋಗಿಸಿ ವರ್ಣವನ್ನು ತಯಾರಿಸುತ್ತಾರೆ. ಶಿವರುದ್ರಯ್ಯ ಸ್ವಾಮಿಯವರು ವೇಷಭೂಷಣವೊಂದೇ ತಯಾರಿಕೆಯಲ್ಲಿ ಪರಿಣಿತರಾಗಿರದೇ

[illegible]

ವರ್ಣಲೇಪನದಲ್ಲಿಯೂ ಪರಿಣಿತರು. ಆದರೆ ಇತ್ತೀಚಿನ ದಿನಗಳಲ್ಲಿ ಇವುಗಳೆಲ್ಲಾ ರೆಡಿಮೇಡ್ ಆಗಿ ಸಿಗುತ್ತವೆ ಎನ್ನುವುದು ಇವರ ಅಭಿಪ್ರಾಯ.

ಈ ಬಣ್ಣಗಳನ್ನೆಲ್ಲ ಸಿದ್ಧಪಡಿಸಿಕೊಂಡ ನಂತರ ಮುಖಕ್ಕೆ ತೆಳುವಾಗಿ, ದಪ್ಪವಾಗಿ ರೇಖಿಸುವುದರ ಮೂಲಕ ವಿನ್ಯಾಸಗೊಳಿಸುತ್ತಾರೆ. ವಿವಿಧ ನಾಮಗಳು, ಹಣೆಯ ಪಟ್ಟಿಕೆಗಳು, ಗದ್ದ, ಕಣ್ಣಿನ ಹದಿ–ಬದಿಯಲ್ಲಿ ವಿನ್ಯಾಸಗೊಳಿಸುತ್ತಾರೆ. ದಪ್ಪವಾದ, ತೆಳುವಾದ ಮೀಸೆಗಳನ್ನು ನಾರು ಮತ್ತು ಹತ್ತಿಯಿಂದ ವಿನ್ಯಾಸಗೊಳಿಸುತ್ತಾರೆ. ಹಣ್ಣುಕಾಯಿ ಶಿವರುದ್ರಯ್ಯಸ್ವಾಮಿಯವರು ಮೊದಲೇ ದೊಡ್ಡಾಟದಲ್ಲಿ ಪಾತ್ರಗಳನ್ನು ನಿರ್ವಹಿಸಿದ್ದು ಅವರಿಗೆ ವೇಷಭೂಷಣ ತಯಾರಿಕೆಗೆ ಅನುಕೂಲವಾಯಿತು. ಪಾತ್ರಗಳಿಗೆ ಅವಶ್ಯವಾದ ವೇಷಭೂಷಣ ಹಾಗೂ ಅವು ಪ್ರೇಕ್ಷಕನ ಮೇಲೆ ಉಂಟು ಮಾಡುವ ಪರಿಣಾಮ, ಕಲ್ಪನೆ, ತಾಂತ್ರಿಕ ಪರಿಣತಿ, ಆಸಕ್ತಿ, ಆಕರ್ಷಣೆಗಳು ದೊಡ್ಡಾಟವನ್ನು ಬೆಳೆಸುತ್ತಾ ಬಂದವು.

೪೦ ವರ್ಷಗಳಿಂದ ಅಧಿಕ ದೊಡ್ಡಾಟದ ವೇಷಭೂಷಣಗಳ ತಯಾರಿಕೆಯ ಅನುಭವ ಅವರಿಗೊಂದು ಹೆಸರು, ಸ್ಥಾನದ ಜೊತೆಗೆ ಹಲವು ಸನ್ನಿವೇಶಗಳಿಗೆ ಪಾತ್ರಧಾರಿಯಾಗಿ ನಟಿಸಿದ ಕ್ಷಣಗಳ ನೆನಪು ಇವರಿಗೆ ಸಂತೃಪ್ತಿ ತಂದುಕೊಟ್ಟಿದೆ. ಇವರು ವಸ್ತುಗಳನ್ನು ಮದ್ರಾಸ್, ಬೆಂಗಳೂರು, ಹುಬ್ಬಳ್ಳಿ ಮತ್ತಿತರ ನಗರಗಳಿಂದ ಖರೀದಿಸಿ ತರುತ್ತಿದ್ದುದಾಗಿ ವಿವರಿಸುತ್ತಾರೆ. ಈ ವಸ್ತುಗಳನ್ನು ಉಪಯೋಗಿಸಿ ಬಯಲಾಟದ ತಂಡಗಳಿಗೆ ವೇಷಭೂಷಣವನ್ನು ತಯಾರಿಸಿಕೊಟ್ಟಿದ್ದಾರೆ. ಇವರ ವೇಷಭೂಷಣಗಳನ್ನೇ ಅಪೇಕ್ಷಿಸುವ ಕಲಾವಿದರಿದ್ದಾರೆ. ಕಲಾತಂಡಗಳಿಗೆ ಬಯಲಾಟಗಳಿಗೆ ವೇಷಭೂಷಣಗಳನ್ನು ಬಾಡಿಗೆಯಾಗಿಯೂ ಇವರು ಒದಗಿಸುತ್ತಾರೆ. ಹೀಗೆ ಸಮರ್ಪಕವಾಗಿ ವೇಷಭೂಷಣಗಳನ್ನು ಒದಗಿಸುತ್ತಿರುವುದರಿಂದ ಎಷ್ಟೋ ತಂಡಗಳು ಪ್ರದರ್ಶನ ನೀಡಲು ಸಾಧ್ಯವಾಗಿವೆ.

ಏಳು ಎಂಟು ವರ್ಷಗಳ ಹಿಂದೆ ಎತ್ತಿನಬೂದಿಹಾಳ, ೨೦೧೦ರಲ್ಲಿ ಹೊಸಪೇಟೆಯಲ್ಲಿ ಬಯಲಾಟವು ಪ್ರದರ್ಶನಗೊಂಡಾಗ ಇವರ ವೇಷಭೂಷಣಗಳನ್ನೇ ಧರಿಸಿರುವುದು ಗಮನಾರ್ಹ ಸಂಗತಿಯಾಗಿದೆ. ಶಿವರುದ್ರಯ್ಯ ಸ್ವಾಮಿಯವರು ಈಗಲೂ ಈ ವೇಷಭೂಷಣಗಳನ್ನು ಕಾಪಾಡಿಕೊಂಡು ಬಂದಿದ್ದಾರೆ. ಶಿವರುದ್ರಯ್ಯ ಸ್ವಾಮಿಯವರ ಕಲಾಪ್ರೌಢಿಮೆಗೆ ಬಳ್ಳಾರಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಇಲಾಖೆವತಿಯಿಂದ ಅಗತ್ಯ ಸಹಕಾರವನ್ನು ನೀಡಿದ್ದು, ಪಕ್ಷದ ರಾಮುಲು ಇವರ ಅಳಿಯ ಕಂಪ್ಲಿ ಶಾಸಕ ಸುರೇಶ್‌ಬಾಬುರವರು ಸನ್ಮಾನಿಸಿ ಗೌರವಿಸಿದ್ದಾರೆ.

೪.೪. ಗಿಳಿಶಕುನದ ಚಿತ್ರಗಳು

ನೀಲಿ ಹೊತ್ತಿಗೆ ಹಾಗೂ ಗಿಳಿಶಕುನಗಳ ಮೂಲ ಆಶಯ ಒಂದೇ ಆಗಿದ್ದರೂ ಮಾಧ್ಯಮ

[illegible]

ಬಳ್ಳಾರಿಯ ಹಣ್ಣುಗಾಯಿ ಶಿವರುದ್ರಯ್ಯ ಸ್ವಾಮಿಯವರು ತಯಾರಿಸಿದ ಬಯಲಾಟದ ವೇಷಭೂಷಣ



ಮೇಲ್ಕವಚ

ಬಳ್ಳಾರಿಯ ಹಣ್ಣುಗಾಯಿ ಶಿವರುದ್ರಯ್ಯ ಸ್ವಾಮಿಯವರು ತಯಾರಿಸಿದ ಬಯಲಾಟದ ವೇಷಭೂಷಣ



ತೋಳಬಂದಿ





ಮೇಲೂಡುಗೆ

ಮಾತ್ರ ಸ್ವಲ್ಪ ಭಿನ್ನವಾಗಿರುತ್ತದೆ. ಗಿಳಿಶಕುನದಲ್ಲಿಯೂ ನೀಲಿಹೊತ್ತಿಗೆಯಂತೆ ಶುಭ ಮತ್ತು ಅಶುಭ ಚಿತ್ರಗಳಿರುತ್ತವೆ. ಈ ಒಂದೊಂದು ಚಿತ್ರ ನಾಲ್ಕು ಮಡಿಕೆಯಾಗಿ ಅಥವಾ ಕಾರ್ಡ್ ತರಹದಲ್ಲಿ ಚಿತ್ರಿತಗೊಂಡಿರುತ್ತವೆ. ನೀಲಿಹೊತ್ತಿಗೆಯಲ್ಲಿ ಕೇಳುಗರಿಂದ ಕಡ್ಡಿಹಾಕಿಸಿ ಚಿತ್ರದ ಕಾರ್ಡ್ ನೋಡುವಂತಾದರೆ, ಇಲ್ಲಿ ಗಿಳಿಯ ಮೂಲಕ ಚಿತ್ರದ ಕಾರ್ಡ್ ತೆಗೆಯಿಸಿ ಅದರ ಮೇಲೆ ಭವಿಷ್ಯ ಹೇಳುವ ಒಂದು ವ್ಯತ್ಯಾಸ ಬಿಟ್ಟರೆ ಉಳಿದೆಲ್ಲ ವಿಧಾನಗಳು ಒಂದೇ ರೀತಿಯಾಗಿರುತ್ತದೆ. ನೀಲಿ ಗಿಳಿಶಕುನದ ಕಾಳಿ, ಪಾರ್ವತಿ, ಗಣೇಶ, ಈಶ್ವರ, ಲಕ್ಷ್ಮೀ, ಸರಸ್ವತಿ, ಶನಿದೇವ, ಯಮ, ಸೂಶಿಕ, ಸೂರ್ಯ ಮುಂತಾದ ಚಿತ್ರಗಳು ಕಂಡುಬರುತ್ತವೆ. ಇಲ್ಲಿ ಹೆಣಿಗೆ ಹೊಲಿಗೆಯಿಂದಲೂ ಚಿತ್ರಗಳು, ರಚನೆಗಳು ಕಂಡುಬರುವುದಾಗಿ ವಿದ್ವಾಂಸರ ಅಭಿಪ್ರಾಯವಾಗಿದೆ. ಆದರೆ ಇಂದು ಕಾರ್ಡ್‌ನಂತಹ ಮಾಧ್ಯಮದಲ್ಲಿ ಮಾತ್ರ ಚಿತ್ರಗಳು ಕಂಡುಬರುತ್ತವೆ. ಹೀಗೆ ಜನಪದರು ಜೀವನದ ನಾನಾ ಆಗುಹೋಗುಗಳನ್ನು ಮುನ್ಸೂಚಕವಾಗಿ ತಿಳಿದುಕೊಳ್ಳುವ ಒಂದು ಮಾರ್ಗವಿದಾಗಿದೆ.

೪.೫. ನೀಲಿ ಹೊತ್ತಿಗೆ ಚಿತ್ರಕಲೆ

ಭವಿಷ್ಯವನ್ನು ತಿಳಿದುಕೊಳ್ಳುವ ಜ್ಯೋತಿಷ್ಯ ಸಿದ್ಧಾಂತ ಶಿಷ್ಟಪದರಲ್ಲಿ ಬೆಳೆದಂತೆ ಜನಪದರಲ್ಲಿ ಒಂದು ವಿಧಾನವಾಗಿ ಈ ನೀಲಿಹೊತ್ತಿಗೆ ನೋಡುವುದು ಹಾಗೂ ಕೇಳುವುದು ನಡೆದಿದೆ. ಇಂದು ಬಳ್ಳಾರಿ ನಗರದಲ್ಲಿ ಮುನ್ಸಿಪಲ್ ಹೈಸ್ಕೂಲ್‌ನ ಮುಂಭಾಗದಲ್ಲಿ, ಕಂಪ್ಲಿಯ ಪುರಸಭೆಯ ಮುಂಭಾಗದಲ್ಲಿ ಉದಾಹರಣೆಯಾಗಿ ಕಾಣಬಹುದು. ನೀಲಿ ಹೊತ್ತಿಗೆಗೆ ಹೊತ್ತಿಗೆ ಮಠ ಎಂಬ ಅಡ್ಡ ಹೆಸರು. ಮಠ, ಮಂದಿರಗಳಲ್ಲಿ ಭವಿಷ್ಯ ನೋಡುವವರ ಹಿನ್ನೆಲೆಯಲ್ಲಿ ಈ ಪದ ಬಂದಿರಬೇಕೆನಿಸುತ್ತದೆ.

ಹೊತ್ತಿಗೆ ಎಂದರೆ ಪುಸ್ತಕ, ಗ್ರಂಥವೆಂದು ಅರ್ಥ. 'ನೀಲಿಹೊತ್ತಿಗೆ' ಚಿತ್ರಗಳ ಮೂಲಕ ಭವಿಷ್ಯ ಹೇಳುವ ಗ್ರಂಥ. ಬಹುಶಃ 'ನೀಲಿ' ಬಣ್ಣವೊಂದರಿಂದ ಮಾತ್ರ ವಿವಿಧ ಚಿತ್ರಗಳನ್ನು ರಚಿಸಿಕೊಂಡು ಬಂದಿರುವ ದೀರ್ಘವಾದ ಕಾಲಘಟ್ಟವೊಂದಿರಬೇಕು. ಕಾಲಕ್ರಮದಲ್ಲಿ ಆ ಒಂದೇ ಬಣ್ಣದ ಚಿತ್ರಗಳಿಗೆ ಬೇಸರಿಸಿಕೊಂಡು ಹಲವು ಬಣ್ಣಗಳನ್ನು ಕೊಟ್ಟು ಚಂದದ ಚಿತ್ರ ತಯಾರಿಸಿಕೊಂಡು ಬಂದಿರಬೇಕು ಎನ್ನುವುದು ವಿದ್ವಾಂಸರ ಅಭಿಪ್ರಾಯವಾಗಿದೆ. ಇದನ್ನು ಇಂದು ನೀಲಿನಕಾಶೆ ಎಂದು ಚಿತ್ರಕಲೆಯಲ್ಲಿ ಚಿತ್ರರಚನೆಯ ಪೂರ್ವವಾಗಿ ಚಿತ್ರಗಳನ್ನು ರಚಿಸಿಕೊಳ್ಳುವಂತೆ ಮಾನವನ ಜೀವನದ ಆಗುಹೋಗುಗಳನ್ನು ಪೂರ್ವವಾಗಿ ತಿಳಿದುಕೊಳ್ಳುವಂತಹ ಕರಡನ್ನು ನೀಲಿ ಹೊತ್ತಿಗೆಯಾಗಿದೆ ಎನ್ನುವುದಾಗಿರಬಹುದು. ಈ ಚಿತ್ರಗಳು ತಾಳೆಗರಿ ಮತ್ತು ಕಾಗದ ಮಾಧ್ಯಮದಲ್ಲಿಯೂ ರಚನೆಯಾಗಿವೆ. ಈ ಚಿತ್ರಗಳಲ್ಲಿ ಹೆಚ್ಚಾಗಿ ರೇಖಾಚಿತ್ರಗಳಾಗಿವೆ. ಈ ರೇಖೆಗಳನ್ನು ಕಪ್ಪು, ಕಡುಗೆಂಪುಗಳಲ್ಲಿ ರೇಖಿಸಲಾಗಿದೆ. ವರ್ಣಚಿತ್ರಗಳು ತುಂಬಾ ವಿರಳ ಎನ್ನಬಹುದು. ಮತ್ತು ವರ್ಣಗಾರಿಕೆಯಲ್ಲಿ ಅಶುಭ ಚಿತ್ರಗಳು, ಶುಭಚಿತ್ರಗಳೆಂದು ಭೇದವಾಗಿ

[illegible]

ವರ್ಣಗಾರಿಕೆಯಲ್ಲಿಲ್ಲವಾದರೂ ಭಯ, ಅಪಾಯ, ದುಃಖ, ಅಶಾಂತಿ ಸೂಚಕಗಳಿಗಾಗಿ ಕಪ್ಪು, ಕೆಂಪು ಬಣ್ಣಗಳನ್ನು ಅಧಿಕ ಪ್ರಮಾಣದಲ್ಲಿ ಉಪಯೋಗಿಸುತ್ತಾರೆ. ಕತ್ತರಿ (ಹಣ ನಿಲ್ಲುವುದಿಲ್ಲ), ರಾಕ್ಷಸ (ದೆವ್ವ-ಭೂತಗಳ ಕಾಟ), ಕಸಬರಿಗೆ (ಮನೆ ನಾಶ), ಹೆಣ (ಅಶುಭ, ಕೇಡು), ಪ್ರಾಣಿ, ಅದರ ಹಿಂದೆ ಒಂದು ಕೋಲು (ಎಚ್ಚರಿಕೆ), ಜೋಳದ ಚೀಲ ಮತ್ತು ಇಲಿ (ಧಾನ್ಯವ್ಯಯ), ಕುಸ್ತಿ (ಜಗಳ), ನಾರದ (ಜಗಳ), ಮೋಡಿ ಆಟ (ಜಗಳದ ಸಿದ್ಧತೆ), ಜೈಲು (ಹೊಡೆದಾಟ) ಹೀಗೆ ಈ ಚಿತ್ರಗಳು ಆಶುಭ ಅರ್ಥಗಳ ವಿವರಣೆ ನೀಡುತ್ತವೆ.

ನೀಲಿಹೊತ್ತಿಗೆ, ಗಿಳಿಶಕುನ ಚಿತ್ರಗಳ ತಂತ್ರ ಮತ್ತು ಶೈಲಿ

ಈ ನೀಲಿಹೊತ್ತಿಗೆ, ಗಿಳಿಶಕುನದ ಚಿತ್ರಗಳಲ್ಲಿ ಪ್ರಮುಖವಾಗಿ ಕಂಡುಬರುವ ಚಿತ್ರಗಳೆಂದರೆ ಹೆಚ್ಚಾಗಿ ರೇಖಾಚಿತ್ರಗಳಾಗಿರುತ್ತವೆ. ಈ ಚಿತ್ರಗಳನ್ನು ಕಾರ್ಡ್ ಮಾಧ್ಯಮದಲ್ಲಿ ಹಾಗೂ ತಾಳೆಗರಿಯ ಸ್ಥಳಾವಕಾಶಕ್ಕೆ ತಕ್ಕಂತೆ ಅಧಿಕವಾಗಿ ಸಂಯೋಜಿಸಲಾಗಿರುತ್ತದೆ. ವಾಸ್ತವದಲ್ಲಿ ವಸ್ತುಗಳಾದ ಪ್ರಾಣಿ-ಪಕ್ಷಿಗಳ ಗಾತ್ರಗಳು ಒಂದೇಯಾಗಿರುತ್ತವೆ. ಜಿರಳೆ ಮತ್ತು ಆನೆ ಎರಡು ಈ ಗರಿಯ ಸ್ಥಳಾವಕಾಶದಷ್ಟೇ ಸಮಾನಾದ ಗಾತ್ರದ ಚಿತ್ರವನ್ನು ಇಲ್ಲಿ ಕಾಣಬಹುದು. ಈ ಚಿತ್ರಗಳ ತದ್ರೂಪ ಚಿತ್ರದಲ್ಲಿ ಇಲ್ಲದಿದ್ದರೂ ಚಿತ್ರರಚನೆಯ ಆಶಯದಲ್ಲಿ ಚಿತ್ರ ಗುರುತಿಸುವಷ್ಟು ಮಾತ್ರ ರೇಖೆಗಳನ್ನು ಇಲ್ಲಿ ಮೂಡಿಸಲಾಗಿದೆ.

ಚಿತ್ರ -೧

ಆಮೆಯ ಚಿತ್ರವು ರೇಖಾಚಿತ್ರವಾಗಿದ್ದು, ಈ ಚಿತ್ರದ ಹಿಂಭಾಗದಲ್ಲಿ ಹಳದಿ ಬಣ್ಣದ ಲೇಪನವಿದ್ದು, ಈ ರೇಖಾಚಿತ್ರರಚನೆಯಲ್ಲಿ ಮೊದಲಿಗೆ ಆಮೆಚಿತ್ರಕ್ಕಿಂತ ಮೊದಲು ಎರಡು ಚಿತ್ರಗಳನ್ನು ವೃತ್ತವಾಗಿ ರೇಖಿಸಿ, ಆ ವೃತ್ತದ ಮಧ್ಯಭಾಗಕ್ಕೆ ಮುಖ್ಯ ಚಿತ್ರ ರಚಿಸಲು ಅನುಕೂಲವಾಗಿ ಸಮತೋಲನತೆ ಕಾಯ್ದುಕೊಳ್ಳಲು ಕೂಡ ರೇಖಿಸಲಾಗಿದೆ. ಮತ್ತು ಆ ವೃತ್ತಕ್ಕೆ ಒಳಭಾಗದಲ್ಲಿ ಮತ್ತೆ ಎರಡು ರೇಖೆಗಳನ್ನು ಆಮೆಯ ಮೈವಳಿಕೆಯಾಗಿ ಇದರ ಮುಂದೆ, ಹಿಂದೆ ಎರಡು ಕೈ, ಕಾಲುಗಳನ್ನು ಗುರುತಿಸಿ ಮುಂದೆ ತಲೆ, ಒಳ ವೃತ್ತದಿಂದ ಮುಂಚಾಚಿದೆ. ಒಳವೃತ್ತಕ್ಕೆ ಈ ಸರಳರೇಖೆ, ಬಳ್ಳಿಯಿಂದ ಬರಿಯನ್ನು ತುಂಬುವ ಮೂಲಕ ಆಮೆಯ ಪರಿಪೂರ್ಣ ನೈಜತೆಯ ಚಿತ್ರವಾಗಿದೆ. ಇಷ್ಟು ಈ ಚಿತ್ರರಚನೆ ತಾಂತ್ರಿಕವಾಗಿದೆ. ಈ ಚಿತ್ರದ ಮುಖ್ಯ ಜಾಮಿತಿಯ ಪ್ರಕಾರದ ರೇಖೆಯೇ ಪ್ರಧಾನ ಪಾತ್ರವಾಗಿದೆ.

ಚಿತ್ರ -೨

ಈ ಚಿತ್ರದಲ್ಲಿ ಮಹಿಳೆಯು ಕುಂಭಹೊತ್ತಂಥ ದೃಶ್ಯವಾಗಿದ್ದು, ಈ ಚಿತ್ರವು ಪ್ರಧಾನವಾಗಿದೆ. ಮಹಿಳೆಯ ಮತ್ತು ಆಕೆ ತಲೆಯ ಮೇಲೆ ವಸ್ತುಗನ್ನು ಲಂಬವಾಗಿ ರೇಖಿಸಲಾಗಿ ಪರಿಕಲ್ಪನೆಯಲ್ಲಿ ನೈಜತೆಯನ್ನು ಮರೆದಿದ್ದಾನೆ. ಆದರೂ ಸದ್ರೂಪವಾಗಿಲ್ಲದಿದ್ದರೂ ಪರಿಕಲ್ಪನೆಯನ್ನು ಅರ್ಥವಾಗುವ ರೀತಿಯಲ್ಲಿ ಸಂಯೋಜಿಸಿದ್ದಾನೆ. ಮೈವಳಿಕೆಯನ್ನು ರೇಖಿಸಿ, ಕಂದುವರ್ಣ, ಲೇಪಿಸಿ ಆ

[illegible]

ಬಳ್ಳಾರಿ ಜಿಲ್ಲೆಯ ಸಂಕೀರ್ಣ ಜನಪದ ಚಿತ್ರಕಲೆ






ನೀಲಿಹೋತ್ತಿಗೆ ಮತ್ತು ಗಿಳಿ ಶಕುನದ ಚಿತ್ರಗಳು





ನೀಲಿಹೋತ್ತಿಗೆ ಮತ್ತು ಗಿಳಿ ಶಕುನದ ಚಿತ್ರಗಳು





ನೀಲಿಹೋತ್ತಿಗೆ ಮತ್ತು ಗಿಳಿ ಶಕುನದ ಚಿತ್ರಗಳು

ವರ್ಣದ ಮೇಲೆ ಮತ್ತೆ ಸೆರಗು, ಕೈತೋಳು, ರವಿಕೆಯನ್ನು ರೇಖೆಯ ಮೂಲಕ ಸ್ಪಷ್ಟಪಡಿಸಿದ್ದಾನೆ. ಬಳ್ಳಾರಿ ಜಿಲ್ಲೆಯ ಜನಪದ ಚಿತ್ರಕಲಾ ಸಂಪ್ರದಾಯವು ಸಮೃದ್ಧವಾಗಿ ಹರಡಿದ್ದು, ಅದರ ಕುರಿತಾಗಿ ಸ್ವತಂತ್ರವಾಗಿ ಅಧ್ಯಯನವಾಗುವಷ್ಟು ವಿಷಯದ ಬಾಹುಳ್ಯವಿದೆ. ಪ್ರಸ್ತುತ ಈ ಅಧ್ಯಾಯದಲ್ಲಿ ಜನಪದ ಚಿತ್ರಕಲೆಯ ಕೆಲವು ಹೆಜ್ಜೆಯ ಗುರುತುಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಪ್ರಾದೇಶಿಕವಾಗಿ ಈ ಜಿಲ್ಲೆಯಲ್ಲಿ ಅಭಿವ್ಯಕ್ತಿಯಾಗಿರುವ ಹಲವಾರು ಹೊಸ ಅಂಶಗಳನ್ನು ಗುರುತಿಸುವ ಪ್ರಯತ್ನ ಈ ಜನಪದ ಚಿತ್ರಕಲೆಯಲ್ಲಿ ಮಾಡಲಾಗಿದೆ.

ಅಧ್ಯಾಯ - ಐದು

ಬಳ್ಳಾರಿ ಜಿಲ್ಲೆಯ ಭಿತ್ತಿಚಿತ್ರಕಲೆ

ಭಿತ್ತಿಚಿತ್ರಗಳೆಂದರೆ ಸಾಮಾನ್ಯವಾಗಿ ಗೋಡೆಯ ಮೇಲೆ ಬರೆದ ಚಿತ್ರವೆಂದು ಅರ್ಥವಾಗುತ್ತದೆ. ಆದರೆ ಭಿತ್ತಿ ಎಂದರೆ ಚಿತ್ರ ಬಿಡಿಸಲು ತಯಾರಿಸಿಕೊಂಡ ಸ್ಥಳ, ಜಾಗ, ಪ್ರದೇಶ, ಚೌಕು ಎಂಬ ಮುಂತಾದ ಅರ್ಥಗಳಿಂದ ಕರೆಯಬಹುದು. ಈ ಒಂದು ಸಂಸ್ಕರಿಸಿದ ಜಾಗದ ಮೇಲೆ ಚಿತ್ರ ಬಿಡಿಸುವುದಕ್ಕೆ ಭಿತ್ತಿಚಿತ್ರ ಕಲೆ ಎಂದು ಕರೆಯುತ್ತಾರೆ. ಇಂಗ್ಲೀಷ್‌ನಲ್ಲಿ Mural painting ಎಂದು ಕರೆಯುತ್ತಾರೆ. ಕನ್ನಡದಲ್ಲಿ ಭಿತ್ತಿಚಿತ್ರವೆಂದರೆ ಹಿಂದಿನ ಶಿಷ್ಟ ಸಂಪ್ರದಾಯ ಶೃತಿಗೆ ಬರುತ್ತದೆ. Mural paintings ಎಂದರೆ ಆಧುನಿಕತೆಗೆ ಗಮನ ಸೆಳೆಯುತ್ತದೆ. ಇಂತಹ ಆಧುನಿಕ ಕಲೆಯಲ್ಲಿ ತನ್ನ ನೆಲೆಯನ್ನು ಭದ್ರಗೊಳಿಸಿಕೊಳ್ಳುತ್ತಾ, ಹಳೆ ಮರ ಹೊಸ ಚಿಗುರು ಎಂಬ ನಾಣ್ಣುಡಿಯಂತೆ ವಿವಿಧ ರೀತಿಯ ಚಿತ್ರವಿನ್ಯಾಸಗಳನ್ನು ಹೊಸ ಹೊಸ ಕಟ್ಟಡಗಳ ಮೇಲೆ ಸಮಕಾಲೀನತೆಯ ವಸ್ತುವಿಷಯ ಉಳಿಸಿಕೊಂಡು ಬಂದ ಒಂದು ಕಲಾಪ್ರಕಾರವಾಗಿ ಇಂದು ನೋಡಬಹುದು.

ದೇವಾಲಯಗಳು, ಮನೆ, ಅರಮನೆ, ಕಂಬ, ಮೇಲ್ಛಾವಣಿ, ಕಿಟಕಿ, ಕಮಾನು ಮುಂತಾದ ಭಾಗಗಳಲ್ಲಿ ಕಂಡುಬರುವ ಚಿತ್ರಗಳು ಭಿತ್ತಿಚಿತ್ರಕಲೆ ಎಂದೆನಿಸಿಕೊಳ್ಳುತ್ತವೆ. ಇಂತಹ ಭಾಗಗಳನ್ನು ವೈಭವೀಕರಿಸುಲೋಸುವುದಕ್ಕೆ ವಾಸ್ತು ಚಿತ್ರಕಲೆ ಎಂದಿದ್ದು, ಭಿತ್ತಿಚಿತ್ರಕಲೆ ಎಂಬ ಕಲಾಪ್ರಕಾರವಾಗಿ ಬೆಳೆದುಬಂದಿದೆ. ಈ ಕಲೆಯ ಮೂಲ ಜನಪದವಾಗಿದೆ. ಭಿತ್ತಿಚಿತ್ರ, ಜನಪದದ ತೊಗಲುಗೊಂಬೆ ಚಿತ್ರಕಲೆಗೆ ಹೆಚ್ಚಿನ ಮಟ್ಟದ ಸಾಮ್ಯವಿದ್ದರೂ ಈ ಭಿತ್ತಿಚಿತ್ರವು ಹೂ, ಬಳ್ಳಿ, ನಕ್ಷೆ, ಮುಖವರ್ಣಿಕೆ. ಯಕ್ಷಕಿನ್ನರರು, ಬಣ್ಣ, ಮೈವಳಿಕೆ ಈ ಎಲ್ಲಾ ಜನಪದ ಮಜಲುಗಳನ್ನು ಪ್ರಮಾಣಬದ್ಧವಾದ

ಬಳ್ಳಾರಿ ಜಿಲ್ಲೆಯ ಭಿತ್ತಿಚಿತ್ರಕಲೆ

↓

ಸಾಂಪ್ರದಾಯಿಕ ಭಿತ್ತಿಚಿತ್ರಕಲೆ

↓

೧. ಹಂಪೆಯ ವಿರೂಪಾಕ್ಷೇಶ್ವರ ದೇವಾಲಯ ರಂಗಮಂಟಪದ ಚಿತ್ರಗಳು
೨. ಹಂಪೆಯ ವಿರೂಪಾಕ್ಷ ದೇವಾಲದಯ ನಾಗಮಂಪಟದ ಭಿತ್ತಿಚಿತ್ರಗಳು
೩. ಹಂಪೆಯ ಕಲ್ಲಿನ ರಥದ ಮೇಲಿನ ವರ್ಣವಿನ್ಯಾಸಗಳು
೪. ಹಂಪೆಯ ಕಮಲ ಮಹಾಲಿನ ವರ್ಣವಿನ್ಯಾಸ
೫. ಆನೆಗುಂದಿ ಹುಚ್ಚಪ್ಪಯ್ಯನಮಠದ ಭಿತ್ತಿಚಿತ್ರಗಳು
೬. ಕನಕಗಿರಿ ದೇವಾಲಯದ ಭಿತ್ತಿಚಿತ್ರ / ಶಿಲ್ಪಗಳು
೭. ಕೆಂಚನಗುಡ್ಡದ ಗಂಗಾಧರೇಶ್ವರ ದೇವಾಲಯದ ಭಿತ್ತಿಚಿತ್ರಗಳು

ಆಧುನಿಕ ಭಿತ್ತಿಚಿತ್ರಕಲೆ

↓

೧. ಮ್ಯೂರಲ್ಸ್

ಶಿಷ್ಟತೆಯ ನೆಲೆಯಲ್ಲಿ ರೂಪಗೊಂಡ ಅಧ್ಯಯನಾತ್ಮಕವಾದ ಶ್ರೀಮಂತ ಸಂಪ್ರದಾಯದ ಚಿತ್ರಕಲೆಯೇ ಈ ಭಿತ್ತಿಚಿತ್ರಕಲೆಯಾಗಿದೆ.

ಈ ಕಲೆಯ ವೈಭವವು ಶಿಷ್ಟ ಶಿಸ್ತಿಗೆ ಒಳಪಡುವುದರಿಂದ ಈ ಚಿತ್ರಕಲೆಯು ಚಿತ್ರಕ್ಕೆ ಅನುಗುಣವಾಗಿ ಸಮಯ ತೆಗೆದುಕೊಳ್ಳುತ್ತದೆ. ಕಲಾವಿದನ ಪ್ರತಿಭೆ, ಮನೋಶ್ರೀಮಂತಿಕೆಯ ಆಂತರ್ಯ, ತಾಳ್ಮೆಯನ್ನು ಪರೀಕ್ಷಿಸುವ ಒಂದು ಕಲೆಯಂತಲೇ ಹೇಳಬಹುದು. ಬಳ್ಳಾರಿ ಜಿಲ್ಲೆಯ ಭಿತ್ತಿಚಿತ್ರ ಕಲೆ ಅಧ್ಯಯನದ ಅನುಕೂಲತೆಯ ದೃಷ್ಟಿಯಿಂದ ಈ ಕೆಳಗಿನಂತೆ ವಿಂಗಡಿಸಿಕೊಂಡು ವಿಶ್ಲೇಷಿಸಬಹುದಾಗಿದೆ.

೧. ದೇವಾಲಯಗಳಲ್ಲಿರುವ ಭಿತ್ತಿಚಿತ್ರಕಲೆ

೨. ಮಠಗಳಲ್ಲಿರುವ ಭಿತ್ತಿಚಿತ್ರಗಳು

ಈ ಶಿಷ್ಟ ಪರಂಪರೆಯ ಭಿತ್ತಿಚಿತ್ರ ಕರ್ನಾಟಕದಲ್ಲಿ ಎಂದಿನಿಂದ ಬೆಳವಣಿಗೆಗೆ ಬಂದಿತು ಎಂದು ಹೇಳುವುದು ಕಷ್ಟವಾದರೂ ಇದುವರೆಗೆ ಅಧ್ಯಯನ ನಡೆಸಿದ ಅಧ್ಯಯನಕಾರರ ಪ್ರಕಾರ ಬಾದಾಮಿಯ ವೈಷ್ಣವ ಗುಹೆಯ ಚಾಲುಕ್ಯರ ಭಿತ್ತಿಚಿತ್ರಗಳಿಂದ ಪ್ರಾರಂಭಿಸುವುದು ವಾಡಿಕೆ. ಆದರೆ ಸೂಕ್ಷ್ಮವಾಗಿ ಗಮನಿಸಿದಾಗ ಕರ್ನಾಟಕದ ಶಿಷ್ಟ ಪರಂಪರೆಯ ಭಿತ್ತಿಚಿತ್ರ ಕಲೆಯು ಇನ್ನೂ ಪುರಾತನವೆಂದೇ ಹೇಳುತ್ತಾರೆ. ಕ್ರಿ.ಪೂ. ೨ನೇ ಶತಮಾನದಿಂದ ಕ್ರಿ.ಶ. ೨ನೇ ಶತಮಾನದವರೆಗೆ ಆಳ್ವಿಕೆ ನಡೆಸಿದ ಶಾತವಾಹನರು ಆಳಿದ ಪ್ರದೇಶದ ಇಂದಿನ ಕರ್ನಾಟಕದ ಬಹುಭಾಗವನ್ನು ಒಳಗೊಂಡಿದ್ದು, ರಾಜಕೀಯ ಚಟುವಟಿಕೆಗಳನ್ನು ಆರಂಭಿಸಿದ ಪ್ರದೇಶವು ಕರ್ನಾಟಕದ ಆಂಧ್ರಗಡಿ ಪ್ರದೇಶವೆ ಆಗಿದೆ ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ.[೧]

ಕರ್ನಾಟಕದ ಬಳ್ಳಾರಿ, ಆಂಧ್ರಪ್ರದೇಶದ ಸ್ವಲ್ಪ ಭಾಗವನ್ನು ಸ್ಪಷ್ಟವಾಗಿ ಶಾತವಾಹನೀಹಾರ ಮತ್ತು ಶಾತವಾಹನೀ ರಾಷ್ಟ್ರವೆಂದು ಕರೆದಿರುವುದರಿಂದ ಈ ಪ್ರದೇಶದಿಂದಲೇ ಅವರ ರಾಜಕೀಯ ಚಟುವಟಿಕೆಗಳು ಆರಂಭವಾಗಿರಬಹುದು[೨] ಎಂದು ಅಭಿಪ್ರಾಯವಿದೆ. ಈ ದೃಷ್ಟಿಯಿಂದ ಶಾತವಾಹನರ ಕಲಾ ಕೊಡುಗೆಗಳು ಕರ್ನಾಟಕದ ಗಡಿಭಾಗಗಳಲ್ಲಿ ಆಳುತ್ತಿದ್ದ ಅರಸರ ರಚನೆಗಳಾಗಿವೆ ಎಂದು, ಈ ಶಾತವಾಹನರ ಕಾಲದಲ್ಲಿ ಅಜಂತಾ, ನಾಸಿಕ, ಬೆಡ್, ಬಾಜಾ, ಕೊಡಾನೆ, ಕಾರ್ಶಿ ಸ್ಥಳಗಳಲ್ಲಿ ಗುಹಾಲಯ ಭಿತ್ತಿಚಿತ್ರಗಳನ್ನು ಬರೆಸಲಾಗಿ, ಶಾತವಾಹನರು ಈ ಭಿತ್ತಿಚಿತ್ರಗಳನ್ನು ಕರ್ನಾಟಕದ ಗಡಿಭಾಗದ ದೊರೆಗಳ ರಚನೆಗಳೆಂದೇ ಪರಿಗಣಿಸಿ, ಕರ್ನಾಟಕದ ಭಿತ್ತಿಚಿತ್ರ ಕಲೆಯು ಪುರಾತನತೆಯ ಕ್ರಿ.ಶ. ೬ನೇ ಶತಮಾನದ ಚಾಲುಕ್ಯರ ಬಾದಾಮಿ ಭಿತ್ತಿಚಿತ್ರಗಳಿಂದ ಕ್ರಿ.ಪೂ. ೨ನೇ ಶತಮಾನದ ಶಾತವಾಹನರ ಅಜಂತಾ ಭಿತ್ತಿಚಿತ್ರಗಳವರೆಗೂ ಹಿಂದೆ ಹೋಗಲಾಗಿದ್ದ, ಶಾತವಾಹನರ ಕಾಲದ ಭಿತ್ತಿಚಿತ್ರಗಳ ಅಜಂತಾದಲ್ಲಿ ೯ ಮತ್ತು ೧೦ನೇ ಗುಹೆಯಲ್ಲಿ

---

೦೧. ಡಾ. ಯಾದಪ್ಪ ಪರದೇಶಿ : ಉತ್ತರಕರ್ನಾಟಕದ ಭಿತ್ತಿಚಿತ್ರಕಲೆ – ಒಂದು ಅಧ್ಯಯನ, (ಅ.ಪ್ರ.ಪಿಹೆಚ್.ಡಿ.ಮ.ಪ್ರ), ಪುಟ – ೪೩

೦೨. ಅದೇ., ಪುಟ – ೪೩

ರಚನೆಯಾಗಿರುವುದೆಂದು[೩] ವಿದ್ವಾಂಸರ ಅಭಿಪ್ರಾಯ. ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ ಇದರ ಪ್ರಾಚೀನತೆಯ ಪ್ರಾರಂಭ ನೋಡಿದರೆ ಪ್ರಾಗೈತಿಹಾಸಿಕ ಕಾಲಕ್ಕೆ ಕೊಂಡೊಯ್ಯುತ್ತದೆ.

ಬಳ್ಳಾರಿ ಜಿಲ್ಲೆಯ ಸಂಗನಕಲ್ಲಿನಲ್ಲಿ ಪ್ರಾಗೈತಿಹಾಸಿಕ ಮಾನವನ ನೆಲೆಯು ಇಡೀ ಕರ್ನಾಟಕದಲ್ಲೇ ಅತ್ಯಂತ ದೊಡ್ಡ ನೆಲೆಯಾಗಿತ್ತು. ಈ ನೆಲೆಯಲ್ಲಿ ಸಿಗುವಂತಹ ಕೆಲವು ವಿಶಿಷ್ಟ ಚಿತ್ರಗಳು ಎಲ್ಲೂ ಸಿಗುವುದಿಲ್ಲ. ಶಿಷ್ಟ ಭಿತ್ತಿಯ ಸಂಕೇತವಾದ ಎಲುಬು, ಹಲ್ಲಿನಿಂದ ತಯಾರಿಸಿದ ಹಾರ, ಮುಖವಾಡ, ನಾಯಿಕೊರಳಲ್ಲಿ ಬೆಲ್ಟ್, ಜಿಂಕೆಯ ಚಿತ್ರಕ್ಕೆ ಇಟ್ಟಂತಹ ಚುಕ್ಕೆ, ಹುಲಿಯ ಮೈಮೇಲಿನ ಪಟ್ಟಿಗಳು, ಕುದುರೆ ಸವಾರಿಯ ಅಲಂಕಾರ ವಿನ್ಯಾಸಗಳ ಸಂಜರಾಯನ ಕೋಟೆ, ಎತ್ತಿನಬೂದಿಹಾಳ, ಮಿಂಚೇರಿ, ಹಂಪಿ ಕಡೆಗಳಲ್ಲಿ ಪ್ರಾಗೈತಿಹಾಸಿಕ ಚಿತ್ರಗಳನ್ನು ಕಲಾಪ್ರತಿಭಾ ಅಭಿವೃದ್ಧಿಯ ಸಂಕೇತ ಎಂತಲೇ ಹೇಳಬಹುದು. ಜನಪದ ಭಿತ್ತಿಚಿತ್ರಕಲೆಯು ಇದರ ಮುಂದವರಿದ ಭಾಗ ಎಂದು ಹೇಳಬಹುದು. ಒಂದು ಶಿಷ್ಟತೆಯಿಂದ ಅಧ್ಯಯನ ಮೂಲಕ ಚಿತ್ರ ಬಿಡಿಸುವ ಕಲೆಗೆ ಶಿಷ್ಟ ಭಿತ್ತಿಚಿತ್ರಕಲೆ ಅಥವಾ ಸಾಂಪ್ರದಾಯಿಕ ಕಲೆ ಅಥವಾ ಪಾರಂಪರಿಕ ಕಲೆ ಎಂದು ಗುರುತಿಸಿಕೊಂಡಿತು. ಈ ಶಿಷ್ಟ ಕಲೆಯನ್ನು ಕುರಿತು ಸಾಹಿತ್ಯ ಗ್ರಂಥದಲ್ಲಿ ಉಲ್ಲೇಖವಿರುವುದು ತಿಳಿದುಬರುತ್ತದೆ.

ವಿಷ್ಣುಧರ್ಮೋತ್ತರ ಪುರಾಣದ[೪] ಚಿತ್ರ ಸೂತ್ರವು ಚಿತ್ರ ವಿಧಾನ ರಚನೆ ಬಗೆಗೆ ತಿಳಿಸುವ ಅತ್ಯುತ್ತಮ ಕೃತಿಯಾಗಿದೆ. ಅಭಿಲಷಿತಾರ್ಥ ಚಿಂತಾಮಣಿಯ ಚಿತ್ರ ಸೂತ್ರ, ನಗ್ನಜಿತನ ಚಿತ್ರ ಲಕ್ಷಣ[೫] ಕ್ರಿ.ಶ. ೧೦ನೇ ಶತಮಾನದಲ್ಲಿ ಶಿವಕೋಟ್ಯಾಚಾರ್ಯನು ರಚಿಸಿದ ವಡ್ಡಾರಾಧನೆ, ಪಂಪನು ಬರೆದ ವಿಕ್ರಮಾರ್ಜುನ ವಿಜಯ ಮತ್ತು ಆದಿಪುರಾಣ, ಪೊನ್ನಕವಿಯ ಶಾಂತಿಪುರಾಣ ಚಿತ್ರಪಟ, ಚಿತ್ರದ ರಸಭಾವ, ರೇಖೆ, ವರ್ಣಕ್ರಮ, ಚಿತ್ರದ ಆಯಾಮಗಳು, ಚಿತ್ರಶಾಲೆ, ಚಿತ್ರಕಲಾವಿದ್ಯೆ[೬] ಮುಂತಾದ ವಿವರ, ಉಲ್ಲೇಖ ಕಂಡುಬರುತ್ತದೆ. ಭಿತ್ತಿಚಿತ್ರ ರಚನಾ ವಿಧಿ ವಿಧಾನದಲ್ಲಿ ಕಲಾವಿದ ಚಿತ್ರ ಪರಿಕಲ್ಪನೆ, ಚಿತ್ರ ಪರಿಕರ, ಚಿತ್ರ ರಚನಾ ವಿಧಾನ, ಚಿತ್ರವಸ್ತು ವಿಷಯವಾಗಿ ಪ್ರಮುಖವಾದ ಅಂಶಗಳನ್ನು ಕಲಾವಿದನು ಹೊಂದಿರುತ್ತಾನೆ.

ಚಿತ್ರ ಪರಿಕಲ್ಪನೆ

೧. ಷಡಂಗಗಳು   ೨. ನಕ್ಷಾ ಮತ್ತು ರೇಖೆಯ ಪರಿಕಲ್ಪನೆ

೩. ಬಣ್ಣದ ಪರಿಕಲ್ಪನೆ   ೪. ತಾಳಮಾನ

ಚಿತ್ರ ಬಿಡಿಸುವ ಪೂರ್ವದಲ್ಲಿ ಕಲಾವಿದನ ಮನದಲ್ಲಿ ಒಂದು ಚಿತ್ರಣ ಮೂಡಿರುತ್ತದೆ. ಈ ಚಿತ್ರಣಕ್ಕೆ ಆಧಾರವಾಗಿ ಶಾಸ್ತ್ರೀಯವಾಗಿ ಹಿಂದಿನಿಂದ ಬಂದಂತಹ ಪದ್ಧತಿಯು ಕಲಾವಿದನಿಗೆ

೦೩. ಡಾ. ಯಾದಪ್ಪ ಪರದೇಶಿ : ಉತ್ತರಕರ್ನಾಟಕದ ಭಿತ್ತಿಚಿತ್ರಕಲೆ – ಒಂದು ಅಧ್ಯಯನ, (ಅ.ಪ್ರ.ಪಿಹೆಚ್.ಡಿ.ಮ.ಪ್ರ), ಪುಟ – ೪೪

೦೪. ಡಾ. ಅ. ಲ. ನರಸಿಂಹನ್ : ಕರ್ನಾಟಕ ಭಿತ್ತಿಚಿತ್ರಪರಂಪರೆ, ಪುಟ – ೨೦

೦೫. ಅದೇ., ಪುಟ – ೨೦

೦೬. ಡಾ. ಯಾದಪ್ಪ ಪರದೇಶಿ : ಉತ್ತರಕರ್ನಾಟಕದ ಭಿತ್ತಿಚಿತ್ರಕಲೆ – ಒಂದು ಅಧ್ಯಯನ, (ಅ.ಪ್ರ.ಪಿಹೆಚ್.ಡಿ.ಮ.ಪ್ರ), ಪುಟ – ೪೫

ಸಹಾಯ ಮಾಡುತ್ತದೆ. ವಿಷಯ ಶಾಸ್ತ್ರ ಸಮ್ಮತವಾಗಬೇಕಾದರೆ ಆ ದಿಸೆಯಲ್ಲಿ ಅದು ಸಾಕಷ್ಟು ಬೆಳೆದಿರಬೇಕಾದುದು ಅವಶ್ಯಕ.[೭] ಇದು ವ್ಯಾಪಕವಾಗಿ ಜನಸಾಮಾನ್ಯರ ದೈನಂದಿನ ಜೀವನದಲ್ಲಿಯೂ ಕಾಣಿಸಿಕೊಂಡಾಗ ಅವುಗಳ ಮೇಲೆ ಕೆಲವು ನಿಯಂತ್ರಣ ಹಾಕಲು ಅಥವಾ ಮುಂದಿನ ತಲೆಮಾರುಗಳಿಗೆ ಉಪಯೋಗವಾಗುವಂತೆ ಸುವರ್ಣ ಮಾಧ್ಯಮದಂತಹ ನೀತಿಯೊಂದನ್ನು ಅನುಸರಿಸಲು ಶಾಸ್ತ್ರಗ್ರಂಥಗಳು ತಳಹದಿಗಳನ್ನು ಹಾಕಿಕೊಡುತ್ತವೆ.[೮] ವಿಷ್ಣುಧರ್ಮೋತ್ತರ ಪುರಾಣ, ಟಿಬೇಟ್ ಭಾಷೆಯ ಚಿತ್ರಸೂತ್ರ, ಅಭಿಲಷಿತಾರ್ಥ ಚಿಂತಾಮಣಿ, ಶ್ರೀ ಕುಮಾರ ೧೬ನೇ ಶತಮಾನದಲ್ಲಿ ಬರೆದ ಶಿಲ್ಪರತ್ನದ ಒಂದು ಭಾಗ ಚಿತ್ರಲಕ್ಷಣ ಎಲ್ಲವು ಚಿತ್ರಕಲೆಯನ್ನು ಕುರಿತು ಹಲವಾರು ಅಧ್ಯಾಯಗಳನ್ನು ಮೀಸಲಿರಿಸಿರುವುದುಂಟು.[೯] ಈ ಶಿಷ್ಟ ಸಂಪ್ರದಾಯದ ಭಿತ್ತಿಚಿತ್ರಗಳಲ್ಲಿ ಪೌರಾಣಿಕ ಮತ್ತು ಧರ್ಮಕ್ಕೆ ಸಂಬಂಧಿಸಿದಂತೆ ಸಾಮಾನ್ಯವಾಗಿ ಚಿತ್ರಕಲೆಯ ಸೃಷ್ಟಿ, ಉದ್ದೇಶ, ಷಡಂಗಗಳು, ಭಿತ್ತಿಯ ತಯಾರಿಕೆ, ಕುಂಚಗಳ ವೈವಿಧ್ಯ ಮತ್ತು ತಯಾರಿಕೆ, ಬಣ್ಣಗಳ ಬಳಕೆ ಹಾಗೂ ಮಿಶ್ರಬಣ್ಣಗಳು, ದೇವ ಮಾನವ, ಪಶು ಪಕ್ಷಿಗಳ ವೈವಿಧ್ಯ, ಆಕೃತಿಯ ಲಕ್ಷಣಗಳು, ಆಯುಧ ಆಭರಣ ಇತ್ಯಾದಿಗಳ ಶಾಸ್ತ್ರ ಗ್ರಂಥಗಳ ಕೆಲವು ಭಾಗವಾಗಿ ವಿವರಗಳು ಸಿಗುತ್ತವೆ. ಈ ಶಾಸ್ತ್ರ ಗ್ರಂಥಗಳ ನೆಲೆಯಲ್ಲಿ ರಚನೆಗೊಂಡಂತಹ ಚಿತ್ರಗಳಿಗೆ ಹಂಪೆ ಭಿತ್ತಿಚಿತ್ರಗಳು ಒಂದು ಒಳ್ಳೆಯ ಉದಾಹರಣೆಯಾಗಿವೆ.

ಚಿತ್ರ ಪರಿಕರಗಳು

ಭಿತ್ತಿಚಿತ್ರ ರಚನೆಯಲ್ಲಿ ಪರಿಕರವು ಅಷ್ಟೇ ಮುಖ್ಯವಾದದ್ದಾಗಿದೆ. ತಾಯಿಯಂತೆ ಮಗಳು, ನೂಲಿನಂತೆ ಸೀರೆ ಎನ್ನುವ ಗಾದೆಯಂತೆ ಚಿತ್ರಪರಿಕರದಂತೆ ಚಿತ್ರ ಎನ್ನಬಹುದು. ಪರಂಪರಾಗತವಾಗಿ ಭಿತ್ತಿಚಿತ್ರಗಳು ಪರಿಕರಗಳ ವಿಶಿಷ್ಟತೆಯನ್ನು ಮೆರೆದಿವೆ ಎನ್ನಬಹುದು. ಈ ಪರಿಕರಿಗಳಿಗೆ ಸಂಬಂಧಿಸಿದಂತೆ ಶಾಸ್ತ್ರೀಯ ಗ್ರಂಥಗಳಲ್ಲಿ ಅಲ್ಪಸ್ವಲ್ಪ ಉಲ್ಲೇಖಗಳು ಸಿಗುತ್ತವೆ.

ಭಿತ್ತಿಚಿತ್ರ ರಚನಾ ಪರಿಕರ

೧. ಬಣ್ಣ ೨. ವರ್ತಿಕ ಮತ್ತು ಕುಂಚ ೩. ಬಣ್ಣ ಮಿಶ್ರಗೊಳಿಸುವ ತಟ್ಟೆ

೧. ಬಣ್ಣ

ಪ್ರಾಗೈತಿಹಾಸಿಕ ಕಾಲದಲ್ಲಿ ಪ್ರಮುಖವಾಗಿ ಕೆಂಪು, ಕಡುಕೆಂಪುಬಣ್ಣವನ್ನು ಮಾತ್ರ ಬಳಕೆಯಲ್ಲಿ ನೋಡುತ್ತೇವೆ. ಕ್ರಮೇಣ ಇತಿಹಾಸ ಪ್ರಾರಂಭಿಕ ಹಂತದಲ್ಲಿ ಬಿಳಿ, ಹಸಿರು, ಹಳದಿ ಬಣ್ಣಗಳು ಬಳಕೆಯಲ್ಲಿ ಬಂದಿರುವುದನ್ನು ನೋಡುತ್ತೇವೆ. ಹಾಗೆಯೇ ಜನಪದರಲ್ಲಿ ಹೆಚ್ಚಾಗಿ ಪ್ರಥಮ ವರ್ಗದ ಬಣ್ಣಗಳಾದ ಕೆಂಪು ನೀಲಿ ಹಳದಿ ಬಣ್ಣದ ಲೇಪನವನ್ನು ನೋಡುತ್ತೇವೆ. ಶಿಷ್ಟತೆಯಿಂದ

---

೦೭. ಡಾ. ಅ. ಲ. ನರಸಿಂಹನ್ : ಕರ್ನಾಟಕ ಭಿತ್ತಿಚಿತ್ರಪರಂಪರೆ, ಪುಟ – ೧೦

೦೮. ಅದೇ., ಪುಟ – ೧೦

೦೯. ಅದೇ., ಪುಟ – ೧೦

ಕೂಡಿದ ಚಿತ್ರಕಲೆಯಲ್ಲಿ ಪಂಚಬಣ್ಣಗಳನ್ನು ಕಾಣಬಹುದು. ಇತಿಹಾಸ ಪೂರ್ವ ಪ್ರಾರಂಭಿಕ ಇತಿಹಾಸದಲ್ಲಿ ಯಾವ ರೀತಿಯಲ್ಲಿ ವರ್ಣ ತಯಾರಿಸಿಕೊಳ್ಳುತ್ತಿದ್ದರೆಂಬುದರ ಕುರಿತು ಹೆಚ್ಚಿನ ಅಂಶಗಳು ತಿಳಿದುಬರುವುದಿಲ್ಲ. ಆದರೂ ಬಣ್ಣಗಳನ್ನು ಲೋಹದ ಆಕ್ಸೈಡ್, ಇದ್ದಿಲು ಮತ್ತು ಪ್ರಾಣಿಗಳ ಕೊಬ್ಬಗಳಿಂದ ತಯಾರಿಸುತ್ತಿದ್ದರೆಂದು ಹೇಳುವ ಅ. ಸುಂದರ ಅವರು ಕೆಲವು ಬಣ್ಣಗಳನ್ನು ಕೆಮ್ಮಣ್ಣಿನ ಪುಡಿ, ಪ್ರಾಣಿಗಳ ಬಹುಮಟ್ಟಿಗೆ ಹಂದಿಯ ರಕ್ತ, ಪಕ್ಷಿಗಳ ಮೊಟ್ಟೆಯ ಬಿಳಿಯ ತಿರುಳು ಹಾಗೂ ಎಲುಬಿನ ಪುಡಿ ಇವುಗಳನ್ನು ಹದವಾಗಿ ಬೆರೆಸಿ ಮಾಡಿರಬೇಕೆಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಮಧ್ಯಪ್ರದೇಶದ ಬಿಂಬೇಟ್ಕ ಹಾಗೂ ಇತರ ಶಿಲಾಶ್ರಯದ ಚಿತ್ರಗಳಲ್ಲಿ ಹಸಿರು ಬಣ್ಣದಲ್ಲಿ ಬರೆದ ಚಿತ್ರಗಳು ಕಾಲಮಾನ ದೃಷ್ಟಿಯಿಂದ ತೀರಾ ಹಳೆಯವೆಂದೂ, ಶಿಲಾಯುಗಕ್ಕೆ ಹೋಗುತ್ತವೆ ಎಂದು ವಿ.ಎಸ್. ವಾಕಣಕರ್ ಅವರ ಅಭಿಪ್ರಾಯವಾಗಿದೆ. ಈ ಮಾತಿಗೆ ನಿದರ್ಶನವೆಂಬುವಂತೆ ಬಳ್ಳಾರಿ ಕೋಟೆಗುಡ್ಡದಲ್ಲಿ ನವಿಲಿನ ಚಿತ್ರದಲ್ಲಿ ಕಲಾವಿದನು ಯಥಾಪ್ರಕಾರ ಬಣ್ಣವನ್ನು ಬಳಸಿದ್ದಾನೆ. ಅಲ್ಲಿ ನವಿಲು ಚಿತ್ರದಲ್ಲಿ ನವಿಲುಗರಿಗಳಿಗೆ ಹಸಿರು ಬಣ್ಣ ಹಾಕಲು ಪ್ರಯತ್ನಿಸಿದ್ದಾನೆ. ಪ್ರಾಗೈತಿಹಾಸಿಕ ಚಿತ್ರಗಳಲ್ಲಿ ಅಷ್ಟಾಗಿ ಬಣ್ಣಗಳ ಬಳಕೆ ಮಸಕು ಪಂಚವರ್ಣ ಪ್ರಾರಂಭಿಕ ಹಂತವೆಂದೇ ಹೇಳಬಹುದು. ಬಳ್ಳಾರಿಯ ಕೋಟೆಯಲ್ಲಿ ಕೊಬ್ಬು ಮಿಶ್ರಿತ ಬಿಳಿವರ್ಣ ಚಿತ್ರದ ಸುತ್ತಲೂ ಕೊಬ್ಬಿನ ಜಿಗಿಟಾದ ಪದಾರ್ಥ ಎಣ್ಣೆ ಗೋಚರಿಸುತ್ತದೆ. ಇನ್ನೂ ವಿವಿಧ ವರ್ಣಗಳ ತಯಾರಿಕಾ ವಿಧಾನವನ್ನು ಶಿಷ್ಟ ಪದ್ಧತಿಯ ಚಿತ್ರಕಲೆಯಲ್ಲಿ ನೋಡಬಹುದು.

ವರ್ಣಗಳ ಬಗೆಗೆ ಶಾಸ್ತ್ರೀಯ ಗ್ರಂಥಗಳಲ್ಲಿಯೂ ಉಲ್ಲೇಖಗಳು ಕಂಡುಬರುತ್ತವೆ. ಬಿಳುಪು, ಹಳದಿ, ಕೆಂಪು, ಕಪ್ಪು ಹಾಗೂ ನೀಲಿ ಎಂದು ಐದು ವಿಧಗಳ ವರ್ಣವಿರುವುದಾಗಿ ವಿಷ್ಣುಧರ್ಮೋತ್ತರ ಗ್ರಂಥದಲ್ಲಿ ಉಲ್ಲೇಖವಿದೆ. ಯಾವ ಯಾವ ವರ್ಣ ಮಿಶ್ರಮಾಡಿದರೆ ಪಡೆಯಬಹುದಾದ ಮೂರನೆಯ ವರ್ಣವಾಗುವುದೆಂಬುದರ ವಿಷಯವನ್ನು ಶಿಲ್ಪರತ್ನದಲ್ಲಿ ಪ್ರಸ್ತಾಪಿಸುತ್ತಾ, ಬಿಳುಪು ಹಳದಿಗಳಿಂದ ಸೌರ ವರ್ಣವೂ ಬಿಳಿ ಮತ್ತು ಕಪ್ಪುಗಳಿಂದ ಗಜವರ್ಣವು ಆಗುತ್ತದೆಂದು ಹೇಳಿದೆ. ಅಲ್ಲದೇ ಕ್ರಿಸ್ತಶಕದ ಪ್ರಾರಂಭದ ಹಂತದ ಗ್ರಂಥ ಬೃಹತ್ ಸಂಹಿತಾ, ನಗ್ನಜಿತನ ಚಿತ್ರಲಕ್ಷಣ, ಅಭಿಲಷಿತಾರ್ಥ ಚಿಂತಾಮಣಿ, ನಾರದ ಶಿಲ್ಪ, ಸಮರಾಂಗಣ ಸೂತ್ರಧಾರ, ಶಿವತತ್ವರತ್ನಾಕರ, ಪಂಚದಶಿ, ಕಾಮಸೂತ್ರ, ಕನ್ನಡದ ಶಾಸ್ತ್ರೀಯ ಗ್ರಂಥಗಳಾದ ಆದಿಪುರಾಣ, ವಿಕ್ರಮಾರ್ಜುನ ವಿಜಯ, ಶಾಂತಿನಾಥಪುರಾಣ, ಗಿರಿಜಾ ಕಲ್ಯಾಣ, ಮಲ್ಲಿನಾಥ ಪುರಾಣ, ಚಂದ್ರ ಪ್ರಭಾಪುರಾಣ, ಶ್ರೀ ತತ್ವನಿಧಿ ಮೊದಲಾದವುಗಳಲ್ಲಿ ಬಣ್ಣದ ಬಗ್ಗೆ ಸಾಕಷ್ಟು ವಿವರಗಳಿರುವುದು ತಿಳಿದುಬರುತ್ತದೆ. ಕಲೆ ಬೆಳವಣಿಗೆಯ ಜೊತೆಯಲ್ಲಿಯೇ ಬಣ್ಣ ತಯಾರಿಕಾ ಪ್ರಯೋಗವನ್ನು ಸಹ ಕಲಾವಿದನು ಬೆಳೆಸಿಕೊಳ್ಳುತ್ತಾ ಬಂದಿದ್ದಾನೆ. ಇಲ್ಲಿ ಬಣ್ಣ ತಯಾರಿಕೆಯ ಕೆಲವು ವಿಧಗಳನ್ನು ನೋಡಬಹುದು.

೧. ಖನಿಜಮೂಲ ಬಣ್ಣಗಳು
೨. ಪ್ರಾಣಿಮೂಲ ಬಣ್ಣಗಳು
೩. ಸಸ್ಯಮೂಲ ಬಣ್ಣಗಳು
೪. ಲೋಹಮೂಲ ಬಣ್ಣಗಳು
೫. ರಾಸಾಯನಿಕ ಮೂಲ ಬಣ್ಣಗಳು

೧. ಖನಿಜ ಮೂಲ ಬಣ್ಣಗಳು

ಭೂಮಿಯಿಂದ ದೊರೆಯುವ ಅಂದರೆ ಕಲ್ಲು, ಮಣ್ಣು, ಆದಿರುಗಳಿಂದ ಪಡೆಯುವ ಬಣ್ಣಗಳು ಖನಿಜಮೂಲದ ಬಣ್ಣಗಳಾಗಿವೆ. ಆದಿಮಾನವನು ಹುರಿಮಂಜು, ಕೆಮ್ಮಣ್ಣಿನಿಂದ ಬಣ್ಣವನ್ನು ತಯಾರಿಸಿ ಚಿತ್ರ ರಚಿಸುತ್ತಿದ್ದ ಎನ್ನುವುದು ವಿದ್ವಾಂಸರ ಅಭಿಪ್ರಾಯವಾಗಿದೆ. ಈ ಮಾತಿನ ನಿದರ್ಶವೆಂಬುವಂತೆ ಸಂಗನಕಲ್ಲು, ಹಂಪಿ, ಕಮಲಾಪುರದ ಏಕಶಿಲೆ, ಬಳ್ಳಾರಿ ಕೋಟೆ, ಮುಂತಾದ ಸ್ಥಳಗಳಲ್ಲಿ ಈಗಲೂ ಕಾಣಬಹುದು. ಸುಣ್ಣದಿಂದ ಭಿತ್ತಿ ತಯಾರಿಸಿಕೊಂಡು ಚಿತ್ರ ಬರೆಯುವಂಥ ಪದ್ಧತಿಯೂ ವಿರೂಪಾಕ್ಷ ದೇವಾಲಯದ ಮೇಲ್ಛಾವಣಿಯ ಉದಾಹರಣೆಯಾಗಿದೆ. ಅಜಂತೆಯಲ್ಲಿ ಹಳದಿಯನ್ನು, ಧಾರವಾಡ, ಬೆಳಗಾವಿ ಪ್ರದೇಶದಲ್ಲಿ ದೊರೆಯುವ ಮುಲ್ತಾನಿ ಎಂಬ ಮಣ್ಣಿನಿಂದಲೂ, ಕೆಂಪನ್ನು ಕಾವಿ ಅಥವಾ ಉರಿಮಂಜನ್ನು ತಯಾರಿಸಿಕೊಂಡಿರುವುದಾಗಿ ಬಾಲಸಾಹೇಬರು ತಿಳಿಸುತ್ತಾರೆ. ಕಬ್ಬಿಣದ ಭಸ್ಮಗಳೊಡನೆ ಬೆಣಚುಕಲ್ಲಿನ ಖನಿಜಗಳನ್ನು ಕೂಡಿಸಿ ಆಕರ್ಸ್ ರೀತಿಯ ಬಣ್ಣ ತಯಾರಿಸುತ್ತಿದ್ದು, ಮ್ಯಾಂಗನೀಸ್ ಭಸ್ಮ ಬೆಣಚುಕಲ್ಲಿನ ಖನಿಜದೊಡನೆ ಸೇರಿಸಿ ಸಿನ್ನಾಬ್ಜ್ ತಯಾರಿಸುವುದರ ಬಗ್ಗೆ ವಿದ್ವಾಂಸರ ಅಭಿಪ್ರಾಯವಾಗಿದೆ.

೨. ಪ್ರಾಣಿಮೂಲ ಬಣ್ಣಗಳು

ಪ್ರಾಣಿಮೂಲದಿಂದ ಪಡೆಯುವ ಬಣ್ಣವೆಂದರೆ ಪ್ರಮುಖವಾಗಿ ಕೆಂಪುಬಣ್ಣವು ಆದಿಮ ಪ್ರಾಣಿಗಳಿಂದ ಪಡೆದುಕೊಳ್ಳುವ ಬಣ್ಣ ಮಾನವ ಕಂಡುಕೊಂಡ ಪ್ರಥಮ ಬಣ್ಣ ಎಂತಲೇ ಹೇಳಬಹುದು. ಒಂದು ಜಾತಿಯ ಕಾಚಿನೀಲಿ ಎಂಬ ಕೀಟದಿಂದ ಕಡುಗೆಂಪು ಅಥವಾ ರಕ್ತವರ್ಣವನ್ನು ತಯಾರಿಸುವುದಾಗಿ ಅಭಿಪ್ರಾಯಗಳಿವೆ. ಸುಮಾರು ೬೦,೦೦೦ ವರ್ಷಗಳ ಪೂರ್ವದಲ್ಲಿಯೇ ಮೇಡಿಟೆರೇನಿಯಂ ಸಮುದ್ರತೀರದ ಜನರು ಮುರೆಕ್ಸ್ ಎಂಬ ಪುಟ್ಟ ಮೃದ್ವಂಗಿ ಜಾತಿಯ ಚಿಪ್ಪುಮೀನಿನಿಂದ ಪರ್ಪಲ್ ವರ್ಣವನ್ನು ಮತ್ತು ದಕ್ಷಿಣ ಅಮೇರಿಕಾದ ಮೆಕ್ಸಿಕೋದಲ್ಲಿ ಲಭ್ಯವಿರುವ ಕ್ಯಾಕಸ್ ಕಾರ್ಪೆ ಎಂಬ ಕೀಟದಿಂದ ಕೇಸರಿ ಬಣ್ಣವನ್ನು ಪಡೆಯುತ್ತಿದ್ದರು ಎಂದು ಹೇಳುತ್ತಾರೆ. ಪ್ರಾಣಿಮೂಲ ಬಣ್ಣಗಳು, ಸಸ್ಯಮೂಲ ಬಣ್ಣಕ್ಕಿಂತಲೂ ಕಡಿಮೆ ಎನ್ನಬಹುದು.

೩. ಸಸ್ಯಮೂಲ ಬಣ್ಣಗಳು

ಸಾಮಾನ್ಯವಾಗಿ ಎಲೆ, ಹೂ, ಬೇರು ಮತ್ತು ಹಣ್ಣುಗಳನ್ನು ಕುಟ್ಟಿ, ಅವುಗಳಿಂದ ಬಂದ ರಸದಿಂದ ಬಣ್ಣ ಎಂದು ಕೈಗಳಿಗೆ ಹಚ್ಚಿಕೊಂಡು ಸಂಭ್ರಮಿಸಿ ಆಟ ಆಡುವುದನ್ನು ಕಾಣಬಹುದು ಮತ್ತು ಶಾಲೆಯಲ್ಲಿ ತೊಂಡೆ ಎಲೆಗಳಿಂದ ಕರಿಹಲಗೆಯನ್ನು ಮತ್ತಷ್ಟು ಕಪ್ಪಾಗಿ ಕಂಗೊಳಿಸುವುದು.

ಅರಿಶಿಣದ ಪುಡಿಯೊಂದಿಗೆ ಸುಣ್ಣ ಬೆರೆಸಿ ಕೆಂಪು ನೀರು ತಯಾರಿಸಿ ಮದುವೆಗಳಲ್ಲಿ ದೃಷ್ಟಿ ತೆಗೆಯುವುದನ್ನು ಸಾಮಾನ್ಯವಾಗಿ ಕಾಣುತ್ತೇವೆ. ಆದರೆ ಅಷ್ಟಕ್ಕೆ ಅವಶ್ಯಕತೆಗೆ ಸೀಮಿತವಾದರೂ ಚಿತ್ರಕಲೆಯ ಪರಿಪೂರ್ಣತೆಯ ದೃಷ್ಟಿಯಿಂದ ಸಸ್ಯಮೂಲಕ ಎಲ್ಲಾ ಬಣ್ಣಗಳನ್ನು ಪಡೆದುಕೊಳ್ಳುವುದಕ್ಕಾಗಿ ವಿದ್ವಾಂಸರು ಹಲವು ಪ್ರಯೋಗಗಳೊಂದಿಗೆ ಬಣ್ಣವನ್ನು ಕಂಡು ಕೊಂಡಿದ್ದಾರೆ.

ಈ ನೆಲೆಯಲ್ಲಿ ನೋಡಿದಾಗ ಸಸ್ಯಮೂಲ ಬಣ್ಣಗಳ ಬಗ್ಗೆ ಪ್ರಾಚೀನ ಶಾಸ್ತ್ರೀಯ ಗ್ರಂಥಗಳಲ್ಲಿಯೂ ಉಲ್ಲೇಖವಿರುವುದು ಕಂಡುಬರುತ್ತದೆ. ಪತಂಗದ ಮರ, ಚಂದನಮರ, ಮದರಂಗಿಯ ಎಲೆ, ಅಡಕೆ, ಮುತ್ತುಗದ ಬೇರು, ಅದರ ಹೂ, ಬಂಗಾರಕಾಯಿ, ಅರಿಶಿಣದ ಗಡ್ಡೆ, ಕರಿಜಾಲಿಯ ಚಕ್ಕೆ, ಕುಂಕುಮದ ಹೂ, ಪಾರಿಜಾತದ ಹೂ, ನೀಲಿಯ ಸೊಪ್ಪು, ಹಾಲೆಮರ, ಕಾಚಿನ ಮರ, ಗೇರುಬೀಜ, ನೆಲ್ಲಿಚಕ್ಕೆ, ಬಸರಿಮರದ ಬೇರು, ಬಿಲ್ವಪತ್ರೆ, ರತ್ನಗಂಧಿಮರ, ಇತ್ಯಾದಿ ಸಸ್ಯ-ಮರಗಳಿಂದ ಬಣ್ಣವನ್ನು ತಯಾರಿಸುತ್ತಿದ್ದರು ಎನ್ನುವ ಅಭಿಪ್ರಾಯವಿದೆ. ಅಕ್ಕಿ ಪುಡಿಯಿಂದ ರಂಗೋಲಿಯನ್ನು ಹಾಕುವುದು ಕೇಳಿದ್ದೇವೆ. ಆದರೂ ಹಸೆಮಣೆ ಅಥವಾ ಕಂಬಳಿ ಹಾಕಿ ಅದರ ಮೇಲೆ ಅಕ್ಕಿಯಿಂದ ಹಸೆಯನ್ನು ಬರೆಯುವುದು ಬಳ್ಳಾರಿ ಜಿಲ್ಲೆಯಲ್ಲಿ ಸರ್ವೇಸಾಮಾನ್ಯವಾಗಿ ಉಳಿಸಿಕೊಂಡು ಬಂದಂತಹ ಪದ್ಧತಿಯಾಗಿದೆ. ಮತ್ತು ನಸು ಹಳದಿಯ ಹೂವು ಬಿಡುವ ಒಂದು ಜಾತಿಯ ಆಡರುಬಳ್ಳಿಯ ಬೇರುಗಳಿಂದ ಮ್ಯಾಡರ್ ವರ್ಣವನ್ನು ತಯಾರಿಸುವರೆಂದು ವಿದ್ವಾಂಸರ ಅಭಿಪ್ರಾಯವಿದೆ.

ಗಿಡದಿಂದ ಉತ್ಪತ್ತಿ ಆಗುವ ನೀಲಿಗೆ ಭಾರತ ಮೊದಲಿನಿಂದಲೂ ಪ್ರಸಿದ್ಧವಿದ್ದು, ಈಜಿಪ್ತಿನ ಕೆಲವು ಮಮ್ಮಿಗಳಿಗೆ ಸುತ್ತಿದ ಬಟ್ಟೆಗೆ ಬಳಿಸಿದ ನೀಲಿ ಭಾರತದ್ದೆಂದು ಹೇಳಿಕೆಯಿದೆ. ಇಂದಿಗೂ ಗಿಡದ ನೀಲಿಬಣ್ಣವನ್ನು ಬಿಳಿಯ ಬಟ್ಟೆಗಳಿಗೆ ತೆಳುವಾಗಿ ನೀಲಿ ಕೊಡಲು ಬಳಸುತ್ತಾ ಬಂದಿರುವುದನ್ನು ನಾವು ಕಾಣಬಹುದಾಗಿದೆ. ಏನೇ ಆದರೂ ಸಸ್ಯಮೂಲ ವರ್ಣವು ಎಲ್ಲಾ ಮೂಲ ವರ್ಣಕ್ಕಿಂತ ಶ್ರೇಷ್ಠವಾದುದು ಮತ್ತು ದೀರ್ಘವಾಗಿ ಉಳಿಯುವಂಥದ್ದಾಗಿದೆ. ಇದಕ್ಕೂ ದೀರ್ಘವಾಗಿ ಖನಿಜಮೂಲ ಬಣ್ಣವು ಉಳಿಯುತ್ತದೆ ಎಂದು ವಿದ್ವಾಂಸರ ಅಭಿಪ್ರಾಯವಿದೆ.

೪. ಲೋಹ ಮೂಲದ ಬಣ್ಣಗಳು

ಬಂಗಾರ, ಬೆಳ್ಳಿ, ತಾಮ್ರ, ಅಭ್ರಕ, ಸೀಸಗಳಂತಹ ಲೋಹಗಳಿಂದ ಬಣ್ಣಗಳನ್ನು ಪಡೆಯುವುದಾಗಿ ಹೇಳಲಾಗಿದೆ. ವಿಷ್ಣುಧರ್ಮೋತ್ತರ, ಮಾನಸೋಲ್ಲಾಸ ಮತ್ತು ಶಿಲ್ಪರತ್ನ ಗ್ರಂಥಗಳಲ್ಲಿ ಬಂಗಾರದ ಪುಡಿಯನ್ನು ವಜ್ರಲೇಪನದೊಡನೆ ಬೆರೆಯಿಸಿ ಚಿತ್ರ ರಚನೆಗೆ ಉಪಯೋಗಿಸುವುದಾಗಿ ಮತ್ತು ಶಿವತತ್ವರತ್ನಾಕರವು ಶುದ್ಧ ಚಿನ್ನವನ್ನು ಚೆನ್ನಾಗಿ ಅರೆದು ಕಂಚಿನ ಪಾತ್ರೆಯಲ್ಲಿ ಹಾಕಿ ಪದೇ ಪದೇ ಕರಗಿಸಬೇಕು. ನೀರಿನಲ್ಲಿ ಆ ಪುಡಿಯನ್ನು ಚೆನ್ನಾಗಿ ಕದಡಿ ಸ್ವಲ್ಪ ಹೊತ್ತು ಬಿಟ್ಟು

ನಂತರ ಮೇಲೆ ತೇಲುವ ತೆಳುವಾದ ನೀರನ್ನು ಬಸಿದು ಚೆಲ್ಲಬೇಕು. ಹೀಗೆ ಗಟ್ಟಿಯಾದ ಮಿಶ್ರಣವನ್ನು ವಜ್ರಲೇಪದೊಡನೆ ಬೆರೆಸಿ ತಯಾರಿಸುವುದಾಗಿ ತಿಳಿಯುತ್ತದೆ. ಇಂದು ಗೋಲ್ಡ್‌ಲೀಫ್ ಎಂದು ಸಾಂಪ್ರದಾಯಿಕ ಚಿತ್ರಗಳಲ್ಲಿ ಉಪಯೋಗಿಸುವುದು ಕೂಡ ತೆಳುವಾದ ಬಂಗಾರ ತಗಡುಗಳಾಗಿವೆ.

೫. ರಾಸಾಯನಿಕ ಬಣ್ಣಗಳು

ಕ್ರಿ.ಶ. ೧೯ನೇ ಶತಮಾನದಿಂದ ಭಿತ್ತಿಚಿತ್ರ ರಚನೆಯಲ್ಲಿ ರಾಸಾಯನಿಕ ಬಣ್ಣಗಳ ಬಳಕೆ ಅಧಿಕಗೊಂಡಿತು ಎಂದು ಹೇಳುತ್ತಾರೆ. ಪಾಶ್ಚಾತ್ಯರ ಸಂಪರ್ಕದಿಂದ ರಾಸಾಯನಿಕವಾಗಿ ತಯಾರಿಸಿದ ಜಲವರ್ಣ, ತೈಲವರ್ಣಗಳು ಭಾರತವನ್ನು ಪ್ರವೇಶಿಸಿದವು ಎನ್ನಲಾಗಿದೆ. ಇಂದು ತೈಲವರ್ಣವನ್ನು ಸಾಂಪ್ರದಾಯಿಕ ಚಿತ್ರಗಳಲ್ಲಿ ಕಲಾವಿದನು ಉಪಯೋಗಿಸುವುದು ಸರ್ವೇಸಾಮಾನ್ಯವಾಗಿದೆ.

ಮೂಲ ಬಣ್ಣಗಳು

ಇಂದು ಮೂಲ ಬಣ್ಣ, ಪ್ರಥಮ ವರ್ಗದ ಬಣ್ಣ (primary colours) ಎನಿಸಿಕೊಳ್ಳುವ ಬಣ್ಣಗಳೆಂದರೆ ಕೆಂಪು, ನೀಲಿ, ಹಳದಿ ಬಣ್ಣಗಳು ಭಾರತೀಯ ಮೂಲ ಬಣ್ಣಗಳಾದ[೧೦] ಕೆಂಪು, ನೀಲಿ, ಹಳದಿ, ಕಪ್ಪು, ಬಿಳುಪು. ಇವು ಪಂಚವರ್ಣಗಳೆಂದೆನಿಸಿಕೊಳ್ಳುತ್ತವೆ. ಭಾರತೀಯ ಆಚರಣೆಗಳಲ್ಲಿ ಕೆಲವು ಆಕೃತಿಗಳು ರಚನೆಯಾಗುತ್ತಿದ್ದು ಅವು ಪಂಚವರ್ಣಗಳಲ್ಲೇ ಇರುವುದು ಕಂಡುಬರುತ್ತವೆ. ಪಂಚವರ್ಣ, ಪಂಚವಣ್ಣಿಗೆ ಎಂಬ ಪದಗಳು ಕಾವ್ಯಗಳಲ್ಲಿ ಪ್ರಯೋಗವಾಗಿದ್ದು ಪಂಚವರ್ಣದ ಇತಿಹಾಸವನ್ನು ಕ.ವೆಂ. ರಾಜಗೋಪಾಲ ಅವರು ಗುರುತಿಸಿದ್ದಾರೆ.[೧೧] ಹಂಪೆಯ ಭಿತ್ತಿಚಿತ್ರವನ್ನು ಗಮನಿಸಿದಾಗ ಪಂಚವರ್ಣವನ್ನೇ ಹೆಚ್ಚಾಗಿ ಬಳಸಲಾಗಿದೆಂದು ತಿಳಿದುಬರುತ್ತದೆ.

ಬಿಳಿಪು

ಬಿಳಿಮಣ್ಣು ಮತ್ತು ಶಂಖದ ಬಿಳಿ, ಈ ಎರಡೂ ಬಿಳಿಗಳನ್ನು ಭಿತ್ತಿಚಿತ್ರಗಳಲ್ಲಿ ಉಪಯೋಗಿಸುವುದರ ಬಗೆಗೆ ಅಜಂತಾ ಹಾಗೂ ದಕ್ಷಿಣ ಭಾರತೀಯ ಭಿತ್ತಿಚಿತ್ರಗಳ ರಾಸಾಯನಿಕ ಪ್ರಯೋಗದಿಂದ ಖಚಿತಪಡಿಸಿಕೊಳ್ಳಲಾಗಿದ್ದು ಕಶ್ಯಪ ಶಿಲ್ಪಶಾಸ್ತ್ರದ ವರ್ಣಸಂಸ್ಕಾರ ಲಕ್ಷಣ ಎಂಬ ಅಧ್ಯಾಯದಲ್ಲಿ ಬಿಳಿವರ್ಣದ ಅದರ ವೈವಿಧ್ಯದ ಕುರಿತು ವಿವರಗಳಿವೆ. ಬಿಳಿ ವರ್ಣದಲ್ಲಿ ಶ್ವೇತ, ಶುಕ್ಲ, ಧವಳ, ಅವಧಾತ ಎಂಬ ನಾಲ್ಕು ಬಗೆಗಳಿವೆ.[೧೨] ಮತ್ತು ವಿಷ್ಣುಧರ್ಮೋತ್ತರದಲ್ಲಿ ಪ್ರಸ್ತಾಪಿತಗೊಂಡ ಮುಖ್ಯ ಬಿಳಿ ವರ್ಣಗಳು: ಬಂಗಾರದ ಬಿಳಿ, ಆನೆಯ ದಂತದ ಬಿಳಿ, ಗಂಧದ ಬಿಳಿ, ಶರದೃತುವಿನ ಮೋಡದ ಬಿಳಿ ಮತ್ತು ಚಂದಿರನ ಬಿಳಿಗಳೆಂದು ಐದು ವಿಧದ

---

೧೦. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ – ೩೩೩

೧೧. ಡಾ. ಅ. ಲ. ನರಸಿಂಹನ್ : ಕರ್ನಾಟಕ ಭಿತ್ತಿಚಿತ್ರಪರಂಪರೆ, ಪುಟ –೧೩೮

೧೨. ಡಾ. ಯಾದಪ್ಪ ಪರದೇಶಿ : ಉತ್ತರಕರ್ನಾಟಕದ ಭಿತ್ತಿಚಿತ್ರಕಲೆ – ಒಂದು ಅಧ್ಯಯನ, (ಅ.ಪ್ರ.ಪಿಹೆಚ್.ಡಿ.ಮ.ಪ್ರ), ಪುಟ – ೧೧೩

ಬಿಳಿ ವರ್ಣಗಳಿವೆ.[೧೩] ಹಿಂದಿ ನಿಘಂಟು ಒಂದರಲ್ಲಿ ನೂರು ಬಗೆಯ ಬಿಳಿ[೧೪] ಇದ್ದ ಬಗೆ ಮಾಹಿತಿ ಇದೆ.

ಕಪ್ಪು

ಕಪ್ಪು ವರ್ಣವು ಮಾನಸೋಲ್ಲಾಸದಲ್ಲಿ ದೀಪದಿಂದ ಪಡೆದ ಕಪ್ಪನ್ನು ಶಿಲ್ಪರತ್ನವು ಹೇಳುವ ಇನ್ನೊಂದು ವಿಧಾನವು. ಕಪ್ಪು ಪಾಟೀ ಕಲ್ಲನ್ನು ನೀರಿನಲ್ಲಿ ಅರೆದು ಆ ಮಿಶ್ರಣಕ್ಕೆ ಬಿಲ್ವಪತ್ರೆ ಕಾಯಿಯ ರಸ ಬೆರೆಸಿ ಚೆನ್ನಾಗಿ ಕಲಿಸಬೇಕು. ಆಗ ಉಪಯೋಗಕ್ಕೆ ಸಿದ್ಧ[೧೫] ಆಗುವುದೆಂದು ಶಾಸ್ತ್ರಗ್ರಂಥದಿಂದ ತಿಳಿದುಬರುತ್ತದೆ. ಹಿಂದಿ ನಿಘಂಟಿನಲ್ಲಿ ೮೩ ಬಗೆಯ ಕಪ್ಪು[೧೬]ಗಳ ಬಗೆಗೆ ಉಲ್ಲೇಖವಿರುವುದು ತಿಳಿದುಬರುತ್ತದೆ. ಕರಟ ಸುಟ್ಟು[೧೭] ಕಪ್ಪನ್ನು ತಯಾರಿಸಬಹುದು. ಹಚ್ಚೆಯಲ್ಲಿ ಉಪಯೋಗಿಸುವ ಕಪ್ಪನ್ನು ಎಲೆಗಳಿಂದ ತಯಾರಿಸಿಕೊಳ್ಳುವುದು ತಿಳಿದುಬರುತ್ತದೆ. ಈ ಕಪ್ಪನ್ನೇ ಭಿತ್ತಿಗೂ ಕೂಡ ಉಪಯೋಗಿಸಿರಬಹುದು. ಆದರೆ ಎಲ್ಲಾ ಬಣ್ಣಗಳಿಗಿಂತಲೂ ಕಪ್ಪನ್ನು ತಯಾರಿಸುವುದು ಸುಲಭವಾಗಿದೆ. ಜಾಲಿಗೀಡದ ಕಾಯಿಯಿಂದಲೂ ಹಲವು ತಪ್ಪಲು ಕುಟ್ಟಿ ಅದರಲ್ಲಿ ಕಬ್ಬಿಣವನ್ನು ಬೆರೆಸುವುದರಿಂದ ಕಪ್ಪನ್ನು ತಯಾರಿಸಬಹುದು. ಹೀಗೆ ಹಲವು ಮಾಧ್ಯಮಗಳಿಂದ ತಯಾರಿಸಬಹುದಾದರೂ ಇತ್ತೀಚಿಗೆ ಕಪ್ಪುವರ್ಣವನ್ನು ರಾಸಾಯನಿಕವಾಗಿ ತಯಾರಿಸುತ್ತಾರೆ. ಹಸಿರು ಮತ್ತು ನಸ್ಸಿ ಮಿಶ್ರಣದಿಂದಲೂ ಕಪ್ಪನ್ನು ತಯಾರಿಸಬಹುದು.

ಕೆಂಪು

ಕೆಂಪು ಬಣ್ಣಕ್ಕೆ ಪ್ರಾಗೈತಿಹಾಸಿಕ ಇತಿಹಾಸವಿದೆ. ಮುತ್ತುಗದ ಹೂವು, ಗೋರಂಟಿ ಎಲೆ, ಕಾಜು ಸೇರಿಸಿ ಕುದಿಸಿ ಒಣಗಿಸಿದಾಗ ಬರುವ ಕೆಂಪು ಬಣ್ಣವನ್ನು ಬಳಸಿರುವುದು ಕಾಣುತ್ತೇವೆ. ಅಭಿಲಾಷಿತಾರ್ಥ ಚಿಂತಾಮಣಿ ಪ್ರಕಾರ ಸಿಂಧೂರ ಮತ್ತು ಶಂಖದ ಪುಡಿಯಿಂದ ಕೆಂಪು ತಾವರೆ[೧೮] ಬಣ್ಣ ಪಡೆಯುವುದರ ಬಗೆಗೆ ತಿಳಿಸುತ್ತದೆ. ಅರಿಶಿಣ ಮತ್ತು ಸುಣ್ಣದ ಮಿಶ್ರಣದಿಂದಲೂ ಕಾವಿ ಅಥವಾ ಉರಿಮಂಜಿನಿಂದಲೂ ಕೆಂಪು ಬಣ್ಣವನ್ನು ತಯಾರಿಸಬಹುದು.

ಹಳದಿ

ಹಳದಿ ಬಣ್ಣಕ್ಕೆ ಅರಿಶಿಣ ಪ್ರಸಿದ್ಧಿ ಪಡೆದಿದ್ದರೂ ಚಿತ್ರಕಲೆಗೆ ನಿಯಮಾನುಸಾರವಾಗಿ ಇನ್ನೂ ಹಲವು ಮಾಧ್ಯಮದಿಂದಲೂ ಹಳದಿ ತಯಾರಿಸುವುದರ ಉಲ್ಲೇಖ ಸಿಗುತ್ತದೆ. ಅಭಿಲಷಿತಾರ್ಥ ಚಿಂತಾಮಣಿಯಲ್ಲಿ ಹಳದಿಯನ್ನು ಹರಿತಾಲದಿಂದ ತಯಾರಿಸುವುದರ ಉಲ್ಲೇಖ

---

೧೩. ಡಾ. ಯಾದಪ್ಪ ಪರದೇಶಿ : ಉತ್ತರಕರ್ನಾಟಕದ ಭಿತ್ತಿಚಿತ್ರಕಲೆ – ಒಂದು ಅಧ್ಯಯನ, (ಅ.ಪ್ರ.ಪಿಹೆಚ್.ಡಿ.ಮ.ಪ್ರ), ಪುಟ – ೧೦೩

೧೪. ಡಾ. ಅ. ಲ. ನರಸಿಂಹನ್ : ಕರ್ನಾಟಕ ಭಿತ್ತಿಚಿತ್ರಪರಂಪರೆ, ಪುಟ –೧೪೧

೧೫. ಡಾ. ಯಾದಪ್ಪ ಪರದೇಶಿ : ಉತ್ತರಕರ್ನಾಟಕದ ಭಿತ್ತಿಚಿತ್ರಕಲೆ – ಒಂದು ಅಧ್ಯಯನ, (ಅ.ಪ್ರ.ಪಿಹೆಚ್.ಡಿ.ಮ.ಪ್ರ), ಪುಟ – ೧೦೩

೧೬. ಡಾ. ಅ. ಲ. ನರಸಿಂಹನ್ : ಕರ್ನಾಟಕ ಭಿತ್ತಿಚಿತ್ರಪರಂಪರೆ, ಪುಟ –೧೪೧

೧೭. ಅದೇ, ಪುಟ –೧೪೨

೧೮. ಡಾ. ಅ. ಲ. ನರಸಿಂಹನ್ : ಕರ್ನಾಟಕ ಭಿತ್ತಿಚಿತ್ರಪರಂಪರೆ, ಪುಟ –೧೪೨

[illegible]

[illegible]

[illegible]

[illegible]

[illegible]

[illegible]

[illegible]

[illegible]

ಸಿಗುತ್ತದೆ.[೧೯] ಅಜಂತೆಯಲ್ಲಿ ಹಳದಿಯನ್ನು ಧಾರವಾಡ, ಬೆಳಗಾವಿ ಪ್ರದೇಶದಲ್ಲಿ ದೊರೆಯುವ ಮುಲ್ತಾನ್ ಎಂಬ ಮಣ್ಣಿನಿಂದ[೨೦] ತಯಾರಿಸುವುದರ ಕುರಿತು ತಿಳಿದುಬರುತ್ತದೆ.

ನೀಲಿ

ಕೇರಳದಲ್ಲಿ ಅಮರ ನೀಲಿ ಗಿಡದಿಂದ ಅಥವಾ ತುಂಬೆ ಗಿಡದಿಂದ ನೀಲಿಯನ್ನು ಪಡೆದು[೨೧] ಬಳಸಿರುವುದಿದೆ. ಇಂಡಿಗೋದಿಂದಲೂ ನೀಲಿ ಬಣ್ಣ ತಯಾರಿಕೆಯ ಉಲ್ಲೇಖವಿದೆ. ಮಾರ್ಕೊ ಪೋಲೋ ಒಂದು ಬಗೆಯ ಗಿಡದ ಬೇರಿನಿಂದ ನೀಲಿ ಬಣ್ಣ ತಯಾರಿಸುವುದಾಗಿ ತಿಳಿಸುತ್ತಾನೆ.[೨೨] ಅಜಂತಾ, ಬಾದಾಮಿ ಇತ್ಯಾದಿಗಳಲ್ಲಿ ನೀಲಿ ಬಣ್ಣ ಎಂಬ ಶಿಲಾವರ್ಣದಿಂದ ತಯಾರಿಸಿಕೊಂಡು ಚಿತ್ರಿಸಿರುವುದಾಗಿ ವಿದ್ವಾಂಸರು ತರ್ಕಿಸಿದ್ದಾರೆ.

ಮಿಶ್ರಬಣ್ಣ

ಹೀಗೆ ಮೂಲ ಬಣ್ಣಗಳ ತಯಾರಿಕೆಯಾದರೆ ಮಿಶ್ರ ವರ್ಣಗಳ ತಯಾರಿಕೆಯಲ್ಲಿ ವಿಶೇಷತೆಯಿದೆ. ಪಂಚವರ್ಣದಿಂದ ಮಿಶ್ರವನ್ನು ತಯಾರಿಸಿಕೊಂಡು ಭಿತ್ತಿಚಿತ್ರಗಳಿಗೆ ಲೇಪನ ಮಾಡಿದರೆ, ಕೆಲವು ವರ್ಣವನ್ನು ನೇರವಾಗಿಯೇ ಪಡೆದುಕೊಂಡು ಲೇಪನ ಮಾಡಿರುವುದು ಉಲ್ಲೇಖಗಳು ಸಿಗುತ್ತವೆ. ಅಂಥವುಗಳಲ್ಲಿ ಉದಾಹರಣೆಗೆ, ನೇರಳೆ ಬಣ್ಣವು. ದೀಪದ ಕಪ್ಪು ಮತ್ತು ಅರಗಿನಿಂದ ತಯಾರಿಸಿಕೊಂಡು ಚಿತ್ರಿಸುವುದು ಅಭಿಲಷಿತಾರ್ಥ ಚಿಂತಾಮಣಿ[೨೩]ಯಲ್ಲಿ ಉಲ್ಲೇಖವಿದೆ. ನೇರಳೆ ಹಣ್ಣಿನಿಂದಲೂ, ಕೌಳೆ ಹಣ್ಣಿನಿಂದಲೂ ನೇರವಾಗಿ ನೇರಳೆ ಪಡೆಯಬಹುದು. ಹಾಗೆಯೇ ಮೂಲ ವರ್ಣಗಳಾದ ನೀಲಿ+ಕೆಂಪು ಎರಡು ಬಣ್ಣ ಮಿಶ್ರ ಮಾಡಿದಾಗ ನೇರಳೆ ಬಣ್ಣ ಬರುತ್ತದೆ. ನೀಲಿ+ಹಳದಿ=ಹಸಿರು ಬಣ್ಣ ಬರುತ್ತದೆ. ನೀಲಿ+ಕೆಂಪು, ಹಳದಿ+ನೇರಳೆ[೨೪] ಹೀಗೆ ಮುಂತಾದ ಬಣ್ಣದಿಂದಲೂ ಮಿಶ್ರಬಣ್ಣಗಳನ್ನು ತಯಾರಿಸಬಹುದು. ಇಂತಹ ಮಿಶ್ರಬಣ್ಣಗಳನ್ನು ಕೂಡಾ ಹಂಪಿ ಭಿತ್ತಿಚಿತ್ರಗಳಿಗೆ ಸ್ವಲ್ಪ ಮಟ್ಟಿಗೆ ಬಳಕೆಯಲ್ಲಿ ತಂದಿರುವುದು ನೋಡಬಹುದು.

ಮಿಶ್ರಣ ತಟ್ಟೆ

ಮಿಶ್ರಣ ಮಾಡುವ ತಟ್ಟೆಗಳೆಂದರೆ ಈಗಿನ ಪ್ಯಾಲೇಟ್ ಎನಿಸಿಕೊಳ್ಳುತ್ತವೆ. ತೆಂಗಿನ ಚಿಪ್ಪುಗಳನ್ನು ಉಪಯೋಗಿಸಿರುವುದು ತಿಳಿದುಬರುತ್ತದೆ. ಮಣ್ಣಿನ ಬಟ್ಟಲು, ಮರದ ಹಲಗೆ, ಕಲ್ಲಿನ ಕುಳಿಗಳನ್ನು ಬಳಸಿರಬಹುದಾದ ಸಾಧ್ಯತೆಗಳಿವೆ.

---

೧೯. ಡಾ. ಅ. ಲ. ನರಸಿಂಹನ್ : ಕರ್ನಾಟಕ ಭಿತ್ತಿಚಿತ್ರಪರಂಪರೆ, ಪುಟ –೧೪೧

೨೦. ಅದೇ., –೧೪೧

೨೧. ಅದೇ., ಪುಟ –೧೪೨

೨೨. ಅದೇ., ಪುಟ –೧೪೦

೨೩. ಡಾ. ಎಸ್. ಸಿ. ಪಾಟೀಲ (ಸಂ.) : ಚಿತ್ರಾಕ್ಷಿ, ಪುಟ – ೩೩

೨೪. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ – ೨೩

ಚಿತ್ರ ರಚನಾ ವಿಧಾನ

ಭಿತ್ತಿ ಸಿದ್ಧತೆ

ಭಿತ್ತಿ ಸಿದ್ಧತಾ ವಿಧಾನವು ಪ್ರಾಗೈತಿಹಾಸಿಕ ಮಾನವನು ತಾನು ಭಿತ್ತಿ ಬಿಡಿಸುವ ಮುನ್ನ ಚಿತ್ರಕ್ಕೆ ಹಿನ್ನೆಲೆಯಾದ ಸ್ಥಳವನ್ನು ಬಂಡೆಗಲ್ಲಿನ ಉಬ್ಬು ತಗ್ಗುಗಳನ್ನು ಸ್ವಲ್ಪ ಮಟ್ಟಿಗೆ ನಯಗೊಳಿಸಿಕೊಂಡು ಚಿತ್ರ ರಚನೆ ಮಾಡಿರುವುದು ಬಳ್ಳಾರಿಯ ಸಂಗನಕಲ್ಲು, ಬಳ್ಳಾರಿ ಕೋಟೆ, ಗುಡ್ಡ, ಕಾರಿಗನೂರು ಮುಂತಾದ ನೆಲೆಗಳಲ್ಲಿ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಾಗೈತಿಹಾಸಿಕ ಕಾಲದಿಂದಲೂ ಭಿತ್ತಿ ಸಿದ್ಧತೆ ಮಾಡುವ ಪದ್ಧತಿ ಇದೆ ಎನ್ನಬಹುದು. ಇನ್ನೂ ವ್ಯವಸ್ಥಿತ ರೀತಿಯಲ್ಲಿ ವರ್ಷಾನುವರ್ಷ ಬಳಕೆಗಾಗಿ ಶಿಷ್ಟ ಸಂಪ್ರದಾಯದ ಕಲಾವಿದರು ಪ್ರಯೋಗಗಳ ಮೂಲಕ ಭಿತ್ತಿಯನ್ನು ಸಿದ್ಧಗೊಳಿಸುವ ಕ್ರಮವನ್ನು ಕಂಡುಕೊಂಡಿದ್ದರು. ಈ ಕ್ರಮದ ಕುರಿತ ಕೆಲವು ಗ್ರಂಥಗಳಲ್ಲಿ ಉಲ್ಲೇಖವಿರುವುದು ಕಂಡುಬರುತ್ತದೆ.

ಭಿತ್ತಿ ರಚನೆಯಲ್ಲಿ ಪ್ರಥಮವಾಗಿ ಮಣ್ಣು ಎನ್ನುವ ಅಭಿಪ್ರಾಯವಿದೆ. ಮಣ್ಣಿನ ಭಿತ್ತಿ ರಚಿಸುವ ವಿಧಾನವು ಈಜಿಪ್ಟಿನಲ್ಲಿ ಕ್ರಿ.ಪೂ. ೩೫೦೦ ವರ್ಷಗಳ ಹಿಂದೆಯೇ ಸಾಮಾನ್ಯವಾಗಿ ಬಳಕೆಯಲ್ಲಿದ್ದು, ಇದು ಕ್ರಿ.ಶ. ೬ನೇ ಶತಮಾನದವರೆಗೂ ಮುಂದುವರೆಯಿತು ಎನ್ನಲಾಗುತ್ತದೆ.[೨೫] ಜಾಂಗಲ, ಅನುರೂಪ ಮತ್ತು ಸಮಿಶ್ರ ಎಂಬ ಮೂರು ರೀತಿಯ ಮಣ್ಣು ಬಳಕೆಯಲ್ಲಿತ್ತು ಎನ್ನುವುದು ಕಾಶ್ಯಪ ಶಿಲ್ಪಶಾಸ್ತ್ರ[೨೬]ದಿಂದ ತಿಳಿದುಬರುತ್ತದೆ. ಇದು ನಂತರ ಕಲಾವಿದನಿಗೆ ಇನ್ನಷ್ಟು ಮತ್ತಷ್ಟು ಗಟ್ಟಿಗೊಳಿಸಲು ಬೇರೆ ಬೇರೆ ಪ್ರಕಾರವಾಗಿ ಪ್ರಯೋಗಕ್ಕೆ ಬರುತ್ತದೆ. ಗಾರೆ, ಮರ, ಲೋಹ ಮತ್ತು ಗಾಜು ಭಿತ್ತಿ ಆಧಾರದ ಪರಿಕರಗಳೊಂದಿಗೆ ಮಿಶ್ರಣ ಪರಿಕರಗಳಾದ ಮಣ್ಣು, ಕಲ್ಲಿನ ಪುಡಿ, ಉಸುಕು, ಸುಣ್ಣ, ನಾರು ಪದಾರ್ಥ, ಶಂಖ ಚೂರ್ಣ, ಇಟ್ಟಿಗೆ ಮತ್ತು ವಜ್ರಲೇಪ, ಬಾಳೆಹಣ್ಣು, ವರದಂಟು, ವಿವಿಧ ಗಿಡದ ರಸ ಮತ್ತು ಕಾಕಂಬಿ ಬಂಧಕ ಪರಿಕರಗಳನ್ನು ಭಿತ್ತಿ ತಯಾರಿಕಾ ಉಪಯೋಗಕ್ಕೆ ತರುತ್ತಿದ್ದರು ಎಂದು ಪ್ರಾಚೀನ ಗ್ರಂಥಗಳಲ್ಲಿ ಉಲ್ಲೇಖವಿದೆ.

ಈ ಪ್ರಯೋಗದಲ್ಲಿ ಗಾರೆ ಎನ್ನುವ ಸುಣ್ಣವನ್ನು ಪ್ರಮುಖವಾಗಿ ಇರುವಂತಹ ಭಿತ್ತಿ ರಚನಾ ಮಾಧ್ಯಮವಾಗಿ ಕಂಡುಕೊಳ್ಳಲಾಗಿದೆ. ಭಾರತದಲ್ಲಿ ಪ್ರಾಚೀನ ಮತ್ತು ಮಧ್ಯಯುಗದವರೆಗೂ ಮಣ್ಣು ನಂತರ ಗಾರೆ ಪ್ರಮುಖವಾಗಿ ಬಳಕೆಯಲ್ಲಿ ಹೆಚ್ಚಾಯಿತು ಎಂಬ ಅಭಿಪ್ರಾಯವಿದೆ. ಗಾರೆ ಲೇಪನದ ಭಿತ್ತಿಯ ಮೇಲೆ ಶಿಷ್ಟ ಪರಂಪರೆಯ ಭಿತ್ತಿಚಿತ್ರಗಳು ರಚನೆಯಾಗಿದ್ದುದು ಸಾಮಾನ್ಯವಾಗಿ ಕಂಡುಬರುತ್ತವೆ. ಈ ತರಹದ ಭಿತ್ತಿ ಹಂಪೆಯ ವಿರೂಪಾಕ್ಷ ದೇವಾಲಯದಲ್ಲಿ ಕಂಡುಬರುತ್ತದೆ. ಕಮಲ ಮಹಲ್ ಆವರಣದಲ್ಲಿ ಎರಡು ಮೂರು ಅಡಿಗಳ ಒಂದು ಅಡಿಪಾಯವಿದೆ, ಇದರ ಸುತ್ತ ಸುಣ್ಣದ ಭಿತ್ತಿಯುಳ್ಳ ತೆಂಗಿನ ಗಿಡಗಳ ಚಿತ್ರಗಳು ನಮಗೆ

---

೨೫. ಆನಂದ ಕೆ. ಪೂಜಾರ್ : ಕರಾವಳಿ ಕರ್ನಾಟಕದ ಕಾವಿಚಿತ್ರಕಲೆ, ಅ.ಪ್ರ.ಡಿ.ಲಿಟ್. ಮ.ಪ್ರ), ಪುಟ – ೫೨

೨೬. ಅದೇ., ಪುಟ – ೫೨

[illegible]

ಕಂಗೊಳಿಸುತ್ತವೆ. ಈ ಒಂದು ಕಟ್ಟಡದ ಸುತ್ತ ಯಾವುದೇ ಒಂದು ಸೂರಿಲ್ಲದೇ ಇರುವುದರಿಂದ ಚಿತ್ರಗಳು ಬಿಸಿಲಿಗೆ ಹಾಳಾಗಿವೆ. ಕೈಗೂ ಎಟಗುತ್ತವೆ. ಯಾವುದೇ ರಕ್ಷಣೆಯಿಲ್ಲದಿದ್ದರೂ ಇವತ್ತಿಗೂ ಉಳಿಯುವುದಕ್ಕೆ ಭಿತ್ತಿಚಿತ್ರ ರಚನೆಯಲ್ಲಿ ಅನುಸರಿಸಿರುವ ವಿಧಿ ವಿಧಾನವೇ ಕಾರಣವಾಗಿದೆ.

೧. ಭಿತ್ತಿ ಹಸಿ ಇರುವಾಗ ಚಿತ್ರ ರಚಿಸುವ ವಿಧಾನ

೨. ಭಿತ್ತಿ ಒಣಗಿದ ನಂತರ ಚಿತ್ರ ರಚಿಸುವ ವಿಧಾನ

೩. ಬಣ್ಣದ ಹುಡಿಯನ್ನು ಅಂಟು ಮಾಧ್ಯಮದಲ್ಲಿ ಕಲಸಿಕೊಂಡು ಒಣ ಭಿತ್ತಿಯ ಮೇಲೆ ಚಿತ್ರ ರಚಿಸುವ ವಿಧಾನ

೪. ಹಸಿ ಭಿತ್ತಿಯನ್ನು ಕೊರೆದು ಭಿತ್ತಿ ರೂಪಿಸುವ ವಿಧಾನ

ಈ ಮೇಲಿನ ವಿಧಾನಗಳನ್ನು ಆಯಾ ತಾಪಮಾನಕ್ಕೆ, ಆಯಾ ಸ್ಥಳದ ಹವಾಮಾನಕ್ಕೆ ತಕ್ಕಂತೆ ಅಳವಡಿಸಿಕೊಂಡು ರಚಿಸುತ್ತಿದ್ದರೆನ್ನಬಹುದು. ಲೇಪಿಸಿದ ಗಾರೆಯು ಬೇಗನೇ ಒಣಗುವುದರಿಂದ Fresco seccoದಂತಹ ವಿಧಾನವು ಭಾರತದಂತಹ ಪ್ರದೇಶಕ್ಕೆ ಹೊಂದಾಣಿಕೆಯಾಗುವುದು. Fresco buonದಂತಹ ಪದ್ಧತಿಯನ್ನು ರಾಜಸ್ಥಾನದ ಕೆಲವೆಡೆ ಅನುಸರಿಸಿದ್ದಾರೆ ಎನ್ನಲಾಗಿದೆ. ಮತ್ತು ಪ್ರಸ್ತುತ ಹಲವು ವೈಭವೀಕರಣದ ಕಟ್ಟಡಗಳಿಗೂ ಸಿಮೆಂಟ್ ಭಿತ್ತಿ ಹಸಿ ಇರುವಾಗಲೇ ಟೈಲುಗಳನ್ನು ಅಂಟಿಸುವುದು Fresco buon ಪದ್ಧತಿಗೆ ಸನಿಹವಾಗಿದ್ದಾಗಿದೆ. ಇಂತಹ ಭಿತ್ತಿಚಿತ್ರವನ್ನು ಹೊಸಪೇಟೆಯ ಸಿದ್ಧಾರ್ಥ ಎಂಬ ಹೋಟೆಲ್ ಒಂದರಲ್ಲಿ ಮಾಡಲಾಗಿದೆ.

ಹಸಿ ಇರುವಾಗಲೇ ಮೇಲೆ ಬಣ್ಣ ಲೇಪನ ಅಥವಾ ಟೈಲುಗಳು, ಗಾಜುಗಳು ಮುಂತಾದವುಗಳನ್ನು ಅಂಟಿಸುವುದರಿಂದ ದ್ರವಾಂಶ ಒಂದಕ್ಕೊಂದು ಮೇಳೈಸಿ (ಕಲಕಿ) ಗಟ್ಟಿಗೊಳ್ಳುತ್ತವೆ. ಈ ಮಾತಿಗೆ ಪ್ರಯೋಗವೆಂಬುವಂತೆ ನಿತ್ಯಕಾರ್ಯದಲ್ಲಿ ಸಹಜವಾಗಿಯೇ ಗ್ರಾಮೀಣರು ಸೆಗಣಿ ಸಾರಿಸಿ ಅದು ಹಸಿ ಇರುವಾಗಲೇ ರಂಗೋಲಿಯನ್ನು ಹಾಕುವುದು ಕಾಣಬಹುದು. ಈ ತರಹದ ರಂಗೋಲಿಯು ಎರಡು, ಮೂರು ದಿನದವರೆಗೆ ಉಳಿಯುತ್ತದೆ. ಹಸಿ ಕಪ್ಪು ಹಲಗೆ ಮೇಲೆ ಹಸಿ ಸುಣ್ಣದ ಗಟ್ಟಿಯಿಂದ ಬರೆದಾಗ ಒಣಗಿದ ನಂತರ ಇದನ್ನು ಬೇಗನೇ ಆಳಿಸುವುದಕ್ಕೆ ಬರುವುದಿಲ್ಲ. ಬದಲಾಗಿ ನೀರಿನಿಂದಲೇ ತೊಳೆಯಬೇಕಾಗುತ್ತದೆ. ಎಲ್ಲಾ ದೃಷ್ಟಿಯಿಂದ ಭಿತ್ತಿ ಹಸಿ ಇರುವಾಗ ಮಾಡುವ ಚಿತ್ರಕಲೆಯು ವರ್ಷಾನುವರ್ಷ ಉಳಿಯುತ್ತದೆ ಎಂದು ನಿರ್ಧರಿಸಬಹುದು. ಈ Fresco buon ಮಾಧ್ಯಮದ ತಂತ್ರಗಾರಿಕೆ ಕ್ರಿ.ಶ. ೧೩೦೦ರ ಸುಮಾರಿಗೆ ಇಟಲಿಯಲ್ಲಿ ಮೊದಲಿಗೆ ಬಳಕೆಗೆ ಬಂತು ಹಾಗೂ ಭಾರತದಲ್ಲಿ ಈ ವಿಧಾನವು ಕ್ರಿ.ಶ. ೧೮ರಿಂದ ೧೯ನೇ ಶತಮಾನದಲ್ಲಿ ಪರಿಚಯವಾಯಿತು[೨೭] ಎಂದು ವಿದ್ವಾಂಸರ ಅಭಿಪ್ರಾಯವಿದೆ. Fresco buon ರೀತಿಯಲ್ಲಿಯೇ Sgroffifo ಎಂದೆನಿಸಿಕೊಳ್ಳುವುದು ಮತ್ತೊಂದು ತಂತ್ರವಾಗಿದೆ. Sgroffifo ಹಸಿ ಇರುವಾಗಲೆ ಕೊರೆದು ಚಿತ್ರಿಸುವಂಥದ್ದಾಗಿದೆ. ಮತ್ತು ಭಿತ್ತಿ

---

೨೭. ಆನಂದ ಕೆ. ಪೂಜಾರ್ : ಕರಾವಳಿ ಕರ್ನಾಟಕದ ಕಾವಿಚಿತ್ರಕಲೆ, ಅ.ಪ್ರ(ಡಿ.ಲಿಟ್. ಮ.ಪ್ರ), ಪುಟ – ೫೩

ಒಣಗಿದ ನಂತರ ಚಿತ್ರ ರಚನೆಯು Fresco secco ಎಂದೆನಿಸಿಕೊಳ್ಳುತ್ತದೆ. ಈ ಒಣಗಿದ ಭಿತ್ತಿಯ ಮೇಲೆ ಬಣ್ಣದ ಹುಡಿ ಮತ್ತು ಅಂಟುಗಳನ್ನು ಹದವಾಗಿ ಕಲಿಸಿಕೊಂಡು ಚಿತ್ರ ರಚಿಸುವ ವಿಧಾನಕ್ಕೆ tempara ಎನ್ನಲಾಗುತ್ತದೆ. ಹಂಪೆ ವಿರೂಪಾಕ್ಷ ದೇವಾಲಯದ ಮೇಲ್ಛಾವಣಿಯ ಅದರಲ್ಲೂ ಆಭರಣಗಳ ಹೊಳೆಯುವಿಕೆಯ ಹಿನ್ನೆಲೆಯನ್ನು ನೋಡಿದಾಗ ಈ ವಿಧಾನ ಕಾಣುತ್ತದೆ. ಭಿತ್ತಿ ತಯಾರಿಕೆಯಲ್ಲಿ ಪ್ರಯೋಗಾತ್ಮವಾಗಿ ಕಂಡುಕೊಂಡಂತಹ ಮಾಧ್ಯಮಗಳ ಬಗೆಗೆ ಕೆಲವು ಗ್ರಂಥಗಳಲ್ಲಿ ಉಲ್ಲೇಖವಿರುವುದು ಕಂಡುಬರುತ್ತದೆ.

ಇಂದಿಗೂ ದೇವಾಲಯಗಳಲ್ಲಿ ಸಾಂಪ್ರದಾಯಿಕ ಚಿತ್ರಕಲೆಯನ್ನು ನೋಡಬಹುದು. ಇತ್ತೀಚಿನ ದೇವಾಲಯದಲ್ಲಿ ಸಿಮೆಂಟ್ ಭಿತ್ತಿ ಸಿದ್ಧತೆಯನ್ನು ನೋಡಬಹುದು. ಇಲ್ಲಿ ಸುಣ್ಣದ ಅಂಶ ಇರುವುದು ಕಂಡಬರುತ್ತಾದರೂ ವಿರೂಪಾಕ್ಷ ದೇವಾಲಯದಷ್ಟು ಭಿತ್ತಿಯ ಪ್ರಯೋಗ ಆಗಿರುವುದಿಲ್ಲ ಎನ್ನಬಹುದು. ಮತ್ತು ಮನೆಯ ಗೋಡೆ, ತೊಲೆ, ಕಂಬಗಳಿಗೂ ತೈಲವರ್ಣದ ಚಿತ್ತಾರದ ಇತ್ತೀಚಿನ ಭಿತ್ತಿಚಿತ್ರ ಕಲೆಯನ್ನು ನೋಡಬಹುದಾಗಿದೆ.

ಈ ತರಹದ ಭಿತ್ತಿಚಿತ್ರಗಳು ಇಂದಿಗೂ ಉಳಿದು ಬರಲು ಹೇಗೆ ಸಾಧ್ಯವಾಯಿತು ಎಂಬ ಪ್ರಶ್ನೆಗೆ ಒಂದು ತಂತ ರದ ಮೇಲೆ ಒಬ್ಬ ಕಲಾವಿದನು ಕುಶಲಿಯಾಗಬೇಕಾದರೆ ಆ ವಿಷಯಕ್ಕೆ ಸಂಬಂಧಪಟ್ಟ ಮೂಲ ಗ್ರಂಥಗಳಾದ ಕುಲ್ಲುವಗ್ಗ, ಬೃಹತ್ ಸಂಹಿತೆ, ವಿಷ್ಣುಧರ್ಮೋತ್ತರ ಪುರಾಣ, ಅಭಿಲಷಿತಾರ್ಥ ಚಿಂತಾಮಣಿ ಮತ್ತು ಶಿಲ್ಪರತ್ನ ಗ್ರಂಥಗಳನ್ನು ಅಭ್ಯಸಿಸಬೇಕು. ಈ ಐದರಲ್ಲಿ ಕುಲ್ಲುವಗ್ಗವೇ ಕ್ರಿ.ಪೂ. ೧ನೆಯ ಶತಮಾನಕ್ಕಿಂತ ಹಿಂದಿನ ಪ್ರಾಚೀನ ಗ್ರಂಥವಾಗಿದೆ ಎನ್ನಲಾಗಿದೆ. ಕುಲ್ಲುವಗ್ಗ ಮತ್ತು ಬೃಹತ್ ಸಂಹಿತೆ ಗ್ರಂಥಗಳಲ್ಲಿ ಭಿತ್ತಿಚಿತ್ರದ ಮಾಹಿತಿ ಅಲ್ಪಮಟ್ಟದಲ್ಲಿದ್ದು, ವಿಷ್ಣುಧರ್ಮೋತ್ತರವು ಅಜಂತಾ ಭಾಗ, ಸಿತ್ತನ್ನವಾಸಲ್, ನೈಜೀರಿಯಾ ಮತ್ತು ಇತರ ಕಡೆಗಳ ಕಲಾಕೃತಿಗಳ ಪ್ರಭಾವಕ್ಕೂ, ಅಭಿಲಷಿತಾರ್ಥ ಚಿಂತಾಮಣಿಯು ತಂಜಾವುರು, ಪೋಲುನ್ನಾರ್ವ ಮತ್ತು ಇತರ ಕಡೆಗಳ ಪ್ರಭಾವಕ್ಕೂ, ಶಿಲ್ಪರತ್ನ, ಮಧ್ಯಯುಗದ ಕಲಾಕೃತಿಗಳ ಪ್ರಭಾವಕ್ಕೂ ಒಳಗಾಗಿರಬಹುದು ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ.

ಅಭಿಲಷಿತಾರ್ಥ ಚಿಂತಾಮಣಿ ಶಿಲ್ಪರತ್ನ ಈ ಕೃತಿಗಳಲ್ಲಿ ಇಟ್ಟಿಗೆ ಪುಡಿ, ಜೇನು ಬೆಲ್ಲ, ನೀರು ಮತ್ತು ಅತಿಮಧುರ ವಸ್ತು ಬೆರೆಸಿ ಗೋಡೆಗಳ ಮೆಲೆ ಮೃದುವಾಗಿ ಲೇಪಿಸಿ ಇದು ಗಟ್ಟಿಯಾಗಿ ಕೂರಲು ಇದರ ಮೇಲೆ ವಜ್ರಲೇಪ ಬಳಿಯುತ್ತಿದ್ದರು. ಈ ವಜ್ರಲೇಪವನ್ನು ಎಮ್ಮೆಯ ತೊಗಲನ್ನು ಬೆಣ್ಣೆಯಂತೆ ಮೃದುವಾಗಿ ಮುದ್ದೆಯಾಗುವವರೆಗೂ ಚೆನ್ನಾಗಿ ಕುದಿಸಿ, ಸಲಕೆಯಿಂದ ಗಟ್ಟಿಯಾಗುವವರೆಗೂ ಮರ್ದಿಸಿದರೆ ವಜ್ರಲೇಪನವು ತಯಾರಾಗುತ್ತದೆ ಮತ್ತು ಎಲುಬಿನಿಂದಲೂ ಪಡೆಯಬಹುದು ಎನ್ನಲಾಗಿದೆ. ಆಲುಗಡ್ಡೆ ಮತ್ತು ಸಸ್ಯಜನ್ಯ ಅಂಟುಗಳಿಂದಲೂ ವಜ್ರಲೇಪ ಪಡೆಯುತ್ತಿದ್ದು, ಜಿಲೆಟಿನ್ ಎಂದು ಪರಿಗಣಿಸಿ ಅದನ್ನು ವರ್ಣಗಳ ಮಿಶ್ರಣದಲ್ಲಿ ಮಾಧ್ಯಮವಾಗಿ ಬಳಸಿದರೆ ತಳದಲ್ಲಿ ಉಳಿದ ಕಚ್ಚಾವಸ್ತುಗಳನ್ನು Glue ಎಂದು ಪರಿಗಣಿಸಿ

[illegible]

ಅದನ್ನು ಕೇವಲ ಅಂಟಿಸುವ ಸಾಧನವಾಗಿ ಬಳಸುತ್ತಾರೆ ಎಂಬ ವಿವರ ತಿಳಿದುಬರುತ್ತದೆ. ದೇವಾಲಯದ ಪಾವಿತ್ರ್ಯದ ಹಿನ್ನೆಲೆಯಿಂದ ದೇವಾಲಯದ ಭಿತ್ತಿಚಿತ್ರಗಳಿಗೆ ಸಸ್ಯ ಮೂಲದ ವಜ್ರಸರಿಯನ್ನು ಉಪಯೋಗಿಸಿರಬಹುದು. ವಿಷ್ಣುಧರ್ಮೋತ್ತರದಲ್ಲಿ ಮೂರು ಬಗೆಯ ಇಟ್ಟಿಗೆಪುಡಿಯನ್ನು ಸಮಪ್ರಮಾಣದಲ್ಲಿ ಹೊಂದಿಸಿಕೊಂಡು, ಅದಕ್ಕೆ ಮೂರರಷ್ಟು ಜೇಡಿಮಣ್ಣಿನೊಡನೆ ಬೆರೆಸಬೇಕು. ಗುಗ್ಗಲು, ಜೇನುಮೇಣ, ಅತಿಮಧುರ, ಮೂರು ಎಂಬ ಗಂದಿಗರ ಸರಡು, ಬೆಲ್ಲಕುಸಂಭ, ಇವಿಷ್ಟನ್ನೂ ಅರೆದು ಉದ್ದಿನ ಹಿಟ್ಟನ್ನು ಸೇರಿಸಿ, ಅದಕ್ಕೆ ತಕ್ಕಂತೆ ಮರಳನ್ನು ಸೇರಿಸಿ ಚೆನ್ನಾಗಿ ಮರ್ದಿಸಬೇಕು. ಇದನ್ನು ನೀರಿನಲ್ಲಿ ಚೆನ್ನಾಗಿ ನೆನೆಸಿ ಪಕ್ವವಾಗುವಂತೆ ಒಂದು ತಿಂಗಳು ಕಾಲ ರಾಶಿ ಮಾಡಿಡಬೇಕು.

ಅನಂತರ ಮೃದುವಾದಂಥ ಈ ಮಿಶ್ರಣವನ್ನು ತೆಗೆದುಕೊಂಡು ಚಿತ್ರ ರಚನೆಗೆ ಅರ್ಹವಾದ ಒಣಗಿದ ಗೋಡೆಯ ಮೇಲೆ ಚೆನ್ನಾಗಿ ಲೇಪಿಸಬೇಕು ಎಂದು, ಗೋಡೆ ಒಣಗಿದಂತೆಲ್ಲಾ ಅದರಲ್ಲಿರುವ ಅಸಮಿಚೀನವಾದ ಭಾಗಗಳೆಲ್ಲವನ್ನೂ ಸರ್ಜರಸ ಮತ್ತು ಎಣ್ಣೆ ಇವುಗಳಿಂದ ಕೂಡಿದ ಆ ಮಣ್ಣಿನಿಂದ ಲೇಪಿಸಿ ಸರಿಪಡಿಸಬೇಕು. ನಂತರ ಗೋಡೆಯನ್ನು ಉಜ್ಜಿ ನಯಗೊಳಿಸಬೇಕು. ಆಗಾಗ ಹಾಲನ್ನು ಅದರ ಮೇಲೆ ಎರಚಿ ತೊಳೆಯುತ್ತಿರಬೇಕು. ಇಂತಹ ಸಿದ್ಧತೆಯಿಂದ ಗೋಡೆಗಳ ಹೊರಮೈ ನೂರು ವರ್ಷಗಳವರೆಗೆ ಅಳಿಯದೆ ಬಿಗಿಯಾಗಿರುತ್ತದೆ ಎಂದು ತಿಳಿದು ಬರುತ್ತದೆ.

ಲೇಖ್ಯ

ಭಿತ್ತಿ ಗಟ್ಟಿಗೊಂಡ ನಂತರ ಮುಂದಿನ ಕ್ರಮವೇ ಲೇಖ್ಯ ಕರ್ಮವಾಗಿದೆ. ಕಲಾವಿದನು ಭಿತ್ತಿ ಸಿದ್ಧತೆಯ ಅಳತೆಗೆ ತಕ್ಕಂತೆ ಲೇಖನಿಯನ್ನು ಉಪಯೋಗಿಸುತ್ತಿದ್ದನು. ಅಭಿಲಷಿತಾರ್ಥ ಚಿಂತಾಮಣಿ ಪ್ರಕಾರ ಅವುಗಳಲ್ಲಿ ವರ್ತಿಕ ಮತ್ತು ಲೇಖನಿ ಎಂಬ ಎರಡು ಲೇಖನಿಯಲ್ಲಿ ಸ್ಥೂಲ, ಮಧ್ಯಮ ಮತ್ತು ಸೂಕ್ಷ್ಮವೆಂದು ಮೂರು ಬಗೆಯ ವಿವರವಿದೆ. ವರ್ತಿಕ ಲೇಖನಿಗಳನ್ನು ಹೊರ ರೇಖೆಗಾದರೆ, ಬರಿಯನ್ನು ತುಂಬಲು ಕುಂಚಗಳು ಮುಖ್ಯವಾಗಿವೆ. ಬಿದಿರು ಅಥವಾ ಸೂಕ್ತವಾದ ಮರದ ಕಡ್ಡಿಗೆ ತಕ್ಕನಾ ತಯಾರಿಸಿಕೊಳ್ಳುತ್ತಿದ್ದರು. ನಂತರ ಮೇಣ ಸವರಿದ ದಾರದಿಂದ ಅಳಿಲುರೋಮಗಳನ್ನು ಕಡ್ಡಿಯ ಕೊನೆಗೆ ಅಳವಡಿಸಿಕೊಂಡು, ಅದರ ಮೇಲೆ ದಾರವನ್ನು ಸುತ್ತಿ, ರೋಮಗಳನ್ನು ಚಿತ್ರರಚನೆಗೆ ಹೊಂದುವಂತೆ ಮಾಡಿಕೊಳ್ಳುತ್ತಿದ್ದರು ಎನ್ನುವ ಅಭಿಪ್ರಾಯವಿದೆ. ಈ ಮಾತಿಗೆ ನಿದರ್ಶನವೆಂಬುವಂತೆ ಈಗಲೂ ಕೂದಲಿನ ಕುಂಚಗಳನ್ನು ಬಳಸುವುದನ್ನು ಕಾಣಬಹುದಾಗಿದೆ.

ವರ್ಣಲೇಪನ

ಚಿತ್ರಕಲೆಯಲ್ಲಿ ಬಹುಮುಖ್ಯವಾದ ಹಂತವೆಂದರೆ ವರ್ಣಲೇಪನ. ವರ್ಣ ಸಂಯೋಜನೆಯ

ತೀವ್ರತೆಯಿಂದ ನೋಡಿದಾಗ ಪ್ರಜ್ಞೆಯನ್ನು ಕ್ಷಣಾರ್ಧದಲ್ಲಿ ಪ್ರಭಾವಿಸಬಲ್ಲ ಶಕ್ತಿ ವರ್ಣಕ್ಕಿದೆ. ವರ್ಣ ಲೇಪನದಲ್ಲಿಯೂ ಶಾಸ್ತ್ರೀಯತೆಯನ್ನು ಅನುಸರಿಸುತ್ತಿದ್ದರು. ಕೃಷ್ಣನಿಗೆ ನೀಲಿ ಬಣ್ಣ, ಸರಸ್ವತಿಗೆ ಬಿಳಿಯ ಸೀರೆ, ಲಕ್ಷ್ಮಿಗೆ ಕೆಂಪು, ಸಾಮಾನ್ಯವಾಗಿರುವ ಎಲ್ಲಾ ಕಡೆಗಳಲ್ಲಿ ಚಿತ್ರಪಟ, ದೇವಾಲಯ ಮತ್ತು ಕ್ಯಾಲೆಂಡರ್‌ಗಳನ್ನು ಉದಾಹರಣೆಗೆ ಕಾಣಬಹುದು. ವಿಜಯನಗರದ ಚಿತ್ರಗಳಿಗೆ ವರ್ಣಲೇಪನವು ತುಂಬಾ ಸೂಕ್ಷ್ಮತೆಯಿಂದ ಕೂಡಿದ್ದಾಗಿದೆ. ತುಂಬಾ ನಯವಾಗಿ ಲೇಪಿಸಬೇಕು. ಯಾವ ಭಾಗದಲ್ಲಿ ಯಾವ ಬಣ್ಣ ಹಾಕಬೇಕಾಗಿದೆಯೋ ಆ ಭಾಗದಲ್ಲಿ ಅದೇ ಬಣ್ಣ ಲೇಪಿಸಬೇಕು. ಬಣ್ಣ ಲೇಪಿಸುವಾಗ ಬಣ್ಣದ ಸೋರಿಕೆಯಾಗಿ ಬೇರೊಂದು ಜಾಗದಲ್ಲಿ ಬೀಳದಂತೆ ಎಚ್ಚರವಹಿಸಬೇಕಾಗುತ್ತದೆ.

ಬಣ್ಣ ಲೇಪಿಸುವಾಗ ಒಂದೇ ತೆರನಾಗಿ, ಅಷ್ಟೇ ಸಮದಟ್ಟಾಗಿ ಲೇಪಿಸಬೇಕಾಗುತ್ತದೆ. ಎಲ್ಲಾ ದೃಷ್ಟಿಕೋನದಿಂದ ಇಡೀ ಚಿತ್ರ ನಿರ್ಮಾಣವಾಗುತ್ತದೆ. ಇದರಲ್ಲಿ ಸ್ವಲ್ಪ ಅಸ್ತವ್ಯಸ್ತವಾದರೂ ಚಿತ್ರದೋಷ ಉಂಟಾಗುತ್ತದೆ ಎನ್ನುವುದು ಶಾಸ್ತ್ರಜ್ಞ ಕಲಾವಿದರು ಮನಗಂಡಿದ್ದಾರೆ. ಹೆಚ್ಚಾಗಿ ಸುಂದರ ಆಕಾರ, ಲಕ್ಷಣಗಳಿರುವ ವಿಗ್ರಹವನ್ನು ಪೂಜಿಸುವವನು ಸುಖಿಯಾಗಿಯೂ, ವಿಕೃತ ರೂಪವುಳ್ಳ ವಿಗ್ರಹವನ್ನು ಪೂಜಿಸುವಾತನಿಗೆ ಅನರ್ಥಪರಂಪರೆಯೂ ಬರುತ್ತದೆ[೨೮] ಎನ್ನುವುದು ಶಿಲ್ಪದಲ್ಲಿಯೂ ರೇಖೆ, ವರ್ಣವಿನ್ಯಾಸ, ಅಲಂಕಾರಗಳು, ಇವೆಲ್ಲವೂ ಸರಿಯಾಗಿದ್ದಲ್ಲಿ ಅವೇ ಚಿತ್ರಕರ್ಮಕ್ಕೆ ಭೂಷಣಗಳಾಗುತ್ತವೆ. ಚಿತ್ರ ಬರೆಯುವಾಗ ಚಿತ್ರಕಾರನ ಸ್ಥಾನ ದೋಷ, ವರ್ಣಗಳ ಸಂಗ್ರಹ ದೋಷ, ಏಕಾಗ್ರತೆ ಇಲ್ಲದಿರುವುದು, ಮನಶ್ಚಾಂಚಲ್ಯ ಇವು ಚಿತ್ರದ ನಾಶಕ್ಕೆ ಕಾರಣವಾಗುತ್ತವೆ[೨೯] ಎನ್ನುವುದು ಶಾಸ್ತ್ರಗ್ರಂಥದಿಂದ ತಿಳಿದು ಬರುತ್ತದೆ.

ಹಂಪೆ ಭಿತ್ತಿಚಿತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಶಾಸ್ತ್ರೀಯ ಕಟ್ಟುಬದ್ಧತೆಯನ್ನು ಅನುಸರಿಸಿರುವುದರಿಂದ ಮೇಲಿನ ಎಲ್ಲಾ ಅಂಶವನ್ನು ಒಳಗೊಂಡಿದೆ ಎನ್ನಬಹುದು. ಹಂಪೆ ಒಂದೇ ಅಲ್ಲದೇ ಇತ್ತೀಚಿನ ಹಲವು ದೇವಾಲಯಗಳಲ್ಲಿ ಪಾರಂಪರಿಕ ಭಿತ್ತಿಚಿತ್ರಕಲೆಯನ್ನು ನೋಡಬಹುದು. ಆದರೆ ಆಧುನಿಕ ಪದ್ಧತಿಯನ್ನು ಉಪಯೋಗಿಸಿ ವಸ್ತುವಿಷಯಗಳು ಹಿಂದಿನಿಂದಲೂ ಉಳಿಸಿಕೊಂಡು ಬಂದವುಗಳಾಗಿವೆ. ಸಾಂಪ್ರದಾಯಿಕ ಭಿತ್ತಿ ಚಿತ್ರಗಳಲ್ಲಿ ವಸ್ತು ಪ್ರಧಾನ ರೂಪದ ಪರಿಕಲ್ಪನೆಗೆ ಹೆಚ್ಚು ಪ್ರಾಧಾನ್ಯ ಇದ್ದರೆ, ಆಧುನಿಕ ಕಲೆಗಳಲ್ಲಿ ರೂಪ ಪ್ರಧಾನ ವಸ್ತು ಸಹಿತ ರಹಿತ ಚಿತ್ರಕ್ಕೆ ಪ್ರಾಧಾನ್ಯ ಇರುವುದನ್ನು ಕಾಣಬಹುದು. ಸಾಹಿತ್ಯದ ಜೊತೆ ಜೊತೆ ಚಿತ್ರಕಲೆ ಬೆಳವಣಿಗೆಯನ್ನು ರಂಪರಿಕ ಚಿತ್ರಗಳಲ್ಲಿ ಕಾಣಬಹುದು. ಆದುದರಿಂದ ಪಾರಂಪರಿಕ ಚಿತ್ರಗಳಲ್ಲಿ ವಸ್ತುವಿಗೆ ಪ್ರಾಧಾನ್ಯವನ್ನು ನೀಡಿರುವುದು ಕಾಣಬಹುದು. ಈ ಭಿತ್ತಿಚಿತ್ರಗಳಲ್ಲಿ ಕಲಾ ಪರಿಕಲ್ಪನೆಯು ಕಲಾವಿದ, ಸಹೃದಯಿ, ಚಿತ್ರ ಪರಿಕಲ್ಪನೆ ತಾತ್ಪರ್ಯಗಳನ್ನು ಒಳಗೊಂಡಿರುತ್ತದೆ.

---

೨೮. ಡಾ. ಅ. ಲ. ನರಸಿಂಹನ್ : ಕರ್ನಾಟಕದ ಭಿತ್ತಿಚಿತ್ರ ಪರಂಪರೆ, ಪುಟ – ೧೭

೨೯. ಅದೇ., ಪುಟ – ೧೭

[illegible]

ಭಾರತೀಯ ಕಲೆಗೆ ಧರ್ಮವೇ ಸ್ಫೂರ್ತಿಯೂ ಆದುದರಿಂದ ಕಲೆಯ ಗುರಿ ಆತ್ಮೋದ್ಧಾರ[೩೦] ಎಂದು ಕಲಾವಿದನಿಗೆ ಸಾಮಾಜಿಕ ಪ್ರಜ್ಞೆಯ ಬಗ್ಗೆ ಎಚ್ಚರಿಸುತ್ತದೆ. ಚಿತ್ರಕಲಾವಿದ ಒಳ್ಳೆಯ ಮನುಷ್ಯನಾಗಿರಬೇಕು. ಸೋಮಾರಿಯಾಗಿರಬಾರದು. ಕೋಪಗೊಳ್ಳಬಾರದು, ಶುದ್ಧ ಜೀವನ ನಡೆಸುವ, ಅಧ್ಯಯನಶೀಲನಾದ, ಆತ್ಮಸಂಯಮದ, ಭಕ್ತಮನೋಭಾವದ, ಉದಾರ ಹೃದಯವಂತಿಕೆ, ದ್ವೇಷಾಸೂಯರಹಿತನಾದ ವ್ಯಕ್ತಿಯಾಗಿರಬೇಕು.[೩೧] ಹೀಗೆ ಉತ್ತಮವಾದಂತಹ ಚರಿತ್ರಕಾರರಂತೆಯೇ ಕಲಾವಿದನಿಗೂ ಒಂದು ಉತ್ತಮವಾದ ಗುಣಗಳು ಇರಬಯಸುವುದು. ಯಥಾ ರಾಜಾ ತಥಾಪ್ರಜಾ ಎನ್ನುವಂತೆ ಯಥಾ ಕಲಾವಿದ ತಥಾ ಕಲಾಕೃತಿ ಎನ್ನಬಹುದು. ಒಂದು ಉತ್ತಮವಾದ ಕಲಾವಿದನಿಂದ ಉತ್ತಮ ಕಲಾಕೃತಿ ನಿರ್ಮಾಣವಾಗುತ್ತದೆ ಎನ್ನುವುದು ಶಿಷ್ಟ ಸಂಪ್ರದಾಯದ ನಂಬಿಕೆಯಾಗಿತ್ತು.

ವಿಜಯನಗರದ ವಿರೂಪಾಕ್ಷ ದೇವಾಲಯದ ಚಿತ್ರಗಳೇ ಕರ್ನಾಟಕದ ಪ್ರಾಚೀನ ಭಿತ್ತಿಚಿತ್ರಗಳಾಗಿವೆ[೩೨] ಎನ್ನುವ ಅಭಿಪ್ರಾಯವಿದೆ. ಈ ಚಿತ್ರಗಳನ್ನು ಕುರಿತು ಹಲವು ವಿದ್ವಾಂಸರು ರಚನಾ, ಕಾಲ ಮತ್ತು ಚಿತ್ರಗಳ ಬಗ್ಗೆ ವಿಭಿನ್ನವಾದ ನಿಲುವುಗಳನ್ನು ವ್ಯಕ್ತಪಡಿಸಿದ್ದಾರೆ. ಎಸ್. ಪರಮಶಿವನ್ ಅವರು, ಇವುಗಳ ಕಾಲವನ್ನು ಕ್ರಿ.ಶ. ೧೫–೧೬ನೇ ಶತಮಾನಕ್ಕೆ ಸೇರಿಸಿದರೆ, ಶ್ರೀ ಸಿ.ಟಿ. ಕೊಟ್ರಯ್ಯ ಅವರು ಕ್ರಿ.ಶ. ೧೫೦೮ರ ನಂತರ ಎಂದು, ಸಿ. ಶಿವರಾಮಮೂರ್ತಿಯವರು ಕ್ರಿ.ಶ. ೧೫ನೇ ಶತಮಾನಕ್ಕೆ ಸೇರಿದ್ದಾರೆ.[೩೩] ಶ್ರೀಮತಿ ಎ. ಎಲ್. ದೆಲ್ಲಾಪಿಕೋಲಾರವರು ೧೮–೧೯ನೇ ಶತಮಾನದ ಶ್ರೀರಂಗಪಟ್ಟಣ ಮತ್ತು ಮೈಸೂರು ಶೈಲಿಯ ಚಿತ್ರಗಳಿಗೆ ಹೋಲಿಸುತ್ತಾ ಇವುಗಳ ಕಾಲವನ್ನು ೧೯ನೇ ಶತಮಾನಕ್ಕೆ ಸೇರಿಸುತ್ತಾರೆ.[೩೪] ರಚನೆಯ ಕಾಲಮಾನದ ಕುರಿತಾದ ಅಭಿಪ್ರಾಯವಿದಾದರೆ ಚಿತ್ರಕಲೆ ಕುರಿತಂತೆ ಡಾ. ಎಸ್. ಸಿ. ಪಾಟೀಲರವರು, ಡಾ. ಅ. ಲ. ನರಸಿಂಹನ್, ಕೆ. ವಿ. ಎನ್. ಶಾಸ್ತ್ರಿ, ಡಾ.ಯಾದಪ್ಪ ಪರದೇಶಿ,[೩೫] ಡಾ. ಎಚ್. ಈ . ಬಸವರಾಜಪ್ಪ ಮತ್ತು ಕೆ.ವಿ. ಸುಬ್ರಹ್ಮಣ್ಯನವರು ಈ ಚಿತ್ರಗಳ ಬಗ್ಗೆ ವಿವೇಚಿಸಿದ್ದಾರೆ ಮತ್ತು ಆರ್. ಎಚ್. ಕುಲಕರ್ಣಿಯವರು ಈ ಚಿತ್ರಗಳ ಶೈಲಿಯ ದೃಷ್ಟಿಯಿಂದ ಇವುಗಳ ರಚನಾಕಾಲವನ್ನು ಕ್ರಿ.ಶ. ೧೮೦೯–೧೦ರಲ್ಲಿ ಅದೇ ದಿನಾಂಕದಲ್ಲಿ ಕೃಷ್ಣದೇವರಾಯನು ಪಟ್ಟಾಭಿಷಿಕ್ತನಾಗಿದ್ದು, ಈ ಮಹಾರಂಗ ಮಂಟಪದ ಚಿತ್ರಗಳು ಕೃಷ್ಣದೇವರಾಯನ ಕಾಲದಲ್ಲಿಯೇ ರಚನೆ ಆಗಿರುವುದಾಗಿ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

---

೩೦. ಡಾ. ಅ. ಲ. ನರಸಿಂಹನ್ : ಕರ್ನಾಟಕ ಭಿತ್ತಿಚಿತ್ರ ಪರಂಪರೆ, ಪುಟ – ೧೭೧

೩೧. ಅದೇ., ಪುಟ – ೧೭೧

೩೨. ಡಾ. ಎಸ್. ಸಿ. ಪಾಟೀಲ : ಕರ್ನಾಟಕ ಜನಪದ ಚಿತ್ರಕಲೆ, ಪುಟ – ೪೯

೩೩. ಆರ್. ಎಚ್. ಕುಲಕರ್ಣಿ : ಹಂಪಿ ಸಂಪುಟ, ಪುಟ – ೮೬

೩೪. ಅದೇ., ಪುಟ – ೮೬

೩೫. ಡಾ. ಎಚ್. ಈ. ಬಸವರಾಜಪ್ಪ : ಬಳ್ಳಾರಿ ಜಿಲ್ಲೆಯ ಚಿತ್ರಕಲೆ, ಪುಟ – ೧೬

ಈ ಮೇಲಿನ ಚರ್ಚೆಗಳ ದೃಷ್ಟಿಕೋನ ಮತ್ತು ಚಿತ್ರಕಲೆಯನ್ನು ಕುರಿತಂತೆ ನೋಡಿದಾಗ ಈ ಕಲೆಯು ಒಂದು ಶ್ರೀಮಂತ ಕಲೆಯೆಂದು ಸ್ಪಷ್ಟವಾಗುತ್ತದೆ. ಇಡೀ ವಿಜಯನಗರ ಸಾಮ್ರಾಜ್ಯದಲ್ಲಿ ತುಂಬಾ ಯಶಸ್ವಿಯಾದ ರಾಜನೆಂದರೆ ಶ್ರೀ ಕೃಷ್ಣದೇವರಾಯ. ಈತನ ಕಾಲದ ಕಲೆ, ಸಾಹಿತ್ಯದ ಕಡೆ ಗಮನಹರಿಸಿದರೆ, ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅಷ್ಟದಿಗ್ಗಜಯ ಪಂಡಿತರೇ ಇವನ ಆಸ್ಥಾನದಲ್ಲಿ ಆಶ್ರಿತರಾಗಿದ್ದರು. ಸಾಹಿತ್ಯಕ್ಕಿಂತಲೂ ರಾಜ್ಯಾಡಳಿತದಲ್ಲಿ ಮೂಲಭೂತವಾದದ್ದು ವಾಸ್ತು, ಶಿಲ್ಪ ಚಿತ್ರಗಳಾಗಿವೆ. ಆದ್ದರಿಂದ ಸಾಹಿತ್ಯದಷ್ಟೇ ಪ್ರೋತ್ಸಾಹ ಚಿತ್ರಕಲೆಗೂ ಕೃಷ್ಣದೇವರಾಯನು ನೀಡಿದ್ದಾನೆ ಎಂದು ನಿರ್ಧರಿಸಬಹುದು.

ಈ ಹಂಪಿ ಚಿತ್ರಗಳ ಶೈಲಿ, ವರ್ಣ ವಿನ್ಯಾಸ, ಕಥಾ ಸಂಯೋಜನೆ, ಆಕೃತಿಗಳ ಸಂಯೋಜನೆ ಹಾಗೂ ಇಡಿಯಾದ ಚಿತ್ರ, ಸ್ಥಳದ ಬಳಕೆ ಮತ್ತು ಇವುಗಳ ರಚನಾಕಾಲವನ್ನು ಒಂದೆಡೆ ಗಮನಿಸಿದಾಗ ಪ್ರಾಚೀನ ಭಾರತದ ಭಿತ್ತಿಚಿತ್ರ ಪರಂಪರೆಯ ಮುಂದುವರೆದ ಶೈಲಿ ಅಥವಾ ಚಿತ್ರಪರಂಪರೆ[೩೬]ಯಾಗಿದೆ ಎಂದು ತಿಳಿಯುತ್ತದೆ, ಅಜಂತಾ, ಬಾಗ್‌ಗಳಲ್ಲಿರುವ ಬೌದ್ಧಾಲಯಗಳಲ್ಲಿನ ಭಿತ್ತಿಚಿತ್ರಗಳ ರಚನೆಯ ನಂತರ ಈ ಪರಂಪರೆ ಮುಂದುವರೆದು ಬಾದಾಮಿ ನಂತರ ರಾಷ್ಟ್ರಕೂಟರ ಕಾಲದಲ್ಲಿ ಎಲ್ಲೋರಾ ಮತ್ತು ಧಾರಾಶಿವ, ಮಹಾರಾಷ್ಟ್ರ, ಲಯಣಗಳಲ್ಲಿ ಹಾಗೂ ತಂಜಾವೂರು ಬೃಹದೀಶ್ವರ ದೇವಾಲಯಗಳಲ್ಲಿ ಭಿತ್ತಿಚಿತ್ರಗಳು ರಚನೆಯಾದ ಬಗ್ಗೆ ದಾಖಲೆ ಮತ್ತು ಅವಶೇಷಗಳಿವೆ.[೩೭]

ಹಂಪಿಯಲ್ಲಿ ಚಿತ್ರಗಳ ರಚನೆ ಪ್ರಾರಂಭವಾಗುವುದಕ್ಕೆ ಮೊದಲೇ ಈ ಮೇಲೆ ಹೆಸರಿಸಿದ ಸ್ಥಳಗಳಲ್ಲಿ ಚಿತ್ರಕಲೆ ಆಯಾ ಕಾಲದ ಸಂವೇದನೆಗಳಿಗೆ ಅನುಗುಣವಾಗಿ ಪ್ರವರ್ಧಮಾನಕ್ಕೆ ಬಂದಿತ್ತು ಮತ್ತು ಬೆಳವಣಿಗೆ ಹೊಂದಿತ್ತು[೩೮] ಎನ್ನುವ ಅಭಿಪ್ರಾಯಗಳಿವೆ. ವಿಜಯನಗರದ ಸಾಮ್ರಾಜ್ಯ ಸ್ಥಾಪನೆಯಾದ ಸಮಯದಲ್ಲಿ ಮತ್ತು ಆ ಕಾಲಕ್ಕಿಂತಲೂ ಮೊದಲು ಅಂದರೆ, ಬಾದಾಮಿ ಚಾಲುಕ್ಯರ ನಂತರದ ಕಾಲದಿಂದಲೂ ವಾಸ್ತು ಮತ್ತು ಶಿಲ್ಪಕಲೆಗೆ ಪ್ರೋತ್ಸಾಹ[೩೯]ದ ಜೊತೆಯಲ್ಲಿಯೂ ಚಿತ್ರಕಲೆಗೂ ಕೂಡ ಪ್ರೋತ್ಸಾಹವಿತ್ತು ಎನ್ನುವುದಕ್ಕೆ ಮೂರನೆಯ ಲಯನ ಮಹಾವಿಷ್ಣು ಗೃಹದಲ್ಲಿಯ ವರ್ಣಚಿತ್ರಗಳು ಸಾಕ್ಷಿಯಾಗಿವೆ. ಇಲ್ಲಿ ಶಿಲ್ಪಕೃತಿಗಳಷ್ಟೇ ಪ್ರಸಿದ್ಧವಾಗಿಲ್ಲದಿದ್ದರೂ ಅಜಂತಾದಲ್ಲಿಯ ವಿಖ್ಯಾತ ವರ್ಣಚಿತ್ರಗಳಷ್ಟು ಉನ್ನತವಾದುವು, ಮಹತ್ವದ್ದು[೪೦] ಚಿತ್ರಕಲೆಯನ್ನು ಶಿಲ್ಪ ಮತ್ತು ವಾಸ್ತುವಿಗೆ ಹೋಲಿಸಿದರೆ ಬೇಗ ಹಾಳಾಗುವಂಥದ್ದು, ಬಾದಾಮಿ ಮತ್ತು ಹಂಪೆಯಲ್ಲಿನ ಅಳಿದುಳಿದ ವರ್ಣಚಿತ್ರಗಳನ್ನು ಗಮನಿಸಿದಾಗ ಆ ಕಾಲದಲ್ಲಿಯ ಚಿತ್ರಗಳಿಗೆ

---

೩೬. ಆರ್. ಎಚ್. ಕುಲಕರ್ಣಿ : ಹಂಪಿ ಸಂಪುಟ, ಪುಟ – ೮೮

೩೭. ಅದೇ., ಪುಟ – ೮೦

೩೮. ಅದೇ., ಪುಟ – ೮೦

೩೯. ಅದೇ., ಪುಟ – ೮೦

೪೦. ಆರ್. ಎಚ್. ಕುಲಕರ್ಣಿ : ಹಂಪಿ ಸಂಪುಟ, ಪುಟ – ೮೦

ಇದ್ದ ಪ್ರೋತ್ಸಾಹ, ಮಹತ್ವ ಅರ್ಥವಾಗುತ್ತದೆ. ವಿದೇಶಿ ಪ್ರವಾಸಿಗರು ಕೂಡ ದಾಖಲಿಸಿರುವಂತೆ ಅರಮನೆಗಳಲ್ಲಿ, ಮುಖ್ಯ ಬೀದಿಗಳಲ್ಲಿನ ಮನೆಗಳಲ್ಲಿ ಹಾಗೂ ರತಿಗೃಹಗಳಲ್ಲಿ ಹಲವಾರು ಚಿತ್ರಗಳಿದ್ದ ಬಗ್ಗೆ ವಿವರಣೆಗಳು ದೊರೆಯುತ್ತವೆ.[೪೧] ದುರದೃಷ್ಟವಶಾತ್ ಇಂದು ಈ ಯಾವ ಚಿತ್ರಗಳು ಅಥವಾ ಅವಶೇಷಗಳು ಉಳಿದುಕೊಂಡು ಬಂದಿಲ್ಲ. ಆದರೆ ಇಂದು ನಮಗೆ ಆ ಕಾಲದ ಉದಾಹರಣೆಗಳಾಗಿ ಹಂಪೆಯಲ್ಲಿ ಉಳಿದಿರುವ ಚಿತ್ರಗಳೆಂದರೆ ವಿರೂಪಾಕ್ಷ ದೇವಾಲಯದ ಮಹಾರಂಗ ಮಂಟಪದ ಒಳಮಾಳಿಗೆಯಲ್ಲಿ ಉಳಿದುಕೊಂಡು ಬಂದಿರುವ ಭಿತ್ತಿಚಿತ್ರಗಳು, ಕಲ್ಲಿನ ರಥ ಮತ್ತು ವಿಜಯವಿಠ್ಠಲ ದೇವಾಲಯದಲ್ಲಿ ಬಣ್ಣದ ಗುರುತುಗಳು ಮತ್ತು ಕಮಲಮಹಲ್ ಆವರಣದಲ್ಲಿ ಬುನಾದಿ ಒಂದರಲ್ಲಿ ಚಿತ್ರಗಳು ಉಳಿದಿವೆ.

I. ಸಾಂಪ್ರದಾಯಿಕ ಭಿತ್ತಿಚಿತ್ರಕಲೆ

ಪ್ರಾಚೀನ ಕಾಲದಿಂದಲೂ ಶಿಷ್ಟ ಸಾಂಪ್ರದಾಯಿಕ ಪದ್ಧತಿಯಲ್ಲಿನ ಭಿತ್ತಿ ವರ್ಣಚಿತ್ರಗಳು ಈ ಜಿಲ್ಲೆಯ ದೇವಾಲಯಗಳಲ್ಲಿ ಹೆಚ್ಚಿನ ಮಟ್ಟದಲ್ಲಿ ಕಂಡುಬರುತ್ತವೆ. ಅದರಲ್ಲೂ ವಿಶೇಷವಾಗಿ ಹಂಪೆಯಲ್ಲಿ ವಿರೂಪಾಕ್ಷೇಶ್ವರ ದೇವಾಲಯ ರಂಗಮಂಟಪದ ಚಿತ್ರಗಳು ತುಂಬಾ ವಿಖ್ಯಾತಿ ಪಡೆದ ಭಿತ್ತಿಚಿತ್ರಗಳಾಗಿವೆ. ಜೊತೆಯಲ್ಲಿ ಹಂಪೆಯ ಇತರ ಪರಿಸರದಲ್ಲಿಯೂ ಕಂಡುಬಂದರೂ ಅವುಗಳ ಕುರುಹು ಮಾತ್ರ ಸಿಗುತ್ತವೆ.

೧. ಹಂಪೆಯ ವಿರೂಪಾಕ್ಷೇಶ್ವರ ದೇವಾಲಯ ರಂಗಮಂಟಪದ ಭಿತ್ತಿಚಿತ್ರಗಳು

ಮಹಾರಂಗಮಂಟಪದ ಒಳಮಾಳಿಗೆಯು ಆಯತಕಾರವಾಗಿದ್ದು, ಈ ಆಯತ ಸ್ಥಳಾವಕಾಶವನ್ನು ಒಂದು ದೊಡ್ಡ ರಟ್ಟಿಗೆ ಕ್ಯಾನ್‌ವಾಸನ್ನು ಮಾಡಿ ಹೇಗೆ ಭಾಗ ಉಪವಿಭಾಗಿಸಬೇಕು, ಎಲ್ಲೆಲ್ಲಿ ಯಾವ ಚಿತ್ರಗಳನ್ನು ಚಿತ್ರಿಸಬೇಕು ಎನ್ನುವ ಇಂದಿನ ಪದ್ಧತಿಯಂತೆ, ಈ ರಂಗಮಂಟಪದ ಚಿತ್ರವನ್ನು ಸಂಯೋಜನೆ, ವರ್ಣವಿನ್ಯಾಸ ಎಲ್ಲಾ ಅಂಶಗಳನ್ನು ಪೂರ್ಣವಾಗಿ ನಿಯೋಜಿಸಲಾಗಿದೆ. ಈ ಮಹಾರಂಗ ಮಂಟಪದಲ್ಲಿ ಭಿತ್ತಿಚಿತ್ರಗಳನ್ನು ಚಿತ್ರಿಸಲು ಕಲಾವಿದನು ಭಾಗಗಳನ್ನು ಮಾಡಿಕೊಂಡಿದ್ದಾನೆ. ಈ ಭಾಗಗಳನ್ನು ಕಲಾವಿದನು ಅನುಕೂಲ ಮತ್ತು ವಸ್ತು, ರೂಪಭೇದ ಕಾರಣದಿಂದ ರಂಗಮಂಟಪದಲ್ಲಿ ಸ್ಥಳಾವಕಾಶ ಮತ್ತು ಪಟ್ಟಿಕೆಯನ್ನು ಮಾಡಲಾಗಿದೆ. ಈ ರೂಪಭೇದವು ಷಡಂಗದ ಪ್ರಥಮ ಅಂಗವಾಗಿದೆ. ಕ್ರಮವಾಗಿ ವಿಷ್ಣು ಲಕ್ಷ್ಮಿಯರು, ಬಲಗಡೆ ಗರುಡ ಮತ್ತು ಎಡಗಡೆ ಹನುಮಂತ ಜೊತೆಗೂಡಿ ಚಿತ್ರಿಸಲ್ಪಟ್ಟಿದ್ದಾರೆ. ಮಧ್ಯದ ಚೌಕದಲ್ಲಿ ಶಿವಪಾರ್ವತಿಯರನ್ನು ನಾರದ ಮತ್ತು ತುಂಬುರ, ವಾಣಿ, ಬ್ರಹ್ಮ, ಹಿಮವತ್ ಮತ್ತು ಇನ್ನಿತರರು ಚಿತ್ರಿತವಾಗಿದ್ದಾರೆ. ಬ್ರಹ್ಮನೆ ಮದುವೆಯ ಪುರೋಹಿತ, ಹಿಮವತ್‌ನು ಕನ್ಯಾದಾನ ಮಾಡುತ್ತಿದ್ದು, ಮತ್ತೊಂದು ಪಟ್ಟಿಕೆಯಲ್ಲಿ ಶಿವನ ವಾಹನ ಮತ್ತು ಕೆಳಗಡೆ ಅಷ್ಟದಿಕ್ಪಾಲಕರನ್ನು ಚಿತ್ರಿಸಲಾಗಿದೆ.

---

೪೧. ಆರ್. ಎಚ್. ಕುಲಕರ್ಣಿ : ಹಂಪಿ ಸಂಪುಟ, ಪುಟ – ೮೦

ಹಂಪಿ ವಿರೂಪಾಕ್ಷೇಶ್ವರ ದೇವಾಲಯದ ಭಿತ್ತಿಚಿತ್ರಗಳು

I ಧಾರ್ಮಿಕ ಭಿತ್ತಿಚಿತ್ರಗಳು

ಶೈವ

೧. ಶಿವಪಾರ್ವತಿ
೨. ವಿಷ್ಣುಲಕ್ಷ್ಮೀ
೩. ರತಿ ಮತ್ತು ಮನ್ಮಥನ ಚಿತ್ರ
೪. ಮನ್ಮಥ ವಿಜಯ
೫. ತ್ರಿಪೂರ ಸಂಹಾರ
೬. ಲಿಂಗರೂಪಿ ಶಿವನ ಚಿತ್ರ

ವೈಷ್ಣವ

ರಾಮಾಯಣ ಚಿತ್ರಗಳು

೧. ಸೀತಾಸ್ವಯಂವರ
೨. ಸೀತಾ ಕಲ್ಯಾಣ

ಮಹಾಭಾರತ ಚಿತ್ರಗಳು

೧. ಅರ್ಜುನನ ಮತ್ಸ್ಯಮಂತ್ರ ಭೇದಿಸುವ ಚಿತ್ರ
೨. ಗೋಪಿಕಾ ವಸ್ತ್ರಾಪಹರಣ
೩. ಶ್ರೀಚಕ್ರ

ದಶಾವತಾರದ ಚಿತ್ರಗಳು

೧. ಲಕ್ಷ್ಮೀನರಸಿಂಹ
೨. ದೇವಿಯ ಚಿತ್ರಗಳು

ಸಂಕೀರ್ಣ ಭಿತ್ತಿಚಿತ್ರಗಳು

೧. ಬ್ರಹ್ಮ ಸರಸ್ವಿ

II ಧಾರ್ಮಿಕೇತರ ಭಿತ್ತಿಚಿತ್ರಗಳು

ಯುದ್ಧದ ಚಿತ್ರಗಳು

೧. ಮೆರವಣಿಗೆಯಲ್ಲಿರುವ ಯತಿಯ ಚಿತ್ರ
೨. ಋಷಿಮುನಿಗಳ ಚಿತ್ರಗಳು
೩. ಬೋದಿಗೆಯ ಮೇಲಿನ ಚಿಉತ್ರಗಳು
೪. ಅಷ್ಟದಿಕ್ಪಾಲಕರು
೫. ವಾದ್ಯಗಾರರು

ಯುದ್ಧದ ಚಿತ್ರಣ

೧. ನಾಲ್ಕು ಮುಖಗಳಿರುವ ನಂದಿ
೨. ಆನೆ ಮತ್ತು ನಂದಿ ಮುಖದ ಚಿತ್ರಗಳು

ಈ ಒಂದು ವಿಷಯಕ್ಕೆ ಕಲಾವಿದನು ಸುಂದರವಾಗಿ ಸಂಯೋಜನೆಗೊಳಿಸಿ ಈ ಒಂದು ಸನ್ನಿವೇಶವನ್ನು ಸ್ಪಷ್ಟಗೊಳಿಸಲು ರೂಪಗಳ ಮಧ್ಯ ಭೇದತೆಯಿಂದ ಲಾವಣ್ಯ ಯೋಜನೆಯಡಿಯಲ್ಲಿ ಸಾದೃಶ್ಯಗೊಳಿಸಿದ್ದಾನೆ. ಅದೇ ರೀತಿಯಲ್ಲಿ ಮುಖ್ಯ ವಿಷಯವಾದ ದ್ರೌಪದಿಯ ಸ್ವಯಂವರದ ಚಿತ್ರವನ್ನು ಮೂರು ಚೌಕುಗಳಲ್ಲಿ ಬರುವಂತೆ ಚಿತ್ರಿಸಲಾಗಿದೆ ಮತ್ತು ತ್ರಿಪುರ ಸಂಹಾರದ ಚಿತ್ರವನ್ನು ಮೂರು ವೃತ್ತಗಳನ್ನು ಮಾಡಿ ಒಂದು ವೃತ್ತದಲ್ಲಿ ವಿಷ್ಣುದೇವ, ಮತ್ತೆರಡು ವೃತ್ತಗಳಲ್ಲಿ ರಾಕ್ಷಸರನ್ನು ಚಿತ್ರಿಸಿ ಸಂಯೋಜನೆಗೊಳಿಸಿದ್ದಾನೆ.

ಈ ಒಂದು ಚೌಕ ಪೂರ್ಣತೆಗಾಗಿ ಪ್ರಾಣಿ ಪಕ್ಷಿಗಳಿಂದ ಸರಿ ಹೊಂದುವಂತಹ ಬಣ್ಣಗಳಿಂದ ವರ್ಣಿಕ ಭೇದಯುಕ್ತವಾಗಿ ಸದೃಶ್ಯಗೊಳಿಸಿದ್ದಾನೆ. ಮನ್ಮಥವಿಜಯ ಚಿತ್ರವು ಶಿವನ ತಪಸನ್ನು ಮನ್ಮಥನು ಭಂಗ ಮಾಡುವಂಥದ್ದಾಗಿದೆ. ಕೃಷ್ಣನು ಗೋಪಿಕಾಸ್ತ್ರೀಯರ ವಸ್ತ್ರಗಳನ್ನು ಅಪಹರಿಸಿ ಗಿಡದ ಮೇಲೆ ಕುಳಿತಿದ್ದು, ಗೋಪಿಕಾಸ್ತ್ರೀಯರೆಲ್ಲ ಮರದ ಸುತ್ತಲೂ ನಿಂತು ತಮ್ಮ ಬಟ್ಟೆಗಳಿಗಾಗಿ ಕೃಷ್ಣನನ್ನು ಕೇಳುವ ಸನ್ನಿವೇಶ ಚಿತ್ರಿತವಾಗಿದೆ.

ಸೀತಾರಾಮರ ಕಲ್ಯಾಣದ ಚಿತ್ರಣದಲ್ಲಿ ಸ್ವಯಂವರಕ್ಕೆ ಬಂದ ರಾಜಮಹಾರಾಜರು, ಗಣ್ಯರು, ಋಷಿಮುನಿಗಳಿಂದ ಸೀತಾರಾಮರು ಆಶೀರ್ವಾದ ಪಡೆಯುತ್ತಿರುವ ಚಿತ್ರ, ಚಿಕ್ಕ ಚಿಕ್ಕ ಉಪ ಪಟ್ಟಿಕೆಗಳಲ್ಲಿ ಋಷಿಮುನಿಗಳು, ದೇವತೆಗಳು, ಗಂಧರ್ವರು, ಯಕ್ಷ ಯಕ್ಷಿಣಿಯರು, ಐರಾವತ, ಕಾಮಧೇನು, ಶರಭ, ಪಶ್ಚಿಮದ ದಿಕ್ಕಿನ ತೊಲೆಯಲ್ಲಿ ವಿರೂಪಾಕ್ಷ ಗರ್ಭಗೃಹದ ಕಡೆಯಿರುವ ತೊಲೆಯಲ್ಲಿ ವಿರೂಪಾಕ್ಷದೇವರ ಮುಖವಾಡದ ಪ್ರತಿರೂಪದಂಥ ಚಿತ್ರ, ಇದರ ಎಡಬಲ ಭಾಗಗಳಲ್ಲಿ ನಂದಿ, ಪೂಜಾರಿಗಳ, ಋಷಿಮುನಿಗಳ, ಇತರ ದೇವತೆಗಳನ್ನು ಕುರಿತು ಹದಿನೆಂಟು ಚಿತ್ರಗಳಿವೆ.[೪೨] ಮತ್ತು ನಾಲ್ಕು ಮುಖದ ಆಕಳು ಶಿವಲಿಂಗಕ್ಕೆ ಹಾಲು ಕರೆಯುತ್ತಿರುವುದು ಚಿತ್ರಿತವಾಗಿದೆ. ಶರಭ, ಐರಾವತ, ಕಾಮಧೇನು, ವಿಷ್ಣು ಮಹಿಮೆ ಸಾರುವ ಚಿತ್ರಗಳು, ಕಾರ್ತಿಕೇಯ, ಶಿವಗಣಗಳು ಮತ್ತು ದಕ್ಷಿಣ ದಿಕ್ಕಿನ ತೊಲೆಯ ಮೇಲೆ ಆನೆ ಮತ್ತು ಆಕಳು ಸಂಯುಕ್ತಗೊಂಡ ಚಮತ್ಕಾರಿಕ ಚಿತ್ರಗಳಿವೆ. ಇದಲ್ಲದೇ ಶೇಷಶಯನ ವಿಷ್ಣು, ಗಣಪತಿ, ಋಷಿಮುನಿಗಳು, ದೇವತಾ ಪುರುಷರ ಒಟ್ಟು ಇಪತ್ನಾಲ್ಕು ಚಿತ್ರಗಳು ಈ ತೊಲೆಗಳ ಮೇಲೆ ಚಿತ್ರಿತವಾಗಿವೆ.[೪೩] ಈ ಮೇಲಿನ ಚಿತ್ರಗಳು ಧಾರ್ಮಿಕ ಹಿನ್ನೆಲೆಗೆ ಸಂಬಂಧಿಸಿದಂತೆ ಚಿತ್ರಿತವಾದರೆ, ಚಾರಿತ್ರಿಕವಾಗಿ ವಿದ್ಯಾರಣ್ಯ ಮೆರವಣಿಗೆಯ ಚಿತ್ರ ಮತ್ತು ಯುದ್ಧಕ್ಕೆ ಸಂಬಂಧಿಸಿದಂತೆ ಛತ್ರ, ಚಾಮರಗಳನ್ನು ಹಿಡಿದುಕೊಂಡಿರುವ ಜನರು ಮತ್ತು ಯೋಧ ಸೈನಿಕರ ಚಿತ್ರಗಳು ಇಲ್ಲಿ ಚಿತ್ರಿತವಾಗಿವೆ.

ಇಲ್ಲಿ ಮತ್ತೊಂದು ಅಂಶವಾಗಿ ಪಟ್ಟಿಕೆಗಳು ಮತ್ತು ಪಟ್ಟಿಕೆಯೊಳಗಿನ ಚಿತ್ರ. ಇಲ್ಲಿ ಪಟ್ಟಿಕೆಗಳು ಇಂದಿನ ಕಾಲದ ಚಿತ್ರಗಳಿಗೆ ಹಾಕಿಸುವ ಕಟ್ಟುಗಳು ಎನ್ನಬಹುದು. ಈ ಪಟ್ಟಿಕೆಗಳು ಒಳ

೪೨. ಡಾ. ಎಚ್. ಈ. ಬಸವರಾಜಪ್ಪ : ಬಳ್ಳಾರಿ ಜಿಲ್ಲೆಯ ಚಿತ್ರಕಲೆ, ಪುಟ – ೨೧

೪೩. ಅದೇ., ಪುಟ – ೨೧

ಚಿತ್ರಗಳ ವಿಷಯಕ್ಕೆ ಮತಷ್ಟು ಮೆರಗನ್ನು ತಂದೊಡ್ಡುತ್ತವೆ. ವಸ್ತು ವಿಷಯಕ್ಕೆ ಇದೇ ವಿಷಯ ಇಲ್ಲಿ ಚಿತ್ರಿತವಾಗಬೇಕು ಎಂಬ ಕಟ್ಟುಬದ್ಧತೆ ಇದ್ದರೆ, ಪಟ್ಟಿಕೆಯಲ್ಲಿನ ರೇಖಾವಿನ್ಯಾಸವು ಕಲಾವಿದನು ಕರ ಚಮತ್ಕಾರ ರೇಖೆ, ಹೂವು, ಬಳ್ಳಿ ವಿನ್ಯಾಸದಲ್ಲಿ ಸ್ವಂತಿಕೆಯನ್ನು ಮೆರೆದಿದ್ದಾನೆ. ಈ ವಸ್ತುವಿಷಯದ ರೂಪಭೇದಗೊಳಿಸಲು ಈ ಒಂದು ಪಟ್ಟಿಕೆಯು ಕಲಾವಿದನಿಗೆ ಸಹಕಾರಿಯಾಗಿದೆ.

ಈ ಪಟ್ಟಿಕೆಗಳು ವಿಷಯಗಳಿಗೆ ಮತ್ತಷ್ಟು ಮೆರಗನ್ನು ತಂದುಕೊಡುತ್ತವೆ. ಇಲ್ಲಿ ಒಟ್ಟಾರೆ ರೇಖೆಗಳು ಲಾಲಿತ್ಯಪೂರ್ಣವಾದಂತಿದ್ದು, ಇಲ್ಲಿ ಶಿಲ್ಪಕಲೆಯ ಸೂತ್ರಗಳನ್ನು ಕಾಣಬಹುದು. ಒಟ್ಟಾರೆ ಇಲ್ಲಿ ರೇಖೆಯ ಸುಭಗತೆ ಶಿಲ್ಪದಂತೆಯೇ ಕಂಗೊಳಿಸುತ್ತದೆ ಮತ್ತು ದೇವಾನುದೇವತೆ, ಪುರುಷ, ಪ್ರಾಣಿ, ರಥ, ದೇಹವನ್ನು ಆಭರಣ ಮತ್ತು ವಸ್ತ್ರಗಳಿಂದ ಮುಚ್ಚಿ ಆಭರಣದ ಒಂದು ವಿನ್ಯಾಸದ ಚಿತ್ರಗಳಾದ ಸುರಳಿ, ವೃತ್ತ, ಬಳ್ಳಿ, ಹೂವುಗಳಿಂದ ಕಲಾವಿದನು ಮುಚ್ಚಿದ್ದಾನೆ. ಅಂದಿನ ವೈಭವತೆಯನ್ನು ಮೆರೆದಿದ್ದಾನೆ.

ಧಾರ್ಮಿಕ ಚಿತ್ರಗಳಿಗಿಂತ ತಾಂತ್ರಿಕ ಚಿತ್ರಗಳು ವೈಭವದಿಂದ ಕೂಡಿವೆ. ಚಾರಿತ್ರಿಕ ಚಿತ್ರಗಳು ಮತ್ತು ಧಾರ್ಮಿಕ ಚಿತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಧಾರ್ಮಿಕ ಚಿತ್ರಗಳು ಪಾರಂಪರಿಕವಾದದ್ದರಿಂದ ಒಬ್ಬರಿಂದ ಮತ್ತೊಬ್ಬ ಕಲಾವಿದನಿಗೆ ಬಳವಳಿಯಾಗಿ ಬಂದಂತಹವಾಗಿವೆ. ಚಾರಿತ್ರಿಕ ಚಿತ್ರಗಳು ಕಲಾವಿದನ ಹತ್ತಿರದ ದೃಶ್ಯವಾಗಿದ್ದರಿಂದ ಇಲ್ಲಿ ತುಂಬಾ ಸ್ಪಷ್ಟತೆಯಲ್ಲಿ ಎಲ್ಲವನ್ನು ಚಿತ್ರಿಸಲು ಪ್ರಯತ್ನಿಸಿದ್ದಾನೆ ಎನ್ನುವುದಕ್ಕೆ ಮೆರವಣಿಗೆಯ ದೃಶ್ಯದಲ್ಲಿ ಇಡೀ ಪಟ್ಟಿಕೆಗಳನ್ನು ಯುದ್ಧ, ಯುದ್ಧದಲ್ಲಿ ಭಾಗಿಯಾದ ರಥಗಳು, ಸಾರಥಿ, ಕುದುರೆ, ಆನೆ, ಸೈನಿಕರು ಮತ್ತು ಯುದ್ಧದಲ್ಲಿ ಭಾಗಿಯಾದ ಮುಖ್ಯಸ್ಥನನ್ನು ಸಹ ಆಕಾರ(form)ಗಳಿಂದ ಸುಂದರವಾಗಿ ಸಂಯೋಜನೆಗೊಳಿಸಿದ್ದಾನೆ.

ಇದರ ತಾತ್ಪರ್ಯವೇನೆಂದರೆ, ಯಾವುದು ಪಾರಂಪರಿಕವಾಗಿ ಬಂದಂತಹದ್ದು, ಅಲ್ಲಿ ಕೆಲವು ಆಕಾರಗಳು ಒಟ್ಟುಗೊಳ್ಳುತ್ತಾ ಹೋಗುತ್ತವೆ. ಅದೇ ನಮ್ಮ ಕಣ್ಣ ಮುಂದಿನ ಕಂಡಂತಹ ಚಿತ್ರವನ್ನು ತುಂಬ ಸ್ಪಷ್ಟತೆಯಿಂದ ಅಥವಾ ಇನ್ನೂ ಉಳಿದ ದೃಶ್ಯಗಳನ್ನು ಯಾವ ಯಾವ ಕಡೆಗಳಲ್ಲಿ ಸಂಯೋಜನೆಗೊಳಿಸಬೇಕು ಎನ್ನುವ ಪ್ರಶ್ನೆಗಳು ಎದುರಾಗಬಹುದು. ಈ ಎಲ್ಲಾ ಆಕೃತಿಗಳಿಗೆ ಹೆಚ್ಚಾಗಿ ಕೆಂಪು ಬಣ್ಣವನ್ನು ಹಿನ್ನೆಲೆಯಾಗಿ ಲೇಪಿಸಲಾಗಿದೆ. ಈ ಎಲ್ಲಾ ಚಿತ್ರಗಳು ಪಾರ್ಶ್ವಮುಖ ಛಾಯೆಯ ಆಕೃತಿಗಳಾಗಿದ್ದು, ವಿಶಿಷ್ಟ ರೀತಿಯ ಕಣ್ಣುಗಳನ್ನು ಹೊಂದಿವೆ. ಕೀಲುಮುಖ, ಚೂಪುಮೂಗು, ನೀಳಕಿರೀಟ, ನಿಲುವಿನಲ್ಲಿ ನಾಟಕೀಯತೆ, ಒಟ್ಟು ಉಡುಗೆಗಳ ನಿರಿಗೆಗಳು ಕಾವ್ಯಮಯವಾಗಿ ಸುಂದರವಾಗಿವೆ.[೪೪] ಆದರೆ ಈ ಎಲ್ಲಾ ಚಿತ್ರಗಳನ್ನು ಸೌಂದರ್ಯದ ನೆಲೆಯಲ್ಲಿ ಮಹಾಭಾರತ, ರಾಮಾಯಣಗಳ ಹಲವು ಸನ್ನಿವೇಶಗಳನ್ನು ಚಿತ್ರಾಧ್ಯಾಯಿಗಳಾಗಿ ಮತ್ತು ಕಲಾವಿದ ಆಗಿನ ಸಮಕಾಲೀನ ಸನ್ನಿವೇಶ, ಪರಿಸರದೊಂದಿಗೆ ತೋರಿಸಲು ಪ್ರಯತ್ನಪಟ್ಟಿದ್ದಾನೆ.

[illegible]

ವಿರುಪಾಕ್ಷೇಶ್ವರ ದೇವಸ್ಥಾನದ ರಂಗಮಂಟಪದ ಗೀರಿಜಾ ಕಲ್ಯಾಣದ ಚಿತ್ರ



ವಿರುಪಾಕ್ಷೇಶ್ವರ ದೇವಸ್ಥಾನದ ರಂಗಮಂಟಪದ ವಿರುಪಾಕ್ಷೇಶ್ವರನ ಚಿತ್ರ



ವಿರುಪಾಕ್ಷೇಶ್ವರ ದೇವಸ್ಥಾನದ ರಂಗಮಂಟಪದ ವಿರುಪಾಕ್ಷೇಶ್ವರನ ಚಿತ್ರ





ವಿರುಪಾಕ್ಷೇಶ್ವರ ದೇವಸ್ಥಾನದ ರಂಗಮಂಟಪದ ತ್ರಿಪುರ ಸಂಹಾರ ಚಿತ್ರ


ವಿರುಪಾಕ್ಷೇಶ್ವರ ದೇವಸ್ಥಾನದ ರಂಗಮಂಟಪದ ಮನ್ಮಥ ಚಿತ್ರ





ವಿರುಪಾಕ್ಷೇಶ್ವರ ದೇವಸ್ಥಾನದ ರಂಗಮಂಟಪದ ಸೀತಾ ಸ್ವಯಂವರದ ಚಿತ್ರ

ವಿರುಪಾಕ್ಷೇಶ್ವರ ದೇವಸ್ಥಾನದ ರಂಗಮಂಟಪದ ಗಿರಿಜಾ ಕಲ್ಯಾಣದ ಚಿತ್ರ



ಸಾಂಪ್ರದಾಯಿಕ ಭಿತ್ತಿ ಚಿತ್ರಕಲೆ



ವಿರುಪಾಕ್ಷೇಶ್ವರ ದೇವಸ್ಥಾನದ ರಂಗಮಂಟಪದ ಯತಿಯೋಬ್ಬರ ಮೇರವಣಿಗೆಯ ಚಿತ್ರ



ವಿರುಪಾಕ್ಷೇಶ್ವರ ದೇವಸ್ಥಾನದ ರಂಗಮಂಟಪದ ದಶಾವತಾರದ ಚಿತ್ರಗಳು


ವಿರುಪಾಕ್ಷೇಶ್ವರ ದೇವಸ್ಥಾನದ ರಂಗಮಂಟಪದ ಅಸ್ಟದಿಕ್ಪಾಲಕರ ಚಿತ್ರಗಳು





ವಿರುಪಾಕ್ಷೇಶ್ವರ ದೇವಸ್ಥಾನದ ರಂಗಮಂಟಪದ ಅಸ್ಟದಿಕ್ಪಾಲಕರ ಚಿತ್ರಗಳು





ವಿರುಪಾಕ್ಷೇಶ್ವರ ದೇವಸ್ಥಾನದ ರಂಗಮಂಟಪದ ಅಷ್ಟದಿಕ್ಪಾಲಕರ ಚಿತ್ರಗಳು





ವಿರುಪಾಕ್ಷೇಶ್ವರ ದೇವಸ್ಥಾನದ ರಂಗಮಂಟಪದ ಅಷ್ಟದಿಕ್ಪಾಲಕರ ಚಿತ್ರಗಳು







ವಿರುಪಾಕ್ಷೇಶ್ವರ ದೇವಸ್ಥಾನದ ರಂಗಮಂಟಪದ ಸೀತಾ ಕಲ್ಯಾಣದ ಚಿತ್ರ

ಇಲ್ಲಿ ಕಲಾವಿದನು ಪರಂಪರೆಗೆ ಬದ್ಧನಾಗಿರುವುದು ಸ್ಪಷ್ಟವಾಗುತ್ತದೆ. ಯಥಾದರ್ಶನ (perspective)ದ ಕೊರತೆ ಇದ್ದರೂ ಅಲಂಕಾರದಲ್ಲಿ ಮುಚ್ಚಿಹೋಗಿದೆ. ಈ ಚಿತ್ರಗಳ ರಚನೆಯಲ್ಲಿ ಅತಿಮುಖ್ಯವಾಗಿರುವ ತಾಳ್ಮೆ ಮೆಚ್ಚುವಂಥದ್ದಾಗಿದೆ. ಏಕೆಂದರೆ ಅಂದಿನ ಕಾಲದಲ್ಲಿ ಯಾವುದೇ ಆಧುನಿಕ ಉಪಕರಣವಿಲ್ಲದೇ ಮೇಲ್ಛಾವಣಿಗೆ ಚಿತ್ರ ಬರೆಯುವುದು ಕಷ್ಟಸಾಧ್ಯವಾಗಿತ್ತು. ಒಟ್ಟಾರೆ ಕಲಾವಿದನು ಚಿತ್ರಕಲೆಯಲ್ಲಿ ಪ್ರತಿಯೊಂದು ಭಾಗವನ್ನು ಪೂರ್ತಿ ಆಕೃತಿಗಳಿಂದ ಸಂಯೋಜನೆಗೊಳಿಸುವುದರೊಂದಿಗೆ ತನ್ನ ಒಂದು ಉದ್ದೇಶವನ್ನು ಪೂರ್ಣಗೊಳಿಸಿದ್ದಾನೆ ಮತ್ತು ಅಂದಿನ ರಾಜವೈಭವದ ದರ್ಶನವನ್ನು ಮಾಡಿಸಿದ್ದಾನೆ.

ಇಲ್ಲಿ ಚಿತ್ರಗಳ ನೈಜತೆ ಮತ್ತು ಕಲ್ಪನೆ ಕಲಾವಿದನ ದೃಶ್ಯಾವಳಿಗಳ ಶಿಷ್ಟ ಸಂಪ್ರದಾಯಕ್ಕೆ ಬದ್ಧವಾಗಿದೆ. ಏಕೆಂದರೆ ಉದಾಹರಣೆಗೆ, ಆನೆಯ ಚಿತ್ರ ನೈಜ, ಇದರ ಬಣ್ಣ ಕಪ್ಪು, ಕಪ್ಪು ಬದಲಾಗಿ ಬಿಳಿ ಬಣ್ಣ ಹಾಕುವುದು ಕಲಾವಿದನ ಕಲ್ಪನೆಯಾಗಿದೆ. ಹೀಗೆ ತನ್ನ ಒಂದು ವಿಶಿಷ್ಟತೆಯನ್ನು ಮೆರೆದಿದ್ದಾನೆ. ಕಲಾವಿದನು ಎಲ್ಲಾ ಆಕಾರಗಳನ್ನು ಒಂದೇರೀತಿಯಲ್ಲಿ ದುಂಡು ದುಂಡಾಗಿ ಚಿತ್ರಿಸಿದ್ದಾನೆ. ಉದಾಹರಣೆಗೆ ಕೈಕಾಲುಗಳು, ಮುಖ ಎಲ್ಲಾ ಒಂದೇ ತೆರನಾದರೂ ಇಲ್ಲಿ ಕೆಲವು ಆಯುಧ, ವಾಹನಗಳಿವೆ. ಉದಾಹರಣೆಗೆ ಮನ್ಮಥನನ್ನು ಹೂಬಾಣದಿಂದ, ಶಿವನನ್ನು ಡಮರುಗದಿಂದ ಚಿತ್ರಾಕೃತಿಗಳನ್ನು ಭೇದಿಸಿದ್ದಾನೆ ಮತ್ತು ಶಿವನು ನಂದಿಯ ಮೇಲೆ ಕುಳಿತು ಸವಾರಿ ಮಾಡುತ್ತಿರುವ ಚಿತ್ರ ಎಂದು ಕಂಗೊಳಿಸಿದರೂ, ಈ ಚಿತ್ರದಲ್ಲಿ ನಂದಿ ಪಾರ್ಶ್ವಮುಖವಾಗಿ ಕುಳಿತಿದ್ದಾನೆ. ಶಿವ ಮತ್ತು ನಂದಿಯ ದೇಹ ಒಂದೇ ಬದಿ ತೋರಿಸಿದಂತೆ ಆಗಿರಬೇಕಿತ್ತು. ಆದರೆ ಕಲಾವಿದ ಇಡೀ ನಂದಿಯನ್ನು ಶಿವನ ಒಂದೇ ಬದಿ ತೋರಿಸಿ, ಶಿವನ ದೇಹವನ್ನು ಮಾತ್ರ ಅಭಿಮುಖವಾಗಿ ತೋರಿಸಿದ್ದಾನೆ. ಕಲಾವಿದನು ಶಿವನ ಎರಡು ಕೈಗಳು, ಎರಡು ಭುಜಗಳು, ಕಂಠಪೂರ್ಣಹಾರಗಳನ್ನು ಅಭಿಮುಖವಾಗಿ ತೋರಿಸಿದ್ದಾನೆ. ಈ ಎಲ್ಲವನ್ನು ಗಮನಿಸಿದಾಗ ಕಲಾವಿದನು ತನ್ನ ಚಿತ್ರರಚನೆಯಲ್ಲಿ ತನ್ನ ಅನುಕೂಲತೆಯ ಮಿತಿಯಲ್ಲಿ ಚಿತ್ರಗಳನ್ನು ನಿರ್ಮಿಸಿದ್ದಾನೆಂದು ತಿಳಿಯುತ್ತದೆ. ಒಟ್ಟಾರೆ ಈ ಚಿತ್ರಗಳಿಗೆ ಸಂಸ್ಕಾರದಿಂದ ಕೂಡಿದ ಬಳುವಳಿಯ ಚಿತ್ರಕಲಾವಿದರು ಈ ಕಲೆಯ ಕಲಾಕರರಾಗಿದ್ದಾರೆ.

೨. ಹಂಪೆಯ ವಿರೂಪಾಕ್ಷ ದೇವಾಲಯದ ನಾಗಮಂಟಪದ ಭಿತ್ತಿಚಿತ್ರಗಳು

ಈ ನಾಗಮಂಟಪವು ವಿರೂಪಾಕ್ಷ ದೇವಾಲಯದ ಹಿಂಭಾಗದ ಎಡಭಾಗದಲ್ಲಿ ಲೋಹದ ಪ್ರತಿಮೆಯುಳ್ಳ ನಾಗದೇವಾಲಯದಲ್ಲಿದ್ದು, ಈ ನಾಗದೇವಾಲಯ ಒಳಭಾಗದ ಮೇಲ್ಛಾವಣಿಯಲ್ಲಿ ವರ್ಣಚಿತ್ರಗಳು ಕಂಡುಬಂದಿದ್ದು, ವಿರೂಪಾಕ್ಷ ದೇವಾಲಯದ ಮೇಲ್ಛಾವಣಿಯಲ್ಲಿನ ಚಿತ್ರದ ಶೈಲಿಗಿಂತ ಸ್ವಲ್ಪ ಭಿನ್ನವಾಗಿದೆ. ಇಲ್ಲಿಯ ಚಿತ್ರಗಳಲ್ಲಿ ರೇಖೆ, ಬಣ್ಣದಲ್ಲಿ ವ್ಯತ್ಯಾಸ ಕಂಡುಕೊಳ್ಳಬಹುದು. ಈ ಚಿತ್ರಗಳು ಬಹುಶಃ ಮೂಲ ಚಿತ್ರಗಳಾಗಿರದೆ, ಮೂಲ ಚಿತ್ರಗಳ ಮೇಲೆ ತಿದ್ದಿದ ಇಲ್ಲವೇ

೪೪. ಕೆ. ವಿ. ಸುಬ್ರಹ್ಮಣ್ಯಂ : ಕರ್ನಾಟಕ ದರ್ಶನ, ಪ್ರಜಾವಾಣಿ ದಿನಪತ್ರಿಕೆ, ದಿನಾಂಕ ೨೦ನೇ ಜನವರಿ ೨೦೧೧

ನಾಗ ಮಂಟಪದ ಭಿತ್ತಿಚಿತ್ರಗಳು



ಬಾಲಕ ಕೃಷ್ಣ





ನಶಿಸಿಹೊದ ಕೈ ಚಿತ್ರ

ನಾಗ ಮಂಟಪದ ಭಿತ್ತಿಚಿತ್ರಗಳು



ದಶಾವತಾರದ ಚಿತ್ರಗಳು



ಚಿತ್ರಗಳ ಮೇಲೆ ತೆಳುವಾಗಿ ಸುಣ್ಣ ಸಾರಿಸಿ ಬೇರೆಯದೇ ಚಿತ್ರಗಳನ್ನು ಬರೆದಂತೆ ಕಂಡುಬರುತ್ತದೆ. ಈ ಮಾತನ್ನು ದೃಢಪಡಿಸಲು ಕೆಲವು ಆಧಾರಗಳನ್ನು ಕಂಡುಕೊಳ್ಳಲಾಗಿದೆ. ಅವು ಪ್ರಸ್ತುತ ಚಿತ್ರದಲ್ಲಿರುವ ಬಣ್ಣಗಳ ಲೇಪನವು[೪೫] ಕಡುನೀಲಿ, ಹಳದಿ, ತಿಳಿ, ಹಸಿರು, ಬೂದು ವರ್ಣಗಳ ಮೆರಗುರಹಿತವಾಗಿ ಈ ಚಿತ್ರಗಳು ಕಂಡುಬರುತ್ತವೆ. ಇಂದಿನ ಹಲವಾರು ತುಳಸಿಕಟ್ಟೆ ಮುಂತಾದ ಚಿತ್ರಗಳ ರಚನಾಶೈಲಿಯಲ್ಲಿ ಈ ನಾಗಮಂಟಪದ ಚಿತ್ರಗಳು ಕಂಡುಬರುತ್ತವೆ.

ಇಲ್ಲಿರುವ ಭಿತ್ತಿಚಿತ್ರಗಳ ವಿಷಯಗಳನ್ನು ವಿವರಿಸುವುದಾದರೆ, ಇಲ್ಲಿ ಕಂಡುಬರುವ ವಿಷಯ ಧಾರ್ಮಿಕತೆಗೆ ಸಂಬಂಧಿಸಿದ ಚಿತ್ರಗಳು ಮತ್ತು ಇದಕ್ಕೆ ಇಂಬಾಗಿ ಹೂ-ಬಳ್ಳಿಯ ವಿನ್ಯಾಸ, ಪುಷ್ಪಾವರಣದ ವಿನ್ಯಾಸಗಳು ಇಲ್ಲಿ ಕಂಡುಬರುತ್ತವೆ. ವಿಷ್ಣುವಿನ ಅವತಾರದ ಚಿತ್ರಗಳು, ಲಕ್ಷ್ಮೀ ನರಸಿಂಹನ ಚಿತ್ರ, ದೇವಿಯ ಚಿತ್ರಗಳು, ಋಷಿಮುನಿ ಚಿತ್ರ, ಕೃಷ್ಣನ ಚಿತ್ರಗಳಿಗೆ ಸಂಬಂಧಿತವಾಗಿವೆ. ಈ ಎಲ್ಲಾ ಚಿತ್ರಗಳನ್ನು ಮಹಾರಂಗ ಮಂಟಪದ ಚಿತ್ರದಂತೆಯೇ ಪಟ್ಟಿಕೆ ಮಾಡಿಕೊಂಡರೂ ಈ ಪಟ್ಟಿಕೆಗಳಲ್ಲಿ ಮಹಾರಂಗ ಮಂಟಪದ ಪಟ್ಟಿಕೆಗಳಿಗಿಂತ ನೆರಳೆ ಬಣ್ಣದ ಲೇಪನವಾಗಿದೆ. ಮತ್ತು ವೈಭವೀಕರಣದ ಕೊರತೆಯು ಈ ರೇಖಾಚಿತ್ರಗಳಲ್ಲಿ ಕಂಡುಬರುತ್ತದೆ. ಈ ಎಲ್ಲಾ ಚಿತ್ರಗಳು ಅನುಕರಣೆಗೊಂಡ ಚಿತ್ರಗಳಾಗಿ ಕಂಡುಬಂದರೂ ಈ ಚಿತ್ರಗಳಲ್ಲಿಯೇ ವಿಶೇಷವಾದ ಕೃಷ್ಣನಿಗೆ ಸಂಬಂಧಿಸಿದ ಚಿತ್ರವು ತುಂಬಾ ವಿಶೇಷತೆಯಿಂದ ಕೂಡಿದ ಚಿತ್ರವಾಗಿದೆ.

ಕೃಷ್ಣನ ಚಿತ್ರವು ತುಂಟುತನದ ಹಸನ್ಮುಖಿಯ ಚಿತ್ರವಾಗಿದ್ದು, ಭಾವಣಿಯ ಕೆಳಭಾಗದ ಈ ಚಿತ್ರಗಳಲ್ಲಿಯೇ ಅತ್ಯಂತ ದೊಡ್ಡಗಾತ್ರದ ಚಿತ್ರ ಇದಾಗಿದೆ. ಮತ್ತು ಹಾರುವ ರೆಕ್ಕೆಗಳು ಕಲಾವಿದನ ಕಲ್ಪನೆಯ ಕಲೆಯಾಗಿ ಇಡಿಯಾದ ಸ್ಥಳಾವಕಾಶವನ್ನು ಬಳಸಿಕೊಂಡಿದೆ. ಈ ಚಿತ್ರವೊಂದರ ಆಕರ್ಷಣೆಯಿಂದಲೇ ಇತರ ಚಿತ್ರಗಳನ್ನು ನೋಡುವ, ಕೆಲಸ ಕೊಡುವಂತೆ ಮಾಡುವ ಕಲಾಕೃತಿಯಾಗಿದೆ. ಚಿತ್ರಗಳ ಮಧ್ಯೆ ಶ್ರೀಚಕ್ರಕ್ಕೆ ವರ್ಣಲೇಪನವಿದ್ದರೂ ಹೆಚ್ಚಾಗಿ ರೇಖಾಪ್ರಾಧಾನ್ಯವನ್ನು ಪ್ರದರ್ಶಿಸುತ್ತದೆ. ಹೀಗೆ ಈ ಭಿತ್ತಿಚಿತ್ರಗಳಲ್ಲಿ ಹೆಚ್ಚಿನ ಪ್ರಮಾಣದ ಚಿತ್ರಗಳು ಪೌರಾಣಿಕ ಕಥಾ ನಿರೂಪಣೆಗೆ ತಕ್ಕಂತೆ ಮೂಡಿಬಂದಿವೆ. ಇನ್ನೂ ಕೆಲವು ಚಿತ್ರಗಳು ಚಿಕಣಿ ಚಿತ್ರಗಳ ಮಾದರಿಯಲ್ಲಿ ರಚನೆಗೊಂಡಿದ್ದು, ಕೆಲವು ಚಿತ್ರಗಳು ತುಂಬಾ ಅಸ್ಪಷ್ಟವಾಗಿ ಕಾಣಿಸುವುದರಿಂದ ವಿಷಯವನ್ನು ಗ್ರಹಿಸಲು ಪ್ರಯಾಸಪಡಬೇಕಾಗುತ್ತದೆ.[೪೬] ವರ್ಣಸಂಯೋಜನೆಯನ್ನು ಕಲಾವಿದ ಇಲ್ಲಿ ಯಶಸ್ವಿಯಾಗಿ ನಿರ್ವಹಿಸಿದ್ದಾನೆ.

೩. ಹಂಪೆಯ ಕಲ್ಲಿನ ರಥದ ಮೇಲಿನ ವರ್ಣವಿನ್ಯಾಸಗಳು

ಕೃಷ್ಣದೇವರಾಯನ ಕಾಲಾವಧಿಯಲ್ಲಿ ನಿರ್ಮಿಸಲಾಗಿರುವ ವಿಜಯವಿಠ್ಠಲ ದೇವಾಲಯವು ಭಿತ್ತಿಚಿತ್ರಗಳಿಂದ[೪೭] ಅಲಂಕೃತವಾಗಿತ್ತು ಎಂದು ಸೂಕ್ಷ್ಮವಾಗಿ ಕಂಡು ಬರುತ್ತದೆ. ವಿಜಯನಗರದ

---

೪೫. ಸುಚಿತ್ರ ಜಿ. ಲಿಂಗದಳ್ಳಿ : ವಿಜಯನಗರ ಭಿತ್ತಿಚಿತ್ರಕಲೆ (ಅ.ಪ್ರ.ಎಂ.ಫಿಲ್.ಸಂ.ಪ್ರ), ಪುಟ – ೬೪

೪೬. ಅದೇ., ಪುಟ – ೬೬

೪೭. ಡಾ. ಎಚ್. ಈ. ಬಸವರಾಜಪ್ಪ : ಬಳ್ಳಾರಿ ಜಿಲ್ಲೆಯ ಚಿತ್ರಕಲೆ, ಪುಟ – ೨೧

ಕಲ್ಲಿನ ರಥದಲ್ಲಿರುವ ಭಿತ್ತಿಚಿತ್ರಗಳು







ಕಲ್ಲಿನ ರಥದಲ್ಲಿರುವ ಭಿತ್ತಿಚಿತ್ರಗಳು







ಅರಸರು ಇದರ ಮಂಟಪವನ್ನು ಸಂಗೀತ, ನೃತ್ಯ, ಉತ್ಸವಗಳಿಗಾಗಿ ಬಳಸುತ್ತಿದ್ದು ಈ ಮಂಟಪದ ಛಾವಣಿಯು ವರ್ಣಗಳಿಂದ ಕೂಡಿದ್ದು ಇಂದಿಗೂ ಛಾವಣಿಯಲ್ಲಿ ಬಣ್ಣದ ಉಳಿವಿಕೆಗಳು ಅಲ್ಲಲ್ಲಿ ಕಂಡುಬರುತ್ತವೆ.[೪೮] ಹಸಿರು, ಗುಲಕೆಂಪು, ನೀಲಿಕೆಂಪು ಬಣ್ಣದ ಗುರುತುಗಳು ಕಂಡುಬರುತ್ತವೆ. ಈ ದೇವಾಲಯದ ಮುಂದೆ ಇರುವ ಕಲ್ಲಿನ ರಥವನ್ನು ಚಿತ್ರಗಳಿಂದ ಅಲಂಕರಿಸಲಾಗಿತ್ತು[೪೯] ಎಂಬುದರಲ್ಲಿ ಅನುಮಾನವನ್ನು ಪಡೆಯಬೇಕಿಲ್ಲ. ಏಕೆಂದರೆ ಇಂದು ಹಲವು ರಥಗಳಿಗೆ ಚಿತ್ರಪಟ ಮತ್ತು ಬಟ್ಟೆಗಳಿಂದ ಅಲಂಕರಿಸುವುದು ಸಹಜವಾಗಿಯೇ ಗೋಚರಿಸುತ್ತದೆ. ಆದ್ದರಿಂದ ವಿಶ್ವವಿಖ್ಯಾತಿ ಸಾರುವ ಈ ರಥಕ್ಕೆ ವೈಭವಯುತ ಚಿತ್ರಗಳಿಂದ ಆಲಂಕರಿಸಲಾಗಿತ್ತು ಎನ್ನಬಹುದು ಮತ್ತು ರಥದ ಮಂಟಪದ ಕಮಾನುಗಳಲ್ಲಿ ಮತ್ತು ಗಾಲಿಗಳಲ್ಲಿ ಅಲ್ಲಲ್ಲಿ ಬಣ್ಣದ ಗುರುತುಗಳನ್ನು ಕಾಣಬಹುದು.

೪. ಹಂಪೆಯ ಕಮಲ ಮಹಲಿನ ವರ್ಣವಿನ್ಯಾಸ

ಕಮಲಮಹಲ್ ಆವರಣದ ಪಶ್ಚಿಮದ ದಿಕ್ಕಿನಲ್ಲಿ ಇರುವ ಒಂದು ಅಡಿಪಾಯದ ಸುತ್ತಲೂ ತೆಂಗಿನ ಮರದ ಚಿತ್ರಗಳಿಂದ ಅಲಂಕರಿಸಲಾಗಿದೆ. ಈ ತೆಂಗಿನ ಮರದ ಚಿತ್ರವನ್ನು ಒಂದೇ ತೆರನಾಗಿ ಚಿತ್ರಿಸಲಾಗಿದೆ. ಈ ಚಿತ್ರಗಳಿಗೆ ಹಸಿರುಬಣ್ಣದ ಲೇಪನವಿದ್ದು, ಈ ಚಿತ್ರಗಳು ಕ್ರಮೇಣ ಕಪ್ಪಾಗಿವೆ. ಇದಕ್ಕೆ ಕಾರಣ ಬಿಸಿಲು. ಇದೇ ರೀತಿಯಲ್ಲಿ ಹಿಂಬದಿಯಲ್ಲಿ ಭಿತ್ತಿ ತಯಾರಿಕೆಯಲ್ಲಿ ಸುಣ್ಣವನ್ನು ಉಪಯೋಗಿಸಿದ ಕುರುಹಾಗಿ ಅಲ್ಪಸ್ವಲ್ಪ ಉಳಿದ ಸುಣ್ಣದ ಲೇಪನ ಸಿಗುತ್ತದೆ. ಈ ಲೇಪನ ಕೂಡ ಬಿಸಿಲಿಗೆ ಸುಟ್ಟು ಸತ್ವ ಕಳೆದುಕೊಂಡಿದೆ. ತನ್ನ ಸುತ್ತಲೂ ಪರಿಸರದಲ್ಲಿ ಹೆಚ್ಚಾಗಿ ತೆಂಗಿನ ಗಿಡಗಳು ಇರುವುದರಿಂದ ಕಲಾವಿದನು ಅನುಕರಣೆಯಲ್ಲಿ ಈ ಗಿಡಗಳು ಸಹಜವಾಗಿಯೇ ಇಲ್ಲಿ ಚಿತ್ರಿತವಾಗಿವೆ. ಈಗಲೂ ಹಂಪಿ ಸುತ್ತಮುತ್ತ ತೆಂಗಿನ ಮರಗಳು ಹೆಚ್ಚಿನ ಸಂಖ್ಯೆಯಲ್ಲಿ ಇರುವುದನ್ನು ಕಾಣಬಹುದು.

ಹಂಪಿ ಪಕ್ಕದ ಆನೆಗುಂದಿಯ ಹುಚ್ಚಪ್ಪಯ್ಯನ ಮಠ ಮತ್ತು ಕನಕಗಿರಿಯ ವೆಂಕಟಾಲಚಪತಿ ದೇವಾಲಯದಲ್ಲಿ ಈ ವಿಜಯನಗರ ಭಿತ್ತಿಚಿತ್ರಗಳನ್ನು ಇರುವ ಉಲ್ಲೇಖಗಳು ಇವೆ. ಆದರೆ ಈಗ ಇವುಗಳ ಅವಶೇಷ ಮಾತ್ರ ನೋಡಬಹುದು. ಈ ವಿಜಯನಗರ ಆಡಳಿತ ವ್ಯಾಪ್ತಿಯು ಉತ್ತರ ಓರಿಸ್ಸಾದಿಂದ ದಕ್ಷಿಣದ ತಮಿಳುನಾಡು ಮತ್ತು ಪಶ್ಚಿಮದ ಗೋವೆಯಿಂದ ಪೂರ್ವ ಕರಾವಳಿಯವರೆಗೆ ಹಬ್ಬಿರುವುದರ ಕುರಿತು ಇತಿಹಾಸದ ಪುಟಗಳಲ್ಲಿ ನೋಡಬಹುದು. ರಾಜ್ಯಾಡಳಿತ ದೃಷ್ಟಿಯಿಂದ ಈ ಆನೆಗುಂದಿ ಮತ್ತು ಕನಕಗಿರಿಯನ್ನು ಕೊಪ್ಪಳ ಜಿಲ್ಲೆಯ ವ್ಯಾಪ್ತಿಯಲ್ಲಿ ಬಂದಂತೆಯೇ ಹಲವು ರಾಜ್ಯವ್ಯಾಪ್ತಿಯಲ್ಲಿ ವಿಜಯನಗರ ಸಾಮ್ರಾಜ್ಯ ಭಾಗವಾಗಿ ಹೊರ ರಾಜ್ಯದಲ್ಲಿಯ ಈ ವಿಜಯನಗರದ ಚಿತ್ರಗಳನ್ನು ದಕ್ಷಿಣ ಭಾರತದ ತಾಡಪತ್ರಿ, ಲೇಪಾಕ್ಷಿ, ತಿರುಪತಿ, ಕಾಂಚಿಪುರ,

---

೪೮. ಡಾ. ಎಚ್. ಈ. ಬಸವರಾಜಪ್ಪ : ಬಳ್ಳಾರಿ ಜಿಲ್ಲೆಯ ಚಿತ್ರಕಲೆ, ಪುಟ – ೨೧

೪೯. ಅದೇ.. ಪುಟ – ೨೧

ಶ್ರೀರಂಗಪಟ್ಟಣ ಮುಂತಾದ[೫೦] ಕಡೆಗಳಲ್ಲಿ ಕಾಣಬಹುದು. ಒಟ್ಟಾರೆ ಇಲ್ಲಿ ಕಲಾವಿದ ರೂಪ ಭೇದಗೊಳಿಸಲು ಭಿನ್ನತೆಯಿಂದ ಸ್ಪಷ್ಟಗೊಳಿಸಿದ್ದಾನೆ ಮತ್ತು ಇಲ್ಲಿ ಯಾವ ಚಿತ್ರಕ್ಕೆ ಎಷ್ಟು ಅವಕಾಶ ಬೇಕು. ಶಿವ ಪಾರ್ವತಿ, ಕೃಷ್ಣ, ಅರ್ಜುನ, ಅಷ್ಟದಿಕ್ಪಾಲಕರು ಮುಂತಾದವರಿಗೆ, ಸ್ತ್ರೀ ಪುರುಷರಿಗೆ ಮತ್ತು ಪ್ರಾಣಿ-ಪಕ್ಷಿಗಳಿಗೆ ಮತ್ತು ಯುದ್ಧದ ಚಿತ್ರದಲ್ಲಿ ಮುಖ್ಯ ವಿಷಯಕ್ಕೆ ಎಷ್ಟು ಪ್ರಮಾಣ ಇರಬೇಕು, ಮುಖ್ಯ ಆಕಾರ ಮೇಲ್ಗಡೆಯಲ್ಲಿ ಚಿಕ್ಕ ಚಿಕ್ಕದಾಗಿ ಈಟಿಗಳನ್ನು ಹಿಡಿದು ಸೈನಿಕರನ್ನು ಚಿತ್ರಿಸಿದ್ದಾರೆ.

ಈ ಎಲ್ಲಾ ಚಿತ್ರಗಳನ್ನು ನೋಡುವವನಿಗೆ ಭಾವ ಪ್ರಕಟಗೊಳ್ಳುವಂತೆ ಆಕಾರಗಳ ಭಾವಪೂರ್ಣ ಅಭಿವ್ಯಕ್ತಿಗಳಾಗಿವೆ ಮತ್ತು ಸೌಂದರ್ಯದಡಿಯಲ್ಲಿ ರೇಖೆಗಳ ಸೌಂದರ್ಯವು ಲಾವಣ್ಯಯೋಜನೆಯೊಂದಿಗೆ ಸದೃಶಗೊಂಡಿವೆ. ಈ ಒಂದು ಸಂಪ್ರದಾಯವು ಇಂದಿಗೂ ಕೂಡ ಮುಂದುವರೆದುಕೊಂಡು ಬಂದಂತಹ ಭಿತ್ತಿಚಿತ್ರಗಳನ್ನು ಹೊಸಪೇಟೆ, ಬಳ್ಳಾರಿ, ಕೂಡ್ಲಿಗಿ, ಸಂಡೂರು, ಸಿರಗುಪ್ಪ ಮತ್ತು ಹೂವಿನ ಹಡಗಲಿ ಮುಂತಾದ ತಾಲೂಕು ಮತ್ತು ಹಳ್ಳಿಗಳಲ್ಲಿ ಕಾಣಬಹುದು. ಈ ಒಂದೇ ಜಿಲ್ಲೆ ಅಲ್ಲದೇ ಕರ್ನಾಟಕ ಮತ್ತು ಭಾರತದ ಉದ್ದಕ್ಕೂ ದೇವಾಲಯ ನಿರ್ಮಾಣದ ಜೊತೆಯಲ್ಲಿ ಕಲಾವಿದನಿಂದ ರಚಿತವಾದ ಧಾರ್ಮಿಕ ಚಿತ್ರಗಳಾದ ದೇವ ದೇವತೆಗಳು ಮತ್ತು ವಿನ್ಯಾಸದ ಚಿತ್ರಗಳನ್ನು ನೋಡಬಹುದು.

೫. ಆನೆಗುಂದಿ ಹುಚ್ಚಪ್ಪಯ್ಯನ ಮಠದ ಭಿತ್ತಿಚಿತ್ರಗಳು

ಕ್ರಿ.ಶ. ೧೩೩೬ರಲ್ಲಿ ಹಕ್ಕ-ಬುಕ್ಕ ಎಂಬ ಸಹೋದರರು ವಿಜಯನಗರ ಸಾಮ್ರಾಜ್ಯ ಸ್ಥಾಪಿಸಿದರೆಂದು ಎಲ್ಲರಿಗೂ ಗೊತ್ತಿರುವ ಸಂಗತಿ. ಆನೆಗೊಂದಿಯು ಸಂಗಮ ಸಹೋದರರಾದ ಹರಿಹರ-ಬುಕ್ಕರ ಆರಂಭಿಕ ರಾಜಧಾನಿಯಾಗಿತ್ತು[೫೧] ಎಂಬುದು ತಿಳಿದು ಬರುತ್ತದೆ. ಈ ಆನೆಗುಂದಿಯ ಹುಚ್ಚಪ್ಪಯ್ಯನ ಮಠದ ಮೇಲ್ಛಾವಣಿಯಲ್ಲಿ ಭಿತ್ತಿಚಿತ್ರಗಳ ಕುರುಹುಗಳು ಇಂದು ಕಂಡುಬರುತ್ತವೆ. ಈ ಆನೆಗುಂದಿಯು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿಗೆ ಸೇರಿದ್ದಾಗಿದೆ. ಊರೊಳಗೆ ಚಾಲುಕ್ಯ, ಹೊಯ್ಸಳ ಹಾಗೂ ವಿಜಯನಗರ ಕಾಲಕ್ಕೆ ಸೇರಿದ ಅನೇಕ ವಾಸ್ತುಶಿಲ್ಪ, ಶಿಲ್ಪ[೫೨]ಗಳೊಂದಿಗೆ ಚಿತ್ರಕಲೆಯು ನಿರ್ಮಾಣವಾಗಿತ್ತು ಎಂಬುದಕ್ಕೆ ಇಲ್ಲಿ ಅನೇಕ ಭಿತ್ತಿಚಿತ್ರಕಲೆಯ ರೇಖಾವಿನ್ಯಾಸದ ಕುರುಹುಗಳು ಸಿಗುತ್ತವೆ. ಹುಚ್ಚಪ್ಪಯ್ಯನ ಮಠವು ಅಂಬಿಗರ ಬಾಗಿಲ ಹತ್ತಿರ ತೋಟದಲ್ಲಿದೆ. ಎರಡು ಅಂತಸ್ತಿನ ಈ ಕಟ್ಟಡವನ್ನು ಪುರಾತತ್ವ ಇಲಾಖೆಯವರು ದುರಸ್ತಿಗೊಳಿಸಿದ್ದಾರೆ. ಕಟ್ಟಡವು ವಿಶಾಲವಾಗಿದ್ದು, ೬ ಕಂಬಗಳು ಸರಳವಾಗಿದ್ದು, ಚೌಕಾಕಾರದಲ್ಲಿವೆ. ಅಧಿಷ್ಠಾನವು ಮಂಚಬಂಧ ಶೈಲಿಯಲ್ಲಿದೆ. ಮತ್ತು ಮೇಲ್ಛಾವಣಿಯಲ್ಲಿ ವಿಜಯನಗರ ಕಾಲದ

೫೦. ಡಾ. ಎಚ್. ಈ. ಬಸವರಾಜಪ್ಪ : ಬಳ್ಳಾರಿ ಜಿಲ್ಲೆಯ ಚಿತ್ರಕಲೆ, ಪುಟ – ೧೬

೫೧. ಬಸವರಾಜ ಅಳಕವಾಡಿ (ಸಂ.) : ಆನೆಗೊಂದಿ ಅವಲೋಕನ (ಇತಿಹಾಸ ಮತ್ತು ಪರಂಪರೆ ಸಮೀಕ್ಷೆ), ಪುಟ – ೫೪

೫೨. ಅದೇ., ಪುಟ – ೧೧೨



ಹುಚ್ಚಪ್ಪಯ್ಯನ ಮಠ



ಹುಚ್ಚಪ್ಪಯ್ಯನ ಮಠ ಮೇಲ್ಭಾದ ಭಿತ್ತಿಚಿತ್ರಗಳಿರುವ ನೆಲೆ



ಹುಚ್ಚಪ್ಪಯ್ಯನ ಮಠ ಮೇಲ್ಛಾದ ನಶಿಸಿಹೊದ ಭಿತ್ತಿಚಿತ್ರಗಳು

ವರ್ಣ ಚಿತ್ರಗಳಿದ್ದು, ಅವುಗಳಲ್ಲಿ ಒಂಭತ್ತು ಯುವಕರು ಆನೆಯ ಆಕಾರದಲ್ಲಿ, ಐವರು ತರುಣಿಯರು ಕುದುರೆಯ ಆಕಾರದಲ್ಲಿ ನಿಂತಿರುವ ಚಿತ್ರಗಳು ಅಚ್ಚರಿ ಮೂಡಿಸುತ್ತವೆ.[೫೩] ಮೆರವಣಿಗೆಯ ದೃಶ್ಯ, ನವನಾರಿ ಕುಂಜರ[೫೪] ಹೀಗೆ ಈ ಮಠದ ಚಿತ್ರಗಳ ಬಗ್ಗೆ ಉಲ್ಲೇಖಗಳು ನಮಗೆ ದೊರೆಯುತ್ತವೆ. ಈಗಿನ ಸಂದರ್ಭದಲ್ಲಿ ಈ ಎಲ್ಲಾ ಚಿತ್ರಗಳು ಇಲ್ಲದಂತಾಗಿ ಇದರ ಕುರುಹಾಗಿ ಕಮಲ ರೇಖಾವಿನ್ಯಾಸದಂತಹವು ಅಲ್ಪ ಸ್ವಲ್ಪವಾಗಿ ಕಾಣಿಸಿಕೊಳ್ಳುತ್ತವೆ.

೬. ಕನಕಗಿರಿ ದೇವಾಲಯದ ಭಿತ್ತಿಚಿತ್ರ / ಶಿಲ್ಪಗಳು

ಕನಕಗಿರಿಯು ಆಡಳಿತಾತ್ಮಕವಾಗಿ ದೂರ ಉಳಿದರೂ ಇದು ಕೂಡ ಅಂದಿನ ವಿಜಯನಗರ ಸಾಮ್ರಾಜ್ಯಕ್ಕೆ ಹತ್ತಿರವಾಗಿದ್ದು ಇಲ್ಲಿನ ಲಕ್ಷ್ಮೀನರಸಿಂಹ ಸ್ವಾಮಿ ದೇವಾಲಯದಲ್ಲಿ ವಿಜಯನಗರೋತ್ತರ ಕಾಲದ ಭಿತ್ತಿಚಿತ್ರಗಳು ಕಂಡುಬರುತ್ತವೆ. ಆದರೆ ಆ ಚಿತ್ರಗಳೆಲ್ಲಾ ಹಾಳಾಗಿವೆ. ಈ ಚಿತ್ರಗಳ ಕುರುಹಾಗಿ ಅಲ್ಪಸ್ವಲ್ಪ ರೇಖಾಚಿತ್ರಗಳು ಕಾಣುತ್ತವೆ. ೧೮ನೇ ಶತಮಾನದ ಲಕ್ಷ್ಮೀ ನರಸಿಂಹ ಸ್ವಾಮಿ ದೇವಾಲಯ ವಿಶಾಲವಾಗಿದ್ದು, ಉತ್ತರದ ಹೊರಗೋಡೆಯ ಎರಡು ಬದಿಯ ಗೂಡುಗಳಲ್ಲಿ, ಒಳಾಂಗಣದ ವಿವಿಧ ದೇವಾಲಯ ಮಂಟಪಗಳ ಮೇಲ್ಭಾಗದ ಗೂಡುಗಳಲ್ಲಿ ನೂರಾರು ಗಾರೆಯ ಶಿಲ್ಪಗಳಿವೆ. ಈ ಗಾರೆಗಳಿಗೆ ವರ್ಣಲೇಪನವನ್ನು ಸಹ ಮಾಡಲಾಗಿದೆ. ಈ ದೇವಾಲಯದ ಮೇಲ್ಛಾವಣಿಯ ವರ್ಣಚಿತ್ರಗಳಲ್ಲಿ ಇಂದು ಉಳಿದ ಚಿತ್ರಗಳು ಅಸ್ಪಷ್ಟವಾಗಿ ಕಾಣುತ್ತವೆ. ಚಿತ್ರದಲ್ಲಿ ಮರಹತ್ತಿ ಆಡುತ್ತಿರುವ ಬಾಲಕನ ಚಿತ್ರವಷ್ಟೆ ಉಳಿದಿರುವುದು. ಪ್ರಾಯಶಃ ಅದು ಕೃಷ್ಣ ಗೆಳೆಯರೊಡನೆ ಆಡುತ್ತಿರುವ ಸನ್ನಿವೇಶದ್ದಿರಬಹುದು. ತೀರಾ ಹೊರಗಿನ ಪ್ರವೇಶದ್ವಾರದ ಒಳ ಮೇಲ್ಛಾವಣಿಯಲ್ಲಿ ಮೂರು ಅಂಕಣಗಳಿದ್ದು, ಅವುಗಳ ಮಧ್ಯೆ ಆಲದೆಲೆಯ ಮೇಲಿನ ಬಾಲಕೃಷ್ಣ ಹಾಗೂ ಸುತ್ತಲೂ ಹಲವಾರು ವಿನ್ಯಾಸಗಳಿವೆ.[೫೫] ಮತ್ತು ನೀಲಿ ಬಣ್ಣದ ಲೇಪನವನ್ನು ಈ ಕೃಷ್ಣ ಚಿತ್ರಕ್ಕೆ ಮಾಡಲಾಗಿದೆ.

೭. ಕೆಂಚನಗುಡ್ಡದ ಗಂಗಾಧರೇಶ್ವರ ದೇವಾಲಯದ ಭಿತ್ತಿಚಿತ್ರಗಳು*

ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲೂಕಿನ ತೆಕ್ಕಲಕೋಟೆಯ ಹತ್ತಿರವಿರುವ ಕಾಂಚನಗಢವು ಬಾಲದ ಹನುಮಪ್ಪನಾಯಕನಿಗೆ ಬಿಜಾಪುರದ ಸುಲ್ತಾನನಿಂದ ಕೊಡುಗೆಯಾಗಿ ಬಂದಿತ್ತು. ಬಳ್ಳಾರಿಯ ಪಾಳೆಯಗಾರನಾದ ದೇವಪ್ಪನಾಯಕನು ಕ್ರಿ.ಶ. ೧೭೦೪ರಲ್ಲಿ ಮುದುಕನಗೌಡ ಎಂಬುವವನಿಗೆ ಸಿರುಗುಪ್ಪೆಯ ನಾಡಗೌಡಿಕೆಯನ್ನು ದಯಪಾಲಿಸುವನು. ಮುದುಕನಗೌಡನಿಗೆ ದೇವನಗೌಡ, ಕೆಂಚನಗೌಡ, ಸಾಹೇಬಗೌಡ ಮತ್ತು ಎರಡನೆಯ ರಾಮನಗೌಡ ಎಂಬ ನಾಲ್ಕು

---

* ಕೆಂಚನಗುಡ್ಡದ ಗಂಗಾಧರೇಶ್ವರ ದೇವಾಲಯದ ಭಿತ್ತಿಚಿತ್ರಗಳನ್ನು ಇತ್ತೀಚೆಗಷ್ಟೇ ಹೊಸದಾಗಿ ಶೋಧಿಸಿದವರು ಡಾ. ಎಸ್. ಸಿ. ಪಾಟೀಲರವರು. ಅವರು ಇನ್ನೂ ಅಪ್ರಕಟಿತವಾದ ಈ ದೇವಾಲಯದ ಭಿತ್ತಿಚಿತ್ರ ಮತ್ತು ಲೇಖನವನ್ನು ನನ್ನ ಅಧ್ಯಯನದಲ್ಲಿ ಬಳಸಿಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಅನಂತ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

೫೩. ಪಿ. ಆರ್. ತಿಪ್ಪೇಸ್ವಾಮಿ (ಪ್ರಸಂ.) : ಕಲಾಕೋಶ, ಪುಟ – ೩೩

೫೪. ಅದೇ., ಪುಟ – ೩೩

೫೫. ಪಿ. ಆರ್. ತಿಪ್ಪೇಸ್ವಾಮಿ (ಪ್ರಸಂ.) : ಕಲಾಕೋಶ, ಪುಟ – ೬೫

ಕನಕಗಿರಿಯ ಕನಕಾಚಲ ದೇವಸ್ಥಾನದ ಆವರಣದ ಭಿತ್ತಿ ಶಿಲ್ಪಗಳ ಮೇಲಿನ ಚಿತ್ರಕಲೆ









ಕನಕಗಿರಿಯ ವಿಜಯನಗರ ಭಿತ್ತಿ ಚಿತ್ರಗಳಿರುವ ರಂಗ ಮಂಟಪ





ಜನ ಗಂಡು ಮಕ್ಕಳಿದ್ದರು. ಮುದುಕನಗೌಡನ ಅಣ್ಣನಾದ ರಾಮನಗೌಡನಿಗೆ ಒಬ್ಬ ಮಗನಿದ್ದನು. ಅವನು ಬಾಲ್ಯದಲ್ಲಿಯೇ ತೀರಿಹೋಗಿದ್ದನು. ಆದ್ದರಿಂದ ಮುದುಕನಗೌಡನು ತನ್ನ ಎರಡನೆಯ ಮಗನಾದ ಕೆಂಚನಗೌಡನನ್ನು ಅಣ್ಣನಿಗೆ ದತ್ತುಕೊಟ್ಟನು.

ಕೆಂಚನಗೌಡನು ಕ್ರಿ.ಶ. ೧೭೦೮ರಲ್ಲಿ ಹೊಸದುರ್ಗವನ್ನು ಕಟ್ಟಿಸಿದನು. ಕ್ರಿ.ಶ. ೧೭೧೬ರಲ್ಲಿ ಸಿರುಗುಪ್ಪೆಯ ನಾಡಗೌಡಿಕೆಯನ್ನು ಪಡೆದನು. ಕ್ರಿ.ಶ. ೧೭೧೭ರಲ್ಲಿ ಕಾಂಚನಗಢ ಗುಡ್ಡದ ಮೇಲೆ ಕೋಟೆ ಕಟ್ಟಿಸಿ, ಕೆಳಗೆ ಶ್ರೀ ಗಂಗಾಧರೇಶ್ವರ ಸ್ವಾಮಿಯ ದೇವಸ್ಥಾನವನ್ನು ಕಟ್ಟಿಸಿದನಲ್ಲದೇ ಬಸವ ಮಠವನ್ನು ಕಟ್ಟಿಸಿದನು. ಕೆಂಚನಗೌಡ ಕೋಟೆಯನ್ನು ಕಟ್ಟಿಸಿದ್ದರಿಂದ ಕಾಂಚನಗಢ ಕೆಂಚನಗುಡ್ಡವಾಯಿತು[೫೬] ಎಂದು ವಿದ್ವಾಂಸರ ಅಭಿಪ್ರಾಯ. ಈ ಕೆಂಚನಗುಡ್ಡದ ಗಂಗಾಧರೇಶ್ವರ ಸ್ವಾಮಿಯ ದೇವಸ್ಥಾನದ ಭಾವಣಿಯಲ್ಲಿ ಭಿತ್ತಿಚಿತ್ರಗಳು ಇರುವುದಾಗಿ ದಾಖಲೆಗಳು ಸಿಗುತ್ತವೆ.

ಈ ಭಿತ್ತಿಚಿತ್ರಗಳನ್ನು ಕುರಿತು ಸ್ಥಳೀಯರಾದ ಗುಂಡಮ್ಮ ಎಂಬ ೫೩ರ ವೃದ್ಧೆಯು ೮೦ ವರ್ಷಗಳ ಹಿಂದೆ ಇಲ್ಲಿ ಅನೇಕ ರಾಮಾಯಣ ಕಥನಕ್ಕೆ ಸಂಬಂಧಿಸಿದಂತೆ ಭಿತ್ತಿಚಿತ್ರಗಳು ಭಾವಣಿಯ ತುಂಬೆಲ್ಲಾ ಇದ್ದಿರುವುದಾಗಿ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಈ ಕುರಿತು ಶ್ರೀ ಗಂಗಾಧರೇಶ್ವರ ಸ್ವಾಮಿಯ ದೇವಸ್ಥಾನದ ಒಳಭಾವಣಿಯಲ್ಲಿ ಭಿತ್ತಿಚಿತ್ರಗಳ ಮೇಲೆ ಸುಣ್ಣ ಲೇಪನವಾಗಿದ್ದು, ಸ್ವಲ್ಪ ಸುಣ್ಣದ ಲೇಪನವನ್ನು ಹರಸಾಹಸದಿಂದ ತೆಗೆದಾಗ ಅಲ್ಲಿ ಮಸುಕಾದ ರಾಮ, ಸೀತೆ ಮತ್ತು ಆನೆಯ ಮೇಲೆ ಸವಾರ, ಋಷಿ, ಮುನಿ ಮತ್ತು ನರ್ತಕಿಯಂತಹ ಚಿತ್ರಕುರುಹುಗಳು ಕಂಡುಬಂದವು.

ಈ ಆಧಾರದ ಮೇಲೆ ಇಲ್ಲಿ ಇನ್ನೂ ಅನೇಕ ಚಿತ್ರಗಳು ಸುಣ್ಣ ಲೇಪನದಲ್ಲಿ ಮುಚ್ಚಿಹೋಗಿವೆ ಎನ್ನಬಹುದು. ಈ ಕುರಿತು ಡಾ. ಶ್ಯಾಮಲಾರವರು ಗಂಗಾಧರ ಸ್ವಾಮಿಯ ದೇವಸ್ಥಾನದ ಗೋಡೆಗಳ ಮೇಲೆ ಕೆಲವು ತೈಲವರ್ಣದ ಚಿತ್ರಗಳಿವೆ[೫೭] ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಮತ್ತು ಕೆ. ಎಲ್. ರಾಜಶೇಖರ್ ಎನ್ನುವವರು ಕಲ್ಯಾಣ ಕರ್ನಾಟಕದ ಅರಸು ಮನೆತನಗಳು ಎನ್ನುವ ಪುಸ್ತಕದಲ್ಲಿ, ದೇವಸ್ಥಾನದ ಮೇಲೆ ತೈಲವರ್ಣ ಚಿತ್ರಗಳಿದ್ದು, ಬಹುತೇಕ ನಶಿಸಿ ಹೋಗಿವೆ. ಈ ತೈಲ ಚಿತ್ರಗಳು ಹಂಪಿ ವಿರೂಪಾಕ್ಷ ದೇವಾಲಯದಲ್ಲಿನ ತೈಲಚಿತ್ರಗಳನ್ನು ಹೋಲುವ ಸಾಧ್ಯತೆ ಇದೆ[೫೮] ಎನ್ನುವ ಅಭಿಪ್ರಾಯವನ್ನೇ ವ್ಯಕ್ತಪಡಿಸುತ್ತಾರೆ. ಆದರೆ ೧೭೧೭ರಲ್ಲಿ ಈ ಗಂಗಾಧರೇಶ್ವರ ದೇವಾಲಯ ಕಟ್ಟಿಸಿದ್ದು, ಈ ದೇವಾಲಯದ ನಿರ್ಮಾಣದೊಂದಿಗೆ ವರ್ಣಚಿತ್ರಗಳನ್ನು ರಚಿಸಿರುವ ಸಾಧ್ಯತೆಯಿದೆ. ಏಕೆಂದರೆ ವಿಜಯನಗರದ ಶೈಲಿಗೆ ತುಂಬಾ ಹತ್ತಿರವಾದ ವರ್ಣಚಿತ್ರಗಳಿವಾಗಿವೆ. ಆದ್ದರಿಂದ ಈ ವರ್ಣಚಿತ್ರ ಕಾಲಮಾನವನ್ನು ದೇವಾಲಯ

---

೫೬. ಡಾ. ಸಿ. ಆರ್. ಶ್ಯಾಮಲಾ : ಪೂರ್ವ ಕರ್ನಾಟಕದ ಪಾಳೆಯಗಾರರು – ಒಂದು ಅಧ್ಯಯನ, ಪುಟ – ೨೨

೫೭. ಡಾ. ಸಿ. ಆರ್. ಶ್ಯಾಮಲಾ : ಪೂರ್ವ ಕರ್ನಾಟಕದ ಪಾಳೆಯಗಾರರು – ಒಂದು ಅಧ್ಯಯನ, ಪುಟ – ೧೦೮

೫೮. ಡಾ. ಎಂ. ಕೊಟ್ರೇಶ್ : ಕಲ್ಯಾಣ ಕರ್ನಾಟಕದ ಅರಸು ಮನೆತನಗಳು, ಪುಟ – ೧೬೭

ಕೆಂಚನಗುಡ್ಡ ಗಂಗಾಧರೇಶ್ವರ ದೇವಾಲಯದ ನಶಿಸಿಹೊದ ಭಿತ್ತಿ ಚಿತ್ರಗಳು







ಚಿತ್ರಗಳು ಕೃಪೆ ಡಾ.ಎಸ್.ಸಿ.ಪಾಟೀಲ ಅವರ ಸಂಗ್ರಹದಿಂದ

ಕೆಂಚನಗುಡ್ಡ ಗಂಗಾಧರೇಶ್ವರ ದೇವಾಲಯದ ನಶಿಸಿಹೊದ ಭಿತ್ತಿ ಚಿತ್ರಗಳು









ಚಿತ್ರಗಳು ಕೃಪೆ ಡಾ.ಎಸ್.ಸಿ.ಪಾಟೀಲ ಅವರ ಸಂಗ್ರಹದಿಂದ

ನಿರ್ಮಾಣದ ಕಾಲಮಾನವಾದ ಕ್ರಿ.ಶ. ೧೭೧೭ನ್ನು ವರ್ಣಚಿತ್ರ ಕಾಲವೆಂದು ನಿರ್ಧರಿಸಬಹುದು ಎಂದು ಡಾ. ಎಸ್. ಸಿ. ಪಾಟೀಲ ಅವರು ವ್ಯಕ್ತಪಡಿಸಿದ ಅಭಿಪ್ರಾಯ ಸರಿಯಾದುದೆನಿಸುತ್ತದೆ. ಆದುದರಿಂದ ೧೮ನೇ ಶತಮಾನದ ಪ್ರಾರಂಭದಲ್ಲಿ ತೈಲವರ್ಣವು ಭಾರತಕ್ಕೆ ಪ್ರವೇಶವಿಲ್ಲದ ಕಾರಣ ಆ ಸಮಯದಲ್ಲಿ ತೈಲವರ್ಣದ ಲೇಪನ ಅಸಾಧ್ಯ. ಆದ್ದರಿಂದ ಸಸ್ಯಜನ್ಯ ಮತ್ತು ಖನಿಜಜನ್ಯ ವರ್ಣವೇ ಇಲ್ಲಿ ಲೇಪನವಾಗಿದೆ. ಕೆಂಪು, ಕಂದು, ನೀಲಿ, ಹಸಿರು ವರ್ಣಗಳು ಇಲ್ಲಿ ಕಂಡುಬರುತ್ತವೆ.

II. ಆಧುನಿಕ ಭಿತ್ತಿಚಿತ್ರಕಲೆ

ಚಿತ್ರಕಲೆಯಲ್ಲಿ ನವ್ಯತೆ ಪ್ರಯೋಗಶೀಲವಾಗಿರುವುದರಿಂದ ನವ್ಯದ ಜೀವಾಳವೆಂದು ಒಪ್ಪಿಕೊಂಡರೂ, ಇದರ ರೂಪ ವೃತ್ತಿ, ಪ್ರಕೃತಿ, ತಂತ್ರ, ಶೈಲಿಗಳಲ್ಲಿ ಕಂಡು ಬರುವ ಸಾಮ್ಯವನ್ನು ಗುರುತಿಸಬಹುದಾಗಿದೆ. ನವ್ಯತೆಯ ಪ್ರಯೋಗದ ನೆಲೆಯಲ್ಲಿ ಚಿತ್ರಕಲೆಯು ತನ್ನ ಪರಿಧಿಯನ್ನು ದಾಟಿ ಬೆಳವಣಿಗೆಯ ಹೊಸ ಮುಖಗಳನ್ನು ತನ್ನದಾಗಿಸಿಕೊಂಡು ಶ್ರೀಮಂತ ಸೃಜನ ನೆಲೆಯಲ್ಲಿ ಅಭಿವೃದ್ಧಿ ಹೊಂದುತ್ತಿದೆ ಎನ್ನುವುದಕ್ಕೆ ಪ್ರತಿಸ್ಥಾಪನ ಕಲೆ ಪರ್‌ಫರ್ಮಿಂಗ್ ಆರ್ಟ್ಸ್ ಬಾಡ ಆರ್ಟ್ಸ್ (Conceptual) ಆರ್ಟ್ಸ್, ವಿಷಯ ಆಧಾರಿತಚಿತ್ರ ಭಿತ್ತಿರೂಹುಗಳು (ಮ್ಯೂರಲ್ಸ್) ನವ್ಯಕಲೆಯ ಆಯಾಮಗಳಾಗಿವೆ. ಭಿತ್ತಿರೂಹುಗಳು ಚಿತ್ರ, ಶಿಲ್ಪ ಸಂಯುಕ್ತ ಕಲಾಪ್ರಕಾರವಾಗಿ ಮೈವೆತ್ತಿದೆ. ಈ ಭಿತ್ತಿರೂಹು 'ಉಬ್ಬುಚಿತ್ರಕಲೆ' ಯಂತೆ ಕಂಗೊಳಿಸುತ್ತದೆ.

ಭಾರತವು ಪುರಾತನ ಕಾಲದಿಂದಲೂ ವಿವಿಧ ಕಲೆಗಳಿಗೆ ಹೆಸರಾಗಿದೆ. ಗುಹಾಂತರ ದೇವಾಲಯಗಳಲ್ಲಿ ಚಿತ್ರ ಮಾಧ್ಯಮದ ಭಿತ್ತಿಚಿತ್ರಗಳು ಕೇವಲ ಸಂತ, ಮಹಾತ್ಮರ, ಅನುಭಾವಿಗಳ ಅಭಿವ್ಯಕ್ತಿಗೆ ಅಪ್ತವಾದ ಸರಳ ಕೃತಿಗಳಾದವು. ಶಿಲ್ಪ ಮಾಧ್ಯಮದ ಭಿತ್ತಿರೂಹುಗಳು ರಾಜ ಮಹಾರಾಜರ ಹೆಮ್ಮೆಯ, ವೈಭವದ, ಆಡಂಬರದ, ಪ್ರತಿಷ್ಠೆಯ ಸಂಕೇತಗಳಂತೆ ಆದವು. ಈ ರೂಪಾಂತರ ಮಾಧ್ಯಮ ಯಶಸ್ವಿಯಾಗಿ ಜನಪ್ರಿಯ ಸ್ಥಾನ ಪಡೆಯಿತು ಐಹೊಳೆ, ಬಾದಾಮಿ, ಪಟ್ಟದಕಲ್ಲು, ಎಲ್ಲೋರ, ಬೇಲೂರು, ಹಳೇಬೀಡು, ಸೋಮನಾಥಪುರ, ಹಂಪಿ ಮೊದಲಾದ ಕಡೆಗಳಲ್ಲಿನ ಭಿತ್ತಿ ರೂಹುಗಳನ್ನು ಉದಾಹರಿಸಬಹುದು.[೫೯] ನಮ್ಮ ಪೂರ್ವಿಕರ ಚಿತ್ರಕಲೆಗಳಲ್ಲಿ ಅನೇಕ ಬಗೆಯ ಸಂಶೋಧನೆಗಳನ್ನು ಪಡೆದ ವಿಚಾರಗಳನ್ನು ಯಾರಿಗೂ ಹೇಳಿಕೊಡದೆಯೂ ಮತ್ತು ಬರವಣಿಗೆಯಲ್ಲಿ ಉಲ್ಲೇಖಿಸದೆಯೂ ನಿರರ್ಥಕಗೊಳಿಸಿದವರ ಸಂಖ್ಯೆಯೇ ಹೆಚ್ಚು. ಭಾರತ ಸರಕಾರದವರು ಇವುಗಳ ಬಗ್ಗೆ ಒಂದು ಸಂಶೋಧನಾಲಯವನ್ನೇ ನಿರ್ಮಿಸಿ, ನುರಿತ ಕಲಾವಿದನ ನೆರವಿನಿಂದ ನಶಿಸಿ ಹೋದ ನಮ್ಮ ಹಳೆಯ ಕಲೆಗಳು ಮತ್ತೆ ಮೈವೆತ್ತುವಂತೆ ಮಾಡುತ್ತಿರುವುದು ಪ್ರಶಂಸಾರ್ಹ. ಪ್ರಾಚೀನ ಕಲಾವಿದರ ಪದ್ಧತಿಯನ್ನೇ ಅನುಸರಿಸಿ ಒಂದು ನವ್ಯ ರೀತಿಯಲ್ಲಿ

---

೫೯. ಡಾ. ಎಂ. ಎಸ್. ಮೂರ್ತಿ : ಕರ್ನಾಟಕ ಕಲಾದರ್ಶನ, ಸಂ-೧, ಪುಟ - ೨೭೧

ವಿವಿಧ ಬಗೆಯ ಹೊಸ ಹೊಸ ವಿನ್ಯಾಸಗಳು ಇಂದು ರೂಪಗೊಂಡು ಪ್ರಪಂಚದ ಅನೇಕ ಭಾಗದ ಜನರನ್ನು ಆಕರ್ಷಿಸಿವೆ.[೬೦] ಈ ಕಲೆಯ ಬಗ್ಗೆ ಮನಗಂಡ ಸೆಂಟ್ರಲ್ ಹ್ಯಾಂಡಿಕ್ರಾಪ್ಟ್ ಡೆವಲಪ್‌ಮೆಂಟ್ ಸೆಂಟರ್‌ನಿಂದ ಬೆಂಗಳೂರಿನಲ್ಲಿ ಈ ತರಹದ ಪ್ರಯೋಗಗಳು ಆದವು. ಚಿತ್ರಕಲೆ ಸಮತಲದ ಮೇಲೆ ರಚಿಸುತ್ತಿದ್ದ ಶಿಲ್ಪಕಲೆಯ ಒಂದು ಪೂರ್ವ ಸಿದ್ಧತೆಯ ಮಾಧ್ಯಮದ ಒಂದು ಸ್ವತಂತ್ರ ಭಾಷೆ ಎಂದು ಪರಿಗಣಿಸಿರಲಿಲ್ಲ. ಚಿತ್ರವು ಶಿಲ್ಪಕಾವ್ಯದ ವ್ಯಾಕರಣಭಾಷೆಯಾಗಿ ಅದರ ಸೃಷ್ಟಿಗೆ ಕರಡು ಚಿತ್ರವಾಗಿ ಮಾತ್ರ ಉಪಯೋಗವಾಗುತ್ತಿತ್ತು, ಶಿಲ್ಪರಚನೆಯ ಮೊದಲು ಸಮತಲದ ಆಧಾರ ಭಿತ್ತಿಯ ಮೇಲೆ ಉದ್ದೇಶಿತ ಚಿತ್ರ ರಚಿಸಿ, ಮೂರು ಆಯಾಮದ ತಮ್ಮ ಕಲ್ಪನೆಯ ಅಂದಾಜು ಸ್ವರೂಪವನ್ನು ಸೃಷ್ಟಿಸಿಕೊಂಡು, ಅನಂತರ ಶಿಲ್ಪರಚನೆಗೆ ಮುಂದುವರಿಯುತ್ತಿದ್ದರು.

ಶಿಲ್ಪ ಮಾಧ್ಯಮವು ಚಿತ್ರಕಲೆಯನ್ನು ಬಳಸಿಕೊಂಡು ಮುಂದುವರಿಯಿತು ಅಲ್ಲಲ್ಲಿ ಭಿತ್ತಿ, ತಾಳೆಗರಿ ಇತ್ಯಾದಿ ಸಮತಲದ ಕ್ಯಾನ್ವಾಸಿನ ಅಂಗಳದಲ್ಲಿ ವಿಜೃಂಭಿಸುತ್ತಿದ್ದ ಚಿತ್ರಕಲೆಯ ಅಂಕಣವನ್ನು ಆವರಿಸುವಷ್ಟು 'ಶಿಲ್ಪಕಲೆ' ಪ್ರಬಲವಾಗಿ ತೀವ್ರವಾಗಿ ಬೆಳೆಯಿತು. ಮೂರು ಆಯಾಮದ 'ಶಿಲ್ಪ' ರಚನೆ ಮಾಡುತ್ತಿದ್ದ ಅಂದಿನ ಶಿಲ್ಪಿಗಳು ಕ್ರಮೇಣ ಎರಡು ಆಯಾಮದ ಶಿಲ್ಪ ರಚನೆ ಎಂದರೆ ಉಬ್ಬುಶಿಲ್ಪದಂತಹ ಹೊಸ ಪ್ರಯೋಗದಿಂದ ಚಿತ್ರಕಲೆಯ ಅವಕಾಶವನ್ನು ಶಿಲ್ಪದ ಚಾತುರ್ಯದಿಂದ ಅವತರಿಸಿದವು.[೬೧] ಮ್ಯೂರಲ್ ಪ್ರಾಚೀನದಂತೆ ಕಂಡರೂ ಈ ಪ್ರಕಾರವು ವಿವಿಧ ಮಾಧ್ಯಮದ ಮೂಲಕ ಹೊರಹೊಮ್ಮಿದೆ. ಸಾಂಪ್ರದಾಯಿಕ ಉಬ್ಬುಶಿಲ್ಪಗಳೇ ಮ್ಯೂರಲ್ ಚಿತ್ರಕಲೆಗೆ ಪ್ರೇರಣೆಯೆಂದು ಹೇಳಬಹುದು. ಈ ಉಬ್ಬುಶಿಲ್ಪವನ್ನು ರೂಪಿಸುವ ಮೊದಲು ರೇಖಾಚಿತ್ರ ಬಿಡಿಸಿಕೊಳ್ಳುವುದು, ಆನಂತರ ಸ್ವಲ್ಪ ಉಬ್ಬಿದಂತೆ, ಹೆಚ್ಚು ಉಬ್ಬದಂತೆ ಕಂಡರಿಸುವುದನ್ನು ಕಾಣಬಹುದು ಅಥವಾ ಕಲ್ಲಿನ ಮೇಲೆ, ಬಂಡೆಯ ಮೇಲೆ ಇಲ್ಲವೆ ಶಾಸನಗಳ ಮೇಲ್ಭಾಗದಲ್ಲಿ ಕೇವಲ ರೇಖಾಚಿತ್ರಗಳೇ ಇದ್ದು ಶಿಲ್ಪಿಯಾದವನೇ ಇವನ್ನು ರೇಖಿಸಿರುತ್ತಾನೆ.

ವಿಜಯನಗರ ಕಾಲದಲ್ಲಿ ಕೋಟೆಯಲ್ಲಿನ ಕೋಟೆ ಗೋಡೆ, ಪ್ರವೇಶ ದ್ವಾರ, ಹಲವಾರು ಉಬ್ಬುಶಿಲ್ಪಗಳಾದ ಲಕ್ಷ್ಮೀನರಸಿಂಹ, ವಿಷ್ಣು, ಅಂಜನೇಯ, ಭೈರವ ಮೊದಲಾದ ಶಿಲ್ಪಗಳು, ಪೌರಾಣಿಕ ಶಿಲ್ಪಗಳಾದರೆ, ಪ್ರಾಣಿಪಕ್ಷಿಗಳ ಶಿಲ್ಪಗಳು, ನಂದಿ, ನವಿಲು, ಮೊಸಳೆ, ಸಿಂಹ, ನಾಯಿ ಶಿಲ್ಪಗಳು ಮತ್ತು ವ್ಯಕ್ತಿ ಶಿಲ್ಪಗಳು, ಮಲ್ಲಯುದ್ಧದಲ್ಲಿ ತೊಡಗಿರುವ, ಆರತಿ ಹಿಡಿದಿರುವ ಸ್ತ್ರೀ, ಕಾವಲುಗಾರರು ಇನ್ನೂ ಮುಂತಾದ ಶಿಲ್ಪಗಳು ಹಂಪಿಯ ಕೋಟೆಯಲ್ಲಿನ ವಿವಿಧ ಭಾಗಗಳಲ್ಲಿ ಅಂದು ಕೆತ್ತಲ್ಪಟ್ಟಿರುವ ಹಲವಾರು ಶಿಲ್ಪಗಳಿದ್ದು, ಅವು ಅಧ್ಯಯನದ ದೃಷ್ಟಿಯಿಂದ ಪ್ರಾಮುಖ್ಯ ಪಡೆದುಕೊಂಡಿವೆ.[೬೨] ಮತ್ತು ಮಲ್ಲಪ್ಪನಗುಡಿ ಪ್ರದೇಶದ ಮಲ್ಲಿಕಾರ್ಜುನ ದೇವಾಲಯದಲ್ಲಿ

---

೬೦. ಡಿ. ಗಣೇಶ : ಕುಶಲ ಕಲೆಗಳು, ಪುಟ – ೨೧

೬೧. ಡಾ. ಎಂ. ಎಸ್. ಮೂರ್ತಿ : ಕರ್ನಾಟಕ ಕಲಾದರ್ಶನ, ಸಂ–೧, ಪುಟ – ೨೬೧

೬೨. ಡಾ. ಆರ್. ಗೋಪಾಲ್ : ವಿಜಯನಗರ ಅಧ್ಯಯನ, ಸಂ – ೧೨, ಪುಟ – ೨೬೮

ಶಿವನ ನಂದೀಶಾನುಗ್ರಹಮೂರ್ತಿಯದ್ದು ಫಲಕದ ಮೇಲೆ ಉಬ್ಬು ಶಿಲ್ಪದಂತೆ ಕಂಡರಿಸಿದೆ. ಶಿವ ಪದ್ಮಾಸನದಲ್ಲಿ ಕುಳಿತಂತೆ, ಬದಿಯಲ್ಲಿರುವ ನಂದಿಯ ಮೇಲೆ ಕೈಯಿರಿಸಿ ಅನುಗ್ರಹಿಸಿದಂತಿದೆ. ಡಮರುಗ, ತ್ರಿಶೂಲಗಳಿಂದ ಕೂಡಿದ ಶಿವನ ಜಟೆ ಎರಡು ಬದಿಗೂ ಹರಡಿದಂತಿದ್ದು ಶಿರೋಭಾಗದಲ್ಲಿ ಗಂಗೆಯೂ ಇದ್ದಾಳೆ.[೬೩] ಮತ್ತು ಪಂಪಸರೋವರದ ಕೋಟಿಲಿಂಗಗಳ ಬಲಬದಿಯಲ್ಲಿ ನಂದಿಯ ನಾಟ್ಯ, ಅಂಜನೇಯ, ಮುಂತಾದ ಉಬ್ಬಿಲ್ಲದ ರೇಖಾಚಿತ್ರಗಳು ಕಂಡುಬರುತ್ತವೆ.

ರಚನಾ ವಿಧಾನ, ವಸ್ತು ವಿಷಯ

ಪ್ರಾಚೀನದಿಂದಲೂ ಹಲವು ಕ್ರಮದಲ್ಲಿ ಮ್ಯೂರಲ್ ರಚನೆಯಾಗುತ್ತಿದ್ದವು, ಆದರೆ ಪ್ರತ್ಯೇಕವಾಗಿ ಗುರ್ತಿಸಿಕೊಳ್ಳದೇ ಶಿಲ್ಪ ಕೃತಿ–ಘನ ಮಾಧ್ಯಮವನ್ನು ಕೆತ್ತಿತೆಗೆದು ನಿರ್ದಿಷ್ಟ ಸ್ವರೂಪಕ್ಕೆ ರೂಪಾಂತರಗೊಳ್ಳುವವರೆಗೆ ಪ್ರಯತ್ನಿಸುವ ಪ್ರಕ್ರಿಯೆಯಾದರೆ, ಸಾಧ್ಯವಾಗುವ ಪರಿಕರಗಳನ್ನು ಹಚ್ಚಿ ಅಥವಾ ಅಂಟಿಸಿ ನಿರ್ದಿಷ್ಟವಾದ ಚಿತ್ರಕಲಾಕೃತಿಯನ್ನು ರಚಿಸುವಂತಹುದು. ಈ ಎರಡೂ ಸಾಧ್ಯತೆಗಳ ಸಮ್ಮಿಶ್ರಣವಾಗಿ 'ಮ್ಯೂರಲ್' ಮಾಧ್ಯಮ ರೂಪಗೊಂಡಿತು.[೬೪] ಇದನ್ನು ಉಬ್ಬು–ಚಿತ್ರಕಲೆ ಎಂತಲೂ ಕರೆಯಬಹುದಾಗಿದೆ. ಮತ್ತು ಈ ಕಲೆಯನ್ನು ಕುರಿತು ಪ್ರಾಚೀನರು ಸಂಪ್ರದಾಯಕವಾಗಿ ರಚನಾಕ್ರಮವೇ ಸಂಪೂರ್ಣವಾಗಿ ಪರಿಕರ ಮಾಧ್ಯಮದಲ್ಲಿಯೂ ರಚನೆಯಲ್ಲಿಯೂ ಬದಲಾವಣೆ ಕಾಣಬಹುದು ಪ್ರಾಚೀನತೆಯಲ್ಲಿ ಹೆಚ್ಚು ಧಾರ್ಮಿಕ ಚಿತ್ರಗಳು ರಚನೆಯಾದರೆ, ಆಧುನಿಕದಲ್ಲಿ ಅಲಂಕಾರಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡಲಾಗಿದೆ.

ಪ್ರಾಚೀನತೆಯಲ್ಲಿ ದೇವತೆಯ ಚಿತ್ರವನ್ನು ಪ್ರತಿ ಮಾಡುವ ತೆಳುಹಾಳೆಯ ಮೇಲೆ ಬರೆದು ಸಿದ್ಧಪಡಿಸಿಟ್ಟುಕೊಳ್ಳಬೇಕು. ಚಿತ್ರದ ಅಳತೆಗೆ ಸರಿಹೊಂದುವ ಅಳತೆಗೆ ಪ್ಲೆವುಡ್ ಹಲಗೆಯನ್ನು ಕತ್ತರಿಸಿ, ಅದರ ಮೇಲೆ ಒಂದು ತೆಳ್ಳನೆಯ ಬಟ್ಟೆಯನ್ನು ಹುಣಿಸೇ ಅಂಟಿನಿಂದ ಅಂಟಿಸಬೇಕು. ಬಟ್ಟೆಯು ಚೆನ್ನಾಗಿ ಅಂಟಿಕೊಂಡ ಮೇಲೆ, ಹುಣಿಸೇ ಅಂಟಿನಿಂದ ಚಾಕ್‌ಪೌಡರನ್ನು ಮಿಶ್ರಮಾಡಿ, ಈ ಮಿಶ್ರಣವನ್ನು ಹಲಗೆಗೆ ಅಂಟಿಸಿರುವ ಬಟ್ಟೆಯ ಮೇಲೆ ಹರಡಿ ಅನಂತರ ತೆಂಗಿನನಾರಿನಿಂದ ಒಂದೇ ಸಮನೆ ಹರಡುವಂತೆ ಮಾಡಬೇಕು. ಹಲಸಗೆಯು ಚೆನ್ನಾಗಿ ಒಣಗಿದ ಮೇಲೆ ಸಿದ್ಧಪಡಿಸಿದ ಚಿತ್ರವನ್ನು ಪ್ರತಿಮಾಡುವ ಹಾಳೆಯ ಮೇಲಿಟ್ಟು ಬಳೆದು ಸಿದ್ದಪಡಿಸಿಕೊಳ್ಳಬೇಕು. ಆಗ ಹಲಗೆಯು ಚಿತ್ರಿಸಲು ಸಿದ್ಧವಾಯಿತು. ಬೇಕಿರುವ ಪುಡಿಗಳು, ಹುಣಿಸೇ ಬೀಜದ ಪುಡಿ, ಚಾಕ್‌ಪೌಡರ್, ಹಸೀಸುಣ್ಣದ ಪುಡಿ, ಇವಲ್ಲದೆ ಮರ ವಜ್ರ, ಕುಂಚ ಅವಶ್ಯ, ಪ್ರಾರಂಭದಲ್ಲಿ ಹುಣಿಸೇಬೀಜವನ್ನು ಚೆನ್ನಾಗಿ ಕುಟ್ಟಿ, ನೀರಲ್ಲಿ ನೆನೆಸಬೇಕು.

೬೩. ಡಾ. ಅ. ಲ. ನರಸಿಂಹನ್ : ವಿಜಯನಗರ ಶಿಲ್ಪಕಲೆ, ಪುಟ – ೩೮

೬೪. ಡಾ. ಎಂ. ಎಸ್. ಮೂರ್ತಿ : ಕರ್ನಾಟಕ ಕಲಾದರ್ಶನ, ಸಂ–೧, ಪುಟ – ೨೭೧

[illegible]

[illegible]

[illegible]

[illegible]

[illegible]

[illegible]

ಅನಂತರ ಒರಳಲ್ಲಿ ಈ ಹುಣಿಸೆ ಹಿಟ್ಟನ್ನು ಚೆನ್ನಾಗಿ ತಿರುವಬೇಕು. ಈ ಹಿಟ್ಟಿನೊಡನೆ ನೀರನ್ನು ಮಿಶ್ರಮಾಡಿ ಒಲೆಯ ಮೇಲಿಟ್ಟು ಚೆನ್ನಾಗಿ ಕುದಿಸಬೇಕು, ಅಂಟು ಕಂದುಬಣ್ಣಕ್ಕೆ ತಿರುಗುವವರೆಗೂ ಕಾಯಿಸಬೇಕು. ಅಂಟಿಕೆ ಭದ್ರವಾಗಿರಬೇಕಾದ್ದರಿಂದ ಅಂಟಿನ "ಸರಿ" ತಿಳಿಯಾಗಿರಬೇಕು. ಮಿಶ್ರ ಮಾಡಿಕೊಳ್ಳಲು ಮಾತ್ರ ಅದು ಮಂದವಾಗಿರಬೇಕು. ಹಸೀ ಸುಣ್ಣದ ಕಲ್ಲನ್ನು ಚೆನ್ನಾಗಿ ಕುಟ್ಟಿ ಪುಡಿ ಮಾಡಿ ಸಿದ್ಧಪಡಿಸಬೇಕು. ಈ ಹಸೀ ಸುಣ್ಣದ ಪುಡಿಗೆ ಚಾಕ್ ಪೌಡರನ್ನು ಸೇರಿಸಿ, ಮರವಜ್ರದ ಅಂಟಿನೊಡನೆ ಮಿಶ್ರಮಾಡಬೇಕು. ಈ ಮಿಶ್ರದೊಡನೆ ಹುಣಿಸೇ ಅಂಟನ್ನು ಸೇರಿಸಿ ಬೇಕಿರುವ ಮಂದಕ್ಕೆ ಸಿದ್ಧಪಡಿಸಿಟ್ಟುಕೊಳ್ಳಬೇಕು. ಈ ಮಿಶ್ರಣವೇ ನಮಗೆ ಬೇಕಾಗಿರುವ 'ಸರಿ', ತಯಾರಾಯಿತು. ಮೊದಲು ದೇವತೆಯ ರೇಖಾಚಿತ್ರವನ್ನು ಬಟ್ಟೆಗೆ ಅಂಟಿಸಿರುವ ಹಲಗೆಯ ಮೇಲೆ ಸಿದ್ಧಪಡಿಸಿರುವ ಅಂಟಿನಿಂದ ಬರೆಯಬೇಕು, ಅಂಟು ಒಣಗದಂತೆ ಅಂಟಿನ ಪಾತ್ರೆಯ ಮೇಲೆ ಒದ್ದೆ ಬಟ್ಟೆಯಿಂದ ಮುಚ್ಚಿರಬೇಕು. ಚಿತ್ರದ ವಿವಿಧ ಭಾಗಗಳಿಗೆ ಅಗತ್ಯ ಬಣ್ಣಗಳನ್ನು ಹಚ್ಚಬೇಕು. ಚಿತ್ರದಲ್ಲಿ ಕಾಣುವ ಅಭರಣ ಭಾಗಗಳ ಮೇಲೆ ಚಿನ್ನದ ಮೆರಗು ಬರುವುದಕ್ಕೆ ಚಿನ್ನದ ಹಾಳೆಯನ್ನು ಅಂಟಿಸಬೇಕು. ಹೀಗೆ ಅಂಟಿಸಿದಾಗ ಉಬ್ಬುಚಿತ್ರದೊಡನೆ ಮೈದಳಿಯುತ್ತದೆ.[೬೫] ಹೀಗೆ ಹಲವು ಹಂತಗಳಿಂದ ಮ್ಯೂರಲ್ ಸಿದ್ಧವಾಗುತ್ತದೆ. ಇದು ಪ್ರಯಾಸವೇ ಸರಿ. ಹೀಗಿನ ಪ್ರಸ್ತುತತೆಯಲ್ಲಿ ಹಲವು ಪರಿಕರ ಮಾಧ್ಯಮಗಳು ಮತ್ತು ರಚನೆಯಲ್ಲಿ ಬದಲಾವಣೆ ಕಾಣಬಹುದು.

ಪ್ರಾಚೀನ ಭಾರತದಲ್ಲಿ ಒಂದೊಂದು ಪ್ರಾಂತಕ್ಕೂ ಒಂದೊಂದು ಶೈಲಿ ಇತ್ತು. ಹಿಂದಿನ ಮೈಸೂರು ಸಂಸ್ಥಾನದಲ್ಲಿ ರಾಜಮನೆತನದವರು ಕಲೆಗಾರಿಕೆಗೆ ಪ್ರಸಿದ್ಧರು. ಮದರಾಸ್ ಪ್ರಾಂತಕ್ಕೆ ಸೇರಿದ ತಂಜಾವೂರಿನ ಉಬ್ಬುಕಲೆ ಹೆಸರುವಾಸಿಯಾಗಿದೆ. ಮತ್ತು ವೆಂಕಟಪ್ಪ ಮೂಂತದ ಹಲವು ಕಲಾವಿದರು ಮ್ಯೂರಲ್‌ನ ಬೇರೆ ಬೇರೆ ಪರಿಕರ ಮತ್ತು ರಚನಾಪದ್ಧತಿಯಲ್ಲಿ ತಮ್ಮನ್ನು ಗುರ್ತಿಸಿಕೊಂಡಿದ್ದಾರೆ. ವೆಂಕಟಪ್ಪರ ಶಾಕುಂತಲೆ ವಿದಾಯ ೧೯೨೮ರಲ್ಲಿನದು, ಪ್ಲಾಸ್ಟರ್ ಅಫ್ ಪ್ಯಾರಿಸ್‌ನಲ್ಲಿ ೩.ಸೇಂ.ಮೀ ದಪ್ಪದ ಕಲಾಕೃತಿಯು ಬೆಂಗಳೂರಿನ ವಸ್ತುಸಂಗ್ರಹಾಲಯದಲ್ಲಿ ಕಂಡುಬರುತ್ತದೆ. ಇದೇ ಸ್ಥಳದಲ್ಲಿ ಕಂಡುಬರುವ ಮತ್ತೊಂದು ಮಹಾವಿದಾಯ ಎಂಬ ಕಲಾಕೃತಿಯನ್ನು ೧೯೨೫ರಲ್ಲಿ ಪ್ಲಾಸ್ಟರ್ ಪ್ಯಾರಿಸ್ ಮಾಧ್ಯಮದಲ್ಲಿ ರಚಿಸಿದ್ದಾರೆ.[೬೬] ಇವುಗಳಲ್ಲದೇ ಶಿವ ತಾಂಡವ, ಏಕಲವ್ಯನ ಧನುರ್ವಿದ್ಯಾಭ್ಯಾಸ, ರಾಮನು ಹನುಮಂತನಿಗೆ ಮುದ್ರೆಯುಂಗುರವನ್ನು ಕೊಡುತ್ತಿರುವುದು, ಸಂಕಷ್ಟ ಪರಿಹಾರ ಮುಂತಾದವು ಮತ್ತು ಕರ್ನಾಟಕದಲ್ಲಿ ನವ್ಯ ಮಾದರಿಯ ಮ್ಯೂರಲ್ ಕೃತಿಗಳ ರಚನೆ ಮಾಡಿದವರಲ್ಲಿ ಪ್ರಮುಖರಾದ ವಾಸುದೇವರು ದೊಡ್ಡ ಕಟ್ಟಡದ ಗೋಡೆಯ ಮೇಲೆ ಬಣ್ಣ ಬಣ್ಣದ ಗಾಜಿನ ಚೂರು, ಮರಳು, ಲೋಹ, ಇತ್ಯಾದಿ ಮಾಧ್ಯಮ

---

೬೫. ಡಿ. ಗಣೇಶ : ಕುಶಲ ಕಲೆಗಳು, ಪುಟ – ೨೧

೬೬. ಕೆ. ವಿ. ಸುಬ್ರಹ್ಮಣ್ಯಂ : ವೆಂಕಟಪ್ಪ ಸಮಕಾಲೀನ ಪುನರವಲೋಕನ, ಪುಟ – ೨೫

ಸಾಮಗ್ರಿಗಳನ್ನು ಬಳಸಿ ವಿಶಿಷ್ಟವಾದ ಪರಿಣಾಮದ ಮ್ಯೂರಲ್ ರಚನೆಗಳಿಗೆ ಕಾರಣರಾದರು. ಹಾಗೆಯೇ ತಾಮ್ರದ ತಗಡಿನಲ್ಲಿಯೂ ಮ್ಯೂರಲ್‌ಗಳನ್ನು ಅತ್ಯಂತ ಸೂಕ್ಷ್ಮವಾಗಿ ಕೌಶಲ್ಯದಿಂದ ಕೂಡಿದ ಪ್ರಯೋಗಾತ್ಮಕ ಕೃತಿಗಳನ್ನು ರಚಿಸಿದರು. ಹಡಪದರು ತಮ್ಮ ಕೆನ್ ಶಾಲೆಯ ಗೋಡೆಗಳ ಮೇಲೆ ಪ್ರಯೋಗ ನಡೆಸಿದರು. ಜಿ.ಎಸ್.ಶೆಣೈ ಅಲ್ಯುಮಿನಿಯಂ ಲೋಹದ ಹಾಳೆಯ ಮೇಲೆ, ಯೂಸುಫ್ ಅರಕಲ್‌ರು ಟೆರ್ರಾಕೋಟ, ಲೋಹ ಇತ್ಯಾದಿ ಮಾಧ್ಯಮಗಳಲ್ಲಿ ಬೃಹತ್ ಗಾತ್ರದಲ್ಲಿ ಶಿಲ್ಪ, ವೆಂಕಟಾಚಲಪತಿಯವರು, ಟೆರ್ರಾಕೋಟ, ಫೈಬರ್‌ಗ್ಲಾಸಸ್ ಮಾಧ್ಯಮಗಳಲ್ಲಿ, ಎಂ.ಎಸ್.ಮೂರ್ತಿಯವರು, ಲೋಹ, ಟೆರ್ರಾಕೋಟ, ಮರ, ಸೆರಾಮಿಕ್ ಇತ್ಯಾದಿ ಮಾಧ್ಯಮಗಳಲ್ಲಿ ಪುಷ್ಪಾದ್ರಾವಿಡ್ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಪ್ರಯೋಗಾತ್ಮಕವಾಗಿ ಮಿಶ್ರವಾಗಿಯೂ ಸಂಯೋಜನಾತ್ಮಕವಾದ ಮ್ಯೂರಲ್‌ಗಳನ್ನು ರಚಿಸಿದ್ದಾರೆ.

ಈ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಹಂಪಿ ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿಯೂ ಈ ತರಹದ ಪ್ರಯೋಗದ ಮ್ಯೂರಲ್ ಕಲಾಕೃತಿಯನ್ನು ರಚಿಸಲಾಗಿದೆ. ಹೊಸಪೇಟೆ ಸಿದ್ಧಾರ್ಥ ಹೋಟೆಲ್‌ನಲ್ಲಿ ಆಧುನಿಕವಾಗಿ ಟೈಲ್ಸ್ ಮತ್ತು ಪಿ.ಓ.ಪಿ.ಯನ್ನು ಉಪಯೋಗಿಸಿಕೊಂಡು ಮ್ಯೂರಲ್ ರಚಿಸಲಾಗಿದೆ. ಮತ್ತು ಮೋಸೈಕ್ ಶೈಲಿಯಲ್ಲಿ ಮತ್ತು ಬಿಂದು ಆಕಾರದಲ್ಲಿ ಮರಳನ್ನು, ಗಾಜಿನ ಬಾಟಲ್ ಮುಂತಾದವುಗಳನ್ನು ಉಪಯೋಗಿಸಲಾಗಿದೆ. ಹಂಪಿ ವಿಶ್ವವಿದ್ಯಾಲಯದ ಆವರಣದಲ್ಲಿ ಸಿಮೆಂಟ್ ಮತ್ತು ಫೈಬರ್‌ನಲ್ಲಿ ಮ್ಯೂರಲ್‌ಗಳು ರಚನೆಗೊಂಡಿವೆ.

ಹೊಸಪೇಟೆ ಸಿದ್ಧಾರ್ಥ ಹೋಟೆಲ್‌ನ ಮ್ಯೂರಲ್

ಚಿತ್ರ – ೧

ಈ ಚಿತ್ರದ ಪೂರ್ವದಲ್ಲಿ ನೀಲಿನಕ್ಷೆಯಂತೆ ಪೇಪರ್ ಮೇಲೆ ತಯಾರಿಸಿಕೊಂಡು ಗೋಡೆಗೆ (ಚಿತ್ರದ ಹಿಂಭಾಗದಲ್ಲಿ) ಪಿ.ಓ.ಪಿ ಯನ್ನು ಉಪಯೋಗಿಸಲಾಗಿದೆ. ಇದು ಹಸಿ ಇರುವಾಗಲೇ ಆಕಾಶನೀಲಿಟೈಲ್‌ಗಳನ್ನು ಚಿತ್ರದ ಹಿಂದಣ(Background)ಕ್ಕೆ ಏಕ ಪ್ರಕಾರವಾಗಿ ಅಂಟಿಸಲಾಗಿದ್ದು, ಅಲೆಯಂತಹ ಸುರುಳಿಗೆ ಕಪ್ಪುಟೈಲ್‌ಗಳನ್ನು, ಇದರ ಕೆಳಭಾಗದಲ್ಲಿ ಹಸಿರುಮಿಶ್ರಿತ ನೀಲಿ ಟೈಲ್‌ಗಳು, ಇದರ ಕೆಳಗೆ ಹಸಿರು ಟೈಲ್‌ಗಳನ್ನು ಅಂಟಿಸಲಾಗಿದೆ. ಎರಡನೇ ಹಂತದಲ್ಲಿ ಉಬ್ಬಿನಾಕಾರದಲ್ಲಿ ಮೀನು, ಪಕ್ಷಿ, ಬಳ್ಳಿ, ಎಲೆಗಳಿಂದ ಸಂಯೋಜನೆಗೊಳಿಸಲಾಗಿದೆ. ಅಲೆಯ ಮೇಲೆ ಮೀನುಗಳನ್ನು, ಆಕಾಶದಲ್ಲಿ ಪಕ್ಷಿಗಳನ್ನು ಟೈಲ್‌ಗಳಿಂದ ಅಲಂಕರಿಸಲಾಗಿದೆ. ಇದೇ ಅಂತಿಮ(Last Tachap)ವಾದುದ್ದಾಗಿದೆ.

ಚಿತ್ರ – ೨

ಇದೇ ಹೋಟೆಲಿನ ಮತ್ತೊಂದು ಚಿತ್ರದಲ್ಲಿ ದೂರದಿಂದ ಸೂರ್ಯನ ಸಂಕೇತವಾಗಿ

ಬಳ್ಳಾರಿ ಜಿಲ್ಲೆಯ ಆಧುನಿಕ ಭಿತ್ತಿ ಚಿತ್ರಕಲೆ



ಸಿದ್ಧಾರ್ಥ ಹೋಟೆಲ್‌ನ ಭಿತ್ತಿ ಚಿತ್ರಕಲೆ



ವೃತ್ತ ಮತ್ತು ಕಿರಣಗಳಿಂದ ಮ್ಯೂರಲ್ ನಿರ್ಮಾಣ ಮಾಡಲಾಗಿದೆ. ಇದಕ್ಕೆ ಗಾಜಿನ ಬಾಟಲ್, ಮರಳಿನ ಕಲ್ಲುಗಳು, ಸಿಮೆಂಟ್ ಮತ್ತು ಟೈಲ್‌ಗಳನ್ನು ಉಪಯೋಗಿಸಲಾಗಿದೆ. ವೃತ್ತವು ಉಬ್ಬಿದಂತೆ ಚಿತ್ರಿತಗೊಂಡಿದ್ದು ಇದರ ಕೆಳಗೆ ಸೇಬುಹಣ್ಣು, ಇದರ ಕೆಳಗೆ ಮೀನುಗಳು ಸಂಯೋಜಿತಗೊಂಡಿವೆ. ಆಕಾಶ ಸಮುದ್ರ ಸಂಬಂದವನ್ನು ಆಳ ವಿಶಾಲ ಮನೋಲ್ಲಾಸಿತ ದೃಷ್ಟಿಕೋನದ ವೈಚಾರಿಕವಾದ ಒಂದು ಭಿತ್ತಿರೂಹಾಗಿದೆ. ಇದೇ ಹೋಟೆಲ್‌ನ ಕುಟೀರದ ಬಾಗಿಲಿಗೆ ಕೆಂಪು, ಕಪ್ಪು, ಹಳದಿ ಮತ್ತು ನೀಲಿಯಿಂದ ವೃತ್ತಾಕಾರದಲ್ಲಿ ಭಿತ್ತಿರೂಹುವನ್ನು ನಿರ್ಮಾಣ ಮಾಡಲಾಗಿದೆ. ಈ ಚಿತ್ರದ ಹಿಂದೆ ಬಿದಿರುಗಳು ಇದ್ದು, ಇದಕ್ಕೆ ಪಿ.ಓ.ಪಿ ಮಾಡಿ ಅದರ ಮೇಲೆ ಒಂದರ ನಂತರ ಮತ್ತೊಂದು ಬಣ್ಣದ ಟೈಲುಗಳನ್ನು ವೃತ್ತಾಕಾರದಲ್ಲಿ ಅಂಟಿಸುತ್ತಾ ಜಾಮಿತಿಯ ಆಕಾರವನ್ನು ನಿರ್ಮಾಣ ಮಾಡಿದ ಭಿತ್ತಿರೂಹಾಗಿದೆ.

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಭಿತ್ತಿಚಿತ್ರಗಳು

ಹಂಪಿ ವಿಶ್ವವಿದ್ಯಾಲಯದ ಅಕ್ಷ ಕಟ್ಟಡದ ಮುಂಭಾಗದಲ್ಲಿ ಫೈಬರ್‌ನಿಂದ ರಚಿಸಿದ ಭಿತ್ತಿರೂಹುವು ಜನಪದ ಮತ್ತು ಶಿಷ್ಟತೆಯ ಸಮ್ಮಿಶ್ರದಿಂದ ಕೂಡಿದ್ದು, ಕೆಂಪು ಬಣ್ಣದಲ್ಲಿ ನಿರ್ಮಾಣ ಮಾಡಲಾಗಿದೆ. ಕೃಷಿ ಮತ್ತು ದಿನನಿತ್ಯದ ಬದುಕು, ಜನಪದ ಜೀವಾಳ, ಪ್ರತಿದಿನದ ಕೆಲಸವಾಗಿ ಸೂರ್ಯನ ಸಂಕೇತವಾಗಿ ಹೆಣ್ಣು-ಗಂಡು ಸಮಾಗಮದೊಂದಿಗೆ ನಿತ್ಯದ ಬದುಕು ಜನಪದರಲ್ಲಿ ಬಿಂಬಿತವಾದರೆ, ಶಿಷ್ಟಭಿತ್ತಿರೂಹುದಲ್ಲಿ ಮೆರವಣಿಗೆ ಭಜನೆ-ಭಜಂತ್ರಿ, ಕುಣಿತ, ಮೇಳಗಳೊಂದಿಗೆ ಸವಾರಿ ಇಲ್ಲಿ ಬಿಂಬಿತವಾಗಿದೆ. ನರಸಿಂಹ, ಗೋಪುರ, ರಥಗಳು ಶಿಷ್ಟಪದ್ಧತಿಯ ಸಂಕೇತವಾಗಿ ವಿಜಯನಗರ ಸಾಮ್ರಾಜ್ಯದ ದೃಶ್ಯವನ್ನು ಕಾಣಬಹುದಾಗಿದೆ. ಇಡೀ ಭಿತ್ತಿರೂಹು 'ಮೋನೊಕ್ರೊ' ಕೆಂಪು ಬಣ್ಣದ್ದಾಗಿದೆ.

ಇದೇ ಆವರಣದಲ್ಲಿ ಭುವನ ವಿಜಯದ ಗೋಡೆಗಳಿಗೆ ಮತ್ತೆರಡು ಭಿತ್ತಿರೂಹುಗಳನ್ನು ನಿರ್ಮಾಣ ಮಾಡಲಾಗಿದೆ. ಶಿಲ್ಪಿ ಹುಸೇನ್‌ರ ಮುಖಂಡತ್ವದಲ್ಲಿ ರಚನೆಯಾದ ಒಂದು ಭಾವಚಿತ್ರ, ಮತ್ತೊಂದು ಸಂಯೋಜನೆಯ ಭಿತ್ತಿರೂಹುಗಳು ಕಾಣಬರುವುದು. ಸಂಯೋಜನೆಯು ಚಿಕಣಿ ಚಿತ್ರಕಲಾಶೈಲಿಯಲ್ಲಿ ದೊಡ್ಡ ಭಿತ್ತಿರೂಹುವಾಗಿದೆ. ವಿಜಯನಗರ ಶೈಲಿಗೆ ಸನಿಹವಾದರೂ ಸಂಯೋಜನೆಯಲ್ಲಿ ಭಾವಚಿತ್ರ ಪ್ರಧಾನವಾಗಿ, ದೇವತೆಯೂ ಸಂಕೇತವಾಗಿ, ದೇವತೆಗೆ ಛತ್ರಿ-ಚಾಮರ ಹಿಡಿದ ಕನ್ಯೆಯರನ್ನು ನಿರ್ಮಾಣ ಮಾಡಲಾಗಿದೆ. ಮೂಲ ಮತ್ತು ಮಿಶ್ರಬಣ್ಣದಿಂದ ಕೂಡಿದ ಇದರ ಎದುರಿಗೆ ಪುರುಷನ ಭಾವಚಿತ್ರವು ಒಂದೇಯಾಗಿರುವ ತಲೆಯ ಕೂದಲು ಇದ್ದು ಸಮತೋಲನ (Balance) ಮಾಡಿದ ಸಿಮೆಂಟ್ ಮಾಧ್ಯಮದ ಭಿತ್ತಿರೂಹುವಾಗಿದೆ. ಇದೇ ಆವರಣದ ಮತ್ತೊಂದು ಕಟ್ಟಡವಾದ ಪಂಪಾಸಭಾಂಗಣಕ್ಕೆ ಜನಪದ ವೀರಗಾಸೆ ಭಿತ್ತಿರೂಹುವನ್ನು ನಿರ್ಮಿಸಲಾಗಿದೆ. ಇಲ್ಲಿ ಪ್ರಧಾನವಾಗಿ ವಿಷಯ ಸೂಚಕವಾಗಿ ಮುಂಡಭಾಗಕ್ಕೆ





ಕನ್ನಡ ವಿಶ್ವವಿದ್ಯಾಲಯದ ಭಿತ್ತಿ ಶಿಲ್ಪ ಚಿತ್ರಗಳು

ಹೆಚ್ಚು ಪ್ರಾಧಾನ್ಯವನ್ನು ನೀಡಿ ನಿರ್ಮಿತವಾದ ಭಿತ್ತಿರೂಹುವಾಗಿದೆ. ಪ್ರಖರಬಣ್ಣ ಹಳದಿ, ಕೆಂಪು ಪ್ರಮುಖವಾಗಿ ಲೇಪಿತ ಜನಪದ ಸೂಚಕ ಬಣ್ಣಗಳಾಗಿವೆ. ಪ್ರಸ್ತುತದಲ್ಲಿ ಈ ಭಿತ್ತಿರೂಹುಗಳು ಶ್ರೀಮಂತರ ಕಲೆಯಾಗಿದೆ. ದೊಡ್ಡ ದೊಡ್ಡ ಕಟ್ಟಡಗಳಲ್ಲಿ ಲಕ್ಷಾಂತರ ರೂ. ಹಣವನ್ನು ಈ ಭಿತ್ತಿರೂಹುಗಳ ಚಿತ್ರಕ್ಕಾಗಿ ವಿನಿಯೋಗಿಸುತ್ತಿದ್ದಾರೆ. ಇಲ್ಲಿ ಬಣ್ಣ ಮತ್ತು ವಸ್ತುಗಳು ಸರಿಸಮವಾಗಿ ಉಪಯೋಗಗೊಳ್ಳುತ್ತವೆ. ಬಣ್ಣದಿಂದ ಎರಡನೆ ಆಯಾಮ ತೋರಿಸುವ ಬದಲಾಗಿ ವಸ್ತುಗಳನ್ನೇ ನೇರವಾಗಿ ಉಪಯೋಗಿಸುವ ವಿಶಿಷ್ಟಕಲಾ ಪ್ರಕಾರವಿದಾಗಿದೆ. ಮತ್ತು ಮಿಶ್ರಬಣ್ಣಗಳೇ ಹೆಚ್ಚಾಗಿ ಉಪಯೋಗವಾಗಿರುವುದು ಗಮನಿಸುವಂತಹ ವಿಷಯವಾಗಿದೆ.

ಬಳ್ಳಾರಿ ವಿಜ್ಞಾನ ಕೇಂದ್ರದ ಭಿತ್ತಿಚಿತ್ರಗಳು

ಬಳ್ಳಾರಿ ನಗರದಲ್ಲಿ ಚೆರುವ ಪ್ರದೇಶದಲ್ಲಿರುವ ಜಿಲ್ಲಾ ಕ್ರೀಡಾಂಗಣದ ಅನತಿ ದೂರದಲ್ಲಿರುವ ವಿಶಾಲ ಬಯಲು ಪ್ರದೇಶದಲ್ಲಿನ ಭೂಮಿಯ ಮೇಲೆ ಜೀವಿಯ ಉಗಮವನ್ನು ಕುರಿತಂತೆ ಸರಣಿಯ ದ್ವಿ ಆಯಾಮದ ಭಿತ್ತಿಚಿತ್ರಗಳು ಮತ್ತು ತ್ರಿ ಆಯಾಮದ ಶಿಲ್ಪಗಳನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ, ಜಿಲ್ಲಾಡಳಿತದ ಸಹಯೋಗದಲ್ಲಿ ಸುಸಜ್ಜಿತ ವಿಜ್ಞಾನ ಕೇಂದ್ರದ ಆವರಣದಲ್ಲಿ ನಿರ್ಮಾಣವಾಗಿವೆ.

ವಿಜ್ಞಾನಕ್ಕೆ ಸಂಬಂಧಿಸಿದಂತೆ ಭೌತಶಾಸ್ತ್ರ, ರಸಾಯನ ಶಾಸ್ತ್ರ, ಜೀವಶಾಸ್ತ್ರ, ತಂತ್ರಜ್ಞಾನ, ಅಣುವಿಜ್ಞಾನ, ನ್ಯಾನೋ ತಂತ್ರಜ್ಞಾನ, ಮೂಲ ಸೌಕರ್ಯಗಳು, ಅತ್ಯಾಧುನಿಕ ಜೀವನಶೈಲಿ ಹೀಗೆ ಪ್ರತಿಯೊಂದನ್ನು ತಿಳಿಸುವುದಲ್ಲದೆ, ಮೂಢನಂಬಿಕೆ, ಅಂಧ ಆಚರಣೆಗಳ ಬಗ್ಗೆ ತಿಳಿವಳಿಕೆ ಮೂಡಿಸುವ ಎಲ್ಲಾ ವ್ಯವಸ್ಥೆಯನ್ನು ಈ ಕೇಂದ್ರ ಒಳಗೊಂಡಿದೆ.[೬೭] ಮತ್ತು ಮನುಷ್ಯನ ಉಗಮದಿಂದ ಜಗತ್ತಿನ ಈವರೆಗಿನ ಸಮಗ್ರ ಬೆಳವಣಿಗೆಯನ್ನು ಸಾರುವ ನಿಟ್ಟಿನಲ್ಲಿ ಆದಿ ಮಾನವನನ್ನು ಒಳಗೊಂಡ ಅಭಿವೃದ್ಧಿ, ವಿಜ್ಞಾನದ ಅವಲಂಬನೆ ಕುರಿತು ಸೂಕ್ತ ಮಾಹಿತಿ ನೀಡುವುದಕ್ಕೆಂದೇ ನಿರ್ಮಾಣವಾಗುತ್ತಿರುವ ವಿಜ್ಞಾನ ಕೇಂದ್ರ ಕೆಲವೇ ದಿನಗಳಲ್ಲಿ ಸಿದ್ಧಗೊಂಡಿದೆ.

ಇದರ ಉದ್ದೇಶವು ಮಕ್ಕಳಲ್ಲಿ, ವಿಶೇಷವಾಗಿ ಪ್ರಾಥಮಿಕ ಹಂತದಿಂದ ಕಾಲೇಜು ಶಿಕ್ಷಣದವರೆಗಿನ ವಿದ್ಯಾರ್ಥಿಗಳಲ್ಲಿ ವಿಜ್ಞಾನದ ಅರಿವು ಮೂಡಿಸಲೆಂದೇ ವಿಶೇಷ ಯೋಜನೆ ಅಡಿ ಅಂದಾಜು ರೂ. ೪ ಕೋಟಿ ವೆಚ್ಚದಲ್ಲಿ ರೂಪುಗೊಂಡಿರುವ ಈ ಕೇಂದ್ರದಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಎಲ್ಲವೂ ಇದೆ. ಮತ್ತು ಪರಿಸರ ಪ್ರೇಮ, ಸ್ವಚ್ಛತೆಯ ಮಹತ್ವ, ವಾಯು, ನೀರು, ಬೆಳಕು, ಅಗ್ನಿಯ, ಸಮರ್ಪಕ ಬಳಕೆ, ಗಿಡ ಮರಗಳ ಅಗತ್ಯ, ಕ್ರಿಮಿ-ಕೀಟಗಳ ಕುರಿತ ವಿವರಣೆ ಸೇರಿದಂತೆ ವಿಜ್ಞಾನಕ್ಕೆ ಸಂಬಂಧಿಸಿದ ಪ್ರತಿ ಬೆಳವಣಿಗೆ, ಸಂಶೋಧನೆ, ಅವಲಂಬನೆ, ಅನಿವಾರ್ಯತೆ ಕುರಿತ ವಿವರವನ್ನು ಕೇಂದ್ರಕ್ಕೆ ಭೇಟಿ ನೀಡುವ ವಿದ್ಯಾರ್ಥಿಗಳಿಗೆ[೬೮] ದೃಶ್ಯ ಸಮೇತ ತಿಳಿವಳಿಕೆಯನ್ನು

---

೬೭. ಬಳ್ಳಾರಿ ವಿಜ್ಞಾನ ಕೇಂದ್ರ, ಪ್ರಜಾವಾಣಿ ದಿನಪತ್ರಿಕೆ, ದಿನಾಂಕ ೧೫ನೇ ಅಗಸ್ಟ್ ೨೦೧೨

೬೮. ಬಳ್ಳಾರಿ ವಿಜ್ಞಾನ ಕೇಂದ್ರ, ಪ್ರಜಾವಾಣಿ ದಿನಪತ್ರಿಕೆ, ದಿನಾಂಕ ೧೫ನೇ ಆಗಸ್ಟ್ ೨೦೧೨


ಬಳ್ಳಾರಿ ವಿಜ್ಞಾನ ಕೇಂದ್ರದ ಭಿತ್ತಿ ಚಿತ್ರಗಳು







ಬಳ್ಳಾರಿ ವಿಜ್ಞಾನ ಕೇಂದ್ರದ ಭಿತ್ತಿ ಚಿತ್ರಗಳು







ನೀಡಲು ಯೋಜನೆ ಇಲ್ಲಿ ಸಿದ್ಧಗೊಂಡಿದೆ. ಇಲ್ಲಿ ಜೀವಶಾಸ್ತ್ರಕ್ಕೆ ಸಂಬಂಧಿಸಿದಂತೆ ಆಧುನಿಕ ಭಿತ್ತಿಚಿತ್ರ, ಸರಣಿ ಚಿತ್ರಾಕೃತಿಗಳನ್ನು ಬಸವರಾಜ್ ಅನಗವಾಡಿ ಚಿತ್ರಕಲಾವಿದರು ರಚನೆ ಮಾಡಿದ್ದಾರೆ. ಈ ರಚನೆಯನ್ನು ಹಲವಾರು ಹಂತಗಳಿಂದ ಸಿದ್ಧಿಗೊಳಿಸಿದ್ದಾರೆ. ಇಲ್ಲಿ ವಿಶೇಷವಾಗಿ ದ್ವಿ-ಆಯಾಮದ ಭಿತ್ತಿಚಿತ್ರಗಳು ಸಿಮೆಂಟ್ ಮತ್ತು ಫೈಬರ್ ಮಾಧ್ಯಮದಲ್ಲಿ ರಚನೆಗೊಂಡಿವೆ. ಇವರು ಸ್ಥಳಾವಕಾಶವನ್ನು ಚಿತ್ರದ ಗಾತ್ರಕ್ಕೆ ಅನುಗುಣವಾಗಿ, ನಿರ್ಧರಿತವಾದ ಸ್ಥಳಕ್ಕೆ ರೇಖೆಗಳನ್ನು ದಪ್ಪವಾಗಿ ಹಾಕಿಕೊಂಡು, ಆ ರೇಖೆಗಳಿಗೆ ಅನುಗುಣವಾಗಿ ಸಿಮೆಂಟ್ ಅಥವಾ ಫೈಬರ್‌ನ್ನು ಅಂಟಿಸುವ ಕ್ರಮದಿಂದ, ಉಬ್ಬು ತಗ್ಗುಗಳಲ್ಲಿ ತೋರಿಸುವ ಮೂಲಕ ಚಿತ್ರಗಳನ್ನು ವಿಷಯಕ್ಕೆ ಅನುಗುಣವಾಗಿ ಅಪೇಕ್ಷಿತ ಭಿತ್ತಿಚಿತ್ರಕ್ಕೆ ತೈಲವರ್ಣವನ್ನು, ಆಕಾರಗಳಿಗೆ ಅಪೇಕ್ಷಿತ ವರ್ಣಗಳನ್ನು ಲೇಪಿಸುವುದರ ಮೂಲಕ ನೈಜ ಸ್ವರೂಪಕ್ಕೆ ತರಲಾಗಿದೆ.

ವಸ್ತುವಿಷಯ

ಇಲ್ಲಿ ರಚನೆಗೊಳಿಸುವ ವಿಷಯವಾದ ಭೂಮಿಯ ಮೇಲಿನ ಏಕಕೋಶ ಜೀವಿಯಿಂದ ನಕ್ಷತ್ರ ಮೀನುಗಳು, ಸಮುದ್ರ ಚೇಳುಗಳು ಮತ್ತು ಎಲುಬಿನ ಮತ್ತು ದವಡೆಯುಳ್ಳ ಮೀನು ಹುಟ್ಟಿಕೊಂಡವು. ನಂತರ ಭೂಮಿಯ ಮೇಲೆ ಕ್ರಿಮಿಕೀಟಗಳು, ಜರಿಗಳು ಮೊದಲಿಗೆ ಕಾಣಿಸಿಕೊಂಡವು. ನಂತರ ಮೀನುಗಳು ನೀರಿನಿಂದ ಹೊರಬಂದ ಮೀನುಗಳಿಗೆ ರೆಕ್ಕೆಗಳೇ ಕಾಲುಗಳಾದವು. ಅಂತಹ ಜಾತಿಗೆ ಸೇರಿದವುಗಳೆಂದರೆ ೩೬೨ ಮಿಲಿಯನ್ ವರ್ಷಗಳ ಹಿಂದೆ ಉಡ, ಮೊಸಳೆ, ಆಮೆಗಳು ಉಟ್ಟಿಕೊಂಡವು. ಮುಂದೆ ಮೊಸಳೆಯಂತಹ ಪ್ರಾಣಿಗಳೇ ಹಂತ ಹಂತವಾಗಿ ಡೈನೋಸಾರ್‌ಗಳಾದವು. ೬೬ ಮಿಲಿಯನ್ ವರ್ಷಗಳಿಂದ ಹಲವಾರು ಪ್ರಾಣಿಗಳ ಪ್ರಭೇದಗಳು ಹುಟ್ಟಿಕೊಂಡವು. ಅಂಥವುಗಳಲ್ಲಿ ಮಂಗ, ಮೊಲ, ಆನೆಯಂತಹ ಪ್ರಾಣಿಗಳು, ಹಂದಿಗಳು ಹುಟ್ಟಿಕೊಂಡವು. ನಂತರ ಮಂಗನಂತಹ ಮಾನವನು ೫ ಮಿಲಿಯನ್ ವರ್ಷಗಳ ಹಿಂದೆ ಹುಟ್ಟಿಕೊಂಡನು.

ಹೀಗೆ ಈ ಪ್ರಾಣಿಗಳ ಜೀವನಶೈಲಿ, ಇರುವಿಕೆ, ಜೀವಿಸುವಿಕೆ, ತಿನ್ನುವಿಕೆ, ಮರ-ಕಲ್ಲು, ಗುಹೆ ಮುಂತಾದವುಗಳನ್ನು ಹಂತ ಹಂತವಾಗಿ ಬೆಳವಣಿಗೆಯ ಸರಣಿಮೂಲಕ ತೋರಿಸಲಾಗಿದೆ. ಈ ಭಿತ್ತಿಚಿತ್ರದ ಶೈಲಿಯು ಇಂದಿನ ಆಧುನಿಕ ಹೋಲಿಕೆಯಾಗಿದೆಯಾದರೂ ಇದರಲ್ಲಿ ಸೃಜನತೆಗೆ ಅವಕಾಶವಿಲ್ಲ. ಇಲ್ಲಿ ಒಂದು ನಿಯಮಬದ್ಧವಾದ ಒತ್ತಡವಿರುವುದರಿಂದ ಕಲಾವಿದನು ಆ ಪ್ರಕಾರದಲ್ಲಿಯೇ ನೈಜ ಸ್ವರೂಪದ ಜಾಡನ್ನು ಹಿಡಿದಿದ್ದಾನೆ. ಹಾಗಾಗಿಯೂ ಸರಳತೆಯಲ್ಲಿ ಮಕ್ಕಳಿಗೂ ಅರ್ಥವಾಗುವ ರೀತಿಯಲ್ಲಿ ರಚನೆಯಾಗಿವೆ. ಉದ್ದೇಶವು ಅದೇ ಆಗಿದೆ. ಬಳ್ಳಾರಿ ಜಿಲ್ಲೆಯ ಚಿತ್ರಕಲೆಯು ಪ್ರಾಗೈತಿಹಾಸಿಕ ಮತ್ತು ಜನಪದ ಸಂಪ್ರದಾಯದಂತೆ ಶಿಷ್ಟಪದ ಸಂಪ್ರದಾಯದ ಸಾಂಪ್ರದಾಯಿಕ ಭಿತ್ತಿಚಿತ್ರಕಲಾ ಪರಂಪರೆಯು ಅಷ್ಟೇ ಶ್ರೀಮಂತವಾಗಿ ಬೆಳೆದುಬಂದಿರುವುದು.

ಅಲ್ಲದೇ ವಿಜಯನಗರ ಭಿತ್ತಿಚಿತ್ರಕಲೆ ಒಂದು ಹೊಸ ಶೈಲಿಯಾಗಿ ಕಲಾಪ್ರಪಂಚದಲ್ಲಿ ಗುರುತಿಸಲ್ಪಟ್ಟಿದೆ. ಅಷ್ಟೇ ಅಲ್ಲ ಈ ವಿಜಯನಗರ ಭಿತ್ತಿಚಿತ್ರಕಲಾ ಪರಂಪರೆ ವಿಜಯನಗರೋತ್ತರವಾಗಿ ಕರ್ನಾಟಕ ಮತ್ತು ಕರ್ನಾಟಕೇತರ ಪ್ರದೇಶಗಳಲ್ಲಿಯೂ ಬೆಳವಣಿಗೆಯಾಗಿರುವುದು ವಿಜಯನಗರ ಭಿತ್ತಿಚಿತ್ರಕಲೆಯ ಪ್ರಮುಖ ವೈಶಿಷ್ಟ್ಯತೆಯಾಗಿದೆ.

ಅಲ್ಲದೇ ಈ ಪರಂಪರೆಯಿಂದ ಮೈಸೂರು ಶೈಲಿ, ಸುರುಪೂರ ಶೈಲಿ ಮುಂತಾದ ಹೊಸ ಶೈಲಿಗಳು ಸಹ ಬೆಳವಣಿಗೆಯಾಗಿರುವುದು ಗಮನಾರ್ಹ ಅಂಶವಾಗಿದೆ. ಇಲ್ಲಿ ವಿಜಯನಗರ ಭಿತ್ತಿಚಿತ್ರಕಲೆ ಅರಮನೆ, ಮಠ, ದೇವಾಲಯಗಳಲ್ಲಿ ಅಲ್ಲದೇ ಸಮಕಾಲೀನ ಸಂದರ್ಭದಲ್ಲಿಯೂ ಕೂಡ ಈ ಪರಂಪರೆ ಆಧುನಿಕ ಭಿತ್ತಿಚಿತ್ರ, ಶಿಲ್ಪಕಲೆಯಾಗಿ ಬೆಳವಣಿಗೆಯಾಗುತ್ತಿರುವುದನ್ನು ಸಾಂದರ್ಭಿಕವಾಗಿ, ಸ್ಥೂಲವಾಗಿ ಚರ್ಚಿಸಲಾಗಿದೆ.

⌘ ⌘ ⌘ ⌘

ಅಧ್ಯಾಯ - ಆರು

ಬಳ್ಳಾರಿ ಜಿಲ್ಲೆಯ ಹಸ್ತಪ್ರತಿ ಚಿತ್ರಕಲೆ

ಮಾನವ ಆದಿಮಾನವ ಕಾಲದಿಂದಲೂ ತನ್ನ ಭಾವ ಅಭಿವ್ಯಕ್ತಗೊಳಿಸುತ್ತಾ ಬಂದಿದ್ದಾನೆ. ಅಭಿವ್ಯಕ್ತಿಯು ಅಂದಿನಿಂದ ಇಂದಿನವರೆಗೆ ಬುದ್ಧಿಮಟ್ಟದ ವಿಕಾಸದೊಂದಿಗೆ ಅಭಿವ್ಯಕ್ತಿಯ ಮಾಧ್ಯಮಗಳು ಹುಟ್ಟಿಕೊಂಡವು. ಮತ್ತು ಬೇರೆ ಬೇರೆ ಪರಿಕರಗಳನ್ನು ಆಶ್ರಯಿಸಿ ಪ್ರಕಟಗೊಂಡ ಭಿನ್ನ ಭಿನ್ನ ಹೆಸರುಗಳಿಂದ ಗುರುತಿಸಲ್ಪಟ್ಟವು. ಗ್ರಂಥ ಅಥವಾ ಹೊತ್ತಿಗೆ, ತಾಳೆಗರಿ, ಮರ, ಫಲಕ, ಕಾಗದ, ಲಿಖಿತ ಫಲಕಗಳು, ಶಾಸನಗಳು ಇವೆಲ್ಲವು ಮೂಲತಃ ಬರಹಗಳೇ ಆಗಿದ್ದರೂ ಬರಹದ ಉದ್ದೇಶ ಮತ್ತು ಪರಿಕರಗಳಿಗೆ ಅನುಗುಣವಾಗಿ ಬೇರೆ ಬೇರೆ ಹೆಸರುಗಳಿಂದ ಗುರುತಿಸಲ್ಪಟ್ಟವು. ಅಂತಹವುಗಳಲ್ಲಿ ತಾಳೆಗರಿಯ, ಕಾಗದದ ಮೇಲಿನ ಲಿಪಿ ಮತ್ತು ಚಿತ್ರಕಲೆಯನ್ನು, ಕೈಯಿಂದ ರಚಿಸಲ್ಪಟ್ಟ ವಿಶಿಷ್ಟಪೂರ್ಣ ಲೇಖನರಾಶಿಗಳಿಗೆ 'ಹಸ್ತಪ್ರತಿ' ಎಂದು ಕರೆಯುತ್ತಾರೆ.

ನಿಘಂಟುವಿನ ಅರ್ಥ

ಹಸ್ತಪ್ರತಿಯನ್ನು ಸೂಚಿಸಲು ಆಂಗ್ಲ ಭಾಷೆಯಲ್ಲಿ 'Manuscript' ಎಂಬ ಪದವನ್ನು ಬಳಸುತ್ತಾರೆ. ೧೫೯೭ರ ಸುಮಾರಿಗೆ ಇದನ್ನು ಮಧ್ಯಯುಗದ ಲ್ಯಾಟಿನ್ ಪದ Manuscriptus ದಿಂದ ರೂಢಿಸಿಕೊಂಡಂತಿದೆ. ಲ್ಯಾಟಿನ್ ಪದ Manu (oblative); by hand – scriptus (past or passions participate) of scribere to write odj written by hand ಎಂಬುದಾಗಿ ಶಬ್ದಕೋಶ ವಿವರಣೆ ನೀಡುತ್ತದೆ. ಯುರೋಪ್ ದೇಶಗಳಲ್ಲಿ ಕೈಬರಹ ಅರ್ಥದ

ರೂಢಿಗೆ ಬರಲು ಕೈಬರಹವಲ್ಲದ ಇನ್ನೊಂದು ಬರಹಪದ್ಧತಿ ಅಸ್ತಿತ್ವಕ್ಕೆ ಬಂದುದೇ ಕಾರಣವಾಗಿರಬೇಕು. ಆ ಇನ್ನೊಂದು ಬರಹ ಪದ್ಧತಿಯೆಂದರೆ ಯಂತ್ರಗಳ ಮೂಲಕ ಬರಹವನ್ನು ಕೈ ವರ್ತಿಸಿಕೊಂಡುದು, ಆಗ ಯಂತ್ರಪ್ರತಿಗಳಿಂದ ಭಿನ್ನಗೊಳಿಸಿ ಕರೆಯಲು ಅವರು ಹಸ್ತಪ್ರತಿ ಅರ್ಥದ Manuscript ಪದವನ್ನು ರೂಢಿಸಿದರು. ಈ Manuscript ಎಂಬ ಪದವನ್ನು ಲಕ್ಷಿಸಿಯೇ ಕೈಯಿಂದ ಬರೆಯಲಾದ ಪ್ರತಿ ಎಂಬರ್ಥದಲ್ಲಿ 'ಹಸ್ತಪ್ರತಿ' ಎಂಬ ಪದವನ್ನು ಭಾರತೀಯರು/ಕನ್ನಡಿಗರು ಬಳಕೆಗೆ ತಂದುಕೊಂಡದ್ದಾಗಿ[೧] ಅಭಿಪ್ರಾಯವಿದೆ.

ಹಸ್ತಪ್ರತಿ ಚಿತ್ರಕಲೆಯ ಪ್ರಾಚೀನತೆ

ಕನ್ನಡ ಹಸ್ತಪ್ರತಿ ಸಂಪತ್ತಿನಲ್ಲಿ ಪ್ರಾಚೀನ ಕವಿಗಳ ಹಸ್ತಾಕ್ಷರ ಪ್ರತಿಗಳು ಸಿಗುವುದಿಲ್ಲ. ಹಸ್ತಪ್ರತಿ ಚಿತ್ರಕಲೆಯ ಕುರಿತು ಪ್ರಾಚೀನತೆಯನ್ನು ಸಾಹಿತ್ಯದೊಂದಿಗೆ ಶಾಸ್ತ್ರಗ್ರಂಥಗಳಲ್ಲಿ ಕಾಣಬಹುದು. ಆದ್ದರಿಂದ ಹಸ್ತಪ್ರತಿಯ ಪ್ರಾಚೀನತೆಯನ್ನು ಅರಿಯಬೇಕು. ಇಲ್ಲಿ ಹಸ್ತಪ್ರತಿಯ ಮೂಲವನ್ನು ನೋಡಲು ಸಿಗುವುದಿಲ್ಲ. ಪ್ರಾಚೀನ ಕವಿಯ ಸಮೀಪದ ಕಾಲಾವಧಿಯಲ್ಲಿ ಹುಟ್ಟಿದ ನಕಲು ಪ್ರತಿಗಳು ಸಿಗುವುದಿಲ್ಲ. ಹೀಗಾಗಿ ಈವರೆಗೆ ದೊರಕಿದ ಹಸ್ತಪ್ರತಿಗಳು ಕಾಲಕಾಲಕ್ಕೆ ಮತ್ತೆ ಮತ್ತೆ ಪ್ರತಿ ಮಾಡಿಕೊಳ್ಳುತ್ತ ಬಂದ ಪ್ರತಿ ನಕಲು, ಬಿಳಿನಕಲುಗಳೇ ಆಗಿವೆ. ಹೀಗೆ ಬಂದ ಪರಂಪರಾಗತ ಹಸ್ತಪ್ರತಿಗಳ ಪ್ರಾಚೀನತೆಯ ಬಗ್ಗೆ ಅಷ್ಟು ನಿಖರವಾಗಿ ತಿಳಿಯುವುದಿಲ್ಲ. ಆದರೂ ಕನ್ನಡ ಹಸ್ತಪ್ರತಿಗಳಲ್ಲಿ ತಾಳೆವೋಲೆ ಪ್ರತಿಗಳ ಪ್ರಾಚೀನತೆಯ ಗಡಿಯನ್ನು ೧೨ನೆಯ ಶತಮಾನವೆಂದೂ, ಕಾಗದಪ್ರತಿಗಳ ಗಡಿಯನ್ನು ೧೫ನೆಯ ಶತಮಾನವೆಂದೂ ಡಾ. ಬಿ. ಕೆ. ಹಿರೇಮಠರ ಅಭಿಪ್ರಾಯವಾಗಿದೆ. ೧೨ನೇ ಶತಮಾನದಿಂದಲೂ ಅಂದರೆ ಹಸ್ತಪ್ರತಿ ಪ್ರಾರಂಭಿಕ ಹಂತದಲ್ಲಿ ಸಿದ್ಧವಾದ ತಾಳೆಗರಿ ಕಟ್ಟುಗಳ ಮೇಲೆ ರಕ್ಷಾ ಕವಚವಾಗಿ ಒಂದು ಫಲಕವನ್ನು ಜೋಡಿಸುತ್ತಿದ್ದರು.

ಈ ಫಲಕಗಳನ್ನು ಉಜ್ಜಿ, ನಯಗೊಳಿಸಿ ವರ್ಣಗಳನ್ನು ತುಂಬಿ ಅವುಗಳ ಮೇಲೆ ಚಿತ್ರ ಬಿಡಿಸುತ್ತಿದ್ದರು. ಇನ್ನು ಕೆಲವು ಸಲ ಬಟ್ಟೆಯನ್ನು ಅಂಟಿಸಿಯೂ ಅದರ ಮೇಲೆ ಚಿತ್ರ ಬರೆಯುತ್ತಿದ್ದರು.[೨] ಕ್ರಮೇಣ ಒಳಪುಟಗಳಲ್ಲಿಯೂ ಅಲಂಕರಿಸಲು ಮತ್ತು ಕವಿಯು ತನ್ನ ಅನಿಸಿಕೆ, ಅಭಿಪ್ರಾಯವನ್ನು ಪೂರ್ಣ ಪ್ರಮಾಣದಲ್ಲಿ ತಿಳಿಗೊಳಿಸಲು ಸಾಹಿತ್ಯದೊಂದಿಗೆ, ಸಾಹಿತ್ಯಾಧಾರಿತ ಚಿತ್ರಗಳ ಜೊತೆ ಜೊತೆ ಹಸ್ತಪ್ರತಿ ಬೆಳವಣಿಗೆಗೆ ಅವಕಾಶವಾಯಿತು ಎನ್ನಬಹುದು.

ಚಿತ್ರಕಲೆ ಮತ್ತು ಸಾಹಿತ್ಯದ ಸಹ ಸಂಬಂಧ

ದೃಶ್ಯವೇ ಸಾಹಿತ್ಯವಾಗಿ, ಸಾಹಿತ್ಯವೇ ದೃಶ್ಯವಾಗಿ ಎರಡರ ಉದ್ದೇಶ ಸಂವಹನವೇ. ಕಾವ್ಯ/ಕಥೆಗಳ ವಿವರಣೆ ಬರುವಾಗ ಕೇಳುಗನುಗೆ ಕಲ್ಪನೆಯ ದೃಶ್ಯಚಿತ್ರ ಕಣ್ಣಲ್ಲಿ ಕಟ್ಟಿಕೊಳ್ಳುತ್ತಾನೆ.

---

೦೧. ಡಾ. ಬಿ. ಕೆ. ಹಿರೇಮಠ : ಕನ್ನಡ ಹಸ್ತಪ್ರತಿ – ಒಂದು ಅಧ್ಯಯನ, ಪುಟ –೮

೦೨. ಡಾ. ಎಸ್. ಸಿ. ಪಾಟೀಲ : ಕರ್ನಾಟಕ ಜನಪದ ಚಿತ್ರಕಲೆ, ಪುಟ – ೬೦

ಅದೇ ರೀತಿಯಲ್ಲಿ ಚಿತ್ರಕಲಾವಿದನು ಕಥೆ/ಕಾವ್ಯಗಳು ಲೇಖನದ ಪಾತ್ರಧಾರಿಯ ರಸವತ್ತಾಗಿ ಗ್ರಹಿಸುತ್ತಾ ಚಿತ್ರಿಸುತ್ತಾನೆ. ಅದೇ ರೀತಿಯಲ್ಲಿ ಕವಿಯು ತನ್ನ ಮುಂದಿನ ದೃಶ್ಯವನ್ನು, ಅನುಭವವನ್ನು ರಸವತ್ತಾಗಿ ಮೂಡಿಸಿ ಸಾಹಿತ್ಯ ರಚಿಸುತ್ತಾನೆ. ಆದರೆ ಸಾಹಿತ್ಯ ವಿದ್ಯಾವಂತರು ಮಾತ್ರ ಓದಿ ಅರ್ಥೈಸಿಕೊಳ್ಳುತ್ತಾರೆ. ಚಿತ್ರಕಲೆಯನ್ನು ಅನ್ಯಭಾಷಿಕರು, ಅನಕ್ಷರಸ್ಥರು ಸಹ ಅರ್ಥೈಸಿಕೊಳ್ಳುತ್ತಾರೆ. ಆದ್ದರಿಂದ ಈ ಚಿತ್ರಕಲೆಯು 'ವಿಶ್ವಭಾಷೆ'ಯಾಗಿದೆ.

ಚಿತ್ರ ಹಾಗೂ ಕಾವ್ಯದ ನಡುವಿನ ಭೇದವನ್ನು ಲೇಸಿಂಗ್ ಎಂಬ ಜರ್ಮನ್ ವಿಮರ್ಶಕ ತನ್ನ "ತಿ ಅಕೋನ್" ಗ್ರಂಥದಲ್ಲಿ ಹೀಗೆ ವಿವರಿಸಿದ್ದಾನೆ: ಕಾವ್ಯ ಸಂಗೀತದಂತೆ ಕೃತಿಗಮ್ಯ ಕಲೆ ಚಿತ್ರ ದೃಷ್ಟಿಗಮ್ಯ ಕಲೆ ಒಂದರ ಮುಂದೊಂದರಂತೆ ಸಂಚಲನದಲ್ಲಿರುವುದನ್ನು ಕಾವ್ಯ ಅಥವಾ ಸಾಹಿತ್ಯ ನಿರೂಪಿಸುತ್ತದೆ. ಅದರಲ್ಲಿ ಒಂದು ಶಬ್ದವನ್ನು ಉಚ್ಚರಿಸಿದ ಮೇಲೆ ಮಾತ್ರ ಮುಂದಿನದನ್ನು ನಾವು ಎಚ್ಚರಿಸಬಹುದು. ಆದರೆ ಕೆಲವು ಚಿತ್ರಗಳನ್ನು ನಾವು ಒಂದೇ ಬಾರಿಗೆ ಸಮಗ್ರವಾಗಿ ವೀಕ್ಷಿಸಬಹುದು. ಸಾಹಿತ್ಯ ಗಣನೆಯಲ್ಲಿದ್ದುದನ್ನು ಸಮರ್ಪಕವಾಗಿ ನಿರೂಪಿಸಬಲ್ಲದ್ದು. ಆದರೆ ನಿಶ್ಚಲ ವಸ್ತುವೊಂದನ್ನು ವರ್ಣಿಸಬೇಕಾಗಿ ಬಂದಲ್ಲಿ ಕಾವ್ಯ ಅಥವಾ ಸಾಹಿತ್ಯ ಒಂದೊಂದೇ ಅವಯುವಗಳನ್ನು ವರ್ಣಿಸುತ್ತಾ ಹೋಗಬೇಕಾಗುತ್ತದೆ. ಆದರೆ ವ್ಯಕ್ತಿಯ ಮನಸ್ಸಿನ ಕ್ರಿಯಾಶೀಲತೆಯನ್ನು ವಿವರಿಸುವಾಗ ಸಾಹಿತ್ಯ ಮೇಲುಗೈ ಪಡೆಯುತ್ತದೆ. ಅಂದರೆ ಒಂದು ರಮಣೀಯ ದೃಶ್ಯವನ್ನು ಎಷ್ಟು ಯಶಸ್ವಿಯಾಗಿ ಚಿತ್ರಿಸಬಹುದೋ,ಅಷ್ಟೇ ಯಶಸ್ವಿಯಾಗಿ ಸಾಹಿತ್ಯದಲ್ಲಿ ವರ್ಣಿಸಲಾಗುವುದಿಲ್ಲ. ಆದ್ದರಿಂದಲೇ 'ಒಂದು ಚಿತ್ರ ನೂರುವಾಕ್ಯಗಳಿಗಿಂತಲೂ ಹೆಚ್ಚು' ಎನ್ನುವ ಮಾತು ಹೇಳುತ್ತಾರೆ.[೩]

ಸಾಹಿತ್ಯ ಮತ್ತು ಚಿತ್ರಕಲೆ ಯಾವಾಗಲೂ ಹೊಸ ಅನುಭವಗಳನ್ನು. ಹೊಸ ಬಿಂಬಗಳನ್ನು. ಹೊಸ ಹೊಸ ಪ್ರತಿಮೆಗಳನ್ನು ನಿರ್ಮಿಸುತ್ತ ಹೋಗಬೇಕು. ಹೊಸದೊಂದು ವಿಶ್ವದ ಪರಿಚಯ ಮಾಡಿಕೊಡುತ್ತಿರಬೇಕು. ಇವು ನಮ್ಮ ಪಂಚೇಂದ್ರಿಯಗಳ ಬಾಹ್ಯಪ್ರಪಂಚದೊಂದಿಗೆ ಸಂಬಂಧ ಕಲ್ಪಿಸಿಕೊಳ್ಳುವ ಮಾಧ್ಯಮಗಳಾಗಿವೆ. ಈ ಪಂಚೇಂದ್ರಿಯಗಳು ತಮ್ಮ ಕೆಲಸ ಮಾಡುತ್ತಲೇ ಇರುತ್ತವೆ. ಇವೆಲ್ಲವೂ ಒಂದು ರೀತಿಯಿಂದ ಮನಸ್ಸಿನ ನಿಯಂತ್ರಣದಲ್ಲಿರುತ್ತವೆ. ಈ ಐದು ಇಂದ್ರಿಯಗಳಲ್ಲಿಯೇ ಕಣ್ಣಿಗೆ ಬಹಳ ಮಹತ್ವದ ಸ್ಥಾನವಿದೆ. "ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ" ಎಂಬ ಉಕ್ತಿಯಿದೆ. ಇದು ರೂಪಾತ್ಮಕ ಜಗತ್ತಿನೊಂದಿಗೆ ನೇರವಾಗಿ ಸಂಪರ್ಕ ಬೆಳೆಸುತ್ತದೆ. ಕಲೆ ಮುಖ್ಯವಾಗಿ ನೋಡುವ ಕ್ರಿಯೆಗೆ ಸಂಬಂಧಿಸಿರುವುದರಿಂದ ಕಣ್ಣಿಗೆ ಕಲೆಯಲ್ಲಿ ಹೆಚ್ಚಿನ ಮಹತ್ವವಿದೆ.[೪] ಈ ಪ್ರಪಂಚದಲ್ಲಿ ಜೀವಿಯು ತನ್ನ ಸುತ್ತಮುತ್ತಲಿರುವ ವಸ್ತುಜಾತಗಳನ್ನೂ

೦೩. ಸುರೇಶ ಎಸ್. ಬಡಿಗೇರ : ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಗಳ ಚಿತ್ರಕಲೆ – ಒಂದು ಅಧ್ಯಯನ, ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ, ಪುಟ – ೩೪

೦೪. ಚಂದ್ರಕಾಂತ ಕುಸನೂರ : ಸಾಹಿತ್ಯ ಮತ್ತು ಚಿತ್ರಕಲೆ, ಪುಟ – ೧೦೯

ಜೀವಜಾತಗಳನ್ನೂ ನೋಡಿ, ತನ್ನ ಒಳಗೂ ಹೊರಗೂ ತುಂಬಿರುವ ಶಕ್ತಿಗಳ ಲೀಲೆಯನ್ನು ಅನುಭವಿಸಿ, ಕೆಲವೊಂದನ್ನು ಭಾವಿಸಿ ವಿಚಾರವುಳ್ಳವನಾಗುತ್ತಾನೆ. ಅದನ್ನು ಅವನು ತನ್ನಿಂದ ಇತರರ ಮನಸ್ಸಿನಲ್ಲಿ ಬಿಂಬಿಸುವಂತೆ ತನಗಾದ ಅನುಭವದ ಸದೃಶವಾದ ಅನುಭಾವವು ಅವರಲ್ಲುಂಟಾಗುವಂತೆ ಪ್ರಯತ್ನಿಸುವನು. ಪ್ರಯತ್ನವನ್ನು ಪ್ರತಿ ಜೀವಿಯು ಕ್ಷಣಕ್ಷಣಕ್ಕೂ ಮಾಡುತ್ತಿರುತ್ತಾನೆ. ಆದರೆ ಯಾವನು ಇದನ್ನು ಅತಿಕುಶಲವಾಗಿ ಮಾಡುವನೋ ಅವನೇ ಶಿಲ್ಪಿ. ತನ್ನ ರಸ–ಭಾವಗಳ, ವಿಚಾರ–ವಿಕಾರಗಳ ಮೂರ್ತಿಯನ್ನು ಕಲ್ಲಿನಲ್ಲಿ ಕೆತ್ತಲಿ, ಬಣ್ಣದಲ್ಲಿ ಬರೆಯಲಿ, ಮಾತಿನಲ್ಲಿ ಮೂಡಿಸಲಿ, ಇಂಚರದಲ್ಲಿ ಸೊಲ್ಲಿಸಲಿ, ಅವನಾವುದೇ ಹಾದಿಯನ್ನು ಹಿಡಿದರೂ ಅವನು ಶಿಲ್ಪಿ, ಅವನ ಕೌಶಲದ ಉಚ್ಚ–ನೀಚತೆಯಂತೆ ಅವನ ಹಿರಿ–ಕಿರಿತನಗಳು ಗೊತ್ತಾಗುವುವು. ಆದಕಾರಣ ಸಾಹಿತ್ಯ, ಸಂಗೀತ, ವಾಸ್ತು–ವಿಗ್ರಹ, ಚಿತ್ರ–ನೃತ್ಯಾದಿ ಕಲೆಗಳಲ್ಲಿ ಒಂದೇ ಅನುಭವ ಮೂರ್ತಿಯ ಭಿನ್ನ ಮುಖಗಳು.[೫] ಈ ಭಿನ್ನತೆಯಲ್ಲಿಯೂ ಸಾಹಿತ್ಯ ಚಿತ್ರಕಲೆ ಸಹೋದರತೆಯಿಂದ ಉದ್ದೇಶಿತವನ್ನು ಸಾಧಿಸಿಕೊಂಡಿರುವುದಕ್ಕೆ ಎಷ್ಟೋ ಸಾಹಿತ್ಯ ಗ್ರಂಥಗಳು ನಮಗೆ ಸಾಕ್ಷಿಯಾಗಿವೆ.

ಇಂತಹ ಕೆಲವು ಸಂಬಂಧಿತವಾದಂಥ ಗ್ರಂಥಗಳು ಈ ಕೆಳಗಿನಂತಿವೆ. ವಾತ್ಸಾಯನನ 'ಕಾಮಸೂತ್ರ'ವು ಅರವತ್ನಾಲ್ಕು ಕಲೆಗಳ ಹೆಸರನ್ನು ಹೇಳುತ್ತದೆ.[೬] ಈ ಕೃತಿ ಚಿತ್ರಕಲೆಯನ್ನು ಆಲೇಖ್ಯ ಎಂದು ಹೆಸರಿಸಿ ೬೪ ಕಲೆಗಳ ವಿವರ ನೀಡುತ್ತದೆ. ಪ್ರತಿಯೊಬ್ಬ ವ್ಯಕ್ತಿ ತನ್ನ ವಿಶ್ರಾಂತಿ ಕೋಣೆಯಲ್ಲಿ ಚಿತ್ರಫಲಕ, ಬಣ್ಣ ಮತ್ತು ಕುಂಚದ ಪೆಟ್ಟಿಗೆ ಇಟ್ಟುಕೊಂಡಿರಬೇಕೆಂಬ ವಿಷಯ[೭] ಕುರಿತು ವಿವರಿಸುತ್ತದೆ.

ಕವಿರಾಜಮಾರ್ಗ

ಕನ್ನಡ ಸಾಹಿತ್ಯದಲ್ಲಿ ಚಿತ್ರಕಲೆಗೆ ಸಂಬಂಧಿಸಿದ ಅತಿ ಹಳೆಯ ಪ್ರಸ್ತಾಪ ಕವಿರಾಜಮಾರ್ಗದಲ್ಲಿದ್ದು, ಅದು ಉಪಮೆಯ ರೂಪದಲ್ಲಿದೆ. ಮೊದಲನೆಯ ಪರಿಚ್ಛೇದದ ಕಡೆಯಲ್ಲಿ ಬರುವ ಈ ಪದ್ಯವು ಹೀಗಿದೆ:

'ಸಕಳಾಳಾಪ ಕಳಾಪ ಕಥಿತ ವ್ಯವೃತ್ತಿಯೊಳ್ ಕೂಡಿ ಬೆಲೆಕ
ರಂಬೋಲ್ ಪರಭಾಗ ಭಾವ ವಿಲಸದ್ವರ್ಣ ಕ್ರಮಾವೃತ್ತಿಯಂ
ಪ್ರಕಟಂ ಮಾಡಿರೆ ಪೇಳ್ದ ಚಿತ್ರಕೃತಿಯಂ ವ್ಯಾವರ್ಣಿಸುತ್ತಂ
ಕವಿ ಪ್ರಕರಣ ಶ್ರೀವಿಜಯ ಪ್ರಭೂತಮನಿದಂ ಕೈಕೊಳ್ವುದೀ ಮಾಳ್ಕೆಯಂ'

ಅಂದರೆ ಈ ಗ್ರಂಥಕರ್ತೃ – ಶ್ರೀ ವಿಜಯನು 'ಸಕಳಾಳಾಪ ಕಳಾಪ'ವನ್ನು ಅಂದರೆ ಮಾತಿನ ಅಥವಾ ಶಬ್ದದ ಕಲೆಯನ್ನು – ಒಬ್ಬ ಚಿತ್ರಕಾರ ಅಥವಾ ಚಿತ್ರಗಾರ, 'ಪರಭಾಗ

೦೫. ಪಿ. ಆರ್. ತಿಪ್ಪೇಸ್ವಾಮಿ (ಸಂ.) : ಚಿತ್ರಕಲಾ ಪ್ರಪಂಚ, ಪುಟ – ೧೪೭
೦೬. ಡಾ. ಎಸ್. ಸಿ. ಪಾಟೀಲ, ಸತ್ಯಾನಂದ ಪಾತ್ರೋಟ (ಸಂ.) : ನಿಜದ ನೆಲೆ, ಪುಟ – ೧೧೩
೦೭. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ – ೫೬

[illegible]

ಭಾವವಿಲಸದ್ವರ್ಣ ಕ್ರಮ ವೃತ್ತಿಯಂ ಶೋಭಾಯಮಾನವಾದ ವರ್ಣಕ್ರಮದಿಂದ ಒಂದು ಚಿತ್ರದ ಅಂತರ್ಗತ ಭಾವವನ್ನು, ಸೌಂದರ್ಯವನ್ನು ಪ್ರಕಟ ಮಾಡಿದ ರೀತಿಯಲ್ಲಿ ಶ್ರೀ ವಿಜಯನು ಈ ಸಕಳಾಳಾಪ ಕಲೆಯನ್ನು ವಿವರಿಸಿದ್ದಾನೆ ಎಂದು ಸ್ಥೂಲ ಅರ್ಥ. ಹೀಗೆಯೇ ಮುಂದಿನ ಅನೇಕ ಕವಿಗಳೂ ಚಿತ್ರಕಲೆಯ ಪ್ರಸ್ತಾಪ ಮಾಡಿದ್ದಾರೆ.[೮]

ಪಂಚದಶಿ

'ಪಂಚದಶಿ' ಗ್ರಂಥದ 'ಚಿತ್ರದೀಪ'ವೆಂಬ ಆರನೆಯ ಪ್ರಕರಣದಲ್ಲಿ ಚಿತ್ರದ ವಿಧಿ–ವಿಧಾನಗಳನ್ನು ಚರ್ಚಿಸಲಾಗಿದೆ. ದೌತಃ– ಯಾವುದಕ್ಕೆ ಬೇರೆ ದ್ರವ್ಯದ ಸಂಯೋಗವಿಲ್ಲದೇ ಇರುವುದು ಎಂದು, ಘಟ್ಟಿತಃ– ಅನ್ನದ ಗಂಜಿಯಲ್ಲಿ ಸೇರಿದ್ದುದು, ಲಾಂಭಿತ:– ಶಾಯಿ (ಮಸಿ) ರೇಖೆಗಳಿಂದ ದೇವ–ಮಾನವ ಮುಂತಾದ ಆಕೃತಿಗಳನ್ನು ಚಿತ್ರಿಸುವುದು ಎಂದು ಮತ್ತು ರಂಜಿತ– ಯಥೋಚಿತ ಬಣ್ಣದಿಂದ ಕೂಡಿದ್ದುದು[೯] ಎಂದು ನಾಲ್ಕು ಅವಸ್ಥೆಯನ್ನು ಆಧ್ಯಾತ್ಮಿಕ ನೆಲೆಯಲ್ಲಿ ಚರ್ಚಿಸಲಾಗಿದೆ.

ವಿಷ್ಣುಧರ್ಮೋತ್ತರ ಪುರಾಣ

ಕಲೆಯು ವಿಷ್ಣುಪುರಾಣದ ಪರಿಶಿಷ್ಟ ಭಾಗವಾಗಿದೆ. ಅಂದರೆ ಒಂದು ಮೂಲಕೃತಿಯಲ್ಲಿರುವ ಒಂದು ಭಾಗ ಮಾತ್ರ ವಿಷ್ಣುಧರ್ಮೋತ್ತರದ ಮೂರನೇ ಭಾಗದಲ್ಲಿ – ಚಿತ್ರ ವಿಷ್ಣುಧರ್ಮೋತ್ತರ ಪುರಾಣ ಒಂದು ವಿಶ್ವಕೋಶದಂತಹ ರಚನೆ, ಇದು ಪ್ರಶ್ನೋತ್ತರ ರೂಪದಲ್ಲಿದೆ. ಇದರ ಮೂರನೇ ಖಂಡ ಪೂರ್ತಿ ಲಲಿತಕಲೆಗಳಿಗೆ ಮೀಸಲಾಗಿದೆ. ಆದರೆ ಅವುಗಳನ್ನು ಕಲೆ ಎಂದು ಪರಿಗಣಿಸಿಲ್ಲ. ಮನುಷ್ಯನಾಗಿ ಹುಟ್ಟಿದವನು ಅವಶ್ಯಕವಾಗಿ ಮಾಡತಕ್ಕ ಕೆಲಸವೇನು? ಯಾವ ಕೆಲಸವನ್ನು ಮಾಡಿದಲ್ಲಿ, ಅವನು ಸುಖದಿಂದ ಅಭಿವೃದ್ಧಿ ಹೊಂದಬಹುದು? ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಯಾವ ಕಾರ್ಯವನ್ನು ಮಾಡಿದಲ್ಲಿ ಹೆಚ್ಚಾದ ಸುಖಕ್ಕೆ ಭಾಗಿಯಾಗುವನು? ಎಂದು ಪ್ರಜ ಮಹಾರಾಜ ಕೇಳಿದಾಗ, ಮಾರ್ಕಂಡೇಯ ದೀರ್ಘವಾದ ಉತ್ತರವನ್ನು ಕೊಡುತ್ತಾನೆ. ಜ್ಞಾನಿಯಾದ ಮನುಷ್ಯ ಯಜ್ಞ ಹಾಗೂ ವ್ರತಾದಿಗಳನ್ನು ಮಾಡಬೇಕೆಂದೂ, ಕಲಿಯುಗದಲ್ಲಿ ದೇವತೆಗಳನ್ನು ಕಣ್ಣಿನಿಂದ ನೋಡಲು ಸಾಧ್ಯವಿಲ್ಲವಾದ್ದರಿಂದ ವಿಗ್ರಹಗಳನ್ನು, ದೇವತಾಗೃಹಗಳನ್ನು ಮಾಡಬೇಕೆಂದೂ, ಅದರಿಂದ ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪಡೆಯಬಹುದೆಂದು ತಿಳಿಸುತ್ತಾನೆ.[೧೦] ಅಂತಹ ಕಲೆಯ ವಿವಿಧ ಶಾಖೆಗಳ ಬಗ್ಗೆ, ಪದ್ಧತಿಯ ಬಗ್ಗೆ ಮತ್ತು ವಿಚಾರ (ತತ್ವ)ದ ಬಗ್ಗೆ ಇಲ್ಲಿ ಚರ್ಚಿಸಲಾಗಿದೆ. ಮತ್ತು ಚಿತ್ರಕಲೆಯಲ್ಲಿ ಬರುವ ಆಕೃತಿ, ವರ್ಣ, ತಂತ್ರ ಮತ್ತು ಶೈಲಿಗಳನ್ನು ಕುರಿತು ಬರೆಯಲಾಗಿದೆ. ಅಂದರೆ ಕಲೆಯನ್ನು ಧರ್ಮದ ಚೌಕಟ್ಟಿನಲ್ಲಿ ಬಂಧಿಸಿ,ಅದಕ್ಕೆ ಹೆಚ್ಚಿನ ವ್ಯಾಪಕತೆ ಬರುವಂತೆ ವಿವರಣೆ ಇದೆ.

---

೦೮. ಪಿ. ಆರ್. ತಿಪ್ಪೇಸ್ವಾಮಿ (ಸಂ.) : ಚಿತ್ರಕಲಾ ಪ್ರಪಂಚ, ಪುಟ – ೧೩೮

೦೯. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ – ೫೨

೧೦. ಡಾ. ಎಸ್. ಸಿ. ಪಾಟೀಲ, ಸತ್ಯಾನಂದ ಪಾತ್ರೋಟ (ಸಂ.) : ನಿಜದ ನೆಲೆ. ಪುಟ – ೨

ಅಷ್ಟಾಧ್ಯಾಯಿ

ಕ್ರಿ.ಪೂ. ೫೦೦ರ ಪಾಣಿನಿಯ ಗ್ರಂಥ. ಇಲ್ಲಿ ಸಾಂಕೇತಿಕ ಲಕ್ಷಣಗಳ ಬಗ್ಗೆ ಚರ್ಚಿಸಲಾಗಿದೆ. ಭೌತಿಕ ಜಗತ್ತಿನ ಅನೇಕ ವಸ್ತುಗಳನ್ನು, ಜೀವರಾಶಿಗಳನ್ನು[೧೧] ಪಶು, ಪಕ್ಷಿ, ಪುಷ್ಪ, ವೃಕ್ಷ, ನದಿ, ಪರ್ವತ ಮೊದಲಾದವುಗಳ ಸಾಂಕೇತಿಕ ಲಕ್ಷಣಗಳನ್ನು ಚಿತ್ರಿಸುವ[೧೨] ಕುರಿತು ವಿವರ ಇಲ್ಲಿದೆ.

ನಾಟ್ಯಶಾಸ್ತ್ರ

ಭರತಮುನಿಯ ಈ ನಾಟ್ಯಶಾಸ್ತ್ರದಲ್ಲಿ ವರ್ಣವ್ಯವಸ್ಥೆಯ ಬಗ್ಗೆ ಚರ್ಚಿಸಲಾಗಿದೆ. ಭಾವಾಭಿವ್ಯಕ್ತಿಗೆ ಯಾವ ಯಾವ ಸಂದರ್ಭದಲ್ಲಿ ಯೋಗ್ಯವೆಂದು ತಿಳಿಸಿರುವ ವಿಷಯ ಮಹತ್ವದ್ದಾಗಿದೆ.[೧೩] ನಾಟ್ಯಶಾಲೆಯಲ್ಲಿ ಚಿತ್ರಿಸುವ ವಿಧಿ-ವಿಧಾನಗಳನ್ನು ಹಾಗೂ ಪ್ರಕೃತಿಯ ನೈಸರ್ಗಿಕ ವರ್ಣಗಳು, ಇವುಗಳ ಅನುಕರಣೆ, ವರ್ಣಮಿಶ್ರಣ ಇತ್ಯಾದಿ ಅಂಶಗಳನ್ನು ವಿವರಿಸಲಾಗಿದೆ.[೧೪]

ಮೇಘದೂತ

ಕಾಳಿದಾಸ ಒಬ್ಬ ಅಪ್ರತಿಮ ಕವಿ, ನಾಟಕಕಾರ. ಈತನ ರಚನಾ ತಂತ್ರವೂ ಅತ್ಯಂತ ಆಕರ್ಷಕವಾಗಿದೆ. ಕಲ್ಪನಾರಮ್ಯವಾದ ಮೇಘದೂತ, ವಿರಹದಲ್ಲಿ ಬಳಲುತ್ತಿರುವ ಜೀವಗಳ ಚಿತ್ರ ಕಣ್ಮುಂದೆ ಕಟ್ಟಿದಂತೆ ಭಾಸವಾಗುತ್ತದೆ.[೧೫] ಚಿತ್ರಗಳ ಮೂಲಕ ಪ್ರೇಮಿಗಳು ಪ್ರೇಮ ಸಂದೇಶ ಕಳಿಸುವುದು, ವಿಯೋಗವ್ಯಥೆಯನ್ನು ಮರೆಯಲೋಸುಗ ನಾಯಕ-ನಾಯಿಕೆಯರು ಪರಸ್ಪರ ಚಿತ್ರಗಳನ್ನು ಬರೆಯುತ್ತಿದ್ದುದು ದೇವತೆಗಳ ಚಿತ್ರ ಬರೆದು ಪೂಜಿಸುವುದು, ಮನೆಗಳನ್ನು ಚಿತ್ರಗಳಿಂದ ಅಲಂಕರಿಸುವುದು ಈ ಅಂಶಗಳನ್ನು ಕಾಳಿದಾಸ ತಿಳಿಸುತ್ತಾನೆ.[೧೬] ಅದೇ ರೀತಿ ರಘೂವಂಶ ಕೂಡ ಇವರ ಕೃತಿಯಾಗಿದ್ದು, ಈ ಕೃತಿಯಲ್ಲಿಯೂ ಆನೆ, ಸಿಂಹಗಳನ್ನು, ಸ್ತ್ರೀಯನ್ನು ಅಲಂಕರಿಸುವುದರ ಉಲ್ಲೇಖವಿದೆ.

ಬೃಹತ್ ಸಂಹಿತಾ

ಇದರ ೫೬ನೆಯ ಅಧ್ಯಾಯದಲ್ಲಿ ಚಿತ್ರಕಲೆಯ ಪ್ರಸ್ತಾಪವಿದೆ, ಮತ್ಸ್ಯಪುರಾಣದಲ್ಲಿ ಶಿಲ್ಪ, ಚಿತ್ರಶಾಲೆಯ ಬಗೆಗೆ, ಗರುಡ ಪುರಾಣದಲ್ಲಿ ಭವನ - ವಾಸ್ತು ನಿರ್ಮಾಣದಲ್ಲಿ ಕಲೆಯ ಬಳಕೆ, ಹರಿವಂಶ ಪುರಾಣದಲ್ಲಿ ಸ್ತ್ರೀಯರು ಚಿತ್ರ ಬಿಡಿಸುವುದರ ಮೂಲಕ ಪ್ರಿಯಕರನನ್ನು ಆಯ್ಕೆ ಮಾಡಿಕೊಳ್ಳುವ ವಿಷಯ ಕುರಿತು, ಸ್ಕಂದ ಪುರಾಣ, ಪದ್ಮಪುರಾಣ, ಮೇದಿನಿಕೋಶ, ಬಾಣನ

---

೧೧. ಚಂದ್ರಕಾಂತ ಕುಸನೂರ : ಸಾಹಿತ್ಯ ಮತ್ತು ಚಿತ್ರಕಲೆ, ಪುಟ - ೧೧೦
೧೨. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ - ೫೫
೧೩. ಚಂದ್ರಕಾಂತ ಕುಸನೂರ : ಸಾಹಿತ್ಯ ಮತ್ತು ಚಿತ್ರಕಲೆ, ಪುಟ - ೧೧೦
೧೪. ಚಂದ್ರಕಾಂತ ಕುಸನೂರ : ಸಾಹಿತ್ಯ ಮತ್ತು ಚಿತ್ರಕಲೆ, ಪುಟ - ೧೧೦
೧೫. ಚಂದ್ರಕಾಂತ ಕುಸನೂರ : ಸಾಹಿತ್ಯ ಮತ್ತು ಚಿತ್ರಕಲೆ, ಪುಟ - ೧೧೭
೧೬. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ - ೫೬

ಕಾದಂಬರಿ, ಹರ್ಷಚರಿತ, ತಿಲಕಮಂಜರಿ[೧೭] ಮತ್ತು ಅಭಿನವ ಪಂಪನು 'ಉದ್ಯಾನಮಾಲೆ'ಯೊಂದನ್ನು 'ರಸಚಿತ್ರ'ವಾಗಿ ಬರೆದಿದ್ದಾನೆ. ಚೌಂಡರಸ, ವೃತ್ತವಿಲಾಸ, ಅಗ್ಗಳಪಾರ್ಶ್ವ ಪಂಡಿತ, ಸೋಮರಾಜ, ನಾಗರಾಜ, ನೇಮಿಚಂದ್ರ, ಹರಿಹರ, ೨ನೆಯ ಗುಣಧರ್ಮ, ಜನ್ನ, ಪೊನ್ನ, ಲಕ್ಷ್ಮೀಶ, ರುದ್ರಭಟ್ಟ, ಮಂಗರಸ[೧೮] ಮೊದಲಾದವರ ಕೃತಿಗಳಲ್ಲಿ ಸಂದರ್ಭಕ್ಕೆ ಅನುಸಾರವಾಗಿ ಚಿತ್ರಕಲೆಯ ನಾನಾ ಸೂತ್ರ, ನಿಯಮ ಮತ್ತು ಹಲವು ವಿಧಿ–ವಿಧಾನಗಳಿಗೆ ಸಂಬಂಧಪಟ್ಟವುವಿದ್ದು, ಇಲ್ಲಿ ರಾಜ, ಕಲಾಭಿಮಾನಿಗಳು, ಕೇವಲ ರಸಿಕ, ಕಲಾಭಿಮಾನಿಯಾಗಿ ಅಲ್ಲದೇ ವಿಮರ್ಶಕನ ದೃಷ್ಟಿಯಿಂದಲೂ ವಿಶ್ಲೇಷಣೆಗೊಂಡಿವೆ. ಚಿತ್ರಕಲೆ ಸಾಹಿತ್ಯದ ಒಂದು ಅಂಗವಾಗಿ ಬೆಳವಣಿಗೆ ಹೊಂದುತ್ತ ಬಂದಿದೆ.

ವಿನ್ಯಾಸಕ್ಕೆ ಕಾರಣ

ಲಿಖಿತ ತಾಳೆಯೋಲೆ ಮತ್ತು ಕಾಗದಪ್ರತಿಗಳನ್ನು ಹಾಳಾಗದಂತೆ, ಮುರಿಯದಂತೆ ಸಂರಕ್ಷಿಸಲು ಅಲಿಖಿತ ದಪ್ಪವಾದ ರಟ್ಟಿನಂತಹ ವಸ್ತುಗಳಿಂದ ಒದಿಕೆ (ಮುಚ್ಚಳಿಕೆ)ಯನ್ನು ಹಾಕಿ ಕಟ್ಟಲಾಗುತ್ತಿತ್ತು. ಅದು ಬರಿದಾಗಿ ಕಾಣಿಸತೊಡಗಿ ಅದು ಕ್ರಮೇಣ ಸೌಂದರ್ಯಕ್ಕಾಗಿ ಚಿತ್ರವಿನ್ಯಾಸಕ್ಕೆ ಕಾರಣವಾಗಿರಬೇಕು. ಈ ಒಂದು ಸ್ಪಷ್ಟತೆಯ ಉದಾಹರಣೆಗಾಗಿ ಇವತ್ತಿನ ಬಣ್ಣ ಬಣ್ಣದ ಯಂತ್ರೋಪಕರಣದಿಂದ ತಯಾರಿಸಿದ 'ಕವರ್ ಪೇಜ್'ಗಳನ್ನು ಕಾಣಬಹುದು.

ಅದೇ ರೀತಿಯಲ್ಲಿ ಓಲೆಗರಿ ಇಲ್ಲವೆ ಕಾಗದದಲ್ಲಿ ತೀರ ಅಂಚಿಗೆ ಹಚ್ಚಿ ಬರೆದರೆ ಬಳಸುವ ಸಮಯದಲ್ಲಿ ಅವುಗಳ ಅಂಚುಗಳು ಅವುಗಳೊಂದಿಗೆ ಅಕ್ಷರಗಳು, ಪದಗಳು ನಾಶಗೊಳ್ಳುವ ಸಂಭವವಿದೆ. ಇದನ್ನು ನಿವಾರಿಸಲೆಂದೇ ಪತ್ರಗಳ ಸುತ್ತಲೂ ಸ್ವಲ್ಪ ಸ್ಥಳವನ್ನು ಬಿಟ್ಟು ಮಧ್ಯದಲ್ಲಿ ಬರೆಯತೊಡಗಿದುದು ಇಡೀ ಗರಿಯ ಬರಹಕ್ಕೆ ಒಂದು ಚೌಕಟ್ಟನ್ನು ಒದಗಿಸಿ, ಅದಕ್ಕೊಂದು ಓರಣ ಪ್ರಾಪ್ತವಾಗಿ, ಮುಂದೆ ಆ ಬಗೆಯ ವಿನ್ಯಾಸಕ್ಕೆ ಆಸ್ಪದ ಮಾಡಿಕೊಟ್ಟಿರಬೇಕು[೧೯] ಎನ್ನುವುದು ಡಾ. ಬಿ. ಕೆ. ಹಿರೇಮಠರ ಅಭಿಪ್ರಾಯವಾಗಿದೆ. ಮತ್ತು ಇನ್ನೂ ಕೆಲವು ಸಲ ಬಟ್ಟೆಯನ್ನು ಅಂಟಿಸಿಯೂ ಅದರ ಮೇಲೆ ಚಿತ್ರ ಬರೆಯುತ್ತಿದ್ದರು[೨೦] ಎಂದು ಕರ್ನಾಟಕದ ಜನಪದ ಚಿತ್ರಕಲೆ ಎನ್ನುವ ಗ್ರಂಥದಲ್ಲಿ ಡಾ. ಎಸ್.ಸಿ. ಪಾಟೀಲ ಅವರು ಸಾಂದರ್ಭಿಕವಾಗಿ ವಿವರಿಸಿದ್ದಾರೆ. ಹೀಗೆ ಪ್ರಾರಂಭವಾದ ವಿನ್ಯಾಸವು ಮುಂದೆ ಒಂದು ಕೃತಿರಚನೆಯೆಂದರೆ ಸಾಹಿತ್ಯದ ಜೊತೆಯಲ್ಲಿ ಚಿತ್ರಕಲೆಯ ಕೃತಿ ಎನ್ನುವ ರೀತಿಯಲ್ಲಿ ಬೆಳೆದುಬಂದಿರಬೇಕು.

ಬಳ್ಳಾರಿ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ಸಂಗ್ರಹಗೊಂಡ ಹಸ್ತಪ್ರತಿ ಭಂಡಾರ

ಈ ಜಿಲ್ಲೆಯು ಸಾಹಿತ್ಯ ಜ್ಞಾನಭಂಡಾರದಲ್ಲಿಯೂ ಶ್ರೀಮಂತವಾಗಿದೆ. ಮತ್ತು

---

೧೭. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ – ೫೬

೧೮. ಪಿ. ಆರ್. ತಿಪ್ಪೇಸ್ವಾಮಿ (ಸಂ.) : ಚಿತ್ರಕಲಾ ಪ್ರಪಂಚ, ಪುಟ – ೧೩೮

೧೯. ಡಾ. ಬಿ. ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು, ಪುಟ – ೧೬೦

೨೦. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ – ೬೦

ವಡ್ಡಾರಾಧನೆಯಿಂದ ಆರಂಭವಾಗುವ ಈ ಜಿಲ್ಲೆಯ ಸಾಹಿತ್ಯಪರಂಪರೆಯ ಹರಿಹರ – ರಾಘವಾಂಕರ ಅನನ್ಯತೆಗಳನ್ನು ಬೆನ್ನಿಗೆ ಕಟ್ಟಿಕೊಂಡು ಚಾಮರಸ, ನೂರೊಂದು ವಿರಕ್ತರ ಕಾರ್ಯ ಚಟುವಟಿಕೆಯಲ್ಲಿ ವಿಸ್ತಾರವಾಗಿ ಬೆಳೆಯಿತು.[೨೧] ಅಮೂಲ್ಯವಾದ ಸಾಹಿತ್ಯದ ರಕ್ಷಣೆಯಲ್ಲಿ ವಿಫಲವಾಗಿದೆ ಎನ್ನಬಹುದು. ರಕ್ಷಣೆಯಾದರೂ ಅಲ್ಪಸ್ವಲ್ಪ ಇಂತಹ ಸಾಹಿತ್ಯವನ್ನು ಉಳಿಸುವುದು ತುಂಬಾ ಪ್ರಯಾಸದ ವಿಷಯವೇ, ಆದರೂ ಇಂತಹ ಪ್ರಯತ್ನದಿಂದ ಸಫಲತೆಯನ್ನು ಸಾಧಿಸಿದ ಹೆಮ್ಮೆ ಕನ್ನಡ ವಿಶ್ವವಿದ್ಯಾಲಯಕ್ಕಿದೆ.

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕು ಕಂಪ್ಲಿಯ ಕಲ್ಗುಡಿ ಸಿದ್ಧಪ್ಪ ಅವರ ಮನೆಯಲ್ಲಿ ಉದ್ಧರಣಿ ವಾಚ್ಯವನ್ನು ಪ್ರತ್ಯೇಕ ಪುಸ್ತಕದಲ್ಲಿ ಬರೆದಿರುವ ಕ್ರಿ.ಸಂ. ೩೮೦ರ ಕಾಗದ ಪ್ರತಿಯಾಗಿದ್ದು, ೩೬ ಪುಟಗಳಿಗೆ ೨೦ ಉದ್ಧರಣೆಗಳ ವಾಚ್ಯವನ್ನು ಬರೆಯಲಾಗಿದೆ. ಕೊನೆಯಲ್ಲಿ ಪ್ಲವಂಗ ಸಂವತ್ಸರ ಚೈತು ಶುದ್ಧ ೨ ಯಿಂದುವಾರದಲ್ಲು ಬೆಂಗಳೂರಲ್ಲಿ ಇರುವ ಕೋಟಿಲಿಂಗಶಾಸ್ತ್ರಿ ಕುಇಮಾ ಶರಭಯ್ಯನವರು ಬರೆದುಕೊಟ್ಟಿದ್ದು, ಕಂಪ್ಲಿಯಲ್ಲಿರುವ ಕಲ್ಗುಡಿ ದೊಡ್ಡಪ್ಪನವರಿಗೆ ಉದ್ಧರಣೆ ವಾಚ್ಯದ ವಹಿ ರುಜು ಎಂಬ ಉಲ್ಲೇಖವಿದೆ. ಇದರಿಂದ ಇದನ್ನು ಪ್ರತಿ ಮಾಡಿದವರು ಶರಭಯ್ಯನವರಾಗಿದ್ದಾರೆ. ಮತ್ತು ಕಂಪ್ಲಿ ಕಲ್ಗುಡಿ ಸಿದ್ಧಪ್ಪನವರ ಮನೆಯಲ್ಲಿ ಉದ್ಧರಣೆ ಚಿತ್ರ ಪಟಲಗಳು ದೊರೆತಿವೆ.[೨೨] ಹೀಗೆ ಜಿಲ್ಲೆಯಿಂದ ಮತ್ತು ಕೊಪ್ಪಳ, ರಾಯಚೂರು, ಬಾಗಲಕೋಟೆ, ಬಿಜಾಪುರ, ಚಿತ್ರದುರ್ಗದಿಂದಲೂ ಈ ವಿಶ್ವವಿದ್ಯಾಲಯದಲ್ಲಿ ಸಂಗ್ರಹಗೊಂಡ ಹಸ್ತಪ್ರತಿಗಳಿದ್ದು ಇದರ ಜ್ಞಾನವನ್ನು ಈ ಪೀಳಿಗೆಗೆ ಉಣಬಡಿಸುತ್ತಿರುವುದು ಸಂತಸದ ವಿಷಯವಾಗಿದೆ.

ಇಂತಹ ಹಸ್ತಪ್ರತಿಗಳ ಸಂಗ್ರಹಣೆಗೆ ವಿಶೇಷ ಆಸಕ್ತಿ ತೋರಿದವರನ್ನು ಇಲ್ಲಿ ಸ್ಮರಿಸಬೇಕಾಗುತ್ತದೆ. ವಿಶ್ವವಿದ್ಯಾಲಯದ ಪ್ರಥಮ ಕುಲಪತಿಗಳಾದ ಡಾ. ಚಂದ್ರಶೇಖರ ಕಂಬಾರ ಅವರ ವಿಶೇಷ ಆಸಕ್ತಿ ಮತ್ತು ಅಧ್ಯಾಪಕರ ಆಸಕ್ತಿಯಿಂದ ರೂಪಗೊಂಡ ಹಸ್ತಪ್ರತಿಶಾಸ್ತ್ರ ವಿಭಾಗ ೧೯೯೬ರಲ್ಲಿ ಒಂದು ಅಧ್ಯಯನ ವಿಭಾಗವಾಗಿ ಮೈಪಡೆಯಿತು. ಎ. ವಿ. ನಾವಡ, ಪ್ರವಾಚಕರಾಗಿ, ಡಾ. ಎಸ್. ಎಸ್. ಅಂಗಡಿ, ಮತ್ತು ಡಾ. ಎಸ್. ಆರ್. ಚನ್ನವೀರಪ್ಪ ಅವರು ವಿಭಾಗದ ಬೆಳವಣಿಗೆಗೆ ದುಡಿಯುತ್ತಲಿದ್ದಾರೆ.[೨೩] ಕಂಬಾರರಿಂದ ಹಿಡಿದು ಇಂದಿನ ಕುಲಪತಿಗಳವರೆಗೆ ಅದೇ ಆಸಕ್ತಿ, ಪ್ರೋತ್ಸಾಹವಿದೆ. ಕ್ಷೇತ್ರಕಾರ್ಯ ಕೈಗೊಂಡು ತಾಳೆಗರಿ, ಕಡತ, ಕಾಗದ ರೂಪದ ನಾಲ್ಕು ಸಾವಿರ ಹಸ್ತಪ್ರತಿಗಳನ್ನು ಸಂಗ್ರಹಿಸಲಾಗಿದೆ. ಸಂಗ್ರಹಿಸಿದ ಹಸ್ತಪ್ರತಿಗಳನ್ನು ಸಿಟ್ರನಲ್ ಆಯಿಲ್, ಕಂಪ್ಯೂಟರ್, ಸ್ಕ್ಯಾನರ್, ಡಿಜಿಟಲೈಜೇಷನ್ ಮುಂತಾದ[೨೪] ಪಾರಂಪರಿಕ ಮತ್ತು ಆಧುನಿಕ ರೀತಿಯಲ್ಲಿ

---

೨೧. ಡಾ. ಕೆ. ರವೀಂದ್ರನಾಥ (ಸಂ.) : ಬಳ್ಳಾರಿ ಜಿಲ್ಲಾ ದರ್ಶನ, ಪುಟ – ೪

೨೨. ಡಾ. ಕೆ. ರವೀಂದ್ರನಾಥ : ಉದ್ಧರಣೆ ಸಾಹಿತ್ಯ, ಪುಟ – ೨೫

೨೩. ಡಾ. ಕೆ. ರವೀಂದ್ರನಾಥ : ಉದ್ಧರಣೆ ಸಾಹಿತ್ಯ, ಪುಟ – ೬

೨೪. ಸುರೇಶ ಎಸ್. ಬಡಿಗೇರ : ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಗಳ ಚಿತ್ರಕಲೆ – ಒಂದು ಅಧ್ಯಯನ, ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ, ಪುಟ – ೩೪

[illegible]

ಸಂರಕ್ಷಿಸಲಾಗಿದೆ. ಹಸ್ತಪ್ರತಿಗಳ ವಿವರಣಾತ್ಮಕ ಸೂಚಿಯನ್ನು ವೈಜ್ಞಾನಿಕ ರೀತಿಯ ಸಂಪುಟಗಳಲ್ಲಿ ಪ್ರಕಟಿಸಲಾಗುತ್ತಿದೆ.[೨೫]

ಈಗ ಸಂಗ್ರಹಿತವಾದ ಹಸ್ತಪ್ರತಿಗಳು ಕನ್ನಡ, ಸಂಸ್ಕೃತ, ದೇವನಾಗರಿ, ತೆಲುಗು, ತಮಿಳು ಮತ್ತು ಮೋಡಿ ಲಿಪಿಗಳನ್ನೊಳಗೊಂಡಿದ್ದು, ವೈವಿಧ್ಯಮಯವಾದ ವಸ್ತುವಿಷಯ ಹೊಂದಿದೆ. ವಿಶೇಷವಾಗಿ ಮಧ್ಯಕಾಲೀನ ಸಾಹಿತ್ಯದ ಹಲವಾರು ಕೃತಿಗಳು ಇಲ್ಲಿ ಸಂಗ್ರಹಗೊಂಡಿದ್ದು, ತಾಳೆಗರಿ ಮತ್ತು ಕೋರಿಕಾಗದ ಪ್ರತಿಗಳ ಪ್ರಮಾಣ ಪ್ರತಿಶತ ೬೦ ಮತ್ತು ೪೦ ಒಂದು ಇಂಚು ಅಗಲದಿಂದ ಹಿಡಿದು ೪ ಅಡಿ ಉದ್ದನೆಯ, ಒಂದೆರಡು ಪುಟಗಳಿಂದ ಹಿಡಿದು ಒಂದು ಸಾವಿರ ಪುಟಗಳನ್ನೊಳಗೊಂಡ ಕೃತಿಗಳು ಇಲ್ಲಿವೆ. ಅಮರಕೋಶ, ಬಸವಪುರಾಣ, ಬಸವರಾಜ ವಿಜಯ, ಭೈರವೇಶ್ವರನ ಕಾವ್ಯ, ಕುಮಾರವ್ಯಾಸ ಭಾರತ, ಜೈಮಿನಿಭಾರತ, ರಾಜಶೇಖರ ವಿಳಾಸ, ಶಬರಶಂಕರ ವಿಳಾಸ, ಸ್ಥೂಲಕಟ್ಟಿನ ವಚನಗಲು, ಕರಣಹಸಿಗೆ, ಪದಮಂತಗೋಪ್ಯ, ತತ್ವಪದಗಳು, ಕೀರ್ತನೆಗಳಂಥ ಹಲವಾರು ಕೃತಿಗಳು ಲಭ್ಯವಾಗಿವೆ.

ವಿಶೇಷವಾಗಿ ಈ ಪ್ರದೇಶದಲ್ಲಿ ಚನ್ನಬಸವಣ್ಣನ ಕರಣಹಸಿಗೆ, ಪದಮಂತ್ರ, ಗೋಪ್ಯ, ಚನ್ನಪ್ಪ ಕವಿಯ ಯಕ್ಷಗಾನ ರೂಪದ ಶರಣ ಲೀಲಾಮೃತ, ಗುರುಬಸವನ ಸಪ್ತಕಾವ್ಯಗಳು, ಚಿದಾನಂದಾವದೂತರ ಜ್ಞಾನಸಿಂಧು ಇತ್ಯಾದಿ ಕವಿಗಳ ಹಸ್ತಪ್ರತಿಗಳು ಅಧಿಕ ಸಂಖ್ಯೆಯಲ್ಲಿ ದೊರೆತಿವೆ.[೨೬] ಮತ್ತು ಒಂದಿಂಚಿನ ಹಸ್ತಪ್ರತಿಯಿಂದ ಐದು-ಆರು ಅಡಿಗಳವರೆಗಿನ ಗರಿಗಳ ಹಸ್ತಪ್ರತಿಗಳು ನಮಗೆ ಲಭ್ಯವಾಗಿವೆ. ಹಸ್ತಪ್ರತಿಗಳ ವಿಚಾರಗಳು ಕಾಲದಿಂದ ಕಾಲಕ್ಕೆ ರೂಪಾಂತರಗೊಳ್ಳುತ್ತಾ ಬರವಣಿಗೆ ಮತ್ತು ಚಿತ್ರ ಮೂಲಕ ಪಡೆಮೂಡಿರುವುದನ್ನು ಕಾಣುತ್ತೇವೆ. ಯಂತ್ರ, ಮಂತ್ರ, ಕುರುಬ, ರಟ್ಟಮತ, ವೈದ್ಯಶಾಸ್ತ್ರ, ಸಮಾಧಿಕ್ರಿಯೆ, ಅಶ್ವ, ಜ್ಯೋತಿಷ್ಯ ಮುಂತಾದ ಲೌಕಿಕಕ್ಕೆ ಸಂಬಂಧಿಸಿದ ತಾಳೆಗರಿ/ಕೋರಿಕಾಗದ ಹಸ್ತಪ್ರತಿಗಳನ್ನು ಕಾಣಬಹುದು. ವಿವಿಧ ನಮೂನೆಯ ಉದ್ಧರಣೆ ಪಟಲಗಳು ಸುಂದರವಾದ ಚಿತ್ರಾಕರ್ಷಣೆಯಿಂದ ಕೂಡಿವೆ.

ಒಟ್ಟಾರೆ ಎಲ್ಲಾ ಹಸ್ತಪ್ರತಿಗಳಲ್ಲಿ ಕಿರಷ್ಟು ರೇಖೆ ಅಥವಾ ಚಿತ್ರಗಳು ಇಲ್ಲದ ಹಸ್ತಪ್ರತಿಗಳೇ ಇಲ್ಲ. ಒಂದು ಸಣ್ಣ ರೇಖೆಯನ್ನಾದರೂ ಹಸ್ತಪ್ರತಿಗಳು ಹೊಂದಿವೆ. ಇಲ್ಲಿ ಹಸ್ತಪ್ರತಿ ಲಿಪಿಕಾರರ/ಕಲಾವಿದರ ಕಲಾಜಾಗೃತಿ ಮನಸ್ಸಿನ ಕೆಲಸವಾಗಿದೆ. ಅಂತಹ ಚಿತ್ರಕಲೆಯಲ್ಲಿ ಕೆಲವು ತ್ರಿಕೋನ, ವೃತ್ತದಂತಹ ಜಾಮಿತಿ ಕೃತಿಗಳು, ಲಂಬ, ಸರಳ, ವಕ್ರರೇಖೆ, ಸರಳರೇಖೆಗಳು, ಬಿಡಿ ಮತ್ತು ಸಂಯೋಜನೆಯಂತೆ ನಂದೀಶ್ವರ, ಆನೆ, ಗಿಳಿ, ಕಾಗೆ, ನರಿ, ಬೆಕ್ಕು, ಮನುಷ್ಯಾಕೃತಿಗಳು ಮುಂತಾದವುಗಳ ಚಿತ್ರ ವಸ್ತುವಿಷಯವಾಗಿವೆ.

---

೨೫. ಡಾ. ಕೆ. ರವೀಂದ್ರನಾಥ : ಉದ್ಧರಣೆ ಸಾಹಿತ್ಯ, ಪುಟ - ೬

೨೬. ಸುರೇಶ ಎಸ್. ಬಡಿಗೇರ : ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಗಳ ಚಿತ್ರಕಲೆ - ಒಂದು ಅಧ್ಯಯನ, ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ. ಪುಟ - ೩೪

ಹಸ್ತಪ್ರತಿ ಚಿತ್ರಕಲೆಯ ಪರಿಕಲ್ಪನೆ

ಹಸ್ತಪ್ರತಿ ಚಿತ್ರಗಳನ್ನು ಕುರಿತು ಚಿತ್ರಕಲಾವಿದನ ಪರಿಕಲ್ಪನೆ ಎಲ್ಲಾ ಚಿತ್ರಗಳಿಗಿಂತ ಭಿನ್ನವಾದ ಪ್ರಕಾರವಾಗಿದೆ. ಏಕೆಂದರೆ ಈ ಕಲಾವಿದನ ಬೇಡಿಕೆಗಿಂತ ಇರುವ ಪರಿಕರಗಳನ್ನೇ ಉಪಯೋಗಿಸಿಕೊಂಡು ಚಿತ್ರಿಸಬೇಕಾಗುತ್ತದೆ. ಪ್ರತಿಯ ಅಳತೆಯಲ್ಲಿ ಸೀಮಿತವಾಗಿರು ವಂಥದ್ದಾಗಿರುವವು ಮತ್ತು ಚಿತ್ರಗಳ ಸಂಯೋಜನೆಯ ಇದ್ದ ಸ್ಥಳಾವಕಾಶದಲ್ಲಿಯೇ ಹಲವು ಜಾಮಿತೀಯ ಚಿತ್ರಗಳು, ಮನುಷ್ಯ, ಪ್ರಾಣಿ–ಪಕ್ಷಿಗಳ, ಹೂ, ಬಳ್ಳಿಗಳ ಮತ್ತು ವಸ್ತುವಿಷಯ ಪರಿಕಲ್ಪನೆ ಕಲಾವಿದನಿಗೆ ಇರಬೇಕಾಗುತ್ತದೆ. ಮತ್ತು ವಿಷಯಕ್ಕೆ ತಕ್ಕದಾದ ಬಣ್ಣ, ಕುಂಚ, ಅಳತೆ, ಸೂಕ್ಷ್ಮತೆಯನ್ನು ಕಲಾವಿದನು ಅರಿತವನಾಗಿರಬೇಕು. ಸಾಹಿತ್ಯವನ್ನು ಕೂಡ ಬಲ್ಲವನಾಗಿರಬೇಕು. ಚಿತ್ರಕಲೆಯ ಕೈಚಳಕದಲ್ಲಿ ಪ್ರಬುದ್ಧನಾಗಿರಬೇಕು. ಈ ಎಲ್ಲಾ ಅಂಶಗಳು ಹಸ್ತಪ್ರತಿಯನ್ನು ಗಮನಿಸಿದಾಗ ಆ ಕಾಲದ ಹಸ್ತಪ್ರತಿ ಚಿತ್ರ ಪರಿಕಲ್ಪನೆ ತಿಳಿವಳಿಕೆಗೆ ಬಂದಂತಹ ಅಂಶವಾಗಿದೆ.

ಚಿತ್ರಪರಿಕರಗಳು

ಈ ಹಸ್ತಪ್ರತಿ ಚಿತ್ರಗಳಲ್ಲಿ ಚಿತ್ರಪರಿಕರಗಳು ಪ್ರಮುಖವಾದ ಪಾತ್ರ ವಹಿಸುತ್ತವೆ. ಪರಿಕರಗಳು ಯಾವ ರೀತಿಯಲ್ಲಿ ಇರುತ್ತವೆಯೋ ಅದೇ ರೀತಿಯಲ್ಲಿ ಚಿತ್ರಗಳು ಮೂಡುತ್ತವೆ. ಅಷ್ಟೇ ದೀರ್ಘಾಯುಷ್ಯವಾಗುತ್ತವೆ. ಹಸ್ತಪ್ರತಿ ಚಿತ್ರಗಳಲ್ಲಿ ಪ್ರಮುಖವಾಗಿ ಬರುವ ಪರಿಕರಗಳನ್ನು ಲೇಪ್ಯ, ಲೇಖನಿ, ಲೇಪಕ, ಲೇಪನ ಎಂದು ವರ್ಗೀಕರಿಸಿಕೊಳ್ಳಲಾಗಿದೆ.

ಲೇಪ್ಯ

ಲೇಪಿಸಿಕೊಳ್ಳಲ್ಪಡುವ ವಸ್ತುವು ಲೇಪ್ಯ ಎಂದಾಗುತ್ತದೆ. ತಾಳೆಗರಿ, ಭೂರ್ಜಪತ್ರ, ಜಲಪತ್ರ, ಕಡತ, ಕಾಗದ, ಧರ್ಮ ಮತ್ತು ಲೋಹಗಳು ಇವನ್ನು ಆಧಾರ ಪರಿಕರ ಎಂದು ಹೇಳಬಹುದು. ತಾಳೆಗರಿ ಮತ್ತು ಕಾಗದದ ಹಸ್ತಪ್ರತಿಗಳು ನಮಗೆ ಹೆಚ್ಚು ಲಭ್ಯವಾಗುತ್ತವೆ. ಈ ಸಿದ್ಧ ಪ್ರತಿಗಳ ಹಿಂದೆ ಹಲವು ಹಂತಗಳುಂಟು. ಓಲೆಯವರು ಬರಹಕ್ಕೆ ಓಲೆಗಳನ್ನು ಹದಗೊಳಿಸಿ ಆಣಿಮಾಡುವುದು ಇವರ ವೃತ್ತಿ ಮಂಗರಾಜ ನಿಘಂಟಿನಲ್ಲಿ ಇವರನ್ನು 'ಪತ್ರಿಕ' ಎಂದು ಕರೆದು 'ಓಲೆಗಳು ಮೊವ್ವಿವಂ' ಎಂಬ ವಿವರಣೆ ನೀಡಲಾಗಿದೆ. ಓಲೆ, ಆಳಕ, ಸಂಪುಟ, ಪೊತ್ತಿಗೆ, ಕವಳಿಗೆ, ಪುಸ್ತಕ ಮುಂತಾದ ಈ ವೃತ್ತಿಯವರ ತಯಾರಿಕೆಗಳನ್ನು ಸೂಚಿಸುವ ಪದ ಪ್ರಯೋಗಗಳು ಕಾವ್ಯಾದಿಗಳಲ್ಲಿ ಕಂಡುಬಂದರೂ ಓಲೆಗಳನ್ನು ಮರಗಳಿಂದ ಸಂಗ್ರಹಿಸುತ್ತಿದ್ದು, ಅವುಗಳನ್ನು ಹದಗೊಳಿಸಿ 'ಅಳಕ' ಆಲೇಖವಾಗಿಸುತ್ತಿದ್ದ, ಕಟ್ಟು ಕಟ್ಟಿ ಸಂಪುಟವಾಗಿಸುತ್ತಿದ್ದ ವೃತ್ತಿ. ತಮಿಳುನಾಡಿನಲ್ಲಿ ವಿಶೇಷವಾಗಿ ಬೆಳೆಯುತ್ತಲಿದ್ದ ಶ್ರೀ ತಾಳೆ, ತಾಳೆವೃಕ್ಷಗಳ ಕಾರಣದಿಂದಾಗಿ ವೃತ್ತಿಯಲ್ಲಿ ಆಶ್ರಯಿಸಿ ಅನೇಕರು ಈ ಭಾಗದಲ್ಲಿ ಜೀವಿಸಿರುವುದು ಸ್ವಾಭಾವಿಕವಾಗಿದೆ. ಈ

ವೃತ್ತಿಯು ಕುಲಕಸುಬಾಗಿ ವಂಶಪಾರಂಪರ್ಯವಾಗಿಯೇ ಅಭಿವೃದ್ಧಿ ಹೊಂದಬಹುದಾದ ಕಾರಣ ಓಲೆಗಳನ್ನು ಹೇಗೆ ಮತ್ತು ಯಾವಾಗ ಸಂಗ್ರಹಿಸುತ್ತಿದ್ದರು, ಹದಗೊಳಿಸುತ್ತಿದ್ದರು ಎಂಬ ಸಂಗತಿಗಳು ವೃತ್ತಿರಹಸ್ಯಗಳಾಗಿಯೇ ಉಳಿದುಬಂದಿರಬೇಕು[೨೭] ಎನ್ನುವ ಅಭಿಪ್ರಾಯವಿದೆ. ಕಾಗದ ಬಂದ ನಂತರ ಓಲೆಯವರ ಆಯಾಮ ಬದಲಾವಣೆಗೊಂಡಿರಬಹುದು.

ಲೇಖನಿ / ಲೇಪಕ

ಇಲ್ಲಿ ಲೇಖನಿಯಂತೆ ಕಾರ್ಯ ನಿರ್ವಹಿಸುವ ವಸ್ತುವಿಗೆ ಕಂಠ ಎನ್ನಬಹುದು. ವಿವಿಧ ಮಾದರಿಯ ಕಂಠಗಳಿದ್ದು, ಹಲವು ವಿನ್ಯಾಸಗಳಿಂದ ಕೂಡಿದ ಕಲಾತ್ಮಕವಾದಂತಹ ಕಂಠಗಳ ಉಪಯೋಗ ಅಂದು ಕಂಡುಬರುತ್ತದೆ. ಈ ಕಂಠಗಳ ಜೊತೆಯಲ್ಲಿ 'ಕೈವಾರ'ವನ್ನು ಸಹ ಉಪಯೋಗಿಸಿರಬಹುದು, ಏಕೆಂದರೆ ಹಲವು ಜಾಮಿತಿ ಆಕೃತಿಗಳು ಇದಕ್ಕೆ ಸಾಕ್ಷಿಯಾಗಿವೆ. ಇಂತಹ ಜಾಮಿತಿ ಆಕೃತಿಗಳನ್ನು ಕೈವಾರದ ಸಹಾಯವಿಲ್ಲದೇ ಚಿತ್ರಿಸಲಾಗುವುದಿಲ್ಲ. ಕೈವಾರದಿಂದ ಸುಂದರ ಜಾಮಿತಿಆಕೃತಿಗಳು ಕಂಠದಿಂದ ಕಲಾತ್ಮಕವಾದಂತಹ ಬರಹ ಮತ್ತು ರೇಖಾವಿನ್ಯಾಸಗಳಿಗೆ ಉಪಯೋಗಿಸಿರಬೇಕು ಮತ್ತು ಚಿತ್ರಗಳಿಗೆ ಬಣ್ಣದ ಲೇಪನಕ್ಕಾಗಿ ಕುಂಚಗಳ ಉಪಯೋಗದ ಬಗ್ಗೆ ಉಲ್ಲೇಖಗಳು ಸಿಗುತ್ತವೆ.

ಕುಂಚವು ತೂಲಿಕಾ, ಬಡಿಗೆ, ಲೆಕ್ಕಣಿಕೆ, ಕರದಕಡಿ, ಕೈಕಡಿ, ಬಣ್ಣದ ಕಡ್ಡಿ ಎಂದು ಅನೇಕ ಹೆಸರುಗಳಿಂದ ಪರಿಚಿತವಾಗಿದೆ. ದೆವ್ವ ಬಾಳೆಯ ನಾರಿನಿಂದ, ಪುಂಡಿಯ ಸಸ್ಯದ ನಾರಿನಿಂದಲೂ ಇಂತಹ ಕುಂಚಗಳನ್ನು ತಯಾರಿಸಿಕೊಳ್ಳುತ್ತಿದ್ದರು. ಕಾಲಾನುಕ್ರಮದಲ್ಲಿ ಇಣಚಿಯ, ಆಡಿನ ಬಾಲದ ರೇಶಗಳಿಂದಲೂ[೨೮] ಮತ್ತು ಅರಗು ಇಲ್ಲವೆ ಕಾಳ, ಸರಿಸು ಇವುಗಳಲ್ಲಿ ಅಂಟಿಸುವುದರ ಮೂಲಕ ಬೇರೆ ಬೇರೆ ರೀತಿ ದುಂಡಾಗಿಸಿ ಕುಂಚಗಳನ್ನು ಸಿದ್ಧಪಡಿಸಿಕೊಳ್ಳುತ್ತಿದ್ದರು. ಮತ್ತು ಬಾಹ್ಯರೇಖೆಯನ್ನು ಎಳೆಯಲು ಮೊನಚಾದ, ಕೆತ್ತಲಾದ ಗಲಗಗಳು ಆಗಿರಬಹುದಾದ ಅಭಿಪ್ರಾಯವಿದೆ. ಒಟ್ಟಾರೆ ಪ್ರಾಣಿಜನ್ಯ ಮತ್ತು ಸಸ್ಯಜನ್ಯದಿಂದಲೂ ಕುಂಚಗಳನ್ನು ಉಪಯೋಗಿಸುತ್ತಿದ್ದರು ಎನ್ನುವುದಕ್ಕೆ ಇಂದಿಗೂ ಮುಂದುವರೆದುಕೊಂಡು ಬಂದ ಕುಂಚ ತಯಾರಿಕಾ ಪದ್ಧತಿಯನ್ನು ಕುಂಚಗಳಲ್ಲಿ ಕಾಣಬಹುದು.

ಲೇಪನ ಪರಿಕರ

ಲೇಪನಕ್ಕೆ ಉಪಯೋಗಿಸುವ ಮಸಿ, ಬಣ್ಣಗಳು ಲೇಪಕಗಳಾಗಿವೆ. ಇವು ದ್ರವ, ಘನ ಮತ್ತು ಲೇಹ್ಯ ರೂಪದಲ್ಲಿ ಬಳಕೆಗೊಳ್ಳುವಂಥವು, ಮಸಿ, ಬಣ್ಣ ದ್ರವರೂಪದ ಲೇಪನ ಪರಿಕರಗಳು. ತೀರ ಪ್ರಾಚೀನ ಕಾಲದಿಂದಲೂ ಇವುಗಳ ಬಳಕೆ ಭಾರತದಲ್ಲಿದ್ದಿತು ಎನ್ನಲಾಗಿದೆ.

೨೭. ಡಾ. ಬಿ. ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು, ಪುಟ – ೪೧

೨೮. ಡಾ. ಹೆಚ್. ಎನ್. ಚಿತ್ರಗಾರ : ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ–ಒಂದು ಅಧ್ಯಯನ, (ಅ.ಪ್ರ.ಪಿಹೆಚ್.ಡಿ.ಮ.ಪ್ರ), ಪುಟ – ೯೪

ಮೆಹಂಜೊದಾರೋದಲ್ಲಿ ದೊರೆತ ಟೊಳ್ಳಾಗಿರುವ ಟಗರಿನಾಕೃತಿಯು ಮಸಿ ಕುಡಿಕೆಯೇ ಆಗಿರಬೇಕೆಂಬುದು 'ಮ್ಯಾಕ್' ಮೊದಲಾದವರ ಅಭಿಪ್ರಾಯ. ನರ್ಚಸ್ ಮತ್ತು ಕರ್ಟಿಸ್‌ರವರು ಕ್ರಿ.ಪೂ. ೪ನೆಯ ಶತಮಾನದಷ್ಟು ಹಿಂದೆಯೇ ಭಾರತದಲ್ಲಿ ಮಸಿಯನ್ನು ಬಳಸಲಾಗುತ್ತಿತ್ತು ಎನ್ನುತ್ತಾರೆ. ಅಂಧೇರದ ಸ್ತೂಪವೊಂದರ ಸ್ಮಾರಕ ಕುಂಭದ ಮೇಲೆ ಮಸಿಯಿಂದ ಬರೆಯಲಾದುದು ಕ್ರಿ.ಪೂ. ೨ನೆಯ ಶತಮಾನಕ್ಕೆ ಸೇರುತ್ತದೆ.

ಹಾಗೆಯೇ ಕೋಟನ್‌ನಲ್ಲಿ ದೊರೆತ ಖರೋಷ್ಠಿ ಲಿಪಿಯ ಮಸಿಯಿಂದ ಬರೆಯಲಾದ ದಾಖಲೆಯು ಕ್ರಿ.ಶ. ೧ನೆಯ ಶತಮಾನದ್ದು[೨೯] ಎಂಬ ಅಭಿಪ್ರಾಯವಿದೆ. ರಾಗಿಯನ್ನು ಹುರಿದು ಸೀಯಿಸಿ ಪುಡಿಮಾಡಿ ನೀರಿನಲ್ಲಿ ಕಲಸಿ ಅದಕ್ಕೆ ಗೊಂದನ್ನೋ, ಸಕ್ಕರೆಯನ್ನೋ ಅಂಟಿಗಾಗಿ ಸ್ವಲ್ಪ ಮಿಶ್ರಮಾಡಿ ತಯಾರಿಸುವುದಕ್ಕೆ 'ರಾಗಿಮಸಿ' ಕಪ್ಪನ್ನು, ಅಳಲೆಕಾಯಿ, ಅನ್ನಭೇರಿಯಿಂದಲೂ ಕಪ್ಪು, ಕಾಡಿಗೆ, ಅಂಜನ ಎಂಬುದಾಗಿ ವಿಶಿಷ್ಟ ಲೋಹರೂಪದಲ್ಲಿಯೂ ಕಪ್ಪನ್ನು[೩೦] ಪಡೆಯುತ್ತಿದ್ದರು. ಮತ್ತು ಸಾಸಿವೆ ಎಣ್ಣೆ ಇಲ್ಲವೆ ಔಡಲ ಎಣ್ಣೆಯಿಂದ ಕರ್ಪೂರಸಂಯುಕ್ತವಾದ ಬಟ್ಟೆಯನ್ನು ಉರಿಸಿ ಇಲ್ಲವೇ ಕುಡಿಯುಳ್ಳ ದೀಪದ ಮೇಲೆ ಮಣ್ಣಿನ ಮುಚ್ಚಳವನ್ನಿಟ್ಟು, ಸಂಗ್ರಹಿಸಿದ ಕಾಡಿಗೆಯನ್ನು ನೀರಿಗೆ ಬೆರೆಸಿ ಕಪ್ಪುಬಣ್ಣವನ್ನು[೩೧] ಪಡೆಯುತ್ತಿದ್ದರು.

ಬಿಳಿ ವರ್ಣ : ಹಸಿರು ಛಾಯೆಯ ಬಳಪದ ಕಲ್ಲನ್ನು ಗಂಧದಂತೆ ತೆಯ್ದು ಸಂಗ್ರಹಿಸಿದ ಕೆನೆಯನ್ನು ಅಂಟು ಬೆರೆಸಿ[೩೨] ತಯಾರಿಸಿದ ಬಿಳಿಬಣ್ಣವನ್ನು ಹಸ್ತಪ್ರತಿಗಳಿಗೆ ಬಳಸಿರುವುದು ತಿಳಿದುಬರುತ್ತದೆ.

ಕೆಂಪು ವರ್ಣ : ಹುರಿಮಂಜು ಎಂಬ ಮಣ್ಣಿನಿಂದ ಕೆಂಪನ್ನು ತಯಾರಿಸುತ್ತಿದ್ದರು. 'ಗೈರಿಕ' ಎಂಬುದು ಇದರ ಇನ್ನೊಂದು ಹೆಸರು[೩೩] ಕೆಂಪುವರ್ಣವು ಹಸ್ತಪ್ರತಿಗಳಲ್ಲಿ ಹೆಚ್ಚಾಗಿ ಬಳಕೆಯಾಗಿರುವ ಬಣ್ಣವಾಗಿದೆ.

ನೀಲಿ ವರ್ಣ : ನೀಲೋಪಲ ಶಿಲೆಯನ್ನು ಪುಡಿಮಾಡಿ ಸೋಸಿ ಇಲ್ಲವೇ ನೀಲಿಸಸ್ಯದ ಪುಡಿಯನ್ನು ಅಂಟಿನೊಡನೆ ಬೆರೆಸಿ ತಯಾರಿಸುತ್ತಿದ್ದರು. ತುಂಬೆ ಹೂ ಹಾಗೂ ಎಲೆಗಳನ್ನು ಬಳಸಿ ಈ ಬಣ್ಣವನ್ನು ತಯಾರಿಸುತ್ತಿದ್ದರು.

ಹಳದಿ ವರ್ಣ : ಗೌರಿ ಮರದ ಎಲೆಗಳ ರಸದಿಂದ ಹಳದಿ ವರ್ಣವನ್ನು ತಯಾರಿಸುತ್ತಿದ್ದರು. ಮತ್ತು ಉರ್ಜಿಕಾಯಿ, ಬೆಂಗಾಲಿಕಾಯಿ, ಹಣ್ಣಿನ ರಸದಿಂದಲೂ ಇದನ್ನು ಸಿದ್ಧಪಡಿಸುತ್ತಿದ್ದರು.[೩೪]

---

೨೯. ಡಾ. ಬಿ. ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು – ಒಂದು ಅಧ್ಯಯನ, ಪುಟ – ೨೯

೩೦. ಅದೇ., ಪುಟ – ೨೯

೩೧. ಡಾ. ಕೆ. ರವೀಂದ್ರನಾಥ : ಉದ್ಧರಣಿ ಸಾಹಿತ್ಯ, ಪುಟ – ೨೦

೩೨. ಅದೇ., ಪುಟ – ೨೦

೩೩. ಡಾ. ಬಿ. ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು – ಒಂದು ಅಧ್ಯಯನ, ಪುಟ – ೨೯

೩೪. ಡಾ. ಕೆ. ರವೀಂದ್ರನಾಥ : ಉದ್ಧರಣಿ ಸಾಹಿತ್ಯ, ಪುಟ – ೨೧

[illegible]

ಹಸಿರು ವರ್ಣ : ಇದು ಮಿಶ್ರವರ್ಣವಾಗಿದ್ದು, ಪಂಚವರ್ಣದಿಂದ ಹೊರಗುಳಿದ ಬಣ್ಣವಾಗಿದೆ. ಈ ಬಣ್ಣವನ್ನು ಎಲೆಗಳಿಂದಲೂ ನೇರವಾಗಿ ಪಡೆಯಬಹುದಾಗಿದೆ.

ವಸ್ತುವಿಷಯ

ಇಂದಿನ 'ಅಕ್ಷರಲೇಖನ' ಎಂದು ಕರೆಯುವ ಕಲಾಪ್ರಕಾರವು ಇಂದಿನದಲ್ಲ. ಅದು ಹಿಂದಿನಿಂದಲೂ ಸಾಹಿತ್ಯದೊಂದಿಗೆ, ಅಕ್ಷರವಿನ್ಯಾಸದೊಂದಿಗೆ ಕೂಡಿಕೊಂಡು ಬಂದಿರುವುದು ಹಸ್ತಪ್ರತಿ ಮುಖೇನ ತಿಳಿಯುತ್ತದೆ. ಇಂತಹ ವಿನ್ಯಾಸಗಳನ್ನು ಕುರಿತು ಡಾ. ಬಿ. ಕೆ. ಹಿರೇಮಠರು ಹಸ್ತಪ್ರತಿಯ ಅಧ್ಯಯನದೊಂದಿಗೆ ವಿವರಿಸುತ್ತಾರೆ. ಅಕ್ಷರವಿನ್ಯಾಸಗಳನ್ನು ಹಸ್ತಪ್ರತಿ ಕುರಿತು ಸಣ್ಣಲಿಪಿ ವಿನ್ಯಾಸ, ಶೀಘ್ರಲಿಪಿ ವಿನ್ಯಾಸ ಅಕ್ಷರಲೇಖನ ಎಂದು ವಿಭಾಗಿಸಬಹುದು.

ಸಣ್ಣ/ಶೀಘ್ರ ಲಿಪಿ ವಿನ್ಯಾಸ

ಸಣ್ಣಲಿಪಿಯನ್ನು ಒಂದು ಕಲೆಯನ್ನಾಗಿ ರೂಢಿಸಿಕೊಂಡು ಬಂದವರ ಕೆಲವು ಉದಾಹರಣೆಗಳು ಹಸ್ತಪ್ರತಿಗಳಲ್ಲಿ ದೊರಕುತ್ತವೆ ಎನ್ನುತ್ತಾರೆ. ಡಾ. ಬಿ. ಕೆ. ಹಿರೇಮಠರವರು. ಲಿಪಿಗಳ ಲಕ್ಷಣ, ಅಂಗಾಂಗಗಳ ಪ್ರಮಾಣ ಪ್ರಜ್ಞೆಯನ್ನಿಟ್ಟುಕೊಂಡು ಅವುಗಳನ್ನು ಚಿತ್ರ ಆಕಾರದಲ್ಲಿ ರೇಖಿಸುವುದು ಕಷ್ಟಸಾಧ್ಯವಾದ ಸಾಧನೆಯಾಗಿದೆ. ಇದ್ದ ಲೇಖನ ಸಾಮಗ್ರಿ (ತಾಳೆಗರಿ/ಕಾಗದ)ಗಳಲ್ಲೇ ಬರೆದು ಪೂರೈಸುವ ಸಂದರ್ಭಗಳು ಸಣ್ಣಲಿಪಿ ಲೇಖನಕಾರ್ಯವನ್ನು ಅನಿವಾರ್ಯಗೊಳಿಸಬಹುದು. ಪ್ರತಿಕಾರರು ಈ ಸಂದಿಗ್ಧ ಪರಿಸ್ಥಿತಿಯನ್ನೇ ಸಣ್ಣಲಿಪಿ ಲೇಖನ ವಿನ್ಯಾಸದ ಅವಕಾಶವನ್ನಾಗಿ ಕಲ್ಪಿಸಿಕೊಂಡುದು ಶ್ಲಾಘನೀಯ ಮತ್ತು ಶೀಘ್ರ ಲಿಪಿ ವಿನ್ಯಾಸವು ಬರಹಗಾರರ ಸಾಧನೆಯೆಂಬಂತೆ ಕಂಡು ಕೀರ್ತಿಸಿದ ಶಾಸನಗಳ ಲಭ್ಯತೆಯ ಕುರಿತು ವಿದ್ವಾಂಸರ ಹೇಳಿಕೆ ಇದೆ. ಈ ಬರಹದ ಒಟ್ಟು ಸೌಂದರ್ಯ, ಸ್ವರೂಪ ಮುಂತಾದ ಸಂಗತಿಗಳ ಪೂರ್ವಾಲೋಚನೆಯಲ್ಲಿ ಸಮಯ ಕಳೆಯದೆ ಥಟ್ಟನೆ ಪ್ರಾರಂಭಿಸಿ ಸುಂದರವಾಗಿ ಬರೆದು ಪೂರೈಸುವುದು. ಇಂತಹ ಬರಹಕ್ಕೆ ಅಕ್ಷರ ರಚನಾ ಪ್ರಾವೀಣ್ಯದ ಜೊತೆಗೆ, ನಿಖರವಾದ ಸ್ಥಳ ವಿಂಗಡಣೆ, ಸಾಧನ ಸಲಕರಣೆಗಳ ಸಾರ್ಥಕ ಪ್ರಯೋಜನ ಪರಿಜ್ಞಾನವನ್ನು, ಮಿಗಿಲಾಗಿ ಅದನ್ನು ಆಹ್ವಾನದಂತೆ ನಿರ್ವಹಿಸುವ ಆತ್ಮವಿಶ್ವಾಸವನ್ನು ಬರೆದ ಕಲಾವಿದನು ಹೊಂದಿರಬೇಕಾಗುತ್ತಿತ್ತು.[೩೫]

ಬರವಣಿಯಲ್ಲಿ ಅಲಂಕಾರಿಕ ದೃಷ್ಟಿಯಿಂದ ಮೇಲೆ ಕೊಂಬುಗಳು, ಒತ್ತಕ್ಷರಗಳು ಸರಳಗೈ ವಿನ್ಯಾಸಗೊಳಿಸುವುದರ ಮೂಲಕ 'ಅಕ್ಷರನಕ್ಷೆ' ಎಂಬುವಷ್ಟರ ಮಟ್ಟಿಗೆ ವಿನ್ಯಾಸಪೂರ್ಣವಾಗಿದೆ. ವಿವಿಧಾಕಾರದ ಶ್ರೀಕಾರಗಳು, ಪದ್ಮದಾಕೃತಿ ಹೂ, ಪುಷ್ಪಗಳಂತೆ ಸಂಯೋಜಿಸಿದ ಮುತ್ತಿನಾಕೃತಿಗಳು, ಲಿಂಗದಾಕೃತಿಗಳು, ಅಷ್ಟದಳಾಕೃತಿ, ಷಟ್‌ದಳಾಕೃತಿ ಹಾಗೂ ಅವನ್ನು ಸುತ್ತುವರಿದ ವರ್ತುಲಗಳು, ತರಂಗಿತ ರೇಖೆಗಳು, ಬಳೆರೇಖೆಗಳು, ಅಡ್ಡವಿದ್ದ ಒಂಟಿಯಾದ ಹಾಗೂ ಜೋಡಿಯಾದ

---

೩೫. ಡಾ. ಬಿ. ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು – ಒಂದು ಅಧ್ಯಯನ, ಪುಟ – ೧೬೬

[illegible]

ದಂಡರೇಖೆಗಳು,[೩೬] ಆಕಾರ ಮತ್ತು ಆಕಾರದ ಒಳಗಡೆ ವಿವಿಧ ಬಿಡಿ ಅಕ್ಷರ ಮತ್ತು ಪದಗಳ ಲೇಖನವಿನ್ಯಾಸಗಳು ಉದ್ಧರಣೆಸಾಹಿತ್ಯದಲ್ಲಿ ಸಂಯೋಜನೆಗೊಂಡಿರುವವು. ಶೂನ್ಯ ಲಿಂಗೋದ್ಧರಣೆ, ಮರುಡೋದ್ಧರಣೆ, ಜ್ಞಾನ ಅಷ್ಟಾವರಣೋದ್ಧರಣೆ ಹಸ್ತಪ್ರತಿ ಉದಾಹರಣೆಗಳನ್ನು ಕಾಣಬಹುದು.

ಚಿತ್ರಕಲೆಯ ವಿನ್ಯಾಸ

ಸಾಂದರ್ಭಿಕ ಚಿತ್ರಗಳು ಮತ್ತು ಚಿತ್ರಕಲೆಯನ್ನೇ ಕುರಿತ ಚಿತ್ರಗಳು ಉದ್ದೇಶಿತವಾಗಿಯೇ ರಚನೆಗೊಂಡವುಗಳಾಗಿವೆ. ಸಾಂದರ್ಭಿಕ ಚಿತ್ರಗಳು ಸಾಹಿತ್ಯದೊಂದಿಗೆ ಕೂಡಿಕೊಂಡು ಬಂದಿದ್ದರೆ, ಅಲಂಕಾರ ಚಿತ್ರರಚನೆಗಳು ಉದ್ದೇಶಿತವಾಗಿವೆ. ಅಂತಹ ಚಿತ್ರಗಳನ್ನು ಹಸ್ತಪ್ರತಿಗಳ ರಕ್ಷಣೆಗಾಗಿ ಮೊದಲಲ್ಲಿ ಹಾಗೂ ಕೊನೆಯಲ್ಲಿ ಸೇರಿಸಲಾದ ಗರಿಗಳಲ್ಲಿಯೇ ವಿಶೇಷವಾಗಿ ಇಂತಹ ಚಿತ್ರರಚನೆಗಳು ಕಂಡುಬರುತ್ತವೆ. ಕುಂಚದಿಂದ ಅಲಂಕಾರಿಕ ಹೂ, ಬಳ್ಳಿ, ಪಕ್ಷಿ, ಪ್ರಾಣಿ ಮತ್ತು ಕೈವಾರ, ರೇಖಾಪಟ್ಟಿಗಳ ಸಹಾಯದಿಂದ ಅಲಂಕಾರಿಕ ಹಲವು ಜಾಮಿತಿ ಚಿತ್ರಣಗಳನ್ನು ಕಾಣಬಹುದು.

ಧಾರ್ಮಿಕಕ್ಕೆ ಸಂಬಂಧಿಸಿದ ಚಿತ್ರಕಲೆ

ಧಾರ್ಮಿಕ ಚಿತ್ರಗಳು ಆಯಾ ಮತ, ಧರ್ಮಗಳ ತಾತ್ವಿಕವಾದ ಚೌಕಟ್ಟಿನೊಳಗೆ ಪರಿಭಾವಿತವಾಗಿವೆ. ಆಯಾ ಧರ್ಮದ ಸಾಂಪ್ರದಾಯಿಕ ವಿಧಿ-ವಿಧಾನಕ್ಕೆ ಬದ್ಧವಾಗಿರುತ್ತವೆ. ಧರ್ಮ, ಇತಿಹಾಸ ಎಂದಿನಿಂದ ಇತ್ತು ಎಂಬ ವಿಚಾರಕ್ಕೆ ಬಂದಾಗ ಭಾರತದಲ್ಲಿ ಬಹು ಪ್ರಾಚೀನ ಧರ್ಮ ಬೌದ್ಧಧರ್ಮ, ನಂತರ ಜೈನ, ವೀರಶೈವ, ನಂತರ ವೈದಿಕ, ವೈಷ್ಣವ, ಮುಸ್ಲಿಂ ಮುಂತಾದ ಧರ್ಮಗಳು ಸಹ ಅಲ್ಲಲ್ಲಿ ರೂಪ ಪಡೆದು, ತಮ್ಮದೇ ಸಂಪ್ರದಾಯದ ಚೌಕಟ್ಟಿನೊಳಗೆ[೩೭] ಅಸ್ತಿತ್ವವನ್ನು ಪಡೆದಿರುವವೆಂಬ ಅಭಿಪ್ರಾಯವಿದೆ. ಇದರಲ್ಲಿ ವೀರಶೈವ ಧರ್ಮಕ್ಕೆ ಸಂಬಂಧಿಸಿದಂತೆ ಉದ್ಧರಣೆಯ ಚಿತ್ರಕಲೆಯು ತುಂಬಾ ವಿಶೇಷತೆಯಿಂದ ಕೂಡಿದೆ.

ಉದ್ಧರಣ ಎಂಬುದು ಉತ್+ಹರಣ, ಉತ್ ಎಂದರೆ ಮೇಲೆ, ಮುಂದೆ (ಊರ್ಧ್ವ), ಹರಣ ಎಂದರೆ ಅಪಹರಿಸು, ಒಯ್ಯು ಎಂದರ್ಥ. ಹೀಗಾಗಿ ಉದ್ಧರಣೆ ಎಂದರೆ ಉದ್ಧರಿಸು, ಮೇಲಕ್ಕೆತ್ತು, ಬಂಧನದಿಂದ ಮುಕ್ತಗೊಳಿಸು, ಪರಿಪೂರ್ಣ ಹಂತಕ್ಕೆ ಮುಟ್ಟಿಸು ಎಂಬಿತ್ಯಾದಿ ಅರ್ಥಗಳು ಪ್ರಾಪ್ತವಾಗುತ್ತವೆ. ಉದ್ಧರಣೆಗಳು ಲಿಂಗಾಯತ ತತ್ವಗಳ ರಹಸ್ಯವನ್ನು ತಿಳಿಸುವ ಒಂದು ಸಾಧನ. ಈ ಸಾಧನಗಳಲ್ಲಿ ಅನಾದಿಭಕ್ತೋದ್ಧರಣೆ, ಅಷ್ಟಾವರಣೋದ್ಧರಣೆ, ಅನಾದಿಜಂಗಮೋದ್ಧರಣೆ, ಮಕುಟೋದ್ಧರಣೆ, ಶೂನ್ಯ ಲಿಂಗೋದ್ಧರಣೆ, ಚಿದಂಬರೋದ್ಧರಣೆ, ಷಡ್ಬ್ರಂಹೋದ್ಧರಣೆ, ಬಸವಾಕ್ಷರೋದ್ಧರಣೆ, ನೂರೆಂಟು ಪ್ರಣವೋದ್ಧರಣೆ, ಅಧೋಕುಂಡಲಿ ಉದ್ಧರಣೆ, ಊರ್ಧ್ವಕುಂಡಲಿ ಉದ್ಧರಣೆ, ಲಿಂಗಷಡಕ್ಷರೋದ್ಧರಣೆ, ಜ್ಞಾನಚಕ್ರೋದ್ಧರಣೆ,

---

೩೬. ಡಾ. ಬಿ. ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು – ಒಂದು ಅಧ್ಯಯನ, ಪುಟ – ೧೬೮

೩೭. ಸುರೇಶ ಎಸ್. ಬಡಿಗೇರ : ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಗಳ ಚಿತ್ರಕಲೆ – ಒಂದು ಅಧ್ಯಯನ, ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ. ಪುಟ – ೩೫


ವೀರಶೈವ ಧರ್ಮದ ಉದ್ಧರಣೆ ಚಿತ್ರಗಳು (ಚಿತ್ರ ಕೃಪೆ ಡಾ.ಕೆ.ರವೀಂದ್ರನಾಥ)




ಅನಾದಿ ಭಕ್ತೋದ್ಧರಣೆ ಚಿತ್ರ



ಜ್ಞಾನ ಅಷ್ಟಾವರಣೋದ್ಧರಣೆ ಚಿತ್ರ



ಲಿಂಗ ಷಡಾಕ್ಷರೋದ್ಧರಣೆ ಚಿತ್ರ



ಲಿಂಗಷಡಾಕ್ಷರೋದ್ಧರಣೆ ಚಿತ್ರ

ವೀರಶೈವ ಧರ್ಮದ ಉದ್ಧರಣೆ ಚಿತ್ರಗಳು



ಪಂಚಮೂರ್ತಿಲಿಂಗೋದ್ಧರಣೆ ಚಿತ್ರ



ನವಚಕ್ರೋದ್ಧರಣೆ ಚಿತ್ರ



ವೃಷಭೋದ್ಧರಣೆ ಚಿತ್ರ



ಮಕುಟೋದ್ಧರಣೆ ಚಿತ್ರ

ವೀರಶೈವ ಧರ್ಮದ ಉದ್ಧರಣೆ ಚಿತ್ರಗಳು




ಲಿಂಗಪಂಚೀಕರಣೋದ್ಧರಣೆ ಚಿತ್ರ



ಷಡಾಕ್ಷರೋದ್ಧರಣೆ ಚಿತ್ರ



ಅಧೋ ಕುಂಡಲೀ ಉದ್ಧರಣೆ ಚಿತ್ರ



ಚಿದಂಬರೋದ್ಧರಣೆ ಚಿತ್ರ

ವೀರಶೈವ ಧರ್ಮದ ಉದ್ಧರಣೆ ಚಿತ್ರಗಳು



ತತ್ತ್ವ ಪಂಚೀಕರಣೋದ್ಧರಣೆ ಚಿತ್ರ



ಮಂತ್ರಪಂಚೀಕರಣೋದ್ಧರಣೆ ಚಿತ್ರ



ಜ್ಞಾನ ಚಕ್ರೋದ್ಧರಣೆ ಚಿತ್ರ



ಶಾಂಭವಿ ಚಕ್ರೋದ್ಧರಣೆ ಚಿತ್ರ

ವೀರಶೈವ ಧರ್ಮದ ಉದ್ಧರಣೆ ಚಿತ್ರಗಳು



ಬಸವಾಕ್ಷರೋದ್ಧರಣೆ ಚಿತ್ರ



ನೂರೆಂಟು ಪ್ರಣಮೋದ್ಧರಣೆ ಚಿತ್ರ



ಮಹಾಲಿಂಗೋದ್ಧರಣೆ ಚಿತ್ರ



ಶೂನ್ಯ ಲಿಂಗೋದ್ಧರಣೆ ಚಿತ್ರ

ವೀರಶೈವ ಧರ್ಮದ ಉದ್ಧರಣೆ ಚಿತ್ರಗಳು



ಷಡ್ಬ್ರಹ್ಮೋದ್ಧರಣೆ ಚಿತ್ರ



ಊರ್ಧ್ವ ಕುಂಡಲೀ ಉದ್ಧರಣೆ ಚಿತ್ರ



ಅನಾದಿ ಜಂಗಮಮೂರ್ತಿ ಉದ್ಧರಣೆ ಚಿತ್ರ



ಅನಾದಿ ಜಂಗಮೋದ್ಧರಣೆ ಚಿತ್ರ

ಗೋಮುಖೋದ್ಧರಣೆ, ಪ್ರಣವೋದ್ಧರಣೆ, ನೂರೆಂಟು ತೆರದ ಅರ್ಪಣೋದ್ಧರಣೆ, ಅರವತ್ತಾರು ತೆರದ ಕರಣಾಪಗೋದ್ಧರಣೆ, ನಲವತ್ತೆಂಟು ತೆರೆದ ಅರ್ಪಣೋದ್ಧರಣೆ, ಇನ್ನೂರು ಹದಿನಾರು ತೆರೆದ ಅರ್ಪಣೋದ್ಧರಣೆ, ಮೂವತ್ತಾರು ತೆರದ ಮಿಶ್ರಾರ್ಪಣೋದ್ಧರಣೆ, ಕಾಯಾರ್ಪಣೋದ್ಧರಣೆ, ಲಿಂಗಯೋಗ ಸಮಾಧಿ ಉದ್ಧರಣೆ, ಗಣೇಶ್ವರನೋದ್ಧರಣೆ, ರಥೋದ್ಧರಣೆ ಎಂಬಿತ್ಯಾದಿಯಾಗಿವೆ.[೩೮] ಶ್ರೀಮಂತ ಚಿತ್ರಕಲಾ ಸಾಹಿತ್ಯವನ್ನು ಈ ಉದ್ಧರಣಿಗಳು ಹೊಂದಿವೆ.

ಈ ಹಸ್ತಪ್ರತಿಗಳ ನಾಮಾಂಕಿತಕ್ಕೆ ತಕ್ಕುದಾದ ಚಿತ್ರವನ್ನು ಉದ್ಧರಣಿಗಳು ಹೊಂದಿವೆ. ಉದಾಹರಣೆಗೆ ನೂರೆಂಟು ಪ್ರಣವೋದ್ಧರಣೆಯಲ್ಲಿ ೧೦೮ ಅಕ್ಷರಗಳಿಂದ ಸಮಯೋಜಿತಗೊಂಡ ೮ ವೃತ್ತಗಳನ್ನು ಚಿತ್ರಿಸಲಾಗಿದೆ. ಇನ್ನೊಂದು ಚಿತ್ರ, ಅಧೋಕುಂಡಲಿ ಮತ್ತು ಊರ್ಧ್ವಕುಂಡಲಿ ಉದ್ಧರಣಿಗಳದು. ಜಿಂಕೆಯ ಮುಖ, ಎದೆಯಿಂದ ನಡುವಿನವರೆಗೆ ಸ್ತ್ರೀದೇಹ, ಮುಂದಿನವು ಹುಲಿಗಾಲು, ಹಿಂದಿನವು ನಂದಿಕಾಲು, ನೀಳವಾದ ಬೆನ್ನಮೇಲೆ ಹಾವು, ನಾಲ್ಕು ಕೈಗಳು ಮತ್ತು ಖಡ್ಗ, ರುಂಡಗಳು, ಜಲಚರ ಪ್ರಾಣಿಗಳಾದ ಮೀನು, ವ್ಯಾಘ್ರ, ಸಿಂಹ, ಆಕಳು, ಹರಿಣಗಳಂತಹ ಸಾಂಕೇತಿಕ ಚಿತ್ರಗಳಿಂದ ಆವೃತ್ತವಾಗಿವೆ. ಈ ಚಿತ್ರಗಳಿಗೆ ಸಂಕೇತಗಳು ಹೀಗಿವೆ:

"ಅಹಂಕಾರ ಮಮಕಾರವೆಂಬೆರಡು ಕೋಡು, ಎಂಬತ್ನಾಲ್ಕು ಲಕ್ಷ ಜೀವರಾಶಿ ಶಿವನರಿಹದ ಪ್ರಾಣಿಗಳ ನುಡುತ್ತಿಹನೆಂಬ ಜಿಂಕೆಯ ಮೋರೆ, ತನ್ನರಿದೆನೆಂಬವರಿಗೆ ಮುಕ್ತಿ ತೋರುವೆನೆಂಬ ಮುಗತಿ, ಶಿವ ಲಿಖಿತವ-ದುರ್ಲಿಖಿತವ ಬರೆವುದಕ್ಕೆ ಓಲೆ ಕಂಠ, ವಿಷ ಅಮೃತವೆಂಬೆರಡು ಕೈಯಲ್ಲಿ ಕುಂಭಗಳು, ಸಿಂಹನಾದ ನಡು ವಿಷ, ಅಮೃತ ತಲೆ, ಮೊಲೆಗಳು ಶಿವಪಥಕ್ಕೆ ಹೆಜ್ಜೆಯನಿಟ್ಟು ಮರುಳದಿಹೆವೆಂಬ ಅಚಲವಾದ ವ್ಯಾಘ್ರ, ಪಾದಂಗಳು ಮುಂದಿಹವು"[೩೯] ಮುಂತಾಗಿ ಅರ್ಥವನ್ನು ಗರ್ಭೀಕರಿಸಿಕೊಂಡ ಶಾಸ್ತ್ರಾಂಕಿತವಾಗಿವೆ. ಒಟ್ಟಾರೆ ಆಯಾ ಮತಸಂಬಂಧಿ ಹಸ್ತಪ್ರತಿಗಳು ಜೈನ ಧರ್ಮದ ಕೃತಿಗಳಿಗೆ ಸಂಬಂಧಿಸಿದರೆ, ತೀರ್ಥಂಕರರು, ಯಕ್ಷ-ಯಕ್ಷಿಣಿಯರು, ಜೈನ ಮುನಿಗಳು ಮತ್ತು ಶೈವ, ವೀರಶೈವ ಹಸ್ತಪ್ರತಿಗಳಲ್ಲಿ ಚಿತ್ರಿಸಿದ ರಕ್ಷಾಫಲಕ ಪ್ರತಿಗಳಲ್ಲಿ ಶಿವಲಿಂಗ, ನಂದಿ, ಶಿವ, ವೃಷಭಾರೂಢ ಶಿವ, ಶಿವನ ಪರಿವಾರ, ಪಾರ್ವತಿ, ಶುಕಮುನಿ, ಅರ್ಚಕರು, ಭಕ್ತರು, ಪುರಾತನ, ನೂತನ ಶರಣರ, ಉತ್ಸವ ಮೂರ್ತಿಗಳು, ಸೇವಕರು ಮುಂತಾದವು ಚಿತ್ರವಿಷಯವಾಗಿವೆ.

ಅಲಂಕಾರಿಕ ಚಿತ್ರಗಳು

ಅಲಂಕಾರ ಎಂದರೆ ಶಬ್ದಕೋಶದಲ್ಲಿ ಆಭರಣ, ಚಲುವಿಕೆ ಎಂಬರ್ಥವಿದೆ. ಸಾಮಾನ್ಯವಾಗಿ ಚಿತ್ರಕಲೆಯಲ್ಲಿ ಹೂ – ಬಳ್ಳಿ, ನಕ್ಷೆ, ಸರಳಗ್ಯೆ ಚಿತ್ರ, ಸುರಳಿಗಳು ಅಲಂಕಾರಕ್ಕೆ ಸಂಬಂಧಿಸಿದ ವಿನ್ಯಾಸಗಳಾಗಿವೆ. ಈ ವಿನ್ಯಾಸವನ್ನು ಆಧಾರಿತ ಹಲವು ಒಡವೆ, ವಸ್ತು ಶೃಂಗಾರಗೊಳ್ಳುತ್ತವೆ.

೩೮. ಡಾ. ಕೆ. ರವೀಂದ್ರನಾಥ : ಉದ್ಧರಣಿ ಸಾಹಿತ್ಯ, ಪುಟ – ೧೬

೩೯. ಡಾ. ಕೆ. ರವೀಂದ್ರನಾಥ : ಉದ್ಧರಣಿ ಸಾಹಿತ್ಯ, ಪುಟ – ೨೩

ಈ ಶೃಂಗಾರವನ್ನು ಹಲವು ಶುಭ ಸಂದರ್ಭದಲ್ಲಿ ಸ್ತ್ರೀ–ಪುರುಷರು ಧರಿಸುವುದರಿಂದ ಅವರ ಸೌಂದರ್ಯವನ್ನು ಇಮ್ಮಡಿಗೊಳಿಸುತ್ತದೆ. ಇನ್ನೂ ರಂಗೋಲಿ, ಮೆಹಂದಿ, ಹಚ್ಚೆಗಳಲ್ಲಿಯೂ ಅಲಂಕಾರವನ್ನು ಕಾಣುತ್ತೇವೆ. ಆದರೆ ಹಸ್ತಪ್ರತಿಯಲ್ಲಿ ಲಿಪಿಕಾರರ ಕೌಶಲ, ಕಲಾಪ್ರಜ್ಞೆಗಳು ಹಾಗೂ ಹಸ್ತಪ್ರತಿಗಳ ಒಡೆಯರ ಕಲಾಭಿರುಚಿ–ಉದ್ದೇಶಗಳಿಗೆ ತಕ್ಕಂತೆ ಹಸ್ತಪ್ರತಿಗಳು ಅಲಂಕಾರಗೊಳ್ಳುತ್ತ ಬಂದಿವೆ. ಹಸ್ತಪ್ರತಿ ಅಲಂಕಾರಗಳನ್ನು ಅಗತ್ಯದ, ಉದ್ದೇಶಿತ ಮತ್ತು ಸಾಂದರ್ಭಿಕ ಎಂದು ವಿಂಗಡಿಸಿಕೊಳ್ಳಬಹುದು.[೪೦] ಇಲ್ಲಿಯೂ ಸಹ ಸಾಂದರ್ಭಿಕ ಚಿತ್ರಗಳು, ಶಾಸ್ತ್ರಕ್ಕೆ ಸಂಬಂಧಿಸಿದ ಚಿತ್ರಗಳು, ಕಥಾ ಸಂಬಂಧಿ ಚಿತ್ರಗಳು, ರಾಗಮಾಲಾ ಚಿತ್ರಗಳು ಅಲಂಕಾರಿಕ ಚಿತ್ರಗಳಾಗಿವೆ.

ಸಾಂದರ್ಭಿಕ ಚಿತ್ರಗಳು

ಸಾಂದರ್ಭಿಕ ಚಿತ್ರಗಳನ್ನು ಒಂದು ಉತ್ತಮವಾದ ಸಂವಹನದ ತಂತ್ರವೆಂತಲೇ ಹೇಳಬಹುದು. ಕನ್ನಡ ವಿಶ್ವವಿದ್ಯಾಲಯದಲ್ಲಿರುವ ಹಸ್ತಪ್ರತಿಗಳನ್ನು ಗಮನಿಸಿದಾಗ ಕೆಲವೊಂದು ಹಸ್ತಪ್ರತಿಗಳು ಮಾತ್ರ ನಮಗೆ ಲಭ್ಯವಾಗುತ್ತವೆ. ಅವುಗಳಲ್ಲಿ ವೀರಶೈವ ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳು ನಮಗೆ ಹೆಚ್ಚಾಗಿ ಸಿಗುತ್ತವೆ. ಆ ಕೃತಿಗಳಲ್ಲಿ ಬಸವ ಪುರಾಣ, ಪ್ರಭುಲಿಂಗ ಲೀಲೆ, ಶರಣಲೀಲಾಮೃತ ಮುಂತಾದ ಕೃತಿಗಳಲ್ಲಿ ಕಥೆಯ ನಡುನಡುವೆ ಅಲ್ಲಲ್ಲಿ ಒಂದು ವಿಷಯವನ್ನು ನೇರವಾಗಿ, ಸ್ಪಷ್ಟವಾಗಿ ಕಥೆಯ ಉದ್ದೇಶದ ಹಿನ್ನೆಲೆ ಮತ್ತು ಗಿರಿಜಾ ಕಲ್ಯಾಣ ಮತ್ತು ಶ್ರೀಕೃಷ್ಣ ಪಾರಿಜಾತದಂತಹ ಕೃತಿಗಳು ಕಥೆಗಳ ಹಂದರಚಿತ್ರಗಳಿಂದಲೇ ಸ್ಪಷ್ಟವಾಗುವುದನ್ನು ನಾವು ಕಾಣುತ್ತೇವೆ. ಹೀಗೆ ಸಾಂದರ್ಭಿಕ ಚಿತ್ರಗಳು ಹಲವು ಉದ್ದೇಶಗಳೊಂದಿಗೆ ತಮ್ಮ ಅನನ್ಯತೆಯನ್ನು ಸಾಧಿಸಿವೆ ಎನ್ನಬಹುದು.[೪೧]

ಈ ಸಾಂದರ್ಭಿಕ ಚಿತ್ರಗಳಲ್ಲಿ ಇನ್ನು ಎರಡು ತೆರನಾಗಿ ಕಾಣಬಹುದು. ಶಾಸ್ತ್ರಸಂಬಂಧಿ ಚಿತ್ರಗಳು ಕಥಾಸಂಬಂಧಿ ಚಿತ್ರಗಳು, ಧಾರ್ಮಿಕ ಇಲ್ಲವೆ ಮಾಂತ್ರಿಕ ಮಹತ್ವವುಳ್ಳ ಕೆಲವು ಸಂಗತಿಗಳನ್ನು ರಹಸ್ಯವಾಗಿ ಹೇಳಲಾದ ಕೆಲವು ಚಿತ್ರ ಅಥವಾ ಸಾಂಕೇತಿಕ ಚಿತ್ರಗಳೂ ಶಾಸ್ತ್ರಗಳ ವಿವರಣೆಗಾಗಿ ಕೊಡಮಾಡುವ ಆಕೃತಿಗಳೂ, ಮಂತ್ರ, ತಂತ್ರ, ಯಂತ್ರಾದಿಗಳಲ್ಲಿನ ಚಿತ್ರ ಸಂಕೇತಗಳೂ, ಶಕುನಾದಿಗಳನ್ನು ಕಂಡುಕೊಳ್ಳುವ, ರೋಗಾದಿ ಕಾಡಾಟಗಳ ಪರಿಹಾರ ಉಚಿತ ರಹಸ್ಯ[೪೨]ವಾಗಿವೆ. ಇಂತಹ ಒಂದು ವಿಷಯಕ್ಕೆ ಸಂಬಂಧಿಸಿದಂತೆ ಗ್ರಂಥಗಳು ಶಕುನಶಾಸ್ತ್ರ (ಕ್ರ.ಸಂ. ೫೯೯), ರಟ್ಟಾಮತ (ಕ್ರ.ಸಂ. ೧೨೩೮), ಜ್ಯೋತಿಷ್ಯಶಾಸ್ತ್ರ (ಕ್ರ.ಸಂ. ೧೨೪೪), ಕಟ್ಟಾಮತಶಾಸ್ತ್ರ (ಕ್ರ.ಸಂ.

---

೪೦. ಪಿ.ಆರ್. ತಿಪ್ಪೇಸ್ವಾಮಿ (ಪ್ರ.ಸಂ.) : ಕಲಾಕೋಶ, ಪುಟ – ೧೯

೪೧. ಸುರೇಶ ಎಸ್. ಬಡಿಗೇರ : ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಗಳ ಚಿತ್ರಕಲೆ – ಒಂದು ಅಧ್ಯಯನ, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಪುಟ – ೪೬

೪೨. ಡಾ. ಬಿ. ಕೆ. ಹಿರೇಮಠ :ಕನ್ನಡ ಹಸ್ತಪ್ರತಿಗಳು – ಒಂದು ಅಧ್ಯಯನ. ಪುಟ – ೧೭೩



ಅಲಂಕಾರಿಕ ಕಲೆ



ಫಲಕ ಮಾದ್ಯಮದ ಚಿತ್ರ



ಗಣೇಶ ಮತ್ತು ಸರಸ್ವತಿ

೧೩೦೨) ಮುಂತಾದ ಶಾಸ್ತ್ರಗ್ರಂಥಗಳನ್ನು ನೋಡಬಹುದು. ಕಥೆಗಳಿಗೆ ಅನುಸಾರವಾಗಿ ಸನ್ನಿವೇಶಗಳಿಗೆ ತಕ್ಕಂತೆ ಇರುವ ಚಿತ್ರಗಳಿಗೆ ಕಥಾಸಂಬಂಧಿ ಚಿತ್ರ ಎನ್ನಬಹುದು. ಪಂಚತಂತ್ರ, ಪ್ರಭುಲಿಂಗಲೀಲೆ ಉತ್ತಮ ಉದಾಹರಣೆಯಾಗಿವೆ. ರಾಗಮಾಲಾ ಚಿತ್ರಗಳು ಸಹ ಅಲಂಕಾರಿಕ ಚಿತ್ರಗಳಾಗಿವೆ.

ಇಂತಹ ಚಿತ್ರಗಳುಳ್ಳ ಚಿತ್ರಗಳಿಗೆ ರಾಗರಾಗಿಣಿಯರು ಅಥವಾ ರಾಗಮಾಲಾ ಚಿತ್ರಗಳೆನ್ನುತ್ತಾರೆ. ಇದು ರಜಪೂತ ಚಿತ್ರಕಲೆಯ ಒಂದು ಅಂಗ. ಇವು ಚಿಕಣಿ ಚಿತ್ರವೂ ಹೌದು. ವರ್ಣ ಮತ್ತು ಧ್ವನಿ, ಮನಸ್ಸಿನಲ್ಲಿ ರಸಭಾವನೆಗಳನ್ನುಂಟು ಮಾಡುವುದರಲ್ಲಿ ಕೆಲವು ಬಣ್ಣ ಮತ್ತು ಧ್ವನಿಗಳಲ್ಲಿ ಸಮಾನ ಗುಣಗಳಿವೆ. ಇಂತಹ ರಾಗಮಾಲಾಕ್ಕೆ ಸಂಬಂಧಿಸಿದಂತೆ ವಿ.ಟಿ. ಕಾಳೆಯವರು ಹೊಸ ಹೊಸ ಪ್ರಯೋಗಗಳನ್ನು ಮಾಡಿದ್ದಾರೆ. ರಾಗಮಾಲಾ ಚಿತ್ರವು ಬರೀ ಚಿತ್ರಕಲಾಕೃತಿಯಾಗಿರದೇ ಸಂಗೀತ, ಸಾಹಿತ್ಯ ಮತ್ತು ಚಿತ್ರಗಳನ್ನು ಒಂದಾಗಿ ಸಂಗಮಿಸಿ ಪ್ರೇಮ, ವಿರಹ, ವಾತ್ಸಲ್ಯ, ಸಂಭ್ರಮ ಯಾವುದಾದರೂ ರಸಭಾವವನ್ನು ಮೂಡಿಸುತ್ತವೆ.

ಮುಮ್ಮಡಿಯವರ ಕಾಲದಲ್ಲಿ ಪುಸ್ತಕಗಳಲ್ಲಿ ಚಿತ್ರವನ್ನಳವಡಿಸುವ ಪದ್ಧತಿ ವಿಶೇಷವಾಗಿ ಬೆಳೆದು ಬಂದಿತು. ಮುಮ್ಮಡಿಯವರೇ ರಚಿಸಿದ ಶ್ರೀ ತತ್ವನಿಧಿ, ಸ್ವರ-ಚೂಡಾಮಣಿ, ದೇವತಾನಾಮ ಕುಸುಮಮಂಜರಿ, ಮೊದಲಾದ ಹಸ್ತಲಿಖಿತ ಗ್ರಂಥಗಳಲ್ಲಿ ಚಿತ್ರಗಳದ್ದೇ ಸಿಂಹಪಾಲು. ಉಳಿದಂತೆ ಬರಹದಲ್ಲಿ ಸ್ವಾರಸ್ಯ ಅಷ್ಟಕಷ್ಟೆ.[೪೩] ಮತ್ತು ಶ್ರೀ ಕೃಷ್ಣನ ಮಾತು, ಸಂಗೀತಕ್ಕಿರುವ ಧಾರ್ಮಿಕ ನಂಟನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆ. ಸ್ವರ್ಗದ ಗಂಧರ್ವಲೋಕವನ್ನೇ ಭಾರತೀಯ ಕಲ್ಪನೆ ಸೃಷ್ಟಿಸಿದೆ. ಕೃಷ್ಣನಿಗೆ ಕೊಳಲು, ಸರಸ್ವತಿಗೆ ವೀಣೆ, ನಾರದನಿಗೆ ತಂಬೂರಿ, ದತ್ತಾತ್ರೇಯನಿಗೆ ಶಂಖ ಹೀಗೆ ಹಲವಾರು ರಾಗಗಳಿಗೆ ದೇವತೆಗಳ ಹೆಸರಿಟ್ಟಿರುವುದು ಧಾರ್ಮಿಕ ನಂಟನ್ನು ಬಲಗೊಳಿಸುತ್ತದೆ. ಭೈರವ, ಭೈರವಿ, ಶಂಕರಾ, ಶ್ರೀನಟನಾರಾಯಣ, ಸರಸ್ವತಿ, ಗೌರಿ, ದುರ್ಗಾ, ಪರಮೇಶ್ವರ[೪೪] ಮತ್ತು ವಿ.ಟಿ. ಕಾಳೆಯವರು ನಾಟ್ಯಕ್ಕೆ ಸಂಬಂಧಿಸಿದಂತೆ ಮತ್ತು ತಂಬೂರಿ ಸಹಿತ ಮೀರಾಬಾಯಿಯನ್ನು ಮೋಡಗಳ ಜೊತೆಯಲ್ಲಿ, ಜಿಂಕೆ ಹಂಸುಗಳೊಂದಿಗೆ ಸುಂದರವಾಗಿ ಸಂಯೋಜನೆಗೊಳಿಸಿದ್ದಾರೆ. ಈ ರಾಗಮಾಲಾ ಚಿತ್ರಗಳಲ್ಲಿ ಮೋಡಗಳು ಹೆಚ್ಚಿನ ಪ್ರಮಾಣದಲ್ಲಿ ಸಂಯೋಜಿತವಾಗಿರುತ್ತವೆ. ಮತ್ತು ಈ ರಾಗಮಾಲಾ ಚಿತ್ರಗಳ ಮುಖ್ಯ ಲಕ್ಷಣವಾಗಿ ಪ್ರಕೃತಿ, ಹೂ, ಬಳ್ಳಿ, ಹಕ್ಕಿ, ಪ್ರಾಣಿಗಳಿಂದ ಅಲಂಕರಣವಾಗಿರುತ್ತವೆ.

ಫಲಕ ಮಾಧ್ಯಮದ ಚಿತ್ರಗಳು

ಹಸ್ತಪ್ರತಿಗಳನ್ನು ಬರೆದು ಚಿತ್ರಿಸಿದ ಗರಿ/ಕಾಗದಗಳು ಹರಿದು, ತೋಯ್ದು ಕೆಡಬಾರದೆಂಬ ಉದ್ದೇಶದಿಂದ ಅವುಗಳ ಎರಡೂ ಬದಿಗೆ ಆವರಣದಂತೆ ಮರದ ಹಲಗೆಯಿಂದ ಕಟ್ಟುಗಳಿಗೆ

---

೪೩. ಡಾ. ಹೆಚ್. ಎನ್. ಚಿತ್ರಗಾರ್ : ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ – ಒಂದು ಅಧ್ಯಯನ (ಅ.ಪ್ರ.ಪಿಹೆಚ್.ಡಿ.ಮ.ಪ). ಪುಟ – ೧೯೮

೪೪. ಸುರೇಶ ಎಸ್. ಬಡಿಗೇರ : ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಗಳ ಚಿತ್ರಕಲೆ – ಒಂದು ಅಧ್ಯಯನ, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಪುಟ – ೨೦

[illegible]



ಜಾಮಿತಿಯ ಚಿತ್ರ



ತಾಂತ್ರಿಕ ರೇಖಾಚಿತ್ರ

ಅನುಗುಣವಾಗಿ ಕತ್ತರಿಸಿ ನಿರ್ಮಿಸಲಾದುದನ್ನು 'ಮರದ ಫಲಕ' ಎನ್ನುತ್ತಾರೆ. ಈ ಫಲಕಗಳನ್ನು ಕೆಲವು ಸಲ ದಪ್ಪರಟ್ಟಿನಿಂದಲೂ, ಹಗುರವಾದ ಕಟ್ಟಿಗೆ ಫಳಿಗಳಿಂದಲೂ ತಯಾರಿಸುತ್ತಾರೆ. ಇವು ಈಗಿನ ಪುಸ್ತಕಗಳ ಮುಖಪುಟ ಹಾಗೂ ಬೆನ್ನುಪುಟಗಳನ್ನು ನೆನಪಿಗೆ ತರುತ್ತವೆ. ಆದರೆ ಈಗಿನಂತೆ ಅವುಗಳು ಒಂದಕ್ಕೊಂದು ಬೆಸೆದುಕೊಂಡಿರುವುದಿಲ್ಲ.[೪೫] ಎರಡೂ ಪ್ರತ್ಯೇಕ ಫಲಕಗಳಾಗಿರುತ್ತವೆ. ಫಲಕಗಳು ಹಸ್ತಪ್ರತಿಗಳಿಗೆ ರಕ್ಷಣೆ ನೀಡುವ ಕೋಟೆಗೋಡೆಯಂತೆ ಕಾರ್ಯ ನಿರ್ವಹಿಸುತ್ತವೆ. ಹಸ್ತಪ್ರತಿಗಳಾದ ತಾಳೆಗರಿ, ಕಾಗದ, ಪಟಚಿತ್ರಗಳು, ಭೂರ್ಜಪತ್ರ, ಯಾವುದೇ ಇದ್ದರೂ ರಕ್ಷಣೆ ನೀಡುವಲ್ಲಿ ತುಂಬಾ ಪ್ರಧಾನ ಪಾತ್ರ ವಹಿಸುತ್ತವೆ. ಇಂತಹ ರಕ್ಷಣಾ ಫಲಕಗಳಲ್ಲಿ ಮರದ ಫಲಕಗಳನ್ನು ಲೋಹದ ಫಲಕ ಇಲ್ಲಿ ಕಾಣಬಹುದು.

ಈ ಫಲಕಗಳ ಮೇಲೆ ಚಿತ್ರಿಸಲಾದ ಚಿತ್ರಗಳಿಂದಲೇ ಹಸ್ತಪ್ರತಿಗಳು ಯಾವ ಯಾವ ಮತಕ್ಕೆ ಸೇರಿದವು, ಯಾವ ಯಾವ ವಿಷಯಕ್ಕೆ ಸೇರಿದವು ಎಂಬುದನ್ನು ಕಂಡುಕೊಳ್ಳಬಹುದು. ಶಿವ-ಶರಣರ ಚಿತ್ರಗಳು ವೀರಶೈವ ಹಸ್ತಪ್ರತಿಗಳ ಮೇಲೂ, ಜಿನ, ತೀರ್ಥಂಕರ, ಯಕ್ಷಾದಿಗಳ ಚಿತ್ರಗಳು ಜೈನ ಹಸ್ತಪ್ರತಿಗಳ ಮೇಲೂ ವಿಷ್ಣು, ಕೃಷ್ಣಲೀಲೆ, ಜನಪದ ಇಂತಹ ಫಲಕದಿಂದ ಯಾವ ವಿಷಯಕ್ಕೆ ಸಂಬಂಧಿಸಿದ್ದು ಎಂದು ತಿಳಿದುಕೊಳ್ಳಲು ಫಲಕಗಳು ಮತ್ತೊಂದು ರೀತಿಯಲ್ಲಿ ಸಹಾಯಕವಾಗಿವೆ. ಮರದ ಮಾಧ್ಯಮ ಫಲಕದಲ್ಲಿ ಜಾಲಿ, ಬೇವು, ಬೀಟೆ, ಗುಗ್ಗಳ, ತೇಗ, ಹೊನ್ನೆ, ಹುಣಸೆಗಳಂತಹ ಹಗುರವಾದ ಮತ್ತು ಬೇವಿನಂಥದನ್ನು ಫಲಕಗಳಿಗೆ ಹುಳದಿಂದ ರಕ್ಷಣೆಗಾಗಿ, ಜಾಲಿಯಿಂದ ಗಟ್ಟಿತನಕ್ಕಾಗಿ, ಹೀಗೆ ರಕ್ಷಣೆಗೆ ಹಲವು ಮಾರ್ಗವನ್ನು ಕಂಡುಕೊಂಡು ಉಪಯೋಗಿಸಿದ್ದು ಕಾಣಬಹುದು. ಅದೇ ರೀತಿಯಲ್ಲಿ ತಾಮ್ರ, ಕಬ್ಬಿಣದಂತಹ ಲೋಹಮಾಧ್ಯಮದ ಫಲಕಗಳನ್ನು ಚಿತ್ರಸಹಿತ ಬಳಸಲಾಗುತ್ತಿತ್ತು.

ತಾಂತ್ರಿಕ ಚಿತ್ರಗಳು

ತಂತ್ರ ಎನ್ನುವ ಪದಕ್ಕೆ ತಂತು, ನೂಲು, ನೇಯುವಿಕೆ, ವಗ್ಗ, ಪಂಧಾನ, ಹೊದಿಕೆ, ಧಾರ್ಮಿಕ ವಿಧಾನಗಳಲ್ಲಿ ಮುಖ್ಯಕಾರ್ಯ, ವಿಧಾನಗಳ ಯಥಾಸಾಂಗತೆ, ಉಪಾಯ, ಮುಕ್ತಿ, ಪದ್ಧತಿ, ಪರದೇಶ, ಇಂದ್ರಜಾಲ, ರಹಸ್ಯವಿದ್ಯಾ, ಔಷಧ, ಮದ್ದು, ಠಕ್ಕ, ವಂಚಕ, ಪ್ರತಿಜ್ಞೆ, ಶಾಪ, ವಿಧಾನ, ಕೂಟ, ಆಡಳಿತ, ಆಳುವಿಕೆ, ಸೇನಾಪಡೆ, ಕುಲಜಾತಿಭೇದ, ಸಿಂಗಾರ, ಹೀಗೆ ಶಬ್ದಾರ್ಥಗಳು ಶಬ್ದಕೋಶದಲ್ಲಿ ಕಂಡುಬರುತ್ತವೆ. ಸಾಮಾನ್ಯವಾಗಿ 'ತಂತ್ರ' ಎನ್ನುವ ಶಬ್ದವನ್ನು ಕೇಳಿದ ಕೂಡಲೇ ಅದು ಯಾವುದೋ ಒಂದು ನಿಗೂಢ ರಹಸ್ಯ ಆಚರಣೆ ಅಥವಾ ಪದ್ಧತಿಗೆ ಸಂಬಂಧಿಸಿದ್ದು ಎಂದು ಭಾವನೆ ಜನರಲ್ಲಿ ಮೂಡುತ್ತದೆ.[೪೬] ಮತ್ತು ಜ್ಞಾನಿಗಳು, ಧಾರ್ಮಿಕ, ವಿಚಾರವಂತರ ಪ್ರಕಾರ ಅಭೌತಿಕ ಅಥವಾ ಆಧ್ಯಾತ್ಮಿಕ ಮಹೋನ್ನತಿಯ ಒಂದು ನಡವಳಿಕೆಯೇ ಈ ತಂತ್ರ.

---

೪೫. ಪಿ. ಆರ್. ತಿಪ್ಪೇಸ್ವಾಮಿ (ಪ್ರಸಂ.) : ಕಲಾಕೋಶ, ಪುಟ - ೨೧೫

೪೬. ಡಾ. ಎಸ್. ಸಿ. ಪಾಟೀಲ, ಸತ್ಯಾನಂದ ಪಾತ್ರೋಟ (ಸಂ.) : ನಿಜದ ನೆಲೆ, ಪುಟ- ೩೭೭

[illegible]

[illegible]

ಸಕಲ ಜ್ಞಾನಗಳನ್ನು ಸ್ವೀಕರಿಸಿ, ಗ್ರಹಿಸಬಲ್ಲ ತತ್ವವೊಂದರ ಪ್ರತಿನಿಧಿ. ಮನೋನಿಗ್ರಹದೊಂದಿಗೆ ಇಡೀ ಶರೀರವನ್ನು ಹತೋಟಿಯಲ್ಲಿ ತಂದುಕೊಳ್ಳುವುದು ಎನ್ನುತ್ತಾರೆ.

ತಾಂತ್ರಿಕರು ತಂತ್ರದ ಪರಿಕಲ್ಪನೆಯ ಮೂಲವನ್ನು ವೇದಗಳಲ್ಲಿದೆ ಎನ್ನುತ್ತಾರೆ. ಅದೊಂದು ತತ್ವ, ಸಿದ್ಧಾಂತ, ಉಪನಿಷತ್ತುಗಳಲ್ಲಿನ ಏಕದೇವೋಪಾಸನೆಯ ಸಾರ ಅದರಲ್ಲಿದೆ ಎನ್ನುತ್ತಾರೆ. ಪುರಾಣಗಳಲ್ಲಿನ ಭಕ್ತಿಯ ಆಚರಣೆ, ಪತಂಜಲಿ ಸೂತ್ರದ ಯೋಗವಿಧಾನಗಳು, ಅಥರ್ವಣ ವೇದದಲ್ಲಿ ಪ್ರತಿಪಾದಿತವಾಗಿರುವ ಮಂತ್ರದ ಗುಣ, ಸತ್ವ ಇವೆಲ್ಲದರ ತಿರುಳೂ ಭಾರತದಲ್ಲಿ ಸಾವಿರಾರು ವರ್ಷಗಳಿಂದ ರೂಪಿತವಾಗಿರುವ ವಿವಿಧ ಸಿದ್ಧಾಂತ ವ್ಯವಸ್ಥೆಗಳ ಸತ್ಯವೂ ಅದರಲ್ಲಿದೆ ಎಂಬುದು ತಂತ್ರದ ಅನುಯಾಯಿಗಳ ನಂಬಿಕೆ.[೪೭] ಶಕ್ತಿ ಜಗತ್ತಿನ ವೇಧಾತ್ಮಕ ಚಲನಶಕ್ತಿಯಾಗಿ ಅಂತಿಮ ಸತ್ಯವಾಗುತ್ತಾಳೆ. ಕೆಲವು ಕಲಾವಿದರ ಆಲೋಚನೆಗಳು ಬೇರೆ ಬೇರೆ ಆದರೂ ಅವರ ಕಲಾಕೃತಿಗಳಲ್ಲಿ ತಂತ್ರದ ಶೈಲಿ ಕಂಡುಬರುತ್ತದೆ. ಕೆಲವರು ಉಪನಿಷತ್ ಚಿತ್ರಗಳನ್ನು ಮಂತ್ರ, ಜ್ಯೋತಿಷ್ಯಶಾಸ್ತ್ರ, ಸ್ತ್ರೀ-ಪುರುಷರ ಸಂಯೋಗಗಳನ್ನು ತಮ್ಮ ಚಿತ್ರಗಳಲ್ಲಿ ಅಭಿವ್ಯಕ್ತಿಸಿದ್ದಾರೆ.[೪೮] ಮತ್ತು ಅತ್ಯಂತ ಮುಖ್ಯ ಅಂಶವಾದ 'ಷಟ್‌ಚಕ್ರಮವೇದ' ಪ್ರಶ್ನೋಪನಿಷತ್ತಿನಲ್ಲೂ ಉಲ್ಲೇಖಗೊಂಡಿದೆ. ಈ ತಂತ್ರವಿದ್ಯೆ ತನ್ನದೇ ಆದ ಸಂಕೇತಗಳನ್ನು ಗುರುತಿಸಿಕೊಂಡಿದೆ.

ತಂತ್ರ ಸಾಧನೆಯಲ್ಲಿ ಬಳಸಲಾಗುವ ಇನ್ನೊಂದು ಅತ್ಯಂತ ಶಕ್ತಿಯುತ ಸಂಕೇತ ಅಥವಾ ಬಿಂಬವೆಂದರೆ ಕುಂಡಲಿನಿ, ಕುಂಡಲಿನಿಯನ್ನು ಮನುಷ್ಯನ ವ್ಯಕ್ತಿತ್ವದ ಸುಪ್ತಸ್ಥಿತತ್ವ ಎಂದು ಭಾವಿಸಲಾಗಿದೆ. ಅನೇಕ ಯೋಗ ಹಾಗೂ ತಾಂತ್ರಿಕ ವಿಧಿಯಾಚರಣೆಗಳಿಂದ ಮನುಷ್ಯಪ್ರಜ್ಞೆಯ ತಳದಲ್ಲಿರುವ ಈ ಸ್ಥಿತತ್ವವನ್ನು ಜಾಗೃತಗೊಳಿಸಿ ಊರ್ಧ್ವಮುಖವಾಗಿ ಏರುವಂತೆ ಮಾಡಲು ಸಾಧ್ಯ ಮನುಷ್ಯ ಶರೀರದ ತಳಭಾಗದಲ್ಲಿರುವ ಅದನ್ನು ಮೂಲಾಧಾರ ಚಕ್ರವೆನ್ನುತ್ತಾರೆ. ಮತ್ತು ಪೂಜ್ಯರಾದ ಶ್ರೀ. ಜ.ಚ.ನಿ ಅವರು ಈ ರೀತಿ ವಿವರಿಸುತ್ತಾರೆ :

ಉದ್ಧರಣಿ ಉಪಾಸನೆಯ ಒಂದು ತಂತ್ರಮನೋಭಾವಗಳನ್ನು ಕಾರ್ಯ ಕಾರಣಗಳನ್ನು ಕೇಂದ್ರೀಕರಿಸುವ ಸೂಚ್ಯಸೂತ್ರ. ಪ್ರವೃತ್ತಿಯ ವಾಸನೆಯನ್ನು ನಿಯಂತ್ರಿಸುವ, ವಿಕೃತಿಯಿಂದ ದೂರೀಕರಿಸುವ ಅಕುಟಿಲ ಯಂತ್ರ, ಮನಸ್ಸನ್ನು ಮನಸ್ಸಿಗೆ ಮಲೆಯನ್ನು ವಿಚಾರಕ್ಕೆ ಹಚ್ಚುವ ಅಕ್ಷರಮಂತ್ರವಾಗಿದೆ. ಇದು ವರ್ಣಮಯವೂ ಹೌದು. ಈ ಸಂಕೇತಗಳು ಕೆಲವು ಸಲ ಪರಿಕಲ್ಪನೆಯಲ್ಲಿ ಮೈತಳೆದಿರುವ ವಿವಿಧ ವಿಚಿತ್ರ ಪ್ರಾಣಿ ಪಕ್ಷಿ ಉರಗ ಮೀನುಗಳಂಥ ಆಕೃತಿಗಳಾಗಿರಬಹುದು ಅಥವಾ ರೇಖಾಗಣಿತದ ತ್ರಿಕೋನ ಚೌಕೋನ ಪಂಚಕೋನ ಬಹುಭುಜಾಕೃತಿಗಳೊಂದಿಗೆ ವರ್ತುಲಗಳನ್ನು ಬಳಸಿರುವ ಆಕೃತಿಗಳಾದರೂ ಆಗಿರಬಹುದು.[೪೯] ಹೂ, ಶ್ರೀಚಕ್ರ, ಸಂಕೇತಗಳನ್ನು ಮತ್ತು ಮೂಲ ಬಣ್ಣಗಳಾದ ಕೆಂಪು, ನೀಲಿ, ಹಳದಿ, ಹಸಿರು, ಕಪ್ಪು ಮತ್ತು ಬಿಳುಪುಗಳು ತಾಂತ್ರಿಕದ ನೆಲೆಯಲ್ಲಿಯೇ ಲೇಪನಗೊಂಡಿರುತ್ತವೆ. ಈ ಮೇಲಿನ ಸಂಕೇತ ಮತ್ತು ಬಣ್ಣಗಳಲ್ಲಿಯೇ

---

೪೭. ಡಾ. ಎಸ್. ಸಿ. ಪಾಟೀಲ, ಸತ್ಯಾನಂದ ಪಾತ್ರೋಟ (ಸಂ.) : ನಿಜದ ನೆಲೆ. ಪುಟ- ೩೭೭

೪೮. ಪಿ. ಆರ್. ತಿಪ್ಪೇಸ್ವಾಮಿ (ಪ್ರಸಂ.) : ಕಲಾಕೋಶ, ಪುಟ – ೧೭೨

೪೯. ಡಾ. ಹೆಚ್. ಎಸ್. ಚಿತ್ರಗಾರ್ : ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ – ಒಂದು ಅಧ್ಯಯನ (ಅ.ಪ್ರ.ಪಿಹೆಚ್.ಡಿ.ಮ.ಪ್ರ), ಪುಟ – [illegible]

[illegible]

ಮಾಟ, ಮಂತ್ರ, ಯಂತ್ರಗಳು ರೂಪಿತಗೊಳ್ಳುತ್ತವೆ. ಮಾಟ ಮಂತ್ರ, ಯಂತ್ರ, ತಾಂತ್ರಿಕ ವಿಧಿ-ವಿಧಾನಗಳು ಬೇರೆ ಬೇರೆಯಾಗಿವೆ. ಉದ್ದೇಶಗಳು ಕೂಡ ಬೇರೆ ಬೇರೆಯಾಗಿವೆ.

ಮಾಟ

ಮಾಟ ಎನ್ನುವ ಒಂದು ಪದಕ್ಕೆ ಪೀಡಾಕಾರರ ಮಂತ್ರ-ತಂತ್ರ, ವಂಚನೆ, ಮೋಸ, ಕಣ್ಣುಕಟ್ಟು, ರಚನೆ, ರೀತಿ ಎಂಬರ್ಥ ಶಬ್ದಾರ್ಥಕೋಶದಲ್ಲಿದೆ. ಮೋಡ, ಚೌಡಿ, ಕೈಚಳಕ ಎಂತಲೂ ಕರೆಯುತ್ತಾರೆ. ಬಂಗಾಲಿ ವಿದ್ಯೆ, ಕೇರಳ ಮಂತ್ರವಿದ್ಯೆ, ಮಾಯಾಳಿಕೆ ವಿದ್ಯೆ, ತಲಿಕಿಕ್ಕು ವಿದ್ಯೆ ಮೊದಲಾದ ಪದಪ್ರಯೋಗಗಳು ಮಾಟದ ಸಮಾನಾರ್ಥಕ ಪದಗಳಾಗಿ ಬಳಕೆಯಲ್ಲಿವೆ. ದೈವವನ್ನು ಪೂಜಿಸಿ ವರ ಪಡೆಯುವ ಕ್ರಮ ಒಂದಾದರೆ, ಒತ್ತಾಯವಾಗಿ ಒಲಿಸಿಕೊಳ್ಳುವ ಕ್ರಮ ಇನ್ನೊಂದು. ಇಲ್ಲಿ ದೈವ, ವಸ್ತು ಮತ್ತು ವ್ಯಕ್ತಿ ಮಧ್ಯೆ ಯಾವುದೇ ರೀತಿಯ ಮಧ್ಯವರ್ತಿ ಇರುವುದಿಲ್ಲ. ನೇರವಾಗಿ ಸಲಿಗೆಯಿಂದ ತನ್ನ ಇಚ್ಛೆಯನ್ನು ಈಡೇರಿಸಿಕೊಳ್ಳುವ ಕ್ರಮ ಕಾಣುತ್ತದೆ. ಮಾಟವು ಮನೋಸಾಮಾಜಿಕ ಅಸ್ವಸ್ಥತೆ, ಅಜ್ಞಾನ, ಅನಕ್ಷರತೆ, ಬಡತನಗಳಂತಹ ಸಂಗತಿಗಳ ಮೇಲೆ ಅವಲಂಬಿತವಾಗಿದ್ದು ಮಾಟದ ಪ್ರಯೋಗದಲ್ಲಿ ಪ್ರಾಣಿ, ಮನುಷ್ಯ[೫೦]ರನ್ನು ಮುಖ್ಯವಾಗಿ ಉಪಯೋಗಿಸಿಕೊಳ್ಳುವುದುಂಟು. ಈ ಮಾಟದಲ್ಲಿ ಸಾದೃಶ್ಯ ಮತ್ತು ಸಂಪರ್ಕ ಮಾಟ ಎರಡು ವಿಧಗಳಿವೆ ಎಂದು ಅಭಿಪ್ರಾಯವಿದೆ.

ಮಂತ್ರ

ಮಾಟ, ಮಾಯಾದಿ, ಯಂತ್ರ, ತಂತ್ರಗಳು ಕೆಲವೇ ಜನಗಳಿಗೆ ಪರಿಚಿತವಾದರೆ ಬೀಜಾಕ್ಷರ ಮಂತ್ರ, ಗಾಯತ್ರಿಮಂತ್ರ, ಮುಂತಾದ ಮಂತ್ರ ಪ್ರತಿಪೂಜ್ಯ ಕ್ರಮದಲ್ಲಿ ಬರುವುದರಿಂದ ಜನಪ್ರಿಯವಾದಂತಹದು. ಅದರಲ್ಲೂ ಗಾಯತ್ರಿ ಮಂತ್ರ ತುಂಬ ಮೌಲ್ಯಯುತ ಮಂತ್ರವೂ ಆಗಿದೆ. ಈ ಮಂತ್ರವನ್ನು ಮೊಬೈಲ್ ಫೋನ್‌ಗಳಲ್ಲಿ ರಿಂಗ್‌ಟೋನ್ ಆಗಿ ಸಹ ಹಾಕಿಸಿಕೊಳ್ಳುತ್ತಾರೆ. ಉದ್ಧರಣೆಯಲ್ಲಿ ಬೀಜಾಕ್ಷರ ಮಂತ್ರವೂ ಕೂಡ ಅಷ್ಟೇ ಮೌಲ್ಯಯುತವಾಗಿದೆ. ಇದರ 'ಓಂಕಾರ' ಒಂದೇ ಜಪಿಸುವುದರಿಂದ ನಾಲಿಗೆ, ಕರ್ಣ, ಮೆದುಳಿಗೆ ಕಂಪನ ಆಗುವುದರೊಂದಿಗೆ ಇಡೀ ದೇಹ ಹೊಸ ಚೈತನ್ಯವನ್ನು ಪಡೆದುಕೊಳ್ಳುತ್ತದೆ. ಮಂತ್ರವನ್ನು ಒಂದು ಧ್ವನಿ, ಒಂದು ಉಚ್ಚಾರ, ವರ್ಣಗಳ ಅಕ್ಷರಗಳ ಕ್ರಮಬದ್ಧ ಉಚ್ಚರಣೆಯೆಂದು ಹೇಳಬಹುದು.

ಮಂತ್ರದಲ್ಲಿ ದೇವರನ್ನು ಕುರಿತು ಉಚ್ಚರಣೆಯಾಗಿರುವುದರಿಂದ ಕರುಣೆ ಉದ್ದೀಪನಗೊಳ್ಳುವಂತೆ, ಶಾಂತ ಮಾಡುವ ಶಕ್ತಿ ಮಂತ್ರಕ್ಕಿದೆ. ದೇವರ ಕೃಪೆ, ಆಶೀರ್ವಾದಕ್ಕಾಗಿ ದೇವರನ್ನು ಪ್ರೇರೇಪಿಸುತ್ತದೆ. ಈ ಮಂತ್ರಗಳಲ್ಲಿ ಸುಲಭವು ಉಂಟು ಮತ್ತು ಕಠಿಣವೂ ಉಂಟು. ತಮ್ಮ ಇಷ್ಟ ದೇವರ ನಾಮವನ್ನು ಕೂಡ ಮಂತ್ರಗಳಲ್ಲಿ ಸೇರಿಸುವುದು ಉಂಟು.

---

೫೦. ಸುರೇಶ ಎಸ್. ಬಡಿಗೇರ : ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಗಳ ಚಿತ್ರಕಲೆ – ಒಂದು ಅಧ್ಯಯನ, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಪುಟ – ೫೫

ಯಂತ್ರ

ಮಂತ್ರದಲ್ಲಿ ಧ್ವನಿಗೆ ಪ್ರಾಧಾನ್ಯ ಇದ್ದರೆ ಯಂತ್ರದಲ್ಲಿ ಧ್ವನಿಸಾಧನೆಯ ಜೊತೆಯಲ್ಲಿ ಭೌತಿಕ ವಸ್ತುಗಳ ಪ್ರಯೋಗವು ಇರುತ್ತದೆ. ಯಂತ್ರದಲ್ಲಿ ಈ ಎರಡರ ಸಮತೋಲನವಿದೆ. ಇದರ ಚಿತ್ರಕಲೆಯ ರಚನೆ ರೇಖೆಗಳನ್ನು ಆಧರಿಸಿದೆ. ನೋಡಲು ಯಂತ್ರಗಳು ಅಡ್ಡ – ಉದ್ದ, ವಕ್ರರೇಖೆ, ಮನೆಯಾಕಾರ, ಚೌಕ, ಬಿಂದು, ತ್ರಿಕೋನ ಯಾವುದಾದರೊಂದು ದೈವಶಕ್ತಿಗಳ ಸಂಕೇತವಾಗಿ ವಿಧಿವತ್ತಾಗಿ ಪೂಜಿಸುವುದರಿಂದ ದೇವರಿಂದ ಬಯಸಿದ್ದು ಪ್ರಾಪ್ತವಾಗುವುದು ಎಂಬ ನಂಬಿಕೆ ಇದೆ. ಈ ಯಂತ್ರಗಳು ಮನುಷ್ಯನ ನಂಬಿಕೆ ಹಾಗೂ ಪೂಜ್ಯತೆಯ ಮೇಲೆ ಅವಲಂಬಿತವಾಗಿವೆ. ಈ ಕಾರಣಕ್ಕಾಗಿಯೇ ಪ್ರತಿಯೊಂದು ಸಮಸ್ಯೆಗಳಿಗೂ ಒಂದೊಂದು ಯಂತ್ರವಿದೆ. ಉದಾಹರಣೆಗೆ ಕಷ್ಟದಿಂದ ನರಳುತ್ತಿದ್ದರೆ, ದೃಷ್ಟಿ ತಾಕಿದ್ದರೆ, ಗರ್ಭದೋಷವಿದ್ದರೆ, ವಶೀಕರಣಕ್ಕೆ, ಭೂತ ಉಚ್ಚಾಟನೆ ಮುಂತಾದ ಎಲ್ಲಕ್ಕೂ ಯಂತ್ರಗಳಿವೆ.

ಒಟ್ಟಾರೆ ಚಿತ್ರ ಸಹಿತ ಯಂತ್ರ ಇರುವುದು, ಚಿತ್ರರಹಿತ ತಂತ್ರದ ಕೊರತೆ ಇದೆ ಎನ್ನಬಹುದು. ಈ ತಂತ್ರಗಳಿಂದ ಇಂಥದ್ದೇ ಚಿತ್ರ, ಈ ವಿಷಯಕ್ಕೆ ಅಂದರೆ ರೋಗದಿಂದ ಮುಕ್ತಿಗೆ ಈ ಚಿತ್ರ, ವಶೀಕರಣಕ್ಕೆ, ಭೂತದಿಂದ ಮುಕ್ತಿಗೆ ಇದೇ ಚಿತ್ರಗಳೆಂದು ಹೇಗೆ ನಿರ್ಧರಿಸಿದರು ಎನ್ನುವ ಪ್ರಶ್ನೆಗಳಿಗೆ ವಿದ್ವಾಂಸರು ಕೆಲವು ಸಂಕೇತಗಳಿಗೆ ಕೆಲವು ಅರ್ಥಗಳನ್ನು ನೀಡಿದ್ದಾರೆ.

ಕಮಲ ಅರಳಿದರೆ ಜ್ಞಾನೋದಯವಾದಂತೆ, ಹಾವು ತನ್ನ ಸುರುಳಿಯನ್ನು ಬಿಚ್ಚಿಕೊಂಡಿದ್ದರೆ ಕುಂಡಲಿನಿ ಜಾಗೃತವಾದಂತೆ, ತ್ರಿಕೋನ ಪುರುಷಶಕ್ತಿಯನ್ನು ಪ್ರತಿಪಾದಿಸುವಂತೆ, ಪಾದ ಮೇಲೆ ಮತ್ತು ತಲೆ ಕೆಳಗಿದ್ದ ತ್ರಿಕೋನ ಸ್ತ್ರೀಶಕ್ತಿಯನ್ನು ಪ್ರತಿಬಿಂಬಿಸುವಂತೆ ಮತ್ತು ಪುರುಷ ತ್ರಿಕೋನ, ಸ್ತ್ರೀ ತ್ರಿಕೋನ ಪರಸ್ಪರ ಕೂಡಿಕೊಂಡರೆ, ಹೆಣ್ಣು ಮತ್ತು ಗಂಡಿನ ಶಕ್ತಿಗಳು ಒಂದಾದಂತೆ ಎಂದು ತಂತ್ರಶಾಸ್ತ್ರ ಅರ್ಥ ನೀಡುತ್ತದೆ.[೫೧] ಕುಂಡಲಿನಿ ಶಕ್ತಿಯಲ್ಲಿ ಪ್ರಮುಖವಾಗಿ ಹಾವು ಕಾಣಿಸಿಕೊಳ್ಳುತ್ತದೆ. ಕುಂಡಲಿನಿ ಶಕ್ತಿಯನ್ನು ಜಾಗೃತಗೊಳಿಸುವಲ್ಲಿ ಸಾಂಕೇತಿಕವಾಗಿ ಹಾವನ್ನು ಬಳಸಿಕೊಳ್ಳುತ್ತಾರೆ. ಮಾನವನ ದೇಹದಲ್ಲಿ ಆರು ಚಕ್ರಗಳಿರುತ್ತವೆ. ಈ ಚಕ್ರದ ಸಂಕೇತವಾಗಿ ವೃತ್ತ ಅಥವಾ ಪುಷ್ಪ ಅಲಂಕಾರಕವಾಗಿರುತ್ತದೆ. ಈ ಚಿತ್ರಕ್ಕೆ ಸಂಬಂಧಿಸಿದಂತೆ ಶ್ರೀ ಅರವಿಂದರು, ಈ ಕುಂಡಲಿನಿ ಶಕ್ತಿಯ ತಾಂತ್ರಿಕ ಪದ್ಧತಿಯ ಶ್ರೇಷ್ಠತೆಯನ್ನು ಕುರಿತು ಹೀಗೆ ಹೇಳುತ್ತಾರೆ:

The tranfric system is it aspiration one of the greatest attempts yet made to embrace the whole of god manifested and unmanifested to the adoration self descipline and knowledge of a single sow ಎಂದು[೫೨] ಈ ಹಸ್ತಪ್ರತಿಗಳಲ್ಲಿ ಕೆಂಪು ವರ್ಣವೇ ಹೆಚ್ಚು ಲೇಪನವಾಗಿದೆ. ಈ ಹಸ್ತಪ್ರತಿಯಲ್ಲಿ ಭಾರತೀಯ ಚಿತ್ರಕಲೆಯ

---

೫೧. ಚಂದ್ರಕಾಂತ ಕುಸನೂರ : ಸಾಹಿತ್ಯ ಮತ್ತು ಚಿತ್ರಕಲೆ, ಪುಟ – ೧೮೩

೫೨. ಚಂದ್ರಕಾಂತ ಕುಸನೂರ : ಸಾಹಿತ್ಯ ಮತ್ತು ಚಿತ್ರಕಲೆ. ಪುಟ – ೧೮೪

ಮೂಲ ಅಡಗಿದೆ ಎನ್ನಬಹುದು. ಇಲ್ಲಿ ಒಟ್ಟಾರೆ ಹಸ್ತಪ್ರತಿಯಲ್ಲಿ ತಾಂತ್ರಿಕತೆಯ ಉದ್ದೇಶವಿದ್ದರೂ ಕಲಾವಿದನು ಚಿತ್ರಗಳಲ್ಲಿ ಸೌಂದರ್ಯಪ್ರಜ್ಞೆಯಲ್ಲಿ ತನ್ನ ಪ್ರತಿಭೆಯನ್ನು ತೋರ್ಪಡಿಸಿದ್ದಾನೆ. ಇಲ್ಲಿನ ಕುಸುರಿಕೆಲಸವನ್ನು ಅಷ್ಟೇ ಸಣ್ಣ ಹಸ್ತಪ್ರತಿಯಲ್ಲಿ ಚಿತ್ರಿಸಿ, ತನ್ನಲ್ಲಿಯ ಕಲಾವಿದನಿಗೆ ವ್ಯವಧಾನದ ಮೌಲ್ಯ ಎಷ್ಟಿರುತ್ತದೆ, ಈ ವ್ಯವಧಾನ ಇರುವವನು, ಏನೆಲ್ಲಾ ಸಾಧಕರಾಗುತ್ತಾನೆ ಎನ್ನುವುದನ್ನು ಈ ಚಿತ್ರಕಲೆಯು ಬಿಂಬಿಸುತ್ತದೆ.

ಇಂತಹ ತಾಂತ್ರಿಕ ಚಿತ್ರಕಲೆಗೆ ಈಗಿನ ಆಧುನಿಕ ಕಲಾವಿದರು ಆಕರ್ಷಿತರಾಗಿದ್ದಾರೆ. ಅವರಲ್ಲಿ ಮುಖ್ಯವಾಗಿ ಶ್ರೀ ಬಾಲನ್ ನಂಬಿಯಾರ್, ಜಿ. ಸುಲ್ತಾನ್ ಅಲಿ, ಬೀರೇನಡೆ, ಪ್ರಫುಲ್ ಮೋಹಂತಿ, ಆವ್ರತ ಪಟೇಲ್, ಪಣಿಕ್ಕರ್, ಪಿ.ಟಿ. ರೆಡ್ಡಿ, ಸಂತೋಷ ಖಾದರಿ, ಸೈಯದ್ ಹೈದರ ರಜಾ, ರಜಾ ಅವರಲ್ಲಿ ಒಂದುಕಡೆಗೆ ಇಸ್ಲಾಂಧರ್ಮದ ಪ್ರಭಾವವಿದ್ದರೆ, ಇನ್ನೊಂದು ಕಡೆ ಹಿಂದೂ ತತ್ವಜ್ಞಾನದ ಪ್ರಭಾವವಿದೆ. ರಜಾ ತಂತ್ರಕಲೆಯಲ್ಲಿನ 'ಬೀಜ'ವನ್ನು ಹುಡುಕುವ ಪ್ರಯತ್ನ ಮಾಡುತ್ತಾರೆ.[೫೩] ಈ ಒಂದು ತಾಂತ್ರಿಕ ಚಿತ್ರಕಲೆಯ ವಸ್ತುವಿಷಯ ಏನೇ ಇರಲಿ, ಇಲ್ಲದಿರಲಿ ಅಥವಾ ಅರ್ಥ ಇರಲಿ, ಇಲ್ಲದಿರಲಿ, ಅವರ ಪ್ರಯೋಗಗಳಲ್ಲಿ ತಾಂತ್ರಿಕತೆಯಿಂದ ಕೂಡಿದ ಚಿತ್ರಗಳನ್ನು ಕಾಣಬಹುದು. ಅರ್ಥ ತಿಳಿಯದಿದ್ದರೂ ಇವುಗಳನ್ನು ಸೌಂದರ್ಯದ ನೆಲೆಯಲ್ಲಿಯಾದರೂ ಕಂಡು ಖುಷಿಪಡಬಹುದಾಗಿದೆ.

ಜಾಮಿತಿ ಚಿತ್ರಗಳು

ಜಾಮಿತಿಯ ಎಲ್ಲಾ ಆಕಾರಗಳು ಹಸ್ತಪ್ರತಿಗಳಲ್ಲಿ ತುಂಬಾ ವ್ಯವಸ್ಥಿತವಾಗಿ ಬಳಕೆಯಾಗಿವೆ ಎನ್ನಬಹುದು. ಈ ಜಾಮಿತಿ ಆಕೃತಿಗಳಾದ ಚೌಕೋನ, ತ್ರಿಕೋನಾಕೃತಿ, ಅಖಂಡ ವರ್ತುಲಗಳು, ವರ್ತುಲ ಅಂತರ್ಗತ ವರ್ತುಲಗಳು, ಒಳಗಡೆಗೆ ಚಿಕ್ಕವಾಗುತ್ತ ಸಾಗಿದ ವರ್ತುಲಗಳು, ಅರ್ಧ ವರ್ತುಲ, ಮುಕ್ಕಾಲು, ಕಾಲುಭಾಗದ ವರ್ತುಲಗಳು, ವರ್ತುಲಗಳು ಒಂದಕ್ಕೊಂದು ವಿಶಿಷ್ಟವಾಗಿ ಸಂಧಿಸುವಲ್ಲಿ, ಛೇದಿಸುವಲ್ಲಿ ನಿರ್ಮಾಣಗೊಳ್ಳುವ ನಕ್ಷೆಗಳ ಸೊಬಗು ಅನುಪಮ, ಅವುಗಳಲ್ಲಿಯೇ ಮತ್ತು ನನೆ, ಕೊನೆ, ಮುಗುಳು, ಮೊಗ್ಗು, ಎಸಳು, ದಳ, ತೆನೆ, ಗೊನೆ, ಗೊಂಚಲು,[೫೪] ಪಟ್ಟಿಕೆ, ಪಟ್ಟಿಕೆಯ ಏರಿಕೆ ಕ್ರಮ, ಮತ್ತು ಇಳಿಕೆ ಕ್ರಮ, ಬಹುಭುಜಾಕೃತಿ, ತ್ರಿಭುಜ, ತ್ರಿಭುಜಾಕೃತಿಗಳಿಂದ ನಿರ್ಮಿತ ಷಟ್‌ತ್ರಿಭುಜ ನಕ್ಷತ್ರ, ನಕ್ಷತ್ರದಿಂದ ನಿರ್ಮಿತ ಷಟ್‌ಭುಜಾಕೃತಿ (ಜ್ಞಾನ ಚಕ್ರೋದ್ಧರಣೆ) ಮುಂತಾದ ಈ ಎಲ್ಲಾ ಆಕಾರಗಳು ಈ ಹಸ್ತಪ್ರತಿಯಲ್ಲಿ ಒಳಗೊಂಡಿವೆ. ಹಸ್ತಪ್ರತಿಗಳಲ್ಲಿ ಈ ಆಕೃತಿಗಳ ರಚನೆಯಲ್ಲಿ ಕಲಾವಿದನು ತನ್ನ ನಿಪುಣತೆಯನ್ನು ಮೆರೆದಿದ್ದಾನೆ.

ಇಂತಹ ಜಾಮಿತಿ ಆಕೃತಿಗಳನ್ನು ಗರಿ, ಕಾಗದ, ಫಲಕ ಮಧ್ಯದ ಮಧ್ಯೆಯೂ ಕಾಣಬಹುದು. ಜೊತೆಗೆ ಅಲ್ಲಲ್ಲಿ ಲಿಪಿ ಮುಗಿದ ಮೇಲೆ ಖಾಲಿ ಉಳಿದ ಪುಟಗಳಿಗೆ ಈ ಜಾಮಿತಿ ಚಿತ್ರಗಳನ್ನು

೫೩. ಚಂದ್ರಕಾಂತ ಕುಸನೂರ : ಸಾಹಿತ್ಯ ಮತ್ತು ಚಿತ್ರಕಲೆ, ಪುಟ – ೧೮೪

೫೪. ಡಾ. ಬಿ. ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು – ಒಂದು ಅಧ್ಯಯನ, ಪುಟ – ೧೭೨

ಬಿಡಿಸಿರುವುದನ್ನು ಸಹ ನಾವು ನೋಡಬಹುದು. ಈ ಜಾಮಿತಿ ಚಿತ್ರಗಳು ತುಂಬಾ ಸೂಕ್ಷ್ಮವಾದ ತ್ರಿಜ್ಯಗಳನ್ನು ಬಳಸದೆ ಅವನ ಕಂಠದಿಂದ ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ ಸೂಕ್ಷ್ಮವಾಗಿದ್ದು, ಈ ಚಿತ್ರಗಳ ರಚನೆಯನ್ನು ಕಾಣುತ್ತೇವೆ. ಮುಂದೆ ಇದೇ ಜಾಮಿತಿ ಸ್ವರೂಪವನ್ನು ಬಳಸಿಕೊಂಡು ಬಸವಣ್ಣ ತ್ರಿಶೂಲ, ರೇಖಾಚಿತ್ರಗಳನ್ನು, ಯಾವುದಾದರೂ ದೇವರ ಚಿತ್ರಗಳನ್ನು ಬಿಡಿಸಿ ಅದಕ್ಕೆ ಒಂದು ಕಥನಕ್ರಮ ಕೊಟ್ಟಿರುವುದನ್ನು[೫೫] ಕೂಡ ನಾವು ಕಾಣುತ್ತೇವೆ.

ಈ ಜಾಮಿತಿ ಚಿತ್ರಗಳಲ್ಲಿ ವೀರಶೈವ ತತ್ವಕ್ಕೆ ಸಂಬಂಧಿಸಿದ ಚಿತ್ರಗಳನ್ನು ಇಲ್ಲಿ ಕಾಣಬಹುದು. ಕೆಲವು ಉದ್ಧರಣೆ, ಶೂನ್ಯ ಲಿಂಗೋದ್ಧರಣೆ, ಮಹಾಲಿಂಗೋದ್ಧರಣೆ, ಚಿತ್ರಪಟಗಳಲ್ಲಿ ಯಾವುದೇ ಪಟ್ಟಿಗಳನ್ನು ಬಳಸದೇ, ಉದ್ದ ಅಡ್ಡ ರೇಖೆಗಳನ್ನು ಎಳೆಯಲಾಗಿದೆ. ಅದೇ ರೀತಿಯಲ್ಲಿ ವೃತ್ತ, ಪುಷ್ಪ, ಸೂರ್ಯ, ಚಂದ್ರಾಕೃತಿಗಳನ್ನು ಕೂಡ ಚಿತ್ರಿಸಲಾಗಿದೆ. ಇಲ್ಲಿ ಪೆನ್ನು, ಪೆನ್ಸಿಲ್‌ನಂತಹ ಲೇಖನಿಯನ್ನು ಬಳಸಲಾಗಿದೆ. ಒಟ್ಟಾರೆ ಈ ಚಿತ್ರಗಳ ಮೂಲಕ ಲಿಪಿಕಾರನ ಕೌಶಲ್ಯ ಹಾಗೂ ಅವನ ಮನೋಧರ್ಮದ ಒತ್ತಾಸೆಯನ್ನು ಈ ಹಸ್ತಪ್ರತಿಗಳಲ್ಲಿ ಒಡಮೂಡಿಸಿದ್ದಾನೆ.

ರೇಖಾಚಿತ್ರಗಳು

ರೇಖೆಯು ಅನೇಕ ಬಿಂದುಗಳಿಂದ ಕೂಡಿದ್ದಾಗಿರುತ್ತದೆ. ರೇಖೆಗಳಲ್ಲಿ ಹಲವು ವಿಧಗಳು; ಸರಳರೇಖೆ, ವಕ್ರರೇಖೆ, ಲಂಬರೇಖೆ, ಓರೆಯಾದ ರೇಖೆ, ಸಮಾಂತರರೇಖೆ, ಲಯಬದ್ಧ ರೇಖೆ, ನವಿರಾದ ರೇಖೆ, ವೀರ್ಯವತ್ತಾದ ರೇಖೆ ಮುಂತಾದವು. ಸೀಸಕಡ್ಡಿ, ಬಣ್ಣ, ಇದ್ದಿಲುಗಳಿಂದ ಕರಡು ಚಿತ್ರವನ್ನು ಚಿತ್ರಿಸುವಂಥವಾಗಿವೆ. ಹಸ್ತಪ್ರತಿಗಳಲ್ಲಿ ರೇಖಾಚಿತ್ರಗಳು ಹಲವು ಬಗೆ. ದೃಶ್ಯಕಲೆಗಳಲ್ಲಿ ರೇಖಾಚಿತ್ರಕಲೆಯೇ ಅತ್ಯಂತ ಪ್ರಾಚೀನವೆಂದು ಊಹಿಸಲು ಆಧಾರಗಳಿವೆ. ವರ್ಣಚಿತ್ರಗಳಿಗಿಂತಲೂ, ಶಿಲ್ಪಗಳಿಗಿಂತಲೂ ಮೊದಲು ಕಾಣಿಸಿಕೊಂಡವು. ಅನೇಕ ಕಲಾವಿದರು ರೇಖಾಕೌಶಲ್ಯವನ್ನು ತಮ್ಮ ರಚನೆಗಳಲ್ಲಿ ಕೂಡಿಸಿ ರಚಿಸುತ್ತಾರೆ. ಹಸ್ತಪ್ರತಿಗಳಲ್ಲಿ ರೇಖಾಚಿತ್ರ ಮತ್ತು ವಿನ್ಯಾಸದಿಂದೊಡಗೂಡಿದ ರೇಖೆಗಳನ್ನು ಸಹ ಇಲ್ಲಿ ನೋಡಬಹುದು.

ಈ ಹಸ್ತಪ್ರತಿಗಳಲ್ಲಿ ಕೆಲವು ಪರಂಪರಾಗತವಾಗಿ ಬಂದಂತಹ ಸಾಮಾನ್ಯ ರೇಖಾವಿನ್ಯಾಸಗಳನ್ನು ಸಹ ನೋಡಬಹುದು. ಹಸ್ತಪ್ರತಿಗಳಲ್ಲಿ ವರ್ಣಚಿತ್ರಕ್ಕಿಂತಲೂ ರೇಖಾ ಪ್ರಧಾನವಾದ ಚಿತ್ರಗಳೇ ಹೆಚ್ಚು. ವರ್ಣಲೇಪನವಿದ್ದರೂ ಈ ವರ್ಣಕ್ಕೆ ಹರಡಿ ಸ್ಪಷ್ಟತೆಗೆ ರೇಖೆಗಳು ಪ್ರಧಾನ ಪಾತ್ರ ವಹಿಸುತ್ತವೆ. ವರ್ಣಲೇಪನದ ಮುನ್ನ ಕರಡು ಅಥವಾ Naked figures (key sketch)ನ್ನು ಹಾಕಿ ಕೊಳ್ಳುವಂಥದ್ದು ಮಸಿ ಅಥವಾ ತೆಳುಗೆಂಪು ವರ್ಣ ಅಥವಾ ಎಲೆಗಳ ಹಳದಿ ರಸದಿಂದ ರೇಖೆಗಳನ್ನು ಹಾಕಿಕೊಳ್ಳಲಾಗಿದೆ. ಇದು ವರ್ಣಚಿತ್ರ ರಚನಾಕ್ರಮದ ನಾಂದಿ ಎಂದು ಶರಣರ ಅಭಿಪ್ರಾಯವಾಗಿದೆ. ಆದರೆ ಇದು ವರ್ಣರಂಜಿತವಾಗಿ ಚಿತ್ರಿಸಿದ ಚಿತ್ರವನ್ನು ನಿರ್ದೇಶಿಸುತ್ತದೆಯೇ

೫೫. ಸುರೇಶ ಎಸ್. ಬಡಿಗೇರ : ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಗಳ ಚಿತ್ರಕಲೆ – ಒಂದು ಅಧ್ಯಯನ, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಪುಟ – ೫೫

ಹೊರತು ಚಿತ್ರದ ಹೊರಗೆರೆ ಅಥವಾ ರೇಖೆಗಳ ಚಿತ್ರಣವಲ್ಲ. "ಪಡುವರ್ಣದ ಟಿಪ್ಪಣದಂತ" (ಮೋಳಿಗಯ್ಯಗಳ ವಚನ – ೧೩೪) ಟಿಪ್ಪಣವ ಬರೆದ ಬಿತ್ರಜ್ಞನು ಆ ಘಟ್ಟಕ್ಕೆ ಅಸುವ ಆಶ್ರಯಿಸಬಲ್ಲನೆ? ಎಂಬಲ್ಲಿ ಈ ಸಂಗತಿ ಸ್ಪಷ್ಟವಾಗುತ್ತದೆ.[೫೬] ಈ ರೇಖಾಚಿತ್ರಗಳಲ್ಲಿ ಆಯಾಮಗಳಿಗೆ (ನೆರಳ–ಬೆಳಕು, ಆಳ) ಅವಕಾಶವಿರುವುದಿಲ್ಲ. ಚಪ್ಪಟೆ(flat)ಯಾಗಿ ಇರುತ್ತದೆ. ಕಾಲ ಕಾಲಕ್ಕೆ ಮೊದಲು ಮಧ್ಯಯುಗದಲ್ಲಿ ವಿಶೇಷವಾಗಿ ಕಾಣಿಸಿಕೊಂಡ ಇನ್ನೊಂದು ಮುಖ್ಯ ಕಲಾಪ್ರಕಾರವೆಂದರೆ ಸಾಂದರ್ಭಿಕ ಚಿತ್ರಗಳು. ಇವು ಪದ್ಯ, ಕಥೆ, ನಾಟಕಗಳೊಂದಿಗೆ ಪೂರಕವಾಗಿ ರಚಿಸಲ್ಪಟ್ಟಿವೆ. ಅಲಂಕಾರ ಹಂತದ ರೇಖೆಯಲ್ಲಿ ಹೂ, ಬಳ್ಳಿ, ವಿನ್ಯಾಸ ಒಂದು ಬಗೆಯಾದರೆ ಹಸ್ತಪ್ರತಿಯಲ್ಲಿಯೇ ನೋಡಬಹುದಾದಂಥ, ಅಲಂಕಾರದ ಚಿಕ್ಕ –ಪುಟ್ಟ ರೇಖಾವಿನ್ಯಾಸಗಳನ್ನು ಕಾಣಬಹುದು.

ಇಂತಹ ವಿನ್ಯಾಸವನ್ನು ಲಿಪಿ ಬರೆಯುವ ಪ್ರಥಮದಲ್ಲಿ, ಮಧ್ಯದಲ್ಲಿ ಮತ್ತು ಅಂತ್ಯದಲ್ಲಿಯೂ ಕಾಣಬಹುದು. ಇಂತಹ ವಿನ್ಯಾಸಗಳು ಪುಷ್ಪ ಆವರಣದಂತೆ ಕಾರ್ಯ ನಿರ್ವಹಿಸುತ್ತವೆ. ಇನ್ನು ಶ್ರೀಕಾರದಂತೆಯು ಆರಂಭದ ಪ್ರಥಮತೆಯಲ್ಲಿಯೂ ಕಾರ್ಯ ನಿರ್ವಹಿಸುತ್ತವೆ. ಚಿಕ್ಕ ಚಿಕ್ಕ ರಂಗೋಲಿ ಅನೇಕ ತರದಲ್ಲಿಯೂ ಕಂಗೊಳಿಸುತ್ತವೆ. ಇವುಗಳ ಮುಖ್ಯ ಲಕ್ಷಣ ಚಿಕ್ಕ ಚಿಕ್ಕ ವೃತ್ತ, ಸಣ್ಣ ರೇಖೆ, ವಕ್ರರೇಖೆ, ಸುರಳಿ ಮುಂತಾದವು. ಅಲಂಕಾರಿಕ ನಕ್ಷೆಗಳಲ್ಲಿ ಎರಡು ವಿಧ. ಹಸ್ತಪ್ರತಿಯ ಮಧ್ಯ, ಆದರೂ ಫಲಕದ ಅಂಚಿನಲ್ಲೂ ನಕ್ಷೆಗಳು ಅಲಂಕಾರಗೊಂಡಿರುತ್ತವೆ. ಉದ್ಧರಣೆ ಚಿತ್ರಪಟಲದ ಅಂಚಿನ ಸುತ್ತಲೂ ನಕ್ಷೆಗಳ ವಿನ್ಯಾಸಗಳು ಸ್ಪಷ್ಟವಾಗಿವೆ. ಕಥೆಗೆ ಸಂಬಂಧಿಸಿದ ಹಸ್ತಪ್ರತಿಗಳ ಅಂಚಿನಲ್ಲಿ ನಕ್ಷೆಗಳ ವಿನ್ಯಾಸಗಳು ಸ್ಪಷ್ಟವಾಗಿವೆ. ಕಥೆಗೆ ಸಂಬಂಧಿಸಿದ ಹಸ್ತಪ್ರತಿಗಳಲ್ಲಿ ಅಂಚಿನಲ್ಲಿಯೂ ನಕ್ಷಾವಿನ್ಯಾಸ ಕಾಣಬಹುದು. ಹಸ್ತಪ್ರತಿ ಮಧ್ಯದಲ್ಲಿ ಅಲಂಕಾರಿಕ ವಿನ್ಯಾಸವಿದ್ದರೂ ಅದಕ್ಕೆ ಒಂದು ಆವರಣದಂತೆ ಸುತ್ತಲೂ ಅಲಂಕಾರಗೊಂಡಿದೆ. ಅಂತಹ ಅಲಂಕಾರಿಕ ನಕ್ಷೆಯ ವಿವಿಧ ರೂಪಗಳು ಪತ್ರ, ಎಲೆಯ ಆಕಾರದ ನಕ್ಷೆ, ಲತಾ(creeper), ಬಳ್ಳಿಯ ನಕ್ಷೆ, ಚಿಗುರು, ರೆಂಬೆಗಳು, ತ್ರಿಭಂಗ (Triple bends) ಎಂದರೆ ಮೂರು ರೀತಿಯ ಹೊರಳುವಿಕೆಯಿಂದ ಕೂಡಿದ ನಕ್ಷೆಯ ರೂಪಗಳನ್ನು ಚಿತ್ರಿಸಲಾಗಿದೆ. ಅಲಂಕಾರಿಕವಾಗಿ ಉದ್ದ ದಪ್ಪ ಪಟ್ಟಿ ಮತ್ತು ಈ ಪಟ್ಟಿಗೆ ಆಚೆ–ಈಚೆ ತೆಳುವಾದ ಪಟ್ಟಿಗಳಿಂದಲೂ ಅಲಂಕರಿಸಲಾಗಿದೆ.

ಅಗತ್ಯದ ಅಲಂಕಾರ ರಚನೆಗಳು

ಅಲಂಕೃತ ಶ್ರೀಕಾರ, ವಿವಿಧಾಕಾರದ ಶ್ರೀಕಾರಗಳು, ಪದ್ಮದಾಕೃತಿ ಅಥವಾ ಹೂ, ಪುಷ್ಪಗಳಂತೆ ಸಂಯೋಜಿತದ ಮುತ್ತಿನಾಕೃತಿಗಳು, ಲಿಂಗದಾಕೃತಿಗಳು, ವಂಕಿಯಾಕೃತಿ, ಅಷ್ಟದಳಾಕೃತಿ, ಷಟ್‌ದಳಾಕೃತಿ ಹಾಗೂ ಅವನ್ನು ಸುತ್ತುವರಿದ ವರ್ತುಲಗಳು, ತರಂಗಿತ ರೇಖೆಗಳು, ಬಿಳಿರೇಖೆಗಳು, ಅಡ್ಡ, ಉದ್ದ, ಒಂಟಿಯಾದ ಹಾಗೂ ಜೋಡಿಯಾದ ದುಂಡುರೇಖೆಗಳು ಒಂದನ್ನೊಂದು ಛೇದಿಸಿ, ಚೌಕೋನ ಸರಪಳಿಯನ್ನುಂಟುಮಾಡುವ ಓರೆರೇಖೆಗಳು, ಇಂತಹ ಆಕೃತಿಗಳಿಂದ

---

೫೬. ಡಾ. ಬಿ. ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು – ಒಂದು ಅಧ್ಯಯನ, ಪುಟ – ೧೮೭

[illegible]

ಗ್ರಂಥ ರಚನೆಯನ್ನು ಮುಕ್ತಾಯಗೊಳಿಸದೆ ಅಂತ್ಯದ ಪ್ರಶಸ್ತಿಯನ್ನು ಬರೆಯುವ ಮೊದಲೇ ಅಲಂಕಾರಿಕ ಆಕೃತಿಗಳನ್ನು ರಚಿಸಿ, ಅನಂತರ ಬರವಣಿಗೆಯಿಂದ ಪತ್ರವನ್ನು ತುಂಬಿಸಿದ್ದಾರೆ.[೫೭] ಇಂತಹ ವಿನ್ಯಾಸಗಳು ಹಸ್ತಪ್ರತಿಗೆ ಮತ್ತಷ್ಟು ಮೆರಗನ್ನು ನೀಡುತ್ತವೆ. ಮತ್ತು ಶ್ರೀಕಾರ, ಪುಷ್ಪಗಳ ವಿನ್ಯಾಸವು ಶುಭಕಾರಕವಾಗಿವೆ.

ಬಣ್ಣದ ಲೇಪನ

ಈ ಹಸ್ತಪ್ರತಿಗಳಲ್ಲಿ ಮೂಲ ಬಣ್ಣವನ್ನೇ ಬಳಸಿದರೂ, ಕ್ರಮೇಣ ಮಿಶ್ರವರ್ಣ ಪ್ರಯೋಗವನ್ನು ಕೂಡ ಇದರ ಪ್ರಯೋಗದಲ್ಲಿ ಕಂಡುಕೊಂಡಿರಬೇಕು. ಬರಿಯ ಫಲಕಚಿತ್ರವಾಗಲಾರದು. ಅದರ ಮೇಲೆ ಒಂದು ಬಣ್ಣದಿಂದ ಒಂದು ಗೆರೆ ಅಥವಾ ಬಿಂದು ಇಟ್ಟರೂ ಒಂದು ಸಂದರ್ಭದಲ್ಲಿ ಚಿತ್ರಕಲೆಯಾಗಬಹುದು. ಇಲ್ಲಿ ಫಲಕದ ಮೂಲ ಬಣ್ಣದೊಂದಿಗೆ ಇನ್ನೊಂದು ಬಣ್ಣದ ಆಕೃತಿಯಿರಿಸಿದರೂ ಎರಡೂ ಬಣ್ಣಗಳ ಚಿತ್ರವಾಗುತ್ತದೆ. ಹಸ್ತಪ್ರತಿಗಳಲ್ಲಿ ಬಣ್ಣದ ಲೇಪನವಿದ್ದರೂ ರೇಖೆಗಳದ್ದೇ ಮೇಲುಗೈಯಾಗಿದೆ. ರೇಖಾಹಂತವು ಮಾನವನ ದೇಹದ ಮೂಳೆಗಳ ಹಂತವಾದರೆ ಬಣ್ಣಗಾರಿಕೆಯ ಹಂತವು ದೇಹಕ್ಕೆ ಬಲಯುತವಾದ ಮಾಂಸ, ಖಂಡ, ಮಜ್ಜೆಗಳನ್ನು ತುಂಬುವ ಹಂತವಾಗಿದೆ. ಇದು ಚಿತ್ರಗಾರಿಕೆಯ ಪ್ರಥಮ ಹಂತವಾಗಿದೆ.[೫೮] ಈ ಬಣ್ಣಗಾರಿಕೆಯ ನಂತರ ಪ್ರಾದೇಶಿಕ ಶೈಲಿಯೂ ಪರಿಸರದಲ್ಲಿ ಲಭ್ಯವಿದ್ದ ಪರಿಕರಗಳೂ ಕೂಡ ಅಷ್ಟೇ ಕಾರಣವಾಗುತ್ತವೆ.

ಬಿದರಿಕಲೆಯಂತಹ ಕಲೆಗಳನ್ನು ಬಿದರಿನಲ್ಲಿಯೇ ತಯಾರಿಸಲು ಸಾಧ್ಯವಾಗುತ್ತದೆ. ತಂತ್ರ, ಮಂತ್ರ, ಯಂತ್ರ ಚಿತ್ರಗಳಲ್ಲಿ ಸವರ್ಣ(mono colour)ದಲ್ಲಿಯೇ ಕೆಲವು ಚಿತ್ರಗಳನ್ನು ಕಾಣಬಹುದು ಮತ್ತು ಉದ್ಧರಣಿ ಚಿತ್ರಗಳನ್ನು ಬಣ್ಣಲೇಪನದಲ್ಲಿ ವೈವಿಧ್ಯದಿಂದ ಕೂಡಿದವು ಎನ್ನಬಹುದು. ಪಂಚವರ್ಣಗಳ ಪರಿಪೂರ್ಣ ಬಳಕೆಯಾಗಿದೆ. ಕೆಲವೇ ಉದ್ಧರಣಿಪಟಲಗಳಿಗೆ ಕೆಂಪು ಮತ್ತು ಹಳದಿ ಮಾತ್ರ ಉಪಯೋಗಿಸಿಕೊಳ್ಳಲಾಗಿದೆ. ಈ ಪಂಚವರ್ಣದಲ್ಲಿ ಕೆಂಪುವರ್ಣವೇ ಪ್ರಧಾನ. ಅಧ್ಯಾಯದಲ್ಲಿ ಚರ್ಚಿಸಿದಂತೆ ಇದಕ್ಕೆ ಪ್ರಾಚೀನ ಇತಿಹಾಸವಿದೆ. ಉದ್ಧರಣಿ ಚಿತ್ರಗಳ ಬಣ್ಣಗಾರಿಕೆಗೆ ಅವಲಂಬಿತವಾಗಿರುತ್ತದೆ. ಹೀಗಾಗಿ ಭಿನ್ನವರ್ಣದ ಆಕಾರಗಳಲ್ಲಿ, ಭಿನ್ನ ಪ್ರಮಾಣದ ಚಿತ್ರಗಳಿರುವುದನ್ನು ಗಮನಿಸಬಹುದು. ಈ ಭಿನ್ನ ಅಧ್ಯಯನವಾಗಬೇಕಾದ ಅಗತ್ಯವಿದೆ. ಕಾಗದ ಪ್ರತಿಗಳಿಗೆ ಭಿನ್ನವಾಗಿ ತಾಳೆಗರಿಗಳ ಮೇಲೆ ಉದ್ಧರಣಿ ಚಿತ್ರಗಳ ರಚನೆಯಾಗಿದೆ. ಇವು ಕೇವಲ ವರ್ಣರಹಿತವಾಗಿ ರೇಖಾವಿನ್ಯಾಸದಿಂದ ಕೂಡಿದವುಗಳು. ವಿಶೇಷವಾಗಿ ಬಣ್ಣಗಾರಿಕೆಯ ತಾಡೋಲೆಗಳು ಸಿಗುತ್ತವೆ. ಇದೇ ರೀತಿಯಲ್ಲಿ ಕಥಾಸಂಬಂಧಿ ಚಿತ್ರಗಳ ವರ್ಣಗಾರಿಕೆಯು ಇದ್ದು, ಮೂಲವರ್ಣದಲ್ಲಿ ನೀಲಿ ಬಂದರೂ ಹಸಿರು ಕೆಂಪು, ಹಳದಿ ಹೆಚ್ಚಾಗಿ ಬಂದಿವೆ.

---

೫೭. ಡಾ. ಬಿ. ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು – ಒಂದು ಅಧ್ಯಯನ, ಪುಟ – ೧೬೯

೫೮. ಸುರೇಶ ಎಸ್. ಬಡಿಗೇರ : ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಗಳ ಚಿತ್ರಕಲೆ – ಒಂದು ಅಧ್ಯಯನ, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಪುಟ – ೭೦

ಹಸಿರು, ನೀಲಿ, ಹಳದಿ ಮಿಶ್ರಿತವಾಗಿರುವುದರಿಂದ ಇದು ಕಲಾವಿದನ ಲೇಪನದಲ್ಲಿ ಬಹುವೇಗವಾಗಿ ದ್ವಿತೀಯ ಬಣ್ಣವಾಗಿ ಪ್ರಯೋಗದಲ್ಲಿ ಸಿಕ್ಕಿರಬೇಕು.

ಉದ್ಧರಣಿ ಚಿತ್ರಪಟಲಗಳಲ್ಲಿ ನೆರಳೆ ಕೂಡ ಲೇಪನವಾಗಿದೆ. ಇದು ಕೂಡ ನೀಲಿ+ಕೆಂಪು ಮಿಶ್ರವರ್ಣವಾಗಿದೆ. ಇಲ್ಲಿ ಬಣ್ಣವನ್ನು ಕಲಾವಿದನೂ ಜಾಗರೂಕನಾಗಿ ಲೇಪನ ಮಾಡಿದ್ದಾನೆ. ಇದರಿಂದ ಕಲಾವಿದನು ಲೇಪನದಲ್ಲಿ ತುಂಬ ನುರಿತವನು ಎಂದು ತಿಳಿಯುತ್ತದೆ. ಮತ್ತು ಅಲಂಕಾರಿಕ ವಿನ್ಯಾಸದಲ್ಲಿ ಹೂ, ಬಳ್ಳಿ, ಎಲೆಗಳಿಗೆ ಹೊಂದುವಂತೆ ಬಣ್ಣವನ್ನು ಹಾಕಲಾಗಿದೆ. ಅಂದರೆ ಹೂವಿಗೆ ಕೆಂಪು ಬಣ್ಣ, ಎಲೆಗಳಿಗೆ ಹಸಿರು, ಬಳ್ಳಿಗಳಿಗೆ ಗಿಳಿಹಸಿರು ಮುಂತಾದವು.

ಇಂತಹ ಚಿತ್ರಗಳಲ್ಲಿ ವಿಷಯ ಸಂವಹನ ರೀತಿಯಲ್ಲಿ ಕಲಾವಿದನು ಬಣ್ಣವನ್ನು ಲೇಪಿಸುತ್ತಾನೆ. ಸಂವಹನ ಎಂದರೆ ಇನ್ನೊಬ್ಬರಿಗೆ ಆ ವಸ್ತು ಏನನ್ನು ಸೂಚಿಸುತ್ತದೆ ಎನ್ನುವುದನ್ನು ಮನವರಿಕೆ ಮಾಡುವುದಾಗಿರುತ್ತದೆ. ಇದನ್ನು ಮನಗಂಡು ಕಾಲದಿಂದ ಕಾಲಕ್ಕೆ ಪರಿಕರಗಳಲ್ಲಿ ಬದಲಾಗುತ್ತ, ಅದಕ್ಕೆ ಬೇಕಾದ ಒಂದು ವಿಧಾನವನ್ನು ಸೃಷ್ಟಿ ಮಾಡಿ, ಒಂದು ಬಣ್ಣಕ್ಕೆ ಇದು ಇದರ ಸಂಕೇತ ಎನ್ನುವ ನೆಲೆಯಲ್ಲಿ ಈ ಸಂವಹನ ಮಾಧ್ಯಮಗಳು ಬಳಕೆಯಾಗಿರುವುದನ್ನು ನಾವು ಕಾಣುತ್ತೇವೆ.[೫೯] ಮತ್ತು ಜೈನಮೂರ್ತಿಗಳಲ್ಲಿ ಅರ್ಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ, ಸಾಧುಗಳಿಗೆ ಕ್ರಮವಾಗಿ ಬಿಳಿ, ಕೆಂಪು, ಹಳದಿ, ನೀಲಿ ಮತ್ತು ಕಪ್ಪುಬಣ್ಣಗಳನ್ನು ಹಾಕುವಂತೆ ಜೈನ ಆಗಮಗಳು ಹೇಳಿವೆ. ಜೈನ ತೀರ್ಥಂಕರರಿಗೆ ಸ್ವರ್ಣ(ಹಳದಿ), ಮಾಣಿಕ್ಯ(ಕೆಂಪು), ಧವಲ(ಬಿಳಿ), ಇಂದ್ರನೀಲ(ಕಪ್ಪು), ಪಚ್ಚೆ(ಹಸಿರು) ಬಣ್ಣಗಳನ್ನು ಹೇಳಿದೆ.[೬೦]

ಅದೇ ರೀತಿಯಲ್ಲಿ ಸೂರ್ಯನಿಗೆ ಕೆಂಪು ಬಣ್ಣ, ಚಂದ್ರನಿಗೆ ಬಿಳಿಬಣ್ಣ, ನೀಲಿ ಆಕಾಶ, ಮಿಂಚಿಗೆ ಹಳದಿಯನ್ನು ಮತ್ತು ಶ್ರೀ ಕೃಷ್ಣಪಾರಿಜಾತದಲ್ಲಿ ಕೃಷ್ಣನಿಗೆ ನೀಲಿಬಣ್ಣದಿಂದ ಗುರುತಿಸಿದ್ದಾರೆ. ಈ ಬರಹಗಾರರಿಗೆ ಬಣ್ಣಗಾರಿಕೆಯ ಸಂವಹನ ಪಾತ್ರ ಎಷ್ಟಿದೆ ಎಂಬುದು ಈ ಹಸ್ತಪ್ರತಿಗಳಿಂದ ತಿಳಿಯುತ್ತದೆ. ಮತ್ತು ಬಣ್ಣಗಾರಿಕೆಯು ಸನ್ನಿವೇಶಗಳ ಸೃಷ್ಟಿ ಮತ್ತು ಅರ್ಥಗಾರಿಕೆಯಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ಅರ್ಜುನ ಕೃಷ್ಣನನ್ನು ಕುರಿತು ಯುದ್ಧದ ಸಂದರ್ಭದಲ್ಲಿ ಕೃಷ್ಣನ ಸಾರಥ್ಯ, ಅರ್ಜುನನ ಗಾಂಭೀರ್ಯ ಕುರಿತು ಅರ್ಥೈಸುವುದು.

ವೀರಶೈವರಲ್ಲಿ ಲಿಂಗಸ್ವರೂಪಿಯಾದ ಶಿವನನ್ನು ಸಂಕೇತಿಸುವುದನ್ನು ಪಾತ್ರಕ್ಕೆ ಅನುಗುಣವಾಗಿ ಚಿತ್ರಿಸಲಾಗುವುದು. ಹಲವು ಯಂತ್ರ, ಮಾಟ, ತಂತ್ರ, ಚಿತ್ರಗಳು ಕೂಡ ರೇಖಾಚಿತ್ರಗಳಲ್ಲಿದ್ದು ಮೂಲ ಸ್ವರೂಪವನ್ನು ಹೇಳಿದರೂ ಇಲ್ಲಿ ರೇಖೆಗಳು ಸ್ವಲ್ಪ ಅತಿಶಕ್ತಿ, ಅಸಹಜತೆಯಿಂದ ಕೂಡಿವೆ. ಉದಾಹರಣೆಗೆ, ಹಲ್ಲಿ (ಬಲ್ಲಿ)ಯ ಚಿತ್ರವು ನಿಂತ ಶೈಲಿ, ಅಂಗಾಂಗಗಳಿಂದ

---

೫೯. ಸುರೇಶ ಎಸ್. ಬಡಿಗೇರ : ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಗಳ ಚಿತ್ರಕಲೆ – ಒಂದು ಅಧ್ಯಯನ, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಪುಟ – ೭೦

೬೦. ಡಾ. ಅ. ಲ. ನರಸಿಂಹನ್ : ಕರ್ನಾಟಕ ಭಿತ್ತಿಚಿತ್ರ ಪರಂಪರೆ, ಪುಟ – ೧೩೮

[illegible]

[illegible]

[illegible]

ಗುರುತಿಸಬಹುದು. ಆದರೆ ಅದರ ಬಾಯಿ, ಕಣ್ಣು, ಮೂತಿಗಳಿಂದ ಕಲಾವಿದನು ತಾಂತ್ರಿಕ ನೆಲೆಯಲ್ಲಿಯೇ ಚಿತ್ರಿಸಿದ್ದಾನೆ ಎನ್ನಬಹುದು. ಅದೇ ರೀತಿಯಲ್ಲಿ ಬೆಕ್ಕು, ಮರ, ಆಮೆ ಮುಂತಾದವನ್ನು ಕಾಣಬಹುದು.

ಒಟ್ಟಾರೆ ಈ ಅಧ್ಯಾಯವು ಬಳ್ಳಾರಿ ಜಿಲ್ಲೆಯಲ್ಲಿ ಸಂಗ್ರಹಗೊಂಡ ಹಸ್ತಪ್ರತಿಗಳನ್ನು ಗಮನಿಸಿ ಅಧ್ಯಯನಕ್ಕೊಳಪಡಿಸಲಾಗಿದ್ದು, ವಿಶೇಷವಾಗಿ ಹಸ್ತಪ್ರತಿಯಲ್ಲಿ ಬಂದಿರುವ ವರ್ಣವಿನ್ಯಾಸ, ಚಿತ್ರವಿನ್ಯಾಸಗಳನ್ನು ಮತ್ತು ಚಿತ್ರಸಹಿತ ಬರವಣಿಗೆಯನ್ನು ಗಮನಿಸಲಾಗಿದೆ. ವಿಶೇಷವಾಗಿ ಉದ್ಧರಣೆ ಚಿತ್ರಗಳು ಇಲ್ಲಿ ಸಂಗ್ರಹಗೊಂಡಿರುವುದು ಮತ್ತು ಅವು ವೀರಶೈವ ಪರಂಪರೆಯ ಪ್ರಮುಖ ಕೊಡುಗೆಯಾಗಿ ರಚನೆಯಾದ ಬಗೆಯನ್ನು ಗಮನಿಸಲಾಗಿದೆ. ಹಾಗೆಯೇ ವಿವಿಧ ಧರ್ಮದ ಮತ್ತು ಧಾರ್ಮಿಕೇತರ ಹಸ್ತಪ್ರತಿಗಳಲ್ಲಿ ಸಹ ಚಿತ್ರಕಲಾ ವಿನ್ಯಾಸ ಎಡೆವಾಯ್ದು ಬಂದಿದೆ. ಫಲಕ ಮಾಧ್ಯಮ, ರಕ್ಷಾಪಟವಾಗಿ, ಹಸ್ತಪ್ರತಿಯ ಸೌಂದರ್ಯದ ಸಾಧನವಾಗಿ ಸಹ ಈ ಕಲೆಯನ್ನು ಬಳಸಿಕೊಂಡಿರುವುದು ಗಮನಾರ್ಹ ಅಂಶವಾಗಿದೆ. ಇಲ್ಲಿಯೂ ಕೂಡ ಪ್ರಾತಿನಿಧಿಕವಾಗಿ ಕೆಲವು ಹಸ್ತಪ್ರತಿಗಳನ್ನು ಮಾತ್ರ ಅಧ್ಯಯನಕ್ಕೊಳಪಡಿಸಲಾಗಿದೆ.

ಅಧ್ಯಾಯ : ಏಳು

ಬಳ್ಳಾರಿ ಜಿಲ್ಲೆಯ ಚಿತ್ರಕಲಾ ಸಾಹಿತ್ಯ

ಚಿತ್ರಕಲಾವಿದನ ಅಭಿವ್ಯಕ್ತಿ ಚಿತ್ರಗಳ ಮೂಲಕವೇ ಆದ್ದರಿಂದ ಚಿತ್ರಕಲೆ ಇತಿಹಾಸ ಪ್ರಾಗೈತಿಹಾಸಿಕ ಕಾಲಕ್ಕೆ ಕೊಂಡೊಯ್ಯುತ್ತದೆ. ಆದರೆ ಸಾಂದರ್ಭಿಕವಾಗಿ ಮತ್ತು ಶಾಸ್ತ್ರಗ್ರಂಥಗಳಲ್ಲಿ ಚಿತ್ರಕಲಾ ಸಾಹಿತ್ಯದ ಪ್ರಾಚೀನತೆಯನ್ನು ಕಂಡುಕೊಳ್ಳಬಹುದು. ಕನ್ನಡ ಕಾವ್ಯಗಳಲ್ಲಿ ದೃಶ್ಯಕಲೆಗಳ ಬಗೆಗೆ ಬರುವ ಪ್ರಸ್ತಾಪದಲ್ಲಿರಬಹುದು. ಸಂದರ್ಭೋಚಿತವಾಗಿ ಒಂದು ಕೃತಿಯ ವರ್ಣನೆ ಇರಬಹುದು, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಒಂದು ಕೃತಿಯ ವಿಮರ್ಶೆ ಇರಬಹುದು, ಕಲಾವಿದನ ಪ್ರಸ್ತಾಪವಿರಬಹುದು (ಚಿತ್ರ, ಚಿತ್ರಕ, ಚಿತ್ರಕರ್ಮ, ಚಿತ್ರಶಾಲೆ ಅಥವಾ ಚಿತ್ರಗೃಹ ಮುಂತಾದವುಗಳ ಪ್ರಸ್ತಾಪ ಬರುತ್ತದೆ). ಕನ್ನಡ ಸಾಹಿತ್ಯದಲ್ಲಿ ಚಿತ್ರಕಲೆಗೆ ಸಂಬಂಧಿಸಿದ ಅತಿ ಹಳೆಯ ಪ್ರಸ್ತಾಪ ಕವಿರಾಜ ಮಾರ್ಗದಲ್ಲಿದ್ದು, ಅಂದು ಶ್ರೀ ವಿಜಯನು 'ಸಕಳಾಳಾಪ ಕಳಾಪ'ವನ್ನು ಅಂದರೆ ಮಾತಿನ ಅಥವಾ ಶಬ್ದದ ಕಲೆಯನ್ನು ಒಬ್ಬ ಚಿತ್ರಕರ ಅಥವಾ ಚಿತ್ರಗಾರ, ಪರಭಾಗ ಭಾವಿಸಲದ್ವರ್ಣ ಶ್ರಮಾವೃತ್ತಿಯಂ ಶೋಭಾಯಮಾನವಾದ ವರ್ಣಕ್ರಮದಿಂದ ಒಂದು ಚಿತ್ರದ ಅಂತರ್ಗತ ಭಾವವನ್ನು, ಸೌಂದರ್ಯವನ್ನು ಪ್ರಕಟಮಾಡಿದ ರೀತಿಯಲ್ಲಿ ಶ್ರೀ ವಿಜಯನು ಈ ಸಕಳಾಳಾಪ ಕಲೆಯನ್ನು ವಿವರಿಸಿದ್ದಾನೆ. 'ಮಲ್ಲಿನಾಥ ಪುರಾಣ'ದಲ್ಲಿ ಚಿತ್ರದ ರೇಖಾವಿನ್ಯಾಸ, ಬಣ್ಣಗಳನ್ನು ಬಳಸುವ ವೈಖರಿಯನ್ನು 'ಬ್ರಹ್ಮಂಗಮೇಂ ಬರ್ತುಮೇ?' ಬ್ರಹ್ಮನಿಗೂ ಸಾಧ್ಯವೋ ಎಂದು ಅಚ್ಚರಿಯಿಂದ ಪ್ರಶ್ನಿಸಿಕೊಳ್ಳುತ್ತಾನೆ.[೧] ಹೀಗೆ ಸಾಂದರ್ಭಿಕವಾಗಿ ಚಿತ್ರಕಲೆಯ ಉಲ್ಲೇಖವನ್ನು

೦೧. ಬಿ. ವಿ. ಕೆ. ಶಾಸ್ತ್ರಿ : ಚಿತ್ರಕಲಾ ಪ್ರಪಂಚ, ಪುಟ – ೧೩೮

[illegible]

[illegible]

[illegible]

[illegible]

ಕಾಣಬಹುದು. ಹಾಗೆಯೇ ಶಿಲ್ಪಶಾಸ್ತ್ರವನ್ನು ಕುರಿತು ಹೇಳುವ ಕೆಲವು ಗ್ರಂಥಗಳೇ ಚಿತ್ರಕಲೆಯನ್ನು ಕುರಿತು ಹೇಳುತ್ತವೆ. ಕೆಲವೊಮ್ಮೆ ಚಿತ್ರಕಲೆಯ ಭಾಗವನ್ನಷ್ಟೇ ಪ್ರತ್ಯೇಕವಾಗಿ ಪ್ರತಿಮಾಡಿರುವುದುಂಟು, ಟಿಬೆಟ್ ಭಾಷೆಯ 'ತಾಂಜೂರು'ನಿಂದ ಹಾಗೂ ಕೇರಳದ ಶ್ರೀಕುಮಾರನ ಶಿಲ್ಪರತ್ನದಿಂದ 'ಚಿತ್ರಲಕ್ಷಣ'ದ ಭಾಗವಷ್ಟೇ ಪ್ರತಿಮಾಡಿ ಪ್ರಚಾರ ಪಡೆದಿದೆ. ಇವುಗಳಲ್ಲಿ 'ಚಿತ್ರಸೂತ್ರ', ಅಭಿಲಷಿತಾರ್ಥ ಚಿಂತಾಮಣಿ, ಕಾಮಶಾಸ್ತ್ರ, ನಾಟ್ಯಶಾಸ್ತ್ರ, ವಿಷ್ಣುಧರ್ಮೋತ್ತರ ಪುರಾಣ, ಸಮರಾಂಗಣಸೂತ್ರಧಾರ, ಪಂಚದಶಿ, ಶಿವತತ್ವರತ್ನಾಕರ, ಶ್ರೀತತ್ವನಿಧಿ ಇತ್ಯಾದಿಗಳು[೨] ಚಿತ್ರರಚನಾ ವಿಧಿವಿಧಾನ, ಬಣ್ಣ, ರೇಖೆ, ಕುಂಚ ಇತ್ಯಾದಿಗಳ ತಯಾರಿಕೆ, ಬಳಕೆ, ಇತ್ಯಾದಿ ತಾಂತ್ರಿಕ ಅಂಶಗಳೂ, ಚಿತ್ರಿಸಬೇಕಾದ ವಿಷಯ, ಆಕಾಶ – ರೂಪಗಳು ದೇವಾಧಿದೇವತೆಗಳು, ಋಷಿಗಳು, ರಾಜರು ಇತ್ಯಾದಿ ಆಕಾರಗಳ ರಚನೆ, ಪ್ರಮಾಣ, ವಸ್ತ್ರಾಭರಣ ವಿವರಗಳಿವೆ.

ನಂತರದ ದಿನಗಳಲ್ಲಿ ರಾಜಾಶ್ರಯದಿಂದ ಹೊರಬಂದ ನಮ್ಮ ಕಲಾವಿದರು ತಮ್ಮ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳಲು ಕಲಾಕೃತಿ ರಚನೆ ಮಾಡಿ ಅವುಗಳನ್ನು ಪ್ರದರ್ಶಿಸುವ ಪರಿಪಾಠ ಬೆಳೆಸಿಕೊಳ್ಳುವುದು ಅನಿವಾರ್ಯವಾಯಿತು. ಪ್ರದರ್ಶಿಸಿದ ಕಲೆಯನ್ನು ಕುರಿತು ಮಾಧ್ಯಮಗಳಲ್ಲಿ ಬರೆಯುವವರು ಅತ್ಯಂತ ಕಡಿಮೆ ಬರೆಯುತ್ತಿದ್ದವರಾದರೂ ಸಹ ಸಾಹಿತ್ಯವಲಯದಿಂದ ಬಂದವರಾಗಿದ್ದರೆಂಬುದಕ್ಕೆ ಅ.ನ.ಕೃ, ಶಿವರಾಮ ಕಾರಂತ, ವಿ. ಸೀತಾರಾಮಯ್ಯನವರ, ಅಜಂತಾ, ವಿಜಯನಗರ ಮುಂತಾದ ಚಿತ್ರಕಲೆಯನ್ನು ಕುರಿತು ಲೇಖನಗಳು ಬಂದವು.

ಚಿತ್ರಕಲೆಯನ್ನೇ ಅಭ್ಯಾಸಮಾಡಿ ಚಿತ್ರಕಲಾ ವಲಯದಿಂದ ಬಿ.ವಿ.ಕೆ. ಶಾಸ್ತ್ರಿಗಳು ಪತ್ರಿಕೋದ್ಯಮವನ್ನು ಹೊಕ್ಕು ಆರಂಭಿಸಿದ ಕಲಾಬರಹಗಳು ಹಿರಿಯ ಮತ್ತು ಕಿರಿಯ ಕಲಾವಿದರು ಹೀಗೆ ಸರ್ವರಿಗೂ ಒಂದು ಬಗೆಯ ಪ್ರೋತ್ಸಾಹಕ್ಕೆ ಕಾರಣವಾಯಿತು. ಯಾವುದೇ ಪ್ರದರ್ಶನವಾಗಲೀ ಅದರ ಕೊನೆ ಸಾಲುಗಳಲ್ಲಿ ಆ ಪ್ರದರ್ಶನದಲ್ಲಿ ಕಂಡು ಬರುವ ಲೋಪದೋಷಗಳ ಬಗ್ಗೆಯಾಗಲೀ ಕಲಾಕೃತಿಯ ಗುಣಮಟ್ಟದ ಬಗ್ಗೆಯಾಗಲೀ ಒಂದೆರಡು ವಾಕ್ಯಗಳಲ್ಲಿ ಬರೆಯುವ ಪರಿಪಾಠ ಬೆಳೆಯಿತು. ತತ್ಪರಿಣಾಮ ಪ್ರಚಾರವಾಗಿ ಡೆಕ್ಕನ್ ಹೆರಾಲ್ಡ್, ಸುಧಾ ಮುಂತಾದ ಪತ್ರಿಕೆಗಳಲ್ಲಿ ಕಲೆಯ ಕುರಿತಾದ ಲೇಖನಗಳು ಬರಲು ಶಕ್ಯವಾಯಿತು. ಅದೇ ಪತ್ರಿಕಾ ಸಮೂಹಕ್ಕೆ ಸೇರಿದ, ನೃತ್ಯದ ಹಿನ್ನೆಲೆಯಲ್ಲಿ ಬಂದ ಶ್ರೀ ಎಸ್. ಎನ್. ಚಂದ್ರಶೇಖರರವರು ಸಹ ಬರೆಯುತ್ತಿದ್ದರು. ಸುಮಾರು ಎರಡು ದಶಕಗಳ ಕಾಲ ಈ ಈರ್ವರು ಚಿತ್ರಕಲೆಯ ಬಗ್ಗೆ ಸಾರ್ವತ್ರಿಕ ತಿಳಿವಳಿಕೆ ಮೂಡಲು ಬಹಳಷ್ಟು ಶ್ರಮಿಸಿದರು.[೩]

ಬಳ್ಳಾರಿ ಜಿಲ್ಲೆಯಲ್ಲಿಯೂ ಕಲಾವಿದರು, ಸಂಶೋಧಕರು, ಸಾಹಿತ್ಯಕಾರರು ಅನೇಕ ಪುಸ್ತಕ, ಗ್ರಂಥಗಳನ್ನು ಹೊರತಂದಿದ್ದಾರೆ. ಇವುಗಳಲ್ಲಿ ಸಂಶೋಧನೆ, ಸಂಶೋಧನೇತರ ಗ್ರಂಥಗಳು

---

೦೨. ಪಿ. ಆರ್. ತಿಪ್ಪೇಸ್ವಾಮಿ (ಪ್ರ.ಸಂ.) : ಕಲಾಕೋಶ, ಪುಟ – ೧೫೦

೦೩. ಎಲ್. ಶಿವಲಿಂಗಪ್ಪ : ಕಲಾಸಾಧಕನ ದಶಮುಖಗಳು, ೨೦೧೧

[illegible]

ಬಳ್ಳಾರಿ ಜಿಲ್ಲೆಯ ಚಿತ್ರಕಲಾ ಸಾಹಿತ್ಯ

- **ಪ್ರಕಟಿತ ಚಿತ್ರಕಲಾ ಸಾಹಿತ್ಯ**
  - **ಸಂಶೋಧನ ಚಿ. ಸಾಹಿತ್ಯ**
  - **ಸಂಶೋಧನೇತರ ಚಿ. ಸಾಹಿತ್ಯ**
- **ಅಪ್ರಕಟಿತ ಚಿತ್ರಕಲಾ ಸಾಹಿತ್ಯ**
  - **ಸಂಶೋಧನ ಚಿ. ಸಾಹಿತ್ಯ**
    - ೧. ಪಿಹೆಚ್.ಡಿ ಮಹಾಪ್ರಬಂಧಗಳು
    - ೨. ಎಂ.ಫಿಲ್ ಸಂಪ್ರಬಂಧಗಳು
    - ೩. ಡಿ.ಲಿಟ್ ಮಹಾಪ್ರಬಂಧಗಳು
  - **ಸಂಶೋಧನೇತರ ಚಿ. ಸಾಹಿತ್ಯ**

ಪ್ರಬಂಧಗಳಾಗಿವೆ. ಬಳ್ಳಾರಿ ಜಿಲ್ಲೆಯ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದಲೂ ಪಿಹೆಚ್.ಡಿ., ಎಂ.ಫಿಲ್., ಡಿ.ಲಿಟ್., ಎಂ.ವಿ.ಎ. ಸ್ನಾತಕೋತ್ತರ, ಬಿ.ವಿ.ಎಡ್ ಪದವಿಗಾಗಿ ಸಾದರಪಡಿಸಿದ ಸಂಶೋಧನಾತ್ಮಕ ಗ್ರಂಥಗಳು ರಚನೆಯಾಗಿವೆ. ಇವುಗಳನ್ನು ಅಧ್ಯಯನದ ದೃಷ್ಟಿಯಿಂದ ಈ ಕೆಳಗಿನಂತೆ ವಿಂಗಡಿಸಲಾಗಿದೆ.

೧. **ಪ್ರಕಟಿತ ಚಿತ್ರಕಲಾ ಸಾಹಿತ್ಯ :** ಇಲ್ಲಿ ಪ್ರಕಟಿತ ಸಂಶೋಧನ ಚಿತ್ರಕಲಾ ಸಾಹಿತ್ಯ ಮತ್ತು ಪ್ರಕಟಿತ ಸಂಶೋಧನೇತರ ಚಿತ್ರಕಲಾ ಸಾಹಿತ್ಯ ಎಂದು ಎರಡು ರೀತಿಯಲ್ಲಿ ವಿಂಗಡಿಸಲಾಗಿದೆ.

೧.೧. ಸಂಶೋಧನ ಚಿತ್ರಕಲಾ ಸಾಹಿತ್ಯ

೧. ಕರ್ನಾಟಕ ಜನಪದ ಚಿತ್ರಕಲೆ

ಕರ್ನಾಟಕ ಚಿತ್ರಕಲಾ ಕ್ಷೇತ್ರದಲ್ಲಿ ಮೊದಲ ಪಿಹೆಚ್.ಡಿ ಪ್ರಬಂಧವೆಂದು ಪರಿಗಣಿಸಲಾದ ಈ ಸಂಶೋಧನೆಯನ್ನು ಎಸ್. ಸಿ. ಪಾಟೀಲ ಅವರು ಡಾ. ಬಿ. ಆರ್. ಹಿರೇಮಠ ಅವರ ಮಾರ್ಗದರ್ಶನದಲ್ಲಿ ಕೈಗೊಂಡು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡಕ್ಕೆ ಸಾದರಪಡಿಸಿದ್ದಾರೆ.[೪] ೧೯೯೧ರಲ್ಲಿ ಪಿಹೆಚ್.ಡಿ ಪದವಿಲಭ್ಯವಾದ ಈ ಪ್ರಬಂಧವು ೧೯೯೩ರಲ್ಲಿ ಗದುಗಿನ ತೋಂಟದಾರ್ಯ ಮಠದಿಂದ ಪ್ರಕಟಗೊಂಡಿದೆ. ಕರ್ನಾಟಕದ ಜನಪದ ಚಿತ್ರಕಲೆಯನ್ನು ಮುಖ್ಯವಾಗಿ ಇಲ್ಲಿ ಅಧ್ಯಯನಕ್ಕೆ ಆಯ್ದುಕೊಂಡಿದ್ದು, ಉತ್ತರ ಕರ್ನಾಟಕದ ಭಾಗವನ್ನು ಹೆಚ್ಚು ಕೇಂದ್ರಿಕರಿಸಿ ಅಧ್ಯಯನ ಮಾಡಲಾಗಿದೆ. ಈ ಪ್ರಬಂಧದಲ್ಲಿ ಏಳು ಅಧ್ಯಾಯಗಳನ್ನು ಮಾಡಿಕೊಂಡು ವಿಷಯ ವಿಶ್ಲೇಷಣೆ ಮಾಡಲಾಗಿದೆ.

ಮೊದಲ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವಿಧಾನಗಳೊಂದಿಗೆ ಪ್ರಸ್ತುತತೆ ಮತ್ತು ಮಹತ್ವಗಳನ್ನು ಹೇಳಿದೆ. ಎರಡನೆಯ ಅಧ್ಯಾಯದಲ್ಲಿ ಜನಪದ ಚಿತ್ರಕಲೆ ಮತ್ತು ಶಿಷ್ಟಪದ ಚಿತ್ರಕಲೆಗಳ ವಿಂಗಡಣೆ ಮತ್ತು ವೈಲಕ್ಷಣಗಳ ಬಗ್ಗೆ ಹೇಳಲಾಗಿದೆ. ಇದರ ಜೊರೆಗೆ ಕಲೆಯ ಅರ್ಥ ಮತ್ತು ಸ್ವರೂಪ, ಕಲೆ ಮತ್ತು ವಿದ್ಯೆ, ಕಲೆಯ ಉಗಮ ಮತ್ತು ವಿಕಾಸ, ಕಲೆಯ ಪ್ರಕಾರಗಳು, ಚಿತ್ರಕಲೆ ಮತ್ತು ಅದರ ಶ್ರೇಷ್ಠತೆ, ಚಿತ್ರಕಲೆಯ ವಿಂಗಂಡಣೆ ಇವುಗಳ ಬಗ್ಗೆ ವಿವೇಚನೆ ಇದೆ. ಮೊದಲನೆಯ ಹಂತದಲ್ಲಿ ಪ್ರಾಗಿತಿಹಾಸ ಕಾಲದಲ್ಲಿ ಬೆಳೆದುಬಂದ ಬಂಡೆ ಚಿತ್ರಕಲೆಯ ನೆಲೆಗಳ ಬಗ್ಗೆ ಹೇಳಿದರೆ, ಎರಡನೆಯ ಹಂತದಲ್ಲಿ ಮನೆ, ಮಠ, ದೇವಾಲಯಗಳಲ್ಲಿ ರಚನೆಯಾಗಿರುವ ಪ್ರಾಚೀನ ಕಾಲದ ಭಿತ್ತಿಚಿತ್ರಗಳ ಕುರಿತು ವಿವೇಚಿಸಲಾಗಿದೆ. ಮತ್ತು ಮೂರನೆಯ ಘಟ್ಟದಲ್ಲಿ ಹಸ್ತಪ್ರತಿಗಳಲ್ಲಿ ಕಂಡುಬರುವ ಚಿತ್ರಗಳ ಹಿನ್ನೆಲೆ ಇಟ್ಟುಕೊಂಡು ಜನಪದ ಚಿತ್ರಕಲೆಯ ಇತಿಹಾಸವನ್ನು ರೂಪಿಸಲಾಗಿದೆ. ಜನಪದ ಚಿತ್ರಕಲೆಯ ವಿವಿಧ ಉದ್ದೇಶಗಳ ಹಿನ್ನೆಲೆಯಲ್ಲಿ ರಚನೆಯಾಗುತ್ತಲಿದ್ದು, ಅದನ್ನು ವಿಷಯಾನುಸಾರ ವಿಂಗಡಿಸಿಕೊಂಡು. ಒಂದೊಂದು

---

೦೪. ಡಾ. ಎಸ್. ಸಿ. ಪಾಟೀಲ : ಕರ್ನಾಟಕ ಜನಪದ ಚಿತ್ರಕಲೆ, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ. ೧೯೯೩

ವಿಷಯಕ್ಕೆ ಒಂದೊಂದು ಪ್ರತ್ಯೇಕ ಅಧ್ಯಾಯವನ್ನು ಮೀಸಲಿರಿಸಲಾಗಿದೆ. ಇಲ್ಲಿ ಜನಪದ ಚಿತ್ರಕಲೆಯನ್ನು ರಚನಾ ಉದ್ದೇಶಗಳ ಹಿನ್ನೆಲೆಯಲ್ಲಿ ಮೂರು ಭಾಗವಾಗಿ ವರ್ಗೀಕರಿಸಲಾಗಿದೆ. ಸೌಂದರ್ಯ ಮೂಲ ಜನಪದ ಚಿತ್ರಕಲೆ, ಧರ್ಮಮೂಲ ಜನಪದ ಚಿತ್ರಕಲೆ, ವೃತ್ತಿಮೂಲ ಜನಪದ ಚಿತ್ರಕಲೆ ಎಂದು ವಿಂಗಡಿಸಲಾಗಿದೆ. ಸೌಂದರ್ಯ ಮೂಲ ಜನಪದ ಚಿತ್ರಕಲೆ ಬಗೆಗೆ ನಾಲ್ಕನೆಯ ಅಧ್ಯಾಯದಲ್ಲಿ ವಿವೇಚಿಸಲಾಗಿದೆ. ಇಲ್ಲಿ ಸೌಂದರ್ಯ ಮೂಲ ಜನಪದ ಚಿತ್ರಕಲೆಯನ್ನು ಮತ್ತೆ ಪ್ರಯೋಜನಾ ಮೂಲ ಮತ್ತು ಮನರಂಜನಾ ಮೂಲ ಎಂಬುದಾಗಿ ವಿಂಗಡಿಸಿ ಅದರಲ್ಲಿ ಒಳಗೊಳ್ಳುವ ಜನಪದ ಚಿತ್ರಕಲಾ ಪ್ರಕಾರಗಳನ್ನು ಒಂದೊಂದಾಗಿ ವಿವೇಚಿಸಲಾಗಿದೆ.

ಪ್ರಯೋಜನಾ ಮೂಲ ಜನಪದ ಚಿತ್ರಕಲೆಯು ಮಾಧ್ಯಮದ ಹಿನ್ನೆಲೆಯಲ್ಲಿ ಉಭಯ ಉದ್ದೇಶಗಳನ್ನು ಪೂರೈಸುವ ನಿಟ್ಟಿನಲ್ಲಿ ರಚಿಸಲ್ಪಡುತ್ತದೆ. ಮನೆಯ ಹೊರಭಾಗದ ಗೋಡೆಗಳಿಗೆ ಜೇಡಿಮಣ್ಣು, ಕೆಮ್ಮಣ್ಣು, ಸಗಣಿ, ಸುಣ್ಣ ಇವುಗಳನ್ನು ಲೇಪಿಸಿ ಬಣ್ಣದ ಪಟ್ಟಿಗಳನ್ನು ಎಳೆಯುವಲ್ಲಿ ಮನೆಯ ಸೌಂದರ್ಯ ವೃದ್ಧಿಗೊಳಿಸುವುದರ ಜೊತೆಗೆ ಮನೆಯ ರಕ್ಷಣೆಯು ಇದರಲ್ಲಿ ಅಡಗಿದೆ. ಹಾಗೆಯೇ ಮನೆಯ ಒಳಭಾಗದ ಗೋಡೆಯ ಕೆಳಭಾಗ ಮತ್ತು ಜಂತಿಗೆ ಡಾಂಬರು, ವಾರ್ನಿಸು, ಕೆಮ್ಮಣ್ಣುಗಳನ್ನು ಲೇಪಿಸುವುದರ ಹಿಂದೆ ಸೌಂದರ್ಯ ಮತ್ತು ರಕ್ಷಣೆಯ ಉದ್ದೇಶಗಳು ಅಡಗಿಕೊಂಡಿವೆ. ಹಾಗಾಗಿ ಇಲ್ಲಿ ಪ್ರಯೋಜನಾ ಮೂಲ ಜನಪದ ಚಿತ್ರಕಲೆಯನ್ನು ಈ ಎರಡೂ ದೃಷ್ಟಿಕೋನಗಳಿಂದ ಅಧ್ಯಯನಕ್ಕೊಳಪಡಿಸಲಾಗಿದೆ.

ಇದರಲ್ಲಿ ಗೃಹಾಲಂಕಾರದ ಚಿತ್ರವಿನ್ಯಾಸ, ಹಚ್ಚೆ ಚಿತ್ರಕಲೆ, ಮದರಂಗಿ ಚಿತ್ರಕಲೆ, ತಾಳೆಗರಿ, ಕಡತ, ರಟ್ಟಿನ ಮೇಲಿನ ಚಿತ್ರಕಲೆ, ನೀಲಿ ಹೊತ್ತಿಗೆ, ಗಿಳಿಶಕುನದ ಚಿತ್ರಕಲೆ, ಕೌದಿ ಚಿತ್ರಕಲೆ, ಕಸೂತಿ ಚಿತ್ರಕಲೆ, ನೇಯ್ಗೆ ಚಿತ್ರಕಲೆ ಮುಂತಾದವು ಅಧ್ಯಯನಕ್ಕೊಳಪಟ್ಟಿವೆ. ಹಾಗೆಯೇ ಸೌಂದರ್ಯ ಮೂಲ ಜನಪದ ಚಿತ್ರಕಲೆಯಲ್ಲಿ ಮತ್ತೊಂದು ಭಾಗವಾದ ಮನರಂಜನ ಮೂಲ ಚಿತ್ರಕಲೆಯಲಿ ಮನೆಯ ಒಳಾಂಗಣದ ಆಟಗಳಲ್ಲಿ ಚಿತ್ರಕಲೆ, ಮನೆಯ ಹೊರಾಂಗಣದ ಆಟಗಳಲ್ಲಿ ಚಿತ್ರಕಲೆ ಎಂದು ವರ್ಗೀಕರಿಸಿ ವಿವೇಚಿಸಲಾಗಿದೆ.

ಜನಪದರ ಧಾರ್ಮಿಕ ವಿಚಾರಗಳು, ನಂಬಿಕೆ, ಆಚರಣೆಗಳು, ವಿಧಿಕ್ರಿಯೆಗಳು, ಉತ್ಸವಾದಿ ಶುಬ–ಸಮಾರಂಭಗಳಲ್ಲಿ ರಚನೆಯಾಗುವ ಧರ್ಮಮೂಲ ಜನಪದ ಚಿತ್ರಕಲೆಯ ಬಗೆಗೆ ಐದನೆಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಇಲ್ಲಿ ಧರ್ಮಮೂಲ ಜನಪದ ಚಿತ್ರಕಲೆಯನ್ನು ಧಾರ್ಮಿಕ ಹಿನ್ನೆಲೆಯ ಜನಪದ ಚಿತ್ರಕಲೆ ಮತ್ತು ತಾಂತ್ರಿಕ ಹಿನ್ನಲೆಯ ಜನಪದ ಚಿತ್ರಕಲೆ ಎಂಬುದಾಗಿ ವರ್ಗೀಕರಿಸಿ ವಿವೇಚಿಸಲಾಗಿದೆ. ಧರ್ಮಮೂಲ ಜನಪದ ಚಿತ್ರಕಲೆಯಲ್ಲಿ ಧಾರ್ಮಿಕತೆಯೇ ಪ್ರಧಾನವಾದರೂ ಅವು ರಚನೆಯಾಗುವ ಧಾರ್ಮಿಕ ಆಚರಣೆ ಮತ್ತು ಆಚರಣೆಯ ಹಿನ್ನೆಲೆಯ ಸಂದರ್ಭಗಳು ಬೇರೆ ಬೇರೆಯಾಗಿರುತ್ತವೆ. ಹಾಗಾಗಿ ಧರ್ಮಮೂಲ ಜನಪದ ಚಿತ್ರಕಲೆಯನ್ನು ಮತ್ತೆ ನಾಲ್ಕು ರೀತಿಯ ಉಪಪ್ರಕಾಗಳಲ್ಲಿ ವಿಂಗಡಿಸಿ ವಿವೇಚಿಸಲಾಗಿದೆ. ಹಬ್ಬ–ಹರಿದಿನಗಳಲ್ಲಿ

ಚಿತ್ರಿಸುವ ಚಿತ್ರವಿನ್ಯಾಸಗಳು, ದೇವರ ಉತ್ಸವ ಜಾತ್ರೆಗಳಲ್ಲಿ ಚಿತ್ರಿಸುವ ವಿನ್ಯಾಸಗಳು, ಮದುವೆ-ಮುಂಜಿವೆಗಳಲ್ಲಿ ಚಿತ್ರಿಸುವ ಚಿತ್ರವಿನ್ಯಾಸಗಳು ಮತ್ತು ಸಂಕೀರ್ಣ ರೀತಿಯ ಜನಪದ ಚಿತ್ರವಿನ್ಯಾಸಗಳೆಂದು ಪ್ರತ್ಯೇಕಿಸಿಕೊಳ್ಳಲಾಗಿದೆ. ಇವುಗಳಲ್ಲಿ ಹಬ್ಬ-ಹರಿದಿನಗಳಲ್ಲಿ ಚಿತ್ರಿಸುವ ಜನಪದ ಚಿತ್ರಕಲೆಯ ಗುಂಪಿನಲ್ಲಿ ಮನೆಗಳ ಒಳಭಾಗ ಮತ್ತು ಹೊರಭಾಗದ ವರ್ಣಾಲಂಕಾರ, ಬಣ್ಣದ ಜೋರು ಬಿಡುವುದು, ಸ್ವಸ್ತಿಕ, ಅಧಿಕಚಿಹ್ನೆ, ಪಾಂಡವರ ಸಾಂಕೇತಿಕ ಚಿತ್ರ ಬರೆಯುವುದು, ಬಾಗಿಲಿಗೆ ತೇನಾಕೃತಿ ರಚಿಸುವುದು, ಮಾಡು-ಗೂಡುಗಳಿಗೆ ಬಣ್ಣದ ಅಲಂಕಾರ ಮಾಡುವುದು ಹೀಗೆ ಹಲವಾರು ಪ್ರಕಾರಗಳನ್ನು ಹೇಳಲಾಗಿದೆ.

ಇದಲ್ಲದೆ ಬೆಳದಿಂಗಳ ಚಿತ್ರಕಲೆ, ಶೀಗಿ ಚಿತ್ರಕಲೆ, ಹಸೆ ಚಿತ್ರಕಲೆ, ದೀಪಾವಳಿಯಲ್ಲಿ ಪಾಂಡವರ ಚಿತ್ರ ಬರೆಯುವುದು ಮುಂತಾದವುಗಳನ್ನು ಹೇಳಿದೆ. ವಸ್ತುಗಳಲ್ಲಿನ ಕಲಾವಿನ್ಯಾಸದಲ್ಲಿ ರಂಟೆ, ಕುಂಟೆ, ನೇಗಿಲು, ನೊಗ-ಬಂಡಿಗಳು, ಎತ್ತಿಗೆ ಹಾಕುವ ಅಲಂಕಾರಿಕ ಸಾಮಾನುಗಳು, ಬಾರುಕೋಲು, ಕೂರಿಗೆ ಮುಂತಾದವುಗಳನ್ನು ಪರಿಗಣಿಸಿದ್ದರೆ, ಕೃಷಿಯೇತರ ಉಪಕರಣಗಳಲ್ಲಿ ತೊಟ್ಟಿಲು, ಮಂಚ, ಕೂಡ್ರುವ ಮಣೆ, ಒನಕೆ, ಅಡ್ಡಣಿಗೆ, ಈಳಿಗೆಮಣೆ, ಹೋಳಿಗೆಮಣಿ, ಲಟ್ಟಣಿಗೆ, ದೇವರ ಉತ್ಸವ ಜಾತ್ರೆಗಳಲ್ಲಿ ಚಿತ್ರಿಸುವ ವಿನ್ಯಾಸಗಳಲ್ಲಿ ದೇವಸ್ಥಾನಗಳನ್ನು ಸುಣ್ಣ, ಬಣ್ಣಗಳಿಂದ, ಚಿತ್ರ ವಿನ್ಯಾಸಗಳಿಂದ ಅಲಂಕರಿಸುವುದು, ದೇವರನ್ನು ಅಲಂಕರಿಸುವುದು, ತೇರನ್ನು ಅಲಂಕರಿಸುವ ಕ್ರಮಗಳನ್ನು ಹೇಳಲಾಗಿದೆ.

ಮದುವೆ-ಮುಂಜಿವೆಗಳಲ್ಲಿನ ಚಿತ್ರಗಳಲ್ಲಿ ಮದುಮಕ್ಕಳು ಕುಳಿತುಕೊಳ್ಳುವ ಕಟ್ಟೆಯ ಮೇಲೆ ಮತ್ತು ಹಿಂದಿನ ಗೋಡೆಯನ್ನು ಚಿತ್ರಗಳಿಂದ ಅಲಂಕರಿಸುವುದು, ಮನೆ, ಬಾಗಿಲು, ಯಜ್ಞ ಕಟ್ಟೆಗಳನ್ನು ಶೃಂಗರಿಸುವುದು, ಬಾಸಿಂಗ ಅಲಂಕರಿಸುವುದು ಹೀಗೆ ಅನೇಕ ಕ್ರಮಗಳನ್ನು ವಿವೇಚಿಸಲಾಗಿದೆ. ಸಂಕೀರ್ಣ ರೀತಿಯ ಚಿತ್ರವಿನ್ಯಾಸಗಳಲ್ಲಿ ಹಾಲಕ್ಕಿ ಜನಾಂಗದವರ ಹಸೆ ಚಿತ್ರಕಲೆ, ಸುಗ್ಗಿಕಾಲದ ಚಿತ್ರಕಲೆ, ದೇವರ ಜಗಲಿಯ ಮೇಲಿನ ಚಿತ್ರಕಲೆ, ಗದ್ದಿಗೆಯ ಮೇಲಿನ ಚಿತ್ರಕಲೆ, ತುಳಸಿಕಟ್ಟೆ ಮೇಲಿನ ಚಿತ್ರಕಲೆ ವಿನ್ಯಾಸಗಳನ್ನು ಪರಿಗಣಿಸಲಾಗಿದೆ. ಜನಪದರು ತಮ್ಮ ವೃತ್ತಿ ಬದುಕನ್ನೇ ಒಂದು ಕಲಾಕೃತಿಯಾಗಿ ರೂಪಿಸಿಕೊಳ್ಳುವಷ್ಟರ ಮಟ್ಟಿಗೆ ತಮ್ಮ ಕೆಲಸಗಳಲ್ಲಿ ಸೌಂದರ್ಯ ಪ್ರಜ್ಞೆಯನ್ನು ಮೈಗೂಡಿಸಿಕೊಂಡು ಬಂದವರಾಗಿದ್ದಾರೆ. ಜನಪದರ ಚಿತ್ರಕಲಾ ಪ್ರಕಾರದಲ್ಲಿ ವೃತ್ತಿಮೂಲ ಜನಪದ ಚಿತ್ರಕಲೆ ಎಂಬುದಾಗಿ ಪ್ರತ್ಯೇಕ ವರ್ಗೀಕರಣ ಮಾಡಿಕೊಳ್ಳಲಾಗಿದ್ದು, ಆರನೆಯ ಅಧ್ಯಾಯದಲ್ಲಿ ಅದರ ಬಗ್ಗೆ ವಿವೇಚಿಸಲಾಗಿದೆ.

ಕಲೆಯನ್ನೇ ವೃತ್ತಿಮಾಡಿಕೊಂಡ ಜನಾಂಗಗಳು ಹಲವು ಬಗೆಯ ಕಲಾತ್ಮಕ ವಸ್ತುಗಳನ್ನು ನಿರ್ಮಿಸುವ ಮೂಲಕ ಜನಪದ ಕಲಾಲೋಕವನ್ನು ಶ್ರೀಮಂತಗೊಳಿಸಿದ್ದಾರೆ. ಇಲ್ಲಿ ಕಲಘಟಗಿ ತೊಟ್ಟಿಲು ತಯಾರಿಕೆ, ಹುಬ್ಬಳ್ಳಿ ಸೀರೆಗಳಿಗೆ ಬಣ್ಣ ಹಾಕವುದು, ಗೋಕಾಕ ಕಟ್ಟಿಗೆಯ ಅಲಂಕಾರಿಕ ವಸ್ತುಗಳ ತಯಾರಿಕೆ, ಮುತ್ತಗಿಯ ದೊಡ್ಡಾಟ ವಸ್ತ್ರಾಲಂಕಾರ ವೃತ್ತಿ, ತೊನಸ್ಯಾಳ ದೇವರ

ಮೂರ್ತಿಗೆ ಬಣ್ಣ ಬರೆಯುವವರು, ತಾಳಿಕೋಟೆ ದುರಗ-ಮುರಗಿ ಮತ್ತು ಗಿಳಿಶಕುನ ಚಿತ್ರ ಬರೆಯುವವರು, ಕಿನ್ನಾಳ ಅಲಂಕರಣ ಉಪಕರಣಗಳ ತಯಾರಕರು ಮುಂತಾದವರನ್ನು ಅವರ ಕಲಾವೃತ್ತಿಯೊಂದಿಗೆ ಅಧ್ಯಯನಕ್ಕೊಳಪಡಿಸಲಾಗಿದೆ. ಇಲ್ಲಿ ಈ ಕಲಾಪ್ರಕಾರಗಳ ಕಲಾವಿದರು, ಅವರ ಕಲಾಕೃತಿ ರಚನಾ ವಿಧಾನ, ಪರಿಕರಗಳ ಶೈಲಿ, ತಂತ್ರಗಾರಿಕೆ, ಪ್ರಭಾವ, ಪ್ರೇರಣೆ ಮತ್ತು ಸ್ಥೂಲವಾದ ಐತಿಹಾಸಿಕ ಹಿನ್ನೆಲೆಯನ್ನು ಕೊಡಲು ಪ್ರಯತ್ನಿಸಲಾಗಿದೆ. ಏಳನೆಯ ಅಧ್ಯಾಯವು ಸಮಾರೋಪವಾಗಿದ್ದು, ಒಟ್ಟು ಅಧ್ಯಯನದ ಫಲಿತಗಳನ್ನು ಕೊಡಲಾಗಿದೆ. ಈ ಪ್ರಬಂಧದಲ್ಲಿ ಜನಪದ ಕಲೆಯ ಜೊತೆಗೆ ಒಟ್ಟು ಚಿತ್ರಕಲಾ ಕ್ಷೇತ್ರದ ಹಲವಾರು ಅಂಶಗಳು ಮೊದಲ ಬಾರಿಗೆ ವೈಜ್ಞಾನಿಕ ಹಿನ್ನೆಲೆಯಲ್ಲಿ ಬೆಳಕು ಕಂಡವು. ಜೊತೆಗೆ ಮುಂದಿನ ಇಂತಹ ಗಂಭೀರ ಅಧ್ಯಯನಗಳಿಗೆ ಮಾರ್ಗದರ್ಶಿಯಾಗಿ, ಅಧ್ಯಯನ ವಿಧಾನಗಳನ್ನು ರೂಪಿಸಿಕೊಳ್ಳುವಲ್ಲಿ ಸಹಕಾರಿಯಾಗಿದೆ. ಜನಪದ ಹಿನ್ನೆಲೆಯಲ್ಲಿ ಕರ್ನಾಟಕದ ಹಲವಾರು ಕಲಾಪ್ರಕಾರಗಳು ಇಲ್ಲಿ ಸ್ಥೂಲರೂಪದಲ್ಲಿ ಹೇಳಲ್ಪಟ್ಟಿದ್ದು, ಕರ್ನಾಟಕದ ಬಹುಮಟ್ಟಿನ ಕಲಾಪ್ರಕಾರಗಳ ಅಧ್ಯಯನಕ್ಕೆ ಆಕಾರ ಗ್ರಂಥವಾಗಿಯೂ ಇದು ರೂಪುಗೊಂಡಿದೆ, ಮೌಲಿಕವಾದ ಸ್ಥಾನ ಪಡೆದುಕೊಂಡಿದೆ.

೨. ಚಿತ್ರಾಕ್ಷಿ

ಧಾರವಾಡದ ಸ್ಕೂಲ್ ಆಫ್ ಆರ್ಟ್ ಇದರ ವಜ್ರ ಮಹೋತ್ಸವದ ಸವಿನೆನಪಿಗಾಗಿ 'ಚಿತ್ರಾಕ್ಷಿ' ಎಂಬ ಸ್ಮರಣ ಸಂಚಿಕೆಯನ್ನು ಹೊರತರಲಾಗಿದೆ. ೧೯೯೫ರಲ್ಲಿ ಪ್ರಕಟವಾದ ಈ ಗ್ರಂಥವನ್ನು ಡಾ. ಎಸ್. ಸಿ ಪಾಟೀಲರು ಸಂಪಾದನೆ ಮಾಡಿದ್ದಾರೆ.[೫] ಈ ಸ್ಮರಣ ಸಂಚಿಕೆಯಲ್ಲಿ ಕಲಾಚಾರ್ಯ ಶ್ರೀ ದಾನಪ್ಪ ವೀರಭದ್ರಪ್ಪ ಹಾಲಭಾವಿಯವರು ಕಟ್ಟಿದ ಕಲಾಮಂದಿರ, ಮಧುರ ನೆನಹುಗಳು, ಹಿರಿಯ ಕಲಾವಿದ ದಾನಪ್ಪ ಹಾಲಭಾವಿ, ಕಲಾಪ್ರವಾದಿ ಹಾಲಭಾವಿ ಶ್ರೀ ದಾನಪ್ಪಾ, ಕಲಾವಿದನೊಂದಿಗೆ ಕ್ಷಣಕಾಲ, ದಾನಪ್ಪ ವೀರಭದ್ರಪ್ಪ ಹಾಲಭಾವಿ, ಕನಸುಗಾರ, ಕಲಾಗುರು ದಾನಪ್ಪಾ ಹಾಲಭಾವಿ, ಅಪ್ರತಿಮ ಕಲಾಕಾರ ಶ್ರೀ. ಹಾಲಭಾವಿಯವರು, ಸಂತೃಪ್ತ ಕಲಾವಿದ ಶ್ರೀ ಡಿ.ವಿ. ಹಾಲಭಾವಿ, ಶ್ರೀ ಹಾಲಭಾವಿಷಯವರ ಬದುಕು-ಕಲಾಸಾಧನೆ ಕೆಲವು ವಿಚಾರಗಳು, ಹಿರಿಯ ಕಲಾವಿದ ಶ್ರೀ. ಡಿ.ವಿ. ಹಾಲಭಾವಿ ಎಂಬ ಲೇಖನಗಳಲ್ಲದೇ ಕಲೆಯ ಕುರಿತಾಗಿರುವ ಭಾರತೀಯ ಲಲಿತಕಲೆಗಳ ಪರಂಪರೆ ದಕ್ಷಿಣ ಕರ್ನಾಟಕದಲ್ಲಿ ಕಲೆ, ಚಿತ್ರಕಲೆಯಲ್ಲಿ ವಾಸ್ತವಿಕತೆ ಮತ್ತು ಅನುಕರಣ, ಪ್ರೇಕ್ಷಕ, ಕಲಾವಿದ ಮತ್ತು ವಿಮರ್ಶಕ, ಹುಟ್ಟು ಕಲಾವಿದ ಹಾಗೂ ಪರಿಸರದಲ್ಲಿ ಹುಟ್ಟುವ ಕಲಾವಿದ, ಪ್ರಾಚೀನ ಭಾರತದ ಭಿತ್ತಿಚಿತ್ರಗಳು, ಕಲೆ ಮತ್ತು ಔದ್ಯೋಗಿಕರಣ, ಸೋಂದಾದಲ್ಲೊಂದು ಪ್ರಾಗ್ ಚಾರಿತ್ರಿಕ ರೇಖಾಚಿತ್ರ, ಯಥಾದರ್ಶನ, ಬೋಧನೆಯಲ್ಲಿ ಕಲಾಶಿಕ್ಷಣದ ಮಹತ್ವ, ಕಲಾಶಿಬಿರಗಳು-ಒಂದು ಟಿಪ್ಪಣಿ, ವಿಶಿಷ್ಟ ವರ್ಣಚಿತ್ರಕಲೆಯ ಆಗರ ಬಾದಾಮಿ ಎನ್ನುವ ಲೇಖನಗಳಿವೆ. His Masterpieces, Art Gallery, A Non Artist look at Art,

೦೫. ಡಾ. ಎಸ್. ಸಿ. ಪಾಟೀಲ (ಸಂ.) : ಚಿತ್ರಾಕ್ಷಿ, ಸ್ಕೂಲ್ ಆಫ್ ಆರ್ಟ್ ವಜ್ರಮಹೋತ್ಸವ ಸಮಿತಿ. ಧಾರವಾಡ. ೧೯೯೫

[illegible]

Meriteal Artist Halabhavi, My lifes Mission -Art Education ಎನ್ನುವಂತಹ ಇಂಗ್ಲೀಷ್ ಲೇಖನಗಳಿವೆ. ಈ ಸಂಚಿಕೆಯಲ್ಲಿರುವ ಲೇಖನಗಳು ಕಲಾಸಂಸ್ಥೆಯನ್ನು ಕಟ್ಟಿ ಬೆಳೆಸಿದ ವ್ಯಕ್ತಿಯ ಕಲಾಪ್ರೇಮ, ಆಸಕ್ತಿ–ಅಭಿರುಚಿಗಳನ್ನು ತಿಳಿಸಿಕೊಡುವುದರ ಜೊತೆಗೆ ಅವರ ಕಲಾಬದುಕು ಮತ್ತು ಕಲಾಕೃತಿಗಳ ಬಗ್ಗೆಯೂ ತಿಳಿಸಿಕೊಡುತ್ತವೆ. ಹಾಲಭಾವಿಯರ ಕಲಾಕೃತಿ ರಚನೆಯ ವಿಧಾನ, ಬಣ್ಣದ ಬಳಕೆ, ದೃಶ್ಯ ಸಂಯೋಜನೆ, ರೇಖಾಲಾಣ್ಯ, ವಿಷಯದ ಆಯ್ಕೆ ಮುಂತಾದವುಗಳ ಬಗ್ಗೆ ಸ್ಥೂಲ ನೋಟ ಬೀರುವ ಲೇಖನಗಳು ಇದರಲ್ಲಿವೆ. ಇನ್ನೊಂದು ಭಾಗದಲ್ಲಿರುವ ಲೇಖನಗಳು ಕಲೆಯ ವಿವಿಧ ಆಯಾಮಗಳನ್ನು ಪರಿಚಯಿಸುತ್ತವೆ.

ಪ್ರಾಗಿತಿಹಾಸ ಚಿತ್ರಕಲೆ, ಭಿತ್ತಿಚಿತ್ರಕಲೆ, ಔದ್ಯೋಗೀಕರಣದಲ್ಲಿ ಕಲೆಯ ಪಾತ್ರ, ಶಿಕ್ಷಣದಲ್ಲಿ ಕಲೆಯ ಮಹತ್ವ ಮುಂತಾದ ಅಂಶಗಳ ಕುರಿತು ಕೆಲವು ಲೇಖನಗಳು ಬೆಳಕು ಚೆಲ್ಲಿವೆ. ಬರವಣಿಗೆ, ಭಾಷಾ ಪ್ರೌಢಿಮೆ, ಶಬ್ದಸಂಗ್ರಹ ಇಂತಹ ಸಾಹಿತ್ಯಕ ವಿಷಯಗಳ ಹಿನ್ನೆಲೆಯಲ್ಲಿ ಇಲ್ಲಿರುವ ಎಲ್ಲ ಲೇಖನಗಳು ಪ್ರೌಢವಾಗಿಲ್ಲ. ಕೆಲವು ವಿದ್ವಾಂಸರ ಲೇಖನಗಳು ಮೌಲಿಕವಾಗಿದ್ದರೆ ಇನ್ನುಳಿದವು ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸಪ್ಪೆಯಾಗಿವೆ. ಆದರೂ ಕಲಾ ವಿಷಯವಾಗಿರುವ ಮಾಹಿತಿ ಮೂಲಕ ದೃಷ್ಟಿಯಿಂದ ಇದೊಂದು ಗಮನಾರ್ಹವ ಆದ ಸ್ಮರಣ ಸಂಚಿಕೆ ಎಂದು ಹೇಳಬಹುದು.

೩. ಕಲಾವಿದ ಎಂ.ಎ. ಚೆಟ್ಟಿಯವರ ಜೀವನ ಮತ್ತು ಕಲಾಕೃತಿಗಳು

ಉತ್ತರ ಕರ್ನಾಟಕದ ಭಾಗದ ಶ್ರೇಷ್ಠ ಕಲಾವಿದರಲ್ಲಿ ಒಬ್ಬರಾದ ಎಂ.ಎ. ಚೆಟ್ಟಿಯವರ ಜೀವನ ಮತ್ತು ಕಲಾಕೃತಿಗಳ ಕುರಿತು ಡಾ. ಲಕ್ಷ್ಮೀದೇವಿ ಗವಾಯಿ ಅವರು ಡಾ. ಎಸ್. ಸಿ. ಪಾಟೀಲ ಅವರ ಮಾರ್ಗದರ್ಶನದಲ್ಲಿ ಅಧ್ಯಯನ ಕೈಗೊಂಡು ೨೦೦೨ರಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ ಪಿಹೆಚ್.ಡಿ ಪದವಿ ಪಡೆದುಕೊಂಡಿದ್ದಾರೆ.[೬] ಈ ಪ್ರಬಂಧವು ನಾಗನೂರು ರುದ್ರಾಕ್ಷಿಮಠದಿಂದ ಪುಸ್ತಕವಾಗಿ ಪ್ರಕಟಣೆಯೂ ಆಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ ಮತ್ತು ಮಹತ್ವಗಳನ್ನು ತಿಳಿಸಿದ್ದಾರೆ. ಜೊತೆಗೆ ತಮ್ಮ ಅಧ್ಯಯನದ ಸ್ವರೂಪ ಹಾಗೂ ವಿಧಾನಗಳನ್ನು ಹೇಳಿದ್ದಾರೆ. ಎರಡನೆಯ ಅಧ್ಯಾಯದಲ್ಲಿ ಎಂ.ಎ. ಚೆಟ್ಟಿಯವರ ಬಾಲ್ಯಜೀವನದ ಜೊತೆಗೆ ಅನೇಕ ಸಂಗತಿಗಳನ್ನು ತಿಳಿಸಲಾಗಿದೆ. ಗದುಗಿನ ಪೌರಾಣಿಕ, ಐತಿಹಾಸಿಕ ಮಹತ್ವ, ಕಲಾಹಿನ್ನೆಲೆ, ಚೆಟ್ಟಿಯವರ ಕೌಟುಂಬಿಕ ಹಿನ್ನೆಲೆ ಇವುಗಳನ್ನು ತಿಳಿಸಲಾಗಿದೆ. ನಂತರ ಚೆಟ್ಟಿಯವರ ಜನನ, ಬಾಲ್ಯ, ಪ್ರಾಥಮಿಕ ಶಿಕ್ಷಣ, ಮಾಧ್ಯಮಿಕ ಶಿಕ್ಷಣ, ಈ ಸಂದರ್ಭಗಳಲ್ಲಿದ್ದ ಸ್ನೇಹಿತರು, ಗುರುವೃಂದ, ಅವರ ಪ್ರಭಾವಗಳು, ಕಲಾವಿದರಾಗಿ ರೂಪುಗೊಳ್ಳಲು ಕಾರಣರಾದ ವ್ಯಕ್ತಿಗಳು, ಕಲಾಸಕ್ತಿಗೆ ಪ್ರಭಾವ ಬೀರಿದ ಅಂಶಗಳು, ಅವರ

---

೦೬. ಡಾ. ಲಕ್ಷ್ಮೀ ಗವಾಯಿ : ಕಲಾವಿದ ಎಂ. ಎ. ಚೆಟ್ಟಿಯವರ ಜೀವನ ಮತ್ತು ಕಲಾಕೃತಿಗಳು, ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ.

ಚಿಕ್ಕಪ್ಪನವರ ಆಶ್ರಯ, ಪರಿಶುದ್ಧ ಕಾಯಕದ ಬದುಕು, ಕೌಟುಂಬಿಕ ಜೀವನ, ಅವರ ಬಾಲ್ಯ ಜೀವನದ ಪ್ರಮುಖ ಘಟನೆಗಳನ್ನು ಈ ಅಧ್ಯಾಯದಲ್ಲಿ ಕೊಡಲಾಗಿದೆ.

ಕಲಾವಿದ ಎಂ.ಎ. ಚೆಟ್ಟಿಯವರು ಕಲಾಶಿಕ್ಷಣ ಪಡೆದುಕೊಳ್ಳಲು ಮುಂಬೈ ಜೆ.ಜೆ. ಕಲಾಶಾಲೆಗೆ ಸೇರಿಕೊಂಡಿದ್ದು, ಅಲ್ಲಿನ ವಿವರಗಳ ಬಗ್ಗೆ ಮೂರನೆಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಮುಂಬೈಯ ಜೆ.ಜೆ. ಕಲಾಶಾಲೆಯಿಂದ ಡಿಪ್ಲೊಮಾ ಮುಗಿಸಿಕೊಂಡು ಸೊಲ್ಲಾಪುರಕ್ಕೆ ಬಂದು ನೆಲೆಸಿದರು. ಚೆಟ್ಟಿಯವರು ಅಲ್ಲಿಯೇ ಕಲಾಕೃತಿರಚನೆ ಮಾಡತೊಡಗಿದರು. ಪುರಾಣ ಸಂಬಂಧಿ ಚಿತ್ರವನ್ನು ಮೊದಲಬಾರಿಗೆ ರಚಿಸಿದ್ದು, ತೈಲವರ್ಣ ಚಿತ್ರರಚನೆ ಮಾಡಿ ಅಖಿಲ ಭಾರತ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿ ಮೊದಲ ಸ್ಥಾನ ಗಳಿಸಿಕೊಂಡಿದ್ದು ಇಲ್ಲಿದ್ದಾಗಲೆ ಎನ್ನಬಹುದು. ಕೆಲವು ದಿನಗಳ ಬಳಿಕ ಗದಗಿಗೆ ಬಂದ ಚೆಟ್ಟಿಯವರು ಇಲ್ಲಿಯ ವಿಜಯ ಕಲಾಮಂದಿರ ಸಂಸ್ಥೆಯಲ್ಲಿ ೨೫ ವರ್ಷಗಳ ಕಾಲ ಶಿಕ್ಷಕರಾಗಿ, ಉಪಪ್ರಾಚಾರ್ಯರಾಗಿ ವಿದ್ಯಾರ್ಥಿಗಳ ಪ್ರೀತಿಯ ಗುರುಗಳಾಗಿ ಕಲಿಸುವ ವಿಷಯದಲ್ಲಿ ಪ್ರಾಮಾಣಿಕ ಮತ್ತು ಶ್ರದ್ಧೆಯುಳ್ಳವರಾಗಿದ್ದರು. ಹೀಗೆ ವೃತ್ತಿಬದುಕನ್ನು ಕಟ್ಟಿಕೊಡುವ ಪ್ರಯತ್ನವನ್ನು ನಾಲ್ಕನೆಯ ಅಧ್ಯಾಯದಲ್ಲಿ ಮಾಡಲಾಗಿದೆ.

ಐದನೆಯ ಅಧ್ಯಾಯದಲ್ಲಿ ಭಾವಚಿತ್ರ, ವ್ಯಕ್ತಿಚಿತ್ರ ಮುಂತಾದ ಎಲ್ಲಾ ಚಿತ್ರಕಲಾ ಪ್ರಕಾರ ಮತ್ತು ಚಿತ್ರಕಲಾಕೃತಿಗಳನ್ನು ಮಾಧ್ಯಮಗಳಿಗೆ ಅನುಸಾರವಾಗಿ ಪೆನ್ಸಿಲ್, ಚಾರ್ಕೋಲ್, ಇಂಕ್ ಮತ್ತು ವರ್ಣಚಿತ್ರಗಳು, ದೈನಂದಿನ ಬದುಕಿನ ಚಿತ್ರ ಮುಂತಾದ ವಿಷಯದ ತೀವ್ರತೆ, ಚಲನೆ, ಜೀವಂತಿಕೆಗಳ ಜೊತೆಗೆ ಲಯ, ಆನಂದ, ಅನುಕಂಪ, ವಿಸ್ಮಯ, ಸಂಚಾರ, ಜೀವನೋಲ್ಲಾಸ, ಭಯ, ಕಾತರ, ಮುಗ್ಧತೆ, ಇಂತಹ ಭಾವನೆಗಳು ಸಂದರ್ಭಾನುಸಾರ ಗೋಚರಿಸುವಂತೆ ಚಿತ್ರಗಳನ್ನು ಅಧ್ಯಯನದಲ್ಲಿ ವಿವೇಚಿಸಲಾಗಿದೆ.

ವರ್ಣಚಿತ್ರಗಳಲ್ಲಿ ಇವರು ಹೆಚ್ಚಾಗಿ ಚಿತ್ರಿಸಿದ ಕೃತಿಗಳೆಂದರೆ, ಶಿವಶರಣರು ಮತ್ತು ಸಂತರು, ಮಠದ ಸ್ವಾಮಿಗಳಿಗೆ ಸಂಬಂಧಿಸಿದ ಚಿತ್ರಗಳಾಗಿವೆ. ಇವುಗಳ ಕುರಿತು ಆರನೆಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಇವರ ಶಿವಶರಣರ ಚಿತ್ರಗಳು ಆಕರ್ಷಕವಾಗಿದ್ದು, ಹೆಚ್ಚು ಜನಮನ್ನಣೆ ಗಳಿಸಿವೆ. ಕರ್ನಾಟಕದ ಅದರಲ್ಲೂ ಉತ್ತರ ಕರ್ನಾಟಕದ ಪ್ರಮುಖ ವೀರಶೈವ ಮಠಗಳಲ್ಲಿ ಇವರು ರಚಿಸಿದ ವರ್ಣಚಿತ್ರಗಳು ಕಂಡುಬರುತ್ತವೆ. ಚೆಟ್ಟಿಯವರ ಚಿತ್ರರಚನಾ ವಿಧಾನ, ಬಳಸುವ ಬಣ್ಣಗಳು, ಅವರ ಚಿತ್ರಶೈಲಿ, ಪ್ರಭಾವ, ಪ್ರೇರಣೆ, ಚಿತ್ರದ ವಸ್ತುವಿಷಯಗಳು ಹೀಗೆ ಹಲವಾರು ಸಂಗತಿಗಳು ಏಳನೆಯ ಅಧ್ಯಾಯದಲ್ಲಿ ಅನಾವರಣಗೊಂಡಿವೆ. ಚೆಟ್ಟಿಯವರ ಕಾಲದಲ್ಲಿ ಜನರು ನೈಜ ಚಿತ್ರಗಳನ್ನು ಹೆಚ್ಚು ಇಷ್ಟಪಡುತ್ತಿದ್ದರಿಂದ ಆ ಬಗೆಯ ಚಿತ್ರಗಳನ್ನೇ ಇವರು ಚಿತ್ರಿಸುತ್ತಿದ್ದರು.

ಸಮಕಾಲೀನ ಕಲಾವಿದರು, ಕಲಾಗುರುಗಳ ಪ್ರಭಾವ ಇವರಿಗೆ ಆಗಿದ್ದರಿಂದ ಅವರಂತೆ ನೈಜ ಶೈಲಿಯ ಚಿತ್ರರಚನೆಯಲ್ಲಿ ಸಿದ್ಧಹಸ್ತರಾಗಿದ್ದರು. ವರ್ಣಬಳಕೆಯಲ್ಲಿ ಇವರು ಪ್ರಖರ ವರ್ಣಗಳನ್ನು ಬಳಸಿದರೂ ಅದಕ್ಕೆ ಪೂರಕವಾದ ಸೌಮ್ಯವರ್ಣವನ್ನು ಪಕ್ಕದಲ್ಲಿರಿಸಿ ಇಡೀ

[illegible]

ಕಲಾಕೃತಿ ಕಣ್ಣಿಗೆ ಹಿತವಾಗುವಂತೆ ಮಾಡುತ್ತಿದ್ದರು. ವ್ಯಕ್ತಿಚಿತ್ರ ಮತ್ತು ಭಾವಚಿತ್ರಗಳ ರಚನೆಯಲ್ಲಿ ಇವರ ಚಿತ್ರಣವಿಧಾನವನ್ನು ಇಲ್ಲಿ ವಿವೇಚಿಸಲಾಗಿದೆ. ಇದು ಭಾರತೀಯ ಪದ್ಧತಿ ಎಂದು ಪ್ರಬಂಧಕರು ಹೇಳುತ್ತರಾದರೂ ಅದು ಸರಿ ಎಂದು ಕಾಣದು. ಇವರು ಅನುಸರಿಸುತ್ತಿದ್ದ ಚಿತ್ರಣಪದ್ಧತಿಯು 'ವಿಕ್ಟೋರಿಯನ್' ಕಲಾಪದ್ಧತಿಯಾಗಿದ್ದು, ಪಾಶ್ಚಾತ್ಯ ಶೈಲಿಯ ವಿಧಾನ ಇದಾಗಿದೆ. ಇದರ ಜೊತೆಗೆ ಇವರ ಕಲಾಕೃತಿ ರಚನೆಯ ಮೇಲೆ ಯಾವ ಪ್ರಭಾವಗಳಾಗಿವೆ, ಕಾಲಕಾಲಕ್ಕೆ ಕಲಾಬದುಕಿನಲ್ಲಿ ಉಂಟಾದ ಬದಲಾವಣೆಗಳು, ಕಲಾಕೃತಿ ರಚನೆಯಲ್ಲಾದ ಮಾರ್ಪಾಟುಗಳು, ಕಲಾಶಿಕ್ಷಕ ವೃತ್ತಿಯಿಂದ ವಿಶ್ರಾಂತಿ ಹೊಂದಿದ ನಂತರ ಹೇಗೆ ಕಲಾಬದುಕನ್ನು ನಿರ್ವಹಿಸುತ್ತಾ ತಮ್ಮ ಕೊನೆ ಸಮಯದವರೆಗೂ ಕೃತಿರಚನೆ ಮಾಡಿದರು ಎಂಬಂತಹ ಸಂಗತಿಗಳು ಇಲ್ಲಿ ಹೇಳಲ್ಪಟ್ಟಿವೆ. ಎಂಟನೆಯ ಅಧ್ಯಾಯದಲ್ಲಿ ಒಟ್ಟು ಅಧ್ಯಯನದ ಫಲಿತಗಳನ್ನು ಸಮೀಕ್ಷಿಸಲಾಗಿದೆ.

೪. ಕಲಾವಿದ ಆರ್. ಎಂ. ಹಡಪದ : ಒಂದು ಅಧ್ಯಯನ

ಉತ್ತರ ಕರ್ನಾಟಕದ ಐತಿಹಾಸಿಕ ಮಹತ್ವ ಪಡೆದುಕೊಂಡ ಚಾಲುಕ್ಯರ ರಾಜಧಾನಿಯಾಗಿದ್ದ ಬಾದಾಮಿಯ ನೆಲದಿಂದ ಬೆಂಗಳೂರುನಗರಕ್ಕೆ ವಲಸೆ ಹೋಗಿ, ಅಲ್ಲಿ ಕಲಾಶಾಲೆಯೊಂದನ್ನು ಆರಂಭಿಸಿ ಯಶಸ್ವಿಯಾಗಿ ನಡೆಸುವ ಮೂಲಕ ತಮ್ಮ ಕಲಾಬದುಕನ್ನು ರೂಪಿಸಿಕೊಂಡ ಆರ್. ಎಂ. ಹಡಪದರ ಕುರಿತು ಸಿದ್ಧಲಿಂಗಸ್ವಾಮಿ ಹಿರೇಮಠ ಅವರು ಪಿಹೆಚ್.ಡಿ ಅಧ್ಯಯನವನ್ನು ಮಾಡಿದ್ದಾರೆ.[೭] ಈ ಪ್ರಬಂಧವು ಒಟ್ಟು ಒಂಭತ್ತು ಅಧ್ಯಾಯಗಳಲ್ಲಿ ವಿಂಗಡಣೆಗೊಂಡು ವಿಶ್ಲೇಷಿಸಲ್ಪಟ್ಟಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ ಮತ್ತು ಅವಶ್ಯಕತೆಗಳನ್ನು ಕುರಿತು ಹೇಳಿದೆ. ಎರಡನೆಯ ಅಧ್ಯಾಯದಲ್ಲಿ ಬಾದಾಮಿಯ ಪರಿಸರ ಮತ್ತು ಹಡಪದರ ಬಾಲ್ಯಜೀವನದ ಕುರಿತು ಹೇಳಲಾಗಿದೆ. ಹಡಪದರ ಜನ್ಮಸ್ಥಳವಾದ ಬಾದಾಮಿಯ ಸಾಂಸ್ಕೃತಿಕ ಮತ್ತು ಐತಿಹಾಸಿಕ ಮಹತ್ವ, ಇವರ ಕೌಟುಂಬಿಕ ಹಿನ್ನೆಲೆ ಮುಂತಾದವುಗಳನ್ನು ಹೇಳಿ ನಂತರದಲ್ಲಿ ಬಾಲ್ಯಜೀವನ, ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಹಂತದಲ್ಲಿ ಕಲೆಯ ಕಡೆಗೆ ಹರಿದ ಅವರ ಮನಸ್ಸು, ಬಾಲ್ಯದ ದಿನಗಳಲ್ಲಿ ಇವರು ಕೈಗೊಳ್ಳುತ್ತಿದ್ದ ಕಲಾಚಟುವಟಿಕೆಗಳು, ವಿವಿಧ ಸಂದರ್ಭಗಳಲ್ಲಿ ಮನೆಯ ಮುಂದೆ ಹಾಕುತ್ತಿದ್ದ ಕಲಾತ್ಮಕ ರಂಗವಲ್ಲಿಗಳು ಹಡಪದರ ಕಲಾರಚನೆಗಳಿಗೆ ಪ್ರೇರಣೆಯಾದವು. ಇವುಗಳಲ್ಲದೇ ಅವರ ಬಾಲ್ಯದ ದಿನಗಳಲ್ಲಿ ಬಾದಾಮಿಯ ಗುಹಾ ದೇವಾಲಯಗಳು, ಕಲ್ಲು-ಬೆಟ್ಟಗಳಲ್ಲಿ ಗಿರಿ-ಕಂದರಗಳಲ್ಲಿ ತಿರುಗಾಡಿದ ಅನುಭವಗಳು, ಮುಂದೆ, ಅವರ ಕಲಾಬದುಕಿನಲ್ಲಿ ಇವು ಅವಿಭಾಜ್ಯ ಅಂಗಗಳಾಗಿ ರೂಪುಗೊಂಡ ಬಗೆ, ಮನೆಯಲ್ಲಿ ಕುಟುಂಬವರ್ಗದವರ ನೀರಸ ಪ್ರತಿಕ್ರಿಯೆಗಳ ನಡುವೆಯೂ ಕಲಾಭಿರುಚಿಯನ್ನು ಬೆಳೆಸಿಕೊಂಡ ಅಂಶಗಳು

೦೭. ಡಾ. ಸಿದ್ಧಲಿಂಗಯ್ಯಸ್ವಾಮಿ ಹಿರೇಮಠ : ಕಲಾವಿದ ಆರ್. ಎಂ. ಹಡಪದ : ಒಂದು ಅಧ್ಯಯನ, ಪ್ರಕಟಿತ ಪಿಹೆಚ್.ಡಿ. ಮಹಾಪ್ರಬಂಧ, ಕ.ವಿ.ವಿ. ಹಂಪಿ. ೨೦೦೩

[illegible]

ಕುತೂಹಲಕಾರಿಯಾಗಿದ್ದು, ಅವೆಲ್ಲವುಗಳನ್ನು ಈ ಎರಡನೆಯ ಅಧ್ಯಾಯದಲ್ಲಿ ಬಿಂಬಿಸಲಾಗಿದೆ. ಮೂರನೆಯ ಅಧ್ಯಾಯದಲ್ಲಿ ೫೦ರ ದಶಕದ ನಂತರವೂ ಕರ್ನಾಟಕದಲ್ಲಿ ಸಾಂಪ್ರದಾಯಿಕ ಕಲಾರಚನೆಗಳು ತೀವ್ರವಾಗಿದ್ದ ಸಂದರ್ಭದಲ್ಲಿ, ೬೦ರ ದಶಕದ ಆದಿಯಲ್ಲಿ ಹಡಪದರು ಬೆಂಗಳೂರಿಗೆ ಬಂದ ನೆಲೆ ನಿಂತರು. ಅಕಾಡೆಮಿಕ್ ಶೈಲಿಯಲ್ಲಿ ಕಲಾಶಿಕ್ಷಣ ಪಡೆದ ಹಡಪದರು ವಿದ್ಯಾರ್ಥಿಗಳಿಗೂ ಅದನ್ನೇ ಹೇಳಿಕೊಡತೊಡಗಿದರು. ಇವರು ಸ್ಥಾಪಿಸಿದ ಕೆನ್ ಕಲಾಶಾಲೆಯು ಅಭಿವೃದ್ಧಿ ಪಥದಲ್ಲಿ ಸಾಗುತ್ತ ತನ್ನ ಬೌದ್ಧಿಕ ವರ್ಚಸ್ಸನ್ನು ವೃದ್ಧಿಸಿಕೊಂಡಿತು. ಇಲ್ಲಿ ಕಲಿತ ಅನೇಕರು ಭಾರತದ ಬೇರೆ ಬೇರೆ ಭಾಗಗಳಲ್ಲದೇ ವಿದೇಶಗಳಿಗೂ ಹೋಗಿ ಹೆಚ್ಚಿನ ಕಲಾಶಿಕ್ಷಣ ಪಡೆದು ಬಂದರು. ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿರುವ ಈ ಕಲಾಶಾಲೆಯ ಪ್ರಸಿದ್ಧಿಯ ಹಿಂದೆ ಹಡಪದರ ಕಲಾಬದುಕಿನ ಪ್ರಾಮಾಣಿಕ ಪ್ರಯತ್ನ ಅಡಗಿದೆ ಎಂದರೂ ತಪ್ಪಿಲ್ಲ. ಇಂತಹ ಅಂಶಗಳು ಈ ಅಧ್ಯಾಯದಲ್ಲಿ ಚರ್ಚಿಸಲ್ಪಟ್ಟಿವೆ.

ಹಡಪದರ ರೇಖಾಚಿತ್ರಗಳು ಪರಂಪರೆ ಮತ್ತು ನವ್ಯತೆ ಬೆರೆತ ಸಂವೃದ್ಧ ಪರಿಣಾಮಗಳಿಂದ ಕೂಡಿವೆ. ಇವರ ರೇಖಾಚಿತ್ರಗಳಲ್ಲಿ ನವ್ಯಶೈಲಿಯ ಚಿತ್ರಗಳು, ಸಾಂಪ್ರದಾಯಿಕ ಚಿತ್ರಗಳು, ಅಮೂರ್ತ ಶೈಲಿಯ ಆಕಾರಗಳು ಹೀಗೆ ವೈವಿಧ್ಯ ಇದೆ. ಇವರ ನವ್ಯಶೈಲಿಯ ರೇಖಾಚಿತ್ರಗಳಲ್ಲಿ ಸಾಮಾಜಿಕ ಬದ್ಧತೆ, ಎಡಪಂಥೀಯ ಧೋರಣೆಯನ್ನು ಬಿಂಬಿಸಿದರೆ, ಸಾಂಪ್ರದಾಯಿಕ ರೇಖಾಚಿತ್ರಗಳು ಪರಂಪರೆ ಬಗೆಗಿನ ಕಾಳಜಿ, ಅಲ್ಲಿರುವ ಮೌಢ್ಯಗಳ ಬಗೆಗಿನ ತಿರಸ್ಕಾರ, ಸಮುದಾಯ ಬದುಕಿನ ಮಹತ್ವಗಳನ್ನು ಸಂಕೇತಿಸುತ್ತವೆ. ಇದಲ್ಲದೇ ಶೃಂಗಾರ, ಅಲಂಕಾರ, ಆಧುನಿಕ ಜೀವನ, ರಾಜಕೀಯ ವಿಡಂಬನೆ ಮುಂತಾದ ವಸ್ತು–ವಿಷಯಗಳನ್ನಾಧರಿಸಿದ ಅಂಶಗಳನ್ನು ಹಡಪದರ ರೇಖಾಚಿತ್ರಗಳು ವಿವಿಧ ಮಾಧ್ಯಮಗಳಲ್ಲಿ ರಚನೆಯಾಗಿರುವುದನ್ನು ನಾಲ್ಕನೆಯ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಹಡಪದರ ವರ್ಣಚಿತ್ರಗಳನ್ನು ಐದನೆಯ ಅಧ್ಯಾಯದಲ್ಲಿ ವಿವೇಚಿಸಲಾಗಿದೆ. ಹಡಪದರ ವರ್ಣಕೃತಿಗಳನ್ನು ಅಧ್ಯಯನದ ಅನುಕೂಲತೆಗಾಗಿ ಜಲವರ್ಣ, ಪೋಸ್ಟರ್ ವರ್ಣ, ಅಕ್ರಲಿಕ್ ವರ್ಣ, ಹುಡಿವರ್ಣ, ಪೇಸ್ಟಲ್ ವರ್ಣ, ಕಲರ್ ಪೆನ್ಸಿಲ್, ಬಣ್ಣದ ಇಂಕುಗಳು, ಬ್ಲೋಟಾರ್ಚ್ ತಂತ್ರದ ಚಿತ್ರಗಳು, ಗಾಜಿನ ಚಿತ್ರಗಳು, ಭಿತ್ತಿಚಿತ್ರ ಮತ್ತು ಶಿಲ್ಪ ಮಾಧ್ಯಮಗಳಿಂದ ಚಿತ್ರಿಸಿದ ಇವರು ಸಂಯೋಜನಾ ಚಿತ್ರಣ, ಸ್ಥಿರ ಚಿತ್ರಣ, ನಿಸರ್ಗ ಚಿತ್ರಣ, ವಸ್ತುಚಿತ್ರಣ, ವ್ಯಕ್ತಿ ಚಿತ್ರಣ, ಭಾವಚಿತ್ರಣಗಳಲ್ಲದೇ ನವ್ಯಶೈಲಿಯ ಕೃತಿಗಳನ್ನು ಚಿತ್ರಿಸಿದ್ದಾರೆ. ಇವರ ನವ್ಯಶೈಲಿಯ ವರ್ಣಚಿತ್ರಗಳು ಪ್ರಯೋಗಶೀಲತೆಗೆ ತೆರೆದುಕೊಂಡ ವಿಶಿಷ್ಟ ಶೈಲಿಯನ್ನು ಪ್ರತಿಬಿಂಬಿಸುತ್ತವೆ. ವರ್ಣ ಮಾಧ್ಯಮವರು ವಿಂಗಡನೆಯಂತೆಯೇ ಪ್ರತಿಯೊಂದು ವಿಂಗಡನೆಯಲ್ಲಿ ಸಂಯೋಜನೆ, ಭಾವಚಿತ್ರ, ವ್ಯಕ್ತಿಚಿತ್ರ, ಪ್ರಕೃತಿ ಚಿತ್ರಗಳನ್ನು ಪ್ರತ್ಯೇಕವಾಗಿ ಮತ್ತೆ ವರ್ಗೀಕರಿಸಿಕೊಂಡು ಪ್ರಸ್ತುತ ಅಧ್ಯಾಯದಲ್ಲಿ ಅಧ್ಯಯನ ನಡೆಸಲಾಗಿದೆ. ಹಡಪದರು ವರ್ಣಚಿತ್ರಗಳಲ್ಲದೇ ಗ್ರಾಫಿಕ್ ಕಲಾಕೃತಿಗಳನ್ನು ರಚನೆ ಮಾಡಿದ್ದು, ಅವುಗಳ ಬಗೆಗೆ ಆರನೆಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಲಿಥೋಗ್ರಾಫಿ, ಲಿನೋಕಟ್, ಎಚ್ಚಿಂಗ್, ಮೋನೋಪ್ರಿಂಟ್ ಗ್ರಾಫಿಕ್ ಮಾಧ್ಯಮದಲ್ಲಿ ಕೃತಿಗಳನ್ನು ಹೆಚ್ಚಾಗಿ ರಚನೆ ಮಾಡಿದ ಹಡಪದರು ಅವುಗಳಲ್ಲಿ ಪ್ರಯೋಗಶೀಲತೆಯನ್ನೇ ಮೆರೆಸುತ್ತಾರೆ. ಒಂದಕ್ಕೊಂದು ಕೃತಿಗಳಲ್ಲೂ ವಸ್ತುವಿನ ಭಿನ್ನತೆಯಿದೆ. ವಿಷಯಗಳಲ್ಲಿ ಕೂಡ ರಮಣೀಯವೆನಿಸುವ ಕೃತಿಗಳು ಇಲ್ಲಿ ಮಾಡಿವೆ. ಒಂದು ಬಣ್ಣದಲ್ಲಿ ಗಾಢ, ತಿಳಿ ತೋರಿಸುವ ತಾಂತ್ರಿಕವಾದ ಮೋನೋಪ್ರಿಂಟ್‌ಗಳು ವರ್ಣಚಿತ್ರಗಳಂತೆ ಕಂಡುಬಂದರೂ ಅದರಲ್ಲಿ ಅಪರಿಚಿತ ರೂಪಗಳು ಮೈದಳೆದಿರುವುದು ಗಮನಾರ್ಹವಾಗಿರುವುದನ್ನು ಇಲ್ಲಿ ಕಂಡುಕೊಳ್ಳಲಾಗಿದೆ.

ಹಡಪದರ ಕಲಾಕೃತಿ ರಚನೆಯ ಮತ್ತೊಂದು ಪ್ರಯೋಗವೆಂದರೆ ಶಿಲ್ಪಕಲಾಕೃತಿಗಳು. ೭೦ರ ದಶಕದ ಪ್ರಾರಂಭದಲ್ಲಿ ಪ್ಲಾಸ್ಟರ್ ಆಫ್ ಪ್ಯಾರಿಸ್, ಅಲ್ಯೂಮಿನಿಯಂ, ಕಂಚು ಇತ್ಯಾದಿಗಳಲ್ಲಿ ಮೂರ್ತ, ಅಮೂರ್ತ ಶಿಲ್ಪಗಳನ್ನು ರಚಿಸಿ ಬೆಂಗಳೂರಿನ ಅಲೈನ್ಸ್ ಪ್ರಾನ್ಸ್ ಗ್ಯಾಲರಿಯಲ್ಲಿ ಪ್ರದರ್ಶಿಸಿದ್ದರು. ಅವುಗಳಲ್ಲಿ ಕೆಲವು ಕಲಾವಿದರ ಸಂಗ್ರಹದಲ್ಲಿ ಇನ್ನೂ ಇವೆ. 'ನಾವು ನಾಲ್ವರು' ಪ್ರದರ್ಶನ ಸಂದರ್ಭದ ಪ್ರೇರಣೆಯಿಂದ ಈ ಶಿಲ್ಪಗಳು ಸೃಷ್ಟಿಯಾಗಿವೆ. ಈ ಹಿನ್ನೆಲೆಯಲ್ಲಿ ಅವುಗಳನ್ನು ಪ್ಲಾಸ್ಟರ್, ಕಂಚು, ಕಾಷ್ಠ ಮಾಧ್ಯಮಗಳಲ್ಲಿ ಕಲಾಕೃತಿಯನ್ನು ವರ್ಗೀಕರಣ ಮಾಡಿಕೊಂಡು ಏಳನೆಯ ಅಧ್ಯಾಯದಲ್ಲಿ ಅಧ್ಯಯನ ನಡೆಸಲಾಗಿದೆ.

ಎಂಟನೆಯ ಅಧ್ಯಾಯದಲ್ಲಿ ಹಡಪದರ ಕಲಾಚಟುವಟಿಕೆಗಳು ಮತ್ತು ಕಲಾಸಾಹಿತ್ಯವನ್ನು ಕುರಿತಂತೆ ೧. ಹಡಪದರ ವ್ಯಕ್ತಿತ್ವ ಮತ್ತು ಕಲಾಕೃತಿಗಳ ಕುರಿತು ಇದುವರೆಗೆ ಪ್ರಕಟವಾಗಿರುವ ಗ್ರಂಥಗಳಲ್ಲಿ ಹಾಗೂ ಪತ್ರಿಕೆಗಳಲ್ಲಿ, ಸಂಚಿಕೆ, ಸ್ಮರಣ ಸಂಚಿಕೆಗಳಲ್ಲಿ ಪ್ರಕಟವಾಗಿರುವ ಲೇಖನಗಳ ತಿರುಳನ್ನು ವಿಶ್ಲೇಷಿಸಲಾಗಿದೆ. ೨. ಹಡಪದರು ಸಂಖ್ಯೆಯ ದೃಷ್ಟಿಯಿಂದ ದೃಶ್ಯಪ್ರಯೋಗಗಳನ್ನು ಮಾಡಿದಷ್ಟು, ದೃಶ್ಯಸಾಹಿತ್ಯದಲ್ಲಿ ಮಾಡಿಲ್ಲವೆಂಬುದು ದಿಟ. ಆದರೆ ಸಾಂದರ್ಭಿಕವಾಗಿ ಅವರು ಕೆಲವು ಭಾಷಣಗಳನ್ನು ಮಾಡಿದ್ದು, ಕಲೆಯ ಬಗೆಗಿನ ಗಂಭೀರ ಚಿಂತನೆಗಳು, ಕಲಾಶಿಕ್ಷಣದ ಕುರಿತಾದ ಮಹತ್ವದ ಚರ್ಚೆಗಳನ್ನು ಈ ಅಧ್ಯಾಯದಲ್ಲಿ ಗಮನಿಸಲಾಗಿದೆ. ಒಂಭತ್ತನೆಯ ಅಧ್ಯಾಯವು ಸಮಾರೋಪವಾಗಿದ್ದು, ಒಟ್ಟು ಅಧ್ಯಯನದ ಫಲಿತವನ್ನು ಒಳಗೊಂಡಿದೆ. ಒಟ್ಟಾರೆ ಹಡಪದರ ಸಾಧನೆಯನ್ನು ಸಾಹಿತ್ಯರೂಪದಲ್ಲಿ ತೆರೆದಿಡಲಾಗಿದೆ.

೫. ಕಲಾವಿದ ಡಿ. ವಿ. ಹಾಲಭಾವಿಯವರ ಬದುಕು ಮತ್ತು ಕಲಾಕೃತಿಗಳು

ಶಂಕ್ರಪ್ಪ ಕುಂದಗೋಳ ಅವರು ಡಿ.ವಿ. ಹಾಲಭಾವಿಯವರ ಬದುಕು ಮತ್ತು ಕಲಾಕೃತಿಗಳು ಎಂಬ ವಿಷಯವಾಗಿ ಎಂ.ಫಿಲ್ ಅಧ್ಯಯನ ಮಾಡಿದ್ದಾರೆ.[೮] ಈ ಪ್ರಬಂಧವು ಒಟ್ಟು ಏಳು ಅಧ್ಯಾಯಗಳಲ್ಲಿ ಹರಡಿಕೊಂಡಿದೆ. ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವೈಧಾನಿಕತೆಗಳನ್ನು ಹೇಳಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಹಾಲಭಾವಿಯವರ

---

೦೮. ಶಂಕ್ರಪ್ಪ ಎಂ. ಕುಂದಗೋಳ : ಕಲಾವಿದ ಡಿ.ವಿ. ಹಾಲಭಾವಿಯವರ ಬದುಕು ಮತ್ತು ಕಲಾಕೃತಿಗಳು, ಎಂ.ಫಿಲ್ ಸಂಪ್ರಬಂಧ, ಕ.ವಿ.ವಿ. ಹಂಪಿ. ೨೦೦೫

ಜನನ, ಬಾಲ್ಯ, ಜನ್ಮಸ್ಥಳದ ಸಾಂಸ್ಕೃತಿಕ ಮತ್ತು ಐತಿಹಾಸಿಕ ಮಹತ್ವಗಳಲ್ಲದೇ ಕಲಾ ಹಿನ್ನೆಲೆಗಳನ್ನು ಕುರಿತು ಚರ್ಚಿಸಲಾಗಿದೆ. ಜೊತೆಗೆ ಬಾಲ್ಯದ ದಿನಗಳಲ್ಲಿ ಇವರು ಕಲೆಯ ಕಡೆಗೆ ಆಕರ್ಷಿತರಾಗಲು ಕಾರಣಗಳು, ಪ್ರಭಾವ ಬೀರಿದ ವ್ಯಕ್ತಿ ಮತ್ತು ಶಕ್ತಿಗಳು, ಕೌಟುಂಬಿಕ ಹಿನ್ನೆಲೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಗಳ ಬಗ್ಗೆ ಹೇಳಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಡಿ.ವಿ. ಹಾಲಭಾವಿಯವರ ಕಲಾಶಿಕ್ಷಣದ ಬಗ್ಗೆ ವಿವೇಚಿಸಲಾಗಿದೆ. ಉನ್ನತ ಕಲಾ ವ್ಯಾಸಂಗಕ್ಕಾಗಿ ಮುಂಬೈನ ಪ್ರಸಿದ್ಧ ಜೆ. ಜೆ. ಕಲಾಶಲೆಗೆ ಸೇರಿದ ಇವರು ಇಲ್ಲಿ ಡ್ರಾಯಿಂಗ್ ಮತ್ತು ಪೇಂಟಿಂಗ್ ವಿಷಯ ಆಯ್ದುಕೊಂಡರು. ಅಲ್ಲಿ ಅಂದಿನ ಸಂದರ್ಭದಲ್ಲಿ ಖ್ಯಾತನಾಮರಾಗಿದ್ದ ಕೆ. ಬಿ. ತಾರಸ್ಕರ, ಎಂ. ವಿ. ದುರಂಧರ ಇವರು ಹಾಲಭಾವಿಯವರಿಗೆ ಕಲಾಶಿಕ್ಷಕರಾಗಿದ್ದರು. ಇವರ ಕಾಲದಲ್ಲಿ ಈ ಕಲಾಶಾಲೆಯಲ್ಲಿ ಕರ್ನಾಟಕದ ಏಳುಜನ ಕಲಾವಿದ್ಯಾರ್ಥಿಗಳು ಶ್ರೇಷ್ಠ ಕಲಾವಿದರೆಂದು ಹೆಸರು ಮಾಡಿದ್ದರು. ಇವರಿಗೆ ಸಪ್ತವರ್ಣದ ಕಲಾವಿದರೆಂದು ಕರೆಯಲಾಗುತ್ತಿತ್ತು. ಈ ಎಲ್ಲ ವಿವರಗಳು ಇಲ್ಲಿವೆ.

ನಾಲ್ಕನೆಯ ಅಧ್ಯಾಯದಲ್ಲಿ ಡಿ.ವಿ. ಹಾಲಭಾವಿಯವರು ಸ್ಥಾಪಿಸಿದ ಧಾರವಾಡದ ಕಲಾಶಾಲೆಯ ಬಗ್ಗೆ ಚರ್ಚಿಸಲಾಗಿದೆ. ಮುಂಬೈನಲ್ಲಿ ಕಲಾಶಿಕ್ಷಣ ಮುಗಿಸಿಕೊಂಡು ಧಾರವಾಡಕ್ಕೆ ಬಂದ ಇವರು ಇಲ್ಲಿ ಕಲಾಶಾಲೆಯನ್ನು ಸ್ಥಾಪಿಸಿದರು. ಉತ್ತರ ಕರ್ನಾಟಕದಲ್ಲಿ ಸ್ವಾತಂತ್ರ್ಯಪೂರ್ವ ದಿನಗಳಲ್ಲಿ ಆರಂಭಗೊಂಡ ಮೊದಲ ಕಲಾಶಾಲೆ ಎಂಬುದಾಗಿ ಹೆಸರಾಯಿತು. ಆರಂಭಿಕ ದಿನಗಳಲ್ಲಿ ಇಲ್ಲಿನ ವಿದ್ಯಾರ್ಥಿಗಳು ಕಲಾಪರೀಕ್ಷೆಗಳನ್ನು ಬರೆಯಲು ಮುಂಬೈಗೆ ತೆರಳಬೇಕಿತ್ತು. ಈ ಹಂತದಲ್ಲಿ ಕಲಾಶಿಕ್ಷಣಕ್ಕೆ ವಿದ್ಯಾರ್ಥಿಗಳ ಕೊರತೆಯೂ ಸಾಕಷ್ಟಿತ್ತು. ಜೊತೆಗೆ ಆರ್ಥಿಕ ತೊಂದರೆ, ಜನ ಸಮುದಾಯದಲ್ಲಿ ಚಿತ್ರಕಲೆಗೆ ಇದ್ದ ಅನಾದರ ಇಂತಹ ಪರಿಸ್ಥಿತಿಯಲ್ಲಿ ಕಲಾಶಾಲೆಯನ್ನು ಆರಂಭಿಸಿ ಕಟ್ಟಿ ಬೆಳಸಿದ ಹಾಲಭಾವಿಯವರು ಸಮಯ ಸಿಕ್ಕಾಗೆಲ್ಲ ಕಲಾಕೃತಿಗಳನ್ನು ರಚಿಸುತ್ತ ಬಂದಿದ್ದಾರೆ. ಜೊತೆಗೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತಲೂ ಇದ್ದರು. ಈ ಕಲಾಶಾಲೆಯ ಆರಂಭಿಕ ದಿನಗಳು, ಅಧ್ಯಾಪಕ ವೃಂದ, ವಿದ್ಯಾರ್ಥಿಗಳು, ಶೈಕ್ಷಣಿಕ ವ್ಯವಸ್ಥೆ ಮುಂತಾದ ಅಂಶಗಳನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಹಾಲಭಾವಿಯವರ ಕಲೆ ಮತ್ತು ಕಲಾಕೃತಿಗಳ ಬಗ್ಗೆ ಚರ್ಚಿಸಲಾಗಿದೆ. ತಮ್ಮ ಕಲಾಬದುಕಿನುದ್ದಕ್ಕೂ ವೈವಿಧ್ಯಮಯ ಕಲಾಕೃತಿಗಳನ್ನು ರಚಿಸುತ್ತ ಬಂದಿರುವ ಹಾಲಭಾವಿಯವರ ಲಭ್ಯ ಕಲಾಕೃತಿಗಳನ್ನು ವಿಷಯಾನುಸಾರ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ. ಭಾವಚಿತ್ರಗಳು, ವ್ಯಕ್ತಿಚಿತ್ರಗಳು, ಸಂಯೋಜನಾ ಚಿತ್ರಗಳು, ನಿಸರ್ಗ ಚಿತ್ರಗಳು, ಸ್ಥಿರಚಿತ್ರಗಳು, ರೇಖಾಚಿತ್ರಗಳು ಎಂದು ವಿಂಗಡಿಸಿ ವಿಶ್ಲೇಷಣೆ ಮಾಡಿದೆ. ಸೃಜನಶೀಲವಾದ ಸಂಯೋಜನೆಗಳು, ಆಕರ್ಷಕವಾದ ಮತ್ತು ಸಮತೋಲನದಿಂದ ಕೂಡಿದ ವರ್ಣಲೇಪನ ಮತ್ತು ಚಲನಾತ್ಮಕ ರೇಖೆಗಳು ಇವರ ಚಿತ್ರಗಳಲ್ಲಿ ಕಂಡುಬರುತ್ತವೆ. ಇಂತಹ ಅನೇಕ ಅಂಶಗಳನ್ನು

ಇಲ್ಲಿ ಚರ್ಚಿಸಿದೆ. ಜೊತೆಗೆ ಇವರ ಚಿತ್ರರಚನಾ ವಿಧಾನ, ಚಿತ್ರಗಳ ವಸ್ತುವಿಷಯ, ಚಿತ್ರಶೈಲಿ ಮುಂತಾದವುಗಳನ್ನು ಗಮನಿಸಲಾಗಿದೆ. ಆರನೆಯ ಅಧ್ಯಾಯದಲ್ಲಿ ಹಾಲಭಾವಿಯವರ ಮೇಲಾದ ಪ್ರಭಾವ, ಕಲಾಶೈಲಿ ಮತ್ತು ಕಲಾಸಾಹಿತ್ಯದ ಬಗ್ಗೆ ಇವರ ವರ್ಣಚಿತ್ರಗಳಲ್ಲಿ ಪಾಶ್ಚಾತ್ಯ ಪ್ರಭಾವವು ಗೋಚರಿಸುತ್ತಿದ್ದು, ವಿಷಯ ನಿರೂಪಣೆಯಲ್ಲಿ ಭಾರತೀಯ ಅಂಶಗಳು ಕಂಡುಬರುತ್ತವೆ. ರೇಖಾವಿನ್ಯಾಸದಲ್ಲಿ ಹೆಚ್ಚಿನ ಒಲವು ಇರುವುದಕ್ಕಿಂತಲೂ ವರ್ಣಲೇಪನ ಹಿನ್ನೆಲೆಯು ಇವರ ಕೃತಿಗಳಲ್ಲಿ ಆಕರ್ಷಕವಾಗಿರುತ್ತದೆ. ಇಂತಹ ಅಂಶಗಳು ಚರ್ಚಿಸಲ್ಪಟ್ಟಿವೆ. ಮತ್ತು ಯಾವ ಪ್ರಭಾವ ಇವರ ಕಲಾಕೃತಿಗಳ ಮೇಲಾಗಿದೆ ಮತ್ತು ಯಾವ ಪ್ರಾಚೀನ ಪರಂಪರೆಯ ಪ್ರೇರಣೆಗೆ ಒಳಗಾಗಿದ್ದಾರೆ ಎನ್ನುವ ಅಂಶಗಳನ್ನು ಗಮನಿಸಲಾಗಿದೆ.

ಕಲಾ ಸಾಹಿತ್ಯ ಕ್ಷೇತ್ರಕ್ಕೆ ಸಹಿತ ಕೊಡುಗೆ ನೀಡಿದ ಹಾಲಭಾವಿಯವರು 'ಆರ್ಟ್‌ಗಿಲ್ಡ್' ಎಂಬ ಕಲಾಮಾಸ ಪತ್ರಿಕೆಯನ್ನು ಆರಂಭಿಸಿದ್ದರು. ಕಲೆಯ ಕುರಿತ ಲೇಖನಗಳು, ಸುದ್ದಿಗಳು, ಕಲಾಚಟುವಟಿಕೆಗಳನ್ನು ಪ್ರಕಟಿಸುತ್ತಿದ್ದ ಈ ಪತ್ರಿಕೆ ಕಲಾಪ್ರಿಯರ ಮನೆ ಮಾತಾಗಿತ್ತು. ಇದಲ್ಲದೇ ಕಾಂಟೆಂಪರರಿ ಆರ್ಟಿಸ್ಟ್ ಎಂಬ ಗ್ರಂಥ ಮತ್ತು ನನ್ನ ಸಿಲೋನ ಪ್ರವಾಸ ಎಂಬ ಪ್ರವಾಸ ಕಥನ ಬರೆದಿದ್ದಾರೆ. ಹೀಘೆ ಇವರ ಕಲಾಸಾಹಿತ್ಯವನ್ನು ಇಲ್ಲಿ ವಿವೇಚಿಸಲಾಗಿದೆ. ಏಳನೆಯ ಅಧ್ಯಾಯವು ಸಮಾರೋಪವಾಗಿದ್ದು, ಒಟ್ಟು ಅಧ್ಯಯನದ ಫಲಿತಗಳನ್ನು ಕೊಡಲಾಗಿದೆ. ಈ ಅಧ್ಯಯನ ಪ್ರಬಂಧವು ಹಾಲಭಾವಿಯವರ ಜೀವನ ಮತ್ತು ಕಲಾಬದುಕಿನ ಬಗೆಗಿನ ಅನೇಕ ವಿವರಗಳನ್ನು ಕೊಡುತ್ತದೆ. ಇವರು ಕೇವಲ ಒಬ್ಬ ಕಲಾಶಿಕ್ಷಕನಾಗದೇ ಜೊತೆಗೆ ಕಲಾವಿದರಾಗಿ, ಕಲಾಸಾಹಿತಿಯಾಗಿ, ಕಲಾ ವಿಮರ್ಶಕರಾಗಿ, ಸಂಘಟಕರಾಗಿ, ಕಲಾಶಾಲೆಯ ಸಂಸ್ಥಾಪಕರಾಗಿ ನಿರ್ವಹಿಸಿದ ಕಾರ್ಯಗಳು ಗಮನಾರ್ಹವಾಗಿವೆ. ಇವರಿಗೆ ಸಂದ ಪ್ರಶಸ್ತಿ, ಪುರಸ್ಕಾರ ಹಾಗೂ ಗೌರವಗಳು ಹೀಗೆ ಅನೇಕ ಅಂಶಗಳನ್ನು ತಿಳಿಸಿಕೊಡುತ್ತದೆ.

೬. ಸಾಧನೆಯ ಸಮುಚ್ಚಯ ಎಲ್. ಶಿವಲಿಂಗಪ್ಪ

ಚಿತ್ರಕಲೆ, ಛಾಯಾಚಿತ್ರ, ಶಿಲ್ಪ ಮುಂತಾದವುಗಳ ರಚನೆಯಲ್ಲಿ ಬಹುಮುಖ ಪ್ರತಿಭಾವಂತರಾದ ಎಲ್. ಶಿವಲಿಂಗಪ್ಪನವರ ಚಿತ್ರಕಲೆಯ ಹಿನ್ನೆಲೆಯಲ್ಲಿ ಡಾ. ಎಸ್. ಸಿ. ಪಾಟೀಲರು ಈ ಕೃತಿಯನ್ನು ರಚನೆ ಮಾಡಿದ್ದಾರೆ.[೭] ಸಾಧನೆಯ ಸಮುಚ್ಚಯವಾದ ಈ ಕೃತಿಯಲ್ಲಿ ಎಲ್. ಶಿವಲಿಂಗಪ್ಪನವರ ಕಲಾಕೃತಿ ರಚನೆ, ಸಾಹಿತ್ಯ ಸೃಷ್ಟಿ, ಕಲಾಚಟುವಟಿಕೆಗಳು, ಇವರಿಗೆ ಸಂದ ಪ್ರಶಸ್ತಿಗಳು, ಸಮಾಜಮುಖಿ ಕಾರ್ಯಗಳು, ಕಲಾಗ್ಯಾಲರಿ ಸ್ಥಾಪನೆ ಮತ್ತು ವಿದೇಶಿ ಪ್ರವಾಸದ ಅನುಭವ ಕುರಿತಂತೆ ಸ್ಥೂಲವಾದ ವಿವರಣೆಯಿಂದ ಕೂಡಿದ ಕೃತಿಯಾಗಿದೆ.

ಕಲಾಕೃತಿಗಳು : ಎಲ್. ಶಿವಲಿಂಗಪ್ಪನವರದ್ದೆಯಾದ ಸಂಯೋಜನಾ ಚಿತ್ರಗಳ ಒಂದು ಸರಣಿ ಇದೆ. ಅವುಗಳಲ್ಲಿ ವ್ಯಕ್ತಿಚಿತ್ರಗಳು, ಸಿಂಪರಣೆ ಚಿತ್ರಗಳು, ವಚನಾಧಾರಿತ ಚಿತ್ರಗಳು,

೦೭. ಡಾ. ಎಸ್. ಸಿ. ಪಾಟೀಲ : ಸಾಧನೆಯ ಸಮುಚ್ಚಯ ಎಲ್. ಶಿವಲಿಂಗಪ್ಪ, ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿ, ಧಾರವಾಡ. ೨೦೧೦

ಸಾಂದರ್ಭಿಕ ಕಥಾ ಚಿತ್ರರಚನೆಗಳನ್ನು ಕುರಿತು ಗಮನಿಸಲಾಗಿದೆ. ಕೆಲವು ಮರಳಚ್ಚಿನ ಶಿಲ್ಪಗಳಲ್ಲಿ ಚಿಂತಾಕ್ರಾಂತ ಗಣಪ, ವಿದ್ಯಾ ವಿನಾಯಕ, ಶಿವಗಣಪ, ತಾಯಿಮಗು, ದ್ವಾಸುಪರ್ಣ, ಧ್ಯಾನಮಗ್ನ, ನಾಗರಕಲ್ಲು, ಚಿಂತೆ, ರೂಪಶಿಲ್ಪ ಶಿಲ್ಪಗಳ ಕುರಿತು ವೈವಿಧ್ಯಮಯವಾಗಿ ಚರ್ಚಿಸಲಾಗಿದೆ. ಶಿಲ್ಪಕಲಾಕೃತಿಯ ಬೆಂಡಿನ ಶಿಲ್ಪಗಳಲ್ಲಿ ಭಗವಾನ್ ಬುದ್ಧ, ಗಣೇಶ, ಇಡಗುಂಜಿ ಗಣಪ, ಭಾರ್ಯಾ ಸಹಿತ ಗಣಪ, ಭ್ರೂಣಹತ್ಯೆ, ತಾಯಿ ಮಗು, ಜೋಡಿಗಳು, ಏಕಾಂಗಿ ಮುಂತಾದವು. ಚಿತ್ರಕಲೆಯಷ್ಟಲ್ಲದೇ ಸಾಹಿತ್ಯದಲ್ಲಿಯೂ ನಿಪುಣರಾಗಿದ್ದಾರೆ. ಇವರ ಸಾಹಿತ್ಯದಲ್ಲಿ ಪ್ರಕಟಿತ ಲೇಖನಗಳು, ಪ್ರಕಟಿತ ಗ್ರಂಥಗಳು ಎಂದು ವಿಂಗಡಿಸಲಾಗಿದೆ.

ಪ್ರಕಟಿತ ಲೇಖನಗಳು : ಶಿವಲಿಂಗಪ್ಪನವರು ಕಳೆದ ಮೂರು ದಶಕಗಳಿಂದ ಪತ್ರಿಕಾ ಮಾಧ್ಯಮಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದು, ಅವರು ಬರೆದ ಲೇಖನಗಳು ಸುಮಾರು ಐನೂರರ ಗಡಿ ದಾಟಿವೆ. ಆ ಲೇಖನಗಳಲ್ಲಿ ಕೆಲವನ್ನು ಪರಿಚಯ ಕೃತಿಯಲ್ಲಿ ಪರಿಚಯಿಸಿದ್ದಾರೆ. ಸ್ಥಳ ಪರಿಚಯ, ಕಲಾವಿಮರ್ಶೆ, ಧಾರ್ಮಿಕ ಲೇಖನಗಳು, ಆಕಾಶವಾಣಿ ಬರಹಗಳು, ಹಾಸ್ಯ ಲೇಖನ, ಚುಟುಕುಗಳು, ಕವನಗಳು ಇವೆಲ್ಲಾ ಅಡಕಗೊಂಡಿವೆ.

ಪ್ರಕಟಿತ ಗ್ರಂಥಗಳು : ಶಿವಲಿಂಗಪ್ಪನವರ ಗ್ರಂಥಗಳಲ್ಲಿ ಪ್ರಕಟಿತ ಮತ್ತು ಅಪ್ರಕಟಿತ ಗ್ರಂಥಗಳೆಂದು ವಿಂಗಡಿಸಿಕೊಂಡು ವಿಷಯಗಳಲ್ಲಿ ಶಿಲ್ಪ ಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಗಳು, ಸಾತ್ವಿಕ ಶಿಲ್ಪಿ ನಾಗೇಂದ್ರ ಸ್ಥಪತಿ, ಶಿಲ್ಪ ಸಿದ್ಧಾಂತಿ ಶ್ರೀ ಸಿದ್ಧಲಿಂಗ ಸ್ವಾಮಿಗಳು : ಚಿತ್ರ ಸಂಪುಟ, ಲೋಹ ಶಿಲ್ಪಿ ವೆಂಕಟಾಚಾರ್ ಕರ್ನಾಟಕದಲ್ಲಿ ಚಿತ್ರಕಲಾ ಬೆಳವಣಿಗೆ – ಒಂದು ಸಮೀಕ್ಷೆ, ವಚನ ಸಾಹಿತ್ಯಕ್ಕೆ ಚಿತ್ರಕಾರರ ಕೊಡುಗೆ, ಶಿಲಾಶಿಲ್ಪಿ ಬಸವಣ್ಣ, ರೇಖಾಚಿತ್ರ ನಿಪುಣ, ಮ.ಈ. ಗುರು, ಮಹಿಳಾ ಶಿಲ್ಪಿ, ಕಲಾವಿದೆ ಸುಭಾಷಿಣಿ ದೇವಿ, ಕಲಾಶಿಕ್ಷಕ ಸಾಧಕ ಬಸವಣ್ಣಾಚಾರ್, ವಚನಗಳಿಗೆ ದೃಶ್ಯರೂಪ, ಬಹುಮುಖ(ಸಂ.) ಅಭಿನಂದನಾ ಗ್ರಂಥ ಕುರಿತು ಸ್ಥೂಲವಾಗಿ ಪರಿಚಯಿಸಿದೆ. ಕಲಾಚಟುವಟಿಕೆಯ ಕುರಿತಂತೆ ಕಲಾಪ್ರದರ್ಶನಗಳು, ಗುಂಪು ಪ್ರದರ್ಶನಗಳನ್ನು ಕುರಿತಂತೆ ಮತ್ತು ಪ್ರಶಸ್ತಿ ಕುರಿತಂತೆ ಈ ಕೃತಿಯಲ್ಲಿ ಹೇಳಲಾಗಿದೆ.

೭. ವರ್ಣಸಂಚಯ

ಚಿತ್ರಕಲೆಯ ಕುರಿತು ವಿವಿಧ ಲೇಖನಗಳಿರುವ ಈ ಕೃತಿಯನ್ನು ಡಾ. ಎಸ್. ಸಿ. ಪಾಟೀಲ್ ಅವರು ರಚನೆ ಮಾಡಿದ್ದಾರೆ.[೮] ಇಲ್ಲಿರುವ ಲೇಖನಗಳು ಸಂಶೋಧನಾತ್ಮಕ ಹಿನ್ನೆಲೆಯಿಂದ ರಚನೆಯಾಗಿವೆ. ಆದಿಮಾನವ ಚಿತ್ರಕಲೆ, ಶಿಷ್ಟಪದ ಚಿತ್ರಕಲೆ, ಕಲೆಯ ತತ್ವಗಳು, ಕಲಾ ತಂತ್ರಗಾರಿಕೆ, ಹಸ್ತಪ್ರತಿ ಚಿತ್ರಕಲೆ, ಚಿತ್ರಕಲಾ ಶಿಕ್ಷಣ, ಜನಪದ ಚಿತ್ರಕಲೆ, ಆಧುನಿಕ ಕಲೆ ಮತ್ತು ಕಲೆಯ ಬಗೆಗಿನ ವಿವರಣಾತ್ಮಕ ವಿಷಯಗಳನ್ನು ಇದು ಒಳಗೊಂಡಿದೆ. ಆದಿಮಾನವನ ಚಿತ್ರಕಲೆ ಹಿನ್ನೆಲೆಯಲ್ಲಿ

---

೧೮. ಡಾ. ಎಸ್. ಸಿ. ಪಾಟೀಲ : ವರ್ಣಸಂಚಯ, ವಿಜಯ ಚಿತ್ರಕಲಾ ಮಹಾವಿದ್ಯಾಲಯ, ಇಳಕಲ್, ೨೦೦೧

ಬಾಗಲಕೋಟೆ ಜಿಲ್ಲೆಯ ಪ್ರಾಗೈತಿಹಾಸದ ಚಿತ್ರಕಲೆ ಲೇಖನವಿದ್ದರೆ, ಜನಪದ ಪ್ರಕಾರದಲ್ಲಿ ಜನಪದ ಚಿತ್ರಕಲೆಯ ವರ್ಗೀಕರಣ, ಜನಪದ ಕೌದಿ ಚಿತ್ರಕಲೆಯ ವಿನ್ಯಾಸಗಳು, ಕಸೂತಿ ಚಿತ್ರಕಲಾ ವಿನ್ಯಾಸಗಳು ಎಂಬ ಲೇಖನಗಳಿವೆ. ಚಿತ್ರಕಲೆಯ ತತ್ವಗಳಡಿಯಲ್ಲಿ ಚಿತ್ರಕಲೆಯ ಷಡಂಗಗಳ ಕುರಿತು ಬರೆಯಲಾಗಿದೆ. ತಂತ್ರಗಾರಿಕೆಯಲ್ಲಿ ರೇಖಾಚಿತ್ರಕಲೆ, ಶಬ್ದರೇಖೆ, ವರ್ಣ, ಅಂತರ್‌ಶಿಸ್ತೀಯ ಅಧ್ಯಯನಗಳಿವೆ. ಕಲಾಶಿಕ್ಷಣಕ್ಕೆ ಸಂಬಂಧಿಸಿದಂತೆ ಚಿತ್ರಕಲೆ ಮತ್ತು ಶಿಕ್ಷಣ, ಕರ್ನಾಟಕದಲ್ಲಿ ಚಿತ್ರಕಲಾ ಶಿಕ್ಷಣ, ಲೇಖನಗಳು, ಕಲಾಶಿಕ್ಷಣದ ಸ್ವರೂಪ-ಬೆಳವಣಿಗೆ, ಸ್ಥಿತಿಗತಿಗಳನ್ನು ತಿಳಿಸಿಕೊಡುತ್ತದೆ. ಭಾರತೀಯ ಚಿತ್ರಕಲೆಯ ಹಿನ್ನೆಲೆ, ಆಧುನಿಕ ಒಲವುಗಳು ಎಂಬ ಲೇಖನದಲ್ಲಿ ಸಮಕಾಲೀನ ಸಂದರ್ಭದ ಕಲಾವಿವರಗಳು, ರಚನಾ ಹಿನ್ನೆಲೆ, ಮೌಲ್ಯಗಳು, ವಿಮರ್ಶೆ ಹೀಗೆ ಹಲವು ಅಂಶಗಳು ಚರ್ಚಿಸಲ್ಪಟ್ಟಿವೆ. ಧಾರವಾಡ ಜಿಲ್ಲೆಯ ಚಿತ್ರಕಲಾ ಕೊಡುಗೆ ಎನ್ನುವ ಲೇಖನದಲ್ಲಿ ಈ ಜಿಲ್ಲೆಯ ಪ್ರಾಗಿತಿಹಾಸ ಕಾಲದ ಚಿತ್ರಕಲೆ, ಶಿಷ್ಟಪದ ಚಿತ್ರಕಲೆ, ಭಿತ್ತಿಚಿತ್ರಕಲೆ, ಜನಪದ ಚಿತ್ರಕಲೆ, ಆಧುನಿಕ ಚಿತ್ರಕಲೆ, ಕಲಾಶಾಲೆಗಳು, ಕಲಾವಿದರು ಮುಂತಾದ ಅಂಶಗಳನ್ನು ಬಿಂಬಿಸಲಾಗಿದೆ. ಹಸ್ತಪ್ರತಿ ಚಿತ್ರಕಲೆ ಎನ್ನುವ ಲೇಖನದಲ್ಲಿ ಈ ಚಿತ್ರಕಲೆಯ ವಿಂಗಡನೆ, ರಚನೆಯ ಉದ್ದೇಶ, ಪರಿಕರಗಳು ರಚನಾ ಕ್ರಮಗಳನ್ನು ಹೇಳಲಾಗಿದೆ. ಧಾರ್ಮಿಕವಾಗಿ ಹಸ್ತಪ್ರತಿಗಳನ್ನು ವಿಂಗಡಿಸಿ ವಿಶ್ಲೇಷಣೆ ಮಾಡಲಾಗಿದೆ.

೮. ಬಾರೋಕ್ ಕಲೆ

ಪಾಶ್ಚಾತ್ಯ ಕಲಾವಲಯದಲ್ಲಿ ಕಾಲಕಾಲಕ್ಕೆ ವಿವಿಧ ಕಲಾಶೈಲಿಗಳು ಹುಟ್ಟಿಕೊಂಡು ಅಭಿವೃದ್ಧಿಗೊಂಡಿವೆ. ಕ್ರಿ.ಶ. ೧೬ನೇ ಶತಮಾನದಲ್ಲಿ ಹುಟ್ಟಿದ ಬಾರೋಕ್ ಕಲೆಯ ಜೊತೆಗೆ ಚಿತ್ರ, ಶಿಲ್ಪ, ಮತ್ತು ವಾಸ್ತುಕಲೆಗಳು ವಿಶೇಷವಾಗಿ ಬೆಳದವು. ಈ ಕಲಾಪ್ರಕಾರವನ್ನು ಕುರಿತು ಡಾ. ಎಸ್. ಸಿ. ಪಾಟೀಲರು ಈ ಕೃತಿಯನ್ನು ರಚಿಸಿದ್ದಾರೆ.[೯] ಈ ಕೃತಿಯು ಸಂಶೋಧನಾತ್ಮಕವಾಗಿದ್ದು, ಬಾರೋಕ್ ಕಲೆಯ ಹಲವು ಅಂಶಗಳನ್ನು ಒಳಗೊಂಡಿದೆ. ಬಾರೋಕ್ ಎಂದರೆ ಬೀರಿದ ಮುತ್ತು ಎನ್ನುವ ಅರ್ಥವಿದ್ದು, ಚಿತ್ರಕಲೆಯಲ್ಲಿ ಆ ಕೃತಿಗಳು ತಮ್ಮ ಎಲ್ಲೆಯನ್ನು ಮೀರಿ ಹೊರಬರುತ್ತವೆ ಎನ್ನುವಂತೆ ಭ್ರಾಮಕ ಕಲ್ಪನೆಯಲ್ಲಿ ಹಿನ್ನೆಲೆಯಲ್ಲಿ ಕೃತಿರಚನೆ ಮಾಡಲಾಗಿರುತ್ತದೆ.

ಈ ಶೈಲಿಯ ವಾಸ್ತು ರಚನೆಯಲ್ಲಿ ಇಗರ್ಜಿ ಮತ್ತು ಪೂಜಾ ಮಂದಿರಗಳಂತಹ ರಚನೆಗಳು ಹೆಚ್ಚಾಗಿ ಕಂಡುಬರುತ್ತವೆ. ಇಲ್ಲಿ ಚರ್ಚ್‌ಗಳ ಮೇಲಿನ ಗೋಪುರಗಳು ಚೂಪಾಗಿ ಮೇಲಕ್ಕೆ ಚಾಚಿಕೊಂಡಿರುವುದರ ಜೊತೆಗೆ ಒಟ್ಟೊಟ್ಟಿಗೆ ಕೂಡಿಕೊಂಡಿರುತ್ತವೆ. ಬಾರೋಕ್ ಚಿತ್ರಕಲೆಯಲ್ಲಿ ಆಯ್ದುಕೊಂಡ ವಸ್ತುವಿಷಯಗಳು ಹೆಚ್ಚಾಗಿ ಕ್ರಿಸ್ತ ಧರ್ಮಕ್ಕೆ ಸಂಬಂಧಿಸಿದವುಗಳಾಗಿದ್ದು, ಉಜ್ವಲ ಬಣ್ಣ ಲೇಪನವನ್ನು ಹೊಂದಿವೆ. ಈ ಶೈಲಿಯ ಕಲಾವಿದರು ತಮ್ಮ ಆಕೃತಿಗಳಲ್ಲಿ ತುಂಬಿಸಿದ್ದಾರೆ. ಈ ಕೃತಿಯಲ್ಲಿ ಚಿತ್ರಕಲೆಯ ಜೊತೆಗೆ ಸ್ಥೂಲವಾಗಿ ಶಿಲ್ಪ ಮತ್ತು ವಾಸ್ತುಶಿಲ್ಪ ಕಲೆಯನ್ನು

---

೦೯. ಡಾ. ಎಸ್. ಸಿ. ಪಾಟೀಲ : ಬಾರೋಕ್ ಕಲೆ, ಭಾರತೀಯ ಕಲಾಕೇಂದ್ರ, ಧಾರವಾಡ. ೧೯೮೭

[illegible]

[illegible]

[illegible]

[illegible]

ಗಮನಿಸಲಾಗಿದೆ. ಹದಿನಾರನೆಯ ಶತಮಾನದಿಂದ ತೊಡಗಿ ಮುಂದಿನ ಮೂರು ಶತಮಾನಗಳ ಕಾಲ ವೈಭವದಿಂದ ಮೆರೆದ ಕಲಾಪ್ರಕಾರವು ಜಗತ್ತಿನ ಕಲಾಶೈಲಿಗಳಲ್ಲಿ ಪ್ರಮುಖವಾಗಿದೆ. ಇಲ್ಲಿ ಬಾರೋಕ್ ಕಲೆಯ ಹುಟ್ಟು, ಬೆಳವಣಿಗೆ, ಬಾರೋಕ್ ವಾಸ್ತುಶಿಲ್ಪ, ಶಿಲ್ಪಕಲೆ, ಬಾರೋಕ್ ಚಿತ್ರಕಲೆ, ಬಾರೋಕ್ ಶೈಲಿಯ ಕಲಾವಿದರು ಮತ್ತು ಅವರ ಕಲಾಕೃತಿಗಳು ವಿಶ್ಲೇಷಣೆಗಳನ್ನು ಅನುಕ್ರಮವಾಗಿ ಮಾಡಿಕೊಡಲಾಗಿದೆ. ಬಾರೋಕ್ ಕಲಾಪ್ರಕಾರವನ್ನು ಕುರಿತು ಅತ್ಯಂತ ಮಹತ್ವದ ಅಂಶಗಳನ್ನು ಚರ್ಚಿಸಿದ ಈ ಕೃತಿಯು ಕನ್ನಡದಲ್ಲಿ ಬಾರೋಕ್ ಕಲೆಯ ಬಗ್ಗೆ ಇರುವ ಅಪರೂಪದ ಕೃತಿಯಾಗಿದೆ.

೯. ರಂಗೋಲಿ

ಕನ್ನಡ ವಿಶ್ವವಿದ್ಯಾಲಯದ ನವಸಾಕ್ಷರ ಮಾಲೆಯಲ್ಲಿ ಪ್ರಕಟಿಸಿರುವ ಅನೇಕ ಕಿರುಪುಸ್ತಕಗಳಲ್ಲಿ ಇದೂ ಒಂದಾಗಿದೆ. ಶಾಂತಿನಾಯಕ ಬರೆದ ಈ ಪುಸ್ತಕವು 'ರಂಗೋಲಿ' ಕಲೆಯ ಕುರಿತಾಗಿದೆ. ನವಸಾಕ್ಷರರನ್ನು ಅಂದರೆ ವಯಸ್ಕರ ಶಿಕ್ಷಣ ಕ್ರಮವನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿಸಲಾದ ಈ ಕೃತಿಯಲ್ಲಿ ತೀರಾ ಸರಳವಾದ ವಾಕ್ಯಗಳಲ್ಲಿ ವಿಷಯ ನಿರೂಪಿಸಲ್ಪಟ್ಟಿದ್ದು, ಇದರಲ್ಲಿನ ಚಿತ್ರಗಳು ಕೂಡ ಮಕ್ಕಳಿಂದ ರಚನೆಯಾದಂತೆ ಕಂಡುಬರುತ್ತವೆ.[೧೦] ರಂಗೋಲಿಯ ಚಿತ್ರಗಳ ಕುರಿತು ಮತ್ತು ಧಾರ್ಮಿಕ ಹಿನ್ನೆಲೆಯಲ್ಲಿ ರಂಗೋಲಿ ಹಾಕುವುದನ್ನು ಸಂಕ್ಷಿಪ್ತವಾಗಿ ವಿವರಣೆ ನೀಡಿದ್ದಾರೆ.

೧೦. ರಂಗೋಲಿ ಚಿತ್ರಕಲೆ

ಲಲಿತಕಲಾ ಅಕಾಡೆಮಿಯಿಂದ ಪ್ರಕಟಗೊಂಡ ಡಾ. ಎಸ್. ಸಿ. ಪಾಟೀಲ ಅವರು ಬರೆದ ಈ ಪುಸ್ತಕದಲ್ಲಿ ರಂಗೋಲಿಯ ಪ್ರಾಚೀನತೆ, ಐತಿಹಾಸಿಕ ಹಿನ್ನೆಲೆ, ಪರಿಕರಗಳು, ರಚನಾವಿಧಾನ, ಪ್ರಾದೇಶಿಕ ಗುಣಲಕ್ಷಣಗಳು, ರಂಗೋಲಿ ಪ್ರಕಾರಗಳು, ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳು ಹೀಗೆ ಹಲವಾರು ಸಂಗತಿಗಳು ಹೇಳಲ್ಪಟ್ಟಿವೆ.[೧೧] ಜೊತೆಗೆ ರಂಗೋಲಿ ಚಿತ್ರಗಳನ್ನು ಕೊಡಲಾಗಿದೆ. ರಂಗೋಲಿ ಕಲೆಯು ಜನಪದ ಚಿತ್ರಕಲೆಯಲ್ಲಿ ಪ್ರಾಚೀನ ಚಿತ್ರಕಲಾ ಪ್ರಕಾರವಾಗಿದೆ. ಈ ಕಲೆಯು ವೈವಿಧ್ಯದಿಂದ ಕೂಡಿದ ಪ್ರಕಾರವಾಗಿದ್ದು, ಕಲಿಯಲು ಕ್ರಮಬದ್ಧತೆ ಸ್ವಲ್ಪ ತಿಳಿದುಕೊಂಡರೆ ಸಾಕು, ಈ ಕಲೆಯಲ್ಲಿ ಹಲವಾರು ವಿನ್ಯಾಸಗಳು ಕಲಾವಿದನ ಪ್ರತಿಭೆಗೆ ನಿಲುಕುವಂಥದ್ದಾಗಿವೆ. ಹಾಗಾಗಿ ರಂಗೋಲಿ ಕಲಿಯಲು ಸರಳ ವಿಧಾನಗಳನ್ನು ಇಲ್ಲಿ ತಿಳಿಸಲಾಗಿದೆ. ಗೆರೆ, ಚುಕ್ಕಿ, ಬಣ್ಣ ತುಂಬುವ ವಿಧಾನಗಳನ್ನು ಹಂತ ಹಂತವಾಗಿ ತಿಳಿಸಲಾಗಿದೆ. ಅಷ್ಟದಳ, ಸ್ವಸ್ತಿಕ, ಸುಗ್ಗಿ, ಹೊಸ್ತಿಲ ರಂಗೋಲಿ, ಬಿಲ್ವಪತ್ರೆ, ಮದುವೆ ಸಂದರ್ಭದ ರಂಗೋಲಿ, ಸೂರ್ಯನ ರಂಗೋಲಿ, ತೊಟ್ಟಿಲ ರಂಗೋಲಿ ಮುಂತಾದವುಗಳನ್ನು ತಿಳಿಸಿಕೊಡುವ ಮಹತ್ವದ ಸಂಶೋಧನ ಕೃತಿ ಇದಾಗಿದೆ.

೧೦. ಶಾಂತಿನಾಯಕ : ರಂಗೋಲಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೪

೧೧. ಡಾ. ಎಸ್. ಸಿ. ಪಾಟೀಲ : ರಂಗೋಲಿ ಚಿತ್ರಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೪

೧೧. ಹಚ್ಚೆ ಚಿತ್ರಕಲೆ

ಈ ಗ್ರಂಥವನ್ನು ಡಾ. ಎಸ್. ಸಿ. ಪಾಟೀಲರವರು ಬರೆದಿದ್ದು. ಇದು ಕೂಡ ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಪ್ರಕಟಗೊಂಡಿದೆ. ಹಚ್ಚೆ ಚಿತ್ರಕಲೆಯ ಪ್ರಪಂಚದಾದ್ಯಂತ ಬೆಳೆದು ಬಂದ ಹಿನ್ನೆಲೆಯನ್ನು ಮತ್ತು ಭಾರತದಲ್ಲಿ ಈ ಕಲೆಯ ಬೆಳವಣಿಗೆಯನ್ನು ಹೇಳುತ್ತ, ಕರ್ನಾಟಕದಲ್ಲಿ ಹಚ್ಚೆ ಚಿತ್ರಕಲೆ ಜನಾಂಗಿಕವಾಗಿ ಬೆಳೆದ ವಿವಿಧ ಮಜಲುಗಳನ್ನು ಚರ್ಚಿಸಿದ್ದಾರೆ.[೧೨] ಹಾಗೆಯೇ ಹಚ್ಚೆ ಚಿತ್ರಕಲೆ ರಚನಾ ವಿಧಾನ, ಪರಿಕರಗಳು ಮತ್ತು ಈ ಕಲೆಯ ಕುರಿತಾದ ಜನಪದ ನಂಬಿಗೆ, ಅಚರಣೆ, ಸಂಪ್ರದಾಯ, ಐತಿಹ್ಯ ಹಾಡುಗಳು, ಒಗಟು, ಗಾದೆ ಮುಂತಾದ ಜನಪದೀಯ ಅಂಶಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದ್ದಾರೆ. ಜನಪದ ಚಿತ್ರಕಲಾ ಪ್ರಕಾರಗಳಲ್ಲಿ ಹಚ್ಚೆ ಚಿತ್ರಕಲೆಯನ್ನು ಗುರುತಿಸಿ ಆ ಚಿತ್ರಗಳು ದೇಹದ ವಿವಿಧ ಭಾಗಗಳಲ್ಲಿ ರಚನೆಗೊಳ್ಳುವುದನ್ನು ವ್ಯವಸ್ಥಿತವಾಗಿ ವರ್ಗೀಕರಿಸಿ ಅಧ್ಯಯನ ಮಾಡಿದ್ದಾರೆ.

೧೨. ಶ್ರೀತತ್ವನಿಧಿ

ಮೈಸೂರು ದೊರೆಗಳು ಆಡಳಿತದಲ್ಲಿ ಶ್ರೇಷ್ಠರಾಗಿದ್ದಂತೆ, ಸಾಹಿತ್ಯ ಕಲೆಗಳಿಗೂ ಅಪಾರವಾಗಿ ಪ್ರೋತ್ಸಾಹ ನೀಡುತ್ತಿದ್ದುದು ತಿಳಿದುಬರುತ್ತದೆ.[೧೩] ಕೆಲವು ದೊರೆಗಳು ಸ್ವತಃ ಸಾಹಿತ್ಯ ರಚನೆಯನ್ನು ಮಾಡಿದ್ದು, ಅದರಲ್ಲಿ ಕೆಲವು ಸಾಹಿತ್ಯ ಕೃತಿಗಳು ಚಿತ್ರಕಲೆಯ ಅಂಶಗಳನ್ನು ಒಳಗೊಂಡಿವೆ. ಕೃಷ್ಣರಾಜ ಒಡೆಯರ್ ಬರೆದ ಶ್ರೀತತ್ವನಿಧಿಯು ಸಂಗೀತ ಮತ್ತು ಚಿತ್ರಕಲೆಯ ದೃಷ್ಟಿಯಿಂದ ಮಹತ್ವ ಪಡೆದುಕೊಂಡಿದೆ. ಇದನ್ನು ಸಾ.ಕೃ. ರಾಮಚಂದ್ರರಾವ್ ಅವರು ಸಂಪಾದನೆ ಮಾಡಿದ್ದಾರೆ. ಮೈಸೂರು ಅರಸರಾದ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಅಂದರೆ ಹತ್ತೊಂಭತ್ತನೆಯ ಶತಮಾನದ ಮಧ್ಯಭಾಗದಲ್ಲಿ ರಚಿತವಾದ ಸಚಿತ್ರ ಗ್ರಂಥವಿದು. ಇಲ್ಲಿ ಮೈಸೂರು ಚಿತ್ರಕಲೆಯ ಬಗೆಗೆ ಸ್ಥೂಲ ಇತಿಹಾಸ ಮತ್ತು ಮಾಹಿತಿಗಳನ್ನು ನೀಡಿದ್ದಾರೆ.

ವಿಜಯನಗರ ಪತನವಾದ ನಂತರ ವಿಜಯನಗರದ ಕಲಾವಿದರು ಮೈಸೂರಿಗೆ ವಲಸೆ ಬಂದು ಇಲ್ಲಿಯೇ ನೆಲೆನಿಂತು ಮೈಸೂರು ಚಿತ್ರಕಲೆ ಎಂಬ ಹೊಸ ಶೈಲಿಯನ್ನು ಹುಟ್ಟುಹಾಕಿದರು. ಭಾರತದಲ್ಲಿ ಕಿರುರೂಪ ಚಿತ್ರ, ಶೈಲಿ ಬೆಳೆದು ಸ್ಥೂಲನೋಟ, ಮೊಘಲ್, ರಜಪೂತ ಕಲಾಶೈಲಿಗಳು, ನಾಯಕ–ನಾಯಕಿಯರ ಚಿತ್ರಗಳು ಇಷ್ಟಲ್ಲದೇ ಸಂಗೀತದ ಸಪ್ತಸ್ವರಗಳು, ಮೂವತ್ತಾರು ರಾಗ ಲಕ್ಷಣಗಳು ಹಾಗೂ ರಾಗಮಾಲಾಚಿತ್ರಗಳ ತೌಲನಿಕ ನೋಟವನ್ನು ಸ್ಥೂಲವಾಗಿ ಕೊಡಲಾಗಿದೆ. ರಾಗಲಕ್ಷಣಗಳು, ಬಣ್ಣಗಳು ಸಪ್ತತಾಳಗಳ ಸ್ವರೂಪ ಇತ್ಯಾದಿಗಳು ಅಮೋಘವಾಗಿವೆ. 'ಗ್ರಹನಿಧಿ'ಯು ಜೋತಿಷ್ಯಶಾಸ್ತ್ರ ನಿಘಂಟುವಿನಂತಿದೆ. ಕಾಲಪುರುಷ, ಯುಗಗಳು, ಮನ್ವಂತರ, ಸಂವತ್ಸರ, ಅಯನ, ಯುಗ, ಋತು, ಮಾಸ, ಪಕ್ಷ, ತಿಥಿ, ವಾರ, ಗ್ರಹ, ರಾಶಿ, ನಕ್ಷತ್ರ ಇತ್ಯಾದಿ ಆಕಾರದ

---

೧೨. ಡಾ. ಎಸ್. ಸಿ. ಪಾಟೀಲ : ಹಚ್ಚೆ ಚಿತ್ರಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು ೨೦೦೪

೧೩. ಸಾ. ಕೃ. ರಾಮಚಂದ್ರ ರಾವ್ : ಶ್ರೀತತ್ವನಿಧಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೮

ಚಿತ್ರಗಳಿದ್ದು, ಕೆಲವು ಚಿತ್ರಗಳು ಚಿನ್ನದ ಬಣ್ಣದ ಲೇಪನವನ್ನು ಹೊಂದಿದ್ದು, ಪೂರ್ವ ಪ್ರಮಾಣದ ಕೃತಿಗಳಾಗಿವೆ. ಇದೊಂದು ಅತ್ಯುತ್ತಮವಾದ ಚಿತ್ರಿತ ಗ್ರಂಥವಾಗಿದೆ.

೧೩. ಕರ್ನಾಟಕದ ಚಿತ್ರಕಲೆಯಲ್ಲಿ ಬಣ್ಣದ ಬಳಕೆ

ಈ ಪುಸ್ತಕವನ್ನು ಕೆ.ವಿ. ಕಾಳೆಯವರು ಬರೆದಿದ್ದಾರೆ. ಚಿತ್ರಕಲಾವಿದರು ಬಳಸುವ ಬಣ್ಣಗಳನ್ನು ಎಣ್ಣೆ, ಬಣ್ಣ, ನೀರುಬಣ್ಣ, ಹುಡಿ ಬಣ್ಣ, ಪ್ಲಾಸ್ಟರ್ ಬಣ್ಣ, ಅಕ್ರಲಿಕ್ ಬಣ್ಣ, ಪೋಸ್ಟಲ್ ಬಣ್ಣ ಮುಂತಾದವುಗಳನ್ನು ವಿಂಗಡಿಸಿಕೊಂಡು ವಿವೇಚಿಸಲಾಗಿದೆ. ಇತಿಹಾಸ ಪೂರ್ವಕಾಲದಲ್ಲಿ ಬಣ್ಣದ ಬಳಕೆ, ಹಸ್ತಪ್ರತಿ ಚಿತ್ರಗಳಲ್ಲಿ ಬಣ್ಣದ ಬಳಕೆ, ತೊಗಲುಗೊಂಬೆ ಚಿತ್ರಕಲೆ, ಸೂತ್ರದ ಗೊಂಬೆ ಚಿತ್ರಕಲೆ, ಆಟಿಕೆಗೊಂಬೆಗಳಲ್ಲಿ ಬಣ್ಣದ ಬಳಕೆ ಇವುಗಳ ಬಗ್ಗೆ ಹೇಳಿದೆ. ನಂತರದಲ್ಲಿ ಕಾವಿಕಲೆಯಲ್ಲಿ ಬಣ್ಣ, ಮದರಂಗಿ ಬಣ್ಣ, ಹಚ್ಚೆ ಕಲೆಯಲ್ಲಿ ಬಣ್ಣ, ಗಂಜೀಫಾ ಕಲೆಯಲ್ಲಿ ಬಣ್ಣ, ಗಾಜಿನ ಚಿತ್ರಕಲೆಯಲ್ಲಿ ಬಣ್ಣದ ಬಳಕೆಯ ವಿವರ ಕೊಡಲಾಗಿದೆ.[೧೪] ಅದೇ ರೀತಿ ಮೈಸೂರು ಸಾಂಪ್ರದಾಯಿಕ ಕಲೆ, ಬಯಲಾಟದ ಪ್ರಸಾಧನ ಕಲೆ, ರಂಗಭೂಮಿ ಪರದೆಗಳು, ಯಕ್ಷಗಾನ ಮುಖವರ್ಣಿಕೆ ಮತ್ತು ರಂಗಸಜ್ಜಿಕೆ ಕಲೆಗಳಲ್ಲಿ ಬಣ್ಣದ ಬಳಕೆಯ ವಿಧಾನಗಳನ್ನು ಕುರಿತು ಹೇಳಲಾಗಿದೆ.

೧೪. ನಿಜದ ನೆಲೆ

ಡಾ. ಬಿ. ಕೆ. ಹಿರೇಮಠರ ಅಭಿನಂದನಾ ಗ್ರಂಥವಿದಾಗಿದ್ದು, ಇದರ ಸಂಪಾದನೆಯನ್ನು ಡಾ. ಎಸ್. ಸಿ. ಪಾಟೀಲ ಮತ್ತು ಸತ್ಯಾನಂದ ಪಾತ್ರೋಟರವರು ಮಾಡಿದ್ದಾರೆ.[೧೫] ಈ ಬೃಹತ್ ಅಭಿನಂದನಾ ಗ್ರಂಥದಲ್ಲಿ ಒಟ್ಟು ಮೂರು ಭಾಗಗಳನ್ನು ಮಾಡಲಾಗಿದೆ. ಒಂದನೆಯ ಭಾಗದಲ್ಲಿ ನಾಡಿನ ವಿವಿಧ ವಿದ್ವಾಂಸರು ಬರೆದ ಕಲೆಯ ಬಗೆಗಿನ ಎಪ್ಪತ್ನಾಲ್ಕು ಲೇಖನಗಳಿವೆ. ಪ್ರಾಗಿತಿಹಾಸ ಕಾಲದಿಂದ ಒಳಗೊಂಡು ಸಮಕಾಲೀನ ಕಲೆಯವರೆಗೆ ಹಲವು ವಸ್ತುವಿಷಯಗಳಿಗೆ ಸಂಬಂಧಿಸಿದಂತಹ ಲೇಖನಗಳು ಇಲ್ಲಿವೆ.

ಎರಡನೆಯ ಭಾಗದಲ್ಲಿ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಲೇಖನಗಳನ್ನು ನಾಡಿನ ಹಲವಾರು ವಿದ್ವಾಂಸರು ಬರೆದಿದ್ದಾರೆ. ಇಲ್ಲಿ ಒಟ್ಟು ಮೂವತ್ತನಾಲ್ಕು ಲೇಖನಗಳಿವೆ. ಮೂರನೆಯ ಭಾಗದಲ್ಲಿ ಪೂರ್ವಾರ್ಧದಲ್ಲಿ ಡಾ. ಬಿ. ಕೆ. ಹಿರೇಮಠರ ಒಡನಾಡಿಗಳಾದ ಮಕ್ಕಳು, ಅಳಿಯಂದಿರು, ವಿದ್ಯಾರ್ಥಿಗಳು, ಮಿತ್ರರು, ವಿದ್ವಾಂಸರು, ಗುರುಗಳು, ಸಹಪಾಠಿಗಳು ಹೀಗೆ ಅನೇಕ ಜನರು ತಮ್ಮ ಅನಿಸಿಕೆಗಳನ್ನು ಅವರ ಕುರಿತಾಗಿ ಬರೆದಿದ್ದಾರೆ. ಇಲ್ಲಿ ಒಟ್ಟು ಮೂವತ್ತಮೂರು ಲೇಖನಗಳಿವೆ. ಉತ್ತರಾರ್ಧದಲ್ಲಿ ಡಾ. ಬಿ. ಕೆ. ಹಿರೇಮಠರು ರಚಿಸಿದ ಸಾಹಿತ್ಯ ಕೃತಿ, ಲೇಖನಗಳು ಮತ್ತು ಚಿತ್ರಕಲಾಕೃತಿಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳಿವೆ. ಇಲ್ಲಿ ಒಟ್ಟು ಏಳು ಲೇಖನಗಳಿವೆ.

---

೧೪. ಕೆ. ವಿ. ಕಾಳೆ : ಕರ್ನಾಟಕದ ಚಿತ್ರಕಲೆಯಲ್ಲಿ ಬಣ್ಣದ ಬಳಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೦

೧೫. ಡಾ. ಎಸ್. ಸಿ. ಪಾಟೀಲ, ಸತ್ಯಾನಂದ ಪಾತ್ರೋಟ : ನಿಜದ ನೆಲೆ, (ಬಿ. ಕೆ ಹಿರೇಮಠರ ಅಭಿನಂದನಾ ಗ್ರಂಥ) ಮಲ್ಲಣಾರ್ಯ ಪ್ರಕಾಶನ, ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ. ೨೦೦೩

[illegible]

[illegible]

[illegible]

[illegible]

[illegible]

ನಿಜದ ನೆಲೆ ಕೃತಿಯಲ್ಲಿರುವ ಲೇಖನಗಳು ಚಿತ್ರಕಲೆಯ ದೃಷ್ಟಿಯಿಂದ ಮಹತ್ವದವುಗಳಾಗಿವೆ. ಚಿತ್ರಕಲೆಯ ವೈವಿಧ್ಯತೆಯ ಅಧ್ಯಯನವನ್ನು ನಾವಿಲ್ಲಿ ಕಾಣಬಹುದು. ಪ್ರಾಚೀನ ಚಿತ್ರಕಲಾ ಪ್ರಕಾರಗಳಲ್ಲಿ ಆದಿಮಾನವನ ಗುಹಾಚಿತ್ರಗಳು ಮತ್ತು ಭಿತ್ತಿಚಿತ್ರಗಳು ಪ್ರಮುಖವಾದವುಗಳಾಗಿದ್ದು, ಇವುಗಳನ್ನೊಳಗೊಂಡಂತೆ ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ, ಭಿತ್ತಿಚಿತ್ರಗಳಲ್ಲಿ ಐತಿಹಾಸಿಕ ವ್ಯಕ್ತಿಗಳು, ಬಿ. ಕೆ. ಹಳ್ಳಿಯ ಭಿತ್ತಿಚಿತ್ರಗಳು, ರಾಯಚೂರಿನ ಭಿತ್ತಿಚಿತ್ರಗಳು ಎಂಬುದಾಗಿ ಈ ವಿಷಯಕ್ಕೆ ಸಂಬಂಧಿಸಿದ ಮತ್ತು ಪೂರಕವಾಗಿ ಇರುವ ಹತ್ತು ಲೇಖನಗಳಿವೆ.

ಭಾರತೀಯ ಪ್ರಾಚೀನ ಚಿತ್ರಕಲಾ ಪ್ರಕಾರದಲ್ಲಿ ಹಸ್ತಪ್ರತಿ ಚಿತ್ರಕಲೆ ಪ್ರಮುಖವಾಗಿದ್ದು, ಇದಕ್ಕೆ ಸಂಬಂಧಿಸಿದ ಲೇಖನಗಳು ಮತ್ತು ಹಸ್ತಪ್ರತಿ ಚಿತ್ರಕಲೆಯ ಜೊತೆಗೆ ಸಾಹಿತ್ಯ ಮತ್ತು ಚಿತ್ರಕಲೆಯ ಬಗೆಗಿನ ಲೇಖನಗಳನ್ನು ಇಲ್ಲಿ ಹೆಸರಿಸಬಹುದು. ಶಾಸ್ತ್ರ, ಗ್ರಂಥಗಳು ಮತ್ತು ಚಿತ್ರಕಲೆ, ವಿಷ್ಣುಧರ್ಮೋತ್ತರ ಪುರಾಣ ಚಿತ್ರಕಲೆ, ಮಾನಸೊಲ್ಲಾಸ ಚಿತ್ರಕಲೆ, ಕರ್ನಾಟಕದ ಹಸ್ತಪ್ರತಿ ಚಿತ್ರಗಳು, ವೀರಶೈವ ಹಸ್ತಪ್ರತಿಗಳಲ್ಲಿ ಚಿತ್ರಕಲೆ, ಜೈನಹಸ್ತಪ್ರತಿಗಳಲ್ಲಿ ಚಿತ್ರಕಲೆ, ಮುಸ್ಲಿಂ ಹಸ್ತಪ್ರತಿಗಳಲ್ಲಿ ಚಿತ್ರಕಲೆ, ಉದ್ಧರಣೆಗಳು : ಚಿತ್ರಕಲೆ, ಜೈನ ಸಾಹಿತ್ಯದಲ್ಲಿ ಚಿತ್ರಕಲೆ, ವೀರಶೈವ ಸಾಹಿತ್ಯದಲ್ಲಿ ಚಿತ್ರಕಲೆ ಹೀಗೆ ಈ ಗುಂಪಿನಲ್ಲಿ ಒಳಗೊಳ್ಳುವ ಸುಮಾರು ಹದಿನೈದು ಲೇಖನಗಳಿವೆ.

ಪ್ರಸ್ತುತ ಅಭಿನಂದನಾ ಗ್ರಂಥವು ಕರ್ನಾಟಕದಲ್ಲಿ ಕನ್ನಡದ ಮಟ್ಟಿಗೆ ಒಂದು ಮೈಲುಗಲ್ಲಾಗಿದೆ ಎನ್ನಬಹುದು. ಇದರಲ್ಲಿರುವಷ್ಟು ಸಂಖ್ಯೆಯ ಕಲಾ ಲೇಖನಗಳು ಇದುವರೆಗೆ ಬೇರೆ ಯಾವುದೇ ಸಂಪುಟದಲ್ಲಿ ಪ್ರಕಟವಾಗಿಲ್ಲ. ಅಲ್ಲದೇ ವಿಷಯ ವೈವಿಧ್ಯತೆಯಿಂದಲೂ ಇದು ಬೇರೆ ಯಾವುದೇ ಸಂಪುಟಕ್ಕಿಂತ ಮುಂದಿದೆ. ಕರ್ನಾಟಕದ ಬಹುಪಾಲು ಕಲಾಪ್ರಕಾರಗಳು, ಕಲಾಸಾಹಿತ್ಯ, ವಿಮರ್ಶೆ, ಪರಂಪರೆ ಹೀಗೆ ಹಲವು ವಿಷಯಗಳು ಇಲ್ಲಿದ್ದು, ಸಂಶೋಧಕರಿಗೆ ಪ್ರಮುಖ ಆಕರ ಗ್ರಂಥವಾಗಿ ಮೂಡಿಬಂದಿದೆ.

೧೫. ದೃಷ್ಟಿಸೃಷ್ಟಿ

ಈ ಪುಸ್ತಕವನ್ನು ಡಾ. ಶಿವಾನಂದ ಎಚ್. ಬಂಟನೂರ ಅವರು ಬರೆದಿದ್ದಾರೆ.[೧೬] ಹನ್ನೆರಡು ವಿಮರ್ಶಾ ಲೇಖನಗಳನ್ನು ಒಳಗೊಂಡಿದೆ. ಕಲೆ ಒಂದು ಜಿಜ್ಞಾಸೆ, ಚಿತ್ರ-ಚಿತ್ರಾರ್ಥ, ಪುನರಾವಲೋಕನ, ಕಲೆ ಮತ್ತು ಮಾನಸಿಕ ದೂರ, ಕೋಲಾಜ್ ಕಲೆ – ಒಂದು ವಿಶ್ಲೇಷಣೆ, ಕರ್ನಾಟಕದ ಆಧುನಿಕ ಕಲಾ ಚಳುವಳಿ – ಆರಂಭದ ಘಟ್ಟ, ಕಲಾವಿಮರ್ಶೆಯ ಪರಿಭಾಷೆ ಮತ್ತು ವಿಮರ್ಶಕ, ದೃಶ್ಯಕಲೆಯ ಹೊಸ ಒಲವುಗಳು, ಸಮಕಾಲೀನ ದೃಶ್ಯಕಲೆ ಮೈವಳಿಕೆ ಹೊಸ ಪರಂಪರೆ ತೆರೆದ ಸಾಂಪ್ರದಾಯಿಕ ಚಿತ್ರಕಲೆ, ಬೇಂದ್ರೆ ಕಾವ್ಯಕ್ಕೆ ಹೆಬ್ಬಾರರ ರೇಖಾಚಿತ್ರಗಳು, ಆಧ್ಯಾತ್ಮಾನುಭವದ ಚಿತ್ರ ಸರಣಿ, ಸಮಕಾಲೀನ ಸ್ಪಂದನೆಯ ರೇಖಾಚಿತ್ರಗಳು, ವಿನ್ಸೆಂಟ್ ವ್ಯಾನ್‌ಗೋ

೧೬. ಡಾ. ಶಿವಾನಂದ ಹೆಚ್. ಬಂಟನೂರು : ದೃಷ್ಟಿಸೃಷ್ಟಿ,, ಅಲಕಾ ಪ್ರಕಾಶನ, ಬೀದರ. ೨೦೧೦

ಎಂಬ ಅದ್ಭುತ ವಿಕರ್ಷಣ ಶಕ್ತಿ ಹೀಗೆ ಮುಖ್ಯವಾದ ಶೀರ್ಷಿಕೆಯ ಲೇಖನಗಳಲ್ಲಿ ಕಲೆ ಕುರಿತಂತೆ ಹೇಳಲಾಗಿದೆ. 'ಕಲೆ' ಶಬ್ದವು ನಮ್ಮ ದೇಶದ ಸಾಂಸ್ಕೃತಿಕ ಚರಿತ್ರೆಯಲ್ಲಿ ಬಹಳ ಹಿಂದಿನಿಂದಲೇ ಬಳಕೆಯಾಗಿರುವುದು ಕಂಡುಬರುತ್ತದೆ. ಮತ್ತು ನಿಜವಾದ ಅರ್ಥದಲ್ಲಿ ಕಲೆ ಎಂದರೇನು? ಅದರ ಸ್ವರೂಪವೇನು? ಎಂಬುದರ ಕುರಿತು ಹಿಂದಿನಿಂದಲೂ ಅನೇಕ ದಾರ್ಶನಿಕರು, ಚಿಂತಕರು ಚರ್ಚಿಸುತ್ತಲೇ ಬಂದಿದ್ದಾರೆ. ಆದರೆ ಯಾರೊಬ್ಬರ ಚಿಂತನೆಯೂ ಇದೇ ಆತ್ಯಂತಿಕವೆಂಬಂತಿಲ್ಲ. ಕಾರಣ ಕಲೆ ಎಂದರೇನು? ಎಂಬುದು ಬಹುಶಃ ಜೀವನವೆಂದರೇನು? ಎಂಬ ಪ್ರಶ್ನೆಯಷ್ಟೇ ಗಮನವಾದುದು. ಏಕೆಂದರೆ ಕಲೆಗೆ ಅನೇಕ ಆಯಾಮಗಳಿವೆ. ಅನೇಕ ದಿಕ್ಕುಗಳಿವೆ. ಅನೇಕ ಉದ್ದೇಶ ಹಾಗೂ ವೈಶಿಷ್ಟ್ಯಗಳಿವೆ ಎಂಬುದು ಈ ಲೇಖನದ ಮುಖಾಂತರ ಸಾಧಿಸಲು ಹೊರಟಿದ್ದಾರೆ.

ಚಿತ್ರಕಲೆ ಕುರಿತು ಹೇಳುವುದಾದರೆ ಕೋಲಾಜ್ ಚಿತ್ರ ರಚನೆಯಲ್ಲಿ ಕಪ್ಪೆ ಚಿಪ್ಪುಗಳು, ಬಣ್ಣದ ದಾರ, ಹುಲ್ಲಿನ ಕಡ್ಡಿ, ತೆಂಗಿನ ಪೊರಚೆ, ನಾಟು, ಥರ್ಮಾಕೋಲ್, ಬಣ್ಣದ ಉಸುಗು, ಬಳೆಗಳ ಚೂರು, ಗಾಜು ಮುಂತಾದವುಗಳನ್ನು ಬಳಸಬಹುದು. ಇವುಗಳಿಂದ ಕಲಾಕೃತಿಗಳು ಬಣ್ಣ ಹಾಗೂ ಮೈವಳಿಕೆಯ ದೃಷ್ಟಿಯಿಂದಲೂ ಹೊಸ ಸೃಜನಶೀಲದತ್ತ ಕಸದಿಂದ ರಸ ಎಂಬುವಂತೆ ಕಲಾಕೃತಿಯ ರಚನೆ ಇಲ್ಲಿ ತಿಳಿದುಬರುತ್ತದೆ. ಹೊಸ ಪರಂಪರೆ ತೆರೆದ ಸಾಂಪ್ರದಾಯಿಕ ಪಾರಂಪರಿಕ, ನಿಸರ್ಗ, ಜಾನಪದ ಇತ್ಯಾದಿಗಳನ್ನೊಳಗೊಂಡ ಅರ್ಥವತ್ತಾದ ಸೀರೆಯ ವಿನ್ಯಾಸಗಳು, ಕಲಾತ್ಮಕವಾದ ಮಂಟಪ, ವೇದಿಕೆಗಳ ಕುರಿತಂತೆ ವಿವೇಚಿಸಲಾಗಿದೆ.

ಆಧ್ಯಾತ್ಮನುಭವದ ಚಿತ್ರ ಸರಣಿ ಲೇಖನದಲ್ಲಿ ಎ. ಎಸ್. ಪಾಟೀಲ ಮತ್ತು ಎಸ್. ಎಂ. ಪಂಡಿತರನ್ನು ಕುರಿತಂತೆ ತೌಲನಿಕವಾಗಿ ಹೇಳಲಾಗಿದೆ. ಎ. ಎಸ್. ಪಾಟೀಲ ಅವರಿಗಿಂತ ಹಿರಿಯ ತಲೆಮಾರಿನ ಕಲಾವಿದರಲ್ಲಿ ಪ್ರಮುಖರಾಗುವ ಎಸ್. ಎಂ. ಪಂಡಿತ ಮತ್ತು ಶಂಕರರಾವ ಆಳಂದಕರ ಅವರಿಗೆ ಕ್ರಮವಾಗಿ ಪುರಾಣ, ಕಾವ್ಯ ಮತ್ತು ಆಧ್ಯಾತ್ಮಗಳು ಮೂಲ ಸಂವೇದನೆಗಳಾದರೆ, ಮಾನವಾಕಾರಗಳೇ ಈ ಇಬ್ಬರ ಕಲಾವಿದರ ಸಂವೇದನೆಗೂ ಮೂರ್ತ ರೂಪದ ಪಾತ್ರಗಳಾಗಿವೆ. ಆಳಂದಕರರ ಹಾಗೆಯೇ ಆಧ್ಯಾತ್ಮವೇ ಮೂಲ ಸಂವೇದನೆಯಾಗಿದ್ದರೂ ಪಾಟೀಲರ ಸೃಷ್ಟ್ಯಾತ್ಮಕ ಕ್ರಿಯೆಯ ಉದ್ದಕ್ಕೂ ಹೂಗಳೇ ಚಿತ್ರಮಾಲೆಯಾಗಿವೆ. ಹೀಗೆ ಹಲವು ವಿಷಯಗಳನ್ನು ಕುರಿತಂತೆ ಲೇಖನಗಳ ಕ್ರೋಢೀಕೃತ ಪುಸ್ತಕವಿದಾಗಿದೆ.

೧೪. ವಿ.ಟಿ. ಕಾಳೆ

ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ನೆಲೆಸಿರುವ ಕಲಾವಿದರಾದ ವಿ.ಟಿ. ಕಾಳೆಯವರನ್ನು ಕುರಿತಂತೆ ಡಾ. ಎಸ್. ಸಿ. ಪಾಟೀಲರು ಈ ಕೃತಿಯನ್ನು ರಚಿಸಿದ್ದಾರೆ.[೧೭] ವಿ.ಟಿ. ಕಾಳೆಯವರು

---

೧೭. ಡಾ. ಎಸ್. ಸಿ. ಪಾಟೀಲ : ವಿ. ಟಿ. ಕಾಳೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೪

ಸಮಕಾಲೀನ ಕಲಾಸಂದರ್ಭದಲ್ಲಿ ಚಿತ್ರಕಾರರಾಗಿ, ಕಲಾಶಿಕ್ಷಕರಾಗಿ, ಕಲಾಬರಹಗಾರರಾಗಿ, ಶಿಲ್ಪಕಾರರಾಗಿ, ಸಂಗೀತಗಾರ, ನಾಟಕ ನಿರ್ದೇಶಕರಾಗಿ, ನಟರಾಗಿ, ಪ್ರಸಾಧನ ಕಲಾವಿದರಾಗಿ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಗಮನಾರ್ಹವಾಗಿ ಗುರುತಿಸಿಕೊಂಡಿರುವ ಶ್ರೀಯುತರ ಜೀವನ ಸಾಧನೆಯ ಸ್ಥೂಲ ಪರಿಚಯವಿಲ್ಲಿದ್ದು, ಚಿತ್ರಕಲಾವಿದರಾಗಿ ಅವರನ್ನು ಅಧ್ಯಯನಕ್ಕೊಳಪಡಿಸಲಾಗಿದೆ. ಇವರ ಹುಟ್ಟು, ಬಾಲ್ಯ, ಸಾಂಸ್ಕೃತಿಕ ಪರಿಸರ, ಕಲೆಯ ಕೊಡುಗೆ, ಚಿತ್ರಕಲೆ ಒಲಿದ ಕಾಳೆಯವರ ಮನಸ್ಸಿಗೆ ಸ್ಫೂರ್ತಿ ವಾತಾವರಣ, ಮುಂದೆ ಕಲಾಶಿಕ್ಷಣಕ್ಕಾಗಿ ಪಯಣ, ಕಲಾಶಿಕ್ಷಣ, ಶಿಕ್ಷಕವೃತ್ತಿ ಕಲಾಚಟುವಟಿಕೆಗಳು ಮುಂತಾದ ವಿಷಯವನ್ನು ಸ್ಥೂಲವಾಗಿ ಹೇಳಲಾಗಿದೆ. ಇವರ ಕಲಾಕೃತಿಗಳ ಅಧ್ಯಯನ ಅಂಶಗಳನ್ನು ಕೆಲವು ಚಿತ್ರಕಲಾ ಪ್ರಕಾರತೆಯಲ್ಲಿ ವಿಂಗಡಿಸಿಕೊಂಡು ವಿಶ್ಲೇಷಿಸಲಾಗಿದೆ.

ಇವರ ಕಲಾಕೃತಿಯನ್ನು ಕುರಿತು ಹೇಳುವುದಾದರೆ ಸತ್‌ಕ್ರಿಯೆಯಿಂದ ಮನಸ್ಸು ಶುದ್ಧಿ, ಸದ್‌ವಿಚಾರದಿಂದ ಬುದ್ಧಿಯ ಶುದ್ಧಿ, ಅನುಭವದ ಭಾವದಿಂದ ಭಾವಶುದ್ಧಿ, ಆನಂದದಿಂದ ಆತ್ಮಶುದ್ಧಿ ಆಗುತ್ತದೆ. ಹಾಗೆಯೇ ದೇಹಪೋಷಕವಾದ ಅನ್ನಕ್ಕೆ ಮಹತ್ವ ಕೊಡುವ ನಾವು ಆತ್ಮ ಪೋಷಕವದ ಆನಂದಕ್ಕೆ ಹೆಚ್ಚು ಗಮನಹರಿಸಿಲ್ಲ. ಅದು ಲಲಿತಕಲೆಗಳಂತಹ ಮಾಧ್ಯಮಗಳಿಂದ ಮಾತ್ರ ಸಾಧ್ಯವಾಗುವಂತಹದು. ಕಾಳೆಯವರ ಅಪಾರವಾದ ಕಲಾಕೃತಿಗಳನ್ನು ವೀಕ್ಷಿಸಿದಾಗ ಮೇಲಿನ ಮಾತುಗಳಿಗೆ ಉತ್ತರ ಸಿಗುತ್ತದೆ. ಅಕಾಡೆಮಿಕ್ ಶೈಲಿ ಕಲಾಕೃತಿಗಳ ರಚನೆಯಲ್ಲಿ ಹೆಚ್ಚು ಆಸಕ್ತಿ ಹೊಂದಿರುವ ಕಲಾವಿದ ವಿ.ಟಿ. ಕಾಳೆಯವರು ಮೂಲತಃ ವ್ಯಾಕರಣಬದ್ಧ ಕಲಾಶಿಕ್ಷಣ ಪಡೆದವರು ಮತ್ತು ಅದರಲ್ಲೇ ಹೆಚ್ಚು ಒಲವು ಹೊಂದಿರುವುದನ್ನು ಅವರ ಕಲಾಕೃತಿಗಳನ್ನು ನೋಡಿದಾಗ ಗ್ರಹಿಸಬಹುದು.

ಕಾಳೆಯವರ ಕಲಾಕೃತಿಗಳನ್ನು ಪ್ರಮುಖವಾಗಿ ಎಂಟು ರೀತಿಯಲ್ಲಿ ವಿಂಗಡಿಸಬಹುದು. ಭಾವಚಿತ್ರ, ಮತ್ತು ವ್ಯಕ್ತಿಚಿತ್ರಗಳು, ದೇವತಾಚಿತ್ರಗಳು, ಸಂಯೋಜನಾ ಚಿತ್ರಗಳು, ನಿಸರ್ಗ ಚಿತ್ರಗಳು, ಭಿತ್ತಿಚಿತ್ರಗಳು, ನಕಲು ಚಿತ್ರಗಳು, ನವ್ಯಶೈಲಿಯ ಸೃಜನಾತ್ಮಕ ಚಿತ್ರಗಳು, ರೇಖಾಚಿತ್ರಗಳು, ಶಿಲ್ಪಕಲಾಕೃತಿಗಳು ಇವುಗಳನ್ನು ಸ್ಥೂಲವಾಗಿ ಇಲ್ಲಿ ನೋಡಲಾಗಿದೆ. ಚಿತ್ರಕಲೆಯ ವಾಪ್‌ತಂತ್ರದಲ್ಲಿ ಚಿತ್ರಿಸಲಾಗಿ ಈ ಪದ್ಧತಿಯಲ್ಲಿ ದೇವತೆಗಳ ಚಿತ್ರಗಳಲ್ಲಿ ಏಳು ಹಂಸಗಳನ್ನು ಹೂಡಿದ ರಥದಲ್ಲಿ ಕುಳಿತು ಪಯಣಿಸುತ್ತಿರುವ ವರುಣದೇವನ ಚಿತ್ರ, ಸೂರ್ಯ, ಅಗ್ನಿ, ವಾಯು, ಇಂದ್ರ, ಕೌಮಾರಿ, ಐಂದ್ರಿ, ಬ್ರಾಹ್ಮಿ, ಚಂಡಿ, ವಾರಾಹಿ, ವಾರಸಿಂಹಿ ಮುಂತಾದವುಗಳು ಪ್ರಮುಖವಾದ ದೇವತೆಯ ಚಿತ್ರಗಳಾಗಿವೆ. ಮತ್ತು ರಾಗಮಾಲಾಕ್ಕೆ ಸಂಬಂಧಿಸಿದ ಸಂಯೋಜನಾ ಚಿತ್ರಗಳಲ್ಲಿ ವಿಶೇಷವಾದ ಚಿತ್ರಗಳಾಗಿವೆ. ಅಂದಿನ ಸಮಕಾಲೀನ ಕಲೆಯ ತಂತ್ರಗಾರಿಕೆ, ವರ್ಣವಿನ್ಯಾಸ, ರೇಖೆ, ಆಧುನಿಕ ಕಲೆ ಮುಂತಾದ ಕುರಿತು ಇಲ್ಲಿ ವಿಶ್ಲೇಷಿಸಲಾಗಿದೆ. ಮತ್ತು ಕಾಳೆಯವರು ಬಹುಮುಖಿ ಎಂದು ತೋರಿಸಿಕೊಟ್ಟ ವ್ಯಕ್ತಿ ಆಧರಿತ ಕೃತಿಯಾಗಿದೆ.

೧೫. ಬಳ್ಳಾರಿ ಜಿಲ್ಲೆಯ ಚಿತ್ರಕಲೆ

ಡಾ. ಎಚ್. ಈ. ಬಸವರಾಜಪ್ಪನವರು ಬಳ್ಳಾರಿ ಜಿಲ್ಲೆಯ ಚಿತ್ರಕಲೆ ಕುರಿತಂತೆ ಸ್ಥೂಲ ಪರಿಚಯ ಮಾಡಿದ್ದಾರೆ. ಡಾ. ಎಚ್. ಬಸವರಾಜಪ್ಪನವರು ಇತಿಹಾಸಕಾರರಾದರೂ ಚಿತ್ರಕಲೆಯನ್ನು ಕುರಿತು ಹೇಳುವ ಪ್ರಯತ್ನ ಮಾಡಿದ್ದಾರೆ.[೧೮] ಕರ್ನಾಟಕ ಇತಿಹಾಸವನ್ನು ಕಲೆಗಳ ದೃಷ್ಟಿಯಿಂದ ಪರಿಶೀಲಿಸಿದರೆ ಅದರ ಭವ್ಯತೆ, ಸೌಂದರ್ಯ ಮತ್ತು ವೈವಿಧ್ಯಗಳು ಎಂಥವರನ್ನು ಬೆರಗುಗೊಳಿಸುತ್ತವೆ ಎನ್ನುವ ಇವರು ಪ್ರಾಗೈತಿಹಾಸಿಕ ಕಾಲ, ಪೂರ್ವಭಾವಿ ಇತಿಹಾಸ ಕಾಲಗಳಲ್ಲಿಯೂ ಬಳ್ಳಾರಿ ಜಿಲ್ಲೆಯಲ್ಲಿ ಕಲಾಚಟುವಟಿಕೆ ನಡೆದಿದೆ. ವಿಜಯನಗರ ಅರಸರ ಕಾಲಾವಧಿಯಲ್ಲಿ ಈ ನೆಲದಲ್ಲಿ ದಕ್ಷಿಣ ಭಾರತದಲ್ಲಿಯೇ ತನ್ನ ಪ್ರಭಾವ ಬೀರಿದ ವಿಶಿಷ್ಟವಾದ ಭಿತ್ತಿಚಿತ್ರ ಪರಂಪರೆ ಬೆಳೆದು ಬಂದಿದೆ ಎಂದು ಹೇಳುತ್ತಾರೆ. ಮತ್ತು ಚಿತ್ರಕಲಾ ಪ್ರಕಾರಗಳಾದ ಪ್ರಾಚೀನ ಚಿತ್ರಕಲೆ, ಭಿತ್ತಿಚಿತ್ರಕಲೆ, ಜನಪದ ಚಿತ್ರಕಲೆ ಹಾಗೂ ಕಲಾವಿದರನ್ನು ಕುರಿತಂತೆ ಇಲ್ಲಿ ಸ್ಥೂಲ ಪರಿಚಯ ಮಾಡಲಾಗಿದೆ.

೧೬. ದೃಶ್ಯಾನುಭವ

ಕೆಲವು ಸ್ಮರಣ ಸಂಚಿಕೆ, ಅಭಿನಂದನಾ ಗ್ರಂಥಗಳಿಗೆ ಬರೆದ ಲೇಖನಗಳಲ್ಲಿ ಕೆಲವೊಂದನ್ನು ಇಲ್ಲಿ ಒಂದೆಡೆಗೆ ಸಂಕಲಿಸಿ ದೃಶ್ಯಾನುಭವ ಎನ್ನುವ ಶೀರ್ಷಿಕೆಯ ಪುಸ್ತಕವನ್ನು ಡಾ. ಮೋಹನರಾವ್ ಬಿ. ಪಂಚಾಳ ಅವರು ಬರೆದಿದ್ದಾರೆ.[೧೯] ಈ ಪುಸ್ತಕದಲ್ಲಿ ಬೀದರಿನ ಬಿದರಿ ಕರಕುಶಲಕಲೆ, ಜನಪದ ಶೀಗಿ ಚಿತ್ರಶಿಲ್ಪಕಲೆ, ರೇಖಾಚಿತ್ರ ಕಲೆಯ ಒಂದು ಸ್ಥೂಲ ನೋಟ, ಕಲಾವಿದ ಪಾಬ್ಲೋ ಪಿಕಾಸೋ, ಕಲಾವಿದ ಡಾ. ಎಸ್. ಎಂ. ಪಂಡಿತ – ಒಂದು ಅವಲೋಕನ, ಕಲೆ, ಕಲಾವಿದರ ಕುರಿತು ಡಾ. ಎಸ್. ಎಂ. ಪಂಡಿತರ ವಿಚಾರಗಳು, ಗದಗ ವಿಜಯ ಲಲಿತಕಲಾ ಮಹಾವಿದ್ಯಾಲಯ – ಕೆಲವು ಟಿಪ್ಪಣಿಗಳು ಹೀಗೆ ಒಟ್ಟು ಏಳು ಲೇಖನಗಳಲ್ಲಿ ಚರ್ಚಿಸಿದ್ದಾರೆ. ಕರ್ನಾಟಕದ ಇತರೇ ಕರಕುಶಲ ಕಲೆಗಳಿಗೆ ಹೋಲಿಸಿದರೆ ಬೀದರಿನ ಬಿದ್ರಿ ಕರಕುಶಲ ಕಲೆಯು ತುಂಬಾ ವಿಭಿನ್ನವಾಗಿದೆ. ಇಂತಹ ಕಲೆಯನ್ನು ಕುರಿತು ಐತಿಹಾಸಿಕತೆಯ ಹಿನ್ನೆಲೆ, ಬಿದರಿ ಕಲಾಕೃತಿಗಳ ಹರವು, ಬಿದರಿ ಕರಕುಶಲ ಕಲೆಗೆ ಬಳಸುವ ಕಚ್ಚಾ ಸಾಮಗ್ರಿಗಳು ಬಿದರಿ ಕರಕುಶಲಕಲೆಯಲ್ಲಿ ಬಳಸುವ ಪರಿಕರಗಳು ಮತ್ತು ಈ ಬಿದರಿಕಲೆಯ ರಚನಾ ವಿಧಾನವನ್ನು ಕುರಿತಂತೆ ಸ್ಥೂಲವಾಗಿ ವಿಶ್ಲೇಷಿಸಿದ್ದಾರೆ.

ಜನಪದ ಶೀಗಿ ಶಿಲ್ಪಕಲೆಯನ್ನು ಕುರಿತಂತೆ ಶೀಗಿ ರಚನಾ ಸಂದರ್ಭಗಳು, ಪರಿಕರಗಳು ಮತ್ತು ರಚನಾ ವಿಧಿ–ವಿಧಾನ ಕುರಿತು ಪರಿಚಯವಲ್ಲದೆ ರೇಖಾಚಿತ್ರಕಲೆ ಒಂದು ಅವಲೋಕನದ ಲೇಖನದಲ್ಲಿ ಪ್ರಾಗೈತಿಹಾಸಿಕದಿಂದ ಆಧುನಿಕದವರೆಗಿನ ರಚನೆ ಕುರಿತು ಸ್ಥೂಲವಾಗಿ ವಿಶ್ಲೇಷಿಸಿದ್ದಾರೆ. ಮತ್ತು ಕಲಾವಿದ ಪಾಬ್ಲೊ ಪಿಕಾಸೋ ಮತ್ತು ಕಲಾವಿದ ಡಾ. ಎಸ್. ಎಂ. ಪಂಡಿತರ ಜೀವನ

---

೧೮. ಡಾ. ಎಚ್. ಈ. ಬಸವರಾಜಪ್ಪ : ಬಳ್ಳಾರಿ ಜಿಲ್ಲೆಯ ಚಿತ್ರಕಲೆ, ಪ್ರಸಾರಾಂಗ, ಕ.ವಿ.ವಿ. ಹಂಪಿ., ೨೦೦೬

೧೯. ಡಾ. ಮೋಹನರಾವ್. ಬಿ. ಪಂಚಾಳ : ದೃಶ್ಯಾನುಭವ, ಅನ್ನಪೂರ್ಣೇಶ್ವರಿ ಪ್ರಕಾಶನ, ಬೀದರ. ೨೦೧೦

ಮತ್ತು ಕಲಾಕೃತಿಗಳನ್ನು ಪರಿಚಯಿಸಿದ್ದಾರೆ. ಹಾಗೂ ಗದಗಿನ ವಿಜಯ ಲಲಿತಕಲಾ ಮಹಾವಿದ್ಯಾಲಯದ ಹುಟ್ಟು, ಬೆಳವಣಿಗೆ ರೂವಾರಿಯನ್ನು ಮತ್ತು ಈ ವಿದ್ಯಾಲಯದ ಕಲಾಚಟುವಟಿಕೆಯನ್ನು ಕುರಿತಂತೆ ಚರ್ಚಿಸಲಾಗಿದೆ.

೧.೨. ಸಂಶೋಧನೇತರ ಚಿತ್ರಕಲಾ ಸಾಹಿತ್ಯ

೧. ಚಿತ್ರಕಲಾ ದರ್ಪಣ

ಬಳ್ಳಾರಿ ಜಿಲ್ಲೆಯ ಪ್ರಖ್ಯಾತ ಕಲಾವಿದರಾದ ಡಾ. ವಿ.ಟಿ. ಕಾಳೆಯವರು ಚಿತ್ರಕಲಾ ದರ್ಪಣ ಎಂಬ ಕೃತಿಯನ್ನು ಬರೆದಿದ್ದಾರೆ.[೨೦] ಇದನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯವರು ಪ್ರಕಟಿಸಿದ್ದಾರೆ. ಇದರಲ್ಲಿ ಕಲೆಯ ಕುರಿತು ಹಲವಾರು ಮಾಹಿತಿಗಳು ಸ್ಥೂಲ ರೂಪದಲ್ಲಿ ಹೇಳಲ್ಪಟ್ಟಿದೆ. ಹಲವು ಚಿತ್ರಕಲಾ ಪ್ರಕಾರಗಳ ಬಗ್ಗೆ ಬೆಳಕು ಚೆಲ್ಲುವ ಇದು ವಿಶ್ವಕೋಶ ಮಾದರಿಯಲ್ಲಿದೆ. ಕಲೆ ಎಂದರೇನು? ಈ ಕಲೆಯ ಪೂರ್ವದ ಕಲೆ, ಆದಿಮಾನವನ ಚಿತ್ರಕಲೆಯ ತಂತ್ರ, ನೂತನ ಶಿಲಾಯುಗ ಮತ್ತು ಕಂಚಿನ ಯುಗ, ಪ್ರಾಚೀನ ಕಬ್ಬಿಣಯುಗ, ಭಾರತದಲ್ಲಿ ಆದಿಮಾನವನ ಚಿತ್ರಕಲೆ, ಪ್ರಾಚೀನ ಕಲಾಸಂಸ್ಕೃತಿಗಳು, ಭಾರತೀಯ ಕಲಾಪರಂಪರೆಗಳಲ್ಲಿ ಕಿರುರೂಪ ಚಿತ್ರಗಳಾದ ರಜಪೂತ, ಕಿಷನ್‌ಗಡ, ಪಹಾಡಿ, ಮೈಸೂರು ಶೈಲಿ ಮುಂತಾದವುಗಳ ಬಗೆಗೆ ಹೇಳಲಾಗಿದೆ.

ಮುಂದಿನ ಹಂತದಲ್ಲಿ ಪಾಶ್ಚಾತ್ಯ ಕಲಾಸಂಪ್ರದಾಯಗಳಲ್ಲಿ ಕಿನಾಯ್ಸನ್ಸ್, ರೋಕೊಕೊ, ಬ್ರಿಟಿಷ್ ಕಲೆ, ಜಪಾನೀಚಿತ್ರಕಲೆ, ಅಮೇರಿಕಾದ ಕಲೆ ಕುರಿತಂತೆ, ಆಧುನಿಕ ಕಲೆ– ಪಂಥಗಳಾದ ರಿಯಾಲಿಸಂ, ಎಕ್ಸ್‌ಪ್ರೆಶನಿಸಂ, ಇಂಪ್ರೆಶನಿಸಂ, ಅಮೂರ್ತಕಲೆ, ಫಾವಿಜಂ, ಕ್ಯೂಬಿಜಂ, ಪರಿಣಾಮೋತ್ತರ ಪಂಥ, ಪ್ಯೂಚರಿಸಂ, ಬೈಜಂಟಾಯನ್ ಕಲೆ, ಆಫ್ರಿಕನ್ ಕಲೆ, ಗೋಥಿಕ್‌ಕಲೆ, ಜರ್ಮನ್ ಕಲೆ ಕುರಿತು ವಿವೇಚಿಸಲಾಗಿದೆ. ನಂತರ ಭಾರತೀಯ ಕಲೆಯಲ್ಲಿ ಕಂಡುಬರುವ ಕಲಾಕೃತಿಗಳು ಮತ್ತು ರಚನಾಕಾಲಗಳು, ಸಿಂಧೂ ಸಂಸ್ಕೃತಿಯಿಂದ ಆಧುನಿಕ ಭಾರತದಲ್ಲಿ ಚಿತ್ರಕಲೆಯ ಕುರಿತಂತೆ ಕಲಾಕೃತಿಗಳು, ವರ್ಣಗಳು, ಚಿತ್ರರಚನಾ ವಿಧಿ–ವಿಧಾನವನ್ನು ಹೇಳಲ್ಪಟ್ಟಿವೆ. ಭಾರತದ ಅಜಂತಾ, ಜೈನ ಹಸ್ತಪ್ರತಿ ಚಿತ್ರಕಲೆ, ರಾಜಸ್ಥಾನ ಪ್ರದೇಶದ ಕಿರುರೂಪ ಚಿತ್ರಶೈಲಿಗಳನ್ನು ಪರಿಚಯಿಸಿದೆ. ಕೆತ್ತನೆ ಕಲೆಯ ಕುರಿತು ಮುದ್ರಣ ಫಲಕ ತಯಾರಿಕಾ ಎಚ್ಚಿಂಗ್, ಡ್ರೈ ಪಾಯಿಂಟ್ ಮುಂತಾದ ಸಂಕ್ಷಿಪ್ತ ಮಾಹಿತಿ ಇವೆ.

೨. ಬಾರಾಮಾಸ

ಈ ಕೃತಿಯನ್ನು ಶಾಂತರಸರು ಸಂಪಾದನೆ ಮಾಡಿದ್ದು, ಹನ್ನೆರಡು ತಿಂಗಳುಗಳಲ್ಲಿ ನಿಸರ್ಗದ ಪರಿಣಾಮ ಹೇಗಿರುತ್ತದೆ ಎಂಬ ವಿವರ ಇದರಲ್ಲಿದೆ.[೨೧] ಬಾರಾಮಾಸ ಎಂದರೆ

೨೦. ವಿ. ಟಿ. ಕಾಳೆ : ಚಿತ್ರಕಲಾ ದರ್ಪಣ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೪

೨೧. ಶಾತಂರಸ (ಸಂ.) : ಬಾರಾಮಾಸ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೩

[illegible]

ಹನ್ನೆರಡು ತಿಂಗಳುಗಳು. ಈ ಹನ್ನೆರಡು ತಿಂಗಳುಗಳಲ್ಲಿ ಪ್ರಕೃತಿಯು ಬೇರೆ ಬೇರೆ ಲಕ್ಷಣಗಳಿಂದ ಕಂಗೊಳಿಸುತ್ತದೆ, ಚೈತ್ರದ ಚಿಗುರು, ವೈಶಾಖದ ಹಸಿರು, ವಸಂತ ಋತುವಿನ ಆಕರ್ಷಣೆ, ಹೀಗೆ ಹಲವು ಕಾಲಮಾನಗಳಲ್ಲಿ ಪ್ರಕೃತಿ ಬದಲಾಗುತ್ತದೆ. ಅದಕ್ಕನುಸಾರವಾಗಿ ನಮ್ಮ ಬದುಕು ಪರಿವರ್ತನೆ ಹೊಂದುತ್ತಿರುತ್ತದೆ. ಈ ಹಿನ್ನೆಲೆಯಲ್ಲಿ ಗಂಡು, ಹೆಣ್ಣಿನ ಸಂಬಂಧಗಳನ್ನು ಬಿಡಿಸಿದಾಗ ಅನೇಕ ಕುತೂಹಲಕಾರವಾದ ಸಂಗತಿಗಳು ಗೋಚರಿಸುತ್ತವೆ. ಸರಸ, ವಿರಸ ಇಂತಹ ಭಾವನಾತ್ಮಕ ಸಂಬಂಧಗಳಲ್ಲಿ ಶ್ರೇಯಸ್ಸನ್ನು ಕೇಂದ್ರವಾಗಿಟ್ಟುಕೊಂಡು ಹಲವು ಜನ ಪ್ರಾಚೀನ ಕವಿಗಳು ಸಾಹಿತ್ಯ ರಚನೆ ಮಾಡಿದ್ದಾರೆ. ಈ ಗ್ರಂಥದಲ್ಲಿ ಬಾರಾಮಾಸದ ಋತುವರ್ಣನೆಗಳನ್ನು ಪರಿಣಾಮಕಾರಿಯಾಗಿ ಮಾಡಲಾಗಿದ್ದು, ಆಯಾ ಋತುಗಳ ವರ್ಣನೆಗೆ ಸಂಬಂಧಿಸಿದಂತೆ ಚಿತ್ರಗಳನ್ನು ರಚಿಸಲಾಗಿದೆ.

ಈ ಪುಸ್ತಕದಲ್ಲಿನ ಚಿತ್ರಗಳನ್ನು ಕಿರುರೂಪ ಚಿತ್ರರಚನೆಯಲ್ಲಿ ಪ್ರಖ್ಯಾತರಾದ ಕಲಾವಿದ ಗುಲ್ಬರ್ಗಾದ ವಿಜಯ ಹಾಗರಗುಂಡಗಿ ಅವರು ರಚನೆ ಮಾಡಿದ್ದಾರೆ. ಈ ಕೃತಿಯ ಆಶಯಗಳಿಗೆ ಹೊಂದಿಕೆಯಾಗುವಂತೆ ಕಲ್ಲೂರು ಲಿಂಗಣ್ಣ ಒಡೆಯರ ಚಿತ್ರಗಳಿವೆ. ರಾಜಸ್ಥಾನದ ಕಿರುರೂಪ ಚಿತ್ರಶೈಲಿಗಳಲ್ಲಿಯೂ ಬಾರಾಮಾಸಕ್ಕೆ ಸಂಬಂಧಿಸಿದ ಹಲವಾರು ಚಿತ್ರಗಳಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಕಿರುರೂಪ ಚಿತ್ರರಚನೆಯಲ್ಲಿ ಖ್ಯಾತಿಯನ್ನು ಹೊಂದಿರುವ ವಿಜಯ ಹಾಗರಗುಂಡಗಿ ಅವರು ಕರ್ನಾಟಕದಲ್ಲಿ ಸುರಪುರ ಚಿತ್ರಕಲಾ ಶೈಲಿಯನ್ನು ಕರಗತ ಮಾಡಿಕೊಂಡು ಆದರಲ್ಲಿ ಪಳಗಿದ್ದಾರೆ. ಆ ಕಲೆಯ ಪ್ರಮುಖ ಲಕ್ಷಣಗಳನ್ನು ಅನುಸರಿಸಿ ರಚಿಸಿದ ಇಲ್ಲಿನ ಬಾರಾಮಾಸದ ಚಿತ್ರಗಳು ಕಿರುರೂಪ ಚಿತ್ರಶೈಲಿಯ ಉತ್ತಮ ಕೃತಿಗಳ ಸಾಲಿಗೆ ಸೇರುತ್ತವೆ. ಈ ಸಾಹಿತ್ಯ ಕೃತಿಯು ಸಾಹಿತ್ಯಕ ವಿಷಯವನ್ನು ಗೌಣವಾಗಿಸಿದರೂ ಉತ್ತಮವಾದ ಕಿರುರೂಪ ಚಿತ್ರಕಲೆಯ ಸಂಪುಟವಿದಾಗಿದೆ ಎಂದು ಹೇಳಬಹುದು.

೩. ಚಿತ್ರಕಲಾವಿದ ಡಾ. ಎಸ್. ಎಂ. ಪಂಡಿತ್

ಡಾ. ಮೋಹನರಾವ್ ಬಿ. ಪಂಚಾಳ ಅವರು ಡಾ. ಎಸ್. ಎಂ. ಪಂಡಿತರ ಕುರಿತಂತೆ ಈ ಸಂಶೋಧನಾ ಕೃತಿಯನ್ನು ರಚಿಸಿದ್ದಾರೆ.[೨೨] ಪಂಡಿತರ ನೆಲೆಯಾದ ಗುಲ್ಬರ್ಗಾದ ಪರಿಸರ, ಅವರ ಕಲಾಶಿಕ್ಷಣ, ಕೌಟುಂಬಿಕ ಜೀವನ, ಕಲಾಬದುಕು ಕುರಿತಂತೆ ವಿವರಿಸಲಾಗಿದೆ. ಇವುಗಳೊಂದಿಗೆ ಕಲಾಕೃತಿಗಳನ್ನು ವರ್ಗೀಕರಣ ಮಾಡಿಕೊಂಡು ವಿಶ್ಲೇಷಿಸಲಾಗಿದೆ.

ರೇಖಾಚಿತ್ರಕಲೆ, ವರ್ಣಚಿತ್ರಕಲೆಯೆಂದು ವರ್ಗೀಕರಣ ಮಾಡಿಕೊಂಡು ರೇಖಾಚಿತ್ರಕಲೆ ಕುರಿತಂತೆ ದೈನಂದಿನ ರೇಖಾಚಿತ್ರಗಳು, ಶಿರಭಾವ ರೇಖಾಚಿತ್ರಗಳು, ಸಂಯೋಜನಾ ರೇಖಾಚಿತ್ರಗಳಲ್ಲಿ ಚಲನಚಿತ್ರ, ಕ್ಯಾಲೆಂಡರ್ ಚಿತ್ರ ಮತ್ತು ಆಧ್ಯಾತ್ಮಿಕ, ಪೌರಾಣಿಕ ಮತ್ತು ಧಾರ್ಮಿಕ ಸಂಯೋಜನಾ ರೇಖಾಚಿತ್ರಗಳು ಮತ್ತು ನಿಸರ್ಗ ರೇಖಾಚಿತ್ರಗಳೆಂದು ವಿಂಗಡಿಸಿ ಚರ್ಚಿಸಲಾಗಿದೆ. ದೈನಂದಿನ

೨೨. ಡಾ. ಮೋಹನರಾವ್ ಬಿ. ಪಂಚಾಳ : ಚಿತ್ರಕಲಾವಿದ ಡಾ. ಎಸ್. ಎಂ. ಪಂಡಿತ್. ಪ್ರಸಾರಾಂಗ. ಕ.ವಿ.ವಿ. ಹಂಪಿ. ೨೦೧೦

ರೇಖಾಚಿತ್ರಗಳಲ್ಲಿ ವಿವಿಧ ಭಂಗಿಯ ಕೈಗಳು, ಭುಜಗಳು, ವಿವಿಧ ಭಾವನೆಗಳು ಎಂದು, ಶಿರಭಾವ ರೇಖಾಚಿತ್ರಗಳಲ್ಲಿ ಹಜರತ್‌ನ ಶಿರಭಾವಚಿತ್ರ, ವೃದ್ಧ ಸಾಧುವಿನ ಭಾವಚಿತ್ರ ಕುರಿತಂತೆ ಹೇಳಲಾಗಿದೆ. ವರ್ಣಚಿತ್ರಗಳ ವರ್ಗೀಕರಣದಲ್ಲಿ ಭಾವಚಿತ್ರಗಳು, ಸಂಯೋಜನಾ ಚಿತ್ರಗಳು, ಸಂಕೀರ್ಣ ಚಿತ್ರಗಳನ್ನು ವಿಶ್ಲೇಷಿಸಲಾಗಿದೆ. ಕೊನೆಯಲ್ಲಿ ಪ್ರಶಸ್ತಿ, ಸನ್ಮಾನಗಳು, ಪಂಡಿತರ ಅಂತಿಮ ದಿನಗಳನ್ನು ಹೇಳಲಾಗಿದೆ. ಎಸ್. ಎಂ. ಪಂಡಿತರನ್ನು ಕುರಿತು ಸ್ಥೂಲ ಅಧ್ಯಯನವನ್ನು ಈ ಕೃತಿ ಹೊಂದಿದೆ.

೪. ಜನಪದ ಕಸೂತಿ

ಕನ್ನಡ ವಿಶ್ವವಿದ್ಯಾಲಯವು ಮಂಟಪಮಾಲೆ ಅಡಿಯಲ್ಲಿ ಬೇರೆ ಬೇರೆ ವಿಷಯಗಳಿಗೆ ಸಂಬಂಧಿಸಿದಂತೆ ಕಿರು ಪುಸ್ತಕಗಳನ್ನು ಹೊರತಂದಿದೆ. ಇದರಲ್ಲಿ ಕೆಲವು ಕಲೆ ಕುರಿತಾದ ಪುಸ್ತಕಗಳೂ ಇವೆ. ಪ್ರಸ್ತುತ ಕಿರುಹೊತ್ತಿಗೆ 'ಜನಪದ ಕಸೂತಿ' ಡಾ. ಮಧು ವೆಂಕಾರೆಡ್ಡಿಯವರು ಬರೆದಿದ್ದಾರೆ.[೨೩] ಜನಪದ ಕಲಾಪ್ರಕಾರಗಳಲ್ಲಿ ಕಸೂತಿಯು ಒಂದು ಪ್ರಮುಖ ಕಲೆಯಾಗಿದ್ದು, ಮಹಿಳಾ ಪ್ರಧಾನವಾಗಿ ಬೆಳೆದುಕೊಂಡು ಬಂದಿದೆ. ಪ್ರಾಚೀನ ಕಾಲದಿಂದ ಇಂದಿನವರೆಗೆ ಹಲವು ಆಯಾಮಗಳಲ್ಲಿ ಬೆಳೆದು ಬಂದ ಕಸೂತಿಕಲೆಯ ವಿವಿಧ ವಿಷಯಗಳು ಸ್ಥೂಲ ರೂಪದಲ್ಲಿ ಇಲ್ಲಿ ವ್ಯಕ್ತಗೊಂಡಿವೆ. ಇದರಲ್ಲಿ ಚಿತ್ರಕಲೆ, ಜನಪದ ಚಿತ್ರಕಲೆಯ ವರ್ಗೀಕರಣ, ಕಸೂತಿ ಕಲೆಯ ಪ್ರೇರಣೆ, ಪ್ರಸರಣ, ಕಸೂತಿ ಹೆಣಿಗೆ, ಯಂತ್ರದ ಕಸೂತಿ, ಕರ್ನಾಟಕದ ಕಸೂತಿಪ್ರಕಾರ, ಗಾಂವಟಿ ಕಸೂತಿ, ಮುರಗಿ ಕಸೂತಿ, ನೇಗಿ ಕಸೂತಿ, ಮೆಂತ್ಯಕಸೂತಿ, ಕಸೂತಿಯ ಪರಿಕರಗಳು, ಚಿತ್ರವಿನ್ಯಾಸಗಳು, ಪ್ರಾಕೃತಿಕ ವಿಷಯಗಳು, ಧಾರ್ಮಿಕ, ಸಾಮಾಜಿಕ, ಅಲಂಕಾರಿಕ, ಇತರೆ ವಿಷಯಗಳು, ಕಸೂತಿ ರಚನೆಯ ಸಂದರ್ಭ, ಮಾಧ್ಯಮಗಳು, ನಂಬಿಕೆ, ಸಂಪ್ರದಾಯಗಳು ಹೇಳಲ್ಪಟ್ಟಿವೆ. ಜೊತೆಗೆ ಸಂಭಾವನೆ ಕಸೂತಿಯ ವಿವಿಧ ದೃಷ್ಟಿಕೋನಗಳು, ಕಸೂತಿ, ಹಚ್ಚೆ, ರಂಗೋಲಿ ಇವುಗಳ ಸಾಮ್ಯ, ಸ್ಥಿತ್ಯಂತರಗಳು ವಿವೇಚಿಸಲ್ಪಟ್ಟಿವೆ.

೫. ಕರಕುಶಲ ಕಲೆಗಳು

ಕನ್ನಡ ವಿಶ್ವವಿದ್ಯಾಲಯವು ಹೊರತಂದ ಕರಕುಶಲ ಕಲೆಗಳು ಎಂಬ ಗ್ರಂಥವನ್ನು ಡಾ. ಕರೀಗೌಡ ಬೀಚನಹಳ್ಳಿಯುವರು ಸಂಪಾದಿಸಿದ್ದು,[೨೪] ಈ ಗ್ರಂಥವು ಒಟ್ಟು ಆರು ಅಧ್ಯಾಯಗಳನ್ನೊಳಗೊಂಡಿದ್ದು, ಮೊದಲನೆಯ ಅಧ್ಯಾಯದಲ್ಲಿ ಕರಕುಶಲ ಕಲೆಗಳ ಪರಂಪರೆ ಮತ್ತು ಇತಿಹಾಸ ಕುರಿತಂತೆ, ಕುಶಲಕಲೆಗಳ ಉಗಮ, ವಿಕಾಸ, ಭಾರತದಲ್ಲಿ ಕರಕುಶಲ ಕಲೆಗಳು, ಕರ್ನಾಟಕದ ಕರಕುಶಲ ಕಲೆಗಳು ಆಧುನಿಕ ತಂತ್ರಜ್ಞಾನ, ಪ್ರಭಾವ, ಕರಕುಶಲ

---

೨೩. ಡಾ ಮಧು ವೆಂಕರೆಡ್ಡಿ : ಜನಪದ ಕಸೂತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೦

೨೪. ಕರೀಗೌಡ ಬೀಚಹಳ್ಳಿ (ಸಂ.) : ಕರಕುಶಲ ಕಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೦

ಕಲೆಗಳ ವರ್ಗೀಕರಣಗಳನ್ನು ಚರ್ಚಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಅಲಂಕರಣ ಸಂಬಂಧಿ ಕರಕುಶಲ ಕಲೆಗಳು, ಮುಖ್ಯಭಾಗದಲ್ಲಿ ವಿಶೇಷ ಉಡುಪು, ರೇಷ್ಮೆ ವಸ್ತ್ರ, ಉಣ್ಣೆ ಮತ್ತು ಮಸ್ಲಿನ್ ವಸ್ತ್ರಗಳು, ಕಸೂತಿ ವಿನ್ಯಾಸ, ಕೌದಿಕಲೆ, ಆಭರಣಗಳು, ಚಿನ್ನದ ಆಭರಣಗಳು, ಕೊಂಬು–ದಂತ, ಬಿದರಿಕಲೆ, ಗಂಜೀಫಾ ಕಲೆ, ಕಿನ್ನಾಳ ಸಾಂಪ್ರದಾಯಿಕ ಕಲೆ, ಚಿತ್ರಕಲೆ, ಬೆಂಡಿನ ಕಲೆ, ರಂಗೋಲಿ, ಹಚ್ಚೆ, ತೋರಣಗಳು, ಪಾದುಕೆ, ಚರ್ಮ ಕರಕುಶಲ ಕಲೆ, ಬಳಪದ ಕಲ್ಲಿನಲ್ಲೇ ಕುಶಲಕಲೆಗಳನ್ನು ಕುರಿತಂತೆ ತಮ್ಮದೇಯಾದ ವಿಶಿಷ್ಟ ರೀತಿಯಲ್ಲಿ ವಿನ್ಯಾಸಗಳನ್ನು ಕುರಿತಂತೆ ಲೇಖನಗಳನ್ನು ಕ್ರೋಢೀಕರಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಆರಾಧನಾ ಸಂಬಂಧಿ ಕರಕುಶಲ ಕಲೆಗಳು, ಧಾರ್ಮಿಕವಾಗಿ ಕ್ರೈಸ್ತ, ಇಸ್ಲಾಂ, ಬೌದ್ಧ, ಜೈನ, ದೇವತಾ ವಿಗ್ರಹ, ಆರಾಧನೆ ಮತ್ತು ಉಡುಪು, ಭೂತಾರಾಧನೆ, ನಾಗಮಂಡಲ ಮುಂತಾದವುಗಳ ಆರಾಧನೆಯಲ್ಲಿ ಸಾಂದರ್ಭಿಕವಾಗಿ ಕುಶಲಕಲೆಗಾರಿಕೆ ರೇಖಾಚಿತ್ರ, ಮೂರ್ತಿಶಿಲ್ಪಗಳಲ್ಲಿ ಕಂಡುಬರುತ್ತವೆ. ನಾಲ್ಕನೆಯ ಅಧ್ಯಾಯದಲ್ಲಿ ಗೃಹೋಪಯೋಗಿ ಕರಕುಶಲ ಕಲೆಗಳಲ್ಲಿ ಪೀಠೋಪಕರಣಗಳು, ಬಿದಿರು ಮತ್ತು ಬೆತ್ತ, ಪಿಂಗಾಣಿ, ಕಂಚು, ನಾಣ್ಯಗಳು, ಅಡುಗೆ ಮನೆಯ ಪರಿಕರಗಳು, ಕುಂಬಾರಿಕೆ, ಪೆಟ್ಟಿಗೆಗಳು, ಕೈ ಚೀಲಗಳು ಮುಂತಾದ ವಸ್ತುಗಳು ತಮ್ಮದೇಯಾದ ಹಸ್ತಕೌಶಲದಲ್ಲಿ ಮೂಡಿ ಬಂದ ಅತ್ಯಂತ ಅಮೂಲ್ಯವಾದ ಮತ್ತು ಶ್ರೇಷ್ಠ ಮಟ್ಟದ ಸಂಯೋಜನೆಯಿಂದ ರೂಪುಗೊಂಡ ಕಲಾಧ್ಯಾಯವಾಗಿದೆ.

ಐದನೆಯ ಅಧ್ಯಾಯದಲ್ಲಿ ಮನೋರಂಜನಾ ಸಂಬಂಧಿ ಕರಕುಶಲಕಲೆಗಳು, ಇಲ್ಲಿ ಪಾಶ್ಚಾತ್ಯ ದೇಶಗಳ ಪ್ರದರ್ಶನದ ಕಲೆಗಳು, ವೇಷಭೂಷಣಗಳು, ಭಾರತೀಯ ಜನಪದ ಪ್ರದರ್ಶನ ಕಲೆಗಳು, ವೇಷಭೂಷಣಗಳು, ದಕ್ಷಿಣ ಭಾರತದ ಪ್ರದರ್ಶನ ಕಲೆಗಳ ವೇಷಭೂಷಣಗಳು, ಕರ್ನಾಟಕದ ವೇಷಭೂಷಣಗಳು, ಮೂಡಲಪಾಯದ ವೇಷಭೂಷಣಗಳು, ಬೊಂಬೆಯಾಟದ ಬೊಂಬೆಗಳು, ಚನ್ನಪಟ್ಟಣದ ಬೊಂಬೆಗಳು, ಜನಪದ ವಾದ್ಯಗಳು ಸಾಂದರ್ಭಿಕವಾಗಿ ಕುಶಲಕಲೆಗಳು ಕಂಡುಬಂದಿದ್ದು, ಹುಲಿವೇಷಗಾರರು ಚಿತ್ರಕಲೆಯ ಹಲವು ಅಂಶಗಳಾದ ಕಲಾವಿದ ಮುಖಕ್ಕೆ ಹುಲಿಯ ಚಿತ್ರ ಸ್ಮರಣೆ ಚಿತ್ರವನ್ನು ಮನುಷ್ಯನ ಅಂಗಗಳಿಗೆ ಅನ್ವಯವಾಗುವಂತೆ ಹಳದಿ, ಕಪ್ಪು, ಪಚ್ಚೆ ವರ್ಣಗಳ ಲೇಪನಗಳ ಕುಶಲ ಕೆಲಸ ಇಲ್ಲಿ ಆಗುತ್ತದೆ. ಅದೇ ರೀತಿ ವೇಷಗಾರರಿಗೆ 'ಬಹುರೂಪಿ'ಗಳೆಂದೂ, ರೂವಾರಿಗಳೆಂದೂ ಕರೆಯುತ್ತಾರೆ.

ಈ ವೇಷಗಾರರು ಉತ್ತಮ ನಟನೆಯೊಂದಿಗೆ ಪಾತ್ರಕ್ಕೆ ತಕ್ಕಂತೆ ಮುಖವರ್ಣಿಕೆಗಾರರು ಆಗಿರುತ್ತಾರೆ. ಈ ಒಂದು ಅಧ್ಯಾಯದಲ್ಲಿ ಮತ್ತೊಂದು ಪ್ರಮುಖವಾದದ್ದು 'ಬೊಂಬೆಯಾಟ'. ತೊಗಲುಗೊಂಬೆ ಚಿತ್ರಕಲೆಯೆಂದು ಕರೆಸಿಕೊಳ್ಳುವ ಜನಪದ ಚಿತ್ರಕಲೆಯ ಒಂದು ಪ್ರಕಾರವೇಯಾಗಿದೆ. ಈ ಕಲೆಯನ್ನು ಕುರಿತಂತೆ ಕಿಳ್ಳೆಕ್ಯಾತರು ಕುರಿತಂತೆ ಹುಲಿ, ಕರಡಿ, ಕೋತಿ, ಆನೆ, ಕುರಿ, ದನ, ಪಕ್ಷಿ ಮುಂತಾದ ಬೊಂಬೆಯನ್ನು ಕುರಿತು ಪ್ರದರ್ಶನದ ಸಜ್ಜಿಕೆಯನ್ನು ಕುರಿತು ವಿವರಿಸಲಾಗಿದೆ.

ಅದೇ ರೀತಿ ಚನ್ನಪಟ್ಟಣದ ಬೊಂಬೆಗಳು, ಅದರ ಕಲಾವಿದರು, ಶಿಲ್ಪ, ಬಣ್ಣ ಮುಂತಾದ ವಿವರವನ್ನು ಕೊಡಲಾಗಿದೆ. ಆರನೆಯ ಅಧ್ಯಾಯದಲ್ಲಿ ವ್ಯವಸಾಯ ಸಂಬಂಧಿ ಕರಕುಶಲಕಲೆಗಳ ಕುರಿತಂತೆ ಹೇಳಲಾಗಿದೆ.

೬. ಕರ್ನಾಟಕ ಜನಪದ ಕಲೆಗಳ ಕೋಶ

ಕನ್ನಡ ವಿಶ್ವವಿದ್ಯಾಲಯವು ಹೊರತಂದ ಕೋಶಗಳಲ್ಲಿ ಕರ್ನಾಟಕ ಜನಪದ ಕಲೆಗಳ ಕೋಶವು ವಿಶಿಷ್ಟವಾಗಿದೆ. ಇದನ್ನು ಡಾ. ಹಿ.ಚಿ. ಬೋರಲಿಂಗಯ್ಯ ಅವರು ಸಂಪಾದಿಸಿದ್ದು,[೨೫] ಕರ್ನಾಟಕ ಜನಪದ ಕಲೆಗಳನ್ನು ವಿಷಯಾನುಸಾರವಾಗಿ ವಿಂಗಡಿಸಿಕೊಂಡು ವಿಶ್ಲೇಷಣೆ ಮಾಡಲಾಗಿದೆ. ಇಲ್ಲಿ ಜನಪದ ಕಲಾಪ್ರಕಾರಗಳು ಮುಖ್ಯವಾಗಿ ಕುಣಿತ, ವಾದ್ಯ ನುಡಿಸುವುದು, ಹಾಡುಗಾರಿಕೆ, ಆಟೋಟ, ಆಚರಣೆ, ನಂಬಿಕೆ, ವಿಧಿಕ್ರಿಯೆಗಳಂತಹ ವಿಚಾರಗಳಿಗೆ ಸಂಬಂಧಿಸಿದ್ದರೂ ಸಾಂದರ್ಭಿಕವಾಗಿ ಅಲ್ಲಲ್ಲಿ ಚಿತ್ರ ಮತ್ತು ಶಿಲ್ಪಕಲೆಯ ವಿವರಗಳು ಉಲ್ಲೇಖಗೊಂಡಿವೆ. ಮಾರಿಯ ಆರಾಧನೆ, ಭೂತಾರಾಧನೆ, ನಾಗಾರಾಧನೆ, ವೀರಭದ್ರ ಆರಾಧನೆ, ಯಲ್ಲಮ್ಮನ ಆರಾಧನೆ, ಮಲೆಮಾದೇಶ್ವರ ಮತ್ತು ಮಂಟೇಸ್ವಾಮಿ ಆರಾಧನೆ, ಮೈಲಾರಲಿಂಗನ ಆರಾಧನೆ, ಮೊಹರಂ ಆರಾಧನೆ, ಬಿಶೇಷ ಜನವರ್ಗಗಳ ಮತ್ತು ಬುಡಕಟ್ಟುಗಳ ಕೆಲವು ಕಲೆಗಳು, ಸಂಕೀರ್ಣ ಕಲೆಗಳು, ಜನಪದ ರಂಗಭೂಮಿ ಕಲೆಗಳು ಮುಂತಾದ ಭಾಗಗಳಲ್ಲಿ ಉಪವಿಭಾಗ ಮಾಡಿಕೊಂಡಿದೆ.

ಮೊಹರಂ ಕುಣಿತದಲ್ಲಿ ಹುಲಿವೇಶ ಚಿತ್ರರಚನೆ, ನಾಗಾರಾಧನೆಯಲ್ಲಿ ಚಿತ್ರಿಸುವ ತಾಂತ್ರಿಕ ಚಿತ್ರಕಲೆ, ಭೂತಾರಾಧನೆಯಲ್ಲಿನ ಮುಖವರ್ಣಿಕೆ, ಹಾಲಕ್ಕಿ ವಕ್ಕಲಿಗರ ಹಸೆ ಚಿತ್ರಕಲೆ ವಿನ್ಯಾಸಗಳು, ಮಾರಿ ಆರಾಧನೆಯ ಬಣ್ಣದ ಮೂರ್ತಿಗಳು, ಜೋಕುಮಾರ, ಗುಳ್ಳವ, ವೀರಭದ್ರ ಹೀಗೆ ಹಲವು ಸಂದರ್ಭಗಳಲ್ಲಿ ಬಳಕೆಗೊಳ್ಳುವ ಕಲೆಯ ವಿಷಯಗಳು ಇಲ್ಲಿವೆ. ಈ ಜನಪದ ಕಲೆಗಳ ಕೋಶದಿಂದ ಸಾಕಷ್ಟು ಪ್ರಮಾಣದ ಚಿತ್ರ ಮತ್ತು ಶಿಲ್ಪ ವಿವರಗಳು ಕಂಡುಬರುತ್ತವೆ. ಜನಪದ ಚಿತ್ರಕಲೆಯನ್ನು ಇಲ್ಲಿ ದೃಶ್ಯಾತ್ಮಕ ನೆಲೆಯಲ್ಲಿ ಗಮನಿಸಬಹುದು.

೭. ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು

ಧಾರವಾಡದ ಸ್ಕೂಲ್ ಆಫ್ ಆರ್ಟ್ ಇದರ ವಜ್ರಮಹೋತ್ಸವದ ಸವಿನೆನಪಿಗಾಗಿಯೇ 'ಚಿತ್ರಕಲೆ ಮತ್ತು ಪೂರಕಕ್ಷೇತ್ರಗಳು' ಎಂಬ ಈ ಸ್ಮರಣ ಸಂಚಿಕೆಯನ್ನು ೧೯೯೫ರಲ್ಲಿ ಹೊರತರಲಾಗಿದೆ.[೨೬] ಈ ವಜ್ರಮಹೋತ್ಸವದ ಅಂಗವಾಗಿ ಹಮ್ಮಿಕೊಂಡ ಹಲವಾರು ಕಾರ್ಯಕ್ರಮಗಳಲ್ಲಿ ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳ ಬಗ್ಗೆ ನಡೆಸಲಾದ ವಿಚಾರ ಸಂಕಿರಣವು ಪ್ರಮುಖವಾದುದಾಗಿತ್ತು. ಈ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಹದಿನಾಲ್ಕು ಲೇಖನಗಳನ್ನು

೨೫. ಡಾ. ಹಿ. ಚಿ. ಬೋರಲಿಂಗಯ್ಯ (ಸಂ.) : ಕರ್ನಾಟಕ ಜನಪದ ಕಲೆಗಳ ಕೋಶ, ಪ್ರಸಾರಾಂಗ, ಕ.ವಿ.ವಿ. ಹಂಪಿ. ೧೯೯೬

೨೬. ಡಾ. ಎಸ್. ಸಿ. ಪಾಟೀಲ (ಸಂ.) : ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಸ್ಕೂಲ್ ಆಫ್ ಆರ್ಟ್ ವಜ್ರಮಹೋತ್ಸವ ಸಮಿತಿ, ಧಾರವಾಡ.

ಪುಸ್ತಕ ರೂಪದಲ್ಲಿ ತರಲಾಗಿದೆ. ಬೇರೆ ಬೇರೆ ಕ್ಷೇತ್ರಗಳಲ್ಲಿ ಗುರುತಿಸಿಕೊಂಡ ವಿದ್ವಾಂಸರಿಂದ ಹೊರಬಂದ ಇಲ್ಲಿನ ಲೇಖನಗಳು ಹೆಚ್ಚು ಮೌಲಿಕವಾಗಿವೆ. ಇಲ್ಲಿ ಭಿತ್ತಿಚಿತ್ರಗಳ ವಿನ್ಯಾಸ, ವರ್ಣಗಾರಿಕೆ ಹೇಗಿರಬೇಕು ಎಂದು ಹೇಳುತ್ತಾರೆ. ಈ ಕುರಿತು ಡಾ. ಎಸ್.ಸಿ. ಪಾಟೀಲ ಅವರು ಈ ಕೃತಿಯನ್ನು ಸಂಪಾದಿಸಿದ್ದಾರೆ.

೮. ಶಿವತತ್ವ ರತ್ನಾಕರ

ಕೆಳದಿಯ ಬಸವ ಭೂಪಾಲನಿಂದ ಕ್ರಿ.ಶ. ೧೬೯೩–೧೭೧೫ರಲ್ಲಿ ರಚನೆಯಾದ ಶಿವತತ್ವ ರತ್ನಾಕರ ಸಂಸ್ಕೃತ ಗ್ರಂಥವನ್ನು ಶ್ರೀ ಮಲ್ಲೇಪುರ ಜಿ. ವೆಂಕಟೇಶ ಅವರು ಕನ್ನಡದಲ್ಲಿ ಸಂಪಾದನೆ ಮಾಡಿದ್ದಾರೆ.[೨೭] ಬೃಹತ್ತಾದ ಈ ಗ್ರಂಥವನ್ನು ಎರಡು ಸಂಪುಟಗಳಲ್ಲಿ ಸಂಪಾದಿಸಲಾಗಿದೆ. ಪ್ರತಿಯೊಂದು ಸಂಪುಟಗಳಲ್ಲಿ ಕಲ್ಲೋಲಗಳೆಂಬ ಅಧ್ಯಾಯಗಳು, ಅವುಗಳಲ್ಲಿ ಉಪ ಅಧ್ಯಾಯಗಳಾಗಿ ತರಂಗಗಳು ಮತ್ತು ಪ್ರತಿಯೊಂದು ತರಂಗದಲ್ಲಿ ಶೀರ್ಷಿಕೆ ಮತ್ತು ಉಪ ಶೀರ್ಷಿಕೆಗಳನ್ನು ಗ್ರಂಥವು ಹೊಂದಿದೆ. ಗಣಪತಿ, ಶಾರದೆಗೆ ನಮಿಸುವುದು, ವೇದ, ಛಂದಸ್ಸು, ಮೀಮಾಂಸೆ, ಅರವತ್ನಾಲ್ಕು ಕಲೆಗಳು, ದೃಶ್ಯ ಪ್ರಪಂಚದ ಉತ್ಪತ್ತಿಯ ವಿವರಣೆ, ಲಿಂಗ, ಜಂಗಮ, ಪ್ರಮಾಣ ಭೇದಗಳು, ಭೂಲೋಕ, ಸತ್ಯಲೋಕ, ಭೂಮಿ ಪರೀಕ್ಷೆ, ಚಿತ್ರಲಿಪಿ, ಶಿಲ್ಪ, ದಿಕ್ಕುಗಳು, ದೇವತೆಗಳು ಮುಂತಾದವುಗಳ ವಿಷಯ ಕುರಿತು ಹೇಳಲಾಗಿದೆ.

ಆರನೆಯ ಕಲ್ಲೋಲದಲ್ಲಿ ಚಿತ್ರಕಲೆಗೆ ಸಂಬಂಧಿಸಿದಂತೆ ಎರಡು ತರಂಗಗಳಲ್ಲಿ ಹೇಳಲಾಗಿದೆ. ಭಿತ್ತಿ ಸಿದ್ಧತೆ, ವಜ್ರಲೇಪ, ಲೇಖನಿ, ಬರೆಯುವ ಲೇಪಿಸುವ ಸಾಧನಗಳು, ಬೇರೆ ಬೇರೆ ದೇವಾನುದೇವತೆಗಳಿಗೆ ತಕ್ಕ ಬಣ್ಣಗಳು, ದೇಹದ ವಿವಿಧ ಭಾಗಗಳ ಪ್ರಮುಖ ಲಕ್ಷಣ, ರಾಗದ ವಿವಿಧ ಲಕ್ಷಣಗಳು, ಮೂಲ ಹಾಗೂ ಮಿಶ್ರ ವರ್ಣಗಳ ತಯಾರಿಕೆ, ಬಳಕೆ, ನೈಸರ್ಗಿಕ ಹಾಗೂ ಸಿದ್ಧಪಡಿಸಿಕೊಳ್ಳುವ ಬಣ್ಣಗಳು, ಉದ್ಯಾನ ನಿರ್ಮಾಣದ ವಿಧಾನ, ಭೂಮಿತಿ, ಆಕಾರಗಳ ವೈವಿಧ್ಯ ಮುಂತಾದ ಚಿತ್ರಕಲೆ ಕುರಿತಂತೆ ಮಹತ್ವದ ಸಂಗತಿಯನ್ನು ಈ ಕೃತಿ ಒಳಗೊಂಡಿದೆ.

೯. ದೃಶ್ಯಕಲಾವಿದರು

ಮರಿಶಾಮಾಚಾರರಿಂದ ರಚಿತವಾದ ಈ ಕೃತಿಯು ಕನ್ನಡ ವಿಶ್ವವಿದ್ಯಾಲಯ, ಹಂಪಿಯಿಂದ ೨೦೦೩ರಲ್ಲಿ ಪ್ರಕಟವಾಗಿದೆ.[೨೮] ಇದರಲ್ಲಿ ದೇಶ, ವಿದೇಶಗಳ ಪ್ರಖ್ಯಾತರಾದ ೩೪ ಜನ ಕಲಾವಿದರ ಬಗೆ ಸ್ಥೂಲ ಮಾಹಿತಿಯನ್ನು ಕೊಡುವ ೩೪ ಲೇಖನಗಳಿವೆ. ಭಾರತೀಯ ಕಲಾವಿದರಲ್ಲಿ ರಾಜಾ ರವಿವರ್ಮ, ಅವನೀಂದ್ರನಾಥ ಟ್ಯಾಗೋರ್, ನಂದಲಾಲ್‌ಬೋಸ್, ಗಗನೇಂದ್ರನಾಥ ಟ್ಯಾಗೋರ್, ಕೆ. ವೆಂಕಟಪ್ಪ, ಜಾಮಿನಿರಾಯ್, ಅಸಿತಕುಮಾರ್ ಹಲ್ದಾರ್, ದೇವಿಪ್ರಸಾದ

೨೭. ಪ್ರೊ. ಮಲ್ಲೇಪುರ ಜಿ. ವೆಂಕಟೇಶ್ (ಸಂ.) : ಶಿವತತ್ವರತ್ನಾಕರ, ಪ್ರಸಾರಾಂಗ, ಕ.ವಿ.ವಿ. ಹಂಪಿ. ೧೯೯೯

೨೮. ಎನ್. ಮರಿಶಾಮಾಚಾರ್ : ದೃಶ್ಯಕಲಾವಿದರು, ಪ್ರಸಾರಾಂಗ, ಕ.ವಿ.ವಿ. ಹಂಪಿ, ೨೦೦೩

ರಾಯ್ ಚೌಧರಿ, ಶೈಲಜಾ ಮುಖರ್ಜಿ, ಅಮೃತಾ ಶೇರಗಿಲ್, ರವೀಂದ್ರನಾಥ ಟ್ಯಾಗೋರ್, ರಾಮಕಿಂಕರ್ ಬೈಂಜ್, ವಿನೋದ ಬಿಹಾರಿ ಮುಖರ್ಜಿ, ಎನ್. ಎಸ್. ಬೇಂದ್ರೆ, ಕೆ.ಕೆ. ಹೆಬ್ಬಾರ್, ಎಂ.ಎಫ್. ಹುಸೇನ್, ಕೆ.ಸಿ. ಎಸ್. ಪಣಿಕ್ಕರ್, ಕೆ.ವಿ. ಸುಬ್ರಹ್ಮಣ್ಯಂ, ಜಿ. ಸುಲ್ತಾನ್ ಅಲಿ, ಸೋಮನಾಥ ಹೊರೆ, ಎಸ್. ಎಂ. ಪಂಡಿತ್, ಎಸ್. ಎನ್. ಸ್ವಾಮಿ ಇವರ ಬಗ್ಗೆ ಲೇಖನಗಳಿವೆ. ವಿದೇಶಿ ಕಲಾವಿದರಲ್ಲಿ ಅಗಷ್ಟನ್ ರಿನಾಯರ್, ಪಾಲ್‌ಗಾಗಿನ್, ವಿನ್ಸೆಂಟ್ ವ್ಯಾನ್‌ಗಾಗ್, ಹೆನ್ರಿ ಮಾಟಿಸ್, ಪಾಬ್ಲೋ ಪಿಕಾಸೋ, ಮಾರ್ಕ್ ಶಿಗಾಲ್, ಹೆನ್ರಿಮೋರ್, ಜಾನ್ ಮಿರೋ, ಸಾತ್ವಿಡಾರ್ ಡಾಲಿ ಇವರ ಕಲೆ ಮತ್ತು ಕಲಾಕೃತಿಗಳ ಬಗ್ಗೆ ಮಾಹಿತಿ ಕೊಡಲಾಗಿದೆ. ಪ್ರಸ್ತುತ ಪುಸ್ತಕವು ಕಲಾವಿದರ ಕಲಾಬದುಕು, ಕಲೆ ಮತ್ತು ಕಲಾಕೃತಿಗಳ ಕುರಿತು ಸ್ಥೂಲ ಮಾಹಿತಿಯನ್ನು ನೀಡುತ್ತಿದ್ದು, ಬರವಣಿಗೆಯ ದೃಷ್ಟಿಯಿಂದ ಲೇಖಕರ ಹಳೆಯ ಪುಸ್ತಕಗಳ ಜಾಡನ್ನೇ ಹಿಡಿದಿದೆ. ಇದೇ ಕಲಾವಿದರ ಮಾಲಿಕೆಯನ್ನೇ ಮೂರುಸಾರಿ ಬೇರೆ ಬೇರೆ ಪ್ರಕಾಶನದಿಂದ ಪ್ರಕಟಿಸಿದ್ದರೂ ಕಾಲಮಾನಕ್ಕೆ ತಕ್ಕಂತೆ ಭಾಷೆಯ ಅಭಿವ್ಯಕ್ತಿ, ವಿಷಯ ಪ್ರಸ್ತುತಪಡಿಸುವ ರೀತಿಗಳು ಬದಲಾಗಬೇಕಿತ್ತು. ಈ ಎಲ್ಲಾ ಕಲಾವಿದರನ್ನು ಕುರಿತಂತೆ ಶೈಲಿಯಲ್ಲಿ ಸಾಕಷ್ಟು ಭಿನ್ನತೆ ಇದ್ದರೂ ಕಲಾಕೃತಿಗಳ ಮಧ್ಯೆಯೇ ವ್ಯತ್ಯಾಸಗೊಳಿಸದೇ ಒಂದೇ ತೆರನಾಗಿ ವಿವರಣೆ ಇದೆ.

ವಿದೇಶಿ ಲೇಖನಗಳಲ್ಲಿ ಡಾಲಿ, ವ್ಯಾನ್‌ಗಾಗ್ ಗಾಗಿನ್‌ರಂತಹ ಕಲಾವಿದರ ಬಗ್ಗೆ ವೈವಿಧ್ಯದಿಂದ ಕೂಡಿದ ಬರವಣಿಗೆ ಕೆಲವು ಸಂಪುಟಗಳಲ್ಲಿ ಕಾಣುತ್ತೇವೆ. ಇಲ್ಲಿ ಕಲಾಕೃತಿಗಳ ಮುಖವಾದ ಶೀರ್ಷಿಕೆಗಳ ಹೆಸರುಗಳನ್ನು ಮಾತ್ರ ಹೇಳಲಾಗಿದೆ. ಇತ್ತೀಚಿನ ಕೆಲವು ಬರಹಗಳಲ್ಲಿ ಚಿತ್ರಕಲಾ ವ್ಯಾಕರಣವಾದಂತಹ ಬಣ್ಣ, ಸ್ಥಳಾವಕಾಶ, ತಂತ್ರ, ಶೈಲಿ, ರೇಖೆ ಮುಂತಾದವುಗಳ ಬಗ್ಗೆ ಒಲವು ತೋರಿದ ಗ್ರಂಥಗಳು ದೃಶ್ಯಕಲಾ ಕ್ಷೇತ್ರದ ವತಿಯಿಂದ ಹೆಚ್ಚಾಗುತ್ತಿವೆ. ಆದರೂ ಈ ಗ್ರಂಥವು ದೃಶ್ಯಕಲಾ ಕ್ಷೇತ್ರದಲ್ಲಿ ಚಿತ್ರಕಲಾ ಸಾಹಿತ್ಯದ ಕೊರತೆಯನ್ನು ನೀಗಿಸುವ ಪ್ರಯತ್ನಕ್ಕೆ ಖುಷಿಪಡಬೇಕಾಗಿದೆ.

೧೦. ಎಸ್. ಎಂ. ಪಂಡಿತ್

ಈ ಜಿಲ್ಲೆಯ ಕಲಾವಿದ ಹಾಗೂ ಕಲಾಸಾಹಿತಿಗಳಾದ ವಿ.ಟಿ. ಕಾಳೆಯವರು ಈ ಕೃತಿಯನ್ನು ಬರೆದಿದ್ದಾರೆ. ಈ ಕೃತಿಯಲ್ಲಿ ನಾಡಿನ ಹೆಸರಾಂತ ಚಿತ್ರಕಲಾವಿದರಾದ ದಿ. ಎಸ್. ಎಂ. ಪಂಡಿತ್ ಅವರ ಜೀವನ ಮತ್ತು ಅವರ ಅಮೂಲ್ಯ ಕಲಾಕೃತಿಗಳ ಸಂಕ್ಷಿಪ್ತ ಪರಿಚಯ ನೀಡುತ್ತದೆ. ಅಲ್ಲದೇ ಇದು ಕಿರುರೂಪದ ಪುಸ್ತಕವಾದರೂ ಕಾಳೆಯವರ ಪ್ರಬುದ್ಧ ಲೇಖನವಾಗಿದೆ. ಈ ಲೇಖನದ ಪ್ರಮುಖ ಅಂಶಗಳಾದ ಪಂಡಿತರ ಅಂದು ಬಾಲಕನಿದ್ದಾಗ ಪ್ರಕೃತಿವೀಕ್ಷಣೆ, ಪರಿಸರ ಮುಂದೆ ಕಲಾಕ್ಷೇತ್ರಕ್ಕೆ ಬರಲು ಪ್ರೇರಣೆಯಾಯಿತು. ಈ ಹಿನ್ನೆಲೆಯ ಪ್ರೇರಕ ಶಕ್ತಿಯಿಂದ

---

೨೯. ವಿ. ಟಿ. ಕಾಳೆ : ಎಸ್. ಎಂ. ಪಂಡಿತ್, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

ಚಿತ್ರಕಲಾ ಕ್ಷೇತ್ರದಲ್ಲಿ ಸಾಧನೆಗೈದು ಕಲಾಪ್ರಪಂಚಕ್ಕೆ ಕೊಡುಗೆಯಾಗಿಸಿದ್ದಾರೆ. ಇಂತಹ ಕಲಾವಿದರನ್ನು ಆಧುನಿಕ ವಿಶ್ವಾಮಿತ್ರ ಎಂದೆಲ್ಲಾ ಗೌರವಿಸುತ್ತಾರೆ. ಪಾಶ್ಚಿಮಾತ್ಯ ಶೈಲಿ ಮತ್ತು ಚಿತ್ರಿಸಿದ ಭಾವಚಿತ್ರವನ್ನು ಕಂಡು ವಿದೇಶಿಯರು ಪಂಡಿತರನ್ನು 'ಭಾರತದ ರೆಂಬ್ರಾಂಡ್' ಎಂದು ಗುರುತಿಸುತ್ತಾರೆ. ಹೀಗೆ ಪಂಡಿತರ ಕಲೆ, ವ್ಯಕ್ತಿತ್ವವನ್ನು ಕುರಿತಂತೆ ಹಲವಾರು ಅಂಶಗಳನ್ನು ಈ ಕೃತಿಯಲ್ಲಿ ಬರೆದಿದ್ದಾರೆ.

೧೧. ಶಿವಾನಂದ ಪಿ. ಅಕ್ಕಿ

ವಿ.ಟಿ. ಕಾಳೆಯವರು ಶಿವಾನಂದ ಪಿ. ಅಕ್ಕಿಯವರನ್ನು ಕುರಿತಂತೆ ಕಲಾವ್ಯಾಸಂಗ ಮಾಡುವಲ್ಲಿ ಅವರು ಪಟ್ಟ ಶ್ರಮ, ಸಂಸಾರದ ಹೊಣೆ, ಕಲೆಯೊಂದಿಗಿದ್ದ ಅವರ ಬಾಂಧವ್ಯ, ಮುಂದೆ ಮರೆಯಲಾಗದಂತಹ ಬುದ್ಧಿ ಭ್ರಮಣೆಯಂಥ ದುರಂತಕ್ಕೀಡಾದ ಅವರ ಬದುಕು, ಕಲಾಕ್ಷೇತ್ರಕ್ಕೆ ಕೊಟ್ಟಂತಹ ಕಲಾಕೊಡುಗೆ ಕುರಿತು ಈ ಲೇಖನದಲ್ಲಿ ಹೇಳಿದ್ದಾರೆ.

೨. ಅಪ್ರಕಟಿತ ಸಂಶೋಧನಾ ಸಾಹಿತ್ಯ

ಇಲ್ಲಿಯೂ ಅಪ್ರಕಟಿತ ಸಂಶೋಧನ ಚಿತ್ರಕಲಾ ಸಾಹಿತ್ಯವೆಂದು ಉಪಪಂಗಡವನ್ನು ಮಾಡಲಾಗಿದೆ. ಅವು ಈ ಕೆಳಗಿನಂತಿವೆ.

- ಪಿಹೆಚ್.ಡಿ. ಮಹಾಪ್ರಬಂಧಗಳು
- ಎಂ.ಫಿಲ್ ಸಂಪ್ರಬಂಧಗಳು
- ಡಿ.ಲಿಟ್ ಮಹಾಪ್ರಬಂಧಗಳು

ವಿಶ್ವವಿದ್ಯಾಲಯದ ಮಾನ್ಯತೆಯೊಂದಿಗೆ ಮತ್ತು ಪದವಿ ಹಿನ್ನೆಲೆಯಲ್ಲಿ ವ್ಯವಸ್ಥಿತವಾದ ಸಂಶೋಧನೆಯು ಇತ್ತೀಚಿನ ದಿನಗಳಲ್ಲಿ ಆರಂಭಗೊಂಡಿದೆ. ತೊಂಭತ್ತರ ದಶಕದ ಆರಂಭದ ಹೊತ್ತಿಗೆ ಡಾ. ಎಸ್. ಸಿ. ಪಾಟೀಲ ಅವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ 'ಕರ್ನಾಟಕ ಜನಪದ ಚಿತ್ರಕಲೆ' ಕುರಿತು ಪಿಹೆಚ್.ಡಿ ಅಧ್ಯಯನ ಮಾಡಿದ್ದು, ಈ ನಿಟ್ಟಿನಲ್ಲಿ ಮೊದಲ ಪ್ರಯತ್ನವಿದಾಗಿದೆ ಎನ್ನಬಹುದು. ಇವರಿಗಿಂತ ನಾಲ್ಕು ಐದು ವರ್ಷಗಳ ಮೊದಲು ಡಾ. ಬಿ.ಕೆ. ಹಿರೇಮಠ ಅವರು ಹಸ್ತಪ್ರತಿಗಳ ಅಧ್ಯಯನದಡಿಯಲ್ಲಿ ಅದರ ಕಲಾವಂತಿಕೆಯನ್ನು ಬಿಂಬಿಸಲು ಒಂದು ಪ್ರತ್ಯೇಕ ಅಧ್ಯಯನವನ್ನು ಮಾತ್ರ ತಮ್ಮ ಪ್ರಬಂಧದಲ್ಲಿ ಮೀಸಲಾಗಿಟ್ಟಿದ್ದರು.

ಇದಲ್ಲದೆ ಡಾ. ಎಸ್. ಸಿ. ಪಾಟೀಲ ಅವರೇ ತಮ್ಮ ಸ್ನಾತಕೋತ್ತರ ಹಂತದ ಅಧ್ಯಯನದಲ್ಲಿ ಕಿರುಯೋಜನಾ ವರದಿ ರೂಪವಾಗಿ "ಮಾಧ್ಯಮಿಕ ಶಾಲಾ ಹಂತದಲ್ಲಿ ಚಿತ್ರಕಲಾ ಶಿಕ್ಷಣ" ಎಂಬ ವಿಷಯವಾಗಿ ಅಧ್ಯಯನ ಮಾಡಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ್ದಾರೆ. ಆದರೂ ನಿರ್ದಿಷ್ಟ ಮಟ್ಟದ ಕಲಾಸಂಶೋಧನಾ ಅಧ್ಯಯನದ ಇತಿಹಾಸವು ವಿಶ್ವವಿದ್ಯಾಲಯದಲ್ಲಿ ಡಾ. ಎಸ್. ಸಿ. ಪಾಟೀಲರ ಪಿಹೆಚ್.ಡಿ ಪ್ರಬಂಧದಿಂದ ಆರಂಭಗೊಂಡಿತೆಂದು ಹೇಳಬಹುದು. ಇವರ ನಂತರ ಅನೇಕರು ಪಿಹೆಚ್.ಡಿ ಅಧ್ಯಯನ ಮಾಡಿದ್ದಾರೆ. ಇವರ ಮಾರ್ಗದರ್ಶನದಲ್ಲೇ ಕರ್ನಾಟಕದ ಬಹುಮಟ್ಟಿಗೆ ಪಿಹೆಚ್.ಡಿ ಮಹಾಪ್ರಬಂಧಗಳು ಬಂದಿವೆ. ನಂತರದಲ್ಲಿ ಎಂ.ಫಿಲ್

[illegible]

ಮತ್ತು ಡಿ.ಲಿಟ್ ಅಧ್ಯಯನಗಳು ಆರಂಭಗೊಂಡವು. ಇತ್ತೀಚೆಗೆ ಸ್ನಾತಕೋತ್ತರ ಪದವಿ ಮತ್ತು ಸ್ನಾತಕ ಪದವಿ ಮಟ್ಟದಲ್ಲೂ ಕಿರು ಸಂಶೋಧನಾ ಪ್ರಬಂಧಗಳನ್ನು ಇಲ್ಲವೆ ಕಿರುಯೋಜನಾ ವರದಿಗಳನ್ನು ರಚಿಸುವ ಪರಿಪಾಠ ಆರಂಭಗೊಂಡಿದೆ. ಇದನ್ನು ವಿಶ್ವವಿದ್ಯಾಲಯ ಅನುದಾನ ಮಂಡಳಿಯೇ ಮಾನ್ಯ ಮಾಡಿದೆ. ಹಾಗಾಗಿ ಹೆಚ್ಚಿನ ಪ್ರಮಾಣದ ಸಂಶೋಧನಾ ಸಾಹಿತ್ಯವು ಕಲಾಕ್ಷೇತ್ರದಲ್ಲಿ ರಚನೆಯಾಗುವಂತಾಗಿದೆ. ಸ್ನಾತಕೋತ್ತರ ಪದವಿ ಮತ್ತು ಸ್ನಾತಕ ಪದವಿ ಮಟ್ಟದಲ್ಲಿನ ಸಂಶೋಧನಾ ಬರಹಗಳು ಅಷ್ಟೊಂದು ಗಂಭೀರ ಮಟ್ಟದಲ್ಲಿ ಕಂಡುಬರುವುದಿಲ್ಲ. ಪಿಹೆಚ್.ಡಿ, ಎಂ.ಫಿಲ್ ಮತ್ತು ಡಿ.ಲಿಟ್ ಅಧ್ಯಯನಗಳು ಈ ನಿಟ್ಟಿನಲ್ಲಿ ಗಮನಾರ್ಹವಾಗಿವೆ. ಪ್ರಸ್ತುತ ಅಧ್ಯಾಯದಲ್ಲಿ ಈ ಎಲ್ಲಾ ಸಂಶೋಧನಾ ಪ್ರಬಂಧಗಳನ್ನು ಅಧ್ಯಯನಕ್ಕೆ ಪರಿಗಣಿಸಿದರೂ ಇಲ್ಲಿ ಮುಖ್ಯವಾಗಿ ಗಂಭೀರತೆಯ ದೃಷ್ಟಿಯಿಂದ ವಿಶ್ಲೇಷಣೆಗಾಗಿ ಪಿಹೆಚ್.ಡಿ., ಎಂ.ಫಿಲ್ ಮತ್ತು ಡಿ.ಲಿಟ್ ಪ್ರಬಂಧಗಳನ್ನು ಆಯ್ದುಕೊಳ್ಳಲಾಗಿದೆ.[೩೦] ಹಾಗಿದ್ದರೂ ಒಟ್ಟು ಅಧ್ಯಯನ ಅನುಕೂಲದ ದೃಷ್ಟಿಯಿಂದ ಚಿತ್ರಕಲಾ ಸಂಶೋಧನಾ ಸಾಹಿತ್ಯವನ್ನು ವಿವೇಚಿಸಲಾಗಿದೆ.

೨.೧. ಪಿಹೆಚ್.ಡಿ ಮಹಾಪ್ರಬಂಧಗಳು

ಬಳ್ಳಾರಿ ಜಿಲ್ಲೆಯಲ್ಲಿ ಇದುವರೆಗೂ ಬಂದ ಪಿಹೆಚ್.ಡಿ ಮಹಾಪ್ರಬಂಧಗಳನ್ನು ವಿಷಯಾನುಸಾರವಾಗಿ ಎರಡು ರೀತಿಯಲ್ಲಿ ವಿಂಗಡಿಸಬಹುದು.

೧. ಕ್ಷೇತ್ರೀಯ ಅಧ್ಯಯನಗಳು,

೨. ವ್ಯಕ್ತಿ ಅಧ್ಯಯನಗಳು.

೧. ಕ್ಷೇತ್ರೀಯ ಅಧ್ಯಯನಗಳು

ಈ ಪ್ರಕಾರದ ಅಧ್ಯಯನಗಳು ಸಾಮಾನ್ಯವಾಗಿ ಕಲಾಪ್ರಕಾರಗಳಿಗೆ ಸಂಬಂಧಪಟ್ಟವುಗಳಾಗಿದ್ದು, ಒಂದು ಪ್ರದೇಶ ಅಥವಾ ಕ್ಷೇತ್ರದ ವ್ಯಾಪ್ತಿಯನ್ನು ಹೊಂದಿರುತ್ತವೆ. ಅವುಗಳಲ್ಲಿ ಆ ಕಲಾಪ್ರಕಾರದ ಹಲವಾರು ಅಂಶಗಳನ್ನು ಕುರಿತು ಚರ್ಚಿಸಲಾಗುತ್ತದೆ.

೧. ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ : ಒಂದು ಅಧ್ಯಯನ

ಪ್ರಸ್ತುತ ಪ್ರಬಂಧವನ್ನು ಯಾದಪ್ಪ ಪರದೇಶಿಯವರು ಡಾ. ಎಸ್. ಸಿ. ಪಾಟೀಲ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಸಾದರಪಡಿಸಿದ್ದಾರೆ.[೩೧] ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆಯನ್ನು ಕುರಿತಾಗಿರುವ ಈ ಅಧ್ಯಯನದಲ್ಲಿ ಭಿತ್ತಿಚಿತ್ರಕಲೆಯ ಒಟ್ಟು ಎಂಟು ಅಧ್ಯಾಯಗಳನ್ನು ಹೊಂದಿದ್ದು, ಆರುನೂರು ಪುಟಗಳಲ್ಲಿ ವಿಷಯ ನಿರೂಪಣೆಗೊಂಡಿದೆ.

---

೩೦. ಪ್ರೇಮಾನಂದ ಟಿ. ಲಕಣ್ಣನವರ : ಕರ್ನಾಟಕ ಚಿತ್ರಕಲಾ ಸಾಹಿತ್ಯ, ಅ.ಪ್ರ.ಡಿ.ಲಿಟ್.ಮ.ಪ್ರ., ಪುಟ – ೨೫೮–೨೫೯

೩೧. ಯಾದಪ್ಪ ಬಿ. ಪರದೇಶಿ : ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ ಒಂದು ಅಧ್ಯಯನ, ಅ.ಪ್ರ.ಪಿಹೆಚ್.ಡಿ.ಮ.ಪ್ರ, ಕ.ವಿ.ವಿ. ಹಂಪಿ. ೨೦೦೦

ಒಟ್ಟು ಭಿತ್ತಿಚಿತ್ರಕಲೆಯನ್ನು ಪ್ರಾಗೈತಿಹಾಸಿಕ ಭಿತ್ತಿಚಿತ್ರಕಲೆ, ಜಾನಪದ ಭಿತ್ತಿಚಿತ್ರಕಲೆ, ಶಿಷ್ಟ ಸಂಪ್ರದಾಯದ ಭಿತ್ತಿಚಿತ್ರಕಲೆ ಎಂದು ವಿಂಗಡಿಸಿಕೊಂಡು ಆಯಾ ಕಾಲದ ಪರಿಕರ, ರಚನಾಪದ್ಧತಿ, ವಸ್ತುವಿಷಯ, ತಾಂತ್ರಿಕ ಅಂಶಗಳಾದ ರೇಖೆ, ವರ್ಣವಿನ್ಯಾಸ, ಸಂಯೋಜನೆ, ನೆರಳು, ಬೆಳಕು, ಸ್ಥಳಾವಕಾಶ, ಮೈವಳಿಕೆ, ಆಕರಗಳು, ರೂಪ ನಿಷ್ಠೆಯ ವಿಚಾರಗಳು, ಪ್ರಮಾಣ ಹೀಗೆ ಹಲವಾರು ಸಂಗತಿಗಳು ಈ ಅಧ್ಯಯನದಲ್ಲಿ ಚರ್ಚಿಸಲ್ಪಟ್ಟಿವೆ. ಇಂತಹ ಪ್ರಮುಖ ಅಂಶಗಳ ಹಿನ್ನೆಲೆಯಲ್ಲಿ ಈ ಪ್ರಬಂಧವು ಚಿತ್ರಕಲೆ ಕ್ಷೇತ್ರದಲ್ಲಿ ಮಹತ್ವದ ಕ್ಷೇತ್ರೀಯ ಅಧ್ಯಯನವಾಗಿದ್ದು, ಕರ್ನಾಟಕ ಕಲಾಸಾಹಿತ್ಯಕ್ಕೆ, ಸಂಶೋಧನಾ ಕ್ಷೇತ್ರಕ್ಕೆ ಗಮನಾರ್ಹ ಕೊಡುಗೆಯಾಗಿದೆ.

೨. ಕರ್ನಾಟಕದ ಬುಡಕಟ್ಟು ಚಿತ್ರಕಲೆ

ಪ್ರಸ್ತುತ ಪ್ರಬಂಧವನ್ನು ಎಂ.ಕೆ. ಗಿರೀಶಕುಮಾರ ಅವರು ಪ್ರೊ. ಹಿ.ಚಿ. ಬೋರಲಿಂಗಯ್ಯ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ೨೦೦೨ರಲ್ಲಿ ಸಲ್ಲಿಸಿದ್ದಾರೆ.[೩೨] ಕರ್ನಾಟಕ ಚಿತ್ರಕಲಾ ಕ್ಷೇತ್ರದಲ್ಲಿ ಬುಡಕಟ್ಟು ಜನಾಂಗದ ಚಿತ್ರಕಲೆಯ ಕುರಿತು ಹೆಚ್ಚಿನ ಅಧ್ಯಯನಗಳು ನಡೆದಿಲ್ಲ. ಲೇಖನಮಟ್ಟದ ಬರವಣಿಗೆ ಸಹಿತ ಈ ವಿಷಯವಾಗಿ ಹೆಚ್ಚಿನ ಪ್ರಮಾಣದಲ್ಲಿ ಬಂದಿಲ್ಲ. ಈ ಹಿನ್ನೆಲೆಯಲ್ಲಿ ಬುಡಕಟ್ಟು ಜನ ಸಮುದಾಯದ ಚಿತ್ರಕಲೆಯ ಬಗ್ಗೆ ಪಿಹೆಚ್.ಡಿಯಂತಹ ಅಧ್ಯಯನ ಮಾಡಿರುವುದು ಈ ಸಂದರ್ಭದಲ್ಲಿ ಹೆಚ್ಚು ಯೋಗ್ಯವಾಗಿದೆ. ಪ್ರಸ್ತುತ ಪುಸ್ತಕ ಪ್ರಬಂಧದಲ್ಲಿ ಒಟ್ಟು ಆರು ಅಧ್ಯಾಯಗಳನ್ನು ಮಾಡಿಕೊಂಡು ವಿಷಯ ವಿಶ್ಲೇಷಣೆ ಮಾಡಲಾಗಿದೆ.

ಕರ್ನಾಟಕದಲ್ಲೂ ವಿಶಿಷ್ಟ ಆಚರಣೆಗಳನ್ನು ಹೊಂದಿದ ಹಲವಾರು ಬುಡಕಟ್ಟು ಜನ ಸಮುದಾಯಗಳಿಗೆ ಈ ಜನಾಂಗದವರು ರಚಿಸುವ ಚಿತ್ರಕಲೆ ಇತರ ಜನಾಂಗದವರಿಗಿಂತ ಭಿನ್ನವಾಗಿರುವುದು ಮಾತ್ರವಲ್ಲದೇ ಪ್ರಾಕೃತಿಕ ಅಂಶಗಳಿಂದ ಪ್ರೇರಿತಗೊಂಡಿರುತ್ತದೆ. ಇವರು ಹಲವು ಸಂದರ್ಭಗಳಲ್ಲಿ ಚಿತ್ರ ರಚನೆ ಮಾಡುತ್ತಾರೆ. ಹಬ್ಬ-ಹರಿದಿನ, ಜಾತ್ರೆ, ಉತ್ಸವ, ಮದುವೆ, ಮುಂಜಿವೆ ಇನ್ನಿತರ ಶುಭ ಸಮಾರಂಭಗಳಲ್ಲಿ ಚಿತ್ರರಚನೆ ಮಾಡುವ ಬುಡಕಟ್ಟು ಜನರು ಧಾರ್ಮಿಕ ಅಂಶಗಳಿಂದ ಹೊರತಾದ ಸೌಂದರ್ಯಾನುಭವದ ಅಭಿವ್ಯಕ್ತಿಯನ್ನು ತಮ್ಮ ಚಿತ್ರಕಲೆಯಲ್ಲಿ ತಂದುಕೊಂಡಿದ್ದಾರೆ. ಪ್ರಮುಖವಾಗಿ ರೇಖಾವಿನ್ಯಾಸದಿಂದ ಕೂಡಿರುವ ಇವರ ಚಿತ್ರಕಲೆಯಲ್ಲಿ ಬಣ್ಣದ ಬೆಡಗು ರೇಖೆಯ ವೈವಿಧ್ಯದಿಂದಲೇ ಗೋಚರಿಸುತ್ತದೆ ಎಂಬಂತಹ ವಿವರಗಳೊಂದಿಗೆ ಬುಡಕಟ್ಟು ಚಿತ್ರಕಲೆಯ ಅಧ್ಯಯನದ ಮಹತ್ವ ಉದ್ದೇಶ ಮತ್ತು ಅಗತ್ಯತೆಗಳನ್ನು ಬಿಂಬಿಸಲಾಗಿದೆ.[೩೩]

ಇಲ್ಲಿ ಮುಖ್ಯವಾಗಿ ಕಲೆಯ ಉಗಮ, ಚಿತ್ರಕಲೆಯ ಪ್ರಾರಂಭಿಕ ಘಟ್ಟ, ಬೆಳವಣಿಗೆ, ಐತಿಹಾಸಿಕ ಚಿತ್ರಕಲೆ, ಆಧುನಿಕ ಚಿತ್ರಕಲೆ, ಜನಪದ ಚಿತ್ರಕಲೆ, ಬುಡಕಟ್ಟು ಚಿತ್ರಕಲೆ, ಶಿಷ್ಟಪದ

---

೩೨. ಎಂ. ಕೆ. ಗಿರೀಶ್ ಕುಮಾರ್ : ಕರ್ನಾಟಕ ಬುಡಕಟ್ಟು ಚಿತ್ರಕಲೆ, ಅ.ಪ್ರ.ಪಿಹೆಚ್.ಡಿ.ಮ.ಪ್ರ. ಕ.ವಿ.ವಿ. ಹಂಪಿ. ೨೦೦೨

೩೩. ಪ್ರೇಮಾನಂದ ಟಿ. ಲಕಣ್ಣನವರ : ಕರ್ನಾಟಕ ಚಿತ್ರಕಲಾ ಸಾಹಿತ್ಯ, ಅ.ಪ್ರ.ಡಿ.ಲಿಟ್.ಮ.ಪ್ರ., ಪುಟ - ೨೭೪

ಚಿತ್ರಕಲೆ ಹೀಗೆ ವಿಭಾಗ ಮಾಡಿಕೊಂಡು ಉಳಿದೆಲ್ಲಾ ಕಲಾಪ್ರಕಾರಗಳಿಗಿಂತ ಬುಡಕಟ್ಟು ಚಿತ್ರಕಲೆ ಹೇಗೆ ಭಿನ್ನವಾಗಿದೆ, ಮತ್ತು ಸ್ವರೂಪ ಲಕ್ಷಣಗಳೇನು? ಭೌತಿಕ ಮತ್ತು ತಾತ್ವಿಕ ನೆಲೆಗಟ್ಟಿನ ವಿಚಾರಗಳಿಗೆ ಸಂಬಂಧಪಟ್ಟಿರುತ್ತದೆ.

ಬುಡಕಟ್ಟು ಜನರ ಆಚಾರ–ವಿಚಾರ, ನಂಬಿಕೆಗಳನ್ನು ಕುರಿತಂತೆ ಈ ಹಿನ್ನೆಲೆಯಲ್ಲಿ ಇವರ ದೃಷ್ಟಿಕೋನದಲ್ಲಿ ಪರಕರಗಳ ತಯಾರಿಕೆಯಲ್ಲಿ ಇವರದೇ ಆದ ಬಣ್ಣ, ಅಂಟುದ್ರಾವಕ, ಕುಂಚ, ಕಡ್ಡಿಗಳು, ಬಣ್ಣವನ್ನು ವಿವಿಧ ಖನಿಜ ಹಾಗೂ ಸಸ್ಯಮೂಲ ಮುಂತಾದ ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿಯೇ ಲಭ್ಯವಿರುವ ವಸ್ತುಮೂಲದಿಂದಲೇ ಚಿತ್ರ ಪರಿಕರಗಳಾಗಿ ಪರಿವರ್ತಿಸಿ ಸೂರ್ಯ, ಚಂದ್ರ, ಸ್ವಸ್ತಿಕ ಮುಂತಾದ ವಸ್ತುವಿಷಯಗಳನ್ನು ಆಚಾರ–ವಿಚಾರ, ನಂಬಿಕೆ, ಧಾರ್ಮಿಕತೆ ಮತ್ತು ಪರಿಸರಕ್ಕೆ ಸಂಬಂಧಿಸಿದಂತೆ ಬೇರೆ ಬೇರೆಯಾಗಿರುತ್ತದೆ.

ಈ ಪ್ರಬಂಧದ ರಚನೆಯ ಹಿನ್ನೆಲೆಯಲ್ಲಿ ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ, ಭಟ್ಕಳ, ಯಲ್ಲಾಪುರ, ದಾಂಡೇಲಿ, ಹಳಿಯಾಳ, ನಾಗರಹೊಳೆ, ಹುಣಸೂರು, ಹೆಗ್ಗಡದೇವನಕೋಟೆ, ಬಿಳಿಗಿರಿ ರಂಗನಬೆಟ್ಟ, ಮಲೆಮಹಾದೇಶ್ವರ ಬೆಟ್ಟ, ಸಾಗರ ಮುಂತಾದ ಸ್ಥಳಗಳಲ್ಲಿ ಕ್ಷೇತ್ರಕಾರ್ಯ ಮಾಡಲಾಗಿದೆ. ಈ ಸ್ಥಳಗಳಲ್ಲಿನ ಹಾಲಕ್ಕಿಗಳು, ಕುಣಬಿಯರು, ಗೌಳಿಗರು, ಯರವರು, ಕಾಡು ಕುರುಬರು, ಜೇನು ಕುರುಬರು, ಸೋಲಿಗರು, ಹಲಸರು ಮತ್ತು ದೀವರು ಎಂಬುವ ಬುಡಕಟ್ಟು ಜನಸಮುದಾಯಗಳ ಚಿತ್ರಕಲೆಯನ್ನು ಅಧ್ಯಯನಕ್ಕೆ ಪರಿಗಣಿಸಲಾಗಿದೆ. ಪ್ರಸ್ತುತ ಕರ್ನಾಟಕದ ಬುಡಕಟ್ಟು ಚಿತ್ರಕಲೆ ಎಂಬ ಪ್ರಬಂಧದಿಂದ ಈ ಕೆಳಗಿನ ಅಂಶಗಳು ಮುಖ್ಯವಾಗಿ ಹೊರಹೊಮ್ಮಿವೆ. ನಾಗರಿಕ ಸಮಾಜದಿಂದ ದೂರವಾಗಿ ಅವರಿಗಿಂತ ಭಿನ್ನವಾಗಿ, ಪ್ರತ್ಯೇಕ ಜೀವನ ಕ್ರಮವನ್ನು ರೂಢಿಸಿಕೊಂಡು ಬದುಕುತ್ತಿರುವ ಬುಡಕಟ್ಟು ಸಮುದಾಯಗಳು ತಮ್ಮ ಸಾಂಸ್ಕೃತಿಕ ಮೌಲ್ಯಗಳನ್ನು ಇಂದಿನವರೆಗೂ ಜೀವಂತವಾಗಿ ಉಳಿಸಿಕೊಂಡು ಬಂದಿದ್ದು, ಅವುಗಳಲ್ಲಿ ಅವರ ಚಿತ್ರಕಲೆಯೂ ಒಂದಾಗಿದೆ. ಈ ಚಿತ್ರಕಲೆಯ ರಚನಾ ವಿಧಾನ, ಉಪಯೋಗಿಸುವ ಬಣ್ಣ, ಕುಂಚ, ಅಂಟು ದ್ರಾವಕಗಳಂತಹ ಪರಿಕರಗಳು, ಭಿತ್ತಿ ಸಿದ್ಧಗೊಳಿಸುವ ವಿಧಾನ, ಚಿತ್ರದ ವಸ್ತುವಿಷಯಗಳು, ರೇಖಾ ವಿನ್ಯಾಸ, ಬಣ್ಣಗಾರಿಕೆ, ಸಂಯೋಜನೆ, ರೀತಿ–ನೀತಿಗಳು, ಚಿತ್ರ ರಚಿಸುವ ಕಲಾವಿದರು, ರಚನೆಯ ಉದ್ದೇಶ, ಶೈಲಿ, ಪ್ರಭಾವ, ಪ್ರೇರಣೆ ಮುಂತಾದ ಅಂಶಗಳು ಬೆಳಕಿಗೆ ಬಂದಿವೆ.[೩೪]

೩. ಕೊಪ್ಪಳ ಹಂಪಿ ಪ್ರದೇಶದ ಪ್ರಾಗಿತಿಹಾಸ ಕಾಲದ ಕಲೆ

ಚಿತ್ರಕಲಾ ಕ್ಷೇತ್ರದಂತೆ ಪ್ರಾಗಿತಿಹಾಸ ಅಧ್ಯಯನದಲ್ಲಿಯೂ ಆದಿಮಾನವರ ಕಾಲದ ಬಂಡೆಚಿತ್ರಗಳು ಪ್ರಮುಖವಾಗಿವೆ. ಹಲವು ಜನ ವಿದ್ವಾಂಸರು ವಿಶ್ವ, ಭಾರತ ಹಾಗೂ ಕರ್ನಾಟಕದಲ್ಲಿ ಈ ಕಲಾಪ್ರಕಾರಗಳ ಬಗ್ಗೆ ಅಧ್ಯಯನ ಮಾಡಿದ್ದಾರಲ್ಲದೇ ಮಾಡುತ್ತಲಿದ್ದಾರೆ. ಹಂಪಿ, ಕೊಪ್ಪಳ ಪ್ರದೇಶದ ಗುಡ್ಡಬೆಟ್ಟಗಳು ಪ್ರಾಗಿತಿಹಾಸಿಕ ಕಾಲದ ರೇಖಾಚಿತ್ರ ಮತ್ತು ವರ್ಣಚಿತ್ರಗಳ ನೆಲೆಗಳನ್ನು

---

೩೪. ಪ್ರೇಮಾನಂದ ಟಿ. ಲಕಕ್ಕನವರ : ಕರ್ನಾಟಕ ಚಿತ್ರಕಲಾ ಸಾಹಿತ್ಯ, ಅ.ಪ್ರ.ಡಿ.ಲಿಟ್.ಮ.ಪ್ರ., ಪುಟ – ೨೭೬

ಹೊಂದಿದ್ದು, ಅವುಗಳ ಕುರಿತು ಶರಣಬಸಪ್ಪ ಕೋಲ್ಕಾರ್ ಎನ್ನುವರು ಪಿಹೆಚ್.ಡಿ ಅಧ್ಯಯನ ಮಾಡಿದ್ದಾರೆ.[೩೫] ಒಟ್ಟು ಎಂಟು ಅಧ್ಯಾಯಗಳಲ್ಲಿ ಕೊಪ್ಪಳ ಮತ್ತು ಹಂಪಿ ಪ್ರದೇಶದ ಪ್ರಾಗಿತಿಹಾಸ ಚಿತ್ರಕಲೆಯ ನೆಲೆಗಳಾದ ಕೊಪ್ಪಳ ಜಿಲ್ಲೆಯಲ್ಲಿ ಹಿರೇಬೆಣಕಲ್, ರಾಂಪುರ, ಮಲ್ಲಾಪುರ, ಆನೆಗುಂದಿಗಳಲ್ಲಿ ಹೆಚ್ಚು ಚಿತ್ರಗಳಿದ್ದರೆ, ಹಂಪಿಪ್ರದೇಶದಲ್ಲಿ ಹಂಪಿಯ ಸುತ್ತಲಿನ ಪ್ರದೇಶದಲ್ಲಿ ಚಿತ್ರಗಳು ಕಂಡುಬಂದಿದ್ದು, ಈ ಚಿತ್ರಗಳು ಹಳೆಯ, ಸೂಕ್ಷ್ಮ, ನೂತನ ಶಿಲಾಯುಗದ ಕಾಲಮಾನದಲ್ಲಿ ರಚಿತವಾದ ಚಿತ್ರಗಳಾಗಿದ್ದು, ಇವರದ್ದೇ ಆದ ಅಂದಿನ ಸುತ್ತಮುತ್ತಲಿನ ಪರಿಸರದಲ್ಲಿ ದೊರೆಯುವ ಪರಿಕರಗಳನ್ನು ತಯಾರಿಸಿಕೊಂಡು ಗವಿವರ್ಣಚಿತ್ರಗಳನ್ನು ರಚಿಸುತ್ತಿದ್ದು, ಬಯಲು ಬಂಡೆಯ ಚಿತ್ರಗಳನ್ನು ಚೂಪಾದ ಸಾಧನದಿಂದ ರಚನೆಯ ವಿಷಯವನ್ನು ಒಳಗೊಂಡಂತೆ ಈ ಪ್ರದೇಶದ ಚಿತ್ರಗಳ ಪ್ರಕಾರ, ಚಿತ್ರನೆಲೆಗಳ ಸ್ವರೂಪ, ಶೈಲಿ, ವಸ್ತುವಿಷಯಗಳು, ರಚನಾವಿಧಾನ, ಬಣ್ಣ, ಕುಂಚ, ತಯಾರಿಕೆ, ಬಣ್ಣಲೇಪನ ವಿಧಾನ, ಉದ್ದೇಶ, ಪ್ರಭಾವ, ಪ್ರೇರಣೆಗಳಂತಹ ಸಂಗತಿಗಳು ವಿವೇಚಿಸಲ್ಪಟ್ಟಿವೆ.

೪. ಕರ್ನಾಟಕದ ಮುಸ್ಲೀಂ ಅರಸರ ಕಾಲದ ಚಿತ್ರಕಲೆ

ವಜೀರಬಾಷಾ ಬಾಗಾಯತ್ ಅವರು 'ಕರ್ನಾಟಕದ ಮುಸ್ಲೀಂ ಅರಸರ ಕಾಲದ ಚಿತ್ರಕಲೆ– ಒಂದು ಅಧ್ಯಯನ' ಎಂಬ ವಿಷಯ ಕುರಿತಾಗಿ ಪಿಹೆಚ್.ಡಿ ಅಧ್ಯಯನ ಮಾಡಿದ್ದಾರೆ.[೩೬] ಈ ಪ್ರಬಂಧದಲ್ಲಿ ಒಟ್ಟು ಒಂಭತ್ತು ಅಧ್ಯಾಯಗಳನ್ನು ಮಾಡಿಕೊಂಡು ವಿಷಯ ವಿಶ್ಲೇಷಣೆ ಮಾಡಲಾಗಿದೆ. ಮುಸ್ಲೀಮರ ಕಲೆ, ಸಾಹಿತ್ಯ, ಸಂಸ್ಕೃತಿಗೆ ವಿಭಿನ್ನವಾದ ಕೊಡುಗೆ ನೀಡಿದ್ದಾರೆ. ವಾಸ್ತುಕಲೆ, ಚಿತ್ರಕಲೆಗೆ ವಿಶೇಷವಾಗಿ ಪ್ರೋತ್ಸಾಹಿಸಿದ ಇವರು ಮೂರ್ತಿ ಶಿಲ್ಪಕಲೆಗೆ ಅನಾದರ ತೋರಿದರು.[೩೭] ಕರ್ನಾಟಕ ಪ್ರಾಂತದಲ್ಲಿ ಅನೇಕ ಮುಸ್ಲೀಂ ಅರಸರು ಆಳ್ವಿಕೆ ಮಾಡಿ ಇಲ್ಲಿನ ಕಲಾಸಂಪತ್ತನ್ನು ಹೆಚ್ಚಿಸಿದ್ದಾರೆ. ಮತ್ತು ಇವರದೇಯಾದ ಕಲಾಕೊಡುಗೆಯನ್ನು ಕೊಟ್ಟಿದ್ದಾರೆ. ಬೀದರ, ಗುಲ್ಬರ್ಗಾ, ರಾಯಚೂರು, ಬಿಜಾಪುರ, ಸವಣೂರು, ಶ್ರೀರಂಗಪಟ್ಟಣ, ಮೈಸೂರುಗಳಲ್ಲಿ ಆಳಿದ ಮುಸ್ಲೀಮರು ಚಿತ್ರಕಲೆಗೆ ಪ್ರೋತ್ಸಾಹ ಕೊಟ್ಟಿದ್ದಾರೆ.

ಇವರ ಕಾಲದಲ್ಲಿ ಕಲಾತ್ಮಕ ವಾಸ್ತುರಚನೆಗಳು, ಭಿತ್ತಿಚಿತ್ರಗಳು, ಹಸ್ತಪ್ರತಿ ಚಿತ್ರಗಳು, ಸಂಕೀರ್ಣ ಮಾಧ್ಯಮದ ಚಿತ್ರಗಳು ರಚನೆಯಾಗಿದ್ದು, ಭಿತ್ತಿ, ಹಸ್ತಪ್ರತಿ ಸಂಕೀರ್ಣ ಚಿತ್ರಗಳಿಗೆ ಹೊಂದುವಂತಹ ಪರಿಕರಗಳಾದ ಗೋಡೆ, ತಾಳೆಗರಿ, ಅರಿವೆ, ರಟ್ಟು, ಮರದ ಫಲಕ ಮುಂತಾದ ಮಾಧ್ಯಮಗಳಲ್ಲದೇ ಅದರ ಮೇಲೆ ಲೇಪಿಸುವ ತೆಳೆ, ಪದಕಕ್ಕೆ ಬೇಕಾಗುವ ಶಂಖಚೂರ್ಣ, ಕಪ್ಪೆಚಿಪ್ಪಿನ ಪುಡಿ, ಮರ, ವಜ್ರಲೇಪ, ಬಿಳಿ, ಸಂಗಮರಿ ಕಲ್ಲಿನ ಪುಡಿ, ಜೇಡಿಮಣ್ಣು, ಸುಣ್ಣ, ಬಳಪದ ಕಲ್ಲಿನ ಪುಡಿ

೩೫. ಶರಣಬಸಪ್ಪ ಕೋಲ್ಕಾರ : ಕೊಪ್ಪಳ ಹಂಪಿ ಪ್ರದೇಶದ ಪ್ರಾಗೈತಿಹಾಸದ ಕಲೆ, ಅ.ಪ್ರ.ಪಿಹೆಚ್.ಡಿ.ಮ.ಪ್ರ ಕ.ವಿ.ವಿ. ಹಂಪಿ. ೨೦೦೩

೩೬. ವಜೀರಭಾಷಾ ಬಾಗಾಯತ್ : ಕರ್ನಾಟಕದ ಮುಸ್ಲಿಂ ಅರಸರ ಕಾಲದ ಚಿತ್ರಕಲೆ ಒಂದು ಅಧ್ಯಯನ, ಅ.ಪ್ರ.ಪಿಹೆಚ್.ಡಿ.ಮ.ಪ್ರ ಕ.ವಿ.ವಿ. ಹಂಪಿ. ೨೦೦೪

೩೭. ಪ್ರೇಮಾನಂದ ಟಿ. ಲಕಕ್ಣನವರ : ಕರ್ನಾಟಕ ಚಿತ್ರಕಲಾ ಸಾಹಿತ್ಯ, ಅ.ಪ್ರ.ಡಿ.ಲಿಟ್.ಮ.ಪ್ರ., ಪುಟ – ೨೮೪

[illegible]

[illegible]

[illegible]

ಮತ್ತು ಬಣ್ಣ, ಕುಂಚ, ಬಣ್ಣದ ತಟ್ಟೆ ಮುಂತಾದವುಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಈ ಪ್ರಕಾರತೆಯಲ್ಲಿ ಅಧ್ಯಯನಕ್ಕೆ ಒಳಪಡಿಸಿದ ಚಿತ್ರಕಲೆ ಇದರ ಶೈಲಿಗಳು, ತಂತ್ರಗಾರಿಕೆ ಎಂಬಿತ್ಯಾದಿ ಹಲವಾರು ವಿಚಾರಗಳು ಈ ಪ್ರಬಂಧದಿಂದ ತಿಳಿದುಬರುತ್ತವೆ.

೫. ಕರ್ನಾಟಕದ ತೊಗಲುಗೊಂಬೆ ಚಿತ್ರಕಲೆ ಒಂದು ಅಧ್ಯಯನ

ತೊಗಲುಗೊಂಬೆಯಾಟವು ಮನರಂಜನಾ ಮೂಲವಾಗಿದ್ದು, ಇಲ್ಲಿ ಶಿಲ್ಪ ಮತ್ತು ಚಿತ್ರಕಲೆಯ ಅಂಶಗಳು ಬೆರೆತುಕೊಂಡಿವೆ. ಹಾಗಾಗಿ ತೊಗಲುಗೊಂಬೆಯ ಅಧ್ಯಯನವು ಶಿಲ್ಪಕಲೆ, ಚಿತ್ರಕಲೆ ಮತ್ತು ರಂಗಕಲೆಗಳ ಸಂಯುಕ್ತ ಅಧ್ಯಯನವೆಂದೂ ಹೇಳಬಹುದು. 'ಕರ್ನಾಟಕದ ತೊಗಲುಗೊಂಬೆ ಚಿತ್ರಕಲೆ – ಒಂದು ಅಧ್ಯಯನ' ವಿಷಯ ಕುರಿತು ಶಶಿಕಲಾ ಹೂಗಾರ ಇವರು[೩೮] ಡಾ. ಎಸ್. ಸಿ ಪಾಟೀಲ ಅವರ ಮಾರ್ಗದರ್ಶನದಲ್ಲಿ ಅಧ್ಯಯನ ಕೈಗೊಂಡು ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೪ರಲ್ಲಿ ಪ್ರಬಂಧವನ್ನು ಸಲ್ಲಿಸಿದ್ದಾರೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ಮಹತ್ವ ಮತ್ತು ಪ್ರಸ್ತುತತೆಗಳನ್ನು ಹೇಳಿ ವಿಧಾನ ಮತ್ತು ಸ್ವರೂಪಗಳ ಬಗ್ಗೆ ತಿಳಿಸಲಾಗಿದೆ. ವೇದಗಳ ಕಾಲದಲ್ಲಿ ತೊಗಲಿನ ಮೇಲೆ ಚಿತ್ರರಚನೆ ಮತ್ತು ರಾಮಾಯಣ, ಮಹಾಭಾರತದ ಕಾಲದಲ್ಲಿ ಗೊಂಬೆಯಾಟದ ಉಲ್ಲೇಖ, ಅನೇಕ ಪ್ರಾಚೀನ ಸಾಹಿತ್ಯಕ ಮುಂತಾದ ಪ್ರಾಚೀನ ಪರಂಪರೆ ಐತಿಹಾಸಿಕ ಹಿನ್ನೆಲೆಯನ್ನು ಕ್ರಮಾನುಗತವಾಗಿ ಎರಡನೆಯ ಅಧ್ಯಾಯದಲ್ಲಿ ಕಟ್ಟಿಕೊಡಲಾಗಿದೆ. ಮೂರನೆಯ ಅಧ್ಯಾಯದಲ್ಲಿ ತೊಗಲುಗೊಂಬೆಯ ರಚನೆ ಪರಿಕರ ತಯಾರಿಕೆಯಲ್ಲಿ ಚರ್ಮ ಚಿತ್ರರಚನೆಗೆ ಹದಗೊಳಿಸಲು ಚರ್ಮ ಉಜ್ಜಿ ನಯಗೊಳಿಸಿದ ನಂತರ ವಿವಿಧ ಆಕಾರಕ್ಕೆ ಕತ್ತರಿಸಿ ನಂತರ ರೇಖೆ ಬಣ್ಣಗಳಿಂದ ಚಿತ್ರರಚನೆ ಮಾಡುವ ವಿಧಾನ ವಿವರಗಳು ಇಲ್ಲಿವೆ. ಈ ತೊಗಲುಗೊಂಬೆಯಲ್ಲಿ ಕಂಡು ಬರುವ ಚಿತ್ರಗಳನ್ನು ವಿಷಯಾನುಸಾರ ರಾಮಾಯಣ, ಮಹಾಭಾರತ, ಭಾಗವತ, ಕೃಷ್ಣಕಥೆಗಳು, ಶೈವಪುರಾಣ, ವೈಷ್ಣವಪುರಾಣ, ಶಾಕ್ತಪುರಾಣ, ಐತಿಹಾಸಿಕ ಘಟನೆಗಳು, ಸ್ವಾತಂತ್ರ್ಯ ಸಂಗ್ರಾಮ, ಪ್ರಚಲಿತ ಘಟನೆಗಳಿಗೆ ಸಂಬಂಧಿಸಿದ ಆಟಗಳನ್ನು ಆಡುತ್ತಿದ್ದು ಎಂದು ವಿಂಗಡಿಸಿ ನಾಲ್ಕನೆಯ ಅಧ್ಯಾಯದಲ್ಲಿ ವಿವೇಚಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ತೊಗಲುಗೊಂಬೆಗಳು ಪ್ರಾದೇಶಿಕವಾಗಿ ವೈವಿಧ್ಯದಿಂದ ಕೂಡಿರುತ್ತದೆ. ಒಂದು ಇನ್ನೊಂದರ ಮೇಲೆ ಪ್ರಭಾವ ಬೀರುವುದು, ಪ್ರೇರಣೆಗಳಿಗೆ ಒಳಪಡುವುದು ನಡೆಯುತ್ತದೆ. ಈ ಪ್ರಭಾವ ಪ್ರೇರಣೆ ಶೈಲಿಗಳ ಕುರಿತಾಗಿ ವಿವೇಚಿಸಲಾಗಿದೆ. ಮತ್ತು ದಕ್ಷಿಣ ಭಾರತದ ರಾಜ್ಯಗಳಲ್ಲಿ ವಿವಿಧ ಬಗೆಯ ತೊಗಲುಗೊಂಬೆಗಳ ಆಟಗಳು ಪ್ರಚಲಿತದಲ್ಲಿವೆ. ಕೇರಳ, ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರಗಳಲ್ಲದೇ ಓರಿಸ್ಸಾ, ಬಂಗಾಳ ಪ್ರಾಂತದ ತೊಗಲುಗೊಂಬೆಗಳನ್ನು ವಿವೇಚನೆಗೆ ಬಳಸಿಕೊಳ್ಳಲಾಗಿದೆ. ಏಳನೆಯ ಅಧ್ಯಾಯದಲ್ಲಿ ತೊಗಲುಗೊಂಬೆ ಚಿತ್ರಕಲಾವಿದನ

೩೮. ಶಶಿಕಲಾ ಹೂಗಾರ್ : ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ, ಅ.ಪ್ರ.ಪಿಹೆಚ್.ಡಿ.ಮ.ಪ್ರ. ಕ.ವಿ.ವಿ. ಹಂಪಿ. ೨೦೦೪

ಕುರಿತು, ಇವರ ಮೂಲ, ಸ್ಥಿತಿಗತಿ, ಪ್ರಭಾವ, ಪ್ರೇರಣೆ, ಆವಿಷ್ಕಾರ, ಸಾಮಾಜಿಕ, ಆರ್ಥಿಕ ಸ್ಥಾನಮಾನ ಮುಂತಾದವನ್ನು ಮುಖ್ಯವಾಗಿ ವಿವೇಚಿಸಲಾಗಿದೆ. ಈ ಚಿತ್ರಗಳಿಗೆ ತಗಲುವ ಆಪತ್ತುಗಳು ಮತ್ತು ಸಂರಕ್ಷಣೆ ಕುರಿತಂತೆ, ಒಟ್ಟು ಏಳು ಅಧ್ಯಾಯಗಳ ಫಲಿತಗಳನ್ನು ಎಂಟನೆಯ ಅಧ್ಯಾಯದಲ್ಲಿ ಕೊಡಲಾಗಿದೆ.

೬. ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ – ಒಂದು ಅಧ್ಯಯನ

ಪ್ರಾಚೀನ ಚಿತ್ರಕಲಾ ಪ್ರಕಾರಗಳಲ್ಲಿ ಭಿತ್ತಿಚಿತ್ರಗಳು ಮತ್ತು ಕಿರುರೂಪ ಚಿತ್ರಗಳನ್ನು ಹೊರತುಪಡಿಸಿ ಅತ್ಯಂತ ಪ್ರಮುಖವಾಗಿರುವ ಕಲಾಕೃತಿಗಳೆಂದರೆ ಹಸ್ತಪ್ರತಿಚಿತ್ರಗಳೇ ಆಗಿವೆ.[೩೯] ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ – ಒಂದು ಅಧ್ಯಯನ ಎಂಬ ವಿಷಯ ಕುರಿತು ಎಚ್. ಎನ್. ಚಿತ್ರಗಾರರು ಡಾ. ಎಸ್. ಸಿ. ಪಾಟೀಲರ ಮಾರ್ಗದರ್ಶನದಲ್ಲಿ ಅಧ್ಯಯನ ಮಾಡಿದ್ದಾರೆ.[೪೦] ಈ ಪ್ರಬಂಧದಲ್ಲಿ ಮೊದಲನೆಯ ಅಧ್ಯಾಯದಲ್ಲಿ ಉದ್ದೇಶ, ಸ್ವರೂಪ, ವಿಧಾನಗಳ ಜೊತೆಗೆ ಪ್ರಸ್ತುತತೆ, ಅವಶ್ಯಕತೆಗಳನ್ನು ನಿರೂಪಿಸಲಾಗಿದೆ. ಎರಡನೆಯ ಅದ್ಯಾಯದಲ್ಲಿ ಹಸ್ತಪ್ರತಿಯ ಇತಿಹಾಸವನ್ನು ಕ್ರಮಬದ್ಧವಾಗಿ ಕಟ್ಟಿಕೊಡುವ ಪ್ರಯತ್ನವನ್ನು ಎರಡನೆಯ ಅಧ್ಯಾಯದಲ್ಲಿ ಮಾಡಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಹಸ್ತಪ್ರತಿಯ ರಚನಾವಿಧಾನ ಮತ್ತು ಪರಿಕರಗಳನ್ನು ಕುರಿತಂತೆ ತಾಳೆಗರಿ ಮಾದ್ಯಮದ ಹಸ್ತಪ್ರತಿ ಕಾಗದದ ಹಸ್ತಪ್ರತಿ, ಬಟ್ಟೆ ಮಾಧ್ಯಮದ ಹಸ್ತಪ್ರತಿ, ರಟ್ಟು ಮತ್ತು ಮರದ ಹಸ್ತಪ್ರತಿ ಎಂಬುದಾಗಿ ವರ್ಗೀಕರಿಸಲಾಗಿ ಚಿತ್ರರಚನೆಯಲ್ಲಿ ಹಿನ್ನೆಲೆ–ಮುನ್ನೆಲೆ ಚಿತ್ರಿಸುವ ರೀತಿ, ವಿಧಾನ, ಚಿತ್ರರಚನಾ ಪರಿಕರಗಳನ್ನು ಕುರಿತಂತೆ ಇಲ್ಲಿ ಅಧ್ಯಯನ ಮಾಡಲಾಗಿದೆ.

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯ ಕ್ಷೇತ್ರದಲ್ಲಿ ವಿವಿಧ ಶೈಲಿ ಮತ್ತು ವಿವಿಧ ಧರ್ಮಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳಿದ್ದು, ಅವುಗಳನ್ನು ವಿಷಯಾನುಸಾರ, ಶೈಲಿಗನುಸಾರ ಮತ್ತು ಮತಾನುಸಾರವಾಗಿ ವರ್ಗೀಕರಿಸಿ ನಾಲ್ಕನೆಯ ಅಧ್ಯಾಯದಲ್ಲಿ ವಿವೇಚಿಸಲಾಗಿದೆ. ಐದನೆಯ ಅಧ್ಯಾಯದಲ್ಲಿ ಹಸ್ತಪ್ರತಿ ಚಿತ್ರಕಲೆಯ ಶೈಲಿ, ಪ್ರಭಾವ, ಪ್ರೇರಣೆ ಎಂಬುದಾಗಿ ಪ್ರತ್ಯೇಕವಾಗಿ ಚರ್ಚಿತಗೊಂಡಿವೆ. ಮತ್ತು ಹಸ್ತಪ್ರತಿ ಚಿತ್ರಕಲೆಯ ಪೋಷಕರು ಮತ್ತು ಕಲಾವಿದರ ಕುರಿತಂತೆ ಆರನೆಯ ಅಧ್ಯಾಯದಲ್ಲಿ ವಿವೇಚಿಸಲಾಗಿದೆ. ಏಳನೆಯ ಅಧ್ಯಾಯದಲ್ಲಿ ಹಸ್ತಪ್ರತಿಯಲ್ಲಿನ ವಸ್ತುವಿಷಯವನ್ನು ಆಧಾರವಾಗಿರಿಸಿ, ಅವುಗಳಲ್ಲಿ ಆಕಾರಗಳು, ಸಂಯೋಜನಾ ರೀತಿ, ರೇಖಾಲಾಲಿತ್ಯ, ವರ್ಣವಿನ್ಯಾಸ, ಮೈವಳಿಕೆ ಮುಂತಾದ ಅಂಶವನ್ನು ಒಳಗೊಂಡಿದೆ. ಎಂಟನೆಯ ಅಧ್ಯಾಯದಲ್ಲಿ ನಮ್ಮ ಪ್ರಾಚೀನ ಪರಂಪರೆಯ ಅಮೂಲ್ಯ ಸಂಪತ್ತಾದ ಹಸ್ತಪ್ರತಿಕೃತಿಗಳಿಗೆ ಉಂಟಾಗುವ ಆಪತ್ತು ಸಂರಕ್ಷಣಾ ಕ್ರಮಗಳ ಬಗ್ಗೆ ವಿವೇಚಿಸಲಾಗಿದೆ. ಒಂಭತ್ತನೆಯ ಅಧ್ಯಾಯವು ಸಮಾರೋಪವಾಗಿದ್ದು, ಒಟ್ಟು ಅಧ್ಯಯನದ ಫಲಿತಗಳನ್ನು ಕೊಡಲಾಗಿದೆ.

---

೩೯. ಪ್ರೇಮಾನಂದ ಟಿ. ಲಕಣ್ಣನವರ : ಕರ್ನಾಟಕ ಚಿತ್ರಕಲಾ ಸಾಹಿತ್ಯ, ಅ.ಪ್ರ.ಡಿ.ಲಿಟ್.ಮ.ಪ್ರ., ಪುಟ – ೨೯೩

೪೦. ಎಚ್. ಎನ್. ಚಿತ್ರಗಾರ : ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ : ಒಂದು ಅಧ್ಯಯನ, ಅ.ಪ್ರ.ಪಿಹೆಚ್.ಡಿ.ಮ.ಪ್ರ ಕ.ವಿ.ವಿ. ಹಂಪಿ. ೨೦೦೫

೭. ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು

ಭಾರತೀಯ ಕಲಾಇತಿಹಾಸದಲ್ಲಿ ಅಜಂತಾಕ್ಕೆ ದೊರಕಿದಷ್ಟು ಮಹತ್ವ ಬೇರೆ ಯಾವ ಚಿತ್ರನೆಲೆಗಳಿಗೆ ಲಭ್ಯವಾಗಿಲ್ಲ ಎಂದರೂ ತಪ್ಪಿಲ್ಲ. ಪಾಶ್ಚಾತ್ಯರು, ಪೌರ್ವಾತ್ಯರು ಮತ್ತು ಭಾರತೀಯ ಅನೇಕ ವಿದ್ವಾಂಸರು ಅಜಂತಾದ ಬಗ್ಗೆ ಅಧ್ಯಯನ ಮಾಡಿದ್ದಾರೆ. ಇವು ಕ್ರಿ.ಶ. ೫ನೇ ಶತಮಾನದ ಶ್ರೇಷ್ಠ ಚಿತ್ರಕಲೆಯ ನೆಲೆಯಾಗಿವೆ. ಇಲ್ಲಿಯ ಚಿತ್ರಕಲೆಯನ್ನು ಕುರಿತಂತೆ ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು ಕುರಿತು ಡಾ. ಎಸ್. ವಿ. ವೆಂಕಟೇಶಯ್ಯ ಅಧ್ಯಯನ ಮಾಡಿದ್ದಾರೆ.[೪೧] ಈ ಪ್ರಬಂಧವು ಆರು ಅಧ್ಯಾಯಗಳನ್ನು ಹೊಂದಿದೆ. ಒಂದನೆಯ ಅಧ್ಯಾಯದಲ್ಲಿ ಉದ್ದೇಶ, ಪ್ರಸ್ತುತತೆ, ಮತ್ತು ಮಹತ್ವಗಳನ್ನು ಹೇಳಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಅಜಂತಾ ಗುಹಾಲಯಗಳ ಸ್ವರೂಪ, ಲಕ್ಷಣ, ರಚನಾ ವಿಧಾನ, ಐತಿಹಾಸಿಕ ಹಿನ್ನೆಲೆಗಳ ಬಗ್ಗೆ ಹೇಳಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಅಜಂತಾ ಗುಹಾಲಯಗಳ ರಚನಾಕ್ರಮ, ಪ್ರತಿಯೊಂದು ಗುಹೆಗಳು ಭಿನ್ನವಾಗಿದ್ದು, ಒಂದಕ್ಕಿಂತ ಒಂದು ಸುಂದರವಾಗಿವೆ. ಪ್ರತಿಯೊಂದು ಈ ಗುಹಾಲಯದ ಗೋಡೆ, ಕಂಬ, ಕಮಾನು, ಛಾವಣಿಗಳಲ್ಲಿ ಅಲ್ಲಲ್ಲಿ ಬೌದ್ಧ ಧಾರ್ಮಿಕ ಶಿಲ್ಪಗಳ ರಚನೆ, ವರ್ಣವಿನ್ಯಾಸ, ರೇಖಾಲಾಲಿತ್ಯ, ಸಂಯೋಜನೆಯ ರೀತಿ ಇವುಗಳನ್ನು ಕುರಿತಂತೆ ಸ್ಥೂಲವಾಗಿ ಹೇಳಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಗುಹೆಯ ವರ್ಣಚಿತ್ರಗಳಾವುವು, ಯಾವ ವಿಷಯ, ವಸ್ತುಗಳನ್ನು ಆಧರಿಸಿದೆ, ಚಿತ್ರ ಪಟ್ಟಿಕೆಗಳಲ್ಲಿ ಯಾವ ವಸ್ತು ಅಂಶಗಳಿವೆ, ದೇವಾಲಯದ ಮಾದರಿ ಅರಮನೆ, ಜನಸಾಮಾನ್ಯರ ವಾಸದ ನೆಲೆಗಳು, ಅಲಂಕಾರಿಕ ಸಾರ್ವಜನಿಕ ಕಟ್ಟಡಗಳು, ಬೃಹತ್ ಸೌಧಗಳು, ರಸ್ತೆಗಳು ಕೋಟೆಗಳು, ಮಂಟಪಗಳು, ವಿಹಾರಧಾಮಗಳು ಹೀಗೆ ಹಲವಾರು ವಿಷಯವನ್ನು ಈ ಅಧ್ಯಾಯ ಒಳಗೊಂಡಿದೆ. ಐದನೆಯ ಅಧ್ಯಾಯದಲ್ಲಿ ಅಜಂತಾ ಗುಹಾಲಯಗಳಲ್ಲಿನ ಚಿತ್ರಗಳಲ್ಲಿ ಒಂದು ಗುಹೆಯ ಚಿತ್ರಕ್ಕೂ, ಇನ್ನೊಂದು ಗುಹೆಯ ಕಲಾಕೃತಿಯ ಚಿತ್ರಕ್ಕಿರುವ ತೌಲನಿಕ ದೃಷ್ಟಿಕೋನಗಳ ಅಂಶವನ್ನು ಚರ್ಚಿಸಲಾಗಿದೆ. ಸಮಾರೋಪದಲ್ಲಿನ ಒಟ್ಟು ಅಧ್ಯಯನದ ಫಲಿತಗಳನ್ನು ಆರನೆಯ ಅಧ್ಯಾಯ ಒಳಗೊಂಡಿದೆ.

೮. ಕರಾವಳಿ ಕರ್ನಾಟಕದ ಯಕ್ಷಗಾನ ಮುಖವರ್ಣಿಕೆ ಹಾಗೂ ವೇಷಭೂಷಣಗಳು

ಯಕ್ಷಗಾನವು ಒಂದು ಪ್ರದರ್ಶನಕಲೆಯಾದರೂ ಮುಖವರ್ಣಿಕೆ ಹಾಗೂ ವೇಷಭೂಷಣ ಚಿತ್ರಕಲಾ ಪ್ರಕಾರವಾಗಿ ಯಕ್ಷಗಾನದ ಒಂದು ಭಾಗವಾಗಿದೆ. 'ಕರಾವಳಿ ಕರ್ನಾಟಕದ ಯಕ್ಷಗಾನ ಮುಖವರ್ಣಿಕೆ ಹಾಗೂ ವೇಷಭೂಷಣಗಳು' ಎಂಬ ಶೀರ್ಷಿಕೆ ಕುರಿತು ಡಾ. ವಿಶ್ವನಾಥ ಎ. ಎಸ್. ಅವರು ಪಿಹೆಚ್.ಡಿ. ಅಧ್ಯಯನವನ್ನು ಮಾಡಿದ್ದಾರೆ.[೪೨] ಈ ಪ್ರಬಂಧದ ಮೊದಲನೆಯ

೪೧. ಎಸ್. ವಿ. ವೆಂಕಟೇಶಯ್ಯ : ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು, ಅ.ಪ್ರ.ಪಿಹೆಚ್.ಡಿ.ಮ.ಪ್ರ. ಕ.ವಿ.ವಿ. ಹಂಪಿ. ೨೦೦೫

೪೨. ಡಾ. ವಿಶ್ವನಾಥ ಎ. ಎಸ್ : ಕರಾವಳಿ ಕರ್ನಾಟಕದ ಯಕ್ಷಗಾನ ಮುಖವರ್ಣಿಕೆ ಹಾಗೂ ವೇಷಭೂಷಣಗಳು. ಅ.ಪ್ರ.ಪಿಹೆಚ್.ಡಿ.ಮ.ಪ್ರ. ಕ.ವಿ.ವಿ. ಹಂಪಿ. ೨೦೦೮

[illegible]

[illegible]

[illegible]

[illegible]

ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವೈಧಾನಿಕತೆ ಮತ್ತು ವ್ಯಾಪ್ತಿಯ ಕುರಿತು ವಿವರಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಕರಾವಳಿಯ ಸಾಂಸ್ಕೃತಿಕ ಮತ್ತು ಪ್ರಾಕೃತಿಕ ಪರಿಸರದ ಹಿನ್ನೆಲೆಯಲ್ಲಿ ಯಕ್ಷಗಾನವನ್ನು ಗಮನಿಸಲಾಗಿದೆ. ಯಕ್ಷಗಾನದ ಮುಖವರ್ಣಿಕೆಯನ್ನು ಕುರಿತಂತೆ ದ್ರವ್ಯಗಳು, ಬಣ್ಣಗಳನ್ನು ತಯಾರಿಸುವ ವಿಧಾನ, ಮುಖವರ್ಣಿಕೆಗೆ ಸಿದ್ಧತೆ, ವಿವಿಧ ಪಾತ್ರಗಳಿಗನುಸಾರವಾಗಿ ಮುಖವರ್ಣಿಕೆ ರಚಿಸುವ ಕ್ರಮವನ್ನು ಅಧ್ಯಯನ ಮಾಡಲಾಗಿದೆ.

ಯಕ್ಷಗಾನ ದೃಶ್ಯಕಲೆಯಲ್ಲಿನ ವಸ್ತ್ರವಿನ್ಯಾಸದ ಕುರಿತು ನಾಲ್ಕನೆಯ ಅಧ್ಯಾಯದಲ್ಲಿ ಅಧ್ಯಯನ ಮಾಡಿ ವಿವರಿಸಲಾಗಿದೆ. ಈ ಅಧ್ಯಾಯದಲ್ಲಿ ಯಕ್ಷಗಾನದ ತೆಂಕು, ಬಡಗುತಿಟ್ಟು ಮತ್ತು ಉತ್ತರ ಕನ್ನಡ ಶೈಲಿಗಳಲ್ಲಿ ಪಾತ್ರಕ್ಕೆ ತಕ್ಕಂತೆ ಬಳಸುವ ಬಟ್ಟೆಯ ವಿನ್ಯಾಸಗಳನ್ನು ಗಮನಿಸಲಾಗಿದೆ. ಯಕ್ಷಗಾನದ ನೃತ್ಯಶೈಲಿಗೂ ಆಯಾಯ ತಿಟ್ಟಿನ ವಸ್ತುವಿನ್ಯಾಸಕ್ಕೂ ಇರುವ ಸಂಬಂಧ ಸಾಮರಸ್ಯವನ್ನು ಗುರುತಿಸಿ ಅಧ್ಯಯನ ಮಾಡಿ ಈ ಅಧ್ಯಾಯದಲ್ಲಿ ವಿವರಿಸಲಾಗಿದೆ. ವಸ್ತ್ರವಿನ್ಯಾಸದ ಮೂಲಕ ಪಾತ್ರ ಪಾತ್ರಗಳ ನಡುವೆ ಕಲ್ಪಿಸಬಹುದಾದ ಸಂಬಂಧ, ಸಾದೃಶ್ಯ, ವೈರುಧ್ಯಗಳನ್ನು ಅಧ್ಯಾಯದಲ್ಲಿ ಕಂಡುಕೊಳ್ಳಲಾಗಿದೆ. ಪ್ರಾದೇಶಿಕವಾಗಿ ಸಾಂಸ್ಕೃತಿಕ ವಲಸೆಯ ಬಗೆಗೂ ಯಕ್ಷಗಾನದ ವೇಷಭೂಷಣಗಳು ಕಾರಣವಾಗಬಲ್ಲವು ಎಂದು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಐದನೆಯ ಅಧ್ಯಾಯದಲ್ಲಿ ಯಕ್ಷಗಾನದ ಅಭರಣಗಳ ಕುರಿತು ಅಧ್ಯಯನ ಮಾಡಿ ವಿವರಿಸಲಾಗಿದೆ. ಯಕ್ಷಗಾನ ಪಾತ್ರಗಳನ್ನು ಹಿಂದಿನ ಅಧ್ಯಾಯಗಳಂತೆ ವೇಷ ಸ್ವಭಾವಕ್ಕನುಸಾರವಾಗಿ ವಿಭಾಗಿಸಿಕೊಂಡು ಮೂರು ತಿಟ್ಟಿನ ಆಯಾ ವಿಭಾಗದಲ್ಲಿ ಬರುವ ಆಭರಣಗಳನ್ನು ಅಧ್ಯಯನ ಮಾಡಲಾಗಿದೆ. ಯಕ್ಷಗಾನದಲ್ಲಿನ ಕಿರೀಟಗಳ ವಿನ್ಯಾಸದ ಕುರಿತು ಆರನೆಯ ಅಧ್ಯಾಯದಲ್ಲಿ ಅಧ್ಯಯನ ನಡೆಸಿ ವಿವರಿಸಲಾಗಿದೆ. ಯಕ್ಷಗಾನದ ಪಾತ್ರ ಪಾತ್ರಗಳ ನಡುವಿನ ವ್ಯತ್ಯಾಸವನ್ನು ಕಿರೀಟದ ಮೂಲಕ ಯಕ್ಷಗಾನದಲ್ಲಿ ಹೇಗೆ ತೋರಿಸುವರೆಂಬುದನ್ನು ಈ ಅಧ್ಯಾಯದಲ್ಲಿ ಕಂಡುಕೊಳ್ಳಲಾಗಿದೆ. ಯಕ್ಷಗಾನದ ಬಣ್ಣದ ಮನೆ ಚೌಕಿಯ ಕುರಿತು ಅಧ್ಯಯನವನ್ನು ಮಾಡಿ ಏಳನೆಯ ಅಧ್ಯಾಯದಲ್ಲಿ ವಿವರಿಸಲಾಗಿದೆ. ಈ ಅಧ್ಯಾಯದಲ್ಲಿ ಚೌಕಿಯ ಪರಿಸರ, ದೇವರ ಸ್ಥಾನ, ಪಾತ್ರಗಳ ಸ್ಥಾನ, ಹಾಸ್ಯಗಾರನ ಸ್ಥಾನ ಮೊದಲಾದವುಗಳ ಕಡೆಗೆ ಗಮನಹರಿಸಿ ಅಧ್ಯಯನ ಮಾಡಲಾಗಿದೆ. ಚೌಕಿಯ ಕಲಾತ್ಮಕತೆಯನ್ನು ಒಟ್ಟಾರೆ ಅಧ್ಯಯನದಿಂದ ಗಮನಿಸುವ ಪ್ರಯತ್ನ ಮಾಡಲಾಗಿದೆ.

ಎಂಟನೆಯ ಅಧ್ಯಾಯದಲ್ಲಿ ಯಕ್ಷಗಾನ ದೃಶ್ಯಕಲೆಯ ಪ್ರದರ್ಶನ ಸಂದರ್ಭದ ಕಲಾತ್ಮಕ ವಿನ್ಯಾಸವನ್ನು ಅಧ್ಯಯನ ಮಾಡಲಾಗಿದೆ. ಈ ಅಧ್ಯಯನದಿಂದ ಯಕ್ಷಗಾನ ಪ್ರದರ್ಶನಗೊಳ್ಳುವಾಗ ಹೇಗೆ ಚಿತ್ರಾತ್ಮಕ ಪ್ರತಿಮೆಯ ರೂಪವಾಗಿ ಕಾಣುತ್ತದೆ ಎಂಬುದನ್ನು ಅರಿಯುವ ಪ್ರಯತ್ನ ಮಾಡಲಾಗಿದೆ. ಒಂಭತ್ತನೆಯ ಅಧ್ಯಾಯವು ಹಿಂದಿನ ಸಮಸ್ತ ಅಧ್ಯಾಯಗಳ ಫಲಿತವಾಗಿದೆ. ಪ್ರಸ್ತುತ ಸಂಶೋಧನೆಯಲ್ಲಿ ಕರ್ನಾಟಕ ಕರಾವಳಿಯ ಯಕ್ಷಗಾನದ ಪ್ರಭೇದಗಳಲ್ಲಿನ ಅರ್ಹವಾದ

ಮುಖವರ್ಣಿಕೆ, ವೇಷಭೂಷಣ, ಕಿರೀಟ ಮೊದಲಾದವುಗಳ ಅಧ್ಯಯನ ನಡೆಸಿ ದೃಶ್ಯಕಲೆಯ ದೃಷ್ಟಿಯ ಹಿನ್ನೆಲೆಯಲ್ಲಿ ಒಂದು ನೆಲೆಯನ್ನು ಕಾಣುವ ಪ್ರಯತ್ನ ಮಾಡಲಾಗಿದೆ.

೧೦. ಕರ್ನಾಟಕದ ದೃಶ್ಯಕಲಾ ಸಾಹಿತ್ಯ

ಇಡೀ ಕರ್ನಾಟಕದ ದೃಶ್ಯಕಲೆ ಕುರಿತಂತೆ ಪುಸ್ತಕ, ಗ್ರಂಥಗಳನ್ನು ಕುರಿತಂತೆ ಸಮೀಕ್ಷಾ ಅಧ್ಯಯನವಾಗಿದೆ. ಕರ್ನಾಟಕದ ದೃಶ್ಯಕಲಾ ಸಾಹಿತ್ಯ ಎಂಬ ಶೀರ್ಷಿಕೆಯಡಿಯಲ್ಲಿ ಡಾ. ಪ್ರೇಮಾನಂದ ತಿ. ಲಕ್ಕಣ್ಣನವರು ಡಾ. ಎಸ್. ಸಿ. ಪಾಟೀಲರ ಮಾರ್ಗದರ್ಶನದಲ್ಲಿ ಅಧ್ಯಯನ ಮಾಡಿ ಪ್ರಬಂಧವನ್ನು ಮಂಡಿಸಿದ್ದಾರೆ.[೪೩] ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವೈಧಾನಿಕತೆ ಮತ್ತು ವ್ಯಾಪ್ತಿಗಳನ್ನು ಹೇಳಲಾಗಿದೆ. ಚಿತ್ರಕಲಾ ಸಾಹಿತ್ಯದ ಪರಿಕಲ್ಪನೆ, ಅರ್ಥವ್ಯಾಪ್ತಿಗಳು ಅದರ ಮಹತ್ವ ಇವುಗಳನ್ನು ತಿಳಿಸುವುದರ ಜೊತೆಗೆ ಈ ಅಧ್ಯಯನವನ್ನು ಏತಕ್ಕಾಗಿ ಕೈಗೊಳ್ಳಲಾಗಿದೆ? ಪ್ರಮುಖ ಉದ್ದೇಶಗಳೇನು? ಎಂಬಂತಹ ಸಂಗತಿಗಳನ್ನು ಬಿಂಬಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಚಿತ್ರಕಲಾ ಸಾಹಿತ್ಯ ಬೆಳೆದು ಬಂದ ಹೆಜ್ಜೆಗಳು ತೀರ ಅಸ್ಪಷ್ಟವಾಗಿರುವ ಈ ಸಂದರ್ಭದಲ್ಲಿ ಅದರ ಇತಿಹಾಸವನ್ನು ಕ್ರಮಾನುಗತ ರೀತಿಯಲ್ಲಿ ಕಟ್ಟಿಕೊಡುವ ಪ್ರಥಮ ಪ್ರಯತ್ನ ಎಂದು ಹೇಳಬಹುದು.

ಚಾಲುಕ್ಯರ ಕಾಲದಿಂದ ಕವಿರಾಜಮಾರ್ಗದ ವರೆಗಿನ ಚಿತ್ರಕಲಾ ಸಾಹಿತ್ಯ, ಕವಿರಾಜ ಮಾರ್ಗದಿಂದ ವಚನ ಸಾಹಿತ್ಯದ ವರೆಗಿನ ಚಿತ್ರಕಲಾ ಸಾಹಿತ್ಯ, ವಚನಸಾಹಿತ್ಯದಿಂದ ವಿಜಯನಗರದವರೆಗಿನ ಚಿತ್ರಕಲಾ ಸಾಹಿತ್ಯ, ಮೈಸೂರು ಅರಸರಿಂದ ಸ್ವಾತಂತ್ರ್ಯದವರೆಗಿನ ಚಿತ್ರಕಲಾ ಸಾಹಿತ್ಯ, ಸ್ವಾತಂತ್ರ್ಯೋತ್ತರ ಕಾಲದಿಂದ ಕ್ರಿ.ಶ. ೨೦೦೦ವರೆಗಿನ ಚಿತ್ರಕಲಾ ಸಾಹಿತ್ಯ ಎಂಬುದಾಗಿ ಹಂತಗಳನ್ನು ಮಾಡಿಕೊಂಡು ಕರ್ನಾಟಕದ ಚಿತ್ರಕಲಾ ಸಾಹಿತ್ಯದ ಕ್ರಮಬದ್ಧ ಇತಿಹಾಸವನ್ನು ಎರಡನೆಯ ಅಧ್ಯಾಯದಲ್ಲಿ ಕಟ್ಟಿಕೊಡಲು ಪ್ರಯತ್ನಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಚಿತ್ರಕಲಾ ಸಂಪಾದನಾ ಸಾಹಿತ್ಯವನ್ನು ಕುರಿತು ಅಧ್ಯಯನ ಮಾಡಲಾಗಿದೆ. ಕರ್ನಾಟಕದಲ್ಲಿ ಕನ್ನಡದಲ್ಲಿ ಚಿತ್ರಕಲಾ ಸಾಹಿತ್ಯವು ಪ್ರಾರಂಭಿಕ ಹಂತದಲ್ಲಿ ಹೆಚ್ಚು ರಚನೆಗೊಳ್ಳತೊಡಗಿದ್ದು, ಸಂಪಾದನಾಸ್ವರೂಪದಲ್ಲಿಯೇ ಎನ್ನಬಹುದು. ಚಿತ್ರಕಲಾ ಸಂಪಾದನಾ ಸಾಹಿತ್ಯವನ್ನು ಅಭಿನಂದನೆ, ಹಿನ್ನೆಲೆಯ ಸಂಪಾದನಾ ಸಾಹಿತ್ಯ, ಸ್ಮರಣಸಂಚಿಕೆ ಹಿನ್ನೆಲೆಯ ಸಂಪಾದನಾ ಸಾಹಿತ್ಯ ಎಂಬುದಾಗಿ ಮೂರು ರೀತಿಯಲ್ಲಿ ವಿಂಗಡಿಸಿಕೊಂಡು ವಿಶ್ಲೇಷಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಚಿತ್ರಕಲಾ ವ್ಯಕ್ತಿ ಅಧ್ಯಯನ ಸಾಹಿತ್ಯವನ್ನು ಕುರಿತು ವಿವೇಚಿಸಲಾಗಿದೆ. ಕರ್ನಾಟಕದಲ್ಲಿ ಕನ್ನಡದಲ್ಲಿ ಹೊರ ಬಂದ ಚಿತ್ರಕಲಾ ಸಾಹಿತ್ಯದಲ್ಲಿ ಹೆಚ್ಚಿನ ಪ್ರಮಾಣದ ಕಲಾವಿದರ ಕುರಿತ ಅಧ್ಯಯನವೇ ಅಗಿದೆ. ಐದನೆಯ ಅಧ್ಯಾಯದಲ್ಲಿ ಚಿತ್ರಕಲಾ

---

೪೩. ಪ್ರೇಮಾನಂದ ಟಿ. ಲಕಣ್ಣನವರ : ಕರ್ನಾಟಕ ಚಿತ್ರಕಲಾ ಸಾಹಿತ್ಯ, ಅ.ಪ್ರ.ಡಿ.ಲಿಟ್.ಮ.ಪ್ರ., ಕನ್ನಡ ವಿ.ವಿ. ಹಂಪಿ. ೨೦೦೮

ಅನುವಾದ ಸಾಹಿತ್ಯ, ಇಂಗ್ಲೀಷ್ ಭಾಷೆಯಲ್ಲಿ ಬಂದ ಸಾಹಿತ್ಯ ಮತ್ತು ಪ್ರವಾಸ ಸಾಹಿತ್ಯಗಳನ್ನು ಕುರಿತು ವಿಶ್ಲೇಷಿಸಲಾಗಿದೆ. ಆರನೆಯ ಅಧ್ಯಾಯದಲ್ಲಿ ಚಿತ್ರಕಲಾ ಸಂಶೋಧನಾ ಸಾಹಿತ್ಯವನ್ನು ಕುರಿತು ವಿಶ್ಲೇಷಿಸಲಾಗಿದೆ. ಪಿಹೆಚ್.ಡಿ ಸಂಶೋಧನಾ ಸಾಹಿತ್ಯ, ಎಂ.ಫಿಲ್, ಸಂಶೋಧನಾ ಸಾಹಿತ್ಯ, ಡಿ.ಲಿಟ್ ಸಂಶೋಧನ ಸಾಹಿತ್ಯ, ಸ್ನಾತಕೋತ್ತರ ಪದವಿ ಮಟ್ಟದ ಕಿರುಪ್ರಬಂಧಗಳೆಂಬುದಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ. ಚಿತ್ರಕಲಾ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಸಂಶೋಧನಾ ಸಾಹಿತ್ಯವು ಗಂಭೀರ ಸ್ವರೂಪದ ಸಾಹಿತ್ಯವಾಗಿದ್ದು, ಇದರಲ್ಲಿ ವಿವರಗಳು ಹೆಚ್ಚು ವೈಜ್ಞಾನಿಕ ಹಿನ್ನೆಲೆಯಿಂದ ಕೂಡಿರುತ್ತವೆ. ಹಾಗಾಗಿ ಈ ಪ್ರಕಾರದ ಸಾಹಿತ್ಯವು ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ ಎಂಬಂತಹ ಸಂಗತಿಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಬಿಂಬಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಚಿತ್ರಕಲಾ ಸಂಕೀರ್ಣ ಸಾಹಿತ್ಯವನ್ನು ಕುರಿತು ವಿವೇಚಿಸಲಾಗಿದೆ. ಇಲ್ಲಿ ಮುಖ್ಯವಾಗಿ ಕರ್ನಾಟಕದ ಚಿತ್ರಕಲಾ ಸಾಹಿತ್ಯ, ಭಾರತೀಯ ಚಿತ್ರಕಲಾ ಸಾಹಿತ್ಯ, ಜಾಗತಿಕ ಚಿತ್ರಕಲಾ ಸಾಹಿತ್ಯ ಎಂದು ವಿಂಗಡಿಸಿಕೊಂಡು ವಿಶ್ಲೇಷಣೆ ಮಾಡಲಾಗಿದೆ. ಎಂಟನೆಯ ಅಧ್ಯಾಯವು ಸಮಾರೋಪವಾಗಿದ್ದು, ಒಟ್ಟು ಏಳು ಅಧ್ಯಾಯಗಳ ಫಲಿತಗಳನ್ನು ಈ ಅಧ್ಯಾಯದಲ್ಲಿ ಹೇಳಲಾಗಿದೆ.

೧೧. ಗಾಜಿನ ಮೇಲಿನ ಚಿತ್ರಗಳು : ಒಂದು ಅಧ್ಯಯನ

ಗಾಜಿನ ಚಿತ್ರಕಲೆಯು ಚಿತ್ರಕಲಾಪ್ರಕಾರಗಳಲ್ಲಿ ಒಂದು. ಗಾಜಿನ ಚಿತ್ರಕಲೆ ಇಂದು ಅತ್ಯಾಧುನಿಕವಾಗಿ ಇಂದು ಶ್ರೀಮಂತರ ಮನೆ, ಅರಮನೆ ಮುಂತಾದವುಗಳಿಗೆ ತುಂಬಾ ವಿನ್ಯಾಸಾತ್ಮಕವಾಗಿ ರಚನೆಯಾಗುತ್ತಿವೆ. ಇಂತಹ ಒಂದು ಗಾಜಿನ ಚಿತ್ರಕಲೆಯು ಪಾರಂಪರಿಕವಾಗಿಯೂ ೧೮ನೇ ಶತಮಾನದಿಂದ ರಚನೆಗಳನ್ನು ಕಾಣಬಹುದಾಗಿದೆ. ಇಂತಹ ಒಂದು ವಿಷಯವನ್ನು ಕುರಿತಂತೆ ಗಾಜಿನ ಮೇಲಿನ ಚಿತ್ರಗಳು ಎಂಬ ಶೀರ್ಷಿಕೆಯಡಿಯಲ್ಲಿ ಡಾ. ನಿಂಗಪ್ಪ ಎಂ. ಅಂಗಿಡಿಯವರು ಡಾ. ಎಸ್.ಸಿ. ಪಾಟೀಲವರ ಮಾರ್ಗದರ್ಶನದಲ್ಲಿ ಅಧ್ಯಯನ ಮಾಡಿದ್ದಾರೆ.[೪೪] ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವಿಧಾನ ಹಾಗೂ ವ್ಯಾಪ್ತಿಯನ್ನು ಕುರಿತು ಹೇಳಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಗಾಜಿನ ಮೇಲಿನ ಚಿತ್ರಕಲೆಯ ನೆಲೆ ಹಿನ್ನೆಲೆಯನ್ನು ಕುರಿತು ಚರ್ಚಿಸಲಾಗಿದೆ. ಈ ಅಧ್ಯಾಯದಲ್ಲಿ ಚಿತ್ರಕಲೆಯ ಬೆಳವಣಿಗೆಯ ಹಿನ್ನೆಲೆಯ ಮೊದಲು ಗಾಜಿನ ಉಗಮ, ತಯಾರಿಕೆ ಹಾಗೂ ಅದರ ಹುಟ್ಟು, ಬೆಳವಣಿಗೆಯನ್ನು ಮೊದಲು ಸಂಕ್ಷಿಪ್ತವಾಗಿ ಪರಿಚಯಿಸಿ, ನಂತರ ಗಾಜಿನ ಮೇಲೆ ರೂಪಗೊಂಡ ಚಿತ್ರಕಲೆಯ ಬೆಳವಣಿಗೆಯನ್ನು ವಿವೇಚಿಸಲಾಗಿದೆ.

ಗಾಜಿನ ತಯಾರಿಕೆಯನ್ನು ಆಕಸ್ಮಿಕವಾಗಿ ಮಾನವ ಕಂಡುಕೊಂಡ ರೀತಿ, ಅದರ ಪ್ರಾಚೀನ ರೂಪ, ಭಾರತದಲ್ಲಿ ರಾಮಾಯಣ ಮಹಾಭಾರತಗಳ ಕಾಲದಲ್ಲಿ ಬಳಕೆಯಲ್ಲಿದ್ದ ಗಾಜಿನ ಚಿತ್ರಕಲೆಯ ವಿನ್ಯಾಸ, ಮೌರ್ಯರು, ಶಾತವಾಹನರು, ಗುಪ್ತರು, ಪಲ್ಲವರು, ಚೋಳರು ಹೀಗೆ

---

೪೪. ಡಾ. ನಿಂಗಪ್ಪ ಎಂ. ಅಂಗಡಿ : ಕರ್ನಾಟಕ ಗಾಜಿನ ಮೇಲಿನ ಚಿತ್ರಗಳು : ಒಂದು ಅಧ್ಯಯನ, ಅ.ಪ್ರ. ಪಿಹೆಚ್.ಡಿ.ಮ.ಪ್ರ., ಕನ್ನಡ ವಿ.ವಿ. ಹಂಪಿ. ೨೦೧೦

ವಿವಿಧ ಅರಸು ಮನೆತನಗಳ ಕಾಲದ ಗಾಜಿನ ಕಲಾತ್ಮಕ ವಿನ್ಯಾಸಗಳ ಬಗ್ಗೆ ಸಾಂಕೇತಿಕವಾಗಿ ಹೇಳಲಾಗಿದೆ. ಮತ್ತು ಕರ್ನಾಟಕ ಪ್ರದೇಶಕ್ಕೆ ಪಾಶ್ಚಾತ್ಯರು ಬಂದು ನೆಲೆನಿಂತ ಮೇಲೆ ಗಾಜಿನ ಚಿತ್ರಕಲೆಗೆ ದೊರಕಿದ ಮಹತ್ವ, ವೈವಿಧ್ಯ ಇವುಗಳೊಂದಿಗೆ ಗಾಜಿನ ಚಿತ್ರಕಲೆಯ ಅಗಾಧ ಬೆಳವಣಿಗೆಯ ಇತಿಹಾಸವಾಗಿ, ಸಾಮಾಜಿಕವಾಗಿ, ವ್ಯಾವಹಾರಿಕವಾಗಿ ಗಾಜಿನ ಚಿತ್ರಕಲೆಯು ಹೇಗೆ ಪರಿಣಾಮವನ್ನುಂಟು ಮಾಡುತ್ತಾ ಬೆಳೆಯಿತು ಎಂಬಂತಹ ಗಮನಾರ್ಹ ಅಂಶಗಳನ್ನು ವಿಶ್ಲೇಷಿಸಿರುವುದು ಈ ಅಧ್ಯಯನದ ಮೌಲಿಕತೆಯಾಗಿದೆ.

ಮೂರನೆಯ ಅಧ್ಯಾಯದಲ್ಲಿ ಗಾಜಿನ ಚಿತ್ರಕಲೆಯ ಪರಿಕರಗಳು ಮತ್ತು ರಚನಾ ವಿಧಾನಗಳನ್ನು ಪ್ರತ್ಯೇಕವಾಗಿ ವಿಂಗಡಿಸಿಕೊಂಡು ವಿವೇಚಿಸಲಾಗಿದೆ. ಮೊದಲಿಗೆ ಗಾಜಿನ ತಯಾರಿಕೆ, ಅದರಲ್ಲಿ ಬಳಕೆಗೊಳ್ಳುವ ಪರಿಕರಗಳು ಹಾಗೂ ತಯಾರಿಕೆಯ ವಿವಿಧ ಹಂತಗಳನ್ನು ಹೇಳಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಕರ್ನಾಟಕದ ಗಾಜಿನ ಮೇಲಿನ ಚಿತ್ರಗಳನ್ನು ವಿಷಯಾನುಸಾರ ವಿಂಗಡಿಸಿಕೊಂಡು ವಿಶ್ಲೇಷಣೆ ಮಾಡಲಾಗಿದೆ. ಧಾರ್ಮಿಕ ಚಿತ್ರಗಳು, ಧಾರ್ಮಿಕೇತರ ಚಿತ್ರಗಳು ಎಂದು ಎರಡು ವಿಭಾಗ ಮಾಡಿಕೊಂಡು ಮತ್ತೆ ಪ್ರತಿಯೊಂದು ವಿಭಾಗಗಳಲ್ಲಿ ಹಲವಾರು ಬಗೆಯ ಉಪ ವಿಭಾಗಗಳನ್ನು ಮಾಡಿಕೊಂಡು ವಿವೇಚಿಸಲಾಗಿದೆ.

ಧಾರ್ಮಿಕ ಚಿತ್ರಗಳಲ್ಲಿ ಪ್ರಮುಖವಾಗಿ ಹಿಂದೂ, ಜೈನ, ಇಸ್ಲಾಂ, ಕ್ರೈಸ್ತಧರ್ಮಕ್ಕೆ ಸಂಬಂಧಿಸಿದ ಚಿತ್ರಗಳೆಂದು ವಿಂಗಡಿಸಲಾಗಿದ್ದು, ಮತ್ತೆ ಪ್ರತಿ ವಿಭಾಗದಲ್ಲಿ ಉಪವಿಭಾಗಗಳನ್ನಾಗಿ ರೂಪಿಸಲಾಗಿದೆ. ಹಿಂದೂ ಧಾರ್ಮಿಕ ಚಿತ್ರಗಳಲ್ಲಿ ಶೈವ, ವೈಷ್ಣವ, ಶಾಕ್ತ ಹಾಗೂ ಇತರೆ ದೇವತೆಗಳ ಚಿತ್ರಗಳೆಂದು ಪ್ರತ್ಯೇಕವಾಗಿ ಚರ್ಚಿಸಲಾಗಿದೆ. ಧಾರ್ಮಿಕೇತರ ಚಿತ್ರಗಳಲ್ಲಿ ಸಾಮಾಜಿಕ, ಐತಿಹಾಸಿಕ, ಅಲಂಕಾರಿಕ, ಪ್ರಾಕೃತಿಕ ಚಿತ್ರಗಳೆಂದು ವಿಂಗಡಿಸಲಾಗಿದೆ. ಪ್ರಾಕೃತಿಕ ಚಿತ್ರಗಳಲ್ಲಿ ಗಿಡ, ಮರ, ಗುಡ್ಡ, ಬೆಟ್ಟ, ನದಿ, ತೊರೆ, ಹಳ್ಳ, ಕೊಳ್ಳ, ಪ್ರಾಣಿಗಳು, ಪಕ್ಷಿಗಳು, ಹೂ ಬಳ್ಳಿಗಳ ಚಿತ್ರಗಳನ್ನು ವಿವೇಚಿಸಲಾಗಿದ್ದರೆ, ಅಲಂಕಾರಿಕ ಚಿತ್ರಗಳಲ್ಲಿ ವಿವಿಧ ಬಗೆಯ ನಕ್ಷಾ ವಿನ್ಯಾಸದ ಚಿತ್ರಗಳನ್ನು ಕುರಿತು ಹೇಳಲಾಗಿದೆ. ನೈಜವಾದ ಹೂಬಳ್ಳಿಯ ನಕ್ಷೆಗಳು, ಹೂಬಳ್ಳಿಯ ಅಲಂಕಾರಿಕ ರೂಪದ ನಕ್ಷೆಗಳು, ಜಾಮಿತಿಕ ವಿನ್ಯಾಸದ ನಕ್ಷೆಗಳು, ಕುರಾನಿನ ಬರಹದ ನಕ್ಷೆಗಳೆಂಬುದಾಗಿ ಪ್ರತ್ಯೇಕ ಭಾಗಗಳಲ್ಲಿ ಚರ್ಚಿಸಲಾಗಿದೆ.

ಪ್ರಸ್ತುತ ಪ್ರಬಂಧದ ಐದನೆಯ ಅಧ್ಯಾಯದಲ್ಲಿ ಕರ್ನಾಟಕದ ಗಾಜಿನ ಚಿತ್ರಕಲೆಯ ಶೈಲಿ, ಪ್ರಭಾವ, ಪ್ರೇರಣೆ ಮತ್ತು ತಂತ್ರಗಾರಿಕೆಗಳ ಬಗ್ಗೆ ಚರ್ಚಿಸಲಾಗಿದೆ. ಆರನೆಯ ಅಧ್ಯಾಯದಲ್ಲಿ ಗಾಜಿನ ಮೇಲಿನ ಚಿತ್ರಕಲೆಯ ಪೋಷಕರು ಹಾಗೂ ಪ್ರಸ್ತುತ ಸಂದರ್ಭದಲ್ಲಿ ಚಿತ್ರಗಳ ಸ್ಥಿತಿಗತಿಗಳನ್ನು ಚರ್ಚಿಸಲಾಗಿದೆ. ಗಾಜಿನ ಚಿತ್ರಗಳನ್ನು ಸಂಗ್ರಹಿಸಿರುವ ವ್ಯಕ್ತಿಗಳು, ಸಂಘಸಂಸ್ಥೆಗಳು, ಶಾಲಾ ಕಾಲೇಜುಗಳು, ವಿಶ್ವವಿದ್ಯಾಲಯಗಳು, ಮಠಮಾನ್ಯಗಳು, ದೇವಾಲಯಗಳು, ಚರ್ಚ್‌ಗಳು, ಮಸೀದಿಗಳು, ಸಾರ್ವಜನಿಕ ಕಟ್ಟಡಗಳು, ವಸ್ತುಸಂಗ್ರಹಾಲಯಗಳ ಮಾಲಿಕರಿಗೆ ಅವುಗಳ ಮಹತ್ವ ತಿಳಿಸಿಕೊಟ್ಟು, ಅವುಗಳನ್ನು ಮುಂದಿನ ಪೀಳಿಗೆಗೆ ಉಳಿಸಿಕೊಡುವ ಅಂಶಗಳನ್ನು ಕುರಿತು

ವಿವೇಚಿಸಲಾಗಿದೆ. ಏಳನೆಯ ಅಧ್ಯಾಯ ಸಮಾರೋಪವಾಗಿದ್ದು, ಒಟ್ಟು ಅಧ್ಯಯನದ ಫಲಿತಗಳನ್ನು ಸಮೀಕ್ಷಿಸಲಾಗಿದೆ.

೧೨. ಕರ್ನಾಟಕದ ಗಂಜೀಫಾ ಚಿತ್ರಕಲೆ

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಗಂಜೀಫಾ ಆಟದ ಎಲೆಗಳ ಪ್ರಾಚೀನತೆ ಕುರಿತು ಸಾಕಷ್ಟು ಅಧ್ಯಯನ ನಡೆದಿದೆ. ಯುರೋಪಿನಲ್ಲಿ ೬೦೦೦ ವರ್ಷಗಳ ಇತಿಹಾಸ ಈ ಗಂಜೀಫಾ ಎಲೆಗಳ ಆಟಕ್ಕೆ ಇದೆ. ಇಂತಹ ಗಂಜೀಫಾ ಚಿತ್ರಕಲೆಯನ್ನು ಡಾ. ಶಂಕ್ರಪ್ಪ ಎಂ. ಕುಂದಗೋಳ ಅವರು ಡಾ. ಎಸ್.ಸಿ. ಪಾಟೀಲರ ಮಾರ್ಗದರ್ಶನದಲ್ಲಿ ಅಧ್ಯಯನ ಮಾಡಿದ್ದಾರೆ.[೪೫] ಪ್ರಸ್ತುತ ಪ್ರಬಂಧದಲ್ಲಿ ಒಂಭತ್ತು ಅಧ್ಯಾಯದಲ್ಲಿ ವಿಷಯ ನಿರೂಪಣೆಗೊಂಡು ವಿಶ್ಲೇಷಣೆಗೊಳಪಡಿಸಲಾಗಿದೆ. ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವಿಧಾನ ಹಾಗೂ ವ್ಯಾಪ್ತಿಯನ್ನು ಕುರಿತು ಹೇಳಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಗಂಜೀಫಾ ಚಿತ್ರಕಲೆ ಬೆಳೆದು ಬಂದ ಹಿನ್ನೆಲೆಯನ್ನು ಮೂರು ರೀತಿಯಲ್ಲಿ ಅಧ್ಯಯನ ಅನುಕೂಲತೆಗಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ. ೧. ಪಾಶ್ಚಿಮಾತ್ಯ ದೇಶಗಳಲ್ಲಿ ಗಂಜೀಫಾ ಚಿತ್ರಕಲೆಗಳ ಹುಟ್ಟು-ಬೆಳವಣಿಗೆ, ೨. ಭಾರತ ದೇಶದಲ್ಲಿ, ೩. ಕರ್ನಾಟಕದಲ್ಲಿ ಗಂಜೀಫಾ ಚಿತ್ರಕಲೆಗಳ ಹುಟ್ಟು-ಬೆಳವಣಿಗೆಯ ಐತಿಹಾಸಿಕ ಹಿನ್ನೆಲೆಯನ್ನು ಸ್ಥೂಲವಾಗಿ ವಿವೇಚನೆ ಮಾಡಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಗಂಜೀಫಾ ಚಿತ್ರಕಲೆಯ ಪರಿಕರಗಳು ಮತ್ತು ರಚನಾ ವಿಧಾನಗಳನ್ನು ಪ್ರತ್ಯೇಕವಾಗಿ ವಿವೇಚಿಸಲಾಗಿದೆ. ಕಾಗದಗಳು, ಇತರ ಪರಿಕರಗಳ ಕುರಿತು ಹೇಳಲಾಗಿದೆ. ಬಣ್ಣಗಳಲ್ಲಿ ಪ್ರಾಕೃತಿಕ ಬಣ್ಣಗಳು, ಅದರಲ್ಲಿ ಲೋಹಮೂಲ, ಖನಿಜಮೂಲ, ಸಸ್ಯಮೂಲ ಬಣ್ಣಗಳು, ಅದೇ ಪ್ರಕಾರದ ಅಂಟುದ್ರಾವಕಗಳು, ಟೆಂಪರಾ ಪದಾರ್ಥಗಳು, ರಾಸಾಯನಿಕ ಬಣ್ಣಗಳು ಹೀಗೆ ವಿವಿಧ ಪರಿಕರಗಳನ್ನು ಕುರಿತು ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಗಂಜೀಫಾ ಆಟದ ನೀತಿ ನಿಯಮಗಳ ಕುರಿತು ಚರ್ಚಿಸಲಾಗಿದೆ. ಮೂಲತಃ ಮನೋರಂಜನೆಯ ಆಟವಾದ ಈ ಗಂಜೀಫಾ ಆಟ ಕಾಲಕ್ರಮೇಣ ಹೊಸ ಹೊಸ ಆಟಗಳಿಗೆ ಪ್ರೇರಣೆಯನ್ನು ಒದಗಿಸಿರಬೇಕು. ಗಂಜೀಫಾ ಆಟವನ್ನು ಹಗಲು ಮತ್ತು ರಾತ್ರಿ ವೇಳೆಯ ಆಟವೆಂದು ವಿಂಗಡಿಸಿಕೊಂಡು ಈ ಆಟವನ್ನು ಆಡುತ್ತಿದ್ದರು. ದಶಾವತಾರ ಗಂಜೀಫಾ, ನವಗ್ರಹ ಗಂಜೀಫಾ, ಸರ್ವ ಮಂಗಳ ಗಂಜೀಫಾ, ಚಾಮುಂಡೇಶ್ವರಿ ಗಂಜೀಫಾ, ರಾಮಾಯಣ ಗಂಜೀಫಾ ಮೊದಲಾದ ಹದಿನೆಂಟು ಪ್ರಕಾರದ ಗಂಜೀಫಾ ಆಟಗಳಿವೆ. ಅವುಗಳಲ್ಲಿ ಹದಿನಾಲ್ಕು ಪ್ರಕಾರದ ಆಟಗಳನ್ನು ಇಲ್ಲಿ ವಿವರಿಸಲಾಗಿದೆ. ಒಂದೊಂದು ಆಟಕ್ಕೆ ಒಂದೊಂದು ರೀತಿಯ ನೀತಿ-ನಿಯಮಗಳಿವೆ. ಇವುಗಳ ಆಟದ ವಿಧಿ-ವಿಧಾನಗಳನ್ನು ಹಲವಾರು ಮೂಲಗಳಿಂದ

೪೫. ಡಾ. ಶಂಕ್ರಪ್ಪ ಎಂ. ಕುಂದಗೋಳ : ಕರ್ನಾಟಕ ಗಂಜೀಫಾ ಚಿತ್ರಕಲೆ, ಅ.ಪ್ರ. ಪಿಹೆಚ್.ಡಿ.ಮ.ಪ್ರ., ಕನ್ನಡ ವಿ.ವಿ.ಹಂಪಿ. ೨೦೧೧

ಮಾಹಿತಿಯನ್ನು ಸಂಗ್ರಹಿಸಿ, ಅವುಗಳ ಆಟದ ಸ್ವರೂಪವನ್ನು ತಿಳಿಸಿಕೊಡುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಐದನೆಯ ಅಧ್ಯಾಯದಲ್ಲಿ ಗಂಜೀಫಾ ಚಿತ್ರಕಲೆಯ ವಸ್ತುವಿಷಯಗಳನ್ನು ವಿಷಯಾನುಸಾರವಾಗಿ ವಿಂಗಡಿಸಿಕೊಂಡು ವಿಶ್ಲೇಷಿಸಲಾಗಿದೆ. ಧಾರ್ಮಿಕ ಚಿತ್ರಗಳು ಧಾರ್ಮಿಕೇತರ ಚಿತ್ರಗಳೆಂದು ಎರಡು ವಿಭಾಗ ಮಾಡಿಕೊಂಡು ಮತ್ತೆ ಪ್ರತಿಯೊಂದು ವಿಭಾಗಗಳಲ್ಲಿ ಹಲವಾರು ಚಿತ್ರಗಳು, ನವಗ್ರಹ ಚಿತ್ರಗಳು, ರಾಶಿ ಚಿತ್ರಗಳೆಂದು ವಿಂಗಡಿಸಿ ಚರ್ಚಿಸಲಾಗಿದ್ದು, ಧಾರ್ಮಿಕ ಚಿತ್ರಗಳಲ್ಲಿ ಚಾಮುಂಡಿ, ಶಿವ, ವೈಷ್ಣವ, ವೀರಭದ್ರ, ವಿಷ್ಣು, ಬ್ರಹ್ಮ ಮುಂತಾದ ದೇವತೆಗಳ ಚಿತ್ರಗಳನ್ನು ಪ್ರತ್ಯೇಕವಾಗಿ ಚರ್ಚಿಸಲಾಗಿದೆ.

ಧಾರ್ಮಿಕೇತರ ಚಿತ್ರಗಳಲ್ಲಿ ಸಂಕೀರ್ಣ ಚಿತ್ರಗಳು, ಸಾಂಕೇತಿಕ ಚಿಹ್ನೆಗಳ ಚಿತ್ರಗಳು, ಪ್ರಾಣಿ ಪಕ್ಷಿಗಳು, ಹೂಬಳ್ಳಿಗಳ ಚಿತ್ರಗಳನ್ನು ವಿವೇಚಿಸಲಾಗಿದ್ದರೆ ಅಲಂಕಾರಿಕ ಚಿತ್ರಗಳಲ್ಲಿ ವಿವಿಧ ಬಗೆಯ ನಕ್ಷಾವಿನ್ಯಾಸದ ಚಿತ್ರಗಳನ್ನು ಕುರಿತು ಹೇಳಲಾಗಿದೆ. ವೈಷ್ಣವ ಧರ್ಮದ ಚಿತ್ರದಲ್ಲಿ ವಿಷ್ಣುವಿಗೆ ಸಂಬಂಧಿಸಿದ ಚಿತ್ರಗಳಾದ ದಶಾವತಾರ ಚಿತ್ರಗಳು, ಕಥೆಗಳು, ವಿಷ್ಣುವಿನ ವಿವಿಧ ರೂಪ ಹಾಗೂ ಲೀಲೆಗಳ ಕುರಿತು ವಿವೇಚಿಸಲಾಗಿದೆ. ಆರನೆಯ ಅಧ್ಯಾಯದಲ್ಲಿ ಕರ್ನಾಟಕ ಗಂಜೀಫಾ ಚಿತ್ರಕಲೆಯ ಶೈಲಿ, ಪ್ರಭಾವ, ಪ್ರೇರಣೆ ಮತ್ತು ತಂತ್ರಗಾರಿಕೆಗಳ ಕುರಿತು ಚರ್ಚಿಸಲಾಗಿದೆ. ಏಳನೆಯ ಅಧ್ಯಾಯದಲ್ಲಿ ಕರ್ನಾಟಕೇತರ ಪ್ರದೇಶದಲ್ಲಿ ಗಂಜೀಫಾಚಿತ್ರಕಲೆ ಹೇಗೆ ಎಂಬುದನ್ನು ವಿವರಿಸಲಾಗಿದೆ. ಯಾವ ಪ್ರದೇಶದ ಕಲಾವಿದರ ವೈಯಕ್ತಿಕ ಕಲಾಶೈಲಿಯು ಕೆಲವು ಸಲ ಈ ಗಂಜೀಫಾ ಚಿತ್ರಕಲೆಯ ಮೇಲೆ ಪ್ರಭಾವ ಬೀರಿದೆ, ಕರ್ನಾಟಕದ ಗಂಜೀಫಾ ಚಿತ್ರಕಲೆಯನ್ನು ಕರ್ನಾಟಕೇತರ ಗಂಜೀಫಾ ಚಿತ್ರಗಳೊಂದಿಗೆ ತೌಲನಿಕವಾಗಿ ಚರ್ಚಿಸಲಾಗಿದೆ.

ಎಂಟನೆಯ ಅಧ್ಯಾಯದಲ್ಲಿ ಇಂದು ಹೆಚ್ಚು ಕಡಿಮೆ ಈ ಆಟ ಚಿತ್ರಕಲೆಯಾಗಿ ಕೇವಲ ಪಳೆಯುಳಿಕೆಯಾಗಿ ಮಾತ್ರ ಈ ಕಲೆ ಉಳಿದು ಬಂದಿದೆ. ದೇಶ–ವಿದೇಶಗಳ ಕಲಾಸಂಗ್ರಹಕಾರರ ಸಂಗ್ರಹಗಳಲ್ಲಿ ಈ ಆಟಗಳ ಕಾರ್ಡುಗಳ ಸಂಗ್ರಹ ನೋಡಲು ಸಿಗುತ್ತವೆ. ಕಲೆಯ ಪೋಷಕರನ್ನು ಕುರಿತು ಸ್ಥೂಲವಾಗಿ ವಿವರಿಸಲಾಗಿದೆ ಮತ್ತು ಗಂಜೀಫಾ ಚಿತ್ರಕಲೆಯ ಸ್ಥಿತಿಗತಿಯನ್ನು ಕುರಿತು ಸಹ ಇಲ್ಲಿ ವಿವೇಚನೆಯನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ. ಒಂಭತ್ತನೆಯ ಅಧ್ಯಾಯದಲ್ಲಿ ಪ್ರಸ್ತುತ ಮಹಾಪ್ರಬಂಧದ ಎಲ್ಲ ಅಧ್ಯಾಯಗಳ ಮೂಲಕ ಕಂಡುಕೊಂಡ ಪ್ರಮುಖವಾದ ಅಧ್ಯಯನದ ಫಲಿತಗಳನ್ನು ಸಮೀಕ್ಷಿಸಲಾಗಿದೆ.

ಬ. ವ್ಯಕ್ತಿ ಅಧ್ಯಯನಗಳು

ವ್ಯಕ್ತಿ ಅಧ್ಯಯನಗಳು ಕ್ಷೇತ್ರೀಯ ಅಧ್ಯಯನಗಳ ಹಾಗೆ ವೈವಿಧ್ಯಗಳನ್ನು ಹೊಂದಿಲ್ಲ. ನಿರ್ದಿಷ್ಟ ಮಾಹಿತಿಯನ್ನು ನೀಡುವ ಈ ಅಧ್ಯಯನಗಳಲ್ಲಿ ಕಲಾವಿದರ ಜನನ, ಬಾಲ್ಯ ತಂದೆ, ತಾಯಿ, ಸಾಂಸ್ಕೃತಿಕ ಪರಿಸರ, ಕಲಾಶಿಕ್ಷಣ, ಕಲಾಬದುಕು, ಕಲಾಶೈಲಿ, ಪ್ರಭಾವ, ಪ್ರೇರಣೆಗಳಂತಹ

[illegible]

[illegible]

[illegible]

ಸಂಗತಿಗಳು ತಿಳಿದುಬರುತ್ತವೆ. ಅಧ್ಯಯನ ವಿಧಾನಗಳಲ್ಲಿಯೂ ಏಕರೂಪತೆಯ ವಿಧಾನ ಅನುಸರಿಸಿರುವ ವ್ಯಕ್ತಿ ಅಧ್ಯಯನ ಪ್ರಬಂಧಗಳು ಈ ಕೆಳಗಿನಂತಿವೆ.

೧. ಕಲಾವಿದ ವಿ. ಬಿ. ಹಿರೇಗೌಡರ್ : ಬದುಕು ಮತ್ತು ಕಲಾಕೃತಿಗಳು

ಹಿರೇಗೌಡರು ತಮ್ಮ ಬದುಕಿನುದ್ದಕ್ಕೂ ಸಾವಿರಾರು ಕಲಾಕೃತಿಗಳನ್ನು ರಚಿಸಿದ್ದಾರೆ. ಈ ಕಲಾವಿದರನ್ನು ಕುರಿತಂತೆ ಡಾ. ರವೀಂದ್ರ ಎಸ್. ಕಮ್ಮಾರ ಅವರು ಕಲಾವಿದ ವಿ.ಬಿ. ಹಿರೇಗೌಡರ್: ಬದುಕು ಮತ್ತು ಕಲಾಕೃತಿಗಳು ಎಂಬ ಶೀರ್ಷಿಕೆಯನ್ನು ಕುರಿತಂತೆ ಡಾ. ಎಸ್. ಸಿ. ಪಾಟೀಲರ ಮಾರ್ಗದರ್ಶನದಲ್ಲಿ ಪಿಹೆಚ್.ಡಿ ಅಧ್ಯಯನವನ್ನು ಮಾಡಿದ್ದಾರೆ.[೪೬] ಪ್ರಸ್ತುತ ಅಧ್ಯಯನವನ್ನು ಏಳು ಅಧ್ಯಾಯಗಳನ್ನಾಗಿ ವಿಂಗಡಿಸಿದ್ದಾರೆ.

ಒಂದನೆಯ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನದ ಉದ್ದೇಶವನ್ನು ವಿವರಿಸುವುದರೊಂದಿಗೆ ಅಧ್ಯಯನದ ಸ್ವರೂಪ, ವೈಧಾನಿಕತೆ ಮತ್ತು ವ್ಯಾಪ್ತಿಯ ಕುರಿತು ಹೇಳಲಾಗಿದೆ. ಎರಡನೆಯ ಅಧ್ಯಾಯದಲ್ಲಿ ವಿ.ಬಿ. ಹಿರೇಗೌಡರ ಜನ್ಮಸ್ಥಳದ ಸಾಂಸ್ಕೃತಿಕ ಪರಿಸರ, ಬಾಲ್ಯ ಜೀವನ, ಪ್ರಾಥಮಿಕ, ಪ್ರೌಢ ಶಿಕ್ಷಣ ಹಂತಗಳನ್ನು ಮತ್ತು ಇದೇ ಸಂದರ್ಭದಲ್ಲಿ ಕಲೆಯ ಕಡೆಗೆ ಹರಿದು ಮುಂದುವರೆದ ಮನಸ್ಸು, ಪ್ರೇರಣೆ ನೀಡಿದ ಗುರುಗಳು ಇತ್ಯಾದಿ ವಿಷಯಗಳನ್ನು ಪ್ರಸ್ತಾಪಿಸಲಾಗಿದೆ. ವಿ.ಬಿ. ಹಿರೇಗೌಡರರವರು ತಮ್ಮ ಕಲಾಶಿಕ್ಷಣವನ್ನು ಧಾರವಾಡದಲ್ಲಿ ಕಲಾಗುರು ಡಿ.ವಿ. ಹಾಲಭಾವಿಯವರ ಕಲಾಶಾಲೆಯಲ್ಲಿ ಪೂರೈಕೆ ಮತ್ತು ಅಂದಿನ ಸಂದರ್ಭದ ದಿನಗಳನ್ನು ಮೆಲುಕು ಹಾಕುವ ಮತ್ತು ಅಂದಿನ ಶೈಕ್ಷಣಿಕ ದಿನಗಳಲ್ಲಿ ಡಿ.ವಿ. ಹಾಲಭಾವಿಯವರು, ಡಾ. ಎಂ. ವಿ. ಮಿಣಜಿಗಿಯವರು ಹಾಗೂ ಬಸವರಾಜ ಹಳೆಜೋಳದ ಅವರು ಹಿರೇಗೌಡರ ಅವರಿಗೆ ಕಲಾಶಿಕ್ಷಣ ನೀಡಿದ ಕುರಿತು ಇಲ್ಲಿ ಸಮಗ್ರ ಮಾಹಿತಿಯನ್ನು ದಾಖಲಿಸಲಾಗಿದೆ.

ಇದೇ ಅಧ್ಯಾಯದ ಇನ್ನೊಂದು ಭಾಗವಾಗಿ ಹಿರೇಗೌಡರ ದಾವಣಗೆರೆ ಕಲಾಶಾಲೆಯ ಉಪನ್ಯಾಸಕರಾಗಿ ನೇಮಕಗೊಂಡು ಎಂಟು ವರ್ಷಗಳ ಕಾಲ ವಿದ್ಯಾರ್ಥಿಗಳೊಂದಿಗೆ ಬೆರೆತ ದಿನಗಳನ್ನು ಮತ್ತು ನಂತರದ ದಿನಗಳಲ್ಲಿ ಕಲಾಶಾಲೆಯ ಪ್ರಾಚಾರ್ಯರಾಗಿ ಆಡಳಿತದ ಚುಕ್ಕಾಣಿ ಹಿಡಿದ ಅವರು ಕೈಗೊಂಡ ಕಾರ್ಯಗಳನ್ನು ಇಲ್ಲಿ ದಾಖಲಿಸಲಾಗಿದೆ. ಮತ್ತು ಈ ಸಂದರ್ಭದಲ್ಲಿ ಸುಮಾರು ೧೦,೦೦೦ ರೇಖಾಚಿತ್ರಗಳು, ೨,೦೦೦ ಜಲವರ್ಣಚಿತ್ರಗಳು ಹಾಗೂ ೧,೦೦೦ ತೈಲವರ್ಣ ಮತ್ತು ಮಿಶ್ರಮಾಧ್ಯಮದ ಚಿತ್ರಗಳನ್ನು ರಚಿಸಿದ್ದು, ಇದರಲ್ಲಿ ಆಯ್ದ ಕಲಾಕೃತಿಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಹಿರೇಗೌಡರ ಕಲಾಕೊಡುಗೆಯನ್ನು ಹಲವು ವರ್ಣಮಾಧ್ಯಮಗಳಲ್ಲಿ ರಚಿಸಿದರೆ, ಮಾಧ್ಯಮವನ್ನು ವಿಷಯವಾರು ವರ್ಗೀಕರಿಸಿಕೊಂಡು ಸಮಗ್ರವಾಗಿ ತೌಲನಿಕ ನೆಲೆಯಿಂದ ಚರ್ಚಿಸಲಾಗಿದೆ. ನಾಲ್ಕನೆಯ

೪೬. ಡಾ. ರವೀಂದ್ರ ಎಸ್. ಕಮ್ಮಾರ : ಕಲಾವಿದ ವಿ.ಬಿ. ಹಿರೇಗೌಡರ್ – ಬದುಕು ಮತ್ತು ಕಲಾಕೃತಿ, ಅ.ಪ್ರ. ಪಿಹೆಚ್.ಡಿ.ಮ.ಪ್ರ., ಕನ್ನಡ ವಿ.ವಿ. ಹಂಪಿ. ೨೦೦೮

[illegible]

ಅಧ್ಯಾಯದಲ್ಲಿ ಹಿರೇಗೌಡರ ಭಾವಚಿತ್ರ, ಪ್ರಕೃತಿ ಚಿತ್ರ, ಸಂಯೋಜನಾ ಚಿತ್ರ, ಜಲವರ್ಣಚಿತ್ರ, ತೈಲ ವರ್ಣಚಿತ್ರ, ಪೇಸ್ಟಾಲ್, ಡ್ರೈಪೇಸ್ಟಲ್, ಅಕ್ರಲಿಕ್, ಪೋಸ್ಟರ್ ಇನ್ನೂ ಮುಂತಾದ ಮಾಧ್ಯಮವನ್ನು ಎಂದಿನಂತೆ ಪ್ರಾಕೃತಿಕ, ಸಾಮಾಜಿಕ, ಧಾರ್ಮಿಕ ಮುಂತಾದ ನೆಲೆಗಳಲ್ಲಿ ಚಿಂತನೆಗಳು ಮೂರ್ತರೂಪ ತಾಳಿವೆ. ಕೃತಿಗಳಲ್ಲಿ ತಂತ್ರಗಾರಿಕೆ, ಸಾಂಕೇತಿಕ ಛಾಯೆಗಳು ಹೇಗೆ ಮೂಡಿವೆ ಎಂಬುದನ್ನು ಪ್ರಸ್ತುತ ಅಧ್ಯಾಯದಲ್ಲಿ ಕಂಡುಕೊಳ್ಳಲಾಗಿದೆ.

ಐದನೆಯ ಅಧ್ಯಾಯದಲ್ಲಿ ಶಿಲ್ಪ ಮತ್ತು ಭಿತ್ತಿಶಿಲ್ಪಗಳನ್ನು ಸಾಂದರ್ಭಿಕವಾಗಿ ಉದ್ಯಮಗಳ ಮತ್ತು ಸಾರ್ವಜನಿಕ ಕಟ್ಟಡಗಳಲ್ಲಿ ರಚಿಸಿರುವುದನ್ನು ಕಾಣಬಹುದು. ಪ್ಲಾಸ್ಟರ್ ಆಫ್ ಪ್ಯಾರಿಸ್, ಸಿಮೆಂಟ್ ಮುಂತಾದವು ಈ ಅಧ್ಯಾಯದಲ್ಲಿ ಚರ್ಚಿತಗೊಂಡಿವೆ. ಆರನೆಯ ಅಧ್ಯಾಯದಲ್ಲಿ ಹಿರೇಗೌಡರ ಕಲಾಕೃತಿಗಳಲ್ಲಿ ಅಡಗಿರುವ ಪ್ರಭಾವ, ಪ್ರೇರಣೆ, ಶೈಲಿ ಮತ್ತು ತಂತ್ರಗಾರಿಕೆಯ ಕುರಿತಾಗಿದ್ದು, ಇವರು ಒಂದೇ ಶೈಲಿಯಲ್ಲಿ ಚಿತ್ರರಚನೆಗೆ ಮಹತ್ವ ಕೊಡದೇ ಕಾಲಕಾಲಕ್ಕೆ ಅವರ ಕೃತಿಗಳಲ್ಲಿ ಶೈಲಿಯು ಬದಲಾಗುತ್ತಾ ಹೋಗಿದೆ. ಆದರೂ 'ಇವರದೇ ಕೃತಿ ಇದು' ಎಂದು ಗುರುತಿಸುವ ಅಂಶ ಪರೋಕ್ಷವಾಗಿ ಎದ್ದು ಕಾಣುತ್ತದೆ. ಪ್ರಾಪಂಚಿಕ ಘಟನೆಗಳು ನೈಸರ್ಗಿಕ, ಸಾಮಾಜಿಕ ಘಟನೆಗಳು ಇವರ ಕೃತಿಗಳಿಗೆ ಪ್ರೇರಕವಾಗಿರುವುದರ ಕುರಿತು ಈ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗಿದೆ. ಏಳನೆಯ ಅಧ್ಯಾಯವು ಸಮಾರೋಪವಾಗಿದ್ದು, ಇಲ್ಲಿ ಒಟ್ಟು ಆರು ಅಧ್ಯಾಯಗಳ ಫಲಿತಗಳನ್ನು ವಿವೇಚಿಸಲಾಗಿದೆ.

೨. ವಿಜಯ ಸಿಂಧೂರ ಅವರ ಕಲಾಕೃತಿಗಳ ಒಳನೋಟಗಳು

ಉತ್ತರ ಕರ್ನಾಟಕ ಭಾಗದ ಶ್ರೇಷ್ಠ ಕಲಾವಿದರಲ್ಲಿ ಒಬ್ಬರಾದ ವಿಜಯ ಸಿಂಧೂರ ಅವರ ಜೀವನ ಮತ್ತು ಕಲಾಕೃತಿಗಳನ್ನು ಕುರಿತಂತೆ ಡಾ. ಸುನಿತಾ ಪಾಟೀಲ ಅವರು ಡಾ. ಎಸ್. ಸಿ. ಪಾಟೀಲರ ಮಾರ್ಗದರ್ಶನದಲ್ಲಿ ಪಿಹೆಚ್.ಡಿ ಪದವಿ ಪಡೆದುಕೊಂಡಿದ್ದಾರೆ.[೪೭] ಇದು ಒಟ್ಟು ಆರು ಅಧ್ಯಾಯಗಳನ್ನೊಳಗೊಂಡಿದೆ. ಒಂದನೆಯ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನದ ಉದ್ದೇಶವನ್ನು ವಿವರಿಸುವುದರೊಂದಿಗೆ ಅಧ್ಯಯನ ಸ್ವರೂಪ, ಅಧ್ಯಯನದ ವಿಧಾನವನ್ನು ಕುರಿತು ಹೇಳಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಸಿಂಧೂರರ ಜನ್ಮಸ್ಥಳದ ಸಾಂಸ್ಕೃತಿಕ ಪರಿಸರ, ಬಾಲ್ಯ ಜೀವನ, ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಮತ್ತು ಇವರ ಮುಂದಿನ ಕಲಾಶಿಕ್ಷಣಕ್ಕೆ ಹೇಗೆ ದಾರಿಯಾದವು ಎನ್ನುವುದನ್ನು ವಿವರಿಸಲಾಗಿದೆ. ಹಾಗೂ ಇವರ ಕುಟುಂಬದ ಈಗಿನ ಬದುಕು, ಅಭಿವ್ಯಕ್ತಿಯ ವಸ್ತುವಿಷಯ, ಹವ್ಯಾಸ, ಅವರ ವ್ಯವಸಾಯ ಮುಂತಾದ ವಿವರ ಇಲ್ಲಿ ದಾಖಲಿಸಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಸಿಂಧೂರರ ರೇಖಾಚಿತ್ರಗಳನ್ನು ಅಧ್ಯಯನಕ್ಕೆ

೪೭. ಡಾ. ಸುನಿತಾ ಪಾಟೀಲ್ : ವಿಜಯ ಸಿಂಧೂರ ಅವರ ಕಲಾಕೃತಿಗಳ ಒಳನೋಟಗಳು, ಅ.ಪ್ರ. ಪಿಹೆಚ್.ಡಿ.ಮ.ಪ್ರ. ಕನ್ನಡ ವಿ.ವಿ. ಹಂಪಿ. ೨೦೦೮

ಒಳಪಡಿಸಲಾಗಿದೆ. ಸಿಂಧೂರರು ರಚಿಸಿದ ಅಸಂಖ್ಯಾತ ರೇಖಾಚಿತ್ರಗಳು ಅವರ ಕಲಾಭಿವ್ಯಕ್ತಿಗೆ ಬೆನ್ನೆಲುಬಾಗಿ ನಿಂತಿವೆ. ನಿತ್ಯ ರಚಿಸುವ ರೇಖಾಚಿತ್ರಗಳು ಅನೇಕ ಸಂಯೋಜನೆ ಕಲಾಕೃತಿಗಳ ಹುಟ್ಟಿಗೆ ಕಾರಣವಾಗಿವೆ. ೬೦ರ ದಶಕದಿಂದೀಚೆಗೆ ಸಿಂಧೂರರ ಅನೇಕ ರೇಖಾಚಿತ್ರಗಳನ್ನು ಹಲವು ವರ್ಣಚಿತ್ರಗಳಿಗೆ ರೇಖಾಚಿತ್ರಗಳನ್ನೇ ಮೂಲವಾಗಿಟ್ಟುಕೊಂಡಿದ್ದನ್ನು ಸರಣಿರೂಪದಲ್ಲಿಯೇ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇಲ್ಲಿ ರೇಖಾಚಿತ್ರಗಳನ್ನು ಪೆನ್ ಮತ್ತು ಚಾರ್‌ಕೋಲ್ ಮಾಧ್ಯಮದಲ್ಲಿ ರಚನೆಯನ್ನು ವರ್ಗೀಕರಣ ಮಾಡಿಕೊಂಡು ಸ್ಥೂಲವಾಗಿ ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ರೇಖಾಚಿತ್ರಗಳಂತೆ ಸಾವಿರಾರು ವರ್ಣಚಿತ್ರಗಳನ್ನು ರಚಿಸಿದ್ದು, ಈ ವರ್ಣಚಿತ್ರಗಳ ವಸ್ತುವಿಷಯ, ಪರಿಸರ, ಆಚರಣೆ, ಸಂಸ್ಕೃತಿಯ ದಟ್ಟ ಪ್ರಭಾವ ಅವರ ಕೃತಿಗಳಲ್ಲಿ ಕಾಣುವೆವು. ಅಂತಹ ವರ್ಣಗಳಲ್ಲಿ ಕೆಲವು ಆಯ್ದ ಕಲಾಕೃತಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಐದನೆಯ ಅಧ್ಯಾಯದಲ್ಲಿ ರೇಖಾವಿನ್ಯಾಸ, ವರ್ಣಗಾರಿಕೆಯ ಕಲಾತಂತ್ರ, ಪ್ರಭಾವ, ಶೈಲಿ ಬಗ್ಗೆ ಚರ್ಚಿಸಲಾಗಿದೆ. ಕಲಾಕೃತಿಯೊಂದರ ನಿರ್ಮಾಣದಲ್ಲಿ ಪಾಶ್ಚಾತ್ಯ ಕಲಾವಿದರ ಪ್ರಭಾವಗಳು ಮೂಡಿವೆ. ಆದರೂ ತಮ್ಮದೇಯಾದ ಶೈಲಿಯನ್ನು ತಮ್ಮ ಕಲಾಕೃತಿಯಲ್ಲಿ ಕಂಡುಕೊಂಡಿದ್ದಾರೆ. ಪ್ರಾಪಂಚಿಕ, ಸಾಮಾಜಿಕ ಘಟನೆ ಮತ್ತು ನಿತ್ಯಜೀವನ ಘಟನೆಗಳು ಇವರಿಗೆ ಪ್ರೇರಣೆ ನೀಡಿವೆ ಎಂಬುದನ್ನು ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ. ಆರನೆಯ ಅಧ್ಯಾಯದಲ್ಲಿ ಒಟ್ಟು ಪ್ರಬಂಧದ ಸಮೀಕ್ಷೆಯನ್ನು, ಫಲಿತಗಳನ್ನು ಒಳಪಡಿಸಲಾಗಿದೆ.

೩. ಕಲಾವಿದ ಶಂಕರ ಪಾಟೀಲರ ಜೀವನ ಮತ್ತು ಕಲಾಕೃತಿಗಳು : ಒಂದು ಅಧ್ಯಯನ

ಶಂಕರ ಪಾಟೀಲರು ರಚಿಸುವ ಕಲಾಕೃತಿಗಳಲ್ಲಿ ತಮ್ಮದೇಯಾದ ಕಲಾಶೈಲಿಯನ್ನು ಮತ್ತು ಅವರನ್ನು ಗುರುತಿಸಿಕೊಂಡಿದ್ದಾರೆ. ಈ ಕಲಾವಿದರನ್ನು ಕುರಿತು ಡಾ. ಕಿಶೋರ ಎನ್. ದಾಟನಾಳ ಅವರು ಡಾ. ಎಸ್. ಸಿ. ಪಾಟೀಲ ಅವರ ಮಾರ್ಗದರ್ಶನದಲ್ಲಿ ಪಿಹೆಚ್.ಡಿ. ಅಧ್ಯಯನವನ್ನು ಕೈಗೊಂಡು ೨೦೧೦ರಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ ಪಿಹೆಚ್.ಡಿ. ಪದವಿ ಪಡೆದಿದ್ದಾರೆ.[೪೮] ಪ್ರಸ್ತುತ ಅಧ್ಯಯನವನ್ನು ಎಂಟು ಅಧ್ಯಾಯಗಳಲ್ಲಿ ವಿಂಗಡಿಸಿಕೊಂಡು ಚರ್ಚೆ ಮಾಡಲಾಗಿದೆ. ಮೊದಲನೆಯ ಅಧ್ಯಾಯದಲ್ಲಿ ಉದ್ದೇಶವನ್ನು ವಿವರಿಸುವುದರೊಂದಿಗೆ ಅಧ್ಯಯನದ ಸ್ವರೂಪ, ಅಧ್ಯಯನದ ವೈಧಾನಿಕತೆ ಮತ್ತು ವ್ಯಾಪ್ತಿ ಕುರಿತಾಗಿ ವಿವರಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಕಲಾವಿದ ಶಂಕರ ಪಾಟೀಲರ ಬದುಕಿನ ಸಾಂಸ್ಕೃತಿಕ ಪರಿಸರ, ಪ್ರೋತ್ಸಾಹ, ಕೌಟುಂಬಿಕ ಹಿನ್ನೆಲೆ, ಬಾಲ್ಯದಲ್ಲಿ ಕಳೆದ ದಿನಗಳು, ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಪೂರೈಸಿದ ಇವರು ಗುರುಪ್ರೇರಣೆಯಿಂದ ಕಲಾಭ್ಯಾಸಕ್ಕೆ ಜೆ.ಜೆ. ಸ್ಕೂಲ್ ಆಫ್ ಆರ್ಟ್, ಮುಂಬೈಯಲ್ಲಿ ಶಿಕ್ಷಣ ಮುಗಿಸಿ, ನಂತರ ಹಾಲಭಾವಿ ಸ್ಕೂಲ್ ಆಫ್ ಆರ್ಟ್, ಧಾರವಾಡದಲ್ಲಿ ಉನ್ನತ

೪೭. ಡಾ. ಕಿಶೋರ ಎನ್ ದಾಟನಾಳ: ಕಲಾವಿದ ಶಂಕರ ಪಾಟೀಲರ ಜೀವನ ಮತ್ತು ಕಲಾಕೃತಿಗಳು : ಒಂದು ಅಧ್ಯಯನ, ಅ.ಪ್ರ. ಪಿಹೆಚ್.ಡಿ.ಮ.ಪ್ರ., ಕನ್ನಡ ವಿ.ವಿ. ಹಂಪಿ. ೨೦೦೮

[illegible]

ಅಧ್ಯಯನದ ಸಂದರ್ಭದಲ್ಲಿ ಪ್ರೇರಕಶಕ್ತಿಯಾಗಿ ಬೋಧನೆಗೈದ ಕಲಾಗುರುಗಳು, ಮತ್ತು ಅಧ್ಯಾಪಕರಾಗಿ ಸೇವೆ ಮುಂತಾದ ವಿವರಗಳನ್ನು ಈ ಅಧ್ಯಾಯದಲ್ಲಿ ಚರ್ಚಿತಗೊಂಡಿದೆ.

ಮೂರನೆಯ ಅಧ್ಯಾಯದಲ್ಲಿ ಇವರ ರೇಖಾಚಿತ್ರಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ರೇಖಾಚಿತ್ರಗಳಲ್ಲಿ ಸೃಜನಶೀಲ, ವರ್ಣಚಿತ್ರ, ಅಮೂರ್ತ ಚಿತ್ರ, ನವ್ಯಕಲೆ ಮುಂತಾದ ಕಲೆಗಳಿಗೂ ಮೊದಲು ರೇಖಾಚಿತ್ರವನ್ನು ಚಿತ್ರಿಸಿಕೊಳ್ಳಬೇಕು. ಕಲಾವಿದರಾಗಬೇಕಾದರೆ ರೇಖೆಯ ಸೊಬಗು, ರೇಖಾಲಾಲಿತ್ಯ ಅವಶ್ಯಕವಾಗಿರಬೇಕು. ಶಂಕರ ಪಾಟೀಲರ ರೇಖಾ ಕಲಾಕೃತಿಗಳಲ್ಲಿ ಈ ಎಲ್ಲಾ ಅಂಶಗಳು ಸ್ಪಷ್ಟವಾಗಿರುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಶಂಕರ ಪಾಟೀಲರು ರಚಿಸಿದ ವರ್ಣಚಿತ್ರಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಶಂಖರ ಪಾಟೀಲರ ಕಲಾಕೃತಿಗಳಲ್ಲಿ ರಾಜಕೀಯ, ಸಾಮಾಜಿಕ, ಶೃಂಗಾರಾತ್ಮಕ ಈ ಕಲ್ಪನೆಗಳನ್ನು ತಮ್ಮ ಕಲಾಕೌಶಲ್ಯದ ಮೂಲಕ, ಬಣ್ಣಗಳ ಮೈವಳಿಕೆಗಳಿಂದ ಸುಂದರವಾಗಿ ಚಿತ್ರಿಸಿದ್ದಾರೆ. ಪ್ರಾರಂಭದ ದಿನಗಳಲ್ಲಿ ಶೃಂಗಾರ, ನಿಸರ್ಗ, ವಿಜಯೋತ್ಸವ, ಸಂತೋಷ, ಸಂಭ್ರಮದ ಚಿತ್ರಣವನ್ನು ಚಿತ್ರಿಸಿ ಕಲಾಪ್ರೌಢಿಮೆಯನ್ನು ಮೆರೆದಿದ್ದು ಮುಂತಾದವು ಈ ಅಧ್ಯಯನದಲ್ಲಿ ಕಂಡುಬರುತ್ತದೆ.

ಐದನೆಯ ಅಧ್ಯಾಯದಲ್ಲಿ ಶಂಕರ ಪಾಟೀಲರ ಫೋಟೋಗ್ರಾಫಿ ಚಿತ್ರಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ತಾತ್ವಿಕ, ಮನೋವೈಜ್ಞಾನಿಕ, ಧಾರ್ಮಿಕೇತರ ವಿಷಯಗಳನ್ನು ತಮ್ಮ ಛಾಯಾಚಿತ್ರಗಳಲ್ಲಿ ಭಿನ್ನ ಭಿನ್ನವಾಗಿ ಸೆರೆ ಹಿಡಿದ ಬಹುತೇಕ ಛಾಯಾಚಿತ್ರಗಳಲ್ಲಿ ಬೆಳಗಾವಿ, ಧಾರವಾಡ, ದಾವಣಗೆರೆ, ಚಿತ್ರದುರ್ಗ, ಹಂಪೆ ಪರಿಸರ ಮುಂತಾದ ಸ್ಥಳಗಳ ದೃಶ್ಯಗಳನ್ನು ಸೆರೆ ಹಿಡಿದಿದ್ದಾರೆ. ಛಾಯಾಚಿತ್ರಗಳಲ್ಲಿ ಇವರಲ್ಲಿರುವ ತಮ್ಮ ಕ್ರಿಯಾಶೀಲತೆಯನ್ನು ಅನಾವರಣಗೊಳಿಸಿದ್ದಾರೆ.

ಆರನೆಯ ಅಧ್ಯಾಯದಲ್ಲಿ ಶಂಕರ ಪಾಟೀಲರ ಮೇಲಾದ ಪ್ರಭಾವ, ಪ್ರೇರಣೆ, ಅನುಸರಿಸಿದ ಶೈಲಿ ಮತ್ತು ತಂತ್ರಗಾರಿಕೆಯ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಏಳನೆಯ ಅಧ್ಯಾಯವು ಶಂಕರ ಪಾಟೀಲರ ಕಲಾಸಾಹಿತ್ಯ ಮತ್ತು ಕಲಾಚಟುವಟಿಕೆಗಳ ಬಗ್ಗೆ ಚರ್ಚಿಸಲಾಗಿದೆ. ಎಂಟನೆಯ ಅಧ್ಯಾಯದಲ್ಲಿ ಸಮಾರೋಪವಾಗಿದ್ದು, ಮಹಾಪ್ರಬಂಧದ ಎಲ್ಲಾ ಅಧ್ಯಾಯಗಳ ಸಮೀಕ್ಷೆಯನ್ನು ಒಳಗೊಂಡ ಒಟ್ಟಾರೆ ಅಧ್ಯಾಯಗಳ ಫಲಿತಗಳಿವೆ. ರೇಖಾಚಿತ್ರ, ಭಾವಚಿತ್ರಗಳು, ವರ್ಣಸಂಯೋಜನಾ ಚಿತ್ರಗಳು, ಪ್ರಕೃತಿ ಚಿತ್ರಗಳು ಹೀಗೆ ಅನೇಕ ಪ್ರಕಾರಗಳಲ್ಲಿ ಚಿತ್ರ ರಚಿಸಿದ್ದಾರೆ. ನೃತ್ಯದ ವಿವಿಧ ಭಂಗಿಗಳು, ಪ್ರಕೃತಿ, ಪ್ರಾಣಿ ಪಕ್ಷಿಗಳು, ವಿವಿಧ ವಿಷಯಗಳ ಮೇರೆಗೆ ಕೃತಿಗಳ ರಚನೆಯಲ್ಲಿ ರೇಖಾಲಾಲಿತ್ಯ, ರೇಖಾ ಪ್ರಭುತ್ವ, ರೇಖಾ ಸೊಬಗು ಮುಂತಾದ ಅಂಶಗಳು ಗಮನ ಸೆಳೆಯುವವು. ವರ್ಣಚಿತ್ರಗಳಲ್ಲಿ ಸಂಯೋಜನಾ ಚಿತ್ರಗಳು, ಭಾವಚಿತ್ರಗಳು, ವ್ಯಕ್ತಿಚಿತ್ರಗಳು, ಪ್ರಕೃತಿ ಚಿತ್ರಣ ಮುಂತಾದ ವಿಷಯಗಳಲ್ಲಿ ಚಿತ್ರ ರಚಿಸಿದ್ದು, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಜನಪದ ಓನ್ನೆಲೆಯಲ್ಲಿ ರಚಿಸಿ ಮತ್ತು ಫೋಟೋಗ್ರಾಫಿ ಕಲೆಯಲ್ಲಿ ಕಪ್ಪು-ಬಿಳುಪಿನ ಚಿತ್ರಗಳು, ವರ್ಣಚಿತ್ರಗಳು

[illegible]

ಸಹ ಇವೆ. ಇವರ ಕಲಾಕೃತಿಗಳು ಮೂರು ತಿಂಗಳ ಕಾಲ ದೇಶ–ವಿದೇಶಗಳಲ್ಲಿ ಪ್ರದರ್ಶನಗೊಂಡಿದ್ದು, ಕಲಾಸಕ್ತರ ಮೆಚ್ಚುಗೆ ಪಡದಿವೆ. ಭಾರತೀಯ ಕಲೆಯನ್ನು ವಿದೇಶಿಯರಿಗೆ ಪರಿಚಯಿಸುವಲ್ಲಿನ ಪಾಟೀಲರ ಪ್ರಯತ್ನವನ್ನು ಗುರುತಿಸಲಾಗಿದೆ. ಪಾಟೀಲರ ಚಿತ್ರಗಳಲ್ಲಿ ಗ್ರಾಮ ಪರಿಸರದ ಚಿತ್ರಗಳು, ಸಮಾಜಮುಖಿಯಾದ ಚಿತ್ರಗಳ ಸಂಖ್ಯೆಯೇ ಹೆಚ್ಚಾಗಿ ಕಂಡುಬರುತ್ತದೆ. ಪಾಟೀಲರು ಆಡಳಿತಗಾರರಾಗಿ, ಅಧ್ಯಾಪಕರಾಗಿ, ಛಾಯಾಚಿತ್ರಕಾರರಾಗಿ, ಕಲಾಸಾಹಿತಿಯಾಗಿ, ರೇಖಾಚಿತ್ರ, ವರ್ಣಚಿತ್ರಕಾರರಾಗಿ, ಶಿಕ್ಷಣ ಸಂಸ್ಥೆಯ ರೂವಾರಿಯಾಗಿ, ಹೊಯ್ಸಳ ವಾರಪತ್ರಿಕೆಯ ಸಂಪಾದಕರಾಗಿ, ಸಂಗೀತಗಾರರಾಗಿ, ಕಲಾಕೃತಿಗಳ ಸಂಗ್ರಹಕಾರರಾಗಿ ಹೀಗೆ ಹತ್ತು ಹಲವು ಅಭಿರುಚಿಗಳನ್ನು ಹೊಂದಿದ ಅಪರೂಪದ ಕಲಾವಿದ. ಅವರ ವೈವಿಧ್ಯಮಯವಾದ ಕಲಾಬದುಕನ್ನು ಕಟ್ಟಿಕೊಡುವ ಪ್ರಯತ್ನವನ್ನು ಇಲ್ಲಿ ಸ್ಥೂಲವಾಗಿ ಮಾಡಿಕೊಡಲಾಗಿದೆ. ಚದುರಿಹೋದ ಪಾಟೀಲರ ಕಲಾಕೃತಿಗಳನ್ನು ಒಂದೆಡೆಗೆ ದಾಖಲಿಸುವ ಮತ್ತು ಅಧ್ಯಯನಕ್ಕೆ ಒಳಪಡಿಸುವ ಪ್ರಯತ್ನ ಸಂಶೋಧಕರು ಮಾಡಿದ್ದಾರೆ. ಒಟ್ಟಾರೆ ಈ ಎಲ್ಲಾ ಅಂಶಗಳು ಈ ಅಧ್ಯಯನದ ಫಲಿತವಾಗಿದೆ.

ಎಂ.ಫಿಲ್ ಪ್ರಬಂಧಗಳು

ಈ ಅಧ್ಯಯನಗಳಲ್ಲಿಯೂ ಕೆಳಗಿನಂತೆ ವಿಂಗಡಿಸಬಹುದು.

ಅ. ಕ್ಷೇತ್ರೀಯ ಅಧ್ಯಯನಗಳು

ಬ. ವ್ಯಕ್ತಿ ಅಧ್ಯಯನಗಳು

ಅ. ಕ್ಷೇತ್ರೀಯ ಅಧ್ಯಯನಗಳು

ಕಿನ್ನಾಳ ಚಿತ್ರಕಲೆ, ವಿಜಯನಗರ ಚಿತ್ರಕಲೆ, ಲಜ್ಜಾಗೌರಿ ಶಿಲ್ಪಗಳು, ಚನ್ನಪಟ್ಟಣದ ಚಿತ್ತಾರದ ಗೊಂಬೆಗಳು ಮುಂತಾದ ವಿಷಯಗಳನ್ನು ಕ್ಷೇತ್ರೀಯ ಅಧ್ಯಯನಕ್ಕೆ ಒಳಪಡಿಸಿದ ವಿದ್ಯಾರ್ಥಿಗಳು ಕನ್ನಡ ವಿಶ್ವವಿದ್ಯಾಲಯಕ್ಕೆ ಪ್ರಬಂಧಗಳನ್ನು ಸಲ್ಲಿಸಿದ್ದಾರೆ.

೧. ಕಿನ್ನಾಳ ಕಲೆ

ಕಿನ್ನಾಳ ಕಲೆಯು ಕರ್ನಾಟಕ ಕಲಾಪರಂಪರೆಯಲ್ಲಿ ವಿಶಿಷ್ಟ ಸ್ಥಾನ ಪಡೆದುಕೊಂಡಿದೆ. ಈ ಕಲೆಯ ಕುರಿತು ರವಿ ವಸಾರಾಮ ನಾಯಕ ಅವರು ಈ ವಿಷಯವನ್ನು ಆಯ್ದುಕೊಂಡು ಎಂ.ಫಿಲ್ ಅಧ್ಯಯನ ಮಾಡಿದ್ದಾರೆ.[೪೮] ಈ ಪ್ರಬಂಧದಲ್ಲಿ ಒಟ್ಟು ಎಂಟು ಅಧ್ಯಾಯಗಳಲ್ಲಿ ವಿಷಯ ಹರಡಿಕೊಂಡಿದೆ. ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವೈಧಾನಿಕತೆ ಕುರಿತಂತೆ ವಿವರಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಈ ಕಲೆಯ ಐತಿಹಾಸಿಕತೆ ಮತ್ತು ಅದು ಬೆಳೆದು ಬಂದ ರೀತಿಗಳನ್ನು ವಿವೇಚಿಸಲಾಗಿದೆ. ವಿಜಯನಗರ ಸಾಮ್ರಾಜ್ಯದಲ್ಲಿ ಆಸ್ಥಾನ ಕಲಾವಿದರಾಗಿದ್ದ ಕಿನ್ನಾಳ ಕಲಾವಿದರು ವಿಜಯನಗರ ಪತನದ ನಂತರ

೪೮. ರವಿ ವಸಾರಾಮ ನಾಯಕ : ಕಿನ್ನಾಳ ಕಲೆ, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೦೬

ಕಿನ್ನಾಳಕ್ಕೆ ಬಂದು ನೆಲೆಸಿ ಈ ಕಲೆಯನ್ನೇ ಬದುಕಿನ ವೃತ್ತಿಯನ್ನಾಗಿ ಮಾಡಿಕೊಂಡರು. ವಿಜಯನಗರ ಸಾಮ್ರಾಜ್ಯದಲ್ಲಿ ಅನೇಕ ಅರಸರು ಈ ಕಲಾವಿದರಿಗೆ ಪ್ರೋತ್ಸಾಹ, ಪ್ರೇರಣೆಗಳನ್ನು ನೀಡಿದರು.

ಕಿನ್ನಾಳಕಲೆಯ ಹಸ್ತಪ್ರತಿಗಳ ಕುರಿತು ಹೆಚ್ಚಾಗಿ ಸಾಹಿತ್ಯದ ವಿವರಗಳಿವೆ. ಈ ಹಸ್ತಪ್ರತಿಯಲ್ಲಿ ಸಾಹಿತ್ಯ ಗ್ರಂಥಗಳಲ್ಲಿ, ಸಾಂದರ್ಭಿಕ ಚಿತ್ರಗಳಲ್ಲದೇ ಬದಲಾಗಿ ತಾವು ರಚಿಸುತ್ತಿದ್ದ ಕರಡು ಚಿತ್ರವನ್ನು ಕುರಿತಂತೆ ಹೂ, ಬಳ್ಳಿ, ಗಿಡ, ಮರ, ಜಾಮಿತಿಕ ವಿನ್ಯಾಸಗಳು ವಿವಿಧ ಅಂಶಗಳನ್ನು ಕಿನ್ನಾಳ ಕಲೆ ಕುರಿತಂತೆ ಹಸ್ತಪ್ರತಿ ಚಿತ್ರಗಳ ಬಗ್ಗೆ ಮೂರನೆಯ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಕಿನ್ನಾಳ ಕಲೆಯ ಮರ ಮಾಧ್ಯಮದ ಕಲಾಕೃತಿಗಳನ್ನು ವಿಶ್ಲೇಷಿಸಲಾಗಿದೆ. ಐದನೆಯ ಅಧ್ಯಾಯದಲ್ಲಿ ಮಣ್ಣು, ಸೆಗಣಿ, ಬಟ್ಟೆ, ಬೆಂಡು ಹೀಗೆ ಅನೇಕ ವಸ್ತುಗಳ ಮಿಶ್ರಣದಿಂದ, ಕೆಲವು ಸಾರಿ ಇವುಗಳನ್ನು ಪ್ರತ್ಯೇಕವಾಗಿ ಕಲಾಕೃತಿ ರಚನೆಯಲ್ಲಿ ಕಿನ್ನಾಳ ಕಲಾವಿದರು ಬಳಸಿದ್ದು ಇಂತಹ ಕೃತಿಗಳನ್ನು ಸಂಕೀರ್ಣ ಮಾಧ್ಯಮದ ಕೃತಿಗಳೆಂದು ಐದನೆಯ ಅಧ್ಯಾಯದಲ್ಲಿ ಪರಿಗಣಿಸಲಾಗಿದೆ. ಏಳನೆಯ ಅಧ್ಯಾಯದಲ್ಲಿ ಕಿನ್ನಾಳ ಕಲೆಯ ಕಲಾವಿದರ ಪರಿಚಯ, ವಂಶಾವಳಿ, ಇಂದಿನ ಸ್ಥಿತಿಗಳು, ಇದರ ಸ್ಥಾನ, ಸನ್ಮಾನಗಳ ಕುರಿತಂತೆ ಚರ್ಚಿಸಲಾಗಿದೆ. ಎಂಟನೆಯ ಅಧ್ಯಾಯದಲ್ಲಿ ಒಟ್ಟು ಪ್ರಬಂಧದ ಫಲಿತಗಳನ್ನು ಒಳಪಡಿಸಲಾಗಿದೆ.

ವಿಜಯನಗರ ಚಿತ್ರಶಿಲ್ಪ ಶೈಲಿಗಳ ಮುಂದುವರಿಕೆಯಾಗಿ ಕಿನ್ನಾಳ ಕಲೆ ಬೆಳವಣಿಗೆಯನ್ನು ಹೊಂದಿದೆ. ದಖ್ಖನಿ ಸುಲ್ತಾನರ ಕಾಲದ ಚಿಕಣಿ ಚಿತ್ರಗಳ ಪ್ರೇರಣೆ, ಪ್ರಭಾವಗಳು ಕಿನ್ನಾಳ ಕಲಾಶೈಲಿಯಲ್ಲಿ ಗಮನಾರ್ಹವಾಗಿ ಕಂಡುಬರುತ್ತವೆ. ಕಿನ್ನಾಳಕಲೆಯ ವೈಶಿಷ್ಟ್ಯಗಳಲ್ಲಿ ವರ್ಣಗಾರಿಕೆಯು ಅತ್ಯಂತ ಮಹತ್ವದ್ದಾಗಿದೆ. ಕಲಾವಿದರು ನೈಸರ್ಗಿಕವಾಗಿ ದೇಶೀಯವಾಗಿ ತಯಾರಿಸುವ ಬಣ್ಣಕ್ಕೆ ಲಜಾವರ ಬಣ್ಣವೆನ್ನುತ್ತಾರೆ. ಇದನ್ನು ಬಣ್ಣಗಳ ರಾಜನೆಂದು ಕರೆಯುತ್ತಾರೆ. ಶಿಷ್ಟತೆಯಲ್ಲಿ ಪ್ರಮಾಣಬದ್ಧತೆಯ ಸೌಂದರ್ಯ ನಿಷ್ಠತೆಯಲ್ಲಿದ್ದರೆ ಕಿನ್ನಾಳ ಗೊಂಬೆಗಳಲ್ಲಿ ಸಹಜತೆ, ಮುಗ್ಧತೆಯಲ್ಲಿ ಚೆಲುವಿನ ವಿನ್ಯಾಸವು ಮೂಡಿಬಂದಿದೆ. ಕಿನ್ನಾಳ ಚಿತ್ರಗಾರರು ಹಲವು ಸಂಪ್ರದಾಯ ಆಚರಣೆಯಲ್ಲಿಯೂ ತಮ್ಮ ಕಲೆಯ ಮುಖಾಂತರ ಗುರ್ತಿಸಿಕೊಂಡಿದ್ದಾರೆ. ಕಿನ್ನಾಳದ ಚಿತ್ರಗಳು ವಿಶೇಷವಾಗಿ ರೇಖಾಪ್ರಾಧಾನ್ಯವಾದವುಗಳಾಗಿವೆ. ಸಣ್ಣಗ್ರಾಮದ ಕಿನ್ನಾಳದಲ್ಲಿ ನೆಲೆಸಿರುವ ಈ ಚಿತ್ರಕಲಾವಿದರು ರಾಜ್ಯ, ರಾಷ್ಟ್ರ ಪ್ರಶಸ್ತಿ ಪಡೆದು ಅಂತಾರಾಷ್ಟ್ರೀಯ ಮಟ್ಟದ ಮಾರುಕಟ್ಟೆಯಲ್ಲಿಯೂ ಈ ಕಲೆಯ ವ್ಯಾಪ್ತಿಯನ್ನು ಕಂಡಿದೆ. ಅನಕ್ಷರಸ್ಥರಾದ ಈ ಕಲಾವಿದರು ಯಾವುದೇ ಕಲಾಕೃತಿ ರಚನೆ, ಯಾವ ಕಲಾಸಂಸ್ಥೆಯ ಪದವೀಧರರಿಗೂ ಕಡಿಮೆ ಇಲ್ಲ. ಕಿನ್ನಾಳ ಶಿಲ್ಪಕಲಾ ಕೃತಿಗಳು ಮುಖ್ಯವಾಗಿ ಧಾರ್ಮಿಕ ಹಾಗೂ ವೃತ್ತಿಮೂಲದ ಹಿನ್ನೆಲೆಯಲ್ಲಿ ಬೆಳೆದು ಸೌಂದರ್ಯಮೂಲದ ಕಲೆಗಳಾಗಿ ಆಕಾರ ಪಡೆದಿವೆ. ಹಲವು ಕಲಾಪ್ರಕಾರಗಳಲ್ಲಿ ತನ್ನ ಸ್ಥಾನ ಗಿಟ್ಟಿಸಿಕೊಂಡ ಕಲಾಪ್ರಕಾರವಾಗಿ ಕಲೆ ಸ್ಥೂಲ ಅಧ್ಯಯನ ಮಾಡಿದ ಫಲಿತವಾಗಿದೆ.

೨. ವಿಜಯನಗರ ಭಿತ್ತಿಚಿತ್ರಕಲೆ

ಸುಚಿತ್ರಾ ಜಿ. ಲಿಂಗದಳ್ಳಿ ಎಂಬುವರು 'ವಿಜಯನಗರ ಭಿತ್ತಿಚಿತ್ರಕಲೆ' ಕುರಿತು ಎಂ.ಫಿಲ್ ಅಧ್ಯಯನ ಮಾಡಿದ್ದಾರೆ.[೪೯] ಈ ಪ್ರಬಂಧವು ಒಟ್ಟು ಏಳು ಅಧ್ಯಾಯಗಳಲ್ಲಿ ಹರಡಿಕೊಂಡಿದೆ. ಮೊದಲನೆಯ ಅಧ್ಯಾಯವು ಅಧ್ಯಯನದ ಉದ್ದೇಶ, ಸ್ವರೂಪ, ವಿಧಾನ ಮತ್ತು ವ್ಯಾಪ್ತಿಗಳ ಬಗ್ಗೆ ತಿಳಿಸುತ್ತದೆ. ಎರಡನೆಯ ಅಧ್ಯಾಯದಲ್ಲಿ ವಿಜಯನಗರದ ಕಲಾ ವಾತಾವರಣಕ್ಕೆ ಪ್ರೋತ್ಸಾಹ ನೀಡಿದ ಪ್ರಮುಖ ಅರಸರು, ರಾಜವಂಶದವರ ವಂಶಾವಳಿ, ಆಡಳಿತ, ಅವರ ಧಾರ್ಮಿಕ, ಸಾಮಾಜಿಕ ಕೊಡುಗೆಗಳ ಕುರಿತು ವಿವರಿಸಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಭಿತ್ತಿಚಿತ್ರಕಲೆಯಲ್ಲಿ ಭಿತ್ತಿ ಸಿದ್ಧಗೊಳಿಸುವುದು ಮತ್ತು ಪರಿಕರಗಳ ಬಗ್ಗೆ ಚರ್ಚಿಸಲಾಗಿದೆ. ನಾಲ್ಕನೆಯ ಅಧ್ಯಾಯವು ವಿಜಯನಗರದ ಭಿತ್ತಿಚಿತ್ರಕಲೆಯು ವಿದ್ಯಾರಣ್ಯರ ಮೆರವಣಿಗೆಯ ದೃಶ್ಯ ಮತ್ತು ಮಹಾಭಾರತದ ಯುದ್ಧ, ಐತಿಹಾಸಿಕ ಯುದ್ಧದೃಶ್ಯ, ಮನ್ಮಥ ವಿಜಯ, ವಿಜಯೋತ್ಸವದ ಮೆರವಣಿಗೆ, ಗಿರಿಜಾಕಲ್ಯಾಣ ದೃಶ್ಯ, ರಾಮನು ಶಿವಧನುಸ್ಸನ್ನು ಮುರಿಯುತ್ತಿರುವುದು, ವಿರೂಪಾಕ್ಷಸ್ವಾಮಿ, ಇತರ ದೇವತೆಗಳು, ಗಣಪತಿ, ಸರಸ್ವತಿ, ಹನುಮಂತ, ಗರುಡ, ಜಯವಿಜಯರು, ದಶಾವತಾರಗಳು, ಶಿವನ ಲೀಲೆಗಳು ಹೀಗೆ ಹಲವು ರೀತಿಯ ವಿಷಯಗಳ ಚಿತ್ರಗಳು ವಿಂಗಡಿಸಿಕೊಂಡು ಈ ಅಧ್ಯಯನ ಮಾಡಲಾಗಿದೆ.

ಐದನೆಯ ಅಧ್ಯಾಯದಲ್ಲಿ ವಿಜಯನಗರದ ಭಿತ್ತಿಚಿತ್ರಗಳ ರಚನಾವಿಧಾನ, ಶೈಲಿ, ತಂತ್ರಗಾರಿಕೆ, ಪ್ರಭಾವ ಮತ್ತು ಪ್ರೇರಣೆಗಳ ಬಗ್ಗೆ ಚರ್ಚಿಸಲಾಗಿದೆ. ರೇಖಾಚಿತ್ರ ಬರೆಯುವ ಹಂತ, ನೆರಳು, ಬೆಳಕು ಚಿತ್ರಿಸುವುದು, ಹೊರ ರೇಖೆಯನ್ನು ಎಳೆಯುವುದು, ಹೀಗೆ ಹಲವು ಹಂತಗಳಲ್ಲಿ ಚಿತ್ರಿಸುವ ಪ್ರಾಚೀನರು ಕೊನೆಯಲ್ಲಿ ಚಿತ್ರಕ್ಕೆ ಕಳೆ ಕೊಡುತ್ತಿದ್ದರು ಎಂಬ ಕುರಿತು ಇಲ್ಲಿ ಚರ್ಚಿಸಲಾಗಿದೆ. ಆರನೆಯ ಅಧ್ಯಾಯದಲ್ಲಿ ವಿಜಯನಗರ ಭಿತ್ತಿಚಿತ್ರಕಲೆಯ ಆಪತ್ತುಗಳು ಮತ್ತು ಸಂರಕ್ಷಣಾ ವಿಧಾನಗಳ ಬಗ್ಗೆ ಚರ್ಚಿಸಲಾಗಿದೆ. ಏಳನೆಯ ಅಧ್ಯಾಯವು ಸಮಾರೋಪವಾಗಿದ್ದು, ಒಟ್ಟು ಅಧ್ಯಯನದ ಫಲಿಗಳನ್ನು ಇಲ್ಲಿ ಚರ್ಚಿಸಲಾಗಿದೆ. ಈಗಾಗಲೇ ಈ ಅಧ್ಯಯನಕ್ಕಿಂತ ಮುಂಚೆ ಈ ದೇವಾಲಯದ ಭಿತ್ತಿಚಿತ್ರಗಳ ಬಗ್ಗೆ ಅಧ್ಯಯನಗಳು ಐತಿಹಾಸಿಕ ವಿವಿಧ ಕಾರಣಗಳಿಂದ ಸಾಂದರ್ಭಿಕವಾಗಿ ನಡೆದಿದ್ದು, ಅವುಗಳಿಗಿಂತ ಭಿನ್ನವಾದ ಸಾಂಸ್ಕೃತಿಕ ಮತ್ತು ಕಲಾತ್ಮಕ ಸಂಗತಿಗಳಿಗೆ ಅಧ್ಯಯನಕಾರರು ಗಮನ ಹರಿಸಿದ್ದಾರೆ.

೩. ಕಲಘಟಗಿಯ ಕಲೆ : ಒಂದು ಅಧ್ಯಯನ

ಶಶಿಕಾಂತ ಕೆ. ಬಸರಿಕಟ್ಟಿಯವರು ಕಲಘಟಗಿಯ ಕಲೆ : ಒಂದು ಅಧ್ಯಯನ ವಿಷಯ ಕುರಿತು ಎಂ.ಫಿಲ್ ಅಧ್ಯಯನ ಮಾಡಿದ್ದಾರೆ.[೫೦] ಜನಪದ ಸಮೂಹವು ಈ ನಾಡಿಗೆ ನೀಡಿದ

೪೯. ಸುಚಿತ್ರ ಜಿ. ಲಿಂಗದಳ್ಳಿ : ವಿಜಯನಗರ ಭಿತ್ತಿಚಿತ್ರಕಲೆ, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೦೬

೫೦. ಶಶಿಕಾಂತ ಕೆ. ಬಸರಿಕಟ್ಟಿ : ಕಲಘಟಗಿಯ ಕಲೆ : ಒಂದು ಅಧ್ಯಯನ, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೦೭

[illegible]

ಅಪಾರ ಕೊಡುಗೆಗಳಲ್ಲಿ ಜನಪದ ಕಲೆಯಾದ ಕಲಘಟಗಿಯ ಕಲೆ ಒಂದು ಪ್ರಮುಖ ಕಲೆಯಾಗಿದೆ. ಆಯಾ ನಾಡಿನ ಸಂಸ್ಕೃತಿಯ ಸೌರಭಕ್ಕೆ ಮೂಲ ಜನಪದವೇ ಆಗಿದೆ. ಈ ಆಶಯದ ಹಿನ್ನೆಲೆಯಲ್ಲಿ ಕಲಘಟಗಿಯ ಕಲೆ ಕಿರು ಸಂಶೋಧನಾ ಪ್ರಬಂಧವು ಸಿದ್ಧಗೊಂಡಿದ್ದು, ತೊಟ್ಟಿಲು, ತೂಗುಮಂಚ, ಉಯ್ಯಾಲೆ, ಮೂರ್ತಿಶಿಲ್ಪ ಹೀಗೆ ವಿವಿಧ ಮಾಧ್ಯಮದ ವೈವಿಧ್ಯದ ಹಿನ್ನೆಲೆಯಲ್ಲಿ ಚಿತ್ರಕಲೆಯ ಹಿನ್ನೆಲೆಯಲ್ಲಿ ಒಂಭತ್ತು ಅಧ್ಯಾಯಗಳಲ್ಲಿ ವಿಷಯ ಹಂಚಿಕೆಯೊಂದಿಗೆ ಅಧ್ಯಯನ ಮಾಡಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಜನಪದ ಕಲೆಗಳು ನಮ್ಮ ಗ್ರಾಮೀಣ ಜನರ ಬದುಕಿನಲ್ಲಿ ಹಾಸುಹೊಕ್ಕಾಗಿದ್ದು, ಜನಪದ ಕಲೆಗಳೇ ಶಿಷ್ಟಪದ ಕಲೆಗಳಿಗೆ ಭದ್ರ ಬುನಾದಿಯನ್ನು ಹಾಕಿವೆ ಎಂಬುದನ್ನು ಸಮರ್ಥಿಸುತ್ತ ಕಲಾವಿದನ ಬದುಕು, ಸಾಂಸ್ಕೃತಿಕ ಚೌಕಟ್ಟಿನಲ್ಲಿಯೇ ಈ ಕಲೆ ರೂಪುಗೊಂಡ ಕ್ರಮವನ್ನು ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಕಲಘಟಗಿ ಕಲೆ ಐತಿಹಾಸಿಕ ಹಿನ್ನೆಲೆಯನ್ನು ಚರ್ಚಿಸಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಕಲಘಟಗಿ ಕಲೆಯ ಸಿದ್ಧತಾ ಪರಿಕರ ಮತ್ತು ರಚನಾ ವಿಧಿ-ವಿಧಾನಗಳನ್ನು ಕುರಿತ ವಿಶ್ಲೇಷಣೆ ಮಾಡಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಮಣ್ಣಿನ ಮಾಧ್ಯಮದ ಹಿನ್ನೆಲೆ ಹೇಳುತ್ತಾ ರಚನೆ, ಸೌಂದರ್ಯ, ಧಾರ್ಮಿಕ ವೃತ್ತಿಯನ್ನು ಹೇಳಲಾಗಿದೆ. ಐದನೆಯ ಅಧ್ಯಾಯದಲ್ಲಿ ಕಾಷ್ಠ ಮಾಧ್ಯಮದ ಕುರಿತು ಅಧ್ಯಯನ ಮಾಡಲಾಗಿದೆ. ಆರನೆಯ ಅಧ್ಯಾಯದಲ್ಲಿ ಮಣ್ಣು, ಕಟ್ಟಿಗೆ ಪುಡಿ, ಹುಣಸೇ ಸರಿ ಕುರಿತು, ಏಳನೆಯ ಅಧ್ಯಾಯದಲ್ಲಿ ತಂತ್ರಗಾರಿಕೆ ಶೈಲಿ, ಎಂಟನೆಯ ಅಧ್ಯಾಯವಾದ ಸಮಾರೋಪದಲ್ಲಿ ಫಲಿತಗಳನ್ನು ಒಳಗೊಂಡಿದೆ.

ಕಲಘಟಗಿಯ ಕಲೆಯ ವೈಶಿಷ್ಟ್ಯಗಳಲ್ಲಿ ವರ್ಣಗಾರಿಕೆ ಅತ್ಯಂತ ಮಹತ್ವದ್ದಾಗಿದೆ. ಕಲಾವಿದರು ನೈಸರ್ಗಿಕವಾಗಿ ದೇಶೀಯ ಬಣ್ಣಕ್ಕೆ ಅರಗಿನ ಬಣ್ಣವೆನ್ನುತ್ತಾರೆ. ಇದನ್ನು ಲಾಕ್ ವರ್ಣವೆಂದೂ ಕರೆಯುತ್ತಾರೆ. ಸಾಂಪ್ರದಾಯಿಕ ಕಲೆಯಲ್ಲಿ ಈ ಕಲೆಯು ಶಿಷ್ಟ ಶಿಲ್ಪಗಳಲ್ಲಿ ಸೂಕ್ಷ್ಮಗಾರಿಕೆ, ಪ್ರಮಾಣಬದ್ಧತೆಯ ಸೌಂದರ್ಯನಿಷ್ಠತೆ ಕಂಡುಬಂದರೆ ಕಲಘಟಗಿಯ ಕಲಾವಿದೆಯರ ಮಣ್ಣಿನ ಗೊಂಬೆಗಳಲ್ಲಿ ಸಹಜತೆ, ಮುಗ್ಧತೆಗಳು ವಿಶೇಷ ವಿನ್ಯಾಸದಿಂದ ಮೂಡಿಬಂದಿವೆ. ಈ ಕಲೆಯು ಸ್ಥಳೀಯ ಪ್ರಾದೇಶಿಕ ಹಿನ್ನೆಲೆಯ ಜಾನಪದ ಅಂಶಗಳನ್ನು ಮೈಗೂಡಿಸಿಕೊಂಡಿರುವ ಕಲೆಯು ಉಡುಗೆ, ತೊಡುಗೆ, ಹಬ್ಬ, ಉತ್ಸವ ಮುಂತಾದ ಸಂಪ್ರದಾಯಗಳಲ್ಲಿ ಗುರುತಿಸಿಕೊಂಡು ಬಂದಿದೆ.

ಯಾವುದೇ ಪ್ರತಿಷ್ಠಿತ ತರಬೇತಿಯ ಕಲಾಸಂಸ್ಥೆಯ ಪದವೀಧರರಿಗೂ ಕಡಿಮೆ ಇಲ್ಲದಂಥ ತಮ್ಮ ಕಲಾಪ್ರಾವೀಣ್ಯ ಈ ಕಲಾವಿದರು ಹೊಂದಿದ್ದಾರೆ. ಕಲಘಟಗಿಯ ತೊಟ್ಟಿಲು, ಶಿಲ್ಪಕಲಾಕೃತಿಗಳು ಮುಖ್ಯವಾಗಿ ಧಾರ್ಮಿಕ ಹಾಗೂ ವೃತ್ತಿಯ ಮೂಲದ ಹಿನ್ನೆಲೆಯಲ್ಲಿ ಬೆಳೆದು ಬಂದು, ಮುಂದೆ ಸೌಂದರ್ಯಮೂಲದ ಕಲೆಗಳಾಗಿ ಆಕಾರ ಪಡೆದಿವೆ. ಇತರ ಕಲಾಪ್ರಕಾರಗಳ ಜೊತೆಗೆ ಚಿತ್ರಕಲೆಯನ್ನು ಹಾಗೂ ಬಣ್ಣದ ತೊಟ್ಟಿಲುಗಳನ್ನು ಈ ಭಾಗದ ಜನತೆ ಪ್ರಮುಖವಾಗಿ ಪೋಷಿಸಿಕೊಂಡು ಬಂದಿರುವುದು ಕಂಡುಬರುತ್ತದೆ.

ದೇವಿಯ ಮುಖ್ಯ ಶಿಲ್ಪಗಳೊಂದಿಗೆ ವಿಷ್ಣುವಿನ ದಶಾವತಾರಗಳನ್ನು ರಚಿಸಿದ್ದಾರೆ. ಕಲಘಟಗಿಯ ಪ್ರದೇಶವು ಸಂಗೀತ, ನಾಟಕ, ಸಾಂಸ್ಕೃತಿಕ, ಸಾಂಪ್ರದಾಯಿಕ, ಆಚರಣೆ, ಧಾರ್ಮಿಕ ಹಿನ್ನೆಲೆ ಮತ್ತು ಮಡಿಕೆ ತಯಾರಿಕೆ, ಬುಟ್ಟಿ ತಯಾರಿಕೆ, ಒಲೆ ತಯಾರಿಸುವುದು, ಇಟ್ಟಿಗೆ ತಯಾರಿಕೆ, ಪೀಠೋಪಕರಣ ತಯಾರಿಕೆ ಮುಂತಾದ ಪ್ರಕಾರಗಳ ಕಲೆಗಳ ಘಟ್ಟವಾಗಿ ಬೆಳೆದು ಬಂದಿದೆ. ಈ ಚಿತ್ರಕಲೆಯಲ್ಲಿ ಪ್ರಮುಖವಾಗಿ ಮೂಲ ಬಣ್ಣದೊಂದಿಗೆ ಜಾಂಬಳಿ, ಕೇಸರಿಬಣ್ಣಗಳ ಬಳಕೆ ಹೆಚ್ಚು ಕಂಡುಬರುತ್ತದೆ. ದೇವತೆಗಳ ಚಿತ್ರಗಳಲ್ಲಿನ ಕಿರೀಟಗಳಲ್ಲಿ ವೈವಿಧ್ಯವಿದ್ದು, ೩ ರಿಂದ ೪ ಬಗೆಯ ಕಿರೀಟಗಳನ್ನು ಕಾಣಬಹುದು. ಹೀಗೆ ವಿವಿಧ ಮಾಧ್ಯಮಗಳಲ್ಲಿ ರೂಪತಳೆದ ನೂರಾರು ವರ್ಷಗಳಿಂದ ಜನಪದರ ವಿವಿಧ ಆಚರಣೆ, ನಂಬಿಕೆಗಳ ಹಿನ್ನೆಲೆಯಲ್ಲಿ ಇಂದಿಗೂ ಕಲಾಕೃತಿಗಳು ರಚನೆಯಾಗುತ್ತಿವೆ. ಈ ಎಲ್ಲಾ ಅಂಶಗಳು ಈ ಕಲೆಯ ಅಧ್ಯಯನದ ಕುರಿತು ಸ್ಥೂಲ ಫಲಿತವಾಗಿದೆ.

೪. ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಗಳ ಚಿತ್ರಕಲೆ

ಸುರೇಶ್ ಬಡಿಗೇರ ಅವರು ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಗಳ ಚಿತ್ರಕಲೆ : ಒಂದು ಅಧ್ಯಯನ ವಿಷಯವಾಗಿ ಎಂ.ಫಿಲ್ ಅಧ್ಯಯನ ಮಾಡಿದ್ದಾರೆ.[೫೧] ಈ ಮಹಾಪ್ರಬಂಧವು ಒಟ್ಟು ಐದು ಅಧ್ಯಾಯಗಳಲ್ಲಿ ಹರಡಿಕೊಂಡಿದ್ದು, ಅವುಗಳಲ್ಲಿ ಚರ್ಚಿತಗೊಂಡ ವಿಷಯಗಳ ಸಂಕ್ಷಿಪ್ತ ಸ್ವರೂಪದ ಮಾಹಿತಿಯನ್ನು ಇಲ್ಲಿ ಕೊಡಲಾಗಿದೆ. ಒಂದನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ವೈಧಾನಿಕತೆ ಮತ್ತು ಇದುವರೆಗೆ ಈ ಕ್ಷೇತ್ರದಲ್ಲಿ ನಡೆದ ಅಧ್ಯಯನಗಳನ್ನು ಮತ್ತು ಆಕರ ಸಾಮಗ್ರಿಗಳನ್ನು ಕುರಿತಾದ ಸಮೀಕ್ಷೆ ಕೊಡಲು ಪ್ರಯತ್ನಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಚಿತ್ರಕಲೆ ಮತ್ತು ಕಾವ್ಯಸಾಹಿತ್ಯದ ಸಹಸಂಬಂಧದ ವಿಷಯವನ್ನು ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಶಾಸ್ತ್ರ ವಿಭಾಗದಲ್ಲಿರುವ ಹಸ್ತಪ್ರತಿ ಸಂಗ್ರಹ, ಸಂರಕ್ಷಣೆ ಮತ್ತು ಅವುಗಳ ಚಿತ್ರಿತ ಹಸ್ತಪ್ರತಿಗಳ ಬಗ್ಗೆ ಗಮನ ಹರಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರದಲ್ಲಿರುವ ಚಿತ್ರಿತ ಹಸ್ತಪ್ರತಿಗಳನ್ನು ಮೂರು ವಿಧಾನಗಳಲ್ಲಿ ವರ್ಗೀಕರಿಸಿಕೊಂಡು ಧಾರ್ಮಿಕ, ಅಲಂಕಾರಿಕ, ಚಾರಿತ್ರಿಕ ಚಿತ್ರಗಳು ಎಂದು ಇವುಗಳ ವಿವಿಧ ಆಯಾಮಗಳ ಮೂಲಕ ಅಧ್ಯಯನಕ್ಕೆ ಒಳಪಡಿಸಿ ವೈವಿಧ್ಯಗಳನ್ನು ಗುರುತಿಸಿ ಅವುಗಳಲ್ಲಿರುವ ವಸ್ತುವಿಷಯವನ್ನು ಚರ್ಚಿಸಲಾಗಿದೆ. ಐದನೆಯ ಅಧ್ಯಾಯದಲ್ಲಿ ಹಸ್ತಪ್ರತಿ ಚಿತ್ರಗಳ ವಿನ್ಯಾಸ, ಬಣ್ಣಗಾರಿಕೆಯನ್ನು ಕುರಿತು, ಸ್ಥೂಲವಾಗಿ ಜ್ಯಾಮಿತಿ ಚಿತ್ರಗಳು, ರೇಖಾಚಿತ್ರಗಳು, ಬಣ್ಣಗಾರಿಕೆಯ ತಯಾರಿಕೆ, ಬಳಕೆ, ಲೇಪನ ವಿಷಯಸಂಪತ್ತು,

೫೧. ಸುರೇಶ ಬಡಿಗೇರ : ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಚಿತ್ರಕಲೆ: ಒಂದು ಅಧ್ಯಯನ, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೦೮

[illegible]

[illegible]

[illegible]

ಸನ್ನಿವೇಶಗಳ ಸೃಷ್ಟಿ ಮತ್ತು ಅರ್ಥಗಾರಿಕೆಯ ಬಗ್ಗೆ ಈ ಅಧ್ಯಾಯದಲ್ಲಿ ವಿವರಿಸಲಾಗಿದೆ. ಚಿತ್ರಕಲೆಗೆ ಸಂಬಂಧಿಸಿದಂತೆ ಇದುವರೆಗಿನ ಅಧ್ಯಯನಗಳಿಗಿಂತ ಈ ಅಧ್ಯಯನ ಭಿನ್ನವಾಗಿ ಚಿತ್ರಕಲೆಯ ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಮನುಷ್ಯ-ಜೀವನ-ಸಮಾಜ-ಚಿತ್ರಕಲೆ ಹೇಗೆ ಪೂರಕವಾಗಿ ಬೆಳೆದು ಬಂದಿದೆ? ಕಲೆ ಮತ್ತು ಸಾಹಿತ್ಯಕ್ಕೂ ಇರುವ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಚಿತ್ರಕಲೆ ತನ್ನ ಇರುವನ್ನು ವಿಸ್ತರಿಸಿಕೊಂಡುದರ ಬಗ್ಗೆ ಇರುವ ದೃಷ್ಟಿಧೋರಣೆಗಳು ಎಂಥವು, ಅದಕ್ಕೆ ಪ್ರತಿಕ್ರಿಯೆಯಾಗಿ ಇಲ್ಲಿನ ನಿಲುವುಗಳು ರೂಪಗೊಂಡ ಬಗೆ ಯಾವುದು ಎನ್ನುವ ವಿಚಾರದ ಚರ್ಚೆ ಇಲ್ಲಿದೆ.

ಹಸ್ತಪ್ರತಿಗಳನ್ನು ಕುರಿತು ಭಾಷಿಕವಾದ, ವಿಮರ್ಶಾತ್ಮಕವಾದ, ಕಾವ್ಯಾತ್ಮಕವಾದ, ಚಾರಿತ್ರಿಕ ಅಧ್ಯಯನಗಳೇ ಅಧಿಕವಾಗಿ ನಡೆದಿವೆ. ಅದನ್ನು ಹೊರತುಪಡಿಸಿ ಚಿತ್ರಕಲೆಯನ್ನು ಕುರಿತು ಹೇಗೆ ಅಧ್ಯಯನ ಮಾಡಬಹುದೆಂಬ ದಾರಿಯನ್ನು ಈ ಅಧ್ಯಯನ ತೋರಿಸಿದೆ. ಇದು ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರವನ್ನು ಗಮನಿಸಿ ಅಲ್ಲಿರುವ ಚಿತ್ರಿತ ಹಸ್ತಪ್ರತಿಗಳ ಒಂದು ಸಂಕ್ಷಿಪ್ತ ಅಧ್ಯಯನ ಇದಾಗಿದೆ. ಮುಂದೆ ಈ ಭಂಡಾರದ ಹಸ್ತಪ್ರತಿಗಳನ್ನು ಕುರಿತು ಸಮಗ್ರ ಅಧ್ಯಯನ ಕೈಗೊಳ್ಳುವ ಜರೂರಿದೆ. ಉಪೇಕ್ಷೆಗೆ ಒಳಗಾದ, ಕೆಲವೇ ಜನರ ಅಪೇಕ್ಷೆಯಾದ ಈ ಕ್ಷೇತ್ರಕ್ಕೆ ಹಸ್ತಪ್ರತಿಗಳಲ್ಲಿ ಚಿತ್ರಗಳು ಹೇಗೆ ಜನರ ನಡುವೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿವೆ ಎನ್ನುವುದನ್ನು ಇದು ಒಳಗೊಂಡಿದೆ. ಹಸ್ತಪ್ರತಿಗಳ ಚಿತ್ರಕಲೆಯು ಗತಿಸಿ ಹೋದ ಸಂಗತಿಗಳನ್ನು ವಾಸ್ತವ ಸಂಗತಿಗಳ ಸಂದರ್ಭದಲ್ಲಿ ಪುನರ್ ನಿರ್ಮಿಸುವ ಸಾಂಸ್ಕೃತಿಕ ರೂವಾರಿಗಳಾಗಿವೆ. ಇದರ ಸೂಕ್ಷ್ಮಗ್ರಹಿಕೆಯು ಈ ಅಧ್ಯಯನದಲ್ಲಿದೆ.

ಹಸ್ತಪ್ರತಿಗಳಲ್ಲಿ ಚಿತ್ರಗಳಿಗೆ ಬಳಸುವ ಬಣ್ಣಗಳಲ್ಲಿ ಕೆಂಪು, ಹಳದಿ, ಹಸಿರು, ಬಿಳಿ ಮತ್ತು ನೀಲಿ ಮುಂತಾದ ಬಣ್ಣಗಳನ್ನು ಹಸ್ತಪ್ರತಿಗಳಿಗೆ ಆಪತ್ತು ತಗಲದಂತೆ ಸಂರಕ್ಷಣೆ ಮಾಡುವುದು ಒಂದು ಅಂಶವಾದರೆ, ಕಲಾವಿದನ ಅಭಿವ್ಯಕ್ತಿ ಪ್ರಜ್ಞೆಯ ಭಾಗವೂ ಮತ್ತೊಂದಾಗಿದೆ. ಶಿವ, ಬ್ರಹ್ಮ, ವಿಷ್ಣು, ಅಗ್ನಿ, ವಾಯು ಈ ಐದು ಜನರ ಪ್ರತಿರೂಪವಾಗಿ ಈ ಬಣ್ಣಗಳು ಬಳಕೆಗೊಂಡಿವೆ. ಈ ಸೂಕ್ಷ್ಮತೆ ಅಧ್ಯಯನದಲ್ಲಿ ಅಳವಡಿಕೆ ಮಾಡಲಾಗಿದೆ. ವಿವಿಧ ಬಣ್ಣಗಳನ್ನು ಹಸ್ತಪ್ರತಿ ಚಿತ್ರಗಳಲ್ಲಿ ಬಳಸುವುದರಿಂದ ಹಸ್ತಪ್ರತಿಗಳ ಸಂರಕ್ಷಣೆಯ ಜೊತೆಗೆ ಕಲಾವಿದನ ಮನಸ್ಸಿನಲ್ಲಿ ಮೂಡಿದ ವಿಚಾರ ಸರಣಿಯ ಹಿನ್ನೆಲೆಯಲ್ಲಿ ಆಯಾ ಚಿತ್ರಗಳನ್ನು ಪರಿಭಾವಿಸಲಾಗಿದೆ. ಮೂರ್ತಿಚಿತ್ರಗಳು, ರೇಖಾಚಿತ್ರಗಳು ಹಾಗೂ ಸಾಂದರ್ಭಿಕ ಚಿತ್ರಗಳ ಮೂಲಕ ಬಣ್ಣಗಾರಿಕೆಯನ್ನು ತಿಳಿಸುತ್ತಾ ಅವುಗಳಿಗೆ ಸಂಬಂಧಿಸಿದ ತತ್ವ ಸಿದ್ಧಾಂತವನ್ನು ಮಂಡಿಸುವುದು. ಇಲ್ಲಿ ಚಿತ್ರ ಹಾಗೂ ಬಣ್ಣಗಳು ವಿಜಯನಗರ ಕಾಲದ ಶೈಲಿಗೆ ಹತ್ತಿರವಾಗಿವೆ. ಕಾರಣ ದೊರೆತ ಹಸ್ತಪ್ರತಿಗಳೆಲ್ಲವೂ ಉತ್ತರ ಕರ್ನಾಟಕಕ್ಕೆ ಸೇರಿದಂಥವು. ಕೆಲವೊಂದು ಫಲಕ ಮಾಧ್ಯಮದ ಚಿತ್ರಗಳಲ್ಲಿ ದಖ್ಖನಿ ಚಿತ್ರಶೈಲಿಗಳು ಚಿಕಣಿ ಚಿತ್ರಶೈಲಿಗಳು ಅಡಕವಾಗಿ ಕಾಣುವುದು ವಿಶೇಷ.

ಬರೀ ಶಿಷ್ಟ ಸಂಪ್ರದಾಯವಲ್ಲದೇ ಜಾನಪದದ ಮಾಟ-ಮಂತ್ರ-ಯಂತ್ರ-ತಂತ್ರಗಳ ನೆಲೆಗೆ ಸಂಬಂಧಿಸಿದ ರೇಖಾಚಿತ್ರಗಳು ಕಪ್ಪುಮಸಿಯಲ್ಲಿವೆ. ಪತ್ಯದೊಳಗೆ ಬರುವ ಸಾಂದರ್ಭಿಕ ಸೌಂದರ್ಯಚಿತ್ರಗಳು ಪತ್ಯದ ಆರಂಭ ಹಾಗೂ ಮುಕ್ತಾಯದಲ್ಲಿ ಬರುವ ಸಂಜ್ಞಾಚಿತ್ರಗಳು ಇಲ್ಲಿನ ವಿಶೇಷವಾಗಿವೆ. ಇದಕ್ಕೂ ಮೀರಿ ಲಿಪಿಕಾರನ ಕಲಾಪ್ರಜ್ಞೆಯನ್ನು ಬಿಂಬಿಸುವ ಚಿತ್ರಲಿಪಿಗಳು ಅಕ್ಷರ ವಿನ್ಯಾಸದ ಹಲವು ಸಾಧ್ಯತೆಗಳನ್ನು ಗ್ರಹಿಕೆಗೆ ತರುತ್ತವೆ. ಈ ಎಲ್ಲಾ ಅಂಶಗಳನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೫. ಬಾಗಲಕೋಟೆ ಜಿಲ್ಲೆಯ ಚಿತ್ರಕಲೆ

ಬಸಯ್ಯ ಗವಿಮಠ ಇವರು ಬಾಗಲಕೋಟೆ ಜಿಲ್ಲೆಯ ಚಿತ್ರಕಲೆ ವಿಷಯವಾಗಿ ಎಂ.ಫಿಲ್ ಅಧ್ಯಯನವನ್ನು ಮಾಡಿದ್ದಾರೆ.[೫೨] ಪ್ರಸ್ತುತ ಒಟ್ಟು ಒಂಭತ್ತು ಅಧ್ಯಾಯಗಳನ್ನು ಒಳಗೊಂಡಿದೆ. ಈ ಅಧ್ಯಯನದ ಮೊದಲನೆಯ ಅಧ್ಯಾಯವು ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವೈಧಾನಕತೆಯನ್ನು ಹೊಂದಿದೆ. ಎರಡನೆಯ ಅಧ್ಯಾಯದಲ್ಲಿ ಬಾಗಲಕೋಟ ಜಿಲ್ಲೆಯ ಅಖಂಡ ವಿಜಾಪುರ ಜಿಲ್ಲೆಯ ಭೌಗೋಳಿಕ ಐತಿಹಾಸಿಕ ತಾಣಗಳಲ್ಲಿರುವ ಚಿತ್ರಕಲೆಯ ಹುಡುಕಾಟ ಮೊದಲಾದವುಗಳ ವಿವರಣೆ ಹೊಂದಿರುತ್ತದೆ.

ಮೂರನೆಯ ಅಧ್ಯಾಯದಲ್ಲಿ ಬಾದಾಮಿ, ಜಮಖಂಡಿ, ಕುಲ್ಹೋಳ್ಳಿಯ ಮೊದಲಾದ ಪ್ರಾಗಿತಿಹಾಸ ಕಾಲದ ಚಿತ್ರಕಲೆಯ ಕುರಿತು ವಿಶ್ಲೇಷಿಸಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಜನಪದ ಚಿತ್ರಕಲೆಯನ್ನು ಕುರಿತಂತೆ ಅಧ್ಯಯನ ಮಾಡಲಾಗಿದೆ. ಐದನೆಯ ಅಧ್ಯಾಯದಲ್ಲಿ ಗುಳೇದಗುಡ್ಡದ ವಾಡೆ, ಮಹಾಲಿಂಗಪುರ ಮಹಾಲಿಂಗೇಶ್ವರ ಮಠದಲ್ಲಿನ ಚಿತ್ರಗಳು ಈ ಭಿತ್ತಿಚಿತ್ರಗಳಿಗಾಗಿ ಇರುವ ಅಧ್ಯಾಯದಲ್ಲಿ ವಿಸ್ತರಗೊಂಡಿದೆ. ಆರನೆಯ ಅಧ್ಯಾಯದಲ್ಲಿ ಜಿಲ್ಲೆಯಲ್ಲಿ ಲಭ್ಯವಿರುವ ಹಸ್ತಪ್ರತಿ ಚಿತ್ರಕಲೆ, ಶಿವಯೋಗ ಮಂದಿರದ ಸಂಗ್ರಹದಲ್ಲಿ ಇದ್ದ ಅಪರೂಪದ ಚಿತ್ರಗಳನ್ನು ಸಂಗ್ರಹಿಸಿ ಛಾಯಾಚಿತ್ರ ತೆಗೆದು ಕಾಲಮಾನ ಹಾಗೂ ಚಿತ್ರರಚನಾಕಾರರ ಕುರಿತು ಅಧ್ಯಯನ ಹಾಗೂ ಡಾ. ಬಿ.ಕೆ. ಹಿರೇಮಠರ ಕನ್ನಡ ಹಸ್ತಪ್ರತಿಗಳ ಒಂದು ಅಧ್ಯಯನ ಮಹಾಪ್ರಬಂಧದಲ್ಲಿರುವ ಹಸ್ತಪ್ರತಿಗಳ ಚಿತ್ರಗಳನ್ನು ಪ್ರತ್ಯೇಕಿಸಿ ಅಧ್ಯಯನ ಮಾಡಲಾಗಿದೆ. ಏಳನೆಯ ಅಧ್ಯಾಯದಲ್ಲಿ ಗಾಜಿನ ಮೇಲಿನ ಚಿತ್ರಕಲೆಯನ್ನು ಅಧ್ಯಯನ ಮಾಡಲಾಗಿದೆ. ಎಂಟನೆಯ ಅಧ್ಯಾಯದಲ್ಲಿ ಮಠಗಳು, ದೇವಸ್ಥಾನಗಳು ಹಾಗೂ ವಸ್ತುಸಂಗ್ರಹಾಲಯದಲ್ಲಿನ ವರ್ಣಚಿತ್ರಗಳ ಕುರಿತಂತೆ ಚಿತ್ರಕಲೆಯನ್ನು ವಿವೇಚಿಸಲಾಗಿದೆ. ಸಮಾರೋಪವಾದ ಒಂಭತ್ತನೆಯ ಅಧ್ಯಾಯದಲ್ಲಿ ಒಟ್ಟು ಅಧ್ಯಯನದ ಫಲಿತಗಳನ್ನು ಹೇಳಲಾಗಿದೆ.

ಆದಿಮಾನವ ಪ್ರಾಗೈತಿಹಾಸಿಕ ರೇಖಾಚಿತ್ರವರ್ಣಚಿತ್ರಗಳು ಜಿಲ್ಲೆಯಲ್ಲಿ ಹೇರಳವಾಗಿ ಲಭ್ಯವಾದರೂ ಅಲ್ಲಲ್ಲಿ ಇತಿಹಾಸಕಾರರು ಭಾಷೆ ಹಾಗೂ ಅಕ್ಷರಗಳಲ್ಲಿ ಹಿಡಿದಿಟ್ಟ ದಾಖಲೆಗಳೇ

---

೫೨. ಬಸಯ್ಯ ಗವಿಮಠ : ಬಾಗಲಕೋಟೆ ಜಿಲ್ಲೆಯ ಚಿತ್ರಕಲೆ, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೦೯

ಹೆಚ್ಚಾಗಿರುವುದರಿಂದ ಪ್ರಾಚ್ಯವಸ್ತು ಇಲಾಖೆ ಹಾಗೂ ಇತಿಹಾಸಕಾರರು ಗೆಝೆಟಿಯರ್ ಮೊದಲಾದ ಮಾಧ್ಯಮಗಳಿಗಿಂತ ಭಿನ್ನವಾದ ಬಣ್ಣದ ಛಾಯಾಚಿತ್ರ ಕ್ಲೇಸಸ್‌ಗಳನ್ನು ಅಳವಡಿಸಿ ಅಧ್ಯಯನಕ್ಕೆ ಅಂದ ಹೆಚ್ಚಿಸಿದೆ. ಕ್ಯಾಮರಾ ಬಳಕೆ ಕಾಲಕ್ಕಿಂತ ಸಾವಿರಾರು ವರ್ಷದ ಹಿಂದೆ ಸೃಷ್ಟಿಯಾದ ಚಿತ್ರಗಳನ್ನು ಸಂಸ್ಕರಿಸಿ ಒಟ್ಟು ಅಂದವನ್ನು ಹೆಚ್ಚಿಸಿ ಅಧ್ಯಯನಕ್ಕೆ ಅಳವಡಿಸಲಾಗಿದೆ.

ಮಾನವ ಬದುಕಿನ ಅವಿಭಾಜ್ಯ ಅಂಗವಾದ ಜನಪದ ಕಲೆ ಕುರಿತು ರಾಜ್ಯದ ಎಲ್ಲ ಮೂಲೆ ಮೂಲೆಯಲ್ಲಿ ಅಧ್ಯಯನ ನಡೆದಿದೆಯಾದರೂ ಬಾಗಲಕೋಟೆ ಜಿಲ್ಲೆಯು ಜನಪದ ಚಿತ್ರಗಳ ಎಲ್ಲಾ ಮಜಲುಗಳನ್ನು ಕಂಡಿದೆ. ಕೌದಿಗಾಗಿ ಕೋಡಿದಾಳ, ಇಳಕಲ್ ಸೀರೆ, ಹಳ್ಳಿಗಳಲ್ಲಿನ ಕಸೂತಿ ಮುಂತಾದ ಜನಪದ ಕಲೆಗಳನ್ನು ಒಂದೆಡೆ ಸೇರಿಸಿ ಅಧ್ಯಯನ ನಡೆಸಿದ್ದು ಐತಿಹಾಸಿಕ ದಾಖಲೆ ಎನ್ನಬಹುದು.

ಪ್ರಮುಖ ತಾಣಗಳಾದ ಬಾದಾಮಿ ಗುಹೆಗಳು ಹಾಗೂ ಗುಳೇದಗುಡ್ಡದ ಹೊಸಮನಿ ಎಂಬವರ ಮನೆ ಹಾಗೂ ಜಮಖಂಡಿಯ ಸಂಸ್ಥಾನ ಅರಸರ ಅರಮನೆ ಭಿತ್ತಿಚಿತ್ರಗಳು ಹಾಗೂ ಮಹಾಲಿಂಗಪುರದ ಮಠದಲ್ಲಿನ ಚಿತ್ರಗಳು ದೊರೆತ ಅತೀ ಪ್ರಮುಖ ಚಿತ್ರಗಳನ್ನು ಸಂಗ್ರಹಿಸಿ ದಾಖಲಿಸಲಾಗಿದೆ. ಜಿಲ್ಲೆಯ ಹಸ್ತಪ್ರತಿ, ಗಾಜಿನ ಕಲೆಯನ್ನು ಕುರಿತಂತೆ ಹಲವು ಚಿತ್ರಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಲಾಗಿದೆ.

೬. ಬೆಳಗಾವಿ ಜಿಲ್ಲೆಯ ಚಿತ್ರಕಲೆ

ಮಹಾಕೂಟೇಶ್ವರ ಗೌಡ ಪಾಟೀಲ ಅವರು ಬೆಳಗಾವಿ ಜಿಲ್ಲೆಯ ಚಿತ್ರಕಲೆ ಎಂಬ ವಿಷಯದಡಿ ಎಂ.ಫಿಲ್ ಅಧ್ಯಯನ ಮಾಡಿದ್ದಾರೆ.[೫೩] ಒಟ್ಟು ಏಳು ಅಧ್ಯಾಯಗಳಲ್ಲಿ ವಿಷಯ ಹರಡಿಕೊಂಡಿದೆ. ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವೈಧಾನಿಕತೆಯನ್ನು ಕುರಿತಂತೆ ವಿವರಿಸಿದ್ದಾರೆ. ಎರಡನೆಯ ಅಧ್ಯಾಯದಲ್ಲಿ ಬೆಳಗಾವಿ ಜಿಲ್ಲೆಯ ಪರಿಸರ, ಪೌರಾಣಿಕ, ಐತಿಹಾಸಿಕ ಹಿನ್ನೆಲೆ, ಚಿತ್ರಕಲೆ ಇವುಗಳ ಕುರಿತು ಚರ್ಚಿಸಲಾಗಿದೆ.

ಮೂರನೆಯ ಅಧ್ಯಾಯವು ಬೆಳಗಾವಿ ಜಿಲ್ಲೆಯ ಪ್ರಾಗೈತಿಹಾಸಿಕ ಹಾಗೂ ಜನಪದ ಚಿತ್ರಕಲೆಗೆ ಸಂಬಂಧಿಸಿದೆ. ನಾಲ್ಕನೆಯ ಅಧ್ಯಾಯವು ಬೆಳಗಾವಿ ಜಿಲ್ಲೆಯ ಭಿತ್ತಿಚಿತ್ರಕಲೆಯ ಕುರಿತದ್ದಾಗಿದೆ. ಐದನೆಯ ಅಧ್ಯಾಯ ಈ ಜಿಲ್ಲೆಯ ಹಿರಿಯ ಕಲಾವಿದರ ಕುರಿತಾಗಿದೆ. ಇಲ್ಲಿ ಪ್ರಮುಖವಾಗಿ ಹಿರಿಯ ಕಲಾವಿದರ ಜೀವನ, ಕಲಾಶಿಕ್ಷಣ ಮತ್ತು ಕಲಾಕೃತಿಗಳು ಹಾಗೂ ಅವರ ಕಲಾಪ್ರತಿಭೆಗೆ ಸರ್ಕಾರ, ಸಂಘ ಸಂಸ್ಥೆಗಳು ನೀಡಿದ ಪ್ರಶಸ್ತಿ, ಪುರಸ್ಕಾರ ಮತ್ತು ಸನ್ಮಾನಗಳನ್ನು ಕುರಿತು ವಿವರಿಸಲಾಗಿದೆ. ಆರನೆಯ ಅಧ್ಯಾಯದಲ್ಲಿ ಬೆಳಗಾವಿ ಕಲಾಸಂಸ್ಥೆಗಳ ಹುಟ್ಟು, ಬೆಳವಣಿಗೆ, ಕಲಾಶಿಕ್ಷಣ, ಕಲಾಚಟುವಟಿಕೆಗಳು, ಕಲಾಕೃತಿಗಳು, ಕಲಾಶಾಲೆಯ ಸ್ಥಿತಿಗಳನ್ನು ಕುರಿತು ಸ್ಥೂಲವಾಗಿ ಅಧ್ಯಯನವನ್ನು ಮಾಡಲಾಗಿದೆ. ಏಳನೆಯ ಅಧ್ಯಾಯವು

೫೩. ಮಹಾಕೂಟೇಶ್ವರಗೌಡ ಪಾಟೀಲ : ಬೆಳಗಾವಿ ಜಿಲ್ಲೆಯ ಚಿತ್ರಕಲೆ, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೦೮

ಸಮಾರೋಪವಾಗಿದ್ದು ಇಲ್ಲಿ ಒಟ್ಟು ಅಧ್ಯಯನದ ಫಲಿತಗಳನ್ನು ಒಳಪಡಿಸಲಾಗಿದೆ. ಬೆಳಗಾವಿ ಜಿಲ್ಲೆಯ ಪರಿಸರವು ಚಿತ್ರಕಲೆಗೆ ಪೂರಕವಾದ ವಾತಾವರಣ ನಿರ್ಮಾಣ ಮಾಡಿದ್ದನ್ನು ಕಂಡುಕೊಳ್ಳಲಾಗಿದೆ. ಪ್ರಾಗೈತಿಹಾಸಿಕ ಚಿತ್ರಗಳಲ್ಲಿ ಗವಿ ವರ್ಣಚಿತ್ರಗಳು ಬೇರೆ ಬೇರೆ ಕಾಲದಲ್ಲಿ ರಚನೆಗೊಂಡಿರುವುದರಿಂದ ಶೈಲಿಯಲ್ಲಿ ವ್ಯತ್ಯಾಸವಿರುವುದನ್ನು ಈ ಅಧ್ಯಯನದಿಂದ ತಿಳಿದುಕೊಳ್ಳಲಾಗಿದೆ.

ಜನಪದರ ಕಲೆಗಳೇ ಸಂಸ್ಕಾರಗೊಳ್ಳುತ್ತಾ ಶಿಷ್ಟರೂಪ ಪಡೆದುಕೊಂಡಿದ್ದು ಹಾಗೂ ಧಾರ್ಮಿಕ, ಸಾಮಾಜಿಕ, ಸೌಂದರ್ಯ, ಮನರಂಜನೆಯಾಗಿರುವಂತಹ ಜನಪದ ಚಿತ್ರಕಲೆ ಇಂದು ಆಧುನಿಕ ಪ್ರಭಾವದಿಂದ ಹಲವಾರು ಬದಲಾವಣೆಗಳನ್ನು ಕಂಡುಕೊಂಡಿದ್ದು, ಅದನ್ನು ಅಧ್ಯಯನ ಮಾಡಿ ವಿಶ್ಲೇಷಣೆ ಮಾಡಲಾಗಿದೆ. ಜನಪದ ಕಲೆಗಳಲ್ಲಿ ಒಂದಾದ ತೊಗಲುಗೊಂಬೆಯಾಟವು ಇಂದು ಸಿನಿಮಾಗಳ ಪ್ರಭಾವದಿಂದ ನಶಿಸಿ ಹೋಗುವಂತಹ ಹಂತದಲ್ಲಿರುವದನ್ನು ಈ ಅಧ್ಯಯನದಿಂದ ತಿಳಿದುಕೊಳ್ಳಲಾಗಿದೆ. ಆಧುನಿಕ ಪ್ರಭಾವದಿಂದ ಜನಪದ ಕಲೆಯಾದ ಮದರಂಗಿ ಚಿತ್ರಕಲೆಯು ಒಂದು ಫ್ಯಾಶನ್ ಆಗಿ ನಗರಗಳಲ್ಲಿ ತುಂಬಾ ಬೇಡಿಕೆ ಇರುವುದರ ಜೊತೆಗೆ ಈ ಚಿತ್ರಕಲೆಯು ಒಂದು ಉದ್ಯೋಗವಾಗಿ ಬದಲಾವಣೆಯಾಗಿರುವುದನ್ನು ಕಂಡುಕೊಳ್ಳಲಾಗಿದೆ.

ಜನಪದ ಕಲೆಯನ್ನೇ ವೃತ್ತಿಯನ್ನಾಗಿ ಮಾಡಿಕೊಂಡು ಬದುಕುತ್ತಿರುವಂತಹ ಅನೇಕ ಕುಟುಂಬಗಳು ಬೆಳಗಾವಿ ಜಿಲ್ಲೆಯಲ್ಲಿರುವುದು ಕಂಡುಬಂದಿದ್ದು, ಈ ಕುಟುಂಬಗಳಿಗೆ ಸರ್ಕಾರದಿಂದ ಅಥವಾ ಸಂಘ-ಸಂಸ್ಥೆಗಳಿಂದ ಸೌಲಭ್ಯ, ಸಹಕಾರಗಳು ದೊರಕದೆ ಇರುವುದನ್ನು ಮನಗಾಣಬಹುದು. ಈ ಚಿತ್ರಗಳಲ್ಲಿ ಮುಖ್ಯ ಅಂಶವೆಂದರೆ, ದುಂಡುತನದ ಪ್ರಯತ್ನವನ್ನು ನೆರಳು ಬೆಳಕಿನ ವಿನ್ಯಾಸದಲ್ಲಿ ಮಾಡಲಾಗಿ ಆಕರ್ಷಕವಾದ ಭಂಗಿಗಳು, ಉಜ್ವಲ ವರ್ಣಗಳ ವೈವಿಧ್ಯ, ಪರಸ್ಪರ ಹೊಂದಾಣಿಕೆ, ಸಂಯೋಜನೆಗಳು ಇವು ಕಲಾವಿದನ ನೈಪುಣ್ಯಕ್ಕೆ ಸಾಕ್ಷಿಯಾಗಿವೆ.

ಅಳಿದು ಹೋದ ಒಂದು ಸಂಪ್ರದಾಯವನ್ನು ಚಿತ್ರಗಳು ಪ್ರತಿನಿಧಿಸುತ್ತವೆ. ಪ್ರಸ್ತುತ ಭಿತ್ತಿಚಿತ್ರಗಳು ಸಮ್ಮಿಶ್ರಣ ಶೈಲಿಗಳಲ್ಲಿ ರಚನೆಗೊಂಡಿವೆ ಎಂಬುದನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಈ ಅಧ್ಯಯನವನ್ನು ಕಲಾತ್ಮಕ ಮತ್ತು ಐತಿಹಾಸಿಕ ಹೀಗೆ ಎರಡನ್ನು ಸಮಾನದೃಷ್ಟಿಯಿಂದ ನೋಡಲಾಗಿದೆ. ನಾಶದ ಹಾದಿಯಲ್ಲಿರುವ ಇಂತಹ ಕಲಾಸಂಪತ್ತನ್ನು ನಮ್ಮ ಮುಂದಿನ ಜನಾಂಗಕ್ಕೆ ಉಳಿಸುವಂತೆ ಮಾಡುವುದು ಇಂದಿನ ಪ್ರಮುಖವಾದ ಕಾರ್ಯವಾಗಿದೆ. ಚಿತ್ರಕಲೆಗೆ ಬೆಳಗಾವಿ ಜಿಲ್ಲೆಯ ಕಲಾವಿದರ ಕೊಡುಗೆಯು ಅಪಾರವಾಗಿದೆ. ಭಿನ್ನಾಭಿವ್ಯಕ್ತಿಯನ್ನು ಮತ್ತು ಸೃಜನಶೀಲತೆಯೊಂದಿಗೆ ಬೆರೆಸಿ ಚಿತ್ರಿಸಿರುವುದು ಕಲಾಕೃತಿಗಳಲ್ಲಿ ಸ್ಪಷ್ಟವಾಗಿ ಬಿಂಬಿತವಾಗಿದೆ. ಬೆಳಗಾವಿ ಜಿಲ್ಲೆಯಲ್ಲಿ ಇತರ ಜಿಲ್ಲೆಗಳಿಗಿಂತ ಹೆಚ್ಚಾಗಿ ಕಲಾಶಿಕ್ಷಣ ಸಂಸ್ಥೆಗಳು ಇರುವುದನ್ನು ಕಾಣಬಹುದು. ಆದರೆ ಅವುಗಳಲ್ಲಿ ಅನುದಾನರಹಿತ ಕಲಾಸಂಸ್ಥೆಗಳು ಬಹುಸಂಖ್ಯೆಯಲ್ಲಿವೆ ಮತ್ತು ಇಲ್ಲಿ ಕೆಲವು ಕಲಾಸಂಸ್ಥೆಗಳು ಅಗತ್ಯ ಸೌಲಭ್ಯದ ಕೊರತೆಯಿಂದಾಗಿ ಕುಂಠಿತಗೊಳ್ಳುತ್ತಿವೆ.

[illegible]

ಇನ್ನೂ ಕೆಲವು ಕಲಾಸಂಸ್ಥೆಗಳು ಸ್ಥಗಿತಗೊಂಡಿರುವುದನ್ನು ಕಾಣಬಹುದು. ಇದು ಕಾಲಮಿತಿ ಅಧ್ಯಯನವಾಗಿರುವುದರಿಂದ ಈ ಅಧ್ಯಯನವು ಒಂದು ಪಕ್ಷಿನೋಟದ ಚಿತ್ರಣವನ್ನು ಕೊಟ್ಟಿದೆ. ಸಮಯಮಿತಿಯಲ್ಲಿ ಗಮನಕ್ಕೆ ಬಂದ ಅಂಶಗಳನ್ನು ಇಲ್ಲಿ ಚರ್ಚಿಸಲಾಗಿದೆ. ಇವೆಲ್ಲವು ಅಧ್ಯಯನದ ಫಲಿತವಾಗಿದೆ.

೭. ದಾವಣಗೆರೆ ಜಿಲ್ಲೆಯ ಚಿತ್ರಕಲೆ

ಸಂತೋಷಕುಮಾರ ಕುಲಕರ್ಣಿಯವರು ದಾವಣಗೆರೆ ಜಿಲ್ಲೆಯ ಚಿತ್ರಕಲೆ ಎಂಬ ವಿಷಯದಲ್ಲಿ ಎಂ.ಫಿಲ್ ಅಧ್ಯಯನ ಮಾಡಿದ್ದಾರೆ.[೫೪] ಒಟ್ಟು ಆರು ಅಧ್ಯಾಯಗಳನ್ನಾಗಿ ವಿಂಗಡಿಸಿಕೊಂಡು ಈ ಜಿಲ್ಲೆಯ ಚಿತ್ರಕಲೆಯ ಕುರಿತಂತೆ ವಿವರಿಸಲಾಗಿದೆ. ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ಅಧ್ಯಯನದ ವಿಧಾನಗಳ ಕುರಿತಂತೆ ವಿವರಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ದಾವಣಗೆರೆ ಜಿಲ್ಲೆಯ ಚಾರಿತ್ರಿಕ, ಔದ್ಯಮಿಕ, ಸಾಂಸ್ಕೃತಿಕ ಪರಿಸರದ ಕುರಿತು ವಿವರಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಜನಪದ ಕಲೆಯ ಸ್ವರೂಪ, ಲಕ್ಷಣಗಳ ಕುರಿತು ಇವುಗಳಿಗೆ ಸಂಬಂಧಪಟ್ಟಂತೆ ಹಲವಾರು ವಿವರಣೆಗಳೊಂದಿಗೆ ಜನಪದ ಕಲೆಯಲ್ಲಿ ಬರುವಂತಹ ಹಚ್ಚೆ, ರಂಗೋಲಿ, ಮೆಹಂದಿ ಮುಂತಾದ ಪ್ರಕಾರಗಳನ್ನು ಚರ್ಚಿಸಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಸೌಂದರ್ಯಪ್ರಜ್ಞೆಯನ್ನು ಬೆಳೆಸಿಕೊಳ್ಳುವುದರಲ್ಲಿ ಕಲೆಯ ಪಾತ್ರ ತುಂಬಾ ಹಿರಿದಾಗಿದೆ. ಅದರಂತೆ ದಾವಣಗೆರೆ ಜಿಲ್ಲೆಯಲ್ಲಿನ ಕಲಾಶಾಲೆಯ ಹಲವಾರು ವಿದ್ಯಾರ್ಥಿಗಳಿಗೆ ಕಲೆಯಲ್ಲಿ ತರಬೇತಿಯನ್ನು ಕೊಡುತ್ತಾ ಅವರ ಪ್ರತಿಭೆ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಷ್ಟರ ಮಟ್ಟಿಗೆ ಈ ಸಂಸ್ಥೆ ವರ್ಣಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್‌ಕಲೆ, ಅನ್ವಯಿಕ ಕಲೆ ವಿಭಾಗಗಳಲ್ಲಿ ತರಬೇತಿಯನ್ನು ಕೊಡುತ್ತಿದ್ದು, ಆಯಾ ವಿಭಾಗಗಳಲ್ಲಿ ಹಲವಾರು ಕಲಾಕೃತಿಗಳನ್ನು ರಚಿಸುವ ಕಾರ್ಯವನ್ನು ಮಾಡುತ್ತಿದೆ. ಅಲ್ಲದೇ ಕಲಾಶಾಲೆಯ, ಸಂಸ್ಥೆಯ ವಿಶೇಷ ಕಾರ್ಯಗಳನ್ನು ಅಧ್ಯಯನ ಮಾಡಲಾಗಿದೆ.

ಐದನೆಯ ಅಧ್ಯಾಯದಲ್ಲಿ ದಾವಣಗೆರೆ ಜಿಲ್ಲೆಯಲ್ಲಿ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳೆದ ಹಲವಾರು ಚಿತ್ರಕಲಾವಿದರಿದ್ದಾರೆ. ಅವರು ತಮ್ಮ ಚಿತ್ರಕಲಾಕೃತಿಗಳ ಮೂಲಕ ದೇಶ ವಿದೇಶಗಳಲ್ಲಿ ಪ್ರಖ್ಯಾತವಾಗಿರುತ್ತಾರೆ. ಇವರು ಕೌಶಲ್ಯಗಳನ್ನು, ತಂತ್ರ ಹಾಗೂ ಶೈಲಿಗಳನ್ನು ಅಳವಡಿಸಿಕೊಂಡಿದ್ದನ್ನು ಮತ್ತು ಹಲವಾರು ಸಾಧನೆಗಳನ್ನು ಕುರಿತು ವಿವರಣೆಯನ್ನು ಇಲ್ಲಿ ನೀಡಲಾಗಿದೆ. ಇನ್ನು ಕೊನೆಯ ಅಧ್ಯಾಯ ಆರನೆಯದು ಸಮಾರೋಪವಾಗಿದ್ದು, ಇಲ್ಲಿ ಮೇಲಿನ ಐದು ಅಧ್ಯಾಯಗಳ ಒಟ್ಟು ಫಲಿತಗಳನ್ನು ಹೇಳಲಾಗಿದೆ.

ಇಲ್ಲಿ ಜನಪದ ಚಿತ್ರಕಲೆ ಸಾಕಷ್ಟು ವೈವಿಧ್ಯದಿಂದ ಬೆಳೆದುಬಂದಿದೆ. ಇಲ್ಲಿ ತೊಗಲುಗೊಂಬೆ, ಸೂತ್ರದ ಚಿತ್ರಕಲಾ ಪ್ರದರ್ಶನದ ಕಲಾವಿದರ ಕಲಾಕೊಡುಗೆ ಈ ಜಿಲ್ಲೆಯಲ್ಲಿ ಇನ್ನೂ ಇದೆ.

೫೪. ಸಂತೋಷಕುಮಾರ ಕುಲಕರ್ಣಿ : ದಾವಣಗೆರೆ ಜಿಲ್ಲೆಯ ಚಿತ್ರಕಲೆ, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೦೮

ಆದರೆ ಸಿನಿಮಾಮಾಧ್ಯಮದಿಂದ ಸೊರಗುತ್ತಿದೆ. ಈ ಜಿಲ್ಲೆಯಲ್ಲಿ ರಾಜ್ಯ, ರಾಷ್ಟ್ರಮಟ್ಟದ ಕಲಾಸಾಧನೆ ಮಾಡಿದ ಕಲಾವಿದರಿದ್ದು, ಅನೇಕ ಪ್ರಶಸ್ತಿ, ಪುರಸ್ಕಾರ ಇವರಿಗೆ ಸಂದಿವೆ. ಅಂದಿನ ಕುವೆಂಪು ವಿಶ್ವವಿದ್ಯಾಲಯ, ಲಲಿತಕಲಾ ಕಾಲೇಜು ಮೊದಲ ತಾಂತ್ರಿಕ ಶಿಕ್ಷಣ ಸಂಸ್ಥೆಯಡಿಯಲ್ಲಿತ್ತು. ಈಗ ಅದು ವಿ.ವಿ.ಯ ಆಡಳಿತದಲ್ಲಿ ಉನ್ನತ ಶಿಕ್ಷಣ ನೀಡುವ ಸಂಸ್ಥೆಯಾಗಿದೆ. ಇಲ್ಲಿ ಪದವಿ, ಸ್ನಾತಕೋತ್ತರ ಪದವಿಯನ್ನು ವಿದ್ಯಾರ್ಥಿಗಳು ಪಡೆಯುತ್ತಿದ್ದಾರೆ.

ರಾಜ್ಯ, ರಾಷ್ಟ್ರಮಟ್ಟದ ಕಲಾಪ್ರದರ್ಶನಗಳು, ವಿಚಾರ ಸಂಕಿರಣ, ಕಲಾಕಮ್ಮಟಗಳು, ಪ್ರಾತ್ಯಕ್ಷಿಕೆಗಳು ಪ್ರತಿವರ್ಷ ಇಲ್ಲಿ ನಡೆಯುತ್ತಿವೆ. ಇಲ್ಲಿ ಶಿಕ್ಷಣ ಪಡೆದ ಅನೇಕ ವಿದ್ಯಾರ್ಥಿಗಳು ದೇಶ-ವಿದೇಶಗಳಲ್ಲಿ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ರಾಜ್ಯ, ರಾಷ್ಟ್ರದ ಹಿರಿಯ ಕಲಾವಿದರ ಅನೇಕ ಅಮೂಲ್ಯವಾದ ಕಲಾಕೃತಿಗಳ ಸಂಗ್ರಹಗಳು ಇಲ್ಲಿವೆ. ಜನಪದ ಚಿತ್ರಕಲೆ ಇಲ್ಲಿ ಅತ್ಯಂತ ಶ್ರೀಮಂತವಾಗಿ ಬೆಳೆದಿದೆ. ಅನೇಕ ಕಲಾವಿದರು ಕಲಾಸಾಹಿತ್ಯ ಕೃಷಿಯಲ್ಲಿ, ವಿಮರ್ಶೆಯಲ್ಲಿ ಸಾಕಷ್ಟು ರಾಜ್ಯ, ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದ್ದಾರೆ. ಈ ಎಲ್ಲಾ ಅಂಶಗಳು ಅಧ್ಯಯನದ ಫಲಿತವಾಗಿದೆ.

೮. ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ

ಡಾ. ಎಸ್. ಸಿ. ಪಾಟೀಲ ಅವರ ಮಾರ್ಗದರ್ಶನದಲ್ಲಿ ಕೃಷ್ಣವೇಣಿಯವರು ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ ಎಂಬ ವಿಷಯ ಕುರಿತು ಎಂ.ಫಿಲ್ ಅಧ್ಯಯನ ಮಾಡಿದ್ದಾರೆ.[೫೫] ನಾಡಿನ ಸಂಸ್ಕೃತಿಯ ಅಧ್ಯಯನದಲ್ಲಿ ಪ್ರಾಗೈತಿಹಾಸಿಕ ಚಿತ್ರಗಳ ಪಾತ್ರ ಮಹತ್ವದ್ದಾಗಿದೆ. ಈ ಒಂದು ಕಲಾಪ್ರಕಾರ ಇಂದಿನವರೆಗೆ ಉಳಿದು ಬಂದಿರುವುದು ನಿಜವಾಗಿಯೂ ಸಂತಸದ ವಿಷಯವಾಗಿದೆ.

ಕಲೆ ಎನ್ನುವುದು ನಿಂತ ನೀರಲ್ಲ, ಇತ್ತೀಚಿನ ಕಲಾಪ್ರಕಾರಗಳಲ್ಲಿ ಹಲವು ಪ್ರಯೋಗಗಳು ಇರುವಂತೆ, ಪ್ರಾಗೈತಿಹಾಸಿಕ ಚಿತ್ರಕಲೆಯ ರಚನಾ ವಿಧಾನ, ತಂತ್ರಗಾರಿಕೆ, ಶೈಲಿ, ಪರಿಸರ, ವಸ್ತುವಿಷಯ ಮುಂತಾದ ಹಲವು ಆಯಾಮಗಳಲ್ಲಿ ಅಂದಿನ ಪ್ರಯೋಗ ತನ್ನದೇಯಾದ ವಿಶಿಷ್ಟವಾದ ಮಹತ್ವವನ್ನು ಪಡೆದುಕೊಂಡ ಕುರಿತು ಇಂತಹ ಚಿತ್ರಗಳು ಚಾರಿತ್ರಿಕವಾಗಿ ಸಂಶೋಧಕರಿಗೆ ಮತ್ತು ದೃಶ್ಯಕಲಾ ಅಧ್ಯಯನಕಾರರಿಗೆ ಐತಿಹಾಸಿಕ ದಾಖಲೆಗಳಾಗಿವೆ. ಈ ಕಿರುಪ್ರಬಂಧದಲ್ಲಿ ಒಟ್ಟು ಆರು ಅಧ್ಯಾಯಗಳಲ್ಲಿ ಈ ಜಿಲ್ಲೆಯ ಚಿತ್ರಕಲೆ ಕುರಿತು ವಿವರಿಸಲಾಗಿದೆ. ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ ಕುರಿತಂತೆ ವಿವರಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಪರಿಸರ ಮತ್ತು ಲಲಿತಕಲೆಗಳ ಬಗೆಗೆ ಹೇಳಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಪ್ರಾಗೈತಿಹಾಸಿಕ ಚಿತ್ರಕಲೆಯ ಐತಿಹಾಸಿಕ ಹಿನ್ನೆಲೆಯನ್ನು ದೇಶ-ವಿದೇಶ, ರಾಜ್ಯ ಸಂಶೋಧನೆಯ ಐತಿಹಾಸಿಕ ಹಿನ್ನೆಲೆಯನ್ನು ಕುರಿತಂತೆ ಚರ್ಚಿಸಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಪ್ರಾಗಿತಿಹಾಸದ ನೆಲೆಗಳ

೫೫. ಕೃಷ್ಣವೇಣಿ : ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೦೮

ವರ್ಗೀಕರಣವನ್ನು ವಸ್ತುವಿಷಯದ ಬಗೆಗೆ ಹೇಳಲಾಗಿದೆ. ಐದನೆಯ ಅಧ್ಯಾಯದಲ್ಲಿ ಶೈಲಿಯ ವಿಶಿಷ್ಟತೆ, ವಿನ್ಯಾಸ ಅಪರೂಪವಾಗಿದ್ದು, ಬಣ್ಣ, ಭಿತ್ತಿ ಕುಂಚ, ಅಂಚು, ಮಾಧ್ಯಮ, ಲೇಪನ, ವಿಧಿ–ವಿಧಾನಗಳನ್ನು ಹೇಳಲಾಗಿದೆ. ಆರನೆಯ ಅಧ್ಯಾಯದಲ್ಲಿ ಒಟ್ಟು ಅಧ್ಯಯನದ ಫಲಿತವನ್ನು ಒಳಗೊಂಡಿದೆ.

ಈ ಚಿತ್ರಕಲೆ ಹಲವು ವೈಶಿಷ್ಟ್ಯಗಳಿಂದ ಕೂಡಿದ್ದು, ನಾಡಿನ ಕಲಾ ಇತಿಹಾಸದಲ್ಲಿ ತನ್ನದೇ ಆದ ಒಂದು ಪ್ರತ್ಯೇಕ ಛಾಪನ್ನು ಮೂಡಿಸಿದೆ. ಈ ಪ್ರಾಗಿತಿಹಾಸದ ಚಿತ್ರಗಳು ಎದ್ದು ಕಾಣುವುದು ಶಕ್ತಿಯುತವಾದ ರೇಖೆಗಳಾಗಿದ್ದು, ಪ್ರಥಮ ಯುಗದ ಕಲಾವಿದನ ಕೌಶಲ್ಯದೊಂದಿಗೆ ಈ ಕಲಾಕೃತಿಗಳು ಪರಿಚಯಿಸುತ್ತವೆ. ಈ ಪ್ರಾಗಿತಿಹಾಸದ ಚಿತ್ರಗಳು ಅಂದಿನ ಜನಜೀವನದ ಉಪಯೋಗಿಕ ಪರಿಸರ ಜೊತೆಗಿನ ಸಂಬಂಧ ಹೊಂದಿದಂತವುಗಳಲ್ಲದೇ ಪ್ರಥಮತಃ ಚಿತ್ರ ಪ್ರತ್ಯಕ್ಷವಾಗಿ ನೆಲೆಗಳಾಗಿವೆ. ನಂತರ ಪ್ರಾಗ್ಯೈತಿಹಾಸಿಕ ಚಿತ್ರಕಲೆ ಜನಪದ ಚಿತ್ರಕಲೆಯ ಮೂಲವಾದ ಬುನಾದಿಯಾಗಿದೆ. ಈ ಅಧ್ಯಯನದಲ್ಲಿ ಚಿತ್ರಗಳು ಪ್ರಧಾನವಾಗಿ ವೃತ್ತಿಯ (ಆಹಾರ) ಹಿನ್ನೆಲೆಯುಳ್ಳದ್ದಾಗಿದ್ದು, ನಂತರ ಸೌಂದರ್ಯ, ಧಾರ್ಮಿಕವಾಗಿತ್ತು ಎಂದು ಹೇಳಬಹುದು.

ಒಬ್ಬ ಕಲಾವಿದನು ತನ್ನ ಕಾಲದ ವಿಶಿಷ್ಟ ಜೀವಧ್ವನಿಗೆ ಸ್ಪಂದಿಸಿ ಅಭಿವ್ಯಕ್ತಿಸುವ ಮೂಲಕ ಆ ಕಾಲದ ಆಗುಹೋಗುಗಳನ್ನು, ಜನರ ಮನೋಭಾವಗಳನ್ನು ದಾಖಲಿಸುವ ಸಾಧ್ಯತೆಗಳಿರುವುದರಿಂದ ಸಮಕಾಲೀನ ದಾಖಲೆಗಳಾಗಿ ಇತಿಹಾಸ ರಚಿಸುವಲ್ಲಿ ಈ ಕೃತಿಗಳು ಹೆಚ್ಚಿನ ಸಹಾಯವನ್ನು ಒದಗಿಸುವ ಸಾಧ್ಯತೆಯನ್ನು ಇಲ್ಲಿ ಮನಗಾಣಲಾಗಿದೆ. ಈ ಕಲಾಸಂಪತ್ತನ್ನು ಮುಂದಿನ ಜನಾಂಗಕ್ಕೆ ಉಳಿಸಿ ಹೆಚ್ಚು ದಿನಗಳವರೆಗೆ ಬದುಕಿಸುವಂತೆ ಮಾಡುವುದು ಇಂದು ಪ್ರಮುಖವಾದ ಕಾರ್ಯ ಎನ್ನುವುದು ಮುಖ್ಯವಾದುದಾಗಿದೆ. ಮತ್ತು ಈ ಚಿತ್ರದ ನೆಲೆ ಪ್ರಾಗ್ಯೈತಿಹಾಸಿಕ ಮಾನವ ನೆಲೆಯಾಗಿದ್ದು, ಇಲ್ಲಿಯ ಪರಿಸರ ಆ ಕಾಲದ ಮಾನವನ ನೆಲೆಗೆ ಎಲ್ಲ ರೀತಿಯಲ್ಲಿ ಪೂರಕವಾಗಿದ್ದು, ನದಿ, ನೀರು, ಆಹಾರ, ಆಶ್ರಯಕ್ಕಾಗಿ ನೈಸರ್ಗಿಕ ಕಲ್ಲಿನ ಗುಹೆಗಳಲ್ಲಿ ಬೇಟೆಗಾಗಿ ಪ್ರಾಣಿಗಳನ್ನು ಚಿತ್ರಿಸುತ್ತಿದ್ದರು. ಹೀಗೆ ಮುಂತಾದ ಸಾಧ್ಯತೆಯ ನಿರ್ಧಾರಿತ ಅಂಶಗಳು ಈ ಅಧ್ಯಯನದ ಫಲಿತಗಳಾಗಿವೆ.

೯. ನಿಪ್ಪಾಣಿವಾಡೆಯ ಭಿತ್ತಿಚಿತ್ರಕಲೆ

ಬಿ.ಎಂ. ಪಾಟೀಲರು ನಿಪ್ಪಾಣಿವಾಡೆಯ ಭಿತ್ತಿಚಿತ್ರಕಲೆ ಎಂಬ ವಿಷಯವಾಗಿ ಎಂ.ಫಿಲ್ ಅಧ್ಯಯನ ಮಾಡಿದ್ದಾರೆ.[೫೬] ಕಲೆ ಸುಸಂಸ್ಕೃತ ಜೀವನದ ಪ್ರತಿಬಿಂಬ, ನಾಗರಿಕ ಜೀವನದ ಪ್ರತಿನಿಧಿ. ಒಂದು ದೇಶದ. ನಾಡಿನ ಸಾಂಸ್ಕೃತಿಕ ಇತಿಹಾಸ ರಚಿಸುವಲ್ಲಿ ನಿಪ್ಪಾಣಿ ವಾಡೆ ಭಿತ್ತಿಚಿತ್ರಗಳು ಮಹತ್ವದ್ದಾಗುತ್ತವೆ. ಅವು ನಾಡಿನ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದು ತಿಳಿದುಬರುತ್ತದೆ. ಕರ್ನಾಟಕದ ಇತಿಹಾಸದಲ್ಲಿ ದೀರ್ಘಕಾಲದ

೫೬. ಬಿ. ಎಂ ಪಾಟೀಲ : ನಿಪ್ಪಾಣಿವಾಡೆಯ ಭಿತ್ತಿಚಿತ್ರಕಲೆ, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೦೭

ನಂತರದಲ್ಲಿ ಹೊಸ ಪರಂಪರೆಯೊಂದಿಗೆ ನಿಪ್ಪಾಣಿವಾಡೆ ಭಿತ್ತಿಚಿತ್ರಗಳು ನಾಡಿನ ಕಲಾಸಂಪತ್ತಿಗೆ ತನ್ನದೇಯಾದ ವಿಶಿಷ್ಟ ಲಕ್ಷಣಗಳೊಂದಿಗೆ ಚಿತ್ರಕಲೆಯ ಪುನಾರಂಭಕ್ಕೆ ನಾಂದಿಯನ್ನು ಹಾಡಿವೆ.

ಒಟ್ಟು ಆರು ಅಧ್ಯಾಯಗಳನ್ನು ಮಾಡಿಕೊಂಡು ಅಧ್ಯಯನ ನಡೆಸಲಾಗಿದೆ. ಮೊದಲನೆಯ ಅಧ್ಯಾಯವು ಅಧ್ಯಯನ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ಅಧ್ಯಯನಕ್ಕೆ ಬಳಸಿದ ವಿಧಿ-ವಿಧಾನಗಳನ್ನು ಹೊಂದಿದೆ. ಎರಡನೆಯ ಅಧ್ಯಾಯದಲ್ಲಿ ನಿಪ್ಪಾಣಿ ಸಂಸ್ಥಾನ ಮತ್ತು ಸಾಂಸ್ಕೃತಿಕ ಪರಿಸರ ಕುರಿತು ಹೇಳಲಾಗಿದ್ದು, ಪ್ರಮುಖ ಸರ್ದಾರರು ಸಾಂಸ್ಕೃತಿಕ ಕ್ಷೇತ್ರಕ್ಕೆ ಕೊಟ್ಟಂತಹ ಕೊಡುಗೆಗಳನ್ನು ಸ್ಥೂಲವಾಗಿ ಹೇಳಿ, ಅಲ್ಲಿನ ಸಾಂಸ್ಕೃತಿಕ ಪರಿಸರ ಚಿತ್ರಕಲೆಗೆ ಪೂರಕವಾದ ವಾತಾವರಣ ನಿರ್ಮಾಣ ಮಾಡಿತ್ತು ಎಂಬುದನ್ನು ಕಂಡುಕೊಳ್ಳಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಭಿತ್ತಿಚಿತ್ರಗಳ ಸಿದ್ಧತೆ ಮತ್ತು ರಚನಾ ವಿಧಾನಗಳ ಕುರಿತು ಚರ್ಚಿಸಲಾಗಿದೆ. ಪ್ರಸ್ತುತ ಚಿತ್ರಗಳು ಮಣ್ಣಿನ ಗಾರೆಗೋಡೆಯ ಮೇಲೆ ರಚಿಸಲಾಗಿದ್ದು, ಭಿತ್ತಿಯನ್ನು ಸಿದ್ಧಗೊಳಿಸುವ ಕ್ರಮ, ನಂತರ ಚಿತ್ರ ರಚಿಸುವ ವಿಧಾನ, ಚಿತ್ರಪರಿಕರಗಳನ್ನು, ಭಿತ್ತಿಚಿತ್ರಗಳಿರುವ ಕಾಲಮಾನದಲ್ಲಿ ರಚಿತಗೊಂಡ ಭಿತ್ತಿಚಿತ್ರ, ರಚನಾವಿಧಾನ, ಹೋಲಿಕೆಗಳನ್ನು ವಿವೇಚಿಸಲಾಗಿದ್ದು, ಅಲ್ಲದೇ ಪ್ರಾಚೀನ ಗ್ರಂಥಗಳಲ್ಲಿನ ಉಲ್ಲೇಖಗಳನ್ನು ಅನುಸರಿಸಿ ಭಿತ್ತಿಚಿತ್ರಗಳನ್ನು ರಚಿಸಿರುವ ವಿಧಿ-ವಿಧಾನಗಳನ್ನು ಇಲ್ಲಿ ಚರ್ಚಿಸಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಮುಖ್ಯವಾದ ಘಟ್ಟದ ಚಿತ್ರಗಳ ಶೈಲಿ, ತಂತ್ರ, ಪ್ರಭಾವಗಳು ವಿಶಿಷ್ಟವಾಗಿದ್ದು, ಪ್ರಮುಖವಾಗಿ ಪರಿಗಣಿಸಲಾಗಿದೆ. ಐದನೆಯ ಅಧ್ಯಾಯದಲ್ಲಿ ಭಿತ್ತಿಚಿತ್ರಗಳ ವಿಶಿಷ್ಟ ಶೈಲಿ, ವಿಷಯ ಸಂವಹನಗೊಳ್ಳಲು ಕಲಾವಿದ ಬಳಸಿರುವ ತಂತ್ರ, ಇದರ ಚಿತ್ರಗಳಿಂದ ಪರೋಕ್ಷ ಪ್ರಭಾವವನ್ನು ಚಿತ್ರಗಳಲ್ಲಿರುವ ಶಿಷ್ಟಪದ ಮತ್ತು ಜಾನಪದ ಅಂಶಗಳನ್ನು ಕುರಿತ ಸೃಜನಾತ್ಮಕತೆಯ ಹಿನ್ನೆಲೆಯಲ್ಲಿ ಗುರುತಿಸುವ ಕಾರ್ಯವನ್ನು ಮಾಡಲಾಗಿದೆ.

ಆರನೆಯ ಅಧ್ಯಾಯದಲ್ಲಿ ಭಿತ್ತಿಚಿತ್ರಕಲಾ ಸಂಪತ್ತಿಗೆ ಒದಗಿರುವ ಆಪತ್ತುಗಳು, ಈ ಚಿತ್ರಗಳ ಕುರಿತ ರಕ್ಷಣೆಯ ಕ್ರಮ ಕುರಿತು ಹೇಳಲಾಗಿದೆ. ಈ ಭಿತ್ತಿಚಿತ್ರಗಳು ಹಲವು ವೈಶಿಷ್ಟ್ಯಗಳಿಂದ ಕೂಡಿದ್ದು, ನಾಡಿನ ಕಲಾಇತಿಹಾಸದಲ್ಲಿ ತನ್ನದೇಯಾದ ಒಂದು ಪ್ರತ್ಯೇಕ ಛಾಪನ್ನು ಮೂಡಿಸಿದ್ದು ಕಂಡುಬರುತ್ತದೆ. ಅಳಿದು ಹೋದ ಸಂಪ್ರದಾಯವನ್ನು ಉಳಿಸುವ ಮತ್ತು ಬೆಳೆಸುವ ಉದ್ದೇಶದಿಂದ ಕೂಡಿದೆ. ಇಲ್ಲಿಯ ಚಿತ್ರಗಳಲ್ಲಿ ಆಕಾರಗಳು, ಆಕೃತಿಗಳ ಲಕ್ಷಣಗಳು ಅಜಂತಾ ಭಿತ್ತಿಚಿತ್ರಗಳು ಮತ್ತು ರಜಪೂತ ಕಿರುರೂಪ ಚಿತ್ರಗಳನ್ನು ಪರಿಚಯಿಸುತ್ತವೆ. ಇಲ್ಲಿಯ ಚಿತ್ರಗಳು ಶಿಷ್ಟಪದ ಚಿತ್ರಗಗಳೇ ಆಗಿದ್ದು, ಜನಪದೀಯ ಅಂಶಗಳನ್ನು ಬಳಸಿಕೊಂಡು ಸ್ಥಳೀಯ ಪ್ರಭಾವಗಳು ಮತ್ತು ಭಾವನೆಗಳನ್ನು ಹೊರಹೊಮ್ಮಿಸುವ ಚಿತ್ರಗಳಾಗಿವೆ.

ದರ್ಬಾರ್ ಹಾಲ್‌ದಲ್ಲಿಯ ಭಿತ್ತಿಚಿತ್ರಗಳು ದೊಡ್ಡಮಾಡುಗಳು, ಚಿಕ್ಕಮಾಡುಗಳು, ಜಾಮಿತಿಯ ಆಕಾರಗಳಿಂದ ಕೂಡಿದ್ದು, ಅವುಗಳಿಗೆ ಚಿತ್ರಗಳಿಂದ ಅಲಂಕಾರಗೊಳಿಸಲಾಗಿದೆ. ಪ್ರಮುಖ ಮಾಡು ಒಂದರಲ್ಲಿಯೇ ಒಂದು ಸಂಯೋಜನೆಯಲ್ಲಿ ೨೦ ರಿಂದ ೩೬ ಜನರನ್ನು ವಿವಿಧ

[illegible]

ಭಂಗಿಗಳಲ್ಲಿ ಚಿತ್ರಿಸಿರುವುದು ಹಾಗೂ ಯಾವ ವ್ಯಕ್ತಿಯನ್ನು ಎಲ್ಲಿ ಚಿತ್ರಿಸಬೇಕು ಎಂಬ ಕಲಾವಿದನ ಜಾಣ್ಮೆಯನ್ನು ಮೆಚ್ಚಿಕೊಳ್ಳುವಂತಾಗಿದೆ.

ಮಹಿಳೆಯರ ಉಡುಗೆ ಮರಾಠ ಶೈಲಿಯ ಚಿತ್ರಗಳಂತೆ ಸೀರೆಯನ್ನು ಕಚ್ಚೆ ಹಾಕಿ ಧರಿಸುವುದು, ಚೂಡಿದಾರ, ಗಾಗ್ರ, ರವಿಕೆ, ಕುಪ್ಪಸಗಳನ್ನು ಬಳಸಿದ್ದು, ಈ ಚಿತ್ರಗಳಲ್ಲಿಯ ಉಡುಗೆಗಳು ರಜಪೂತ, ಮರಾಠಾ ಹಾಗೂ ದಖನ್ ಕಲೆಯ ಪ್ರಭಾವಗಳಿಂದ ರಚನೆಗೊಂಡಂತೆ ಕಂಡುಬರುತ್ತವೆ. ಮಹಿಳೆಯರ ಕೇಶಗಳಿಗೆ ಉದ್ದನೆಯ ಜಡೆಯನ್ನು ಹಾಕಿದ್ದು, ಕೆಲವು ಕಡೆ ತುರುಬು ಕಟ್ಟಿಕೊಳ್ಳಲಾಗಿದೆ. ಪುರುಷರು ಧೋತ್ರ ಉಟ್ಟುಕೊಂಡಿದ್ದು, ಕಚ್ಚೆಯನ್ನು ಹಾಕಿಕೊಂಡಿರುವುದು ಅಂಗಿ(ಶರ್ಟ್)ಯನ್ನು ತೊಟ್ಟಿರುವರು. ಇಲ್ಲಿಯ ಚಿತ್ರಗಳಲ್ಲಿ ಮಹಾರಾಜರ, ಸರ್ದಾರರ, ರಾಣಿಯರ ಗ್ರಾಮೀಣ ಜನರ, ಸಾಧು ಸಂತರ ವಿವಿಧ ಬಗೆಯ ಚಿತ್ರಗಳು ರಚನೆಗೊಂಡಿದ್ದು, ಒಂದೇ ತೆರನಾದ ಶೈಲಿ, ತಂತ್ರಗಳನ್ನು ಹೊಂದಿದ್ದರೂ ಕೂಡ ಕೆಲವು ಜನಪದ ಶೈಲಿಯ ಚಿತ್ರಗಳು ಕಂಡುಬರುತ್ತವೆ. ಇದು ಕಾಲದ ಮಿತಿಯ ಅಧ್ಯಯನವಾಗಿರುವುದರಿಂದ ಈ ಅಧ್ಯಯನವು ಒಂದು ಪಕ್ಷಿನೋಟದ ಚಿತ್ರಣವನ್ನು ಕೊಟ್ಟಿದೆ. ಸಮಯದ ಮಿತಿಯಲ್ಲಿ ಪ್ರಮುಖ ಅಂಶಗಳನ್ನು ಇಲ್ಲಿ ಚರ್ಚಿಸಲಾಗಿದೆ. ಇನ್ನೂ ಹೊಸ ಹೊಸ ಅಂಶಗಳನ್ನು ಅಧ್ಯಯನಕಾರರು ಹುಡುಕಲು ಇಲ್ಲಿ ಸಾಕಷ್ಟು ಅವಕಾಶವಿದೆ. ಮುಂಬರುವ ಅಧ್ಯಯನಕ್ಕೆ ಪ್ರಸ್ತುತ ಅಧ್ಯಯನ ಒಂದು ತೋರುದೀವಿಗೆಯಾಗುತ್ತದೆ ಎಂಬ ವಿಶ್ವಾಸವನ್ನು ಹೊಂದಲಾಗಿದೆ.

೭. ಚನ್ನಪಟ್ಟಣದ ಚಿತ್ತಾರದ ಗೊಂಬೆಗಳು

ಡಾ. ಎಸ್.ಸಿ. ಪಾಟೀಲ್ ಅವರ ಮಾರ್ಗದರ್ಶನದಲ್ಲಿ ಬಿ. ದಿನೇಶ ಅವರು ೨೦೧೦ರಲ್ಲಿ ಚನ್ನಪಟ್ಟಣದ ಚಿತ್ತಾರದ ಗೊಂಬೆಗಳು ಎಂಬ ವಿಷಯದಲ್ಲಿ ಎಂ.ಫಿಲ್ ಅಧ್ಯಯನವನ್ನು ಮಾಡಿದ್ದಾರೆ.[೫೭] ಸಾಮಾನ್ಯವಾಗಿ ಲಲಿತಕಲೆಗಳನ್ನು ಶುದ್ಧ ಕಲೆಯೆಂದು, ಕುಶಲಕಲೆಗಳನ್ನು ಪ್ರಯೋಜಕ ಕಲೆಗಳೆಂದು ಕರೆಯಲಾಗುತ್ತದೆ. ಮುಖ್ಯವಾಗಿ ಕಾವ್ಯ, ನೃತ್ಯ, ನಾಟಕ, ಸಾಹಿತ್ಯ, ಚಿತ್ರಕಲೆ ಮತ್ತು ವಾಸ್ತುಶಿಲ್ಪ ಈ ಏಳು ಕಲೆಗಳು ಲಲಿತಕಲೆಗಳೆಂದು ಕರೆಯಲ್ಪಟ್ಟರೆ ವೃತ್ತಿಪರವಾದ ಕಸುಬುಗಳನ್ನು ಬಿಂಬಿಸುವ ಕಮ್ಮಾರ, ಚಮ್ಮಾರ, ಅಕ್ಕಸಾಲಿಗ ಮುಂತಾದ ಕುಶಲಕರ್ಮಿಗಳಿಂದ ಸೃಷ್ಟಿಗೊಳ್ಳುವ ರಚನೆಗಳೆಲ್ಲವೂ ಕುಶಕಲೆಗಳೆಂದು ಪ್ರಸ್ತುತ ಅಧ್ಯಯನದಿಂದ ಕುಶಲಕಲೆ ವ್ಯಾಪ್ತಿಗೆ ಬರುತ್ತದೆ. ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮುಂತಾದ ಅಂಶಗಳ ಕುರಿತಾದ ವಿವರಣೆ ಇದೆ. ಚನ್ನಪಟ್ಟಣದ ಸಾಂಸ್ಕೃತಿಕ ಪರಿಸರ ಮತ್ತು ಕಲಾ ಹಿನ್ನೆಲೆ, ಚನ್ನಪಟ್ಟಣದ ಪ್ರದೇಶದಲ್ಲಿನ ಕಲೆಯನ್ನು ಮೈಸೂರಿನ ಒಡೆಯರು, ಹೈದರಾಲಿ ಮತ್ತು ಟಿಪ್ಪು ಯಾವ ರೀತಿ ಪೋತ್ಸಾಹ ನೀಡಿದರು, ಅಲ್ಲದೇ ಇದರ ಮುಂದುವರೆದ ಭಾಗವಾಗಿ ಬ್ರಿಟಿಷರು ಇಲ್ಲಿನ ಕಲೆಯನ್ನು ವಿವಿಧ ಆಯಾಮಗಳ ಮೂಲಕ ಪ್ರೇರಣೆ ನೀಡಿದ ಸನ್ನಿವೇಶವನ್ನು

೫೭. ಬಿ. ದಿನೇಶ : ಚಿನ್ನಪಟ್ಟಣದ ಚಿತ್ತಾರದ ಗೊಂಬೆಗಳು, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೧೦

ಕುರಿತು ಎರಡನೆಯ ಅಧ್ಯಾಯದಲ್ಲಿ ವಿವರಿಸಲು ಪ್ರಯತ್ನಿಸಲಾಗಿದೆ. ಚನ್ನಪಟ್ಟಣದ ಚಿತ್ತಾರದ ಗೊಂಬೆಗಳ ಹಿನ್ನೆಲೆ, ತಯಾರಿಕೆ ಹಾಗೂ ಪ್ರಸ್ತುತ ತಯಾರಿಕೆಗೆ ಹಲವಾರು ರೀತಿಯ ಪರಿಕರಗಳ ಕುರಿತು, ಹಾಗೆಯೇ ಪ್ರಾಚೀನ ಕಾಲದಲ್ಲಿ ಒಂದು ರೀತಿಯ ಪರಿಕರಗಳು ಬೇಕಾಗುತ್ತಿದ್ದವು, ಇಂದಿನ ದಿನಗಳಲ್ಲಿ ಮತ್ತೊಂದು ಬಗೆಯ ಯಂತ್ರೋಪಕರಣಗಳು ಮತ್ತು ಪರಿಕರಗಳ ಕುರಿತು ಮೂರನೆಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಚನ್ನಪಟ್ಟಣದ ಚಿತ್ತಾರದ ಗೊಂಬೆಗಳ ವಸ್ತು, ವೈವಿಧ್ಯವು ಅಪಾರವಾಗಿದ್ದು, ಇಲ್ಲಿ ಮಹಿಳೆ ಮತ್ತು ಪುರುಷರ ಗೊಂಬೆಗಳು, ಪ್ರಾಣಿ, ಪಕ್ಷಿಗಳ ಗೊಂಬೆಗಳು, ಅಲಂಕಾರಿಕ ವಸ್ತುಗಳು, ಮಕ್ಕಳ ಆಟಿಕೆಯ ಸಾಮಾನುಗಳು, ಮನೆಯ ಅಲಂಕಾರಿಕ ಪರಿಕರಗಳು ಹೀಗೆ ವಿವಿಧ ರೀತಿಯಲ್ಲಿದ್ದು ಅವುಗಳನ್ನು ವಿಷಯಾನುಸಾರ ವಿಂಗಡಿಸಿಕೊಂಡು ನಾಲ್ಕನೆಯ ಅಧ್ಯಾಯದಲ್ಲಿ ಅಧ್ಯಯನಕ್ಕೆ ಒಳಪಡಿಸುವ ಕಾರ್ಯ ಮಾಡಲಾಗಿದೆ.

ಅಧ್ಯಾಯ ಐದರಲ್ಲಿ ಈ ಪ್ರದೇಶದ ಗ್ರಾಮೀಣ ಭಾಗದಲ್ಲಿ ಪಾರಂಪರಿಕವಾಗಿ ಇದೇ ವೃತ್ತಿಯನ್ನು ಮಾಡಿಕೊಂಡು ಬಂದ ಕುಟುಂಬಗಳಿದ್ದು, ಇವರ ಆರ್ಥಿಕ ಹಿನ್ನೆಲೆ, ಕಲಾಪರಂಪರೆ, ಗೊಂಬೆಗಳ ತಯಾರಿಕೆಯ ವಿಧಿ-ವಿಧಾನಗಳನ್ನು ವಿವರಿಸಲಾಗಿದೆ. ಅಲ್ಲದೇ ಇಲ್ಲಿನ ಪ್ರತಿಯೊಬ್ಬ ಕಲಾವಿದರು ಇಂತಹ ಗೊಂಬೆಗಳನ್ನು ತಯಾರಿಸುವಲ್ಲಿ ಪ್ರಸಿದ್ಧಿ ಪಡೆದಿದ್ದಾರೆ ಎಂಬುದನ್ನು ಹೇಳಲಾಗಿದೆ. ಈ ಗೊಂಬೆಗಳ ಮಾರಾಟ ವ್ಯವಸ್ಥೆಯನ್ನು ಪ್ರಾಚೀನ ಕಾಲಕ್ಕೂ ಹಾಗೂ ಇಂದಿನ ಕಾಲಮಾನಕ್ಕೂ ತೌಲನಿಕವಾಗಿ ಬಿಂಬಿಸುವ ಮೂಲಕ ಸದ್ಯದ ಸ್ಥಿತಿಗತಿಗಳನ್ನು ಇಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ. ಇನ್ನು ಆರನೆಯ ಅಧ್ಯಾಯವು ಸಮಾರೋಪವಾಗಿದ್ದು, ಇಲ್ಲಿ ಒಟ್ಟು ಅಧ್ಯಯನದ ಸಮೀಕ್ಷಾ ಕಾರ್ಯ ಮತ್ತು ಫಲಿತಗಳನ್ನು ಒಳಪಡಿಸಲಾಗಿದೆ.

ಪರಂಪರೆಯಿಂದ ಪರಂಪರೆಗೆ ಬಂದ ಇಂತಹ ಕಲೆಗಳು ನಮ್ಮ ದೇಶದ ಮೂಲ ಸಂಸ್ಕೃತಿಯನ್ನು ತಿಳಿಸುವುದರಿಂದ ಸರಿಯಾದ ರೀತಿಯಲ್ಲಿ ಉಳಿದು, ಬೆಳೆದುಕೊಂಡು ಮುಂದಿನ ತಲೆಮಾರಿಗೂ ರವಾನಿಸುವ ಜವಾಬ್ದಾರಿ ಪ್ರತಿಯೊಬ್ಬ ಪ್ರಜ್ಞಾವಂತನದ್ದಾಗಿರುತ್ತದೆ. ಈ ಕಲೆಗಳನ್ನು ರಚಿಸುವ ಕಲಾಕಾರರ ಆರ್ಥಿಕ ಮಟ್ಟ ಸುಧಾರಿಸಿದರೆ, ಜೊತೆಗೆ ಕಲೆಗಳಿಗೆ ಪ್ರೋತ್ಸಾಹವಿದ್ದರೆ ನಿಜಕ್ಕೂ ಈ ಕಲೆಗಳು ಇನ್ನೂ ಉಳಿಯುತ್ತವೆ.

೮. ಕರ್ನಾಟಕದ ಜಾಹಿರಾತುಗಳಲ್ಲಿ ಸಾಂಸ್ಕೃತಿಕ ನೆಲೆಗಳು

(ವಿಶೇಷವಾಗಿ ಮುದ್ರಣ ಜಾಹಿರಾತುಗಳನ್ನು ಅನುಲಕ್ಷಿಸಿ)

ಜೈರಾಜವಾದಿ ಬಾಳಪ್ಪ ಅವರು ಎಂ.ಫಿಲ್ ಪದವಿಗಾಗಿ ಪ್ರೊ. ಎಲ್.ಕೆ. ಹನುಮಂತಾಚಾರ್ ಅವರ ಮಾರ್ಗದರ್ಶನದಲ್ಲಿ ಕರ್ನಾಟಕದ ಜಾಹಿರಾತುಗಳಲ್ಲಿ ಸಾಂಸ್ಕೃತಿಕ ನೆಲೆಗಳು ವಿಶೇಷವಾಗಿ ಮುದ್ರಣ ಜಾಹಿರಾತುಗಳನ್ನು ಅನುಲಕ್ಷಿಸಿ ಎಂಬ ಸಂಪ್ರಬಂಧವನ್ನು ೨೦೦೮ರಲ್ಲಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಸಲ್ಲಿಸಿದ್ದಾರೆ.[೫೮] ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ

೫೮. ಜೈರಾಜವಾದಿ ಬಾಳಪ್ಪ : ಕರ್ನಾಟಕದ ಜಾಹಿರಾತುಗಳಲ್ಲಿ ಸಾಂಸ್ಕೃತಿಕ ನೆಲೆಗಳು, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೦೮

ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವೈಧಾನಿಕತೆ ಕುರಿತಾದ ವಿವರಣೆಯನ್ನು ನೀಡಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಜಾಹಿರಾತಿನ ಸ್ಥೂಲ ನೋಟವನ್ನು ಕಾಣಬಹುದು. ಇಂದಿನ ಕಾಲದಲ್ಲಿ ಜಾಹಿರಾತು ಸಾಮಾಜಿಕ ಅನಿವಾರ್ಯತೆ ಆಗಿದೆ. ಹಾಗೂ ಅದು ಇಲ್ಲದೆ ಯಾವುದೇ ವಸ್ತು, ವಿಷಯ ಮಾರುಕಟ್ಟೆಯಲ್ಲಿ ಮಾರಾಟವಾಗಲಾರದೇನೋ ಅನ್ನುವಷ್ಟರ ಮಟ್ಟಿಗೆ ಈಗ ಜಾಹಿರಾತು ಪ್ರಾಮುಖ್ಯವನ್ನು ಪಡೆದಿದೆ. ಈ ಹಿನ್ನೆಲೆಯಲ್ಲಿ ಅದರ ಪಾರಂಪರಿಕ ಮತ್ತು ಪ್ರಾಮುಖ್ಯ ತಿಳಿದುಕೊಳ್ಳಲಾಗಿದೆ. ಜಾಹಿರಾತು ಎಂದರೇನು? ಅದರ ಅರ್ಥ, ವ್ಯಾಖ್ಯಾನ ಮುಂತಾದವುಗಳನ್ನು ಈ ಅಧ್ಯಾಯದಲ್ಲಿ ತಿಳಿದುಕೊಳ್ಳಲಾಗಿದೆ. ಅಲ್ಲದೇ ಜಾಹಿರಾತು ಮತ್ತು ಸಂವಹನದ ಸಾಮ್ಯ, ವೈಷಮ್ಯ, ಮುದ್ರಣಮಾಧ್ಯಮ, ಜಾಹಿರಾತುಹಿನ್ನೆಲೆ, ಮುದ್ರಣ ಜಾಹಿರಾತು, ಪ್ರತಿ ವಿಧಿ–ವಿಧಾನಗಳನ್ನು (ರೂಪುರೇಷೆಗಳನ್ನು) ಕುರಿತು ವಿವರಿಸಲಾಗಿದೆ. ಹಾಗೆಯೇ ಕರ್ನಾಟಕದ ಸಾಂಸ್ಕೃತಿಕ ಪರಿಚಯವನ್ನು ಸಹ ಇಲ್ಲಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಮೂರರಲ್ಲಿ ಆಧುನಿಕ ಸಾಮಾಜಿಕ ಸಂದರ್ಭದಲ್ಲಿ ಜಾಹಿರಾತಿಗೆ ಬಹಳ ಪ್ರಾಮುಖ್ಯವಿದೆ. ಹಣ ಸಂಪಾದಿಸುವ ಆಸೆಯಲ್ಲಿ ಎಲ್ಲರೂ ಎಲ್ಲ ವಸ್ತುವಿಷಯಕ್ಕೆ ಪ್ರಚಾರವನ್ನೇ ಮೊರೆ ಹೋಗುತ್ತಿದ್ದಾರೆ. ಜಾಹಿರಾತಿನ ಸ್ಪರ್ಶಕ್ಕೆ ಸಿಗದೇ ಯಾವ ಒಂದು ಉತ್ಪನ್ನವು ತನ್ನ ಅಸ್ತಿತ್ವವನ್ನು ಮಾರುಕಟ್ಟೆಯಲ್ಲಿ ಉಳಿಸಿಕೊಳ್ಳುವುದು ಅಸಾಧ್ಯವೆನ್ನುವಷ್ಟರ ಮಟ್ಟಿಗೆ ಆಧುನಿಕ ಸಂದರ್ಭ ನಿರ್ಮಾಣಗೊಂಡಿದೆ. ಈ ಅಬ್ಬರದ ಪ್ರಚಾರದಲ್ಲಿ ನಮ್ಮ ಧಾರ್ಮಿಕ ನಂಬಿಕೆಗಳು, ಹಬ್ಬ–ಹರಿದಿನ, ಜಾತ್ರೆ, ಉತ್ಸವಗಳು, ಸಂಪ್ರದಾಯ ಸಂಸ್ಕೃತಿಗಳನ್ನು ಮುದ್ರಣ ಜಾಹಿರಾತುಗಳಲ್ಲಿ ಹೇಗೆ ಅಳವಡಿಸಿಕೊಂಡಿದ್ದಾರೆ ಎನ್ನುವುದನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಸುಂದರವಾದ ಸಮಾಜ ಕಟ್ಟುವಲ್ಲಿ ಜನಸಮೂಹಕ್ಕೆ ಉಪಯುಕ್ತವಾಗುವ ತಿಳಿವಳಿಕೆ, ವಿಚಾರಗಳನ್ನು ಕೊಡುವುದರ ಮೂಲಕ ಸಾಮಾಜಿಕ ಸೇವೆಯನ್ನು ಸಹ ಈ ಜಾಹಿರಾತುಗಳು ಮಾಡುತ್ತವೆ. ಹಾಗೂ ಸಮಾಜದ ಎಲ್ಲ ವರ್ಗಗಳ ಜನರ ಅಭಿವೃದ್ಧಿಗೆ ಇದರ ಕಾರ್ಯವು ಹೇಗೆ ಪರಿಣಾಮ ಬೀರುತ್ತಲಿದೆ, ಹಾಗೂ ಅಂಗವಿಕಲತೆ, ಹೆಣ್ಣುಭ್ರೂಣಹತ್ಯ, ಏಡ್ಸ್, ದೇವದಾಸಿ ಪದ್ಧತಿಯಂತಹ ಅನಿಷ್ಟ ಪದ್ಧತಿಗಳ ನಿರ್ಮೂಲನೆ ಮತ್ತು ಆರೋಗ್ಯದ ಅರಿವು ಮುಂತಾದ ಆರೋಗ್ಯಕರ ಸಮಾಜದ ನಿರ್ಮಾಣಕ್ಕೆ ಜಾಹಿರಾತು ಕಲೆಯು ಹೇಗೆ ಸೇವೆ ಸಲ್ಲಿಸುತ್ತಿದೆ ಎಂಬುದನ್ನು ಇಲ್ಲಿ ಶೋಧಿಸಿ ನೋಡಲಾಗಿದೆ. ಐದನೆಯ ಅಧ್ಯಾಯದಲ್ಲಿ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯು ಅತ್ಯಂತ ವೈವಿಧ್ಯಮಯದಿಂದ ಕೂಡಿದೆ. ಅದರಲ್ಲಿಯೂ ಇಲ್ಲಿನ ಕಲೆ, ಶಿಲ್ಪಕಲೆ, ವಾಸ್ತುಶಿಲ್ಪಗಳ ಇತಿಹಾಸದಲ್ಲಿ ವಿಶಿಷ್ಟ ಸ್ಥಾನವನ್ನು ಕುರಿತು ಸಾರ್ವಜನಿಕರಿಗೆ ಮತ್ತು ವಿದೇಶಿ ಪ್ರವಾಸಿಗರನ್ನು ಹೇಗೆ ಆಕರ್ಷಿಸುತ್ತಲಿವೆ ಮತ್ತು ಆ ಮೂಲಕ ಕರ್ನಾಟಕದ ಕಲಾವೈಭವ, ಗತವೈಭವಗಳನ್ನು ನೋಡಿ ಆನಂದಿಸಲು ಸಹಾಯಕವಾಗಿ ಜಾಹಿರಾತುಗಳು ಮಧ್ಯವರ್ತಿಯಾಗಿವೆ ಎಂದು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಪ್ರಪಂಚದ ಎಲ್ಲಾ ರಾಷ್ಟ್ರಗಳು ಸಾಕ್ಷರತೆಗೆ ಶಕ್ತಿ ಮೀರಿ ಶ್ರಮಿಸುತ್ತಲಿವೆ. ಮನುಷ್ಯನ ಪ್ರಥಮ ಅಗತ್ಯಗಳಲ್ಲಿ ಸಾಕ್ಷರತೆಯೂ ಒಂದಾಗಿದೆ. ಅಕ್ಷರಜ್ಞಾನಕ್ಕೆ ಗಮನ ಕೊಡುವ ಅಗತ್ಯತೆ ಹೆಚ್ಚಾಗಿದೆ. ಸಾಕ್ಷರತೆ ಇಲ್ಲ ಎಂದರೆ ಜೀವನ ವ್ಯರ್ಥ ಎನ್ನುವ ಕಟುಸತ್ಯ ಜನರಿಗೆ ಮನದಟ್ಟಾಗುತ್ತಿದೆ. ಈ ಕಾರ್ಯಕ್ಕಾಗಿ ನಮ್ಮ ದೇಶದಲ್ಲಿ ಮತ್ತು ರಾಜ್ಯದಲ್ಲಿ ಇತ್ತೀಚೆಗೆ ಸರಕಾರದ ಸಾಕ್ಷರತೆ ಯೋಜನೆಗಳು ಉದಾ: ಬಾ ಮರಳಿ ಶಾಲೆಗೆ, ಸರ್ವಶಿಕ್ಷಣ ಅಭಿಯಾನದಂತಹ ಶೈಕ್ಷಣಿಕ ಕಾರ್ಯಕ್ರಮ, ಪ್ರಕಟ ತ್ವರಿತ ಶೈಕ್ಷಣಿಕ ಅಂಶಗಳ ಜಾಹಿರಾತುಗಳು ಮತ್ತು ಸಮಾಜದ ಮೇಲಾದ ಪ್ರಭಾವ ಹಾಗೂ ಅವುಗಳ ಫಲಿತಾಂಶಗಳ ಬಗ್ಗೆ ವಿವರಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಆಧುನಿಕ ಜೀವನದಲ್ಲಿ ಜಾಹಿರಾತು ಎಲ್ಲ ರಂಗಗಳನ್ನು ಆವರಿಸಿದೆ. ಜಾಹಿರಾತು ಇಲ್ಲದೇ ಜೀವನ ನಡೆಸುವುದೇ ಸಾಧ್ಯವಿಲ್ಲವೇನೋ ಎಂಬಷ್ಟು ಅನಿವಾರ್ಯತೆ ಬಂದಿದೆ. ದೊಡ್ಡ ದೊಡ್ಡ ಯೋಜನೆಗಳು ಮಾಡಲಾಗದ ಕೆಲಸವನ್ನು ಪುಟ್ಟದೊಂದು ಜಾಹಿರಾತು ಮಾಡಬಲ್ಲದು. ಈ ಜಾಹಿರಾತು ಜನತಂತ್ರ ದೇಶಗಳ ರಾಷ್ಟ್ರೀಯ ಅರ್ಥವ್ಯವಸ್ಥೆಯ ಒಂದು ಭಾಗವೂ ಹೌದು. ಮತ್ತು ಜಾಹಿರಾತು ಇಂದು ಆಧುನಿಕ ಆರ್ಥಿಕ ಪ್ರಪಂಚದ ಜೀವಾಳವಾಗಿದೆ. ಹೀಗೆ ಸಾಮೂಹಿಕವಾಗಿ ಜಾಹಿರಾತುಗಳ ಮೂಲಕ ಅಭಿವೃದ್ಧಿಪರ ವಿಚಾರಗಳು ಹಾಗೂ ಸದವಕಾಶಗಳನ್ನು ಮೂಡಿಸಿ ಸಮಾಜದಲ್ಲಿ ಆರ್ಥಿಕ, ಔದ್ಯೋಗಿಕ, ಸಾಮಾಜಿಕ ಜೀವನ ಅಭಿವೃದ್ಧಿಯ ಕ್ರಾಂತಿಯನ್ನು ಮಾಡಲಾಗುತ್ತದೆ. ಸಾಂಸ್ಕೃತಿಕ ಮೌಲ್ಯಗಳನ್ನು ಎತ್ತಿ ಹಿಡಿಯುವಲ್ಲಿ ಜಾಹಿರಾತುಗಳು ಪೂರ್ಣ ಪ್ರಮಾಣದಲ್ಲಿ ಅಲ್ಲದೇ ಇದ್ದರೂ ಸ್ವಲ್ಪ ಪ್ರಮಾಣದಲ್ಲಿ ಹಾಗೂ ನೇರವಾಗಿಲ್ಲದಿದ್ದರೂ ಪರೋಕ್ಷವಾಗಿಯಾದರೂ ನೆರವಾಗುತ್ತಲಿವೆ ಎಂಬುದನ್ನು ಈ ಅಧ್ಯಯನದಿಂದ ತಿಳಿಯಲಾಗಿದೆ.

ಜಾಹಿರಾತುಗಳು ಗ್ರಾಹಕ/ಜನಸಮುದಾಯಕ್ಕೆ ಉಪಯುಕ್ತವಾಗುವ ತಿಳಿವಳಿಕೆ, ವಿಚಾರಗಳನ್ನು ಕೊಡುವ ಮೂಲಕ ಸಾಮಾಜಿಕ ಸೇವೆಯನ್ನು ಸಹ ಮಾಡುತ್ತಲಿವೆ. ಜಾಹಿರಾತುಗಳು ಸಾಮಾಜಿಕತೆ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಉಳಿಸಿ ಬೆಳೆಸುವ ಮಹೋನ್ನತ ಕಾರ್ಯದಲ್ಲಿಯೂ ತನ್ನನ್ನು ತಾನು ತೊಡಗಿಸಿಕೊಂಡಿದೆ. ಜಾಹಿರಾತನ್ನು ಸಾಮಾಜಿಕ ಪ್ರಕ್ರಿಯೆಗಳಲ್ಲೊಂದು ಎಂದು ಸಮಾಜ ಒಪ್ಪಿಕೊಳ್ಳುತ್ತಿದೆ. ಅದು ಸಾಮಾಜಿಕ ಅನಿವಾರ್ಯತೆಯಾಗಿದೆ. ಹೀಗಾಗಿ ಜಾಹಿರಾತು ಮತ್ತು ಜನಸಮುದಾಯ ಪರಸ್ಪರ ಪೂರಕ, ಪ್ರೇರಕವಾಗಿದೆ ಎಂದು ತಿಳಿದುಬರುತ್ತದೆ. ಜಾಹಿರಾತುಗಳು ತಮ್ಮ ಉತ್ಪನ್ನಗಳನ್ನು ಜನರಿಗೆ ತಲುಪುವ ರೀತಿಯಲ್ಲಿಯೇ ಒಂದು ಹೊಸತನಕ್ಕೆ ನಾಂದಿ ಹಾಕುತ್ತಲಿವೆ. ಸಮಾಜದಲ್ಲಿ ಏನಿದೆಯೋ ಅದನ್ನು ಮಾತ್ರ ತೋರಿಸುವುದಲ್ಲ, ಏನಾಗಬೇಕು ಎಂಬುದನ್ನು ಸಹ ಜಾಹಿರಾತುಗಳು ತೋರಿಸುತ್ತವೆ. ಸಮಾಜದ ಪುನರ್ ಸಂಘಟನೆಗೆ, ಐಕ್ಯಕ್ಕೆ ಮಾನವೀಯ ಮೌಲ್ಯಗಳನ್ನು ಜನರಲ್ಲಿ ಮೂಡಿಸಲು ಹಾಗೂ ಜಾಗೃತಗೊಳಿಸಲು ಜಾಹಿರಾತುಗಳು ಸಹಕಾರ ನೀಡುತ್ತಲಿವೆ.

೯. ಬೀದರ ಜಿಲ್ಲೆಯ ಚಿತ್ರಕಲೆ

ವೈಶಾಲಿ ಬಾಯಿ ಬಿ. ಕಾಂಬಳೆ ಅವರು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಬೀದರ ಜಿಲ್ಲೆಯ ಚಿತ್ರಕಲೆ ಎಂಬ ವಿಷಯ ಕುರಿತು ಸಲ್ಲಿಸಿದ್ದಾರೆ.[೫೯] ಈ ಅಧ್ಯಯನದ ವಿಷಯವು ಎಂಟು ಅಧ್ಯಾಯದಲ್ಲಿ ಹರಡಿದೆ. ಇದು ಒಟ್ಟಾರೆ ಬೀದರ ಜಿಲ್ಲೆಯ ಚಿತ್ರಕಲೆಯ ಸ್ಥೂಲವಾದ ಮಾಹಿತಿಯನ್ನು ಒಳಗೊಂಡಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ ಕುರಿತಂತೆ ಚರ್ಚಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಬೀದರ ಜಿಲ್ಲೆಯ ಐತಿಹಾಸಿಕ ಹಿನ್ನೆಲೆ ಮತ್ತು ಲಲಿತಕಲೆಗಳ ಕುರಿತಂತೆ ವಿವರಿಸಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಬೀದರ ಜಿಲ್ಲೆಯ ಜನಪದ ಚಿತ್ರಕಲೆಯ ಕುರಿತಂತೆ ವಿವರಿಸಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಈ ಜಿಲ್ಲೆಯ ಶಿಷ್ಟಪದ ಚಿತ್ರಕಲೆ ಕುರಿತಂತೆ ಚರ್ಚಿಸಲಾಗಿದೆ. ಐದನೆಯ ಅಧ್ಯಾಯದಲ್ಲಿ ಬೀದರ ಜಿಲ್ಲೆಯ ಸಂಕೀರ್ಣ ಚಿತ್ರಕಲೆಯ ಕುರಿತಂತೆ ವಿವರಿಸಲಾಗಿದೆ. ಆರನೆಯ ಅಧ್ಯಾಯದಲ್ಲಿ ಪ್ರಸ್ತುತ ಜಿಲ್ಲೆಯಲ್ಲಿನ ಚಿತ್ರಕಲಾ ಶಿಕ್ಷಣ ಸಂಸ್ಥೆಗಳು ಮತ್ತು ವಸ್ತುಸಂಗ್ರಹಾಲಯಗಳಲ್ಲಿನ ಚಿತ್ರಕಲಾಕೃತಿಗಳ ಕುರಿತು ವಿವರಿಸಲಾಗಿದೆ. ಏಳನೆಯ ಅಧ್ಯಾಯದಲ್ಲಿ ಈ ಜಿಲ್ಲೆಯಲ್ಲಿನ ಸಮಕಾಲೀನ ಕಲೆ, ಕಲಾವಿದರ ಸ್ಥಿತಿಗತಿಗಳನ್ನು ಕುರಿತು ಚರ್ಚಿಸಲಾಗಿದೆ.

ಇನ್ನು ಕೊನೆಯದಾದ ಎಂಟನೆಯ ಅಧ್ಯಾಯವು ಸಮಾರೋಪವಾಗಿದ್ದು, ಇಲ್ಲಿ ಮೇಲಿನ ಏಳೂ ಅಧ್ಯಾಯಗಳ ಒಟ್ಟು ಫಲಿತಗಳನ್ನು ಹೇಳಲಾಗಿದೆ. ಅವುಗಳು ಈ ಕೆಳಗಿನಂತಿವೆ – ಬೀದರ ಪ್ರದೇಶವು ಸಾಂಸ್ಕೃತಿಕವಾಗಿ ಪ್ರಸಿದ್ಧಿಯನ್ನು ಪಡೆದಿರುವಂತೆ ಚಿತ್ರಕಲೆಯ ದೃಷ್ಟಿಯಿಂದಲೂ ಶ್ರೀಮಂತ ಪ್ರದೇಶವಾಗಿದೆ ಎಂಬುದು ಈ ಅಧ್ಯಯನದಿಂದ ತಿಳಿದುಬರುತ್ತದೆ. ಬೀದರ ಜಿಲ್ಲೆಯ ಚಿತ್ರಕಲಾ ಪರಂಪರೆಯು ಐತಿಹಾಸಿಕವಾಗಿ ಆರಂಭಗೊಂಡು ಸಮಕಾಲೀನ ಈ ಕಾಲದಲ್ಲಿ ಹೆಮ್ಮರವಾಗಿ ಬೆಳೆದು ಈ ಸಂದರ್ಭದಲ್ಲಿ ತನ್ನ ಕಂಪನ್ನು ಸೂಸುತ್ತಿರುವುದು ತಿಳಿದುಬರುತ್ತದೆ. ಈ ಜಿಲ್ಲೆಯ ಆಳ್ವಿಕೆ ಮಾಡಿದ ರಾಜ–ಮಹಾರಾಜರು ತಮ್ಮ ಪ್ರೋತ್ಸಾಹದಿಂದ ಚಿತ್ರಕಲೆ ಪ್ರಬುದ್ಧವಾಗಿ ಬೆಳೆಯಲು ಕಾರಣರಾಗಿದ್ದಾರೆ. ಬರೀದಶಾಹಿ ದೊರೆಗಳು ಮುಸ್ಲಿಂ ಧರ್ಮದವರಾಗಿದ್ದರಿಂದ ಚಿತ್ರಕಲೆಯಲ್ಲಿ ಮುಸ್ಲಿಂ ಧರ್ಮಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿ ಧರ್ಮದ ಸಹಿಷ್ಣುತೆಯನ್ನು ಮೆರೆದಿರುವುದು ಈ ಅಧ್ಯಯನದಿಂದ ತಿಳಿದುಬರುತ್ತದೆ. ಬೀದರ್ ಜಿಲ್ಲೆಯಲ್ಲಿ ಚಿತ್ರಕಲೆಯ ಜೊತೆಗೆ ವಾಸ್ತುಕಲೆ ಮತ್ತು ಸಂಗೀತ ಕಲೆಗಳಂತಹ ಲಲಿತಕಲೆಗಳು ಪೂರಕವಾಗಿ ಬೆಳವಣಿಗೆ ಹೊಂದಿರುವುದನ್ನು ಇಲ್ಲಿ ಕಂಡುಕೊಳ್ಳಲಾಗಿದೆ.

ಬೀದರ ಜಿಲ್ಲೆಯ ಭಿತ್ತಿಚಿತ್ರಕಲೆ ಮತ್ತು ಬಿದರಿ ಕಲೆಗಳು ವಿಶೇಷವಾಗಿ ಮೊಘಲರ ಮತ್ತು ಪರ್ಶಿಯನ್ ಕಲೆಯಿಂದ ಪ್ರಭಾವಿತಗೊಂಡಿದೆ. ಮತ್ತು ಬಿದ್ರಿಕಲೆಯ ಪಾತ್ರೆಗಳ ತಳಭಾಗವು

೫೯. ವೈಶಾಲಿಬಾಯಿ ಬಿ. ಕಾಂಬಳೆ : ಬೀದರ ಜಿಲ್ಲೆಯ ಚಿತ್ರಕಲೆ, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೧೨

[illegible]

[illegible]

ಡೆಕ್ಕನಿ ಪ್ರಭಾವ ಹೊಂದಿದೆ. ಮತ್ತು ರಾಜ್ಯವಂಶದ ವ್ಯಕ್ತಿ ಹತ್ತು ಸೇದುತ್ತಿರುವ ದೃಶ್ಯ ನೋಡಬಹುದು. ಇಂತಹ ಚಿತ್ರಗಳನ್ನು ಮೊಘಲರ ಕಿರುರೂಪ ಚಿತ್ರಗಳಲ್ಲಿ ಕಾಣಬಹುದು. ಸಾಮಾನ್ಯವಾಗಿ ಮುಸ್ಲಿಂ ಚಿತ್ರಕಲೆಯಲ್ಲಿ ಕಂಡುಬರುವ ಇಂಡೋ–ಪರ್ಷಿಯನ್ ಚಿತ್ರ ಶೈಲಿಯ ಜೊತೆಗೆ ಸ್ಥಳೀಯ ಶೈಲಿಗಳ ಪ್ರಭಾವವು ಈ ಪ್ರದೇಶದ ಚಿತ್ರಕಲೆಯ ಮೇಲೆ ಉಂಟಾಗಿರುವುದು ಕಂಡುಬರುತ್ತದೆ.

ಈ ಜಿಲ್ಲೆಯ ಕಲಾಶಾಲೆಗಳು, ಕಲಾವಿದರು, ಕಲಾಸಂಸ್ಥೆಗಳು ಜಿಲ್ಲೆಯ ಕಲಾಬೆಳವಣಿಗೆಯಲ್ಲಿ ವಿಶಿಷ್ಟ ಪಾತ್ರವಹಿಸುತ್ತಲಿವೆ ಎಂಬುದನ್ನು ಕಂಡುಕೊಳ್ಳಲಾಗಿದೆ. ಈ ಜಿಲ್ಲೆಯ ಕಲಾವಿದರು ಸಮಕಾಲೀನ ಕಲಾವಲಯದಲ್ಲಿ ಗಮನಾರ್ಹ ಪಾತ್ರ ವಹಿಸುತ್ತಿದ್ದರು. ಮತ್ತು ನೈಜ ಶೈಲಿಯ ಚಿತ್ರಕಲಾವಿದರು ಜಿಲ್ಲೆಯಲ್ಲಿದ್ದಾರೆ. ಅಲ್ಲದೆ ನಿಸರ್ಗ ಚಿತ್ರರಚನೆಯಲ್ಲಿ ಹಾಗೂ ಶರಣರ ಸಂಯೋಜನಾ ಚಿತ್ರಗಳನ್ನು ರಚಿಸುವಲ್ಲಿ ಈ ಪ್ರದೇಶದ ಕಲಾವಿದರು ವಿಶೇಷವಾಗಿ ಗುರುತಿಸಿಕೊಂಡಿದ್ದಾರೆ. ಈ ಜಿಲ್ಲೆಯ ಸಾಂಪ್ರದಾಯಿಕ, ನೈಜ ಶೈಲಿಯ ಚಿತ್ರಣ, ಸಂಯೋಜನಾತ್ಮಕ ಮತ್ತು ಆಧುನಿಕ ಚಿತ್ರರಚನಾ ಕಾರ್ಯಗಳನ್ನು ಜೊತೆಯಾಗಿ ಇಲ್ಲಿಯ ಕಲಾವಿದರು ಹೆಚ್ಚಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಈ ಎಲ್ಲಾ ಅಂಶಗಳು ಬೀದರ್ ಜಿಲ್ಲೆಯ ಅಧ್ಯಯನದ ಫಲಿತಗಳಾಗಿವೆ.

ಕರ್ನಾಟಕದ ಆಧುನಿಕ ಭಿತ್ತಿಚಿತ್ರ / ಶಿಲ್ಪಕಲೆ

ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಎನ್. ಜಿ. ಅಂಬರೀಶ್ ಅವರು ಕರ್ನಾಟಕದ ಆಧುನಿಕ ಭಿತ್ತಿಚಿತ್ರ / ಶಿಲ್ಪಕಲೆ ಎಂಬ ವಿಷಯ ಕುರಿತು ಪ್ರಬಂಧವನ್ನು ಸಲ್ಲಿಸಿದ್ದಾರೆ.[೬೦] ಈ ಅಧ್ಯಯನದ ವಿಷಯವು ಒಟ್ಟು ಹತ್ತು ಅಧ್ಯಾಯಗಳಲ್ಲಿ ಹರಡಿಕೊಂಡಿದೆ. ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವೈಧಾನಿಕತೆ ಕುರಿತು ಚರ್ಚಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಭಿತ್ತಿಚಿತ್ರ / ಶಿಲ್ಪ ಮಾಧ್ಯಮದ ನೆಲೆ–ಹಿನ್ನೆಲೆ, ಸಮಕಾಲೀನ ಸಂದರ್ಭ ಮತ್ತು ಅವುಗಳ ವರ್ಗೀಕರಣ ಕುರಿತು ವಿವರಿಸಲಾಗಿದೆ. ಮೂರನೆಯ ಅಧ್ಯಾಯ ಭಿತ್ತಿಮಾಧ್ಯಮದ ವರ್ಣಚಿತ್ರಕಲೆ ಕುರಿತಂತಾದರೆ, ನಾಲ್ಕನೆಯ ಅಧ್ಯಾಯದಲ್ಲಿ ಗಾಜಿನ ಮಾಧ್ಯಮದ ಭಿತ್ತಿಚಿತ್ರಕಲೆ ಕುರಿತು ವಿವರಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಮಣ್ಣು ಮತ್ತು ಸಿಮೆಂಟ್ ಮಾಧ್ಯಮದ ಭಿತ್ತಿ ಶಿಲ್ಪ ಕುರಿತು ವಿವರಣೆ ನೀಡಲಾಗಿದೆ. ಆರನೆಯ ಅಧ್ಯಾಯವು ಫೈಬರ್ ಮತ್ತು ಮರ ಮಾಧ್ಯಮದ ಭಿತ್ತಿಶಿಲ್ಪ ಕುರಿತಂತಾದರೆ, ಏಳನೆಯ ಅಧ್ಯಾಯದಲ್ಲಿ ಸಂಕೀರ್ಣ ಮಾಧ್ಯಮದ ಭಿತ್ತಿಚಿತ್ರ / ಶಿಲ್ಪಕಲೆ ಕುರಿತು ಚರ್ಚಿಸಲಾಗಿದೆ. ಎಂಟನೆಯ ಅಧ್ಯಾಯವು ಭಿತ್ತಿಚಿತ್ರ / ಶಿಲ್ಪಕಲೆಯ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿಗೆ ಸಂಬಂಧಪಟ್ಟಂತಾದರೆ, ಒಂಬತ್ತನೆಯ ಅಧ್ಯಾಯವು

---

೬೦. ಎನ್. ಜಿ. ಅಂಬರೀಶ್ : ಕರ್ನಾಟಕದ ಆಧುನಿಕ ಭಿತ್ತಿಚಿತ್ರ/ಶಿಲ್ಪಕಲೆ, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೧೨

[illegible]

ಇದರ ಪ್ರಮುಖ ಕಲಾವಿದರ ಕುರಿತಂತೆ ಚರ್ಚಿಸಲಾಗಿದೆ. ಇನ್ನು ಕೊನೆಯದಾದ ಹತ್ತನೆಯ ಅಧ್ಯಾಯವು ಸಮಾರೋಪವಾಗಿದ್ದು, ಇಲ್ಲಿ ಮೇಲಿನ ಒಂಬತ್ತು ಅಧ್ಯಾಯಗಳ ಒಟ್ಟು ಫಲಿತಗಳನ್ನು ಚರ್ಚಿಸಲಾಗಿದೆ.

ಶಿಷ್ಟ ಪರಂಪರೆಯ ಭಿತ್ತಿಚಿತ್ರಗಳ ಬೆಳವಣಿಗೆಯನ್ನು ಸಾಮಾನ್ಯವಾಗಿ ಬಾದಾಮಿ ವೈಷ್ಣವ ಗುಹೆಯ ಚಾಲುಕ್ಯರಿಂದ ಪ್ರಾರಂಭವಾಯಿತು. ಕರ್ನಾಟಕದಲ್ಲಿ ಭಿತ್ತಿಚಿತ್ರ ಬೆಳೆದು ಬಂದಂತಹ ಹಾದಿ, ಕರ್ನಾಟಕದಲ್ಲಿ ಅನ್ಯ ಕಲೆಯ ಮ್ಯೂರಲ್‌ಗಳ ರಚನೆಯಾಗುತ್ತಿರುವುದು, ಅದರಿಂದ ಯುವ ಕಲಾವಿದರಿಗೆ ಪ್ರೋತ್ಸಾಹದ ಕುರಿತು ಚರ್ಚಿಸಲಾಗಿದೆ. ೧೯೮೦-೯೦ರ ಸೃಜನಾತ್ಮಕ ಕಲೆಗೆ ಒಂದು ಹೊಸ ಆಯಾಮ ಸೃಷ್ಟಿಸುವಲ್ಲಿ ಯಶಸ್ವಿಯಾಯಿತು. ಭಿತ್ತಿರೂಪಗಳ ಆಧುನಿಕ ಬೇಡಿಕೆಯನ್ನು ಜನಪ್ರಿಯವಾಗುತ್ತಿದ್ದಂತೆ ಸಾಮಾನ್ಯರು ಕೂಡಾ ತಮ್ಮ ಹೊಸ ಕಟ್ಟಡಗಳ ಅಂದ ಹೆಚ್ಚಿಸಿಕೊಳ್ಳುವ ಒಂದು ಅಂಶವಾಗಿ ಆಲೋಚಿಸುವಂತಾಯಿತು. ಗಾರೆ ಮಾಧ್ಯಮದ ಕಡೆಯಿಂದ ಸಿಮೆಂಟ್ ಮಾಧ್ಯಮದ ಕಡೆಗೆ ಬಂದು ಗೋಪುರ, ದೇವಾಲಯ, ಶಿಲ್ಪ, ಭಿತ್ತಿಶಿಲ್ಪಗಳ ರಚನೆ, ಆಧುನಿಕ ಯುಗದಲ್ಲಿ ಭಿತ್ತಿಶಿಲ್ಪ ರಚನಾ ವಿಧಾನ, ಪರಿಕರಗಳ ಬಗ್ಗೆ ಮಾಹಿತಿ, ಫೈಬರ್ ಮಾಧ್ಯಮ ಆಧುನಿಕ ಯುಗದಲ್ಲಿ ಹೆಚ್ಚು ಪ್ರಚಾರ ಪಡೆದಂತಹ ಮಾಧ್ಯಮ. ಫೈಬರ್ ಮಾಧ್ಯಮ ಒಂದು ಅಗುರವಾದ ಮಾಧ್ಯಮ ಅದರ ರಚನಾ ವಿಧಾನ, ಅದಕ್ಕೆ ಬಳಸುವ ಪರಿಕರ, ಆಧುನಿಕ ಯುಗದಲ್ಲಿ, ಕಚ್ಚಾವಸ್ತುಗಳಲ್ಲಿ ರಚನೆ ಮಾಡಿದಾಗ ಮಾಧ್ಯಮಗಳು ಸಮ್ಮಿಶ್ರಣಗೊಂಡು ಆಗುವಂತಹ ಕೃತಿ. ಅಂದರೆ ಮಣ್ಣು, ಸಿಮೆಂಟ್, ಕಬ್ಬಿಣ, ಇನ್ನಿತರ ವಸ್ತುಗಳನ್ನು ಉಪಯೋಗಿಸಿಕೊಂಡು ತಯಾರಿಸುವ ಮಾಧ್ಯಮಗಳಾಗಿವೆ. ಆಧುನಿಕ ಯುಗದಲ್ಲಿ ಕಲಾವಿದರು ವಿವಿಧ ಮಾಧ್ಯಮಗಳಲ್ಲಿ ರಚಿಸಿ ಅದರಿಂದಾದ ಪ್ರಭಾವಗಳು, ತಂತ್ರ, ಶೈಲಿ, ಪ್ರೇರಣೆಯನ್ನು ತಿಳಿದುಕೊಳ್ಳಲಾಗಿದೆ. ಈ ರೀತಿಯ ಫಲಿತಗಳನ್ನು ಈ ಅಧ್ಯಯನದಲ್ಲಿ ಹೇಳಲಾಗಿದೆ.

ಕರಾವಳಿ ಕರ್ನಾಟಕದ ಕ್ರೈಸ್ತ ಚಿತ್ರಕಲೆ

ಡಿ. ಆರ್. ಸುರೇಂದ್ರನಾಥ ಅವರು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಕರಾವಳಿ ಕರ್ನಾಟಕದ ಕ್ರೈಸ್ತ ಚಿತ್ರಕಲೆ ಎಂಬ ವಿಷಯ ಕುರಿತು ಪ್ರಬಂಧವನ್ನು ಮಂಡಿಸಿದ್ದಾರೆ.[೬೧] ಈ ಅಧ್ಯಯನದಲ್ಲಿ ಒಟ್ಟು ಏಳು ಅಧ್ಯಾಯಗಳಲ್ಲಿ ವಿಷಯಗಳು ಹರಡಿಕೊಂಡಿವೆ. ಮೊದಲನೆಯ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನಗಳ ಕುರಿತಂತೆ ಚರ್ಚಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಕರಾವಳಿ ಕರ್ನಾಟಕದ ಸಾಂಸ್ಕೃತಿಕ ಪರಿಸರ ಹಾಗೂ ವಿವಿಧ ಧರ್ಮಗಳ ಸಮನ್ವಯ ಮತ್ತು ಲಲಿತಕಲೆಗಳ ಕುರಿತಂತೆ ವಿವರಿಸಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಕರಾವಳಿ ಕರ್ನಾಟಕದ ಭಿತ್ತಿಮಾಧ್ಯಮದ ಚಿತ್ರಗಳ ಕುರಿತಂತೆ ವಿವರಿಸಲಾಗಿದೆ.

---

೬೧. ಡಿ. ಸುರೇಂಧ್ರನಾಥ : ಕರಾವಳಿ ಕರ್ನಾಟಕದ ಕ್ರೈಸ್ತ ಚಿತ್ರಕಲೆ, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ. ಕನ್ನಡ ವಿ.ವಿ. ಹಂಪಿ. ೨೦೧೨

ನಾಲ್ಕನೆಯ ಅಧ್ಯಾಯದಲ್ಲಿ ಈ ಪ್ರದೇಶದ ಗಾಜಿನ ಮಾಧ್ಯಮದ ಚಿತ್ರಗಳು ಕುರಿತಂತಾದರೆ, ಐದನೆಯ ಅಧ್ಯಾಯವು ಕರಾವಳಿ ಕರ್ನಾಟಕದ ಬಟ್ಟೆ ಮಾಧ್ಯಮದ ಚಿತ್ರಗಳ ಕುರಿತು ವಿವರಿಸಲಾಗಿದೆ. ಆರನೆಯ ಅಧ್ಯಾಯದಲ್ಲಿ ಈ ಪ್ರದೇಶದ ಕ್ರೈಸ್ತ ಚಿತ್ರಕಲೆಯ ಪ್ರಮುಖ ಲಕ್ಷಣಗಳು, ಕಲಾವಿದರು, ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ ಹಾಗೂ ಶೈಲಿಯ ಕುರಿತು ಚರ್ಚಿಸಲಾಗಿದೆ. ಕೊನೆಯ ಅಧ್ಯಾಯವಾದ ಏಳನೆಯ ಅಧ್ಯಾಯವು ಈ ಮೇಲಿನ ಆರು ಅಧ್ಯಾಯಗಳ ಒಟ್ಟು ಫಲಿತಗಳನ್ನು ಒಳಗೊಂಡಿದೆ.

ಕರಾವಳಿ ಕರ್ನಾಟಕದ ಕ್ರೈಸ್ತ ಚಿತ್ರಕಲೆ ಸಂಪ್ರಬಂಧದ ವಿಷಯವಾದ್ದರಿಂದ ಇತಿಹಾಸದ ಪರಿಚಯ ಮಾಡಿಕೊಡಲಾಗಿದೆ. ಮನುಷ್ಯನು ಮೂಲ ಪರಿಸರದ ಪ್ರಭಾವ, ಜೀವನ ಶೈಲಿ, ಧರ್ಮಗಳ ಜೊತೆ ಚಿತ್ರ, ಶಿಲ್ಪ, ವಾಸ್ತು ಇತ್ಯಾದಿ ಕಲೆಗಳು ಎಷ್ಟರ ಮಟ್ಟಿಗೆ ನಿರಂತರವಾಗಿ ಉಳಿದುಕೊಂಡು ಬಂದಿವೆ ಎಂಬುದನ್ನು ಕ್ರೈಸ್ತರ ನೆಲೆಯಾದ ಕರಾವಳಿಭಾಗದ ಚರ್ಚ್ ಹಾಗೂ ಚಿತ್ರಗಳ ಕುರಿತು ಅಭ್ಯಸಿಸಲಾಗಿದೆ. ಹಿಂದೂ, ಮುಸ್ಲೀಂ, ಬೌದ್ಧ, ಜೈನ, ವೈಷ್ಣವ ಹೀಗೆ ಮುಂತಾದ ಅನೇಕ ಧರ್ಮಗಳ ಸಾಲಿನಲ್ಲಿರುವ ಕ್ರೈಸ್ತಚಿತ್ರಕಲೆಯು ವಿಶಿಷ್ಟ, ಅದರಲ್ಲಿ ಭಿತ್ತಿ ಮತ್ತು ಚಿತ್ರ ಎಂಬ ಎರಡುಶೈಲಿಗಳಲ್ಲಿ ೧೮ನೇ ಶತಮಾನದಿಂದ ರಚಿಸುತ್ತ ಬಂದಿರುವುದನ್ನು ಕಂಡುಕೊಳ್ಳಲಾಯಿತು. ಸ್ವಾತಂತ್ರ್ಯದ ನಂತರ ಹಾಗೂ ಸ್ವಾತಂತ್ರ್ಯಪೂರ್ವದಲ್ಲಿ ನಡೆದಿರುವ ಇತಿಹಾಸವನ್ನು ಪರಿಚಯಿಸಿಕೊಂಡಂತಾಗಿ, ಕರಾವಳಿ ಭಾಗದಲ್ಲಿ ನಡೆಸಿದ ಬ್ರಿಟಿಷರ ಹಾರಾಟ ಹಾಗೂ ಹೋರಾಟವನ್ನು ವಿಶೇಷವಾಗಿ ಸ್ಮರಿಸಲೇಬೇಕು. ಅದಲ್ಲದೆ ಹೈದರಾಲಿ ಮತ್ತು ಟಿಪ್ಪುಸುಲ್ತಾನ್ ಕ್ರೈಸ್ತರ ಚರ್ಚ್‌ಗಳ ಮೇಲೆ ಮಾಡಿದ ದಾಳಿಯಿಂದಾಗಿ ಅನೇಕರು ಬಂಧಿತರಾದರು, ಹಿಂಸೆ ಕೊಟ್ಟರೂ ಬಿಡದ ಧರ್ಮದ ಪ್ರಭಾವ, ಮತ್ತೆ ಉತ್ತೇಜನ ಬಂದಂತೆ ಒಡೆದು ಹೋಗಿರುವ ಸ್ಥಳದಲ್ಲಿಯೇ ಮರು ದೇವಾಲಯ ನಿರ್ಮಾಣ ಮಾಡಿದ್ದು ವಿಶೇಷ.

೧೮ನೇ ಶತಮಾನದ ಕೊನೆಯಲ್ಲಿ ರಚಿಸಿರುವ ಇಲ್ಲಿನ ಚಿತ್ರ ಹಾಗೂ ಭಿತ್ತಿಗಳು ಸೌಂದರ್ಯಯುತವಾದದ್ದು, ಪಾಶ್ಚಾತ್ಯ ಕಲಾವಿದರೊಬ್ಬರಿಂದಲೇ ಕೆಲಸವಾಗಿರುವುದರಿಂದ ಅವರನ್ನು ಮೆಚ್ಚಲೇಬೇಕು. ಕಲಾವಿದ ಕ್ಯಾನ್‌ವಾಸ್‌ನ ಮೇಲೆ ಎಷ್ಟು ಚಿತ್ರವನ್ನಾದರೂ ರಚಿಸಬಹುದು, ಆದರೆ ಗೋಡೆಯ ಮೇಲೆ ಒಂದಿಂಚು ಖಾಲಿ ಜಾಗ ಬಿಡದೆ ಸಂದಿಗೊಂದಿಗಳಲ್ಲಿ ಈ ಚಿತ್ರಗಳ ಅಲಂಕಾರ, ವಿನ್ಯಾಸಗಳಂತಹ ಆಕಾರ, ಮುಂದಿನ ಪೀಳಿಗೆಗೆ ಸಂರಕ್ಷಣೆ ಕುರಿತಾಗಿ ಸಂಶೋಧಕರು ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ.

ದೃಶ್ಯಕಲೆಯಲ್ಲಿ ಗಣೇಶ (ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ)

ಮಹಾದೇವಪ್ಪ ಸಣತಂಗಿಯವರು ಎಂ.ಫಿಲ್ ಪದವಿಗಾಗಿ ದೃಶ್ಯಕಲೆಯಲ್ಲಿ ಗಣೇಶ (ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ) ಎಂಬ ವಿಷಯದ ಪ್ರಬಂಧವನ್ನು ಡಾ. ಎಸ್. ಸಿ.

ಪಾಟೀಲ ಅವರ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಸಲ್ಲಿಸಿದ್ದಾರೆ.[೬೨] ಗಣೇಶನ ಚಿತ್ರಗಳಲ್ಲಿ ಇಂದು ಹಲವಾರು ವಿನ್ಯಾಸದ ಮಾದರಿಯ ಗಣಪತಿ ಮೂರ್ತಿ ಮತ್ತು ವರ್ಣಗಾರಿಕೆಯಲ್ಲಿ ಗಣಪತಿಯ ಉತ್ಸವದಂದು ನೋಡಬಹುದು. ಅಂತಹ ವಿನ್ಯಾಸದ ವಿಶೇಷತೆಯ ಕುರಿತು ಇಲ್ಲಿ ಚರ್ಚಿಸಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಈ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವೈಧಾನಿಕತೆ ಕುರಿತು ಚರ್ಚಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಐತಿಹಾಸಿಕ ಹಿನ್ನೆಲೆ ಹಾಗೂ ದೃಶ್ಯಕಲೆಗಳ ವೈವಿಧ್ಯ ಮತ್ತು ಹರವುಗಳ ಬಗ್ಗೆ ವಿವರಿಸಲಾಗಿದೆ. ಮೂರನೆಯ ಅಧ್ಯಾಯವು ಮಣ್ಣಿನ ಮಾಧ್ಯಮದಲ್ಲಿ ಗಣೇಶನ ಶಿಲ್ಪಗಳ ಕುರಿತಂತಾದರೆ, ನಾಲ್ಕನೆಯ ಅಧ್ಯಾಯದಲ್ಲಿ ಶಿಲಾ ಮಾಧ್ಯಮದಲ್ಲಿ ಗಣೇಶನ ಶಿಲ್ಪಗಳ ಕುರಿತಂತೆ ವಿವರಿಸಲಾಗಿದೆ. ಐದನೆಯ ಅಧ್ಯಾಯವು ಗಣೇಶನ ಚಿತ್ರ ಮತ್ತು ಶಿಲ್ಪಗಳ ಕುರಿತಂತಾದರೆ ಆರನೆಯ ಅಧ್ಯಾಯದಲ್ಲಿ ಮರ/ಕಟ್ಟಿಗೆ ಮಾಧ್ಯಮ ಮತ್ತು ಇತರ ಮಾಧ್ಯಮಗಳಲ್ಲಿ ಗಣೇಶನ ಚಿತ್ರ–ಶಿಲ್ಪಗಳ ಕುರಿತಂತೆ ಚರ್ಚಿಸಲಾಗಿದೆ. ಏಳನೆಯ ಅಧ್ಯಾಯದಲ್ಲಿ ಸಮಕಾಲೀನ ಸಂದರ್ಭದಲ್ಲಿ ಗಣೇಶೋತ್ಸವ ಹಾಗೂ ಚಿತ್ರ–ಶಿಲ್ಪಗಳು ಮತ್ತು ಕಲಾವಿದರ ಕುರಿತಂತೆ ವಿವರಿಸಲಾಗಿದೆ. ಕೊನೆಯ ಎಂಟನೆಯ ಅಧ್ಯಾಯದಲ್ಲಿ ಮೇಲಿನ ಎಲ್ಲ ಅಧ್ಯಾಯಗಳ ಒಟ್ಟಾರೆ ಫಲಿತಗಳನ್ನು ಚರ್ಚಿಸಲಾಗಿದೆ.

ಮೂರ್ತಿ ತಯಾರಿಕೆಯಲ್ಲಿ ಮಣ್ಣು ಮೊದಲು ಬಳಕೆಯಾದದ್ದು, ಶಿವಪುರಾಣದ ಪ್ರಕಾರ ಗಣೇಶನ ಮೂರ್ತಿ ಶಿಲ್ಪ ತಯಾರಿಕೆಯಿಲ್ಲ. ಆದರೆ ನಮಗೆ ಸ್ಪಷ್ಟ ಮಾಹಿತಿ ಸಿಗುವುದು ಹರಪ್ಪ ಮತ್ತು ಮೊಹೆಂಜೋದಾರೋ ಉತ್ಖನನದಲ್ಲಿ ದೊರೆತ ಮಾತೃದೇವತೆಯ ಮುದ್ರೆ, ಶಿಲ್ಪ ಮತ್ತು ಆಟಿಕೆ ಸಾಮಾನುಗಳು ಮನದಟ್ಟು ಮಾಡಿವೆ. ಆದರೆ ವಿದ್ವಾಂಸರ ಪ್ರಕಾರ ಕ್ರಿ.ಪೂ. ೨೫೦೦ ವರ್ಷಗಳ ಹಿಂದಿನದೆಂದು ಅಂದಾಜು ಮಾಡಲಾಗಿದೆ. ಗಣೇಶನ ಕುರಿತ ಪುರಾಣಗಳು, ವೇದಗಳು ಮತ್ತು ಉಪನಿಷತ್ತುಗಳ ಅಧ್ಯಯನ ಅವಶ್ಯವಾದುದಾಗಿದೆ. ಗಣೇಶನನ್ನು ಶಿಲ್ಪಗಳಲ್ಲಿ ಪುರುಷರೂಪಗಳನ್ನು ಕಂಡಿರುವುದಲ್ಲದೆ, ಸ್ತ್ರೀರೂಪಗಳನ್ನು ಕಂಡರಿಸಲಾಗಿದೆ. ಮತ್ತು ಶ್ರೀಮುದ್ಗಲ ಪುರಾಣದಲ್ಲಿ ಬರುವ ಮೂವತ್ತೆರಡು ಗಣಪತಿಯ ರೂಪಗಳ ಅಧ್ಯಯನ ಮಾಡಲಾಗಿದೆ. ಗಣೇಶನನ್ನು ಹಲವಾರು ಕಲೆಗಳಲ್ಲಿ ಬಳಸಿಕೊಂಡಿರುವುದು ವಿಶೇಷ. ಗಣೇಶನ ಚಿತ್ರ–ಶಿಲ್ಪಗಳನ್ನು ಕಿನ್ನಾಳ ಮತ್ತು ಕಲಘಟಗಿ ಕರಕುಶಲ ಕಲೆಯಲ್ಲಿ ಬಳಸಿಕೊಳ್ಳಲಾಗಿದೆ.

೧೮೯೧ರಲ್ಲಿ ನವ್ಯ ಶಿಲ್ಪಕಲೆಗಳ ರಚನೆ ಪ್ರಾರಂಭವಾಗಿದ್ದು, ಕಲಾವಿದರು ಗಣೇಶನನ್ನು ಹಲವಾರು ಅವತಾರಗಳಲ್ಲಿ ಮತ್ತು ರೂಪಗಳಲ್ಲಿ ರಚಿಸಿರುವುದನ್ನು ಕಂಡುಕೊಳ್ಳಲಾಗಿದೆ. ಮುದ್ಗಲ ಪುರಾಣದಲ್ಲಿ ಹೇರಂಬ ಗಣಪತಿಗೆ ಸಿಂಹವಾಹನವಿದೆ. ಆದರೆ ಆಧುನಿಕ ಕಾಲದಲ್ಲಿ ಗಣೇಶನಿಗೆ ನಂದಿ, ಮೊಸಳೆ, ಕತ್ತೆ, ಇಲಿ, ಕುದುರೆ, ವರಾಹ ಹೀಗೆ ಅನೇಕ ವಾಹನಗಳನ್ನು ರಚಿಸಿರುವುದು

---

೬೨. ಮಹಾದೇವಪ್ಪ ಸಣತಂಗಿ : ದೃಶ್ಯಕಲೆಯಲ್ಲಿ ಗಣೇಶ (ಉತ್ತರಕರ್ನಾಟಕವನ್ನು ಅನುಲಕ್ಷಿಸಿ). ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ. ಕನ್ನಡ ವಿ.ವಿ. ಹಂಪಿ. ೨೦೧೨

[illegible]

ವಿಶೇಷವಾಗಿದೆ ಮತ್ತು ಚಿತ್ರ ಬಿಡಿಸಿದ ಕಲಾವಿದನೇ ಇಲ್ಲ ಎಂಬುದನ್ನು ಅಧ್ಯಯನದಿಂದ ತಿಳಿಯಲಾಗಿದೆ. ಗಣೇಶನ ಚಿತ್ರ-ಶಿಲ್ಪ, ಭಿತ್ತಿಚಿತ್ರ ಅಷ್ಟೇ ಅಲ್ಲದೇ ಹಸ್ತಪ್ರತಿಗಳಲ್ಲಿ ಮತ್ತು ಪಟಚಿತ್ರಗಳಲ್ಲಿ ಕಾಣಬಹುದು. ಗಣೇಶನ ಚಿತ್ರಗಳು ಗಂಜೀಫಾ, ಗಾಜು, ಕಲಘಟಗಿ, ಕಿನ್ನಾಳ, ಮೈಸೂರು, ಕರಾವಳಿ ಕಾವಿಕಲೆ ಹೀಗೆ ಹಲವಾರು ಕಲೆಗಳಲ್ಲಿ ರಚನೆಯಾಗುತ್ತಿರುವುದು ವಿಶೇಷ. ಭಾರತದಲ್ಲಿ ಮೊಟ್ಟಮೊದಲು ಗಣಪತಿಯ ಸಾರ್ವಜನಿಕ ಉತ್ಸವ ಆಚರಣೆಯು ಮಹಾರಾಷ್ಟ್ರದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಹಿನ್ನೆಲೆಯಲ್ಲಿ ಬಾಲಗಂಗಾಧರ ತಿಲಕರಿಂದ ಪ್ರಾರಂಭವಾಯಿತು. ಗಣಪತಿಯನ್ನು ಒಬ್ಬ ದೇವನಾಗಿ ಮತ್ತು ಸೌಂದರ್ಯದ ಹಿನ್ನೆಲೆಯಲ್ಲಿ ಬಳಸಿಕೊಂಡಿರುವುದು ಕಂಡುಬರುತ್ತದೆ.

ಕರ್ನಾಟಕದ ಜೈನ ಚಿತ್ರಕಲೆ

ಉಮೇಶ ಎಸ್. ಅವರು ಕರ್ನಾಟಕ ಜೈನ ಚಿತ್ರಕಲೆ ವಿಷಯವಾಗಿ ಎಂ.ಫಿಲ್ ಅಧ್ಯಯನ ಮಾಡಿದ್ದಾರೆ.[೬೩] ಈ ಸಂಪ್ರಬಂಧವು ಒಟ್ಟು ಎಂಟು ಅಧ್ಯಾಯಗಳನ್ನು ಒಳಗೊಂಡಿದೆ. ಮೊದಲನೆಯ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವೈಧಾನಿಕತೆಯನ್ನು ಕುರಿತು ಚರ್ಚಿಸಲಾಗಿದೆ. ಇನ್ನುಳಿದಂತೆ ಜೈನ ಚಿತ್ರಕಲೆಯ ಐತಿಹಾಸಿಕ ನೆಲೆ-ಹಿನ್ನೆಲೆ, ವರ್ಗೀಕರಣ, ಜೈನ ಭಿತ್ತಿಚಿತ್ರಕಲೆ, ಜೈನ ಹಸ್ತಪ್ರತಿ ಚಿತ್ರಕಲೆ, ಜೈನ ಸಂಕೀರ್ಣ ಚಿತ್ರಕಲೆ ಮತ್ತು ಜೈನ ಚಿತ್ರಕಲೆಯ ಶೈಲಿ, ತಂತ್ರಗಾರಿಕೆ, ಪ್ರಭಾವ, ಪ್ರೇರಣೆ ಮತ್ತು ಲಕ್ಷಣಗಳನ್ನು ಅಧ್ಯಾಯಗಳನ್ನಾಗಿ ವಿಭಾಗಿಸಿಕೊಂಡು ಒಟ್ಟು ಏಳು ಅಧ್ಯಾಯಗಳಲ್ಲಿ ವಿಷಯ ಹರಡಿದೆ. ಕರ್ನಾಟಕದ ಜೈನ ಚಿತ್ರಗಳನ್ನು ಅವಲೋಕಿಸಿದಾಗ ಚಿತ್ರಗಳ ರಚನಾ ವಿಧಾನ, ಕಲಾತ್ಮಕ, ಧಾರ್ಮಿಕ ಮತ್ತು ಐತಿಹಾಸಿಕ ಹೀಗೆ ಸಮಾನ ದೃಷ್ಟಿಕೋನದಿಂದ ನೋಡಲಾಗಿದೆ. ಇಲ್ಲಿ ಚಿತ್ರಗಳು ಕಲಾತ್ಮಕ ಅಂಶಗಳಂತೆ ಐತಿಹಾಸಿಕವಾಗಿಯೂ ಸಹ ಹೆಚ್ಚಿನ ಮಹತ್ವ ಪಡೆದಿದ್ದು, ವಿನಾಶದ ಹಾದಿಯಲ್ಲಿರುವ ಇಂತಹ ಕಲಾಸಂಪತ್ತನ್ನು ನಮ್ಮ ಮುಂದಿನ ಜನಾಂಗಕ್ಕೆ ಉಳಿಸಿ ಹೆಚ್ಚು ದಿನಗಳವರೆಗೆ ಕಾಯ್ದುಕೊಳ್ಳುವುದು ಮುಖ್ಯವಾದ ಕೆಲಸವಾಗಿದೆ. ಈ ಚಿತ್ರಕಲೆಯನ್ನು ಜೈನ ಮಠಗಳಲ್ಲಿರುವ ಭಿತ್ತಿಚಿತ್ರಗಳು, ಜೈನ ಶ್ರಾವಕರ ಮನೆಯಲ್ಲಿರುವ ಭಿತ್ತಿಚಿತ್ರಗಳು, ಬಸದಿಯಲ್ಲಿರುವ ಭಿತ್ತಿಚಿತ್ರಗಳು ಎಂದು ವರ್ಗೀಕರಿಸಿ ಅಧ್ಯಯನ ಮಾಡಲಾಗಿದೆ. ನಮ್ಮ ಸಂಪ್ರದಾಯದ ಲಕ್ಷಣಗಳಲ್ಲೊಂದಾದ ಈ ಕಲೆಯನ್ನು ಸ್ಥೂಲವಾಗಿ ಅಧ್ಯಯನ ಮಾಡಲಾಗಿದೆ.

ಕರ್ನಾಟಕದ ವ್ಯಂಗ್ಯ ಚಿತ್ರಕಲೆ

ಡಾ. ಎಸ್. ಸಿ. ಪಾಟೀಲ ಅವರ ಮಾರ್ಗದರ್ಶನದಲ್ಲಿ ಜಿ. ವಿ. ಶಶಿಕಲಾ ಅವರು ಕರ್ನಾಟಕದ ವ್ಯಂಗ್ಯ ಚಿತ್ರಕಲೆ ಎಂಬ ವಿಷಯ ಕುರಿತು ಎಂ.ಫಿಲ್ ಅಧ್ಯಯನ ಮಾಡಿದ್ದಾರೆ.[೬೪] ಇಲ್ಲಿ ಪ್ರಸ್ತುತ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವೈಧಾನಿಕತೆ ಕುರಿತು ಮೊದಲನೆಯ

---

೬೩. ಉಮೇಶ ಎಸ್. : ಕರ್ನಾಟಕದ ಜೈನ ಚಿತ್ರಕಲೆ, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೦೭

೬೪. ಶಶಿಕಲಾ ಜಿ.ವಿ. : ಕರ್ನಾಟಕದ ವ್ಯಂಗ್ಯ ಚಿತ್ರಕಲೆ, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೧೨

[illegible]

ಅಧ್ಯಾಯದಲ್ಲಿ ಚರ್ಚಿಸಿದರೆ, ಇನ್ನುಳಿದಂತೆ ವ್ಯಂಗ್ಯಚಿತ್ರಕಲೆ ಬೆಳೆದು ಬಂದ ನೆಲೆ-ಹಿನ್ನೆಲೆ, ಈ ಚಿತ್ರಕಲೆಯ ವಸ್ತುವಿಷಯ, ರಚನಾ ಮಾಧ್ಯಮಗಳು, ಪರಿಕರಗಳು, ವ್ಯಂಗ್ಯ ಚಿತ್ರಕಲೆಯ ಸಾಹಿತ್ಯ ಸಮೀಕ್ಷೆ, ವ್ಯಂಗ್ಯ ಚಿತ್ರಕಲಾವಿದರು ಮತ್ತು ಅವರ ಸ್ಥಿತಿ-ಗತಿ ಅಲ್ಲದೇ ಈ ಚಿತ್ರಕಲೆಯ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ, ಶೈಲಿ ಕುರಿತು ಒಟ್ಟಾರೆ ಆರು ಅಧ್ಯಾಯಗಳಲ್ಲಿ ಹರಡಿದೆ. ವ್ಯಂಗ್ಯ ಚಿತ್ರಕಲೆ ದೃಶ್ಯಕಲಾ ಕ್ಷೇತ್ರದಿಂದ ಸ್ವಲ್ಪ ಮಟ್ಟಿಗೆ ದೂರವಿದೆ ಎಂದು ಹೇಳಬಹುದು. ಈ ಕಲೆಯನ್ನು ಕುರಿತು ಇತ್ತೀಚೆಗೆ ಸಂಶೋಧನಾ ಹಂತದಲ್ಲಿ ನೋಡಲಾಗಿದೆ. ಈ ಅಧ್ಯಯನದಲ್ಲಿ ಮುಖ್ಯವಾದ ಅಂಶಗಳನ್ನು ಈ ಕೆಳಗಿನಂತೆ ನೋಡಬಹುದು.

ವ್ಯಂಗ್ಯ ಚಿತ್ರಕಲೆ ರೇಖಾ ಚಿತ್ರಕಲೆಯ ಒಂದು ಬಹುಮುಖ್ಯವಾದ ಅಂಗವಾಗಿದ್ದು, ಈ ಕಲಾಪ್ರಕಾರವನ್ನು ಚಿತ್ರಕಲೆಯ ಒಂದು ಅವಿಭಾಜ್ಯ ಅಂಗವೆಂದು ಪರಿಗಣಿಸಲು ಪ್ರಸ್ತುತ ಅಧ್ಯಯನವು ಗಮನಹರಿಸಿದೆ. ವ್ಯಂಗ್ಯ ಚಿತ್ರಕಲೆ ಸಮಕಾಲೀನ ಸಂದರ್ಭದ ವಸ್ತುವಿಷಯ, ವ್ಯಕ್ತಿಗಳ ಕುರಿತು, ಅವರ ಓರೆಕೋರೆಗಳನ್ನು ವಿಡಂಬನಾತ್ಮಕವಾಗಿ ಚಿತ್ರಿಸಿರುವುದರ ಮೂಲಕ ಅನೇಕ ಜ್ವಲಂತ ಸಮಸ್ಯೆಗಳಿಗೆ ರಾವುಗನ್ನಡಿಯಾಗಿ ಕೆಲಸ ಮಾಡಿದೆ. ವ್ಯಂಗ್ಯ ಚಿತ್ರಕಲೆಯ ಐತಿಹಾಸಿಕ ಚಳುವಳಿಯ ಸ್ಥೂಲನೋಟವನ್ನು ಈ ಅಧ್ಯಯನದ ಮೂಲಕ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ. ವ್ಯಂಗ್ಯ ಚಿತ್ರಕಲೆಯ ಕಲಾವಿದರಿಗೂ ಸಮಾಜದಲ್ಲಿ ಸರಿಯಾದ ಸ್ಥಾನಮಾನಗಳು, ಸರಕಾರದಿಂದ ಸಿಗಬೇಕಾದ ಪ್ರಶಸ್ತಿ ಪುರಸ್ಕಾರಗಳು ಸಿಗುವಂತಾಗಲು ಪ್ರಸ್ತುತ ಅಧ್ಯಯನವು ಗಮನ ಹರಿಸಿದೆ. ಬಹುಮುಖ್ಯವಾದ ಈ ವ್ಯಂಗ್ಯ ಚಿತ್ರಕಲೆಯು ಇಂದು ಪಠ್ಯಕ್ರಮದಲ್ಲಿ ಮತ್ತು ಶಾಲಾ ಕಾಲೇಜುಗಳಲ್ಲಿ ತಿಳಿವಳಿಕೆಯ ಶಿಬಿರಗಳ ಕಲಾಕಮ್ಮಟಗಳು, ಕಲಾಪ್ರಾತ್ಯಕ್ಷಿಕೆಗಳು, ವಿಚಾರಸಂಕಿರಣಗಳು ನಡೆಯುವುದರ ಅವಶ್ಯಕತೆಗಳನ್ನು ಪ್ರಸ್ತುತ ಪ್ರಸ್ತಾಪಿಸಲಾಗಿದೆ.

ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ

ರಾಘವೇಂದ್ರ ಅವರು ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ ಎಂಬ ವಿಷಯವಾಗಿ ಎಂ.ಫಿಲ್ ಅಧ್ಯಯನವನ್ನು ಮಾಡಿದ್ದಾರೆ.[೬೫] ಪ್ರಸ್ತುತ ಈ ಅಧ್ಯಯನದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವೈಧಾನಿಕತೆಯನ್ನು ಮೊದಲನೆಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಕೊಪ್ಪಳ ಜಿಲ್ಲೆಯ ಭೌಗೋಳಿಕ ಹಾಗೂ ಸಾಂಸ್ಕೃತಿಕ ಪರಿಸರ, ಗಂಗಾವತಿ ತಾಲೂಕಿನ ಪ್ರಾಗೈತಿಹಾಸಿಕ ಚಿತ್ರಗಳು, ಕುಷ್ಟಗಿ ತಾಲೂಕಿನ ಪ್ರಾಗೈತಿಹಾಸಿಕ ಚಿತ್ರಗಳು, ಕೊಪ್ಪಳ ತಾಲೂಕಿನ ಪ್ರಾಗೈತಿಹಾಸಿಕ ಚಿತ್ರಗಳು, ಈ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಗಳ ಪ್ರಮುಖ ಲಕ್ಷಣಗಳು, ಅದರ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿ ಕುರಿತು ಆರು ಅಧ್ಯಾಯಗಳಲ್ಲಿ ವಿಷಯ ಹರಡಿದೆ.

ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದಂತೆ ಪ್ರಾಗೈತಿಹಾಸಿಕ ಚಿತ್ರಗಳ ಮುಖ್ಯವಾದ ಲಕ್ಷಣಗಳು, ಶಿಲಾಶ್ರಯ, ಚಿತ್ರಗವಿಗಳು, ಬಯಲು ಬಂಡೆಗಳು, ಪ್ರಮುಖವಾದ ಭಿತ್ತಿಯನ್ನಾಗಿ ಬಳಸಿಕೊಂಡು

---

೬೫. ರಾಘವೇಂದ್ರ : ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೦[illegible]

[illegible]

ವರ್ಣಚಿತ್ರ, ಗೀರು ಮತ್ತು ಕುಟ್ಟು ಚಿತ್ರಗಳನ್ನು ಹೆಚ್ಚಾಗಿ ರಚಿಸಲು ಬಳಸಿಕೊಂಡಿದ್ದಾರೆ. ಈ ಚಿತ್ರಗಳು ಸಣ್ಣ ಮಧ್ಯಮ ಮತ್ತು ದೊಡ್ಡ ಪ್ರಮಾಣಗಳಲ್ಲಿ ಕಂಡುಬರುತ್ತವೆ. ಈ ಸುತ್ತಮುತ್ತ ಪ್ರದೇಶದಲ್ಲಿ ಕಂಡುಬರುವ ಬೃಹದಾಕಾರದ ಚಿತ್ರಗಳು ಭಾರತದಲ್ಲಿನ ಯಾವ ನೆಲೆಯ ಚಿತ್ರಗಳಲ್ಲಿಯೂ ಕಾಣುವುದಿಲ್ಲ. ಮಧ್ಯಪ್ರದೇಶದ ರೈಸಿನ್ ಜಿಲ್ಲೆಯ ಜಹೋರಾ ಶಿಲಾಶ್ರಯಗಳಲ್ಲಿಯ ದ್ವಿವರ್ಣದ ೩೬೦ ಕಿ.ಮೀ. ಉದ್ದ, ೧.೯೫ ಮೀ. ಎತ್ತರದ ಚಿತ್ರವೆಂದು ತಿಳಿಯಲಾಗಿದೆ. ಎಲೆ, ಚರ್ಮ, ತೊಗಟೆ ಮುಂತಾದವನ್ನು ತಮ್ಮದೇಯಾದ ರೀತಿಯಲ್ಲಿ ಉಪಯೋಗಿಸಿಕೊಂಡು ಚಿತ್ರರಚನೆ, ಹೀಗೆ ಈ ಚಿತ್ರಕಲೆಯ ಕುರಿತು ಅಧ್ಯಯನ ಮಾಡಲಾಗಿದೆ.

ಕರ್ನಾಟಕದ ಚಿತ್ರಕಲೆಯಲ್ಲಿ ದಶಾವತಾರದ ಕಲ್ಪನೆ

ಡಾ. ಎಸ್. ಸಿ. ಪಾಟೀಲರ ಮಾರ್ಗದರ್ಶನದಲ್ಲಿ ರೇವಣಪ್ಪ ಯ. ಚಿಂತಾಮಣಿ ಅವರು ಕರ್ನಾಟಕದ ಚಿತ್ರಕಲೆಯಲ್ಲಿ ದಶಾವತಾರದ ಕಲ್ಪನೆ ಎಂಬ ಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಮಂಡಿಸಿದ್ದಾರೆ.[೬೬] ಈ ಅಧ್ಯಯನದ ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವೈಧಾನಿಕತೆಯನ್ನು ವಿವರಿಸಲಾಗಿದೆ. ಇನ್ನುಳಿದಂತೆ ದಶಾವತಾರದ ಹಿನ್ನೆಲೆ, ವಸ್ತುವಿಷಯ, ಭಿತ್ತಿ, ಹಸ್ತಪ್ರತಿ, ಗಂಜೀಫಾ, ಕಾಗದ, ಮರ ಹೀಗೆ ವಿವಿಧ ಮಾಧ್ಯಮಗಳಲ್ಲಿ ದಶಾವತಾರದ ಚಿತ್ರಗಳ ಸಂಯೋಜನೆಗೊಂಡಿರುವುದನ್ನು ಒಂದೊಂದು ಅಧ್ಯಾಯವಾಗಿ ವಿಂಗಡಿಸಿಕೊಂಡು ಇವುಗಳ ಕುರಿತಂತೆ ವಿವರಿಸಲಾಗಿದೆ. ಒಟ್ಟು ಎಂಟು ಅಧ್ಯಾಯಗಳಲ್ಲಿ ಈ ಎಲ್ಲ ವಿಷಯಗಳು ಹರಡಿಕೊಂಡಿವೆ.

ಕರ್ನಾಟಕದಲ್ಲಿ ದಶಾವತಾರ ಚಿತ್ರಗಳ ರಚನೆಯನ್ನು ಪ್ರತಿಬಿಂಬಿಸುವುದು, ಅದರ ಪರಂಪರೆಯಿಂದ ಬೆಳವಣಿಗೆ ಹಾಗೂ ಅವುಗಳ ಧಾರ್ಮಿಕ ವಿಧಿ–ವಿಧಾನಗಳಲ್ಲಿ ದಶಾವತಾರದ ಚಿತ್ರಗಳನ್ನು ಸಂಶೋಧನಾತ್ಮಕವಾಗಿ ಕಾಣಬಹುದಾಗಿದೆ. ಅಧ್ಯಯನದಲ್ಲಿ ಮುಖ್ಯವಾಗಿ ಗ್ರಹಿಸುವಂತಹದ್ದು, ದಶಾವತಾರದ ಚಿತ್ರರಚನೆಯ ನಿರ್ಮಾಣ. ಮುಖ್ಯವಾಗಿ ಕಲೆಗೆ ನೀಡುವಂತಹ ಅಪಾರವಾದ ಚಿತ್ರಗಳ ಕೊಡುಗೆಗಳು ಈ ಅಧ್ಯಯನದಲ್ಲಿ ಮಹತ್ವದ ಅಂಶಗಳಾಗಿ ಕಂಡುಬರುತ್ತವೆ. ದಶಾವತಾರದ ಚಿತ್ರಗಳ ಕಲಾವಿದರು ಬದಲಾದ ಪರಿಸ್ಥಿತಿಯಲ್ಲಿ ತಮ್ಮ ಕಲೆಗಳಲ್ಲಿ ವಿಭಿನ್ನತೆಯನ್ನು ಮೈಗೂಡಿಸಿಕೊಂಡು, ಮೂಲದಲ್ಲಿದ್ದ ಕಲೆಯನ್ನು ಬಿಟ್ಟು ಆಧುನಿಕತೆಗೆ ತಕ್ಕಂತೆ ಚಿತ್ರಗಳ ನಿರ್ಮಾಣದಲ್ಲಿ ತೊಡಗಿರುವುದು ಹಾಗೂ ಈ ವಿಷಯವು ಅಧ್ಯಯನದಲ್ಲಿ ಭಿನ್ನತೆಯಾಗಿ ಕಂಡುಬರುತ್ತದೆ.

ಚಿತ್ರದುರ್ಗ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳು

ಪಿ. ವಿಶ್ವನಾಥ ಅವರು ಚಿತ್ರದುರ್ಗ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳು ಎಂಬ ವಿಷಯವಾಗಿ

---

೬೬. ರೇವಣಪ್ಪ ಯ. ಚಿಂತಾಮಣಿ : ಕರ್ನಾಟಕದ ಚಿತ್ರಕಲೆಯಲ್ಲಿ ದಶಾವತಾರದ ಕಲ್ಪನೆ, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೧೦

ಎಂ.ಫಿಲ್. ಅಧ್ಯಯನ ಮಾಡಿದ್ದಾರೆ.[೬೭] ಈ ಅಧ್ಯಯನದ ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆಯನ್ನು ವಿವರಿಸಲಾಗಿದೆ. ಇನ್ನು ಉಳಿದ ಅಧ್ಯಾಯಗಳಲ್ಲಿ ಈ ಪ್ರದೇಶದ ಪ್ರಾಗೈತಿಹಾಸಿಕತೆ, ಸಂಸ್ಕೃತಿ ಮತ್ತು ಪರಿಸರ, ಪ್ರಾಗೈತಿಹಾಸಿಕ ಚಿತ್ರಗಳು ಮತ್ತು ವಸ್ತುವಿಷಯ, ಚಿತ್ರದುರ್ಗ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳ ತೌಲನಿಕ ಅಧ್ಯಯನ, ಪ್ರಾಗೈತಿಹಾಸಿಕ ಚಿತ್ರಗಳ ರಚನಾಕ್ರಮ ಮತ್ತು ಶೈಲಿ ಕುರಿತು ಐದು ಅಧ್ಯಾಯಗಳಲ್ಲಿ ವಿಷಯ ಹರಡಿಕೊಂಡಿದೆ.

ಚಿತ್ರದುರ್ಗ ಪ್ರದೇಶದಲ್ಲಿ ಅತಿ ಹೆಚ್ಚಿನ ಪ್ರಾಗೈತಿಹಾಸಿಕ ಚಿತ್ರಗಳು ಕಂಡುಬಂದಿದ್ದು, ಈ ಜಿಲ್ಲೆಯ ಎಲ್ಲಾ ತಾಲ್ಲೂಕಿನಲ್ಲಿ ಚಿತ್ರಗಳು ಕಂಡುಬರುವ ಪ್ರಾಗೈತಿಹಾಸಿಕ ಚಿತ್ರಗಳಲ್ಲಿ ವೈವಿಧ್ಯ ಗೋಚರಿಸುತ್ತದೆ. ಸಾಮಾನ್ಯವಾಗಿ ಬಯಲು ಬಂಡೆಯ ಚಿತ್ರಗಳಲ್ಲಿ ಕುಟ್ಟಿದ ಮತ್ತು ಕೊರೆದ ಚಿತ್ರ ಪ್ರಕಾರಗಳು ಕಂಡುಬರುತ್ತವೆ. ಈ ಚಿತ್ರದುರ್ಗ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳನ್ನು ವಿಶ್ಲೇಷಿಸುವುದರ ಜೊತೆಗೆ ಪ್ರತಿಯೊಂದು ಚಿತ್ರಗಳ ನೆಲೆಗಳನ್ನು ತೌಲನಿಕವಾಗಿ ವಿವೇಚನೆ ಮಾಡಿರುವ ಪ್ರಯತ್ನವು ಈ ಅಧ್ಯಯನದಲ್ಲಿ ನಡೆದಿದೆ. ಚಿತ್ರದುರ್ಗ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಗಳ ವಿಶ್ಲೇಷಣೆಯ ಸಂದರ್ಭದಲ್ಲಿ ಆ ಜನರ ನಂಬಿಕೆ, ಆಚರಣೆ, ವೇಷಭೂಷಣಗಳು, ವಿಧಿಕ್ರಿಯೆಗಳು, ಮಾಟ–ಮಂತ್ರಗಳಂತಹ ತಂತ್ರಗಾರಿಕೆ, ನೃತ್ಯದಂತಹ ಚಟುವಟಿಕೆಗಳು ಮತ್ತು ನಿತ್ಯ ಬದುಕುಗಳನ್ನು ಚಿತ್ರಿಸಿದ ಹಿನ್ನೆಲೆಯಲ್ಲಿ ಬಿಂಬಿಸಲಾಗಿದೆ.

ವ್ಯಕ್ತಿ ಅಧ್ಯಯನಗಳು

೧. ಬಿ.ಪಿ. ಬಾಯಿರಿ ಕಲೆ ಮತ್ತು ಕಲಾಸಾಹಿತ್ಯ

ಮಹೇಶ ಉಮತಾರರು ಬಿ.ಪಿ. ಬಾಯಿರಿ ಕಲೆ ಮತ್ತು ಕಲಾಸಾಹಿತ್ಯ ಎಂಬ ವಿಷಯವಾಗಿ ಎಂ.ಫಿಲ್ ಅಧ್ಯಯನ ಮಾಡಿದ್ದಾರೆ.[೬೮] ಇಲ್ಲಿ ಒಟ್ಟು ಏಳು ಅಧ್ಯಾಯಗಳಲ್ಲಿ ವಿಷಯಗಳು ಹರಡಿಕೊಂಡಿವೆ. ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವಿಧಾನಗಳ ಬಗೆಗೆ ಹೇಳಲಾಗಿದೆ. ಇಲ್ಲಿ ಇತರ ಮಾದರಿಗಳಿಗಿಂತ ಭಿನ್ನ ಮಾದರಿಗಳನ್ನು ಬಳಸಲಾಗಿದೆ. ಹಾಗೆಯೇ ಅಧ್ಯಯನದ ಧೋರಣೆಗಳು ಸಹ ಈ ಕಾಲಕಾಲಕ್ಕೆ ಹೇಗೆ ಪ್ರಸ್ತುತ ಎಂದು ಹೊಂದಿಕೆಯಾಗುವ ರೀತಿಯಲ್ಲಿ ಸಂಯೋಜಿಸಲು ಪ್ರಯತ್ನಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಬಾಯಿರಿಯವರ ಬಾಲ್ಯ ಪರಿಸರ ಮತ್ತು ಶಿಕ್ಷಣದ ಬಗೆಗೆ ದಾಖಲಿಸಲಾಗಿದೆ. ಇಲ್ಲಿ ಬಾಯಿರಿಯವರ ಬಾಲ್ಯದ ಪರಿಸರ, ಸಂಸ್ಕೃತಿ ಮತ್ತು ಆ ಸಂದರ್ಭದ ಪರಿಸ್ಥಿತಿಯಲ್ಲಿನ ಸಮಾಜದ ಕಟ್ಟಳೆಗಳನ್ನು ಎಳೆಎಳೆಯಾಗಿ ಬಿಡಿಸುತ್ತಾ ಬಾಲಕ ಬಾಯಿರಿಯವರ

೬೭. ಪಿ. ವಿಶ್ವನಾಥ : ಚಿತ್ರದುರ್ಗ ಪ್ರದೇಶದ ಪ್ರಾಗೈತಿಹಾಸಿಕ ಚಿತ್ರಗಳು, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೦೯

೬೮. ಮಹೇಶ ಉಮತಾರ : ಬಿ.ಪಿ. ಬಾಯಿರಿ ಕಲೆ ಮತ್ತು ಕಲಾಸಾಹಿತ್ಯ, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೦೮

ಮೇಲೆ ಪರಿಣಾಮ ಮತ್ತು ತಂದೆಯವರೆ ಶಿಕ್ಷಕರಾಗಿ ಶಿಕ್ಷಣ ನೀಡಿದ ನಂತರ ಬಾಯಿರಿಯವರ ಶಿಕ್ಷಣದ ಗುಣಮಟ್ಟ, ಅಲ್ಲದೇ ಚಿತ್ರಕಲಾ ಕ್ಷೇತ್ರಕ್ಕೆ ಯಾವ ರೀತಿಯಲ್ಲಿ ಪ್ರವೇಶಿಸಿದ್ದರು ಎಂದು ಎಳೆಎಳೆಯಾಗಿ ಬಿಚ್ಚಿಡಲಾಗಿದೆ. ಅಂದಿನ ಸಂದರ್ಭದಲ್ಲಿ ಮದ್ರಾಸ್ ಸೆಂಟರ್‌ನಲ್ಲಿ ಕಲಾಶಿಕ್ಷಣವನ್ನು ಮೊದಲನೆ ಶ್ರೇಣಿಯಲ್ಲಿ ಉತ್ತೀರ್ಣರಾದದ್ದು ಮುಂತಾದ ಘಟನೆಗಳನ್ನು ತಿಳಿಸಲಾಗಿದೆ. ಅವರು ಶಿಕ್ಷಣ ಪಡೆದ ರೀತಿ, ಆ ಕಾಲದ ಶಿಕ್ಷಣ ಪದ್ಧತಿ ಮತ್ತು ಚಿತ್ರಕಲಾ ಪರಿಸರ ಎಲ್ಲವನ್ನು ದಾಖಲಿಸಲು ಪ್ರಯತ್ನಿಸಲಾಗಿದೆ. ಅಧ್ಯಾಯ ಮೂರರಲ್ಲಿ ಬಿ.ಪಿ. ಬಾಯಿರಿಯವರು ವೃತ್ತಿಜೀವನದಲ್ಲಿ ತಮ್ಮ ಕಲಾಶಿಕ್ಷಣ ಮುಂದುವರೆಸಲೆತ್ನಿಸಿದ ಬೆನ್ನಲ್ಲೆ ಮನೆಯ ಆರ್ಥಿಕ ಪರಿಸ್ಥಿತಿ ಹದೆಗಟ್ಟ ಕಾರಣದಿಂದಾಗಿ ಶಿಕ್ಷಕ ವೃತ್ತಿ ಪ್ರಾರಂಭಿಸಿದ್ದು, ಅವರ ಬದುಕು ಹೇಗಿತ್ತು, ಕಲೆಯೊಂದಿಗಿನ ಅವರ ಅನುಸಂದಾನ ಯಾವ ತೆರನಾದುದು, ಅವರ ಬದುಕಿನಲ್ಲಿ ಕುಟುಂಬದವರೊಂದಿಗೆ ಸಂಪರ್ಕ ಹೇಗಿತ್ತು, ಸ್ನೇಹಿತರ ಜೊತೆಗಿನ ಸಂಬಂಧ ಹೇಗಿತ್ತು, ತಮ್ಮ ವೃತ್ತಿ ಜೊತೆ ಜೊತೆಗೆ ಸಮಾಜಕ್ಕೆ ಕಲಾಕೃತಿಗಳ ಕೊಡುಗೆ, ಭಾವಚಿತ್ರಣ, ದೇವರ ಚಿತ್ರಪಟ ರಚನೆ ಮುಂತಾದವುಗಳ ಬಗ್ಗೆ ಚರ್ಚೆಯ ಮೂಲಕ ಅಧ್ಯಾಯವನ್ನು ಪೂರ್ಣಗೊಳಿಸಲು ಯತ್ನಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಬಾಯಿರಿಯವರ ಕಲಾಕೃತಿಗಳು ಹಾಗೂ ಭಾವಚಿತ್ರಗಳು, ಇಲ್ಲಿ ಪ್ರಮುಖವಾಗಿ ಇವರು ಸಮಾಜಕ್ಕೆ ಬೇಕಾಗುವ ಕಲಾಕೃತಿಗಳಿಗೆ ಪ್ರಾಧಾನ್ಯವನ್ನು ನೀಡಿರುವುದು ಕಂಡುಬರುತ್ತದೆ. ಭಾವಚಿತ್ರಣದಲ್ಲಿ ತುಂಬಾ ಪ್ರಾವೀಣ್ಯವನ್ನು ಪಡೆದಿರುವುದು ಅವರ ಕಲಾಕೃತಿಯನ್ನು ವೀಕ್ಷಿಸಿದಾಗ ಅವರ ಕಲಾಕೃತಿಗಳು ಬಿಂಬಿಸುವ ಭಾವ, ಬಣ್ಣದ ಬಳಕೆ, ಸಂಯೋಜನೆಯ ಸೂಕ್ಷ್ಮತೆ, ಹೊನಲು ಬೆಳಕು, ಉಬ್ಬುತಗ್ಗುಗಳ ಹೊಂದಾಣಿಕೆ ಮುಂತಾದ ಅಂಶಗಳನ್ನು ಇಟ್ಟುಕೊಂಡು ವಿಮರ್ಶಿಸಲಾಗಿದೆ. ಕಲಾಕೃತಿ ರಚಿಸಿದ ದಿನಾಂಕ, ಉದ್ದಳತೆ, ಕಲಾವಿದರ ಕಲಾಕೃತಿಗಳಿರುವ ಪ್ರದೇಶವಾರು ಮನೆಗಳನ್ನು ಈ ಅಧ್ಯಯನದ ಮಿತಿಯಲ್ಲಿ ಸಂಗ್ರಹಿಸಲು ಸಾಧ್ಯವಾಗಿಲ್ಲ.

ಐದನೆಯ ಅಧ್ಯಾಯದಲ್ಲಿ ಬಾಯಿರಿಯವರಿಗೆ ಚಿಕ್ಕಂದಿನಿಂದಲೇ ರಂಗೋಲಿ ಸದಾ ಕಾಡುತ್ತಿದ್ದ ಕಲಾವಸ್ತುವಾಗಿತ್ತು. ಆಗಾಗ ರಂಗೋಲಿಯ ಬಗೆಗೆ ಚಿಂತನ-ಮಂಥನಗಳನ್ನು ನಡೆಸುತ್ತಿದ್ದ ಬಾಯಿರಿ ತಮ್ಮ ನಿವೃತ್ತಿಯ ನಂತರ ರಂಗೋಲಿಯ ಕಡಗೆ ತಮ್ಮ ಧ್ಯಾನವನ್ನು ಕೇಂದ್ರೀಕರಿಸಿ 'ರಂಗೋಲಿ ಕಲೆಯಲ್ಲ' ಎಂದು ಪ್ರತಿಪಾದಿಸಿದ ಕಲಾವಿದರಿಗೆ ರಂಗೋಲಿಯಲ್ಲಿ ಸಾಧನೆಯನ್ನು ಮಾಡಿ ಅವರಿಗೆ ಉತ್ತರ ನೀಡಿದರು. ರಂಗೋಲಿಯ ಬಗ್ಗೆ ಸಮಗ್ರವಾದ ಮಾಹಿತಿಯನ್ನು ೧೯೬೦ರ ದಶಕದಲ್ಲಿ ಸಂಗ್ರಹಿಸಿ ಅವುಗಳನ್ನು ಉಳಿಸಿ ಬೆಳೆಸಬೇಕೆಂಬ ಕಾರಣದಿಂದಾಗಿ ಪುಸ್ತಕಗಳ ರೂಪದಲ್ಲಿ ಜನಸಾಮಾನ್ಯರಿಗೆ ಕೈಗೆ ಎಟುಕುವ ಬೆಲೆಯಲ್ಲಿ ನೀಡಿದ್ದಾರೆ. ಅವರ ಈ ನಿಲ್ಲದ ಕ್ರಿಯಾಶೀಲತೆ ಈಗಿನ ಯುವ ಕಲಾವಿದರಿಗೆ ಮಾದರಿಯಾಗಿದೆ. ತಮ್ಮ ನಿವೃತ್ತಿ ಜೀವನವನ್ನು ಸದುಪಯೋಗ ಪಡಿಸಿಕೊಳ್ಳಬಲ್ಲವರೆಂದರೆ ಕಲಾವಿದರು ಮಾತ್ರ ಎಂದು ತೋರಿಸಿಕೊಟ್ಟಿದ್ದಾರೆ. ಬಾಯಿರಿಯವರ ರಂಗೋಲಿ ಕಲೆಯನ್ನು ಕನ್ನಡದ ಹೆಚ್ಚಿನ ಪತ್ರಿಕೆಗಳಲ್ಲಿ

[illegible]

ಸತತವಾಗಿ ಮುದ್ರಿಸಲಾಗಿತ್ತು. ಅವರ ನೂರಾರು ರಂಗೋಲಿಗಳು, ಹಲವಾರು ಕಲಾಲೇಖನಗಳು ತರಂಗದಲ್ಲಿ ಪ್ರಕಟಗೊಂಡಿದ್ದನ್ನು ಸ್ಮರಿಸಬಹುದು. ಅಲ್ಲದೇ ಅವು ಮುಂದಿನ ಸಂಶೋಧನೆ ಬಯಸುವ ರಂಗೋಲಿಕಲಾವಿದರಿಗೆ ಮಾರ್ಗದರ್ಶಕವಾಗಿದೆ. ಅಧ್ಯಾಯ ಆರರಲ್ಲಿ ಬಿ.ಪಿ. ಬಾಯಿರಿಯವರ ಕಲಾಸಾಹಿತ್ಯದ ಬಗ್ಗೆ ಹೇಳುವುದಾದರೆ ಆ ಸಂದರ್ಭದಲ್ಲಿ ಕಲೆಯ ಬಗ್ಗೆ ಪುಸ್ತಕಗಳು ಪ್ರಕಟಗೊಂಡಿರಲಿಲ್ಲ. ಆಂಗ್ಲಭಾಷೆಯಲ್ಲಿ ಮಾತ್ರ ಸಿಗುತ್ತಿದ್ದ ಕಲಾಪುಸ್ತಕಗಳನ್ನು ಓದಿಕೊಂಡು ತಮ್ಮದೇಯಾದ ಬರವಣಿಗೆಯ ಪದ್ಧತಿಯಲ್ಲಿ ಸುಮಾರು ೨೨ಕ್ಕೂ ಅಧಿಕ ಪುಸ್ತಕಗಳನ್ನು ಆ ದಿನಮಾನಗಳಲ್ಲಿ ಪ್ರಕಟಿಸಿದ ಒಬ್ಬ ಧೀಮಂತ ಕಲಾಸಾಹಿತಿಯೆಂದು ಹೇಳಬಹುದು. ಕಲಾವಿದ್ಯಾರ್ಥಿಗಳಿಗಾಗಿ ಈ ಪುಸ್ತಕಗಳನ್ನು ರಚಿಸುವುದಕ್ಕಾಗಿಯೇ ಬಹುಶಃ ಕಲಾಸಾಹಿತಿಯಾಗಿ ಬಾಯಿರಿಯವರು ಬಂದಿರಬಹುದೆಂದು ಹೇಳಬಹುದು. ಇದೆಲ್ಲವನ್ನು ಈ ಅಧ್ಯಾಯದಲ್ಲಿ ತರ್ಕಿಸಲಾಗಿದೆ. ಇನ್ನು ಏಳನೆಯ ಅಧ್ಯಾಯ ಸಮಾರೋಪವಾಗಿದ್ದು, ಇಲ್ಲಿ ಒಟ್ಟು ಅಧ್ಯಯನದ ಫಲಿತಗಳನ್ನು ದಾಖಲಿಸಲಾಗಿದೆ. ಹಾಗೆಯೇ ಅನುಬಂಧದಲ್ಲಿ ಸಂಪೂರ್ಣ ಛಾಯಾಚಿತ್ರಗಳ ವಿವರ, ಗ್ರಂಥಋಣ ಮುಂತಾದವುಗಳನ್ನು ಜೋಡಿಸಿ ಈ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

೨. ಕಲಾವಿದ ಡಾ. ಎಂ.ವಿ. ಮಿಣಜಿಗಿ

ಸಿ.ಡಿ ಜಟ್ಟಣ್ಣನವರು ಕಲಾವಿದ ಡಾ. ಎಂ.ವಿ. ಮಿಣಜಿಗಿಯವರನ್ನು ಕುರಿತು ಎಂ.ಫಿಲ್ ಅಧ್ಯಯನವನ್ನು ಡಾ. ಎಸ್.ಸಿ. ಪಾಟೀಲ್ ಅವರ ಮಾರ್ಗದರ್ಶನದಲ್ಲಿ ಮಾಡಿದ್ದಾರೆ.[೬೯] ಒಟ್ಟು ಏಳು ಅಧ್ಯಾಯಗಳಲ್ಲಿ ವಿಷಯ ಹರಡಿಕೊಂಡಿದೆ. ಯಾವುದೇ ಕಲಾಕೃತಿಯ ಹಿಂದೆ ಆ ಕಲಾವಿದನ ಮನಸ್ಥಿತಿಯು ಮುಖ್ಯವಾಗಿ ಕಾರಣವಾಗಿರುತ್ತದೆ. ಹೀಗಾಗಿ ಚಿತ್ರಕಲೆ ಮನಶ್ಶಾಸ್ತ್ರಕ್ಕೆ ಬಿಡಲಾರದ ನಂಟುತನವಿದ್ದು, ಇವು ಒಂದಕ್ಕೊಂದು ಪೂರಕ ಮತ್ತು ಪ್ರೇರಕವಾದ ಸಂಬಂಧವನ್ನು ಹೊಂದಿವೆ ಎಂದು ಹೇಳಬಹುದು. ಜೀವನವನ್ನೇ ಕಲೆಯ ವಿವಿಧ ಆಯಾಮಗಳನ್ನಾಗಿ ರೂಪಿಸಿಕೊಳ್ಳುವವರಿಗೆ ಒಂದು ವಿಶಿಷ್ಟ ಒಳಗಣ್ಣು ಇರುತ್ತದೆ. ಈ ಅಂತರ್‌ದೃಷ್ಟಿ ಬೆಳೆದಂತೆಲ್ಲಾ ಅವನು ಕಲಾರಸಿಕನಾಗುತ್ತಾನೆ. ಕಲಾರಾಧಕನಾಗಿರುತ್ತಾನೆ. ಉತ್ತಮ ಮಾನವನಾಗಿರುತ್ತಾನೆ ಎಂದು ಸಂತೋಷಕುಮಾರ ಗುಲ್ವಾಡಿಯವರು ಅಭಿಪ್ರಾಯ ಪಡುತ್ತಾರೆ.

ಹೀಗೆ ಡಾ. ಎಂ.ವಿ. ಮಿಣಜಿಗಿಯವರು ತಮ್ಮ ಜೀವನವನ್ನೇ ಕಲೆಗೆ ಮುಡುಪಾಗಿಟ್ಟುಕೊಂಡು ಹಲವಾರು ಕಲಾಕೃತಿಗಳನ್ನು ರಚಿಸುವುದರೊಂದಿಗೆ ಸಮೃದ್ಧಿಯ ಕಲಾಬದುಕನ್ನು ಅಂತ್ಯಗೊಳಿಸಿ ದಿನಾಂಕ ೧೬.೦೫.೧೯೮೭ರಂದು ದೈವಾಧೀನರಾಗಿದ್ದಾರೆ. ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವೈಧಾನಿಕತೆಯನ್ನು ಕುರಿತಂತೆ ವಿವರಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಮಿಣಜಿಗಿಯವರ ಸಾಂಸ್ಕೃತಿಕ ಪರಿಸರ ಮತ್ತು ಕಲಾಬದುಕು ಕುರಿತು ವಿವರವನ್ನು ನೀಡಲಾಗಿದೆ.

---

೬೯. ಸಿ. ಡಿ. ಜಟ್ಟಣ್ಣನವರ : ಕಲಾವಿದ ಡಾ. ಎಂ.ವಿ. ಮಿಣಜಿಗಿ, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೦೫

ಮೂರನೆಯ ಅಧ್ಯಾಯದಲ್ಲಿ ಎಂ.ವಿ.ಮಿಣಜಿಗಿಯವರ ಚಿತ್ರಕಲಾ ಶಿಕ್ಷಣ ಮತ್ತು ವೃತ್ತಿಜೀವನವನ್ನು ಹೇಳಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಎಂ.ವಿ. ಮಿಣಜಿಗಿಯವರು ಚಿತ್ರಕಲಾ ಕ್ಷೇತ್ರಕ್ಕೆ ನೀಡಿದ ಕೊಡುಗೆ ಕುರಿತಂತೆ ವಿವರಗಳಿವೆ. ಡಾ. ಮಿಣಜಿಗಿಯವರು ಮುಂಬೈನ ಸರ್.ಜೆ.ಜೆ. ಸ್ಕೂಲ್ ಆಫ್ ಆರ್ಟ್ ಹಾಗೂ ಲಂಡನ್ ರಾಯಲ್ ಕಲಾಕಾಲೇಜಿನಲ್ಲಿ ವ್ಯಾಸಂಗ ಪೂರೈಸಿ, ಅನೇಕ ಪ್ರಶಸ್ತಿಗಳನ್ನು ಕೂಡ ಸಂಪಾದಿಸಿ ಕಲಾವಿದನ ಜೀವನಕ್ಕೆ ೧೯೩೩ರಲ್ಲಿ ಭಾರತಕ್ಕೆ ಮರಳಿ ಹಲವು ಕಲಾಸಾಧನೆಯನ್ನು ಗೈದಿದ್ದಾರೆ.

ಐದನೆಯ ಅಧ್ಯಾಯದಲ್ಲಿ ಕಲಾವಿದ ಡಾ. ಎಂ.ವಿ. ಮಿಣಜಿಗಿಯವರು ಹೇಳುವಂತೆ ಪರಂಪರೆಯಿಲ್ಲದೆ ಯಾವ ಕಲೆ, ಶಿಲ್ಪ, ಸಾಹಿತ್ಯ ಬೆಳೆಯುವುದಿಲ್ಲ, ಪರಂಪರೆಯೆನ್ನುವುದು ಕಟ್ಟಡಕ್ಕಿರುವ ಭದ್ರ ತಳಹದಿಯಂತೆ ಎಂಬುದು ಇವರ ಮಾತಾಗಿತ್ತು. ವಿದೇಶಿ ಪದ್ಧತಿಯಲ್ಲಿ ಕಲಾಶಿಕ್ಷಣವನ್ನು ಪಡೆದರೂ ದೇಶೀಯತೆಯನ್ನು ತಮ್ಮ ಚಿತ್ರಗಳಲ್ಲಿ ಉಳಿಸಿಕೊಂಡು ಬಂದಿದ್ದಾರೆ. ಪರಂಪರೆ ಮೌಲ್ಯ ಕುರಿತು ಮಿಣಜಿಗಿಯವರಿಗೆ ಇರುವ ಅಸಾಧಾರಣ ಶಕ್ತಿಯನ್ನು ಈ ಚಿತ್ರಗಳು ಸಾರಿ ಹೇಳುತ್ತವೆ.

ಆರನೆಯ ಅಧ್ಯಾಯದಲ್ಲಿ ಡಾ. ಮಿಣಜಿಗಿಯವರು ಆಗಿನ ಸಂದರ್ಭದಲ್ಲಿ ನೈಜಚಿತ್ರಣಗಳನ್ನು ಹೆಚ್ಚು ಪ್ರೀತಿಸುತ್ತಿದ್ದರು. ಮತ್ತು ಇವರ ಕಲಾಗುರು ರೊಥೆನ್ ಸ್ಟೆನ್‌ರ ಕಲಾ ಮಟ್ಟಿನ ಪ್ರಭಾವ ಇವರಲ್ಲಿ ಆಗಿರುವುದರಿಂದ ವಿಶೇಷವಾಗಿ ಪಾರಂಪರಿಕವಾದ ನೈಜವಾದ ಚಿತ್ರಗಳನ್ನು ಚಿತ್ರಿಸುವಲ್ಲಿ ಸಿದ್ಧಹಸ್ತರು. ಇವರು ಮೃದು ವರ್ಣಗಳನ್ನು ಚಿತ್ರಗಳಲ್ಲಿ ಬಳಸುತ್ತಿದ್ದರಲ್ಲದೇ ನೆರಳು–ಬೆಳಕು ತೇಪೆಯಲ್ಲಿ ತೋರಿಸುವುದರಿಂದ ನೈಜ ಸ್ವರೂಪದ ತಂತ್ರಗಾರಿಕೆಯು ತಿಳಿದುಬರುತ್ತದೆ. ಚಿತ್ರಗಳಲ್ಲಿ ಸೂಕ್ಷ್ಮತೆ, ಸ್ಪಷ್ಟತೆ, ಹಿನ್ನೆಲೆಯ ನಿಸರ್ಗ, ವ್ಯಕ್ತಿಗಳ ಗಾಂಭಿರ್ಯ, ಉತ್ಸುಕತೆ, ಭಾವ ಪರವಶತೆ ಎಲ್ಲ ನವರಸಗಳಿಂದ ಕೂಡಿದ್ದು ಕಾವ್ಯಮಯವಾದ ಅಪೂರ್ಣವಾದ ಕಳೆಯನ್ನು ತಂದುಕೊಟ್ಟಿವೆ. ಏಳನೆಯ ಅಧ್ಯಾಯದಲ್ಲಿ ಒಟ್ಟು ಅಧ್ಯಯನದ ಸಮೀಕ್ಷೆಗಳನ್ನು ಒಳಪಡಿಸಲಾಗಿದೆ.

ಮಿಣಜಿಗಿಯವರು ಬಾಲ್ಯದಿಂದಲೂ ಕಲೆಯನ್ನು ಒಂದು ಗುರಿಯಾಗಿ ಇಟ್ಟುಕೊಂಡು ತುಂಬ ಪ್ರಯತ್ನದಿಂದ ಈ ಕ್ಷೇತ್ರಕ್ಕೆ ಕಾಲಿಟ್ಟರು. ಇವರು ಜಲವರ್ಣ, ತೈಲವರ್ಣ ಎರಡರಲ್ಲಿಯೂ ಪ್ರಭುತ್ವವನ್ನು ಹೊಂದಿದವರಾಗಿದ್ದಾರೆ. ಪಾಶ್ಚಿಮಾತ್ಯ ಕಲಾಗುರುಗಳಿಂದ ಪ್ರಶಂಸೆ ಗಳಿಸುವುದರೊಂದಿಗೆ ಬೇರೆ ಬೇರೆ ದೇಶಗಳಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಕಲಾಕೃತಿಗಳ ಪ್ರದರ್ಶನ ಮಾಡುವ ಅವಕಾಶ ದೊರೆಯಿತು. ಕರ್ನಾಟಕದಿಂದ ಮೊಟ್ಟಮೊದಲ ಬಾರಿಗೆ ರಾಯಲ್ ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ವಿದ್ಯಾಭ್ಯಾಸ ಮಾಡಿದ ಮೊದಲ ಕಲಾವಿದರೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಮಿಣಜಿಗಿಯವರು ರಾಗಮಾಲಾ ಚಿತ್ರಗಳಲ್ಲಿ ಅಪೂರ್ವ ಸಾಧನೆ ಮಾಡಿದ್ದಾರೆ. ಕಲಾಪ್ರಾಧ್ಯಾಪಕರಾಗಿ, ಕಲಾವಿದರಾಗಿ, ಕಲಾಶಿಕ್ಷಣವನ್ನು ಪ್ರಾರಂಭಿಸಿ, ಸಂಸ್ಥಾಪಕರಾಗಿ ಕಾರ್ಯನಿರ್ವಹಿಸಿದ್ದಾರೆ. ಕಲಾಶಿಕ್ಷಣ ಪ್ರಸಾರಕ್ಕಾಗಿ ಬೆಂಗಳೂರು, ದಾವಣಗೆರೆ, ಹುಬ್ಬಳ್ಳಿಗಳಲ್ಲಿ

[illegible]

ಕಲಾಶಾಲೆಗಳನ್ನು ಪ್ರಾರಂಭಿಸಿದ ಶ್ರೇಯಸ್ಸು ಇವರದಾಗಿದೆ. ಕರ್ನಾಟಕ ವಿಶ್ವವಿದ್ಯಾಲಯದಿಂದ ಕರ್ನಾಟಕದಲ್ಲಿ ಮೊಟ್ಟ ಮೊದಲ ಬಾರಿಗೆ ಗೌರವ ಡಾಕ್ಟರೇಟ್ ಪದವಿ ಪಡೆದ ಅದೃಷ್ಟವಂತ ಕಲಾವಿದ ಇವರಾಗಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿ ಸದಸ್ಯರಾಗಿ ಅಕಾಡೆಮಿಯಿಂದ ಗೌರವ ಪುರಸ್ಕೃತರಾದ ಮೊದಲ ಕಲಾವಿದರಿವರು. ಅಲ್ಲದೇ ಸರ್ಕಾರದ ಅನೇಕ ಉನ್ನತ ಮಟ್ಟದ ಕಲಾಸಮಿತಿಗಳ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಸಾಹಿತಿ ಇನ್ನಿತರ ಕ್ಷೇತ್ರಗಳ ಕಲಾವಿದರೊಂದಿಗೆ ಉತ್ತಮವಾದ ಬಾಂಧವ್ಯವನ್ನು ಹೊಂದಿದ ವ್ಯಕ್ತಿಯಾಗಿದ್ದಾರೆ. ಇವರ ಕಲಾಕೃತಿಗಳು ದೇಶ-ವಿದೇಶಗಳಲ್ಲಿಯ ಕಲಾಗ್ಯಾಲರಿಗಳಲ್ಲಿ ಸಂಗ್ರಹಿಸಲ್ಪಟ್ಟಿವೆ. ಸಂಗೀತ, ಸಾಹಿತ್ಯ ಮುಂತಾದ ಲಲಿತಕಲೆಗಳಲ್ಲಿ ಅಪಾರವಾದ ಜ್ಞಾನವನ್ನು ಹೊಂದಿದ್ದು, ಸಂಗೀತ ಅಕಾಡೆಮಿ ಉಪಾಧ್ಯಕ್ಷರಾಗಿಯೂ ಕಾರ್ಯವನ್ನು ನಿರ್ವಹಿಸಿದ್ದಾರೆ. ಇದಲ್ಲದೇ ಇವರ ಹೆಸರಿನಲ್ಲಿ ಕಲಾಗ್ಯಾಲರಿಯೊಂದನ್ನು ಹುಬ್ಬಳ್ಳಿಯಲ್ಲಿ ಸ್ಥಾಪಿಸಿದ್ದಾರೆ.

೩. ಶ್ರೀ ಸಂತ ಶುಭರಾಯರ ಜೀವನ ಮತ್ತು ಕಲಾಕೃತಿಗಳು

ಶ್ರೀಮತಿ ಶೈಲಾ ಬರಡೋಲಾ ಅವರು ಕಲಾವಿದ ಶ್ರೀ ಸಂತ ಶುಭರಾಯರ ಜೀವನ ಮತ್ತು ಕಲಾಕೃತಿಗಳನ್ನು ಕುರಿತು ಡಾ. ಎಸ್.ಸಿ. ಪಾಟೀಲ್ ಅವರ ಮಾರ್ಗದರ್ಶನದಲ್ಲಿ ಎಂ.ಫಿಲ್ ಅಧ್ಯಯನವನ್ನು ಮಾಡಿದ್ದಾರೆ.[೨೦] ಒಟ್ಟು ಏಳು ಅಧ್ಯಾಯಗಳಲ್ಲಿ ವಿಷಯಗಳ ಅಧ್ಯಯನ ಹರಡಿಕೊಂಡಿದೆ.

ಮೊದಲನೆಯ ಅಧ್ಯಾಯದಲ್ಲಿ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವೈಧಾನಿಕತೆ ಕುರಿತು ವಿವರಣೆ ಒಳಗೊಂಡಿದೆ. ಇಲ್ಲಿ ಇದುವರೆಗೆ ನಡೆದ ಈ ಕ್ಷೇತ್ರದ ಅಧ್ಯಯನದ ಸಮೀಕ್ಷೆಯನ್ನು ಮಾಡಿ ಮುಂದಿನ ಅಧ್ಯಯನಕ್ಕೆ ಭೂಮಿಕೆಯನ್ನು ಸಿದ್ಧಪಡಿಸಿಕೊಳ್ಳಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಸಂತ ಶುಭರಾಯರ ಜೀವನ ಕುರಿತು, ಹೇಗೆ ಈ ಕಲಾವಿದ ಬೆಳೆದು ಬಂದ ಹಿನ್ನೆಲೆ, ಹುಟ್ಟಿದ ಸ್ಥಳ ಹಾಗೂ ಶುಭರಾಯರು ಆಡುವ ಭಾಷೆಗಳು ಮತ್ತು ಟಿಪ್ಪುಸುಲ್ತಾನನ ಬಳಿ ಪ್ರಧಾನ ಮಂತ್ರಿಯಾಗಿ ಸೇವೆ ಮಾಡಿದ ವಿವರ, ಅಲ್ಲದೇ ಒಬ್ಬ ಸಂಗೀತಗಾರ, ನೃತ್ಯಗಾರ, ಕವಿ ಇವುಗಳ ಕುರಿತಾಗಿ ಪೂರಕವಾಗಿ ಇಲ್ಲಿ ಚರ್ಚಿಸಲಾಗಿದೆ. ಶುಭರಾಯರ ಪ್ರದೇಶ ಚಾರಿತ್ರಿಕ ಹಾಗೂ ಐತಿಹಾಸಿಕ ಹಿನ್ನೆಲೆಯಲ್ಲಿ ವಿವರಿಸಲಾಗಿದೆ. ಇವರ ಬದುಕಿನ ಮಹತ್ವದ ಘಟ್ಟಗಳನ್ನು ಮತ್ತು ಬಹುಮುಖ ವ್ಯಕ್ತಿತ್ವದ ಕುರಿತು, ಕರ್ನಾಟಕವನ್ನು ಬಿಟ್ಟು ಸೊಲ್ಲಾಪುರಕ್ಕೆ ಹೋಗಲು ಪ್ರಮುಖವಾದ ಘಟ್ಟಗಳನ್ನು ಕೂಡ ವಿವರಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಸಂತ ಶುಭರಾಯರು ರಚಿಸಿದ ವಿಷ್ಣುವಿನ ದಶಾವತಾರದ ವಿವಿಧ ರೂಪಗಳಾದ ಶೇಷಶಾಯಿ ವಿಷ್ಣು, ಮತ್ಸ್ಯಾವತಾರ, ಕೂರ್ಮಾವತಾರ, ವರಾಹಾವತಾರ, ನರಸಿಂಹಾವತಾರ, ವಾಮನಾವತಾರ, ಪರಶುರಾಮನ ಅವತಾರ, ರಾಮನವತಾರ, ಕೃಷ್ಣ ಅವತಾರ,

---

೨೦. ಶ್ರೀಮತಿ ಶೈಲಾ ಬರಡೊಲ : ಶ್ರೀ ಸಂತ ಶುಭರಾಯರ ಜೀವನ ಮತ್ತು ಕಲಾಕೃತಿಗಳು, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೦೭

ಕಲ್ಕಿ ಅವತಾರ ಚಿತ್ರಕಲಾಕೃತಿಗಳ ಶೈಲಿ, ಬಣ್ಣಗಳ ಬಳಕೆ, ಸಂಯೋಜನೆ, ಕಲಾಕೃತಿಗಳಲ್ಲಿ ಪ್ರಮಾಣಗಳ ಹಾಗೂ ವಿಷ್ಣುವಿನ ದಶಾವತಾರದ ಕೃತಿಗಳ ವಸ್ತುವಿಷಯವನ್ನು ಕುರಿತು ಆಳವಾಗಿ ಅಧ್ಯಯನ ಮಾಡಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಸಂತ ಶುಭರಾಯರು ರಚಿಸಿದ ಧಾರ್ಮಿಕ ಮತ್ತು ಪೌರಾಣಿಕ ರಾಮಾಯಣ ಮತ್ತು ಮಹಾಭಾರತಕ್ಕೆ ಸಂಬಂಧಿಸಿದ ಕಲಾಕೃತಿಗಳ ಕುರಿತು ಅಲ್ಲದೇ ಕಲಾಕೃತಿಗಳಲ್ಲಿ ಬಣ್ಣ, ಪ್ರಮಾಣ, ರೂಪ, ಲಾವಣ್ಯ, ಲಯ, ಕೃತಿಗಳಲ್ಲಿ ಸಂಯೋಜನೆ ಹಾಗೂ ಕಲಾಕೃತಿಗಳಲ್ಲಿ ಕಂಡುಬರುವಂತಹ ರಸಾನುಭವಗಳ ಕುರಿತು ೨೦ ಕಲಾಕೃತಿಗಳ ಛಾಯಾಚಿತ್ರಗಳ ವಿಷಯವನ್ನು ಹಂತ ಹಂತವಾಗಿ ವಿವರಿಸಲಾಗಿದೆ. ಅದಲ್ಲದೆ ವಿನ್ಯಾಸಗಳನ್ನು, ವರ್ಣಗಳ ಸಾಂಗತ್ಯ, ಸಮೀಪ ದೂರದ ಪರಿಕಲ್ಪನೆ, ನೆರಳು ಬೆಳಕಿನ ಛಾಯಾಕ್ರಮ ಮುಂತಾದ ಹತ್ತು ಹಲವಾರು ಸಂಗತಿಗಳ ಹಿನ್ನೆಲೆಯಲ್ಲಿ ಚಿತ್ರಗಳ ವಿಶ್ಲೇಷಣೆಯನ್ನು ಮಾಡಲಾಗಿದೆ. ಶುಭರಾಯರ ಕಲಾಕೃತಿಗಳ ಪ್ರಮುಖ ಧೋರಣೆಗಳನ್ನು ಇಲ್ಲಿ ಚರ್ಚೆಗೆ ಒಳಪಡಿಸಲಾಗಿದೆ.

ಐದನೆಯ ಅಧ್ಯಾಯವು ಶುಭರಾಯರ ಕಲಾಕೃತಿಗಳ ಮೇಲಾದ ಪ್ರಭಾವ ಮತ್ತು ಪ್ರೇರಣೆಯ ಒಟ್ಟು ಲಕ್ಷಣಗಳ ಕುರಿತಾಗಿದೆ. ಇಲ್ಲಿ ಪ್ರಮುಖವಾಗಿ ಕಂಡುಬರುವ ಅವರ ಕಲಾಕೃತಿಗಳಲ್ಲಿ ಅವರದೇಯಾದ ವಿಶಿಷ್ಟ ಶೈಲಿಯನ್ನು ಕಾಣಬಹುದು. ಕಾರಣ ಇವರು ಮೂಲತಃ ಕರ್ನಾಟಕದವರಾದ್ದರಿಂದ ಮತ್ತು ಒಬ್ಬ ಉತ್ತಮ ಕಲಾವಿದರಾಗಿ ಹೊರರಾಜ್ಯದಲ್ಲಿ ಗುರುತಿಸಿಕೊಂಡಿದ್ದಾರೆ. ಆದರೆ ಇವರ ಕಲಾಕೃತಿಯಲ್ಲಿ ಯಾವುದೇ ರಾಜ್ಯದ ಅಂದರೆ ಮಹಾರಾಷ್ಟ್ರದ ಪ್ರಭಾವ ಮತ್ತು ಕರ್ನಾಟಕದ ಪ್ರಭಾವ, ಹೀಗೆ ಯಾವುದೂ ಕಂಡುಬರುವುದಿಲ್ಲ. ಹಾಗಾಗಿ ಇವರ ಕಲಾಕೃತಿಗಳಲ್ಲಿ ಇವರದೇಯಾದ ಶೈಲಿಯು ಕಂಡುಬರುತ್ತದೆ. ಪ್ರಮುಖವಾಗಿ ಇದರಲ್ಲಿ ಪೌರಾಣಿಕ ವಿಷಯಗಳಾದ ರಾಮಾಯಣ, ಮಹಾಭಾರತ, ವಿಷ್ಣುವಿನ ದಶಾವತಾರ, ಕೃಷ್ಣನ ವಿವಿಧ ಸನ್ನಿವೇಶ ಇನ್ನೂ ಮುಂತಾದ ವಸ್ತುವಿಷಯಗಳನ್ನಾಧರಿಸಿ ರಚಿಸಿದ ಕಲಾಕೃತಿಗಳ ವಿವರಣೆಯನ್ನು ಇಲ್ಲಿ ಪ್ರಸ್ತುತ ಪಡಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಸಂತ ಶುಭರಾಯರು ರಚಿಸಿದ ಸುಮಾರು ಎರಡು ನೂರು ವರ್ಷಕ್ಕೂ ಹಿಂದಿನ ಕಲಾಕೃತಿಗಳ ಇಂದಿನ ಸ್ಥಿತಿಗತಿಯ ಕುರಿತು ಹೇಳಲಾಗಿದ್ದು, ಈಗಲೂ ತಕ್ಕಮಟ್ಟಿಗೆ ಉತ್ತಮ ಸ್ಥಿತಿ ಇದ್ದು, ಹಲವಾರು ಕಾರಣಗಳಿಂದ ನಿಧಾನಗತಿಯಲ್ಲಿ ಅವನತಿಯತ್ತ ಸಾಗುತ್ತಿದ್ದು, ಹೀಗೆ ವಿವಿಧ ಆಪತ್ತಿಗೆ ಸಿಲುಕಿ ಹಾಳಾಗುತ್ತಿರುವ ಕಲಾಕೃತಿಗಳ ಕುರಿತು ಹಂತ ಹಂತವಾಗಿ ಆಪತ್ತುಗಳನ್ನು ಹೆಸರಿಸಿ ವಿವರಿಸಲಾಗಿದೆ. ಹಾಗೂ ಕಲಾಕೃತಿಗಳನ್ನು ಸುವ್ಯವಸ್ಥಿತವಾಗಿ ಕಾಪಾಡಿಕೊಂಡು ಹೋಗಲು ವೈಜ್ಞಾನಿಕ ವಿಧಾನಗಳ ಮೂಲಕ ಸಂರಕ್ಷಣೆಯ ಕುರಿತು ಸುದೀರ್ಘವಾದ ಅಧ್ಯಯನಕ್ಕೆ ಒಳಪಡಿಸಿ ಒಟ್ಟು ಕಲಾಕೃತಿಗಳ ಸ್ಥಿತಿಗತಿ, ಆಪತ್ತು ಸಂರಕ್ಷಣಾ ಕ್ರಮಗಳ ಕುರಿತು ವಿವರಣೆಯನ್ನು ನೀಡಲಾಗಿದೆ. ಏಳನೆಯ ಅಧ್ಯಾಯವು ಸಮಾರೋಪವಾಗಿದ್ದು, ಈ ಅಧ್ಯಾಯದಲ್ಲಿ ಈ ಹಿಂದಿನ ಆರು ಅಧ್ಯಾಯಗಳ ಒಟ್ಟು ಅಧ್ಯಯನದ ಫಲಿತಗಳನ್ನು

ಸಮೀಕ್ಷಿಸಲಾಗಿದೆ. ಕರ್ನಾಟಕದಲ್ಲಿ ಬೆಳೆದು ಟಿಪ್ಪುಸುಲ್ತಾನನ ಅಸ್ಥಾನದಲ್ಲಿ ಉಪಮುಖ್ಯ ಮಂತ್ರಿ ಸ್ಥಾನದವರಿಗೆ ರಾಜಕೀಯ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸಿ ಆಕಸ್ಮಿಕ ಸಂದರ್ಭದ ಹಿನ್ನೆಲೆಯಲ್ಲಿ ಸೊಲ್ಲಾಪುರಕ್ಕೆ ಬಂದು ಆಧ್ಯಾತ್ಮಿಕ ಕ್ಷೇತ್ರಕ್ಕೆ ತೆರಳಿ ಅಲ್ಲಿಯೇ ದೇವರ ಆರಾಧನೆಗಾಗಿ ಚಿತ್ರಕಲೆಯನ್ನು ಅಭಿವ್ಯಕ್ತಿ ಮಾಧ್ಯಮವನ್ನಾಗಿ ಮಾಡಿಕೊಂಡು ನೂರಾರು ವರ್ಣಚಿತ್ರಗಳನ್ನು ರಚಿಸಿ ಹೋದ ಅಜ್ಞಾತ ಕಲಾವಿದನೊಬ್ಬನ ಜೀವನ ಸಾಧನೆಯ ವಿವರಗಳು ಬೆಳಕಿಗೆ ಬಂದಿವೆ. ಶುಭರಾಯರ ಕಲಾಕೃತಿಗಳು ಕಾಗದ ಮಾಧ್ಯಮದಲ್ಲಿ ರಚಿತವಾಗಿದ್ದು, ಅವು ಕಿರುರೂಪ ತ್ರಗಳಾಗಿವೆ.

ಹೀಗಾಗಿ, ಕಿರುರೂಪ ಚಿತ್ರಕಲಾ ಪರಂಪರೆಯ ವಾರಸುದಾರನಾಗಿ ಶುಭರಾಯರು ಕೆಲಸ ಮಾಡಿದ್ದಾರೆ. ಇವರ ಕಲಾಕೃತಿಗಳು ಧಾರ್ಮಿಕ, ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ರಚಿತವಾಗಿದ್ದು, ಭಕ್ತಿಗಾಗಿ ಚಿತ್ರಕಲೆಯನ್ನು ಬಳಸಿಕೊಂಡಿದ್ದು ಒಂದು ವೈಶಿಷ್ಟ್ಯಪೂರ್ಣ ಬೆಳವಣಿಗೆಯಾಗಿದೆ. ಇವರ ಚಿತ್ರಗಳಲ್ಲಿ ಜಾನಪದೀಯ ಅಂಶಗಳು ಹೇರಳವಾಗಿ ಕಂಡುಬರುತ್ತವೆ. ಇವರ ಚಿತ್ರಗಳು ಮೈಸೂರು, ತಂಜಾವೂರು ಚಿತ್ರಗಳು ಹಾಗೂ ರಾಜಸ್ಥಾನ ಕಿರುರೂಪ ಚಿತ್ರಗಳು ಮತ್ತು ರಾಗಮಾಲಾ ಚಿತ್ರಗಳ ಪ್ರಭಾವಕ್ಕೆ ಒಳಗಾಗಿವೆ. ಶುಭರಾಯರು ಬರೀ ಚಿತ್ರಕಾರ ಮಾತ್ರವಲ್ಲ, ಕವಿಯಾಗಿ ಸಾಹಿತ್ಯ ಕೃಷಿ ಮಾಡಿ ಹಲವಾರು ಕೃತಿಗಳನ್ನು ಮರಾಠಿಯಲ್ಲಿ ರಚಿಸಿದ್ದಾರೆ. ಬಹುಭಾಷಾ ಪಂಡಿತನಾಗಿ ತೆಲುಗು, ಮರಾಠಿ, ಇಂಗ್ಲೀಷ್, ಕನ್ನಡ ಮುಂತಾದ ಭಾಷೆಗಳಲ್ಲಿ ಪರಿಣಿತಿ ಹೊಂದಿದವರಾಗಿದ್ದಾರೆ.

೪. ಚಿತ್ರಕಲಾವಿದ ಎಂ.ಜಿ. ವಾಚೇದಮಠ

ಡಾ. ಎಸ್. ಸಿ. ಪಾಟೀಲ್ ಅವರ ಮಾರ್ಗದರ್ಶನದಲ್ಲಿ ಭಾನುಮತಿ ಕೆ. ಎಲ್. ಅವರು ೨೦೧೦ರಲ್ಲಿ ಚಿತ್ರಕಲಾವಿದ ಎಂ.ಜಿ. ವಾಚೇದಮಠ ಅವರ ಕುರಿತು ಎಂ.ಫಿಲ್ ಅಧ್ಯಯನ ಮಾಡಿದ್ದಾರೆ.[೭೧] ಮೊದಲನೆಯ ಅಧ್ಯಾಯದಲ್ಲಿ ಗದಗ ಜಿಲ್ಲೆಯು ಸಂಗೀತ, ಸಾಹಿತ್ಯ, ವಾಸ್ತುಶಿಲ್ಪ ಒಟ್ಟಾರೆ ಲಲಿತಕಲೆಗಳಲ್ಲಿ ತನ್ನದೇಯಾದ ಕೊಡುಗೆಯನ್ನು ನೀಡಿದೆ. ಇಂತಹ ಗದಗ ಜಿಲ್ಲೆಯ ಪರಿಸರದಲ್ಲಿ ತನ್ನದೇಯಾದ ವ್ಯಕ್ತಿತ್ವದ ನೆಲೆಯನ್ನು ಒದಗಿಸಿಕೊಂಡು ಬೆಳೆದವರು ಎಂ.ಜಿ ವಾಚೇದಮಠ. ಈ ನೆಲದಲ್ಲಿಯೇ ಹುಟ್ಟಿ ನೆಲದಲ್ಲೇ ಪ್ರಸಿದ್ಧಿ ಪಡೆದಿರುವುದನ್ನು ಇಂದು ನಾವು ಕಾಣುತ್ತೇವೆ.

ಕನ್ನಡದ ನೆಲದಲ್ಲಿ ಆಗಿಹೋದ ಕಲಾವಿದರು ಸಾವಿರಕ್ಕೂ ಹೆಚ್ಚು ಜನ. ಚಿರಸ್ಥಾಯಿಯಾದರವರು ಕೆಲವು ಜನ. ಅವರಲ್ಲಿ ಎಂ.ಜಿ. ವಾಚೇದಮಠ ಅವರು ಒಬ್ಬರು. ಇವರು ಒಬ್ಬ ವ್ಯಕ್ತಿಯಾಗಿ ಅಷ್ಟೇ ಗೋಚರವಾಗಲಿಲ್ಲ, ಶಕ್ತಿಯಾಗಿ, ಸ್ಫೂರ್ತಿಯಾಗಿ, ಸೃಜನಶೀಲ ಕಲಾವಿದರಾಗಿ ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಂಡವರು. ದಣಿವರಿಯದ ಸತತ ಕ್ರಿಯಾಶೀಲರಾಗಿರುವ ಬದುಕು ವಾಚೇದಮಠ ಅವರದ್ದಾಗಿದೆ. ಇವರು ನಾಟಕ, ಹಾಸ್ಯ ಪಾತ್ರಗಳನ್ನು ಅಭಿನಯಿಸಿ,

---

೭೧. ಭಾನುಮತಿ ಕೆ. ಎಲ್ : ಚಿತ್ರಕಲಾವಿದ ಎಂ ಜಿ. ವಾಚೇದಮಠ. ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ. ಕನ್ನಡ ವಿ.ವಿ. ಹಂಪಿ. ೨೦೧೦

ಅನೇಕ ಕಡೆಗಳಲ್ಲಿ ನಟರಾಗಿ ನಟಿಸಿದ ನಾಟಕಗಳು ತುಬಾ ಮೆಚ್ಚುಗೆಯನ್ನು ಪಡೆಯುತ್ತಿದ್ದವು. ಹೀಗೆ ಅನೇಕ ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ತಮ್ಮ ಕಲಾಪ್ರತಿಭೆಯಿಂದ ಅನೇಕ ಯುವ ಕಲಾವಿದರಿಗೆ ಸ್ಫೂರ್ತಿಯಾಗಿದ್ದಾರೆ.

ಎಂ.ಜಿ ವಾಚೇದಮಠ ಅವರು ತಮ್ಮ ವೃತ್ತಿಯೊಂದಿಗೆ ಹಲವಾರು ಪ್ರವೃತ್ತಿಗಳನ್ನು ಮೈಗೂಡಿಸಿಕೊಂಡವರು. ಕೇವಲ ಒಬ್ಬ ಕಲಾಶಿಕ್ಷಕನಾಗದೇ ಜೊತೆಗೆ ಕಲಾವಿದರಾಗಿ ಪ್ರಪಂಚ ಎನ್ನುವ ಪುಸ್ತಕಕ್ಕೆ ಮುಖಪುಟ ರಚಿಸಿದ್ದು, ಅಲ್ಲದೇ ಇನ್ನೂ ಕೆಲವು ಪುಸ್ತಕಗಳಿಗೂ ಮುಖಪುಟ ರಚಿಸಿದ್ದಾರೆ. ಇವರು ಚಿತ್ರಕಲಾ ಕ್ಷೇತ್ರದಲ್ಲಿ ಅತ್ಯಂತ ಉನ್ನತ ಮಟ್ಟದ ಸಾಧನೆಗೈದ ಚಿತ್ರಕಲಾವಿದರು ಎಂ.ಜಿ. ವಾಚೇದಮಠರ ಜೀವನ ಸಾಧನೆಯ ಹಾದಿ, ಚಿತ್ರಕಲಾಕ್ಷೇತ್ರಕ್ಕೆ ಇವರು ನೀಡಿದ ಕೊಡುಗೆಯನ್ನು ದಾಖಲೀಕರಣ ಮಾಡುವ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನ ಮಾಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಎಂ.ಜಿ. ವಾಚೇದಮಠ ಅವರ ಬಾಲ್ಯದ ದಿನಗಳು, ಅವರ ಜನ್ಮಸ್ಥಳದ ಸಾಂಸ್ಕೃತಿಕ ಪರಿಸರ, ಅಂದಿನ ನಿಸರ್ಗ ಹಾಗೂ ಅವರ ಸುತ್ತಲೂ ಇದ್ದಂತಹ ಕಲಾಮಯ ವಾತಾವರಣ, ತಂದೆ ತಾಯಿಯರು, ಕೌಟುಂಬಿಕ ಹಿನ್ನೆಲೆ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಹಂತಗಳ ಕುರಿತು ವಿಶ್ಲೇಷಣೆ ಮಾಡಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಇವರು ಶಿಕ್ಷಣ ಪಡೆದಂತಹ ಕಲಾಶಾಲೆ, ಅದರ ವಾತಾವರಣ ಮತ್ತು ಕಲಾ ಅಧ್ಯಾಪಕರ ವರ್ಗದವರನ್ನು ಕುರಿತು ಮತ್ತು ಆಗಿನ ಕಾಲದ ಪಠ್ಯಕ್ರಮ ಹಾಗೂ ಅದರಲ್ಲಿ ಒಳಗೊಂಡ ವಿಷಯಗಳ ಅಭ್ಯಾಸ, ಜೊತೆಗೆ ಇವರ ಉನ್ನತ ವ್ಯಾಸಂಗದ ಬಗ್ಗೆ ವಿಶ್ಲೇಷಿಸಿ ಅಧ್ಯಯನ ಮಾಡಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಇವರು ಕಲಾಶಿಕ್ಷಕರಾಗಿ ಸೇವೆ ಸಲ್ಲಿಸಿದಂತಹ ಪರಿಸರದಲ್ಲಿನ ಅನುಭವಗಳು, ಅವರು ಮುಂದೆ ಶ್ರೇಷ್ಠ ಕಲಾವಿದರಾಗಿ ಮಾಡಿದ ಸಾಧನೆಗಳು ಮತ್ತು ಅವರ ಎಪ್ಪತ್ತಾರು ವರ್ಷದ ಅನುಭವದ ಸಾರವನ್ನು ಸಂಕ್ಷಿಪ್ತವಾಗಿ ಇಲ್ಲಿ ವಿವರಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಎಂ.ಜಿ. ವಾಚೇದಮಠ ಅವರ ಶೈಕ್ಷಣಿಕ ಹಂತದಲ್ಲಿ ಮತ್ತು ಅಧ್ಯಾಪನ ಜೀವನದಲ್ಲಿ ರಚಿಸಿರುವ ಕಲಾಕೃತಿಗಳ ವಸ್ತುವಿಷಯವನ್ನು ಒಂದೊಂದಾಗಿ ವಿವರಿಸಲಾಗಿದ್ದು, ಅಲ್ಲದೇ ಅವುಗಳ ವಿಷಯ, ಅಳತೆ, ಕಾಲ, ಮಾಧ್ಯಮ, ಶೈಲಿ ಹೀಗೆ ಹತ್ತು ಹಲವು ವಿಷಯಗಳನ್ನು ಒಳಗೊಂಡಂತೆ ಕಲಾಕೃತಿಗಳ ಪ್ರಮುಖ ಧೋರಣೆಗಳನ್ನು ಚರ್ಚಿಸಲಾಗಿದೆ. ಆರನೆಯ ಅಧ್ಯಾಯದಲ್ಲಿ ಇವರು ಕಲಾಕೃತಿ ರಚಿಸುವಾಗ ಅವರ ಕುಟುಂಬವರ್ಗದ ಮತ್ತು ಜನ್ಮಸ್ಥಳದ ಸಾಂಸ್ಕೃತಿಕ ಪರಿಸರ, ಅವರ ಸುತ್ತಲೂ ಇದ್ದಂತಹ ಕಲಾಮಯ ವಾತಾವರಣ, ಅವರು ಕಲೆಯ ಪ್ರಭಾವಕ್ಕೆ ಒಳಗಾದ ಸಂಗತಿಗಳನ್ನು ಇಟ್ಟುಕೊಂಡು ಇವರಿಗೆ ಪ್ರೇರಣೆ ಮತ್ತು ಕಲಿಯುವ ಉತ್ಸಾಹ ಮೆಚ್ಚಿ ಪ್ರೇರೇಪಿಸಿದ ಹಿನ್ನೆಲೆಯಲ್ಲಿ ಆಗಿನ ಕಾಲದ ಪಠ್ಯಕ್ರಮದ ಹಾಗೂ ಕಲಿಸುವವರ ತಂತ್ರಶೈಲಿಯೊಂದಿಗೆ ತನ್ನ ಸ್ವಂತಿಕೆಯನ್ನು ಉಪಯೋಗಿಸಿಕೊಂಡು ತನ್ನದೇಯಾದ ಒಂದು ಸೃಜನಶೀಲ ವರ್ಣಗಾರಿಕೆಯ ವೈಶಿಷ್ಟ್ಯಗಳು ಮತ್ತು ವಾಚೇದಮಠರು ಕಲಾಕೃತಿ

[illegible]

ರಚಿಸಲು ಬೆಳೆಸಿದ ಕಲಾಸಾಮಗ್ರಿಗಳು ಇತ್ಯಾದಿ ವಿಷಯಗಳು ಈ ಅಧ್ಯಾಯದಲ್ಲಿ ಚರ್ಚಿತಗೊಂಡಿವೆ. ಇನ್ನು ಕೊನೆಯ ಏಳನೆಯ ಅಧ್ಯಾಯವು ಸಮಾರೋಪವಾಗಿದ್ದು, ಇಲ್ಲಿ ಮೇಲಿನ ಆರು ಅಧ್ಯಾಯಗಳ ಫಲಿತಗಳನ್ನು ಇಲ್ಲಿ ಸಮೀಕ್ಷಿಸಲಾಗಿದೆ.

ಎಂ.ಜಿ. ವಾಚೇದಮಠ ಅವರು ತಮ್ಮ ಮನಸ್ಸಿನ ಪಕ್ವತೆಯ ಭಾವನೆಗಳಿಗೆ ತಕ್ಕಂತೆ ಬಣ್ಣಗಳನ್ನು ಆಯ್ದುಕೊಂಡಿದ್ದು, ಜಲವರ್ಣ, ಪೋಸ್ಟರ್ ವರ್ಣ, ತೈಲವರ್ಣಗಳಲ್ಲಿ ಚಿತ್ರಗಳನ್ನು ರಚಿಸಿದ್ದಾರೆ. ಈ ಚಿತ್ರಗಳಲ್ಲಿನ ಮನಸ್ಸನ್ನು ಸೂರೆಗೊಳ್ಳುವಂತಹ ವರ್ಣಸಂಯೋಜನೆ, ರೇಖೆಗಳ ಲಯಾತ್ಮಕತೆ, ಬಣ್ಣಗಳ ಘನತ್ವ, ಕುಂಚಗಳ ಹರಿದಾಟ ಹಾಗೂ ಆಕರ್ಷಣೆಗೆ ಅರ್ಥವಂತಿಕೆ ಹೊಂದಿರುವುದನ್ನು ಗಮನಿಸಲಾಗಿದೆ. ಅಕಾಡೆಮಿಕ್ ಶೈಲಿಯನ್ನು ರೂಢಸಿಕೊಂಡ ವಾಚೇದಮಠರು ಜಲವರ್ಣಗಳನ್ನು ಪ್ರಯೋಗಿಸಿ ಅಭಿವ್ಯಕ್ತಿಸಿದ ಚಿತ್ರಗಳಲ್ಲಿ ಅನೇಕ ಪಾರದರ್ಶಕ ಚಿತ್ರಗಳಲ್ಲಿ ವರ್ಣದ ಬಿಳುಪನ್ನು ಕುಂಚದಿಂದಲೇ ನಿಯಂತ್ರಿಸಿರುವುದನ್ನು ಕಾಣುತ್ತೇವೆ. ಇದರಿಂದ ಜಲವರ್ಣಗಳ ಮೇಲಿನ ಅವರ ಹಿಡಿತದ ಪ್ರೌಢಿಮೆಯ ಅರಿವಾಗುತ್ತದೆ. ಭಾವಚಿತ್ರಗಳಲ್ಲಿ ಬಳಸಿದ ಜಲವರ್ಣಗಳು ಚರ್ಮದ ನೈಜ ಅನುಭವ ನೀಡುವುದರೊಂದಿಗೆ ಮಾಸದಂತೆ ತಾಜಾತನವನ್ನು ಹೊಂದಿವೆ.

ಎಂ.ಜಿ. ವಾಚೇದಮಠ ಅವರು ಚಿತ್ರಗಳನ್ನು ಸ್ವತಂತ್ರವಾಗಿ ರಚಿಸುವುದರ ಜೊತೆಗೆ ಸಂಯೋಜನಾ ಚಿತ್ರಗಳಲ್ಲಿ ಹಿನ್ನೆಲೆಯನ್ನು ಸಾಕಷ್ಟು ದುಡಿಸಿಕೊಂಡಿದ್ದಾರೆ. ನಮ್ಮ ಭಾರತೀಯ ಶೈಲಿಯ ಸೊಗಡು ಅವರಲ್ಲಿದೆ. ಗಿಡ, ಮರ, ಬಳ್ಳಿ, ಪಕ್ಷಿಗಳು ಎಲ್ಲವೂ ವಿವರವಾಗಿ ನೈಜ ವರ್ಣಗಳ ಲೇಪನವನ್ನು ಹೊಂದಿ ನಮ್ಮನ್ನು ಭ್ರಮಾಲೋಕಕ್ಕೆ ಕರೆದೊಯ್ಯುತ್ತವೆ. ಇವರು ಚಿತ್ರಗಳ ಮುಖಾಂತರ ನಮ್ಮ ಆ ಕಾಲದ ನಾಡಿನ ಸಂಸ್ಕೃತಿ, ಜನಜೀವನದ ಚಿತ್ರಣದ ಜೊತೆಗೆ ಆನಂದವನ್ನು ನೀಡುವ ಸನ್ನಿವೇಶಗಳನ್ನು ನಮ್ಮ ಕಣ್ಣ ಮುಂದೆ ನಿಲ್ಲಿಸುವ ಶಕ್ತಿ ಪಡೆದಿರುವುದನ್ನು ಕಾಣುತ್ತೇವೆ.

ಜಲವರ್ಣ ನಿಸರ್ಗ ಚಿತ್ರಗಳಲ್ಲಿ ಅನೇಕ ವಸ್ತುವೈವಿಧ್ಯವನ್ನು ಕಾಣುತ್ತೇವೆ. ಜೊತೆಗೆ ನೀರು ಪ್ರತಿಬಿಂಬಮ ಅದರಂತೆ ಬಣ್ಣಗಳ ವೈವಿಧ್ಯದ ಛಾಯಾ ಮೌಲ್ಯ ದೃಶ್ಯಾಂತರದ ಅನುಭವ ಸ್ಪಷ್ಟವಾಗಿ ಚಿತ್ರಿತವಾಗಿದೆ. ಬಣ್ಣಗಳ ಪಾರದರ್ಶಿಕೆ, ವಸ್ತುಗಳ ಗುಣಧರ್ಮಕ್ಕೆ ಮೆರಗು ತಂದಿದೆ. ನಿಸರ್ಗ ಸಂಯೋಜನಾ ಸರಣಿಯ ಚಿತ್ರಗಳು ಸಮಿರಿಯಾಲಿಸ್ಟಿಕ್ (creative) ಶೈಲಿಯಲ್ಲಿವೆ. ಇವರು ರಚಿಸಿದಂತಹ ನಿಸರ್ಗಸಂಯೋಜನಾ ಏಕಸರಣಿಯ ಚಿತ್ರಗಳಲ್ಲಿ ಬೇರೆ ಬೇರೆ ವಿಧಾನ ಮತ್ತು ಶೈಲಿಗಳನ್ನು ಗುರುತಿಸಲಾಗಿದೆ. ಏಕ ಸರಣಿಯ ಚಿತ್ರದಲ್ಲಿ ಹೆಚ್ಚಾಗಿ ನಿಸರ್ಗವನ್ನು ಚಿತ್ರಿಸಿದ್ದು ಇಲ್ಲಿ ಕಂಡುಬರುತ್ತದೆ. ಭಾವಚಿತ್ರಗಳಲ್ಲಿ ವೇಗವಾದ ಚಲನೆಯಿಂದ ಕೂಡಿದ ಕುಂಚದ ಸೆಳೆತಗಳು, ವರ್ಣವೈಖರಿ, ಹಿನ್ನೆಲೆ, ಮುನ್ನೆಲೆಯಲ್ಲಿ ಅಳವಡಿಸುವ ಸ್ಥಳಾವಕಾಶ ವಿಶಿಷ್ಟ ಅಂಶಗಳಾಗಿವೆ. ಕಲಾಕೃತಿಗಳಲ್ಲಿ ಇವರು ಅಳವಡಿಸಿರುವ ವರ್ಣವೈವಿಧ್ಯ ಕಣ್ಣಿಗೆ ಸಂತಸ

ಉಂಟುಮಾಡುವ ಬಣ್ಣಗಳಾಗಿವೆ. ಗದುಗಿನ ವಿಜಯ ಕಲಾಮಂದಿರ ಮತ್ತು ಮುಂಬೈಯ ಸರ್. ಜೆ.ಜೆ. ಕಲಾಶಾಲೆಯ ಸಾಂಸ್ಕೃತಿಕ ಪರಿಸರವು ಇವರ ಮೇಲೆ ಪ್ರಭಾವ ಬೀರಿ ಅವರೊಬ್ಬ ದೊಡ್ಡ ಕಲಾವಿದರಾಗಿ ರೂಪುಗೊಳ್ಳಲು ಕಾರಣವಾಗಿದೆ. ಎಂ.ಜಿ. ವಾಚೇದಮಠ ಅವರ ಒಟ್ಟು ಕಲಾಕೃತಿಗಳನ್ನು ಸಮೀಕ್ಷಿಸಿದಾಗ ರೇಖಾಚಿತ್ರ, ವರ್ಣಚಿತ್ರ, ಛಾಯಾಚಿತ್ರಗಳಲ್ಲಿ ಕುತೂಹಲಕರ ಅಂಶಗಳು ಕಂಡುಬರುತ್ತವೆ ಎಂಬುದನ್ನು ಇಲ್ಲಿ ಕಂಡುಕೊಳ್ಳಲಾಗಿದೆ.

೫. ಚಿತ್ರಕಲಾವಿದ ರುಮಾಲೆ ಚೆನ್ನಬಸವಯ್ಯನವರ ಬದುಕು ಮತ್ತು ಕಲಾಕೃತಿಗಳು

ರಂಗಸ್ವಾಮಿ ಆರ್. ಅವರು ಚಿತ್ರಕಲಾವಿದ ರುಮಾಲೆ ಚೆನ್ನಬಸವಯ್ಯನವರ ಬದುಕು ಮತ್ತು ಕಲಾಕೃತಿಗಳು ಎಂಬ ಸಂಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಡಾ. ಎಸ್.ಸಿ. ಪಾಟೀಲ ಅವರ ಮಾರ್ಗದರ್ಶನದಲ್ಲಿ ರಚಿಸಿದ್ದಾರೆ.[೭೨] ರುಮಾಲೆ ಚೆನ್ನಬಸವಯ್ಯನವರು ತಮ್ಮ ಮನಸ್ಸಿನ ಪಕ್ವತೆಯ ಭಾವನೆಗಳಿಗೆ ತಕ್ಕಂತೆ ಬಣ್ಣಗಳನ್ನು ಆಯ್ದುಕೊಂಡಿದ್ದು, ಜಲವರ್ಣ, ತೈಲವರ್ಣಗಳಲ್ಲಿ ಚಿತ್ರಗಳನ್ನು ರಚಿಸಿದ್ದಾರೆ. ಈ ಚಿತ್ರಗಳು ಸಹೃದಯರ ಮನಸ್ಸನ್ನು ಸೂರೆಗೊಳ್ಳುವಂತೆ ವರ್ಣಸಂಯೋಜನೆ, ಬಣ್ಣಗಳ ಲಯಾತ್ಮಕತೆ, ರಂಗುಗಳ ಘನತೆ, ಕುಂಚಗಳ ಹರಿದಾಟವಿದೆ. ಹಾಗೂ ಅದ್ಭುತ ಆಳ, ಆಕರ್ಷಣೆ ಮತ್ತು ಅರ್ಥವಂತಿಕೆಯನ್ನು ಹೊಂದಿದೆ. ಇವರ ಚಿತ್ರಗಳ ಮುಖಾಂತರ ತಮ್ಮ ಕಾಲದ ಬೆಂಗಳೂರು ಮತ್ತು ಇತರೆ ಸ್ಥಳಗಳಲ್ಲಿನ ಚಿತ್ರಣ ಹೇಗಿತ್ತು ಎಂಬುದನ್ನು ತೋರಿಸುವುದರ ಆನಂದವನ್ನು ನೀಡುವ ಸನ್ನಿವೇಶಗಳನ್ನು ನಮ್ಮ ಕಣ್ಮುಂದೆ ನಿಲ್ಲಿಸುವ ಶಕ್ತಿ ಪಡೆದಿರುವುದನ್ನು ಕಾಣುತ್ತೇವೆ.

ಭಕ್ತಿಪ್ರಧಾನವಾದ ಚಿತ್ರಗಳನ್ನು ಹೆಚ್ಚಾಗಿ ಚಿತ್ರಿಸಿ ಆಧ್ಯಾತ್ಮಿಕ ಮನೋಭಾವವನ್ನು ಬಳಸಿ ಚಿತ್ರದಲ್ಲಿ ಸೌಮ್ಯತೆಯನ್ನು ತರುವುದು ವಿಶೇಷವಾಗಿದೆ. ಕೆಲವು ವ್ಯಕ್ತಿ ಚಿತ್ರಗಳು ನೆನಪಿಗೆ ತರುವ ಗುಣಗಳನ್ನು ಹೊಂದಿದ್ದು, ಸೌಮ್ಯ ಹಾಗೂ ಪ್ರಖರ ವರ್ಣಗಳ ಹದವರಿತ ಮೇಳವಾಗಿ ಸಂಭ್ರಮ ಹಾಗೂ ವೈಭವಯುತ ಪರಿಣಾಮ ಬೀರಿವೆ.

ಇವರು ಭಾವಚಿತ್ರಗಳ ಕಣ್ಣಿನಲ್ಲಿ ಜೀವಚೈತನ್ಯ ತುಂಬಿದ್ದಾರೆ. ಎಳೆ ಎಳೆಯಾಗಿ ಚಿತ್ರಿಸಿದ್ದಲ್ಲದೇ ಬಟ್ಟೆಗಳ ಮೈವಳಿಕೆಯನ್ನು ನೈಜತೆಯಲ್ಲಿ ಮೆರೆದಿದ್ದಾರೆ. ಅನೇಕ ಚಿತ್ರಗಳಲ್ಲಿ ಕುಂಚದ ನೇರ ಹೊಡೆತಗಳಲ್ಲದೆ ಬಣ್ಣಗಳನ್ನು ಬೆರೆಸಿ ಮೃದುವಾಗಿ ಲೇಪಿಸಿರುವುದನ್ನು ಕಾಣುತ್ತೇವೆ. ಹಾಗೆಯೇ ತೈಲವರ್ಣಗಳ ಸಂಯೋಜನಾಚಿತ್ರಗಳ ಪರಿಣಾಮವನ್ನು ಕಾಣುತ್ತೇವೆ. ಇವರ ಚಿತ್ರಗಳು ವಿದೇಶಿ ಪದ್ಧತಿಯ ಕಲಾಶಿಕ್ಷಣದ ರೀತಿಯನ್ನು ಹೊಂದಿದ್ದರೂ ಭಾವನೆಗಳು ಭಾರತೀಯತೆಯನ್ನು ಪ್ರತಿಬಿಂಬಿಸುತ್ತವೆ. ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ ಮಹತ್ವದ ಆಕರ ಸಾಮಗ್ರಿಗಳನ್ನು ಕುರಿತಾದ ವಿವರಣೆಗಳನ್ನು ದಾಖಲಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ರುಮಾಲೆ ಚನ್ನಬಸವಯ್ಯನವರ ಸಾಂಸ್ಕೃತಿಕ ಪರಿಸರ, ಬಾಲ್ಯ,

---

೭೨. ರಂಗಸ್ವಾಮಿ ಆರ್. : ಚಿತ್ರಕಲಾವಿದ ರುಮಾಲೆ ಚನ್ನಬಸವಯ್ಯನವರ ಬದುಕು ಮತ್ತು ಕಲಾಕೃತಿಗಳು, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೧೨

ಜೀವನ ಮತ್ತು ಕಲಾಶಿಕ್ಷಣ, ದೊಡ್ಡಬಳ್ಳಾಪುರದ ಸಾಂಸ್ಕೃತಿಕ ಪರಿಸರ, ಪ್ರಾಥಮಿಕದಿಂದ ಕಲಾಶಿಕ್ಷಣದವರೆಗೆ ಅಂದರೆ ಬೆಂಗಳೂರು ಕಲಾಶಾಲೆ ಮತ್ತು ಮೈಸೂರು ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಯಲ್ಲಿ ಹಂತ ಹಂತವಾಗಿ ಸಾಗಿದ ಕಲಾಶಿಕ್ಷಣದ ಕುರಿತು ಅಧ್ಯಯನ ನಡೆಸಲಾಗಿದೆ. ಅಧ್ಯಾಯ ಮೂರರಲ್ಲಿ ಇವರ ವೃತ್ತಿ ಮತ್ತು ಪ್ರವೃತ್ತಿಗಳ ಕುರಿತು, ವಿವಿಧ ಘಟನೆಗಳನ್ನು ಕುರಿತು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ರುಮಾಲೆ ಬಸವಯ್ಯನವರು ರಚಿಸಿದ ವರ್ಣಚಿತ್ರಗಳನ್ನು ಮಾಧ್ಯಮವಾರು ಅಂದರೆ ಜಲವರ್ಣಗಳ ಕಲಾಕೃತಿಗಳ ಮತ್ತು ತೈಲವರ್ಣಗಳ ಕಲಾಕೃತಿಗಳು, ಇವುಗಳ ಪರಿಚಯದ ಜೊತೆಗೆ ವಸ್ತುವಿಷಯಗಳನ್ನು ವರ್ಗೀಕರಿಸಿಕೊಂಡು ವಿಮರ್ಶಾತ್ಮಕವಾಗಿ ಚರ್ಚಿಸಲಾಗಿದೆ. ಐದನೆಯ ಅಧ್ಯಾಯದಲ್ಲಿ ಇವರು ರಚಿಸಿದ ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ, ರಚನಾಶೈಲಿ, ತಂತ್ರಗಾರಿಕೆಗಳ ಕುರಿತು ಸಮಗ್ರವಾಗಿ ವಿಶ್ಲೇಷಿಸಲಾಗಿದೆ. ಇನ್ನು ಕೊನೆಯ ಅಧ್ಯಾಯ ಆರನೆಯದು ಸಮಾರೋಪವಾಗಿದ್ದು, ಇಲ್ಲಿ ಒಟ್ಟು ಅಧ್ಯಾಯಗಳ ಫಲಿತಗಳನ್ನು ಸಮೀಕ್ಷಿಸಲಾಗಿದೆ.

೬. ಕೆ.ಕೆ. ಹೆಬ್ಬಾರರ ಕಲೆ ಮತ್ತು ಬದುಕು

ಮಲ್ಲಿಕಾರ್ಜುನ ಕೆ. ಜಿ. ಅವರು ಕೆ. ಕೆ. ಹೆಬ್ಬಾರರ ಕಲೆ ಮತ್ತು ಬದುಕು ಎಂಬ ವಿಷಯವಾಗಿ ಎಂ.ಫಿಲ್ ಅಧ್ಯಯನ ಮಾಡಿದ್ದಾರೆ.[೭೩] ಈ ಅಧ್ಯಯನವು ಒಟ್ಟು ಎಂಟು ಅಧ್ಯಾಯಗಳನ್ನು ಒಳಗೊಂಡಿದೆ. ಕೆ.ಕೆ. ಹೆಬ್ಬಾರರ ಬಾಲ್ಯ ಪರಿಸರ, ವಿದ್ಯಾಭ್ಯಾಸ, ವೃತ್ತಿ ಜೀವನ, ರೇಖಾಚಿತ್ರಗಳು, ವರ್ಣಚಿತ್ರಗಳು ಮತ್ತು ಇವರ ಕಲಾಕೃತಿಯಲ್ಲಿ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿ ಕಲಾಚಟುವಟಿಕೆಯನ್ನು ಕುರಿತು ಎಂಟು ಅಧ್ಯಾಯಗಳಲ್ಲಿ ವಿಷಯ ಹರಡಿದೆ. ಕೆ.ಕೆ. ಹೆಬ್ಬಾರರು ದೇಶ–ವಿದೇಶಗಳಲ್ಲಿ ಕಲೆಯ ಮುಖಾಂತರ ಕಲಾಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಕುರಿತು ಈ ಅಧ್ಯಯನ ಮಾಡಲಾಗಿದೆ. ಹೆಬ್ಬಾರರ ರೇಖೆ ಹಾಗೂ ವರ್ಣಚಿತ್ರಗಳ ಪ್ರಭಾವ ಭಾರತವಲ್ಲದೇ ವಿದೇಶದಲ್ಲಿಯೂ ಬೀರಿದೆ. ಇದರಿಂದ ಯುವ ಕಲಾವಿದರು ಮತ್ತು ಕಲಾಭಿಮಾನಿಗಳು ಪ್ರೇರೇಪಿತರಾಗಿದ್ದಾರೆ. ಸ್ವಾತಂತ್ರ್ಯ ನಂತರದ ಭಾರತದ ನವೋದಯ ಸಂದರ್ಭದಲ್ಲಿ ಕಲಾಜಗತ್ತಿನ ಆಧುನಿಕ ಕಲೆಯ ಹರಿಕಾರನಂತೆ ಹಾಕಿದ ಬುನಾದಿಯು ಭಾರತದ ಕಲೆಯನ್ನು ವಿಶ್ವಮಾನ್ಯ ಮಟ್ಟಕ್ಕೆ ಒಯ್ಯುತ್ತದೆ. ಹೆಬ್ಬಾರರ ಬದುಕು ಅವರ ಕುರಿತಂತೆ ನಡೆದ ಅಧ್ಯಯನದಿಂದ ಕಲಾವಿದರಾಗಲೀ, ಕಲಾವಿದ್ಯಾರ್ಥಿಗಳಾಗಲಿ ತಮ್ಮ ಸಾಧನೆಗೆ ಮಾರ್ಗವನ್ನು ಕಾಣುವಂತಾಗಿದೆ. ಈ ಎಲ್ಲಾ ವಿಷಯ ಕುರಿತು ಅಧ್ಯಯನ ಒಳಗೊಂಡಿದೆ.

೭. ಕೆ. ವೆಂಕಟಪ್ಪ : ಕಲೆ ಮತ್ತು ಬದುಕು

ರಾಜೀವ ಎಂ.ವೈ. ಅವರು ಕೆ. ವೆಂಕಟಪ್ಪ ಕಲೆ ಮತ್ತು ಬದುಕು ಎಂಬ ವಿಷಯವಾಗಿ

೭೩. ಮಲ್ಲಿಕಾರ್ಜುನ ಕೆ. ಜಿ : ಕೆ.ಕೆ. ಹೆಬ್ಬಾರರ ಕಲೆ ಮತ್ತು ಬದುಕು, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೧೧

[illegible]

[illegible]

[illegible]

[illegible]

[illegible]

[illegible]

ಎಂ.ಫಿಲ್ ಅಧ್ಯಯನ ಮಾಡಿದ್ದಾರೆ.[೭೪] ಒಟ್ಟು ಎಂಟು ಅಧ್ಯಾಯವನ್ನು ಒಳಗೊಂಡಿದೆ. ಅಧ್ಯಾಯ ಒಂದು ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ ಹೊಂದಿದೆ. ಎರಡನೆಯ ಅಧ್ಯಾಯದಲ್ಲಿ ಕೆ. ವೆಂಕಟಪ್ಪನವರು ಮತ್ತು ಸಮಕಾಲೀನ ಸಂದರ್ಭ, ಕಲಾಕೃತಿಗಳ ಹರವು ಕುರಿತು ವಿವರಿಸಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಕೆ. ವೆಂಕಟಪ್ಪನವರ ರೇಖಾಚಿತ್ರಗಳನ್ನು ಕುರಿತಂತಾದರೆ ನಾಲ್ಕನೆಯ ಅಧ್ಯಾಯದಲ್ಲಿ ವರ್ಣಚಿತ್ರಗಳನ್ನು ಕುರಿತು ಚರ್ಚಿಸಲಾಗಿದೆ. ಐದನೆಯ ಅಧ್ಯಾಯದಲ್ಲಿ ಕೆ. ವೆಂಕಟಪ್ಪನವರ ಪ್ಲಾಸ್ಟರ್ ಆಫ್ ಪ್ಯಾರಿಸ್ ಮಾಧ್ಯಮದ ಕಲಾಕೃತಿಗಳು, ಆರನೆಯ ಅಧ್ಯಾಯದಲ್ಲಿ ಕೆ. ವೆಂಕಟಪ್ಪನವರ ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿ ಕುರಿತು, ಏಳನೆಯ ಅಧ್ಯಾಯದಲ್ಲಿ ಕೆ. ವೆಂಕಟಪ್ಪನವರ ಕುರಿತು ಬಂದ ಕಲಾ ಸಾಹಿತ್ಯ, ಪ್ರಶಸ್ತಿ, ಪುರಸ್ಕಾರಗಳ ಕುರಿತು ಮತ್ತು ಎಂಟನೆಯ ಅಧ್ಯಾಯದಲ್ಲಿ ಮೇಲಿನ ಒಟ್ಟು ಅಧ್ಯಾಯಗಳ ಫಲಿತಗಳನ್ನು ಚರ್ಚಿಸಲಾಗಿದೆ. ಕರ್ನಾಟಕದಲ್ಲಿ ಇಂತಹ ಮೇರು ಕಲಾವಿದನೊಬ್ಬನ ಸಂಶೋಧನಾ ಅಧ್ಯಯನ ಮೂಲಕ ಬೆಳಕು ಚೆಲ್ಲುವ ಪ್ರಯತ್ನ ಇಲ್ಲಿ ಮಾಡಲಾಗಿದೆ.

ಈ ಅಧ್ಯಯನದಿಂದ ಇವರ ಪೂರ್ವಿಕರ ಇತಿಹಾಸ, ನೆಲೆ, ಭಾಷೆ, ಸಂಸ್ಕೃತಿ, ಸಂಸ್ಕಾರಗಳ ಕಡೆಗೆ ಬೆಳಕು ಚೆಲ್ಲಿದಂತಾಗುತ್ತದೆ. ಕರ್ನಾಟಕದಿಂದ ಹೋಗಿ ಕಲ್ಕತ್ತಾದಲ್ಲಿ ಕಲಾಶಿಕ್ಷಣ ಮುಗಿಸಿ ಬಂದ ಕೀರ್ತಿ ಇವರಿಗೆ ಸಲ್ಲುತ್ತದೆ. ಅದನ್ನು ಕಲಾವಲಯಕ್ಕೆ ಪರಿಚಯಿಸಿದಂತಾಯಿತು. ಮೈಸೂರು ಸಂಸ್ಥಾನ ಇವರಿಗೆ ಸ್ವತಂತ್ರಪೂರ್ವದಲ್ಲಿ ವಿದ್ಯಾರ್ಥಿ ವೇತನವನ್ನು ಕೊಟ್ಟು ಬೇರೆ ರಾಜ್ಯವೊಂದಕ್ಕೆ ಕಳುಹಿಸಿಕೊಟ್ಟ ಕೀರ್ತಿಯನ್ನು ನೆನೆದಂತಾಗುತ್ತದೆ. ಅವನೀಂದ್ರರು ಬಂಗಾಳಿ ಶಾಲೆಯಲ್ಲಿ ಬಹಳಷ್ಟು ಜನರಿದ್ದರೂ ಸಹ ವೆಂಕಟಪ್ಪನವರನ್ನು ಅಜಂತಾ ಭಿತ್ತಿಚಿತ್ರಗಳ ಕರಡು ಮಾಡಲು ಕಳುಹಿಸಿದ್ದರಿಂದ ಇವರಿಗಿದ್ದ ಮಹತ್ವವನ್ನು ತಿಳಿಯಬಹುದು. ದಂತಫಲಕಗಳ ಮೇಲೆ ಜಲವರ್ಣದಲ್ಲಿ ಚಿತ್ರವನ್ನು ರಚಿಸುತ್ತಿದ್ದ ಇವರ ತಂತ್ರಗಾರಿಕೆಯ ಮೇಲೆ ಬೆಳಕು ಚೆಲ್ಲಿದಂತಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಅವರು ಹೇಳುತ್ತಿದ್ದ ಮಾತು "ನಾನು ಎಲ್ಲರಿಗಿಂತ ಕಿರಿಯವನು, ಕಲೆಯಲ್ಲಿ ಕಲಿಯುವುದು ಬಹಳವಿದೆ. ನಾನಿನ್ನೂ ಕಲಾವಿದನಲ್ಲ, ಕಲಾವಿದ್ಯಾರ್ಥಿ. ಕಲೆ ಸಾಗರದಷ್ಟು" ಎಂದು ಹೇಳುವ ಇವರ ತಂತ್ರಗಾರಿಕೆಯನ್ನು ಸಹ ಈ ಅಧ್ಯಯನದಲ್ಲಿ ಹೇಳಲಾಗಿದೆ.

೮. ರಾಜಾ ರವಿವರ್ಮನ ಕಲಾಕೃತಿಗಳಲ್ಲಿ ಸ್ತ್ರೀ ಚಿತ್ರಣ

ಡಿ. ಎಸ್. ಶ್ವೇತಾ ಅವರು ಎಂ.ಫಿಲ್. ಪದವಿಗಾಗಿ ಡಾ. ಎಸ್. ಸಿ. ಪಾಟೀಲ ಅವರ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ರಾಜಾ ರವಿವರ್ಮನ ಕಲಾಕೃತಿಗಳಲ್ಲಿ ಸ್ತ್ರೀಚಿತ್ರಣ ಎಂಬ ವಿಷಯ ಕುರಿತು ಪ್ರಬಂಧವನ್ನು ಮಂಡಿಸಿದ್ದಾರೆ.[೭೫] ಈ

೭೪. ರಾಜೀವ ಎಂ.ವೈ : ಕೆ. ವೆಂಕಟಪ್ಪ ಕಲೆ ಮತ್ತು ಬದುಕು, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೧೨

೭೫. ಶ್ವೇತಾ ಡಿ. ಎಸ್. : ರಾಜಾ ರವಿವರ್ಮನ ಕಲಾಕೃತಿಗಳಲ್ಲಿ ಸ್ತ್ರೀ ಚಿತ್ರಣ, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೧೨

[illegible]

[illegible]

[illegible]

ಅಧ್ಯಯನದ ವಿಷಯವು ಒಟ್ಟು ಏಳು ಅಧ್ಯಾಯಗಳಲ್ಲಿ ಹರಡಿದೆ. ಒಂದನೆಯ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ ಕುರಿತಂತೆ ಚರ್ಚಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಕಲಾವಿದ ರವಿವರ್ಮನ ಜೀವನ ಮತ್ತು ವೃತ್ತಿಬದುಕು ಕುರಿತಂತೆ ವಿವರಿಸಲಾಗಿದೆ.

ಮೂರನೆಯ ಅಧ್ಯಾಯವು ರವಿವರ್ಮನ ಕಲಾಕೃತಿಗಳಲ್ಲಿ ಸ್ತ್ರೀ ಭಾವಚಿತ್ರಗಳ ಕುರಿತಂತಾದರೆ, ನಾಲ್ಕನೆಯ ಅಧ್ಯಾಯದಲ್ಲಿ ರವಿವರ್ಮನ ಸ್ತ್ರೀಕಲಾಕೃತಿಗಳ ಸಂಯೋಜನೆ ಕುರಿತಂತೆ ಚರ್ಚಿಸಲಾಗಿದೆ. ಐದನೆಯ ಅಧ್ಯಾಯವು ರವಿವರ್ಮನ ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ, ಶೈಲಿ ಕುರಿತಂತಾದರೆ, ಆರನೆಯ ಅಧ್ಯಾಯದಲ್ಲಿ ರವಿವರ್ಮನ ಸ್ತ್ರೀಕಲಾಕೃತಿಗಳ ಪ್ರಮುಖ ವೈಶಿಷ್ಟ್ಯಗಳನ್ನು ವಿವರಿಸಲಾಗಿದೆ.

ಏಳನೆಯ ಅಧ್ಯಾಯವು ಸಮಾರೋಪವಾಗಿದ್ದು, ಇಲ್ಲಿ ಮೇಲಿನ ಆರು ಅಧ್ಯಾಯಗಳ ವಿಷಯ ಅಂಶವು ಒಳಗೊಂಡಿದ್ದು, ಅವು ಈ ಕೆಳಗಿನಂತಿದ್ದು. ನಾಡಿನ ಪ್ರಪ್ರಥಮ ಕಲಾವಿದರಾಗಿದ್ದು, ഗലളലರವರೆಗೂ ತಮ್ಮ ಬದುಕಿನುದ್ದಕ್ಕೂ ಸಾವಿರಾರು ಕಲಾಕೃತಿಗಳನ್ನು ರಚಿಸಿದ್ದು, ಅವುಗಳು ವೈವಿಧ್ಯಮಯವಾಗಿವೆ. ಸ್ವಪ್ರಯತ್ನದಿಂದಲೇ ಸಾಧನಗೈದಿರುವುದನ್ನು, ಅವರ ಕಲಾಕೃತಿಗಳಲ್ಲಿ ಕಾಣುವ ವೈಭವೀಕರಣದ ಪರಿಶ್ರಮವನ್ನು ಗುರುತಿಸಬಹುದು. ರವಿವರ್ಮ ಒಬ್ಬ ಬಹುಮುಖ ಪ್ರತಿಭೆ ಎಂದು ತಿಳಿಯಲಾಗಿದೆ. ಅವರು ಸಂಸ್ಕೃತ ಮತ್ತು ಮಲಯಾಳಂನ ಎಲ್ಲಾ ಪ್ರಧಾನ ಅಭಿಜಾತ ಕಾವ್ಯಗಳನ್ನು ಕರಗತ ಮಾಡಿಕೊಂಡಿರುವುದು, ಅರಮನೆಯಲ್ಲಿನ ಕಥಕ್ಕಳಿ ಪ್ರದರ್ಶನಗಳಲ್ಲಿ ಭಾಗವಹಿಸಿ, ಅದನ್ನು ಕಲಿತಿರುವುದು, ಪದಗಳನ್ನು ಸೊಗಸಾರಿ ಹಾಡುವ ಪ್ರತಿಭೆ ಹೊಂದಿದ್ದರು ಎನ್ನಲಾಗಿದೆ.

ಯುರೋಪಿಯನ್ ತೈಲವರ್ಣಗಳನ್ನು ಬಳಸುವ ರೀತಿ, ರಚನೆಯ ಲಾಲಿತ್ಯ, ತಂತ್ರಗಳನ್ನು ಕರಗತ ಮಾಡಿಕೊಂಡು ಭಾರತದ ಶ್ರೇಷ್ಠ ಕಲಾವಿದರಾದರು. ಯುರೋಪಿಯನ್ ತೈಲ ವರ್ಣಗಳಿಂದ ಕಲಾಕೃತಿಗಳಿಗೆ ಮೆರುಗನ್ನು ನೀಡಿ ಸ್ತ್ರೀಯರಿಗೆ ವಿಶಿಷ್ಟ ಹೊಳಪು, ಮೆರಗನ್ನು ಕೊಟ್ಟು ನೋಡುಗನ ಗಮನ ಸೆಳೆಯುವಂತಹ ಕಲಾಕೃತಿಗಳ ರಚನೆಯನ್ನು ಮಾಡಲಾಗಿದೆ. ಸ್ತ್ರೀದೇವತೆಯ ಚಿತ್ರ ಕಲ್ಪನೆಯನ್ನು ಮೂಡಿಸಿ, ಉತ್ತಮವಾದ ಕಲಾಕೃತಿಗಳನ್ನು ರಚಿಸಿ, ಜನಸಾಮಾನ್ಯರಲ್ಲಿ ದೇವರ ಕಲ್ಪನೆಯನ್ನು ಕಣ್ಮುಂದೆ ಇಟ್ಟು, ಎಲ್ಲಾ ಸಾಮಾನ್ಯ ಜನರಿಗೂ ದೊರಕುವಂತೆ ಮಾಡಿದ್ದು ಭಕ್ತಿ ಭಾವನೆಯನ್ನು ಮೂಡಿಸಿದವು. ಇವರ ಕಲಾಕೃತಿಗಳಲ್ಲಿ ರೆಂಬ್ರಾಂಟ್ ಪ್ರಭಾವವನ್ನು ಗುರುತಿಸಬಹುದು. ಮತ್ತು ಮನುಷ್ಯ ಭಂಗಿ, ನದಿ–ಕೊಳ್ಳ ನೈಸರ್ಗಿಕ ಸ್ವರೂಪದಲ್ಲಿವೆ.

ಯುರೋಪಿಯನ್ ತೈಲ ವರ್ಣ ಹಾಗೂ ಭಾರತೀಯ ಸಾಂಪ್ರದಾಯಿಕ ಚಿತ್ರಗಳನ್ನು ಬಳಸಿ ಅಕಾಡೆಮಿಕ್ ಶೈಲಿಯ, ತಂತ್ರ ಪದ್ಧತಿಯ ಪ್ರಭಾವವು ದಟ್ಟವಾಗಿ ಕಂಡುಬರುತ್ತದೆ. ಸ್ತ್ರೀಯರ, ಗಾತ್ರ, ಮೈಕಟ್ಟುಗಳನ್ನು ಗಮನಿಸಿದಾಗ ಪಾಶ್ಚಾತ್ಯರ ಪ್ರೇರಣೆ, ಪ್ರಭಾವ ಎದ್ದು ತೋರುತ್ತದೆ.

೯. ಕಲಾವಿದ ಎಲ್. ಶಿವಲಿಂಗಪ್ಪನವರ ಜೀವನ ಮತ್ತು ಕಲಾಕೃತಿಗಳು

ಎಸ್. ವಾದಿರಾಜ್ ಅವರು ಕಲಾವಿದ ಎಲ್. ಶಿವಲಿಂಗಪ್ಪನವರ ಜೀವನ ಮತ್ತು ಕಲಾಕೃತಿಗಳು ಎಂಬ ವಿಷಯವಾಗಿ ಎಂ.ಫಿಲ್ ಅಧ್ಯಯನವನ್ನು ಡಾ. ಎಸ್. ಸಿ. ಪಾಟೀಲ ಅವರ ಮಾರ್ಗದರ್ಶನದಲ್ಲಿ ಮಾಡಿದ್ದಾರೆ.[೭೬] ಪ್ರಸ್ತುತ ಅಧ್ಯಯನದ ಮೊದಲ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ ಕುರಿತು ವಿವರಿಸಲಾಗಿದೆ. ಒಟ್ಟು ಏಳು ಅಧ್ಯಾಯಗಳಲ್ಲಿ ವಿಷಯ ಹರಡಿಕೊಂಡಿದೆ. ಇನ್ನುಳಿದಂತೆ ಕಲಾವಿದ ಎಲ್. ಶಿವಲಿಂಗಪ್ಪನವರ ಪರಿಸರ ಮತ್ತು ಬಾಲ್ಯಜೀವನ, ವೃತ್ತಿಬದುಕು, ಅವರ ವರ್ಣಚಿತ್ರಗಳು, ಶಿಲ್ಪಕಲಾಕೃತಿಗಳು ಮತ್ತು ಕಲೆಯಿಂದ ಇವರ ಮೇಲಾದ ಪ್ರಭಾವ, ಪ್ರೇರಣೆ ಹಾಗೂ ತಂತ್ರ, ಶೈಲಿಯನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ. ಎಂ.ಟಿ.ವಿ. ಆಚಾರ್ಯರ ಶೈಲಿಯನ್ನು ರೂಢಿಸಿಕೊಂಡ ಶಿವಲಿಂಗಪ್ಪನವರು ಜಲವರ್ಣಗಳನ್ನು ಪ್ರಯೋಗಿಸಿ ಅಭಿವ್ಯಕ್ತಿಸಿದ ಚಿತ್ರಗಳು ಹಾಗೂ ಅನೇಕ ಪ್ರಾಣಿಪಕ್ಷಿಗಳ ಮತ್ತು ಸಾಂದರ್ಭಿಕ ಜಲವರ್ಣಗಳನ್ನು ಅದರ ಬಿಳುಪನ್ನು ಕುಂಚದಿಂದಲೇ ನಿಯಂತ್ರಿಸುವುದನ್ನು ಕಾಣುತ್ತೇವೆ. ಇದರಿಂದ ಜಲವರ್ಣಗಳ ಮೇಲಿನ ಅವರ ಹಿಡಿತ, ಪ್ರೌಢಿಮೆಯ ಅರಿವಾಗುತ್ತದೆ. ಭಾವಚಿತ್ರಗಳಲ್ಲಿ ಬಳಸಿದ ಜಲವರ್ಣಗಳು ನೈಜ ಅನುಭವ ನೀಡುವುದರೊಂದಿಗೆ ಮಾಸದಂತೆ ತಾಜಾತನವನ್ನು ಹೊಂದಿವೆ. ಶಿವಲಿಂಗಪ್ಪನವರು ಚಿತ್ರಗಳನ್ನು ಸ್ವತಂತ್ರವಾಗಿ ರಚಿಸುವುದರ ಜೊತೆಗೆ ಸಂಯೋಜನಾಚಿತ್ರಗಳಲ್ಲಿ ಹಿನ್ನೆಲೆಯನ್ನು ಸಾಕಷ್ಟು ದುಡಿಸಿಕೊಂಡಿದ್ದಾರೆ.

ನಮ್ಮ ಭಾರತೀಯ ಶೈಲಿಯ ಸೊಗಡು ಅವರಲ್ಲಿದೆ. ಗಿಡ, ಮರ, ಬಳ್ಳಿ ಎಲ್ಲಕ್ಕೂ ವಿವರವಾಗಿ ಶಿವಲಿಂಗಪ್ಪನವರು ತಮ್ಮ ಮನಸ್ಸಿನ ಪಕ್ವತೆಯ ಭಾವನೆಗಳಿಗೆ ತಕ್ಕಂತೆ ಬಣ್ಣಗಳನ್ನು ಆಯ್ದುಕೊಂಡಿದ್ದು, ಜಲವರ್ಣ, ಪೋಸ್ಟರ್ ವರ್ಣ, ತೈಲವರ್ಣಗಳಲ್ಲಿ ರಚಿಸಿದ ಚಿತ್ರಗಳಲ್ಲಿ ಕಾಣಬಹುದು. ಈ ಚಿತ್ರಗಳು ಸಹೃದಯನ ಮನಸ್ಸನ್ನು ಸೂರೆಗೊಳ್ಳುವಂತೆ ಈ ಚಿತ್ರಗಳ ರೇಖೆಗಳ ಲಯಾತ್ಮಕತೆ, ಬಣ್ಣಗಳ ಘನತ್ವ, ಕುಂಚಗಳ ಹರಿದಾಟ ಹಾಗೂ ಆಕರ್ಷಣೆ, ಅರ್ಥವಂತಿಕೆ ಹೊಂದಿರುವುದನ್ನು ಗಮನಿಸಲಾಗಿದೆ. ಸಂಯೋಜನೆಯ ಆಕೃತಿಗಳ ವಸ್ತುವಿನ್ಯಾಸದಲ್ಲಿ ತೆಳುವಾಗಿ ಕುಂಚ ಪ್ರಯೋಗಿಸಿ ನೀಡುವ ವರ್ಣಲೇಪನ ಕಲಾಕೃತಿಯ ಮೌಲ್ಯವನ್ನು ಹೆಚ್ಚಿಸುತ್ತದೆ. ಎಲ್. ಶಿವಲಿಂಗಪ್ಪನವರು ಕಲಾ ಸಾಹಿತ್ಯ, ಶಿಲ್ಪಕಲೆಯಲ್ಲೂ ಚಿತ್ರಕಲೆಯಷ್ಟೇ ಸಮಾನವಾಗಿ ದುಡಿದಿದ್ದಾರೆ. ಈ ಕಲೆಗಳನ್ನು ಸಹ ಕುರಿತು ಅಧ್ಯಯನ ಮಾಡಲಾಗಿದೆ.

ಡಿ.ಲಿಟ್. ಪ್ರಬಂಧಗಳು

ಡಿ.ಲಿಟ್ ಪ್ರಬಂಧಗಳು ಶೈಕ್ಷಣಿಕ ಮಟ್ಟದಲ್ಲಿ ಯಾವುದೇ ಪದವಿಯ ಮಾನದಂಡವನ್ನು ಹೊಂದಿರದೇ ಇದ್ದರೂ ಸಹಿತ ಪಿಹೆಚ್.ಡಿ ಮತ್ತು ಎಂ.ಫಿಲ್ ಮಟ್ಟಿನ ಗಂಭೀರ ಸಂಶೋಧನೆಯ ವಿಧಾನವನ್ನು ಅನುಸರಿಸಿವೆ. ಈ ಪ್ರಬಂಧಗಳಲ್ಲಿ ಇದುವರೆಗೂ ಬಂದ ವಿಷಯಗಳನ್ನು ನೋಡಿದಾಗ

---

೭೬. ಎಸ್. ವಾದಿರಾಜ್ : ಕಲಾವಿದರ ಎಲ್ ಶಿವಲಿಂಗಪ್ಪನವರ ಜೀವನ ಮತ್ತು ಕಲಾಕೃತಿಗಳು, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೧೨

[illegible]

ಹೆಚ್ಚಿನ ಅಧ್ಯಯನಗಳು ಕ್ಷೇತ್ರೀಯ ಮಟ್ಟದಲ್ಲಿ ನಡೆದಿರುವುದು ತಿಳಿದುಬರುತ್ತದೆ. ಇದುವರೆಗೆ ದೃಶ್ಯಕಲಾ ಕ್ಷೇತ್ರಕ್ಕೆ ಸಲ್ಲಿಕೆಯಾದ ಡಿ.ಲಿಟ್ ಪ್ರಬಂಧಗಳು ಈ ಕೆಳಗಿನಂತಿವೆ.

೧. ಕನ್ನಡ ವೃತ್ತಿರಂಗಭೂಮಿ ಮತ್ತು ರಂಗವಿನ್ಯಾಸ

ರಂಗಭೂಮಿಯ ವಿವಿಧ ಆಯಾಮಗಳಲ್ಲಿ ಚಿತ್ರಕಲಾ ಸಂಗತಿಗಳು ಗೋಚರಿಸುತ್ತವೆ. ನಾಟಕದ ಪರದೆ, ಬಣ್ಣದ ಫಲಕ, ಪಾತ್ರಧಾರಿಯ ಪಾತ್ರಕ್ಕೆ ಅನುಗುಣವಾಗಿ ವರ್ಣಲೇಪನ, ವೇಷಭೂಷಣ ಹೀಗೆ ವೈವಿಧ್ಯ ರೀತಿಯಲ್ಲಿ ಕಲಾ ಅಂಶಗಳನ್ನು ಆಯ್ದುಕೊಂಡು ದೇವದಾಸ ಕಳಸದ 'ಕನ್ನಡ ವೃತ್ತಿರಂಗಭೂಮಿ ಮತ್ತು ರಂಗವಿನ್ಯಾಸ' ವಿಷಯದ ಕುರಿತು ಅಧ್ಯಯನ ಮಾಡಿದ್ದಾರೆ.[೭೭] ಈ ಅಧ್ಯಯನ ವಿಷಯ ಪ್ರಬಂಧದಲ್ಲಿ ಒಟ್ಟು ನಾಲ್ಕು ಅಧ್ಯಾಯಗಳಲ್ಲಿ ಹರಡಿಕೊಂಡಿದೆ. ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಸ್ವರೂಪ ಮತ್ತು ರಂಗವಿನ್ಯಾಸದ ಬಗೆಗೆ ಹೇಳಲಾಗಿದೆ. ರಂಗಭೂಮಿ ಕುರಿತು, ವಿಶ್ವರಂಗಭೂಮಿ ಕುರಿತು ಸ್ಥೂಲವಾಗಿ ಚರ್ಚಿಸಿ, ಮುಂದೆ ಕನ್ನಡ ರಂಗಭೂಮಿಯ ಹುಟ್ಟು, ಬೆಳವಣಿಗೆ, ವಿಸ್ತಾರ ಮತ್ತು ಸ್ವರೂಪವನ್ನು ಹೇಳಲಾಗಿದೆ. ಎರಡನೆಯ ಅಧ್ಯಾಯದಲ್ಲಿ ರಂಗಸಜ್ಜಿಕೆಯ ಸ್ವರೂಪದಲ್ಲಿ ಬರುವ ಹವ್ಯಾಸಿ ರಂಗಭೂಮಿ, ವೃತ್ತಿಗಳ ರಂಗಭೂಮಿ ಎರಡು ಒಂದೇ ತೆರನಾಗಿ ಇದ್ದರೂ ಕೆಲವು ಪರಿಕರ ವ್ಯತ್ಯಾಸಗಳಲ್ಲಿ ಆಭರಣಗಳು, ರಸ್ತೆ, ಮನೆ, ಅರಮನೆ, ಕಾಡು ಮುಂತಾದ ದೃಶ್ಯ ಸೀನರಿಗಳು ವೃತ್ತಿ ರಂಗಭೂಮಿಯಲ್ಲಿ ಶ್ರೀಮಂತವಾಗಿದ್ದರೆ, ಹವ್ಯಾಸಿ ರಂಗಭೂಮಿಯಲ್ಲಿ ಒಂದು ದಿನದ ಮಟ್ಟಿಗೆ ಮಾತ್ರ ಸಿಕ್ಕ ಪರಿಕರಗಳನ್ನು ಬಳಸಿಕೊಳ್ಳುವುದರ ಕುರಿತು ಚರ್ಚಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಕನ್ನಡ ವೃತ್ತಿರಂಗಭೂಮಿಯ ರಂಗಾಂಗ ಕುರಿತು ವಿವಿಧ ರೀತಿಯ ಪರದೆಗಳಲ್ಲಿ ರಸ್ತೆ ಸನ್ನಿವೇಶಕ್ಕೆ ತಕ್ಕಂತೆ ದೇವಾಲಯದ ರಸ್ತೆ, ನಗರ ರಸ್ತೆ, ಹಳ್ಳಿಗಾಡಿನ ರಸ್ತೆ, ಕಾಡಿನ ದಾರಿಯ ರಸ್ತೆ ದೃಶ್ಯಾವಳಿಗಳಿರುತ್ತವೆ. ಮನೆ–ಮಹಡಿ, ಮಠಮಾನ್ಯಗಳು, ಕೋಟೆ–ಗೋಡೆಗಳು ಮತ್ತು ಆಕಾಶ, ಭೂಮಿ, ಮಳೆ, ನೀರು, ಕಾಡು, ಬಾವಿ, ನದಿ, ಸಮುದ್ರ, ಉದ್ಯಾನ ಇಂತಹ ದೃಶ್ಯಗಳನ್ನು ತೋರಿಸಲು ರಚನೆಗೆ ಬೇಕಾಗುವ ಪರಿಕರಗಳಲ್ಲಿ ಬಣ್ಣ, ಬಟ್ಟೆ ಅಂಟುದ್ರಾವಕ ಮತ್ತು ಚಿತ್ರಿಸುವ ರೀತಿಗಳ ಬಗ್ಗೆ ಕೂಡ ಇಲ್ಲಿ ವಿವೇಚನೆ ಮಾಡಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಕನ್ನಡ ವೃತ್ತಿರಂಗಭೂಮಿಯ ರಂಗ ಪ್ರದರ್ಶನಗಳ ಬಗ್ಗೆ ವಿವೇಚಿಸಲಾಗಿದೆ. ಮತ್ತು ಇಂದಿನ ಸ್ಥಿತಿ–ಗತಿ ಮತ್ತು ಪ್ರಸಿದ್ಧ ನಾಟಕ ಕಂಪನಿಗಳ ಪ್ರದರ್ಶನದಲ್ಲಿ ಬಳಸುತ್ತಿದ್ದ ಕಲಾಪರಿಕರಗಳ ವಿವರವನ್ನು ಹೇಳಲಾಗಿದೆ. ಈ ಲಲಿತಕಲೆಯಾದ ರಂಗಭೂಮಿ ಚಿತ್ರಕಲೆಯು ಸಹಸಂಬಂಧವನ್ನು ಕುರಿತು ಪ್ರತ್ಯಕ್ಷವಾಗಿ ಮೂಡಿದ ಅಧ್ಯಯನದ ಅಂಶವು ಕಂಡುಬರುತ್ತದೆ.

೨. ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ

ಕರಾವಳಿ ಕರ್ನಾಟಕಟ ನಿತ್ಯಹರಿದ್ವರ್ಣ ಕಾಡುಗಳ ಮಧ್ಯೆ ತಲೆಯೆತ್ತಿರುವ ಹಲವಾರು

೭೭. ದೇವದಾಸ ಪ. ಕಳಸದ : ಕನ್ನಡ ವೃತ್ತಿರಂಗಭೂಮಿ ಹಾಗೂ ರಂಗವಿನ್ಯಾಸ, ಅ.ಪ್ರ.ಡಿ.ಲಿಟ್.ಮ.ಪ್ರ. ಕನ್ನಡ ವಿ.ವಿ. ಹಂಪಿ. ೨೦೦೧

[illegible]

ದೇಗುಲಗಳಲ್ಲಿ ಚಿತ್ರಿತಗೊಂಡ ಕಾವಿ ಕಲೆ ಕರಾವಳಿಯ ಶ್ರೀಮಂತ ಸಂಸ್ಕೃತಿಯ ಪ್ರತೀಕವಾಗಿದೆ. ಇಲ್ಲಿನ ಸಂಸ್ಕೃತಿ ಹಲವಾರು ಉಪಸಂಸ್ಕೃತಿಗಳ ಹುಟ್ಟಿಗೆ ಕಾರಣವಾಗಿರುವುದಲ್ಲದೇ ಈ ಉಪಸಂಸ್ಕೃತಿಗಳ ಅಡಿಯಲ್ಲಿ ವಿವಿಧ ರೀತಿಯ ಕಲೆಗಳು ರೂಪಗೊಂಡು ವಿಶಿಷ್ಟವಾಗಿ ಬೆಳೆದು ಬಂದಿವೆ. ಅಂತಹ ಕಲಾಪ್ರಕಾರದಲ್ಲಿ ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆಯೂ ಒಂದಾಗಿದ್ದು, ಇದರ ಕುರಿತು ಆನಂದ ಕೆ. ಪೂಜಾರ ಇವರು ಡಿ.ಲಿಟ್ ಅಧ್ಯಯನವನ್ನು ಮಾಡಿದ್ದಾರೆ.[೭೮] ಈ ಅಧ್ಯಯನದಲ್ಲಿ ಒಟ್ಟು ಎಂಟು ಅಧ್ಯಾಯಗಳಲ್ಲಿ ವಿಷಯ ಹರಡಿಕೊಂಡಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ ವ್ಯಾಪ್ತಿ ಮತ್ತು ವಿಧಾನಗಳ ಬಗ್ಗೆ ಹೇಳಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಕರಾವಳಿ ಉದ್ದಕ್ಕೂ ವ್ಯಾಪಿಸಿರುವ ಸಾಂಸ್ಕೃತಿಕ ಪರಿಸರದ ಕಲೆಗಳನ್ನು ಪರಿಚಯಿಸಲಾಗಿದೆ. ಕರಾವಳಿ ಭಾಗದಲ್ಲಿ ಹಲವಾರು ಬುಡಕಟ್ಟು ಸಮುದಾಯಗಳು, ಮೇಲ್ವರ್ಗದ ಜನಾಂಗಗಳು, ಮೀನುಗಾರರು, ಒಕ್ಕಲಿಗರು ಹೀಗೆ ವಿವಿಧ ಜನಸಮುದಾಯಗಳು ವಾಸವಾಗಿದ್ದು, ಈ ಕಲೆಗೆ ಪ್ರೇರಕ ಶಕ್ತಿ ಎನ್ನುವಂಥ ಪರಿಸರ ಸಾಂಸ್ಕೃತಿಯನ್ನು ಕುರಿತು ಇಲ್ಲಿ ವಿವರಿಸಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಕಾವಿ ಚಿತ್ರಕಲೆಯನ್ನು ರಚಿಸುವ ಪದ್ಧತಿಗೆ ಸಾಂಪ್ರದಾಯಿಕ ಹಿನ್ನೆಲೆಯಿದೆ ಮತ್ತು ಬಣ್ಣಗಳನ್ನು ಸಿದ್ಧಗೊಳಿಸುವಿಕೆ, ಕುಂಚಗಳನ್ನು ಹೊಂದಿಸಿಕೊಳ್ಳುವಿಕೆ, ಕರಡು ಚಿತ್ರಗಳನ್ನು ಮಾಡುವಿಕೆ, ಆಮೇಲೆ ಕ್ರಮ–ಕ್ರಮವಾಗಿ ಚಿತ್ರರಚನೆಯ ವಿವಿಧ ಹಂತಗಳನ್ನು ಅನುಕ್ರಮವಾಗಿ ಸಾಕಷ್ಟು ವಿವರಗಳೊಂದಿಗೆ ಈ ಅಧ್ಯಾಯದಲ್ಲಿ ಸೋದಾಹರಣವಾಗಿ ವಿವರಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ರಾಮಾಯಣ, ಮಹಾಭಾರತ, ದಶಾವತಾರ, ಸಾಮಾಜಿಕ, ನೈಸರ್ಗಿಕ, ಅಲಂಕಾರಿಕ ಮುಂತಾದ ನೆಲೆಯ ಕಾವಿ ಪ್ರಕಾರಗಳನ್ನು ದೃಶ್ಯಾತ್ಮಕ ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಿ ಈ ಅಧ್ಯಾಯದ ಮುಖ್ಯ ಉದ್ದೇಶವನ್ನು ಈಡೇರಿಸಲಾಗಿದೆ. ಐದನೆಯ ಅಧ್ಯಾಯದಲ್ಲಿ ಕರಾವಳಿ ಕಾವಿ ಚಿತ್ರಕಲೆಯಲ್ಲಿ ದೇಶೀ ಮತ್ತು ವಿದೇಶಿ ಪ್ರಭಾವದ ಪೋರ್ಚುಗೀಸ್ ಕಲಾಪ್ರಭಾವವು ಗೋಚರಿಸುವುದು. ಹಸೆ ಚಿತ್ರ ಬರೆಯುವುದು, ನಾಗಮಂಡಲ, ಢಕ್ಕೆಬಲಿ, ಭೂತಾರಾಧನೆ ಮುಂತಾದ ಸಂದರ್ಭಗಳಲ್ಲಿ ಚಿತ್ರವಿನ್ಯಾಸಗಳು ಈ ಮೊದಲೇ ಇಲ್ಲಿದ್ದು, ಇವು ಕಾವಿಚಿತ್ರಗಳ ಮೇಲೆ ಪ್ರಭಾವ ಬೀರಿದಂತೆ ಕಂಡುಬರುತ್ತದೆ. ಹೀಗೆ ಹಲವಾರು ರೀತಿಯ ಪ್ರಭಾವ, ಪ್ರೇರಣೆ ಮತ್ತು ತಂತ್ರಗಾರಿಕೆಯು ಕಾವಿಕಲೆಯ ಮೇಲೆ ಉಂಟಾಗಿರುವುದನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಆರನೆಯ ಅಧ್ಯಾಯದಲ್ಲಿ ಕಾವಿ ಚಿತ್ರಕಲಾವಿದರನ್ನು ಕುರಿತು ಚರ್ಚಿಸಲಾಗಿದೆ. ಈ ಕಲೆಯನ್ನು ಬಲ್ಲ ಕೆಲವೇ ಕುಟುಂಬಗಳು ಬೀಳಗಿ, ಹೊನ್ನಾವರ, ಸಿರ್ಸಿ, ಗೋಕರ್ಣ, ಕುಮಟಾ ಮತ್ತು ಅಂಕೋಲಾಗಳಲ್ಲಿ ವಾಸಿಸುತ್ತಿದ್ದು, ಈ ಮನೆತನದ ಕಲಾವಿದರು ಹಿರಿಯರಾಗಿದ್ದು, ಈ ಕಲೆಯ ಬಗ್ಗೆ ಅರಿವುಳ್ಳವರಾಗಿದ್ದು, ಯುವ ಪೀಳಿಗೆಯು ಈ

---

೭೮. ಆನಂದ ಕೆ. ಪೂಜಾರ : ಕರಾವಳಿ ಕರ್ನಾಟಕದ ಕಾವಿಚಿತ್ರಕಲೆ, ಅ.ಪ್ರ.ಡಿ.ಲಿಟ್.ಮ.ಪ್ರ. ಕನ್ನಡ ವಿ.ವಿ. ಹಂಪಿ. ೨೦೦೫

ಕಲಾಪರಂಪರೆಯನ್ನು ಹೊರತು ಪಡಿಸಿದ ಇನ್ನಿತರ ಬೇರೆ ಬೇರೆ ಉದ್ಯೋಗಗಳನ್ನು ಮಾಡಿಕೊಂಡಿದ್ದಾರೆ. ಈ ಕಲಾವಿದರ ಸ್ಥಿತಿ-ಗತಿ, ಹೀಗೆ ಈ ಕಲೆಯ ಹಲವಾರು ಅಂಶಗಳನ್ನು ವಿವೇಚಿಸುವ ಪ್ರಯತ್ನ ಮಾಡಲಾಗಿದೆ. ಏಳನೆಯ ಅಧ್ಯಾಯದಲ್ಲಿ ಕರಾವಳಿ ಕಾವಿಚಿತ್ರರಚನೆಯ ಆಪತ್ತು ಮತ್ತು ಸಂರಕ್ಷಣಾ ವಿಧಾನಗಳ ಬಗ್ಗೆ ವಿವೇಚಿಸಲಾಗಿದೆ.

ಎಂಟನೆಯ ಅಧ್ಯಾಯವು ಸಮಾರೋಪವಾಗಿದ್ದು, ಇಲ್ಲಿ ಒಟ್ಟು ಅಧ್ಯಯನದ ಫಲಿತಗಳನ್ನು ನೀಡಲಾಗಿದೆ. ಭಾರತದ ಇತರ ಕಡೆ ಕಾಣಬರದೇ ಇರುವ ಅಪರೂಪದ ಕಲೆಗಳಲ್ಲಿ ಒಂದಾದ ಕಾವಿ ಚಿತ್ರಕಲೆ ಕರಾವಳಿ ಭಾಗದಲ್ಲಿ ಮಳೆ, ಸೆಕೆ, ಬಿಸಿಲಿನ ಕಾರಣವಾಗಿ ಇತರ ಮಾಧ್ಯಮದ ಕಲೆಗಳು ಇಲ್ಲಿ ನೆಲೆ ಕಂಡುಕೊಂಡಿಲ್ಲ. ಈ ಪರಿಸರಕ್ಕೆ ಹೊಂದಿಕೊಂಡ ಕಾವಿಕಲೆ ಮಾತ್ರ ಇಲ್ಲಿ ಕಾಣಬರುತ್ತದೆ. ಕಾವಿಚಿತ್ರಕಲೆಯಲ್ಲಿ ವೈಷ್ಣವ ಧರ್ಮದ ಚಿತ್ರಗಳೇ ಪಾರುಪತ್ಯವನ್ನು ಸಾಧಿಸಿವೆ. ಇದಕ್ಕೆ ಕಾರಣ ಕರಾವಳಿಯ ಭಾಗದಲ್ಲಿ ವೈಷ್ಣವ ಪಂಥದವರು ಹೇರಳವಾಗಿ ಇರುವುದರಿಂದ ತಮ್ಮ ಪಂಥಕ್ಕೆ ಸಂಬಂಧಿಸಿದ ಚಿತ್ರಗಳನ್ನು ರಚಿಸಲು ಕಲಾವಿದರಿಗೆ ಪ್ರೋತ್ಸಾಹಿಸಿದ್ದಾರೆ. ಧಾರ್ಮಿಕ ವಿಷಯಗಳ ಚಿತ್ರಗಳೇ ಇಲ್ಲಿ ಹೇರಳವಾಗಿ ಇದ್ದರೂ ಇವುಗಳ ಮಧ್ಯೆ ಮಧ್ಯೆ ಸಾಮಾಜಿಕ ಚಿತ್ರಗಳು ಕಾಣಬರುತ್ತವೆ. ಮತ್ತು ಅಪರಿಚಿತ ಲೋಕದ ಪಕ್ಷಿ-ಪ್ರಾಣಿ, ಪಕ್ಷಿ-ತರುಲತೆಗಳ ಹಾಗೂ ಪ್ರಾಣಿ-ತರುಲತೆಗಳ ವಿನ್ಯಾಸದಿಂದ ಕೂಡಿದ ಚಿತ್ರಗಳು ಇಲ್ಲಿನ ಸಂಯೋಜನೆಯಲ್ಲಿ ಅಲಂಕಾರಿಕವಾಗಿ ಮೂಡಿವೆ. ಹೀಗಾಗಿ ಕಲಾವಿದರ ಚಿತ್ರ ರಚನಾವಿನ್ಯಾಸ ತಂತ್ರ ಸಂಯೋಜನೆ, ಪ್ರಮುಖ ಸಂಗತಿಗಳನ್ನು ಫಲಿತವಾಗಿ ಹೇಳಲಾಗಿದೆ.

೩. ದೃಶ್ಯಕಲೆಗಳು : ಒಂದು ತೌಲನಿಕ ಅಧ್ಯಯನ

ಡಿ.ಎ. ಉಪಾಧ್ಯಾಯ ಅವರು 'ದೃಶ್ಯಕಲೆಗಳು : ಒಂದು ತೌಲನಿಕ ಅಧ್ಯಯನ' ವಿಷಯ ಆಯ್ದುಕೊಂಡು ಡಿ.ಲಿಟ್ ಅಧ್ಯಯನ ಮಾಡಿದ್ದಾರೆ.[೭೯] ಈ ಪ್ರಬಂಧದಲ್ಲಿ ಒಟ್ಟು ಹನ್ನೆರಡು ಅಧ್ಯಾಯಗಳಾಗಿ ವಿಂಗಡಿಸಿಕೊಂಡು ವಿಷಯ ನಿರೂಪಣೆ ಮಾಡಲಾಗಿದೆ. ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವಿಧಾನ ಮತ್ತು ವ್ಯಾಪ್ತಿ ಮತ್ತು ಈ ಅಧ್ಯಯನದ ಪ್ರಯೋಜನಗಳನ್ನು ಹೇಳಲಾಗಿದೆ. ಎರಡನೆಯ ಅಧ್ಯಾಯದಲ್ಲಿ ನಿಸರ್ಗ, ವಾತ್ಸಾಯನನ ವರ್ಗೀಕರಣ, ಲಲಿತಕಲೆಗಳು, ಇಂದ್ರಿಯ ಮೂಲದ ವರ್ಗೀಕರಣ, ಕ್ರಿಯಾ ಮೂಲದ ವರ್ಗೀಕರಣ, ವಿದೇಶೀಗರ ವರ್ಗೀಕರಣ ಹೀಗೆ ವರ್ಗೀಕರಣಗಳೊಂದಿಗೆ ಒಟ್ಟು ೬೪ ಕಲೆಗಳಿಂದ ೩ ಕಲೆಗಳವರೆಗೆ ವಿಷಯ ಕುರಿತು ವರ್ಗೀಕರಣಗೊಳಿಸಿ ವಿವೇಚಿಸಲಾಗಿದೆ. ಮೂರನೆಯ ಅಧ್ಯಾಯದಲ್ಲಿ ದೃಶ್ಯಕಲೆಗಳು ಮತ್ತು ದೃಶ್ಯೇತರ ವೈಲಕ್ಷಣಗಳನ್ನು ಹೇಳಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ದೃಶ್ಯಕಲಾವಿದರನ್ನು ಕುರಿತು ಚರ್ಚಿಸಲಾಗಿದೆ. ದೃಶ್ಯಕಲಾವಿದನ ಅನುಭವ, ಕಲಾವಿದರಿಗೂ ಇರುವ ಸ್ಥಿತಿಗತಿ ತೌಲನಿಕವಾಗಿ ವಿವೇಚಿಸಲಾಗಿದೆ. ಒಬ್ಬ ಕಲಾವಿದ ಇನ್ನೊಬ್ಬ ಕಲಾವಿದರಿಗೆ

---

೭೯. ಡಿ. ಎ. ಉಪಾಧ್ಯಾಯ : ದೃಶ್ಯಕಲೆಗಳು : ಒಂದು ತೌಲನಿಕ ಅಧ್ಯಯನ, ಅ.ಪ್ರ.ಡಿ.ಲಿಟ್.ಮ.ಪ್ರ. ಕನ್ನಡ ವಿ.ವಿ. ಹಂಪಿ. ೨೦೦೬

ಹೇಗೆ ವಿಭಿನ್ನವಾಗಿದ್ದಾನೆ ಎಂದು ಹೇಳಲಾಗಿದೆ. ಐದನೆಯ ಅಧ್ಯಾಯದಲ್ಲಿ ಸಹೃದಯ ಕಲಾವಿದ ಮತ್ತು ಕಲಾಕೃತಿಯನ್ನು ಕುರಿತು ವಿವೇಚಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಶಾಸ್ತ್ರ ಮತ್ತು ದೃಶ್ಯಕಲೆಗಳ ಬಗ್ಗೆ ವಿವೇಚಿಸಲಾಗಿದೆ. ಶಾಸ್ತ್ರ ಎಂದರೇನು? ಶಾಸ್ತ್ರ ಮತ್ತು ಪ್ರಯೋಜನ, ಪ್ರಾಚೀನ ಶಾಸ್ತ್ರಗ್ರಂಥಗಳು, ಪ್ರಾಚೀನ ಶಾಸ್ತ್ರಗಳಲ್ಲಿ ಕಲಾವಿಷಯವನ್ನು ಹೊಂದಿದ ಶಾಸ್ತ್ರಗಳು ಮತ್ತು ದೃಶ್ಯಕಲೆ, ಹೀಗೆ ವಿಭಿನ್ನ ನೆಲೆಗಳಲ್ಲಿ ವಿವೇಚಿಸಲಾಗಿದೆ. ಏಳನೆಯ ಅಧ್ಯಾಯದಲ್ಲಿ ಮಾಧ್ಯಮದ ಪ್ರಾಚೀನತೆ, ಪರಿಚಯ ಮತ್ತು ಪರಿಮಿತಿ, ಪಂಚಭೂತಗಳು, ಪಂಚೇಂದ್ರಿಯಗಳು, ವಾಹಕ ಮತ್ತು ವಸ್ತು, ಮಾಧ್ಯಮ ಮತ್ತು ಕಲಾವಿದ, ಮಾಧ್ಯಮ ಮತ್ತು ದೃಶ್ಯಕಲೆಗಳ ಕುರಿತಾಗಿ ಮಾಧ್ಯಮಗಳ ಹೊಸ ಆವಿಷ್ಕಾರಗಳು ಮತ್ತು ಶಿಲೆಯೊಂದಿಗೆ ಮರ, ಬಟ್ಟೆ, ಲೋಹ, ಗಾಜು, ಮಣ್ಣುಗಳು ಮಾಧ್ಯಮಗಳಾಗಿ ಬೆಳೆದರೆ, ಶಿಲ್ಪಗಳಲ್ಲೂ ಹೆಚ್ಚು ಕಡಿಮೆ ಇವೇ ಪರಿಕರಗಳು ಮುಂದುವರೆದವು.

ಎಂಟನೆಯ ಅಧ್ಯಾಯದಲ್ಲಿ ವಾಸ್ತು ರಚನೆಗಳಲ್ಲೂ ಹಲವಾರು ಬದಲಾವಣೆಗಳು ಉಂಟಾದವು. ಇಂತಹ ವಿವರಗಳನ್ನು ಸ್ಥೂಲ ದೃಶ್ಯಕಲೆಗಳಲ್ಲಿನ ಕಲ್ಪನೆಯ ಬಗ್ಗೆ ವಿವೇಚಿಸಲಾಗಿದೆ. ಒಂಬತ್ತನೆಯ ಅಧ್ಯಾಯವು ದೃಶ್ಯಕಲೆಗಳಲ್ಲಿನ ಭಾವದ ಬಗ್ಗೆ ಚರ್ಚಿಸಲಾಗಿದೆ. ಇಲ್ಲಿ ಮುಖ್ಯವಾಗಿ ಭಾವದ ಉಗಮ ಮತ್ತು ರಸಭಾವಗಳ ಬಗ್ಗೆ ಹತ್ತನೆಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಹನ್ನೊಂದನೆಯ ಅಧ್ಯಾಯದಲ್ಲಿ ಕಲೆಯ ಮೂಲ ತತ್ವವೇ ಸೌಂಧರ್ಯದ ಉಪಾಧಿಯೊಂದಿಗೆ ಬೆರೆತುಕೊಂಡಿದ್ದು, ಸಮಕಾಲೀನ ಸಂದರ್ಭದಲ್ಲಿ ಕಲೆ ಮತ್ತು ಸೌಂಧರ್ಯದ ಪರಿಕಲ್ಪನೆ ಭಿನ್ನ ರೀತಿಯ ಆಯಾಮ ಪಡೆದುಕೊಂಡಿರುವುದನ್ನು ಚರ್ಚಿಸಿದ್ದಾರೆ. ಹೀಗೆ ಹಲವಾರು ವಿಷಯಗಳ ತೌಲನಿಕವಾಗಿ ಸೌಂದರ್ಯದ ಹಿನ್ನೆಲೆಯಲ್ಲಿ ವಿವೇಚನೆ ಮಾಡಲಾಗಿದೆ.

೪. ಮಕ್ಕಳ ಮನಸ್ಸಿನ ಚಿತ್ರಗಳು

ಮಕ್ಕಳ ಮನಸ್ಸಿನ ಚಿತ್ರಗಳು ಎನ್ನುವ ವಿಷಯವಾಗಿ ಮಕ್ಕಳ ಚಿತ್ರಕಲೆಯ ಕುರಿತು ಡಿ.ಲಿಟ್ ಅಧ್ಯಯನವನ್ನು ಡಾ. ಎಂ. ಎಸ್. ಮೂರ್ತಿಯವರು ಮಾಡಿದ್ದಾರೆ.[೮೦] ಒಟ್ಟು ಏಳು ಅಧ್ಯಾಯಗಳನ್ನು ಒಳಗೊಂಡಿದೆ. ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ವಿಧಾನನ ಬಗೆಗೆ ಹೇಳಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಪ್ರವೇಶ ಎನ್ನುವ ವಿಷಯವಾಗಿ ಹೇಳಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಮಕ್ಕಳ ನಿರೀಕ್ಷೆಗಳು, ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಬೀರುವ ವೈಯಕ್ತಿಕ, ಕೌಟುಂಬಿಕ, ಸಾಮಾಜಿಕ ತಲ್ಲಣಗಳು, ಮಕ್ಕಳ ಮನಸ್ಥಿತಿ ಆ ಮೂಲಕ ಸಾಮಾಜಿಕ, ಶೈಕ್ಷಣಿಕ, ತಾತ್ವಿಕ ಮಹತ್ವ, ಮಕ್ಕಳ ಸಾಂದರ್ಭಿಕ ಚಿತ್ರಗಳ ವಿವರಣೆ, ಮಕ್ಕಳ ಪರಿಸರ, ಮಕ್ಕಳ ಪೋಷಕರು ಮತ್ತು ಸಾಮಾಜಿಕ ಜವಾಬ್ದಾರಿ, ಮಕ್ಕಳ ಪ್ರಜ್ಞೆ ಮತ್ತು ಅಪ್ರಜ್ಞಾವಸ್ಥೆಯ ಅಭಿವ್ಯಕ್ತಿಯ ಚಿತ್ರಗಳು, ಆ ಮೂಲಕ ಮಕ್ಕಳ ಗ್ರಹಿಕೆಯ ಕ್ರಮ

---

೮೦. ಡಾ. ಎಂ. ಎಸ್. ಮೂರ್ತಿ : ಮಕ್ಕಳ ಮನಸ್ಸಿನ ಚಿತ್ರಗಳು, ಅ.ಪ್ರ.ಡಿ.ಲಿಟ್.ಮ.ಪ್ರ. ಕನ್ನಡ ವಿ.ವಿ. ಹಂಪಿ.

ಮತ್ತು ಚಿತ್ರಗಳ ವಿವರಣೆ ಈ ಗ್ರಹಿಕೆಗಳು ಮಕ್ಕಳ ಮಾನಸಿಕ ಬೆಳವಣಿಗೆಯ ಮೇಲೆ ಬೀರಬಲ್ಲ ಪರಿಣಾಮ ಕುರಿತ ವಿವರಿಸಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಮಕ್ಕಳ ಚಿತ್ರಕಲೆ ಮತ್ತು ಶಿಕ್ಷಣ ಕುರಿತಂತೆ ಮಕ್ಕಳ ಚಿತ್ರಕಲೆಯ ವಿವಿಧ ಹಂತಗಳು, ರೇಖೆಗಳು ಮತ್ತು ವರ್ಣಗಳು ಅವಲೋಕನ, ಮಕ್ಕಳ ದೃಶ್ಯ ಪ್ರಜ್ಞೆಗಳ ಪ್ರಾರಂಭಿಕ ಹಂತಗಳು ಹೇಳಲಾಗಿದೆ. ಮತ್ತು ವಿಂಗಡಣೆ, ಮಕ್ಕಳ ಚಿತ್ರಗಳಲ್ಲಿನ ಸಂವೇದನೆಗಳ ಅಭಿವ್ಯಕ್ತಿಯಲ್ಲಿ ಆತಂಕಗಳು, ಸಂತೋಷ, ತೀವ್ರದುಃಖ, ನಿರಾಶೆಗಳು, ರೇಖೆ ಮತ್ತು ಬಣ್ಣ ಇತ್ಯಾದಿ ಮಾಧ್ಯಮಗಳ ಆಪ್ತತೆ ಕಲಾ ಮಾಧ್ಯಮದ ಸಾಧ್ಯತೆಗಳು ಕುರಿತು ಚರ್ಚಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಮಕ್ಕಳ ಚಿತ್ರಕಲೆಯಲ್ಲಿ ದೇಸೀತನ ವಿವಿಧ ವರ್ಗದ ಪರಿಸರದ ಮಕ್ಕಳ ಸಂದರ್ಭದ ಚಿತ್ರಗಳ ಅಧ್ಯಯನದ ಮೂಲಕ ಸಾಮೂಹಿಕ ವ್ಯಕ್ತಿತ್ವದ ಅನುವಂಶಿಕ ಪ್ರತಿಮೆಗಳ ಅವಲೋಕನ ಪ್ರತಿ ಮಗುವೂ ಆಯಾ ಸ್ಥಳೀಯ ದೇಸಿ ಚಿಂತನೆಯ, ಆಲೋಚನೆಯ ಪ್ರತೀಕಗಳನ್ನು ತನ್ನ ಚಿತ್ರಗಳ ಮೂಲಕ ಅಪ್ರಜ್ಞಾವಸ್ಥೆಯಲ್ಲಿ ಹೇಗೆ ಅಭಿವ್ಯಕ್ತಿಸುತ್ತವೆ ಎಂಬ ವಿವರಣಾತ್ಮಕ ಅಧ್ಯಯನದೊಂದಿಗೆ ಚಿತ್ರಗಳ ವಿವರಣೆ ಮಾಡಲಾಗಿದೆ. ಆರನೆಯ ಅಧ್ಯಾಯದಲ್ಲಿ ನವ್ಯಕಲೆ ಮತ್ತು ಮಕ್ಕಳ ಚಿತ್ರಕಲೆ, ಸಮಕಾಲೀನ ಕಲೆ ಅಥವಾ ನವ್ಯಕಲೆ ಇತ್ಯಾದಿ ಅಭಿವ್ಯಕ್ತಿಗಳೂ ಆಯಾ ಸಮಾಜದ ಹೊಸ ತಲೆಮಾರಿನ ಪ್ರಾರಂಭದಲ್ಲೇ ಸೃಷ್ಟಿಯಾಗಿ, ಸಾಮಾಜಿಕ ಬೆಳವಣಿಗೆಯ ಹಂತಗಳಲ್ಲಿ ತಾತ್ವಿಕ ಸ್ಥಿತ್ಯಂತರಗೊಳ್ಳುವ ಹಂತಗಳ ಅಧ್ಯಯನ ಸೈದ್ಧಾಂತಿಕ ನೆಲೆಯಲ್ಲಿ ನವಕಲೆ, ಮಕ್ಕಳ ಕಲಾಭಿವ್ಯಕ್ತಿಯೊಂದಿಗೆ ಹಿರಿಯ ಕಲಾವಿದರ ಕೃತಿಗಳ ತುಲನಾತ್ಮಕ ಅಧ್ಯಯನ ಹಾಗೂ ಸಚಿತ್ರ ವಿವರಣೆ ನೀಡಲಾಗಿದೆ. ಏಳನೆಯ ಅಧ್ಯಾಯದಲ್ಲಿ ಒಟ್ಟು ಅಧ್ಯಯನದ ಫಲಿತಗಳನ್ನು ಹೇಳಲಾಗಿದೆ.

ಒಟ್ಟಾರೆ ಬಳ್ಳಾರಿ ಜಿಲ್ಲೆಯ ಚಿತ್ರಕಲಾ ಸಾಹಿತ್ಯವನ್ನು ಈ ಮೇಲಿನಂತೆ ಪ್ರಕಟಿತ ಮತ್ತು ಅಪ್ರಕಟಿತ ಸಾಹಿತ್ಯವೆಂದು ವರ್ಗೀಕರಿಸಿಕೊಂಡು ಅಧ್ಯಯನ ಮಾಡಲಾಗಿದೆ. ಕನ್ನಡ ಸಾಹಿತ್ಯಕ್ಕೆ ಹೋಲಿಸಿದರೆ ದೃಶ್ಯಕಲಾ ಸಾಹಿತ್ಯದಲ್ಲಿ ವಿಶೇಷವಾಗಿ ಚಿತ್ರಕಲಾ ಸಾಹಿತ್ಯ ಬಳ್ಳಾರಿ ಜಿಲ್ಲೆಯಲ್ಲಿ ತುಂಬಾ ಕಡಿಮೆ ಪ್ರಮಾಣದಲ್ಲಿ ಪ್ರಕಟಗೊಂಡಿದೆ. ಇನ್ನೂ ಅಪ್ರಕಟಿತ ಸಂಶೋಧನ ಸಾಹಿತ್ಯ ಹೇರಳವಾಗಿದೆ. ವಿಶ್ವವಿದ್ಯಾಲಯದಲ್ಲಿ ಸಂಶೋಧನ ಕಾರ್ಯ ದೊಡ್ಡ ಪ್ರಮಾಣದಲ್ಲಿ ನಡೆದಿದ್ದು, ಚಿತ್ರಕಲೆಯ ವಿದ್ಯಾರ್ಥಿಗಳ ಪದವಿ ಮತ್ತು ಸ್ನಾತಕೋತ್ತರ ಸಂಶೋಧನ ಕಿರುಪ್ರಬಂಧಗಳ ಸಂಖ್ಯೆ ೨೦೦೦ಕ್ಕಿಂತಲೂ ಅಧಿಕವಾಗಿದೆ. ಇಲ್ಲಿ ಎಂ.ಫಿಲ್, ಪಿಹೆಚ್.ಡಿ ಹಾಗೂ ಡಿ.ಲಿಟ್ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧಗಳನ್ನು ಮಾತ್ರ ಸ್ಥೂಲವಾಗಿ ಸಮೀಕ್ಷಿಸಲಾಗಿದೆ. ಈ ವಿಷಯದ ಕುರಿತಾಗಿಯೇ ಹಲವು ಪಿಹೆಚ್.ಡಿಗಳಾಗುವಷ್ಟು ವಿಷಯದ ವ್ಯಾಪ್ತಿಯಿರುವುದನ್ನು ಗಮನಿಸಲಾಗಿದೆ.

[illegible]

ಅದ್ಯಾಯ - ಎಂಟು

ಬಳ್ಳಾರಿ ಜಿಲ್ಲೆಯ ಸಂಕೀರ್ಣ ಚಿತ್ರಕಲೆ

ಬಳ್ಳಾರಿ ಜಿಲ್ಲೆಯಲ್ಲಿ ಚಿತ್ರಕಲೆ ಹತ್ತು ಹಲವು ಮುಖಗಳಲ್ಲಿ ಅಭಿವ್ಯಕ್ತಿಯಾಗಿದ್ದು, ಪ್ರಾಗೈತಿಹಾಸಿಕ, ಜಾನಪದ, ಭಿತ್ತಿಚಿತ್ರಕಲೆ, ಹಸ್ತಪ್ರತಿಚಿತ್ರಕಲೆಯನ್ನು ಹೊರತುಪಡಿಸಿ ವಿವಿಧ ಮಾಧ್ಯಮಗಳಲ್ಲಿಯೂ ಸಹ ಚಿತ್ರಕಲೆ ರಚನೆಗೊಂಡಿದೆ. ಹಾಗೆಯೇ ವಸ್ತುಸಂಗ್ರಹಾಲಯ, ಕಲಾಗ್ಯಾಲರಿ ಇತ್ಯಾದಿ ಸಂಸ್ಥೆಗಳಲ್ಲಿ ಸಂಗ್ರಹಗೊಂಡ, ರಚನೆಯಾದ ಚಿತ್ರಕಲೆಯ ಪ್ರಾತಿನಿಧಿಕವಾದ ಕೆಲವು ಕಲಾಕೃತಿಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

೧. ಗಾಜಿನ ಮೇಲಿನ ಚಿತ್ರಕಲೆ

ಪಾಶ್ಚಾತ್ಯ ದೇಶಗಳಿಂದ ಸುಮಾರು ಕ್ರಿ.ಶ.೧೯ನೆಯ ಶತಮಾನದ ಸುಮಾರಿಗೆ ಭಾರತವನ್ನು ಪ್ರವೇಶಿಸಿದ ಗಾಜಿನ ಮೇಲಿನ ಚಿತ್ರಕಲೆ ಅತ್ಯಂತ ಪ್ರಾಚೀನ ಕಲಾಪ್ರಕಾರವಾಗಿದೆ. ಆದಿಮಾನವನ ಕಾಲದಲ್ಲಿ ಪ್ರಮುಖವಾಗಿ ಶಿಲಾಮಾಧ್ಯಮದ ಮೇಲೆ ರಚನೆಯಾಗುತ್ತಿದ್ದ ಈ ಕಲಾಪ್ರಕಾರ ನಂತರದ ದಿನಗಳಲ್ಲಿ ಶಿಲೆಯನ್ನೊಳಗೊಂಡು ಗಾರೆ, ಮರ, ಲೋಹ, ತಾಳೆಗರಿ, ಬಟ್ಟೆ, ಕಾಗದ, ರಟ್ಟು ಹೀಗೆ ವಿವಿಧ ಮಾಧ್ಯಮಗಳ ಮೇಲೆ ರಚನೆಯಾಗತೊಡಗಿತು.[೧] ಪಾಶ್ಚಾತ್ಯ ದೇಶಗಳಿಂದ ಸುಮಾರು ಕ್ರಿ.ಶ ೧೯ನೆಯ ಶತಮಾನದ ಸುಮಾರಿಗೆ ಭಾರತವನ್ನು ಪ್ರವೇಶಿಸಿದ ಗಾಜಿನ

೦೧. ಡಾ. ನಿಂಗಪ್ಪ ಎಂ. ಅಂಗಡಿ : ಕರ್ನಾಟಕದ ಗಾಜಿನ ಮೇಲಿನ ಚಿತ್ರಕಲೆ – ಒಂದು ಅಧ್ಯಯನ (ಅ.ಪ್ರ.ಪಿಹೆಚ್.ಡಿ.ಮ.ಪ್ರ), ಪುಟ – ೨

[illegible]

[illegible]

[illegible]

[illegible]

ಚಿತ್ರಕಲೆ ಕುತೂಹಲಕರವಾಗಿರುವ ಅಂಶಗಳನ್ನು ಒಳಗೊಂಡಿದೆ.[೨] ೧೭–೧೮ನೇ ಶತಮಾನದಲ್ಲಿ ಯುರೋಪಿಯನ್ ಧರ್ಮ ಪ್ರಚಾರಕರ ಮೂಲಕ ಕರ್ನಾಟಕಕ್ಕೂ ಬಂದಿತು. ಪಶ್ಚಿಮ ಕರಾವಳಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದೇಶೀಯರು ಇದ್ದುದರಿಂದ ಇಲ್ಲಿನ ಚರ್ಚ್‌ಗಳಲ್ಲೂ ಈ ಬಗೆಯ ಗಾಜಿನ ಚಿತ್ರಗಳು ಬಂದು ಇಂದಿಗೂ ಅವು ಉಳಿದುಕೊಂಡಿರುವುದನ್ನು ಕಾಣಬಹುದು.[೩] ಈ ಗಾಜು ಕಾಸ್ಟಿಕ್ ಸೋಡಾ, ಲೈಮ್ ಮತ್ತು ಉಸುಕುಗಳಿಂದ ಕೂಡಿದ ಒಂದು ವಿಶಿಷ್ಟ ವಸ್ತುವಾಗಿದ್ದು, ಇದರ ಮೇಲೆ ಚಿತ್ರಕಲೆ ರೂಪಗೊಳ್ಳಲು ಆರಂಭಿಸಿದೆ.[೪] ಇಂದು ಸಾಮಾನ್ಯವಾಗಿ ಗಾಜಿನ ಚಿತ್ರಗಳೆಂದು ಕರೆಯುವರು. ಗಾಜಿನ ಫಲಕದ ಒಂದು ಬದಿಯಲ್ಲಿ ಚಿತ್ರ ಬರೆದು ಇನ್ನೊಂದು ಬದಿಯಿಂದ ವೀಕ್ಷಿಸುವುದು ಇದರ ವೈಶಿಷ್ಟ್ಯವಾಗಿದೆ ಈ ಬಗೆಯ ಕಲೆಯು ವಿದೇಶದ್ದೇ ಆಗಿದ್ದು ಭಾರತದ ಮುಸ್ಲಿಂ ದೊರೆಗಳ ಪ್ರೋತ್ಸಾಹದಿಂದ ೧೮ನೇ ಶತಮಾನದಲ್ಲಿ ಭಾರತದಲ್ಲಿ ಬಳಕೆಗೆ ಬಂತು. ಮರಾಠಾ, ಮೈಸೂರು ಮತ್ತು ತಂಜಾವೂರು ಅರಸರಿಂದಾಗಿ ವ್ಯಾಪಕವಾಗಿ ಪ್ರಚಾರಗೊಂಡಿದ್ದು ಶಿಷ್ಟ ಶೈಲಿಯಲ್ಲಲ್ಲದೆ ಜಾನಪದ ಶೈಲಿಯಲ್ಲೂ ರಚನೆಗಳಾದವು. ಒಂದೆರಡು ಶತಮಾನ ಹಳೆಯವು ಅಲ್ಲಲ್ಲಿ ನೋಡಲು ದೊರೆಯುತ್ತವೆ. ಅಲ್ಲದೆ ಇಂದಿಗೂ ಹಳೆಯ ಶೈಲಿಯಲ್ಲಿ ಚಿತ್ರ ರಚಿಸುವವರು ದಕ್ಷಿಣ ಭಾರತದಲ್ಲಿದ್ದಾರೆ ಎನ್ನಲಾಗುತ್ತದೆ.

ಎಲ್ಲಾ ಕಲಾಪ್ರಕಾರದ ಕಲೆಗಳಿಗಿಂತಲೂ ಇದು ಸೂಕ್ಷ್ಮವಾದ ಕಲಾಪ್ರಕಾರವಾಗಿದೆ. ಮತ್ತು ಚಿತ್ರ ಮಾಡುವ ಪದ್ಧತಿಯು ಕೂಡ ಉಳಿದ ಕಲೆಗಳಿಗಿಂತ ಭಿನ್ನವಾದ ಕಲಾಶೈಲಿ ಇದರಾಗಿದೆ. ಮತ್ತು ಬಣ್ಣ ಇಳಿಯಲು ಸಾಧ್ಯವಿಲ್ಲದೇ ಮೇಲು ಪದರದಲ್ಲೇ ಒಣಗುವ ತೀರ ನುಣುಪಾದ ಮೈಯುಳ್ಳ ಫಲಕದ ಮೇಲೆ ಬಣ್ಣಗಳನ್ನು ನಿಯಂತ್ರಿಸುವ ಆಕಾರಗಳನ್ನು ಮಾಡಿಸುತ್ತಾ ಹೋಗುವ ಕಾರ್ಯಗಳು ಕಲಾವಿದನಿಗೆ ಅನನ್ಯವಾದ ಖುಷಿ ಕೊಡುತ್ತವೆ. ಈಚೆಗೆ ಪಾರದರ್ಶಕ ಎಕ್ರಿಲಿಕ್ ಹಾಳೆಗಳು ಗಾಜಿನ ಸ್ಥಾನವನ್ನು ಆಕ್ರಮಸಿದ್ದು ಗಾಜಿಗೆ ಇದ್ದ ನಶ್ವರತೆಯನ್ನು ಹೋಗಲಾಡಿಸಿವೆ.[೫]

ಸ್ವರೂಪ

ನಾಗರಿಕ ಜೀವನಶೈಲಿ ಬೆಳೆದಂತೆ ಅನೇಕ ಅರಮನೆ, ಗುರುಮನೆಗಳಲ್ಲದೆ ಸಮಾಜದ ಪ್ರತಿಷ್ಠಿತ ವ್ಯಕ್ತಿಗಳೂ ತಮ್ಮ ಮನೆಯ ಗೋಡೆಗಳ ಮೇಲೆ, ದೇವರ ಮನೆಗಳಲ್ಲಿ ಚಿತ್ರಗಳನ್ನು ಅಲಂಕರಿಸುವುದು ಮತ್ತು ಈ ಕಲಾಪ್ರಕಾರವು ಹಿಂದಿನ ಸಾಂಪ್ರದಾಯಕ ಭಿತ್ತಿಚಿತ್ರಗಳ ಸ್ಥಳವನ್ನು ಆಕ್ರಮಿಸಿದೆ ಎನ್ನಬಹುದು. ದೊಡ್ಡ ಅರಮನೆ, ಮನೆಗಳಲ್ಲಿ ಗಾಜಿನ ಚಿತ್ರಗೋಡೆಗಳಿವೆ. ಬಾಗಿಲುಗಳು,

---

೦೨. ಡಾ. ನಿಂಗಪ್ಪ ಎಂ. ಅಂಗಡಿ : ಕರ್ನಾಟಕದ ಗಾಜಿನ ಮೇಲಿನ ಚಿತ್ರಕಲೆ – ಒಂದು ಅಧ್ಯಯನ (ಅ.ಪ್ರ.ಪಿಹೆಚ್.ಡಿ.ಮ.ಪ್ರ), ಪುಟ – ೨

೦೩. ಪಿ. ಆರ್. ತಿಪ್ಪೇಸ್ವಾಮಿ (ಪ್ರ.ಸಂ.) : ಕಲಾಕೋಶ, ಪುಟ – ೧೧೭

೦೪. ಡಾ. ನಿಂಗಪ್ಪ ಎಂ. ಅಂಗಡಿ : ಕರ್ನಾಟಕದ ಗಾಜಿನ ಮೇಲಿನ ಚಿತ್ರಕಲೆ – ಒಂದು ಅಧ್ಯಯನ (ಅ.ಪ್ರ.ಪಿಹೆಚ್.ಡಿ.ಮ.ಪ್ರ.). ಪುಟ – ೨

೦೫. ಡಾ. ಎಸ್. ಸಿ. ಪಾಟೀಲ, ಸತ್ಯಾನಂದ ಪಾತ್ರೋಟ (ಸಂ.) : ನಿಜದ ನೆಲೆ, ಪುಟ – ೧೦

ಭಾವಣಿಗಳು, ಮೆಟ್ಟಲುಗಳು, ಭಾವಣಿಗಳು ಮೆಟ್ಟಲುಗಳ ಬದಿಯಲ್ಲಿ ಕಪಾಟುಗಳು ಮುಂತಾದ ಕಡೆಗಳಲ್ಲಿ ಆಧುನಿಕ ಗಾಜಿನ ಚಿತ್ರಕಲೆಯು ಆಕ್ರಮಿಸಿದೆ. ಈ ಚಿತ್ರಕಲೆಯು ಸೂಕ್ಷ್ಮತೆಯಲ್ಲಿ ನಾಜೂಕಾಗಿ ನಿಗಾವಹಿಸುವಂಥ ಕಲಾಪ್ರಕಾರವಾಗಿದೆ. ಈ ಕಲೆಯು ತುಂಬಾ ರಂಜನೀಯವಾದದ್ದು. ಏಕೆಂದರೆ ಬಣ್ಣದ ಗಾಜಿನ ಹಿಂಭಾಗದಲ್ಲಿ ವಿದ್ಯುತ್ ಬಲ್ಪ್‌ಗಳನ್ನು ಬಳಸುವುದರಿಂದ ಕಿರಣಗಳು ಚಿತ್ರಗಳ ಮೂಲಕ ಹಾಯ್ದು ಹೊರಬರುವುದರಿಂದ ಈ ಚಿತ್ರಗಳಿಗೆ ಮತ್ತಷ್ಟು ಮೆರಗು ತರಬಹುದು. ಆಧುನಿಕ ಗಾಜಿನ ಕಲಾಪ್ರಕಾರತೆಯಲ್ಲಿ ಗಾಥಿಕ್ ಕಲೆಯು ಕ್ರಿ.ಶ ೧೨ನೆಯ ಶತಮಾನದಿಂದ ೧೫ನೆಯ ಶತಮಾನದವರೆಗೆ ಯುರೋಪಿನ ವಿವಿಧ ಭಾಗಗಳಲ್ಲಿ ಪ್ರಸಿದ್ಧವಾಗಿದ್ದು, ಗಾಜಿನ ಚಿತ್ರಕಲೆಯ ಬಳಕೆ ಪ್ರಮುಖವಾಗಿ ಕಂಡುಬರುತ್ತದೆ.

ಗಾಥಿಕ್‌ಕಲೆಯ ನಂತರ ಕಾಣಿಸಿಕೊಂಡ ಕಲೆಯೇ ಬಾರೋಕ್ ಕಲೆಯಾಗಿದೆ. ಇಟಲಿಯಲ್ಲೆಲ್ಲಾ ಅನೋಚರ್ಚು, ಸನ್ಯಾಸಿಮಠ, ನಗರಚೌಕುಗಳಲ್ಲಿ ವಾಸ್ತುಕೃತಿಗಳು ನಿರ್ಮಾಣಗೊಂಡವು. ಹೊಸ ನೋಟಕ್ಕೆ ಈ ಕಾಲದ ವಾಸ್ತುಕಾರರು ಗೋಥಿಕ್ ಯುಗದವರಂತೆ ಅಂಥ ವಾಸ್ತುಕೃತಿಗಳ ಬಾಹ್ಯಾಲಂಕಾರವನ್ನು ಹೆಚ್ಚಿಸಲು ಅಲಂಕಾರಗಳಲ್ಲಿ ಸ್ತಂಭ ಮೊದಲಾದವುಗಳ ನಿರ್ವಹಣೆಯಲ್ಲಿ ಇನ್ನಿಲ್ಲದಷ್ಟು ಆಡಂಬರ[೬] ಕೆಲಸದ ತೋರಿಕೆಯಲ್ಲಿ ಗಾಜಿನ ಬಳಕೆಯಾಗಿದೆ.

ಇಷ್ಟೇ ಅಲ್ಲದೆ ಮೂರ್ತಿಶಿಲ್ಪ ಭಿತ್ತಿಚಿತ್ರಗಳಲ್ಲಿಯೂ ಬಳಕೆಯಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿಯೂ ಶ್ರೀಮಂತ ಕಟ್ಟಡಗಳಲ್ಲಿ ಈ ಗಾಜಿನ ಮಾದರಿಯ ಕಲಾತ್ಮಕತೆಯಿಂದ ಕೂಡಿದ ಗಾಜನ್ನು ಉಪಯೋಗಿಸಿರುವರು. ಬಳ್ಳಾರಿಯ ಬಸವೇಶ್ವರ ನಗರದ ಮನೆಯೊಂದರಲ್ಲಿ ಈ ಗಾಜಿನಿಂದ ಅಲಂಕರಿಸಲಾಗಿದೆ. ಬಾಗಿಲುಗಳಿಗೆ, ದೇವರ ಕೋಣೆಯ ಮೇಲ್ಛಾವಣಿ, ಕೋಣೆಯ ಬಾಗಿಲುಗಳಿಗೆ ವೈವಿಧ್ಯಮಯವಾದ ರಂಜನೆಯ ಕಲಾತ್ಮಕವಾದ ಗಾಜನ್ನು ವ್ಯವಸ್ಥಿತವಾಗಿ ಉಪಯೋಗಿಸಿದ್ದಾರೆ. ಸಾಂಪ್ರದಾಯಿಕ ಕಲೆಗಳಾಗಿ ಹೊಸಪೇಟೆ ತಾಲೂಕಿನ ಮಲಪನಗುಡಿಯ ಕೆ.ಶ್ರೀನಿವಾಸ ಶೆಟ್ಟಿ ಇವರ ಮನೆಯಲ್ಲಿ ಚಿತ್ರಗಳನ್ನು ಗೋಡೆಗಳಿಗೆ ಹಾಕಿದ್ದು ಕಾಣಬಹುದು.

ಗಾಜಿನ ಮೇಲಿನ ಚಿತ್ರಕಲೆಯ ಪರಿಕರಗಳು ಮತ್ತು ರಚನಾ ವಿಧಾನ

ಕೆಲವು ದ್ರವ ಪದಾರ್ಥಗಳು ಅತೀಯಾಗಿ ತಣಿಸಲ್ಪಟ್ಟು ತಮ್ಮ ದ್ರವರೂಪವನ್ನು ಕಳೆದುಕೊಂಡರೂ ದ್ರವದ ಲಕ್ಷಣಗಳನ್ನು ಉಳಿಸಿಕೊಂಡಾಗ ದೊರೆಯುವ ವಸ್ತು (ಗ್ಲಾಸ್) ಸಾಮಾನ್ಯ ಉಷ್ಣತಾ ಮಟ್ಟದಲ್ಲಿ ಗಟ್ಟಿಯಾಗಿರುತ್ತದೆ. ಗಾಜಿನ ತಯಾರಿಕೆಗೆ ಮುಖ್ಯವಾಗಿ ಬೇಕಾಗುವ ಘಟಕಾಂಶಗಳೆಂದರೆ ಶುದ್ಧವಾದ ಮತ್ತು ಕಬ್ಬಿಣದ ಸಂಯುಕ್ತರಹಿತ ಮರಳು (ಗ್ರಾಸ್‌ಸ್ಟೋನ್). ಇನ್ನು ಗಾಜಿನ ಬಗೆಯನ್ನು ಅನುಸರಿಸಿ ಕೆಲವೊಮ್ಮೆ ಪೋಟ್ಯಾಸಿಯಂ ಕಾರ್ಬೋನೇಟ್, ಲೆಡ್ ಮೋನಾಕ್ಸೆಡ್, ಬೊರಾನ್ ಟ್ರೈ ಅಕ್ಸೈಡ್ ಮುಂತಾದವನ್ನು ಸೇರಿಸುವರು.[೭] ಇವುಗಳಿಂದ

೦೬. ಡಾ. ಎಸ್. ಸಿ. ಪಾಟೀಲ : ಬಾರೋಕ್ ಕಲೆ, ಪುಟ – ೧೦

೦೭. ಡಾ. ನಿಂಗಪ್ಪ ಎಂ. ಅಂಗಡಿ : ಕರ್ನಾಟಕದ ಗಾಜಿನ ಮೇಲಿನ ಚಿತ್ರಕಲೆ – ಒಂದು ಅಧ್ಯಯನ (ಅ.ಪ್ರ.ಪಿಹೆಚ್.ಡಿ.ಮ.ಪ್ರ.), ಪುಟ – ೫೦

ತಯಾರಾದ ಗಾಜನ್ನು, ಅದರಲ್ಲೂ ಶುದ್ಧ ಗಾಜನ್ನು ಚಿತ್ರಕಲೆಗೆ ಉಪಯೋಗಿಸುವರು. ಹಿಂದೆ ಸಂಪ್ರದಾಯದ ಕಲಾವಿದರು ಪಾರದರ್ಶಕವಾದ ಗಾಜನ್ನು ಉಪಯೋಗಿಸಲಾಗುತ್ತಿದ್ದರು. ಹಲವು ವಿನ್ಯಾಸದ ಗಾಜು ಸಿದ್ಧರೂಪದಲ್ಲಿ ಸಿಗುವುದರಿಂದ ಯಾವುದನ್ನು ಬೇಕಾದರೂ ಆಯ್ದು ಗಾಜಿನ ಮೇಲೆ ಚಿತ್ರಗಳನ್ನು ರಚಿಸಬಹುದು. ಚಿತ್ರಗಳಿಗೆ ತಕ್ಕಂತೆ ಸೂಕ್ತವೆನಿಸಿದ ಗಾಜನ್ನು ಆಯ್ದು ಮೊದಲು ರೇಖಾಚಿತ್ರ ಸಿದ್ಧಪಡಿಸಿಕೊಳ್ಳಬೇಕು. ನಂತರ ಪಾರದರ್ಶಕ ಗಾಜಿನ ಹಾಳೆಯನ್ನು ವರ್ಣಲೇಪನ ಮಾಡುವ ವಿಧಾನ ಸಂಪ್ರದಾಯದ್ದಾದರೆ, ಆಧುನಿಕ ಗಾಜಿನ ಚಿತ್ರಗಳಲ್ಲಿ ಆಧುನಿಕವಾದ ಫ್ಯಾಕ್ಟರಿಗಳಲ್ಲಿ ಉಪಕರಣಗಳನ್ನು ಉಪಯೋಗಿಸಿ ಸಣ್ಣಪ್ರಮಾಣದ ಚಿತ್ರದಿಂದ ಹಿಡಿದು ದೊಡ್ಡ ಪ್ರಮಾಣದ ಚಿತ್ರಗಳನ್ನು ನಿರ್ಮಾಣ ಮಾಡಬಹುದಾಗಿದೆ. ಭವ್ಯ ಕಟ್ಟಡಕ್ಕೆ ದೊಡ್ಡ ದೊಡ್ಡ ಬಾಗಿಲು ಕಿಟಕಿಗಳನ್ನು ಅಳವಡಿಸಲಾಗಿರುತ್ತದೆ. ಇಂತಹ ಗಾಜುಗಳಿಗೆ ಸ್ಟೋನ್ಡ್ ಗ್ಲಾಸ್‌ಗಳು ಗ್ಲಾಸ್ ಎಚ್ಚಿಂಗ್ ಎನ್ನುವ ಈ ಚಿತ್ರಕಲೆಯ ಪಾರಿಭಾಷಿಕ ಪದದಲ್ಲಿ ನಿರ್ಮಾಣಗೊಳ್ಳುತ್ತವೆ. ಗಾಜಿನ ಮೇಲೆ ರೇಖಾಚಿತ್ರ ಬರೆದು ಎಚ್ ಮಾಡಿ ಸ್ಪ್ರೇ ಮೂಲಕ ವರ್ಣಗಳನ್ನು ಸಂಯೋಜನೆ ಮಾಡಲಾಗುತ್ತದೆ.

ಇಲ್ಲಿ ಯಾವುದೇ ಕರಡು (Key Sketch) ರೇಖೆಗಳು ಕಾಣಲಾರದಷ್ಟ ಗಾಢತೆಯಲ್ಲಿ ಸ್ಪ್ರೇಯಾಗಿರುತ್ತದೆ. ಮತ್ತು ಸತುವನ್ನು ಬಳಸಿ ಗಾಜನ್ನು ಸ್ಟೇನ್ಡ್ ಗ್ಲಾಸ್ ಚಿತ್ರಗಳ ರಚನಾ ವಿಧಾನ ಒಂದೇ ರೀತಿಯಾಗಿದ್ದರೂ ಕಾಲದಿಂದ ಕಾಲಕ್ಕೆ ಬದಲಾಗುವ ತಾಂತ್ರಿಕ ಬದಲಾವಣೆಗಳನ್ನು ಮೈಗೂಡಿಸಿಕೊಂಡು ಇಂದು ಹೊಸಹೆಜ್ಜೆಯತ್ತ ಸಾಗಿದೆ ಮತ್ತು ಮರಳನ್ನು ಸ್ಪ್ರೇಯ ಯಂತ್ರಗಳನ್ನು ಉಪಯೋಗಿಸಲಾಗಿ, ನಂತರ ಚಿತ್ರಗಳಿಗೆ ಬಣ್ಣದ ಲೇಪನಗಳ ಬದಲು ಯಂತ್ರದಿಂದ ಸ್ಪ್ರೇಯ ಮೂಲಕ ಹೊಸ ಹೊಸ ಬಗೆಯ ಮೈವಳಿಕೆಯನ್ನು ಪಡೆಯಬಹುದು.

ವಸ್ತು ವಿಷಯ

ಈ ಗಾಜಿನ ಚಿತ್ರಗಳಲ್ಲಿ ಪ್ರಮುಖವಾಗಿ ಸಾಂಪ್ರದಾಯಿಕ ಗಾಜಿನ ಚಿತ್ರಕಲೆಗಳಲ್ಲಿ ಧರ್ಮಕ್ಕೆ ಸಂಬಂಧಿಸಿದ ಚಿತ್ರಗಳು ಹೆಚ್ಚಿನ ಮಟ್ಟದಲ್ಲಿ ಕಂಡುಬಂದರೆ ಆಧುನಿಕ ಗಾಜಿನ ಚಿತ್ರಕಲೆಯಲ್ಲಿ ಅಲಂಕಾರಕ್ಕೆ ಸಂಬಂಧಿಸಿದಂತೆ ಹೆಚ್ಚು ಚಿತ್ರಗಳು ಕಂಡುಬರುತ್ತವೆ. ಪ್ರಸ್ತುತ ಗಾಜಿನ ಚಿತ್ರಕಲೆಯಲ್ಲಿ ಅಧ್ಯಯನದ ಅನುಕೂಲತೆಗಾಗಿ ಎರಡು ವಿಧಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಅವುಗಳೆಂದರೆ

೧. ಸಾಂಪ್ರದಾಯಿಕ ಗಾಜಿನ ಚಿತ್ರಕಲೆ

೨. ಆಧುನಿಕ ಗಾಜಿನ ಚಿತ್ರಕಲೆ

ಸಾಂಪ್ರದಾಯಿಕ ಗಾಜಿನ ಚಿತ್ರಕಲೆ

ತೂಗುಹಾಕುವ ಗಾಜಿನ ಚಿತ್ರಗಳ ರಚನಾ ವಿಧಾನವಾಗಿದೆ. ಈ ಗಾಜಿನ ಚಿತ್ರಕಲೆ ಶೈಲಿಯಲ್ಲಿ ಶೈವ, ವೈಷ್ಣವ ಧರ್ಮದ ಚಿತ್ರಗಳು, ಜೈನ ಮತ್ತು ಬೌದ್ಧಧರ್ಮದ ಗಾಜಿನ ಚಿತ್ರಗಳು ಕರ್ನಾಟಕದ

ಹಲವು ಭಾಗಗಳಲ್ಲಿ ಕಂಡುಬರುತ್ತವೆ. ಇವುಗಳಲ್ಲದೆಯೇ ಇಸ್ಲಾಂ ಧರ್ಮ, ಕ್ರೈಸ್ತಧರ್ಮಗಳಲ್ಲಿಯೂ ಕಂಡುಬರುತ್ತವೆ. ಸಾಮಾಜಿಕ, ಐತಿಹಾಸಿಕ, ನಿಸರ್ಗ, ಅಲಂಕಾರಿಕ ಚಿತ್ರಗಳು ಧಾರ್ಮಿಕೇತರ ಹಿನ್ನೆಲೆ ಚಿತ್ರಗಳು ಅಲ್ಪ ಪ್ರಮಾಣದಲ್ಲಿ ಕಂಡು ಬರುತ್ತವೆ. ಹೊಸಪೇಟೆ ತಾಲ್ಲೂಕು ಮಲಪನ ಗುಡಿಯ ಕೆ. ಶ್ರೀನಿವಾಸ ಶೆಟ್ಟಿ ಇವರ ಮನೆಯೊಂದರಲ್ಲಿ ಲಭ್ಯವಾಗಿವೆ. ಕಂಪ್ಲಿಯಲ್ಲಿಯೂ ಅನಿಲ್ ಎನ್ನುವವರ ಮನೆಯಲ್ಲಿ ಚಿತ್ರಗಳು ಇದ್ದುದರ ಕುರಿತು ತಿಳಿದು ಬರುತ್ತದೆ. ಕ್ರಮೇಣ ಈ ಚಿತ್ರಗಳು ಹಾಳಾಗಿವೆ ಎನ್ನಲಾಗಿದೆ.

ವಿಷ್ಣು, ಶ್ರೀದೇವಿ – ಭೂದೇವಿ

ಹೊಸಪೇಟೆ ತಾಲ್ಲೂಕು ಮಲಪನ ಗುಡಿಯ ಕೆ. ಶ್ರೀನಿವಾಸ ಶೆಟ್ಟಿ ಇವರ ಮನೆಯಲ್ಲಿ ಲಭ್ಯವಿದ್ದ ಇದು ೫೫ X ೫೬ ಸೆಂ.ಮೀ. ಆಳತೆಯನ್ನು ಹೊಂದಿದೆ. ಇಲ್ಲಿ ಶ್ವೇತ ವಸ್ತ್ರಧಾರಿಯಾದ ವಿಷ್ಣು ಆಭರಣಗಳಿಂದ ಭೂಷಿತನಾಗಿದ್ದಾನೆ. ಈ ವಿಷ್ಣುವಿನ ಮುಖಭಾವವು ಹಸನ್ಮುಖಿಯಾಗಿದ್ದು ಆ ಬಟ್ಟಲು ಕಣ್ಣುಗಳಲ್ಲಿ ಪ್ರಸನ್ನತೆ ಎದ್ದು ತೋರುವಂತೆ ಕಲಾವಿದನು ಶ್ರಮಿಸಿದ್ದಾನೆ. ಕೆಂಪು ಹಾಗೂ ಸ್ವರ್ಣರೇಖೆಯನ್ನು ಬಳಸಿಕೊಂಡು ಉತ್ತರೀಯವನ್ನು ಹಾಗೂ ನಡುವಿನ ಬಟ್ಟೆಯನ್ನು ಧರಿಸಿದ್ದಾನೆ. ವಿಶಿಷ್ಟವಾದ ವೈಜಯಂತಿ ಮಾಲೆಯನ್ನು ಕಲಾವಿದನು ನಿರೂಪಿಸಿದ್ದಾನೆ. ವಿಷ್ಣುವಿನ ಎಡ, ಬಲಗಳಲ್ಲಿರುವ ಶ್ರೀದೇವಿ ಹಾಗೂ ಭೂದೇವಿಯರ ಉಡುಪುಗಳು ಆಕರ್ಷಕ ಚಿತ್ರವಿನ್ಯಾಸಗಳಿಂದ ಕೂಡಿವೆ. ಇಬ್ಬರೂ ವೈವಿಧ್ಯಮಯವಾದ ಮಾಲೆಗಳನ್ನು ಧರಿಸಿರುವರು, ಚಿತ್ರದ ಹಿನ್ನೆಲೆಯಲ್ಲಿ ಅಲಂಕಾರಿಕ ಪ್ರಭಾವಳಿಯನ್ನು ಚಿತ್ರಿಸಿದ್ದು ಅದಕ್ಕೆ ಬಿಳಿಬಣ್ಣದ ಪುಷ್ಪಮಾಲೆಯನ್ನು ಸಂಯೋಜನೆಗೊಳಿಸಲಾಗಿದೆ. ಚಿತ್ರಕ್ಕೆ ಅಂಚುಗಳನ್ನು ಚಿತ್ರಿಸಿದ್ದು ಅವುಗಳ ಮೇಲೆ ಗಂಧರ್ವ ಕನ್ಯೆಯರನ್ನು ವಿನ್ಯಾಸಗೊಳಿಸಲಾಗಿದೆ. ಈ ಚಿತ್ರವು ಉತ್ತಮ ರೇಖಾವಿನ್ಯಾಸ ಹೊಂದಿದ್ದು ವರ್ಣ ಮತ್ತು ಆಕೃತಿಗಳ ಹೊಂದಾಣಿಕೆ ಉತ್ತಮವಾಗಿ ಮೂಡಿ ಬಂದಿದೆ. ಇಲ್ಲಿ ಮುಕ್ಕಾಲು ಭಾಗ ಚಿನ್ನದ ಹಾಳೆ ಹಾಗೂ ಕೆಂಪು ಮೆರಗು ಬಣ್ಣಗಳಿಂದ ಮಿಳಿತಗೊಂಡಿವೆ. ಚಿತ್ರವು ಸ್ಪಷ್ಟವಾಗಿ ಗೋಚರವಾಗುವಂತೆ ಕೆಂಪು ಮಿಶ್ರಿತ ಬಿಳಿಬಣ್ಣವನ್ನು ಏಕರೂಪವಾಗಿ ಲೇಪನ ಮಾಡಲಾಗಿದೆ.[೧೮] ಈ ಚಿತ್ರಕೃತಿಯಲ್ಲಿ ಸುತ್ತಲೂ ಅಲಂಕಾರಗಳು ಕಂಡುಬಂದರೂ ಸಾಂದರ್ಭಿಕವಾಗಿ ಮುಖ್ಯ ವಿಷಯಕ್ಕೆ ಶ್ರೀಮಂತಿಕೆಗೆ ಸೂಚಿತವಾಗಿ ಕೃತಿಯ ಮಧ್ಯಭಾಗ ವಿಷಯವೇ ಪ್ರಧಾನವಾಗಿ ಎಲ್ಲರಿಗೂ ವಿಷಯ ಉದ್ದೇಶವನ್ನು ಚಿತ್ರಿಸಲಾಗಿದೆ.

ಕಾಮಧೇನು

ಸ್ವರ್ಗಲೋಕದ ಹಸು, ಇದು ಬ್ರಹ್ಮನ ಮುಖದಿಂದ ಜನಿಸಿದ್ದು ರಸಾತಲದಲ್ಲಿ ವಾಸಿಸುತ್ತದೆ. ಇದಕ್ಕೆ ಸುರೂಪಾ, ಹಂಸಿಕಾ, ಸುಭದ್ರಾ, ಸರ್ವಕಾಮಧನ ಎಂಬ ನಾಲ್ಕಾರು ಮಕ್ಕಳು.

೧೮. ಡಾ. ನಿಂಗಪ್ಪ ಎಂ. ಅಂಗಡಿ : ಕರ್ನಾಟಕದ ಗಾಜಿನ ಮೇಲಿನ ಚಿತ್ರಕಲೆ – ಒಂದು ಅಧ್ಯಯನ (ಅ.ಪ್ರ.ಪಿಹೆಚ್.ಡಿ.ಮ.ಪ್ರ.), ಪುಟ – ೧೨೦

ಅಮೃತಮಂಥನ ಕಾಲದಲ್ಲಿ ಕಲ್ಪವೃಕ್ಷ ಮೊದಲಾದವುಗಳೊಡನೆ ಇದು ಜನಿಸಿ ದೇವೇಂದ್ರನ ಅಧೀನವಾಯಿತು. ನಂದಿನಿ ಎಂಬ ಹೆಸರುಳ್ಳ ವಸಿಷ್ಠರ ಹಸು ದಿಲೀಪ ಮಹಾರಾಜನಿಗೆ ಪುತ್ರನಾಗುವಂತೆ ಅನುಗ್ರಹಿಸಿತು. ವಿಶ್ವಾಮಿತ್ರನು ಈ ಆಕಳನ್ನು ತನ್ನ ಪಟ್ಟಣಕ್ಕೆ ತಾನು ಒಯ್ಯಬೇಕೆಂದು ಬಯಸಿ, ಹೋರಾಟಕ್ಕಿಳಿದನು. ಕಾಮಧೇನುವಿನಿಂದ ಸೃಷ್ಟವಾದ ಮಾಯಾ ದೇವತೆಗಳಿಂದ ವಿಶ್ವಾಮಿತ್ರನ ಸೈನ್ಯಕ್ಕೆ ಸೋಲಾಗಿ ಹಾಗೇ ಮರಳಿದನು. ಶಿವನ ಆದಿ-ಅಂತ್ಯವನ್ನು ವಿಷ್ಣು ಬ್ರಹ್ಮರಿಗೆ ನೋಡುವ ಆಸೆಯಾಗಿ ಹೊರಟರು. ಬ್ರಹ್ಮನು ತಾನು ಶಿವನ ಶಿರಸ್ಸನ್ನು ಕಂಡಿದ್ದೇನೆಂದು ಹೇಳಿದುದಲ್ಲದೇ ಕಾಮಧೇನುವಿನಿಂದ ಸಾಕ್ಷಿ ಹೇಳಿಸಿದನು. ಇದರಿಂದ ಸುಳ್ಳು ಹೇಳಿದ ಬ್ರಹ್ಮನಿಗೆ, ನಿನ್ನನ್ನು ಯಾರೂ ಪೂಜಿಸದಿರಲಿ ಎಂದೂ ಕಾಮಧೇನುವಿಗೆ ನೀನು ಸುಳ್ಳು ಹೇಳಿದುದರಿಂದ ನಿನ್ನ ಸಂತತಿಯ ಅಮೇಧ್ಯವನ್ನು ತಿನ್ನಲಿ ಎಂದು ಶಾಪ ಕೊಟ್ಟನು.[೯] ಹೀಗೆ ಕಾಮಧೇನುವಿನ ಕುರಿತಾಗಿ ಅನೇಕ ಪ್ರಸಂಗಗಳು ಗೋಚರವಾಗುತ್ತವೆ. ಇಲ್ಲಿ ಇಬ್ಬರು ಕಲಾವಿದರು ಅದರ ರೂಪ, ಲಕ್ಷಣಗಳನ್ನು ಚಿತ್ರಣದ ಮೂಲಕ ಅಭಿವ್ಯಕ್ತಿಸಿದ್ದಾರೆ.


ಹೊಸಪೇಟೆ ತಾಲ್ಲೂಕಿನ ಮಲಪನಗುಡಿಯ ಶ್ರೀವೀರಾಚಾರ್ ಬಡಿಗೇರ್ ಎಂಬ ಕಲಾವಿದರು ಇದನ್ನು ರಚಿಸಿದ್ದು, ಇವು ಕ್ರಮವಾಗಿ ೪೧ X ೪೬ ಸೆಂ.ಮೀ ಆಳತೆಯನ್ನು ಹೊಂದಿವೆ. ಎರಡೂ ಚಿತ್ರಗಳ ಆಶಯಗಳು ಒಂದೇಯಾಗಿದ್ದರೂ ರಚನಾವಿಧಾನದಲ್ಲಿ ಹಾಗೂ ಆಕೃತಿಗಳ ಸಂಯೋಜನೆಯಲ್ಲಿ ವೈವಿಧ್ಯವನ್ನು ಹೊಂದಿವೆ. ಈ ಎರಡೂ ಚಿತ್ರಗಳು ಜನಪದೀಯ ಸೊಗಡನ್ನು ಪ್ರತಿಬಿಂಬಿಸುತ್ತವೆ. ಅಂದರೆ ರೇಖಾವಿನ್ಯಾಸದಲ್ಲಿ, ವರ್ಣಸಂಯೋಜನೆಯಲ್ಲಿ, ಭಾವಲಕ್ಷಣಗಳಲ್ಲಿ ಯಥಾ ಸಾದೃಶ್ಯಗಳಲ್ಲಿ ಶಿಷ್ಟತೆ ಕಾಣಸಿಗುವುದಿಲ್ಲ. ಇವು ಧಾರ್ಮಿಕ ಹಾಗೂ ಭಕ್ತಿಯ ಶ್ರದ್ಧೆಯನ್ನು ತೋರುತ್ತವೆ. ಎರಡೂ ಚಿತ್ರಗಳಲ್ಲಿ ಶ್ವೇತವರ್ಣದಲ್ಲಿ ಕಾಮಧೇನುವನ್ನು ಸಂಯೋಜಿಸಿದ್ದು ಮಯೂರನ ರೆಕ್ಕೆಯನ್ನು ಸಾಂಕೇತಿಕವಾಗಿ ಸಂಯೋಜನೆ ಮಾಡಲಾಗಿದೆ.

ಸ್ತ್ರೀಮುಖಭಾವವನ್ನು ಹೊಂದಿದ ಕಾಮಧೇನು ಕಿರೀಟ ಹಾಗೂ ಆಭರಣಗಳಿಂದ ಅಲಂಕೃತಗೊಂಡಿದೆ. ಜೋಡು ಬಾಲಗಳನ್ನು ಹೊಂದಿದ ಕಾಮಧೇನು ಬಾಲವು ಅಲಂಕಾರಿಕ ನಕ್ಷಾ ವಿನ್ಯಾಸದಿಂದ ಕೂಡಿ, ಮಯೂರನ ಗರಿಗಳನ್ನು ಪಡೆದುಕೊಂಡಿದೆ. ಈ ಚಿತ್ರಗಳ ರಚನೆ ಯಾವುದೇ ಒಂದು ಸಾಂಪ್ರದಾಯಕ ನಿರ್ದಿಷ್ಟ ಚಿತ್ರಶೈಲಿಯನ್ನು ಹೊಂದಿಲ್ಲವಾದರೂ ಜನಪದರ ಅಶಯದ ಸಂಯೋಜನಾ ಚಿತ್ರಶೈಲಿಯಲ್ಲಿ ರೂಪಗೊಂಡಿದೆ. ಎರಡೂ ಚಿತ್ರಗಳಲ್ಲಿ ಕಾಮಧೇನುವನ್ನು ಅಲಂಕಾರಿಕ ನಕ್ಷಾವಿನ್ಯಾಸಗಳಿಂದ ಸಂಯೋಜನೆಗೊಳಿಸಲಾಗಿದ್ದು. ನಂದಿನಿಯು ಕರುವಿಗೆ ಹಾಲುಣಿಸುತ್ತಿರುವ ದೃಶ್ಯ ಅತ್ಯಂತ ಚಲನಾತ್ಮಕವಾಗಿ ಕೂಡಿದೆ. ಎರಡೂ ಚಿತ್ರಗಳಲ್ಲಿ ಶಿವ-ಪಾರ್ವತಿಯರನ್ನು ಚಿತ್ರಿಸಿದ್ದು, ನಂದಿನಿಯನ್ನು ಆಶೀರ್ವದಿಸುವಂತೆ ಅಭಿವ್ಯಕ್ತಿ ಮಾಡಲಾಗಿದೆ. ಎರಡೂ ಚಿತ್ರಗಳಲ್ಲಿ ಶಿವ-ಪಾರ್ವತಿಯರ ಅಂಗಾಂಗಗಳ ಸಂಯೋಜನೆಯಲ್ಲಿ ಕಲಾವಿದನು


೦೯. ಯಜ್ಞನಾರಾಯಣ : ಪುರಾಣ ಭಾರತಕೋಶ, ಪುಟ – ೧೦೯–೧೧೦

[illegible]

ಸಾಂಪ್ರದಾಯಿಕ ಗಾಜಿನ ಚಿತ್ರಗಳು







ಪ್ರಾಧಾನ್ಯ ಕೊಟ್ಟಿದ್ದು ಕಂಡು ಬಂದಿರುವುದಿಲ್ಲ.[೧೦] ಒಟ್ಟಾರೆ ಈ ಒಂದು ಇಡೀ ಸ್ಥಳಾವಕಾಶವನ್ನು ಸೂಕ್ಷ್ಮರೇಖೆಯಿಂದ ಬಣ್ಣದಿಂದ ವ್ಯವಧಾನದಿಂದ ಸಂಯೋಜನೆಗೊಳಿಸಿದ್ದಾನೆ. ಬಣ್ಣ ಲೇಪನದಲ್ಲಿ ಜಾಗರೂಕತೆ ಕಾಪಾಡಿದ್ದಾನೆ. ಹೊಸಪೇಟೆಯ ಶ್ರೀ ಮಹೇಂದ್ರ ಸರಾಫ್‌ರ ಮನೆಯಲ್ಲಿ ಸುಮಾರು ೨೦೦ ವರ್ಷಗಳಿಂದ ಪೋಷಿಸಲ್ಪಟ್ಟ ಚೀನಾ ಕಲಾವಿಧರು ರಚಿಸಿದ ಹನ್ನೊಂದು ಚಿತ್ರಗಳು ಲಭ್ಯವಿವೆ. ಇವರ ಮನೆತನವು ಬೆಳ್ಳಿ ಬಂಗಾರ ವ್ಯಾಪಾರಸ್ಥ ಮನೆತನವಾಗಿದ್ದು, ಪೂರ್ವಜರಿಂದಲೂ ಕಂಡುಕೊಳ್ಳಲಾಗುತ್ತಿದೆ. ಇವರ ಮನೆಯಲ್ಲಿರುವ ಚಿತ್ರಗಳು ದುಸ್ಥಿತಿಯಲ್ಲಿದ್ದು, ಚೌಕಟ್ಟುಗಳು, ಹಿಂಬದಿಯ ಸಂರಕ್ಷಣಾ ಹಲಗೆಗಳು ಕಿತ್ತು ಬರುವ ಸ್ಥಿತಿಯಲ್ಲಿವೆ. ಚಿತ್ರಗಳಲ್ಲಿ ವರ್ಣಗಳು ಅಲ್ಲಲ್ಲಿ ಕಿತ್ತು ಹೋಗಿವೆ. ಇವುಗಳ ಸಂರಕ್ಷಣೆಯ ಅಗತ್ಯತೆ ಇದೆ.

ಮಹೇಂದ್ರ, ಸರಾಫ್‌ರ ಅಜ್ಜನು ೧೫೦ ವರ್ಷಗಳ ಹಿಂದೆ ವ್ಯಾಪಾರ ನಿಮಿತ್ತ ಉತ್ತರಭಾರತದ ಕಡೆಗೆ ಹೋದಾಗ ಖರೀದಿಸಿ ತಂದಿದ್ದನೆಂದು ಹೇಳುತ್ತಾರೆ. ಅವರ ಅಜ್ಜ, ಕಲಾವಿದನು ಹಾಗೂ ಕಲಾಪ್ರೇಮಿಯೂ ಆಗಿದ್ದನೆಂದು, ಅವರ ಗುಣಗಳು ಅವರ ಮೊಮ್ಮಕ್ಕಳಲ್ಲಿ ಹರಿದು ಬಂದಿವೆ. ಇವರು ಅಜ್ಜನಂತೆ ಗಾಜಿನ ಮೇಲೆ ಚಿತ್ರಗಳನ್ನು, ಕಾಗದದ ಮೇಲೆ ಚಿತ್ರಗಳನ್ನು ಬರೆದಿದ್ದಾರೆ ಎಂದು ಸರಾಫರು ಹರ್ಷ ವ್ಯಕ್ತಪಡಿಸುತ್ತಾರೆ. ಇವರ ಮನೆಯಲ್ಲಿರುವ ಎಲ್ಲಾ ಚಿತ್ರಗಳು ೫೫X೬೫ ಸೆಂ.ಮೀ. ಅಳತೆಯಲ್ಲಿವೆ. ಅರಸರ ಭಾವಚಿತ್ರ, ವ್ಯಕ್ತಿಚಿತ್ರಗಳು, ಯುವತಿಯ ಚಿತ್ರಗಳು, ಶೇಷಶಯನ ವಿಷ್ಣು, ದತ್ತಾತ್ರೇಯನ ಚಿತ್ರಗಳ ಸಂಗ್ರಹ ಇದೆ. ಈ ಚಿತ್ರಗಳ ರಚನಾವಿಧಾನವು ಒಂದೇ ರೀತಿಯಿದ್ದು, ಬಹುಶಃ ಚೀನಾ ಕಲಾವಿದರು ರಚಿಸಿದ ಚಿತ್ರಗಳಾಗಿವೆ.[೧೧]

ಆಧುನಿಕ ಗಾಜಿನ ಮೇಲಿನ ಚಿತ್ರಕಲೆ

ಆಧುನಿಕ ಗಾಜಿನ ಚಿತ್ರಕಲೆಯಲ್ಲಿ ಧಾರ್ಮಿಕ ಚಿತ್ರ ಅತ್ಯಂತ ವಿರಳ ಇದ್ದರೂ ಇವು ಅಲಂಕಾರಿಕ ಚಿತ್ರಗಳಲ್ಲಿ ಬಿಂಬಿತವಾಗಿವೆ. ಉದಾಹರಣೆಗೆ ಗಣೇಶನ ಚಿತ್ರ, ಸರಸ್ವತಿಯ ವೀಣೆ ಮತ್ತು ನವಿಲು ಮುಂತಾದವು ಮೂಲ ಸ್ವರೂಪ ಇದ್ದರೂ, ಸೃಜನಾತ್ಮಕ ಆಧುನಿಕ ವೇಷ ಧರಿಸಿದ ಧಾರ್ಮಿಕ ಕಲೆ ಎನ್ನಬಹುದು. ಇಂತಹವು ಗಾಜಿನ ಮೇಲೆ ಮೂಡಿರುವುದು. ಬಳ್ಳಾರಿಯ ವಾಸವಿ ಶಾಲೆಯ ಹತ್ತಿರದ ಸಮೀನ ಎನ್ನುವ ಕಲಾವಿದೆಯು ಹಲವು ಚಿತ್ರಗಳನ್ನು ಚಿತ್ರಿಸಿದ್ದು ೨೦೦೦ರಲ್ಲಿ ಇವರ ಮನೆಯಲ್ಲಿ ಕಂಡು ಬರುತ್ತವೆ. ಆದರೆ ಈ ಚಿತ್ರಗಳನ್ನು ಇವರ ಅಕ್ಕ ದುಬೈಗೆ ತೆಗೆದುಕೊಂಡು ಹೋಗಿರುವುದಾಗಿ ಸಂದರ್ಶಿಸಿದಾಗ ತಿಳಿದು ಬಂದಿತು. ಇವುಗಳಲ್ಲದೆಯೇ ಬಳ್ಳಾರಿಯಲ್ಲಿಯೇ ಗ್ಲಾಸ್ ಎಚ್ಚಿಂಗ್ ಕಾರ್ಖಾನೆ ಕಂಡು ಬರುತ್ತದೆ. ಇಲ್ಲಿ ಹಲವು ಆಧುನಿಕ ಉಪಕರಣಗಳಿಂದ ಗಾಜಿನ ಮೇಲೆ ಚಿತ್ರಗಳನ್ನು ಮೂಡಿಸುತ್ತಾರೆ. ಅಷ್ಟೇ

೧೦. ಡಾ. ನಿಂಗಪ್ಪ ಎಂ. ಅಂಗಡಿ : ಕರ್ನಾಟಕದ ಗಾಜಿನ ಮೇಲಿನ ಚಿತ್ರಕಲೆ – ಒಂದು ಅಧ್ಯಯನ (ಅ.ಪ್ರ.ಪಿಹೆಚ್.ಡಿ.ಮ.ಪ್ರ.). ಪುಟ – ೧೦೮

೧೧. ಅದೇ., ಪುಟ – ೨೭೩

ಆಧುನಿಕ ಗಾಜಿನ ಚಿತ್ರಗಳ ಪರಿಕರಗಳು








ಆಧುನಿಕ ಗಾಜಿನ ಚಿತ್ರಗಳು



ಚಿತ್ರ ೧.



ಚಿತ್ರ ೨.



ಚಿತ್ರ ೩.



ಚಿತ್ರ ೪.

ಆಧುನಿಕ ಗಾಜೀನ ಚಿತ್ರಗಳು



ಚಿತ್ರ ೫.



ಚಿತ್ರ ೬.



ಚಿತ್ರ ೭.



ಚಿತ್ರ ೮.

ಅಲ್ಲದೇ ಈ ಗಾಜಿನ ಚಿತ್ರಕಲೆಯಿಂದ ಗಾಜಿನ ಗಾತ್ರಕ್ಕೆ ತಕ್ಕಂತೆ ಚಿತ್ರಗಳಿಗೆ ಲಕ್ಷಾಂತರ ರೂಪಾಯಿಗಳನ್ನು ಕೂಡ ಗಳಿಸುತ್ತಾರೆ. ಇದು ಇಂದು ವಾಣಿಜ್ಯಕಲೆಯಾಗಿ, ಶ್ರೀಮಂತರ ಮನೆಗಳಿಗೆ ದೊಡ್ಡ ದೊಡ್ಡ ಕಟ್ಟಡಗಳಿಗೆ ಅಳವಡಿಸಲಾಗುವುದು.

ನಿಸರ್ಗ ಮತ್ತು ಅಲಂಕಾರಿಕ ಗಾಜಿನ ಚಿತ್ರಗಳು

ಅಲಂಕಾರಿಕ ನಕ್ಷಾ ವಿನ್ಯಾಸಗಳು ಬಹುತೇಕ ಸ್ಟೆಂಡ್ ಗ್ಲಾಸ್ ವಸ್ತುಗಳ ಮೇಲೆ ಮರಳು ಸ್ಪ್ರೇ ಮಾಡುವುದು, ಈ ಸ್ಪೇ ಮಾಡುವಾಗ ಮುಖ್ಯವಾದ ಚಿತ್ರ ಆಕಾರಗಳನ್ನು ಸ್ಟಿಕ್ಕರನಿಂದ ಮುಚ್ಚುವುದು, ಸ್ಪ್ರೇ ನಂತರ ಸ್ಟೀಕ್ಕರ್‌ನ್ನು ತೆಗೆದು ಬೇಕಾದ ಮತ್ತೊಂದು ಬಣ್ಣದ ಸ್ಪ್ರೇ ಮಾಡುವುದು, ನಂತರ ಇದಕ್ಕೆ ಒಂದು ಪೇಪರ್ (ಪ್ಲಾಸ್ಟೀಕ್)ನ್ನು ಅಂಟಿಸುವುದು. ಇದು ಒಣಗಿದ ನಂತರ ಈ ಪ್ಲಾಸ್ಟೀಕ್ ಪೇಪರ್ ತೆಗೆದ ನಂತರ ಚಿತ್ರ ಸಿದ್ಧವಾಗುತ್ತದೆ. ಇಂತಹ ಕ್ರಮವನ್ನು ಅನುಸರಿಸಿ ಎಲೆ, ಹೂವು, ಬಳ್ಳಿ, ಕಾಂಡ, ಮೊಗ್ಗು, ನೈಸರ್ಗಿಕ ನಕ್ಷಾನಿನ್ಯಾಸಗಳನ್ನು ಗಾಜಿನ ಮೇಲೆ ಮೂಡಿಸುತ್ತಾರೆ. ಇವುಗಳಲ್ಲದೆಯೇ ಪ್ರಾಣಿ ಪಕ್ಷಿಗಳನ್ನು ಸಹ ಇಲ್ಲಿ ಸೃಜನಾತ್ಮಕವಾಗಿ ಬಣ್ಣ ಬಣ್ಣದ ವಿನ್ಯಾಸಗಳಿಂದ ಮೂಡಿಸುತ್ತಾರೆ.

ಚಿತ್ರ – ೧

ಈ ನಿಸರ್ಗ ದೃಶ್ಯ ಚಿತ್ರವು ಒಂದೇ ಕಾಂಡದಲ್ಲಿ ಹಲವು ಹೂಗಳ ಚಿತ್ರವಾಗಿದ್ದು, ಈ ಹೂಗಳು ಬೇರೆ ಬೇರೆ ಬಣ್ಣಗಳಿಂದ ಚಿತ್ರಿತಗೊಂಡಿವೆ. ಮತ್ತು ಎಲೆಯು ಮಾತ್ರ ಒಂದೇ ತರಹದಲ್ಲಿದ್ದು, ಹಸಿರು ಬಣ್ಣದಿಂದ ಅಲಂಕಾರಿಸಲಾಗಿದೆ. ಇಲ್ಲಿ ಎಲೆ ಬಣ್ಣವನ್ನು ನಿಸರ್ಗದ ಎಲೆಯ ಯಥಾ ಅನುಕರಣೆ ಮಾಡಲಾಗಿದೆ. ಇವುಗಳ ಸಂಯೋಜನೆಯಿಂದ ನೈಜ ನಿಸರ್ಗಚಿತ್ರವಿದಾಗಿದೆ.

ಚಿತ್ರ – ೨

ನೈಜ ಸ್ವರೂಪ ನಿಸರ್ಗ ಅನುಕರಣೆಯ ಕಲಾಕೃತಿಯಿದಾಗಿದೆ. ೯x೩ ಅಡಿ ಆಳತೆಯನ್ನು ಹೊಂದಿದೆ. ಈ ಕಲಾಕೃತಿಯ ಆಕಾರಗಳ ಹಿಂಭಾಗದಲ್ಲಿ ನೀಲಿ ಆಕಾಶವನ್ನು ಅನುಕರುಣೆ ಮಾಡಲಾಗಿದ್ದು, ವಸ್ತು ವಿಷಯವು ಎಲೆಯಿಂದ ಕೂಡಿದ 'ಬಿದರಿ'ನ ಗಿಡದ ಗುಂಪನ್ನು ಯಥಾವತ್ತಾಗಿ ಅನುಕರಣೆ ಮಾಡಲಾಗಿದೆ. ಕಲಾವಿದ ಈ ಕಲಾಕೃತಿಯನ್ನು ಮನೆಯ ಬಾಗಿಲಿಗೆ ಅಳವಡಿಸುವುದಾಗಿ ಹೇಳಿದ್ದಾನೆ.

ಚಿತ್ರ – ೩

ಇದು ಸೂರ್ಯಕಾಂತಿ 'ಹೂ'ವಿನ ಆಕಾರದಲ್ಲಿದ್ದರೂ ಜಾಮಿತಿಯ ಆಕಾರದಲ್ಲಿ ನಿರ್ಮಾಣವಾಗಿದೆ. ಇದನ್ನು ಛಾವಣಿಗೆ ಅಲಂಕಾರವಾಗಿ ಅಳವಡಿಸಲಾಗುವುದು. ಇಲ್ಲಿ ಒಂದು

ಬಾರಿ ಬಣ್ಣವನ್ನು ನಿರ್ಧರಿಸಿ ಹಾಕಿದರೆ ಮತ್ತೊಮ್ಮೆ ತೆಗೆದು ಬೇರೆ ಬಣ್ಣ ಹಾಕಲು ಬರುವುದಿಲ್ಲ. ಮತ್ತು ಇಲ್ಲಿ ತುಂಬಾ ಸೂಕ್ಷ್ಮ ಕೆಲಸದೊಂದಿಗೆ ಇದನ್ನು ಒಂದು ಹಂತಕ್ಕೆ ತಲುಪುವ ವರೆಗೂ ಜಾಗರೂಕತೆಯಿಂದ ಕಾಪಾಡಬೇಕು. ಇದು ಅಲ್ಲದೇ ಬಣ್ಣ ರಹಿತವಾದ 'S'ಅಕ್ಷರ ಲೇಖಲವನ್ನು ಸಹ ಅಚ್ಚುಪಡಿಯಲ್ಲಿ ತೆಗೆಯಲಾಗಿದೆ. ಬಳ್ಳಾರಿಯ ಬಸವೇಶ್ವರ ನಗರದ ಮನೆಯೊಂದರಲ್ಲಿ ಹಲವು ಆಧುನಿಕ ಗಾಜಿನ ಚಿತ್ರಗಳು ಕಾಣಬರುತ್ತವೆ. ಭಾವಣಿ, ಕಿಟಕಿ, ಬಾಗಿಲು, ಬಾಗಿಲು ಮೇಲಿನ ಭಾಗದಲ್ಲಿ, ಗೋಡೆ ಮತ್ತು ಕಪಾಟು ಮುಂತಾದವುಗಳಿಗೆ ಗಾಜಿನ ಚಿತ್ರಗಳನ್ನು ಅಳವಡಿಸಲಾಗಿದೆ. ಈ ಚಿತ್ರಗಳ ವಿವರಣೆ ಕೆಳಗಿನಂತಿದೆ.

ಚಿತ್ರ – ೪

ದೇವರ ಕೋಣೆಯ ಭಾವಣಿಗೆ ಬಳ್ಳಿ, ಎಲೆ, ಹೂಗಳ ಸಂಯೋಜನೆಯಿಂದ ಕೂಡಿದ ೩ x ೯ ಅಡಿಗಳ ಗಾಜಿನ ಚಿತ್ರವನ್ನು ಕೂಡಿಸಿದ್ದು ಎಲೆಯನ್ನು ನೈಸರ್ಗಿಕವಾದ ಅರಳೆಗಿಡದ ಎಲೆಯ ಹಸಿರು ಬಣ್ಣದಿಂದ, ಗೋರಟಿಗೆ ಹೂವನ್ನು ಬಳ್ಳಿಗೆ ಸಂಯೋಜನೆ ಮಾಡಲಾಗಿದೆ. ಜೊತೆಯಲ್ಲಿ ವೃತ್ತಾಕಾರವನ್ನು ಬಳ್ಳಿಯ ಮಧ್ಯೆ ಮಧ್ಯೆ ಸಂಯೋಜಿಸಲಾಗಿದೆ. ಇದು ನೈಸರ್ಗಿಕ ಮತ್ತು ಜಾಮಿತಿಯ ಆಕಾರಗಳಿಂದ ಕೂಡಿದ ಸುಂದರ ಕಲಾಕೃತಿಯಾಗಿದೆ. ನೈಸರ್ಗಿಕವಾಗಿ ಇದು ನೈಜವಿಲ್ಲವಿದ್ದರೂ ಕಲಾವಿದನು ಈ ಎಲೆ ಮತ್ತು ಹೂವಿನ ಸಂಯೋಜನೆಯಲ್ಲಿ ಸೃಜನತೆಯನ್ನು ಮೆರೆದಿದ್ದಾನೆ.

ಚಿತ್ರ – ೫

ಚಿತ್ರಕಲೆಯಲ್ಲಿ ಮುಖ್ಯವಾಗಿ ಮೋನೋ ಕಲರ್ ಎಂದು ಉಪಯೋಗಿಸುವ ಅದೇ ಬಣ್ಣದಲ್ಲಿ ಗಾಢ, ತಿಳಿ ಬಣ್ಣವನ್ನು ಉಪಯೋಗಿಸಿದಂತೆಯೇ ಗಾಜಿನಲ್ಲಿಯೂ ಯಾವುದೇ ಬಣ್ಣವಿಲ್ಲದಂತೆ ತಿಳಿ ಗಾಢತೆಯನ್ನು, ಗಾಜಿನಲ್ಲಿಯೇ ಹೂ-ಬಳ್ಳಿಯನ್ನು ತಿಳಿಯಾಗಿಯೂ ಸ್ಥಳಾವಕಾಶ (Space) ವನ್ನು ಗಾಢವಾಗಿಯೂ ತುಂಬಾ ಇಲ್ಲಿ ಗಾಜಿನ ಚಿತ್ರವನ್ನು ರಚಿಸಲಾಗಿದೆ.

೨. ಕಲಾಗ್ಯಾಲರಿ

ಬಳ್ಳಾರಿ ಜಿಲ್ಲೆಯಲ್ಲಿ ಚಿತ್ರಕಲೆಗೆ ಪ್ರೋತ್ಸಾಹ ನೀಡಿ ಅಪಾರ ಸಂಖ್ಯೆಯ ಕಲಾಕೃತಿಗಳನ್ನು ರಕ್ಷಿಸುವ ಕೆಲಸವೂ ನಡೆದಿದೆ. ಇದರಲ್ಲಿ ಕನ್ನಡ ವಿಶ್ವವಿದ್ಯಾಲಯದ ಪಾತ್ರ ಬಹುಮುಖ್ಯವಾದುದು. ಅಕ್ಷರಕಟ್ಟಡದಲ್ಲಿ ವಸ್ತುಸಂಗ್ರಹಾಲಯ ಸ್ಥಾಪಿಸಲ್ಪಟ್ಟಿದ್ದು ಅದರಲ್ಲಿ ಒಂದು ಭಾಗದಲ್ಲಿ ಕಲಾಕೃತಿಗಳಿಗಾಗಿಯೇ ಪ್ರತ್ಯೇಕವಾದ ಆಧುನಿಕ ಕಲಾ ಗ್ಯಾಲರಿಯನ್ನು ನಿರ್ಮಿಸಲಾಗಿದೆ. ಇಲ್ಲಿ ಸುಮಾರು ೩೦ ಕ್ಕೂ ಹೆಚ್ಚಿನ ವರ್ಣಚಿತ್ರಗಳನ್ನು ಪ್ರದರ್ಶಿಸಲಾಗಿದೆ. ಇವುಗಳನ್ನು ಹೆಸರಾಂತ ಕಲಾವಿದರಾದ ಆರ್. ಎಂ. ಹಡಪದ, ಜೆ. ಎಸ್. ಖಂಡೇರಾವ್, ವಿ. ಜಿ. ಅಂದಾನಿ, ವಿಜಯ ಸಿಂಧೂರ, ಜೆ. ಎಮ್. ಎಸ್. ಮಣಿ, ಜೆ. ಎಸ್. ಶೆಣೈ, ವಿಜಯ ಬಾಗೋಡಿ, ಲಾಲುಶಾಹ

[illegible]

ರಮೇಶ್‌ರಾವ್, ಲಕ್ಷ್ಮಿ ಎಸ್. ಜಬ್ಬಲದಿನ್ನಿ, ಎಂ. ಬಿ. ಲೋಹಾರ್, ವೈ. ಎಚ್. ಸೂಗೂರ, ಪುಷ್ಪಮಾಲಾ. ಡಿ ಕಾರ್ಮಿಕರ, ರಾಮಸಿಂಗ್ ಟಿ. ಕೆ. ಆರ್., ಆರ್. ಎಚ್. ದೇಸಾಯಿ ಮುಂತಾದ ಕಲಾವಿದರು ಚಿತ್ರಿಸಿದ್ದಾರೆ. ಈ ಕಲಾಕೃತಿಗಳು ಕನ್ನಡ ನಾಡಿನ ಬಹುಸಂಖ್ಯಾತ ಜನರ ಮನಸ್ಸಂತೋಷಗೊಳಿಸಿವೆ. ಈ ಕಲಾಕೃತಿಗಳೆಲ್ಲಾ ನವ್ಯತೆಯನ್ನು ಸಾರುವ ತಮ್ಮ ಮನದ ಕಲಾಸೃಷ್ಟಿ ಕಲಾನುಭವಗಳೆರಡರ ದೃಷ್ಟಿಯಿಂದಲೂ ಆಶಾಭಾವವೇ ಹೆಚ್ಚಾಗಿ ಕಂಡರೂ ಅಪರೂಪಕ್ಕೆ ಕೆಲವು ಉತ್ತಮ ಪ್ರಯತ್ನಗಳನ್ನೂ ಹೊಸದಿಕ್ಕಿನತ್ತ ಇಟ್ಟ ಹೆಜ್ಜೆಗಳ ಸಾಹಸೀ ಕಲಾವಿದರನ್ನು ಗುಂಪುಗಳಲ್ಲಿ ಗುರ್ತಿಸಬಹುದಾಗಿದೆ.

೩. ವಸ್ತು ಸಂಗ್ರಹಾಲಯ

ಅಕ್ಷರ ಕಟ್ಟಡದಲ್ಲಿ ಒಂದು ಭಾಗವಾಗಿರುವ ವಸ್ತುಸಂಗ್ರಹಾಲಯವು ಕ್ರಿ.ಶ. ೧೯೯೬ ರಲ್ಲಿ ಒಂದು ವಿಭಾಗವಾಗಿ ಪ್ರಾರಂಭಗೊಂಡು ನಂತರ ೧೯೯೮ ರಲ್ಲಿ ಅಸ್ತಿತ್ವಕ್ಕೆ ಬಂದಿತು. ಕನ್ನಡ ನಾಡು, ನುಡಿ, ಸಂಸ್ಕೃತಿ, ಕಲೆ ಸಂಪ್ರದಾಯ ಮುಂತಾದ ಹಲವು ಆಯಾಮಗಳನ್ನು ಕುರಿತು ಇಂದಿನವರಿಗೆ ಇದು ಮುಂದಿನ ಸೇತುವೆಯಂಥ ಮಹತ್ವಕಾರ್ಯವನ್ನು ಈ ವಸ್ತುಸಂಗ್ರಹಾಲಯ ನಿರ್ವಹಿಸುತ್ತಿದೆ. ಕನ್ನಡ ವಿಶ್ವವಿದ್ಯಾಲಯದ ವರ್ಣಶಿಲ್ಪಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ.

ಯಕ್ಷಗಾನ, ಸಿಂಹದ ಮುಖವಾಡ, ಭೂತಾರಾಧನೆ, ಭೂತದ ಮುಖವಾಡಗಳು, ಭೂತನಾಥ ಮುಖವಾಡ, ದೇವತಾ ಮೂರ್ತಿಗಳು, ತಾಯಿ ಮಗು, ಮಾರಿಕಾಂಬಿಕೆ, ಹುಲಿ, ಗ್ರಾಮದೇವತೆಯರು, ದುರ್ಗಾದೇವಿ, ಭೈರವ, ಊರಮ್ಮ ದೇವರು, ಬಯಲಾಟದ ಕಿರೀಟ, ಪಲ್ಲಕ್ಕಿ ಮತ್ತು ಜೋಡಿ ನಂದಿಗಳು ಮುಂತಾದವು ಜನಪದ ಹಿನ್ನೆಲೆಯಲ್ಲಿ ಧಾರ್ಮಿಕ, ಮನೋರಂಜನೀಯವಾಗಿ ನಿರ್ಮಾಣ ಮಾಡಿದ ಜನಪದ ವರ್ಣಶಿಲ್ಪಕಲಾಕೃತಿಗಳ ಸಂಗ್ರಹವಾಗಿವೆ. ಕಿನ್ನಾಳ ಚಿತ್ರಗಾರರು ತಮ್ಮ ಚಿತ್ರಶೈಲಿಯಲ್ಲಿ ಜಾನಪದ ಅಂಶವನ್ನು ಮೈಗೂಡಿಸಿಕೊಂಡಿದ್ದಾರೆ. ಆಯಾ ಪ್ರದೇಶದ ಉಡುಗೆ, ತೊಡುಗೆ, ಸಂಪ್ರದಾಯ ಇವುಗಳಲ್ಲಿ ಬಿಂಬಿತವಾಗಿವೆ. ಪ್ರಸ್ತುತ ಕಿನ್ನಾಳ ಶೈಲಿಯ ಬಣ್ಣಗಳಲ್ಲಿ ಉತ್ತರ ಕರ್ನಾಟಕ ವಾತಾವರಣದಲ್ಲಿ ಕಾಣಬಹುದಾದ ಬದಲಾವಣೆ ಅಥವಾ ಒಂದು ತೆರನಾದ ಕ್ರಿಯಾತ್ಮಕತೆಯನ್ನು ನೋಡಬಹುದು. ಇಲ್ಲಿ ಆ ಸ್ತ್ರೀ-ಪುರುಷನ ಕೃತಿಗಳ ಬಣ್ಣ, ಉಡುಗೆ, ತೊಡುಗೆಗಳಲ್ಲಿ ಜಾನಪದ ಅಂಶಗಳು ಎದ್ದು ಕಾಣುತ್ತವೆ.

೩.೧. ಸರಕಾರಿ ವಸ್ತುಸಂಗ್ರಹಾಲಯ, ಹೂವಿನ ಹಡಗಲಿ

ಹೂವಿನ ಹಡಗಲಿಯಲ್ಲಿ ವಸ್ತುಸಂಗ್ರಹಾಲಯವನ್ನು ಸ್ಥಾಪಿಸಲಾಗಿದೆ. ಈ ವಸ್ತುಸಂಗ್ರಹಾಲಯದ ಸ್ಥಾಪನೆಗೆ ರಾಜಕೀಯ ಮುತ್ಸದ್ಧಿ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿದ್ದ ಶ್ರೀ ಎಂ.ಪಿ. ಪ್ರಕಾಶ್‌ರವರು ಸಾಕಷ್ಟು ಶ್ರಮಿಸಿದ್ದಾರೆ. ದಿನಾಂಕ ೧೧.೭.೧೯೯೯ ರಂದು ಕರ್ನಾಟಕದ ಆಗಿನ ಉಪಮುಖ್ಯಮಂತ್ರಿಗಳಾಗಿದ್ದ ಶ್ರೀ

ಸಿದ್ಧರಾಮಯ್ಯನವರು ಈ ಸರಕಾರಿ ವಸ್ತುಸಂಗ್ರಹಾಲಯವನ್ನು ಉದ್ಘಾಟಿಸಿದರು, ಶ್ರೀ ಎಂ.ಪಿ. ಪ್ರಕಾಶರವರು ಉಪಸ್ಥಿತರಿದ್ದರು. ಈ ವಸ್ತುಸಂಗ್ರಹಾಲಯದಲ್ಲಿ ಸಾಕಷ್ಟು ಶಿಲ್ಪಗಳು, ವೀರಗಲ್ಲುಗಳು, ಶಾಸನಗಳನ್ನು ಸಂಗ್ರಹಿಸಿಡಲಾಗಿದೆ. ಅಲ್ಲದೆ ಭಾರತದ ಸಮಕಾಲೀನ ಕಲಾವಿದರಾದ ಈಶ್ವರ ಪತ್ತಾರ, ಕೆ.ಕೆ. ಮಕಾಳೆ ಮುಂತಾದವರ ಕಲಾಕೃತಿಗಳನ್ನು ಸಹ ಇಲ್ಲಿ ಸಂಗ್ರಹಿಸಲಾಗಿದೆ. ಒಟ್ಟು ಹತ್ತು ಕಲಾಕೃತಿಗಳನ್ನು ಪ್ರದರ್ಶಿಸಲಾಗಿದೆ. ಅವುಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

ಚಿತ್ರ – ೧

ಫೀಲ್ಡ್‌ಗೆ ಸಂಬಂಧಿಸಿದ ಚಿತ್ರವಾಗಿದ್ದು, ೧೮೮೬ರಲ್ಲಿ ಡಿ.ವಿ. ದೊಂಡೆಗೆ ೨೫ x ೩೫ ಸೆಂ.ಮೀ. ಅಳತೆಯಲ್ಲಿ ಕಲರ್ ಪೆನ್ಸಿಲ್‌ನಿಂದ ರಚಿಸಿದ ಚಿತ್ರವಾಗಿದೆ. ಈ ಚಿತ್ರಕೃತಿಯಲ್ಲಿ ತಂಪಾದ ವಾತಾವರಣದಿಂದ ಕೂಡಿದ ಸನ್ನಿವೇಶವನ್ನು ಪರಿಣಾಮಕಾರಿಯಾಗಿ ತೋರಿಸುವುದರೊಂದಿಗೆ ವ್ಯವಸಾಯವನ್ನು ಮಾಡುತ್ತಿರುವ ಸನ್ನಿವೇಶವನ್ನು ಕುರಿತ ವಿಷಯವಿದೆ. ಇದಕ್ಕೆ ಕಲಾವಿದನು ತನ್ನ ಸೃಜನಾತ್ಮಕ ನಿಲುವಿನಲ್ಲಿ ಮುಂದಿನ ಭಾಗದಲ್ಲಿ ವ್ಯವಸಾಯ ಮಾಡುವ ಸನ್ನಿವೇಶ, ಹಿಂಭಾಗದಲ್ಲಿ ಪೂರಕವಾಗಿ ಗಿಡಮರಗಳನ್ನು ಮತ್ತು ಮೇಲೆ ಆಕಾಶವನ್ನು ತೋರಿಸುವುದರೊಂದಿಗೆ ಸಂಯೋಜಿತವಾದ ಕಲಾಕೃತಿಯಾಗಿದೆ. ಈ ಕಲಾಕೃತಿಗೆ ತಂಪಾದ ಬಣ್ಣವನ್ನು ಲೇಪಿಸಲಾಗಿದೆ.

ಚಿತ್ರ – ೨

೧೯೮೬ರಲ್ಲಿ ಎಂ.ಬಿ. ಪಾಟೀಲರವರು ೨೮ x ೪೬ ಸೆಂ.ಮೀನ ತೈಲ ವರ್ಣ ಮಾಧ್ಯಮದಲ್ಲಿ ಚಿತ್ರವನ್ನು ರಚಿಸಿದ್ದಾರೆ. ಈ ಒಂದು ಕಲಾಕೃತಿಗೆ ಪರಿಸರ ನಂ–೨ ಎಂದು ಹೆಸರಿಸಲಾಗಿದೆ. ಈ ಕಲಾಕೃತಿಯಲ್ಲಿ ಮಹಿಳೆಯೊಬ್ಬಳು ಹುಂಜವನ್ನು ಹಿಡಿದು ನಿಂತಿರುವ ಚಿತ್ರವಾಗಿದೆ. ಎಲ್ಲರಿಂದ ಪರಿಸರ, ಪರಿಸರದಿಂದ ಎಲ್ಲರು ಎನ್ನುವ ಒಂದು ವಿಷಯವನ್ನು ಪರಿಸರದ ಪಕ್ಷಿ ಪ್ರಾಣಿ, ಮನುಷ್ಯನ ಒಡನಾಡಿಯಾಗಿರುತ್ತವೆ ಎನ್ನುವುದಕ್ಕೆ ಸಾಂಕೇತಿಕವಾಗಿ ಚಿತ್ರಿಸಲಾದ ಕಲಾಕೃತಿಯಾಗಿದೆ. ಇಲ್ಲಿ ಒಂದಕ್ಕೊಂದು ವಿರುದ್ಧವಾದ ತಿಳಿ, ಗಾಢ ಬಣ್ಣಗಳಿಂದ ಲೇಪಿಸಿ ಮುಖ್ಯ ಆಕಾರಕ್ಕೆ ಪ್ರಾಧಾನ್ಯವನ್ನು ಕಲಾವಿದರು ಕೊಟ್ಟಿದ್ದಾರೆ.

ಚಿತ್ರ – ೩

ಕೆ.ಕೆ. ಮಕಾಳೆಯವರು ೧೯೮೬ರಲ್ಲಿ ೩೩ x ೨೪ ಸೆಂ.ಮೀ.ನ ಜಲವರ್ಣದಲ್ಲಿ ರಚಿಸಿದ ನಿಸರ್ಗ ಚಿತ್ರವಾಗಿದೆ. ಇಲ್ಲಿ ನೈಜ ಸ್ವರೂಪದಲ್ಲಿ ಜಲವರ್ಣ ಲೇಪನ ಮತ್ತು ತೇಪೆ ಹಾಕುವ ತಂತ್ರಗಾರಿಕೆಯಿಂದ ಗೋಪುರ, ಮಂಟಪ, ಇದರ ಸುತ್ತಲಿನ ವಾತಾವರಣಗಳೊಂದಿಗೆ ಸಂಯೋಜಿತವಾದ ನಿಸರ್ಗಚಿತ್ರ ಪ್ರಕಾರವಾದ ಕಲಾಕೃತಿಯಾಗಿದೆ. ಇಲ್ಲಿ ತೆಳು–ಗಾಢತೆಯಲ್ಲಿ

ವರ್ಣ ಲೇಪಿಸುವುದರಿಂದ ದೂರ-ಹತ್ತಿರ ತೋರಿಸುವ ಭೂಮಿತಿಯ ನೋಟವನ್ನು ತೋರಿಸಲಾಗಿದೆ.

ಚಿತ್ರ – ೪

ಮಾರಾಟಕ್ಕಿಂತ ಮೊದಲು ಎನ್ನುವ ಕಲಾಕೃತಿಯನ್ನು ೧೯೮೬ರಲ್ಲಿ ಜಿ. ಎಲ್. ನರಸಿಂಹನ್‌ರವರು ೨೯ x ೩೯ ಸೆಂ.ಮೀ. ಅಳತೆಯಲ್ಲಿ ಕಲರ್ ಪೆನ್ಸಿಲ್ ಮಾಧ್ಯಮದಲ್ಲಿ ರಚಿಸಿದ್ದಾರೆ. ಹಣ್ಣನ್ನು ಬುಟ್ಟಿಯಲ್ಲಿ ತುಂಬುವ ಮಹಿಳೆಯನ್ನು ಕುರಿತ ಕಲಾಕೃತಿಯಾಗಿದೆ. ಇಡೀ ತಮ್ಮ ಅಪೇಕ್ಷಿತ ಆಕಾರವನ್ನು ಸರಿಹೊಂದುವಂತೆ ಸ್ಥಳಾವಕಾಶದಲ್ಲಿ ಸಂಯೋಜನೆಗೊಳಿಸಿದ್ದಾರೆ. ಈ ಕಲಾಕೃತಿಗೆ ಪ್ರಖರವರ್ಣವನ್ನು ಲೇಪಿಸಿದ್ದು ಮುಖ್ಯವಾಗಿ ತಮ್ಮದೇಯಾದ ಶೈಲಿಗೆ ಮಹತ್ವ ನೀಡಿರುವುದು ಸ್ಪಷ್ಟಗೊಳ್ಳುತ್ತದೆ.

ಚಿತ್ರ – ೫

ಟ್ರೀ ಎನ್ನುವ ಕಲಾಕೃತಿಯನ್ನು ೧೯೮೬ರಲ್ಲಿ ಸುಹಾಸ್ ರಾಯ್‌ರವರು ೩೦ x ೩೦ ಸೆಂ.ಮೀ. ಅಳತೆಯ ಅಕ್ರಲಿಕ್ ಮಾಧ್ಯಮದಲ್ಲಿ ಕಾಗದದ ಮೇಲೆ ಚಿತ್ರಿಸಿದ್ದಾರೆ. ಇಲ್ಲಿ ಒಂದು ಗಿಡವು ಕಲಾವಿದನ ಭಾವಮುದ್ರೆಗೆ ಒಳಗಾಗಿದೆ. ಆ ಗಿಡವೇ ಸೃಜನಾತ್ಮಕ ಹಿನ್ನೆಲೆಯಲ್ಲಿ ರಚಿಸಿದ ಕಲಾಕೃತಿಯಾಗಿದೆ. ಹಿಂದಣ ಸ್ಥಳಾವಕಾಶವನ್ನು ಕೆಂಪುಬಣ್ಣದಿಂದ ತೋರಿಸುವ ಹಿನ್ನೆಲೆಯಲ್ಲಿ ಸಂಜೆಯ ವಾತಾವರಣದ ಸಾಂಕೇತಿಕವಾಗಿ ಮುಂದಿನ ಮುಖ್ಯ ಗಿಡದ ಆಕಾರಕ್ಕೆ ಹೆಚ್ಚು ಒತ್ತುಕೊಟ್ಟಿದೆ. ಇಲ್ಲಿ ಎರಡೂ ಬಣ್ಣಗಳು ತಂಪನ್ನು ನೀಡುವ ಗುಣವನ್ನು ಹೊಂದಿದ ಬಳಕೆಯನ್ನು ಇಲ್ಲಿ ಕಾಣಬಹುದು.

ಚಿತ್ರ – ೬

ಪೀಟರ್ ಲೂಯಿಸ್‌ರವರು ತಾಯಿ ಮತ್ತು ಮಗ ಎನ್ನುವ ಶೀರ್ಷಿಕೆಯ ಕಲಾಕೃತಿಯನ್ನು ೫೯ x ೩೯ ಸೆಂ.ಮೀ. ಅಳತೆಯ ತೈಲವರ್ಣದಿಂದ ೧೯೮೬ರಲ್ಲಿ ರಚಿಸಿದ್ದಾರೆ. ಇಲ್ಲಿ ಮುಖ್ಯವಾಗಿ ಮೂರು ಆಕಾರಗಳಿಂದ ರಟ್ಟರಿವೆಯ ಸಮತೋಲನವಾದ ಭಾವಾಭಿವ್ಯಕ್ತಿ ಮುಖದ ಮುಖ್ಯ ಆಕಾರವಾಗಿ ರಚಿತವಾಗಿದೆ. ಇಲ್ಲಿ ಒಂದೇ ಬಣ್ಣ(ಮೋನೆಕಲರ್)ದಲ್ಲಿ ರಚನೆಯಾದರೂ ಒಂದು ಪಕ್ಷಿಯ ಅಕಾರವನ್ನು ಉಜ್ವಲಗೊಳಿಸುವ ಮುಖಾಂತರ ಜೀವನಕ್ಕೆ ಸಂಕೇತಿಸಿದ್ದಾರೆ. ಮಗುವನ್ನು ಸ್ವಚ್ಛಂದವಾದ ವಾತಾವರಣದಲ್ಲಿ ಇರಿಸುವ, ಬೆಳೆಸುವ ನೀತಿಯ ಉಜ್ವಲತೆಯನ್ನಿದು ಸಾರುತ್ತದೆ.

ಚಿತ್ರ – ೭

ಜೋಹಾನ್ ಬೇ ಆರ್‌ರವರು ಗ್ರಾಫಿಕ್ ಎಜಿಂಗ್ ಕಲಾಕೃತಿಯನ್ನು ೧೯೮೬ರಲ್ಲಿ ೧೫ x ೨೧ ಸೆಂ.ಮೀ.ನಲ್ಲಿ ತೈಲವರ್ಣದಿಂದ ರಚಿಸಿದ್ದಾರೆ. ಮಿಶ್ರವರ್ಣದಿಂದ ಕೂಡಿದ ಕಲಾಕೃತಿಯಿದಾಗಿದೆ.

ಕನ್ನಡ ವಿಶ್ವವಿದ್ಯಾಲಯದ ವಸ್ತು ಸಂಗ್ರಹಾಲಯದ ಚಿತ್ರಗಳು



ನಾಡೋಜ ಆರ್.ಎಂ.ಹಡಪದ



ರಮೇಶರಾವ್


ಕನ್ನಡ ವಿಶ್ವವಿದ್ಯಾಲಯದ ವಸ್ತು ಸಂಗ್ರಹಾಲಯದ ಚಿತ್ರಗಳು





ನಾಡೋಜ ಡಾ. ಜೆ.ಎಸ್.ಖಂಡೇರಾವ್

ಹೂವಿನ ಹಡಗಲಿಯ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿನ ಚಿತ್ರಗಳು



ಚಿತ್ರ ೧.



ಚಿತ್ರ ೨.



ಚಿತ್ರ ೩.



ಚಿತ್ರ ೪.

ಹೂವಿನ ಹಡಗಲಿಯ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿನ ಚಿತ್ರಗಳು



ಚಿತ್ರ ೫.



ಚಿತ್ರ ೬.



ಚಿತ್ರ ೭.

ಮುಖ್ಯವಾಗಿ ಒಂದು ಹಡಗು ಮುಖ್ಯ ಆಕಾರವಾಗಿ ಗ್ರಾಫಿಕ್ ತಂತ್ರಗಾರಿಕೆಯಿಂದ ಕೂಡಿದ ಕಲಾಕೃತಿಯಾಗಿದೆ.

ಸಂಕೀರ್ಣ ಮಾಧ್ಯಮದ ಈ ಅಧ್ಯಾಯದಲ್ಲಿ ಗಾಜಿನ ಮೇಲಿನ ಚಿತ್ರಕಲೆ ಮತ್ತು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರದ ಕಲಾಗ್ಯಾಲರಿ ಮತ್ತು ವಸ್ತುಸಂಗ್ರಹಾಲಯಗಳನ್ನು ಸ್ಥೂಲವಾಗಿ ಗಮನಿಸಲಾಗಿದೆ. ಈಗಾಗಲೇ ಕಲಾಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಯನದ ಭಾಗವಾಗಿರುವ ಕಲಾಗ್ಯಾಲರಿ ಮತ್ತು ವಸ್ತುಸಂಗ್ರಹಾಲಯಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ. ಒಟ್ಟಾರೆ ಬಳ್ಳಾರಿ ಜಿಲ್ಲೆಯಲ್ಲಿ ನಡೆಯುತ್ತಿರುವ ಕಲಾಚಟುವಟಿಕೆ ಮತ್ತು ಕಲಾಸಂಗ್ರಹ, ಕಲಾಪ್ರದರ್ಶನಾಲಯಗಳ ಸ್ವರೂಪದ ಕುರಿತು ಇಲ್ಲಿ ಸ್ಥೂಲವಾಗಿ ಚರ್ಚಿಸಲಾಗಿದೆ.

ಅಧ್ಯಾಯ : ಒಂಭತ್ತು

ಬಳ್ಳಾರಿ ಜಿಲ್ಲೆಯ ಚಿತ್ರಕಲಾಶಿಕ್ಷಣ ಸಂಸ್ಥೆಗಳು ಮತ್ತು ಕಲಾವಿದರು

ಭಾರತದಲ್ಲಿ ಮೊದಲಿಗೆ ಯಾವುದೇ ಕಲಾಶಿಕ್ಷಣ ಪಡೆಯದೇ ಕೇವಲ ಪಾರಂಪರಿಕವಾಗಿ ಬಂದಂತಹ ವೃತ್ತಿಯನ್ನು ಮುಂದುವರೆಸಿಕೊಂಡು ಹೋಗುವ ಪದ್ಧತಿ ಇತ್ತೆ ವಿನಾ ಯಾವುದೇ ಕಲಾಸಂಸ್ಥೆಗಳು ಇರಲಿಲ್ಲ. ಅರಸರು ಹಾಗೂ ತಮ್ಮ ಪರಿವಾರದವರು ಚಿತ್ರಗಳನ್ನು ಕಲಾವಿದರಿಂದ ಬರೆಸಿಕೊಳ್ಳುತ್ತಿದ್ದರು. ನಂತರ ಬ್ರಿಟಿಷರು ಭಾರತಕ್ಕೆ ಬಂದ ನಂತರ ತಮ್ಮ ಅಧೀನಕ್ಕೆ ಭಾರತವನ್ನು ಒಳಪಡಿಸಿಕೊಂಡ ನಂತರ ಕಲಾಪದ್ಧತಿಯಲ್ಲಿ ಬದಲಾವಣೆ ಕಂಡಿತು. ಕಂಪನಿ ಚಿತ್ರಕಲೆಗೆ ನಾಂದಿಯಾಯಿತು.

ಕಂಪನಿ ಸರಕಾರದ ಅಧಿಕಾರಗಳ ಕೇಂದ್ರ ಸ್ಥಾನವಾದ ಕಲ್ಕತ್ತಾ, ಭಾರತದ ಕರಾವಳಿ ತೀರದ ಪ್ರದೇಶಗಳಾದ ವಿಶಾಖಪಟ್ಟಣ, ಮದ್ರಾಸ್, ಮಛಲಿಪಟ್ಟಣ, ಗೋವಾ, ಮುಂಬೈ ಅಲ್ಲದೇ ತಂಜಾವೂರು, ಹೈದ್ರಾಬಾದ್ ಮುಂತಾದ ಸ್ಥಳಗಳು ಕಂಪನಿ ಚಿತ್ರಕಲೆಯ ಕೇಂದ್ರಗಳಾಗಿದ್ದವು. ಇದೇ ವೇಳೆಯಲ್ಲಿ ದಕ್ಷಿಣ ಭಾರತದ ಸಾಂಪ್ರದಾಯಿಕ ಕಲಾವಿದರು ಕಂಪನಿ ಸರಕಾರದ ಭೂ-ಸರ್ವೆ, ಐತಿಹಾಸಿಕ ಸ್ಮಾರಕಗಳ ಸರ್ವೆ ಮುಂತಾದ ಇಲಾಖೆಗಳಲ್ಲಿ ನಕ್ಷಾ ರಚನಕಾರರಾಗಿಯೂ ಸೇವೆಗೆ ಸೇರಿದರು. ಈ ಕಲಾವಿದರು ಐರೋಪ್ಯ ಕಲೆಯ ಹೊಸ ತಂತ್ರಗಳನ್ನು ಮತ್ತು ವಿವಿಧ ಬಗೆಯ ರಾಸಾಯನಿಕ ವರ್ಣಗಳನ್ನು ತಮ್ಮ ಕೃತಿಗಳಲ್ಲಿ ಬಳಸಿಕೊಂಡರು. ಕಂಪನಿ ಸರಕಾರದ ಅಧಿಕಾರಿ ವರ್ಗದ ಅಭಿರುಚಿ ಹಾಗೂ ಐರೋಪ್ಯ ಶೈಲಿಯ ಲಕ್ಷಣಗಳಿಂದ ಕೂಡಿದ ಕಲಾಶೈಲಿಯನ್ನು ನಮ್ಮ ಭಾರತೀಯ ಕಲಾವಿದರು ಮೈಗೂಡಿಸಿಕೊಂಡರು.

[illegible]

[illegible]

[illegible]

[illegible]

ಭಾರತೀಯ ಕಲಾವಿದರು ಐರೋಪ್ಯ ಶೈಲಿಯ ಅವರ ರಚನಾ ಮಾದರಿಯಲ್ಲಿ ಕಲಾಕೃತಿಗಳನ್ನು ರಚಿಸತೊಡಗಿದರು. ಮದ್ರಾಸ್ ೧೮೫೨, ಕಲ್ಕತ್ತಾ ೧೮೫೪, ಮುಂಬೈ ೧೮೫೭ ಮತ್ತು ಲಾಹೋರದಲ್ಲಿ ೧೮೭೮ರಲ್ಲಿ ಬ್ರಿಟಿಷರಿಂದ ಕಲಾಶಾಲೆಗಳು ಪ್ರಾರಂಭವಾದವು. ಇಲ್ಲಿ ತರಬೇತಿ ಪಡೆದ ಕಲಾವಿದರು ತಮ್ಮ ತಮ್ಮ ರಾಜ್ಯಗಳಲ್ಲಿ ಕಲಾಶಾಲೆಗಳನ್ನು ಸ್ಥಾಪಿಸಿ ಪ್ರಾರಂಭಿಕ ಹಂತದಲ್ಲಿ ಐರೋಪ್ಯ ಮಾದರಿಯಲ್ಲೇ ತರಬೇತಿ ನಡೆಯುತ್ತಿದ್ದವು. ಅಂಥವುಗಳಲ್ಲಿ ಕರ್ನಾಟಕವು ಒಂದು. ಈ ಕರ್ನಾಟಕದಲ್ಲಿ ಹಾಲಭಾವಿಯವರು ೧೯೩೫ ಜೂನ್ ೧೧ರಂದು ಆರ್. ಎಲ್. ಎಸ್. ಹೈಸ್ಕೂಲ್‌ನಲ್ಲಿ ಪ್ರಪ್ರಥಮವಾಗಿ ಕಲಾಶಾಲೆ ಸ್ಥಾಪನೆ ಮಾಡಿದರು. ನಂತರ ಒಂದರ ನಂತರ ಮತ್ತೊಂದು ಎಂಬುವ ರೀತಿಯಲ್ಲಿ ರಾಜ್ಯಾದ್ಯಂತ ೧೫೦ ಕಲಾಕಾಲೇಜ್‌ಗಳು ಹುಟ್ಟಿಕೊಂಡವು. ಇಂಥವುಗಳಲ್ಲಿ ನಾಲ್ಕು ಕಲಾಸಂಸ್ಥೆಗಳು ಬಳ್ಳಾರಿ ಜಿಲ್ಲೆಗೆ ಸೇರಿದವುಗಳಾಗಿವೆ. ಈ ಸಂಸ್ಥೆಗಳು ಚಿತ್ರಕಲಾ ಬೆಳವಣಿಗೆಗಾಗಿ ಶ್ರಮವಹಿಸುತ್ತಿವೆ. ಅಂತಹ ಶ್ರಮದಾಯಕ ಸಾಧನೆಯನ್ನು ಮುಂದೆ ಚರ್ಚಿಸಲಾಗಿದೆ.

ಚಿತ್ರಕಲಾ ಸಂಸ್ಥೆಗಳು

ಈ ಜಿಲ್ಲೆಯಲ್ಲಿ ಆರಂಭವಾದ ಚಿತ್ರಕಲಾ ಸಂಸ್ಥೆಗಳು ಅನೇಕ ಚಿತ್ರಗಾರರು, ಚಿತ್ರಕಲಾ ಶಿಕ್ಷಕರಿಗೆ ಶಾಸ್ತ್ರೀಯವಾಗಿ ಕಲಾಶಿಕ್ಷಣ ನೀಡುವಲ್ಲಿ ಯಶಸ್ವಿಯಾಗಿವೆ. ಇಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಸ್ವತಃ ಕಲಾವಿದರಾಗಿದ್ದಾರೆ. ಮತ್ತು ಚಿತ್ರಕಲಾ ಶಿಕ್ಷಕರೂ ಸಹ ಆಗಿದ್ದಾರೆ. ಇಂತಹ ಸಾಧನೆಗೆ ಹೆಸರಾದ ಕಲಾಸಂಸ್ಥೆಗಳು ಈ ಕೆಳಗಿನಂತಿವೆ:

೧. ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗ

೨. ಭವಾನಿ ಲಲಿತಕಲಾ ಮಹಾವಿದ್ಯಾಲಯ, ಬಳ್ಳಾರಿ

೩. ಹಂಪಿ ಲಲಿತಕಲಾ ಮಹಾವಿದ್ಯಾಲಯ, ಹೊಸಪೇಟೆ

೪. ಭುವನೇಶ್ವರಿ ಲಲಿತಕಲಾ ಮಹಾವಿದ್ಯಾಲಯ, ಹೂವಿನ ಹಡಗಲಿ

೧. ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗ

೧೯೯೩ರಲ್ಲಿ ಕನ್ನಡ ವಿಶ್ವವಿದ್ಯಾಲಯ, ಲಲಿತಕಲಾ ನಿಕಾಯದಲ್ಲಿ ಈ ದೃಶ್ಯಕಲಾ ವಿಭಾಗವು ಚಿತ್ರಕಲಾ ಪರಂಪರೆಯ ಆಧುನಿಕದ ಹಂತದಲ್ಲಿ ತರಬೇತಿ ನೀಡುವ ಚಿತ್ರಕಲಾ ಸಂಸ್ಥೆ ಇದಾಗಿದೆ. ಕನ್ನಡ ಸಂಸ್ಕೃತಿ ಮತ್ತು ಪರಂಪರೆಯ ಸಂರಕ್ಷಣೆಯ ಉದ್ದೇಶಕ್ಕಾಗಿ ಹುಟ್ಟಿಕೊಂಡ ಕನ್ನಡ ವಿಶ್ವವಿದ್ಯಾಲಯದಲ್ಲಿ ಲಲಿತಕಲಾ ಅಧ್ಯಯನಕ್ಕೆ ವಿಶೇಷ ಸ್ಥಾನಮಾನವನ್ನು ನೀಡಲಾಗಿದೆ. ಅದರಲ್ಲೂ ಚಿತ್ರಕಲೆ ಕ್ಷೇತ್ರದಲ್ಲಿ ಕರ್ನಾಟಕದ ಯಾವ ವಿಶ್ವವಿದ್ಯಾಲಯ ಸಾಧಿಸದ ಸಾಧನೆಯನ್ನು ಈ ವಿಭಾಗ ಸಾಧಿಸಿದೆ. ವಿಶೇಷವಾಗಿ ದೃಶ್ಯಕಲೆಯ ಕುರಿತು ಸಂಶೋಧನ ಅಧ್ಯಯನಗಳು ಇತ್ತೀಚಿನ ದಶಕದಲ್ಲಿ ಯಾವ ವಿಶ್ವವಿದ್ಯಾಲಯಗಳಲ್ಲಿಯೂ ನಡೆಯದೇ ಇರುವಷ್ಟು ಗಮನಾರ್ಹವಾದ

[illegible]

ಅಧ್ಯಯನಗಳು ಈ ವಿಭಾಗದಲ್ಲಿ ನಡೆಯುತ್ತಲಿರುವುದು ಒಂದು ಕ್ರಾಂತಿಕಾರಕವಾದ ಬದಲಾವಣೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಕನ್ನಡ ವಿಶ್ವವಿದ್ಯಾಲಯದ ಪ್ರಾಥಮಿಕ ಉದ್ದೇಶ ಧ್ಯೇಯಗಳೆಂದರೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಕನ್ನಡ ನಾಡಿನ ನುಡಿ ಸಂಸ್ಕೃತಿಯನ್ನು ಉಳಿಸಿಕೊಳ್ಳುವುದು, ಹಾಗೆಯೇ ಬೆಳೆಸುವುದೂ ಆಗಿದೆ. ಆದಕಾರಣ ಇದೊಂದು ಸಾಂಸ್ಕೃತಿಕ ಅಧ್ಯಯನ ಕೇಂದ್ರವಾಗಿದೆ. ಇಲ್ಲಿ ಎರಡು ವರ್ಷಗಳ ಸ್ನಾತಕೋತ್ತರ ದೃಶ್ಯಕಲಾ ಪದವಿ ಮತ್ತು ಪಿಹೆಚ್.ಡಿ., ಎಂ.ಫಿಲ್, ಡಿ.ಲಿಟ್ ಅಧ್ಯಯನಗಳು ನಡೆಯುತ್ತಿವೆ.

ದೃಶ್ಯಕಲಾ ವಿಭಾಗದ ಕಲಾಚಟುವಟಿಕೆಗಳು

ಈ ವಿಭಾಗದಲ್ಲಿ ಸ್ನಾತಕೋತ್ತರ ಪದವಿಯಿಂದ ಪಿಹೆಚ್.ಡಿವರೆಗೆ ಪ್ರವೇಶ ಪಡೆದು ಪದವಿ ಗಳಿಸಬಹುದು. ಈ ಸ್ನಾತಕೋತ್ತರ ಪದವಿಗೆ ಪ್ರವೇಶ ಪಡೆಯಲು ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪದವಿಯಲ್ಲಿ ವಾಣಿಜ್ಯಕಲೆ, ಸೃಜನಾಕಲೆ, ಭಾವಚಿತ್ರ ವಿಷಯದೊಂದಿಗೆ ಎರಡು, ಕಲಾಇತಿಹಾಸಕ್ಕೆ ಸಂಬಂಧಿಸಿದ ವಿಷಯಗಳು ಕಡ್ಡಾಯವಾಗಿರುತ್ತವೆ. ಒಂದು ನಿಯಮಾವಳಿ ಮೂಲಕವೇ ಕಲಾಪಠ್ಯಕ್ಕೆ ಸಂಬಂಧಿಸಿದಂತೆ ಹಲವು ಕಲಾಕೃತಿಗಳ ನಿರ್ಮಾಣ ಮಾಡಲಾಗಿದೆ. ಈ ಪಠ್ಯಕ್ಕೆ ಸಂಬಂಧಿಸಿದಂತೆ ಕೆ. ಆರ್. ರಾಮಚಂದ್ರನ್, ವಿ.ಟಿ. ಕಾಳೆ, ಚಂದ್ರಶೇಖರ್, ಚೆಟ್ಟಿ, ವಿಜಯಸಿಂಧೂರ, ಟಿ.ಪಿ. ಅಕ್ಕಿ, ಹಿರೇಗೌಡರ್, ಬಂದಗದ್ದೆ ರಾಧಾಕೃಷ್ಣ, ಜೆ.ಎಂ.ಎಸ್. ಮಣಿ ಮುಂತಾದವರ ಪ್ರಾತ್ಯಕ್ಷಿಕೆಗಳು ಕಲಿಕೆಗೆ ಮತ್ತಷ್ಟು ಪುಷ್ಠಿದಾಯಕವಾದ ಪೂರಕ ಚಟುವಟಿಕೆಯಾಗಿವೆ.

ಹಾಗೆ ಕಲಾಇತಿಹಾಸಕ್ಕೆ ಸಂಬಂಧಿಸಿದಂತೆ ಇಲ್ಲಿಯ ಅಧ್ಯಾಪಕರ ಉಪನ್ಯಾಸದೊಂದಿಗೆ ವಿದ್ಯಾರ್ಥಿಗಳಿಗೆ ಮತ್ತಷ್ಟು ಪ್ರಭಾವಿತವಾದ ಕಲಿಕೆಗೆ ಕೃಷ್ಣಶೆಟ್ಟಿ, ಕೆ.ವಿ. ಸುಬ್ರಮ್ಹಣ್ಯಂ, ಆರ್. ಎಚ್. ಕುಲಕರ್ಣಿಯವರಂತಹ ತಜ್ಞರಿಂದ ವಿಶೇಷ ಉಪನ್ಯಾಸ ನಡೆಸಲಾಗುತ್ತದೆ. ಇವುಗಳಲ್ಲದೇ ಕಲಾಶಿಬಿರ, ವಿಚಾರ ಸಂಕಿರಣ, ಪ್ರದರ್ಶನಗಳನ್ನು ತರಗತಿಯಲ್ಲಿಯೂ ಮತ್ತು ವಿಭಾಗ ಅಥವಾ ವಿಶ್ವವಿದ್ಯಾಲಯ ಆವರಣದಲ್ಲಿ ನಡೆಸಲಾಗುತ್ತದೆ.

ಈ ಕಲಾಶಿಬಿರ, ವಿಚಾರ ಸಂಕಿರಣ, ಕಲಾಪ್ರದರ್ಶನಗಳು ವಿಶ್ವವಿದ್ಯಾಲಯ, ವಿಭಾಗದಲ್ಲಷ್ಟೇ ಸೀಮಿತವಾಗಿರದೇ ಬೆಂಗಳೂರು, ಇಳಕಲ್, ಹಂಪಿ, ಧಾರವಾಡ, ಕೇರಳ, ದೆಹಲಿ, ಬಾಂಬೆ, ಕುಪ್ಪಂ ಮುಂತಾದ ರಾಜ್ಯ-ರಾಷ್ಟ್ರ ಮಟ್ಟದಲ್ಲಿಯೂ ಕಲಾಪ್ರದರ್ಶನ ನಡೆಸುವಷ್ಟು ಪ್ರಬುದ್ಧ ಕಲಾಕಾರರಾಗಿದ್ದಾರೆ. ಇಲ್ಲಿ ಸ್ನಾತಕೋತ್ತರ ಪದವಿಯ ಮೊದಲ ಸೆಮಿಸ್ಟರ್‌ನಲ್ಲಿ ಸೃಜನಾತ್ಮಕ ರೇಖಾಚಿತ್ರಗಳೊಂದಿಗೆ ಪ್ರಾರಂಭವಾಗಿ ಕೊನೆಯ ಸೆಮಿಸ್ಟರ್ ವಿದ್ಯಾರ್ಥಿ ವರ್ಣರಂಜಿತವಾದ ಸರಣಿಚಿತ್ರಕಲಾಕೃತಿಗಳನ್ನು ಮಾಡುವ ಹಂತಕ್ಕೆ ವಿದ್ಯಾರ್ಥಿಯು ಬೆಳೆಯುತ್ತಾನೆ. ಅಂತಹ ಉದಾಹರಣೆಗಳಾದ ಹಡಗಿನ ಸರಣಿಚಿತ್ರ, ಒಂದು ಬಾಲಕನ ಹಲವು ಚಟುವಟಿಕೆ, ಮೀನು

[illegible]

[illegible]

[illegible]

[illegible]

[illegible]

[illegible]

ಕುರಿತು ಹಲವು ಬಣ್ಣ ಬಣ್ಣದಿಂದ ಕೂಡಿದ ವಿವಿಧ ಹಂತದ ಕಲಾಕೃತಿಗಳು, ಗಾಳಿಪಟಗಳಂಥ ಹಲವು ಸರಣಿ ಚಿತ್ರಗಳು, ಒಂದು ದಾರ ಅಥವಾ ಹಗ್ಗದ ಒಂದು ರಟ್ಟರವೆಯ ಮೇಲೆ ಅರವನ ಹಲವು ಸರಣಿ ಕಲಾಕೃತಿ ಮತ್ತು 'ತೈಬ್ ಮೇಹ್ತಾ'ನ್ ಕಲಾಕೃತಿಗೆ ಹೋಲುವಂಥ ಹಲವು ಕಲಾಕೃತಿ ಮತ್ತು ಮುಂತಾದ ಸರಣಿ ಕಲಾಕೃತಿಗಳು ಇಲ್ಲಿ ಕಂಡುಬರುತ್ತವೆ. ಇವುಗಳಲ್ಲದೆ ಪಠ್ಯೇತರ ಕಲಾಚಟುವಟಿಕೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಇಲ್ಲಿ ಕಂಡುಬರುತ್ತವೆ.

ಪಠ್ಯೇತರ ಕಲಾಚಟುವಟಿಕೆಯಲ್ಲಿ ಮುಖ್ಯವಾಗಿ 'ಔಟ್‌ಡೋರ್' ರೇಖಾಚಿತ್ರಗಳು ಪಠ್ಯಕಲೆಗೆ ಅನುಕೂಲಕರವಾಗುತ್ತವೆ. ಪರಿಸರ, ನಿಂತ, ಕುಳಿತ ಮನುಷ್ಯ ಭಂಗಿಗಳು, ಪ್ರಾಣಿ-ಪಕ್ಷಿಗಳು, ಮರ-ಬಳ್ಳಿಗಳು, ಎಲೆ-ಹೂಗಳು ಮುಂತಾದವುಗಳನ್ನು ವಿದ್ಯಾರ್ಥಿಯು ಪ್ರತಿದಿನ ಮಾಡಬೇಕಾಗುತ್ತದೆ. ಇಂತಹ ಹಲವು ಚಟುವಟಿಕೆಗಳಿಗೆ ಇಲ್ಲಿ ವಿದ್ಯಾರ್ಥಿಗಳು ರೇಖಾಪುಸ್ತಕ ಪ್ರತಿದಿನ ಜೊತೆಯಲ್ಲಿ ಇಟ್ಟುಕೊಂಡಿರುತ್ತಾರೆ. ಇದೇ ರೀತಿಯಲ್ಲಿ ಭೂ-ಮಿತಿಚಿತ್ರಣದ ವಿಷಯವು ಐಚ್ಛಿಕವಿಲ್ಲದಿದ್ದರೂ ಸೃಜನಶೀಲ ಚಿತ್ರಕಲೆಯಾದ ಐಚ್ಛಿಕ ವಿಷಯಕ್ಕೆ ಅನುಕೂಲವಾಗುವಂಥ ವಿಷಯವಾಗಿದೆ. ಈ ಕಲೆಯನ್ನು ವಿಶ್ವವಿದ್ಯಾಲಯ ಕೆಲವು ಸ್ಥಳಗಳನ್ನು ಆಯ್ದುಕೊಂಡು ಭೂ-ಮಿತಿಗೆ ಅನುಕೂಲವಾಗುವ ರೀತಿಯಲ್ಲಿ ಚಿತ್ರಿಸಲಾಗುತ್ತದೆ. ಇಷ್ಟೇ ಅಲ್ಲದೇ ಹಂಪಿಯಂತಹ ಐತಿಹಾಸ ಸ್ಮಾರಕಗಳನ್ನು ಸಹ ಚಿತ್ರಿಸಲಾಗುತ್ತದೆ.

ಹೀಗೆ ಪಠ್ಯಕ್ಕೆ ಅನುಕೂಲವಾಗುವ ಕಲಾಚಟುವಟಿಕೆ ಈ ಭಾಗದಲ್ಲಿ ನಡೆಯುತ್ತದೆ. ಮತ್ತು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನುಡಿಹಬ್ಬ, ಕರ್ನಾಟಕ ರಾಜ್ಯೋತ್ಸವ ಮುಂತಾದ ಕಾರ್ಯಕ್ರಮದಲ್ಲಿ ರಂಗೋಲಿ, ೧೦೦ ಮೀಟರ್ ಬ್ಯಾನರ್ ಚಿತ್ರಕಲೆಯನ್ನು ಕುರಿತಂತೆ ಹಲವು ವೀರಯೋಧರ ಮತ್ತು ಸ್ಮಾರಕಗಳನ್ನು ಕಟ್ಟರಿವೆ (ಬ್ಯಾನರ್) ಮೇಲೆ ಮೂಡಿಸುವುದರೊಂದಿಗೆ ಕಲಾವಿದ್ಯಾರ್ಥಿಗಳು, ಅಧ್ಯಾಪಕರು ತಮ್ಮ ಕಲೆಯನ್ನು ಪ್ರದರ್ಶಿಸುವುದರೊಂದಿಗೆ ಹಬ್ಬ, ಉತ್ಸವಗಳನ್ನು ಆಚರಿಸುತ್ತಾರೆ. ಇಷ್ಟಲ್ಲದೇ ಬಾದಾಮಿಯ ಬನಶಂಕರಿಯಲ್ಲಿಯ ವಿದ್ಯಾರ್ಥಿಗಳು ಇಲ್ಲಿ ಸಂಭ್ರಮದಲ್ಲಿ ಪಾಲ್ಗೊಳ್ಳುತ್ತಾರೆ. ಈ ಬನಶಂಕರಿ ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗವು ಈ ವಿಶ್ವವಿದ್ಯಾಲಯದ ಅಂಗವಾಗಿದ್ದು, ಇಲ್ಲಿಯೂ ಹಲವು ಕಲಾಚಟುವಟಿಕೆಗಳು ನಡೆದದ್ದು ಕಂಡುಬರುತ್ತವೆ. ಪ್ರಸ್ತುತವಾಗಿ ಇಲ್ಲಿ ಮೂರು ಜನ ಅಧ್ಯಾಪಕರು ಸೇವೆಯನ್ನು ಸಲ್ಲಿಸುತ್ತಿದ್ದಾರೆ.

೧. ಡಾ. ಎಸ್. ಸಿ. ಪಾಟೀಲ

೨. ಡಾ. ಶಿವಾನಂದ ಹೆಚ್. ಬಂಟನೂರು

೩. ಡಾ. ಮೋಹನರಾವ್ ಬಿ. ಪಂಚಾಳ

೧. ಡಾ. ಎಸ್. ಸಿ. ಪಾಟೀಲ

ದೃಶ್ಯಕಲಾ ವಿಭಾಗದ ಮುಖ್ಯಸ್ಥರು ಮತ್ತು ಲಲಿತಕಲಾ ನಿಕಾಯದ ಡೀನ್‌ರಾಗಿ.

ಮಾರ್ಗದರ್ಶಕರಾಗಿ ಮತ್ತು ಅಧ್ಯಾಪಕರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ದೃಶ್ಯಕಲಾ ವಿಭಾಗದ ಕೇಂದ್ರಬಿಂದು ಇವರು ಎಂದರೆ ತಪ್ಪಾಗಲಿಕ್ಕಿಲ್ಲ. ಅಷ್ಟೇ ಅಲ್ಲದೇ ಈ ಕ್ಷೇತ್ರದಲ್ಲಿ ಇವರ ಕೊಡುಗೆ ಶ್ಲಾಘನೀಯವಾದುದ್ದಾಗಿದೆ. ಡಾ. ಪಾಟೀಲರು ಕಲೆ, ಕಲಾಸಾಹಿತ್ಯ, ಸಂಶೋಧನೆಯ ಮೂಲಕ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಕಲಾ ಚರಿತ್ರೆಯಲ್ಲಿ ತಮ್ಮ ಹೆಸರನ್ನು ದಾಖಲಿಸಿಕೊಂಡಿದ್ದಾರೆ. ನಡೆ–ನುಡಿ, ಆಚಾರ–ವಿಚಾರದಲ್ಲಿ ಸಂಪನ್ನರಾದ ಇವರು ನಾಡು ಸಂಸ್ಕೃತಿಯ ಬಗ್ಗೆ ಅಪಾರವಾದ ಕಾಳಜಿ ಹೊಂದಿದ್ದಾರೆ.

ಇವರು ದೃಶ್ಯಭಾಷೆಯ ಮೂಲಕ ಸೃಜನಶೀಲತೆಗೆ ಹೊಸ ಆಯಾಮ ನೀಡಿವರು. ಕಲೆಯ ಕುರಿತು ವಿದ್ಯಾರ್ಥಿಗಳಿಗೆ ಬಿಡುವಿಲ್ಲದೇ ಬೋಧನೆ ಮಾಡುವ ಮನಸ್ಸು, ಸಾಮಾಜಿಕ ಎಡರು–ತೊಡರುಗಳ ನಿವಾರಣೆಯ ಚಿಂತನೆ, ದೀನದಲಿತರ ಬಗೆಗೆ ಅಪಾರವಾದ ಕಾಳಜಿ, ಕಕ್ಕುಲತೆಯನ್ನು ಹೊಂದಿದ್ದಾರೆ. ಕಲೆಯ ತಾತ್ವಿಕತೆಯ ಅಂಶಗಳನ್ನು ಕಲಾ ವಿಮರ್ಶಕರಾಗಿ ವಿವಿಧ ಬರಹಗಳ ಮೂಲಕ ಅಭಿವ್ಯಕ್ತಿಸಿದ್ದಾರೆ. ಹೀಗೆ ಕಲಾ ಸಂಸ್ಕೃತಿಗೆ ಜೀವ ತುಂಬಲು ನಡೆಸಿರುವ ಇವರ ಪ್ರಯತ್ನ ಉಳಿದವರಿಗೆ ಮಾದರಿ ಹಾಗೂ ದಾರಿದೀಪವೂ ಹೌದು.

ಮೂಲತಃ ಹೈದ್ರಾಬಾದ್–ಕರ್ನಾಟಕದ ಗುಲಬರ್ಗಾ ಜಿಲ್ಲೆ, ಜೇವರ್ಗಿ ತಾಲೂಕಿನ ಚಿಕ್ಕಗ್ರಾಮ ಮಾಣಶಿವಣಗಿ ಊರಿನವರು. ಇವರ ಪೂರ್ಣ ಹೆಸರು "ಶರಣಗೌಡ ಚಂದಪ್ಪಗೌಡ ಪಾಟೀಲ". ಆದರೆ ಇವರು ಡಾ. ಎಸ್. ಸಿ. ಪಾಟೀಲ ಎಂದೇ ಪ್ರಸಿದ್ದರಾಗಿದ್ದಾರೆ. ಜುಲೈ ೨೩ ೧೯೫೩ರಲ್ಲಿ ಬಿಸಿಲು ನಾಡು ಎಂದೇ ಪ್ರಸಿದ್ಧಿಪಡೆದ ಜಿಲ್ಲೆಯಲ್ಲಿ ಹುಟ್ಟಿ ಇಂದು ಕರ್ನಾಟಕವಲ್ಲದೇ ದೇಶ–ವಿದೇಶಗಳಲ್ಲಿ ಸಹ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದಾರೆ. ಇದು ನಿಜಕ್ಕೂ ಹೆತ್ತವರಿಗೆ ಮತ್ತು ನಾಡಿಗೆ, ರಾಷ್ಟ್ರಕ್ಕೆ ಹೆಮ್ಮೆಯ ಸಂಗತಿಯಾಗಿದೆ. ಡಾ. ಎಸ್. ಸಿ. ಪಾಟೀಲರ ಅಭಿವ್ಯಕ್ತಿಯನ್ನು ಮೂರು ರೀತಿಯಲ್ಲಿ ಗುರುತಿಸಬಹುದಾಗಿದೆ.

೦೧. ಚಿತ್ರಕಲಾವಿದ, ಪ್ರಾಧ್ಯಾಪಕ

೦೨. ದೃಶ್ಯಕಲಾ ಗ್ರಂಥಕರ್ತ

೦೩. ದೃಶ್ಯಕಲಾ ಸಂಶೋಧಕ ಮತ್ತು ಕಲಾವಿಮರ್ಶಕ

ಚಿತ್ರಕಲಾವಿದ, ಪ್ರಾಧ್ಯಾಪಕ : ಡಾ. ಎಸ್. ಸಿ. ಪಾಟೀಲರು ಚಿತ್ರಕಲಾವಿದರಾಗಿ ಆಧುನಿಕ ಸಮಕಾಲೀನ ಚಿತ್ರಕಲೆಯ ಕುರಿತು ಕಲಾಕೃತಿಗಳನ್ನು ರಚಿಸಿದ್ದಾರೆ. ಇವು ಬಿಕ್ಕಟ್ಟಿನ ಭಾವನೆಯ ಒತ್ತಡದಿಂದ ರಚನೆಗೊಂಡವುಗಳಲ್ಲ ತಮ್ಮ ಅರಿವಿನ ಛಾಯೆಯು ಆವಿಷ್ಕಾರವಾದಾಗ ತನ್ನೊಳಗಿನ ಭಾವನೆಗಳು ಪ್ರೀತಿಯಿಂದ ಸಹಕರಿಸಿದಾಗ ಮಾತ್ರ ಕುಂಚ ಬಣ್ಣದೊಳಗೆ ತೇಲಾಡಿದೆ. ಸರಳ ಕೃತಿಗಳೆಂದು ಗ್ರಹಿಸಿದರು ಕೃತಿ ರಚನೆಯ ವಿಧಾನ ಸೃಜನಶೀಲತೆಯಿಂದ ಕೂಡಿರುತ್ತದೆ. ವಿದ್ವತ್ತಿನ ವಿಚಾರಗಳು ಕಲಾಜಗತ್ತಿನ ಒಳಹರಿವು, ಸಾಮಾಜಿಕ ಕೊಡುಗೆಗೆ ಕೃತಿಗಳು ಪಾತ್ರವಾದ ವಿಶೇಷತೆ

ಡಾ. ಎಸ್. ಸಿ. ಪಾಟೀಲರ ಕೃತಿಗಳಲ್ಲಿ ಗುರುತಿಸಬಹುದು. ಕಲಾಕೃತಿ ನೋಡುಗನಿಗೆ ಹುಡುಕಾಟದ ಕಿರಿ–ಕಿರಿಕೊಟ್ಟರು ಅಂತಿಮ ಪ್ರತಿಕ್ರಿಯೆ ಮೌಲ್ಯಯುತ ಸಂದೇಶವನ್ನೇ ನೀಡುತ್ತವೆ. ಬಣ್ಣಗಳ ಸಂಯೋಜನೆ ರಸತುಂಬಿದ ಕ್ಷಣ. ಬಣ್ಣ ಬಳಿಯುವ ವಿಧಾನ ವೈವಿಧ್ಯತೆ ಸೃಜನಶೀಲತೆಯ ಹುಡುಕಾಟದ ಅನ್ವೇಷಣೆಯೂ ಹೌದು. ಕಲಾಕೃತಿ ರಚನೆಯ ಜೊತೆಗೆ ನಾಡಿನ ಪ್ರಮುಖ ಕಲಾಗ್ಯಾಲರಿಗಳಲ್ಲಿ ಇವರು ತಮ್ಮ ಕಲಾಕೃತಿಗಳನ್ನು ಪ್ರದರ್ಶನ ಮಾಡಿದ್ದಾರೆ. ಅನೇಕ ರಾಷ್ಟ್ರೀಯ ಕಲಾಶಿಬಿರಗಳಲ್ಲಿ ತಮ್ಮ ವಿಚಾರಗಳನ್ನು ಮಂಡಿಸಿ ಕಲಾಕ್ಷೇತ್ರಕ್ಕೆ ಕಲಾವಿದ್ಯಾರ್ಥಿಗಳಿಗೆ ತಮ್ಮ ವಿದ್ವತ್ತನ್ನು ದಾರೆಯರೆದಿದ್ದಾರೆ.

ದೆಹಲಿ, ಲಖ್ನೋ, ಚೆನ್ನೈ, ಹೈದ್ರಾಬಾದ್, ಅನಂತಪುರ, ಗೋವಾ, ಬಿಹಾರ, ಚಂಡೀಗಡ, ಕುಪ್ಪಂ, ಬೆಂಗಳೂರು, ತುಮಕೂರು, ಕಾಸರಗೂಡು, ಹಂಪಿ, ಬಾದಾಮಿ, ಬಾಗಲಕೋಟೆ, ಇಲಕಲ್ಲ, ಬಿಜಾಪೂರ, ರಾಜಸ್ಥಾನ, ಮೌಂಟ್‌ಅಬು, ಧಾರವಾಡ, ಕಾಸರಗೂಡು, ತಮಿಳುನಾಡು, ಆಂಧ್ರ, ಕಲ್ಕತ್ತ ಇಂಡೋನೇಷಿಯಾ, ಟರ್ಕಿ ಹೀಗೆ ಹಲವಾರು ಕಡೆಗೆ ಚಿತ್ರಕಲಾ ಪ್ರದರ್ಶನ ಮಾಡಿ ಮೆಚ್ಚುಗೆ ಪಡೆದಿದ್ದಾರೆ. ಭಾರತದುದ್ದಕ್ಕೂ ಕಲೆಯ ಕುರಿತಾಗಿ ಅಧ್ಯಯನ ಪ್ರವಾಸಗೈದಿದ್ದಾರೆ. ರಾಷ್ಟ್ರೀಯ ಅಂತರಾಷ್ಟ್ರೀಯ ಮಟ್ಟದ ವಿಚಾರಸಂಕಿರಣ ಕಮ್ಮಟಗಳಲ್ಲಿ ಭಾಗವಹಿಸಿದ್ದಾರೆ. ನೇಪಾಳ, ಚೀನಾ ಮುಂತಾದ ದೇಶಗಳನ್ನು ಸುತ್ತಾಡಿ ಬಂದಿದ್ದಾರೆ. ಇವುಗಳ ಪ್ರಭಾವ ಅವರ ಕಲಾಕೃತಿಗಳ ಮೇಲಾಗಿರುವುದು ಸೂಕ್ಷ್ಮವಾಗಿ ಅಧ್ಯಯನ ಮಾಡಿದಾಗ ತಿಳಿದುಬರುತ್ತದೆ.

ಕಲಾ ಶೈಲಿ ಮತ್ತು ತಂತ್ರಗಾರಿಕೆ : ಡಾ. ಪಾಟೀಲರು ಹಲವಾರು ಕೆಲಸಗಳ ಒತ್ತಡದ ಮಧ್ಯದಲ್ಲಿಯೂ ಚಿತ್ರಕಲಾಕೃತಿಗಳ ರಚನೆಯ ಕಾರ್ಯವನ್ನು ನಿರಂತರವಾಗಿ ಮುಂದುವರೆಸಿಕೊಂಡು ಬಂದಿದ್ದಾರೆ. ತಮಗೆ ಅನುಕೂಲಕರವಾದ ತಂತ್ರ ಮತ್ತು ವಿಧಾನವನ್ನು ತಾವೆ ಕಂಡುಕೊಂಡು ಕ್ಯಾನ್ವಾಸಿನ ಮೇಲೆ ಅಭಿವ್ಯಕ್ತಿ ಮಾಡುತ್ತಿದ್ದಾರೆ. ಕಲಾವಿದ ಡಾ. ಮೋಹನ್‌ರಾವ್ ಬಿ. ಪಂಚಾಳರು ಹೇಳುವಂತೆ ಡಾ. ಎಸ್. ಸಿ. ಪಾಟೀಲರು ತಮ್ಮದೇ ಆದ ವಿಶಿಷ್ಟ ಮತ್ತು ವಿಭಿನ್ನವಾದ ಶೈಲಿಯ ಮೂಲಕ ನಾಡಿನಾದ್ಯಂತ ಗುರುತಿಸಿಕೊಂಡಿದ್ದಾರೆ.

ವಿಶಾಲವಾದ ಕ್ಯಾನ್ವಾಸಿನ ಮೇಲೆ ವರ್ಣ ರಂಜಿತವಾದ ವೈವಿಧ್ಯಮಯವಾದ ವರ್ಣಸಂಯೋಜನೆಯನ್ನು ಮಾಡುವುದರ ಮೂಲಕ ಸೃಜನಾತ್ಮಕ ವಸ್ತುವಿಷಯಗಳ ಹುಡುಕಾಟದಲ್ಲಿ ಪಾಟೀಲರು ತಮ್ಮನ್ನು ಅರ್ಪಿಸಿಕೊಳ್ಳುತ್ತಾರೆ. ಸಂಶೋಧನಾ ಪ್ರಜ್ಞೆ ಇಲ್ಲಿಯೂ ಅನ್ವೇಷಣೆಗೈಯುತ್ತಿರುವುದು ಗಮನಾರ್ಹ. ಕಲಾಕೃತಿ ರಚನೆಯ ಮುನ್ನ ಯಾವುದೇ ವಸ್ತುವಿಷಯದ ಕುರಿತು ಆಲೋಚಿಸದೇ ಕೆಲವು ಸಲ ಕಲಾಕೃತಿ ರಚನೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಆದರೆ ಅನಿರೀಕ್ಷಿತವಾಗಿ ಕಂಡುಬರುವ ಆಕಾರ, ರೂಪಗಳನ್ನು ತಮ್ಮ ಸೃಜನಾತ್ಮಕ ಸಂವೇದನಾ ಶಕ್ತಿಯಿಂದ ಕಲಾಕೃತಿ ರಚನೆಗೆ ಕ್ಯಾನ್ವಾಸಿನ ಮೇಲೆ ವಿನ್ಯಾಸಗೊಳಿಸಿ ಹಿಡಿದಿಡುತ್ತಾರೆ. ನಾನು ಕಲಾಕೃತಿ

[illegible]

[illegible]

[illegible]

[illegible]

[illegible]

ರಚಿಸುವುದಿಲ್ಲ, ಅ ಕಲಾಕೃತಿಯೇ ನನ್ನನ್ನು ತೊಡಗಿಸಿಕೊಳ್ಳುವಂತೆ ಮಾಡುತ್ತದೆ. ಆಯಾ ಆಕಾರಕ್ಕೆ ಪೂರಕವಾದ ಭಾಗಗಳನ್ನು ಕುಂಚಗಳಿಂದ ಅಲ್ಪ ಸ್ವಲ್ಪ ಸರಿಪಡಿಸಿಕೊಂಡು ಕಲಾಕೃತಿ ರಚಿಸುವುದೇ ಇವರ ವೈಶಿಷ್ಟ್ಯತೆ ಎಂಬ ವಿಚಾರಗಳು ಹೆಚ್ಚು ಅರ್ಥಪೂರ್ಣವಾಗಿವೆ.

ಹಲವಾರು ಕಲಾವಿದರು ತಮ್ಮ ಕಲಾಕೃತಿ ರಚನೆಗೆ ಬಣ್ಣಗಳನ್ನು ಖರೀದಿಸಲು ಹಣವಿಲ್ಲದೇ ಪೇಚಾಡುತ್ತಿರುತ್ತಾರೆ. ಆದರೆ ಎಲ್ಲಾ ಸೌಕರ್ಯಗಳಿದ್ದರೂ ಎನಾಮೆಲ್ ಪೇಂಟ್ ಮತ್ತು ಸ್ಟೈನರ್‌ಗಳನ್ನು ಬಳಸಿಕೊಂಡು ವಿಶಾಲವಾದ ಕ್ಯಾನ್ವಾಸಿನ ಮೇಲೆ ಸೃಜನಶೀಲವಾದ ಕಲಾಕೃತಿಗಳನ್ನು ರಚಿಸಬಹುದು ಹಾಗೂ ಮಾಧ್ಯಮಕಿಂತಲೂ ಆಸಕ್ತಿ ಬಹುಮುಖ್ಯ ಎಂದು ಡಾ. ಎಸ್. ಸಿ. ಪಾಟೀಲರು ತೋರಿಸಿಕೊಟ್ಟಿದ್ದಾರೆ. ಚಿತ್ರಕಲೆ, ಸಂಶೋಧನೆ ಅಷ್ಟೇ ಅಲ್ಲದೇ ಕನ್ನಡ ಸಾಹಿತ್ಯ, ಇತಿಹಾಸ, ಜಾನಪದ, ಶಿಕ್ಷಣ, ಶಿಲ್ಪಕಲೆ ಹೀಗೆ ಹತ್ತು ಹಲವು ಅನ್ಯಜ್ಞಾನಗಳ ಶಿಸ್ತನ್ನು ಅರಿತವರು. ಅವರ ಶೈಕ್ಷಣಿಕ ವಿದ್ಯಾರ್ಹತೆ ಎಂ.ಎ ಕನ್ನಡ ಎಂ.ಈಡಿ, ಎಂ.ವಿ.ಎ. ಜಿ.ಡಿ. ಆರ್ಟ್ ಇನ್ ಪೇಂಟಿಂಗ್ ಜಿ.ಡಿ ಆರ್ಟ್ ಇನ್ ಮಾಡಲಿಂಗ್(ಶಿಲ್ಪಕಲೆ), ಶಾಸನಶಾಸ್ತ್ರದಲ್ಲಿ ಡಿಪ್ಲೊಮಾ ಪದವಿಗಳು ಅಲ್ಲದೇ ಎರಡು ಪಿಹೆಚ್.ಡಿ ಪದಗಳನ್ನು ಸಹ ಪಡೆದಿದ್ದಾರೆ.

ಮೊದಲನೆಯದು ೧೯೯೧ರಲ್ಲಿ 'ಕರ್ನಾಟಕದ ಜನಪದ ಚಿತ್ರಕಲೆ' ಮತ್ತು ಎರಡನೆಯದು ೨೦೦೦ರಲ್ಲಿ 'ಎ ಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ್ ಎಜ್ಯುಕೇಶನ್ ಅಟ್ ಸ್ಕೂಲ್ ಲೆವೆಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೆಶಲ್ ರೆಫರನ್ಸ್ ಟು ಡ್ರಾಯಿಂಗ್ ಅಂಡ್ ಪೇಂಟಿಂಗ್. ದೃಶ್ಯಕಲಾ ಕ್ಷೇತ್ರದಲ್ಲಿ ದಕ್ಷಿಣ ಭಾರತದಲ್ಲಿಯೇ ಚಿತ್ರಕಲೆಯ ಕುರಿತು ಹೀಗೆ ಎರಡು ಪಿಹೆಚ್.ಡಿ ಪಡೆದ ಅಗ್ಗಳಿಕೆಗೆ ಪಾತ್ರರಾಗಿದ್ದಾರೆ.

ದೃಶ್ಯಕಲಾ ಗ್ರಂಥಕರ್ತ : ಡಾ. ಎಸ್.ಸಿ. ಪಾಟೀಲರು ದೃಶ್ಯಕಲಾ ಕ್ಷೇತ್ರದ ಬೆಳವಣಿಗೆಗೆ ತಮ್ಮನ್ನು ಅರ್ಪಿಸಿಕೊಂಡು ಏಕಾಂಗಿಯಾಗಿ ಹೋರಾಡುತ್ತಿದ್ದಾರೆ. ಈ ಹೋರಾಟದ ಫಲವಾಗಿಯೇ ರಾಜ್ಯದಲ್ಲಿ ಲಲಿತಕಲಾ ವಿಶ್ವವಿದ್ಯಾಲಯ ಸ್ಥಾಪನೆಯಾಗುತ್ತಿದೆ. ದೃಶ್ಯಕಲೆ, ಜನಪದ ಕಲೆಗಳಿಗೆ ಸಂಬಂಧಿಸಿದ ೩೦ಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದಾರೆ. ಕರ್ನಾಟಕದ ಜನಪದ ಚಿತ್ರಕಲೆ, ಬಾರೋಕ್‌ಕಲೆ (ಚಿತ್ರ, ಶಿಲ್ಪ ವಾಸ್ತುಕಲೆಗಳು), ಹಚ್ಚೆ ಚಿತ್ರಕಲೆ, ರಂಗೋಲಿ ಚಿತ್ರಕಲೆ, ಆಚರಣೆಯಲ್ಲಿ ಜನಪದ ವಾಸ್ತುಶಿಲ್ಪಗಳು, ನಿಜದ ನೆಲೆ (ಸಂಪಾದನೆ), ಶಿಕ್ಷಣ ಸಂಪದ (ಸಂಪಾದನೆ), ಕಲಾವಿದ ಎಲ್. ಶಿವಲಿಂಗಪ್ಪ, ಕಲಾವಿದ ವಿ.ಟಿ. ಕಾಳೆ, ಚಿತ್ರಾಕ್ಷಿ, ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ದೃಶ್ಯ ಸಂಚಲನ, ಜನಪದ ಕಲೆ, ಹಂಡೆ ಅರಸು ಮನೆತನದ ವಂಶಾವಳಿ ಮೊದಲಾದವುಗಳು. ಬುಜರಕಂಚನಹಳ್ಳಿಯ ಭಿತ್ತಿಚಿತ್ರಕಲೆ, ಚಿತ್ರಕಲಾ ಗ್ರಂಥಸೂಚಿ, ಹಸೆ ಚಿತ್ರಕಲೆ ಆಶಯ ಮತ್ತು ಅಭಿವ್ಯಕ್ತಿ, ದೃಶ್ಯಕಲಾ ಪಾರಿಭಾಷಿಕ ವಿಷಯ ವಿಶ್ವಕೋಶ ಮುಂತಾದ ಹತ್ತಾರು ಗ್ರಂಥಗಳು ಪ್ರಕಟಣೆಯ ಹಂತದಲ್ಲಿವೆ.

೩. ದೃಶ್ಯಕಲಾ ಸಂಶೋಧಕ : ಡಾ. ಎಸ್. ಸಿ. ಪಾಟೀಲರು ಚಿತ್ರಕಲೆಯ ಕುರಿತು ಹಲವಾರು ಗ್ರಂಥಗಳನ್ನು ಸಂಶೋಧನೆಯ ಬರಹಗಳನ್ನು ಪ್ರಮುಖ ಪತ್ರಿಕೆಗಳಲ್ಲಿ ಮತ್ತು ಹಲವಾರು ಗ್ರಂಥಗಳಲ್ಲಿ ಪ್ರಕಟಿಸಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಇಪ್ಪತ್ತೈದಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಿಹೆಚ್.ಡಿ ಮತ್ತು ಇಪ್ಪತ್ತೆಂಟು ವಿದ್ಯಾರ್ಥಿಗಳು ಎಂ.ಫಿಲ್ ಪದವಿಗಳನ್ನು ಪಡೆದಿದ್ದಾರೆ. ಕರ್ನಾಟಕದಲ್ಲಿ ದೃಶ್ಯಕಲಾ ಕ್ಷೇತ್ರದಲ್ಲಿ ಕಲಾ ಸಂಶೋಧನೆಯ ಆಧ್ಯ ಪ್ರವರ್ತಕರಾಗಿ ಹೊಸ ಪರಂಪರೆಯನ್ನು ಈ ದಶಕದಲ್ಲಿ ಹುಟ್ಟು ಹಾಕಿದ ಕೀರ್ತಿ ಪಾಟೀಲರಿಗೆ ಸಲ್ಲುತ್ತದೆ. ತಾವು ಬೆಳೆಯುವುದರ ಜೊತೆಗೆ ನೂರಾರು ವಿದ್ಯಾರ್ಥಿಗಳನ್ನು ಬೆಳೆಸಿದ್ದಾರೆ, ಬೆಳೆಸುತ್ತಿದ್ದಾರೆ.

ಯು.ಜಿ.ಸಿ ನ್ಯೂದೆಹಲಿ NACC ಸಂಸ್ಥೆ ಪಿಯರ್ ಟೀಂ ಸದಸ್ಯರಾಗಿ ಮತ್ತು ಯು.ಜಿ.ಸಿ ಮೌಲ್ಯಮಾಪನ ಪೆನಲ್‌ನ ಸದಸ್ಯರಾಗಿ ಸಹ ಕಳೆದ ಆರು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ಡೀನ್, ಸಿಂಡಿಕೇಟ್ ಸದಸ್ಯರಾಗಿ ನಾಲ್ಕು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಆಡಳಿತಾತ್ಮಕವಾಗಿ ೧೨ ವರ್ಷಗಳ ಕಾಲ ದೃಶ್ಯಕಲಾ ವಿಭಾಗದ ಮುಖ್ಯಸ್ಥರಾಗಿ ಮತ್ತು ಬಾದಾಮಿಯಲ್ಲಿಯ ಶಿಲ್ಪಕಲಾ ಕೇಂದ್ರದ ಮುಖ್ಯಸ್ಥರಾಗಿ ಇವುಗಳನ್ನು ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟಕ್ಕೆ ಬೆಳೆಸಿದ್ದಾರೆ. ಸಂಗೀತ ಮತ್ತು ನೃತ್ಯ ವಿಭಾಗ ಮೇಲ್ವಿಚಾರಣೆಯನ್ನು ನಾಲ್ಕು ವರ್ಷದಿಂದ ಮಾಡುತ್ತಿದ್ದಾರೆ. ರಾಜ್ಯದ ೬೮ ಚಿತ್ರಕಲಾ ಮಹಾವಿದ್ಯಾಲಯಗಳ ಪರೀಕ್ಷೆ, ಪಠ್ಯಕ್ರಮ, ಮೇಲ್ವಿಚಾರಣೆ, ಕಲಾಮಹಾವಿದ್ಯಾಲಯಗಳ ತಪಾಸಣಾಕಾರ್ಯ ಹೀಗೆ ಹತ್ತಾರು ನೆಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಪ್ರಶಸ್ತಿ ಗೌರವಗಳು : ಡಾ. ಎಸ್. ಸಿ. ಪಾಟೀಲರ ನಿರಂತರ ಕಲಾ ಸೇವೆಯನ್ನು ಪರಿಗಣಿಸಿ ವಿವಿಧ ಸಂಘ ಸಂಸ್ಥೆಗಳು ಹಲವಾರು ಪ್ರಶಸ್ತಿ ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ರಾಷ್ಟ್ರೀಯ 'ಶಿಕ್ಷಾ' ಪ್ರಶಸ್ತಿ, ಸಂಶೋಧನ ರತ್ನಾ ಪ್ರಶಸ್ತಿ, ಸಂತ ಶಿಶುನಾಳ ಶರೀಫ ಪ್ರಶಸ್ತಿ, ಕರ್ನಾಟಕ ಲಲಿತಕಲಾ ಅಕಾಡೆಮಿಯ ಗೌರವ ಪ್ರಶಸ್ತಿ, ಉಡುಪಿಯ ಕು.ಸಿ. ಹರಿದಾಸ ಜಾನಪದ ಪ್ರಶಸ್ತಿ, ಉಪಾಧ್ಯಾಯ ಸನ್ಮಾನ, ಸಂಸ್ಕೃತಿ ಮಾನವ ಪ್ರಶಸ್ತಿ, ೨೦೦೦ನೇ ಸಹಸ್ರಮಾನದ ವಿಶೇಷ ವ್ಯಕ್ತಿ ಪ್ರಶಸ್ತಿ, ಶಿವಕಲಾ ಪ್ರಶಸ್ತಿ ಅಲ್ಲದೇ ಜಿಲ್ಲೆ, ವಿಭಾಗ, ರಾಜ್ಯ, ರಾಷ್ಟ್ರ ಮಟ್ಟದ ಶ್ರೇಷ್ಠ ಉಪನ್ಯಾಸಕ ಪ್ರಶಸ್ತಿಗಳು ಇವರನ್ನು ಹುಡುಕಿಕೊಂಡು ಬಂದಿವೆ.

ಪುಸ್ತಕ ಪ್ರಕಟಣೆಗಳು : ಜ್ಞಾನ ಶಿವ, ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ, ಬುಜರಕಂಚನಹಳ್ಳಿಯ ಭಿತ್ತಿಚಿತ್ರಗಳು, ಮ್ಯೂರಲ್ ಪೇಂಟಿಂಗ್ಸ್ ಆಫ್ ಬಿ.ಕೆ. ಹಳ್ಳಿ, ದೃಶ್ಯ ಸಂಚಲನ, ಹಸೆ ಚಿತ್ರಕಲೆ: ಆಶಯ ಮತ್ತು ಅಭಿವ್ಯಕ್ತಿ, ನಾಡೋಜ ಚಿತ್ರಕಲಾವಿದ ವಿ.ಟಿ. ಕಾಳೆ, ದೃಶ್ಯಕಲಾ ಪಾರಿಭಾಷಿಕ ವಿಷಯ ವಿಶ್ವಕೋಶ, ಕರ್ನಾಟಕ ಚಿತ್ರಕಲಾ ದರ್ಶನ, ಹೈದ್ರಾಬಾದ್–

[illegible]

[illegible]

[illegible]

ಕರ್ನಾಟಕದ ಲಲಿತಕಲೆಗಳು, ಬಾರೋಕ್ ಕಲೆ, ಬೆಳಗು, ರಂಗೋಲಿ ಚಿತ್ರಕಲೆ, ಹಚ್ಚೆ ಚಿತ್ರಕಲೆ, ಅಂಡೆ ಅರಸು ಮನೆತನದ ವಂಶಾವಳಿ ಮುಂತಾದ ಪುಸ್ತಕಗಳು ಪ್ರಕಟಗೊಂಡಿವೆ.

ಲೇಖನಗಳು : ಕಲಾವಿದ ಸುರೇಶ್ ಕುಲಕರ್ಣಿ, ಕಲಾವಿದ ಡಿ.ವಿ. ಹಾಲಭಾವಿ, ಧಾರವಾಡದ ಚಿತ್ರಕಲೆಗಳು, ಕರ್ನಾಟಕದಲ್ಲಿ ಚಿತ್ರಕಲೆ, ಜನಪದ ಮತ್ತು ಶಿಷ್ಟಪದ, ಗವಿಚಿತ್ರಕಲೆ ಮುಂತಾದ ಲೇಖನಗಳನ್ನು ಸಹ ಪ್ರಕಟಿಸಿದ್ದಾರೆ.

ಏಕವ್ಯಕ್ತಿ ಪ್ರದರ್ಶನ : ಕರ್ನಾಟಕ ಕಾಲೇಜ್ ಧಾರವಾಡ, ಶ್ರೀ ಮುರುಘಾಮಠ ಧಾರವಾಡ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಕುಮಟಾ (ಉತ್ತರ ಕರ್ನಾಟಕ), ಕರ್ನಾಟಕ ಚಿತ್ರಕಲಾ ಪರಿಷತ್ ಮುಂತಾದೆಡೆ ಇವರ ಚಿತ್ರಕಲಾ ಪ್ರದರ್ಶನಗಳು ನಡೆದಿವೆ.

ಗುಂಪು ಪ್ರದರ್ಶನ : ವಿಜಯ ಕಲಾ ಮಂದಿರ ಗದಗ, ಮೈಸೂರು ದಸರಾ ಕಲಾಪ್ರದರ್ಶನ, ರಾಷ್ಟ್ರೀಯ ಮಟ್ಟದ ಕಲಾಪ್ರದರ್ಶನ, ಮೌಂಟ್ ಅಬು, ಚಿತ್ರಸಂತೆ, ಚಿತ್ರಕಲಾ ಪರಿಷತ್ ಬೆಂಗಳೂರು, ಹೈದ್ರಾಬಾದ್ ಚಿತ್ರಕಲಾ ಪ್ರದರ್ಶನ, ರಾಷ್ಟ್ರೀಯ ಕಲಾಪ್ರದರ್ಶನ ಅಮೃತ ಪಂಜಾಬ್, ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ, ಉರ್ದು ಅಕಾಡೆಮಿ ಕಲಾಪ್ರದರ್ಶನ, ಬೆಂಗಳೂರು ಮುಂತಾದವು.

ಚಿತ್ರಕಲಾ ಪ್ರಾತ್ಯಕ್ಷಿಕೆ : ವಿಜಯ ಲಲಿತಕಲಾ ಮಹಾವಿದ್ಯಾಲಯ ಇಳಕಲ್, ಶಿಲ್ಪಕಲೆ ಮತ್ತು ದೃಶ್ಯಕಲಾ ವಿಭಾಗ ಬಾದಾಮಿ, ಬನಶಂಕರಿ, ಹಂಪಿ ಕನ್ನಡ ವಿಶ್ವವಿದ್ಯಾಲಯ, ವಿವೇಕಾನಂದ ದೃಶ್ಯಕಲಾ ಕಾಲೇಜ್, ರಾಯಭಾಗ್ ಇಲ್ಲಿ ಪ್ರಕೃತಿ ಚಿತ್ರಕ್ಕೆ ಸಂಬಂಧಿಸಿದಂತೆ ಪ್ರಾತ್ಯಕ್ಷಿಕೆಯನ್ನು ನೀಡಿದರು.

ಕಲಾಕೃತಿ ಸಂಗ್ರಹ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಸ್ನಾತಕೋತ್ತರ ಶಿಕ್ಷಣ ವಿಭಾಗ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ವಿಶ್ವೇಶ್ವರಯ್ಯ ವಿಶ್ವವಿದ್ಯಾಲಯ, ಮೌಂಟ್ ಅಬು ರಾಜಸ್ಥಾನ, ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ ಹೀಗೆ ಕರ್ನಾಟಕ ಮತ್ತು ಹೊರರಾಜ್ಯಗಳಲ್ಲಿಯೂ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ.

ರಾಜ್ಯಮಟ್ಟದ ಕಲಾಶಿಬಿರ : ಜಲವರ್ಣದ ಚಿತ್ರಕಲಾ ಶಿಬಿರ ಧಾರವಾಡ, ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು, ಬೆನನ್‌ಸ್ಮಿತ್ ಚಿತ್ರಕಲಾ ಪ್ರದರ್ಶನ ಶಿಬಿರ, ಬೆಳಗಾವಿ, ಇಟಗಿ ಮಹೋತ್ಸವ, ಕನ್ನಡ ಸಾಹಿತ್ಯ ಸಮ್ಮೇಳನ ಮುಂತಾದ ಕಡೆಗಳ ಶಿಬಿರಗಳಲ್ಲಿ ಪಾಲ್ಗೊಂಡು ಹಲವು ಕಲಾಕೃತಿಗಳನ್ನು ರಚಿಸಿದ್ದಾರೆ. ಇವರ ಚಿತ್ರಕಲಾ ಕೃತಿಗಳಲ್ಲಿ ವಿಶೇಷವಾಗಿ ಜನಪದ ಉತ್ಸವ, ಸಂಭ್ರಮಗಳ ಸಾಂಕೇತಿಕವಾಗಿ ತೋರಣ, ಬಾಗಿಲು, ಸಂಭ್ರಮದ ವಾತಾವರಣವು ಪ್ರತಿಬಿಂಬಿತವಾಗಿದೆ. ಯಥಾ ದೃಷ್ಟಿ ತಥಾಸೃಷ್ಟಿ ಎಂಬುವಂತೆ ಇವರು ಜಾನಪದ ಚಿತ್ರಕಲೆ ಕುರಿತಂತೆ ವಿಶೇಷವಾದ ಆಸಕ್ತಿ ಹೊಂದಿದ್ದರಿಂದ ಈ ಚಿಂತನೆಗೆ ಅನುಗುಣವಾಗಿ ಚಿತ್ರಕಲಾ ಕೃತಿಯಲ್ಲಿಯೂ ಜನಪದ ಅಂಶಗಳು ಕಂಡುಬರುತ್ತವೆ. ಅದೇ ರೀತಿಯಲ್ಲಿ 'ಬಣ್ಣದ ಓಕುಳಿ'ಯಂತಹ ಹಬ್ಬದ ಸಂಭ್ರಮವಾಗಿ ಹತ್ತಾರು ಬಣ್ಣಗಳು ಕಲಾಕೃತಿಯಲ್ಲಿ ಸಂಯೋಜನೆಗೆ ಒಳಪಟ್ಟು 'ಬಣ್ಣದ

[illegible]

ಮಿಣುಕು' ಕಲಾಕೃತಿಗಳತ್ತ ಸಹ ಹೊಸ ದೃಷ್ಟಿ ಹರಿಸಿದ್ದಾರೆ. ಇವುಗಳಲ್ಲದೇ ಇನ್ನೂ ಹಲವು ಕಲಾಕೃತಿಗಳನ್ನು ರಚಿಸಿದ್ದಾರೆ. ಮತ್ತು ಹೊಸ ಹೊಸ ದೃಷ್ಟಿಕೋನದ ಪ್ರಯೋಗಾತ್ಮಕವಾಗಿ ಸೃಜನಾತ್ಮಕ ನೆಲೆಯಲ್ಲಿ ಕಲಾಕೃತಿಗಳ ರಚನೆಯಲ್ಲಿ ತೊಡಗಿದ್ದಾರೆ.

ಡಾ. ಶಿವಾನಂದ ಹೆಚ್. ಬಂಟನೂರು

ಇವರು ೦೨.೦೬.೧೯೬೭ರಂದು ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ತಾಲೂಕ ನೆಲೋಗಿಯಲ್ಲಿ ಜನಿಸಿದರು. ಇವರು ದೃಶ್ಯಕಲಾ ವಿಭಾಗದಲ್ಲಿ ಅಧ್ಯಾಪಕರಾಗಿದ್ದು, ಡಾ. ಎಸ್. ಸಿ. ಪಾಟೀಲ ಅವರ ಮಾರ್ಗದರ್ಶನದಲ್ಲಿ 'ಉತ್ತರ ಕರ್ನಾಟಕದ ಜನಪದ ಶಿಲ್ಪಕಲೆ'ಯನ್ನು ಕುರಿತು ಪಿಹೆಚ್.ಡಿ ಪದವಿಯನ್ನು ಪಡೆದುಕೊಂಡಿದ್ದಾರೆ. ಇವರು ಚಿತ್ರ ಮತ್ತು ಶಿಲ್ಪಕಲೆ ಎರಡೂ ಕ್ಷೇತ್ರದಲ್ಲಿಯೂ ನಿಪುಣರಾಗಿದ್ದಾರೆ. ಇಷ್ಟೇ ಅಲ್ಲದೇ ಕಲಾಪ್ರದರ್ಶನ, ಕ್ಯಾಟಲಾಗ್, ಬರಹ, ವಿಮರ್ಶೆ ಮುಂತಾದವುಗಳಲ್ಲಿ ಸಾಧನೆಗೈದಿದ್ದಾರೆ. ಏಕವ್ಯಕ್ತಿ ಕಲಾಪ್ರದರ್ಶನ, ಚಿತ್ರಕಲೆಗೆ ಸಂಬಂಧಿಸಿದಂತೆ ಕರ್ನಾಟಕ ಮಹಾವಿದ್ಯಾಲಯ, ಧಾರವಾಡದಲ್ಲಿ ಪ್ರದರ್ಶನಗೊಂಡರೆ, ಶಿಲ್ಪಕಲೆಗೆ ಸಂಬಂಧಿಸಿದಂತೆ ಬೆಂಗಳೂರು, ಧಾರವಾಡ, ಗದಗ ಕಲಾಮಂದಿರದಲ್ಲಿ ಪ್ರದರ್ಶನಗೊಂಡಿವೆ. ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಅನೇಕ ಪ್ರಶಸ್ತಿ ಪುರಸ್ಕಾರವನ್ನು ಪಡೆದಿದ್ದಾರೆ. ಹಾಗೆಯೇ ಸಾಮೂಹಿಕ ಕಲಾಪ್ರದರ್ಶನ ರಾಜ್ಯ ಹೊರರಾಜ್ಯಗಳಲ್ಲಿಯೂ ಪ್ರದರ್ಶನಗೊಂಡಿವೆ.

ಪುಸ್ತಕ ಮತ್ತು ಲೇಖನ ಪ್ರಕಟಣೆಗಳು

'ದೃಷ್ಟಿಸೃಷ್ಟಿ', ದೃಶ್ಯಪದದೃಶ್ಯ, ಎಂ.ಬಿ. ಲೋಹಾರ. ವಿ. ಜಿ. ಅಂದಾನಿ, ಮುಂತಾದ ದೃಶ್ಯಕಲೆ ಕುರಿತ ಗ್ರಂಥಗಳು ಪ್ರಕಟಣೆಯಾಗಿವೆ. ಹೆಬ್ಬಾರರ ರೇಖಾಚಿತ್ರಗಳು, ಬೇಂದ್ರೆ ಕಾವ್ಯ, ಸಮಕಾಲೀನ ಸ್ಪಂದನೆಯ ರೇಖಾಚಿತ್ರಗಳು ಮುಂತಾದ ಲೇಖನಗಳು ಪ್ರಜಾವಾಣಿ, ಕಲಾವಾರ್ತೆ, ಆರ್ಟ್‌ಗುಲ್ ಮುಂತಾದ ಪತ್ರಿಕೆ, ಮಾಸಪತ್ರಿಕೆಗಳಲ್ಲಿ, ಚಿತ್ರಕಲೆ, ಶಿಲ್ಪಕಲೆಗೆ ಸಂಬಂಧಿಸಿದಂತೆ ಲೇಕನಗಳು ಪ್ರಕಟಗೊಂಡಿವೆ. ಇವರು ಶಿಲ್ಪಕಲೆಯಲ್ಲಿ ತಮ್ಮದೇಯಾದ ಶೈಲಿಯಲ್ಲಿ ಗುರುತಿಸಿಕೊಂಡಿದ್ದಾರೆ.

ಇಡೀ ಶಿಲ್ಪದಲ್ಲಿ ಶಿರ(ತಲೆ)ವೇ ಮುಖ್ಯವಾಗಿರುತ್ತದೆ. ಇತರ ಅಂಗಗಳಿಗೆ ಅಷ್ಟು ಪ್ರಾಶಸ್ತ್ಯ ನೀಡಿರುವುದಿಲ್ಲ. ಏಕೆಂದರೆ ಮನುಷ್ಯನ ಎಲ್ಲಾ ಚಟುವಟಿಕೆಗಳಿಗೆ ಅವನ ಮೆದುಳೇ ಪ್ರಮುಖವಾಗಿರುತ್ತದೆ ಎನ್ನುವುದೇ ಇದರ ಒಳ ಅರ್ಥವಾಗಿದೆ. ಇದೇ ರೀತಿಯಲ್ಲಿ 'ಪುಷ್ಪ'ವನ್ನು ಕುರಿತು ಸರಣಿ ಕಲಾಕೃತಿ ರಚಿಸಿದ್ದಾರೆ. ಇದು ಒಂದು ರಂಗು ರಂಗಿನ ಜೀವನವನ್ನು ಕುಸುಮಕ್ಕೆ ಹೋಲಿಸಿ ಚಿತ್ರಿಸಲಾಗಿದೆ. ಇವರು ಕೂಡ ಹಲವು ಕಲಾಕೃತಿ ಕುರಿತಂತೆ ಪ್ರಯೋಗಗಳಲ್ಲಿ ನಿರತರಾಗಿದ್ದಾರೆ. ಲಲಿತಕಲಾ ಅಕಾಡೆಮಿಯ ಫೆಲೋಶಿಪ್ ಪಡೆದು ಸಂಶೋಧನೆಯ ಯೋಜನೆಯೊಂದನ್ನು ಕೈಗೊಂಡಿದ್ದಾರೆ.

[illegible]

ಡಾ. ಮೋಹನ್‌ರಾವ್ ಬಿ. ಪಂಚಾಳ

ಡಾ. ಮೋಹನ್‌ರಾವ್ ಬಿ. ಪಂಚಾಳ ಅವರು ಜನವರಿ ೨ ೧೯೭೮ರಂದು ಬೀದರ್ ಜಿಲ್ಲೆಯ ಹುಮ್ನಾಬಾದ್ ತಾಲೂಕಿನ ನಂದಗಾಂವ ಗ್ರಾಮದಲ್ಲಿ ಜನಿಸಿದ್ದಾರೆ. ಎಂ.ಎಫ್.ಎ ಸ್ನಾತಕೋತ್ತರ ಚಿತ್ರಕಲೆಯ ಪದವಿ ಮತ್ತು ೨೦೦೮ರಲ್ಲಿ ವಿಶ್ವವಿಖ್ಯಾತ ಕಲಾವಿದ ಡಾ. ಎಸ್. ಎಂ. ಪಂಡಿತರ ಕುರಿತು ಸಂಶೋಧನ ಮಹಾಪ್ರಬಂಧವನ್ನು ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿ ಪಿಹೆಚ್.ಡಿ ಪದವಿಯನ್ನು ಪಡೆದಿದ್ದಾರೆ. ಮುಂಬೈ, ಬೆಂಗಳೂರು, ದೆಹಲಿ....., ಹೀಗೆ ಮುಂತಾದ ಸ್ಥಳಗಳಲ್ಲಿನ ಪ್ರತಿಷ್ಠಿತ ಸರ್ಕಾರಿ, ಖಾಸಗಿ ಸಂಘ ಸಂಸ್ಥೆಯವರು ಆಯೋಜಿಸಿದ ರಾಜ್ಯ ಮತ್ತು ರಾಷ್ಟ್ರಮಟ್ಟದ ಚಿತ್ರಕಲಾ ಸ್ಪರ್ಧೆ ಮತ್ತು ಪ್ರದರ್ಶನಗಳಿಗೆ ಇವರ ಕಲಾಕೃತಿಗಳು ಆಯ್ಕೆಯಾಗಿವೆ. ಹಂಪಿ, ಗುಲ್ಬರ್ಗಾ, ಬೆಂಗಳೂರು, ದೆಹಲಿ, ಹರಿಯಾಣ, ಪಾಟ್ನಾ, ಲಖ್ನೋ, ಪೂಣೆ, ಉಜ್ಜೈನಿ, ಕೇರಳ, ಕುಪ್ಪಂ..... ಹೀಗೆ ಒಟ್ಟು ಹದಿನೈದಕ್ಕೂ ಹೆಚ್ಚು ಸ್ಥಳಗಳಲ್ಲಿ ನಡೆದ ರಾಷ್ಟ್ರೀಯ ಅಂತರಾಷ್ಟ್ರೀಯ ಚಿತ್ರ-ಶಿಲ್ಪಕಲಾ ಶಿಬಿರಗಳಲ್ಲಿ ಭಾಗವಹಿಸಿದ ಅನುಭವ ಇವರಿಗಿದೆ.

೨೦೧೦ ಕರ್ನಾಟಕ ಲಲಿತಕಲಾ ಅಕಾಡೆಮಿ ಧನಸಹಾಯದಿಂದ ರಾಯಲ್ ಆರ್ಟ್ ಗ್ಯಾಲರಿ, ಮುಂಬೈಯಲ್ಲಿ ಹಾಗೂ ಅಖ್ತರ್ ಆರ್ಟ್ ಗ್ಯಾಲರಿ, ಮಂಗಳೂರುಗಳಲ್ಲಿ ಇವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನಗಳು ನಡೆದಿವೆ. ನೆಹರೂ ಸೆಂಟರ್ ಆರ್ಟ್ ಗ್ಯಾಲರಿ, ಮುಂಬೈಯಲ್ಲಿ ನಾಲ್ಕು ಬಾರಿ, ತಾಜ್ ಹೋಟಲ್, ದೆಹಲಿಯಲ್ಲಿ ಮೂರು ಬಾರಿ, ಕೇಂದ್ರ ಲಲಿತಕಲಾ ಅಕಾಡೆಮಿ, ದೆಹಲಿ, ಲಖ್ನೋ, ಪಾಟ್ನಾ, ಹೈದರಾಬಾದ್, ವಿಜಾಪುರ, ಬೆಂಗಳೂರು, ಹೀಗೆ ದೇಶದ ಮುಂತಾದ ಸ್ಥಳಗಳಲ್ಲಿ ಹಾಗೂ ಇಂಡೋನೇಷಿಯಾ ಪಾಶ್ಚಿಮಾತ್ಯ ದೇಶದಲ್ಲಿಯೂ ಇವರ ಗುಂಪು ಚಿತ್ರಕಲಾ ಪ್ರದರ್ಶನಗಳು ನಡೆದಿವೆ.

ದೃಶ್ಯಕಲಾ ಸಾಹಿತ್ಯ : ಇವರ ಸಾಹಿತ್ಯ ಕುರಿತು ಪರಿಚಯಿಸುವುದಾದರೆ ಈಗಾಗಲೆ ಇವರು "ವಜ್ರವಿಜಯ ನೆನಪಿನ ಸಂಚಿಕೆ"ಯ ಸಂಪಾದಕರಾಗಿ, "ದೃಶ್ಯಾನುಭವ" ಮತ್ತು "ಚಿತ್ರಕಲಾವಿದ ಡಾ. ಎಸ್. ಎಂ. ಪಂಡಿತ್" ಎಂಬ ಎರಡು ಪುಸ್ತಕಗಳ ಲೇಖಕರಾಗಿದ್ದಾರೆ. ಇವರ ದೃಶ್ಯಾನುಭವ ಕೃತಿಯು ಕರ್ನಾಟಕ ಸರಕಾರದ ಪುಸ್ತಕ ಪ್ರಾಧಿಕಾರದ ಧನಸಹಾಯದಿಂದ ಪ್ರಕಟಗೊಂಡಿದೆ.

ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿಯವರು ಆಯೋಜಿಸಿದ ರಾಷ್ಟ್ರೀಯ ಅಂತರರಾಷ್ಟ್ರೀಯ ವಿಚಾರ ಸಂಕಿರಣ, ಕಮ್ಮಟಗಳಲ್ಲಿ ಭಾಗವಹಿಸಿ ಪ್ರಬಂಧಗಳನ್ನು ಮಂಡಿಸಿದ್ದಾರೆ. ಇದೇ ತಿಂಗಳ ಅಂದರೆ ಡಿಸೆಂಬರ್ ೧೧, ೧೨ರಂದು ಪಂಜಾಬಿನ ಪಟಿಯಾಲದಲ್ಲಿ ನಡೆದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಭಾಗವಹಿಸಿ "ಮಹಾಲಿಂಗಪುರ ಭಿತ್ತಿಚಿತ್ರಗಳ" ಕುರಿತು ಪ್ರಬಂಧ ಮಂಡನೆ ಮಾಡಿ ಹಿಮಾಚಲ ಪ್ರದೇಶ, ಉತ್ತರ ಭಾರತ ಪ್ರವಾಸ ಕೈಗೊಂಡು ಬಂದಿದ್ದಾರೆ. ಡಾ. ಪಂಚಾಳರಿಗೆ ಪೂಣೆ ತಿಲಕ್ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ, ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನ, ರಾಷ್ಟ್ರೀಯ ಪ್ರಶಸ್ತಿ ಕೇರಳ, ಮೈಸೂರು ದಸರ ಪ್ರಶಸ್ತಿ, ಪುಲಯ್ಯ ಕಲಾನಿಲಯಂ ಆಂಧ್ರಪ್ರದೇಶ

[illegible]

ಪ್ರಶಸ್ತಿ ಹೀಗೆ ಅನೇಕ ಪ್ರಶಸ್ತಿ ಪುರಸ್ಕಾರಗಳು ಬಂದಿವೆ. ಇವರ ಸಾಧನೆ ಗುರುತಿಸಿಕೊಂಡು ಇವರಿಗೆ ಸಂದಿವೆ. ಹಾಗೆಯೇ ನಾಡಿನ ಅನೇಕ ಮಠಾಧೀಶರು, ಸಂಘ ಸಂಸ್ಥೆಯವರು ಇವರನ್ನು ಆಹ್ವಾನಿಸಿ ಸನ್ಮಾನಿಸಿದ್ದಾರೆ.

ಚಿತ್ರ-ಶಿಲ್ಪಕಲಾ ವಿಭಾಗ, ಬಾದಾಮಿ

೧೯೯೯ರ ಸುಮಾರಿಗೆ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಂ. ಎಂ. ಕಲಬುರ್ಗಿ ಅವರು ಬಾದಾಮಿಯ ಶಿವಯೋಗಿ ಮಂದಿರದ ರಸ್ತೆಯ ಬಲಕ್ಕಿರುವ (ಬನಶಂಕರಿ ಬಳಿ) ಪ್ರವಾಸೋದ್ಯಮ ಇಲಾಖೆಯ ಖಾಲಿ ಕಟ್ಟಡವನ್ನು ಸರಕಾರದ ಅನುಮತಿಯೊಂದಿಗೆ ಶಿಲ್ಪಕಲಾ ಅಧ್ಯಯನದ ವಿಭಾಗವಾಗಿ ಆರಂಭಿಸಿದರು. ಕನ್ನಡ ವಿಶ್ವವಿದ್ಯಾಲಯದ ಬಾದಾಮಿಯಲ್ಲಿ ಖ್ಯಾತ ಇತಿಹಾಸ ತಜ್ಞರಾದ ಡಾ. ಎಸ್. ಶೆಟ್ಟರ್‌ರವರಿಂದ ವಿಭಾಗವನ್ನು ಉದ್ಘಾಟಿಸಲಾಯಿತು. ಇದೇ ಅವಧಿಯಲ್ಲಿ ಬಾದಾಮಿಯವರೇ ಆಗಿದ್ದು, ಬೆಂಗಳೂರಿನಲ್ಲಿ ನೆಲೆಸಿದ್ದ ಕೆನ್ ಕಲಾಶಾಲೆಯ ಸಂಸ್ಥಾಪಕರಾದ ಆರ್. ಎಂ. ಹಡಪದ ಅವರು ಸಹ ಉದ್ಘಾಟಕರಾಗಿದ್ದು, ತಮ್ಮ ಬಹುದಿನದ ಕನಸು ನನಸಾದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಬಾದಾಮಿಯಲ್ಲಿ ಈಗ ಶಿಲ್ಪ ಮತ್ತು ವರ್ಣಚಿತ್ರಗಳ ಅಧ್ಯಯನದ ವಿಭಾಗವಾಗಿದೆ. ಇಲ್ಲಿ ಬಿ.ವಿ.ಎ ಚಿತ್ರ, ಶಿಲ್ಪ, ಎ.ಟಿ.ಸಿ ಕಲಾಶಿಕ್ಷಣ ತರಬೇತಿ ತರಗತಿಗಳನ್ನು ೨೦೦೪-೦೫ರಲ್ಲಿ ಆರಂಭಿಸಿದೆ. ಇಡೀ ಕರ್ನಾಟಕದ ಏಕೈಕ ಕಲಾಶಿಕ್ಷಣ ತರಬೇತಿ ನೀಡುವ ಸಂಸ್ಥೆ ಇದಾಗಿದೆ. ಇಲ್ಲಿ ವಿಶೇಷ ತರಬೇತಿಗಳು, ಕಮ್ಮಟಗಳು, ಉಪನ್ಯಾಸಗಳನ್ನು ಪ್ರತಿವರ್ಷ ಎರಡು ಮೂರು ಹಂತದಲ್ಲಿ ನಡೆಸಿಕೊಂಡು ಬರುತ್ತಿದೆ. ಸಂಶೋಧನಾ ಕಮ್ಮಟಗಳು ಇಲ್ಲಿ ನಡೆಯುತ್ತಿವೆ. ಕೇಂದ್ರ, ರಾಜ್ಯ ಲಲಿತಕಲಾ ಅಕಾಡೆಮಿ ವತಿಯಿಂದ ಕಾರ್ಯಾಗಾರಗಳು, ಚರ್ಚಾಗೋಷ್ಠಿಗಳು, ಪ್ರಾತ್ಯಕ್ಷಿಕೆಗಳನ್ನು ಹಿರಿಯ ಕಲಾವಿದರೊಂದಿಗೆ ಏರ್ಪಡಿಸುತ್ತಾ ಮತ್ತು ಸುಸಜ್ಜಿತ ಕಟ್ಟಡವನ್ನು ವಿಭಾಗದ ಕೇಂದ್ರ ಬಿಂದುವಾಗಿ ನಾಡೋಜ ಪ್ರಶಸ್ತಿ ವಿಜೇತ ಆರ್. ಎಂ. ಹಡಪದರ ನಾಮಧೇಯದಲ್ಲಿ ಕಲಾಗ್ಯಾಲರಿಯನ್ನು ನಿರ್ಮಿಸಲಾಗಿದೆ. ಅಮೂಲ್ಯವಾದ ಚಿತ್ರ, ಶಿಲ್ಪಗಳನ್ನು ಸಂಗ್ರಹಿಸಿ ಸಹೃದಯರಿಗಾಗಿ ಪ್ರದರ್ಶನಗೊಳಿಸಲಾಗಿದೆ.

ದೇಶಿ-ವಿದೇಶಿ ಪ್ರವಾಸಿಗಳಿಗೆ ಇದು ಆಕರ್ಷಣೀಯವಾಗಿದೆ. ಮತ್ತು ಜರ್ಮನಿ ವಿಶ್ವವಿದ್ಯಾಲಯದ ಸಂಶೋಧನ ವಿದ್ಯಾರ್ಥಿಗಳು ಇಲ್ಲಿ ಭೇಟಿ ನೀಡಿ ಅಧ್ಯಯನ ಮಾಡಿದ್ದು ಸ್ಮರಣೀಯವಾಗಿದೆ. ಇಲ್ಲಿ ವಿದ್ಯಾರ್ಥಿಗಳು ರಾಜ್ಯ, ರಾಷ್ಟ್ರ ಮಟ್ಟದ ಲಲಿತಕಲಾ ಅಕಾಡೆಮಿಗಳಲ್ಲಿ ಪ್ರಶಸ್ತಿ ಪಡೆದಿರುತ್ತಾರೆ. ಶಿಲ್ಪಕಲಾ ವಿದ್ಯಾರ್ಥಿಗಳಿಗೆ ಬಾಂಗ್ಲಾದ ಢಾಕಾ ವಿಶ್ವವಿದ್ಯಾಲಯದೊಂದಿಗೆ ಒಂದು ತಿಂಗಳ ಕಾಲ ಶಿಲ್ಪಕಲಾ ಶಿಬಿರವು ಬಳ್ಳಾರಿಯ ಜಿಂದಾಲ್ ಕಂಪನಿಯ ಸಹಯೋಗದೊಂದಿಗೆ ನಡೆದಿದ್ದು, ಹತ್ತು ವಿದ್ಯಾರ್ಥಿಗಳು ಇಲ್ಲಿಂದ ಭಾಗವಹಿಸಿದ್ದು ಅತ್ಯುತ್ತಮವಾದ

ಡಾ.ಎಸ್.ಸಿ.ಪಾಟೀಲ ಕ.ವಿ.ವಿ.ಹಂಪಿ ಅವರ ಕಲಾಕೃತಿಗಳು









ಡಾ. ಶಿವಾನಂದ ಎಚ್. ಬಂಟನೂರ ಕ.ವಿ.ವಿ.ಹಂಪಿ ಅವರ ಕಲಾಕೃತಿಗಳು









ಡಾ. ಮೋಹನರಾವ್ ಬಿ.ಪಂಚಾಳ ಕ.ವಿ.ವಿ.ಹಂಪಿ ಅವರ ಕಲಾಕೃತಿಗಳು







ಕಲಾಕೃತಿಗಳನ್ನು ರಚಿಸಿದ್ದಾರೆ. ಈ ಬಾದಾಮಿ ವಿಭಾಗದ ಎಲ್ಲಾ ಕಾರ್ಯ, ಕಲಾಚಟುವಟಿಕೆಗಳು, ವಿಶ್ವವಿದ್ಯಾಲಯದ ನಿಯಮಾನುಸಾರವಾಗಿ ನಿಯಂತ್ರಣಕ್ಕೆ ಒಳಪಟ್ಟಿವೆ. ಒಟ್ಟಾರೆ ಬಾದಾಮಿಯ ಐತಿಹಾಸಿಕ ಕಲಾಕಂಪಿನಿಂದ ಈ ವಿಭಾಗವು ಮತ್ತಷ್ಟು ಇಂಪಾಗಿದೆ.

೨. ಭವಾನಿ ಲಲಿತಕಲಾ ಮಹಾವಿದ್ಯಾಲಯ, ಬಳ್ಳಾರಿ

ಈ ಲಲಿತಕಲಾ ಮಹಾವಿದ್ಯಾಲಯವನ್ನು ಆರ್. ಎಲ್. ಜಾಧವ್ ಅವರಿಂದ ೧೯೯೩-೯೪ನೇ ಸಾಲಿನಲ್ಲಿ ಪ್ರಾರಂಭಿಸಲಾಯಿತು. ಈ ಜಿಲ್ಲೆಯಲ್ಲಿ ಯಾವುದೇ ಚಿತ್ರಕಲಾ ತರಬೇತಿ ಪಡೆಯಲು ಕಲಾಶಾಲೆ ಇಲ್ಲದೆ ಕಲಾಸಕ್ತಿಯಿಂದ ಕೂಡಿದ ವಿದ್ಯಾರ್ಥಿಯು ವಿಜಯ ಕಲಾಮಂದಿರ, ಗದುಗಿಗೆ ಹೋಗಬೇಕಾಗುತ್ತಿತ್ತು. ಈ ಒಂದು ಸಮಸ್ಯೆಯನ್ನು ಮನಗಂಡು ಚಿತ್ರಕಲಾ ತರಬೇತಿ ಕಲಾಕೇಂದ್ರವನ್ನು ಜಾಧವ್ ಅವರು ಇವರ ಮನೆ ದೇವರಾದ ಭವಾನಿ ಹೆಸರಿನಲ್ಲಿ ಲಲಿತಕಲಾ ಮಹಾವಿದ್ಯಾಲಯವನ್ನು ಪ್ರಾರಂಭಿಸಿದರು. ಈ ಕಲಾಶಾಲೆಯನ್ನು ಪ್ರಾರಂಭಿಸಲು ಜಾಧವ್ ಅವರು ಕಲಾವಿದರಾಗಿದ್ದೇ ಮುಖ್ಯ ಕಾರಣವಾಯಿತು. ಇವರು ಕಲಾವಿದರಾಗಿ ಬೆಳೆಯಲು ಬಾಲ್ಯದಿಂದ ಕಲಾಸಕ್ತಿ, ಕಲಾಗುರುಗಳ ಪ್ರಭಾವ ಮುಖ್ಯ ಕಾರಣವಾಯಿತು. ಬೀಜದಂತೆ ಮರ ಎಂಬ ಗಾದೆಯಿದೆ. ಬಿತ್ತಿದ ಬೀಜ ಹುಲುಸಾಗಿ ಬೆಳೆದು ಮರವಾಗಲು ಫಲವತ್ತಾದ ಭೂಮಿ, ಸಕಾಲಕ್ಕೆ ನೀರು ಮತ್ತು ಬೆಳಕು ಬೇಕಾಗುತ್ತದೆ. ಇದು ಪ್ರಕೃತಿಯ ನಿಯಮ. ಆದರೆ ಪ್ರಕೃತಿಗೆ ಸವಾಲೆಂಬಂತೆ ಆಲದ ಮರದ ಬೀಜವು ಹಕ್ಕಿಯ ಹಿಕ್ಕಿಯಿಂದ ಗೋಡೆಯ ಬಿರುಕಿನಲ್ಲಿ ಬಿದ್ದರೂ ಅಲ್ಪ ಸ್ವಲ್ಪ ನೀರಿನ ಅಂಶ ಸಿಕ್ಕರೂ ಅಲ್ಲಿಯೇ ಬೇರನ್ನು ನೆಲಕ್ಕೆ ಇಳಿಸಿ ಹೆಮ್ಮರವಾಗುವ ಛಾತಿ ಆ ಸಣ್ಣ ಬೀಜಕ್ಕಿದೆ. ಹಾಗೆಯೇ ವ್ಯಕ್ತಿಗಳಲ್ಲೂ ಸಹ ಪೂರಕ, ಪ್ರೇರಕ ವಾತಾವರಣವಿಲ್ಲದಿದ್ದರೂ ಉತ್ಕಟವಾದ ಇಚ್ಛಾಶಕ್ತಿಯಿಂದ ತಮ್ಮ ಪ್ರತಿಭೆಯನ್ನು ಮೆರೆದ ಅನೇಕ ಜನ ನಾಡಿನಲ್ಲಿ ಕಾಣಸಿಗುತ್ತಾರೆ. ಅಂಥವರ ಸಾಲಿನಲ್ಲಿ ನಿಲ್ಲಬಲ್ಲ ಕಲಾವಿದ, ಶಿಕ್ಷಕ ಸಮಾಜ ಬಂಧು ಹಾಗೂ ಸ್ನೇಹಶೀಲ ವ್ಯಕ್ತಿಯಾಗಿ ನಿಲ್ಲುವವರೆಂದರೆ ಕುಂಚ ಕಲಾವಿದ ಬಳ್ಳಾರಿಯ ಆರ್. ಎಲ್. ಜಾಧವ್ ಅವರು.

ಕಲಾಶಾಲೆಯ ಕಲಾಚಟುವಟಿಕೆಗಳು

ಅಧ್ಯಾಪಕರಾದ ವಗ್ಗರ್ ಕೃಷ್ಣಪ್ಪ, ಗೋವಿಂದಪ್ಪ, ಮಲ್ಲಿಕಾರ್ಜುನ, ಭಾಗ್ಯನಾಥ ಮುಂತಾದವರು ಒಳ್ಳೆಯ ಕಲಾಬೋಧನೆಯೊಂದಿಗೆ ಹಂಪೆ, ಚಿತ್ರದುರ್ಗ, ಬಿಜಾಪುರ ಮುಂತಾದ ಕಡೆಗಳಲ್ಲಿ 'ಭೂಚಿತ್ರಣ' (Landscape) ಕಲಾಶಿಬಿರವನ್ನು ಮಾಡಲಾಗಿ ಕಲ್ಲಿನ ರಥ, ಹಂಪಿಗೋಪುರ, ಕಮಲ ಮಹಲ್, ತುಲಾಭಾಗ, ಗೋಲಗುಂಬಜ್ ಮುಂತಾದ ಸ್ಮಾರಕಗಳನ್ನು ಸೆರೆಹಿಡಿದಿದ್ದಾರೆ. ವಗ್ಗರ್ ಎಂಬ ಅಧ್ಯಾಪಕರು ಉತ್ತಮವಾದ ಭೂ-ಚಿತ್ರಣವನ್ನು ಸುಂದರವಾಗಿ ಚಿತ್ರಿಸುತ್ತಿದ್ದರು. ಮತ್ತು ಇವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳಿಂದ ಉತ್ತಮವಾದಂತಹ ಕಲಾಕೃತಿಗಳು

ನಿರ್ಮಾಣವಾಗುತ್ತಿದ್ದವು. ಭೂ-ಚಿತ್ರಣದ ಶಿಬಿರದಿಂದ ಕಲಾಶಾಲೆಗೆ ಮರಳಿದ ನಂತರ ಎಲ್ಲ ಅಧ್ಯಾಪಕರ, ವಿದ್ಯಾರ್ಥಿಗಳ ಕಲಾಕೃತಿಗಳನ್ನು ಪ್ರದರ್ಶಿಸಲಾಗುತ್ತದೆ. ಮತ್ತು ಕಲಾಶಾಲೆಯ ವಾರ್ಷಿಕ ಕಾರ್ಯಕ್ರಮದಲ್ಲಿ ಹಲವು ಕಲಾಕೃತಿಗಳನ್ನು ಪ್ರದರ್ಶಿಸಿ ಸ್ಥಳೀಯ ವಿದ್ವಾಂಸರಿಂದ ಪ್ರದರ್ಶನವನ್ನು ಉದ್ಘಾಟಿಸಲಾಗುತ್ತದೆ. ಇದು ಅಲ್ಲದೇ ಪಠ್ಯೇತರ ಚಟುವಟಿಕೆಗಳಾದ ನಾಟಕ, ಸಂಗೀತ, ನೃತ್ಯ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕಲಾವಿದ್ಯಾರ್ಥಿಗಳಿಂದ ನಡೆಸಲಾಗುತ್ತದೆ. ಈ ಕಲಾಶಾಲೆಯಲ್ಲಿ ವಾರ್ಷಿಕ ಕಾರ್ಯಕ್ರಮವನ್ನು ಅಧ್ಯಾಪಕರ ಮಾರ್ಗದರ್ಶನದೊಂದಿಗೆ ಎಲ್ಲಾ ವಿದ್ಯಾರ್ಥಿಗಳೂ ಸೇರಿಕೊಂಡು ಯಶಸ್ವಿಗೊಳಿಸುತ್ತಿದ್ದರು.

ಇಂತಹ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಕಲಾಶಾಲೆಯು ಪ್ರಾರಂಭಿಕ ದಿನಗಳಲ್ಲಿಯೇ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಕಲಾಚಟುವಟಿಕೆಗಳನ್ನು ಹಮ್ಮಿಕೊಂಡು, ನಡೆಸಿಕೊಂಡು ಬರುವ ಪರಂಪರೆ ಮುಂದುವರೆಯಿತು. ಈ ಅಂಗವಾಗಿ ಮೂರು ದಿನಗಳ ಕಾಲ ಕಲಾಶಾಲೆಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ನಡೆಸುವುದರೊಂದಿಗೆ ವಿದ್ಯಾರ್ಥಿಗಳ ಸ್ಪರ್ಧಾ ಮನೋಭಾವನೆಯು ಬೆಳೆಯಲು ಅನುಕೂಲವಾಯಿತು. ಸಂಯೋಜನೆ, ಭೂಚಿತ್ರಣ, ಸ್ಥಿರ ಚಿತ್ರಣ, ಭಾವಚಿತ್ರಣ ಮುಂತಾದ ಹಲವು ಕಲಾಕೃತಿಗಳ ಪ್ರದರ್ಶನ, ಚುಕ್ಕೆ ರಹಿತ, ಚುಕ್ಕಿ ಸಹಿತವಾದ ರಂಗೋಲಿ ಸ್ಪರ್ಧೆ, ಏಕಾಪಾತ್ರಾಭಿನಯ, ವಿವಿಧ ಸಿನಿಮಾ, ಜಾನಪದ ಹಾಡುಗಳ ಸಂಗೀತ ಸ್ಪರ್ಧೆ ಮುಂತಾದ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು.

೩. ಹಂಪಿ ಚಿತ್ರಕಲಾ ಮಹಾವಿದ್ಯಾಲಯ, ಹೊಸಪೇಟೆ

ಹಂಪಿ ಚಿತ್ರಕಲಾ ಮಹಾವಿದ್ಯಾಲಯ ೧೯೯೪-೯೫ರ ಸಾಲಿನಲ್ಲಿ ಹೊಸಪೇಟೆಯಲ್ಲಿ ರಾಮಪ್ಪನವರು ಆರಂಭಿಸಿದರು. ಇದರಿಂದ ಈ ಭಾಗದ ಕಲಾ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಟ್ಟಿದೆ. ಇದರ ಜೊತೆಗೆ ಸಾಧ್ಯವಾದದ್ದು ಕಲಾಕ್ಷೇತ್ರಕ್ಕೆ ದುಡಿಯುತ್ತಿದೆ. ಇಲ್ಲಿ ಅಧ್ಯಾಪಕರಾಗಿ ನೀಲಪ್ಪ ಮತ್ತು ಭಾಷಾ ಅವರು ಕಾರ್ಯನಿರ್ವಹಿಸುತ್ತಿದ್ದಾರೆ. ನೀಲಪ್ಪನವರು ಹಲವಾರು ಪ್ರದರ್ಶನ, ಕಲಾಶಿಬಿರಗಳಲ್ಲಿ ಭಾಗವಹಿಸಿ ಪ್ರಶಸ್ತಿ ಸಹ ಪಡೆದಿದ್ದಾರೆ. ಇವರು ಎಲ್ಲಾ ಚಿತ್ರಕಲಾ ಪ್ರಕಾರಗಳಲ್ಲಿ ಪರಿಣಿತಿಯನ್ನು ಹೊಂದಿದ್ದರು, ಸೃಜನಶೀಲಕಲೆಯಲ್ಲಿ ಮತ್ತು ಪೂರ್ಣಭಾವಚಿತ್ರಗಳ ರಚನೆಯಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದಾರೆ.

ಕಲಾಚಟುವಟಿಕೆ : ಈಗ ಸದ್ಯದಲ್ಲಿ ಐದು ವರ್ಷದ ಪರಿಣಿತಿಯನ್ನು ಹೊಂದಿದ್ದು, ೫೦ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರವೇಶ ಹೊಂದಿದ್ದಾರೆ. ಇದಕ್ಕೂ ಮುಂಚೆ ೧೦-೧೫ ವಿದ್ಯಾರ್ಥಿಗಳು ಸರ್ಕಾರಿ ಪ್ರೌಢಗಳಲ್ಲಿ ವೃತ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಜೆ. ಎಸ್. ಖಂಡೇರಾವ್, ರಾಮಚಂದ್ರನ್‌ರಾವ್, ನರಸಿಂಹ ಮೂರ್ತಿ ಮುಂತಾದವರು ಕಲಾಪ್ರಾತ್ಯಕ್ಷಿಕೆಗಳನ್ನು ಸಹ ನೀಡಿದ್ದಾರೆ. ಪ್ರತಿ ವರ್ಷಾಂತ್ಯದಲ್ಲಿ ಪ್ರದರ್ಶನ ಮಾಡಲಾಗುತ್ತದೆ.

೪. ಭುವನೇಶ್ವರಿ ಚಿತ್ರಕಲಾ ಮಹಾವಿದ್ಯಾಲಯ, ಹೂವಿನ ಹಡಗಲಿ

ಈ ಕಲಾಶಾಲೆಯು ವೀರೇಶ್ ಆಚಾರ್ಯರಿಂದ ೧೯೯೪-೯೫ರಲ್ಲಿ ಪ್ರಾರಂಭವಾದ ಈ ವಿದ್ಯಾಲಯದಲ್ಲಿ ಹಲವಾರು ವಿದ್ಯಾರ್ಥಿಗಳು ಸರ್ಕಾರಿ ಶಾಲೆಯಲ್ಲಿ ಮತ್ತು ಅನುದಾನದ ಶಾಲೆಯಲ್ಲಿ ಕಲಾಶಿಕ್ಷಕರಾಗಿ ಸೇವೆಸಲ್ಲಿಸುತ್ತಿದ್ದಾರೆ. ಹಾಲೇಶ ಎಂಬ ಅಧ್ಯಾಪಕರು ಈ ಕಲಾಶಾಲೆಯಲ್ಲಿ ಸದ್ಯ ಕಾರ್ಯನಿರ್ವಹಿಸುತ್ತಿದ್ದಾರೆ.

ಕಲಾಚಟುವಟಿಕೆ : ಈ ವಿದ್ಯಾಲಯ ಪ್ರಾರಂಭ ದಿನದಲ್ಲಿ ಹೆಚ್ಚಿನ ಮಟ್ಟದಲ್ಲಿ ಕಲಾಶಿಬಿರ, ಕಾರ್ಯಾಗಾರಗಳು, ನಡೆದವು. ಇಲ್ಲಿಯೂ ಐದು ವರ್ಷದ ವಿಶೇಷ ಪರಿಣಿತಿಯ ತರಬೇತಿಯನ್ನು ನೀಡಲಾಗುತ್ತದೆ. ಪಠ್ಯಕ್ಕೆ ಸಂಬಂಧಿಸಿದಂತೆ ತರಬೇತಿಯೊಂದಿಗೆ ಪಠ್ಯೇತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಇಲ್ಲಿ ನೀಡಲಾಗುತ್ತದೆ.

ಬಳ್ಳಾರಿ ಜಿಲ್ಲೆಯ ಕಲಾಸಂಸ್ಥೆಗಳು ಅಭಿವೃದ್ಧಿಯನ್ನು ಹೊಂದುತ್ತಿರುವ ಸಂಸ್ಥೆಗಳಾಗಿವೆ. ಮತ್ತು ಕಲಾಕ್ಷೇತ್ರಕ್ಕೆ ಪರಿಶ್ರಮ ಇನ್ನೂ ಅಗತ್ಯವಾಗಿದೆ. ಈ ಕಲಾಸಂಸ್ಥೆಗಳಿಗೆ ಸರ್ಕಾರವು ಅನುದಾನವನ್ನು ಕೊಟ್ಟು ಹೆಚ್ಚಿನ ಗಮನವನ್ನು ಸಹ ನೀಡಬೇಕಾಗಿದೆ. ಇಲ್ಲಿಯೂ ವಿದ್ಯಾರ್ಥಿಗಳಿಗೆ ಅಧ್ಯಾಪಕ ಸಿಬ್ಬಂಧಿ ವರ್ಗದ ಕೊರತೆಯು ಎದ್ದು ಕಾಣುತ್ತಿದೆ. ಸೌಲಭ್ಯಗಳಿಂದ ಇಲ್ಲಿ ವಿದ್ಯಾರ್ಥಿಗಳು ವಂಚಿತರಾಗಿದ್ದಾರೆ.

ಬಳ್ಳಾರಿ ಜಿಲ್ಲೆಯ ಕಲಾವಿದರು

ಈ ಅಧ್ಯಾಯವು ಬಳ್ಳಾರಿ ಜಿಲ್ಲೆಯ ಚಿತ್ರಕಲಾವಿದರು, ಕಲಾಸಂಸ್ಥೆಗಳು ಕುರಿತು ಅಧ್ಯಯನದ ವಿಷಯವನ್ನಾಗಿ ಹೊಂದಿದೆ. ಈ ಕಲಾವಿದರು ಕೆಲವರು ಬಳ್ಳಾರಿಯ ಮೂಲದವರಾದರೆ, ಇನ್ನೂ ಕೆಲವು ಕಲಾವಿದರು ಜೀವನೋಪಾಯ, ಉದ್ಯೋಗಕ್ಕಾಗಿ ಅಥವಾ ಮತ್ತ್ಯಾವ ಕಾರಣದಿಂದ ೧೫-೨೫ ವರ್ಷಕ್ಕೂ ಹೆಚ್ಚು ವರ್ಷಗಳ ಹಿಂದೆ ಬಂದು ಇಲ್ಲಿಯೇ ನೆಲೆಸಿ ಈ ಪರಿಸರದೊಂದಿಗೆ ಬೆರೆತು ತಮ್ಮ ಕಲಾಪ್ರತಿಭೆ ಇಲ್ಲಿಯೇ ಪಸರಿಸಿದ್ದಾರೆ. ಇಂತಹ ಕಲಾವಿದರ ಜೀವನಕ್ರಮ ಮತ್ತು ಕಲಾಕೃತಿಗಳನ್ನು ಕುರಿತು ಸ್ಥೂಲವಾಗಿ ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಟಿ. ವಿರೂಪಾಕ್ಷಪ್ಪ, ಮ.ಈ. ಗುರು, ಕೊಂಡಾಚಾರ್ಯ, ವಿ.ಟಿ. ಕಾಳೆ, ಜಂಬುಕೇಶ್ವರ, ಕೆ.ಕೆ. ಮಕಾಳೆ, ಎ. ನೀಲಪ್ಪ ಹಾಗೂ ಹಸೆ ಚಿತ್ರಕಲಾವಿದೆ ಶಿಲ್ಪಾ ಮುಂತಾದ ಕಲಾವಿದರ ಜೀವನದಲ್ಲಿ ಎಷ್ಟೇ ಏಳು-ಬೀಳುಗಳಿದ್ದರೂ, ಇವರಲ್ಲಿ ಹುದುಗಿದ್ದ ಕಲಾಪ್ರತಿಭೆಯು, ಒಂದಲ್ಲ ಒಂದು ರೀತಿಯಲ್ಲಿ ಬೆಳಕಿಗೆ ಬಂದಿದೆ.

೦೧. ಟಿ. ವಿರೂಪಾಕ್ಷಪ್ಪ

ಇವರು ಬಳ್ಳಾರಿ ಜಿಲ್ಲೆಯ ಹಿರಿಯ ಚಿತ್ರಕಲಾವಿದರಾಗಿದ್ದಾರೆ. ಆದರೆ ಪ್ರಸ್ತುತ ಇವರ ಕಲಾಕೃತಿಗಳು ಒಂದೂ ಇಲ್ಲದೇ ಇರುವುದು ದುರ್ದೈವದ ಸಂಗತಿಯಾಗಿದೆ. ವಿರೂಪಾಕ್ಷಪ್ಪನವರ

ಮನೆಗೆ ಸಂದರ್ಶನ ನೀಡಿದಾಗ ಇವರ ಮಗನಾದ ವೇದಮೂರ್ತಿಯವರು, ನಮ್ಮ ಅಪ್ಪನ ಕಲಾಕೃತಿಗಳನ್ನು ೮-೯ ವರ್ಷದ ಹಿಂದೆ ವಸ್ತುಸಂಗ್ರಹಾಲಯದವರು ತೆಗೆದುಕೊಂಡು ಹೋಗಿದ್ದಾರೆ. ಅವರ ಸುಳಿವೇ ನನಗೆ ಇಲ್ಲವೆಂದು ದುಃಖಿತರಾಗಿ ವಿವರಿಸಿದರು. ಮತ್ತು ನನಗೆ ಸಿಕ್ಕಿದ್ದು ಡ್ರಾಯಿಂಗ್ ಗ್ರೇಡ್ ಪರೀಕ್ಷೆಯ ಪ್ರಮಾಣ ಪತ್ರ ಮತ್ತು ಜೀವನಕ್ರಮ, ಮಕ್ಕಳೊಂದಿಗೆ ಇದ್ದ ಕ್ಷಣಗಳು ಎಂದು ಹೇಳಿದರು.

ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿಯಲ್ಲಿ ಡ್ರಾಯಿಂಗ್ ಮಾಸ್ಟರ್ ಎಂದೇ ಪ್ರಸಿದ್ಧಿಯಾದ ಟಿ. ವಿರೂಪಾಕ್ಷಪ್ಪನವರು ೧೯೧೦ರಲ್ಲಿ ಹೂವಿನಹಡಗಲಿ ತಾಲೂಕಿನ ಕತ್ತೆಬೆನ್ನೂರು ಗ್ರಾಮದಲ್ಲಿ ಜನಿಸಿದರು. ಇವರ ತಂದೆ ವೀರಭದ್ರಪ್ಪ, ತಾಯಿ ವಸಂತಮ್ಮ. ಆದರೆ ಇವರ ಪೂರ್ವಜರು ರಾಣಿಬೆನ್ನೂರು ತಾಲೂಕಿನ ಮೇಡ್ಲೆರಿಯವರು. ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಹರಪನಹಳ್ಳಿಯಲ್ಲಿ ಮುಗಿಸಿ ೧೯೨೮ರಲ್ಲಿ ಮದ್ರಾಸ್ ಸರಕಾರಕ್ಕೊಳಪಟ್ಟ ಹರಪನಹಳ್ಳಿಯ ತಾಲೂಕ ಬೋರ್ಡ್ ಹೈಸ್ಕೂಲ್‌ನಲ್ಲಿ ಎಸ್.ಎಸ್.ಎಲ್.ಸಿ ವಿದ್ಯಾಭ್ಯಾಸವನ್ನು ಮುಗಿಸಿ ಅದೇ ಹೈಸ್ಕೂಲ್‌ನಲ್ಲಿ ಶಿಕ್ಷಕರಾಗಿದ್ದ ಸಿದ್ಧವೀರಪ್ಪ ಎಂಬುವರು ಇವರ ಗುರುಗಳು. ಇವರ ಮಾರ್ಗದರ್ಶನದಲ್ಲಿ ತಯಾರಾದ ಇವರ ಶ್ರಮ ನಿಜಕ್ಕೂ ಶ್ಲಾಘನೀಯ.

ತದನಂತರ ಮದ್ರಾಸ್ ಸರಕಾರದ ವತಿಯಿಂದ ನಡೆಸುತ್ತಿದ್ದ ಡ್ರಾಯಿಂಗ್ ಗ್ರೇಡ್ ಪರೀಕ್ಷೆಗಳನ್ನು ೧೯೪೧ರಲ್ಲಿ ಮುಗಿಸಿ ದ್ವಿತೀಯ ಸ್ಥಾನದಲ್ಲಿ ಉತ್ತೀರ್ಣರಾಗಿದ್ದು, ಜಿಲ್ಲೆಯಿಂದ ಪರೀಕ್ಷೆಗೆ ಕುಳಿತ ೧೪ ವಿದ್ಯಾರ್ಥಿಗಳಲ್ಲಿ ಆ ವರ್ಷ ಉತ್ತೀರ್ಣರಾದವರೆಂದರೆ ಇವರೊಬ್ಬರೆ ಎಂದು ಹೆಗ್ಗಳಿಕೆ ಇವರಿಗಿದೆ. ನಂತರ ೧೯೪೨ರಲ್ಲಿ ಅದೇ ಹೈಸ್ಕೂಲಿಗೆ ಚಿತ್ರಕಲಾ ಶಿಕ್ಷಕರಾಗಿ ನೇಮಕಗೊಂಡರು. ೧೯೪೫ರಲ್ಲಿ ಕೊಟ್ಟೂರಿಗೆ ವರ್ಗಾವಣೆಯಾದರು.

ನಂತರ ೧೯೪೭ರಲ್ಲಿ ಹೂವಿನಹಡಗಲಿಗೆ ವರ್ಗವಾಗಿ ಬಂದ ಇವರು ಆಗಿನ ತಾಲೂಕು ಬೋರ್ಡ್ ಹೈಸ್ಕೂಲ್, ಈಗಿನ ಸರ್ಕಾರಿ ಪದವಿ ಪೂರ್ವ ಬಾಲಕರ ಕಾಲೇಜಿನಲ್ಲಿ ಚಿತ್ರಕಲಾ ಶಿಕ್ಷಕರೆಂದು ಸೇವೆ ಸಲ್ಲಿಸುತ್ತ ಬಂದರು. ಹಡಗಲಿಯಲ್ಲೇ ಸುಮಾರು ೨೬ ವರ್ಷಗಳ ಕಾಲ ಸೇವೆ ಸಲ್ಲಿಸಿದ ಇವರು ತಮ್ಮ ಸೇವಾವಧಿಯ ಹೆಚ್ಚು ವರ್ಷಗಳನ್ನು ಹಡಗಲಿಯಲ್ಲಿ ಕಳೆದದ್ದುಂಟು. ಇವರು ೧೯೬೯ರಲ್ಲಿ ನಿವೃತ್ತರಾದರು. ಇವರು ಚಿತ್ರಕಲೆಯಲ್ಲಿ ಪ್ರಬುದ್ಧತೆಯನ್ನು ಸಾಧಿಸಿದ್ದರು ಎನ್ನುವುದಕ್ಕೆ ಇವರ ಒಂದು ಕಲಾಕೃತಿ ಪತ್ರಿಕೆಯಲ್ಲಿ ಪ್ರಕಟಗೊಂಡದ್ದು, ಇಡೀ ಇವರ ಕಲಾಕೃತಿಗಳಿಗೆ ಬೆಂದ ಅನ್ನದ ಅಗಳಿನಂತೆ ಉದಾಹರಣೆಯಾಗಿದೆ. ಇದೇ ಒಂದು ಚಿತ್ರವನ್ನು ವಿರೂಪಾಕ್ಷಪ್ಪನವರ ಸ್ನೇಹಿತರಾದ ಡಿ. ಎಸ್. ವಿ. ವೆಂಕಟಪ್ಪ ಸುಬ್ಬಯ್ಯನವರು ಹರಪನಹಳ್ಳಿ ಇವರ ನೆನಪಿಗೋಸ್ಕರ ಅವರು ಬರೆದ ಮಹಿಷಾಸುರ ಸಂಚಾರ ಲೀಲಾವಿಲಾಸಂ ಎಂಬ ಪುಸ್ತಕಕ್ಕೆ ಮುಖಪುಟ ವಿನ್ಯಾಸವನ್ನಾಗಿಸಿದ್ದಾರೆ.

ಕಲಾಕೃತಿಗಳು

೧. ಮಹಿಷಾಸುರ ಸಂಹಾರ ಲೀಲಾ ವಿಲಾಸಂ

ಈ ಒಂದು ಕಲಾಕೃತಿಯಲ್ಲಿ ದೇವಿ ಮತ್ತು ಮಹಿಷಾಸುರನನ್ನು ಒಂದು ಭಾರತದ ನಕಾಶೆಯಲ್ಲಿ ಸಂಯೋಜನೆಗೊಳಿಸಲಾಗಿದೆ. ಇಲ್ಲಿ ಪುಸ್ತಕದ ಶೀರ್ಷಿಕೆಗೆ ಅನುಗುಣವಾಗಿದೆ. ಈ ಒಂದು ಸಂಯೋಜನೆಯು ಸಾಮಾನ್ಯವಾಗಿಯೇ ಇಡೀ ಸ್ಥಳಾವಕಾಶವನ್ನು ತುಂಬಿಸಬಹುದಾಗಿತ್ತು. ಆದರೆ ಹಾಗೆ ಮಾಡದೇ ಭಾರತದ ನಕಾಶೆಯ ಒಳಗೆ ಮಾತ್ರ ತೋರಿಸಿದ್ದಾರೆ. ಇದರಿಂದ ತಿಳಿಯುವುದು ಇವರು ಒಬ್ಬ ದೇಶಪ್ರೇಮಿ ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದರು, ಮತ್ತೊಂದು ೧೯೧೦ರಲ್ಲಿ ಜನನವಾಗಿದ್ದರಿಂದ ಇವರು ಈ ಎಲ್ಲ ಹೋರಾಟ ಕಂಡ ಕಲಾವಿದರಾಗಿದ್ದರು ಎನ್ನಬಹುದು.

ಇಲ್ಲಿ ಇಡೀ ನಕಾಶೆಯಲ್ಲಿ ತುಂಬಾ ಅಚ್ಚುಕಟ್ಟಾಗಿ ಮಹಿಷ ಸಂಕೇತವಾಗಿ ಮಹಿಷಿಯ ಕೋಡು ಮುಖ ನಕಾಶೆಯ ದಕ್ಷಿಣಕ್ಕೆ ಮತ್ತು ರಾಕ್ಷಸನ ಸಂಹಾರ, ದೇವಿಯ ರುದ್ರನರ್ತನ ತುಂಬಾ ಪ್ರಮಾಣಬದ್ಧವಾಗಿದೆ. ಇವರು ಚಿತ್ರಕಲಾಕೃತಿಗಳನ್ನು ಮಾತ್ರ ನಿರ್ಮಿಸದೇ ಮಣ್ಣಿ(ಕ್ಲೇ ಮಾಡಲಿಂಗ್)ನಲ್ಲಿ ಅಕ್ಷರ ಲೇಖನ, ರೇಖಾಚಿತ್ರ ಮುಂತಾದ ವಿವಿಧ ವಿಷಯದಲ್ಲಿ ಕೂಡ ಪರಿಣಿತರಾಗಿದ್ದರು. ಕ್ಲೇ ಮಾಡಲಿಂಗ್‌ನ್ನು ಶಿಕ್ಷಕವೃತ್ತಿಯಲ್ಲಿ ಅನೇಕ ವಿದ್ಯಾರ್ಥಿಗಳಿಗೆ ತರಬೇತಿಗೊಳಿಸಿ ಅವರಿಗೆ ಬದುಕುವ ದಾರಿಯನ್ನು ತೋರಿಸಿದ್ದರು ಎಂದು ಇವರ ಮಗನಾದ ವೇಧಮೂರ್ತಿಯವರು ಹೆಮ್ಮೆಯಿಂದ ಹೇಳುತ್ತಾರೆ.

೧.೧೧.೧೯೯೫ರ ೩೬ನೇ ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ ಹೂವಿನಹಡಗಲಿಯಲ್ಲಿ ಇವರನ್ನು ಸನ್ಮಾನಿಸಲಾಗಿತ್ತು. ಪ್ರಶಸ್ತಿಗೆ ಆಯ್ಕೆಯಾಗಿ ಅವರನ್ನು ತರಬೇತಿಗೊಳಿಸುವಲ್ಲಿ ಆಲ್ ಇಂಡಿಯಾ ಫೈನ್ ಆರ್ಟ್ಸ್ ಮತ್ತು ಕ್ರಾಫ್ಟ್ ಸೊಸೈಟಿ, ದೆಹಲಿ ವತಿಯಿಂದ ಕರೆ ಸಹ ಬಂದಿತ್ತು. ಆದರೆ ಅವರ ಅನಾರೋಗ್ಯದ ನಿಮಿತ್ತ್ಯ ಅವರು ದೆಹಲಿಗೆ ಹೋಗಲಾಗಲಿಲ್ಲ. ೮೭ ವರ್ಷ ತುಂಬಿದ ವಿಶ್ರಾಂತಿಯಲ್ಲಿರುವ ಅವರ ಕಲೆ ಗುರುತಿಸಿ ಗ್ರಾಮೀಣ ಭಾಗದ ಚಿತ್ರಕಲೆಯನ್ನು ರಾಜ್ಯಮಟ್ಟಕ್ಕೆ ಮುಟ್ಟಿಸಿ ಸನ್ಮಾನಿಸಿದ ಲಲಿತಕಲಾ ಅಕಾಡೆಮಿ ಸ್ತುತ್ಯವಾದ ಕಾರ್ಯ ಮಾಡಿದೆ. ಇವರು ಅನಾರೋಗ್ಯದಿಂದ ೧೯೯೭ರಲ್ಲಿ ಇವರ ಕುಂಚ ಕೈ ಬಿಟ್ಟಿತು. ನಂತರ ಇವರ ಮಾರ್ಗವನ್ನನುಸರಿಸಿದ ಇವರ ಮಗ ಉತ್ತಮವಾದ ನಯ ಪದ್ಧತಿಯಲ್ಲಿ ಕಲಾಕೃತಿಗಳನ್ನು ರಚಿಸಿದ್ದಾರೆ. ಇವರು ಈಗ ವಿಶ್ರಾಂತ ಚಿತ್ರಕಲಾವಿದರಾಗಿದ್ದಾರೆ.

೨. ಮ. ಈ. ಗುರು

ಮ. ಈ. ಗುರು ಅವರು ೭ ಜುಲೈ ೧೯೨೩ರಂದು ಈಶ್ವರಯ್ಯನ ಮಗನಾಗಿ ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲೂಕಿನ ಮುದ್ದಾಪುರದಲ್ಲಿ ಜನಿಸಿದರು. ಒಬ್ಬ ಸ್ವಾಮಿಯ ಆಶೀರ್ವಾದದಿಂದ

[illegible]

ಜನಿಸಿದ ಗುರುಬಾಲಕ ಲವಲವಿಕೆ, ಚೂಟಿತನ, ಹೇಳಿದ್ದನ್ನು ಚಾಚು ತಪ್ಪದೇ ಮಾಡುವ ಗುಣ ಇವರನ್ನು ಆಕರ್ಷಿಸಿತು. ಮತ್ತು ಮನಸ್ಸಿನ ತುಡಿತ ಓದಿಗಿಂತ ಕಂಡದ್ದನ್ನು ಕಂಡ ಹಾಗೆ ಚಿತ್ರಿಸುವ ತವಕ ಮತ್ತು ಪುಸ್ತಕಗಳಲ್ಲಿ ಮುದ್ರಣವಾದುದ್ದನ್ನು ಯಥಾವತ್ತಾಗಿ ಚಿತ್ರಿಸುವಲ್ಲಿ ವಿಶೇಷವಾದ ಅಸಕ್ತಿಯನ್ನು ವಹಿಸಿದವರು ಇವರಾಗಿದ್ದಾರೆ.

ವಿದ್ಯಾಭ್ಯಾಸ

ಪ್ರಾಥಮಿಕ ಹಂತದಿಂದಲೇ ಚಿತ್ರಕಲೆಯಲ್ಲಿ ತುಂಬಾ ಆಸಕ್ತಿ ಹೊಂದಿದ ಮ.ಈ. ಗುರು ಅವರು ಬಳ್ಳಾರಿಯ ಸಂತ ಜೋಸೆಫ್ ಪ್ರೌಢಶಾಲೆಯಲ್ಲಿ ವಿದ್ಯಾಭಾಸ ನಡೆಸುತ್ತಿದ್ದರೂ ಆ ಸಮಯದಲ್ಲೇ ರೇಖಾಚಿತ್ರ ಬರೆಯವ ಹಂಬಲ ಅವರಿಗಿತ್ತು. ಅನಂತರ ಬೆಂಗಳೂರಿನ ಅ.ನ. ಸುಬ್ಬರಾಯರ ಕಲಾಮಂದಿರದಲ್ಲಿ ಸ್ವಲ್ಪ ಕಾಲ ಅಭ್ಯಾಸ ನಡೆಸಿ, ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಶಾಲೆಯಲ್ಲಿ ವ್ಯಾಸಂಗ ಮುಂದುವರೆಸಿ ಚಿತ್ರಕಲೆ ಮತ್ತು ಮೂರ್ತಿಶಿಲ್ಪದಲ್ಲಿ ಡಿಪ್ಲೊಮಾ ಪಡೆದರು. ಅಂದಿನಿಂದ ಮೈಸೂರಿನಲ್ಲಿ ಚಿರಪರಿಚಿತ ಕಲಾವಿದರಾಗಿ ಸುತ್ತಮುತ್ತಲ ದೃಶ್ಯಗಳನ್ನು ಕುಂಚದಿಂದ ಸೆರೆಹಿಡಿಯುತ್ತ ಬಂದರು.

ಇವರ ಕಲಾಗುರುಗಳು ಚಾಮರಾಜೇಂದ್ರ ತಾಂತ್ರಿಕ ಶಾಲೆಯ ಪ್ರಖ್ಯಾತ ಕಲಾವಿದ ನಂಜುಂಡಸ್ವಾಮಿ ಅವರು ಮತ್ತು ಇವರು ಕಲಾಕ್ಷೇತ್ರದಲ್ಲಿ ಬದನವಾಳದ ಖಾದಿ ಕೇಂದ್ರದಲ್ಲಿ ವಿನ್ಯಾಸಗಾರರಾಗಿ, ಮೈಸೂರಿನ ನವಜ್ಯೋತಿ ಸ್ಟುಡಿಯೋದಲ್ಲಿ ಕಲಾವಿದರಾಗಿ, ವಯಸ್ಕರ ಶಿಕ್ಷಣ ಸಮಿತಿಯ ಕಲಾವಿದರಾಗಿ, ಪುಸ್ತಕ ಸಮಿತಿಯ ಸದಸ್ಯರಾಗಿ ೧೯೬೨ರಿಂದ ೧೯೭೮ರವರೆಗೆ 'ಓರಿಯಂಟೇಷನ್ ಸ್ಟಡಿ ಸೆಂಟರ್'ನಲ್ಲಿ ಕಲಾವಿದರಾಗಿ, ಸಿಲ್ಕ್‌ಸ್ಕ್ರೀನ್ ಮುದ್ರಣ ಹಾಗೂ ಸ್ಟೆನ್ಸಿಲ್ ತಂತ್ರಗಳನ್ನು ಕರಗತ ಮಾಡಿಕೊಳ್ಳುವುದರಲ್ಲಿ ಯಶಸ್ವಿಯಾದರು.[೧೧] ಚಿತ್ರಕಲೆಯ ಆಯಾಮಗಳಾದ ಪ್ರಕೃತಿಚಿತ್ರ, ಸಂಯೋಜನೆ, ಭಿತ್ತಿಚಿತ್ರಕಲೆ, ಕಥಾ ಆಧಾರಿತ ಚಿತ್ರಗಳು, ಪೂರ್ಣಭಾವಚಿತ್ರ, ಭಾವಚಿತ್ರ, ಮುದ್ರಣ ಕಲೆ ಮುಂತಾದ ಕಲೆಗಳೊಂದಿಗೆ ಛಾಯಾಚಿತ್ರಣ, ಮೂರ್ತಿಶಿಲ್ಪದಲ್ಲಿ ಪರಿಣತಿ ಹೊಂದಿದ ಬಹುಮುಖ ಪ್ರತಿಭಾವಂತರಾಗಿದ್ದರು ಎನ್ನುವುದಕ್ಕೆ ಇವರ ಕಲಾಕೃತಿಗಳೇ ಸಾಕ್ಷಿಯಾಗಿವೆ.

ನೈಜಚಿತ್ರಕಲೆ

ಕರ್ನಾಟಕದಲ್ಲಿ ಮಾತ್ರವಲ್ಲ, ಭಾರತದೆಲ್ಲೆಡೆ ಚಿತ್ರಕಲೆ ಒಂದು ರೀತಿಯ ಜಾನಪದೀಯ ಅಂಶದಿಂದೊಡಗೂಡಿ ರಚಿತವಾಗಿರುತ್ತವೆಂಬುದಕ್ಕೆ ಕಾಂಗ್ರಾ, ಪಹಾಡಿ, ಮಧುಬನಿ, ರಜಪೂತ, ಮೊಘಲ್, ಕರ್ನಾಟಕ, ತಂಜಾವೂರು ಮೊದಲ್ಗೊಂಡಂತೆ ವೃತ್ತಿ ಪ್ರಧಾನವಾದವುಗಳು. ಅಂದರೆ ರಾಜ ಅಥವಾ ಧರ್ಮಾಧಿಕಾರಿ ಇವರನ್ನು ವೈಭವೀಕರಿಸುವ ನೆಪದಲ್ಲಿ ಉಳಿದ ಎಲ್ಲಾ ಪರಿವಾರವನ್ನು

---

೧೧. ಡಾ. ಕೆ. ರವೀಂಧ್ರನಾಥ (ಸಂ.) : ಬಳ್ಳಾರಿ ಜಿಲ್ಲಾ ದರ್ಶನ, ಪುಟ – ೧೮೨

ರಾಣಿಯೂ ಸೇರಿದಂತೆ ಕಿರು ರೂಪದಲ್ಲಿ ಚಿತ್ರಿಸಿರುವುದನ್ನು ಕಾಣಬಹುದಾಗಿದೆ. ಸಿಂಹಾಸನ ಮತ್ತಿತರ ಪೀಠೋಪಕರಣಗಳು ಹಾಗೂ ಹಿನ್ನೆಲೆಯಲ್ಲಿ ಮನೆ, ವಾತಾವರಣ ಇಲ್ಲವೇ ಪರಿಸರವನ್ನು ಚಿತ್ರಿಸುವಾಗಲೂ ನೈಜತೆಯಿಂದಲ್ಲದಿರುವುದನ್ನು ಹಳೇ ಚಿತ್ರಪಟಗಳಿಂದ ಇಲ್ಲವೇ ಸಂಗ್ರಹಾಲಯಗಳಲ್ಲಿರುವ ಚಿತ್ರಗಳಿಂದ ನೋಡಿ ತಿಳಿಯಬಹುದಾಗಿದೆ. ಯಾವುದೇ ಕಲಾವಿದನು ಮೊದಲು ನೈಜಸ್ವರೂಪ ಚಿತ್ರಕಲೆಯಿಂದ ಚಿತ್ರರಚನೆ ಪ್ರಾರಂಭವಾಗುತ್ತದೆ. ಆಗಾಗಿ ನಮ್ಮ ಪರಿಸರ ಸುತ್ತಮುತ್ತಲಿನ ವ್ಯಕ್ತಿ, ವಸ್ತು, ಚಟುವಟಿಕೆಗಳ ಸಾಮಾನ್ಯವಾಗಿ ಆಕರಗಳನ್ನು ಭಾರತೀಯ ಸಾಂಪ್ರದಾಯಿಕ ಕಲೆಯಾದ ಚಿಕಣಿ ಚಿತ್ರಕಲೆಯಲ್ಲಿ ಕಾಣಬಹುದಾಗಿದೆ.

ಮ. ಈ. ಗುರು ಅವರು ಈ ಸಾಂಪ್ರದಾಯಿಕ ಚಿತ್ರಕಲೆಗಳಿಂದ ಹೊರಗುಳಿದವರಲ್ಲ. ಭಾರತೀಯ ಎಲ್ಲಾ ಕಲಾವಿದರಂತೆಯೇ ಇವರು ಕೂಡ ಮೊದಲಿಗೆ ನೈಜಕಲೆಗೆ ಆಕರ್ಷಿತರಾಗುತ್ತಾರೆ. ಹೀಗಾಗಿ ಮ. ಈ. ಗುರು ಅವರು ಅಂದಿನ ಸಮಕಾಲೀನ ಚಿತ್ರಗಳಾದ ನೇಯ್ಗೆ, ಕಾಯಕ, ಗಣೇಶ ಉತ್ಸವ, ಕಳೆ ಕೀಳುವವರು, ಡೊಳ್ಳು ಕುಣಿತ, ಪ್ರಕೃತಿ, ದೃಶ್ಯಚಿತ್ರಕಲೆ ಅಲ್ಲದೇ ಪೌರಾಣಿಕ ಚಿತ್ರಕಲೆಯಲ್ಲಿ ಸಹ ನೈಜಕಲೆಯಲ್ಲಿ ರೇಖಾಚಿತ್ರಗಳ ಮೂಲಕವೇ ತಮ್ಮ ಅಸ್ತಿತ್ವವನ್ನು ಕಂಡುಕೊಂಡವರು. ಇದಲ್ಲದೇ ಇದಕ್ಕೂ ವೇಗವಾಗಿ ಕ್ಷಿಪ್ರ ರೇಖಾಚಿತ್ರಗಳನ್ನು ಸಾಧನೆಯಿಂದ ಕರಗತ ಮಾಡಿಕೊಂಡಿದ್ದರು. ಹಾಡುತ್ತಾ ರಾಗ, ಗೀಚುತ್ತಾ ರೇಖಾ ಎಂಬುವಂತೆ ಗುರು ಅವರು ಯಾವುದಾದರೊಂದು ನೋಟವನ್ನು ಕಣ್ಣಾಲಿಗಳಲ್ಲಿ ತುಂಬಿಕೊಳ್ಳುವಷ್ಟು ಸಮಯವಿಲ್ಲದೇ ಛಾಯಾಚಿತ್ರ ಪೆಟ್ಟಿಗೆ(camera) ತನ್ನ ಮಸೂರದಿಂದ ಕಂಡದ್ದನ್ನು ತನ್ನಲ್ಲಿ ಇಂಬಿಟ್ಟುಕೊಳ್ಳುವ ಕ್ಷಣದಂತೆ ಇಲ್ಲವೇ ದೊಂಬಿ ಮುಂತಾದ ಪರಿಸ್ಥಿತಿ ಕೈಮೀರುವ ಮುನ್ನ ಕ್ಷಿಪ್ರ ಕಾರ್ಯಾಚರಣೆ ಮಾಡುವಷ್ಟು ಸಮಯದಂತೆ ಚಿತ್ರಿಸುವುದಕ್ಕೆ Rapid sketch ಅಥವಾ ಕ್ಷಿಪ್ರ ರೇಖಾಚಿತ್ರಗಳೆನ್ನಬಹುದು.

ಇಂತಹ ಕ್ಷಿಪ್ರ ರೇಖಾಚಿತ್ರಗಳನ್ನು ಸಾವಿರಾರು ಬರೆದಿರುವ ಅವರ ಸಂಗ್ರಹ ಪುಸ್ತಕ (album) ಒಂದು ನಾಡಿನ ಜನಜೀವನವನ್ನು ತೆರೆದಿಟ್ಟಂತೆ ಭಾಸವಾಗುತ್ತದೆ. ಪುಟದಲ್ಲಿ ನಾಲ್ಕೈದು ಚಿತ್ರಗಳಿದ್ದರೆ ಕೆಲವುದರಲ್ಲಿ ಒಂದೇ ಇದೆ. ಬೆಳಿಗ್ಗೆ ಕಣ್ಣು ಹೊಸಕಿಕೊಂಡು ಎದ್ದು ಹೊರಬಂದು ಸೂರ್ಯನಿಗೆ ನಮಸ್ಕರಿಸುವ, ಅಥವಾ ಮನೆ ಮುಂದೆ ಕಸಗೂಡಿಸಿ ಮುಂಜಾನೆ ರಂಗೋಲಿ ಹಾಕುವ ಕ್ರಿಯೆಯಿಂದ ಆರಂಭವಾಗಿ ರಾತ್ರಿ ಮಲಗುವವರೆಗಿನ ಎಲ್ಲಾ ಕ್ರಿಯೆಗಳು, ಎಲ್ಲಾ ಬಗೆಯ ಜನ, ಅವರ ಉಡುಗೆ-ತೊಡುಗೆ, ಧರಿಸುವ ಕಷಾಯವಸ್ತು, ದೈನಂದಿನ ಕಾಯಕ, ವಿಹರಿಸುವ, ವಿಹಂಗಮಿಸುವ, ವಿತಂಡವಾದಕ್ಕಿಳಿವ, ಅಪ್ಪಣೆಯಲ್ಲಿ ಒಪ್ಪಿಗೆಯನ್ನು ಸೂಚಿಸುವ ಪ್ರಣಯಿನಿಗಳ ಹೀಗೆ ಒಂದೇ ಎರಡೇ? ಅವುಗಳ ವಿವರವನ್ನು ಶಬ್ದಗಳಲ್ಲಿ ಹಿಡಿದಿಡಲು ಸಾಧ್ಯವೇ ಇಲ್ಲ ಎನ್ನುವಂತಿದೆ.[೨] ಮ. ಈ. ಗುರು ಅವರು ಬಹುಮಟ್ಟಿಗೆ ನೈಜ, ರೇಖಾ,

೦೨. ಎಲ್. ಶಿವಲಿಂಗಪ್ಪ : ಎಂ.ಈ. ಗುರು, ಪುಟ – ೩೧

ಭಾವಚಿತ್ರ ಮತ್ತು ಪೂರ್ಣಭಾವ ಚಿತ್ರಗಳನ್ನು ತಮ್ಮ ನಿಗದಿತ ವೇಳೆಯಲ್ಲಿ ಹಾಗೂ ವೃತ್ತಿಯ ಪ್ರಾತ್ಯಕ್ಷಿಕೆಯ ಹಿನ್ನೆಲೆಯಲ್ಲಿ ಚಿತ್ರಿಸಿದ್ದಾರೆ. ಅಂತಹ ಭಾವಚಿತ್ರಗಳಲ್ಲಿ ಕೆಲವೇ ಕೆಲವು ಭಾವಚಿತ್ರಗಳನ್ನು ಪರಿಶೀಲಿಸಲಾಗಿದೆ.

ಭಾವಚಿತ್ರಗಳು : ವಿವೇಕಾನಂದರ ಭಾವಚಿತ್ರ, ಬಸವಣ್ಣನ ಪೂರ್ಣಭಾವಚಿತ್ರ, ನೆಹರೂರವರ ಭಾವಚಿತ್ರ, ಸಿ.ವಿ. ರಾಮನ್‌ರವರ ಭಾವಚಿತ್ರ ಮುಂತಾದವುಗಳನ್ನು ಇಲ್ಲಿ ವಿವರಿಸಲಾಗಿದೆ.

ಸ್ವಾಮಿ ವಿವೇಕಾನಂದ : ಮ. ಈ. ಗುರು ಅವರು ದೈವಭಕ್ತರಾಗಿದ್ದರಿಂದ ಇವರಿಗೆ ಸಿದ್ಧಪುರುಷರ, ಶರಣರ, ಧರ್ಮಗುರುಗಳ ಭಾವಚಿತ್ರಗಳು ಸಹಜವಾಗಿಯೇ ಒಂದು ಬಂದಿದ್ದು, ಸ್ವಾಮಿ ವಿವೇಕಾನಂದರ ಭಾವಚಿತ್ರವನ್ನು ರೇಖಾಚಿತ್ರದಲ್ಲಿ ರಚಿಸಿದ್ದಾರೆ. ಇಂತಹ ಭಾವಚಿತ್ರಗಳಲ್ಲಿ ರೇಖೆಗಳನ್ನು ವಿವರವಾಗಿ ನೆರಳು–ಬೆಳಕನ್ನು ಕೆನ್ನೆ, ಕಣ್ಣು, ಮೂಗು, ಬಟ್ಟೆಗಳಲ್ಲಿ ದುಡಿಸಿಕೊಳ್ಳುವುದರ ಮೂಲಕ ಭಾವಚರ್ಯೆಗೆ ಹೇಗೆ ರೂಪು ಕೊಡಬಹುದು ಎಂಬುದಕ್ಕೆ ಈ ಚಿತ್ರ ಉತ್ತಮವಾದ ಮಾದರಿಯಾಗಿದೆ. ಈ ಭಾವಚಿತ್ರಕ್ಕೆ ಜೀವ ತುಂಬಲು ಹಣೆ, ಮೂಗಿನ ಬದಿ ಗಲ್ಲದಲ್ಲಿ ಬೆಳಕನ್ನು ಹಾಗೆಯೇ ಬಿಡಲಾಗಿದೆ.

ನೆಹರೂ : ಈ ಭಾವಚಿತ್ರ ರಚಿಸಲು ನೆಹರೂರವರ ವೇಷ, ಬರೆಯುವ ಶೈಲಿ, ಬಿಳಿ ಅಂಗಿಯ ಮೇಲೆ ಕರಿಯ ಕೋಟ್, ಟೋಪಿ ಒಟ್ಟಾರೆಯಾಗಿ ಆ ಒಂದು ದೃಶ್ಯವನ್ನು ಸೆರೆಹಿಡಿಯಲು ಮನಸ್ಸಾಯಿತು ಎನ್ನಬಹುದು. ಭಾವಚಿತ್ರಗಳ ಹಲವು ಆಯಾಮಗಳಲ್ಲಿ ಪ್ರಯೋಗ ನಡೆಸಿದ ಗುರು ಅವರ ಈ ನೆಹರೂರವರ ಭಾವಚಿತ್ರವು ಒಂದು ಬದಿಯ (side angle) ಭಾವಚಿತ್ರವಾಗಿದೆ.

ಇವರ ಭಾವಚಿತ್ರಗಳನ್ನು ಕುರಿತಂತೆ ಎಲ್. ಶಿವಲಿಂಗಪ್ಪನವರು ಹೀಗೆ ಅಭಿಪ್ರಾಯಪಡುತ್ತಾರೆ: – "ಮುಖಚಿತ್ರಗಳನ್ನೇ ಗಮನಿಸುತ್ತಾ ಹೋದಂತೆ ಇನ್ನೊಂದು ಬಗೆಯ ಆಹ್ಲಾದವನ್ನುಂಟು ಮಾಡುತ್ತದೆ. ಎದೆ ಹಾಲುಣ್ಣುವ ಕಂದಮ್ಮನಿಂದ ಹಿಡಿದು ತಲೆನಡುಗಿ, ಶಿರಬಾಗಿ ಇದ್ದ ಹಲ್ಲುಗಳೆಲ್ಲವೂ ಉದುರಿ, ಮುಖ ಸುಕ್ಕುಕಟ್ಟಿ ಕಳುಹೀನವಾದ ಆ ಮುದಿನೋಟದವರೆಗೆ ವಿವಿಧ ಭಂಗಿಯಲ್ಲಿ ಮುಂಬದಿ ಹಿಂಬದಿ ಯಾವುದೇ ಇರಲಿ, ಇಂತಹದೇ ಭಾಷೆಯ ಅಥವಾ ಜಾತಿಯ ಜನ ಎಂದು ಗುರುತಿಸುವ ಹಾಗೆ ಮುಖಚಿತ್ರಗಳು ಕಾಗದದ ಮೇಲೆ ಮೈದಾಳಿವೆ.' ಎಲ್. ಶಿವಲಿಂಗಪ್ಪನವರ ಅಭಿಪ್ರಾಯದಂತೆ ಸರ್. ಸಿ.ವಿ.ರಾಮನ್‌ರವರ ಭಾವಚಿತ್ರ ಮತ್ತು ಐನ್‌ಸ್ಟೀನ್ ಭಾವಚಿತ್ರಗಳು ಉತ್ತಮವಾದ ಉದಾಹರಣೆಗಳಾಗಿವೆ.

ಪೂರ್ಣ ಭಾವಚಿತ್ರಗಳು (Life paintings) : ೧೫ನೆಯ ಶತಮಾನದಲ್ಲಿ ಮುಖವನ್ನು ಮಾತ್ರ ಭಾವಚಿತ್ರವೆಂದು ಚಿತ್ರಿಸಿದರೆ, ೧೬ನೆಯ ಶತಮಾನದಲ್ಲಿ ಇಡೀ ದೇಹವನ್ನು ಭಾವಚಿತ್ರವೆಂದು ಪರಿಗಣಿಸಿದರು.[೩] ಇಲ್ಲಿಯೂ ಕೂಡ ಇಡಿಯಾಗಿ ಅಥವಾ ಮೂರ್ನಾಲ್ಕು ಅಂಶ ಭಾಗದ ಚಿತ್ರಗಳನ್ನು ಭಾವಚಿತ್ರದ ಸಾಲಿನಲ್ಲಿಯೇ ಸೇರಿಸಿಕೊಳ್ಳಲಾಗಿದೆ. ಕಲಾಶಿಕ್ಷಣದಲ್ಲಿ ಮುಖವನ್ನು

೦೩. ಪಿ.ಆರ್. ತಿಪ್ಪೇಸ್ವಾಮಿ (ಪ್ರಸಂ.) : ಕಲಾಕೋಶ, ಪುಟ – ೨೩೭

[illegible]

ಮಾತ್ರ ಚಿತ್ರಿಸುವುದಕ್ಕೆ ಭಾವಚಿತ್ರ ಎಂಬ ಪದವನ್ನು ಉಪಯೋಗಿಸುತ್ತಾರೆ. ಇಡೀ ದೇಹಚಿತ್ರದ ಅಧ್ಯಯನಕ್ಕೆ ಜೀವನ ಚಿತ್ರಣ (Life painting) ಎಂಬ ಪದವನ್ನು ಉಪಯೋಗಿಸುತ್ತಾರೆ. ವ್ಯಕ್ತಿಚಿತ್ರವೆಂಬುದು ಎರಡೂ ರೀತಿಯ ಚಿತ್ರಗಳಿಗೆ ಅನ್ವಯವಾಗುತ್ತದೆ. ಇಂತಹ ಒಂದು ಚಿತ್ರ ಮಾಡುವಲ್ಲಿ ಮ. ಈ. ಗುರು ಅವರು ನಿಸ್ಸೀಮರು.

ಒಬ್ಬ ಸಂತನ ಭಾವಚಿತ್ರ : ಇದು ಗುರು ಅವರ ಅಪೂರ್ಣ ಭಾವಚಿತ್ರವಾಗಿದೆ. ಭಾವಚಿತ್ರಗಳಲ್ಲಿ ಪಕ್ವಯುತವಾದ ಸತ್ವಗಳನ್ನು ಒಳಗೊಂಡ ಉತ್ತಮ ಕೃತಿಯಾಗಿದೆ. ಸಂತನ ಸರಿಯಾದ ವಯಸ್ಸಲ್ಲಾದ ಸುಕ್ಕುಗಳು, ಗಡ್ಡದಲ್ಲಿ ಮೂಡಿದ ಉದ್ದದ ಬಿಳಿಕೂದಲು, ಜ್ಞಾನಯೋಗಿಯ ಗಾಂಭೀರ್ಯ ನೋಟ, ಕುಳಿತುಕೊಳ್ಳುವ ಶೈಲಿ ಮುಂತಾದ ಭಾವನೆಯನ್ನು ಈ ಕಲಾಕೃತಿಯಲ್ಲಿ ತುಂಬಾ ಸಮಯವನ್ನು ತೆಗೆದುಕೊಂಡು ರಚನೆಯಾಗಿದ್ದು, ಮೂರು ಅಥವಾ ನಾಲ್ಕು ಅಂಶ ಭಾಗದ ಭಾವಚಿತ್ರವಾಗಿದೆ.

ಪ್ರಕೃತಿ ಚಿತ್ರಗಳು : ಪ್ರಕೃತಿ ಚಿತ್ರಗಳ ಅಧ್ಯಯನವು ಶೈಕ್ಷಣಿಕ ಸಂದರ್ಭದಲ್ಲಿ ಮಹತ್ವದ ವಿಷಯವಾಗಿರುತ್ತದೆ. ಈ ತರಹದ ಅಧ್ಯಯನ ಎಲ್ಲಾ ಕಲಾ ಕಾಲೇಜಿನಲ್ಲಿ ಕಡ್ಡಾಯವಾದ ವಿಷಯವಾಗಿರುತ್ತದೆ. ಏಕೆಂದರೆ ವಿದ್ಯಾರ್ಥಿಗಳಿಗೆ ಯಥಾದರ್ಶನ ಸಿದ್ಧಾಂತದ ಅರಿವು ಬರುವುದು ಪ್ರಕೃತಿಚಿತ್ರಗಳ ಅಧ್ಯಯನದಿಂದ. ಈ ವಿಷಯವನ್ನು ಆಸಕ್ತಿಯಿಂದ ಅಧ್ಯಯನ ಮಾಡಿದ ವಿದ್ಯಾರ್ಥಿಗಳು ಮುಂದಿನ ವಿಷಯಗಳಾದ ಸ್ಥಿರಚಿತ್ರಣ, ಭಾವಚಿತ್ರ, ಸಂಯೋಜನೆಗಳ ರಚನೆಯಲ್ಲಿ ಪಕ್ವತೆಯನ್ನು ಸಾಧಿಸಲು ಅನುಕೂಲವಾಗಿದ್ದರಿಂದ ಇದು ಕಡ್ಡಾಯ. ಇಂತಹ ಚಿತ್ರಗಳನ್ನು ಕುರಿತು ಜಾನ್ ಕಾನ್‌ಸ್ಟೇಬಲ್, ರುಮಾಲೆ ಚೆನ್ನಬಸವಯ್ಯ ಮುಂತಾದ ಕಲಾವಿದರು ಪ್ರಕೃತಿ ಚಿತ್ರದಲ್ಲಿ ಪರಿಣಿತಿ ಸಾಧಿಸಿದ್ದರು. ಇಂತಹ ಒಂದು ಪ್ರಕೃತಿಯ ರಚನೆಯಲ್ಲಿ ನಿಸ್ಸೀಮರೆಂದರೆ ಗುರು ಅವರು ಕೂಡ ಒಬ್ಬರಾಗಿದ್ದಾರೆ. ಇವರು ರಚಿಸಿದ ಪ್ರಕೃತಿಚಿತ್ರಣಗಳು ಹಲವಾರು, ಅವುಗಳಲ್ಲಿ ಪ್ರಮುಖವಾದ ಕೆಲವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಚಾಮುಂಡಿ ವನ : ಈ ಚಾಮುಂಡಿವನದ ಒಟ್ಟಾರೆ ಪರಿಸರ ತಂಪುಪ್ರದೇಶದಂತೆ ಅಭಿವ್ಯಕ್ತಗೊಂಡಿದೆ. ಹೀಗಾಗಿ ಪರಿಸರದ ಭಾಗವಾಗಿರುವ ವಾಸ್ತುವಿನ ರಚನೆಯಲ್ಲಿ ಬಿಸಿಲು ಈ ವಾಸ್ತುವಿನ ಒಂದು ಭಾಗದಲ್ಲಿ ಮೂಡಿದೆ. ಆದರೆ ಆ ಬಿಸಿಲು ಗುಡ್ಡಗಳಲ್ಲಿ ಮೂಡಿಲ್ಲ. ಮೋಡ ಮುಸುಕಿದಾಗ ಸೂರ್ಯನ ಕಿರಣಗಳು ಮಬ್ಬಾಗುವ ಮತ್ತು ಅದರಿಂದ ಉಂಟಾಗುವ ಒಂದು ಬಗೆಯ ನೆರಳು ಗುಡ್ಡಗಳ ಮೇಲೆ ಆವರಿಸಿದೆ. ಹೀಗೆ ಅನುಸರಿಸಿರುವ ರಚನಾ ತಂತ್ರವು ಚಿತ್ರದ ಒಂದು ಬಾಗ–ಬಾಳಿಕೆಗೆ ಮನಸೋತು ಕೊಡುವ ಒಲವನ್ನು ಮುಂಭಾಗದ ಗಿಡ ಗುಡ್ಡ–ಬೆಟ್ಟ ನೀರು ಎಲ್ಲವನ್ನು ಚಿತ್ರಿಸುವುದರ ಮೂಲಕ ಸಂಯೋಜಿತ ಪ್ರಕೃತಿ ಚಿತ್ರಣವಾಗಿದೆ.

ಕಾರಂಜಿ ಕೆರೆ : ಈ ಒಂದು ಕಲಾಕೃತಿಯು ಜಲವರ್ಣ ಲೇಪಿತವಾದ ಹಿಂದಿನ ಚಾಮುಂಡಿಯ ವನದ ಚಿತ್ರದಂತೆಯೇ ಶೈಲಿಯಲ್ಲಿ ನಿರ್ಮಾಣವಾಗಿದ್ದು, ಈ ಕೃತಿಯ ಪರಿಸರವು

[illegible]

ಜಲಸ್ವರೂಪದ ಒಂದು ಮಳೆನಾಡಿನ ವಾತಾವರಣ ನೋಟಕರಿಗೆ ವಿಸ್ಮಯದ ಅನುಭವಗಳನ್ನು ನೀಡುವಂತಹದಾಗಿದೆ. ಇದು ಒಂದು ಕ್ಷಿಪ್ರ ಭೂ ಚಿತ್ರಣವಾಗಿದೆ. ಈ ಕ್ಷಿಪ್ರ ಭೂಚಿತ್ರಣವಾಗಿ ನಿರ್ಮಾಣ ಮಾಡಲು ಹಿಂದಿನ ಹಲವು ಕಲಾಕೃತಿಗಳ ನಿರ್ಮಾಣದ ಪ್ರತಿಫಲವೇ ಎನ್ನಬಹುದು.

ಬೆಟ್ಟದ ಬುಡ : ಈ ಒಂದು ಶೀರ್ಷಿಕೆಯ ಪ್ರಕೃತಿ ಚಿತ್ರವು ಚಾಮುಂಡಿ ವನ ಮತ್ತು ಕಾರಂಜಿ ಕೆರೆಯ ಚಿತ್ರಗಳಿಗಿಂತ ಭಿನ್ನವಾಗಿದೆ. ಈ ಕಲಾಕೃತಿಯಲ್ಲಿ ಆಕಾಶ ನೀಲಿಯಲ್ಲಿಯೇ ಗಾಢ ತಿಳಿಯಲ್ಲಿಯೇ ಒಟ್ಟಾರೆ ಕೃತಿ ನಿರ್ಮಾಣವಾಗಿದೆ. ದೂರದ ಬೆಟ್ಟವನ್ನು ತೋರಿಸಲು ತಿಳಿ ಮತ್ತು ಮುಂಭಾಗದ ಬೆಟ್ಟವನ್ನು ತೋರಿಸಲು ನೀಲವರ್ಣವನ್ನು ಗಾಢವಾಗಿ ತೋರಿಸಲಾಗಿ ಇದು ನೈಜ ಸ್ವರೂಪದ ಮೂರ್ತ ಪ್ರಕೃತಿಚಿತ್ರವಾಗಿದೆ.

ಭಿತ್ತಿಚಿತ್ರ ರಚನೆ : ಗುರು ಅವರ ಭಿತ್ತಿಚಿತ್ರಕಲೆಯು ಒಂದು ವಿಶೇಷವಾಗಿದೆ. ಭಿತ್ತಿಚಿತ್ರ ರಚನೆಯ ಚಿತ್ರಗಳನ್ನು ಪ್ರತಿಕೃತಿ ಮಾಡುವ ಗೀಳು ಇವರದು. ಜೊತೆಯಲ್ಲಿ ಮುಂದಿನ ಪೀಳಿಗೆಗೆ ಉಳಿಸುವ ಸಾಹಸದ ಕೆಲಸ ಇವರದು. ಭಿತ್ತಿಯಲ್ಲಿರುವ ಚಿತ್ರ ಯಾವ ರೀತಿ ತನ್ನ ಮೂಲವರ್ಣವನ್ನು ಕಳೆದುಕೊಂಡು ಕಳಾಹೀನವಾಗಿರುತ್ತದೋ ಅದೇ ರೀತಿಯಾದ ಬಣ್ಣಗಳನ್ನು ಸಂಯೋಜಿಸಿ ಚಿತ್ರಿಸುವುದು ಅಗತ್ಯವಾದುದರಿಂದ ಕಲಾವಿದನ ಜಾಣ್ಮೆ ಅನುಕರಣೆ ಮಾಡುವುದರಲ್ಲಿ ತೋರಿಸಿಕೊಟ್ಟಿದ್ದಾರೆ.

ಇವರು ಈ ಚಿತ್ರಗಳನ್ನು ಅನುಕರಣೆ ಮಾಡುವಾಗ ಕಲಾವಿದನ ಸ್ಥಿತಿಗಿಂತ ಕಲೆಯನ್ನು ಕುಂಚದಿಂದ ಸೆರೆಹಿಡಿಯುವುದರಲ್ಲಿಯ ಸ್ಥಿತಿ ತಪಸ್ಸಿನಂಥದ್ದು ಎನ್ನುವುದು. ಇವರ ಅನುಭವವನ್ನು ಮೇಲ್ಮಾಡುವಿನಲ್ಲಿ (ceiling) ಚಿತ್ರವನ್ನು ನಕಲು ಮಾಡಬೇಕಾದಾಗ ಅಟವನ್ನು ಮರದಿಂದ ಕಟ್ಟಿಕೊಂಡು ಅಂಗಾತ ಮಲಗಿಯೇ ಪಾರದರ್ಶಕ ಕಾಗದವನ್ನು (tracing paper) ಅದರ ಮೇಲೆ ಹರಡಿ, ಅವಶ್ಯವಿರುವಡೆ ಅಂಟು ಕಾಗದದಿಂದ ಅಂಟಿಸಿ ಯಥಾರೀತಿಯಲ್ಲಿಯೇ ನಕಲು ಮಾಡಿಕೊಂಡು ತದನಂತರದಲ್ಲಿ ಯಾವ ಕಾಗದ ಅಥವಾ ಕ್ಯಾನ್ವಾಸ್ ಮೇಲೆ ಮಾಡಬೇಕೆಂದಿರುವೆವೋ ಅದರ ಮೇಲೆ ಮತ್ತೆ ನಕಲು ಮಾಡಿ ಬಣ್ಣಗಳಿಂದ ಯಥಾವತ್ತತೆಯನ್ನು ತಂದಿರುವ ಗುರು ಅವರು ಶ್ರವಣಬೆಳಗೊಳದ ಜೈನಮಠ, ಮೈಸೂರಿನ ಅರಮನೆಯೊಳಗಿರುವ ವರಾಹಸ್ವಾಮಿಯ ದೇವಾಲಯ, ಮುಡುಕುತೊರೆಯ ಮಲ್ಲಿಕಾರ್ಜುನ ಸ್ವಾಮಿಯ ದೇವಾಲಯ, ನರಗುಂದದ ರಾಜವಾಡೆ, ಶಿರಾದಲ್ಲಿನ ರೇವಣಸಿದ್ಧೇಶ್ವರ ದೇವಾಲಯಗಳಿರುವುದರಲ್ಲಿ ಕೆಲವನ್ನು ಚಿತ್ರಿಸಿದ್ದು ಮತ್ತು ಮೇಲ್ಮಾಡುವಿನಲ್ಲಿರುವ ಚಿತ್ರದ ನಕಲಿಗಿಂತ ಗೋಡೆಯ ಮೇಲಿರುವುದು (wall painting) ಸುಲಭವೆನ್ನುವ ಗುರು ಅವರು ತಮ್ಮೊಡನೆ ವೈ. ಸುಬ್ರಹ್ಮಣ್ಯರಾಜು, ಎಸ್. ಎಸ್. ಕುಕ್ಕೆ, ಎಂ.ಎ. ಚೆಟ್ಟಿ, ಕಮಲಾಕ್ಷಿ, ನಂಜುಂಡರಾವ್, ಕಾಳಪ್ಪ, ಎಂ.ಎಸ್. ಚಂದ್ರಶೇಖರ ಮತ್ತಿತರರು, ಚಾಮರಾಜನಗರ, ಸೀಬಿ, ಯಡಿಯೂರು, ಹಂಪೆ, ಶ್ರೀರಂಗಪಟ್ಟಣ, ಮಾಗಡಿ, ಗುಬ್ಬಿ ಇನ್ನೂ ಕೆಲವು ಕಡೆ ಭಿತ್ತಿಚಿತ್ರಗಳಿದ್ದು, ಅವುಗಳನ್ನು ದಾಖಲಿಸಿಕೊಳ್ಳುವ ಕೆಲಸ ಅದೆಷ್ಟು

[illegible]

ಪ್ರಗತಿಯಾಗಿದೆ ಎಂಬುದು ಇನ್ನೂ ಸ್ಪಷ್ಟೀಕರಣವಾಗಲಿಲ್ಲ. ಇದೊಂದು ಮುಂದಿನ ಪೀಳಿಗೆಗೆ ಸ್ಮರಣಾರ್ಹ ಕೆಲಸ ಎಂದು ಇವರು ಸ್ನೇಹಿತರಾದ ಎಲ್. ಶಿವಲಿಂಗಪ್ಪನವರ ಮುಂದೆ ಹೇಳಿರುವ ಅನುಭವವನ್ನು ಎಲ್. ಶಿವಲಿಂಗಪ್ಪನವರು ಕಣ್ಣಿಗೆ ಕಟ್ಟುವಂತೆ ವಿವರಿಸುತ್ತಾರೆ.

ಕಥಾ ಆಧಾರಿತ ಚಿತ್ರಗಳು : ಕಥೆಗಳಿಗೆ ಚಿತ್ರರಚನೆ ಮಾಡುವುದೊಂದು ವಿಧಾನ. ವಾಣಿಜ್ಯ ಕಲೆಯಲ್ಲಿ ಬರುವ ಈ ವಿಧಾನದಲ್ಲಿ ಕಥಾಸಂದರ್ಭದ ಚಿತ್ರರಚನಾಕಾರನಾಗಲು ಬಯಸುವವರು ಸುಂದರ ದೇಹದ ಆಂಗಿಕ ರಚನೆಯನ್ನು ತಿಳಿದಿರಬೇಕು. ಮುಖದಲ್ಲಿ ನವರಸಗಳನ್ನು ವ್ಯಕ್ತಪಡಿಸುವ ಚಿತ್ರರಚನೆ ತಿಳಿದಿರಬೇಕು. ಹತ್ತಾರು ಪುಟದ ವಿಷಯವನ್ನು ಒಂದೆರಡು ಚಿತ್ರದಲ್ಲಿ ತೋರಿಸಬೇಕು.

ಒಂದು ವೇಳೆ ಧಾರಾವಾಹಿ ಕಥೆಯಾಗುವುದಾದರೆ ಒಂದೇ ತೆರನಾದ ಪಾತ್ರಗಳು ಅಥವಾ ಓರ್ವ ನಾಯಕ, ನಾಯಕಿ ಕಥೆ ತುಂಬೆಲ್ಲಾ ಬರುವುದರಿಂದ ಕಲಾವಿದ ಮೊದಲು ಬರೆದ ಆ ಮುಖವನ್ನೇ ವಿವಿಧ ಕೋನಗಳಲ್ಲಿ ಮತ್ತೆ ಮತ್ತೆ ಚಿತ್ರಿಸಬೇಕಾಗುತ್ತದೆ. ಇಂತಹ ಚಿತ್ರಗಳನ್ನು ಮಾಡುವುದರಲ್ಲಿ ತುಂಬಾ ಆಸಕ್ತರಾಗಿದ್ದರು ಎನ್ನುವುದಕ್ಕೆ ಇವರ ಕಲಾಕೃತಿಗಳೇ ಸಾಕ್ಷಿಯಾಗಿವೆ.

ಕ್ಷಿಪ್ರ ರೇಖಾಚಿತ್ರಗಳು ಪಠ್ಯ ಪುಸ್ತಕಗಳಿಗಾಗಲೀ ಅಥವಾ ಇನ್ನಿತರ ಪುಸ್ತಕಗಳಿಗಾಗಲೀ ಸಂದರ್ಭ ಚಿತ್ರ ಬರೆಯಲು ಮುದ್ರಣಕ್ಕೆ ಸಿದ್ಧಪಡಿಸುವಾಗ ಹೆಚ್ಚಾಗಿ ಹಿನ್ನೆಲೆಯಲ್ಲಿನ ಕಾಗದದ ಬಿಳಿಯನ್ನೇ(paper white) ಬಿಟ್ಟುಕೊಂಡು ಉಳಿದಂತೆ ಅಗತ್ಯತೆಗೆ ತಕ್ಕಂತೆ ರೇಖೆಗಳನ್ನು ಲಂಬ ತಿರುವ, ವಕ್ರ ಅಥವಾ ಕೋನಾಕಾರವಾಗಿ, ತೆಳು ಅತಿ ತೆಳು ಇಲ್ಲದೇ ಗಾಢತೆ ಬರುವ ಹಾಗೆ ಮೇಲಿಂದ ಮೇಲೆ ಹಲವಾರು ಗೆರೆಗಳಿಂದ ರೇಖಿಸಿ ಛಾಯೆಯನ್ನುಂಟು ಮಾಡಿ ದುಂಡುತನವನ್ನು (roundness) ತರುವ ಮೂಲಕ ಮನುಷ್ಯ ಚಿತ್ರಕ್ಕಾಗಲೀ ಅಥವಾ ಅದಕ್ಕೆ ಹೊಂದಿಕೊಂಡಂತಹ ಪರಿಸರ ಅಥವಾ ಸಾಧನ-ಸಲಕರಣೆಗಳ ಸಹಿತ ಛಾಯಾಚಿತ್ರವನ್ನು ನೋಡಿದ ಅನುಭವವಾಗುವಂತೆ ಚಿತ್ರಿಸಿರುವುದನ್ನು ಕಾಣಬಹುದು.[೧೪]

"ಒಂದು ಚಿತ್ರಕಲೆ, ನೂರು ವಾಕ್ಯಗಳಿಗೆ ಸಮಾನ" ಎನ್ನುವ ನುಡಿಯಂತೆ ಇಡೀ ಕಥಾ ಸಾರವನ್ನು ಒಂದು ಚಿತ್ರದಲ್ಲಿ ಚಿತ್ರಿಸಿರುವ ಗುರುರವರು ಚಿತ್ರ ಸಂಯೋಜನೆಯಲ್ಲಿ ನಿಸ್ಸೀಮತೆಯನ್ನು ತಮ್ಮ ಕುಂಚದಿಂದಲೇ ಗೆರೆಗಳನ್ನು ಆಕಾರಕ್ಕೆ ತಕ್ಕಂತೆ ಎಳೆದು ತಲೆಕೂದಲು, ಸೀರೆ ಅಂಚು, ಕಚ್ಚೆ ಪಂಚೆಯಲ್ಲಿನ ನಿರಿಗೆ, ಹೊದ್ದ ಶಾಲು, ತೊಟ್ಟ ಪೈಜಾಮು ಯಾವುದೇ ಇರಲಿ, ಗಾಢವಾದ ಕಪ್ಪನ್ನು ಲೇಪಿಸಿ ರೂಪ ಕೊಟ್ಟಿರುವುದನ್ನು ಕಾಣುತ್ತೇವೆ. ಅಂತಹವುಗಳಲ್ಲಿ ಮುಖ್ಯವಾಗಿ ಕುವೆಂಪುರವರ ಜನಪ್ರಿಯ ವಾಲ್ಮೀಕಿ ರಾಮಾಯಣದ ನಂತರ ಅತಿಹೆಚ್ಚು ಚಿತ್ರಗಳೊಂದಿಗೆ ಈ ಪುಸ್ತಕದಲ್ಲಿ ಇಂಡಿಯನ್ ಇಂಕ್ ಬಳಸಿ ನಿಬ್‌ನಿಂದಲೇ ಬರೆದವುಗಳಾಗಿದ್ದು, ಇದು ಕಲಾವಿದರ ಪರಿಶ್ರಮಕ್ಕೆ ಕನ್ನಡಿ ಹಿಡಿದಂತಿದೆ. ಸಾಮಾಜಿಕವಾದ ಕಥೆಯನ್ನಾಧರಿಸಿ ಸಂದರ್ಭ ಚಿತ್ರ ಬರೆಯುವುದಕ್ಕೂ ಐತಿಹಾಸಿಕ, ಪೌರಾಣಿಕ ಅಥವಾ ಧಾರ್ಮಿಕ ವಿಷಯ ಕುರಿತು ಬರೆಯುವುದಕ್ಕೂ

೧೪. ಎಲ್. ಶಿವಲಿಂಗಪ್ಪ : ಎಂ.ಈ. ಗುರು, ಪುಟ – ೩೨–೩೩

ಸಾಕಷ್ಟು ವ್ಯತ್ಯಾಸಗಳಿವೆ. ಈ ಕಾಲದ ಜನಜೀವನ, ಧಾರ್ಮಿಕತೆಯ ಮನೋಭಾವ, ವಸ್ತ್ರವಿನ್ಯಾಸ, ಮುಖದಲ್ಲಿನ ಕಳೆ ಎಲ್ಲವನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿದ್ದು ಭಾವುಕರಾಗಿರುವ ಭಕ್ತರ ಭಾವನೆ ಕೆರಳದೇ ಅರಳುವಂತಾಗುವಂತೆ ಚಿತ್ರಿಸಬೇಕಾಗುತ್ತದೆ. "ಶಬ್ದ ಸೃಷ್ಟಿಯಿಂದ ವ್ಯಕ್ತಿತ್ವ ಕಟ್ಟಿಕೊಡುವ ಸಾಹಿತಿಯಷ್ಟೇ ಪ್ರಜ್ಞಾಪೂರ್ವಕವಾಗಿ ಕಲಾವಿದನಾದವನು" ಎನ್ನುವ ಎಲ್. ಶಿವಲಿಂಗಪ್ಪನವರು ಕಲೆಯ ಒಳಗಣ್ಣನ್ನು ಕಂಡಂತಹ ಚಿತ್ರಕಲಾವಿದರು. ಗುರು ಅವರು ರಚಿಸಿದ ಸಾಂದರ್ಭಿಕ ಚಿತ್ರಗಳು ನೂರಾರು. ಅಂತಹ ಪುಸ್ತಕಗಳಲ್ಲಿ ಡಾ. ಸಿದ್ಧಯ್ಯ ಪುರಾಣಿಕರು ಬರೆದ ಸುಮಾರು ೬೦೦ ಪುಟದ ಈ ಗ್ರಂಥ ವಯಸ್ಕರ ಶಿಕ್ಷಣ ಸಮಿತಿಯಿಂದ ೧೯೬೪ರಲ್ಲಿ ಪ್ರಕಟಗೊಂಡಿದೆ. ಮತ್ತು ಷಟ್‌ಸ್ಥಳಾರೋಹಣ ಮಾಡಿರುವ ಅಲ್ಲಮಪ್ರಭು ನೇತೃತ್ವದಲ್ಲಿ ಶರಣರ ಅನುಭವ ಮಂಟಪ, ಮರಳು ಶಂಕರದೇವನ ಪ್ರಸಂಗ, ಕದಳಿವನ ಇದಕ್ಕೆ ಪೂರಕವಾಗಿದೆ. ಶರಣರ ಸಂಸ್ಕೃತಿಗೆ ಸಂಬಂಧಿಸಿದ ಹಲವಾರು ಪುಸ್ತಕಗಳನ್ನು ಓದಿ ಮನನ ಮಾಡಿಕೊಂಡಿರುವುದರ ಜೊತೆಗೆ ಅವರು ಬೆಳೆದು ಬಂದ ಸಂಸ್ಕಾರವು ಅಂತಹದೇ ಆಗಿದ್ದರಿಂದ ಪ್ರತಿ ಚಿತ್ರಗಳು ವೀಕ್ಷಕನಿಗೆ ಪೂಜ್ಯಭಾವ ಬರುವಂತಾಗಿವೆ[೫೫] ಎನ್ನುವುದಕ್ಕೆ ಉಳಿದಿರುವ ಇಂದಿನ ಅವರ ಚಿತ್ರಗಳೇ ಸಾಕ್ಷಿಯಾಗಿವೆ.

ಸಂಯೋಜನ ಚಿತ್ರಗಳು (Composition) : ಈ ಸಂಯೋಜನ ಚಿತ್ರಗಳ ಪದ್ಧತಿಯೂ ಸಹ ಕಥಾ ಆಧಾರಿತ ಚಿತ್ರಗಳಂತೆ ಕಂಡರೂ ಇಲ್ಲಿ ಯಾವುದೇ ಕಥಾವಿಷಯ ಇರಲೇಬೇಕು ಎಂಬ ನಿಯಮವಿಲ್ಲ. ಇದ್ದರೆ ಇರಬಹುದು, ಇಲ್ಲದೇ ಇರಬಹುದು. ಇಲ್ಲಿ ಒಟ್ಟಾರೆ ವ್ಯವಸ್ಥಿತವಾದ ಸಂಯೋಜನೆಗೆ ಮಾತ್ರ ಒತ್ತುಕೊಡಬೇಕಾಗುತ್ತದೆ. ಅಂತಹ ಒಂದು ಪದ್ಧತಿಯಲ್ಲಿ ಚಿತ್ರರಚಿಸುವುದಲ್ಲಿ ಗುರು ಅವರು ನಿಸ್ಸೀಮರಾಗಿದ್ದರು. ಅಂತಹ ಚಿತ್ರಗಳ ಪಟ್ಟಿಯಲ್ಲಿ ಕೆಲವು ಸಂಯೋಜನೆಯ ಕಲಾಕೃತಿಗಳು ಚರ್ಚಿತಗೊಂಡಿವೆ.

ಗಣೇಶ ಉತ್ಸವ : ಈ ಕಲಾಕೃತಿಯೂ ಸಹ ಮೊದಲನೆಯ ಕಲಾಕೃತಿಯ ತಂತ್ರಗಾರಿಕೆಯಲ್ಲಿ ರಚಿತಗೊಂಡಿದ್ದು, ಅಧಿಕ ಆಕಾರಗಳಿಂದ ಸಂಯೋಜಿತಗೊಂಡ ಕಲಾಕೃತಿಯಾಗಿದೆ. ಗಣೇಶನ ಉತ್ಸವ ಕುರಿತು ವಸ್ತುವಿಷಯವಾಗಿದೆ. ಗಣಪ ಎಂದೊಡನೆಯೇ ಭಾರತೀಯರೆಲ್ಲರಿಗೂ ಕೇಳಿದುದನ್ನು ನೀಡುವ ದೇವರು, ನಮ್ಮ ಕಷ್ಟಗಳನ್ನು ಪರಿಹರಿಸುವನು ಎಂದು ನಂಬಿಕೆ. ಹಾಗೆಯೇ ದೇಶದ ಪ್ರಗತಿ ಅಥವಾ ದೇಶಕ್ಕೊರಗುವ ಪ್ರವಾಹ, ಪ್ರಕೋಪ, ಯುದ್ಧ ಇತ್ಯಾದಿ ಸಂಕಷ್ಟಗಳಿಗೆ ಸಿಕ್ಕಿ ತತ್ತರಿಸುವಾಗ ನೆರವಿಗಾಗಿ ಮೊರೆ ಹೋಗುವ ಸರ್ವರ ದೈವ ಗಣೇಶನಾಗಿದ್ದಾನೆ. ಈ ಗಣೇಶನ ಆರಾಧನೆಯ ಭಾಜ-ಭಜಂತ್ರಿಯಿಂದ ವಿಜೃಂಭಣೆಯಿಂದ ನಡೆಯುವ ಮೆರವಣಿಗೆಯ ದೃಶ್ಯವನ್ನು ಗುರುಗಳು ನೈಜ ಸ್ವರೂಪದಲ್ಲಿ ರಚಿಸಿದ್ದಾರೆ. ಈ ಒಂದು ತಂತ್ರಗಾರಿಕೆಯಲ್ಲಿ ನೇಯ್ದು ಕಾಯಕ, ಡೊಳ್ಳು ಕುಣಿತ ಮುಂತಾದ ಕಲಾಕೃತಿಗಳು ರಚನೆಯಾಗಿವೆ.

---

೦೫ ಎಲ್. ಶಿವಲಿಂಗಪ್ಪ : ಎಂ.ಈ. ಗುರು, ಪುಟ – ೩೫





ಎಂ.ಇ.ಗುರು ಮುದ್ದಾಪುರ ಅವರ ಕಲಾಕೃತಿಗಳು





ಗುರು ಅವರು ನೈಜ ಸ್ವರೂಪದ ಕಲಾವಿದರಾಗಿದ್ದು, ಈ ಕಲೆಗೆ ಎರಡು ಮೂರು ಬಗೆಯ ಪ್ರೇರಣೆಗಳನ್ನು ಕಾಣಬಹುದು. ಮುದ್ದಾಪುರದ ಹಳ್ಳಿಯ ಬದುಕಿನ ಅನುಭವ ಮತ್ತು ಮೈಸೂರಿನ ತಂಪು ವಾತಾವರಣದ ಪರಿಸರಗಳು ಕಲೆಗೆ ಪ್ರೇರಣೆ, ಪ್ರಾಮುಖ್ಯ ಪಡೆಯುತ್ತದೆ. ಈ ಕಲಾಸೃಷ್ಟಿಯೊಂದರ ಯಶಸ್ಸಿನ ಹಿಂದೆ ತಂತ್ರಗಾರಿಕೆಯೂ ಅವಶ್ಯ. ಮುಖ್ಯ ರೂಪಗಳ ವಿಶಿಷ್ಟವಾದ ಅನುಭವವನ್ನು ಪ್ರಕಟಿಸಬೇಕೆಂದರೆ ತಂತ್ರಗಾರಿಕೆ ಅತ್ಯಂತ ಅವಶ್ಯಕ. ನೈಸರ್ಗಿಕ ಆಚರಣೆ, ನಿತ್ಯ ಜೀವನದ ಕೃಷಿ ಪ್ರಧಾನವಾದ ಆಕೃತಿಗಳನ್ನು ದಟ್ಟ ರೇಖೆಗಳೊಂದಿಗೆ ಮೃದುವಾದ ಛಾಯೆಗಳ ಲೇಪನ ಮುಂತಾದವು ಕಲಾಕೃತಿಯ ನಿರ್ಮಾಣದ ತಳಹದಿಯಾಗಿದ್ದವು. ನೈಜ ಚಿತ್ರಗಾರರಿಲ್ಲದೇ ಉತ್ತಮವಾದ ಕವಿಯಾಗಿರುವುದು ಇವರ ಮತ್ತೊಂದು ಪ್ರತಿಭೆಯ ಮುಖವಾಗಿದೆ.

ಬಿಡುವಿದ್ದಾಗಲೆಲ್ಲಾ ಓದುವ ಹವ್ಯಾಸದ ಜೊತೆಗೆ ಸಮಾಜದಲ್ಲಿ ಕಂಡದ್ದನ್ನು ಕವನ ರೂಪದಲ್ಲಿ ಬರೆಯುವ ಹವ್ಯಾಸವಿತ್ತು. ಕಲೆ ಮತ್ತು ಕಲಾವಿದರ ಒಡನಾಟವೇ ಅಧಿಕವಾಗಿದ್ದುದರಿಂದ ಪ್ರಶಸ್ತಿಗಾಗಿ ಪರದಾಟ, ಅಧಿಕಾರಕ್ಕಾಗಿ ಕಿತ್ತಾಟ, ಸಿದ್ಧಿಯೇ ಇಲ್ಲದೇ ಸುದ್ದಿಗಾಗಿ ಬಡಿದಾಡುವವರ ಮನೋಧರ್ಮ, ರಾಜಕೀಯ ಸ್ಥಿತ್ಯಂತರದಲ್ಲಿ ಕಲೆ ನಲಗುವಿಕೆ, ನಡೆಯದ ಕಾರ್ಯಕ್ರಮಕ್ಕೆ ನಾಲ್ಕಾರು ಬಿಲ್ಲು ಇತ್ಯಾದಿ ವಿಷಯಗಳನ್ನು ಕುರಿತು ಬರೆದ ೪೦ಕ್ಕೂ ಮಿಗಿಲಾದ ಕವನಗಳನ್ನು ರಚಿಸಿದ ಇವರನ್ನು ಕವಿಯಾಗಿ ಗುರುತಿಸಿ, ಸಾಹಿತ್ಯ ಸಮ್ಮೇಳನಾಧ್ಯಕ್ಷ ಸ್ಥಾನವನ್ನು ನೀಡಿ ಮೆರವಣಿಗೆಯಲ್ಲಿ ಕರೆತಂದ ಹೊಸಪೇಟೆ ತಾಲೂಕಿನ ಕಂಪ್ಲಿಯಲ್ಲಿ ಸಮ್ಮೇಳನ ನಡೆಸಿ ಗೌರವಿಸಿದುದು ಹೆಮ್ಮೆಯ ಸಂಗತಿ.[೬] ಮತ್ತು ಚಿತ್ರಕಲಾಪೂರಕವಾದ ಪ್ರದರ್ಶನಗಳು, ಸಂಗ್ರಹ, ಶಿಬಿರ ಮುಂತಾದವುಗಳಲ್ಲಿ ಭಾಗವಹಿಸಿದ್ದು ಅದು ಎಷ್ಟೋ! ಇವರ ಕಲೆಯಿಂದ ಕಿವಿ, ಕಣ್ಣು, ತುಂಬಿಕೊಂಡಿವೆ.

೦೩. ಬಿ. ಕೊಂಡಾಚಾರ್ಯ

ಮೊದಲ ಇಬ್ಬರು ಕಲಾವಿದರಂತೆ ಬಿ. ಕೊಂಡಾಚಾರ್ಯರೂ ಒಬ್ಬರಾಗಿದ್ದಾರೆ. ಬಳ್ಳಾರಿಯ ಮಡಿಲಲ್ಲಿ ಚಿತ್ರಕಲಾ ಭಕ್ತ, ಕಲಾವಿದರಾಗಿ ಬೆಳೆದ ಅತ್ಯುತ್ತಮವಾದ ಸಾಂಪ್ರದಾಯಿಕ ರೇಖಾಚಿತ್ರ ಕಲಾವಿದರಾಗಿದ್ದಾರೆ. ಈ ಸಂಪ್ರದಾಯಿಕ ಕಲಾವಿದರಲ್ಲೂ ವಿಷ್ಣುಧರ್ಮೋತ್ತರ ಪುರಾಣದಂತಹ ಶಾಸ್ತ್ರೀಯ ಗ್ರಂಥಗಳಲ್ಲಿನ ನಿಯಮದಂತೆ ರೇಖಾಚಿತ್ರಗಳನ್ನು ಪ್ರಮಾಣಬದ್ಧವಾಗಿ ಚಿತ್ರಿಸಲಾಗುತ್ತದೆ. ಅಂತಹವರಲ್ಲಿ ಬಿ. ಕೊಂಡಾಚಾರ್ಯರೊಬ್ಬರಾಗಿದ್ದಾರೆ. ಸಾಂಪ್ರದಾಯಿಕ ರಚನೆಗಳು ನೋಡುಗರಿಗೆ ತಕ್ಷಣ ಗ್ರಹಿಕೆಗೆ ಒಳಪಡುತ್ತದೆ. ಇಂತಹ ಕಲೆಯನ್ನು ರಚಿಸಲು ತಾಳ-ಮಾನದ ಅರಿವು ಈ ಕಲಾವಿದನಿಗಿರುತ್ತದೆ. ಇಂತಹ ಅಂಶಗಳನ್ನು ಕೊಂಡಾಚಾರ್ಯರ ರೇಖಾಕೃತಿಗಳಲ್ಲಿ ಕಾಣುತ್ತೇವೆ. ಬಳ್ಳಾರಿ ಜಿಲ್ಲೆಯಲ್ಲಿಯೇ ಚಿತ್ರಕಲಾವಿದರ ಪೈಕಿ ಉತ್ತಮವಾದ ರೇಖಾಚಿತ್ರ ಕಲಾವಿದರೆಂದರೆ ಕೊಂಡಾಚಾರ್ಯರಾಗಿದ್ದಾರೆ. ಹಿಂದಿನ ಪ್ರೇರಣೆ ಕೂಡ ಈ ಕಲೆಗೆ ಮುಖ್ಯ ಪ್ರೇರಕವಾಗಿರುತ್ತದೆ.

೦೬. ಎಲ್. ಶಿವಲಿಂಗಪ್ಪ : ಎಂ.ಈ. ಗುರು, ಪುಟ – ೩೮

ಇವರ ಬಾಲ್ಯ, ಯೌವ್ವನದ ಅನುಭವಗಳು ಇವರ ಪ್ರತಿಭೆಗೆ ಕೈ ಜೋಡಿಸಿವೆ. ಕೊಂಡಾಚಾರ್ಯರು ಯಾವ ಕಲಾಶಾಲೆಯಲ್ಲಿ ಚಿತ್ರಕಲೆಯನ್ನು ಅಭ್ಯಾಸ ಮಾಡಿದವರಲ್ಲ. ಅದು ದೈವದತ್ತವಾಗಿ ಬಂದ ಕೊಡುಗೆ. ಈ ಕಲೆ ಅವರ ತಂದೆಯವರಿಂದ ಬಳುವಳಿಯಾಗಿ ಬಂದಂತಹ ಕಲೆಯಾಗಿದೆ. ಕೊಂಡಾಚಾರ್ಯರು ೩೦ ಅಕ್ಟೋಬರ್ ೧೯೩೦ರಂದು ಜನಿಸಿದರು. ಸಂಪ್ರದಾಯಸ್ಥ ವಿಶ್ವಕರ್ಮ ಬ್ರಾಹ್ಮಣ ಮನೆತನದ ಶಿಲ್ಪಿ, ಜ್ಯೋತಿಷಿ. ಆಶುಕವಿ ಬಿ. ಚಂದ್ರಶೇಖರ ಶಾಸ್ತ್ರಿ, ಶ್ರೀಮತಿ ಸುಬ್ಬಲಕ್ಷ್ಮಮ್ಮ ದಂಪತಿಗಳ ಮಗನಾಗಿ ಜನಿಸಿದ ಇವರು ಬಾಲ್ಯದಲ್ಲಿರುವಾಗಲೇ ಇವರ ತಂದೆ ಬದುಕನ್ನು ಅರಸಿ ಆಂಧ್ರದ ನೆಲ್ಲೂರಿನಿಂದ ಬಳ್ಳಾರಿಗೆ ಬಂದು ನೆಲೆಸಿದರು. ಆಗ ಆಚಾರ್ಯರಿಗೆ ೧೧ ವರ್ಷ. ಪ್ರಾಥಮಿಕ ಶಿಕ್ಷಣವನ್ನು ಬಳ್ಳಾರಿಯಲ್ಲಿ ಪ್ರಾರಂಭಿಸಿದರು.

ಮೊದಲಿನಿಂದಲೂ ಸಾಂಪ್ರದಾಯಿಕ ಶಿಕ್ಷಣದಲ್ಲಿ ಆಸಕ್ತಿ ಇಲ್ಲದ ಬಾಲಕ ಕೊಂಡಾಚಾರ್ಯರು, ಪ್ರಕೃತಿ ವೀಕ್ಷಣೆ, ಏಕಾಂತ ಬದುಕು, ಅಂತರ್ಮುಖಿಯಾದ ಯೋಜನೆಯಲ್ಲಿಯೇ ಕಾಲ ಕಳೆಯುತ್ತಿದ್ದರು. ಹೀಗೆ ಒಂದು ಬಾರಿ ಬೀದಿಯಲ್ಲಿ ಓಡಾಡುವಾಗ ದಾರಿಯಲ್ಲಿ ಬಿದ್ದಿದ್ದ ಬೀಡಿ ಪ್ಯಾಕೆಟ್ ಮೇಲಿನ ಗಣೇಶನ ಚಿತ್ರವನ್ನು ಯಥಾವತ್ತಾಗಿ ಚಿತ್ರವಿಳಿಸಿದರು. ಇದನ್ನು ಕಂಡ ಗುರುಗಳು ಬಾಲಕನನ್ನು ಬಹುವಾಗಿ ಮೆಚ್ಚಿ ಮುಂದೊಂದು ದಿನ ಕಲಾಪ್ರಪಂಚದಲ್ಲಿ ಉಜ್ವಲ ಭವಿಷ್ಯವಿದೆ ಎಂದು 'ಮರಿ ಕಲಾವಿದ'ನನ್ನು ಮೆಚ್ಚಿಕೊಂಡಿದ್ದರು. ಕೊಂಡಾಚಾರ್ಯರು ಚಿತ್ರಕಲೆಯನ್ನು ಪ್ರತ್ಯೇಕವಾಗಿ ಅಧ್ಯಯನ ವಿಷಯವನ್ನಾಗಿ ಓದಿದವರಲ್ಲ. ವಂಶಪರಂಪರಾಗತವಾದ ಪ್ರತಿಭೆ, ತಂದೆಯ ಕಲಾವಂತಿಕೆಯ ಪ್ರೇರಣೆ ಹಾಗೂ ಸ್ವಯಂ ಪ್ರಯತ್ನಗಳಿಂದ ಅದ್ಭುತ ಚಿತ್ರಕಲಾವಿದರಾಗಿ, ಅದರಲ್ಲೂ ವಿಶಿಷ್ಟ ಶೈಲಿಯ ರೇಖಾಚಿತ್ರ ರಚನೆಯಲ್ಲಿ ಸಿದ್ಧಹಸ್ತರಾದರು.

ಇವರು ಓದುತ್ತಿದ್ದ ಬಳ್ಳಾರಿಯ ವೀರಶೈವ ಕಾಲೇಜಿಗೆ ಮುಖ್ಯ ಅತಿಥಿಗಳಾಗಿ ಖ್ಯಾತ ಕಾದಂಬರಿ ಸಾರ್ವಭೌಮ ಅ.ನ. ಕೃಷ್ಣರಾಯರು ಆಗಮಿಸಿದ್ದರು. ವೇದಿಕೆಯ ಮೇಲೆ ಕುಳಿತ ಅವರನ್ನು ಆಚಾರ್ಯರ ಕಲೆಯ ಕಣ್ಣುಗಳು ಆಸ್ವಾದಿಸಿದವು, ಕೈಗಳು ಹೇಳಿದಂತೆ ಉಗುರುಗಳು ಅ.ನಾ.ಕೃರವರ ಭಾವಚಿತ್ರವನ್ನು ಕ್ಷಣಾರ್ಧದಲ್ಲಿ ಬಿಡಿಸಿದರು, ಇದನ್ನು ಕಂಡ ಅ.ನ.ಕೃ ಇಂಟರ್‌ಮಿಡಿಯೇಟ್ ವಿದ್ಯಾರ್ಥಿ ಕೊಂಡಾಚಾರ್ಯರ ಕಲಾಪ್ರತಿಭೆಯನ್ನು ತಿಳಿದು ಪ್ರೋತ್ಸಾಹ ಹಸ್ತವನ್ನು ಚಾಚಿದರು. ಒಂದು ಕಡೆ ಅ.ನ.ಕೃರವರು ಕೊಂಡಾಚಾರ್ಯರ ರೇಖಾಚಿತ್ರಗಳನ್ನು ನೋಡಿ ಬಂಗಾಳದ ನಂದಲಾಲ್ ಭೋಸರ ನಂತರ ಕೊಂಡಾಚಾರ್ಯರ ರೇಖಾಚಿತ್ರಗಳು ಸರ್ವಶ್ರೇಷ್ಠ ಎಂದಿದ್ದಾರೆ. ಅಂದು ಕಾಲೇಜ್ ಅಂಗಳದಲ್ಲಿ ಭೇಟಿಯಾದ ಅ.ನ.ಕೃ ರಾಯರನ್ನು ಅವರು ತಮ್ಮೊಂದಿಗೆ ಹೊಂದಿದ್ದ ಆತ್ಮೀಯತೆಯನ್ನು ಇಳಿ ವಯಸ್ಸಿನ ಕೊಂಡಾಚಾರ್ಯರು ಇಂದಿಗೂ ಪ್ರೀತಿಯಿಂದ ನೆನಪಿಸಿಕೊಳ್ಳುತ್ತಾರೆ. ಕಲಾವಿದನ ಕಲೆಯು ಪ್ರಯೋಜನಾತ್ಮಕವಾಗಿದೆ ಎಂದು ಕಲಾವಿದನಿಗೆ ಅನಿಸುವುದು ಸಹೃದಯಿಗಳು ಆಸ್ವಾದಿಸಿ ಅದರ ಬಗೆಗೆ ವಾಚ್ಯವಾದ ಸ್ಫೂರ್ತಿಯನ್ನು ತುಂಬಿ ಮುಂದಿನ ಕಲೆಗೆ ದಾರಿಯಾಗುತ್ತದೆ ಎನ್ನುವುದಕ್ಕೆ ಕೊಂಡಾಚಾರ್ಯರ

ರೇಖಾಚಿತ್ರಗಳು ಅ.ನ.ಕೃ ಅವರ ಪ್ರಶಂಸೆಗೆ ಪಾತ್ರವಾದಾಗ ಇದಕ್ಕೂ ಉತ್ತಮವಾದ ರೇಖಾಚಿತ್ರಗಳು ಮೂಡಿ ಬಂದವು.

ಇವರು ಕಲಾವಿದರಲ್ಲದೇ ದೇಶ-ರಾಜ್ಯದ ಪ್ರೀತಿಯುಳ್ಳವರು. ಅಂದಿನ ೧೯೫೩ರ ಕಾಲ ಕರ್ನಾಟಕ ಏಕೀಕರಣ ಬಿರುಗಾಳಿ ಎದ್ದ ಸಮಯ. ನಾಡಿನ ಏಕೀಕರಣಕ್ಕೆ ಹೋರಾಡಿದರು, ಅಷ್ಟೇ ಅಲ್ಲ ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದರು. ಇಂತಹವರ ಕೈಯಲ್ಲಿ ಕನ್ನಡ ಕುಲದೈವ ಭುವನೇಶ್ವರಿಯನ್ನು ತುಂಬಾ ಭಾವುಕತೆಯಿಂದ ವಿವಿಧ ಶಕ್ತಿರೂಪಗಳ ಸ್ತುತಿಯನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಬೇಕೆಂಬ ಮಹದಾಸೆ ಅದರಂತೆ ಮೈಸೂರಿನ ಚಾಮುಂಡೇಶ್ವರಿ, ಬಾದಾಮಿಯ ಬನಶಂಕರಿ, ಶೃಂಗೇರಿಯ ಶಾರದಾಂಬೆ, ಶಿರಸಿಯ ಮಾರಿಕಾಂಬೆ, ಕೊಲ್ಲೂರು ಮೂಕಾಂಬಿಕೆ, ಸವದತ್ತಿ ರೇಣುಕಾಂಬೆ, ಸಿದ್ಧಪರ್ವತದ ಅಂಬಾ ಭವಾನಿ, ಮುನಿರಾಬಾದ ಹುಲಿಗೆಮ್ಮ ಹಾಗೂ ಗೋಕರ್ಣದ ಭದ್ರಕರ್ಣಿಕೆ ಮುಂತಾದ ಕನ್ನಡ ನಾಡಿನ ವಿವಿಧ ಕ್ಷೇತ್ರಗಳ ಹದಿನೆಂಟು ಶಕ್ತಿ ಸ್ವರೂಪಿಣಿಯರನ್ನು ಸ್ತುತಿಸುವ ಕರ್ನಾಟಕ ಮಹಿಮೆಯ ಸ್ತೋತ್ರ ಪುಸ್ತಕವನ್ನು ಸಿದ್ಧಗೊಳಿಸತೊಡಗಿದರು. ಅದರಂತೆ ೧೮ ದೇವತೆಯರ ರೇಖಾಚಿತ್ರಗಳ ರಚನೆಯಲ್ಲಿ ತೊಡಗಿದರು. ಈ ರೇಖಾಚಿತ್ರಗಳಲ್ಲಿ ಕೆಲವನ್ನು ಮಾತ್ರ ಸುಧಾ ಪತ್ರಿಕೆ, ಸಾಪ್ತಾಹಿಕ ಪ್ರಭದಂತಹ ಎರಡು ಮೂರು ಪತ್ರಿಕೆಯಲ್ಲಿ ಮಾತ್ರ ಕಾಣಬಹುದಾಗಿದೆ.

ಪರಾಶಕ್ತಿ : ಸಾಂಪ್ರದಾಯಿಕ ಸಂವೇದನೆಯುಳ್ಳ ಈ ಪರಾಶಕ್ತಿಯನ್ನು ಹಿಂದಿನ ಕಲಾವಿದ ವಿರೂಪಾಕ್ಷಪ್ಪನವರಂತೆಯೇ ಇವರು ದೇವತೆಗಳನ್ನು ಕುರಿತು ಪ್ರಯೋಗಾತ್ಮಕವಾಗಿ ಕಲಾಕೃತಿಗಳನ್ನು ರಚಿಸಿದ್ದಾರೆ. ಇವರಿಬ್ಬರ ಶೈಲಿಯಲ್ಲಿ ಭಾರತದ ನಕಾಶೆಯಲ್ಲಿ ದೇವತೆಯ ಸಂಯೋಜನೆ ಇದ್ದರೂ ಆಕಾರಗಳಲ್ಲಿ ವಿರೂಪಾಕ್ಷಪ್ಪನವರ ರೇಖೆಗಳಿಗಿಂತ ದೇವತೆಯ ಸರಳತೆಯು ಕೊಂಡಾಚಾರ್ಯರ ಕಲಾಕೃತಿಯಲ್ಲಿ ಕಂಡುಬರುತ್ತದೆ. ರೇಖೆಗಳಲ್ಲಿ, ವಿನ್ಯಾಸದ ಕುಸುರಿ ಕೆಲಸದಲ್ಲಿ ತುಂಬಾ ಲಾಲಿತ್ಯಪೂರ್ಣವಾದ ಪ್ರಮಾಣಬದ್ಧವಾದ ರೇಖೆಗಳು ಇವರ ಕಲಾಕೃತಿಗಳಲ್ಲಿ ಕಂಡುಬರುತ್ತವೆ. ಅಂತಹವುಗಳಲ್ಲಿ ಪರಾಶಕ್ತಿ ಭಾರತೀಯ ತನ್ನ ಲೀಲಾ ವಿನೋದಕ್ಕಾಗಿ ವಿವಿಧ ನಾಮ, ವಿವಿಧ ರೂಪ, ವಿವಿಧ ಕ್ರಿಯಾತ್ಮಕ ಶಕ್ತಿಯಾದವುಗಳೇ ಭಾರತಾಂಬೆಯ ಸುತ್ತ ಅನಾವರಣವಾದ ಭಾರತದ ನಕಾಶೆ ಒಂದು ಸಂಕೇತವಾಗಿದೆ.

ಪರಾಶಕ್ತಿ ಸುತ್ತಲೂ ಹರಡಿರುವ ವಸ್ತ್ರವಿನ್ಯಾಸದ ನೆರಿಗೆಗಳು ಭಾರತದ ವೈವಿಧ್ಯದ ಪ್ರತೀಕವಾದರೆ ಭಾರತದ ಉತ್ತರದ ತುದಿಯಲ್ಲಿ ಸ್ಥಾಪಿತವಾಗಿರುವ ಪುರುಷ ಶಕ್ತಿಯ ಪ್ರತೀಕವಾದ ಅರೆ ನೇತ್ರ ನಿಮೀಲಿತ ಶಿವನ ವದನವು ಪರಾಶಕ್ತಿಯಲ್ಲಿ ಲೀನವಾದ ಪುರುಷ ಶಕ್ತಿಯಂತಿದೆ. ಬಲಗೈಯಿಂದ ಅಭಯ ಆಶೀರ್ವಾದವನ್ನು ಮಾಡುತ್ತಾ, ಎಡಗೈಯಲ್ಲಿ ಇಡೀ ವಿಶ್ವವನ್ನೇ ತನ್ನ ಹಸ್ತಂಗತ ಮಾಡಿಕೊಂಡಿರುವುದು ಪರಾಶಕ್ತಿ ವ್ಯಾಪಕತೆಯುಅವರ ದ್ಯೋತಕದಂತಿದೆ. ದುಷ್ಟರನ್ನು ಮಣಿಸಲು ಎಡಗೈಯಲ್ಲಿ ಪಾಶವನ್ನು ಹಿಡಿದಿದ್ದು, ಮಿತಿ ಮೀರಿದರೆ ಶಿಕ್ಷಿಸಲು ಸಿದ್ಧಹಸ್ತವಾಗಿರುವ ಬಲಗೈಯಲ್ಲಿ

ಹರಿತವಾದ ಈಟಿಯಿದೆ. ಮತ್ತು ದೇವಿಯ ಕಿರೀಟ, ಭುಜದ ಮೇಲೆ ಸುರುಳಿ ಸುರುಳಿಯಾಗಿ ಬಿದ್ದ ಕೇಶರಾಶಿ, ಕಂಠಾಭರಣಗಳು ಮೈದಳೆದು ನಿಂತಿವೆ. ಆಚಾರ್ಯರ ಒಟ್ಟಾರೆ ಕಲಾಕೃತಿಯಲ್ಲಿ ಶೃಂಗಾರವನ್ನು ರೇಖೆಗಳಲ್ಲಿ ಎತ್ತಿಹಿಡಿಯಲಾಗಿದೆ.

ಭುವನೇಶ್ವರಿ : ಭಾರತಾಂಬೆಯ ಅನೇಕ ಮಕ್ಕಳಲ್ಲಿ ಚೊಚ್ಚಲು ಮಗಳೇ ಈ ಭುವನೇಶ್ವರಿ ಎಂದ ತಕ್ಷಣ ನಮ್ಮ ಕಣ್ಣುಗಳು ಅರಳುವುದು. ಕರ್ನಾಟಕದ ಏಕೀಕರಣಕ್ಕೆ ಹೋರಾಟಗಾರರ ಅಂತರ್‌ಶಕ್ತಿಯೇ: ಭುವನೇಶ್ವರಿ. ಕೊಂಡಾಚಾರ್ಯರ ರೇಖೆಯಲ್ಲಿ ಮೂಡಿದ ಭುವನೇಶ್ವರಿಯು ರಾಷ್ಟ್ರಕವಿ ಕುವೆಂಪು ಅವರ ಮಾತಿನಲ್ಲಿ ತಾಯಿಕಣ, ಮಂತ್ರಕಣ, ಶಕ್ತಿಕಣ, ಬೆಂಕಿಕಣ, ಸಿಡಿಲಕಣ ಎಂದೆಲ್ಲಾ ತಾಯಿಯನ್ನು ಹಾಡಿ ಆನಂದಿಸಿ, ಸಾಹಿತಿಕವಾಗಿ ಭುವನೇಶ್ವರಿಯ ಸ್ವರೂಪವನ್ನು ಹಿಡಿದಿದ್ದಾರೆ. ಹಾಗೆಯೇ ಕೊಂಡಾಚಾರ್ಯರು ಭುವನೇಶ್ವರಿಯ ಕಿರೀಟ, ಮುಖ ವಿನ್ಯಾಸ, ಕುತ್ತಿಗೆ ಶರೀರದ ಪ್ರಮಾಣ, ಕುಳಿತ ಭಂಗಿ, ಅವಯವಗಳ ವಿನ್ಯಾಸ ಎಲ್ಲದರಿಂದಲೂ ನೈಜ ಸ್ವರೂಪದ ಶ್ರೇಷ್ಠ ರೇಖಾಚಿತ್ರವಾಗಿದೆ.

ಮಹೇಶ್ವರಿ : ಪರಾಶಕ್ತಿ, ಭುವನೇಶ್ವರಿ ರೇಖಾಕೃತಿಗಳಂತೆ ಇಲ್ಲಿಯೂ ಅದೇ ಶೈಲಿಯಾದರೂ ಕುಳಿತ ಭಂಗಿ, ಕೈಯಲ್ಲಿ ಆಯುಧ, ವಸ್ತುಗಳ ಸಂಕೇತಿಕವಾಗಿ ಮಹೇಶ್ವರಿಯು ಗುರುತಿಸಿಕೊಳ್ಳುತ್ತಾಳೆ. ಭುವನೇಶ್ವರಿ ಹಿಂದಣ ಪ್ರಭಾವಳಿಯಲ್ಲಿ ಕರ್ನಾಟಕದ ನಕಾಶೆಯೂ ಸಂಕೇತಿತವಾದರೆ, ಈ ಮಹೇಶ್ವರಿಯ ಪೀಠವು ಸಂಕೇತಿತವಾಗಿ ಆಚಾರ್ಯರ ಮತ್ತೊಂದು ಕಲಾವಂತಿಕೆಯ ನೈಪುಣ್ಯವಾಗಿದೆ. ನಾಲ್ಕು ಹಂತದ ಕಲಾದಳದ ಕುಸುಮಗಳ ಮೇಲೆ ಹೋದಂತೆ ಪೀಠವು ವಿಶಾಲವಾಗುತ್ತ ಹೋಗಿದೆ. ಅನುರೂಪಿಯಾದ ಶಿವಶಂಕರಿ ಬ್ರಹ್ಮಾಂಡ ರೂಪವನ್ನು ತಾಳುವ ಸಂಕೇತವಾಗಿದೆ. ಹಾಗೆಯೇ ಆ ಪೀಠದ ಮೇಲೆ ಮಹೇಶ್ವರಿ ಕುಳಿತಿರುವ ಭಂಗಿಯು ಬೆಂಗಾವಲಾಗಿ ಹಿಂಬಾಲಕ ಶಕ್ತಿಯಾಗಿ ಹಿಂದೆ ಶಿವಲಿಂಗಮೂರ್ತಿ ಇರುವುದು ಪುರುಷ–ಪ್ರಕೃತಿಯ ಸಂಕೇತವಾಗಿದೆ. ಹೀಗೆ ಹಲವು ಸಂಕೇತಗಳಿಂದ ಕೊಂಡಾಚಾರ್ಯರು ಎಲ್ಲಿಯೂ ಭಂಗ ಉಂಟಾಗದಂತೆ ಎಚ್ಚರಿಕೆ ವಹಿಸಿದ್ದಾರೆ. ಕಲಾವಿದನ ಕುಂಚವನ್ನು ಭಾವನೆಗೆ ತಕ್ಕಂತೆ ಅವರು ಓಡಿಸಿದ ವೇಗದಲ್ಲಿ ಓಡಿಸಿ ನಿರ್ಮಿತ ರೇಖಾಚಿತ್ರವೇ ಮಹೇಶ್ವರಿಯಾಗಿದ್ದಾಳೆ.

ಮಹಾಕಾಳಿ

ಉಗ್ರ ಶಕ್ತಿ ಸ್ವರೂಪಿಣಿ ಈ ಚಾಮುಂಡೇಶ್ವರಿಯೇ ಮಹಾಕಾಳಿಯಾಗಿ ದುಷ್ಟ ಶಕ್ತಿಯ ಸಂಹರಿಸುವ ರೂಪವಾಗಿದೆ. ಈ ರೇಖಾಚಿತ್ರವು ಕೂಡ ನೈಜ ಸ್ವರೂಪವಾಗಿದೆ. ಇಲ್ಲಿ ಮಹಾಕಾಳಿಗೆ ತಕ್ಕುದಾದ ವ್ಯಗ್ರತೆ ಬದಲಾಗಿ ಪ್ರಸನ್ನ ಮುಖಿಯಾಗಿ ಚಿತ್ರಿತಗೊಂಡಿದೆ. ಈ ವ್ಯಗ್ರತೆ ಮಹಾಕಾಳಿಯ ವಾಹನವಾದ ಸಿಂಹದ ಮುಖದಲ್ಲಿ ಬಿಂಬಿತವಾಗಿದೆ. ಈ ಕಾಳಿಯನ್ನು ಅನೇಕ ತಲೆಬುರುಡೆಗಳ ಸಂಕೇತವಾಗಿ ರೇಖಿಸಲಾಗಿದೆ. ಇಲ್ಲಿ ಮೈಸೂರು ಅರಸರ ಲಾಂಛನವಾದ ಗಂಡಬೇರುಂಡವನ್ನು

ಚಿತ್ರಿಸುವುದನ್ನು ಆಚಾರ್ಯರು ಮರೆತಿಲ್ಲ. ಮಹಾಕಾಳಿಯ ಉಗ್ರ ರೂಪಿಣಿಗೆ ತಕ್ಕಂತೆ ಅವಳ ಕೇಶರಾಶಿಯನ್ನು ಅವಳ ಬೆನ್ನ ಹಿಂದೆಲ್ಲ ಹರಡಿಸಿರುವುದು ಆಚಾರ್ಯರ ಪ್ರಜ್ಞಾವಂತಿಕೆಯ ದ್ಯೋತಕ. ಮಹಾಕಾಳಿ ವಿಶ್ವರೂಪಿಣಿ ವಿಶ್ವಶಕ್ತಿಯೆಂದು ಬ್ರಹ್ಮಾಂಡಶಕ್ತಿಯೆಂದು ಹೇಳಲು ಆಚಾರ್ಯರು ಸಿಂಹದ ಕೆಳಗೆ ಭೂಗ್ರಹವನ್ನೇ ಚಿತ್ರಿಸಿದ್ದಾರೆ. ಸಿಂಹದ ಎಡಮಗ್ಗಲಿನ ಎರಡೂ ಕಾಲುಗಳು ಭೂಮಿಯಿಂದ ಹೊರಗಿವೆ. ಅಂದರೆ ಈ ಶಕ್ತಿ ದೇವತೆಯ ನೆಲೆ ಇಡೀ ಬ್ರಹ್ಮಾಂಡವೇ ಆಗಿದೆ ಎಂದರ್ಥ. ಅಂಥ ಬ್ರಹ್ಮಾಂಡ ಶಕ್ತಿಯೇ ಮಹಾಕಾಳಿಯಾಗಿ, ಮಹಿಷಾಸುರ ಮರ್ದಿನಿಯಾಗಿ ಸಂಯೋಜಿತಗೊಂಡ ರೇಖಾಕೃತಿಯಾಗಿದೆ.

ಮಹಾಲಕ್ಷ್ಮೀ

ಲೌಕಿಕ ಸಂಪತ್ತು, ಅಷ್ಟ ಸಿದ್ಧಿಗಳು ಯಾವ ಮಹಾಶಕ್ತಿಯ ಪಾದರೇಣುವೋ ಆಕೆಯೇ ಮಹಾಲಕ್ಷ್ಮಿಯಾದ ರೇಣುಕೆ. ಪರಬ್ರಹ್ಮನ ಆನಂದದ ಆವಿಷ್ಕಾರವೇ ಅವ್ಯಕ್ತವಾದ ಶಕ್ತಿ ರೂಪವೇ, ಶಾಸ್ತ್ರಗಳಲ್ಲಿ ವರ್ಣಿಸಿದಂತೆ ವ್ಯಕ್ತರೂಪಳಾಗಿ ಕೊಂಡಾಚಾರ್ಯರ ರೇಖೆಗಳಲ್ಲಿ ಈ ಮಹಾಲಕ್ಷ್ಮಿಯೇ ಧರೆಗಿಳಿದು ಬಂದಂತಿದೆ. ಕ್ಷೀರಸಾಗರವನ್ನು ಮಥಿಸಿದಾಗ ಬಂದ ಲಕ್ಷ್ಮಿಯು ಕಮಲ ಪೀಠೋಹರಣೆಯಾಗಿ ಮಡಿಸಿದ್ದಾಳೆ. ಅವಳ ಮುಂದೆ ಕಲಾತ್ಮಕವಾದ ಅಮೃತ ಕಲಶವಿದೆ. ಆಚಾರ್ಯರ ಲೇಖನಿಯಲ್ಲಿ, ಅರಳಿದ ಕಮಲದಲ್ಲಿ ಕುಳಿತಿರುವ ಮಹಾಲಕ್ಷ್ಮಿ ತುಂಬಾ ನೈಜವಾಗಿದ್ದಾಳೆ. ಬಲಗೈ ಪಕ್ಕದಲ್ಲಿ ಕಲಾತ್ಮಕವಾಗಿ ತಾವರೆ ಹಿಡಿದಿದ್ದರೆ ಎಡಗೈಯಲ್ಲಿ ಹಸಿದವರಿಗೆ ಫಲವನ್ನು ನೀಡಲು ಫಲಗಳನ್ನು ಹಿಡಿದಿದ್ದಾಳೆ. ಘರ್ಜನೆಯ ಸಂಕೇತವಾಗಿ ಎಡಗೈಯಲ್ಲಿ ಶಂಖವನ್ನು ಹಿಡಿದಿದ್ದರೆ, ಬಲಗೈಯಲ್ಲಿ ಶತ್ರು ಸಂಹಾರಕವಾದ ವಿಷ್ಣು ಚಕ್ರವನ್ನು ಧರಿಸಿದ್ದಾಳೆ. ತಾನೇ ಲಕ್ಷ್ಮೀಯಾದರೂ ಮಿತವಾದ ತೊಡುಗೆಗಳನ್ನು ತೊಡಿಸಿರುವುದು ಕೊಡುವವರಿಗೆ ಆಸೆ ಇರುವುದಿಲ್ಲ ಎಂಬುದರ ಸಾಂಕೇತಿಕ ಧ್ವನಿಯಂತಿದೆ. ಶಿಷ್ಟರನ್ನು ರಕ್ಷಿಸುವ ದುಷ್ಟರನ್ನು ಶಿಕ್ಷಿಸುವ ಸಾಮರ್ಥ್ಯವು ತನ್ನಲ್ಲಿದೆ ಎಂಬುವುದನ್ನು ಅವಳು ಹಿಡಿದ ಫಲಪುಷ್ಪ ಮತ್ತು ಶಂಖ ಚಕ್ರಗಳು ಮೌನವಾಗಿ ಸಾರಿ ಹೇಳುತ್ತವೆ. ಈ ಎಲ್ಲಾ ಅಂಶಗಳನ್ನು ಆಚಾರ್ಯರು ಚಿತ್ರದಲ್ಲಿ ಹಿಡಿದಿಡುವಲ್ಲಿ ಯಶಸ್ವಿಯಾಗಿದ್ದಾರೆ.

ಮಹಾಸರಸ್ವತಿ

ಶೃಂಗೇರಿ ಶಾರದಾ ದೇವಿಯೇ ಈ ಮಹಾಸರಸ್ವತಿಯಾಗಿದ್ದಾಳೆ. ಕಮಲದಲ್ಲಿ ಪದ್ಮಾಸನದಲ್ಲಿ ರೂಢಳಾಗಿ ಕುಳಿತಿರುವ ಚಿತ್ರ ಎಂಥವರಿಗೂ ಭಕ್ತಿರಸವನ್ನು ಹೊಮ್ಮಿಸುತ್ತದೆ. ಆಕೆ ಸರಳ ರೂಪಿಣಿ, ಅದಕ್ಕಾಗಿಯೇ ಆಚಾರ್ಯರು ಆಕೆಯ ನೀಳಕೇಶಗಳನ್ನು ಸುತ್ತಿ ಕೇಶವನ್ನೇ ಕಿರೀಟವನ್ನಾಗಿಸಿದ್ದಾರೆ. ಇದು ಆಚಾರ್ಯರ ಶಾಸ್ತ್ರಪ್ರಜ್ಞೆಯನ್ನು ಸೂಚಿಸುತ್ತದೆ. ಎಡಗೈಯಲ್ಲಿ ಜ್ಞಾನಭಂಡಾರದ ಸಂಕೇತವಾನ ಹೊತ್ತಿಗೆಯಿದ್ದರೆ ಬಲಗೈಯಲ್ಲಿ ಜಪಮಾಲೆ ಇದೆ. ಹಿಂಬದಿಯ

[illegible]

[illegible]

[illegible]

[illegible]

[illegible]

[illegible]

[illegible]

ಎರಡು ಕೈಗಳಲ್ಲಿ ಜ್ಞಾನಾಮೃತದ ಎರಡು ಕುಂಭಗಳನ್ನು ಕನ್ನಡಿಗರಿಗೆ ನೀಡುವುದಕ್ಕಾಗಿಯೇ ಹಿಡಿದವಳಂತೆ ಸೂಚಿಸುತ್ತದೆ. ನಿರ್ಮಲವಾದ ಮುಖಮುದ್ರೆ ಜ್ಞಾನಸಂಪನ್ನು ಸೂಚಿಸುತ್ತದೆ. ಒಟ್ಟಾರೆಯಾಗಿ ಸರಸ್ವತಿಯು ಕಾಂತಿಮಣಿಯಂತೆ ಕಂಗೊಳಿಸುತ್ತಾಳೆ. ಎಲ್ಲವನ್ನು ಆಚಾರ್ಯರು ಶಾಸ್ತ್ರಬದ್ಧವಾಗಿ ರಚಿಸಿದ್ದು ರೇಖಾಚಿತ್ರದಲ್ಲಿ ದೇವಿ ಆರಾಧನೆಯ ಭಾವನೆಯೊಂದಿಗೆ ಇವರ ಪ್ರತಿಭೆಯು ಕೈಜೋಡಿಸಿದೆ.

ಮೂಕಾಂಬಿಕೆ

ಹಿಂದಿನ ಮಹಾಸರಸ್ವತಿ ರೇಖಾಚಿತ್ರದಂತೆ ಮುಖ ಪ್ರಸನ್ನತೆಯಿಂದ ಕೂಡಿದ್ದು, ಅರೆ ಮೀನಗಣ್ಣಿನಿಂದ ಕೂಡಿದ ಮೂಕಾಂಬಿಕೆಯು ತನ್ನ ಶಕ್ತಿಯ ದ್ವಿಗುಣಕ್ಕೆ ತನ್ನ ಮುಂದೆ ರಂಗವಲ್ಲಿಯಾಗಿ ಮಧ್ಯ ಶಿವನನ್ನು ಧ್ಯಾನಿಸುತ್ತಿರುವುದು ಅರ್ಥಪೂರ್ಣವಾಗಿದೆ. ಶಂಖ ಚಕ್ರ ಆಯುಧಗಳನ್ನು ಹಿಡಿದಿರುವ ಆಕೆಯ ಕರಮುದ್ರೆಯವಿನ್ಯಾಸವನ್ನು ಆಚಾರ್ಯರ ಹಲವು ರೇಖೆಗಳ ಸಂಯೋಜನೆಯಿಂದ ಪೂರ್ಣ ಸ್ವರೂಪದ ಮೂಕಾಂಬಿಕೆ ನಿರ್ಮಾಣವಾಗಿದ್ದಾಳೆ. ಮೂಕಾಂಬಿಕೆಯು ಪೀಠದಿಂದ ಮೇಲೆದ್ದು ವೃತ್ತತೋರಣದ ಆವರಣ ಮತ್ತು ಕುಸುರಿ ಕೆಲಸ, ನಯನಾಜೂಕತೆ, ರೇಖೆಗಳ ಸಮ್ಮಿಲನ ಎಲ್ಲವೂ ಆಚಾರ್ಯರ ಅಪರಿಮಿತ ಸಹನೆ ಮತ್ತು ಶ್ರದ್ಧೆಯ ಪ್ರತೀಕವಾಗಿದೆ.

ರತ್ನಗರ್ಭಾ

ಈ ದೇವತೆಗಳ ಸರಣಿಚಿತ್ರಗಳಲ್ಲಿ ರತ್ನಗರ್ಭಾ ಒಬ್ಬ ಭೂಶಕ್ತಿ ಮಾತ್ರವಲ್ಲ, ಓಂಕಾರ ರೂಪಿಣಿ. ಈ ಎಲ್ಲಾ ನಿರಾಕಾರ ಅವ್ಯಕ್ತ ಶಕ್ತಿಗಳನ್ನು ಪಂಚಭೂತಾತ್ಮಕ ರೂಪಿಣಿಯಾದ ಈ ರತ್ನಗರ್ಭಾಳನ್ನು ವಿಶ್ವದ ಮೇಲೆ ಲಾಲಿತ್ಯಮಯವಾಗಿ ನಿಂತ ಭಂಗಿಯಲ್ಲಿ ರೇಖಿಸಲಾಗಿ ವಸ್ತ್ರದ ಕೆಳಗಿನ ಅಂಚಿನ ವಿನ್ಯಾಸ ಮತ್ತು ದೇವತೆಯ ಹಿಂದಿನ ಪ್ರಭಾವಳಿಯನ್ನು ಸುರುಳಿಯಾಕಾರದ ವಿನ್ಯಾಸದಿಂದ ಮಾಡಿ ಕಲಾಕೃತಿಯಲ್ಲಿ ಸಮತೋಲನತೆಯನ್ನು ಕಾಪಾಡಿದ್ದಾರೆ. ಇದೇ ರೀತಿಯಲ್ಲಿ ಶ್ರೀದುರ್ಗೆ, ಇಂದ್ರಾಣಿ, ವಾರಾಹಿ, ಆದಿತೆ, ಕೌಮಾರಿ, ಕುಂಡಲಿನೀ, ಅನ್ನಪೂರ್ಣೇಶ್ವರಿ, ವಿಶ್ವಕರ್ಮ ಮತ್ತು ಶ್ರೀ ಲಕ್ಷ್ಮೀ ರೇಖಾಚಿತ್ರಗಳಲ್ಲಿ ಕುಸುರಿ ವಿನ್ಯಾಸದ ನೈಜ ಸ್ವರೂಪದ ರೇಖಾಚಿತ್ರಗಳಿವೆ.

ಈ ಎಲ್ಲಾ ರೇಖಾಚಿತ್ರಗಳಲ್ಲಿ ಕುಂಡಲಿನ ವಾರಾಹಿ ದೇವತೆಗಳಲ್ಲಿ ಮುಖಲಕ್ಷಣದಲ್ಲಿ ವ್ಯತ್ಯಾಸ ಕಾಣಬಹುದಾಗಿದೆ. ಕುಂಡಲಿನಿ ಮುಖಲಕ್ಷಣದಲ್ಲಿ ಕಣ್ಣು, ಮೂಗು, ಕೆನ್ನೆ, ಉಬ್ಬು, ತುಟಿಗಳ ಬದಲಾಗಿ ಚಕ್ರದ ಪುಷ್ಪದಿಂದ ಸಂಯೋಜಿತವಾಗಿದೆ. ಇಲ್ಲಿ ಮಾನವನ ಆಂತರ್ಯದಲ್ಲಿರುವ ಏಳು ಚಕ್ರಗಳಿಂದ ಇಡೀ ದೇಹವನ್ನು ಸಂಯೋಜನೆಗೊಳಿಸಲಾಗಿದೆ. ಇಲ್ಲಿ ಆಚಾರ್ಯರು ಬಾಹ್ಯ ಸೌಂದರ್ಯದ ಬದಲಾಗಿ ಆಂತರ್ಯವಾಗಿ ದೇವಿಯ ಶಕ್ತಿ ಕಾರ್ಯಾಚರಣೆಯನ್ನು ತೋರುವ ಸಂಕೇತವಾದ ರೇಖಾಚಿತ್ರವಾಗಿದೆ. ಅದೇ ರೀತಿಯಲ್ಲಿ

[illegible]

ವಾರಾಹಿ ವರಾಹದ ಮುಖಲಕ್ಷಣವನ್ನು ಹೊಂದಿದ್ದು, ವಿಶ್ವಕ್ಕೆ ಬಂದ ಆಪತ್ತಿನಿಂದ ರಕ್ಷಿಸುವಂಥ ಸನ್ನಿವೇಶದ ವಿಷಯದಿಂದ ಕೂಡಿದ ರೇಖಾಕೃತಿಯಾಗಿದೆ.

ಇಲ್ಲಿ ನೀರಿನಲ್ಲಿ ಮುಳುಗುವ ಭೂಮಿಯನ್ನು ಎತ್ತಿಹಿಡಿದಂತೆ ಕರ್ನಾಟಕ ಮಾತೆಯನ್ನು ದುಷ್ಟಶಕ್ತಿಗಳಿಂದ ಮೇಲೆತ್ತಿ ಹಿಡಿಯುವ ಭಂಗಿಯಲ್ಲಿ ವಾರಾಹಿ ದೇವತೆಯನ್ನು ಆಚಾರ್ಯರು ತುಂಬ ಅರ್ಥಪೂರ್ಣವಾಗಿ ಚಿತ್ರಿಸಿದ್ದಾರೆ. ವಾರಾಹಿ ತನ್ನ ಕೊರೆಯ ಮುಖಾಂತರ ಭೂ ಮಂಡಲವನ್ನು ಎತ್ತಿ ಹಿಡಿದಿದ್ದನ್ನು, ಅದರಲ್ಲಿ ಕರ್ನಾಟಕವನ್ನು ಭಾರತದ ದಕ್ಷಿಣಕ್ಕೆ ಸಂಕೇತವಾಗಿ ಕರ್ನಾಟಕವನ್ನು ಬಿಂದುಯೋಜನ (pointalism) ಪದ್ಧತಿಯಲ್ಲಿ ರಚನೆಗೊಂಡ ನೈಜರೂಪದ ಸೃಜನ ರೇಖಾಕೃತಿಯಾಗಿದೆ.

ಶ್ರೀಚಕ್ರ

ಈ ಶ್ರೀಚಕ್ರವು ಜಾಮಿತಿಕ ಆಕೃತಿಗಳಾದ / ತ್ರಿಭುಜದ ಆಕೃತಿಯೊಂದರಿಂದಲೇ ಚಕ್ರದ ಗರ್ಭವನ್ನು ಹಲವು ತ್ರಿಭುಜದ ಪುಷ್ಪದಂತೆ ರೇಖೆಗಳು ರಚನೆಗೊಂಡು ಸುತ್ತಲೂ ಮೂರು ವೃತ್ತಾಕಾರವನ್ನು ರಚಿಸಿ ಅದರ ಒಳಭಾಗದ ಸ್ಥಳಾವಕಾಶವನ್ನು ಪುಷ್ಪದ ದಳಗಳಿಂದ ಸಂಯೋಜಿಸಿ ಈ ಎಲ್ಲಾ ರೇಖೆಯನ್ನು ಒಂದು ಚೌಕಾಕಾರದಲ್ಲಿ ಬಂಧಿಸಿ ಈ ಚೌಕಾಕಾರವನ್ನು ಕರ್ನಾಟಕದ ನಕಾಶೆ ಹಿಂದಣ ರೇಖಾಕೃತಿಯಾಗಿಸಿದೆ. ಎಲ್ಲಾ ದೇವಿ ಚಿತ್ರಕ್ಕಿಂತ ಭಿನ್ನವಾಗಿದೆ. ಮತ್ತೊಂದು ವಿಶೇಷವಾದ ರೇಖಾಕೃತಿಯೆಂದರೆ ಸಾವಿತ್ರಿ ಪದನಾಮವುಳ್ಳ ರೇಖಾಕೃತಿಯು ಭಾರತದ ನಕಾಶೆಯಾಗಿದೆ. ಈ ರೇಖಾಕೃತಿಯಲ್ಲಿ ಉತ್ತರದ ಭಾಗವಾಗಿರುವ ಕಾಶ್ಮೀರ ಭಾಗವನ್ನು ಶಿವ–ಪಾರ್ವತಿಯ ಮುಖದಿಂದ ಸಂಯೋಜಿತವಾಗಿ ಡಮರುಗ, ತ್ರಿಶೂಲ ರೇಖೆಯ ಸಂಕೇತಿಕವಾಗಿ ನಮ್ಮ ಧಾರ್ಮಿಕ ಸಾಂಪ್ರದಾಯಿಕವಾದ ದೇಶವಾಗಿದೆ ಎನ್ನುವ ಹಿನ್ನೆಲೆಯಲ್ಲಿ ದೊಡ್ಡ ಪರಂಪರೆಯನ್ನು ಕೆಲವೇ ರೇಖೆಗಳಲ್ಲಿ ಹಿಡಿದಿಡುವ ಸೃಜನಾತ್ಮಕ ರೇಖಾಕೃತಿಯಾಗಿದೆ.

ಅರ್ಧನಾರೀಶ್ವರ

ಅರ್ಧನಾರೀಶ್ವರದ ರೇಖಾಕೃತಿಯು ಕೂಡ ಎಲ್ಲಾ ರೇಖೆಗಳಂತೆಯೇ ಇಲ್ಲಿಯೂ ರೇಖೆಗಳ ಸ್ವರೂಪ ಒಂದೇಯಾಗಿದ್ದು, ಚಿತ್ರ ರಚನೆಯಲ್ಲಿ ನೈಜತೆಯನ್ನು ಮೆರೆದಿದ್ದಾರೆ. ಶಿವಪಾರ್ವತಿಯ ಒಂದೇ ದೇಹದಲ್ಲಿ ರೇಖಿಸಲಾಗಿ ಹಿಂದಣ ಶಿವಪಾರ್ವತಿಯನ್ನು ಜಗತ್ತಿಗೆ ಮೂಲದೈವವಾಗಿ ಭೂಮಿಯಿಂದ ಬಾನುವಿಗೆ ವಿಸ್ತರಿಸುವಂತೆ ರೇಖೆಗಳಿಂದ ಚಿತ್ರೀಕರಿಸಲಾಗಿದೆ. ಶಿವಪಾರ್ವತಿಯ ಹಿಂದಣ ಸ್ಥಳವನ್ನು ಭಾರತದ ನಕಾಶೆಯನ್ನು ಸಂಕೇತಿಸುವುದರ ಮೂಲಕ ಒಟ್ಟಾರೆ ಕಲಾಕೃತಿಯನ್ನು ಕಪ್ಪು–ಬಿಳುಪು ಛಾಯೆಯಲ್ಲಿ ರಚಿಸಲಾಗಿದೆ.

ಹಿಂದಿನ ಹಲವು ಸಾಂಪ್ರದಾಯಿಕ ರಚನೆಗಳು ನೋಡುಗರಿಗೆ ತಕ್ಷಣ ಗ್ರಹಿಕೆಗೆ ಒಳಪಡುತ್ತವೆ. ಒಂದೇ ತಾಂತ್ರಿಕತೆಯಿಂದ ಕೂಡಿದ ಹಲವು ರೇಖಾಚಿತ್ರಗಳು ಕೇವಲ ಸಂಕೇತಗಳಿಂದಲೇ

[illegible]

[illegible]

[illegible]

[illegible]





ಬಿ. ಕೋಂಡಾಚಾರಿ ಬಳ್ಳಾರಿ, ಅವರ ಕಲಾಕೃತಿಗಳು





ಪ್ರತಿಯೊಂದು ರೇಖಾಚಿತ್ರಗಳು ಇತರ ರೇಖಾಚಿತ್ರಗಳಿಗಿಂತ ಭಿನ್ನ ಎಂದು ತೋರ್ಪಡಿಸುತ್ತವೆ. ಅಂತಹ ಒಬ್ಬ ಚಾಣಾಕ್ಷ ಕಲಾವಿದರು ಬಿ. ಕೊಂಡಾಚಾರ್ಯರಾಗಿದ್ದಾರೆ. ಆದ್ದರಿಂದಲೇ ಸಾಹಿತಿಗಳು ಸಂದರ್ಭೋಚಿತವಾಗಿ ಸಾಹಿತ್ಯಕ್ಕನುಗುಣವಾಗಿ ರೇಖಾಚಿತ್ರಗಳನ್ನು ಸಹ ರಚಿಸುತ್ತಿದ್ದರಿಂದ ಕೊಂಡಾಚಾರ್ಯರಿಗೆ ಅ.ನ.ಕೃರಂತಹ ಧೀಮಂತ ಸಾಹಿತಿಯ ಒಡನಾಟದಿಂದ ಕಲಾಬದುಕಿನಲ್ಲಿ ಹೊಂಬೆಳಕು ಮೂಡಿತಾದರೂ, ಇವರ ಜೀವನಕ್ಕೆ ಆಧಾರವಾಗಲಿಲ್ಲ. ಅ.ನ.ಕೃ ಸಂಪಾದಿತ ಭಾರತೀಯ ಕಲಾದರ್ಶನಕ್ಕೆ, ಕೂಡಲೀ ಶೃಂಗೇರಿ ಜಗದ್ಗುರುಗಳ ಶಂಕರವಿಜಯಕ್ಕೆ, (ಶಂಕರಾಚಾರ್ಯರ ಜೀವನ ಚರಿತ್ರೆ), ೨೪ ಅದ್ಭುತ ರೇಖಾಚಿತ್ರಗಳನ್ನು ರಚಿಸಿಕೊಟ್ಟಿದ್ದಾರೆ.

ದುರದೃಷ್ಟವಶಾತ್ ಯಾವ ಮೂಲ ಚಿತ್ರಗಳೂ ಇವರ ಬಳಿ ಉಳಿದಿಲ್ಲ. ಇದಲ್ಲದೆ ಪ್ರಜಾವಾಣಿ, ಪ್ರಜಾಮತ, ಪ್ರಪಂಚ, ಆಂಧ್ರಪ್ರಭ, ಆಂಧ್ರಜ್ಯೋತಿ ಮುಂತಾದ ಪತ್ರಿಕೆಗಳ ದೀಪಾವಳಿ ಮುಖಪುಟ ಮತ್ತು ಒಳಪುಟಗಳಲ್ಲಿ ಅವಿಸ್ಮರಣೀಯ ಚಿತ್ರಗಳು ಅಂದು ಬೆಳಕು ಕಂಡಿವೆ. ಆದರೆ ಅವುಗಳು ಸಹ ಕಲಾವಿದರ ಬಳಿ ಉಳಿದುಕೊಂಡಿಲ್ಲ. ಇವರು ಹಲವು ಪ್ರಶಸ್ತಿ, ಸನ್ಮಾನಗಳನ್ನು ಕಂಡಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ ೧೯೮೭, ಶ್ರೀನಾಗೇಶ ಕವಿ ಪ್ರಶಸ್ತಿ ನೀಡಿ ಜೋಳದ ರಾಶಿ ದೊಡ್ಡನಗೌಡರಿಂದ ೧೯ನೇ ಫೆಬ್ರವರಿ ೧೯೫೬ರಲ್ಲಿ ಸನ್ಮಾನಿಸಲಾಯಿತು. ಹೀಗೆ ಕಲಾವಿದರು ರಾಜಯೋಗ ಆಶ್ರಮದಲ್ಲಿ ಧ್ಯಾನ ಪೂಜೆ ಮುಂತಾದ ಚಟುವಟಿಕೆಯಲ್ಲಿ ತಲ್ಲೀನರಾಗಿದ್ದಾರೆ. ಈಗ ಯಾವ ರೇಖಾಚಿತ್ರಗಳನ್ನು ಸಹ ರಚನೆ ಮಾಡುವುದಿಲ್ಲ.

೦೪. ಚಿತ್ರಕಲಾವಿದ ರಾಬರ್ಟ್ ಗೀಸಿಂಕ್

ಬಳ್ಳಾರಿ ಜಿಲ್ಲೆಯ ಹಂಪೆಯಲ್ಲಿ ನೆಲೆನಿಂತಿರುವ ಕಲಾವಿದ ರಾಬರ್ಟ್ ಗೀಸಿಂಕ್‌ರು ಹುಟ್ಟಿದ್ದು ಡಚ್ ದೇಶದಲ್ಲಿ. ಡಚ್ ದೇಶವು ಪ್ರಪಂಚಕ್ಕೆ ಪ್ರಸಿದ್ಧ ಕಲಾವಿದರನ್ನು ಕೊಡುಗೆ ನೀಡಿದ ನಾಡಾಗಿದೆ. ರೆಂಬ್ರಾಂಟ್ ಮತ್ತು ವಿನ್ಸೆಂಟ್ ವ್ಯಾನ್‌ಗೋರಂತಹ ಪ್ರಸಿದ್ಧ ಕಲಾವಿದರು ಜನಿಸಿದ ಈ ದೇಶದಲ್ಲಿ ರಾಬರ್ಟ್ ಗೀಸಿಂಕರು ೨೯ ಜನವರಿ ೧೯೪೩ರಲ್ಲಿ ಹಾಲೆಂಡ್‌ನ ರಾಜಧಾನಿಯಾದ ಆಮಸ್ಟರ್ ಡ್ಯಾಂ ಪಟ್ಟಣದಲ್ಲಿ ಜನಿಸಿದರು. ಆಮಸ್ಟರ್ ಡ್ಯಾಂ ನಗರದ ಓಣಿಗಳು ಯಾವಾಗಲೂ ಜನಭರಿತವಾಗಿರುತ್ತಿದ್ದವು. ಆದ್ದರಿಂದ ಬಾಲ್ಯದಲ್ಲಿ ರಾಬರ್ಟ್‌ರು ಮನೆಯಲ್ಲಿಯೇ ಕುಳಿತು ಆಟವಾಡುತ್ತಿದ್ದರು. ಹೀಗೆ ಅವರ ಸಮಯವೆಲ್ಲ ಹೆಚ್ಚಾಗಿ ಮನೆಯಲ್ಲಿ, ಒಳಾಂಗಣ ಕ್ರೀಡೆಗಳಲ್ಲಿ ಕಳೆಯಿತು.

ರಾಬರ್ಟ್ ಗೀಸಿಂಕ್‌ರ ತಂದೆಯು ಒಬ್ಬ ಕಮರ್ಷಿಯಲ್ ಚಿತ್ರಕಲಾವಿದರಾಗಿದ್ದರು. ಅವರ ಮನೆಯ ಪರಿಸರ ಕಲಾಸಾಮಗ್ರಿಗಳಿಂದ ತುಂಬಿರುತ್ತಿತ್ತು. ಇಂಥ ಮನೆಯ ಪರಿಸರ, ಕಲಾಪರಿಕರ ಮುಂತಾದವು ಯಾವಾಗಲೂ ಗೀಸಿಂಕರ ಮೇಲೆ ಪ್ರಭಾವ ಬೀರಿದವು ಎನ್ನಬಹುದು. ಹಾಗಾಗಿ ರಾಬರ್ಟ್ ಕಲಾವಿದರಾಗಿ ಬೆಳೆಯಲು ಅವರ ಮನೆಯೇ ಮುಖ್ಯವಾದ ಪರಿಸರವಾಗಿತ್ತು

[illegible]

ಎನ್ನಬಹುದು. ತಂದೆಯವರೆ ಮೊದಲ ಕಲಾಗುರು ಆಗಿದ್ದರು. ಆ ದಿನಗಳನ್ನು ರಾಬರ್ಟ್ ನೆನೆಯುತ್ತಾರೆ. ಮುಂದೆ ರಾಬರ್ಟ್ ಗೀಸಿಂಕರು ತಮ್ಮ ಬದುಕಿನಲ್ಲಿ ತಂದೆಯ ಸ್ಟುಡಿಯೋದಲ್ಲಿ (ಚಿತ್ರ, ಆಟಿಕೆಗಳಿದ್ದು) ಗ್ರಾಫಿಕ್ ಕಲಾವಿದರಾಗಿ ಕೆಲಸ ಮಾಡಿದರು. ಅಲ್ಲದೇ ಅವರು ವಾಣಿಜ್ಯ ಏಜೆನ್ಸಿಯಲ್ಲಿಯೂ ಕೆಲಸ ಮಾಡಿದರು.

ಸ್ವಲ್ಪ ಸಮಯದ ನಂತರ ಯುರೋಪ್ ಖಂಡದ ಕಲಾನಗರಿಯಾದ ಪ್ಯಾರಿಸ್‌ಗೆ ಹೋಗಲು ನಿರ್ಧರಿಸಿದರು. ಇವರು ತಮ್ಮ ಹದಿನೆಂಟನೆಯ ವಯಸ್ಸಿನಲ್ಲಿ ಪ್ಯಾರಿಸ್‌ಗೆ ಹೋದರು. ಅಲ್ಲಿನ ನೈಟ್‌ಕ್ಲಬ್‌ಗಳಲ್ಲಿ ಸಂಗೀತ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಸಂಗೀತ ನುಡಿಸುವುದೆಂದರೆ ಅವರಿಗೆ ತುಂಬ ನೆಚ್ಚಿನ ಮತ್ತು ಪ್ರೀತಿಪಾತ್ರವಾದ ಕೆಲಸವಾಗಿತ್ತು. ಅಲ್ಲಿ ಅವರಿಗೆ ಕೆಲವು ಸ್ನೇಹಿತರ ಪರಿಚಯವಾಯಿತು. ಅವರಲ್ಲಿ ಎಲ್. ವ್ಯಾಗ್‌ಜಿನ್‌ನ ಕಲಾನಿರ್ದೇಶಕರ ಪರಿಚಯ ಪ್ರಮುಖವಾದುದು. ಏಕೆಂದರೆ ಇವರ ಜೀವನದಲ್ಲಿ ಈ ಪರಿಚಯ ಒಂದು ಬದಲಾವಣೆಯನ್ನು ತಂದುಕೊಟ್ಟಿತು. ಈ ನಿರ್ದೇಶಕರು 'ಎಲ್' ಸಾಪ್ತಾಹಿಕ ಮ್ಯಾಗಜಿನ್‌ಗೆ ಅವರು ಇಲ್ಲಿಸ್ಟ್ರೇಟರ್ ಆಗಿ ರೇಖಾಚಿತ್ರಗಳನ್ನು ರಚಿಸಿಕೊಡುವ ಅವಕಾಶ ಮಾಡಿಕೊಟ್ಟರು. ಈ ಕೆಲಸವನ್ನು ತುಂಬಾ ಉತ್ಸುಕತೆಯಿಂದ ಒಪ್ಪಿಕೊಂಡು ಕಾರ್ಯನಿರ್ವಹಿಸಲು ಸಿದ್ಧರಾದರು. ಮತ್ತು ತಮ್ಮ ಮುಂದಿನ ದಿನಗಳಲ್ಲಿ ಹೊಸ ಕಲಾನಿರ್ದೇಶಕರ ಆದೇಶದ ಮೇರೆಗೆ ಕಲೆಯಲ್ಲಿ ಭಿನ್ನ ದೃಷ್ಟಿಕೋನವನ್ನು ಹರಿಬಿಟ್ಟರು. ನಂತರದ ದಿನಗಳಲ್ಲಿ ಕಲಾನಿರ್ದೇಶಕರ ದಬ್ಬಾಳಿಕೆಯಿಂದ ಬೇಸತ್ತು ಆ ಕೆಲಸಕ್ಕೆ ರಾಜಿನಾಮೆಯನ್ನು ಕೊಟ್ಟರು. ಸ್ವತಃ ಹವ್ಯಾಸಿ ಕಲಾವಿದರಾಗಿ ಹಲವಾರು ರೇಖಾಚಿತ್ರಗಳನ್ನು ರಚಿಸಿದರು.

ನಂತರ ಇವರ ರೇಖಾಚಿತ್ರ ಮಾಡುವ ಸಂದರ್ಭದಲ್ಲಿ ಕಲಾಸಹೃದಯಿಗಳು ಕಲೆಯನ್ನು ಮೆಚ್ಚಿ ಆ ಕಲಾಕೃತಿಯನ್ನು ಕೊಂಡುಕೊಳ್ಳುತ್ತಿದ್ದರು. ಇದಕ್ಕೆ ಸ್ಫೂರ್ತಿಯಾದ ಇವರ ಮನಸ್ಸು ರೇಖಾಚಿತ್ರಗಳೊಂದಿಗೆ ಮತ್ತಷ್ಟು ರಮಣೀಯ ವರ್ಣಲೇಪನ ಮಾಡಲು ಮುಂದಾಗಿ ನಂತರದ ದಿನಗಳಲ್ಲಿ ಹಲವಾರು ಸಂಯೋಜನ ಚಿತ್ರಕಲಾಕೃತಿಗಳನ್ನು ರಚಿಸಿದರು. "ನಾನು ಇಪ್ಪತ್ತೈದನೇ ವಯಸ್ಸಿನಲ್ಲಿ ಕಲಾಕೃತಿಗಳನ್ನು ರಚಿಸಲು ಪ್ರಾರಂಭಿಸಿದೆ. ಗಟ್ಟಿ ನಿರ್ಧಾರ ಮಾಡಿ ಬಣ್ಣ, ಬ್ರಷ್ ಮತ್ತು ಕಲಾಸಾಮಗ್ರಿಗಳನ್ನು ಖರೀದಿಸಿದೆ. ಕಲಾಕೃತಿಗಳೇ ನನ್ನ ಜೀವ ಎಂದು ಭಾವಿಸಿ ಕಲಾಕೃತಿಗಳನ್ನು ಮಾತ್ರ ರಚಿಸತೊಡಗಿದೆ. ನಿಜವಾಗಿ ನನಗೆ ರೇಖಾಚಿತ್ರಗಳನ್ನು ರಚಿಸುವುದು ತುಂಬಾ ಇಷ್ಟ, ಆದರೆ ಆಗ ನನಗೆ ಬಣ್ಣಗಳ ಜೊತೆ ಆಟವಾಡಲೇಬೇಕೆನಿಸಿತು. ಇದರಿಂದಾಗಿ ನಾನು ಕಲಾಕೃತಿಗಳನ್ನು ರಚಿಸಲಿಕ್ಕೆ ಶುರು ಮಾಡತೊಡಗಿದೆ." ಎಂದು ಹೇಳುತ್ತಾರೆ.

ಇವರ ಕಲೆ ಮತ್ತಷ್ಟು ಪರಿಣಾಮಕಾರಿಯಾಗಿ ರೂಪುಗೊಳ್ಳಲು ಆರ್ನ್ ವ್ಯಾನ್ ಬರ್ನವೆಲ್ಡ್ ಒಬ್ಬ ಪ್ರಸಿದ್ಧ ಡಚ್ ಕಲಾವಿದ ಸಹಾಯಕಾರಿಯಾದರು. ಅವನ ಜೊತೆಗೆ ಸೇರಿ ಎರಡು ವರ್ಷಗಳ ಕಾಲ ಕಲಾಕೃತಿಗಳನ್ನು ರಚಿಸಿದರು. ಅವರಿಂದ ತೈಲವರ್ಣದ ಕಲಾಕೃತಿ ರಚನೆ

ಮಾಡಲು ಇರಬೇಕಾದ ತಾಳ್ಮೆ, ಸಮರ್ಪಣಾ ಭಾವಗಳನ್ನು ಗೀಸಿಂಕರು ಅರಿತರು. ರಾಬರ್ಟ್ ಗೀಸಿಂಕರು ತೈಲವರ್ಣವನ್ನು ಪ್ರಮುಖ ಮಾಧ್ಯಮವನ್ನಾಗಿ ಆರಿಕೊಳ್ಳುವಲ್ಲಿ ಆರ್ನ್ ವ್ಯಾನ್ ಬರ್ನವೆಲ್ಡ್ ಅವರೆ ಪ್ರಮುಖ ಪ್ರೇರಣೆ ನೀಡಿದವರು.

ರಾಬರ್ಟ್ ಗೀಸಿಂಕ್ ಹಂಪೆಗೆ ಬಂದ ಬಗೆ

ರಾಬರ್ಟ್ ಗೀಸಿಂಕರು ಭಾರತಕ್ಕೆ ಬರುವ ಮುಂಚೆ ಯುರೋಪ್ ಮತ್ತು ಆಫ್ರಿಕಾ ಖಂಡಗಳನ್ನು (ಲಂಡನ್, ಪ್ಯಾರಿಸ್, ಸ್ಪೇನ್, ಮೊರಾಕ್ಕೊ) ಸುತ್ತಿ ಬಂದಿದ್ದರು. ಡಚ್ ಸರಕಾರದವರು ತಮ್ಮ ಕಲಾಯೋಜನೆಯಡಿಯಲ್ಲಿ ರಾಬರ್ಟ್ ಗೀಸಿಂಕರ ಹನ್ನೆರಡು ಕಲಾಕೃತಿಗಳನ್ನು ಖರೀದಿಸಿದ್ದರು. ತಕ್ಷಣವೇ ಇವರಿಗೆ ಹಣ ಕೈ ಸೇರಿದುದರಿಂದ ಅವರು ಭಾರತ ಪ್ರವಾಸ ಕೈಗೊಳ್ಳಲು ಬಹಳ ಸಹಕಾರಿಯಾಯಿತು. ೧೯೭೮ರಲ್ಲಿ ರಾಬರ್ಟರು ಭಾರತಕ್ಕೆ ಬಂದು ಮೊದಲಿಗೆ ಗುಜರಾತ್‌ನಲ್ಲಿ ಸಾಧುಗಳ ಜೊತೆಗಿದ್ದರು. ಆಗ ಅವರು ತಾನು ಕೂಡ ಒಬ್ಬ ಸಾಧುವಾಗಬೇಕೆಂದು ತೀರ್ಮಾನಿಸಿದ್ದರು. ಆಗ ಅವರು ಸಾಧುವಾಗಿದ್ದರೆ ನಾವು ಇಂಥ ಒಬ್ಬ ಕಲಾವಿದರನ್ನು ನೋಡಲು ಸಾಧ್ಯವಾಗುತ್ತಿರಲಿಲ್ಲ.

ತಮ್ಮ ೩೫ನೆಯ ವಯಸ್ಸಿನಲ್ಲಿ ಭಾರತಕ್ಕೆ ಬಂದು ಹಿಮಾಲಯ, ಹರಿದ್ವಾರ ಮುಂತಾದ ಸ್ಥಳಗಳ ಪರಿಸರದ ಪ್ರಭಾವದಿಂದ ಸಾಧು ಆಗಬೇಕೆಂದುಕೊಂಡಿದ್ದರು. ಆದರೆ ತಮ್ಮ ಸ್ನೇಹಿತನಿಂದ ಪ್ರಭಾವಿತರಾಗಿ ತಾನೂ ಕಲಾವಿದನಾಗಬೇಕು ಎಂದು ನಿರ್ಧರಿಸಿದರು. ನಂತರ ದಿನಗಳಲ್ಲಿ ಅವರು ಮನಾಲಿ, ಗೋವಾ, ಕನ್ಯಾಕುಮಾರಿ, ಗೋಕರ್ಣ ಮೊದಲಾದ ಸ್ಥಳಗಳನ್ನು ವೀಕ್ಷಿಸಿದರು. ಕನ್ಯಾಕುಮಾರಿಯಲ್ಲಿದ್ದಾಗ ಅಲ್ಲಿ ಒಬ್ಬ ಸ್ವಾಮಿಯ ಪರಿಚಯವಾಯಿತು. ರಾಬರ್ಟ್‌ರಿಗೆ ಹಂಪಿಸ್ಥಳವನ್ನು ವೀಕ್ಷಿಸುವಂತೆ ಹಂಪೆಯ ವೈಶಿಷ್ಟ್ಯವನ್ನು ರಾಬರ್ಟ್‌ಗೆ ಮನವರಿಕೆ ಮಾಡಿಕೊಟ್ಟರು. ಹಾಗಾಗಿ ರಾಬರ್ಟ್ ಹಂಪಿ ಪ್ರದೇಶವನ್ನು ನೋಡಲು ಕಾತರರಾಗಿ ೧೯೭೮ರಲ್ಲಿ ಹಂಪೆಯ ಕಡೆಗೆ ಪ್ರಯಾಣ ಮಾಡಿದರು.

ಹಂಪಿಯನ್ನು ನೋಡಿ "But permanently I decided just want to live with my painting and I stumbled on Hampi" ಸ್ಮಾರಕ, ಪರಿಸರದ ರಮ್ಯನೋಟ ತಮ್ಮ ಕುಂಚಕ್ಕೆ ಭಾರೀ ಕೆಲಸ ನೀಡಬಲ್ಲವು ಎಂದು ನಿರ್ಧರಿಸಿ ಅಲ್ಲಿಯೇ ನೆಲೆ ನಿಂತರು. ಹಂಪೆಯು ಇವರಿಗೆ ತುಂಬಾ ಪ್ರಿಯವಾದ ಸ್ಥಳವಾಯಿತು. ಹಂಪಿಯನ್ನು ಬಿಟ್ಟು ಬೇರೆ ಯಾವ ಸ್ಥಳವು ವರ್ಣಚಿತ್ರಗಳ ರಚನೆ ಸೂಕ್ತ ಅನಿಸಲಿಲ್ಲ. ಇವರ ಎಲ್ಲಾ ಕಲಾಕೃತಿಗಳು ಹಂಪೆಪ್ರದೇಶ, ಸುತ್ತಮುತ್ತಲಿನ ಪ್ರದೇಶಕ್ಕೆ ಪೂರಕವಾಗಿವೆ. ನೈಜಚಿತ್ರಗಳು ಹಂಪೆ ಸುತ್ತಮುತ್ತಲಿನ ಪ್ರದೇಶದ್ದಾಗಿವೆ. ಸಂಯೋಜನೆ ಮತ್ತು ಆಧುನಿಕ ಕಲೆಯಲ್ಲಿಯೂ ಹಂಪೆಯ ಸುತ್ತಮುತ್ತಲಿನ ಲಮಾಣಿ ತಾಂಡಗಳು, ಲಮಾಣಿಯ ಸ್ತ್ರೀ ವೇಷಭೂಷಣಕ್ಕೆ ಮಾರುಹೋಗಿ ಇವರ ಹಲವಾರು ಕಲಾಕೃತಿಗಳನ್ನು ಲಮಾಣಿಯ ಜನಾಂಗದ ಚಟುವಟಿಕೆಗಳನ್ನು ಕುರಿತಂತೆ ರಚಿಸಲಾಗಿದೆ.

ರಾಬರ್ಟ್ ಗೀಸಿಂಕರ ಕಲಾಕೃತಿಗಳಲ್ಲಿ ರೇಖಾಚಿತ್ರಗಳು, ನಿಸರ್ಗಚಿತ್ರಗಳು, ಅಮೂರ್ತ ಚಿತ್ರಗಳು, ನೈಜ ಸ್ವರೂಪದ ಸಂಯೋಜನ ಚಿತ್ರಗಳು, ಭಾವಚಿತ್ರಗಳು, ಸ್ವಭಾವ ಚಿತ್ರಗಳು ಮುಖ್ಯವಾಗಿ ಕಂಡುಬರುತ್ತವೆ.

ರೇಖಾಚಿತ್ರಗಳು

ರಾಬರ್ಟ್ ಗೀಸಿಂಕರು ಬಹಳಷ್ಟು ರೇಖಾಚಿತ್ರಗಳನ್ನು ರಚಿಸಿದ್ದಾರೆ. ಗೀಸಿಂಕರು ಲಂಬಾಣಿ ಸಂಸ್ಕೃತಿಯ ರೇಖಾಚಿತ್ರಗಳನ್ನು ಹೆಚ್ಚಾಗಿ ಚಿತ್ರಿಸಿದ್ದಾರೆ. ಲಂಬಾಣಿ ಸುಂದರಿಯರು ಪೂಜಾರಿ, ಲಂಬಾಣಿ ನೃತ್ಯ, ಡೊಳ್ಳು ಹೊಡೆಯುತ್ತಿರುವ ಲಂಬಾಣಿ ಪುರುಷರು, ಲಂಬಾಣಿ ಜನಾಂಗದ ವಿಶಿಷ್ಟ ಆಚರಣೆ ಮತ್ತು ಹಬ್ಬ ಹರಿದಿನಗಳ ವಿಷಯಕ್ಕೆ ಸಂಬಂಧಿಸಿದಂತಹ ಬಹಳಷ್ಟು ರೇಖಾಚಿತ್ರಗಳನ್ನು ಗೀಸಿಂಕರು ಚಿತ್ರಿಸಿದ್ದಾರೆ. ಇವರು ವರ್ಣಲೇಪನಕ್ಕೆ ಮೊದಲಿಗೆ '0' ಸಂಖ್ಯೆಯ ಕುಂಚದಿಂದ ರೇಖೆಯನ್ನು ಹಾಕಿಕೊಳ್ಳುತ್ತಾರೆ. ಮತ್ತು ಅವಶ್ಯವಿದ್ದಲ್ಲಿ ತುಂಬಾ ಸೂಕ್ಷ್ಮ ರೇಖೆಗಳು ಸಂಯೋಜನಾ ಮತ್ತು ನೈಸರ್ಗಿಕ ಚಿತ್ರಗಳಲ್ಲಿ ಕಂಡುಬರುತ್ತವೆ. ಇವರು ಮೊದಲಿಗೆ ಹಲವಾರು ಕಲಾಕೃತಿಗಳನ್ನು ಪೆನ್ಸಿಲ್ ಮತ್ತು ಚಾರ್‌ಕೋಲ್ ಮಾಧ್ಯಮಗಳಲ್ಲಿ ಕ್ಷಿಪ್ರರೇಖಾ ಚಿತ್ರಗಳನ್ನು ತಮ್ಮ ಕರಡು ಕಲಾಕೃತಿಯಾಗಿ ರಚಿಸಿದ್ದಾರೆ.

ನಿಸರ್ಗ ಚಿತ್ರಗಳು

ನಿಸರ್ಗ ಚಿತ್ರಗಳನ್ನು ಇವರು ತೈಲವರ್ಣದ ಮಾಧ್ಯಮದಲ್ಲಿ ನೈಜ ಸ್ವರೂಪದಲ್ಲಿ ರಚನೆ ಮಾಡಿದ್ದಾರೆ. ನಿಸರ್ಗದ ರಮ್ಯತೆಯನ್ನು, ಪ್ರಕೃತಿಯ ವೈಚಿತ್ರ್ಯವನ್ನು ಅದರ ಅನಂತ ಸಾಧ್ಯತೆಯನ್ನು ತಮ್ಮ ಕಲಾಕೃತಿಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಈ ಅಭಿವ್ಯಕ್ತಿಯಲ್ಲಿ ಅವರ ಕಲಾತ್ಮಕ ಪ್ರತಿಭೆಯನ್ನು ಗುರುತಿಸಬಹುದಾಗಿದೆ. ಗೀಸಿಂಕರು ಪ್ರಕೃತಿಯಲ್ಲಿ ಒಂದು ನೋಟದ ಆಯತವನ್ನು ಮೊದಲಿಗೆ ರಟ್ಟಾರಿವೆ(canvas)ಗೆ ಸರಿಹೊಂದುವಂತೆ ನಿದರ್ಶಿಸಿಕೊಂಡು ಮತ್ತು ಅದರಲ್ಲಿ ಭೂ–ಮಿತಿಯ ಅನುಗುಣವಾಗಿ ಮುಂದಿನ ಭಾಗದಲ್ಲಿ ಗಾಢವಾಗಿ, ಹಿಂದಿನ ಭಾಗವನ್ನು ತಿಳಿಯಾಗಿ ತೋರಿಸುವುದರಿಂದ ಅಲ್ಲಿ ಸ್ಪಷ್ಟ ಸ್ವರೂಪದ ನಿಸರ್ಗ ಚಿತ್ರವನ್ನು ಮೂಡಿಸುತ್ತಾರೆ.

ಈ ಎಲ್ಲಾ ನಿಸರ್ಗ ಚಿತ್ರಗಳಲ್ಲಿ ಒಂದು ಆಕಾರಕ್ಕೆ, ಭಾವಮುದ್ರೆಗೆ ಒಳಗಾಗಿ ಆ ಒಂದು ವಿಷಯಕ್ಕೆ ಪೂರಕವಾಗುವಂತಹ ಸ್ಥಳಗಳನ್ನು ಸಹ ಚಿತ್ರಿಸಿರುವುದು ಇವರ ನಿಸರ್ಗ ಚಿತ್ರದಲ್ಲಿ ಕಂಡುಬರುವ ಸ್ಪಷ್ಟವಾದ ಒಂದು ಅಂಶವಾಗಿದೆ. ಈ ಅಂಶ ಚಿತ್ರಗಳಲ್ಲಿ ಮುಖ್ಯವಾಗಿ ಮೂಲ್ಯವತ್ತಾಗಿದೆ. ರಘುನಾಥ ದೇವಾಲಯವಿರುವ ಬೆಟ್ಟದ ಚಿತ್ರ, ಹಂಪಿಯ ತುಂಗಭದ್ರಾ ನದಿಯ ದೃಶ್ಯ, ಹಂಪಿಯ ಹೇಮಕೂಟದ ಹನುಮಂತ ದೇವಸ್ಥಾನದ ದೃಶ್ಯ, ಹಂಪಿ ಪರಿಸರದ ಋಷ್ಯಮೂಕ ಪರ್ವತದ ದೃಶ್ಯ, ಹಂಪಿಯ ಕಲ್ಲು ಬಂಡೆ, ಗಿಡಮರಗಳಿಗೆ ಮಾರುಹೋಗಿ ತಮ್ಮ ಕಲಾಕೃತಿಯಲ್ಲಿ ಹಂಪೆಯು ದೃಶ್ಯಾವಳಿಗೆ ಜೀವ ತುಂಬಿದ್ದಾರೆ. ಈ ಶೈಲಿಯು ಪಾಶ್ಚಾತ್ಯ ಶೈಲಿಗೆ ಹೋಲುತ್ತದೆ.

ನೈಜ ಸ್ವರೂಪದ ಸಂಯೋಜನಾ ಚಿತ್ರಗಳು


ಈಗಾಗಲೇ ತಿಳಿಸಿದಂತೆ ಲಂಬಾಣಿ ಮಹಿಳೆಯ ಚಟುವಟಿಕೆ, ಆಚರಣೆಗೆ ಸಂಬಂಧಿಸಿದಂತಹ ಸಂಯೋಜನಾ ಚಿತ್ರಗಳು ಹೆಚ್ಚಾಗಿ ಕಂಡುಬರುತ್ತವೆ. ಇವು ಸಹ ನೈಜ ಸ್ವರೂಪದಲ್ಲಿ ಕಂಡುಬರುವ ತೈಲ ವರ್ಣದಲ್ಲಿ ರಚನೆಗೊಂಡಿವೆ. ಇವರು ದಿನನಿತ್ಯದ ಪರಿಸರದ ಸನ್ನಿವೇಶವನ್ನು ಕಲಾಕೃತಿಯ ವಸ್ತುವಿಷಯವಾಗಿ ಚಿತ್ರಿಸಿ ತೋರ್ಪಡಿಸಿದ್ದಾರೆ. ಇಲ್ಲಿಯೂ ಮೊದಲಿಗೆ ರೇಖೆಗಳನ್ನು ಹಾಕಿಕೊಂಡು ನಂತರದಲ್ಲಿ ಮುಖ್ಯವಾದ ಆಕಾರಗಳಿಗೆ ಬಣ್ಣ ಲೇಪಿಸುತ್ತಾ ಎಲ್ಲಾ ಆಕಾರಗಳನ್ನು ಪೂರ್ಣಗೊಳಿಸಿ ನಂತರ ಹಿಂದಣ ಸ್ಥಳವನ್ನು ಆಕಾಶ, ಬೆಟ್ಟ, ಗಿಡ-ಮರಗಳಿಂದ ಪೂರ್ಣಗೊಳಿಸುವುದು ಈ ಚಿತ್ರಕಲಾಕೃತಿಗಳ ರಚನಾತಂತ್ರವಾಗಿದೆ. ಈ ಕಲಾಕೃತಿಗಳಲ್ಲಿ ಲಂಬಾಣಿಯ ಸಾಮೂಹಿಕ ನೃತ್ಯ, ಎರಡು ಮೂರು ಮುಖಭಾವಗಳ ಸಂಯೋಜನಾ ಚಿತ್ರ, ಮಹಿಳೆಯರು ಕೊಳದಲ್ಲಿ ಸ್ನಾನಮಾಡುತ್ತಿರುವ ದೃಶ್ಯಾವಳಿಯ ಹಿನ್ನೆಲೆಯಲ್ಲಿ ಸುಂದರವಾದ ದೇವಲೋಕದ ಕಲ್ಪನೆಯ ಪಾಶ್ಚಾತ್ಯ ಕಲಾಶೈಲಿಯಲ್ಲಿ ರಚಿಸಿದ್ದಾರೆ.

ಭಾವಚಿತ್ರಗಳು

ಫೋಟೋಗ್ರಫಿಯ ಅನ್ವೇಷಣೆಯ ಮೊದಲಿಗೆ ಭಾವಚಿತ್ರಗಳು ಹೆಚ್ಚು ರೂಢಿಯಲ್ಲಿದ್ದವು. ರೇನಾಸಾನ್ಸ್ ಕಾಲದಿಂದ ಯುರೋಪ್ ಅಮೇರಿಕೆ ದೇಶಗಳಲ್ಲಿ ರೂಢಿಗೆ ಬಂದಿತು. ಮೊದಲಿಗೆ ತೈಲಮಾಧ್ಯಮದಲ್ಲಿ ರಚನೆಯಾದವು. ಅಂತಹ ಶೈಲಿಯು ರೂಢಿತವಾಗಿ ಗೀಸಿಂಕರ ಕಲಾಕೃತಿಗಳಲ್ಲಿಯೂ ಕಂಡುಬರುತ್ತದೆ. ಈ ಒಂದು ಪಾಶ್ಚಾತ್ಯ ಶೈಲಿಯಲ್ಲಿಯೇ ಕಲಾವಿದನು ತಮ್ಮದೇಯಾದ ವ್ಯಕ್ತಿಗತ ಶೈಲಿಯೂ ಕೂಡ ೧೯ನೇ ಶತಮಾನದ ನಂತರ ಮಾಡಿದ ಭಾವಚಿತ್ರಗಳಲ್ಲಿ ಮುಖ್ಯವಾಗಿದ್ದಿತು. ಅಂತಹ ಒಂದು ಯೋಚನೆಯಿಂದ ಗೀಸಿಂಕರು ಹೊರತಾಗಿಲ್ಲ. ಗೀಸಿಂಕರ ವರ್ಣಲೇಪನವು ನಯಗಾರಿಕೆ(soft)ಯ ತಂತ್ರಗಾರಿಕೆಯಲ್ಲಿ ರಚನೆಯಾಗಿದೆ. ಅಂತಹ ಚಿತ್ರಗಳಲ್ಲಿ ಗೀಸಿಂಕರ ಪತ್ನಿಯಾದ ಸೀತಾಳ ಭಾವಚಿತ್ರ, ಸುಂದರ ಲಂಬಾಣಿ ಮಹಿಳೆಯರ ಭಾವಚಿತ್ರ, ಪ್ರಮುಖವಾದವುಗಳಾಗಿವೆ. ಮತ್ತು ಸ್ವ-ಭಾವಚಿತ್ರಗಳು ಇವರ ಭಾವಚಿತ್ರದಲ್ಲಿ ಮತ್ತೊಂದು ರೀತಿಯ ಸರಣಿ ಚಿತ್ರಗಳಾಗಿವೆ. ಪಾಶ್ಚಾತ್ಯ ಕಲಾವಿದರಾದ ರೆಂಬ್ರಾಂಟ್, ವಿನ್ಸೆಂಟ್, ವ್ಯಾನ್‌ಗೋ, ಪಾಲ್‌ಗಾಗಿನ್, ಬೆಕ್ಕನ್ ಡ್ಯೂರರ್ ಮೊದಲಾದವರು ಕಡ್ಡಾಯವಾಗಿ ಸ್ವ-ಭಾವಚಿತ್ರವನ್ನು ರಚಿಸಿಕೊಳ್ಳುವ ವಾಡಿಕೆಯು ಇತ್ತು. ಗೀಸಿಂಕರ ಮನೋಭಾವದಲ್ಲಿ ಯಾಂತ್ರಿಕವಾಗಿ ರೂಢಿಯಲ್ಲಿ ತಂದುಕೊಂಡರು. ಗೀಸಿಂಕರು ಕನ್ನಡಿಯಲ್ಲಿ ತಮ್ಮ ಪ್ರತಿಬಿಂಬವನ್ನು ನೋಡಿಕೊಂಡು ಚಿತ್ರಿಸಿರುವುದು ಇವರ ಸ್ವ-ಭಾವ ಕಲಾಕೃತಿಯಲ್ಲಿ ಸ್ಪಷ್ಟವಾಗುತ್ತದೆ.

ಕಲ್ಪನಾ ಚಿತ್ರಗಳು

ರಾಬರ್ಟ್ ಗೀಸಿಂಕರು ಅಮೂರ್ತ ಚಿತ್ರಗಳನ್ನು ರಚಿಸಿದರೂ ಅಮೂರ್ತತೆಯ ಆಕಾರಗಳ



ರಾಬರ್ಟ್ ಗೀಸಿಂಕ ಅವರ ಕಲಾಕೃತಿಗಳು



ಜೊತೆಯಲ್ಲಿ ಮೂರ್ತವಾಗಿ ತಮ್ಮ ಪರಿಸರದ ಲಂಬಾಣಿ ಸ್ತ್ರೀಯರನ್ನು ಜೊತೆಯಲ್ಲಿ ಸಂಯೋಜನೆಗೊಳಿಸಿದ್ದಾರೆ. ಇಂತಹ ಚಿತ್ರಕಲಾಕೃತಿಗಳನ್ನು ೧೫ನೆಯ ಶತಮಾನದಲ್ಲಿ ಪ್ರಸಿದ್ಧ ಕಲಾವಿದನಾದ ಹಿರೋನಿಮಸ್ ಬುಷ್‌ನಿಂದ ಪ್ರೇರಣೆಗೊಂಡು ಕಲ್ಪನಾಚಿತ್ರಗಳನ್ನು ರಚಿಸಲಿಕ್ಕೆ ಪ್ರಾರಂಭಿಸಿದರು. "ಇಲ್ಲಿ ನನಗೆ ನನ್ನ ಸುಂದರ ಕನಸುಗಳನ್ನು ಸೃಷ್ಟಿಸಲಿಕ್ಕೆ ಸಹಕಾರಿಯಾಯಿತು. ನಾನು ಹಂಪಿಗೆ ಬಂದುದೇ ಸುಂದರ ಕಾಲ್ಪನಿಕ ಚಿತ್ರಗಳನ್ನು ರಚಿಸಬೇಕೆಂದು" ಎಂದು ಹೇಳುವ ಗೀಸಿಂಕರು ಸಮಯ ಸಿಕ್ಕಾಗಲೆಲ್ಲಾ ತಮ್ಮ ನೆಚ್ಚಿನ ಕಲ್ಪನಾ ಚಿತ್ರಗಳನ್ನು ರಚಿಸುತ್ತಾ ನಿಸರ್ಗ, ವಾಸ್ತವ, ಆಧ್ಯಾತ್ಮ, ದೇವಾಲಯ ಮುಂತಾದ ವಸ್ತುವಿಷಯ ಸಂಯೋಜನೆಗೊಳಿಸಿದ್ದಾರೆ. ಮತ್ತು ಭೂತ, ಪ್ರೇತ ಕಲ್ಪನೆಯನ್ನು ಕೂಡ ಕಲಾಕೃತಿಯಲ್ಲಿ ತಂದಿದ್ದಾರೆ.

ಒಟ್ಟಾರೆ ರಾಬರ್ಟ್ ಗೀಸಿಂಕರು ರಿಯಲಿಸ್ಟಿಕ್‌ಗೆ ಹೆಚ್ಚು ಒತ್ತು ಕೊಡುತ್ತಾರೆ. ಹಾಗಾಗಿ ಫೋಟೋಗ್ರಾಫಿಯ ಸಾಧ್ಯತೆಯನ್ನೇ ತಮ್ಮ ಕಲಾಕೃತಿಯಲ್ಲಿ ಬಿಂಬಿಸುವ ಪ್ರಯತ್ನ ಮಾಡಿದ್ದಾರೆ ಎನ್ನಬಹುದು. ಹಾಗೆಯೇ ಭಾವಚಿತ್ರಗಳಲ್ಲಿ ಮುಖದ ಭಾವನೆಗೆ, ನೈಸರ್ಗಿಕ ಚಿತ್ರಗಳಲ್ಲಿ ಕಲ್ಲುಗಳಲ್ಲಿ ಜೀವಂತಿಕೆ ತುಂಬಿದ್ದಾರೆ. ಮತ್ತು ಬಣ್ಣವನ್ನು ತುಂಬಾ ಸ್ಪಷ್ಟತೆಯಲ್ಲಿ ನೈಜ ಸ್ವರೂಪದಲ್ಲಿ ಒಂದೊಂದು ಕಲಾಕೃತಿಗಳನ್ನು ೬–೭ ದಿನಗಳ ಕಾಲದವರೆಗೆ ರಚನೆ ಮಾಡಿದ್ದಾರೆ. ಇಲ್ಲಿ ಹೆಚ್ಚಾಗಿ ಅಮೂರ್ತಕ್ಕಿಂತ ನೈಜ ಚಿತ್ರಕಲೆಗೆ ಹೆಚ್ಚು ಒಲವು ನೀಡಿದ್ದಾರೆ. ಕಲಾಕೃತಿಯಲ್ಲಿ ಸರಳ ಪರಿಸರವನ್ನು ಬಣ್ಣಗಳಿಂದ ವೈಭವೀಕೃತವಾಗಿ ಶ್ರೀಮಂತಗೊಳಿಸಿದ್ದಾರೆ. ಇವರ ಕಲಾಕೃತಿಗಳು ಕಲೆಗಾಗಿ ಕಲೆಗೆ ಒಂದೇ ಆಗಿರದೇ ಕಲೆಯೂ ಸಹೃದಯಿಗಳಿಗೂ ಎಂಬುವ ರೀತಿಯಲ್ಲಿ ದೇಶ–ವಿದೇಶಗಳಲ್ಲಿಯೂ ಪ್ರದರ್ಶನಗೊಳಿಸಿದ್ದಾರೆ.

ಕಲಾಕೃತಿಗಳ ಪ್ರದರ್ಶನಗಳು

ತಮ್ಮ ಮೊದಲ ಕಲಾಕೃತಿ ಪ್ರದರ್ಶನವನ್ನು ಆಂಸ್ಟರ್‌ಡ್ಯಾಂ ನಗರದ ಡಚ್ ಗ್ಯಾಲರಿಯಲ್ಲಿ ಪ್ರದರ್ಶಿಸಿದರು. ತದನಂತರ ಒಂದರ ನಂತರ ಮತ್ತೊಂದರಂತೆ ೧೯೭೨, ೭೩, ೭೪, ೧೯೫–೯೬ರಲ್ಲಿ 'uma' ಕಲಾವಿದರ ಗುಂಪಿನ ಒಬ್ಬ ಸದಸ್ಯನಾಗಿ ಗೀಸಿಂಕರು ತಮ್ಮ ಕಲಾಕೃತಿಗಳನ್ನು ಮ್ಯೂಸಿಯಂ ಆಫ್ ಮಾಡರ್ನ್ ಆರ್ಟ್' ೧೯೮೮ರಲ್ಲಿ ವಿಲ್ಲೇಜ್ ಗ್ಯಾಲರಿ ದೆಹೊಇ, ೧೯೧ರಲ್ಲಿ ಕರ್ನಾಟಕ ಚಿತ್ರಕಲಾ ಪರಿಷತ್, ೧೯೫ರಲ್ಲಿ "Flying Dutch man" ಎಂಬ ಶೀರ್ಷಿಕೆಯ ಮ್ಯೂಸಿಯಂ ಆಫ್ ಮಾಡರ್ನ್ ಆರ್ಟ್, ಕೊಚ್ಚಿನ್, ಪ್ಯಾರಿಸ್ ಮುಂತಾದ ಕಡೆಗಳಲ್ಲಿ ಪ್ರದರ್ಶಿಸಿದ್ದಾರೆ.

೦೫. ಎಸ್. ಎಂ. ಜಂಬುಕೇಶ್ವರ

ಎಸ್. ಎಂ. ಜಂಬುಕೇಶ್ವರರವರು ಬಳ್ಳಾರಿ ಜಿಲ್ಲೆ ಮತ್ತು ತಾಲೂಕಿಗೆ ಸೇರಿದ ಗ್ರಾಮದ ಶ್ರೀಧರಗಡ್ಡೆ ಎಂಬ ಹಳ್ಳಿಯಲ್ಲಿ ದಿನಾಂಕ ೨೩.೦೬.೧೯೪೮ರಂದು ಜನಿಸಿದರು. ತಂದೆ ಶ್ರೀ

ಎಸ್. ಎಂ. ಬಸಯ್ಯನವರು, ತಾಯಿ ಶ್ರೀಮತಿ ಗುರುಪಾದಮ್ಮನವರು. ಜಂಬುಕೇಶ್ವರರು ಸೇರಿದಂತೆ ನಾಲ್ಕು ಜನ ಮಕ್ಕಳು. ಜಂಬುಕೇಶ್ವರವರು ನಾಲ್ಕು ವರ್ಷವಿದ್ದಾಗ ತಾಯಿ ದೈವಾಧೀನರಾದರು. ಹೀಗಾಗಿ ತಾಯಿಯ ಮಮತೆ, ಪ್ರೀತಿ, ವಾತ್ಸಲ್ಯ ಇವರಿಗೆ ಸಿಗಲಿಲ್ಲ. ಆ ಕೊರತೆಯನ್ನು ಇವರ ತಂದೆ ಕೊಂಚ ಮಟ್ಟಿಗೆ ತುಂಬಿಕೊಟ್ಟರು ಎನ್ನುವುದು ಇವರಿಗೆ ಸಮಾಧಾನದ ವಿಷಯವಾಗಿದೆ.

ವೃತ್ತಿಜೀವನ

ಶಿಕ್ಷಕ ವೃತ್ತಿ ಮತ್ತು ಛಾಯಾಗ್ರಹಣ ಇದರ ಮುಖ್ಯ ಕಸುಬು. ಶಿಕ್ಷಕ ವೃತ್ತಿಯೊಂದಿಗೆ ಛಾಯಾಗ್ರಹಣ ವೃತ್ತಿಗೂ ಅಷ್ಟೇ ಮಹತ್ವ ನೀಡಿದ್ದರು. ೧೯೬೯ರಲ್ಲಿ ಮೈಸೂರಿನ ಜೆ.ಎಸ್.ಎಸ್. ವಿದ್ಯಾಸಂಸ್ಥೆಯಲ್ಲಿ ಕಲಾಶಿಕ್ಷಕರಾಗಿ ಸೇವೆ ಆರಂಭಿಸಿದ ಜಂಬುಕೇಶ್ವರ ಸಾವಿರಾರು ಮಂದಿ ವಿದ್ಯಾರ್ಥಿಗಳ ಚಿತ್ರಕಲಾ ಪ್ರತಿಭೆಗೆ ಸ್ಫೂರ್ತಿಯ ಸೆಲೆಯಾಗಿದ್ದವರು. ಪ್ರತಿ ಮಕ್ಕಳಲ್ಲಡಗಿರುವ ಅಗೋಚರ ಕಲಾಪ್ರತಿಭೆಯನ್ನು ಹುಡುಕಿ ಕೆದರಿ ಗರಿಗೆದರಿಸುವ ಕಾರ್ಯ ಮಾಡುವಲ್ಲಿ ತಮ್ಮ ವೃತ್ತಿಯ ಸಾರ್ಥಕತೆಯನ್ನು ಕಂಡುಕೊಂಡಿದ್ದ ಇವರು ಹಲವಾರು ಶಿಷ್ಯರನ್ನು ಉತ್ತಮ ಮಟ್ಟದಲ್ಲಿ ತಯಾರಿಗೊಳಿಸಿದ್ದಾರೆ. ಚಿತ್ರಕಲೆಯ ಜೊತೆಜೊತೆಗೆ ಛಾಯಾಗ್ರಹಣದತ್ತ ತಮ್ಮ ಕಲಾನೈಪುಣ್ಯವನ್ನು ಹರಿಯಬಿಟ್ಟು ಜಂಬುಕೇಶ್ವರ ಅವರು ೧೯೮೫ರಿಂದೀಚೆಗೆ ನಾಡಿನ ಅತ್ಯುತ್ತಮ ಛಾಯಾಗ್ರಾಹಕರೆಂಬ ಮಾನ್ಯತೆ, ಮನ್ನಣೆ ಗಳಿಸಿಕೊಂಡರು.[೭] ಚಿತ್ರಕಲಾ ರಚನೆಯ ಔಪಚಾರಿಕ ತರಬೇತಿಯಿಂದ ವೃತ್ತಿ ಆರಂಭಿಸಿದ ಶ್ರೀಯುತರು ರೂಢಿಸಿಕೊಂಡ ಛಾಯಾಚಿತ್ರಣದ ಹಲವಾರು ಚಿತ್ರಗಳಿಗೆ ನೀರುಬಣ್ಣ ಇಲ್ಲವೇ ತೈಲಬಣ್ಣಗಳನ್ನು ಕೊಟ್ಟು ಅಂದಗೊಳಿಸುವ ಕಲೆಗಾರಿಕೆಯೂ ಇವರಿಗಿದೆ. ಅಂತಹ ಛಾಯಾಚಿತ್ರಣಗಳಲ್ಲಿ ಮುಖ್ಯವಾದವುಗಳು ಈ ಕೆಳಗಿನಂತಿವೆ.

ವನ್ಯಜೀವಿ ಛಾಯಾಗ್ರಹಣ

ಛಾಯಾಗ್ರಾಹಕ ವನ್ಯಜೀವಿ ಛಾಯಾಗ್ರಹಣವನ್ನು ಆಯ್ಕೆ ಮಾಡಿಕೊಂಡರೆ, ಆತನು ಒಂದು ಉತ್ತಮವಾದ ವನ್ಯಜೀವಿ ಚಿತ್ರ ತೆಗೆಯಬೇಕಾದರೆ ಕಾಡಿನಲ್ಲಿ ಕೆಲ ಗಂಟೆಗಳ ಅಥವಾ ಬೆಳಗಿನಿಂದ ಸಂಜೆಯವರೆಗೂ ಕಾಯಬೇಕಾಗಬಹುದು. ಕಾದರೂ ಪ್ರಯೋಜನವಾಗದೆಯೂ ಇರಬಹುದು. ಅಂತಹ ಛಾಯಾಗ್ರಾಹಕನಿಗೆ ತಾಳ್ಮೆ ಮಾತ್ರ ಹೆಚ್ಚಾಗಿ ಇರಬೇಕು. ಆಗ ಮಾತ್ರ ಉತ್ತಮ ಛಾಯಾಗ್ರಾಹಕನಾಗಬಲ್ಲವನಾಗುತ್ತಾನೆ ಎಂಬುದು ಜಂಬುಕೇಶ್ವರರ ಅಭಿಪ್ರಾಯ. ಛಾಯಾಚಿತ್ರದ ಕಡೆ ಒಲವಿದ್ದುದರಿಂದ ಮುರಳಿ ಫ್ಲಾಶ್ ಸ್ಟುಡಿಯೋದಲ್ಲಿ ಬಿಡುವಿನ ವೇಳೆಯಲ್ಲಿ ಅಭ್ಯಾಸ ಮಾಡುತ್ತಿದ್ದರು. ಕಲಾ ಡಿಪ್ಲೊಮಾ ನಂತರ ಛಾಯಾಗ್ರಹಣವೇ ಅವರ ಜೀವನದುಸಿರಾಯಿತು. ಆದರೆ ವಾಣಿಜ್ಯೀಕರಣಗೊಳ್ಳಲಿಲ್ಲ. ಕಲಾತ್ಮಕತೆ ಮೈಗೂಡಿಸಿಕೊಂಡರು.

---
೦೭. ಪ್ರೊ. ಕೆ. ರಾಮಮೂರ್ತಿರಾವ್ : ತರಂಗ, ೫ ಫೆಬ್ರವರಿ. ೧೯೮೯

ವನ್ಯ ಪ್ರಾಣಿ, ಪಕ್ಷಿಗಳ ಬಗ್ಗೆ ಇವರ ಗಮನ ಕೇಂದ್ರೀಕೃತವಾಗಲು ಪ್ರಮುಖ ಕಾರಣ ಕಲಾಭ್ಯಾಸದ ಸಂದರ್ಭದಲ್ಲಿ ವನ್ಯಮೃಗ ಚಿತ್ರಿಸುವುದರಲ್ಲಿ ಅಗ್ರಮಾನ್ಯ ಸ್ಥಾನ ಪಡೆದಿದ್ದ ಎಫ್. ಎಂ. ಸೂಫಿಯವರು ಇವರ ಕಲಾಗುರುಗಳಾಗಿದ್ದುದು. ಅವರು ಬರೆಯುವ ಒಂದೊಂದು ಚಿತ್ರವೂ ಗಾಢವಾದ ಪರಿಣಾಮ ಬೀರಿದ್ದವು. ಆ ಆಶಯವನ್ನೇ ಕ್ಯಾಮರಾ ಮೂಲಕ ಸೆರೆಹಿಡಿಯಲು ಪ್ರೇರಕವಾಯಿತು. ತತ್ಪರಿಣಾಮ ಬಂಡೀಪುರ, ನಾಗರಹೊಳೆ, ಕೊಕ್ಕರೆ ಬೆಳ್ಳೂರು, ಕುರುಡುಮಾಲೆ, ಪೆರಿಯೂರು, ಮದವಲ್ಲೈ(ತಮಿಳುನಾಡು) ಹೀಗೆ ಹಲವಾರು ಕಡೆ ಸುತ್ತಾಡಿ ತೆಗೆದ ಛಾಯಾಚಿತ್ರಗಳು[೧೮] ಸಹಸ್ರಾರು, ಇದೊಂದು ಖರ್ಚಿನ ಕಲೆ, ಧಾರಾಳ ಹಣ ಬಳಸಬೇಕು.

ಸ್ವತಃ ಇವರೇ ಪ್ರಿಂಟ್ ಮಾಡುತ್ತಿದ್ದುದರಿಂದ ನಿರೀಕ್ಷಿತ ಫಲಿತಾಂಶ ಬರುವುದರ ಜೊತೆ ಸ್ವಲ್ಪ ಹಣವೂ ಉಳಿತಾಯ. ಆದ್ದರಿಂದಲೇ ಉತ್ತಮ ಛಾಯಾಚಿತ್ರಗ್ರಾಹಕರೆಲ್ಲ ಸಂಸ್ಕರಣ ಕಲೆ ಕಲಿತಿರುತ್ತಾರೆ. ಜಂಬುಕೇಶ್ವರರು ವಾಸಿಸುವ ಮನೆಯೊಳಗೆ ಸಂಸ್ಕರಣಕೋಣೆಯ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಹಲವಾರು ಏಕವ್ಯಕ್ತಿ ಪ್ರದರ್ಶನ ಮತ್ತು ಗುಂಪು ಪ್ರದರ್ಶನ ಮಾಡಿದ್ದಾರೆ.[೧೯] ವಿಶ್ವದ ಅನೇಕ ಅಗ್ರಮಾನ್ಯ ಛಾಯಾಚಿತ್ರ ಸಂಸ್ಥೆಗಳಿಂದ ಪುರಸ್ಕಾರಗಳು ಸಂದಿವೆ. ವಿಶ್ವದ ಅನೇಕ ಭಾಗಗಳಲ್ಲಿ ಆಹ್ವಾನಿತ ಕಲಾಕಾರರಾಗಿ ಪ್ರವಾಸ ಕೈಗೊಂಡಿದ್ದುದು ಇವರಿಗೆ ಕೀರ್ತಿ ತಂದುಕೊಟ್ಟಿದ್ದರೆ ತಾಯ್ನಾಡಿಗೆ ಅದು ಹೆಮ್ಮೆಯ ವಿಚಾರವಾಗಿದೆ.

ಚಿತ್ರಕಲಾಕೃತಿಗಳು

ಇವರು ರಚಿಸಿದ ನಿಸರ್ಗ ಚಿತ್ರಣ, ವಸ್ತುಚಿತ್ರ, ಸಂಯೋಜನ ಚಿತ್ರಗಳು ಹಲವಾರು. ಆದರೆ ಅವುಗಳಲ್ಲಿ ವ್ಯಕ್ತಿಚಿತ್ರಗಳು ಮಾತ್ರ ಇವರಲ್ಲಿ ಇವೆ. ಉಳಿದವು ಟರ್ಕಿ, ಸ್ಪೇನ್, ಸಿಂಗಾಪೂರ್, ಫಿಲ್‌ಲ್ಯಾಂಡ್ ಭಾರತದ ವಿವಿಧ ಭಾಗಗಳಲ್ಲಿ ಛಾಯಾಚಿತ್ರದ ಜೊತೆಯಲ್ಲಿ ಚಿತ್ರಕಲಾಕೃತಿಗಳು ಸಹ ಪ್ರದರ್ಶನಗೊಂಡಿವೆ.

ಭಾವಚಿತ್ರಗಳು : ಇವರ ಭಾವಚಿತ್ರಗಳು ಜಲವರ್ಣದ ಮಾಧ್ಯಮದಲ್ಲಿ ರಚನೆಯಾಗಿವೆ.

ಚಿತ್ರ – ೧

ಜಂಬುಕೇಶ್ವರರ ಭಾವಚಿತ್ರಗಳಲ್ಲಿ ಪುರುಷಪ್ರಧಾನವಾದ ವಿಶಿಷ್ಟವಾದ ಉಡುಪು, ಅಲಂಕಾರಿಕತೆಗೆ ಆಕರ್ಷಿಸಿ ಅಂತಹ ವ್ಯಕ್ತಿಗಳನ್ನು ಸೆರೆಹಿಡಿಯುವುದೆಂದರೆ ಇವರಿಗೆ ತುಂಬಾ ಆಸಕ್ತಿ. ಹೆಚ್ಚು ಒತ್ತುಕೊಟ್ಟು ಚಿತ್ರಿಸುವ ಇವರು ಕಲಾಕೃತಿ ತೇಪೆಯ ತಂತ್ರದಲ್ಲಿ ರಚಿಸಿದ್ದಾರೆ. ಅಂತಹ ಚಿತ್ರಗಾರಿಕೆ ಈ ಚಿತ್ರ ಒಂದರ ಕಲಾಕೃತಿಯಲ್ಲಿ ಕಂಡುಬರುತ್ತದೆ. ಈ ವ್ಯಕ್ತಿಯ ಭಾವಚಿತ್ರದ ರಚನಾ ತಂತ್ರವು ಅಪ್ಪಟ ಅಕಾಡೆಮಿಕ್ ನೆಲೆಯಲ್ಲಿದೆ. ಮತ್ತು ಭಾವಚಿತ್ರದ ವ್ಯಕ್ತಿಯ

೧೮. ಎಲ್. ಶಿವಲಿಂಗಪ್ಪ : ಉದಯವಾಣಿ, ೧೩ ಜನವರಿ ೨೦೦೪
೧೯. ಎಲ್. ಶಿವಲಿಂಗಪ್ಪ : ಉದಯವಾಣಿ, ೧೩ ಜನವರಿ ೨೦೦೪

[illegible]

ಕೊರಳಲ್ಲಿ ಸ್ವಲ್ಪ ವಿಶೇಷವಾಗಿ ದಪ್ಪ ದಪ್ಪ ಮಣಿ, ಸರ, ಕಿವಿಯಲ್ಲಿ ದೊಡ್ಡ ದೊಡ್ಡ ದುಂಡಾಕಾರದ ಕಿವಿಯೋಲೆ ಮತ್ತು ಗಾಂಭೀರ್ಯ ನೋಟ ಜಂಬುಕೇಶ್ವರರವರಿಗೆ ಆಕರ್ಷಿತವಾದ ವ್ಯಕ್ತಿತ್ವ.

ಚಿತ್ರ – ೨

ಮತ್ತೊಬ್ಬ ವ್ಯಕ್ತಿ ತಲೆಗೆ ಪೇಟ ಸುತ್ತಿ ಕೈಯಿಂದ ಸಿಗರೇಟ್ ಸೇದುತ್ತಿರುವ ಭಂಗಿಯು ಇವರಿಗೆ ಆಕರ್ಷಿಸಿತು. ಯಥಾವತ್ ಚಹರೆಯನ್ನು ಸೆರೆಹಿಡಿಯುವ ಕಲಾವಿದನ ಕೌಶಲವನ್ನೇ ಆಧಾರವಾಗಿಸಿಕೊಂಡಿದೆ. ಈ ಭಾವಚಿತ್ರದಲ್ಲಿ ಸಿಗರೇಟ್ ಸೇದುವಿಕೆಯ ಆನಂದಮಯವಾದ ಭಾವನೆಯೊಂದಿಗೆ ಕೈ ಮತ್ತು ಸಿಗರೇಟ್ ಮತ್ತು ಅದರ ಹೊಗೆ ಇವರ ಗಮನಕ್ಷೇತ್ರವಾಗಿ ಆಕರ್ಷಿಸಿತು ಎನ್ನುವುದು ಈ ಭಾವಚಿತ್ರದಲ್ಲಿ ಅವರು ಒತ್ತುಕೊಟ್ಟಂತಹ ಕಲಾಭಾಗವು ಕಲಾವಿದರನ್ನು ದುಡಿಸಿಕೊಂಡಿದೆ. ಇಷ್ಟೇ ಮುಖ್ಯವಾದದ್ದು ಎಡಬದಿಯ ಬೆಳಕಿನ ಛಾಯೆ ಜಲಕ್‌ವಾಗಿರುವ ವರ್ಣದ ಬೀಸುಗಳು ಮುಖದ ವಿವರವನ್ನು ಸೂಚಿಸುತ್ತವೆ.

ಚಿತ್ರ – ೩

ಚಿತ್ರ ಒಂದು ಮತ್ತು ಎರಡರಂತೆ ಇಲ್ಲಿಯ ವ್ಯಕ್ತಿಯ ವೇಷಕ್ಕೆ ಮಾರುಹೋಗಿದ್ದಾನೆ ಕಲಾವಿದ. ಈ ವೇಷದಲ್ಲಿ ಒಂದು ಕೋಟ್, ದುಂಡನೆಯ ಟೋಪಿ, ಬಗಲಲ್ಲಿ ಚೀಲ, ಕೈಯಲ್ಲಿ ಕೋಲು ಮತ್ತು ಈ ವ್ಯಕ್ತಿಯ ಮುಖದ ಚಹರೆ ಒಟ್ಟಾರೆ ಈ ವ್ಯಕ್ತಿಯು ಭಾವಚಿತ್ರಕ್ಕೆ ಆಕರ್ಷಿಸಿ ಒಡಮೂಡಿಸಿದ ಕಲಾಕೃತಿ ಇದು. ಕಂದು ಕೆಂಪುಚರ್ಮದ ಹೊಳಪುಳ್ಳ ಮೊದಲ ಭಾವಚಿತ್ರರಚನೆಯ ತಂತ್ರಗಾರಿಕೆಯೇ ಇಲ್ಲಿಯೂ ರಚನೆಯಾಗಿದೆ.

ಸಂಯೋಜನಾ ಚಿತ್ರ

ಇಲ್ಲಿ ಮೂರು ಪಕ್ಷಿಗಳನ್ನು ಒಂದು ಹೂವಿನ ಟೊಂಗೆಯ ಮೇಲೆ ತೋರಿಸಲಾಗಿದೆ. ಇವರಿಗೆ ಛಾಯಾಚಿತ್ರದಲ್ಲಿಯೂ ಆಸಕ್ತಿ ಇದ್ದುದರಿಂದ ಸಂಯೋಜನೆಯಲ್ಲಿ ಹಿಡಿತವನ್ನು ತಕ್ಷಣ ಸಾಧಿಸಲು ಸಾಧ್ಯ ಮತ್ತು ಇವರ ಕ್ಯಾಮರಾದಲ್ಲಿ ಸೆರೆಹಿಡಿದ ಪಕ್ಷಿಗಳನ್ನು ಸಂಯೋಜನೆಯಲ್ಲಿ ತಂದು ಸಂಯೋಜಿಸಲಾಗಿದೆ. ಇವರು ಛಾಯಾಗ್ರಹಣ ಮತ್ತು ಚಿತ್ರಕಲೆಯೊಂದಿಗೆ ಸಾಹಿತಿ ಕೂಡ. ಹಲವಾರು ವಾರಪತ್ರಿಕೆಗಳಿಗೆ ಲೇಖನಗಳನ್ನು ಬರೆದಿದ್ದಾರೆ. ಮತ್ತು ಚಿತ್ರಕಲೆಗೆ ಹಾಗೂ ಛಾಯಾಚಿತ್ರಗಳಿಗೆ ಸಂಬಂಧಿಸಿದಂತೆ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ, ಆಕಾಶವಾಣಿ, ಮತ್ತಿತರ ಸಂಘ ಸಂಸ್ಥೆಗಳಲ್ಲಿ ೫೦ಕ್ಕೂ ಹೆಚ್ಚು ಉಪನ್ಯಾಸ ನೀಡಿದ್ದಾರೆ.

ಛಾಯಾಗ್ರಹಣ ಕಲೆಯನ್ನು ಇತರರಿಗೂ ಕಲಿಸಬೇಕೆಂಬ ಹಂಬಲ ಇವರದು. ಜೆ. ಎಸ್. ಎಸ್.ನ ಜನಶಿಕ್ಷಣ ಸಂಸ್ಥೆ ಹಾಗೂ ಧರ್ಮಸ್ಥಳದ ರುಡ್‌ಸೆಟ್ ಸಂಸ್ಥೆಯ ಮೂಲಕ ವಿದ್ಯಾರ್ಥಿಗಳಿಗೆ ಬೋಧನೆ ಮಾಡಿದ್ದಾರೆ. ಇವರದು ಪುಟ್ಟ ಸಂಸಾರ. ಪತ್ನಿ ಜಯಮ್ಮ ಶಾಲಾ ಅಧ್ಯಾಪಕಿ ಹಾಗೂ ಸಮಾಜಸೇವಕಿ. ಏಕೈಕ ಪುತ್ರ ಅಮರೇಶ್. ಕಲೆಗಾಗಿ ಶ್ರೀಗಂಧದ ಕೊರಡಿನಂತೆ

ಜೀವ ತೇಯುತ್ತಿರುವ ಜಂಬುಕೇಶ್ವರ[೧೦] ಅತ್ಯುತ್ತಮವಾದ ಕಲಾವಿದನೊಂದಿಗೆ ಒಳ್ಳೆಯ ವ್ಯಕ್ತಿತ್ವವುಳ್ಳ ಸಾಧು, ಸಜ್ಜನಿಕೆಯ ವ್ಯಕ್ತಿ, ಈ ವ್ಯಕ್ತಿತ್ವಕ್ಕೆ ಹಲವಾರು ಪ್ರಶಸ್ತಿ ಮತ್ತು ಸನ್ಮಾನಗಳು ಸಹ ಸಂದಿವೆ. ಅವು ಈ ದೀರ್ಘ ಸಾಧನೆಯ ಫಲವಾಗಿ ಹಲವಾರು ಉತ್ಕೃಷ್ಟ ಚಿತ್ರಗಳ ಲಾಭ, ಹಲವಡೆ ಈ ಕೃತಿಗಳ ಪ್ರದರ್ಶನ. ಮೊದಲ ರಾಷ್ಟ್ರೀಯ ಚಿತ್ರಪ್ರದರ್ಶನ ಬೆಂಗಳೂರಿನ ವೈ.ಪಿ. ಎಸ್. ಸಲೂನಿನಲ್ಲಿ (೧೯೮೪) ಅನಂತರ ಅಖಿಲ ಭಾರತ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಲವೆಸಡೆ ಪ್ರದರ್ಶನ ಪ್ರಶಸ್ತಿ ಲಭಿಸಿವೆ. ಪ್ರತಿಷ್ಠೆಯ ಪ್ರಶಸ್ತಿಗಳೆಂದರೆ ಲಂಡನ್ನಿನ ರಾಯಲ್ ಫೋಟೋಗ್ರಾಫಿಕ್ ಸೊಸೈಟಿಯ ಎ. ಆರ್. ಪಿ. ಎಸ್. (೧೯೮೮) ಮತ್ತು ಬೆಲ್ಜಿಯಂನ ಫೆಡರೇಷನ್ ಇಂಟರ್‌ನ್ಯಾಷನಲ್ ಡಿ. ಎಲ್. ಆರ್ಟ್ಸ್‌ನ ಎ.ಎಫ್.ಐ.ಎ.ಪಿ. (೧೯೯೦) ಅಲ್ಲದೆ ೧೯೮೭-೮೯ರಲ್ಲಿ ಮೂರು ವರ್ಷಗಳ ಟಾಪ್ ಎಕ್ಸಿಬಿಟರ್ ಪ್ರಶಸ್ತಿ (ಎಫ್.ಐ.ಪಿಯಿಂದ).

ಇದಲ್ಲದೇ ಇನ್ನೂ ಹಲವಾರು ಪ್ರಶಸ್ತಿ ಪ್ರದರ್ಶನಗಳ ಸರಮಾಲೆ, ಜೈವಾನ್(೧೯೮೯), ಟರ್ಕಿ ವರ್ಲ್ಡ್ ಕಪ್ (೧೯೮೮), ಸ್ಪೇನ್ (೧೯೯೩), ಮೈಸೂರು ದಸರಾ ವಸ್ತು ಪ್ರದರ್ಶನ (ಹಲವು ವರ್ಷ), ವಿಶ್ವಕನ್ನಡ ಸಮ್ಮೇಳನ (೧೯೯೦), ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್‌ನ ವಜ್ರಮಹೋತ್ಸವ (೧೯೭೦), ದೆಹಲಿ ಮತ್ತು ಮೈಸೂರಿನ ನ್ಯಾಚುರಲ್ ಹಿಸ್ಟರಿ ಮ್ಯೂಸಿಯಂನಲ್ಲಿ ಇತರ ಹಲವಾರು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟಗಳಲ್ಲೂ ಸಂಗ್ರಹಪ್ರದರ್ಶನ ಪ್ರಶಂಸೆಗಳಿಗೆ ಭಾಜನರಾಗಿರುವ ಜಂಬುಕೇಶ್ವರ ಅವರಿಗೆ ಕಲೆಯ ಪ್ರದರ್ಶನದಲ್ಲಿ ಅಪಾರ ಆಸಕ್ತಿ.[೧೧] ಕರ್ನಾಟಕ ಲಲಿತಕಲಾ ಅಕಾಡೆಮಿ ಮತ್ತು ಪತ್ರಕರ್ತರ ಪತ್ರಿಕಾ ಮಾನ್ಯತಾ ಸಮಿತಿ, ರಾಯಲ್ ಫೋಟೋಗ್ರಾಫಿಕ್ ಸೊಸೈಟಿ, ಜಿಲ್ಲಾ ಪತ್ರಕರ್ತರ ಸಂಘ, ಫೆಡರೇಷನ್ ಆಫ್ ಇಂಡಿಯನ್ ಫೋಟೋಗ್ರಫಿ, ದಸರಾ ವಸ್ತುಪ್ರದರ್ಶನ, ಲಲಿತಕಲಾ ವಿಭಾಗ, ಚಿತ್ರಕಲಾ ಸಂಘ ಮುಂತಾದ ಹಲವು ಸಂಸ್ಥೆಗಳಲ್ಲಿ ಸದಸ್ಯರಾಗಿ, ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುವ ಜಂಬುಕೇಶ್ವರ ಅವರು ಮೈಸೂರಿನಲ್ಲಿ ಶಾಶ್ವತವಾದ ಕಲಾಗ್ಯಾಲರಿಯೊಂದರ ಸ್ಥಾಪನೆ ಆಗಬೇಕೆಂದು ಇತರರೊಂದಿಗೆ ಕೂಡ ಶ್ರಮಿಸುತ್ತಿದ್ದಾರೆ. ಹೋಟೆಲ್ ಮೆಟ್ರೊಪೋಲ್ ತೆರವು ಮಾಡಿದ ಕಟ್ಟಡ ಇದಕ್ಕೆ ಪ್ರಶಸ್ತ ಎಂದು ಸರ್ಕಾರದ ಮನವೊಲಿಸಲು ಯತ್ನಿಸಿದ್ದಾರೆ. ಹೀಗೆ ಹಲವಾರು ಪತ್ರಿಕೆಗಳಲ್ಲಿ ಲೇಖನಗಳನ್ನು, ಆಕಾಶವಾಣಿ, ವಿಶ್ವವಿದ್ಯಾಲಯ ಮತ್ತು ಇತರ ಹಲವಾರು ವೇದಿಕೆಗಳಿಂದ ಉಪನ್ಯಾಸಗಳನ್ನು ನೀಡಿರುವ ಎಸ್. ಎಂ. ಜಂಬುಕೇಶ್ವರ ಅವರು ವೈದ್ಯಕೀಯ ಛಾಯಾಚಿತ್ರದಲ್ಲೂ ನಿಪುಣರೆನಿಸಿದ್ದಾರೆ.

ಹೀಗೆ ಜಂಬುಕೇಶ್ವರ ಅವರು ಕರ್ನಾಟಕ ರಾಜ್ಯಮಟ್ಟದ ಮಹತ್ವದ ಛಾಯಾಚಿತ್ರಗಾರರು, ಚಿತ್ರಕಲಾವಿದರು, ಪತ್ರಕರ್ತರು, ಉಪನ್ಯಾಸಕರು, ಪರಿಸರವಾದಿ ಮತ್ತು ನಿಸರ್ಗಪ್ರೇಮಿಯಾಗಿ

---

೧೦. ಜಿ. ಎಸ್. ಭಟ್ಟ : ತರಂಗ, ಡಿಸೆಂಬರ್ ೨೧, ೨೦೦೬

೧೧. ಎಚ್ಚೆಸ್ಕೆ : ಪ್ರಜಾವಾಣಿ, ದಿನಪತ್ರಿಕೆ, ದಿನಾಂತ. ೧ನೇ ಅಕ್ಟೋಬರ್ ೨೦೦೦





ಎಸ್.ಎಂ.ಜಂಬುಕೇಶ್ವರ ಬಳ್ಳಾರಿ ಅವರ ಕಲಾಕೃತಿಗಳು



ತನ್ನ ಬದುಕಿನ ಸಮೃದ್ಧಿಗಾಗಿ ಹಾತೊರೆಯುವ ಅವರ ಉತ್ಸಾಹ, ಆಸಕ್ತಿಗಳನ್ನು ಕಂಡು ಹಲವರು ಬೆರಗಾಗಿದ್ದಾರೆ. ಅವರ ಈ ಎತ್ತರಕ್ಕೆ ಏರಲು ಶ್ರಮಿಸಿದ ದಾರಿ ಕಲ್ಲುಮುಳ್ಳುಗಳಿಂದ ಕೂಡಿದ್ದರೂ ಹಿಡಿದ ಪಟ್ಟು, ಬಿಡದ ಛಲ ಅವರನ್ನು ಅಭಿವೃದ್ಧಿಪಥದತ್ತ ಸಾಗಿಸಿದೆ.

೦೬. ಡಾ. ವಿ.ಟಿ. ಕಾಳೆ

ಇವರು ಹಿಂದೆ ಪರಿಚಯಿಸಿದ ವಿರೂಪಾಕ್ಷಪ್ಪ, ಮ. ಈ. ಗುರು ಮತ್ತು ಕೊಂಡಾಚಾರ್ಯರಿಗಿಂತ ವಿಭಿನ್ನವಾದ ಕಲಾವಿದರಾಗಿದ್ದಾರೆ. ನೈಜ ಮತ್ತು ಆಧುನಿಕ ಚಿತ್ರಕಲೆ ಎರಡರಲ್ಲಿಯೂ ಪ್ರವೀಣರಾಗಿದ್ದರು. ಇಂತಹ ಚಿತ್ರಕಲೆಯ ಬೆಳವಣಿಗೆಗೆ ಅವರ ಯಾವ ಕಾರ್ಯಕ್ಕೆ ಮೂಲ ಯಾವುದು ಎಂದು ಗುರುತಿಸುವುದು ಸುಲಭವಲ್ಲ. ಅನುಭವವೇ ಪ್ರಸ್ತುತ ಎನ್ನುವುದು ಒಂದು ಸಾಮಾನ್ಯ ತಿಳಿವಳಿಕೆಯಾಗಿದೆ. ಕಲಾವಿದನ ಅನುಭವ ಆತನು ವಾಸಿಸುವ ಪರಿಸರ ಮತ್ತು ಕಾಲವನ್ನು ಅವಲಂಬಿಸಿರುತ್ತದೆ. ಹಾಗೆಯೇ ವಿ.ಟಿ. ಕಾಳೆಯವರ ಪರಿಸರ, ಕಾಲ ಮತ್ತು ಅನುಭವಗಳು ಕಲಾಕೃತಿಗಳಿಗೆ ಅವಲಂಬಿತವಾಗಿವೆ. ಅನುಭವ ಒಂದೇ ಇದ್ದರೂ ಸಾಲದು, ಕಲಾಕೃತಿಯ ನಿರ್ಮಾಣಕ್ಕೆ ಸೃಜನಶೀಲ ಮನುಷ್ಯನ ಅಭಿವ್ಯಕ್ತಿಗೆ ಸರಿಯಾದ ಪ್ರೋತ್ಸಾಹ, ಅವಕಾಶಗಳು ನಿರಂತರ ಪರಿಶ್ರಮ, ಪ್ರಯತ್ನಗಳಿದ್ದರೆ ಆ ವ್ಯಕ್ತಿಯ ಪ್ರತಿಭೆ ಬಹುಶೃತವಾಗಿ ಬೆಳೆದು ದೈತ್ಯರೂಪವಾಗಿ ಬೆಳಕಿಗೆ ಬರುತ್ತದೆ ಎಂದು ಹೇಳುವ ಡಾ. ಎಸ್. ಸಿ. ಪಾಟೀಲರ ಮಾತು ಅಕ್ಷರಶಃ ಸತ್ಯವಾಗಿದೆ.

ಸಾಮಾನ್ಯವಾಗಿ ಸಾಧಕರು ತಮ್ಮ ಎಲ್ಲ ಸಾಮರ್ಥ್ಯವನ್ನು ಒಂದೆಡೆಗೆ ಕೇಂದ್ರೀಕರಿಸಿ ಒಂದೊಂದು ಕ್ಷೇತ್ರದಲ್ಲಿಯೇ ಯಶಸ್ಸಿನ ಮೆಟ್ಟಲೇರುತ್ತ ಹೋದವರಿಗೇನೂ ಕಡಿಮೆಯಿಲ್ಲ. ಆದರೆ ಹಲವಾರು ಕ್ಷೇತ್ರ ಪರಿಣತಿಯನ್ನು ಹೊಂದಿ ಆಯಾ ಕೇತ್ರದ ದಿಗಂತವನ್ನು ವಿಸ್ತರಿಸುವಲ್ಲಿ ಸಕ್ರಿಯ ಕಾಣಿಕೆ ನೀಡುವ ವ್ಯಕ್ತಿಗಳು ಬೆರಳೆಣಿಕೆಯಷ್ಟು. ಇಂತಹ ಅಪರೂಪದ ಬಹುಮುಖ ವ್ಯಕ್ತಿತ್ವವನ್ನು ಹೊಂದಿದ ಕರ್ನಾಟಕದ ಹಿರಿಯ ತಲೆಮಾರಿನ ಕಲಾವಿದರಲ್ಲಿ ಎದ್ದು ಕಾಣುವ ಹೆಸರು ವಿ.ಟಿ. ಕಾಳೆ[೧೨] ಎನ್ನುವುದು ಸತ್ಯಸಂಗತಿಯಾಗಿದೆ.

ಡಾ. ವಿ. ಟಿ. ಕಾಳೆಯವರು ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ನೆಲೆಸಿದ್ದು ಬಹುಮುಖ ಪ್ರತಿಭಾವಂತರಾಗಿದ್ದಾರೆ. ಆದರೆ ಚಿತ್ರಕಲೆಯೊಂದರಲ್ಲಿಯೇ ಅತಿಹೆಚ್ಚು ಸಾಧನೆಯನ್ನು ಗೈದಿದ್ದಾರೆ. ಸದಾ ಕಲಾಚಿಂತಕರಾಗಿ ಹಸನ್ಮುಖಿಯಾಗಿರುವ ಇವರು ಮೂಲತಃ ಬಾಗಲಕೋಟೆ ಜಿಲ್ಲೆಯ ಹುನಗುಂದದ ಬಡ ರೈತ ಕುಟುಂಬದಲ್ಲಿ ತುಳಜಾರಾಮ ಕಾಳೆ ಮತ್ತು ಭರಮವ್ವ ದಂಪತಿಗಳ ಎಂಟನೆಯ ಮಗನಾಗಿ ೧೯೩೪ರಲ್ಲಿ ವೆಂಕಟೇಶ ಕಾಳೆಯವರು ಜನಿಸಿದರು. ವೆಂಕಟೇಶ ತುಳಜಾರಾಮ ಕಾಳೆ ಇವರ ಪೂರ್ಣ ಹೆಸರಾದರೆ ಪ್ರಸ್ತುತ ಇವರು ವಿ.ಟಿ. ಕಾಳೆ ಎಂದೇ

೧೨. ಡಾ. ಎಸ್. ಸಿ. ಪಾಟೀಲ : ವಿ.ಟಿ. ಕಾಳೆ, ಪುಟ – ೧

ಪ್ರಸಿದ್ಧರಾಗಿದ್ದಾರೆ.[೧೩] ದೊಡ್ಡ ಕುಟುಂಬದ ಪರಿವಾರ ಹೊಂದಿದ್ದ ಇವರು ಕಾರಣಾಂತರದಿಂದ ೪೮ ವರ್ಷಗಳ ಹಿಂದೆ ಸಂಡೂರಿಗೆ ಬಂದು ನೆಲೆಸಬೇಕಾಯಿತು.

ಬಾಲ್ಯಶಿಕ್ಷಣ

ವಿ.ಟಿ. ಕಾಳೆಯವರು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವಾಗ ಸಿದ್ಧರಾಮ ಶೆಟ್ಟಿಯವರು ಇವರಿಗೆ ಪ್ರಭಾವಿ ಮುಖ್ಯ ಗುರುಗಳಾಗಿದ್ದರು. ವಿ.ಟಿ. ಕಾಳೆಯವರು ಕಲಾಚಟುವಟಿಕೆಗಳನ್ನು ತುಂಬ ಕುತೂಹಲದಿಂದ ವೀಕ್ಷಿಸುತ್ತಿದ್ದುದಲ್ಲದೇ ಪ್ರಾಥಮಿಕ, ಪ್ರೌಢ ಶಿಕ್ಷಣ ಹಂತದಲ್ಲಿ ಚಿತ್ರಕಲೆ ಸ್ಪರ್ಧೆಯಲ್ಲಿಯೂ ಭಾಗವಹಿಸುತ್ತಿದ್ದರು. ಪ್ರೌಢ ಶಿಕ್ಷಣದ ನಂತರ ಮುಂದಿನ ವಿದ್ಯಾಭ್ಯಾಸಕ್ಕೆ ಚಿತ್ರಕಲೆಯನ್ನೇ ಆಯ್ದುಕೊಂಡರು. ನಂತರ ಚಿತ್ರಕಲೆಯೊಂದನ್ನೇ ಪ್ರತಿಯೊಂದು ಕಾರ್ಯಾಚರಣೆಯಲ್ಲಿ ಕಂಡುಕೊಂಡರು.

ಕಾಳೆಯವರು ಗದಗಿನ ವಿಜಯಕಲಾ ಮಂದಿರದಲ್ಲಿ ವಿದ್ಯಾಭ್ಯಾಸ ಮುಂದುವರೆಸಿದರು. ಅಂದಿನ ಭಾರತದಲ್ಲಿ ಕಲಾಶಿಕ್ಷಣದ ಇತಿಹಾಸವು ಇತ್ತೀಚಿನ ಶತಮಾನದಲ್ಲಷ್ಟೇ ಬೆಳೆದು ಬಂದಿದೆ. ಅದೂ ಪಡುವಣದಿಂದ ಬಂದು ವಿಕ್ಟೋರಿಯನ್ ಕಲಾಶಿಕ್ಷಣವನ್ನು ನಾವು ಅನಿವಾರ್ಯವಾಗಿ ಒಪ್ಪಿಕೊಂಡಿದ್ದು ಆಗಿದೆ. ಆಂಗ್ಲರು ಭಾರತೀಯರನ್ನು ಆಳುತ್ತಿರುವಾಗಲೇ ತಮ್ಮದೇ ಶೈಕ್ಷಣಿಕ ಪದ್ಧತಿಯನ್ನು ಒತ್ತಾಯವಾಗಿ ಭಾರತದಲ್ಲಿ ಹೇರಿದರು. ಅದರ ಪರಿಣಾಮವಾಗಿ ಮದ್ರಾಸ್, ಮುಂಬೈ, ಕಲ್ಕತ್ತಾಗಳಲ್ಲಿ ಆಂಗ್ಲ ಕಲಾವಿದರ, ಅಧಿಕಾರಿಗಳ ಉಸ್ತುವಾರಿಯಲ್ಲಿ ಕಲಾಶಾಲೆಗಳು ಹುಟ್ಟಿಕೊಂಡಿದ್ದು, ಹೀಗೆ ಹುಟ್ಟಿಕೊಂಡ ಕಲಾಶಾಲೆಗಳಲ್ಲಿ ಮುಂಬೈಯ ಜೆ. ಜೆ. ಕಲಾಶಾಲೆಯೂ ಒಂದು. ಇತ್ತ ಕರ್ನಾಟಕದ ಉತ್ತರ ಭಾಗದಲ್ಲಿ ೧೯ನೆಯ ಶತಮಾನದ ಪೂರ್ವಾರ್ಧದಲ್ಲಿ ಹಾಲಭಾವಿ ಸ್ಕೂಲ್ ಆಫ್ ಆರ್ಟ್, ಧಾರವಾಡದಲ್ಲಿ, ವಿಜಯಕಲಾ ಮಂದಿರ, ಗದಗಿನಲ್ಲಿ ಸ್ಥಾಪಿತವಾದವು. ಇವೆರಡೂ ಸಂಸ್ಥೆಗಳೂ ಡಿ.ವಿ. ಹಾಲಭಾವಿ ಮತ್ತು ಟಿ.ಪಿ. ಅಕ್ಕಿಯವರಿಂದ ಸ್ಥಾಪನೆಯಾದರೂ ಕಲಾ ಪರೀಕ್ಷೆಗೆ ಜೆ. ಜೆ. ಕಲಾಶಾಲೆಯನ್ನೇ ಅವಲಂಬಿಸಿದ್ದವು.

ಕರ್ನಾಟಕದಲ್ಲಿ ಧಾರವಾಡದ ಹಾಲಭಾವಿ ಕಲಾಶಾಲೆ ಮತ್ತು ಗದುಗಿನ ವಿಜಯ ಕಲಾಮಂದಿರದವರು ವಿದ್ಯಾರ್ಥಿಗಳಿಗೆ ಐದು ವರ್ಷದ ಕಲಾಶಿಕ್ಷಣವನ್ನು ವಿಂಗಡಿಸಿಕೊಂಡಿದ್ದು ಇಂತಿದೆ. ಪ್ರಿಪರೇಟರಿ (೧ನೆಯ ವರ್ಷ), ಎಲಿಮೆಂಟರಿ (೨ನೆಯ ವರ್ಷ), ಇಂಟರ್ ಮಿಡಿಯೆಟ್ (೩ನೆಯ ವರ್ಷ), ಅಡ್ವಾನ್ಸ್ ಸ್ಟಡಿ (೪ನೆಯ ವರ್ಷ) ಮತ್ತು ಡಿಪ್ಲೊಮಾ (೫ನೆಯ ವರ್ಷ) ಇಷ್ಟು ಹಂತಗಳಲ್ಲಿ ಕಲಾಶಿಕ್ಷಣವನ್ನು ನೀಡುತ್ತಿದ್ದರು. ಪ್ರಿಪರೇಟರಿ ಕೋರ್ಸ್ ಒಂದನ್ನು ಹೊರತುಪಡಿಸಿದರೆ ಇನ್ನುಳಿದ ನಾಲ್ಕು ವರ್ಷಗಳ ಪರೀಕ್ಷೆಗಳನ್ನು ಮುಂಬೈಯ ಜೆ.ಜೆ. ಕಲಾಶಾಲೆ ತನ್ನಲ್ಲಿಯೇ ಪರೀಕ್ಷೆಗಳನ್ನು ಸಂಘಟಿಸುತ್ತಿತ್ತು. ಈ ಕರ್ನಾಟಕದ ವಿದ್ಯಾರ್ಥಿಗಳೆಲ್ಲ ಜೆ.ಜೆ. ಕಲಾಶಾಲೆಗೆ

---

೧೩. ಡಾ. ಎಸ್. ಸಿ. ಪಾಟೀಲ : ವಿ.ಟಿ. ಕಾಳೆ, ಪುಟ – ೧

[illegible]

ಹೋಗಿ ಪರೀಕ್ಷೆಯಲ್ಲಿ ಪಾಲ್ಗೊಂಡು ಅಂಕಪಟ್ಟಿ, ಪ್ರಮಾಣಪತ್ರಗಳನ್ನು ಪಡೆಯುತ್ತಿದ್ದರು.[೧೪] ಬಿ. ಎಸ್. ಚವ್ಹಾಣ್, ಡಿ. ಎಫ್. ಪಾಟೀಲ ಮತ್ತು ಕಾಲವಾಡಮಠ, ಇವರು ಕಾಳೆಯರಿಗೆ ಆಪ್ತ ಗುರುಗಳಾಗಿದ್ದರು ಮತ್ತು ಟಿ.ಪಿ. ಅಕ್ಕಿಯವರನ್ನು ದೇವರ ಸ್ಥಾನದಲ್ಲಿ ಕಾಳೆಯವರು ನಿಲ್ಲಿಸುತ್ತಾರೆ.

ಹೀಗೆ ಗುರುಗಳ ಸಹಾಯದಿಂದಲೂ ೧೯೫೨ರಲ್ಲಿ ಕಲಾಶಿಕ್ಷಣ ಮುಗಿಸಿದ ಕಾಳೆಯವರು ಮುಂದೆ ವೃತ್ತಿಯಲ್ಲಿ ಕಲಾಶಿಕ್ಷಕರಾಗಿ ಮುಂದುವರೆಯುತ್ತಾರೆ. ೧೯೫೨ರಲ್ಲಿ ಕಾಳೆಯವರು ತಾವು ಕಲಾಶಿಕ್ಷಣ ಪಡೆದ ಮಾತೃಸಂಸ್ಥೆ ವಿಜಯ ಕಲಾಮಂದಿರ, ಗದಗದಲ್ಲಿಯೇ ತಮ್ಮ ವೃತ್ತಿ ಜೀವನ ಪ್ರಾರಂಭಿಸಿದರು. ೧೯೬೪ರವರೆಗೂ ಇಲ್ಲಿಯೇ ಕಲಾಶಿಕ್ಷಕರಾಗಿ ಸೇವೆ ಸಲ್ಲಿಸಿದ ವಿ.ಟಿ. ಕಾಳೆಯವರು ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಿನ ಶಿಕ್ಷಕರಾಗಿದ್ದರು. ವಿದ್ಯಾರ್ಥಿಗಳ ಬಗ್ಗೆ ಪ್ರೀತಿ, ಒಲವು, ಅಂತಃಕರಣವನ್ನು ಹೊಂದಿದ ಇವರು ಕಲಿಕೆಯ ವಿಷಯದಲ್ಲಿ ಶಿಸ್ತಿನ ಸಿಪಾಯಿಯಾಗಿದ್ದರು. ನಿಸರ್ಗಚಿತ್ರಣ, ವ್ಯಕ್ತಿಚಿತ್ರಣ, ಕರಡು ಚಿತ್ರಣ ಲೇಖನ (ಸ್ಕೆಚ್ಚಿಂಗ್), ಸಂಯೋಜನಾ ಚಿತ್ರಣ ಮುಂತಾದ ವಿಷಯಗಳನ್ನು ಇವರಿಂದ ಕಲಿತುಕೊಳ್ಳುವುದೇ ವಿದ್ಯಾರ್ಥಿಗಳಲ್ಲಿ ಒಂದು ಅಭಿಮಾನ ಮತ್ತು ಧನ್ಯತೆಯ ಪ್ರತೀಕವಾಗಿತ್ತು. ಕಲಾವಿದ್ಯಾರ್ಥಿಗಳಿಗೆ ಅವರು ತಿಳಿಸಿಕೊಡುತ್ತಿದ್ದ ವಿಧಾನ ಆಕರ್ಷಕವಾಗಿತ್ತು ಎನ್ನುವುದು ಇವರ ವಿದ್ಯಾರ್ಥಿಗಳಾದ ರಶ್ಮಿ ಜೋಶಿ, ಎರಿಸ್ವಾಮಿ, ಉಮಾ ಟೀಚರ್, ಚಂದನ ಶಿರಿಗೇರಿ, ಐಶ್ವರ್ಯ(ಸಾಂಪ್ರದಾಯಿಕ ಚಿತ್ರಕಲಾವಿದರು), ಅಭಿಷೇಕ್ ಮುಂತಾದವರು ಅಭಿಪ್ರಾಯ ಪಡುತ್ತಾರೆ.

ಇವರು ರಚಿಸಿದ 'ಚಿತ್ರಕಲಾ ಪರಿಚಯ' ಗ್ರಂಥವು ಪ್ರಾಥಮಿಕ ಹಂತದಲ್ಲಿ ಚಿತ್ರಕಲೆಯ ಕಲಿಕೆಗೆ ಅತ್ಯುತ್ತಮವಾಗಿದೆ. ಈ ಒಂದು ಗ್ರಂಥದಲ್ಲಿ ನಿಸರ್ಗ ಚಿತ್ರ, ವಸ್ತುಚಿತ್ರಣ, ಸ್ಮರಣಚಿತ್ರಣ, ಸರಳಗೈ ಚಿತ್ರಣ, ವಿನ್ಯಾಸದ ಚಿತ್ರಣ ಮತ್ತು ಜಾಮಿತಿಯ ಚಿತ್ರಣಗಳು ತುಂಬಾ ಆಕರ್ಷಣೀಯವಾಗಿದ್ದು, ಒಂದು ಸುಲಭದ ಪದ್ಧತಿಯಲ್ಲಿ ಚಿತ್ರಕಲೆಯ ಕಲಿಕೆಗೆ ಅತ್ಯುತ್ತಮವಾದ ಗ್ರಂಥವಾಗಿದೆ. ಹೀಗೆ ಹಲವಾರು ತಂತ್ರಗಳೊಂದಿಗೆ ವಿದ್ಯಾರ್ಥಿಗಳಲ್ಲಿ ಏಕರೂಪವಾಗಿ, ತಾರತಮ್ಯವಿಲ್ಲದೇ ಕರುಣೆಯಿಂದ ಶಿಕ್ಷಣವನ್ನು ದಾನಗೈದವರು ಕಾಳೆಯವರು.

ಇಷ್ಟಲ್ಲದೇ ಉತ್ತಮವಾದ ಚಿತ್ರಕಲಾವಿದರ ಪಟ್ಟಿಯಲ್ಲಿ ಇವರೊಬ್ಬರಾಗಿದ್ದಾರೆ. ಇವರು ಚಿತ್ರಕಲೆಯ ಹಲವು ಪ್ರಕಾರಗಳಾದ ಭಾವಚಿತ್ರ, ವ್ಯಕ್ತಿಚಿತ್ರ, ದೇವತಾ ಚಿತ್ರ, ಸಂಯೋಜನಾ ಚಿತ್ರ, ನಿಸರ್ಗ ಚಿತ್ರ, ಭಿತ್ತಿಚಿತ್ರಗಳ ನಕಲು ಚಿತ್ರ, ನವ್ಯ ಶೈಲಿಯ ಸೃಜನಾತ್ಮಕ ಚಿತ್ರ ಮುಂತಾದ ಸಂಕೀರ್ಣ ಚಿತ್ರಗಳಲ್ಲಿ ಅಧ್ಯಯನಾತ್ಮಕವಾಗಿ ಕಲಾಕೃತಿಗಳನ್ನು ರಚಿಸಿದ್ದಾರೆ. ಇವರ ವಿಶಿಷ್ಟ ಕಲ್ಪನಾ ವೈಖರಿ, ಉಜ್ವಲ ಪ್ರತಿಭಾ ಶಕ್ತಿಗಳನ್ನು ಯಾವ ಕಲಾಕೃತಿಗಳಲ್ಲಾದರೂ ಗಮನಿಸಬಹುದಾಗಿದೆ.

ಭಾವಚಿತ್ರ ಮತ್ತು ಪೂರ್ಣಭಾವಚಿತ್ರ

ಫೋಟೋಗ್ರಾಫಿಯ ಅನ್ವೇಷಣೆಯ ಮೊದಲಿಗೆ ಭಾವಚಿತ್ರಗಳು ಹೆಚ್ಚು ರೂಢಿಯಲ್ಲಿದ್ದವು.

೧೪. ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ : ಕಲಾನ್ವೇಷಕ ಆರ್. ಎಂ. ಹಡಪದ. ಪುಟ - ೨೪

ರಾಜಮಹಾರಾಜರ, ರಾಣಿಯರ, ಸೈನ್ಯಾಧಿಕಾರಿಗಳ, ಅಧಿಕಾರಿ ಈ ಮುಂತಾದ ಸಮಾಜದ ಉನ್ನತ ವರ್ಗದವರು ಮಾತ್ರ ಹಣ ತೆತ್ತು ತಮ್ಮ ಭಾವಚಿತ್ರವನ್ನು ಕಲಾವಿದರಿಂದ ಬರೆಸಿಕೊಳ್ಳುತ್ತಿದ್ದರು. ನಂತರ ಭಾವಚಿತ್ರ ಇಂದು ಅಕಾಡೆಮಿಕ್ ಸಂದರ್ಭದಲ್ಲಿ ಪಠ್ಯದ ಮುಖ್ಯ ವಿಷಯವಾಗಿ ಪ್ರಚಲಿತದಲ್ಲಿದೆ. ಹಾಗಾಗಿ ಕಾಳೆಯವರು ಅಕಾಡೆಮಿಕ್ ಸೂರಿನಡಿಯಲ್ಲೇ ಬೆಳೆದಿರುವುದರಿಂದ ಭಾವಚಿತ್ರ ರಚನೆಯಲ್ಲಿ ಸಾಕಷ್ಟು ಪರಿಣತಿಯನ್ನು ಸಾಧಿಸಿದ್ದಾರೆ. ಕಾಳೆಯವರು ಕಲಾಶಿಕ್ಷಣದ ಪರೀಕ್ಷಾ ಪ್ರಮಾಣಪತ್ರ ಪಡೆದದ್ದು, ಮುಂಬೈಯ ಜೆ.ಜೆ. ಕಲಾಶಾಲೆಯಿಂದ. ಆ ಕಲಾಶಾಲೆಯಲ್ಲಿ ಪ್ರಾರಂಭದಿಂದಲೂ ಭಾವಚಿತ್ರ ರಚನೆಗೆ ಆದ್ಯತೆಯನ್ನು ನೀಡಿದ್ದರು. ಹಾಗಾಗಿಯೇ ರೇಖಾ ಮತ್ತು ವರ್ಣಗಳಲ್ಲಿ ಅತ್ಯುತ್ತಮವಾದ ಭಾವಚಿತ್ರಗಳನ್ನು ರಚಿಸಿದ್ದಾರೆ. ಇವರು ವ್ಯಕ್ತಿಚಿತ್ರಗಳಲ್ಲಿ ಬುದ್ಧ, ಬಸವಣ್ಣ, ಅಂಬೇಡ್ಕರ್, ಹುಬ್ಬಳ್ಳಿಯ ಸಿದ್ಧಾರೂಢರು, ಶ್ರೀ ಚನ್ನಬಸವೇಶ್ವರರು ಮುಂತಾದ ಭಾವಚಿತ್ರಗಳನ್ನು ರಚಿಸಿದ್ದು, ನಯ(soft) ಸ್ವರೂಪದಲ್ಲಿ ಮತ್ತು ತೇಪೆ(patch), ಈ ಎರಡೂ ಪದ್ಧತಿಯಲ್ಲಿಯೂ ಪ್ರಬುದ್ಧತೆಯನ್ನು ಸಾಧಿಸಿದ್ದಾರೆ. ಇವರ ಚಿತ್ರಣವು ಹಲವು ತಂತ್ರಗಳನ್ನು, ಹಲವು ಆಯಾಮಗಳನ್ನು ಶೈಲಿಗಳೊಂದಿಗೆ ಸೃಜನಶೀಲ ಚಿಂತನೆಗಳ ವಿಸ್ತಾರಕ್ಕೆ ಅವಕಾಶ ಕಲ್ಪಿತ ಆಯ್ಕೆಯ ಭಾವಚಿತ್ರಗಳಾಗಿವೆ. ಭಾವಚಿತ್ರಕ್ಕೆ ಸೂಕ್ತ ಎನಿಸಿದ ವ್ಯಕ್ತಿಯನ್ನು ಕಲಾವಿದನ ಭಾವೋದ್ವೇಗದಿಂದಲೂ ರಚಿಸಿದ ಕ್ಷೇತ್ರ ಭಾವಚಿತ್ರಗಳ ಸಹ ರಚಿತವಾಗುತ್ತವೆ. ಅಂತಹ ಭಾವಚಿತ್ರಗಳ ರಚನೆಯೂ ಕಾಳೆಯವರ ಆನಂದ ದಾಯಕವಾದ ಸಂದರ್ಭ ಎನ್ನುವುದು ಇವರ ಹೇಳಿಕೆಯಾಗಿದೆ.

ರೇಖಾಚಿತ್ರ

ರೇಖಾಚಿತ್ರಗಳಲ್ಲಿ ಅದ್ಭುತ ನಿರೂಪಣೆ, ಗತಿ, ವಿನ್ಯಾಸಗಳನ್ನು ಸೂಚಿಸುವ ಮಿತವ್ಯಯದ ವಿನೂತನ ಶೈಲಿಯಿಂದಾಗಿ ಸಾಮರಸ್ಯವನ್ನು ಗಮನಿಸಬಹುದಾಗಿದೆ. ಕಾಳೇಯವರ ಪ್ರತಿಯೊಂದು ರೇಖೆಯೂ ಅವರ ಹೃದಯದ ಅಂತರಾಳದಿಂದ ನೇರ ಚಿಮ್ಮಿ ಬರುತ್ತಿರುತ್ತದೆ. ಅವರ ರೇಖಾಚಿತ್ರಗಳ ವಸ್ತುವಿಶೇಷ, ಕಲ್ಪನಾಶಕ್ತಿ ಅಸಾಧಾರಣವಾದುದು. ರೇಖಾಚಿತ್ರಗಳ ರಚನೆಯಲ್ಲಿ ಎಷ್ಟು ನಿಪುಣರಾಗಿದ್ದರೋ ಅಷ್ಟೇ ಸಂಯೋಜನಾಚಿತ್ರಗಳು, ನಿಸರ್ಗ ಚಿತ್ರಗಳು, ಶಿಲ್ಪಕಲಾಕೃತಿಗಳು ಮುಂತಾದ ಕಲೆಗಳಲ್ಲಿ ನಿಪುಣರಾಗಿದ್ದರು.

ರಾಗಮಾಲಾ ಚಿತ್ರಗಳು

ಸಂಯೋಜನೆಯ ಮತ್ತೊಂದು ವಿಧದ ಸಾಧನೆಯ ಕಲಾಕೃತಿಗಳಾಗಿವೆ. ರಾಗಮಾಲಾ ಚಿತ್ರಗಳ ಪರಂಪರೆ ನಮ್ಮ ಭಾರತದಲ್ಲಿ ಪ್ರಾಚೀನ ಕಾಲದಿಂದಲೇ ಬೆಳೆದು ಬಂದಿದೆ. ವಿಷ್ಣುಧರ್ಮೋತ್ತರ ಪುರಾಣ, ಸಮರಾಂಗಣಸೂತ್ರಧಾರ ಗ್ರಂಥಗಳಲ್ಲಿ ರಾಗಮಾಲಾ ಚಿತ್ರದ ಬಗ್ಗೆ ವಿವರಗಳಿವೆ. ಚಿತ್ರಕಾರನು ಎಷ್ಟು ಪ್ರಬುದ್ಧನಾಗಿ ಚಿತ್ರಿಸಬೇಕು ಎನ್ನುವುದನ್ನು ಹೇಳುವಾಗ, ಉತ್ತಮ ಸಂಗೀತವು ಕೇಳುಗನಲ್ಲಿ ಉಂಟು ಮಾಡುವ ಭಾವತನ್ಮಯತೆಯು ಆತನ ಚಿತ್ರ

ನೋಡಿದಾಗಲೂ ಉಂಟಾಗಬೇಕು. ಆ ರೀತಿಯಲ್ಲಿ ಚಿತ್ರ ರಚಿಸಬೇಕು ಎಂಬುದಾಗಿ ಸೂಚಿಸಲಾಗಿದೆ. ಮುಂದೆ ರಜಪೂತರ ಕಾಲಕ್ಕೆ ರಾಗಮಾಲಾ ಚಿತ್ರಗಳ ವಿಶೇಷ ಸರಣಿ ಚಿತ್ರಗಳು ರಚನೆಯಾಗಿವೆ. ಸಾಮಾನ್ಯವಾಗಿ ಭಾರತೀಯ ಕಿರುರೂಪ ಚಿತ್ರಕಲೆಯ ಹೆಚ್ಚಿನ ಶೈಲಿಗಳಲ್ಲಿ ರಾಗಮಾಲಾ ಚಿತ್ರಗಳು ಚಿತ್ರಾಂಶನಗೊಂಡಿರುವುದು ವಿಶೇಷ. ರಾಜಸ್ಥಾನಿ, ಕಾಂಗ್ರಾ, ಬಸೋಲಿ, ಬುಂದಿ, ಮೇವಾರ ಮುಂತಾದವುಗಳಲ್ಲದೇ, ದಕ್ಷಿಣದಲ್ಲಿ ವಿಜಾಪುರ ಸುಲ್ತಾನರು, ಮೈಸೂರು ಅರಸರು, ತಂಜಾವೂರು ನಾಯಕರು ಮುಂತಾದ ಅರಸರ ಕಾಲದಲ್ಲಿ ರಾಗಮಾಲಾಚಿತ್ರಗಳು ರಚನೆಯಾಗಿರುವುದು ಕಂಡುಬರುತ್ತವೆ.

ಇಂತಹ ರಾಗಮಾಲಾ ಚಿತ್ರಗಳು ಸಂಗೀತದ ಲಹರಿಗೆ ಉಂಟಾಗುವ ತರಂಗಗಳಿಗೆ ರೇಖಾವಿನ್ಯಾಸ, ಸಂಯೋಜನಾ ಕೌಶಲ್ಯದಿಂದ ಕೂಡಿದ ಸಂಯೋಜನಾ ಬಣ್ಣದ ಉಪಯೋಗದಲ್ಲಿ ಮತ್ತು ರೇಖೆಗಳಲ್ಲಿ ಜಾಣತನ ಪ್ರಕಟವಾಗುತ್ತದೆ. ಡಾ. ಎಂ.ವಿ. ಮಿಣಜಿಗಿಯವರು ಕರ್ನಾಟಕದಲ್ಲಿ ರಾಗಮಾಲಾ ಚಿತ್ರಗಳನ್ನು ಮೊದಲು ರಚಿಸಿದ ಖ್ಯಾತಿಗೆ ಪಾತ್ರರಾಗಿದ್ದಾರೆ. ಇಂತಹ ರಾಗಮಾಲಾ ಚಿತ್ರಗಳ ಪ್ರಯೋಗವನ್ನು ವಿ.ಟಿ. ಕಾಳೆಯವರು ಗಾನ ಲಹರಿಯ ಸಂಗೀತದ ಲೋಕವನ್ನು ರಾಗಮಾಲಾ ಚಿತ್ರಗಳಲ್ಲಿ ಕಂಡುಕೊಂಡಿದ್ದಾರೆ. ರಾಗಮಾಲಾ ಚಿತ್ರಗಳನ್ನು ನಾಲ್ಕು ಪ್ರಹರಗಳಿಗೆ ಅನುಸಾರವಾಗಿ ರಚಿಸಿದ್ದಾರೆ. ಅವು ೬ ರಿಂದ ೯ ಗಂಟೆಯವರೆಗೆ ಪ್ರಾತಃಕಾಲ (ಉಷಾ), ೯ ರಿಂದ ೧೨ ಗಂಟೆಯವರೆಗೆ ಹಗಲು (ದಿವಾ), ೩ ರಿಂದ ೬ ಗಂಟೆಯವರೆಗೆ ಸಂಜೆ, ಮುಂಜಾನೆ (ಸಂಧ್ಯಾ), ೯ ರಿಂದ ೧೨ ಗಂಟೆಯವರೆಗೆ ರಾತ್ರಿ (ನಿಶಾ)[೧೫] ಎಂಬುದು ಈ ಕಲಾಕೃತಿಯ ವಸ್ತುವಾಗಿದೆ.

ಇಂತಹ ರಾಗಮಾಲಾ ಚಿತ್ರಗಳ ರಚನೆಗೆ ಸಂಗೀತ ವಿದ್ವಾಂಸರಾದ ರಾಜೀವ ಪುರಂದರೆ, ಬಸವರಾಜ ಮನ್ಸೂರು, ಮರೋಳ ರಾಮಣ್ಣನವರು, ಪಂಡಿತ್ ಪಂಚಾಕ್ಷರಿಸ್ವಾಮಿ ಮತ್ತಿಗಟ್ಟಿ, ವಿಠ್ಠಲ ಸಾ ಕಬಾಡಿ ಇನ್ನೂ ಹಲವಾರು ಸಂಗೀತಗಾರರ[೧೬] ಸಂಪರ್ಕದಿಂದ ಚರ್ಚಿತಗೊಂಡು ಇವರ ಚಿತ್ರ ಪ್ರಯೋಗದಲ್ಲಿಯೇ ಪ್ರಸಿದ್ಧವಾದ ಕಲಾಕೃತಿಗಳಾಗಿವೆ. ಸಂಯೋಜನೆಯ ಚಿತ್ರಕೃತಿಗಳಲ್ಲಿ ಇತರ ಸಂಯೋಜನಾತ್ಮಕವಾದ ಕಲಾಕೃತಿಗಳ ಪ್ರಯೋಗ ಹಲವಾರು, ಅದರಲ್ಲಿ ಬಣ್ಣಗಳ ಆಕಾರ ಎನ್ನುವುದು ಮತ್ತೊಂದು ಹೊಸ ಹೆಜ್ಜೆ ಮತ್ತು ಹೊಸ ಹುಡುಕಾಟದಲ್ಲಿ ಸಫಲತೆಯನ್ನು ಕಂಡಿದ್ದಾರೆ. ಬಣ್ಣಗಳು ಒಂದಕ್ಕೊಂದು ಬೆಸೆದುಕೊಂಡಂತೆ ಆಕಾರಕ್ಕೆ ಬಣ್ಣಗಳನ್ನು ಹಾಕುವುದರಲ್ಲಿ ಸಮತೋಲನವನ್ನು ಕಾಯ್ದಿರಿಸಿದ್ದಾರೆ. ಈ ಪ್ರಯೋಗವು ವಸ್ತು, ಆಶಯ, ಶೈಲಿ ಮತ್ತು ತಂತ್ರಗಾರಿಕೆಯು ಸಮತೋಲನತೆಯ ಚಿಂತನೆಯಿಂದ ಕೂಡಿದ ಸರಣಿಚಿತ್ರಗಳಾಗಿವೆ.

---

೧೫. ಡಾ. ಹನುಮನಾಯಕದೊರೆ : ರಾಗದೀಪಿಕೆ ಹಿಂದೂಸ್ಥಾನಿ ರಾಗ ಮತ್ತು ಚೀಜುಗಳ ಗ್ರಂಥ, ಪುಟ – ೨೫೯

೧೬. ಡಾ. ಎಸ್. ಸಿ. ಪಾಟೀಲ : ವಿ.ಟಿ. ಕಾಳೆ, ಪುಟ– ೧೦

[illegible]

ನಿಸರ್ಗ ಚಿತ್ರಗಳು

ಕಾಳೆಯವರು ಸಾಕಷ್ಟು ಸಂಖ್ಯೆಯಲ್ಲಿ ರೇಖಾ ಮತ್ತು ವರ್ಣಗಳಲ್ಲಿಯೂ ನಿಸರ್ಗಚಿತ್ರಗಳನ್ನು ರಚಿಸಿದ್ದಾರೆ. ರೇಖೆಯಿಂದ ಕೂಡಿದ ನಿಸರ್ಗ ಚಿತ್ರವು ಅಸಂಖ್ಯಾತವಾಗಿವೆ. ಒಂದೇ ಆಕೃತಿ(one form)ಯಿಂದ ಹಲವಾರು ಆಕೃತಿಯವರೆಗೆ ಕಾಣಬಹುದಾಗಿದೆ. ಈ ಒಂದು ನಿಸರ್ಗ ಚಿತ್ರಗಳಲ್ಲಿ ಹಳ್ಳಿಯ ದೃಶ್ಯಗಳು, ಸ್ಮಾರಕಗಳು, ನೈಸರ್ಗಿಕ ಚಿತ್ರಗಳು ಮತ್ತು ಸಂಯುಕ್ತ ನಿಸರ್ಗ ಚಿತ್ರಗಳನ್ನು ರಚನೆ ಮಾಡಿದ್ದಾರೆ. ಇವುಗಳಲ್ಲಿ ಹಂಪೆಯ ಕಲ್ಲಿನ ರಥ, ವಾಚ್‌ಟವರ್, ಕಮಲ ಮಹಲ್, ಸಂಡೂರು, ಧರ್ಮಸ್ಥಳ, ಶ್ರವಣಬೆಳಗೊಳದ ಮಾನಸ್ತಂಭ, ಚಂದ್ರಗಿರಿಯ ದೃಶ್ಯ, ಇಂದ್ರಗಿರಿಯ ನೋಟ, ಗೋವಾ ಕಡಲತೀರ ಮತ್ತು ಲಮಾಣಿಯರ ಹಲವು ಕುಟೀರಗಳನ್ನು ನಿಸರ್ಗ ಚಿತ್ರಗಳಲ್ಲಿ ಕಾಣಬಹುದಾಗಿದೆ.

ಇಲ್ಲಿ ಕೆಲವು ಪಾಶ್ಚಾತ್ಯ ಶೈಲಿಯಲ್ಲಿ ನಯವಾದ ಪದ್ಧತಿಯಲ್ಲಿಯೂ ಕೂಡ ನಿಸರ್ಗ ಚಿತ್ರಗಳು ರಚನೆಯಾಗಿವೆ. ನಿಸರ್ಗ ರೇಖಾಚಿತ್ರಗಳಲ್ಲಿ ಯಥಾದರ್ಶನ, ಛಾಯೆಯಲ್ಲಿ ಬೆಳಕು-ನೆರಳುಗಳ ದೃಷ್ಟಿಕೋನ ಪ್ರೌಢಿಮೆಯನ್ನು ಅನಾವರಣಗೊಳಿಸುತ್ತವೆ. ಈಗಲೂ ಚಿತ್ರಕಲೆಯಲ್ಲಿ ಹೊಸ ಹೊಸ ಪ್ರಯೋಗವನ್ನು ನಡೆಸುತ್ತಿದ್ದಾರೆ. ಈ ಎಲ್ಲಾ ಸಾಧನೆಗೆ, ಕಲಾಪ್ರತಿಭೆಗೆ ಹುಡುಕಿಕೊಂಡು ಅನೇಕ ಪ್ರಶಸ್ತಿ ಪುರಸ್ಕಾರಗಳು ಬಂದಿವೆ. ಅವುಗಳಲ್ಲಿ ಕೆಲವನ್ನು ಹೆಸರಿಸಲಾಗಿದೆ. ಕರ್ನಾಟಕ ಲಲಿತಕಲಾ ಅಕಾಡೆಮಿಯು ೧೯೬೨, ೧೯೬೮, ೧೯೮೫-೮೬ರಲ್ಲಿ ಗೌರವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ೧೯೫೯-೬೦ರಲ್ಲಿ ಮೈಸೂರು ದಸರಾ ಮತ್ತು ಪ್ರದರ್ಶನದಲ್ಲಿ ಪ್ರದರ್ಶಿಸಲಾಗಿದೆ. ೧೯೫೨ರಲ್ಲಿ ಗದುಗಿನ ವಿಜಯ ಕಲಾಮಂದಿರದ ಸುವರ್ಣ ಮಹೋತ್ಸವ ಪ್ರಶಸ್ತಿ, ೨೦೦೪ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಇವರ ಮುಡಿಗೇರಿವೆ.

೨೦೦೫ರಲ್ಲಿ ಅಮೋಘವರ್ಷ ನೃಪತುಂಗ ರಾಜ್ಯ ಪ್ರಶಸ್ತಿ, ಬೆಂಗಳೂರಿನ ಮರಾಠಾ ಮಹಾಸಭಾದವರು ಛತ್ರಪತಿ ಶಿವಾಜಿ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ೨೦೦೮-೦೯ರಲ್ಲಿ ರಾಯಚೂರಿನ ಮ್ಯಾದಾಕ್ ಲಲಿತಕಲಾ ಪ್ರತಿಷ್ಠಾನದವರು ಕೊಡಮಾಡುವ ಎಂ. ಶಂಕರ್‌ರಾವ್ ರಾಜ್ಯ ಪ್ರಶಸ್ತಿ, ೨೦೦೮ರಲ್ಲಿ ಹೊಸಪೇಟೆಯ ಹೈದ್ರಾಬಾದ್-ಕರ್ನಾಟಕ ನಾಗರಿಕ ವೇದಿಕೆಯವರು ಶ್ರೀ ಕೃಷ್ಣದೇವರಾಯ ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದಾರೆ.

ಇದಲ್ಲದೇ ಕಾಳೆಯವರಿಗೆ ಅನೇಕ ಪುರಸ್ಕಾರಗಳು ಸಂದಿವೆ. ಅವುಗಳಲ್ಲಿ ೧೯೯೧ರಲ್ಲಿ ಬಳ್ಳಾರಿ ಜಿಲ್ಲಾ ಐದನೆಯ ಕನ್ನಡ ಸಾಹಿತ್ಯ ಸಮ್ಮೇಳನ, ೧೯೯೨ರಲ್ಲಿ ಸಂಡೂರಿನ ರೋಟರಿ ಕ್ಲಬ್‌ನಿಂದ, ೧೯೯೬ರಲ್ಲಿ ರಾಯಚೂರಿನ ಶ್ರೀ ಗುರು ಕಲಾಮಂದಿರದಿಂದ, ಸಂಡೂರಿನ ಶ್ರೀ ಪ್ರಭುದೇವರ ಸಂಸ್ಥಾನ, ವಿರಕ್ತಮಠದಿಂದ ಸನ್ಮಾನಿತರಾಗಿದ್ದಾರೆ. ೨೦೦೩ರಲ್ಲಿ ಅಖಿಲ ಭಾರತ ಚಿತ್ರಕಲಾವಿದರ ಶಿಬಿರ, ಹಂಪಿಯಲ್ಲಿ ಸಂಸ್ಕಾರ ಭಾರತಿ ಸಂಘಟನೆಯವರಿಂದ ಸನ್ಮಾನವಾಗಿದೆ. ಮತ್ತು ಕನ್ನಡ ವಿಶ್ವವಿದ್ಯಾಲಯ ಕೊಡಲ್ಪಡುವ ಗೌರವ ಡಿ.ಲಿಟ್ ಪ್ರಶಸ್ತಿಯಾದ 'ನಾಡೋಜ'





ವಿ.ಟಿ.ಕಾಳೆ ಸಂಡೂರು ಅವರ ಕಲಾಕೃತಿಗಳು





ಪ್ರಶಸ್ತಿ ೨೦೦೯ ಹೀಗೆ ಹಲವಾರು ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಹೀಗೆ ಒಟ್ಟಾರೆ ಕಾಳೆಯವರು ಚಿತ್ರಕಲಾವಿದರಾಗಿ, ಶಿಕ್ಷಕರಾಗಿ, ಶಿಲ್ಪಕಲಾಕೃತಿಗಳಲ್ಲಿ ಸಿಮೆಂಟ್, ಮಣ್ಣು, ಪ್ಲಾಸ್ಟರ್ ಆಫ್ ಪ್ಯಾರಿಸ್ ನಂತಹ ಮಾಧ್ಯಮಗಳಲ್ಲಿ ಶಿಲ್ಪಕಲಾವಿದರಾಗಿ, ಬರಹಗಾರರಾಗಿ, ಉತ್ತಮವಾಗ್ಮಿಯಾಗಿ, ನಾಟಕಕಾರರಾಗಿ ಪ್ರತಿಭೆಯಲ್ಲಿ ಬಹುಮುಖತ್ವವನ್ನು ಬಿಂಬಿಸಿದ ಅಪರೂಪದ ಕಲಾವಿದರಾಗಿದ್ದಾರೆ. ಈಗಲೂ ಇವರ ಕಲಾಕುಂಚಕ್ಕೆ ಅದೇ ಹುಮ್ಮಸ್ಸು, ಕಲಾಕೃತಿಯ ರಚನೆಯಲ್ಲಿ ಅದೇ ಚಾಕಚಕ್ಯತೆ, ಸದಾ ಹಸನ್ಮುಖಿಯಾದ ಕಲಾತಪಸ್ವಿಯಾಗಿದ್ದಾರೆ.

೦೭. ಆರ್. ಎಲ್. ಜಾಧವ್

ರಾಘವೇಂದ್ರ ಲಕ್ಷ್ಮಪ್ಪ ಜಾಧವ್ ಇವರು ಬಿಜಾಪುರ ಜಿಲ್ಲೆಯ ಹುನಗುಂದದ ತಾಲೂಕಿನ ಕಣ್ಣೂರ್ ಗ್ರಾಮದವರು. ಮರಾಠಾ ಕುಟುಂಬದ ಲಕ್ಷ್ಮಪ್ಪ ಹಾಗೂ ತುಳಜಮ್ಮನವರ ೧೨ನೇ ಮಗನಾಗಿ ೧ ಜೂನ್ ೧೯೫೨ರಲ್ಲಿ ಜನಿಸಿದರು. ಇವರ ಕುಟುಂಬ ಬಡತನದಿಂದ ಜೀವನ ಸಾಗಿಸುತ್ತಿತ್ತು. ಆದ್ದರಿಂದ ಜಾಧವ್‌ರವರು ಜೀವನವನ್ನು ಬಡತನದಲ್ಲಿಯೇ ಸಾಗಿಸುವಂತಾಯಿತು.

ಬಾಲಕ ಜಾಧವ್‌ರವರಿಗೆ ಶಾಲೆ ಎಂದರೆ ಪಂಚಪ್ರಾಣ. ಇವರು ಕಿರಿಯ ಪ್ರಾಥಮಿಕ ಹಂತವನ್ನು ಮುಗಿಸಿ ಹಿರಿಯ ಪ್ರಾಥಮಿಕ ಹಂತದ ತರಗತಿಗಳಾದ ೫, ೬ ಮತ್ತು ೭ನೇ ತರಗತಿಗಳನ್ನು ಹಾನಗಲ್ಲಿನ ಸರಕಾರ ಜೀವನ ಶಿಕ್ಷಣ ಶಾಲೆಯಲ್ಲಿ ವ್ಯಾಸಂಗ ಆರಂಭಿಸಿದರು ಎನ್ನುವುದಕ್ಕಿಂತ ಜೀವನಕಲೆಯನ್ನು ಕಲಿತರು ಎಂಬುದು ಸೂಕ್ತವೆನಿಸುತ್ತದೆ. ಏಕೆಂದರೆ ಆ ಕಾಲದಲ್ಲಿ ಶಾಲಾಜೀವನದ ಈ ಹಂತದಲ್ಲಿಯೇ ಮರಗೆಲಸ, ಹೊಲಿಗೆ, ಚಿತ್ರಕಲೆ ಮುಂತಾದ ಜೀವನೋಪಯೋಗಿ ಶಿಕ್ಷಣವನ್ನು ಪಡೆದರು. ಕಾರ್ಪೆಂಟರಿಗೆ ಗುರುಗಳಾದ ಅಂಗಡಿಯವರು, ಟೇಲರಿಂಗ್‌ಗೆ ಪೋತದಾರ್ ಮತ್ತು ಡ್ರಾಯಿಂಗ್‌ಗೆ ಜೋಷಿಯವರಿದ್ದು ಬಾಲಕ ಜಾಧವ್‌ರ ಮನಸ್ಥಿತಿ ಮೇಲೆ ಗಾಢ ಪ್ರಭಾವವನ್ನು ಬೀರಿದ್ದಲ್ಲದೇ ಮೇಲಿನ ವಿಷಯಗಳಿಗೆ ಸಂಬಂಧಿಸಿದಂತೆ ಭದ್ರಬುನಾದಿಯನ್ನು ಹಾಕಿದರೆಂಬ ವಿಷಯವನ್ನು ಜಾಧವ್ ಅವರು ಈಗಲೂ ಸ್ಮರಿಸುತ್ತಾರೆ.

ಪ್ರೌಢ ಶಿಕ್ಷಣವನ್ನು ಹಾನಗಲ್ಲಿನ ನ್ಯೂ ಇಂಗ್ಲೀಷ್ ಹೈಯರ್ ಸೆಕೆಂಡರಿ ಸ್ಕೂಲ್‌ನಲ್ಲಿ ಮುಗಿಸಿದರು. ಈ ಶಾಲೆಯ ಮುಖ್ಯೋಪಾಧ್ಯಾಯರಾದ ಕೆ.ಬಿ. ಪದಕಿಯವರು ಶಿಸ್ತಿನ ಸಿಪಾಯಿಯೇ ಸರಿ. ಶಾಲೆಯಲ್ಲಿ ವಿದ್ಯಾರ್ಥಿಗಳನ್ನು ಮಕ್ಕಳಂತೆಯೇ ಪ್ರೀತಿಸುತ್ತಿದ್ದ ಇವರದು ಹೆಂಗರುಳು, ಬಡ ಪ್ರತಿಭಾವಂತ ಮಕ್ಕಳಾಗಿ ವ್ಯಾಸಂಗ ಮಾಡಿ ಎಸ್.ಎಸ್.ಎಲ್.ಸಿ ಉತ್ತೀರ್ಣರಾದರು. ಪ್ರೌಢಶಾಲೆ ವ್ಯಾಸಂಗವನ್ನು ಹಾನಗಲ್ಲಿನಲ್ಲಿ ನಡೆಸುತ್ತಿರುವಾಗ ವ್ಯಾಸಂಗದ ಇತರ ವಿಷಯಗಳೊಂದಿಗೆ ಚಿತ್ರಕಲೆ ಮತ್ತು ಹೊಲಿಗೆಯನ್ನು ಅಭ್ಯಾಸ ಮಾಡುತ್ತಿದ್ದರು. ಅಲ್ಲಿ ಚಿತ್ರಕಲಾ ಶಿಕ್ಷಕರಾಗಿದ್ದ ಶ್ರೀ. ಎನ್.ಹೆಚ್. ಕುಲಕರ್ಣಿಯವರ ಪ್ರಭಾವಕ್ಕೊಳಗಾಗಿ ಚಿತ್ರಕಲೆಯಲ್ಲಿ ಅಭಿರುಚಿ ಹೆಚ್ಚಾಗಿ ಮುಂದೆ ಗದಗಿನ ವಿಜಯ ಕಲಾಮಂದಿರದಲ್ಲಿ ಚಿತ್ರಕಲೆಯನ್ನು ಅಭ್ಯಾಸ

ಮಾಡತೊಡಗಿದರು. ಅಷ್ಟೊತ್ತಿಗಾಗಲೇ ಹೆಸರು ಮಾಡಿದ್ದ ಖ್ಯಾತ ಚಿತ್ರಕಲಾವಿದರಾದ ಟಿ.ಪಿ. ಅಕ್ಕಿ, ಖ್ಯಾತ ಕಲಾವಿದರಾದ ಎಂ.ಎ. ಚೆಟ್ಟಿಯವರ ಶಿಷ್ಯರಾಗಿ ಟಿ.ಟಿ.ಸಿ. ಡಿಪ್ಲೊಮಾ ಇನ್ ಡ್ರಾಯಿಂಗ್ ಅಂಡ್ ಪೇಂಟಿಂಗ್ ಅಭ್ಯಸಿಸಿ ಪ್ರಥಮ ರ್‍ಯಾಂಕ್‌ನಲ್ಲಿ ಉತ್ತೀರ್ಣರಾಗಿ ವ್ಯಾಸಂಗ ಮಾಡುತ್ತಿದ್ದ ಗದುಗಿನ ವಿಜಯ ಕಲಾಮಂದಿರಕ್ಕೆ ಕೀರ್ತಿಯನ್ನು ತಂದಿದ್ದಾರೆ.

ವೃತ್ತಿ ಜೀವನ

೧೯೭೪ರಲ್ಲಿ ಬಳ್ಳಾರಿ ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಸೇವೆಯನ್ನು ಪ್ರಾರಂಭಿಸಿದರು. ತಮ್ಮ ಅಭಿರುಚಿಗೆ ಮತ್ತು ವಿದ್ಯೆಗೆ ತಕ್ಕಂತಹ ಉದ್ಯೋಗ ದೊರಕಿತು. ಇವರ ಒಳಗಿದ್ದ ಕಲಾವಿದ ಪ್ರಕಟವಾಗಲು ಬಹಳ ದಿನಗಳು ಬೇಕಾಗಲಿಲ್ಲ. ಬಹು ಬೇಗನೆ ಕಾಲೇಜಿನ ತರಬೇತಿ ಶಿಕ್ಷಕರಿಗೆ ಅಚ್ಚುಮೆಚ್ಚಿನ ಗುರುಗಳಾಗಿ ವಿದ್ಯಾರ್ಥಿ ಮತ್ತು ಶಿಕ್ಷಕರ ಮನಸ್ಸು ಗೆದ್ದರು. ಇವರು ತರಗತಿಯಲ್ಲಿ ಪಾಠಮಾಡುವ ರೀತಿ ಕೈಯಲ್ಲಿ ಸೀಮೆ ಸುಣ್ಣ ಹಿಡಿದು ಕಪ್ಪು ಹಲಗೆಗೆ ಕೈ ಇಟ್ಟರೆ ಸಾಕು, ನಾನಾ ವಿಧದ ಚಿತ್ರಗಳು ಕ್ಷಣಾರ್ಧದಲ್ಲಿ ರೂಪುಗೊಳ್ಳುತ್ತಿದ್ದವು. ಪಾಠಗಳಿಗೆ ಬೇಕಾಗುವ ಪಾಠೋಪಕರಣಗಳನ್ನು ವಿದ್ಯಾರ್ಥಿಗಳೇ ಮಾಡುವಂತೆ ಪ್ರೇರಿಸುತ್ತಿದ್ದರು. ಇವರ ಪ್ರೇರಣೆ ಸ್ಫೂರ್ತಿಯಿಂದ ಎಂತಹ ಸೋಮಾರಿ ವಿದ್ಯಾರ್ಥಿಯು ಚುರುಕುಗೊಳ್ಳುತ್ತಿದ್ದ ವಿದ್ಯಾರ್ಥಿಗಳಲ್ಲಿ ಹುದುಗಿದ್ದ ಸೃಜನಶೀಲತೆಯನ್ನು ಬಡಿದೆಚ್ಚರಿಸಿ ಅವರಿಂದ ಎಂತಹ ಕೆಲಸವನ್ನಾದರೂ ಮಾಡಿಸುವ ಮೋಡಿಗಾರಿಕೆ ಇವರಲ್ಲಿತ್ತು. ಹೀಗಾಗಿ ಶ್ರೀಯುತರು ಬಹುಬೇಗ ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಶಿಕ್ಷಕರಾದರು. ಇವರು ಕಲಾಶಾಲೆಯಲ್ಲಿ ಹಲವು ಪ್ರಾತ್ಯಕ್ಷಿಕೆಗಳನ್ನು, ಪ್ರದರ್ಶನಗಳನ್ನು ವಿಚಾರ ಸಂಕಿರಣಗಳನ್ನು ಮಾಡಿದ್ದಾರೆ.

ಪ್ರಾತ್ಯಕ್ಷಿಕೆಯ ಕಲಾಕೃತಿಗಳು

ಮೂಲತಃ ದೈವಭಕ್ತರಾದ ಜಾಧವ್‌ರಿಗೆ ಕರ್ನಾಟಕದ ದೇವಮಂದಿರ ಶಿಲ್ಪಗಳು, ಅದರಲ್ಲಿನ ಗದುಗಿನ ತ್ರಿಕೂಟೇಶ್ವರ ದೇವಾಲಯ ಹಾಗೂ ಚನ್ನಕೇಶವ ದೇವಾಲಯ ಮತ್ತು ಶಿಲಾಬಾಲಕಿಯರು ಇವರ ಮೇಲೆ ಗಾಢವಾದ ಪ್ರಭಾವವನ್ನು ಬೀರಿದ್ದುದು ಮತ್ತು ಕಲಾವಿದರಾದ ಎಸ್.ಎಂ. ಪಂಡಿತ್, ರವಿವರ್ಮ ಹಾಗೂ ವಿ.ಟಿ. ಕಾಳೆಯವರ ಕಲಾಕೃತಿಗಳು ಇವರಿಗೆ ಸ್ಫೂರ್ತಿಯನ್ನು ನೀಡಿವೆ. ರಾಷ್ಟ್ರೀಯ ಹಬ್ಬಗಳಿಗೆ ಬಳ್ಳಾರಿಯಲ್ಲಿ ರಚಿಸಿದ ಕಿತ್ತೂರ ರಾಣಿ ಚೆನ್ನಮ್ಮ ಸ್ತಬ್ಧ ಚಿತ್ರ (೧೯೭೮) ಹಾಗೂ ಬಳ್ಳಾರಿ ಕೋಟೆ ಸ್ತಬ್ಧ ಚಿತ್ರ (೧೯೭೯)ಗಳು ಜನಸ್ತೋಮವನ್ನು ಬೆಕ್ಕಸಬೆರಗಾಗಿಸುವ ಜೊತೆಗೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಕೂಡ ಪಡೆದರು. ಇವುಗಳಲ್ಲದೇ ವಿದ್ಯಾರ್ಥಿಯಾಗಿದ್ದಾಗ ಕ್ಲೇ ಮಾಡಲಿಂಗ್ ಪರಿಣಿತಿಯನ್ನು ಪಡೆದಿರುವುದು ಗದುಗಿನ ವಿಜಯ ಕಲಾಮಂದಿರ ಸಾರಿ ಸಾರಿ ಹೇಳುತ್ತದೆ. ರಾಮ-ಸೀತೆ-ಲಕ್ಷ್ಮಣ ಕಲಾಕೃತಿ, ಶಕುಂತಲೆ ಚಿತ್ರ, ನಲಿಯುವ ಹೆಂಗಸಿನ ಚಿತ್ರ, ಭೂ-ಚಿತ್ರಗಳು, ಕನಸು, ಭೂಕಂಪ ಮುಂತಾದ ಕಲಾಕೃತಿಗಳೊಂದಿಗೆ

ಬಣ್ಣದ ಕಾಗದದಿಂದ ವಿವಿಧ ಹೂ, ವಿವಿಧ ಪಕ್ಷಿಗಳನ್ನು, ಕರಕುಶಲ ಕಲೆಗಳನ್ನು ತಯಾರಿಸುವಲ್ಲಿಯೂ ಸಿದ್ಧಹಸ್ತರು. ಇವರು ಒಳ್ಳೆಯ ಛಾಯಾಗ್ರಾಹಕರೂ ಆಗಿ ಹಲವು ಸುಂದರ ದೃಶ್ಯಗಳನ್ನು ಸೆರೆ ಹಿಡಿದಿದ್ದಾರೆ. ಒಟ್ಟಾರೆ ಬಹುಮುಖ ಪ್ರತಿಭಾವಂತರಾಗಿದ್ದುದಕ್ಕೆ ಇವರಿಂದ ನಿರ್ಮಿತ ವಸ್ತುಗಳೇ ಸಾಕ್ಷಿಯಾಗಿವೆ.

ಚಿತ್ರ– ೩ ಮತ್ತು ೪

ಹಂಪಿ ಐತಿಹಾಸಿಕ ಪರಂಪರೆಯ ಅದ್ಭುತ ಶಿಲ್ಪಕಲೆಯು ಅಂದಿನ ವಿಜಯನಗರ ಅರಸರ ಶಿಲ್ಪಕಲಾ ಪ್ರತಿಮೆ ಶೃಂಗಾರ ಮತ್ತು ವಾಸ್ತುಶಿಲ್ಪಕ್ಕೆ ಮಾದರಿಯಾಗಿದೆ. ಕಮಲಮಹಲನ್ನು ಯಾವ ದಿಕ್ಕಿನಿಂದ ನೋಡಿದರೂ ಒಂದೇ ತರವಾಗಿ ಕಾಣುವ ಸುಂದರ ರಮ್ಯ ನೆರಳು ಬೆಳಕು, ನಾಟಿದ ತಂಪು, ತನ್ನ ಗಾರೆಯಿಂದ ನಿರ್ಮಿತವಾದ ಈ ಮಹಲ್‌ನ್ನು ಈಗ ಅಲ್ಲಲ್ಲಿ ತನ್ನ ಬಣ್ಣವನ್ನು ಕಳೆದುಕೊಂಡ ದೀನತೆಯನ್ನು ಕಲಾವಿದ ಜಾಧವ್‌ರವರು ಜಲವರ್ಣದಲ್ಲಿ ಝುಲಕಿಸಿದ್ದಾರೆ.


ಚಿತ್ರ –೫

ಜಾಧವ್‌ರ ಕುಂಚ ಎಷ್ಟು ಸೂಕ್ಷ್ಮವೋ ದೃಷ್ಟಿಯೂ ಅಷ್ಟೇ ಸೂಕ್ಷ್ಮ. ಪ್ರಕೃತಿಯ ವಿಕಾಸದಲ್ಲಿ ಬಲವಾದ ಭೂಕಂಪ, ಸುನಾಮಿಯಂತಹ ಭೀಕರ ಸನ್ನಿವೇಶದಲ್ಲಿ ತೆರೆಗಳಂತೆ ಕೊಚ್ಚಿಹೋಗುವ ಮಾನವನ ಬದುಕಿನ ಚಿತ್ರಣ, ಎಲ್ಲ ತೊರೆದು ಜೀವ ಉಳಿದರೆ ಸಾಕು ಎಂಬ ಆತುರ, ಅದಕ್ಕಾಗಿ ಪಡುವ ವಿಧವಿಧದ ಪರಿಪಾಟಲು, ಆಸರೆಗಾಗಿ ಕೈಚಾಚುವ ದೀನತನ, ತನ್ನವರ ರಕ್ಷಣೆಗಾಗಿ ರಕ್ಷಿಸುವ ದುಗುಡದಲ್ಲಿ ರಕ್ಷಕನ ಮನೋಭಾವ ಭಗ್ನಗೊಂಡ ಭವನ ಹಾಗೂ ನುಗ್ಗಿದ ನೀರು ಈ ಎಲ್ಲವನ್ನು ಸಂಕೇತವಾಗಿ ಕಥಾ ಆಧಾರಿತ ಕಲಾಕೃತಿಯಾಗಿ ಜಾಧವ್‌ರವರು ತಮ್ಮ ತೈಲವರ್ಣದಲ್ಲಿ ನೈಜವಾಗಿ ಸೆರೆಹಿಡಿದಿದ್ದಾರೆ.

ಚಿತ್ರ– ೭ ಮತ್ತು ೮ ಕ್ಲೇಮಾಡಲಿಂಗ್

ಬಹುಮುಖ ಪ್ರತಿಭೆಯ ಜಾಧವ್‌ರವರು ಕ್ಲೇಮಾಡಲಿಂಗ್‌ನಲ್ಲೂ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ. ಗ್ರಾಮೀಣ ಬದುಕಿನ ಸೊಗಸನ್ನುಂಡು ಬೆಳೆದ ಜಾಧವ್‌ರವರಿಗೆ ಜಾನಪದ ಕಲೆಯ ಬಗ್ಗೆ ಅಪಾರ, ಪ್ರೀತಿ, ಕೋಲಾಟವಾಗಲೀ, ಗೆಜ್ಜೆ ಕುಣಿತವಾಗಲಿ, ಹೋಳಿ ಆಚರಣೆಯಾಗಲೀ ಇವರ ಕಲೆಯಲ್ಲಿ ಒಪ್ಪ ಓರಣವಾಗಿ ಮೂಡಿಬಂದಿದೆ. ಜಲವರ್ಣ, ತೈಲವರ್ಣಗಳಲ್ಲದೇ ಕ್ಲೇ ಮಾಡಲಿಂಗ್‌ನಲ್ಲಿ ಇವರು ರೂಪಿಸಿದ ಚಿತ್ರಗಳು ಅವಿಸ್ಮರಣೀಯ.

ಹೀಗೆ ಆರ್. ಎಲ್. ಜಾಧವ್‌ವರು ವಿದ್ಯಾರ್ಥಿಯಾಗಿದ್ದಾಗ ೨೦೦೩–೦೪ರಲ್ಲಿ ಭವಾನಿ ಲಲಿತಕಲಾ ಮಹಾವಿದ್ಯಾಲಯದಲ್ಲಿ ಕಾವ್ಯಾತ್ಮಕವಾದ ಹಲವು ಪ್ರಾತ್ಯಕ್ಷಿಕೆಗಳನ್ನು ನೀಡುತ್ತಿದ್ದರು. ಈ ಪ್ರಾತ್ಯಕ್ಷಿಕೆ ವೀಕ್ಷಕರಲ್ಲಿ ನಾನೂ ಒಬ್ಬಳು. ಒಬ್ಬ ಕಲಾವಿದರಾಗಿ ಜಾಧವ್‌ರು ಬಹುಮುಖ




ಆರ್.ಎಲ್.ಜಾಧವ ಬಳ್ಳಾರಿ, ಅವರ ಕಲಾಕೃತಿಗಳು




ಪ್ರತಿಭೆಯನ್ನು ಮೆರೆದಿದ್ದಾರೆ. ಅಪರೂಪದ ಸಮಾಜಮುಖಿ ಶಿಕ್ಷಕ, ಕಲಾವಿದರು, ಸಂಸ್ಥಾಪಕರು ಆಗಿದ್ದಾರೆ. ಕೈಯಲ್ಲಿ ಕುಂಚವನ್ನು ಹಿಡಿದು ಕ್ಯಾನ್‌ವಾಸ್ ಮುಂದೆ ಕುಳಿತರೆ ಚಿತ್ರ ರೂಪುಗೊಳ್ಳುವುದನ್ನು ನೋಡಿದರೆ ನೋಡುಗರಿಗೆ ಆಶ್ಚರ್ಯವನ್ನು ಉಂಟುಮಾಡುತ್ತಿದ್ದವು. ನಯ ನಾಜೂಕಾದ ಸೂಕ್ಷ್ಮ ಅಂಶಗಳನ್ನು ತಮ್ಮ ಕಲೆಗೆ ಯಾವ ಒಂದು ಸಣ್ಣ ಕೊರತೆಯೂ ಆಗಬಾರದೆಂಬ ಕಾಳಜಿ ಉಳ್ಳವರು. ಇಷ್ಟೆಲ್ಲಾ ಪ್ರತಿಭೆಗಳಿರುವ ಜಾಧವ್‌ರಿಗೆ ಸಮಾಜ ಇಲಾಖೆಯಿಂದ, ಸರ್ಕಾರದಿಂದ ಹತ್ತು ಹಲವು ಪ್ರಶಸ್ತಿ ಪುರಸ್ಕಾರಗಳು ಹುಡುಕಿಕೊಂಡು ಬಂದಿವೆ. ಪುರಸ್ಕಾರಗಳೆಲ್ಲವೂ ಇವರಿಗೆ ಸಲ್ಲುವುದರಿಂದ ಅವು ಸಾರ್ಥಕವಾಗಿವೆ.

* ಡಾ. ರಾಜಕುಮಾರ್ ಸದ್ಭಾವನಾ ರಾಜ್ಯ ಪ್ರಶಸ್ತಿ, ಕರ್ನಾಟಕ ಪತ್ರಕರ್ತರ ವೇದಿಕೆ, ಬೆಂಗಳೂರು
* ರಾಜ್ಯ ಮಟ್ಟದ ಜನಪ್ರಿಯ ಶಿಕ್ಷಕ ಪ್ರಶಸ್ತಿ, ೨೦೦೭
* ೧೯೯೮ರಲ್ಲಿ ಬಳ್ಳಾರಿ ರೋಟರಿ ಕ್ಲಬ್‌ನವರು ಜಾಧವ್‌ರವರಿಗೆ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದಾರೆ.

ಹೊಸಪೇಟೆಯ ವಿಜಯನಗರ ಸಾಂಸ್ಕೃತಿಕ ವೈಭವ ಸಮಾರಂಭದಲ್ಲಿ ಇವರ ಸೇವೆಯನ್ನು ಗುರುತಿಸಿ ಶ್ರೀ ಕೃಷ್ಣದೇವರಾಯ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದಾರೆ. ಹೀಗೆ ಹಲವು ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.

೦೮. ರಾಘವೇಂದ್ರ ಹರಪನಹಳ್ಳಿ

ಬಳ್ಳಾರಿ ನಗರದ ವಾರ್ಡ್ಲಾ ಕಾಲೇಜಿನಲ್ಲಿ ವಿಜ್ಞಾನ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದ ರಾಘವೇಂದ್ರ ಅವರು ಕಳೆದ ಎರಡು ವರ್ಷಗಳ ಹಿಂದೆಯಷ್ಟೇ ನಿವೃತ್ತಿಯಾದರು. ನಿತ್ಯ ಮಕ್ಕಳ ಜತೆಯಲ್ಲಿ ಒಡನಾಟ ಇಟ್ಟುಕೊಂಡಿದ್ದ ಈ ಹಿರಿಯ ಜೀವಕ್ಕೆ ಆಸರೆಯಾಗಿದ್ದು ಕಲಾಕೃತಿಗಳ ರಚನೆ.[೨೪] ರಾಘವೇಂದ್ರ ಹರಪನಹಳ್ಳಿಯವರು ೬೦ ವರ್ಷ ವಯಸ್ಸಿನಲ್ಲಿ ಇವರ ಒಳಗಿನ ಕಲಾವಿದ ಜಾಗೃತನಾಗಿದ್ದಾನೆ. ಇವರ ತಂದೆಯು ಚಿತ್ರಕಲಾ ಶಿಕ್ಷಕರಾಗಿದ್ದರಿಂದ ವಿಜ್ಞಾನ ಶಿಕ್ಷಕನೊಳಗೊಬ್ಬ ಕಲಾವಿದ ಹೊರಬರಲು ಅಷ್ಟೇನೂ ಕಷ್ಟವಾಗಲಿಲ್ಲ. ಮತ್ತು ಇವರ ಆಸಕ್ತಿಗೆ ಎಸ್. ಎಂ. ಪಂಡಿತ್ ಹಾಗೂ ಜಾನ್ ಫರ್ನಾಂಡೀಸ್ ಸ್ಫೂರ್ತಿ ಕೂಡ ಕಲಾಸಕ್ತಿಗೆ ಇಮ್ಮಡಿಗೆ ಕಾರಣವಾಯಿತು. ಇವರು ಸುಮಾರು ೩೦ಕ್ಕೂ ಹೆಚ್ಚು ಅಪರೂಪದ ಕಲಾಕೃತಿಗಳನ್ನು ಜಲವರ್ಣ, ತೈಲವರ್ಣ ಹಾಗೂ ಗಾಜಿನ ಮೇಲೆ ಪೇಂಟಿಂಗ್ ಮುಂತಾದ ಕಲಾಕೃತಿಗಳನ್ನು ರಚಿಸಿದ್ದಾರೆ.

ಕಲಾಕೃತಿಗಳು

ಹಂಪೆಯ ಸ್ಮಾರಕಗಳು ರಜರೋ ಶಿಲ್ಪಗಳು, ತ್ರಿಮೂರ್ತಿ ಇನಿಯನಿಗಾಗಿ ಪತ್ರ ಬರೆಯುತ್ತಿರುವ ಮಹಿಳೆಯ ಆಕರ್ಷಕ ಭಂಗಿ ಗಮನ ಸೆಳೆಯುತ್ತವೆ. ಪೆನ್ಸಿಲ್‌ನಿಂದಲೂ ಹಲವು ಸುಂದರ



ಕಲಾಕೃತಿಯೋದಿಗೆ ರಾಘವೇಂದ್ರ ಹಂಪನಹಳ್ಳಿ









ಕಲಾಕೃತಿಗಳು ರಾಘವೇಂದ್ರ ಅವರ ಕುಂಚದಿಂದ ಮೂರ್ತಿರೂಪ ಪಡೆದುಕೊಂಡಿರುವುದೇ ವಿಶೇಷವಾಗಿದೆ. ಇವರು ಹೆಚ್ಚಾಗಿ ನೈಜ ಸ್ವರೂಪದಲ್ಲಿಯೇ ಚಿತ್ರಗಳನ್ನು ರಚನೆಗೆ ಆಸಕ್ತಿ ಹೆಚ್ಚು ಎನ್ನುವುದು ಇವರ ಕಲಾಕೃತಿಗಳಿಂದಲೇ ಹೊರ ಸೂಸುವಂತ ಅಂಶವಾಗಿದೆ. ಮತ್ತು ಇವರು ಹಿಂದಣ ಚಿತ್ರಕ್ಕಿಂತಲೂ ಮುಂದಣ ಪ್ರಧಾನ ಆಕಾರಕ್ಕೆ ಹೆಚ್ಚು ಒತ್ತುಕೊಟ್ಟು ಕಲಾಕೃತಿಗಳನ್ನು ರಚಿಸುತ್ತಾರೆ. ಮತ್ತು ಸೃಜನಾಶೀಲ ಕಲಾಕೃತಿಗಳು ಸೇರಿದಂತೆ ಎಲ್ಲಾ ಕಲಾಕೃತಿಗಳಲ್ಲಿ ಮಿಶ್ರವರ್ಣ ಬಳಸುವ ಬಣ್ಣದ ಪ್ರವೀಣ್ಯತೆಯು ಇವರ ಕಲಾಕೃತಿಯ ಮತ್ತೊಂದು ವಿಶೇಷವಾಗಿದೆ.

೧೯. ಕೆ.ಕೆ. ಮಕಾಳೆ

ಈ ಕಲಾವಿದರು ಇಪ್ಪತ್ತು ವರ್ಷಗಳಿಂದ ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ನೆಲೆಸಿದ್ದು, ಮೂಲತಃ ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಪುಟ್ಟ ಗ್ರಾಮವಾದ ಕೊರ್ತಿಕೊಲ್ಲಾರ ಎಂಬಲ್ಲಿ ೧ನೇ ಡಿಸೆಂಬರ್ ೧೯೬೧ರಲ್ಲಿ ಕಾವಣ್ಣನವರ ಮೊದಲನೆಯ ಮಗನಾಗಿ ಕೆ.ಕೆ. ಮಕಾಳೆಯವರು ಜನ್ಮ ತಾಳಿದರು.

ಇವರು ಬಡತನದಿಂದ ಬಂದವರಾಗಿದ್ದು, ಇವರ ಬಾಲ್ಯಪರಿಸರ ಹಳ್ಳಿಯುತ ವಾತಾವರಣದಿಂದ ಕೂಡಿತ್ತು. ಮತ್ತು ಇವರ ತಂದೆಯು ಬೇಸಾಯುವೃತ್ತಿಯನ್ನು ಅವಲಂಬಿಸಿಕೊಂಡಿದ್ದು, ತಂದೆಯವರಿಗೆ ಸಹಾಯಕರಾಗಿ ದನ ಕಾಯುವ ಕೆಲಸ ಇವರದಾಗಿತ್ತು. ಜೊತೆಯಲ್ಲಿ ಶಾಲೆ ಕಲಿಯುವ ಹಂಬಲವು ಬಾಲಕ ಮಕಾಳೆಯವರಿಗೆ ಇತ್ತು. ಆದರೂ ಚಿತ್ರಕಲೆಯಲ್ಲಿ ಆಸಕ್ತಿ ಹೆಚ್ಚಿನದಾಗಿತ್ತು. ಇವರ ತಂದೆಯವರು ಶಿಕ್ಷಣ ಕೊಡಿಸಲು ಪ್ರಾಥಮಿಕ ಶಾಲೆಗೆ ಸೇರಿಸಿದರು. ಇವರ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರ ಕೊರತೆ ಇದ್ದಿತು. ಬಾಲಕ ಮಕಾಳೆಯವರಿಗೆ ಮೊದಲೇ ಚಿತ್ರಕಲೆಯ ಬಗ್ಗೆ ಆಸಕ್ತಿಯಿದ್ದು, ದಿನನಿತ್ಯ ಎರಡು ಕಿ.ಮೀ. ಕಾಲ್ನಡಿಗೆಯಲ್ಲಿ ಶಾಲೆಗೆ ಹೋಗುತ್ತಿದ್ದಾದ ದಾರಿಯಲ್ಲಿ ನೈಸರ್ಗಿಕ ಪರಿಸರ, ದನಗಳು, ಗಿಡ–ಮರ, ಹೂ–ಬಳ್ಳಿ, ಚಿಲಿಪಿಲಿ ಹಕ್ಕಿಗಳು ಮುಂತಾದವುಗಳಿಂದ ಮತ್ತಷ್ಟು ಇವರಿಗೆ ಪ್ರೇರಣೆಯಾಯಿತು. ಪ್ರಾಥಮಿಕ ಹಂತದ ಚಿತ್ರಕಲೆಯ ಆಸಕ್ತಿ ಮಕ್ಕಳು ಅಂದರೆ, ಒಂದನೆಯ ತರಗತಿಯಿಂದ ನಾಲ್ಕು – ಐದನೆಯ ತರಗತಿಯವರೆಗೆ ಗೀಚುವಿಕೆಯ ಹಂತದಿಂದ ನಂತರದ ಐದನೆಯ ತರಗತಿಯಿಂದ ಏಳನೆಯ ತರಗತಿಯವರೆಗೆ ಪುಸ್ತಕ, ಪಟಚಿತ್ರಗಳನ್ನು ಅನುಕರಣೆ ಮಾಡುವುದು ಸಹಜವಾಗಿರುತ್ತದೆ.

ಹಾಗೆಯೇ ಮಕಾಳೆಯವರು ೬ನೇ ತರಗತಿಯ ಹೊತ್ತಿಗೆ ಪಠ್ಯಪುಸ್ತಕದಲ್ಲಿ ಕಂಡುಬರುವ ವಿಶ್ವೇಶ್ವರಯ್ಯ, ಮಹಾತ್ಮಾ ಗಾಂಧಿ, ವಿವೇಕಾನಂದ, ರಾಘವೇಂದ್ರ ಸ್ವಾಮಿ, ರಾಜಕುಮಾರ, ನೆಹರೂ, ಅಂಬೇಡ್ಕರ, ಬಸವಣ್ಣ, ಕುವೆಂಪು, ದ.ರಾ. ಬೇಂದ್ರೆ, ಶಿವರಾಮ ಕಾರಂತ, ಸುಭಾಷ ಚಂದ್ರ ಬೋಸ್, ಭಗತ್ ಸಿಂಗ್, ಮದರ್ ಥೆರೆಸಾ ಇತ್ಯಾದಿ ವ್ಯಕ್ತಿಗಳ ಭಾವಚಿತ್ರಗಳನ್ನು

ಯಥಾವತ್ತಾಗಿ ನಕಲು ತೆಗೆಯುತ್ತಿದ್ದರು. ಅಂದು ಅವರ ಮನೆಯ ಹತ್ತಿರ ನರ್ಸ್ ಎಂಬುವವರು ಇದ್ದರು. ಅವರು ಬಾಲಕ ಮಾಡಿದ ಚಿತ್ರದ ಸಣ್ಣ ಪುಟ್ಟ ದೋಷಗಳನ್ನು ತಿದ್ದಿ ಸರಿಪಡಿಸಿ ಪ್ರೋತ್ಸಾಹಿಸುತ್ತಿದ್ದರು. ಒಂಭತ್ತನೆಯ ತರಗತಿಯ ಓದುವ ಸಂದರ್ಭದಲ್ಲಿ ಡ್ರಾಯಿಂಗ್ ಹೈಯರ್ ಗ್ರೇಡ್ ಪರೀಕ್ಷೆಯನ್ನು ಜಮಖಂಡಿಯಲ್ಲಿ ತೆಗೆದುಕೊಂಡು ಪಾಸಾದರು. ಈ ಪರೀಕ್ಷೆ ಪಾಸಾದ್ದರಿಂದ ಚಿತ್ರಕಲೆಯ ಬಗ್ಗೆ ಇನ್ನೂ ಹೆಚ್ಚಿನ ಆಸಕ್ತಿ ಬೆಳೆಸಿಕೊಂಡರು. ಆದರೆ ಈ ಆಸಕ್ತಿಯು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿನ ಪಾಸಾಗಲು ಕಾರಣವಾಯಿತು. ನಂತರ ಸ್ನೇಹಿತರಿಂದ ಚಿತ್ರಕಲಾಶಾಲೆಗಳು ಸಾಕಷ್ಟಿವೆ ಎಂದು ತಿಳಿದು ಅದಕ್ಕಾಗಿಯಾದರೂ ಪಾಸಾಗಬೇಕು ಎಂದು ಕಷ್ಟಪಟ್ಟು ಉತ್ತೀರ್ಣವಾದರು. ನಂತರ ಗೆಳೆಯರ ಮಾಹಿತಿ ಮೇರೆಗೆ ಬಿಜಾಪುರದಲ್ಲಿ ಚಿತ್ರಕಲೆ ಕಲಿಸುವ ಶಾಲೆಯಿದೆ ಎಂದು ತಿಳಿದು ಆ ಬಡತನದಲ್ಲಿಯೇ ಶ್ರೀ ಸಿದ್ಧೇಶ್ವರ ಚಿತ್ರಕಲಾ ಶಿಕ್ಷಕರ ತರಬೇತಿ ಸಂಸ್ಥೆಯಲ್ಲಿ ಡಿಪ್ಲೊಮಾ ಪಡೆಯುವ ಸಂದರ್ಭದಲ್ಲಿ ಪಿಎಸ್. ಕಡೆಮನಿ, ಎಂ.ಎಸ್. ಜತ್ತಿ ಮುಂತಾದ ಕಲಾಗುರುಗಳು ಹೆಚ್ಚಾಗಿ ಇವರ ಮೇಲೆ ಪ್ರಭಾವ ಬೀರಿದ ಫಲವಾಗಿ ಚಿತ್ರಕಲೆಯನ್ನು ಮತ್ತಷ್ಟು ಆಸಕ್ತಿಯಿಂದ ಕಲಿತರು.

೧೯೮೫ರಲ್ಲಿ ಪತ್ರಿಕೆಯಲ್ಲಿ ಉದ್ಯೋಗದ ಅವಕಾಶವು ಒದಗಿತು. ಆ ಪತ್ರಿಕೆಗೆ 'ಇಲ್ಲುಸ್ಟ್ರೇಟ್' ರಚಿಸಲು ತಿಂಗಳಿಗೆ ರೂ. ೬೦೦ ಸಂಬಳ ನೀಡುತ್ತಿದ್ದರು. ಇವರಿಗೆ ತಮ್ಮ ನಿರಂತರ ಅಭ್ಯಾಸದ ಕಲೆಯಿಂದ ಬಂದ ಕೆಲಸದ ಸಂಬಳವು ಅಭ್ಯಾಸಕ್ಕೆ ಸಹಾಯಕವಾಯಿತು. ಕೊನೆಗೂ ಡಿಪ್ಲೊಮಾ ಮುಗಿಸಿ ಹಲವು ಪತ್ರಿಕೆಗಳ ಮುಖಪುಟ ರಚನೆ ಮುಂತಾದವುಗಳನ್ನು ಮಾಡುತ್ತಾ ಬೆಂಗಳೂರಿನಲ್ಲಿ ಜೀವನ ಸಾಗಿಸುತ್ತಿದ್ದ ಮಕಾಳೆಯವರಿಗೆ ಕನ್ನಡ ವಿಶ್ವವಿದ್ಯಾಲಯದ ಮೊದಲ ಕುಲಪತಿಗಳಾದ ಡಾ. ಚಂದ್ರಶೇಖರ ಕಂಬಾರರು ಆಹ್ವಾನಿಸಿ ಕರೆಸಿಕೊಂಡರು. ಪುಸ್ತಕಗಳಿಗೆ ಚಿತ್ರ ರಚಿಸುವ ಅವಕಾಶವಿದಾಗಿತ್ತು. ಈ ಅವಕಾಶಕ್ಕೆ ಡಾ. ಹಿ.ಚಿ. ಬೋರಲಿಂಗಯ್ಯ, ಡಾ. ಕರೀಗೌಡ ಬೀಚನಹಳ್ಳಿ, ಡಾ. ಪುರುಷೋತ್ತಮ ಬಿಳಿಮಲೆಯವರು ಒಮ್ಮೆ ಬೆಂಗಳೂರಿಗೆ ಬಂದು ಜಾನಪದ ಲೋಕವೆಂಬ ಸ್ಥಳದಲ್ಲಿ ಇವರ ಕಲೆಯನ್ನು ಗಮನಿಸಿದ್ದರು. ಈ ಹಿನ್ನೆಲೆಯಿಂದ ವಿಶ್ವವಿದ್ಯಾಲಯಕ್ಕೆ ಬರಲು ಕಾರಣವಾಯಿತು.


ಜಾನಪದ ಶೈಲಿಯ ಚಿತ್ರಕಲಾಕೃತಿಗಳನ್ನು ರಚಿಸಲು ಎಚ್. ಎಲ್. ನಾಗೇಗೌಡರು ನಿರ್ಮಿಸಿದ ಜಾನಪದ ಲೋಕದಲ್ಲಿ ಪ್ರಮುಖವಾಗಿ ಪ್ರಭಾವ ಬೀರಿದ್ದು ಮುಂಬಾಗಿಲು ವಿನ್ಯಾಸವೇ. ವಿಶ್ವವಿದ್ಯಾಲಯದ ಮಟ್ಟದಲ್ಲಿ ಪುಸ್ತಕಗಳ ಮುಖಪುಟಕ್ಕೆ ವಿನ್ಯಾಸಕಾರರಾಗಿ ನೇಮಕವಾದರು. ಇಷ್ಟಲ್ಲದೇ ಈ ವಿಶ್ವವಿದ್ಯಾಲಯದಲ್ಲಿ ನಡೆಯುವ ನುಡಿಹಬ್ಬದ ವೇದಿಕೆಯನ್ನು ಕೂಡ ಇವರೇ ಅಲಂಕರಿಸುತ್ತಾರೆ. ಜೊತೆಯಲ್ಲಿ ಬಿಡುವಿನ ವೇಳೆಯಲ್ಲಿ ಕಲಾಕೃತಿಗಳನ್ನು ರಚಿಸಿ ರಾಷ್ಟ್ರ, ರಾಜ್ಯಮಟ್ಟಸದಲ್ಲಿ ಪ್ರದರ್ಶನ ಮಾಡುತ್ತಾರೆ. ಅವುಗಳಲ್ಲಿ ರೇಖಾಚಿತ್ರಗಳು, ನಿಸರ್ಗಚಿತ್ರಗಳು, ಸಂಯೋಜನಾಚಿತ್ರಗಳು, ಆಧುನಿಕ ಚಿತ್ರಗಳು ಮುಂತಾದ ಪ್ರಮುಖ ಕಲಾಪ್ರಕಾರಗಳಿವೆ.

[illegible]





ಕಲ್ಲಪ್ಪ ಕೆ.ಮಕಾಳಿ ಹೊಸಪೇಟೆ ಅವರ ಕಲಾಕೃತಿಗಳು





ರೇಖಾ ಮತ್ತು ಸಂಯೋಜನಾ ಚಿತ್ರಗಳು

ಇವರು ರೇಖಾಚಿತ್ರಗಳಲ್ಲಿ ಪ್ರಮುಖವಾಗಿ ಜನಪದ ಶೈಲಿಯಲ್ಲಿ ಗ್ರಾಮದೇವತೆ, ಸೂರ್ಯ, ಚಂದ್ರ ಮುಂತಾದವುಗಳ ಆಕಾರಗಳನ್ನು ತಮ್ಮದೇಯಾದ ಶೈಲಿಯಲ್ಲಿ ಸಂಯೋಜನೆಯನ್ನು ಮಾಡುವುದು ಮತ್ತು ಹುರಿಮಂಜು ಮತ್ತು ಇದ್ದಿಲ(Charcoal)ನ್ನು ಬಳಸಿ ಲಿ ಮಾಧ್ಯಮದಲ್ಲಿ ರಚನೆಗೊಳಿಸಲಾಗಿದೆ. ಈ ಜನಪದದ ರೇಖಾ ಶೈಲಿಯನ್ನೇ ಉಪಯೋಗಿಸಿ ಸಂಯೋಜನೆ (Composition)ಯಲ್ಲಿ ಬಳಸಲಾಗಿದೆ. ಈ ಸಂಯೋಜನೆಯ ತಕ್ಕದಾದ ಮಹಿಳೆ, ಎತ್ತು, ಆಕಳು ಮುಖ್ಯ ಆಕಾರವಾಗಿ ಈ ಜನಪದದ ಶೈಲಿಯ ರೇಖೆಗಳ ವಿನ್ಯಾಸದ ಮೂಲಕ ಕಲಾಕೃತಿಯನ್ನು ಪೂರ್ಣಗೊಳಿಸಲಾಗುತ್ತದೆ. ಈ ರೇಖೆಗಳು ಬುಡಕಟ್ಟು ನೆಲೆಯಲ್ಲಿಯ ವಿನ್ಯಾಸವಾಗಿದೆ.

ನಿಸರ್ಗ ಚಿತ್ರಗಳು

ಕಲಾವಿದರ ಬಹು ಪ್ರಿಯವಾದ ಕಲಾಪ್ರಕಾರವಾದದ್ದು ಈ ನಿಸರ್ಗ ಚಿತ್ರಕಲೆ ರಚನೆಯಾಗಿದೆ. ಮೊದಲಿನಿಂದಲೂ ಹಲವಾರು ನಿಸರ್ಗ ಚಿತ್ರಕಲೆಯ ರಚನೆಯಲ್ಲಿ ಗಿಡ-ಮರ ಮತ್ತು ಸ್ಮಾರಕದ ವಿಷಯ ಕುರಿತು ಹೆಚ್ಚಾಗಿ ರಚಿಸಿದ್ದಾರೆ. ಈ ನಿಸರ್ಗ ಚಿತ್ರಗಳು ಹೆಚ್ಚಾಗಿ ಜಲವರ್ಣ ಮಾಧ್ಯಮದಲ್ಲಿ ರಚನೆಯಾಗಿವೆ. ಅಂತಹ ಚಿತ್ರಗಳಲ್ಲಿ ಹಂಪೆ ಸ್ಮಾರಕ, ಬನಶಂಕರಿಯ ಹೊಂಡ ಮುಂತಾದವನ್ನು ಇವರ ಕಲೆಗಳಲ್ಲಿ ಕಾಣಬಹುದು. ಇಲ್ಲಿ ಕುಂಚದ ವಿವಿಧ ರೀತಿಯು ವೇದಿಕೆಯ ಅಲಂಕಾರತೆಯಲ್ಲಿ, ಸಾವಿರಾರು ಪುಸ್ತಕದ ಮುಖಪುಟಗಳು, ಹಲವಾರು ಕಂಪ್ಯೂಟರಿನ ಮಾದರಿ ಚಿತ್ರಗಳು, ವಿವಿಧ ಸ್ತಬ್ಧ ಚಿತ್ರಗಳು ಮುಂತಾದ ಕಲಾಚಟುವಟಿಕೆಗೆ ಹರಡಿದೆ. ಹೀಗೆ ಇವರ ಕಲಾಸಾಧನೆಗೆ ಮೈಸೂರು ದಸರಾ ಪ್ರಶಸ್ತಿ, ಲ್ಯಾಂಡ್‌ಸ್ಕೇಪ್ ಕಲಾವಿದ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಲಭಿಸಿವೆ.

೧೦. ಎ. ನೀಲಪ್ಪ

ಎ. ನೀಲಪ್ಪನವರು ಚಿತ್ರಕಲಾ ಕ್ಷೇತ್ರಕ್ಕೆ ತಮ್ಮದೇಯಾದ ಕೊಡುಗೆ ನೀಡಿದ್ದಾರೆ. ಇವರು ಎಂದೂ ಚಿತ್ರಕಲಾವಿದನಾಗಬೇಕೆಂದು ಕನಸು ಕಂಡವರಲ್ಲ ಯಾವುದೇ ಪದವಿ ಕೋರ್ಸ್ ಪಡೆದವರಲ್ಲ. ಆದರೆ ಬದುಕಿನ ಚಿತ್ರವನ್ನು ಸರಿಯಾಗಿ ಚಿತ್ರಿಸಿಕೊಳ್ಳುವ ಕನಸು ಕಟ್ಟಿಕೊಂಡವರು. ಅದಕ್ಕಾಗಿ ಹಲವಾರು ವೃತ್ತಿ, ಪ್ರವೃತ್ತಿಯನ್ನು ಆಶ್ರಯಿಸಿದರು. ಎಲ್ಲಾ ವೃತ್ತಿಗಳು ಕೈಯಿಂದ ಜಾರಿಕೊಂಡು ಆಕಸ್ಮಿಕವಾಗಿ ಹಿಡಿದ ಕುಂಚ ಮಾತ್ರ ಅವರ ಕೈಯಿಂದ ಜಾರಲಿಲ್ಲ. ಚಿತ್ರಕಲೆಯನ್ನು ವೃತ್ತಿಯನ್ನಾಗಿಸಿಕೊಂಡು ಅದರಿಂದ ಹೆಚ್ಚು ಹೆಚ್ಚು ಚಿಂತನೆ ಮಾಡಿದರೂ ಅದರಲ್ಲಿಯೇ ಸಾಧನೆಯನ್ನು ಸಹ ಗೈದಿದ್ದಾರೆ. ಇದರ ಪ್ರತಿಯೊಂದು ನೋಟದಲ್ಲಿಯೂ ಕಲಾತ್ಮಕತೆಯನ್ನು ಕಂಡುಕೊಂಡರು. ಪ್ರತಿಗೋಡೆಯಲ್ಲಿಯೂ, ಆಕಾಶದಲ್ಲಿ ಪ್ರಾಣಿ-ಪಕ್ಷಿ, ಹೂಬಳ್ಳಿ, ಅಮೂರ್ತ ಆಕೃತಿಗಳು ಗೋಚರಿಸುವುದಾಗಿ ಅವರದು ಹಳ್ಳಿಯ ಮನೆಯ ಅದಕ್ಕೆ ಹಚ್ಚಿದ ಸುಣ್ಣ, ಮಾಸಿದಂತೆ

ಪಕಳೆಗಳಾಗಿ ಉದುರುತ್ತಿತ್ತು. ಅದು ಅವರಿಗೆ ಆಕೃತಿಗಳಿಗೆ ಪೆನ್ಸಿಲ್, ಪೆನ್ ಮೂಲಕ ಅವುಗಳಿಗೆ ಮೂರ್ತರೂಪ ನೀಡಲಾರಂಭಿಸಿದ ಇವರು ಹಲವಾರು ಕಲಾಕೃತಿಗಳನ್ನು, ಶಿಲ್ಪಗಳನ್ನು ಮತ್ತು ನೀತಿ ಸಾರುವ ಜಾಹಿರಾತುಗಳ ಭಿತ್ತಿಚಿತ್ರಗಳನ್ನು ರಚಿಸತೊಡಗಿದರು.

ಬಡತನವೇ ಕಲೆಗೆ ಪ್ರೇರಣೆ

ಎ. ನೀಲಪ್ಪನವರು ೧೯೬೨ರಲ್ಲಿ ಕಡುಬಡತನದಲ್ಲಿ ಜನಿಸಿದವರು. ಅವರು ಓದಿದ್ದು ಕೇವಲ ೫ನೇ ತರಗತಿ ಮಾತ್ರ. ಕಿತ್ತು ತಿನ್ನುತ್ತಿರುವ ಬಡತನ ಮತ್ತು ಹದಗೆಟ್ಟ ಆರ್ಥಿಕ ಪರಿಸ್ಥಿತಿಯಿಂದಾಗಿ ಮುಂದೆ ಓದಲಾಗಲಿಲ್ಲ. ಓದನ್ನು ಅಲ್ಲಿಗೇ ನಿಲ್ಲಿಸಿದ ನೀಲಪ್ಪನವರು ಮುಂದೆ ಹಲವಾರು ಸಣ್ಣಪುಟ್ಟ ಕೆಲಸ ಮಾಡುತ್ತಿದ್ದು, ನೀಲಪ್ಪನವರಿಗೆ ಈ ಕಲಾಕ್ಷೇತ್ರದಲ್ಲಿ ಕೆಲಸ ಮಾಡುವ ಸಮಯ ತಾನಾಗಿಯೇ ಬಂದಿತು ಎಂದು ಹೇಳಬಹುದು.

ಕೆಲವು ಚಿತ್ರಕಲಾವಿದರ ಜೊತೆಯಲ್ಲಿ ಚಿತ್ರಕಲೆ ರಚನೆಯಲ್ಲಿ ಸಹಾಯಕರಾಗಿ ಸೇರಿದ ಇವರ ಕಲಾಪ್ರತಿಭೆ ಬೆಳಕಿಗೆ ಬರಲು ಪ್ರಾರಂಭಿಸಿತು. ಈ ವೃತ್ತಿಯಲ್ಲಿಯೇ ಮುಂದುವರೆದ ನೀಲಪ್ಪನವರು ನಂತರ ದಿನಗಳಲ್ಲಿ ಹಲವಾರು ಸಾಮೂಹಿಕ ಪ್ರತ್ಯೇಕ ಕೃತಿಗಳನ್ನು ರಚಿಸಿದರು. ಇವರು ೧೨ನೇ ವಯಸ್ಸಿನಿಂದ ಸ್ವತಃ ಪರಿಶ್ರಮದಿಂದ ಕಲೆಯಲ್ಲಿ ಇನ್ನೂ ಗಾಢವಾಗಿ ಅಭ್ಯಾಸ ಮಾಡತೊಡಗಿದರು. ಅವುಗಳಲ್ಲಿ ಕೆಲವನ್ನು ಆಯ್ದು ಚರ್ಚಿಸಲಾಗಿದೆ.

ಶ್ರೀಮಹರ್ಷಿ ವಾಲ್ಮೀಕಿ

ಈ ಕಲಾಕೃತಿಯಲ್ಲಿ ಮಹರ್ಷಿಯು ಕಾವ್ಯರಚನೆಯಿಂದ ಕೂಡಿದ, ಕುಳಿತ ಪೂರ್ಣಭಾವ ಚಿತ್ರವಾಗಿದೆ. ಈ ಕಲಾಕೃತಿಯ ಸಂಯೋಜನೆಯಲ್ಲಿ ವಾಲ್ಮೀಕಿಯು ರಾಮಾಯಣ ಕಾವ್ಯ ರಚಿಸುತ್ತಿರುವ ಸಂಕೇತವಾಗಿ ಕಲಾಕೃತಿಯ ಬಲಬದಿಯಲ್ಲಿ ಲವಕುಶರನ್ನು ಕುದುರೆಯೊಂದಿಗೆ ಪುಷ್ಪಾವರಣದಲ್ಲಿ ತೋರಿಸಲಾಗಿದೆ. ವಾಲ್ಮೀಕಿಯ ಹಿಂದಣ ನಿಸರ್ಗವನ್ನು ಭೂಮಿತಿಯಲ್ಲಿ ತೋರಿಸಲೋಸುಗ ವಾಲ್ಮೀಕಿಯ ಮುಂಭಾಗವನ್ನು ಗಾಢವಾಗಿ, ಹಿಂದಣ ಸ್ಥಳಾವಕಾಶವನ್ನು ತಿಳಿಹಸಿರು ವರ್ಣದಲ್ಲಿ ತೋರಿಸಿ ಕಲಾಕೃತಿಯ ಸಮತೋಲನತೆಯನ್ನು ಕಾಯ್ದಿರಿಸಿ ಮಹರ್ಷಿಯ ಜ್ಞಾನದ ಸಂಕೇತವಾಗಿ ಹಳದಿ ವೃತ್ತಾಕಾರವಾಗಿ ಪ್ರಭಾವಲಯವನ್ನು ಕೂಡ ರಚನೆ ಮಾಡಿದ್ದಾರೆ. ಒಟ್ಟಾರೆ ಕಲಾಕೃತಿಯನ್ನು ನೋಡಿದ ತಕ್ಷಣ ರಸಸ್ಫುರಣವಾಗುವ ರೀತಿಯಲ್ಲಿ ತಾಂತ್ರಿಕತೆಯನ್ನು ಕಲಾವಿದ ಮೆರೆಸಿದ್ದಾರೆ.

ಭಾರತಾಂಬೆ

ಭಾರತಾಂಬೆಯ ಕಲಾಕೃತಿಯಲ್ಲಿ ಕಲಾತ್ಮಕವಾದ ಮಿಶ್ರಣವರ್ಣದ ಲೇಪನವಾಗಿದೆ. ಹಿಂದಣ ಲೇಪನ ಮುಂದಣದ ಆಕಾರಗಳಿಗೆ ಪೂರಕವಾಗುವಂತೆ ರಚನೆಯಾಗಿದೆ. ಭಾರತಾಂಬೆಯು ಉಗ್ರವಾದಿಗಳನ್ನು ತನ್ನ ತ್ರಿಶೂಲದಿಂದ ಸಂಹರಿಸುವ ವಿಷಯ ಹೊಂದಿದೆ. ದುಷ್ಟಶಕ್ತಿಗಳ

ನಿಗ್ರಹ, ಶಿಷ್ಟರಕ್ಷಣೆಯನ್ನು ಮಾಡುವ ಸನ್ನಿವೇಶಗಳಲ್ಲಿ ರಾಕ್ಷಸರಿಗೆ ಶಿಕ್ಷೆಯನ್ನು ಹಲವು ಪೌರಾಣಿಕ ಕಲಾಕೃತಿಗಳಲ್ಲಿ ಕಾಣುತ್ತೇವೆ. ಆದರೆ ಇಲ್ಲಿ ರಾಕ್ಷಸಕೃತ್ಯವನ್ನು ಉಗ್ರರು ಮಾಡಿದ್ದಕ್ಕೆ ಇಲ್ಲಿ ಉಗ್ರರ ಶಿಕ್ಷೆಯೂ ಸೃಜನಾತ್ಮಕ ಕಲಾಕೃತಿಯಾಗಿದೆ.

ಜಾಹಿರಾತು

ಜಾಹಿರಾತುಗಳಲ್ಲಿ ಹಲವು ವಿಷಯಗಳ ಭಿತ್ತಿಪತ್ರಗಳನ್ನು ರಚಿಸಿದ್ದು, ದೇಶ, ರಾಜ್ಯದ ಕಾಳಜಿಯನ್ನು ಕುರಿತು ನೀತಿ ಸಾರುವ ಹಲವು ವಿಷಯಗಳಲ್ಲಿ ಸಂಸಾರಸುಖಕ್ಕೆ ಆಧಾರ ಎಂಬ ಕಲಾಕೃತಿಯು ಕುಟುಂಬಯೋಜನೆಯನ್ನು ಕುರಿತು ನೀತಿಯ ಅಂಶವನ್ನು ಒಳಗೊಂಡಿದೆ. ನಮ್ಮ ದೇಶದಲ್ಲಿ ಏರುತ್ತಿರುವ ಜನಸಂಖ್ಯೆಯನ್ನು ನಿಯಂತ್ರಣಗೊಳಿಸುವ ಕಲಾಕೃತಿಯಲ್ಲಿ ಶಿವ-ಪಾರ್ವತಿಯರ ಮಕ್ಕಳಾದ ಗಣೇಶ, ಷಣ್ಮುಖ ಇಬ್ಬರು ಮಕ್ಕಳಂತೆ ತಂದೆ-ತಾಯಿಗೆ ಇಬ್ಬರು ಮಕ್ಕಳು ಸಾಕು ಎನ್ನುವುದು ವಸ್ತುಸಾರವಾಗಿದೆ. ಕಲಾಕೃತಿಯನ್ನು ವೈಭವೀಕರಿಸದೇ ವಿಷಯ ಅನುಸಾರವಾಗಿ ತುಂಬಾ ಸರಳವಾದ ಬಣ್ಣ ಮತ್ತು ಆಕಾರಗಳಿಂದ ಸಮತೋಲನ ಸಾಧಿಸಿದ್ದಾರೆ. ಶಿವ-ಪಾರ್ವತಿ ಮತ್ತು ಮಕ್ಕಳು ಕೇಂದ್ರಬಿಂದುವಾಗಿವೆ. ಇವರನ್ನು ಅನುಸರಿಸುವಂತೆ, ಎಡ-ಬಲ ಬದಿಯಲ್ಲಿ ತಂದೆ-ತಾಯಿ ತಲೆಗಳನ್ನು ಮಾತ್ರ ಸಂಕೇತವಾಗಿ ಚಿತ್ರಿಸಿದ್ದು, ಮಕ್ಕಳನ್ನು ಸಹ ಸಂಕೇತವಾಗಿ ಕೆಳಭಾಗದಲ್ಲಿ ಚಿತ್ರಿಸಲಾಗಿದೆ.

ಬೆಂಡಿನ ಕಲಾಕೃತಿಗಳು

ಬೆಂಡಿನ ಕಲಾಕೃತಿಗಳಲ್ಲಿ ಗರುಡ, ರಾಧಾ ಕೃಷ್ಣ, ಗಣೇಶನು ಗುರುವಾಗಿ ಇರುವ ಮೂರು ಕಲಾಕೃತಿಗಳನ್ನು ರಚಿಸಿದ್ದಾರೆ. ರಾಧಕೃಷ್ಣರ ಕಲಾಕೃತಿಯನ್ನು ಮದುವೆಯ ಮಂಟಪದಲ್ಲಿ ಅಲಂಕರಿಸಲಾಗಿದೆ. ಮದುವೆ ಮಾಡಿಕೊಳ್ಳುತ್ತಿರುವ ನವದಂಪತಿಗಳು ಮುಂದೆ ರಾಧಾಕೃಷ್ಣರಂತೆ ಇರಬೇಕೆನ್ನುವ ಸಾರವಾಗಿದೆ. ಬೆಂಡನ್ನು ರಾಧಾಕೃಷ್ಣ ಇಬ್ಬರು ರಾಸಲೀಲೆಯಲ್ಲಿ ತೊಡಗಿದ ಸನ್ನಿವೇಶದ ಆಕಾರಕ್ಕೆ ಕತ್ತರಿಸಿಕೊಂಡು ಈ ಬೆಂಡಿನ ಮೇಲೆ ರೇಖೆ-ವರ್ಣದಿಂದ ಕುಸರಿ ಕೆಲಸದಿಂದ ಪೂರ್ಣಗೊಳಿಸಿದ್ದಾರೆ. ಇದಕ್ಕೆ ಸಮತೋಲನ ಎಂಬುವಂತೆ ಹೂ-ಬಳ್ಳಿ, ಪಕ್ಷಿಗಳನ್ನು ಎಡ-ಬಲ ಬದಿಯ ನಾಲ್ಕು ಕಡೆ ಸಂಯೋಜಿಸಲಾಗಿ ಮುಖ್ಯ ಚಿತ್ರಣಕ್ಕೆ ಸಮತೋಲಿತವಾಗುವ ರೀತಿಯಲ್ಲಿವೆ.

ಇದೇ ರೀತಿಯಲ್ಲಿ ಗಣೇಶನ ಹಬ್ಬದಲ್ಲಿ ಗಣೇಶನನ್ನು ಸುಮ್ಮನೆ ಇರಿಸುವುದಕ್ಕಿಂತ ನೀತಿ ಸಾರುವ ರೀತಿಯಲ್ಲಿ ಅಲಂಕೃತ ಮಾಡಿದರೆ ಇದರಿಂದ ನೋಡುಗರು ಪಾಠ ಕಲಿಯುವ ರೀತಿಯಲ್ಲಿ ಗಣೇಶನನ್ನು ಗುರುವಾಗಿ ಬೋಧನೆಯ ಸನ್ನಿವೇಶವನ್ನು ಅಲಂಕರಿಸಲಾಗಿದೆ. ಬೆಟ್ಟ-ಗುಡ್ಡ, ಗಿಡ-ಮರಗಳ ಮಧ್ಯ ಪ್ರಶಾಂತ ವಾತಾವರಣದಲ್ಲಿ ಜಿಂಕೆ, ಆಕಳು, ಮೊಲ ಮುಂತಾದ ವನ್ಯ ಜೀವಿಗಳೊಂದಿಗೆ ಬೋಧನೆಯಲ್ಲಿ ಗಣೇಶನು ತೊಡಗಿದ್ದಾನೆ. ನಾಲ್ಕು

ಮಾನವರೊಂದಿಗೆ ವನ್ಯ ಪ್ರಾಣಿಗಳು ಸಹ ಬೋಧನೆಯನ್ನು ಆಲಿಸುವಂಥ ಸನ್ನಿವೇಶವನ್ನು ಮಾಡಲಾಗಿದೆ. ಇದರ ಜೊತೆಯಲ್ಲಿ ಪುಷ್ಪಿದಾಯಕವಾದ ಗುರುಬ್ರಹ್ಮ, ಗುರುವಿಷ್ಣು ಎನ್ನುವ ರಟ್ಟಿನ ಫಲಕವನ್ನು ಹಾಕಿದ್ದಾರೆ. ಇವುಗಳಲ್ಲದೇ ಹಾರುವ ಜಿಂಕೆ, ಬ್ರಹ್ಮ, ಕಲ್ಲಿನ ರಥ ಮುಂತಾದ ಕಲಾಕೃತಿಗಳನ್ನು ಹೊಸಪೇಟೆಯ ಶ್ರೀ ರಾಮಲಿಂಗೇಶ್ವರ ದೇವಸ್ಥಾನದ ಗೋಡೆಯ ಮೇಲೆ ದೇವರ ಚಿತ್ರಗಳನ್ನು ಬಿಡಿಸಲು ಅನುಮತಿ ನೀಡಿತು. ಆಗ ಎ. ನೀಲಪ್ಪನವರ ಹೆಸರು ಕೂಡಾ ಕಲಾಕ್ಷೇತ್ರದಲ್ಲಿ ಕಂಡುಬಂದಿತು. ನಾಡಿನ ಸಂಸ್ಕೃತಿಯ ಜೀವಂತಿಕೆಯ ಹಿಂದೆ ಹಲವು ವ್ಯಕ್ತಿಗಳ ಕಾರ್ಯದ ಶಕ್ತಿ ಕಾಣಬರುತ್ತದೆ.

ಬದುಕನ್ನೇ ಕಲೆ, ಸಂಸ್ಕೃತಿಗಾಗಿ ಮೀಸಲಾಗಿರಿಸಿದ ಹಲವಾರು ಜನ ಕಲಾವಿದರಲ್ಲಿ ನೀಲಪ್ಪನವರು ಕೂಡ ಸೇರುತ್ತಾರೆ. ಕಲೆಗಾಗಿಯೇ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡ ಇವರು ಇಲ್ಲಿಯವರೆಗೆ ಸುಮಾರು ೧೦೦೦೦ಕ್ಕೂ ಹೆಚ್ಚು ಚಿತ್ರಗಳನ್ನು ಬಿಡಿಸಿದ್ದಾರೆ. ಪ್ರತಿವರ್ಷ ನಡೆಯುವ ಹಂಪಿ ಉತ್ಸವದಲ್ಲಿ ಸತತವಾಗಿ ೯ ವರ್ಷ ದುಡಿದು 'ಹಂಪಿ ಉತ್ಸವಕ್ಕಾಗಿ ಪ್ರವಾಸಿಗರನ್ನು ಸ್ವಾಗತಿಸಲು ವಿವಿಧೆಡೆ ನಿರ್ಮಿಸಲು ಉದ್ದೇಶಿಸಿರುವ ಬೃಹತ್ ಕಮಾನುಗಳನ್ನು ಉಗ್ರನರಸಿಂಹ, ಶಿಲ್ಪಕಲೆಯ ವಿವಿಧ ಭಂಗಿಯ ಚಿತ್ರಗಳು ಹಾಗೂ ಇತರೆ ಆಕರ್ಷಕ ಪರಿಕರಗಳನ್ನು ನೀಲಪ್ಪನವರು ರಚಿಸಿದ್ದಾರೆ. ಹೊಸಪೇಟೆಯ ರಾಮಲಿಂಗೇಶ್ವರ ದೇವಸ್ಥಾನ, ಕಾಳಿಕಾದೇವಿಗುಡಿ, ದುರುಗಮ್ಮನ ಗುಡಿ, ಮಡಿವಾಳೇಶ್ವರ ದೇವಸ್ಥಾನ, ಸಣ್ಣಕ್ಕಿ ವೀರಭದ್ರಗುಡಿ, ಇನ್ನಿತರ ಗುಡಿಗಳಲ್ಲಿ ಗೋಡೆಯ ಮೇಲೆ ದೇವತೆಗಳ ಚಿತ್ರಗಳನ್ನು, ಕವಿಗಳ ಭಾವಚಿತ್ರ, ಬ್ಯಾನರ್, ಬೋರ್ಡ್‌ಗಳನ್ನು ರೇಖಾಚಿತ್ರಗಳಲ್ಲಿ ರಚನೆ ಮಾಡಿದ್ದಾರೆ.

ಪ್ರಶಸ್ತಿ ಪುರಸ್ಕಾರಗಳು

ಹೊಸಪೇಟೆಯ ನೀಲಪ್ಪನವರು ಸಹೃದಯ ಸರಳ ಸಜ್ಜನಿಕೆಯ ವ್ಯಕ್ತಿ. ನಿರಾಡಂಬರ, ನಿರಹಂಕಾರದ ನಡತೆ, ಇವರ ಪ್ರತಿಭೆಗೆ ತಕ್ಕ ಪ್ರಶಸ್ತಿ, ಪುರಸ್ಕಾರಗಳು ಹಲವು ಸಂಘ-ಸಂಸ್ಥೆಗಳಿಂದ ಬಂದಿವೆ. ಸಂಗೀತ ಭಾರತಿ ಸಾಂಸ್ಕೃತಿಕ ಸಮಿತಿವತಿಯಿಂದ ೧೯೯೮ರಲ್ಲಿ ನೀಲಪ್ಪನವರ ಕಲಾಸೇವೆಯನ್ನು ಗುರುತಿಸಿ ಭಾರ್ಗವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಹೊಸಪೇಟೆಯ ಉಕ್ಕಡಕೇರಿ ನಾಯಕ ಸಮಾಜವು ಇವರ ಕಲಾಸೇವೆಯನ್ನು ಕುರಿತಂತೆ ೧೯೯೬ರಲ್ಲಿ ಗಣೇಶ ಉತ್ಸವದ ನಿಮಿತ್ತ ಪ್ರಶಸ್ತಿ ನೀಡಿ ಸನ್ಮಾನಿಸಿದೆ. ೧೯೯೬ರಲ್ಲಿ ಹಂಪಿ ಉತ್ಸವದ ದ್ವಾರಬಾಗಿಲು ನಿರ್ಮಾಣ ಮಾಡಿದ ಸಂದರ್ಭದಲ್ಲಿ ಅವರ ತಾಯಿ ತೀರಿದರೂ ಅದನ್ನು ಲೆಕ್ಕಿಸದೇ ಕಲಾಸೇವೆಯಲ್ಲಿ ತಲ್ಲೀನರಾಗಿದ್ದರು. ನಂತರ ಅವರಿಗೆ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಲಾಗಿದೆ. ಕವಿಗೋಷ್ಠಿ ಕಾರ್ಯಕ್ರಮದಲ್ಲಿ ಅವರಿಗೆ ಸನ್ಮಾನ ಮತ್ತು ಪ್ರಶಸ್ತಿಯನ್ನು ನೀಡಲಾಗಿದೆ. ಆಕಾಶವಾಣಿ, ಹೊಸಪೇಟೆ, ಇವರು ಕಲಾವಿದನ ಕಲೆ ಬೆಳೆದು ಬಂದ ಬಗ್ಗೆ ಎ.

[illegible]



ಎ.ನೀಲಪ್ಪ ಹೊಸಪೇಟ, ಅವರ ಕಲಾಕೃತಿಗಳು



ನೀಲಪ್ಪ ಅವರ ಸಂದರ್ಶನ ನಡೆಸಿ ೧೯೯೮ರಲ್ಲಿ ಬಿತ್ತರಿಸಿತು. ಕನ್ನಡ ಸಾಹಿತ್ಯ ಪರಿಷತ್‌ನಿಂದ ಪ್ರಶಸ್ತಿ ಮತ್ತು ಸನ್ಮಾನವನ್ನು ನೀಡಲಾಗಿದೆ.

ಹೊಸಪೇಟೆಯ ಶ್ರೀ ರಾಮಲಿಂಗ ಯುವಕ ಸಂಘದವರು ೧೯೯೮ರಲ್ಲಿ ರಾಜ್ಯೋತ್ಸವ ನಿಮಿತ್ತ ೯ ಕವಿಗಳ ಭಾವಚಿತ್ರ, ಕರ್ನಾಟಕ ಮಾತೆ ಭುವನೇಶ್ವರಿ, ಗೊಮ್ಮಟೇಶ್ವರ ಮತ್ತು ಇತರ ಚಿತ್ರಗಳನ್ನು ರಚಿಸಿದ್ದಕ್ಕಾಗಿ ಪ್ರಶಸ್ತಿ ನೀಡಿ ಗೌರವಿಸಿತು. ೧೯೯೯ರ ಹಂಪಿ ಉತ್ಸವದಲ್ಲಿ ದ್ವಾರಬಾಗಿಲು ನಿರ್ಮಿಸಿದ್ದಕ್ಕಾಗಿ ಹಂಪಿ ಉತ್ಸವದ ಪರವಾಗಿ ಮತ್ತು ೨೦೦೧ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದ ಅಂಗವಾಗಿ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಲಾಯಿತು. ಹೀಗೆ ಹಲವು ಪ್ರಶಸ್ತಿ-ಸನ್ಮಾನಗಳನ್ನು ಪಡೆದ ನೀಲಪ್ಪನವರು, ಕಲೆಯು ಜೀವನದ ವೃಕ್ಷವೆಂದು ವಿಲಿಯಂ ಬ್ರೇಕ್ ಹೇಳುವ ಮಾತಿನಂತೆ ಒಂದು ಸಮಗ್ರ ವೃಕ್ಷದಲ್ಲಿ ತುಂಬಿದ ಬದುಕಿನ ರೂಪರೇಷೆಗಳೆಲ್ಲವೂ ಇವೆ. ನಿಲುವು, ಸೌಷ್ಠವ, ಬಣ್ಣ ಎಲ್ಲವನ್ನು ಹೊಂದಿ ಅವು ಜೀವಚೈತನ್ಯ ಪಡೆದು ಕಂಗೊಳಿಸುತ್ತವೆ. ಅಂತಹ ಚಿತ್ರಕಲೆಯನ್ನು ಕರಗತ ಮಾಡಿಕೊಂಡು ತಪಸ್ಸಿನಂತೆ ಸಾಧನೆಗೈದಿದ್ದಾರೆ.

೧೧. ಸೃಜನ

ಆಂಧ್ರಪ್ರದೇಶದ ಕಡಪಾ ಜಿಲ್ಲೆಯ ಕಮಲಾಪುರಂದಲ್ಲಿ ೧೧ನೇ ಮಾರ್ಚ್ ೧೯೬೯ರಂದು ಜನಿಸಿದ ಇವರು ಪ್ರಸ್ತುತ ಹೊಸಪೇಟೆಯಲ್ಲಿ ನೆಲೆಸಿದ್ದಾರೆ. ಕಾರಣಾಂತರದಿಂದ ಇವರ ತಂದೆಯವರು ಬಳ್ಳಾರಿಯ ಸಂಡೂರಿಗೆ ಬಂದು ನೆಲೆಸಿದರು. ಸೃಜನ್ ಅವರು ಸಂಡೂರಿನಲ್ಲಿ ಪ್ರಾಥಮಿಕ ಮತ್ತು ಪ್ರೌಢ ಹಂತದ ವಿದ್ಯಾಭ್ಯಾಸವನ್ನು ಪೂರೈಸಿದರು. ಈ ಹಂತದಲ್ಲಿಯೇ ಇವರು ಕಾರ್ಟೂನುಗಳತ್ತ ವಿಶೇಷ ಒಲವು ತೋರಿಸಿ, ಶಾಲಾ ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನಗಳನ್ನು ಪಡೆದರು. ನಂತರ ಬಳ್ಳಾರಿಯ ವಿಜಯನಗರ ಇಂಜಿನಿಯರಿಂಗ್ ಕಾಲೇಜಿನಿಂದ ಸಿವಿಲ್ ಇಂಜಿನಿಯರ್ ಪದವಿಯನ್ನು ೧೯೯೨ರಲ್ಲಿ ಪಡೆದುಕೊಂಡರು.

ಇವರು ವೃತ್ತಿಯಲ್ಲಿ ಇಂಜಿನಿಯರ್ ಆದರೂ, ಪ್ರವೃತ್ತಿಯಲ್ಲಿ ಚಿತ್ರಕಲೆಯ ಗೀಳು ಇವರದು. ಇವರು ಕಲಾವಿದರ ಮನೆತನದವರಲ್ಲದಿದ್ದರೂ, ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿದ್ದಾಗ ತಿಪ್ಪೇಸ್ವಾಮಿ ಎಂಬ ಕಲಾವಿದರ ಪರಿಚಯವಾಯಿತು. ಆತ ಸೃಜನ್ ಅಕ್ಕನ ಕ್ಲಾಸ್‌ಮೇಟ್ ಆಗಿದ್ದರು. ಅವರು ಅದ್ಭುತವಾಗಿ ಚಿತ್ರಗಳನ್ನು ಬರೆಯುತ್ತಿದ್ದರು. ಅವರು ಬರೆಯುವುದನ್ನು ಗಂಟೆಗಟ್ಟಲೆ ಸುಮ್ಮನೆ ಗ್ರಹಿಸುತ್ತಿದ್ದರು. ಮತ್ತು ಹುಸೇನರ ಗಾಢ ವರ್ಣ ಸಂಯೋಜನೆ, ಇಲ್ಲುಸ್ಟ್ರೇಷನ್‌ನಂತೆ ಭ್ರಮಿಸುವಂತೆ ಮಾಡುವ ಅದ್ಭುತ ಜಲವರ್ಣಗಳ ಸಮೀರ್ ಮಂಡಲ್ ಕೃತಿಗಳಲ್ಲಿ ದೇವ ನಾಗರಿಲಿಪಿಯನ್ನು ಬೆರೆಸಿ ಅದಕ್ಕೊಂದು ವಿಸ್ಮಯದ ತೋರಣ ಕಟ್ಟುವ ಸುಜಾತಾ ಬಜಾಜ್‌ರ ಪೇಯಿಂಟಿಂಗ್ಸ್‌ಗಳು ಸೃಜನ್‌ರನ್ನು ಚಿತ್ರಕಲಾವಿದರನ್ನಾಗಿ ಮಾಡುವಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ. ಸಂಡೂರು ಅದ್ಭುತವಾದ ನಿಸರ್ಗ ಪ್ರದೇಶ. ಎಂಥವರನ್ನೂ ಕವಿಯಾಗಿಸುವ ಶಕ್ತಿ ಅಲ್ಲಿನ

ಮಣ್ಣಿಗಿದೆ. ಹತ್ತಿರದ ಕುಮಾರಸ್ವಾಮಿ ದೇವಸ್ಥಾನ, ನರಸಿಂಹಸ್ವಾಮಿ ದೇವಸ್ಥಾನದ ಸುತ್ತಮುತ್ತಲಿನ ಪ್ರದೇಶಗಳಿಗೆ ತೆರಳಿ ಪುಟ್ಟದಾಗಿ ಭೂದೃಶ್ಯಗಳನ್ನು ಚಿತ್ರಿಸಲು ಕಲಿತರು. ಇವರು ಹತ್ತನೇ ತರಗತಿ ಓದುತ್ತಿದ್ದಾಗ ವ್ಯಂಗ್ಯಚಿತ್ರಗಳು ಆಕರ್ಷಿಸಿದವು. ಇವರ ಅಪ್ಪನಿಗೆ ಚಿತ್ರ ಬರೆಯುವುದು ಸುತರಾಂ ಇಷ್ಟವಿರಲಿಲ್ಲ. "ಬ್ರಷ್ ಹಿಡಿದು ಹಾಳಾಗಿ ಹೋಗ್ತಿಯಾ" ಎಂಬ ಬೈಗಳ. ಹೀಗಾಗಿ ಇವರಿಗೆ ಕಲೆಯನ್ನು ಅಕಾಡೆಮಿಕ್ ಆಗಿ ಅಧ್ಯಯನ ಮಾಡುವ ಆಸೆ ಈಡೇರಲಿಲ್ಲ. ಇವರಿಗೆ ಇಷ್ಟವಿಲ್ಲದಿದ್ದರೆ ಇವರ ತಂದೆಯವರ ಆಸೆಯಂತೆ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಮೂರನೇ ರ್‍ಯಾಂಕ್‌ದೊಂದಿಗೆ ಸಿವಿಲ್ ಇಂಜಿನಿಯರಿಂಗ್ ಪದವಿ ಪಡೆದರು. ಆದರೆ ಅವರ ಕಣ್ತಪ್ಪಿಸಿ ಚಿತ್ರ ಬರೆಯುವ ಹುಚ್ಚು ಮಾತ್ರ ಹೋಗಲಿಲ್ಲ.

ವೃತ್ತಿ, ಕಲಾಬದುಕು

ಬಳ್ಳಾರಿಯಲ್ಲಿ ಇಂಜಿನಿಯರಿಂಗ್ ಪದವಿ ಪಡೆದ ನಂತರ ಪುಣೆಯ ದೌಂಡ್‌ನಲ್ಲಿ ಇವರ ವೃತ್ತಿ ಜೀವನ ಆರಂಭವಾಯಿತು. ಮೂರು ವರ್ಷಗಳ ಕಾಲ ಅಲ್ಲಿನ ಕಂಪನಿಯೊಂದರಲ್ಲಿ ದುಡಿದರು. ಪಶ್ಚಿಮ ಬಂಗಾಳಕ್ಕೆ ವರ್ಗವಾಗುವ ಸೂಚನೆಗಳು ಕಂಡುಬಂದಾಗ ಊರಿನ ನೆನಪಾಗಿ ಮತ್ತೆ ಸಂಡೂರಿಗೆ ಮರಳಿದರು. ಅಲ್ಲಿಂದ ಮುಂದೆ ಬಳ್ಳಾರಿಯ ಉಕ್ಕಿನ ಕಂಪನಿಯೊಂದರಲ್ಲಿ ಕೆಲಸ. ಕಂಪನಿಯ ಮಾಲಿಕರಲ್ಲಿ ಒಬ್ಬರಾದ ಸಂಗೀತಾರವರಿಗೆ ಕಲೆಯಲ್ಲಿ ಆಸಕ್ತಿ, ಸಹೃದಯತೆ ಇದ್ದ ಇವರು ಸೃಜನ್‌ರವರನ್ನು ಸಹ ದೊಡ್ಡ ಮಟ್ಟದಲ್ಲಿ ಪ್ರೋತ್ಸಾಹಿಸಿದರು. ಅವರು ಆರ್ಟ್ ಇಂಡಿಯಾ ನಿಯತಕಾಲಿಕೆ ನಡೆಸುತ್ತಿದ್ದ ಸ್ಪರ್ಧೆಗಳಲ್ಲಿ ಎರಡು ಬಾರಿ ಬಹುಮಾನ ಪಡೆದರು. ನಂತರ ಅದೇ ಸ್ಪರ್ಧೆಗೆ ತೀರ್ಪುಗಾರರಾಗಿ ಸೇವೆ ಸಲ್ಲಿಸಿದರು.

ಬೆಂಗಳೂರಿನಲ್ಲಿ ಕಂಪನಿಯ ಕನ್ಸಲ್ಟೆಂಟ್ ಆಗಿ ದುಡಿಯುತ್ತಿದ್ದಾಗ ರೇಖಾರಾಣಿ ಹಾಗೂ ಪ್ರತಿಭಾ ನಂದಕುಮಾರ್ ಅವರ 'ಮರಕಂದ' ಪತ್ರಿಕೆಗೆ ಶೀರ್ಷಿಕೆಗಳನ್ನು ಬರೆದುಕೊಡುತ್ತಿದ್ದರು, ಲಂಕೇಶ್ ಬಳಗದಿಂದ ಹೊರಬಂದ ಕೆಲ ಹಿರಿಯ ಪತ್ರಕರ್ತರ ಈ ವಾರ ಕರ್ನಾಟಕ ಪತ್ರಿಕೆಗೂ ಕೆಲಸ ಮಾಡಿದರು. ಈ ಮಧ್ಯೆ ತೆಲುಗಿನ ಯಂಡಮೂರಿ ವೀರೇಂದ್ರನಾಥ್ ಹಾಗೂ ಮಲ್ಲಾಡಿ ವೆಂಕಟಕೃಷ್ಣ ಮೂರ್ತಿ ಅವರ ಕೆಲವು ಕತೆಗಳನ್ನು ಕನ್ನಡಕ್ಕೆ ಅನುವಾದಿಸಿದರು. ಮತ್ತಷ್ಟು ಕಲಾಕೃತಿಗಳನ್ನು ರಚಿಸಬೇಕು, ಕಲಾವಿದನಾಗಬೇಕೆಂಬ ತುಡಿತ ಇವರನ್ನು ಮತ್ತೊಂದು ಹಾದಿಗೆ ಕೊಂಡೊಯ್ಯಿತು. ಕಾರ್ಖಾನೆ ಕೆಲಸವನ್ನು ತ್ಯಜಿಸಿದರು. ಹೊಟ್ಟೆಪಾಡಿಗೆ ಕನ್‌ಸ್ಟ್ರಕ್ಷನ್ ಕಂಪನಿ ತೆರೆದು ಕಲೆಯನ್ನು ಇನ್ನಷ್ಟು ಧ್ಯಾನಿಸತೊಡಗಿದರು.

ತೆಲುಗಿನ ವ್ಯಂಗ್ಯಚಿತ್ರಕಾರ ಬಾಪು ಹಾಗೂ ಮಯೂರ ಮಾಸಿಕದಲ್ಲಿ ರೇಖೆಗಳಲ್ಲಿ ಭೂದೃಶ್ಯಗಳನ್ನು ರಚಿಸುತ್ತಿದ್ದ ಕಮಲೇಶ್ ಇವರ ರೇಖೆಗಳಿಗೆ ಅಪಾರ ಸ್ಫೂರ್ತಿ ನೀಡಿದರು. ಜೊತೆಗೆ ಜಿ. ಕೆ. ಸತ್ಯ, ಡಾ. ಸೂರಿ, ಪಿ. ಮಹಮ್ಮದ್, ಚಂದ್ರನಾಥ ಆಚಾರ್ಯ, ಜೇಮ್ಸ್‌ವಾಜ್,

[illegible]

ಎಸ್.ವಿ. ಪದ್ಮನಾಭ, ಕರುಣಾಕರ್ ಮುಂತಾದ ಕಲಾವಿದರ ಒಡನಾಟ ಕಲೆಯ ಹಾದಿಯಲ್ಲಿ ಸಾಗುವಂತೆ ಹುರಿದುಂಬಿಸಿತು. ವ್ಯಂಗ್ಯಚಿತ್ರಗಳ ಕಾರ್ಯಾಗಾರದಲ್ಲಿ ಸಿಗದ ಅನುಭವವನ್ನು ಈ ಕಲಾವಿದರ ಸಂಪರ್ಕ ದೊರಕಿಸಿಕೊಟ್ಟಿತು. ಎಂಥ ಕುಂಚ ಬಳಸಬೇಕು, ಕೃತಿಯ ಗಾತ್ರ ಎಷ್ಟಿರಬೇಕು ಎಂಬ ಸಣ್ಣ ಸಣ್ಣ ವಿವರಗಳೂ ಸಿಕ್ಕವು. ಕಥೆಗಾರ ಜಯಂತ್ ಕಾಯ್ಕಿಣಿ ಆಗ ಸಾಂಸ್ಕೃತಿಕ ಮಾಸಿಕವೊಂದರ ಸಂಪಾದಕರಾಗಿದ್ದರು. ಅವರ ಪರಿಚಯವಾಗಿದ್ದು, ಮತ್ತೊಬ್ಬ ಕಥೆಗಾರ ಇವರ ನೆಚ್ಚಿನ ಸ್ನೇಹಿತ ವಸುಧೇಂದ್ರನಿಂದಾದ ಪ್ರೋತ್ಸಾಹವನ್ನು ಎಂದಿಗೂ ಮರೆಯಲಾರರು. ಬಿದರಳ್ಳಿ ನರಸಿಂಹಮೂರ್ತಿ ಅವರ ಕಥೆಯೊಂದರಲ್ಲಿ ಭೂಮಿ ಮತ್ತು ತೀರ್ಥ ಪ್ರೀತಿಸಿ ಮದುವೆಯಾದರು ಎಂಬ ಸಾಲಿದೆ. ಆ ಸಂದರ್ಭಕ್ಕೆ ಸಾಂದರ್ಭಿಕ ಚಿತ್ರ ರಚಿಸಿದ ಮೊದಲ ಕತೆ ಅದು. ಅದರ ನೆನಪಿಗಾಗಿ ಇವರ ಮಗಳಿಗೆ ಭೂಮಿ ಎಂಬ ಹೆಸರಿಟ್ಟರು. ಇವರೆಲ್ಲಾ ಕನಸುಗಳಿಗೆ ಬೆಂಗಾವಲಾಗಿ ನಿಂತಿರುವುದು ಇವರ ಮಡದಿ ಶ್ಯಾಮಲಾರವರು. ವಾಸ್ತುಶಿಲ್ಪಿಯಾಗಿರುವ ಇವರು ತಮ್ಮ ಪತಿಯ ಕನಸಿನ ನನಸಿಗಾಗಿ ಪ್ರೋತ್ಸಾಹಿಸಿದರು.

ಈಚೆಗೆ ಐದು ವರ್ಷಗಳಿಂದ ಮುಖಪುಟಗಳ ಕಡೆ ಆಸಕ್ತಿ ಹೆಚ್ಚಿತು. ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳಾದ ನವಕರ್ನಾಟಕ, ಅಂಕಿತ ಬುಕ್ಸ್, ಪಲ್ಲವ ಪ್ರಕಾಶನ, ರೂಪ ಪ್ರಕಾಶನಗಳ ಸುಮಾರು ೫೦ಕ್ಕೂ ಹೆಚ್ಚು ಕಥಾ ಸಂಕಲನ ಮತ್ತು ಕವನ ಸಂಕಲನಗಳ ಮುಖಪುಟಗಳನ್ನು ಮಾಡಿದ್ದಾರೆ. ಸದ್ಯ ತೆಲುಗಿನ ಕೆಲವು ಸಾಹಿತ್ಯ ಕೃತಿಗಳನ್ನು ಕನ್ನಡಕ್ಕೆ ಅನುವಾದ ಮಾಡುವ ಕೆಲಸ ಮಾಡುತ್ತಿದ್ದಾರೆ. ಕಾರ್ಖಾನೆ ಕೆಲಸದಿಂದ ಸ್ವಯಂ ನಿವೃತ್ತಿ ತೆಗೆದುಕೊಂಡ ನಂತರ ೨೦೦೯ರಿಂದ ಹೊಸಪೇಟೆಯಲ್ಲಿ ವಾಸವಾಗಿದ್ದಾರೆ. ಭೂಮಿ ಕನ್‌ಸ್ಟ್ರಕ್ಷನ್ ಹೆಸರಿನ ನಿರ್ಮಾಣ ಸಂಸ್ಥೆಯನ್ನು ನಿರ್ವಹಿಸುತ್ತಿದ್ದಾರೆ. ಸಾಂದರ್ಭಿಕವಾಗಿ ಹಲವಾರು ರೇಖಾಚಿತ್ರಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಕೆಲವು ರೇಖಾಚಿತ್ರಗಳನ್ನು ಈ ಕೆಳಗಿನಂತೆ ಉದಾಹರಿಸಲಾಗಿದೆ.

ಚಿತ್ರ –೧

ಇದು ಒಂದು ಹೆಣ್ಣಿಗೆ ಸಂಬಂಧಿಸಿದಂತಹ ರೇಖಾಕೃತಿಯಾಗಿದೆ. ಈ ಕೃತಿಯಲ್ಲಿ ಮಹಿಳೆ ಮತ್ತು ಮರ, ಪುರುಷ ಆಕಾರಗಳನ್ನು ಸಂಯೋಜನೆಯಲ್ಲಿ ತೋರಿಸಲಾಗಿದೆ. ಇಲ್ಲಿ ಹೆಣ್ಣಿನ ಪಾತ್ರವು ಮುಖ್ಯವಾದದ್ದು ಎನ್ನುವ ಸನ್ನಿವೇಶದಲ್ಲಿ ಹೆಣ್ಣಿನ ರೇಖಾಚಿತ್ರವು ರೇಖಾ ಚಿತ್ರಗಳಲ್ಲಿನ ಪ್ರಮಾಣದಲ್ಲಿಯೇ ದೊಡ್ಡದಾದ ರೇಖೆಯಾಗಿದೆ. ರೇಖೆಗಳನ್ನು ಮುರಿಯದೇ ಕೆಲವೇ ಅಳತೆಗಳಿಂದ ರೇಖೆಗಳನ್ನು ಸಂಯೋಜಿಸಲಾಗಿದೆ.

ಚಿತ್ರ –೨

'ಯಾರನ್ನು ರಕ್ಷಿಸಿದೆ' ಎನ್ನುವ ಶೀರ್ಷಿಕೆಯಲ್ಲಿ ಈ ರೇಖಾಕೃತಿಯನ್ನು ಸಂಯೋಜಿಸಲಾಗಿದೆ. ರಕ್ಷಿಸಿದೆ ಎನ್ನುವ ಸಂಕೇತವಾಗಿ ಕೈಗಳು ದೊಡ್ಡಗಾತ್ರದಲ್ಲಿ ಪ್ರಮುಖವಾಗಿ ಪಾತ್ರವಹಿಸುತ್ತವೆ

ಎನ್ನುವ ಹಿನ್ನೆಲೆಯಲ್ಲಿ ಸಂಯೋಜಿಸಲಾಗಿದೆ. ಮಹಿಳೆಯ ಅರ್ಧ ಮುಖವನ್ನು ರೇಖಿಸುವುದರ ಹಿನ್ನೆಲೆಯಲ್ಲಿ ೫೦ರಷ್ಟು ಸ್ವಾತಂತ್ರ್ಯವಾಗಿ, ಬೇಕಿರುವುದಾಗಿ, ರಕ್ಷಣೆಯಾಗಿ ತೋರಿಸುವ ಈ ಕೃತಿಯ ರೇಖೆಯನ್ನು ಕ್ಷಿಪ್ರಗತಿಯಲ್ಲಿ ಎಳೆಯಲಾಗಿದೆ.

೧೨. ಶ್ರೀ. ಕೆ. ವಿ. ಕಾಳೆ

ಹೆಸರಾಂತ ಕಲಾವಿದರಾದ ವಿ. ಟಿ. ಕಾಳೆ ಮತ್ತು ಕಾಶೀಬಾಯಿ ದಂಪತಿಗಳಿಗೆ ಸೆಪ್ಟಂಬರ್ ೧೨, ೧೯೭೦ರಂದು ಜನಿಸಿದ ಕೆ.ವಿ. ಕಾಳೆಯವರು ತಮ್ಮನ್ನು ಚಿತ್ರಕಲಾ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಇವರಿಗೆ ತಂದೆಯೇ ಗುರುವಾಗಿರುವುದರಿಂದ ಅವರ ಮಾರ್ಗದರ್ಶನದಲ್ಲಿ ಬೆಳೆದ ಕಲಾವಿದರಾಗಿದ್ದಾರೆ. ಇವರ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಸಂಡೂರಿನಲ್ಲಿ ಪೂರೈಸಿದರು. ಸಂಡೂರಿನ ಪ್ರಕೃತಿಮಧ್ಯದಲ್ಲಿ ಕೆ.ವಿ. ಕಾಳೆ ಹಾಗೂ ಅವರ ಕಲಾವಂತಿಕೆಗೆ ಮತ್ತಷ್ಟು ಇಂಬುಂಟಾಯಿತು.

ಕಲಾಶಿಕ್ಷಣ

ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಮುಗಿಸಿದ ನಂತರ ಕೆ.ವಿ. ಕಾಳೆ ಅವರು ೧೯೯೦ರಲ್ಲಿ ಗದಗ್ ಜಿಲ್ಲೆಯ ವಿಜಯ ಫೈನ್ ಆರ್ಟ್ಸ್ ಕಾಲೇಜಿನಲ್ಲಿ ಚಿತ್ರಕಲಾ ಡಿಪ್ಲೊಮಾ ಶಿಕ್ಷಣ ಪಡೆದುಕೊಂಡರು. ನಂತರ ಇವರು ಕಲಾವಿದರಾಗಿಯೇ ತಮ್ಮ ವೃತ್ತಿಜೀವನವನ್ನು ನಡೆಸುವ ಅಭಿಲಾಷೆಯಿಂದ ತಮ್ಮ ಕಲೆಯನ್ನೇ ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಇವರು ತಮ್ಮದೇಯಾದ ಚಿತ್ರಕಲಾ ಶೈಲಿಯಲ್ಲಿ ಹಲವಾರು ಕಲಾಕೃತಿಗಳನ್ನು ರಚಿಸಿದ್ದಾರೆ.

ಕಲಾಕೃತಿಗಳು

ಇವರು ನಮ್ಮ ಭಾರತದ ಪಾರಂಪರಿಕ ಚಿತ್ರಕಲೆಯಾದ ರಜಪೂತ, ಕಾಂಗ್ರಾ, ಪಹಾಡಿ, ಬೂಂದಿ, ಪರ್ಷಿಯನ್, ಕಿನ್ನಾಳ, ವಿಜಯನಗರ ಶೈಲಿಗಳಲ್ಲಿ ಸಾಕಷ್ಟು ಕಲಾಕೃತಿಗಳನ್ನು ರಚಿಸಿದ್ದಾರೆ. ಈ ಒಂದು ಶೈಲಿಯಲ್ಲಿಯೇ ತಮ್ಮದೇಯಾದ ಶೈಲಿ, ವೈಶಿಷ್ಟ್ಯವನ್ನು ಮೆರೆದಿದ್ದಾರೆ. ಇವುಗಳಲ್ಲದೇ ಜನಪದ ಶೈಲಿಯ ಸಂಯೋಜನೆ, ರೇಖಾಚಿತ್ರ, ನಿಸರ್ಗಚಿತ್ರ ಮತ್ತು ವ್ಯಕ್ತಿ ಚಿತ್ರ ಹೀಗೆ ಹಲವಾರು ಕಲಾಕೃತಿಗಳನ್ನು ರಚಿಸಿದ್ದಾರೆ. ಹಲವಾರು ಕಲಾಕೃತಿಗಳನ್ನು ತೈಲ, ಜಲವರ್ಣ, ಅಕ್ರಲಿಕ್, ಪೋಸ್ಟರ್ ವರ್ಣ, ಟೆಂಪೆರಾ ಇತ್ಯಾದಿ ವಿವಿಧ ವರ್ಣ ಮಾಧ್ಯಮಗಳಲ್ಲಿ ರಚಿಸಿದ್ದಾರೆ. ಹೀಗೆ ಈ ಎಲ್ಲಾ ಚಿತ್ರಗಳು ಮಾಧ್ಯಮಗಳ ಮುಖಾಂತರ ತಮ್ಮದೇಯಾದ ಹಿನ್ನೆಲೆ ಹೊಂದಿವೆ. ಸೃಜನಾತ್ಮಕವಾಗಿ ಮೂಡಿಬಂದ ಕಲಾಪ್ರಕಾರವೆಂದರೆ ಸಂಯೋಜನೆ (Composition)ಯ ಕಲಾಕೃತಿಗಳಾಗಿವೆ.

ಸೃಜನಾತ್ಮಕ ಸಂಯೋಜನೆಗಳು

ಸೃಜನಾತ್ಮಕ ಸಂಯೋಜನೆಯ ಕಲಾಕೃತಿಗಳಾದ 'ಪರಸ್ಪರ' ಈ ಕಲಾಕೃತಿಯು ತೈಲ

ಕೆ.ವಿ.ಕಾಳೆ ಸಂಡೂರು, ಅವರ ಕಲಾಕೃತಿಗಳು





ವರ್ಣದ ಕಲಾಕೃತಿಯಾಗಿದೆ. ಹಳ್ಳಿಯ ಸೊಗಡಿನ ಕುಟುಂಬದಲ್ಲಿ ಚರ್ಚೆಯನ್ನು ಕುರಿತು ಹೇಳಲಾಗಿದೆ. ಇದೇ ರೀತಿಯಲ್ಲಿ ಟೇಮಿಂಗ್ ಎ ಸಿರ್ವರ್ಡ್, ಮೂರನೇ ಪ್ರಪಂಚ ಮತ್ತು ತಲೆಬರಹರಹಿತ ಕಲಾಕೃತಿಗಳು ಸಹ ಸಂಯೋಜನೆಯಲ್ಲಿ ಸಿದ್ಧಗೊಂಡಿವೆ. ಈ ಎಲ್ಲಾ ಕಲಾಕೃತಿಗಳಲ್ಲಿ ಚಿಕಣಿ ಚಿತ್ರಶೈಲಿಯನ್ನು ಮಿಶ್ರವಾಗಿ ಅಳವಡಿಸಿಕೊಂಡಿದ್ದಾರೆ.

ಅನಾಮಿಕನ ಸಾವು, ಯೋಧ, ಜೀವನದ ಸಂಜೆ ಮುಂತಾದವು ಪೂರ್ಣಭಾವ ಚಿತ್ರಣದ ಸೃಜನಾತ್ಮಕ ಕಲಾಕೃತಿಗಳಾಗಿವೆ. ಎಸ್. ಎಂ. ಪಂಡಿತ್, ನಾಯಿ, ವಂಟಿ ಸಲಗ ಇವು ನೈಜ ಸ್ವರೂಪದ ಭಾವಚಿತ್ರ, ನಿಸರ್ಗಚಿತ್ರಣಗಳಾಗಿವೆ. ಇವುಗಳಲ್ಲದೇ 'ಗೋವರ್ಧನ ಗಿರಿಧಾರಿ', ಧರ್ಮದ ನ್ಯಾಯಾಲಯದ ಕಡೆಗೆ, ಗಿರಿಜಾ ಕಲ್ಯಾಣ, ಅಲೆಮಾರಿ ಕಲಾಕೃತಿಗಳು ಚಿಕಣಿ ಚಿತ್ರಕಲಾಕೃತಿಗಳಾಗಿವೆ. ಇದಲ್ಲದೇ ಜಲವರ್ಣ ಮಾಧ್ಯಮದಲ್ಲಿಯೂ ಚಿತ್ರರಚನೆಯಾಗಿವೆ.

ಕೆ.ವಿ. ಕಾಳೆಯವರ ಕಲಾಕೃತಿಗಳಲ್ಲಿ ನೈಜ ಸ್ವರೂಪದ ಕಲಾಕೃತಿಗಳನ್ನು ಬಿಟ್ಟರೆ ಉಳಿದೆಲ್ಲಾ ಕಲಾಕೃತಿಗಳಲ್ಲಿ ಚಿಕಣಿ ಚಿತ್ರಕಲೆಯ ಪ್ರಭಾವ ಕಾಣಬಹುದಾಗಿದೆ. ವರ್ಣಸಂಯೋಜನೆಯಲ್ಲಿ ಪ್ರಥಮ ವರ್ಗದ ಬಣ್ಣಕ್ಕಿಂತಲೂ ಹೆಚ್ಚಾಗಿ ಮಿಶ್ರವರ್ಣವನ್ನು ಹೆಚ್ಚಾಗಿ ಲೇಪನ ಮಾಡಲಾಗಿದೆ. ಈ ನಮ್ಮ ಪಾರಂಪರಿಕ ಚಿತ್ರ ಶೈಲಿಯಲ್ಲಿ ಚಿಕಣಿ ಚಿತ್ರ ಪ್ರಭಾವ ಇವರ ಕಲಾಕೃತಿಗಳಲ್ಲಿ ಕಂಡುಬಂದರೂ ಕೆ.ವಿ. ಕಾಳೆಯವರು ತಮ್ಮದೇಯಾದ ಶೈಲಿಯಲ್ಲಿ ಕಲಾಕೃತಿಗಳನ್ನು ರಚಿಸಿದ್ದಾರೆ. ಈ ಚಿಕಣಿ ಚಿತ್ರಶೈಲಿಯಲ್ಲಿ ಕೆ.ವಿ. ಕಾಳೆಯವರು ಅಗಲವಾದ ಕಣ್ಣುಗಳು, ಕುಬ್ಜ ರೇಖಾಕೃತಿಗಳು, ವರ್ಣ ಸಂಯೋಜನೆ ಹೀಗೆ ಇವರದೇಯಾದ ಶೈಲಿಯಲ್ಲಿ ಕಲಾಕೃತಿಯನ್ನು ರಚನೆ ಮಾಡಿದ್ದಾರೆ.

೧೩. ಹಸೆ ಚಿತ್ರಕಲಾವಿದೆ ಶಿಲ್ಪಾ

ಹಸೆ ಎಂದರೆ ಶುಭಕಾರ್ಯಗಳಲ್ಲಿ ಹಾಕುವ ಪೀಠ, ರಂಗವಲ್ಲಿಯಿಂದ ಮಾಡುವ ಚಿತ್ರರಚನೆ ಎಂದು ಕನ್ನಡ ರತ್ನಕೋಶ ಹೇಳುತ್ತದೆ. ನಾವೀಗ ಹಸೆ ಚಿತ್ರ ಎಂದು ಕರೆಯುವ ಚಿತ್ರಗಳನ್ನು ಮದುವೆ, ಭೂಮಿ ಹುಣ್ಣಿಮೆ, ಹಬ್ಬ ಮುಂತಾಗಿ ಶುಭ ಕಾರ್ಯಗಳಲ್ಲೇ ರಚಿಸುವರು. ಹಸೆ ಚಿತ್ರಗಳು ರಂಗವಲ್ಲಿ ಅಲ್ಲದಿದ್ದರೂ ರಂಗವಲ್ಲಿಗೂ ಹಸೆ ಚಿತ್ರಕ್ಕೂ ಸಾಮ್ಯಗಳಿವೆ. ವಿವಿಧ ರೀತಿಗಳ ಗೆರೆಗಳು ಹೆಚ್ಚಾಗಿ ಚೌಕ ತ್ರಿಕೋನಗಳಲ್ಲೇ ಹಸೆಚಿತ್ರ ರಚನೆಯಾಗುತ್ತದೆ. ವೃತ್ತಿ, ಅರೆವೃತ್ತಿಗಳು ಬಳಕೆಯಾಗುವುದುಂಟು. ಆದರೆ ಬಳಕು ಭಾಗಗಳಲ್ಲಿ ಈ ಚಿತ್ರಗಳಲ್ಲಿ ರಂಗವಲ್ಲಿಗಿಂತ[೧೭] ರೇಖೆಗಳು ಭಿನ್ನವಾಗುತ್ತವೆ.

ಇಂತಹ ಒಂದು ಜನಪದ ಚಿತ್ರಕಲಾ ಪ್ರಕಾರವಾದ ಹಸೆಯ ಚಿತ್ರಕಲಾವಿದೆಯಾದ ಶಿಲ್ಪಾರವರು ಮೂಲತಃ ಶಿವಮೊಗ್ಗದವರು. ಡಬ್ಲ್ಯೂ. ಬಸವರಾಜ ಕಂಪ್ಲಿ ಎನ್ನುವವರನ್ನು ಮದುವೆಯಾಗಿದ್ದರಿಂದ ಬಳ್ಳಾರಿಜಿಲ್ಲೆಯ ಹೊಸಪೇಟೆತಾಲೂಕಿನ ಕಂಪ್ಲಿಗೆ ಬಂದ ನಂತರ ಶಿಲ್ಪಾ ತವರೂರಿನ ಚಿತ್ರಕಲಾ ಪ್ರಕಾರವಾದ ಹಸೆ ಚಿತ್ರಕಲೆಯನ್ನು ತಮ್ಮೊಂದಿಗೆ ತಂದಿದ್ದಾರೆ

೧೭. ಬಂದಗದ್ದೆ ರಾಧಾಕೃಷ್ಣ : ಹಸೆ, ಪುಟ – ೬

ಮತ್ತು ಇಲ್ಲಿನ ಪರಿಸರದ ಕೆಲವು ಆಕಾರಗಳೊಂದಿಗೆ ಹಸೆ ಚಿತ್ರಗಳಲ್ಲಿ ಅಳವಡಿಸಿಕೊಂಡು ಪ್ರಯೋತ್ಮಕವಾಗಿ ಹಲವಾರು ಹಸೆಚಿತ್ರಕೃತಿಗಳನ್ನು ರಚಿಸಿದ್ದಾರೆ.

ಹಸೆ ಚಿತ್ರಕಲೆಯನ್ನು ಮೂರು ರೀತಿಯಲ್ಲಿ ವಿಂಗಡಿಸಬಹುದು. ೧. ಮದುವೆ ಕಾರ್ಯಗಳಲ್ಲಿ ಬರೆಯುವ ಹಸೆಗೋಡೆ ಚಿತ್ತಾರ, ೨. ಮನೆಯ ಅಲಂಕಾರಕ್ಕಾಗಿ ಬರೆಯುವ ಚಿತ್ತಾರ, ೩. ಹಬ್ಬ-ಹರಿದಿನಗಳಲ್ಲಿ ಬರೆಯುವ ಚಿತ್ತಾರ. ಹೀಗೆ ಸಂದರ್ಭಕ್ಕೆ ಅನುಗುಣವಾಗಿ ಹಸೆಚಿತ್ರಕಲೆ ಅಲಂಕಾರಗೊಳ್ಳುತ್ತವೆ. ಆದರೆ ಹಸೆ ಚಿತ್ರಕಲೆಯ ಹವ್ಯಾಸಿ ಕಲಾವಿದೆಯಾದ ಇವರು ಯಾವ ಸಂದರ್ಭ ಸಮಾರಂಭಗಳಿಗೆ ಸೀಮಿತವಾಗಿರದೇ ಪ್ರತಿದಿನವು ತಪ್ಪದೇ ರಟ್ಟು, ಕಾಗದದ ಮೇಲೆ ಹಲವಾರು ಚಿತ್ರಗಳನ್ನು ಪ್ರಯೋಗಾತ್ಮಕವಾಗಿ ಚಿತ್ರಿಸುತ್ತಾರೆ. ಇವುಗಳಲ್ಲಿ ಐದು ಪ್ರಕಾರದಲ್ಲಿ ಹಸೆಚಿತ್ರ ಚಿತ್ತಾರಗೊಳ್ಳುತ್ತವೆ. ತೇರು ಆಕಾರದ ಹಸೆಚಿತ್ರ, ಬಣ್ಣಗಳ ಹಸೆ, ಬಿಳಿಹಸೆ, ಕೆಂಪು ಹಸೆ ಎಂಬ ಹಸಿ ಚಿತ್ತಾರಗಳಲ್ಲಿ ಬಣ್ಣಗಳ ಹಸೆ ಚಿತ್ತಾರದ ಪ್ರಕಾರಗಳಲ್ಲಿಯೇ ಇದರ ಹಸೆಚಿತ್ರ ಕಲಾಕೃತಿಯನ್ನು ರಚಿಸಿದ್ದಾರೆ. ಹಸೆ ಚಿತ್ತಾರವನ್ನು ಮೂರು ಅಥವಾ ಅದಕ್ಕೂ ಹೆಚ್ಚು ಬಣ್ಣಗಳನ್ನು ಉಪಯೋಗಿಸಿ ಅನುಕೂಲಕ್ಕೆ ತಕ್ಕಂತೆ ವಿವಿಧ ಭಂಗಿಯ ಆನೆ ಸಾಲು, ಕುಚ್ಚುಸಾಲು, ಗೊಂಬೆ, ತ್ರಿಕೋನಾಕೃತಿಯ ಮನುಷ್ಯ ಮತ್ತು ಪ್ರಾಣಿ ಚಿತ್ರಗಳು, ಮದುವೆ, ಪಲ್ಲಕ್ಕಿ, ಕಲ್ಲಿನ ರಥದ ವಿನ್ಯಾಸ, ದಿಬ್ಬಣ, ಹಕ್ಕಿಗಳು, ಎತ್ತು ಮುಂತಾದ ತಮ್ಮ ಬದುಕಿನಲ್ಲಿ ನಿತ್ಯಕಾಣುವ ದೃಶ್ಯಗಳೇ ಹಸೆ ಚಿತ್ರಕಲಾವಿದರ ವಸ್ತುಗಳಾಗಿವೆ.[೧೮]

ಚಿತ್ರ - ೧

ಇಲ್ಲಿ ನವಿಲು, ಆನೆ, ಮನುಷ್ಯಾಕೃತಿ ತ್ರಿಕೋನ, ಚೌಕವನ್ನು ಉಪಯೋಗಿಸಿಕೊಂಡು, ತಮ್ಮದೇಯಾದ ಶೈಲಿಯಲ್ಲಿ ಹಸೆಚಿತ್ತಾರ ಕೆಂಪು, ನೀಲಿ, ನಸಿ, ಕಪ್ಪು, ನೆರಳೆ ಬಣ್ಣಗಳು ಸಮಾನವಾಗಿ ಸಮತೋಲನೆಗೊಳ್ಳುವಂತೆ ಹರಡಿದ್ದಾರೆ. ಆದ್ದರಿಂದ ಈ ಒಂದು ಕಲಾಕೃತಿಯಲ್ಲಿ ಯಾವ ಕೊರತೆಯೂ ಕಾಣುವುದಿಲ್ಲ. ಸ್ಥಳಾವಕಾಶವನ್ನು ಪರಿಪೂರ್ಣವಾಗಿ ಉಪಯೋಗಿಸಿ ಕೊಂಡಿದ್ದಾರೆ.

ಚಿತ್ರ - ೨

ಇದನ್ನು ವೃತ್ತ, ತ್ರಿಕೋನ, ಮನುಷ್ಯಾಕೃತಿ ಮುಂತಾದ ಆಕಾರಗಳಿಂದ ಕಲಾಕೃತಿಯನ್ನು ರಚಿಸಿದ್ದಾರೆ. ಇಲ್ಲಿಯೂ ಎರಡು ಭಾಗದ ಸಮಾನಾಂತರದಲ್ಲಿ ಆಕಾರಗಳು ಬರುವುದರಿಂದ ಸಮತೋಲನೆಯನ್ನು ಕಾಪಾಡಲಾಗಿದೆ. ಚಿತ್ರಕೃತಿಯ ಮುಖ್ಯ ಆಕಾರಗಳೆಲ್ಲವನ್ನು ಕಪ್ಪು ಬಣ್ಣದಲ್ಲಿ ನಿರ್ಮಿಸಲಾಗಿ ಹಿಂದಣ ಸ್ಥಳಾವಕಾಶವನ್ನು ನೀಲಿಬಣ್ಣದಿಂದ ಲೇಪಿಸಲಾಗಿದೆ. ಹೀಗೆ ಹಲವಾರು ಆಕಾರಗಳನ್ನು ಉಪಯೋಗಿಸಿಕೊಂಡು ಪ್ರಯೋಗ ಮಾಡಿದ್ದಾರೆ. ಹರುಬಣ್ಣದಲ್ಲಿ ಮನೆ, ಮಕ್ಕಳು,

೧೮. ಡಬ್ಲ್ಯೂ. ಬಸವರಾಜ : ಸಂಯುಕ್ತ ಕರ್ನಾಟಕ ದಿನಪತ್ರಿಕೆ, ದಿನಾಂಕ ೧೬ ಡಿಸೆಂಬರ್ ೨೦೦೨



ಡಬ್ಲ್ಯೂ ಶಿಲ್ಪಾ ಕಂಪ್ಲಿ, ಅವರ ಕಲಾಕೃತಿಗಳು





ಆಟ, ರಂಗೋಲಿಯಾಕಾರದ ಹಸೆಚಿತ್ರ, ನೈಸರ್ಗಿಕ ರೂಪದ ಹಸೆಚಿತ್ರಕಲಾಕೃತಿ, ಅಂಬಾರಿಯ ಆನೆ, ಹೀಗೆ ಪ್ರಾಯೋಗಿಕ ಹಸೆಕಲಾಕೃತಿಗಳಾಗಿವೆ. ಮಲೆನಾಡಿನ ವಾತಾವರಣದ ತಮ್ಮ ಮನೆಯಲ್ಲಿ ಕಲಾಕೃತಿಗಳ ಮೂಲಕ ಹಸೆಚಿತ್ರಗಳನ್ನು ಬಿಂಬಿಸಿಕೊಂಡಿದ್ದಾರೆ. ಶಿಲ್ಪಾರವರು ಇಂತಹ ಅನೇಕ ಹಸೆಚಿತ್ರಗಳನ್ನು ಮುಂದಿನ ಪೀಳಿಗೆಗೆ ಮಾದರಿಯಾಗಿರಲೆಂದು ಕಾಗದದ ಮೇಲೆ ಚಿತ್ರಿಸಿ, ಆಧುನಿಕ ಬಣ್ಣಗಳಿಂದ ಚಿತ್ರ ರಚಿಸುವುದನ್ನು ರೂಢಿಸಿಕೊಂಡಿದ್ದಾರೆ. ಈ ಕಲೆಯನ್ನು ಕಲೆಯಲ್ಲ ಎಂದವರಿಗೆ ಕಲಿಸಲು ಮುಂದೆ ಬಂದಿದ್ದಾರಲ್ಲದೇ ಪ್ರದರ್ಶನವನ್ನು ಮಾಡಲಿದ್ದಾರೆ.

ಸಾಮಾನ್ಯ ಜನರ ಜೀವನ ಮಧ್ಯದಲ್ಲಿ ಸೆಲೆಯೊಡೆದು ಅವರ ಬಾಳನ್ನು ಅರ್ಥಗೊಳಿಸಿ ಮತ್ತೆ ಅಲ್ಲಿಯೇ ಇಂಗಿ ಹೋಗಿದ್ದ ಈ ಅಭಿವ್ಯಕ್ತಿ ಮಾಧ್ಯಮದ ಜನಪದ ಕಲೆಗಳು ಪಂಡಿತ ವರ್ಗದವರ ತಿರಸ್ಕಾರಕ್ಕೆ ಒಳಗಾಗಿವೆ. ಹಾಗೆಯೇ ಪುರಸ್ಕಾರಕ್ಕೂ ಒಳಗಾಗಿವೆ. ಇಂತಹ ಕಲೆಗಳನ್ನು ಜೀವಂತವಾಗಿಸುವುದು ತುಂಬಾ ಅವಶ್ಯವಾಗಿದೆ. ಈ ಚಿತ್ರಕಲೆಯನ್ನು ಪ್ರಾಯೋಗಿಕವಾಗಿ ಕಲಾವಿದರು ಸರಣಿ ಚಿತ್ರಕಲಾಕೃತಿಗಳನ್ನಾಗಿ ರಚಿಸುತ್ತಿರುವುದು ಕಾಣಬರುತ್ತಿದೆ.

೧೪. ಕಲಾವಿದ ನರಸಿಂಹ ಮೂರ್ತಿ

ಅಖಂಡ ಭಾರತದ ೧೦೦ ಇತಿಹಾಸಿಕ ಸ್ಥಳಗಳು ಹಾಗೂ ದೇವಸ್ಥಾನಗಳನ್ನು ಬಾಲ್‌ಪೆನ್ನಿನಿಂದ ಅಂಗೈ ಅಗಲದ ಹಾಳೆಯ ಮೇಲೆ ರೇಖಾಚಿತ್ರದಲ್ಲಿ ಚಿತ್ರಿಸಿರುವ ಇವರು ಬಳ್ಳಾರಿಯ ರೇಡಿಯೋಪಾರ್ಕ್‌ನಲ್ಲಿ ನೆಲೆಸಿದ್ದಾರೆ. ೩೬ ವರ್ಷದ ಹರೆಯರಾದ ಇವರು ಪ್ರಾಥಮಿಕ ಶಿಕ್ಷಣವನ್ನು ಗಡಿನಾಡು ಸ್ವಗ್ರಾಮ ಎಳ್ಳಾರ್ತಿಯಲ್ಲಿ, ಪ್ರೌಢ ಹಾಗೂ ಪದವಿ ಪೂರ್ವ ಶಿಕ್ಷಣವನ್ನು ಬಳ್ಳಾರಿಯಲ್ಲಿ ಪೂರಿಸಿದರು. ಬಳಿಕ ಚಿತ್ರಕಲೆಯತ್ತ ಅಭಿರುಚಿ ಬೆಳೆಸಿಕೊಂಡ ಇವರು, ನಗರದಲ್ಲಿರುವ ಭವಾನಿ ಆರ್ಟ್ ಕಾಲೇಜಿಗೆ ಸೇರಿ, ಚಿತ್ರಕಲಾ ಪದವಿ ಪಡೆದರು. ಬಳಿಕ ಚಿತ್ರಕಲೆಯಿಂದಲೇ ಬದುಕು ರೂಪಿಸಿಕೊಳ್ಳಬೇಕು ಎಂಬ ಸಂಕಲ್ಪದಿಂದ ಕೆಂಚಪ್ಪ ಪ್ರೌಢಶಾಲೆಯ ಚಿತ್ರಕಲಾ ಶಿಕ್ಷಕರಾಗಿ ಸೇವೆ ಆರಂಭಿಸಿದರು.

ತಂದೆ ರಾಘವೇಂದ್ರ ರಾವ್, ತಾಯಿ ಶ್ವೇತಾರಾಣಿಯವರ ಪ್ರೋತ್ಸಾಹವು ಅಪಾರವಾದದ್ದು, ಕಲಾವಿದನ ಚಿತ್ರಕಲೆಗಳು ಶಾಲೆಗೆ ಕೊಠಡಿಗಷ್ಟೇ ಸೀಮಿತಗೊಳ್ಳದೆ ಬಳ್ಳಾರಿ ಜಿಲ್ಲೆ ಮತ್ತು ನೆರೆಯ ಆಂಧ್ರಪ್ರದೇಶದ ೯೦ಕ್ಕೂ ಹೆಚ್ಚು ಶಾಲೆಗಳ ಗೋಡೆಯ ಮೇಲೆ ಇವರ ಚಿತ್ರಗಳು ರಾರಾಜಿಸುತ್ತಿವೆ. ತೈಲವರ್ಣದಲ್ಲಿ ಬರಗಾಲ ಸನ್ನಿವೇಶಗಳು, ಜಲವರ್ಣದಿಂದ ಗ್ರಾಮೀಣ ಬದುಕಿನ ಸೊಗಡು, ಮಹಿಳೆಯರ ಮೇಲೆ ನಡೆಯುವ ಶೋಷಣೆ, ಭ್ರಷ್ಟಾಚಾರದಲ್ಲಿ ಬಳಲುತ್ತಿರುವ ಭಾರತದ ಸ್ಥಿತಿಗತಿ, ಭಯೋತ್ಪಾದನೆಯ ವಿಕಾರ ರೂಪಗಳು ಮತ್ತಿತರ ಸಮಾಜಿಕ ಸಮಸ್ಯೆಗಳನ್ನು ರೇಖಾ ಹಾಗೂ ತೈಲವರ್ಣದಲ್ಲಿ ಪ್ರೇಯಸಿ ಪ್ರೇಮಿಗಾಗಿ ಕಾಯುವ, ಒಂಟಿತನದಿಂದ ಬಳಲುವ ಸನ್ನಿವೇಶಗಳನ್ನು ಫ್ಯಾಬ್ರಿಕ್ ಪೇಂಟಿಂಗ್‌ನಲ್ಲಿ ಚಿತ್ರಿಸಿರುವ ನರಸಿಂಹ ಮೂರ್ತಿ, ಚಿತ್ರಕಲಾ





ನರಸಿಂಹಮೂರ್ತಿ ಎ ಬಳ್ಳಾರಿ, ಕಲಾಕೃತಿಗಳೊಂದಿಗೆ




ಕ್ಷೇತ್ರದಲ್ಲಿ ದೊಡ್ಡ ಸಾಧನೆ ಮಾಡಬೇಕು ಎಂಬ ಹಂಬಲ ಹೊಂದಿದ್ದಾರೆ. ಇವರು ಜಿಲ್ಲೆಯಲ್ಲಿ ನಡೆದ ಹಲವಾರು ಚಿತ್ರಕಲಾ ಪ್ರದರ್ಶವನ್ನು ಮಾಡಿದ್ದಾರೆ. ಕಲಾಕ್ಷೇತ್ರಕ್ಕೆ ತಮ್ಮದೇಯಾದ ಕೊಡುಗೆಯನ್ನು ಕೊಟ್ಟಿದ್ದಾರೆ. ಮತ್ತು ಇತ್ತೀಚೆಗೆ ರಾಜ್ಯಮಟ್ಟದ ಚಿತ್ರಕಲಾ ರತ್ನ ಪ್ರಶಸ್ತಿ ನೀಡಿ ಗೌರವಿಸಿದೆ.

೧೫. ಛಾಯಾಚಿತ್ರಕಾರ ಪಂಪಯ್ಯಸ್ವಾಮಿ ಮಳೇಮಠ

ಪಂಪ್ಯಯಸ್ವಾಮಿ ಮಳೇಮಠರವರು ಶೈಕ್ಷಣಿಕವಾಗಿ ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ ಹೊಂದಿದ್ದರೂ ವೃತ್ತಿಯಲ್ಲಿ ವ್ಯಾಪಾರಿ, ಪ್ರವೃತ್ತಿಯಲ್ಲಿ ಉತ್ತಮವಾದ ಹವ್ಯಾಸಿ ವನ್ಯಜೀವಿ ಛಾಯಾಚಿತ್ರ ಗ್ರಾಹಕರು. ಕಮಲಾಪುರದ ಪಂಪಯ್ಯಸ್ವಾಮಿ ಮಳೇಮಠರವರು ೨೦-೦೪-೧೯೬೯ರಲ್ಲಿ ಸಿದ್ಧಲಿಂಗಯ್ಯಸ್ವಾಮಿ ಮಳೇಮಠ, ತಾಯಿ ಶಾಂತಮ್ಮ ಮಳೇಮಠದವರ ಮಗನಾಗಿ ಜನಿಸಿದರು. ಶಾಲಾ, ಕಾಲೇಜು ದಿನದಿಂದಲೂ ಪ್ರಕೃತಿಯ ಶೊಭಗು ಮತ್ತು ವನ್ಯಜೀವಿಗಳನ್ನು ಆಶ್ಚರ್ಯದಿಂದ ವೀಕ್ಷಿಸುವಂತಹ ಗೀಳು ಇವರದು. ಈ ಒಂದು ಗೀಳು ಮುಂದೆ ಸಾಗುತ್ತಾ, ಇಂದು ತುಂಬಾ ಸುಂದರವಾಗಿ ಪ್ರಾಣಿ-ಪಕ್ಷಿಗಳನ್ನು ಸೆರೆಹಿಡಿದಿದ್ದಾರೆ.

ಈ ಒಂದು ಛಾಯಾಚಿತ್ರಗಗಳ ಗ್ರಾಹಣದಲ್ಲಿ ಕರಡಿ, ನವಿಲು, ಸೂರ್ಯಸ್ತ, ಸೂರ್ಯೋಧಯ, ವಿಶೇಷ ಭಂಗಿಯ ನವಿಲು, ಪಕ್ಷಿ, ಕಲ್ಲಾಮೆ, ಹೂಗಳನ್ನು ಸುಂದರವಾಗಿ ಸೆರೆಹಿಡಿದಿದ್ದಾರೆ. ಈ ಕುರಿತು ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ವನ್ಯಜೀವಿ ಸಂರಕ್ಷಣೆ ಮತ್ತು ಪರಿಸರ ಪ್ರಜ್ಞೆ ಜಾಗೃತಿ ಕುರಿತು ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆ ನೀಡುತ್ತಿದ್ದಾರೆ. ಈ ಒಂದು ಕಲೆಗೆ ಕರ್ನಾಟಕ ಫೋಟೋಗ್ರಾಫಿಕ್ ಅಸೋಶಿಯೇಷನ್ ಮತ್ತು ಯುತ್ ಫೋಟೋಗ್ರಾಫಿಕ್ ಸೊಸೈಟಿ, ಬೆಂಗಳೂರು ಇವರು ಆಯೋಜಿಸಿದ ರಾಷ್ಟ್ರಮಟ್ಟದ ವನ್ಯಜೀವಿ ಛಾಯಾಚಿತ್ರ ಸ್ಪರ್ಧೆಯಲ್ಲಿ ಆಯ್ಕೆಯಾದ ಹಲವು ಛಾಯಾಚಿತ್ರಗಳು ಪ್ರದರ್ಶನಗೊಂಡಿವೆ.

ಒಟ್ಟಾರೆ ಬಳ್ಳಾರಿ ಜಿಲ್ಲೆಯು ದೃಶ್ಯಕಲಾ ಕ್ಷೇತ್ರಕ್ಕೆ ನೀಡಿದ ಕೊಡುಗೆ ಗಮನಾರ್ಹವಾದುದಾಗಿದೆ. ಭವ್ಯ ಕಲಾಪರಂಪರೆಯನ್ನು ಹೊಂದಿದ ಈ ಪ್ರದೇಶ ಸಮಕಾಲೀನ ಸಂದರ್ಭದಲ್ಲಿ ಈ ಪರಂಪರೆಯ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಿರುವುದು ಕಂಡುಬರುತ್ತದೆ. ಈ ಜಿಲ್ಲೆಯಲ್ಲಿ ಪ್ರಾರಂಭವಾದ ಕನ್ನಡ ವಿಶ್ವವಿದ್ಯಾಲಯ ಕನ್ನಡದ ಕಾರ್ಯದೊಂದಿಗೆ ಗಮನಾರ್ಹವಾದ ಸಂಶೋಧನೆಯನ್ನು ಕೈಗೊಂಡಿದೆ. ಹಾಗೆಯೇ ಲಲಿತಕಲೆಗಳ ಕುರಿತಾಗಿಯೂ ಗಂಭೀರವಾದ ಸಂಶೋಧನೆ ಮತ್ತು ಬೋಧನೆಯನ್ನು ಜೊತೆ ಜೊತೆಯಾಗಿ ನಿರ್ವಹಿಸುತ್ತ ಬಂದಿದೆ. ರಾಜ್ಯದ ಕಲಾಶಿಕ್ಷಣ ಸಂಸ್ಥೆಗಳನ್ನು ತನ್ನ ವ್ಯಾಪ್ತಿಯಲ್ಲಿ ಪರೀಕ್ಷೆ, ಪಠ್ಯಕ್ರಮ, ಡಿಪ್ಲೊಮಾ ಮತ್ತು ಪದವಿಗಳನ್ನು ನೀಡುವ ಮಹತ್ವದ ಕಾರ್ಯವನ್ನು ನೀಡುತ್ತಲಿದೆ. ಹಾಗೆಯೇ ಇನ್ನುಳಿದಂತೆ ಈ ಜಿಲ್ಲೆಯಲ್ಲಿರುವ ಚಿತ್ರಕಲಾ ಸಂಸ್ಥೆಗಳು ದೃಶ್ಯಕಲಾ ಶಿಕ್ಷಣದ ಪ್ರಸಾರದಲ್ಲಿ ಕಾರ್ಯನಿರತವಾಗಿವೆ.






ಪಂಪಯ್ಯ ಸ್ವಾಮಿ ಕಮಲಾಪುರ, ಅವರ ಛಾಯಾ ಚಿತ್ರಗಳು

ಹಾಗೆಯೇ ಈ ಜಿಲ್ಲೆಯ ಕಲಾವಿದರು ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಖ್ಯಾತಿಯನ್ನು ಗಳಿಸಿದ್ದಾರೆ. ರಾಜ್ಯದ ಪ್ರತಿಷ್ಠಿತ ಲಲಿತಕಲಾ ಅಕಾಡೆಮಿ ಅಧ್ಯಕ್ಷರಾಗಿ ಕಲಾವಿದ ವಿ.ಟಿ. ಕಾಳೆಯವರು ಕಾರ್ಯನಿರ್ವಹಿಸಿದ್ದಾರೆ. ಅನೇಕ ಜನ ಹಿರಿಯ ಕಲಾವಿದರು ಅಕಾಡೆಮಿಯ ಸದಸ್ಯರಾಗಿ ಮತ್ತು ರಾಜ್ಯೋತ್ಸವ ಮುಂತಾದ ಪ್ರಶಸ್ತಿಗೆ ಬಾಜೀನರಾಗಿದ್ದಾರೆ. ಆದರೆ ಕಲಾವಿದರಿಗೆ ಸಿಗಬೇಕಾದ ಮಾಶಾಸನ ಮುಂತಾದ ಆರ್ಥಿಕ ನೆರವುಗಳು ತುಂಬಾ ಕಷ್ಟದಲ್ಲಿರುವ ಹಿರಿಯ ಕಲಾವಿದರಿಗೆ ಸಿಗಬೇಕಾದ ಅನಿವಾರ್ಯತೆ ಇದೆ. ಇದ್ಯಾವುದಕ್ಕೂ ಯೋಚಿಸದೆ ತಮ್ಮ ಕಲೆಯ ಕಾಯಕನಿಷ್ಠೆಯಲ್ಲಿ ಅನೇಕ ಹಿರಿಯ ಕಲಾವಿದರು ಸೇವೆ ಸಲ್ಲಿಸುತ್ತಿರುವುದು ಈ ಕ್ಷೇತ್ರಕ್ಕಿರುವ ಅವರ ಅಭಿಮಾನ ಪ್ರತೀಕವೆಂದು ಹೇಳಬೇಕಾಗುತ್ತದೆ.

⌘ ⌘ ⌘ ⌘

ಅಧ್ಯಾಯ : ಹತ್ತು

ಸಮಾರೋಪ

ಭಾರತದ ಚಿತ್ರಕಲಾ ಇತಿಹಾಸದಲ್ಲಿ ಸಾಸಂಪ್ರದಾಯಿಕ ಚಿತ್ರಕಲೆಗೆ ಮಹತ್ವದ ಸ್ಥಾನವಿರುವಂತೆ ಆಧುನಿಕ ಚಿತ್ರಕಲಾ ಪ್ರಕಾರಗಳು ಬೆಳೆಯುತ್ತಿವೆ. ಇದರಂತೆ ಕರ್ನಾಟಕವು ಚಿತ್ರಕಲೆಗೆ ಬಹುಮುಖ್ಯ ಕೊಡುಗೆ ನೀಡಿದೆ. ಈ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯ ಚಿತ್ರಕಲೆಯು ಪ್ರಾಗೈತಿಹಾಸ ಕಾಲದಿಂದ ಹಿಡಿದು ಆಧುನಿಕ ಕಾಲಾವಧಿಯವರೆಗೂ ಬೆಳೆದುಬಂದ ಕ್ರಮವನ್ನು ಸಂಕ್ಷಿಪ್ತವಾಗಿ ವಿವರಿಸುವ ಪ್ರಯತ್ನ ನಡೆದಿದೆ. ಗವಿವರ್ಣ ಮತ್ತು ಬಯಲು ಬಂಡೆ ಚಿತ್ರಗಳನ್ನು ಪ್ರಾಗೈತಿಹಾಸಿಕ ಕಾಲದಲ್ಲಿ ಬೇರೆ ಬೇರೆ ಕಾಲಘಟ್ಟಗಳಲ್ಲಿ ಆದಿಮನು ತನ್ನದೇಯಾದ ಅಂದಿನ ಆಶಯಗಳನ್ನು ಚಿತ್ರಪ್ರಕಾರ ಮೂಲಕ ಲಭ್ಯವಿದ್ದ ಪರಿಕರಗಳಿಂದ ಆಕೃತಿಗಳಿಂದ, ಬಿಂಬಿಸುವುದರ ಮೂಲಕ ತನ್ನತನವನ್ನು ಮೆರೆದಿದ್ದಾನೆ.

ಈ ಪ್ರಾಗೈತಿಹಾಸಿಕ ಚಿತ್ರಕಲೆಯು ಮುಂದುವರೆದು ಜನಪದ ಚಿತ್ರಕಲಾ ಪ್ರಕಾರವಾಗಿ ಧಾರ್ಮಿಕ, ವೃತ್ತಿ, ಸೌಂದರ್ಯೋಪಾಸನೆಯಲ್ಲಿ ಸಾಂದರ್ಭಿಕವಾಗಿ ರಂಗೋಲಿ, ಹಚ್ಚೆ, ಕಸೂತಿಯಂತಹ ಕಲೆಗಳಿಗೆ ಪ್ರೇರಣೆಯಾಗಿ ಈ ಕಲೆ ಹುಟ್ಟಿ ಬೆಳೆದು ಉಳಿದು ಬಂದಿದೆ. ಮುಂದೆ ಶಿಷ್ಟ ಸಾಂಪ್ರದಾಯಿಕ ವಿಜಯನಗರ ಕಾಲದ ಭಿತ್ತಿಚಿತ್ರಕಲೆಗಳಿಗೂ ಅವುಗಳದೇ ಆದ ಮಹತ್ವದ ಸ್ಥಾನವನ್ನು ಪಡೆದುಕೊಂಡವು. ಈ ಪ್ರದೇಶದ ಜನರ ಜೀವನ ವಿಧಾನ, ಆಚಾರ-ವಿಚಾರ, ನಂಬಿಕೆ ಮುಂತಾದವುಗಳು ಅವರ ಭಿತ್ತಿಚಿತ್ರಗಳ ರಚನೆ ಮೇಲೆ ಪ್ರಭಾವ ಬೀರಿ ಈ ಪರಂಪರೆಯು ವೈವಿಧ್ಯಮಯವಾಗಿ ರೂಪುಗೊಂಡಿದೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯ

ಹಸ್ತಪ್ರತಿಯ ಮಾಧ್ಯಮದಲ್ಲಿಯೂ ಚಿತ್ರಕಲೆಯ ರಚನೆಯಾಗಿದ್ದು, ಹಲವಾರು ಜನಪದ ಜಾಮಿತಿಕ ಅಲಂಕಾರಿಕ ಮುಂತಾದವು ವಿಷಯವಾಗಿವೆ. ಹಾಗೆಯೇ ಈ ವಿಶ್ವವಿದ್ಯಾಲಯದ ಸಂಶೋಧನೆ ಸಂಶೋಧನೇತರವಾಗಿ ಕಲಾಸಾಹಿತ್ಯವಾಗಿ ಕೊಡುಗೆಯಾಗಿವೆ.

ಪ್ರಸ್ತುತ ಸಮಕಾಲೀನ ಕಲೆ, ಕಲಾವಿದರು ಕುರಿತಾದ ಅಮೂಲ್ಯವಾದ ಸಾಧನೆಯ ಮಾಹಿತಿಯನ್ನು, ಅವರ ಚಿಂತನಶೀಲ ವಿಚಾರಗಳನ್ನು ಅವರ ಕಲಾಕೃತಿಗಳಲ್ಲಿ ಮೌಲಿಕರಿಸಿದ್ದಾರೆ. ಹೀಗೆ ಎಲ್ಲಾ ಚಿತ್ರಕಲಾ ಪ್ರಕಾರಗಳನ್ನು ಬಹುಮುಖ್ಯವಾಗಿ ಚರ್ಚಿಸಿ ದಾಖಲಿಸುವುದು ತುಂಬಾ ಅವಶ್ಯಕವಾಗಿದೆ.

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಪ್ರಸ್ತುತ ಅಧ್ಯಾಯದಲ್ಲಿ ಈ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ಅಧ್ಯಯನದ ವೈಧಾನಿಕತೆಯನ್ನು ಇಲ್ಲಿ ವಿವರಿಸಲಾಗಿದೆ.

ಅಧ್ಯಾಯ : ಎರಡು

ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಪರಿಸರ ಮತ್ತು ಲಲಿತಕಲೆಗಳು

ಬಳ್ಳಾರಿ ಜಿಲ್ಲೆಯ ಪರಿಸರದಲ್ಲಿ ಬೆಳೆದು ಬಂದ ಲಲಿತಕಲೆಗಳನ್ನು ಅಧ್ಯಯನ ನಡೆಸಿ ಪ್ರಮುಖವಾಗಿ ಚಿತ್ರಕಲೆ ಕುರಿತಂತೆ ಅಧ್ಯಯನ ಮಾಡಲಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಗಟ್ಟಿಯಾದ ಪೀಠಿಕೆಯ ರೂಪದಲ್ಲಿ ಬಳ್ಳಾರಿ ಜಿಲ್ಲೆಯ ರಾಜಕೀಯ, ಐತಿಹಾಸಿಕ, ಧಾರ್ಮಿಕ, ನೈಸರ್ಗಿಕ ಪರಿಸರದ ಹಿನ್ನೆಲೆಯಲ್ಲಿ ರಾಜಾಶ್ರಯದಲ್ಲಿ ಮತ್ತು ಜನಪದರ ಬದುಕಿನಲ್ಲಿ ಅರಳಿ ಬಂದ ಲಲಿತಕಲೆಗಳನ್ನು ಚಿತ್ರಕಲೆಯ ನೆಲೆಯಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ : ಮೂರು

ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ

ಬಳ್ಳಾರಿಯಲ್ಲಿ ಆದಿಮಾನವನ ಚಿತ್ರಗಳನ್ನು ಕುರಿತಂತೆ ಪ್ರಾಗೈತಿಹಾಸಿಕ ನೆಲೆಗಳಾದ ಸಂಗನಕಲ್ಲು, ಕಪ್ಪುಗಲ್ಲು, ಮೆಟ್ರಿ, ಹಂಪಿ, ವೆಂಕಟಾಪುರ, ಕಾರಿಗನೂರು, ಕನ್ನಡ ವಿಶ್ವವಿದ್ಯಾಲಯ ಆವರಣದ ಗಿರಿಸೀಮೆ, ಏಕಶಿಲಾ ಬಂಡೆ ಮುಂತಾದ ನೆಲೆಗಳಲ್ಲಿ ವರ್ಣಚಿತ್ರಕಲೆ ಮತ್ತು ರೇಖಾಚಿತ್ರಗಳನ್ನು ಗುರುತಿಸಿ ಅಧ್ಯಯನ ಮಾಡಲಾಗಿದೆ. ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆಯನ್ನು ಕುರಿತಂತೆ ಎರಡು ವಿಧದಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಒಂದು ಕುಟ್ಟಿದ ಗೀರು ಚಿತ್ರಕಲೆ, ಎರಡು ವರ್ಣಚಿತ್ರಕಲೆ

ಕುಟ್ಟಿದ ಗೀರು ಚಿತ್ರಕಲೆ : ಕುಟ್ಟಿ/ಗೀರು ಅಥವಾ ಕುಟ್ಟಿದ ಚಿತ್ರಗಳು ಮೇಲೆ ಕಾಣಿಸಿದ

[illegible]

ಕಪ್ಪುಗಲ್ಲು, ಮೆಟ್ರಿ, ಕಾರಿಗನೂರು, ಎತ್ತಿನಬೂದಿಹಾಳ್, ಬೆಳಗಲ್, ವಿಂಚೇರಿ, ಸಂಜರಾಯನ ಕೋಟೆಗಳಲ್ಲಿ ಕಂಡುಬರುತ್ತವೆ. ಮಾನವ, ಪ್ರಾಣಿ ಪಕ್ಷಿಗಳ ಚಿತ್ರಗಳು ಕಂಡುಬರುತ್ತವೆ. ಇವುಗಳನ್ನು ಚಿತ್ರಕಲೆಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ.

ವರ್ಣಚಿತ್ರಕಲೆ : ಪ್ರಾಗೈತಿಹಾಸಿಕ ರೇಖಾಚಿತ್ರಗಳಂತೆ ಈ ಜಿಲ್ಲೆಯಲ್ಲಿ ವರ್ಣಚಿತ್ರಗಳನ್ನು ಕೂಡ ರಚಿಸಲಾಗಿದೆ. ಇವುಗಳಲ್ಲಿ ವರ್ಣರೇಖಾ ಚಿತ್ರ ಮತ್ತು ವರ್ಣ ಲೇಪಿತ ನೆರಳು ಬೆಳಕಿನ ಚಿತ್ರಗಳ ರಚನೆಗಳನ್ನು ವಿಶೇಷವಾಗಿ ಚಿತ್ರಗಳ ವಸ್ತುವಿಷಯ ಮುಂತಾದ ಅಂಶಗಳನ್ನು ಗಮನಿಸಿ ಅಧ್ಯಯನ ಕೈಗೊಳ್ಳಲಾಗಿದೆ.

ಅಧ್ಯಾಯ : ನಾಲ್ಕು

ಬಳ್ಳಾರಿ ಜಿಲ್ಲೆಯ ಜನಪದ ಚಿತ್ರಕಲೆ

ಜನಪದರ ವಿವಿಧ ಸಂಪ್ರದಾಯದ ಆಚರಣೆಯ ಸಂದರ್ಭಗಳಲ್ಲಿ ಹುಟ್ಟಿಕೊಂಡ ಚಿತ್ರಕಲೆಯನ್ನು ಉದಾ: ರಂಗೋಲಿ. ಮದರಂಗಿ, ಹುಲಿವೇಷ, ಕೌದಿ, ಕಸೂತಿ, ದೊಡ್ಡಾಟ, ಮುಖವರ್ಣಿಕೆ ಮುಂತಾದ ಕಲೆಗಳು ಜನಜೀವನದಲ್ಲಿ ಹಾಸುಹೊಕ್ಕಾಗಿದ್ದು, ಇಂತಹ ಕಲೆಗಳ ಹುಟ್ಟು, ಬೆಳವಣಿಗೆ, ವಿವಿಧ ಪ್ರಕಾರಗಳು, ಚಿತ್ರರಚನಾ – ವಿಧಿವಿಧಾನ, ವಸ್ತುವಿಷಯ, ನಂಬಿಕೆ, ಆಚರಣೆ, ಸಂಪ್ರದಾಯ ಇತ್ಯಾದಿ ಹಲವಾರು ಜಾನಪದೀಯ ಅಂಶಗಳ ಹಿನ್ನೆಲೆಯಲ್ಲಿ ಪ್ರಸ್ತುತ ಜಿಲ್ಲೆಯ ಜನಪದ ಚಿತ್ರಕಲಾ ಸಂಪ್ರದಾಯವನ್ನು ಕುರಿತು ಈ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ : ಐದು

ಬಳ್ಳಾರಿ ಜಿಲ್ಲೆಯ ಭಿತ್ತಿಚಿತ್ರಕಲೆ

ಬಳ್ಳಾರಿ ಜಿಲ್ಲೆಯ ಶಿಷ್ಟಪದ ಚಿತ್ರಕಲೆಯನ್ನು ಎರಡು ರೀತಿಯಲ್ಲಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ.

೧. ಪ್ರಾಚೀನ ಭಿತ್ತಿಚಿತ್ರಕಲೆ: ಹಂಪೆ, ಆನೆಗೊಂದಿ, ಕನಕಗಿರಿ ಮುಂತಾದ ಕಡೆಗಳಲ್ಲಿ ರಚನೆಯಾದ ಪ್ರಾಚೀನ ಭಿತ್ತಿಚಿತ್ರಕಲೆಗಳು, ಇವುಗಳ ಕಾಲ, ವಸ್ತುವಿಷಯ ಇತ್ಯಾದಿಗಳನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

೨. ಆಧುನಿಕ ಭಿತ್ತಿಚಿತ್ರಕಲೆ : ಸಮಕಾಲೀನ ಸಂದರ್ಭದಲ್ಲಿ ರಚನೆಯಾದ ಆಧುನಿಕ ಭಿತ್ತಿಶಿಲ್ಪ, ಚಿತ್ರಗಳು, ಮ್ಯೂರಲ್ಸ್‌ಗಳನ್ನು ಸ್ಥೂಲವಾಗಿ ಗಮನಿಸಲಾಗಿದೆ. ಹೊಸಪೇಟೆ, ಕನ್ನಡ ವಿಶ್ವವಿದ್ಯಾಲಯ ಮುಂತದ ನೆಲೆಗಳಲ್ಲಿ ಈ ರೀತಿಯ ಮ್ಯೂರಲ್‌ಗಳು ರಚನೆಗೊಂಡಿದ್ದು, ಈ ಮೇಲಿನ ಎರಡು ಸಾಂಪ್ರದಾಯಿಕ ಭಿತ್ತಿಚಿತ್ರಕಲೆಗಳನ್ನು ಕುರಿತು ವಿವೇಚಿಸಲಾಗಿದೆ.

ಅಧ್ಯಾಯ : ಆರು

ಬಳ್ಳಾರಿ ಜಿಲ್ಲೆಯ ಹಸ್ತಪ್ರತಿ ಚಿತ್ರಕಲೆ

ಬಳ್ಳಾರಿ ಜಿಲ್ಲೆಯಲ್ಲಿ ಸಂಗ್ರಹಗೊಂಡ ಶೈವ, ವೈಷ್ಣವ, ಜೈನ ಮುಂತಾದ ವಿವಿಧ ಧರ್ಮದ ಹಸ್ತಪ್ರತಿಗಳಲ್ಲಿ ಚಿತ್ರಕಲೆಯು ರಚನೆಗೊಂಡಿದ್ದು, ಅವುಗಳನ್ನು ವ್ಯವಸ್ಥಿತವಾಗಿ ವರ್ಗೀಕರಿಸಿಕೊಂಡು ಅಧ್ಯಯನ ಮಾಡಲಾಗಿದೆ. ಈ ಹಸ್ತಪ್ರತಿಯ ಚಿತ್ರಕಲೆಯಲ್ಲಿ ವಿವಿಧ ಜ್ಯಾಮಿತಿ ಆಕೃತಿಯ ಚಿತ್ರಕಲೆ, ರೇಖಾಚಿತ್ರಕಲೆ, ಕಥಾ ಆಧಾರಿತ ಚಿತ್ರಕಲೆ, ಅಲಂಕಾರಿಕ ಚಿತ್ರಕಲೆ, ಉದ್ಧರಣಿ ಚಿತ್ರಕಲೆ ಹೀಗೆ ಮುಂತಾದ ಚಿತ್ರಗಳ ಕುರಿತು ವಸ್ತುವಿಷಯ ಮುಂತಾದ ಅಂಶಗಳನ್ನು ಈ ಅಧ್ಯಾಯದಲ್ಲಿ ಅಧ್ಯಯನಕ್ಕೊಳಪಡಿಸಲಾಗಿದೆ.

ಅಧ್ಯಾಯ : ಏಳು

ಬಳ್ಳಾರಿ ಜಿಲ್ಲೆಯ ಚಿತ್ರಕಲಾ ಸಾಹಿತ್ಯ

ಬಳ್ಳಾರಿ ಜಿಲ್ಲೆಯಲ್ಲಿ ಭಿತ್ತಿ ಮುಂತಾದ ಮಾಧ್ಯಮದಲ್ಲಿ ರಚನೆಯಾದ ಚಿತ್ರಗಳು ಮಾತ್ರವಲ್ಲದೇ ಚಿತ್ರಕಲೆ ಕುರಿತು ಬಂದ ಸಾಹಿತ್ಯವನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅವುಗಳನ್ನು ಪ್ರಮುಖವಾಗಿ ಎರಡು ರೀತಿಯಾಗಿ ವಿಂಗಡಿಸಿಕೊಳ್ಳಲಾಗಿದೆ. ೧. ಪ್ರಕಟಿತ ಚಿತ್ರಕಲಾ ಸಾಹಿತ್ಯ, ೨. ಅಪ್ರಕಟಿತ ಚಿತ್ರಕಲಾ ಸಾಹಿತ್ಯ.

೧. ಪ್ರಕಟಿತ ಚಿತ್ರಕಲಾ ಸಾಹಿತ್ಯದಲ್ಲಿ ೧. ಸಂಶೋಧನಾ ಚಿತ್ರಕಲಾ ಸಾಹಿತ್ಯ, ೨. ಸಂಶೋಧನೇತರ ಚಿತ್ರಕಲಾ ಸಾಹಿತ್ಯ ಕುರಿತಂತೆ ವಿಂಗಡಣೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ. ಅಪ್ರಕಟಿತ ಚಿತ್ರಕಲಾ ಸಾಹಿತ್ಯದಲ್ಲಿ ಮತ್ತೆರಡು ಭಾಗವಾಗಿ ಮಾಡಿಕೊಳ್ಳಲಾಗಿದೆ.

೧. ಸಂಶೋಧನಾ ಚಿತ್ರಕಲಾ ಸಾಹಿತ್ಯ, ೨. ಸಂಶೋಧನೇತರ ಚಿತ್ರಕಲಾ ಸಾಹಿತ್ಯ ಎಂದು ವಿಂಗಡನೆ ಮಾಡಿಕೊಳ್ಳಲಾಗಿದೆ. ಸಂಶೋಧನಾ ಸಾಹಿತ್ಯದಲ್ಲಿ ಮತ್ತೆ ಪದವಿ ಹಂತದ ೧. ಬಿ.ವಿ.ಎ. ಮತ್ತು ಬಿ.ವಿ.ಈಡಿ ಕಿರುಪ್ರಬಂಧ, ೨. ಸ್ನಾತಕೋತ್ತರ ಪದವಿ ಹಂತದ ಎಂ.ವಿ.ಎ ಕಿರುಪ್ರಬಂಧಗಳು, ೩. ಎಂ.ಫಿಲ್ ಸಂಪ್ರಬಂಧ, ೪. ಡಿ.ಲಿಟ್. ಮಹಾಪ್ರಬಂಧ, ೫. ಪಿಹೆಚ್.ಡಿ ಮಹಾಪ್ರಬಂಧ ಎಂದು ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ. ಸಂಶೋಧನೇತರ ಚಿತ್ರಕಲಾ ಸಾಹಿತ್ಯದಲ್ಲಿ ವ್ಯಕ್ತಿ ಅಧ್ಯಯನ, ವಿಮರ್ಶೆ, ಸಂಪಾದನಾಕೃತಿಗಳು ಮುಂತಾದ ರೀತಿಯಲ್ಲಿ ಬಂದ ಚಿತ್ರಕಲಾ ಸಾಹಿತ್ಯವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಒಟ್ಟಾರೆ ಬಳ್ಳಾರಿ ಜಿಲ್ಲೆಯ ಚಿತ್ರಕಲಾ ಸಾಹಿತ್ಯದ ಒಂದು ಸ್ಥೂಲ ನೋಟವನ್ನು ಇಲ್ಲಿ ಕಟ್ಟಿಕೊಡಲಾಗಿದೆ.

ಅಧ್ಯಾಯ : ಎಂಟು

ಬಳ್ಳಾರಿ ಜಿಲ್ಲೆಯ ಸಂಕೀರ್ಣ ಚಿತ್ರಕಲೆ

ಬಳ್ಳಾರಿ ಜಿಲ್ಲೆಯಲ್ಲಿ ಗಾಜಿನ ಮಾಧ್ಯಮದ ಚಿತ್ರಕಲೆ, ಫೈಬರ್, ಸಿಮೆಂಟ್ ಮೊದಲಾದ

[illegible]

ಮಾಧ್ಯಮದ ಮೇಲೆ ರಚನೆಯಾದ ಚಿತ್ರಕಲೆಯನ್ನು ಮತ್ತು ವಸ್ತುಸಂಗ್ರಹಾಲಯಗಳಾದ ಕಮಲಾಪುರ, ಕನ್ನಡ ವಿಶ್ವವಿದ್ಯಾಲಯ, ಸರಕಾರಿ ವಸ್ತುಸಂಗ್ರಹಾಲಯ, ಹೂವಿನಹಡಗಲಿ ಮುಂತಾದವುಗಳಲ್ಲಿ ಸಂಗ್ರಹಗೊಂಡ ಸಮಕಾಲೀನ ಕಲಾವಿದರುಗಳ ಕಲಾಕೃತಿಗಳು ಕಂಡುಬರುತ್ತವೆ. ಮತ್ತು ಗಾಜಿನ ಮೇಲೆ ರಚನೆಯಾದ ಚಿತ್ರ ಮತ್ತು ನಕ್ಷಾಚಿತ್ರಗಳನ್ನು ಕುರಿತಂತೆ ಮತ್ತು ಸಿಮೆಂಟ್, ಫೈಬರ್ ಮಾಧ್ಯಮದಲ್ಲಿ ಪ್ರಾಗೈತಿಹಾಸಿಕ ಮಾನವನನ್ನು ಕುರಿತಂತೆ ಚಿತ್ರ–ಶಿಲ್ಪಗಳು ರಚನೆಯಾಗಿದ್ದು, ಇವುಗಳನ್ನು ಸಹ ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಾಯ : ಒಂಭತ್ತು

ಬಳ್ಳಾರಿ ಜಿಲ್ಲೆಯ ಚಿತ್ರಕಲಾಶಿಕ್ಷಣ ಸಂಸ್ಥೆಗಳು ಮತ್ತು ಕಲಾವಿದರು

ಬಳ್ಳಾರಿ ಜಿಲ್ಲೆಯಲ್ಲಿಯ ಸಮಕಾಲೀನ ಕಲಾಚಟುವಟಿಕೆಗಳನ್ನು ಮತ್ತು ಕಲಾಶಿಕ್ಷಣವನ್ನು ಈ ಜಿಲ್ಲೆಯ ನಾಲ್ಕು ಸಂಸ್ಥೆಗಳಾದ ಹಂಪಿ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗ, ಭವಾನಿ ಲಲಿತಕಲಾ ಮಹಾವಿದ್ಯಾಲಯ, ಭುವನೇಶ್ವರಿ ಚಿತ್ರಕಲಾ ಮಹಾವಿದ್ಯಾಲಯ, ಹೂವಿನ ಹಡಗಲಿ ಮುಂತಾದವುಗಳಲ್ಲಿ ನಡೆಯುತ್ತಿರುವ ಕಲಾಶಿಕ್ಷಣ ಮತ್ತು ಇತರ ಕಲಾಚಟುವಟಿಕೆಗಳನ್ನು, ಕಲಾಸಂಸ್ಥೆಯ ಸಾಧನೆ ಕುರಿತಂತೆ ಮತ್ತು ಜಿಲ್ಲೆಯ ಹಿರಿಯ ಕಲಾವಿದರ ಕೊಡುಗೆ ಕುರಿತಂತೆ ವ್ಯಾಪಕವಾದ ಕ್ಷೇತ್ರಕಾರ್ಯ ಅಧ್ಯಯನದ ಹಿನ್ನೆಲೆಯಲ್ಲಿ ಇಲ್ಲಿ ಅಧ್ಯಯನ ಕೈಗೊಂಡು ಪ್ರಸ್ತುತ ವಿಷಯವನ್ನು ವಿವೇಚಿಸಲಾಗಿದೆ.

ಅಧ್ಯಯನದ ಫಲಿತಗಳು

೧. ದೀರ್ಘಕಾಲ ಇತಿಹಾಸವನ್ನು ಹೊಂದಿರುವ ಬಳ್ಳಾರಿ ಪರಿಸರದ ವಿಶೇಷ ಸಾಂಸ್ಕೃತಿಕ ನೆಲೆಗಟ್ಟುಗಳು ಅಧ್ಯಯನದಿಂದ ಕಂಡುಬಂದಿದೆ. ಬಳ್ಳಾರಿ ಜಿಲ್ಲೆಯ ಚಿತ್ರಕಲೆಯ ಕುರಿತು ಇಲ್ಲಿಯವರೆಗೆ ಸಂಶೋಧನಾತ್ಮಕ ಮಹಾಪ್ರಬಂಧಗಳು ಆಗಿರುವುದಿಲ್ಲ, ಇದು ಸಮಗ್ರ ಚಿತ್ರಣ ನೀಡುವ ಪ್ರಥಮ ಪ್ರಬಂಧವಾಗಿದೆ. ದೃಶ್ಯಕಲೆಯಲ್ಲಿ ಸಂಶೋಧನೆ ಈ ಜಿಲ್ಲೆಯಲ್ಲಿ ನಡೆದಷ್ಟು ರಾಜ್ಯದ ಇನ್ನಾವ ಪ್ರದೇಶದಲ್ಲಿ ನಡೆದಿಲ್ಲ.

೨. ಪ್ರಾಗೈತಿಹಾಸಿಕ ಚಿತ್ರಕಲೆಯ ನೆಲೆಗಳು ಈ ಪ್ರದೇಶದಲ್ಲಿ ಹೇರಳವಾಗಿ ಸಿಕ್ಕಿದ್ದು, ಈ ಪ್ರದೇಶ ಅದೀಮ ಸಂಸ್ಕೃತಿಯ ನೆಲೆಬೀಡಾಗಿತ್ತು ಎಂಬುದು ಈ ಚಿತ್ರಗಳಿಂದ ಊಹಿಸಬಹುದಾಗಿದೆ.

೩. ದೃಶ್ಯಕಲಾ ಸಾಹಿತ್ಯವು ಅದರಲ್ಲೂ ವಿಶೇಷವಾಗಿ ಸಾವಿರಾರು ಕಿರುಪ್ರಬಂಧಗಳು ಅಧ್ಯಯನದ ಭಾಗವಾಗಿ ರಚನೆಗೊಂಡಿವೆ. ಇವು ಮುಂದಿನ ವ್ಯಾಪಕವಾದ ಭಾಗವಾಗಿ ರಚನೆಗೊಂಡಿವೆ. ಇವು ಮುಂದಿನ ವ್ಯಾಪಕವಾದ ಅಧ್ಯಯನಕ್ಕೆ ಆಕರಗಳಾಗಿ ರಚನೆಯಾಗಿವೆ.

೪. ಈ ಜಿಲ್ಲೆಯ ತೊಗಲುಗೊಂಬೆ ಚಿತ್ರಕಲೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರದರ್ಶನಗೊಂಡಿದ್ದು,

[illegible]

ಈ ಕಲೆಗೆ ಅಂತಾರಾಷ್ಟ್ರೀಯ ಖ್ಯಾತಿಯೂ ಲಭ್ಯವಾಗಿದೆ. ಈ ಜಿಲ್ಲೆಯ ಹಚ್ಚೆಯ ಚಿತ್ರಕಲೆಯಲ್ಲಿ ಸಾಂಪ್ರದಾಯಿಕ ಚಿತ್ರಗಳಲ್ಲದೇ ಪಾಶ್ಚಾತ್ಯ ಪ್ರವಾಸಿಗರ ಪ್ರಭಾವದಿಂದ ಡ್ರಾಗನ್, ಹಾವುಗಳು, ಹ್ಯಾಪಿಮ್ಯಾನ್ ಮುಂತಾದ ಚಿತ್ರಗಳನ್ನು ಯುವಕ-ಯುವತಿಯರಲ್ಲಿ ಕಾಣುತ್ತೇವೆ.

೫. ಇಡೀ ರಾಜ್ಯದ ಕಲಾಶಿಕ್ಷಣ ತರಬೇತಿಯನ್ನು ಈ ಜಿಲ್ಲೆಯ ಕನ್ನಡ ವಿಶ್ವವಿದ್ಯಾಲಯ ನೀಡುತ್ತಿರುವುದು ಮಹತ್ವದ ಕೊಡುಗೆಯಾಗಿದೆ. ಎಂ.ವಿ.ಎ., ಎಂ.ಫಿಲ್, ಪಿಹೆಚ್.ಡಿ, ಡಿ.ಲಿಟ್‌ದಂತಹ ಉನ್ನತ ಕಲಾಶಿಕ್ಷಣ ಈ ಜಿಲ್ಲೆಯಲ್ಲಿ ನಡೆಯುತ್ತಿರುವುದು ಸಹ ಗಮನಾರ್ಹ ಅಂಶವಾಗಿದೆ.

೬. ರಂಗೋಲಿ, ಹಚ್ಚೆ, ಕೌದಿ, ಕಸೂತಿ ಮುಂತಾದ ಚಿತ್ರಕಲೆಯ ಅಭಿವ್ಯಕ್ತಿಯ ತುಡಿತಗಳಿಗೆ ಪ್ರಕೃತಿಯೇ ಮೂಲಪ್ರೇರಣೆ ಪ್ರಕೃತಿಯಿಂದ ಹಲವು ರೂಪಗಳನ್ನು ಪಡೆದಿದ್ದಾರೆ. ಪಡೆದು ತಮ್ಮಲ್ಲಿರುವ ಕಲಾಕೌಶಲ್ಯವನ್ನು ಅಭಿವ್ಯಕ್ತಿಗೊಳಿಸಿದ್ದಾರೆ. ಇಂದಿನ ಆಧುನಿಕ ಸಂವೇದನೆಯಲ್ಲಿ ಇಂತಹ ಅಭಿವ್ಯಕ್ತಿಗಳು ಆಧುನಿಕ ಅಭಿವ್ಯಕ್ತಿಗೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಪ್ರೇರಣೆ ನೀಡಿವೆ.

೭. ಬಳ್ಳಾರಿ ಜಿಲ್ಲೆಯ ಭಿತ್ತಿಚಿತ್ರಗಳ ನೆಲೆಗಳನ್ನು ಅವುಗಳ ರೇಖಾವಿನ್ಯಾಸದ ಚಿತ್ರಕಲೆಯ ವಿಶಿಷ್ಟ ಪರಂಪರೆಯನ್ನು ರಚನಾ ತಂತ್ರಗಾರಿಕೆಗೆ ಸೂಚಕವಾಗಿ ಈ ಜಿಲ್ಲೆಯ ವಿಜಯನಗರ ಚಿತ್ರ ಶೈಲಿಯು ಸಾಕ್ಷಿಯಾಗಿದೆ. ಈ ಜಿಲ್ಲೆಯಲ್ಲಿ ಹಸ್ತಪ್ರತಿ ಭಂಡಾರ ಸಂಗ್ರಹ ಸಹಸಮಯ ಮತ್ತು ಹಸ್ತಪ್ರತಿಯಲ್ಲಿಯೂ ಧಾರ್ಮಿಕ, ಅಲಂಕಾರಿಕ, ಫಲಕಮಾಧ್ಯಮವಾಗಿ ಮತ್ತು ಸಾಂಧರ್ಭಿಕವಾಗಿಯೂ ಚಿತ್ರಕಲೆಗೆ ಕೂಡ ಸಾಹಿತ್ಯದಷ್ಟೇ ಪ್ರಮುಖ್ಯ ಈ ಹಸ್ತಪ್ರತಿಯಲ್ಲಿ ನೀಡಲಾಗಿದೆ.

ಸಂರಕ್ಷಣೆ

೧. ಪ್ರಾಗೈತಿಹಾಸಿಕ ಚಿತ್ರಗಳನ್ನು ಹೊಂದಿದ ಕಲ್ಲು ಬಂಡೆಯನ್ನು ಜನ-ಜಂಗುಳಿಗಳಿಂದ ಸಂರಕ್ಷಿಸಬೇಕು.

೨. ನಶಿಸುತ್ತಿರುವ ಜನಪದ ಚಿತ್ರಕಲೆಯನ್ನು ಚಿತ್ರಕಲಾ ಸಂಸ್ಥೆಮಟ್ಟದಲ್ಲಿ ಪ್ರದರ್ಶನ, ಶಿಬಿರ, ಪ್ರಶಸ್ತಿಗಳನ್ನು ನೀಡಬೇಕು. ಈ ಕಲಾಪ್ರಕಾರಗಳು ಪಠ್ಯವಿಷಯವಾಗಿ ಅಧ್ಯಯನವಾಗಬೇಕು. ಮತ್ತು ಕಲಾಪ್ರಯೋಗಗಳಾಗಬೇಕು.

೩. ಭಿತ್ತಿಚಿತ್ರಗಳ ಕುರಿತು ಪ್ರತ್ಯೇಕ ಅಧ್ಯಯನ ನಡೆಸಿ ಅಧ್ಯಯನ ರೂಪದಲ್ಲಿ ಕಲಾಚಟುವಟಿಕೆಯ ಪ್ರಯೋಗದಲ್ಲಿ ಜೀವಂತವಾಗಿಸಬೇಕು. ಈ ಪರಂಪರೆಯನ್ನು ಮುಂದಿನ ಪೀಳಿಗೆಗೆ ಕೂಡ ತಲುಪಬೇಕು. ಈ ಪರಂಪರೆ ಉಳಿಸಬೇಕು ಮತ್ತು ಬೆಳಸಬೇಕು.

೪. ಚಿತ್ರಕಲಾ ಸಾಹಿತ್ಯದ ಪುಸ್ತಕ, ಗ್ರಂಥಗಳು ಪ್ರಕಟಿಸಿ ಜನಸಾಮಾನ್ಯರಿಗೆ ದೊರಕಬೇಕು, ಚಿತ್ರಕಲೆಯ ಮಹತ್ವ ಹರಿಯುವಂತಾಗುತ್ತದೆ.

೫. ಚಿತ್ರಕಲೆಯ ಕುರಿತಾಗಿ ನಾಡಿನ ಉತ್ಸವ, ಸಮ್ಮೇಳನದಂತಹ ಸಂದರ್ಭದಲ್ಲಿ ಕಲಾಚಟುವಟಿಕೆಗೆ ಅವಕಾಶಕೊಡಬೇಕು.

ಇಲ್ಲಿ ಚರ್ಚಿಸಲಾದ ಪ್ರತಿಯೊಂದು ಅಂಶವೂ ಸಮೀಕ್ಷೆಯ ರೂಪದಲ್ಲಿದ್ದು, ಪ್ರತಿಯೊಂದು ಅಂಶದ ಕುರಿತ ಆಳವಾದ ಅಧ್ಯಯನ ಸಂಶೋಧನೆ ನಡೆಸುವ ಅವಕಾಶವಿದೆ. ಇಲ್ಲಿಯ ಹಂಪಿಯ ಮಹಾರಂಗ ಮಂಟಪದ ಭಿತ್ತಿಚಿತ್ರಗಳೇ ಎರಡು, ಮೂರು ಪಿಹೆಚ್.ಡಿ. ಆಗುವಷ್ಟು ವಿಷಯಗಳನ್ನು ಒಳಗೊಂಡಿದೆ. ಮತ್ತು ಅಷ್ಟೇ ವಿಶೇಷವಾಗಿದೆ. ಈ ವಿಷಯ ಕುರಿತಾಗಿ ಸಂಶೋಧನಾಸಕ್ತರು ಇದರತ್ತ ಗಮನಹರಿಸಬೇಕಾಗಿದೆ.

⌘ ⌘ ⌘ ⌘

ಅನುಬಂಧ – ೧

ಸಂಕ್ಷೇಪಗಳು

೦೧. ಸಂ	–	ಸಂಪಾದಕರು
೦೨. ಪ್ರ.ಸಂ	–	ಪ್ರಧಾನ ಸಂಪಾದಕರು
೦೩. ಪು.ಸಂ	–	ಪುಟ ಸಂಖ್ಯೆ
೦೪. ಕಿ.ಪ್ರ.	–	ಕಿರುಪ್ರಬಂಧ
೦೫. ಸಂ.ಪ್ರ	–	ಸಂಪ್ರಬಂಧ
೦೬. ಮ.ಪ್ರ	–	ಮಹಾಪ್ರಬಂಧ
೦೭. ಚಿ.ಸಂ.	–	ಚಿತ್ರಸಂಖ್ಯೆ
೦೮. ಬೆಂ.ವಿ.ವಿ.	–	ಬೆಂಗಳೂರು ವಿಶ್ವವಿದ್ಯಾಲಯ
೦೯. ಮ.ವಿ.ವಿ	–	ಮಂಗಳೂರು ವಿಶ್ವವಿದ್ಯಾಲಯ
೧೦. ಮೈ.ವಿ.ವಿ	–	ಮೈಸೂರು ವಿಶ್ವವಿದ್ಯಾಲಯ
೧೧. ಕ.ವಿ.ವಿ.ಹಂ.	–	ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೨. ಕ.ವಿ.ವಿ	–	ಕರ್ನಾಟಕ ವಿಶ್ವವಿದ್ಯಾಲಯ
೧೩. ಗು.ವಿ.ವಿ	–	ಗುಲ್ಬರ್ಗಾ ವಿಶ್ವವಿದ್ಯಾಲಯ
೧೪. ಕ.ಲ.ಅ.ಬೆಂ	–	ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
೧೫. ಅ.ಪ್ರ	–	ಅಪ್ರಕಟಿತ
೧೬. ಪ್ರ	–	ಪ್ರಕಟಿತ
೧೭. ಯೋ.ವ	–	ಯೋಜನಾ ವರದಿ
೧೮. ಕ.ಸಾ.ಪ	–	ಕನ್ನಡ ಸಾಹಿತ್ಯ ಪರಿಷತ್
೧೯. ಕ್ರಿ.ಪೂ	–	ಕ್ರಿಸ್ತ ಪೂರ್ವ
೨೦. ಕ್ರಿ.ಶ.	–	ಕ್ರಿಸ್ತಶಕ
೨೧. ಅನು	–	ಅನುವಾದ
೨೨. ಪ್ರೊ.	–	ಪ್ರೊಫೇಸರ್

ಅನುಬಂಧ – ೨
ಗ್ರಂಥಋಣ

೦೧. ಕನ್ನಡ ಗ್ರಂಥಗಳು

೦೧. **ಆಲೇಖ್ಯ** – ಡಾ. ಅ. ಲ. ನರಸಿಂಹನ್
ಸಂಯೋಜಿತ ಪ್ರಕಾಶನ,
ಬೆಂಗಳೂರು, ೧೯೯೯

೦೨. **ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ – ಒಂದು ಅಧ್ಯಯನ** – ಡಾ. ಯಾದಪ್ಪ ಬಿ. ಪರದೇಶಿ
ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೧

೦೩. **ಉದ್ಧರಣೆ ಸಾಹಿತ್ಯ** – ಸಂ. ಡಾ. ಕೆ. ರವೀಂದ್ರನಾಥ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. ೨೦೧೦

೦೪. **ಕರ್ನಾಟಕ ಜನಪದ ಚಿತ್ರಕಲೆ** – ಡಾ. ಎಸ್. ಸಿ. ಪಾಟೀಲ
ವೀರಶೈವ ಅಧ್ಯಯನ ಸಂಸ್ಥೆ, ಗದಗ
೧೯೯೩

೦೫. **ಕರ್ನಾಟಕದ ಭಿತ್ತಿಚಿತ್ರ ಪರಂಪರೆ** – ಡಾ. ಅ. ಲ. ನರಸಿಂಹನ್
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು
೧೯೯೮

೦೬. **ಕರ್ನಾಟಕ ಹಸ್ತಪ್ರತಿ ಚಿತ್ರಕಲೆ – ಒಂದು ಅಧ್ಯಯನ** – ಡಾ. ಹೆಚ್. ಎನ್. ಚಿತ್ರಗಾರ
ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೫

೦೭. **ಕರ್ನಾಟಕದ ಭಿತ್ತಿಚಿತ್ರಗಳು** – ಡಾ. ಬಿ.ವಿ.ಕೆ. ಶಾಸ್ತ್ರಿ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು
೧೯೮೨

೦೮. **ಕರ್ನಾಟಕ ಸಾಂಸ್ಕೃತಿಕ ಸಮೀಕ್ಷೆ** – **ಡಾ. ಹೆಚ್. ತಿಪ್ಪೇರುದ್ರಸ್ವಾಮಿ**
ಡಿ.ವಿ.ಕೆ. ಮೂರ್ತಿ ಪ್ರಕಾಶನ
ಮೈಸೂರು
೧೯೬೮

೦೯. **ಕರ್ನಾಟಕ ಚಿತ್ರಕಲೆಯಲ್ಲಿ ಬಣ್ಣದ ಬಳಕೆ** – **ಕೆ.ವಿ.ಕಾಳೆ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ
೨೦೦೦

೧೦. **ಕರ್ನಾಟಕದ ಕಲೆಗಳು ಸಂ.೧** – **ಪ್ರೊ ಎಸ್. ಕೆ. ರಾಮಚಂದ್ರರಾವ್**
ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು
೧೯೮೨

೧೧. **ಕರ್ನಾಟಕದಲ್ಲಿ ಚಿತ್ರಕಲೆ** – **ಶಿವರಾಮ ಕಾರಂತ**
ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ,
ಮೈಸೂರು ೧೯೭೮

೧೨. **ಕರ್ನಾಟಕ ಭಿತ್ತಿಚಿತ್ರಗಳು** – **ಬಿ.ವಿ.ಕೆ. ಶಾಸ್ತ್ರಿ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೮೩

೧೩. **ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ** – **ಡಾ. ಎಸ್. ರಾಜಶೇಖರ್**
ಸುಜಾತಾ ಪಬ್ಲಿಕೇಶನ್, ಧಾರವಾಡ
೧೯೮೮

೧೪. **ಕರ್ನಾಟಕದ ಪುರಾತತ್ವ ನೆಲಗಳು** – **ಶಿವತಾರಕ ಕೆ.ಬಿ.**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. ೨೦೧೨

೧೫. **ಕರ್ನಾಟಕ ಪ್ರಾಗೈತಿಹಾಸಿಕ ಕಾಲದ ಕಲೆ** – **ಅ. ಸುಂದರ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೪

೧೬. **ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ** – **ಡಾ. ಬಿ. ಕೆ. ಹಿರೇಮಠ**
ವೀರಶೈವ ಅಧ್ಯಯನ ವೇದಿಕೆ
ಬಿಜಾಪುರ
೧೯೯೨

೧೭. **ಕನ್ನಡ ವಿಷಯ ವಿಶ್ವಕೋಶ** – ಪ್ರಸಂ. ಡಾ. ಅಂಬಳಿಕೆ ಹಿರಿಯಣ್ಣ
(ಇತಿಹಾಸ ಮತ್ತು ಪುರಾತತ್ವ)
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
ಮೈಸೂರು ವಿಶ್ವವಿದ್ಯಾಲಯ, ಮೈಸೂರು
೨೦೦೯

೨೦. **ಕನ್ನಡ ವಿಶ್ವಕೋಶ** – **ಹೆಚ್.ಎಂ.ಬಿ**
ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾಲಯ, ಮೈಸೂರು
೧೯೯೮

೨೧. **ಕನ್ನಡ ವಿಶ್ವವಿದ್ಯಾಲಯ ಜಾನಪದ ವಸ್ತುಸಂಗ್ರಹಾಲಯದ ಶಿಲ್ಪಕೃತಿಗಳು** – **ಭೀಮವ್ವ ರೇ. ಬಳುಂಡಗಿ**
ಬಿ.ವಿ.ಎಡ್. ಕಿರುಯೋಜನಾ ವರದಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೯

೨೨. **ಕನ್ನಡ ಜಾನಪದ ವಿಶ್ವಕೋಶ (ಸಂಪುಟ –೧)** – **ಸಂ. ಡಾ. ಚಂದ್ರಶೇಖರ ಕಂಬಾರ**
ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು. ೧೯೮೫

೨೩. **ಕರಕುಶಲ ಕಲೆಗಳು** – **ಸಂ. ಕರೀಗೌಡ ಬೀಚನಹಳ್ಳಿ**
ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ –೨
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. ೨೦೦೦

೨೪. **ಕನಕಗಿರಿಯ ದೇವಾಲಯದ ಕಲಾಕೃತಿಯ ಒಂದು ಅಧ್ಯಯನ** – **ಸಂ. ಕರೀಗೌಡ ಬೀಚನಹಳ್ಳಿ**
ಬಿ.ವಿ.ಇಡಿ. ಕಿರುಪ್ರಬಂಧ,
ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೦

೨೫. **ಕರಾವಳಿ ಕರ್ನಾಟಕ ಕಾವಿ ಚಿತ್ರಕಲೆ** – **ಡಾ. ಆನಂದ ಕೆ. ಪೂಜಾರ್**
ಅಪ್ರಕಟಿತ ಡಿ.ಲಿಟ್ ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೫

೨೬. **ಕಲಾಚರಿತ್ರೆ** – **ಅಶೋಕ ಟಿ. ಅಕ್ಕಿ**
ಎಂ. ಎಸ್. ಶಾಬಾದಿಮಠ
ಬುಕ್ ಡಿಪೋ, ಗದಗ
೧೯೮೭

೨೭. **ಕಲಾಪ್ರಪಂಚ** – **ಡಾ. ಶಿವರಾಮ ಕಾರಂತ**
ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ
೧೯೭೮

೨೮. **ಕಲಾ ಸಂವೇದನೆಯ ಒಳನೋಟಗಳು** – **ಕೆ.ವಿ. ಸುಬ್ರಹ್ಮಣ್ಯಂ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೭

೨೯. **ಕಲೆ ಮತ್ತು ಹಬ್ಬ** – ಎಸ್. ಕೆ. ಹೂಗಾರ
ಕನ್ನಡ ಅಧ್ಯಯನ ಪೀಠ,
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ. ೧೯೭೭

೩೦. **ಕಲೆ ಮತ್ತು ರಸಾಸ್ವಾದನೆ** – ಸಂ. ಎಂ. ಕೃಷ್ಣಯ್ಯ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೮೯

೩೧. **ಕೆ. ವೆಂಕಟಪ್ಪ : ಸಮಕಾಲೀನ ಪುನರಾವಲೋಕನ** – ಕೆ.ವಿ. ಸುಬ್ರಹ್ಮಣ್ಯಂ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೮

೩೨. **ಕೊಪ್ಪಳ–ಹಂಪಿ ಜಾನಪದ**
ಪ್ರಾಗೈತಿಹಾಸಿಕ ಕಾಲದ ಕಲೆ – ಶಂಕ್ರಪ್ಪ ಕೋಲ್ಕಾರ್
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೨

೩೩. **ಗಿರಿಜನ ಸಂಸ್ಕೃತಿ** – ಪ್ರೊ. ಕಾಳೇಗೌಡ ನಾಗವಾರ
ಕರ್ನಾಟಕ ಜಾನಪದ ಮತ್ತು – ಎನ್. ಹುಚ್ಚಪ್ಪ ಮಾಸ್ತಾರ್
ಯಕ್ಷಗಾನ ಅಕಾಡೆಮಿ, ಬೆಂಗಳೂರು
೨೦೦೦

೩೪. **ಚಿತ್ರಕಲೆ** – ಅ. ನ. ಕೃಷ್ಣರಾಯ
ವಿದ್ಯಾನಿಧಿ ಬುಕ್ ಡಿಪೋ
ಮೈಸೂರು
೧೯೭೦

೩೫. **ಚಿತ್ರಕಲಾ ಪ್ರಪಂಚ** – ಸಂ. ಪಿ.ಆರ್. ತಿಪ್ಪೇಸ್ವಾಮಿ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು
೧೯೯೩

೩೬. **ಚಿತ್ರಾಕ್ಷಿ** – ಸಂ. ಡಾ. ಎಸ್. ಸಿ. ಪಾಟೀಲ
ಸ್ಕೂಲ್ ಆಫ್ ಆರ್ಟ್
ವಜ್ರಮಹೋತ್ಸವ ಸಮಿತಿ,
ಧಾರವಾಡ. ೧೯೯೫

೩೭. **ಜಾಗತಿಕ ಚಿತ್ರಕಲೆ** – ಬಿ. ಪಿ ಬಾಯಿರಿ
ಪ್ರತಿಭಾ ಗ್ರಂಥಮಾಲೆ
ಧಾರವಾಡ, ೧೯೮೫

೩೮. **ನಿಜದ ನೆಲೆ** – ಸಂ. ಡಾ. ಎಸ್. ಸಿ. ಪಾಟೀಲ ಸತ್ಯಾನಂದ ಪಾತ್ರೋಟ
(ಬಿ.ಕೆ. ಹಿರೇಮಠರ ಅಭಿನಂದನ ಗ್ರಂಥ)
ಬಸವೇಶ್ವರ ವಿದ್ಯಾವರ್ಧಕ ಸಂಘ,
ಬಾಗಲಕೋಟೆ ೨೦೦೩

೩೯. **ಪ್ರಾಚೀನ ಭಾರತದ ಭಿತ್ತಿಚಿತ್ರಗಳು** – ಪಿ. ಆರ್. ತಿಪ್ಪೇಸ್ವಾಮಿ
ಚಿತ್ರಾಕ್ಷಿ ಸ್ಕೂಲ್ ಆಫ್ ಆರ್ಟ್ಸ್
ಧಾರವಾಡ, ೧೯೯೫

೪೦. **ಬಳ್ಳಾರಿ ಜಿಲ್ಲಾ ದರ್ಶಣ** – ಸಂ. ಡಾ. ಕೆ. ರವೀಂದ್ರನಾಥ
ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ,
ಗುಲ್ಬರ್ಗಾ
೨೦೦೫

೪೧. **ಬಳ್ಳಾರಿ ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ** – ಪ್ರೊ. ವೈ. ಹನುಮಂತ ರೆಡ್ಡಿ
ಕರ್ನಾಟಕ ಇತಿಹಾಸ ಸಂಶೋಧನ ಮಂಡಳಿ,
ಬೆಂಗಳೂರು. ೨೦೦೭–೦೮

೪೨. **ಬಳ್ಳಾರಿ ಜಿಲ್ಲೆಯ ತೊಗಲುಗೊಂಬೆ ಆಟದ ಸಾಂಸ್ಕೃತಿಕ ಅಧ್ಯಯನ** – ನಾಗವರ್ಮ ಜಿ. ಎಸ್.
ಅಪ್ರಕಟಿತ ಎಂ.ಫಿಲ್ ಪ್ರಬಂಧ, ಕನ್ನಡ
ವಿಶ್ವವಿದ್ಯಾಲಯ, ಹಂಪಿ
೨೦೦೩

೪೩. **ಬಳ್ಳಾರಿ ಜಿಲ್ಲೆಯ ಚಿತ್ರಕಲೆ** – ಡಾ. ಎಚ್. ಈ. ಬಸವರಾಜಪ್ಪ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ.೨೦೦೦

೪೪. **ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ** – ಕೃಷ್ಣವೇಣಿ
ಅಪ್ರಕಟಿತ ಎಂ.ಫಿಲ್ ಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೮

೪೫. **ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ** – ಕುಂಬಾಸ
ಶ್ರೀಮಾಲತೇಶ ಪ್ರಕಾಶನ,
ಕುಂಚೂರು. ೧೯೯೦

೪೬. **ಬಳ್ಳಾರಿ ಪರಿಸರದ ಸಾಂಸ್ಕತಿಕ ಪರಂಪರೆ** – ಡಾ. ವಾಸದೇವ ಬಡಿಗೇರ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. ೨೦೧೨

೪೭. **ಬೆಳೆದು ಬಂದ ಭಾರತದ ಚಿತ್ರಕಲೆ** – ಪಿ. ಆರ್. ತಿಪ್ಪೇಸ್ವಾಮಿ
ಕಲಾಕ್ಷೇತ್ರ, ಮೈಸೂರು
೧೯೬೨

೪೮. **ಭಾರತೀಯ ಚಿತ್ರಕಲೆ – ಸಂಕ್ಷಿಪ್ತ ಪರಿಚಯ** – ಎಲ್. ಎಸ್. ಶಿರಹಟ್ಟಿ
ವಿಜಯ ಕಲಾಮಂದಿರ, ಗದಗ
೧೯೭೨

೪೯. **ಭಾರತೀಯ ಚಿತ್ರಕಲೆ** – ಶಿವರಾಮ ಕಾರಂತ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು. ೧೯೪೮

೫೦. **ಬುಜರಂಕಂಚನಹಳ್ಳಿಯ ಭಿತ್ತಿಚಿತ್ರಕಲೆ** – ಡಾ. ಎಸ್. ಸಿ. ಪಾಟೀಲ
ಎಂ.ವಿ.ಎ. ಕಿರುಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೬

೫೧. **ಹೈದರಾಬಾದ –ಕರ್ನಾಟಕದ ರಂಗೋಲಿ ಚಿತ್ರಕಲೆ ಒಂದು ಸಾಂಸ್ಕೃತಿಕ ಅಧ್ಯಯನ** – ವಿಶ್ವೇಶ್ವರಿ ತಿವಾರಿ
ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ
ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ
೨೦೦೫

೫೨. **ರಂಗೋಲಿ ಚಿತ್ರಕಲೆ** – ಡಾ. ಎಸ್. ಸಿ. ಪಾಟೀಲ
ಕರ್ನಾಟಕ ಲಲಿತಕಾ ಅಕಾಡೆಮಿ,
ಬೆಂಗಳೂರು. ೧೯೯೩

೫೩. **ವರ್ಣಸಂಚಯ** – ಡಾ. ಎಸ್. ಸಿ. ಪಾಟೀಲ
ವಿಜಯ ಚಿತ್ರಕಲಾ ಮಹಾವಿದ್ಯಾಲಯ,
ಇಳಕಲ್. ೨೦೦೧

೫೪. **ವಸಾಹತು ಕಾಲೀನ ಬಳ್ಳಾರಿ ಜಿಲ್ಲೆ** – ಡಾ. ವಿರೂಪಾಕ್ಷ ಪೂಜಾರಹಳ್ಳಿ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. ೨೦೦೯

೫೫. **ವಿಜಯನಗರ ಅಧ್ಯಯನ (ಸಂಪುಟ–೧೨)** – ಡಾ. ಆರ್. ಗೋಪಾಲ & ಇತರರು
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ
ನಿರ್ದೇಶನಾಲಯ, ಮೈಸೂರು
೨೦೦೭

೫೬. **ವಿಜಯನಗರ ಶಿಲ್ಪಕಲೆ** – ಡಾ. ಅ. ಲ. ನರಸಿಂಹನ್
ಕರ್ನಾಟಕ ಶಿಲ್ಪಕಲಾ ಅಕಾಡೆಮಿ,
ಬೆಂಗಳೂರು. ೨೦೦೯

೫೭. **ವಿಜಯನಗರ ಕಾಲದ ಸಂಸ್ಕೃತಿ** – **ಡಾ. ವಿರೂಪಾಕ್ಷ ಪೂಜಾರಹಳ್ಳಿ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. ೨೦೦೮

೫೮. **ವಿಜಯ ಕಲ್ಯಾಣ** – **ಪ್ರೊ. ಸಂ. ಶಿ. ಭೂಸನೂರಮಠ**
ಮಹಾಕವಿ ಹರಿಹರ ಸ್ಮಾರಕ
ಸಂಶೋಧನ ಕೇಂದ್ರ,

೫೯. **ವಿ.ಟಿ. ಕಾಳೆ** – **ಡಾ. ಎಸ್. ಸಿ. ಪಾಟೀಲ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೪

೬೦. **ಸಾಹಿತ್ಯ ಮತ್ತು ಚಿತ್ರಕಲೆ** – **ವಿ. ಸೀತಾರಾಮಯ್ಯ**
ರಾಘವ ಪ್ರಕಾಶನ
ಬೆಂಗಳೂರು. ೧೯೮೬

೬೧. **ಸಂಡೂರು ಪ್ರತಿಧ್ವನಿ** – **ಮೂಲ: ವೈ ಘೋರ್ಪಡೆ**
ಮ್ಯಟಿಕ್ ಪ್ರೊಸೆಸ್ ಪ್ರೈ.ಲಿ – **ಅನು: ವಿ. ಟಿ. ಕಾಳೆ**
ಬೆಂಗಳೂರು
೨೦೦೯

೬೨. **ಶಿಲ್ಪಕಲಾ ಪ್ರಪಂಚ** – **ಅನು: ಡಾ. ಅ. ಲ. ನರಸಿಂಹನ್**
ಕರ್ನಾಟಕ ಲಲಿತಕಲಾ ಅಕಾಡೆಮಿ – **ಎನ್. ಮರಿಶಾಮಾಚಾರ್**
ಬೆಂಗಳೂರು. ೧೯೯೪

೬೩. **ಶಿಲ್ಪಾದರ್ಶ ಸಂ–೨** – **ಡಾ. ಜಿ. ಜ್ಞಾನಾನಂದ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
ಹಂಪಿ. ೨೦೦೬

೬೪. **ಹರತಿ ಸಿರಿ** – **ಸಂ. ಪ್ರೊ. ಲಕ್ಷ್ಮಣ್ ತೆಲಗಾವಿ**
ವಾಲ್ಮೀಕಿ ಸಾಹಿತ್ಯ ಸಂಪದ
ಹರ್ತಿಕೋಟೆ, ಲಕ್ಷ್ಮೀ ಮುದ್ರಣಾಲಯ,
ಚಾಮರಾಜಪೇಟೆ, ಬೆಂಗಳೂರು.
೧೯೮೭

೬೫. **ಹೊಸಪೇಟೆ ತಾಲ್ಲೂಕು ದರ್ಶನ** – **ಸಂ. ಮಹಾದೇವ ಸಿ. ಸುಬ್ಬಣ್ಣ ರೈ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, **ಎ. ಮಾಧವ ಪೆರಾಜೆ**
ಹಂಪಿ. ೨೦೦೦

೦೨. ಇಂಗ್ಲೀಷ್ ಗ್ರಂಥಗಳು

೦೧. **A Book About Artists** - **Kathleen Cook**
Progress Publisher,
Moscow, USSR. 1978

೦೨. **A History of Fine Arts in India and west** - **Edith Tomory**
Orient Longman Limited, Madras
1992

೦೩. **A Manual of Tempera Painting** - **Maxwell Armfield**
Phaidon Press, London.
1930

೦೪. **A Treatise on Painting** - **Cennino Cennini (Trans Merrifield)**
London,
1844

೦೫. **Abhilashitartha Chintamani** - **Edt. R Shama Shastri**
Mysore Samskrit Series, Mysore,
1926

೦೬. **Agnipurana** - **Edt. Panchanana Tarkatirtha**
Bangabasi Edition, Culcutta
1908

೦೭. **Ajanta** - **Smita S. Gudi**
M.F.A. Dissertation,
Post Graduation Art Centre,
Vijay College of Fine Arts, Gadag.
2006-07

೦೮. **Ajanta** - **G. Yazdani**
OXFORD University Press
1930-1958

೦೯. **Ajanta** - **Balasaheb Panth**
Bombay, 1982

೧೦. **Ajanta Fresco** - **Lady Herringham**
OXFORD University Press
1915

೧೧. **Art India - Vol - XV Issue I** -
The Art News Magazine of India
New Delhi. 2011

೧೨. **Arts and the Man** - **Irwin Edman**
A Mentor Book, The New American
Library, New York.
1949

೧೩. **Art etc. News & Views** -
Emami Chisel Art Pvt. Ltd.
Emami Tower, Anandapur
Kolkata. 2011

೧೪. **Art & Deal** -
The Magazine for Contemporary
Indian Art.
New Delhi. 2011

೧೫. **Art Experience** - **M. Hiriyanna**
Kavyalaya Publications, Mysore
1954

೧೬. **Aparajitapraccha (of Bhuvanadeva)** - **Edt. P. A. Mankad**
Gaikwad's Oriental Series
No. LXXXIV, Baroda
1939

೧೭. **Birds and Animals in Inidan Art and Crafts** - **Raja Dinkar Kelkar Museum**
Second Edition, Ashish Advertising , Pune.
2003

೧೮. **Buddist Cave Painting at Tun - Hung** - **Basil Gray**
Faber and Faber, London. 1959

೧೯. **Cauvery** -
Karnataka State Handicrafts Development
Corporation Limited, Bangalore,
2001

೨೦. **Chitralakshana** - **A. K. Kumaraswamy**
Sir Asutosh Memorial Volume,
Patna. 1927

೨೧. **Chitralakshana of Nagnajit** - **B. K. Goswamy, A.I. Dhamen Dallapicola**
Manohar Book Service, Delhi
1976

೨೨. **'Chitralakshan' (of Srikumara)`** - **Ashok K. Bhattacharya**
Calcutta. 1974

೨೩. **Conservation of Rock Art** - **Edt. Bansi Lal Malla**
Indira Gandhi National Centre for the Arts,
Aryan Books International, New Delhi
1999

೨೪. **Deccani School - Bijapur** - **Motichandra**
Bijapur Muncipality,
Century Souviner, Bijapur
1954

೨೫. **Deccani Painting** - **Mark Zebrowski**
Roli Book International, New Delhi
1983

೨೬. **Fresco Painting** - **Olle Nard Mark**
American Artists Group, New York
1947

೨೭. **Fundamental of Indian Art** - **S N Dasgupta**
Bharatiya Vidya Bhavana, Bombay,
1954

೨೮. **Hermitage** - **Yuri Shapiro**
Aurora Art Publisher,
Leningrad. 1983

೨೯. **Hebbar**
An artist's Quest - **Rekha Rao**, **Rajani Prasanna**
Ministry of Cultere
Government of India and
K K Hebbar's Art Foundation
2011

೩೦. **Indian Painting** - **C. Shivaramamurti**
National Book Trust India
New Delhi. 1996

೩೧. **Indian Painting** - **Percy Brown**
Y M C A Publishing House,
Calcutta. 1960

೩೨.. **Indian Art** - **Roy Craven**
World of Art
Thames and Hudson INC
500, 5th Avenue, New York - 10110
1986

೩೩. **Khajuraho Sculpture and Their Significance** - **Urmila Agarwal**
S Chand and Company Ltd,
New Delhi.

೩೪. **Mysore Chitramala Traditional Paintings** - **Prof. S. K. Ramchandra Rao**
Karnataka Chitrakala Parishat
Bangalore. 2004

೩೫. **Paintings of St. Aloysius Chapel - A New Life** - **O P Agrawal**
INTACH, Indian Conservation Institute,
Lucknow. 1994

೩೬. **Rock Art in Kerala** - **Yashodhar Mathpal**
Indira Gandhi National Centre for the Arts
Aryan Books International, New Delhi
1998

೩೭. **Rock Art in Orissa** - **Sadasiba Pradhan**
Post Graduate Department of
History SamAryan Books International,
New Delhi. 2001

೩೮. **Ragamala Origin and Evolution** - **Dr. Ranjit Singh Gill**
Aravali Book International (P) Ltd
New Delhi. 2006

೩೯. **Recent Perspective on Pre Historic Art in Inida and Allied Subjects** - **Edt. R K Sharma, K K Tripathi**
Aryan Books International, New Delhi
1996

೪೦. **Rock Art of South India** - **N. Chandramouli**
Bharatiya Kala Prakashan, Delhi
2002

೪೧. **Seven Days** - **Leonid Volynsky**
Progress Publishers, Moscow
1979

೪೨. **Studio Potters of India** - **Edt. S S Bhagat**
All India Fine Arts and Craft Society,
Rafi Marg, New Delhi
1999

೪೩. **The Legacy of Raja Ravi Varma** - **Edt. Prof. Ratan Parimoo**
Maharaja Fatesingh Museum Trust
Baroda. Gujrat
1998

೪೪. **The Pocket History of American Painting** - **James Thomas Flexner**
Pocket Books Inc., New York
1950

೦೩. ಪ್ರಕಟಿತ ಲೇಖನಗಳು

೦೧.	ಅಂತಾರಾಷ್ಟ್ರೀಯ ಖ್ಯಾತೀಯ ವನ್ಯಜೀವಿ ಛಾಯಾಚಿತ್ರ ಗ್ರಾಹಕ ಜಂಬುಕೇಶ್ವರ ತರಂಗ ೨೧ ಡಿಸೆಂಬರ್ ೨೦೦೬	–	ಜಿ. ಎಸ್. ಭಟ್
೦೨.	ಕಲಾಸೇವೆಯ ಆರಾಧಕ ಹೊಸಪೇಟೆಯ ಚಿತ್ರಕೇರಿ ನೀಲಪ್ಪ ಈನ್ಯೂಸ್ ೧೩ ನವಂಬರ್ ೨೦೦೬	–	ಡಾ. ತಾರಿಹಳ್ಳಿ ಹನುಮಂತಪ್ಪ
೦೩.	ಕಲೆಯ ಬೇರು ಛಾಯಾಗ್ರಹಣದ ಚಿಗುರು ಪ್ರಜಾವಾಣಿ ೧೩ ಸೆಪ್ಟೆಂಬರ್ ೨೦೦೮	–	ಎಲ್. ಶಿವಲಿಂಗಪ್ಪ
೦೪.	ಕಾಯಕದಲ್ಲೇ ತೃಪ್ತಿ ಕಂಡ ಕಲಾವಿದ ಎಸ್. ಎಂ. ಜಂಬುಕೇಶ್ವರ ಉದಯವಾಣಿ ೧೯ ಜನೆವರಿ ೨೦೦೪	–	ಎಲ್. ಶಿವಲಿಂಗಪ್ಪ
೦೫.	ಛಾಯಾಗ್ರಾಹಕ ಎಸ್. ಎಂ. ಜಂಬುಕೇಶ್ವರ ತರಂಗ ೫ ಫೆಬ್ರವರಿ ೧೯೯೮	–	ಪ್ರೊ. ಕೆ. ರಾಮಮೂರ್ತಿರಾವ್
೦೬.	ನಿಸರ್ಗದ ಶಾಲೆಯ ಪದವೀಧರ ಕನ್ನಡ ಪ್ರಭಾ ೨೫ ಡಿಸೆಂಬರ್ ೧೯೮೮	–	ಪಿ. ಆರ್. ತಿಪ್ಪೇಸ್ವಾಮಿ
೦೭.	ವನ್ಯಜೀವಿ ಛಾಯಾಚಿತ್ರಣದಲ್ಲಿ ಪಳಗಿದ ಜಂಬುಕೇಶ್ವರ ಪ್ರಜಾವಾಣಿ ೧ ಅಕ್ಟೋಬರ್ ೨೦೦೦	–	ಎಚ್ಚೆಸ್ಕೆ
೦೮.	ಹಸೆಚಿತ್ರಕಲೆಯಲ್ಲಿ ಪಳಗಿದ ಯುವ ಪ್ರತಿಭೆ ಶಿಲ್ಪಾ ಸಂಯುಕ್ತ ಕರ್ನಾಟಕ ೧೬ ಡಿಸೆಂಬರ್ ೨೦೦೨	–	ಡಬ್ಲ್ಯೂ. ಬಸವರಾಜ

*** ***

ಬಳ್ಳಾರಿ ಜಿಲ್ಲೆಯ ನಕ್ಷೆ

